(d) the steps taken to provide additional accommodation and also X-Ray unit to this Dispensary ?

Sri H. SIDDAVEERAPPA (Minister for Health).—

(a) Yes.

(b) Yes.

(c) Yes.

(d) Plans and estimates from the Public Works Department authorities for construction of additional wards, X-Ray Block, etc., are awaited.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಮೊದಲ ಮೂರು ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ 'ಹೌದು', ನಿಜ, ನಿಜ, ಎಂದು ಒಪ್ಪಿಕೊಂಡು ಕೊನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ ಹೆಚ್ಚಿನ ವಿಭಾಗಗಳನ್ನು ಹಾಗೂ ಕ್ಷ ಕಿರಣ ಕಟ್ಟಡಗಳನ್ನು ನಿರ್ಮಿಸುವ ಬಗ್ಗೆ ಲೋಕೋಪಯೋಗಿ ಇಲಾಖಾ ಅಧಿಕಾರಿಗಳಿಂದ ನಕ್ಷೆ ಮತ್ತು ಅಂದಾಜುಗಳನ್ನು ನಿರೀಕ್ಷಿಸಲಾಗುತ್ತಿದೆ ಎಂದು ಹೇಳಿದ್ದೀರಿ. ನನಗೆ ತಿಳಿದ ಮಟ್ಟಿಗೆ ಇದರ ಬಗ್ಗೆ ಎಸ್ಟಿಮೇಟ್ ಆಗಿ, ಸ್ಕ್ರುಟಿನಿ ಕೂಡ ಆಗಿ, ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಆಗಿ ಒಂದು ಹಂತದಲ್ಲಿ ಈ ಕೆಲಸವನ್ನು ತೆಗೆದುಕೊಳ್ಳುವ ಬಗ್ಗೆ 1969ರ ಬಡ್ಜೆಟ್‌ನಲ್ಲಿ ಸೇರಿಸಲಾಗಿದ್ದಿತು ಎಂದು ನನಗೆ ತಿಳಿದು ಬಂದಿದೆ. ಅದು ನಿಜವಾಗಿದ್ದರೆ ಈ ಸಾಲಿನ ಬಡ್ಜೆಟ್ ನಲ್ಲಿಯೇ ಇದನ್ನು ಸೇರಿಸಿ ಮಾಡಿಸಿಕೊಡುತ್ತೇವೆ ಎಂದು ತಾವು ಹೇಳಿದರೆ ಸಾಕು.

†ಶ್ರೀ ಎಚ್. ಸಿದ್ದವೀರಪ್ಪ.—ನಮಗೂ ಅನುಮಾನ ಬಂದಿತ್ತು. ಇಲ್ಲಿ ಕೊಟ್ಟಿರುವ ಇನ್‌ಫರ್‌ಮೇಷನ್ ಫೆಬ್ರವರಿ 1972ರದ್ದು. ಆದ್ದರಿಂದ ಇದರ ಎಲ್ಲ ವಿವರಗಳನ್ನು ತರಿಸಿ ಕೊಂಡು ಅದರ ಬಗ್ಗೆ ಎಸ್ಟಿಮೇಟ್ ಆಗಿದ್ದರೆ ಕೂಡಲೇ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೊಡುತ್ತೇವೆ

MADAM SPEAKER.—Now Questions are over.

QUESTIONS FOR ANSWERS ON THE DAY
(But not taken up)

Taking over the road leading to Gudipalli Rajendrapalli

Sri P. MUNIYAPPA (Mulbagal).—

630. Will the Minister for Public Works and Electricity be pleased to state :—

(*a*) whether the Public Works Department intends to take over the road leading to Gudipalli-Rajendrapalli from Bangalore-Madras and Mudigere-Nagawar-Hebbani and Byrakur roads ;

(*b*) if so, the action taken in the matter ;

Sri H. M. CHANNABASAPPA (Minister for Public Works and Electricity).—

(*a*) Yes.

(*b*) It will be considered at appropriate time.

Earthquake in Mandya District

728 Sri G. MADEGOWDA (Kirugavalu).—

Will the Minister for Revenue be pleased to state ;—

(*a*) whether they are aware of the serious earthquake that took place at Doddegowdanakoppal, Malavalli taluk, Mandya District recently and the people there were put to lot of hardship;

(*b*) the details of relief measures taken by Government to relieve the distress of affected people;

(*c*) the estimated damage caused to life and property on account of the earthquake?

Sri N. HUTCHAMASTHY GOWDA (Minister for Revenue).—

(*a*) Yes.

(*b*) A sum of Rs.50,000 was placed at the disposal of the Deputy Commissioner, Mandya for providing immediate relief to the victims. Special tents and thatched sheds were erected on two sides of the village to house the victims. Cash doles were also given to the landless workers who were affected by the incident. The question of providing further amount for relief is under consideration.

(*c*) There was no loss of life. Damage was caused to 227 housess. The cost of repairs and restoration of all the structures is estimated at Rs. 1,16,803.

Calling Attention to Matters of Urgent Public Importance

(*i*) *re*: *Hardships caused to the Agriculturists of Udipi Taluk and to floods in S. K. District*

SRI B. BHASKAR SHETTY (Kaup).—I call the attention of the Minister for Revenue to the hardship caused to the Agriculturists of Udipi taluk due to floods in South Kanara district.

SRI N. HUTCHAMASTHY GOWDA (Minister for Revenue).—I State as follows:

The Tahsildar, Udipi and the Assistant Commissioner, Coondapur Sub-Division have already inspected the affected area and it is reported that a total extent of 288 acres 13 guntas of land with standing crops have been submerged and their details are indicated as follows:—

Name of Village		*Area affected*
Kote, Muttu, Moodabettu	...	83.13
Uliargoli	...	150.00
Pangala	...	40.00
Innanje	...	15.00
Total	...	288.13

The cause for the submersion of the fields by the water of the salt water Exclusion Dam across Pangala River is due to the complete obstruction for the free flow of flood water. The paddy fields are situated at lower level than the level of the dam. Consequently the stagnated flood water does not recede quickly even after the rains stop. The actual loss sustained by the agriculturists cannot be assessed now as the lands are still submerged under water. It is reported that the fields have been under water for the past twenty days due to continuous monsoon rains from 18th June 1972 to 11th July 1972.

The Assistant Engineer (P.W.D.) Udipi and Executive Engineer, Udipi Division have also inspected the spot. It has been decided by the Public Works Department authorities to lower the concrete bed laid up to the top of capping slabs at the right bank and also to connect the water levels at the dam site. Necessary steps in this regard have already been taken by the Public Works Department authorities with the help of the Air Compressor. The work is fast progressing.

The Tahsildar, Udipi has been asked to visit the locality once again immediately and assess the damage caused to each and every cultivator. However, it is apprehended that the yield from the above fields might be adversely affected due to the submersion which has lasted for more than a fortnight.

The Revenue Officers have been empowered to sanction relief for the damages to crops, houses and other property by floods and other

(SRI N. HUTCHAMASTI GOWDA)

natural calamities. The Deputy Commissioner, South Kanara will take necessary action to afford relief to the affected ryots after assessing the damage which will be done after the water is cleared from the fields.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಅಧ್ಯಕ್ಷಿಣಿಯವರೇ, ಈಗ ಮಾನ್ಯ ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟಿನಲ್ಲಿ ಉಡುಪಿ ತಾಲ್ಲೂಕಿನಲ್ಲಿ 288 ಎಕರೆ ಪ್ರದೇಶದಲ್ಲಿ ಪ್ರವಾಹದ ಹಾವಳಿಯಿಂದ ಬೆಳೆಗಳಿಗೆ ಹಾನಿಯುಂಟಾಗಿದೆ ಎಂದು ಹೇಳಿದರು. ಆದರೆ ಅಲ್ಲಿ ಆ ಸಂಬಂಧದ ಅಸೆಸ್‌ಮೆಂಟ್ ಇನ್ನೂ ಕಂಪ್ಲೀಟಾಗಿಲ್ಲ. ನನಗೆ ಗೊತ್ತಿರುವ ಇನ್‌ಫರ್‌ಮೇಷನ್ ಪ್ರಕಾರ ಸುಮಾರು ಒಂದು ಎಕರೆ ನಾಟಿ ಮಾಡಿದ್ದು ಕಂಪ್ಲೀಟಾಗಿ ಕೊಚ್ಚಿಕೊಂಡು ಹೋಗಿದೆ. ಆದ್ದರಿಂದ ತಾವು ಈ ಕೂಡಲೇ ಈ ವಿಚಾರವನ್ನು ಜಿಲ್ಲಾಧಿಕಾರಿಗಳಿಗೆ ತಿಳಿಸಿ ಹಾನಿಗೊಳಗಾಗಿರತಕ್ಕ ರೈತರಿಗೆ ಬೀಜ ಮತ್ತು ಗೊಬ್ಬರ ಹಾಗೂ ಇತರ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ಪ್ರವಾಹದಿಂದ ನಿಜವಾಗಿ ಯಾರು ಯಾರಿಗೆ ಯಾವ ರೀತಿಯ ಹಾನಿಯುಂಟಾಗಿದೆ ಎಂಬುದನ್ನು ರೆವಿನ್ಯೂ ಅಧಿಕಾರಿಗಳು ತನಿಖೆ ಮಾಡಿ ಕಾನೂನು ರೀತ್ಯಾ ಯಾವ ರೀತಿಯ ಪರಿಹಾರವನ್ನು ಒದಗಿಸುವುದಕ್ಕೆ ಸಾಧ್ಯವಿದೆ ಎಂಬುದನ್ನು ಯೋಚನೆ ಮಾಡಿ ಆ ಬಗ್ಗೆ ತೀರ್ಮಾನ ಕೈಗೊಳ್ಳುತ್ತಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಬಿತ್ತಿರುವ ಬೀಜವೆಲ್ಲಾ ಹಾಳಾಗಿಹೋಗಿದೆ. ಅಲ್ಪ ಸ್ವಲ್ಪ ಬೆಳೆದಿದ್ದ ಬೆಳೆಗೆ ಹುಳು ಬಿದ್ದು ಬೆಳೆಯಲ್ಲವೂ ಹಾಳಾಗಿಹೋಗಿದೆ. ಇದರಿಂದಾಗಿ ರೈತರಿಗೆ ತುಂಬಾ ನಷ್ಟವುಂಟಾಗಿದೆ. ಆದ್ದರಿಂದ ಆ ರೈತರಿಗೆ ಬೀಜ ಗೊಬ್ಬರ ಇವುಗಳನ್ನು ಒದಗಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ? ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬತ್ತದ ಬೆಳೆಗೆ ಒಂದು ತರಹ ಮಿಲಿಬಗ್ ಎನ್ನುವ ಹುಳುಬಿದ್ದು ಬೆಳೆಯೆಲ್ಲಾ ನಾಶವಾಗಿದೆ. ಇದಕ್ಕೆ ಔಷದಿ ಒದಗಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಮಿಲಿಬಗ್ ಹುಳು ವಿಷಯ ನಾನು ಮಾನ್ಯ ವ್ಯವಸಾಯ ಶಾಖೆಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಆ ವಿಚಾರದಲ್ಲಿ ಅವರು ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ ಮುಂದಿನ ಕ್ರಮ ಏನು ಕೈಗೊಳ್ಳಬೇಕು ಎಂಬುದರ ಬಗ್ಗೆ ಅವರು ತಿಳಿಸಬೇಕು. ಆದ್ದರಿಂದ ಅದು ನಿಧಾನವಾಗಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷ 83 ಸಾವಿರ ಎಕರೆ ಪ್ರದೇಶದಲ್ಲಿ ಬತ್ತವನ್ನು ಬೆಳೆಯುತ್ತಾರೆ. ಅಲ್ಲಿ ಬತ್ತದ ಬೆಳೆಗೆ ಈ ಮಿಲಿಬಗ್ ಹುಳು ಬಿದ್ದು ಬೆಳೆ ನಾಶವಾಗಿದೆ. ಅಲ್ಲಿ ಅದಕ್ಕೆ ಬೇಕಾದ ಮದ್ದು ಸಿಕ್ಕುವುದಿಲ್ಲ. ಆದ್ದರಿಂದ ಅದನ್ನು ಒದಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಶ್ನೆಗೆ ಈಗಾಗಲೇ ನಾನು ಉತ್ತರ ಹೇಳಿದ್ದೇನೆ.

(*ii*) re : *eviction of Harijan tenants from forest lands in Kondahalli, Magadi Taluk*

SRI M. H. JAYAPRAKASH NARAYAN (Sirsi).—I call the attention of the Minister for Agriculture and Forests to the eviction of Harijan tenants of forest land in Kondahalli, Magadi Taluk.

The Hon'ble Members are aware that inspite of appropriate steps taken by the Department, forest lands continue to be encroached upon by individuals and brought under cultivation. The Departmental staff is under instructions to take deterrent steps in such cases and remove the encroachments.

Sri Doddachannaiah and 14 others had encroached upon certain forest lands in Kondahalli Village, Magadi Taluk, Bangalore District and when eviction proceedings were instituted against them by the Department, they represented to the then Minister for Forests on 6th March 1963 to grant land to the extent of nearly 50 acres in Survey Nos. 21 and 51 encroached upon by them, to them for cultivation. The then Minister for Forests ordered that the proceedings instituted for the eviction of the encroachers might be stayed and a report obtained from the Chief Conservater of Forests.

The Chief Conservator of Forests in his report dated the 21st November 1964 stated that the area requested for grant was included in Balekatte Minor Forests, that it was under encroachment for some years and that it was cultivated at random. The Chief Conservator of Forests therefore, requested Government to vacate the stay enabling the Department to evict the encroachers as it would honey-comb the forest area.

The file was kept for spot inspection by the then Minister for Forests and the inspection did not take place for one or other reasons.

The Chief Conservator of Forests again requested Government on 14th February 1971 to issue orders enabling the Department to evict the encroachers forcibly. The case was posted for hearing before the Secretary on 7th February 1972, but the case was adjourned, at the request of the Advocates as they had no papers to discuss and wanted to consult the parties. They, however, did not turn up thereafter.

I have visited the spot on 6th April 1972 when some local people were also present. Some of the encroachers were absent. I find that only some pieces of lands are cultivated by the Schedule Caste people whereas some local people taking advantage of the situation have started cultivating the lands. The villagers assembled at the spot in my presence have agreed to the eviction of the encroachers when the correct facts were made known to them. In the circumstances, Government came to the conclusion that there was no need to continue the stay as it did not materially benefit the members of the Scheduled Caste and Scheduled Tribe and have accordingly vacated the stay. Further proceedings for evicting encroachers will follow.

I take the opportunity to request the Hon'ble Member and other Hon'ble Members of the House to co-operate with me in curbing the illegal activities of some of the persons who make hay in the name of the Scheduled Caste and Scheduled Tribe. While Government would be prepared to consider any reasonable request from the members of the Scheduled Caste and Scheduled Tribe, it will be difficult for them to encourage unlawful activities directly or indirectly. Government will take stern measures to curb such tendancies whenever they appear.

2-00 P.M.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಮಾನ್ಯ ಮಂತ್ರಿಯವರು ಹೊಸ ಸರ್ಕಾರ ಬಂದ ಮೇಲೆ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡುವ ನೀತಿಯ ಪ್ರಕಾರ ಉತ್ತರವನ್ನು ಹೇಳಿದ್ದಾರೆ. 1957ನೇ ಇಸವಿಯಲ್ಲಿ ಜಿ.ವಿ.ಕೆ. ರಾಯರು ಜಿಲ್ಲಾಧಿಕಾರಿಗಳಾಗಿದ್ದಾಗ, ಮತ್ತು ಎಚ್. ಸಿ. ಲಿಂಗಾರೆಡ್ಡಿಯವರು ಪ್ಲಾನಿಂಗ್ ಡೆಪ್ಯೂಟಿ ಮಂತ್ರಿಯವರಾಗಿದ್ದಾಗ ಅಲ್ಲಿ ನಡೆದಂತಹ ಹರಿಜನರ ಸಮ್ಮೇಳನದಲ್ಲಿ ಭಾಗವಹಿಸಿ, ಆ ಸ್ಥಳವನ್ನು ನೋಡಿ, ಆ ಜಮೀನನ್ನು ಹರಿಜನರಿಗೆ ಕೊಡುವುದು ಸೂಕ್ತವೆಂದು ಹೇಳಿದ್ದು ರಿಕಾರ್ಡ್ ಆಗಿರಲಿಲ್ಲವೇ ? ಅದೇ ರೀತಿಯಲ್ಲಿ ಆ ಸ್ಥಳದಲ್ಲಿದ್ದಂತಹ ಆರ್.ಎಫ್.ಓ ಮತ್ತು ಡಿ. ಎಫ್. ಓ. ಅಲ್ಲಿರತಕ್ಕಂತಹ ಭೂಮಿಯನ್ನು ಹರಿಜನರಿಗೆ ಕೊಡಬೇಕೆಂದು ಹೇಳಿರಲಿಲ್ಲವೇ 1963ರಲ್ಲಿ ಎ.ಎಫ್.ಡಿ. 4 ರಲ್ಲಿ ಮಾನ್ಯ ಮಾಜೀ ಅರಣ್ಯ ಮಂತ್ರಿಯವರು ಅಲ್ಲಿಯ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಇದರ ಬಗ್ಗೆ ಸ್ಟೇ ಕೊಟ್ಟಿದ್ದು ಇವರಿಗೆಯೇ ಆ ಜಮೀನನ್ನು ಕೊಡಬೇಕೆಂಬ ಉದ್ದೇಶದಿಂದ ಅಲ್ಲವೇ ? ಈಗ 10 ವರ್ಷಗಳಿಂದ ಕೇಳಿದರೂ ಏಕೆ ಅವರಿಗೆ ಕೊಟ್ಟಿಲ್ಲ ? ಇವತ್ತು ಬೇರೆ ಕಡೆ ಶಂಕರಗೌಡರವರಿಗೆ ಜಮೀನು ಕೊಡುವುದಕ್ಕಾಗುತ್ತದೆ, ಮತ್ತು ಸಿದ್ಧಗಂಗೆ ಮಠದವರಿಗೆ ಜಮೀನು ಕೊಡುವುದಕ್ಕೆ ಆಗುತ್ತದೆ. ಆದರೆ ಅಲ್ಲಿರತಕ್ಕಂತಹ ಹರಿಜನರಿಗೆ 57ನೇ ಇಸವಿಯಿಂದ ಅಲ್ಲಿ ಉಳುಮೆ ಮಾಡಿ ರಿಕ್ಲಮೇಷನ್ ಮಾಡಿದ್ದರೂ ಕೊಡುವುದಕ್ಕೆ ಏನು ತೊಂದರೆ ? ಆದ್ದರಿಂದ ಈ ಧೋರಣೆಯನ್ನು ತಪ್ಪಿಸಿ ಯಾರು ಭೂಹೀನರು ಇದ್ದಾರೆ, ಯಾರು ಬಡ ಹರಿಜನರು ಇದ್ದಾರೆ, ಅವರಿಗೆ ಜೀವನ ಮಾಡುವಂತೆ ಜಮೀನು ಬಿಡುಗಡೆ ಮಾಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಶಂಕರಗೌಡರಿಗೆ ಮತ್ತು ಸಿದ್ಧಗಂಗಾ ಮಠಕ್ಕೆ ಜಮೀನು ಕೊಟ್ಟಿದ್ದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಕೊಟ್ಟಿದ್ದು ಸರಿಯೋ ತಪ್ಪೋ ಎಂದು ನಾನು ಹೇಳುವುದಿಲ್ಲ. ಏಕೆಂದರೆ ಅದನ್ನು ನಾವು ಕೊಟ್ಟಿಲ್ಲ. ಇನ್ನು ಮಾನ್ಯ ರಾಚಯ್ಯನವರು ಸ್ಟೇ ಕೊಟ್ಟಿದ್ದರು ಎಂದು ಹೇಳಿದರು. ಇವರಿಗೆಯೇ ಕೊಡಬೇಕೆಂದು ಇದ್ದಿದ್ದರೆ ಮಾನ್ಯ ರಾಚಯ್ಯನವರು ಸ್ಟೇ ಕೊಡುವ ಬದಲು ಗ್ರಾಂಟ್ ಮಾಡಬಹುದಿತ್ತು. ಅವರು ಅದನ್ನು ಇನ್ಸ್‌ಪೆಕ್ಷನ್‌ಗೆ ಇಟ್ಟು ಕೊಂಡಿದ್ದರೂ ಇನ್ಸ್‌ಪೆಕ್ಷನ್ ಮಾಡಿಲ್ಲ. ಅವರಿಗೆ ಕೊಡುವ ಉದ್ದೇಶ ಇರುತ್ತಿದ್ದರೆ ಕೊಡಿ ಎಂದು ಹೇಳಬಹುದಿತ್ತು. ನಾನು ಸ್ವತಃ ಅಲ್ಲಿಗೆ ಇನ್ಸ್‌ಪೆಕ್ಷನ್‌ಗೆ ಹೋಗಿದ್ದೆ. ನಾಲ್ಕೈದು ಮೈಲಿ ದೂರ ಹೋಗಿ ಹರಿಜನರನ್ನು ಕರೆಸಿ ಮಾತನಾಡಿದ್ದೇನೆ. ಮಾತನಾಡಿದ ಮೇಲೆ ಹರಿಜನರು ಅದನ್ನು ಒಪ್ಪಿದರು. ನಮ್ಮ ಹೆಸರಿನಲ್ಲಿ ದೊಡ್ಡವರು ಲಾಭ ಗಳಿಸುತ್ತಿದ್ದಾರೆ ಎಂದು ಅವರು ಹೇಳಿದರು. ಅವರ ಅಡ್ವೊಕೇಟಿಗೂ ನೋಟೀಸ್ ಕೊಟ್ಟಿದ್ದೇವೆ. ಆದ್ದರಿಂದ ನಾನು ಕೊನೆಗೆ ಮಾಡಿದ ಆರ್ಡರನ್ನು ಸದಸ್ಯರು ನೋಡಿದರೆ ಅವರಿಗೆ ತೃಪ್ತಿ ಯಾಗಬಹುದೆಂದು ತಿಳಿಯುತ್ತೇನೆ. ಅದನ್ನು ಮಾನ್ಯ ಸಭೆಯ ಗಮನಕ್ಕೆ ಓದಿ ತಿಳಿಸುತ್ತೇನೆ. ಅದು ಹೀಗೆ ಇದೆ :—

Under the circumstances, I am inclined to order for eviction and if they surrender the land peacefully, the qesution of granting the land or otherwise in suitable places may be considered. The Harijans might take gomal land if the gomal land is available. Therefore the Revenue authorities may be asked to proceed for eviction immediately and in case the gomal land is not available then they can approach for forest and.

ಈ ರೀತಿಯಾಗಿ ಆರ್ಡರ್ ಮಾಡಿದ್ದೇನೆ. ಮಾನ್ಯ ಸದಸ್ಯರ ಇಚ್ಛೆಯಂತೆ ಹರಿಜನರಿಗೆ ಅದೇ ಸ್ಥಳದಲ್ಲಿ ಜಾಗ ಬೇಕಾಗಿದ್ದರೂ ಅವರು ಮೊದಲು ನ್ಯಾಯಬದ್ಧವಾಗಿ ಬಿಟ್ಟು ಕೊಡಲಿ. ಅಮೇಲೆ ಅದನ್ನು ವಿಚಾರ ಮಾಡಿ ಇತ್ಯರ್ಥ ಮಾಡಬಹುದು. ಅದರ ಬದಲು ಅನ್‌ಲಾಫುಲ್ ಆಕ್ಟಿವಿಟೀಸ್ ಎನ್‌ಕರೇಜ್ ಮಾಡಬೇಕೆಂದು ಹೇಳಿದರೆ, ಅದು ಈ ಸರ್ಕಾರದ ಧೋರಣೆಯಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಅಲ್ಲಿಯೇ ಸ್ಥಳದಲ್ಲಿರುವ ಫಾರೆಸ್ಟ್ ಅಧಿಕಾರಿಗಳು ಇದರ ಬಗ್ಗೆ ಶಿಫಾರಸು ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಅದರ ಬಗ್ಗೆ ತಾವು ಹೇಳಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಫಾರೆಸ್ಟ್ ಅಧಿಕಾರಿಗಳು ಸ್ಟೇ ತೆಗೆದು ಹಾಕಿದರೆ ಅನ್ ಆಥರೈಸ್ಡ್ ಇದ್ದವರನ್ನು ಹೊರಗೆ ಹಾಕಬಹುದು ಎಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ಈ ಸರ್ವೆ ನಂ. 21 ಮತ್ತು 51ರಲ್ಲಿ ಒಟ್ಟು ಎಷ್ಟು ಜಮೀನು ಇದೆ ಮತ್ತು ಜೊತೆಗೆ ಕೊನೆಯ ಪ್ಯಾರಾದಲ್ಲಿ:

" .....It did not materially benefit the members of the Scheduled Castes and Scheduled Tribes and I have accordingly vacated the stay." ಎಂದು ಹೇಳಿದ್ದೀರಿ. ಒಂದು ವೇಳೆ ಹರಿಜನ ಮತ್ತು ಗಿರಿಜನರಿಗೆ ಉಪಯೋಗ ಆಗತಕ್ಕ ಸಂದರ್ಭ ಇದ್ದರೆ ಅದನ್ನು ಅವರಿಗೆ ಕೊಡುವುದಕ್ಕೆ ಮನಸ್ಸು ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ಹರಿಜನರು ಮತ್ತು ಹೊಲ ಇಲ್ಲದವರು ತಮಗೆ ಅದೇ ಜಮೀನು ಬೇಕೆಂದು ಹೇಳುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಎಸ್. ಎ. ಸ್ಪೆಷಲ್ ಕೇಸ್ ಎವಿಕ್ಷನ್ ಆರ್ಡರ್ ಮಾಡಿದ್ದಾರೆ. ಆದರೆ ಅಲ್ಲಿ ಹರಿಜನರ ಹೆಸರಿನಲ್ಲಿ ಮತ್ತೆ ಕೆಲವು ಜನರು ಈ ರೀತಿ ಅನ್ ಅಥರೈಸ್ಡ್ ಆಕ್ಯುಪೇಷನ್ ಮಾಡಿಕೊಂಡಿರುವುದು ಸರಿಯಲ್ಲವೆಂಬುದು ಸರ್ಕಾರದ ವಾದ. ಒಟ್ಟು ಅಲ್ಲಿ 50 ಎಕರೆ ಜಮೀನು ಇದೆ.

ಶ್ರೀ ಕಾಗೋಡು ತಿಮ್ಮಪ್ಪ.— ಅದರಲ್ಲಿ ಪೂರ್ತಿಯಾಗಿ ಸಾಗುವಳಿ ಮಾಡಿದ್ದಾರೆ. ಹೊಸದಾಗಿ ಆಕ್ರಮಣ ಮಾಡಿಕೊಂಡು ಲೂಟಿ ಮಾಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಒಂದು ವೇಳೆ 50 ಎಕರೆ ಜಮೀನನ್ನು ಸಾಗುವಳಿ ಮಾಡಿರುವಾಗ ಏಕೆ ಅವರಿಗೆ ಕೊಡುವುದಕ್ಕೆ ಯೋಚನೆ ಮಾಡಬಾರದು? ಹೇಗಿದ್ದರೂ ಅವರು 17 ವರ್ಷಗಳಿಂದ ಅಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಆದ್ದರಿಂದ ಅವರನ್ನು ಹೀಗೆ ಎವಿಕ್ಷನ್ ಮಾಡಿದರೆ ಬಹಳ ತೊಂದರೆಯಾಗುತ್ತದೆ. ಹೀಗಿರುವಾಗ ತಾವು ಮಾಡಿದಂತಹ ಆರ್ಡರನ್ನು ಪುನಃ ಪರಿಶೀಲನೆ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—1963ನೇ ಇಸವಿಯಲ್ಲಿ ಸರ್ಕಾರದ ಎದುರಿಗೆ ಅಲ್ಲಿಯ ವಿಚಾರ ಬಂದಾಗ ಅಲ್ಲಿ ಸ್ಟೇ ಆರ್ಡರ್ ಕೊಟ್ಟಿದ್ದಾರೆ. ಆ ನಿರ್ಣಯದ ವಿರುದ್ಧವಾಗಿ ಸದಸ್ಯರು ಹಾಗೆ ಮಾಡಿ ಹೀಗೆ ಮಾಡಿ ಎಂದು ಹೇಳಿ ಒತ್ತಾಯ ಮಾಡುವುದು ಸೂಕ್ತವಲ್ಲ. ಹರಿಜನರಿಗೆ ಕಲ್ಯಾಣ ಮಾಡೋಣ, ಮತ್ತು ನ್ಯಾಯವಾಗಿ ಹೋಗತಕ್ಕಂತಹ ಹರಿಜನರಿಗೆ ಅನುಕೂಲ ಮಾಡೋಣ ಮತ್ತು ಕ್ರಮಬದ್ಧವಾದ ಕೆಲಸಗಳಲ್ಲಿ ಸಹಾಯವನ್ನೂ ಮಾಡೋಣ.

(*iii*) *re* : **the loss to sugar factories in the State due to reduetion of price of levy sugar.**

SRI M. H. BORIAH (Mandya).—I call the attention of the Minister of State for Food and Civil Supplies to the loss to the sugar factories in the State due to reduction of price of levy sugar.

SMT. E. E VAZ (Minister of State for Food and Civil Supplies).—I state as follows :

The Sugar (Price Distribution) Order, 1972, made by the Government of India, in exercise of the powers conferred by sub-section 3C of Section 3 of the Essential Commodities Act, 1955, has come into effect from 15th June, 1972. The prices of various grades of sugar fixed under the Order are as under :—

Ex-factory prices (Rupees per Quintal) Grade-wise for I S.S. Grades (exclusive of Excise Duty) for Mysore State.

Grades	A-30 B-30 C-30	D-30	E-30	A-29 B-29 C-29	D-29	E-29
Rate per Quintal (in Rupees).	126.25	125.10	124.55	125.25	124.25	123.75

(SMT. E. E. VAZ)

Some sugar factories in the State have filed Writ Petitions in the High Court of Mysore against the above said order. The High Court of Mysore has issued an interim Stay Order permitting the sugar factories to sell sugar at Rs. 150 per quintal instead of the reduced rates as above with certain conditions pending disposal of the Writ Petitions. The matter is, therefore, *subjudice.*

Papers Laid on the Table.

Sri S. M. KRISHNA (Minister for Industries).—On behalf of the Chief Minister, I beg to lay the following papers on the table of the House :

(i) Fifth Annual Report of the Mysore State Vigilance Commission for the year 1969-70 ;

under Rule 7 of the Mysore Vigilance Commission Rules, 1965.

(ii) Notification No. GSR 196 dated 1st May, 1972 ;

The Mysore Excise (Lease of the Right of Retail Vend of Liquors) (Amendment) Rules, 1972 ;

under Sub-Section (3) and (4) of Section 71 of the Mysore Excise Act, 1965.

Sri S. M. KRISHNA (Minister for Industries).—I beg to lay the following papers on the Table of the House :

Notification No. GSR 201 dated 14th July, 1971 ;

The Mysore Silk Worm Seed and Cocoon (Regulation of Production Supply and Distribution) (Amendment) Rules, 1971 ;

Under Sub-section (3) of Section 18 of the Mysore Silk Worm Seed and Cocoon (Regulation of Production, Supply and Distribution) Act, 1959.

MADAM SPEAKER.—All the Notifications and the Report of the Vigilance Commission are laid on the Table of the House.

List of the Persons Declared as Political Sufferers in the State.

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಅಧ್ಯಕ್ಷರೇ, 25ನೇ ವರ್ಷದ ಸ್ವಾತಂತ್ರ್ಯೋತ್ಸವವನ್ನು ಬಹಳ ವಿಜಂಭ್ರಣೆಯಿಂದ ಆಚರಿಸುವ ಸಂದರ್ಭದಲ್ಲಿ 1947ರಿಂದ ಸ್ವಾತಂತ್ರ್ಯ ಹೋರಾಟಕ್ಕಾಗಿ ದುಡಿದವರ ಪೈಕಿ ಪ್ರತಿಯೊಂದು ರಾಜ್ಯದಿಂದ 30 ಜನರನ್ನು ದೆಹಲಿಗೆ ಕಳುಹಿಸಬೇಕೆಂಬ ಒಂದು ಸರ್ಕ್ಯುಲರ್ ಪ್ರಕಾರ ಈ ಸರ್ಕಾರದವರು ಒಂದು ಪಟ್ಟಿಯನ್ನು

ಕಳುಹಿಸಿದ್ದಾರೆ. ಇವರು 30 ಜನರನ್ನು ಲಿಸ್ಟ್ ಮಾಡಿ ಕಳುಹಿಸಿದ್ದಾರೆ. ಅದರಲ್ಲಿ ಜೈಲಿಗೆ ಹೋದವರು ಎಷ್ಟೋ ಜನರು ಇಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಇಲ್ಲದೇ ಇರತಕ್ಕಂತಹವರ ಹೆಸರುಗಳು ಎಷ್ಟೋ ಇವೆ. 30 ಜನರನ್ನು ಸೆಲೆಕ್ಟ್ ಮಾಡಿ ಕಳುಹಿಸುವ ಒಂದು ಕನ್‌ಸೆಪ್ಷನ್ ಈ ಸರ್ಕಾರಕ್ಕೆ ಬಂದಿದೆ. ಸರ್ಕಾರದವರು ಇದುವರೆಗೆ ಆ ಹೆಸರುಗಳನ್ನು ಪಬ್ಲಿಷ್ ಮಾಡಲಿಲ್ಲ. ಎಷ್ಟೋ ಜನರು ದೀರ್ಘವಾಗಿ ಜೈಲಿಗೆ ಹೋಗಿ ತ್ಯಾಗ ಮಾಡಿರುತ್ತಾರೆ. ಅವರಲ್ಲಿ ಕೆಲವರ ಹೆಸರನ್ನು ನಾನು ಹೇಳಬಹುದು. ಮಾನ್ಯಶ್ರೀ ರಾಮಚಂದ್ರರಾಯರು, ಶ್ರೀ ಟಿ. ಎಸ್. ಸುಬ್ಬಣ್ಣ, ಮಾನ್ಯಶ್ರೀ ವಿ. ಎಸ್. ನಾರಾಯಣರಾವ್ ಅವರು ಇದ್ದಾರೆ. ವಿವರಗಳಿಂದ ಕೂಡಿದ ಪಟ್ಟಿ ಅವರ ಹತ್ತಿರ ಇರಬಹುದು. ಮಾನ್ಯಶ್ರೀ ನಾರಾಯಣಪ್ಪ ಎಂಬುವರು ಜೈಲಿಗೇ ಹೋಗಿಲ್ಲ. ಇನ್ನೂ ಜೈಲಿಗೆ ಹೋಗದೇ ಇರತಕ್ಕವರು ಎಷ್ಟೋ ಜನ ಆ ಪಟ್ಟಿಯಲ್ಲಿದ್ದಾರೆ. ಮಂತ್ರಿಗಳಲ್ಲಿ ಜೈಲಿಗೆ ಹೋಗದೇ ಇರತಕ್ಕವರಲ್ಲಿ ಸೇಕಡ 99ರಷ್ಟು ಅಂದರೆ, ಒಬ್ಬಿಬ್ಬರಾದರೂ ಸಿಗುತ್ತಾರೆ.

ಒಬ್ಬ ಸದಸ್ಯರು.—ಆಗ ಅವರು ಚಿಕ್ಕವರು. ಜೈಲಿಗೆ ಹೇಗೆ ಹೋಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಬೇರೆ ಯಾವುದೋ ವಿಷಯದಲ್ಲಿ ಜೈಲಿಗೆ ಹೋಗಿರಬಹುದಷ್ಟೆ. ಒಬ್ಬರು ನನ್ನ ಸ್ನೇಹಿತರು. ಸುಮಾರು ಆರೂವರೆ ವರ್ಷಗಳಿಂದ ಜೈಲಿಗೆ ಹೋಗಿರತಕ್ಕವರು. ಅವರ ಹೆಸರು ಮಾನ್ಯ ಶ್ರೀ ದೀನಕುಮಾರ್. ಅವರು ಸ್ವಾತಂತ್ರ್ಯ ಚಳುವಳಿ ಸಂದರ್ಭದಲ್ಲಿ ಜೈಲಿಗೆ ಹೋಗಿರುವವರು. ಅವರನ್ನು ದೆಹಲಿಗೆ ಕಳುಹಿಸುತ್ತೀರಾ? ತಹಸೀಲ್ದಾರ್ ಹತ್ತಿರ ವೆರಿಫೈ ಮಾಡಿ ಸರ್ಟಿಫಿಕೇಟ್ ಇಲ್ಲವೆಂದು ತೆಗೆದುಹಾಕಿದ್ದೀರಾ? ಹಿಂದೆ ಎಕ್ಸ್‌ಪೊ—70 ಪ್ರಕರಣವೂ ಸಹ ಇದೇ ರೀತಿಯಾಗಿ ಆಯಿತು.

ಅಧ್ಯಕ್ಷರು.—ಇಷ್ಟು ಒಳ್ಳೆಯ ವಿಚಾರವನ್ನು ಯಾವ್ಯಾವುದಕ್ಕೊ ಕನೆಕ್ಟ್ ಮಾಡಿ ಹೇಳಿದರೆ ಅದರ ಘನತೆಯೇ ಹೋಗುತ್ತದೆ. ತಾವು ಹೇಳುವ ವಿಚಾರ ಒಳ್ಳೆಯದು. ಹೀಗೆ ಹೇಳಿ ತಾವು ಅದರ ತೂಕವನ್ನು ಕಡಿಮೆಮಾಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್.—ನಮಗೆ ಇರುವುದು ಈ ಸಭೆ. ಏನೊಂದೂ ನಿಮ್ಮ ಮೂಲಕ ಸರ್ಕಾರಕ್ಕೆ ನಾನು ಪ್ರಾರ್ಥನೆ ಮಾಡಿಕೊಳ್ಳಬೇಕು. ಆ 30 ಜನರಲ್ಲಿ ಕೆಲವರು ರಿಜರ್ವ್ ಆಗಿದ್ದರೂ ಅನ್‌ರಿಸರ್ವ್ ಆಗಿರುವವರನ್ನು ಕಳುಹಿಸಿದ್ದಾರೆ, ಸರ್ಕಾರದವರು ಏನೇನು ಲಿಸ್ಟ್ ಕಳುಹಿಸಿದ್ದಾರೆ, ಯಾರ್ಯಾರನ್ನು ಅಲ್ಲಿಗೆ ಕಳುಹಿಸಿದ್ದಾರೆ, ಅವರು ಆ ರೀತಿ ಕಳುಹಿಸಿರುವ ಬಗ್ಗೆ ರೂಲ್ಸ್ ಏನು, ಮುಖ್ಯವಾದಂಥ ಜನರನ್ನು ಏಕೆ ಕೈಬಿಟ್ಟಿದ್ದಾರೆಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಸರಿ.

Rise in prices of food materials

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ನಿನ್ನೆ ದಿವಸ ತಮ್ಮಲ್ಲಿ ನಾನೊಂದು ಅರಿಕೆ ಮಾಡಿಕೊಂಡೆ. ಈಗ ಬೆಂಗಳೂರಿನಲ್ಲಿ ಆಹಾರ ಪದಾರ್ಥಗಳ ಬೆಲೆ ವಿಪರೀತವಾಗಿದೆ. ಅದಕ್ಕಾಗಿ ಮಾನ್ಯ ಆಹಾರ ಮಂತ್ರಿಗಳು ಏನು ಕ್ರಮ ತೆಗೆದುಕೊಂಡಿದ್ದಾರೆಂಬ ಬಗ್ಗೆ ತಿಳಿಸಬೇಕೆಂದು. ನಾನು ಈ ವಿಚಾರವನ್ನು ಇಲ್ಲಿ ಸುಮಾರು 15 ದಿವಸಗಳಿಂದಲೂ ಹೇಳುತ್ತಿದ್ದೇನೆ. ಮಾನ್ಯ ಆಹಾರ ಮಂತ್ರಿಗಳು ನೇರವಾಗಿ ಅಪ್ಪರ್‌ಹೌಸಿಗೆ ಹೋಗುವುದಕ್ಕೆ ಹೊರಗೆ ಹೋದರೆಂದು ಕಾಣುತ್ತದೆ. ಅವರು ಒಂದು ಸಾರಿ ಆಹಾರಧಾನ್ಯಗಳನ್ನು ಗೋಡೌನಿಂದ ರಿಲೀಪ್ ಮಾಡಿ ಆದಷ್ಟು ಬೆಲೆಗಳನ್ನು ಕಡಿಮೆಮಾಡಲಾಗುತ್ತದೆಂದು ಇಲ್ಲಿ ವಚನ ಕೊಟ್ಟಿದ್ದರು. ಸುಮಾರು 15 ದಿವಸಗಳಿಂದಲೂ ಬೆಲೆಗಳು ಸೇಕಡ 20 ರಷ್ಟು ಜಾಸ್ತಿಯಾಗುತ್ತಿವೆ. ಈ ಬೆಲೆಗಳನ್ನು ಇಳಿಸುವುದಕ್ಕೆ ಆಹಾರ ಮಂತ್ರಿಗಳು ಏನು ಪ್ರಯತ್ನ ಮಾಡಿದ್ದಾರೆ? ಜನಗಳಿಗೆ ಏನು ಅನುಕೂಲವಾಗಿದೆ ಎಂಬ ಬಗ್ಗೆ ಇಲ್ಲಿ ಒಂದು ಹೇಳಿಕೆಯನ್ನು ಕೊಡಬೇಕು.

ಅಧ್ಯಕ್ಷರು.—ಮಾನ್ಯ ಸಚಿವರು ಈಗತಾನೆ ದೆಹಲಿಯಿಂದ ಬಂದಿದ್ದಾರೆ. ಆಮೇಲೆ ಉತ್ತರ ಹೇಳುತ್ತಾರೆ. ತಾವು ತಮ್ಮ ಕಾಗದವನ್ನು ಕಳುಹಿಸಿಕೊಡಿ. ಅದನ್ನು ಅವರಿಗೆ ಕಳುಹಿಸುತ್ತೇನೆ.

Breach of Tanks in Tumkur District

ಶ್ರೀ ಆರ್. ಚಿಕ್ಕಯ್ಯ (ಮಧುಗಿರಿ).—ತುಮಕೂರು ಜಿಲ್ಲೆಯಲ್ಲಿ ಮಧುಗಿರಿ ತಾಲ್ಲೂಕಿನಲ್ಲಿ ಮುಂಗಾರುಮಳೆಯಿಂದ ಕೆರೆಗಳು ಒಡೆದುಹೋಗಿ ಅನೇಕರು ಜಮೀನುಗಳನು ಮತ್ತು ಮನೆಗಳನ್ನೂ ಕಳೆದುಕೊಂಡಿದ್ದಾರೆ. ರೆವಿನ್ಯೂ ಮಿನಿಸ್ಟರ್ ನೋಡಿ ಅವರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ತಕ್ಕ ಪರಿಹಾರವನ್ನು ಕೊಡುತ್ತೇನೆಂದು ಹೇಳಿದರು. ಪ್ರಥಮತಃ ಅವರಿಗೆ ಸಾಲ ಏನು ಕೊಡುತ್ತೀರಾ? ಅಲ್ಲದೆ ಬಿ. ಡಿ. ಓ. ಗಳು ಮತ್ತು ರೆವಿನ್ಯೂ ಇನ್‌ಸ್ಪೆಕ್ಟರುಗಳು ನಿಜವಾಗಿ ಅಫೆಕ್ಟೆಡ್ ಏರಿಯಗಳಲ್ಲಿರುವವರಿಗೆ ಏನೇನು ಪರಿಹಾರಗಳನ್ನು ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ತಾವು ಅದನ್ನು ನಿನ್ನೆ ಕೊಟ್ಟಿದ್ದು. ಕೇವಲ 24 ಗಂಟೆಯೊಳಗೆ ಪರಿಹಾರ ಆಗುತ್ತದೆಯೇ? ತಾವು ಕಾಲ್ ಅಟೆನ್‌ಷನ್ ನೋಟೀಸನ್ನು ಅದರ ಬಗ್ಗೆ ಕಳುಹಿಸಿದ್ದೀರಿ. ಅದನ್ನು ನೋಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಇಲ್ಲಿ ಏನು ಪ್ರೊಸೀಜರ್ ಇದೆಯೋ ಅದು ನನಗೆ ಅರ್ಥವಾಗಲಿಲ್ಲ. ಈಗ ಅಭಾವ ಪರಿಸ್ಥಿತಿ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ನಾವು 4 ಜನ ಎಂ.ಎಲ್.ಎ.ಗಳು ಇದರ ಬಗ್ಗೆ ತಮಗೆ ಒಂದು ಅಪ್ಲಿಕೇಷನ್ ಕೊಟ್ಟಿದ್ದೆವು. ನಾವು ಹೇಳಿದ ವಿಷಯಗಳಿಗೆಲ್ಲ ಏನೇನು ಉತ್ತರ ಕೊಟ್ಟಿದ್ದೀರಿ?

ಅಧ್ಯಕ್ಷರು.—ಅವರು ಉತ್ತರ ಹೇಳುವಾಗ ತಾವು ಇಲ್ಲಿಗೆ ಬಾರದಿದ್ದರೆ ಅವರು ಜವಾಬ್ದಾರರಲ್ಲ.

Sri H. S. SIDDAPPA.—Madam Speaker. I would like to draw the attention of the Government through your goodself that a lot of black money is being turned into white money through this lottery ticket. Yesterday an instance came to my notice.

MADAM SPEAKR.—The Hon. member has just now given it. And I will send it to the Government.

List of persons declared as political Sufferers in the State [contd]

ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಈಗ ರಾಷ್ಟ್ರಸೇವೆ ಮಾಡಿರುವ ಜನರಿಗೆ ಭತ್ಯ ಕೊಡುತ್ತಾರೆ. ನಾನು ಒಬ್ಬ ಜೈಲಿಗೆ ಹೋದಂಥ ವ್ಯಕ್ತಿ. ಸರ್ಕಾರದವರು ಲಿಸ್ಟ್ ಮಾಡುತ್ತಿದ್ದಾರೆ. ನಾನು ಎಷ್ಟೋಸಾರಿ ಜೈಲಿಗೆ ಹೋಗಿದ್ದೇನೆ. ಅಂದಮೇಲೆ ನಮ್ಮ ಕಡೆ ಎಂ.ಎಲ್.ಎ. ಯಾರಿದ್ದಾರೆಂಬುದನ್ನು ಸರ್ಕಾರ ನೋಡಬೇಕು. ಅದರಲ್ಲಿ ಯಾರನ್ನೂ ಕಮಿಟ್ ಮಾಡುವುದು ಬೇಕಿಲ್ಲ. ಅವರು ನಮ್ಮನ್ನು ಈ ವಿಚಾರದಲ್ಲಿ ಕನ್‌ಸಲ್ಟ್ ಮಾಡಬೇಕು. ನಮ್ಮಲ್ಲಿಯೂ ಬಹಳ ಜನ ಪೊಲಿಟಿಕಲ್ ಸಫರರ್ಸ್ ಇದ್ದಾರೆ. ನಾಲ್ಕುವರ್ಷ ಜೈಲಿಗೆ ಹೋಗಿ ಸತ್ತ ನಂತರ ಅವರಿಗೆ ಭತ್ಯ ಮಂಜೂರಾಯಿತು. ಈ ಒಂದು ಸನ್ನಿವೇಶದಲ್ಲಿ ನನ್ನ ಸಲಹೆಯನ್ನು ತೆಗೆದುಕೊಳ್ಳಬೇಕು. ನಾನೇನೂ ಭತ್ಯ ತೆಗೆದುಕೊಳ್ಳುವುದಿಲ್ಲ. ಅಸೆಂಬ್ಲಿ ಮೆಂಬರ್ಸ್ ಯಾರು ಹಿಂದೆ ಜೈಲಿಗೆ ಹೋಗಿದ್ದಾರೆ, ಅವರ ಜೊತೆಯಲ್ಲಿ ಮಾನ್ಯ ಮಂತ್ರಿಗಳು ಸಮಾಲೋಚನೆ ಮಾಡಬೇಕು.

ಅಧ್ಯಕ್ಷರು.—ತಾವು ಸಲಹೆ ಕಳುಹಿಸಿದರೆ ಅದನ್ನು ಸರ್ಕಾರದವರು ನೋಡುತ್ತಾರೆ. ಅವರು 30 ಜನರನ್ನು ಆರಿಸಿಲಾಗಿದೆಯೆಂದು ಹೇಳಿದರು. ತಮ್ಮ ಸಲಹೆ ಏನು ಹೇಳುತ್ತಿದ್ದೀರೋ ಅದನ್ನು ನನಗೆ ಬರೆದು ಕಳುಹಿಸಿ. ಅವರಿಗೆ ಅದನ್ನು ಕಳುಹಿಸಿಕೊಡುತ್ತೇನೆ. ಆದರೆ ಸರ್ಕಾರ ಮಾಡುವುದನ್ನೆಲ್ಲಾ ತಮಗೆ ಬರೆದು ಕಳುಹಿಸಿ ಎಂದರೆ ಹೇಗೆ? ಅದನ್ನು ಪಟ್ಟಿಮಾಡಿ ಬರೆದು ಕೊಟ್ಟು ಇದನ್ನು ಹೀಗೆಯೇ ಮಾಡುತ್ತೇವೆಂದು ಅವರು ತಮಗೆ ಹೇಳುವುದಕ್ಕಾಗುತ್ತದೆಯೇ? ಎಲ್ಲವನ್ನೂ ಹೀಗೆಯೇ ಹೇಳುತ್ತಾ ಹೋದರೆ ಅದರ ಒಂದು ಮಹತ್ವವೇ ಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ನಾನು ತಮ್ಮಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಈ ವಿಚಾರದಲ್ಲಿ ತಾವು ನಮಗೆ ರಕ್ಷಣೆ ಕೊಡಬೇಕು......

ಶ್ರೀ ಎಚ್. ಎಸ್. ಸಿದ್ದಪ್ಪ.—ರೂಲಿಂಗ್ ಪಾರ್ಟಿಯವರು ಒಳಗೊಳಗೇ ತಮಗೆ ಬೇಕಾದವರನ್ನು ಡೆಲ್ಲಿಗೆ ಕಳುಹಿಸುವುದಕ್ಕೆ ಹೀಗೆ ಒಂದು ಪ್ಲಾನ್ ಮಾಡಿದ್ದಾರೆ. ಜೈಲಿಗೆ ಹೋಗದೆ ಇದ್ದವರನ್ನೂ ಕೂಡ ಆ ಪಟ್ಟಿಯಲ್ಲಿ ಸೇರಿಸಿದ್ದಾರೆ. ಬಾಕಿಯವರಿಗೆ ಕೇಂದ್ರಕ್ಕೆ ಅರ್ಜಿ ಹಾಕಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಇದು ಬಹಳ ಅನ್ಯಾಯ......

ಶ್ರೀ ವಾಟಾಳ್ ನಾಗರಾಜ್.—ಆ ಪಟ್ಟಿಯಲ್ಲಿರತಕ್ಕ 30 ಜನರಲ್ಲಿ ಕೆಲವರು ಜೈಲಿಗೆ ಹೋಗದೆ ಇದ್ದವರೂ ಇದ್ದಾರೆ. ಅವರಿಗೆಲ್ಲಾ ಈಗಾಗಲೆ ಪಾಸ್‌ಪೋರ್ಟನ್ನು ತರಿಸಿದ್ದಾರೆ........

ಅಧ್ಯಕ್ಷರು.– ಇಲ್ಲಿ ಪಾಸ್‌ಪೋರ್ಟ್ ವಿಷಯ ಎಲ್ಲಿ ಬಂತು ?

ಶ್ರೀ ವಾಟಾಳ್ ನಾಗರಾಜ್.—ಪಾಸ್‌ಪೋರ್ಟಲ್ಲ ಅದು ಪಾಸ್. ಪಾಸುಗಳನ್ನು ಅಗಲೇ ತರಿಸಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ವಿಚಾರ ನಮ್ಮ ಸಮಿತಿಯಲ್ಲೂ ಚರ್ಚೆಗೆ ಬಂದಿತು. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದ ಹಾಗೂ ಜೈಲಿಗೆ ಹೋಗಿದ್ದ ಕೆಲವು ಜನರನ್ನು ಬೆಳ್ಳಿ ಹಬ್ಬದ ಅಂಗವಾಗಿ ದೆಹಲಿಗೆ ಕಳುಹಿಸುತ್ತಾರೆಂಬ ವಿಚಾರದಲ್ಲಿ ಚರ್ಚೆ ನಡೆದದ್ದು ನಿಜ. ಆದರೆ ಅಲ್ಲಿಗೆ ಯಾರನ್ನು ಕಳುಹಿಸಬೇಕು ಎಂಬ ವಿಚಾರ ಸರ್ಕಾರದವರ ವಿವೇಚನೆಗೆ ಬಿಟ್ಟಿದ್ದು. ಆದರೆ ಶ್ರೀ ವಾಟಾಳರು ಜೈಲಿಗೆ ಹೋಗದೆ ಇದ್ದವರನ್ನೂ ದೆಹಲಿಗೆ ಕಳುಹಿಸುತ್ತಿದ್ದಾರೆಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಕೆಲವರಿಗೇನೋ ಬಹಳ ಹೆಚ್ಚಿನ ಆಸೆ ಇದ್ದಹಾಗಿದೆ. ಆದರೆ ಹಿಂದೆ ಜೈಲಿಗೆ ಹೋದ ಆ ವ್ಯಕ್ತಿಗಳೇನಿದ್ದಾರ ಅವರು ತಾಮ್ರದ ತಗಡಿನ ಆಸೆಗಾಗಿ ಜೈಲಿಗೆ ಹೋಗಲಿಲ್ಲ. ಅವರು ಆ ದಿವಸ ರಾಷ್ಟ್ರಕ್ಕೆ ಒಳ್ಳೆಯದಾಗಲಿ ಅನ್ನತಕ್ಕ ಒಂದು ನಿಸ್ವಾರ್ಥ ಭಾವನೆಯಿಂದ ಜೈಲಿಗೆ ಹೋದರು. ಸ್ವಾರ್ಥಕ್ಕಾಗಿ ಅವರು ಜೈಲಿಗೆ ಹೋದವರಲ್ಲ. ಆದರೆ ಈ ದಿವಸ ಇಲ್ಲಿಂದ ಇಂಥ ಜನರನ್ನು ಆರಿಸಿ ಕಳುಹಿಸಬೇಕೆಂಬ ಒಂದು ಅಧಿಕಾರ ಇಲ್ಲಿರತಕ್ಕ ರಾಜ್ಯಾಧಿಪತಿಗಳ ಕೈಲಿದೆ. ಅವರ ಇಚ್ಛಾನುಸಾರ ಅವರು ನಡೆದುಕೊಳ್ಳಬಹುದು. ಈ ವಿಚಾರದಲ್ಲಿ ನಾನಂತೂ ಲೇಶವೂ ವ್ಯಥೆ ಪಡುವುದಿಲ್ಲ. ಆದರೆ ವಾಟಾಳರಿಗೆ ಮಾತ್ರ ಈ ವಿಚಾರದಲ್ಲಿ ಬಹಳ ಅನುಕಂಪವಿದೆ. ಯಾರಿಗೆ ಸನ್ಮಾನ ಬೇಕೋ ಅವರೆಲ್ಲ ಹೋಗಬೇಕು. ನನಗಂತೂ ಅದು ಬೇಡ.

ಶ್ರೀ ಎಸ್. ವೈ. ಪಾಟೀಲ್.—ಇವರಿಗೆ ಸನ್ಮಾನ ಬೇಡವಾದರೆ ಅಲ್ಲಿ ಬಾಕಿಯವರಿಗೆ ಅದನ್ನು ಕೊಡುವುದು ಬೇಡ ಎಂದು ಹೇಳುವುದಕ್ಕಾಗುತ್ತದೆಯೇ ?

Issue of Licence for Sale of Kerosene Oil

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಕೆ. ಕೆ. ಮೂರ್ತಿ ಅವರ ವಿಚಾರದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೆ. ಅದರ ಬಗ್ಗೆ ತಾವು...

ಅಧ್ಯಕ್ಷರು.—ಈ ವಿಷಯ ಬಿಸಿನೆಸ್ ಅಡ್ವೈಸರಿ ಸಮಿತಿಯಲ್ಲಿ ಬಂದು ಇದನ್ನು ಡ್ರಾಪ್ ಮಾಡಬೇಕೆಂದು ಅಲ್ಲಿ ತೀರ್ಮಾನವಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಅದನ್ನು ಬಿಸಿನೆಸ್ ಅಡ್ವೈಸರಿ ಸಮಿತಿಯವರು ಚರ್ಚೆ ಮಾಡುವುದು ಬೇಡ ಎಂದು ಏಕೆ ಕೈ ಬಿಟ್ಟರು ? ಇದು ಒಂದು ಬಹಳ ಗುರುತರವಾದ ವಿಷಯ. ಲೈಸೆನ್ಸ್ ಇಲ್ಲದೆ ಅವರು ಬ್ಲಾಕ್ ಮಾರ್ಕೆಟ್ಟಿನಲ್ಲಿಸೀಮೆ ಎಣ್ಣೆ ಮಾರಾಟ ಮಾಡುತ್ತಿದ್ದರು...

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಿಟ್ಟು ನನ್ನ ಛೇಂಬರಿಗೆ ಬಂದು ಇದರ ಬಗ್ಗೆ ಚರ್ಚೆ ಮಾಡಬೇಕೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಕಾಲಹರಣ ಮಾಡುವುದು ಬೇಡ.

ಶ್ರೀ ಎಚ್. ಡಿ. ದೇವೇಗೌಡ.—ನಮಗೆ ಅಲ್ಲಿ ರೂಲ್ಸ್ ಆಫ್ ಬಿಜಿನೆಸ್ ಸೆಕ್ಷನ್ 146 ಮತ್ತು 59ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಬಂದಿದ್ದ ವಿಷಯಗಳ ಬಗ್ಗೆ ಕಾಲವನ್ನು ನಿಗದಿ ಮಾಡತಕ್ಕ ಸಂದರ್ಭ ಬಂದಿತ್ತು. ಆಗ ಒಂದು ಚರ್ಚೆ ನಡೆದು ಇದನ್ನು ಕೈ ಬಿಡಬೇಕೆಂದು ಅಲ್ಲಿ ಹೇಳಿದ್ದಾರೆ. ಆದರೆ ನನಗೆ ತಿಳಿದಿದ್ದ ಹಾಗೆ ಅಧ್ಯಕ್ಷರು ಮತ್ತೊಮ್ಮೆ ಅಧಿಕೃತ ವರದಿಗಾರರ ವರದಿ ವಿಷಯ ಮತ್ತು ಪತ್ರಿಕೆಗಳಲ್ಲಿ ಬಂದಿದ್ದ ವಿಷಯ ಮತ್ತು ಸರ್ಕಾರದವರು ಏನು ಹೇಳಿದ್ದಾರೆಂಬ ವಿಷಯಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಇಲ್ಲಿ

(ಶ್ರೀ ಹೆಚ್. ಡಿ. ದೇವೇಗೌಡ)

ರೂಲಿಂಗ್ ಕೊಡುತ್ತಾರೆ ಎಂಬುದು ನನ್ನ ಮನಸ್ಸಿನಲ್ಲಿತ್ತು. ನಾನು ಹಾಗೆ ತಿಳಿದುಕೊಂಡಿದ್ದೆ ಆದರೆ ಇಂಥ ವಿಷಯದಲ್ಲಿ ಆ ಬಿಜಿನೆಸ್ ಅಡ್ವೈಸರಿ ಸಮಿತಿಯವರಿಗೆ ಒಂದು ರಕ್ಷಣೆಯನ್ನು ಕೊಡುವುದಕ್ಕೆ ಕಾನೂನಲ್ಲಿ ಅವಕಾಶವಿರುವುದಿಲ್ಲ. ಇದರ ಬಗ್ಗೆ ಹೆಚ್ಚಿನ ವಿವರಗಳು ನನಗೆ ಸಂಬಂಧವೂ ಇಲ್ಲ. ಲೈಸೆನ್ಸ್ ಇಲ್ಲದೆ ರಾಮನಗರದಲ್ಲಿ ಮತ್ತು ಇನ್ನೂ ಕೆಲವು ಭಾಗಗಳಲ್ಲಿ ಸೀಮೆಎಣ್ಣೆ ಮಾರಾಟ ಮಾಡುತ್ತಿದ್ದರೆಂದು ಮಂತ್ರಿಗಳು ಮಾಡಿದ ಒಂದು ಹೇಳಿಕೆಯ ಮೇಲೆ ಶ್ರೀ ವಾಟಾಳರವರು ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಇಲ್ಲಿ ಸರ್ಕಾರದವರು ಮಾಡಿರತಕ್ಕ ತಪ್ಪು ಸ್ಪಷ್ಟವಾಗಿ ಕಾಣುತ್ತಿದೆ. ಬಿಜಿನೆಸ್ ಅಡ್ವೈಸರಿ ಕಮಿಟಿಯವರು ಇನ್ನು ಏಕೆ ಕೈ ಬಿಟ್ಟರೋ ತಿಳಿಯದು. ಅದಕ್ಕೂ ನನಗೂ ಸಂಬಂಧವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ಆ ಮೂರ್ತಿ ಎನ್ನತಕ್ಕವರು ರಾಮನಗರ, ಚನ್ನಪಟ್ಟಣ ಇತ್ಯಾದಿ ತಾಲ್ಲೂಕುಗಳಲ್ಲಿ ಲೈಸೆನ್ಸ್ ಇಲ್ಲದೆ ಎಣ್ಣೆ ಮಾರಾಟ ಮಾಡುತ್ತಿದ್ದ ವಿಷಯ ಚರ್ಚೆಯಾಗಬೇಕು. ಇದೊಂದನ್ನೇ ಅಲ್ಲದೆ ಅವರು ಕಾಫಿ ಪುಡಿ ಮಾರಾಟ, ದೊಡ್ಡ ಜಮೀನನ್ನು ತೆಗೆದು ಸೈಟುಗಳನ್ನು ಮಾಡತಕದ್ದು ಇನ್ನೂ ಅನೇಕ ಸಾಮಾನುಗಳನ್ನು ಬ್ಲಾಕ್ ಮಾರ್ಕೆಟಿನಲ್ಲಿ ಮಾರಾಟ ಮಾಡುವುದನ್ನು ಕುರಿತು ಇಲ್ಲಿ ಚರ್ಚೆ ಮಾಡಬೇಕಾದ್ದು ದೇಶದ ಹಿತದೃಷ್ಟಿಯಿಂದ ಅಗತ್ಯ. ಆ ವ್ಯಕ್ತಿ ಎಷ್ಟೇ ದೊಡ್ಡವನಿರಲಿ, ಇಲ್ಲಿ ಚರ್ಚೆ ಮಾಡುವುದಕ್ಕೆ ಒಂದು ಅವಕಾಶವನ್ನು ಅಧ್ಯಕ್ಷರು ದಯವಿಟ್ಟು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಬಿಜಿನೆಸ್ ಅಡ್ವೈಸರಿ ಸಮಿತಿ ಸದಸ್ಯನಾದ್ದರಿಂದ ಇದರ ಬಗೆಗೆ ಕ್ಲಾರಿಫೈ ಮಾಡಬೇಕಾದ್ದು ನನ್ನ ಕರ್ತವ್ಯ. ಇದರಲ್ಲಿ ಯಾವುದನ್ನೂ ಮುಚ್ಚುಮರೆ ಮಾಡಬೇಕೆಂಬ ಉದ್ದೇಶ ನನಗಿಲ್ಲ. ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು ಬೇಡ ಎಂದು ನಾನು ಹೇಳಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಇಲ್ಲಿಗೆ ಎರಡು ವಾರಗಳ ಹಿಂದೆಯೇ ತಮ್ಮ ಕಡೆಗೆ ಉತ್ತರ ಕರ್ಣಾಟಕದಲ್ಲಿ ಖಾಸಗೀ ಕಾಲೇಜಿನವರು ಅಲ್ಲಿನ ಅಧ್ಯಾಪಕರನ್ನು ಬಲಾತ್ಕಾರದಿಂದ ಹೊರಗೆ ಹಾಕುತ್ತಿದ್ದಾರೆ, ಅವರನ್ನು ಹೊಡೆಯುತ್ತಿದ್ದಾರೆಂಬ ವಿಚಾರದಲ್ಲಿ ನಾನು ಸರ್ಕಾರಕ್ಕೆ ಒಂದು ಕಾಲ್‌ಅಟೆನ್‌ಷನ್ ಮೋಷನ್ ಕಳುಹಿಸಿದ್ದೆ. ಆದರೆ ಇಲ್ಲಿಯವರೆಗೂ ವಿದ್ಯಾ ಮಂತ್ರಿಗಳಾಗಲಿ ಅಥವಾ ಸರ್ಕಾರದವರಾಗಲಿ ಯಾರೊಬ್ಬರೂ ಒಂದು ಚಕಾರ ಶಬ್ದವನ್ನೂ ಎತ್ತಿಲ್ಲ. ಇದರ ಬಗ್ಗೆ ಅಧ್ಯಕ್ಷರು ಬೇಗ ಉತ್ತರ ತರಿಸಿ ಕೊಡಬೇಕಾಗಿ ಪ್ರಾರ್ಥನೆ.

Sales at the Gundlupet Poultry Farm

ಶ್ರೀ ವಾಟಾಳ್ ನಾಗರಾಜ್.—ಸನ್ಮಾನ್ಯ ಅಧ್ಯಕ್ಷರೇ, ತಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಒಂದು ವಿಷಯ ಇದೆ. ಅದನ್ನು ನಾನೀಗ ತಮ್ಮ ಗಮನಕ್ಕೆ ತರಬಯಸುತ್ತೇನೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕೋಳಿ ಸಾಕಾಣಿಕೆ ಫಾರಂ ಇದೆಯಂತೆ ಅಲ್ಲಿ ಅವರು ಕೋಳಿ ಮೊಟ್ಟೆ ಒಂದಕ್ಕೆ 25 ಪೈಸೆಗಳಂತೆ ಮತ್ತು ಒಂದು ಕೋಳಿಯನ್ನು 6—7 ರೂಪಾಯಿಗೊಂದರಂತೆ ಮಾರಾಟ ಮಾಡುತ್ತಿದ್ದಾರೆ. ಈ ರೇಟ್ ಬಹಳ ದುಬಾರಿ ಆಯಿತು ಎಂದು ನನಗೆ ಅಲ್ಲಿಂದ ಒಬ್ಬರು ಪತ್ರ ಬರೆದಿದ್ದಾರೆ ಅದನ್ನು ತಮ್ಮ ಕಡೆಗೆ ಈಗ ಕಳುಹಿಸಿ ಕೊಡುತ್ತೇನೆ. ಅಲ್ಲದೆ ಅಲ್ಲಿ ಇವುಗಳು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಾಟವಾಗುತ್ತಿವೆ ಎಂದು ಹೇಳುತ್ತಿದ್ದಾರೆ. ಈ ಪತ್ರವನ್ನು ನಾನೀಗ ತಮ್ಮ ಕಡೆಗೆ ಸರ್ಕಾರಕ್ಕೆ ಕಳುಹಿಸಲು ಕಳುಹಿಸಿಕೊಡುತ್ತಿದ್ದೇನೆ. ಮಾತನಾಡುವುದಕ್ಕೆ ಅಸ್ಪದವಿಲ್ಲ. ನಾನೇ ಇದನ್ನು ಚರ್ಚೆಮಾಡಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ವಾಟಾಳರು ಭಾವಿಸಿರುವಷ್ಟು ನಾನು ಅಸಹಾಯಕಳೇನೂ ಅಲ್ಲ. ಅಲ್ಲದೆ ಅವರು ಪ್ರಪಂಚದಲ್ಲಿರತಕ್ಕವರನ್ನೆಲ್ಲಾ ಕಾಪಾಡುತ್ತೇವೆಂದು ಅವರು ಭಾವಿಸಿದ್ದಾರೆ. ಅದೂ ಕೂಡ ಸರಿಯಲ್ಲ. ಅದನ್ನು ಯಾರೂ ನಂಬಿಯೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ತಾವು ದಯಮಾಡಿ ಇನ್ನು ಮುಂದೆ ಅಲ್ಲಿ ಕೋಳಿ ಮೊಟ್ಟೆ ಮತ್ತು ಕೋಳಿಗಳನ್ನು ಕಡಿಮೆ ದರದಲ್ಲಿ ಮಾರಾಟಮಾಡುವಂತೆ ಒಂದು ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Discussion for Short Duration :

***re* : Transfers of primary School Teachers in the State.**

2–30 P.M.

ಅಧ್ಯಕ್ಷರು.—ಈಗ ಶ್ರೀ ದೇವೇಗೌಡರು ತಮ್ಮ ಅಲ್ಪ ಕಾಲಾವಧಿ ಚರ್ಚೆ ಪ್ರಾರಂಭ ಮಾಡಬಹುದು. ಅದಕ್ಕೆ 45 ನಿಮಿಷಗಳ ಅವಕಾಶ ಕೊಡಲಾಗಿದೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಸರಕಾರ ಪರಿಶೀಲಿಸಬೇಕಾದ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಬಹುಶಃ ಮೂರು ದಿವಸಗಳ ಹಿಂದೆ ಮೇಲ್ಮನೆಯಲ್ಲಿ ಈ ವಿಚಾರ ಪ್ರಸ್ತಾಪಿಸಲ್ಪಟ್ಟಿದೆ. ವಿದ್ಯಾಭ್ಯಾಸದ ಇಲಾಖೆಯಲ್ಲಿ ಉಪಾಧ್ಯಾಯರುಗಳನ್ನು ವರ್ಗ ಮಾಡುವ ವಿಚಾರದಲ್ಲಿ ಹಲವಾರು ತಂತಿಗಳು ಮತ್ತು ಮನವಿಗಳು ಕೂಡ ಸರಕಾರಕ್ಕೆ ಬಂದಿವೆ, ಅದರ ಕಾಪಿಗಳು ನನಗೆ ಬಂದಿವೆ. ನಾನು ಸಂಬಂಧಪಟ್ಟ ಇಲಾಖೆಯ ಮುಖ್ಯಾಧಿಕಾರಿಯೊಡನೆ ಒಂದು ಜಿಲ್ಲೆಯ ವಿಚಾರ ಪ್ರಸ್ತಾಪಮಾಡಿದೆ. ನಾರಮ್ಸ್ ಪ್ರಕಾರ ಮಾಡಿದ್ದೇವೆ, ಇನ್ನೇನೂ ಇಲ್ಲ ಎಂದು ಅವರು ಹೇಳಿದರು. ಕೇವಲ ಆರೋಪ ಹೊರಿಸಬೇಕು ಎಂದು ಚರ್ಚೆಮಾಡುವ ಆಸೆ ನನಗಿಲ್ಲ. ಆದರೆ ಹೊಸಮಂತ್ರಿಗಳು ಅಧಿಕಾರಕ್ಕೆ ಬಂದ ಹೊಸದರಲ್ಲೇ ಬೃಹತ್ ಸಂಖ್ಯೆಯಲ್ಲಿ ವರ್ಗ ಮಾಡಿರವುದು ಒಂದು ಸಂಶಯಕ್ಕೆ ಎಡೆ ಕೊಡುವುದು. ಮಂತ್ರಿಗಳು ಆಡಳಿತ ಶುದ್ಧೀಕರಣಕ್ಕಾಗಿ ಅಥವಾ ಇಲಾಖೆಯಲ್ಲಿ ದಕ್ಷತೆ ಹೆಚ್ಚಿಸಲು ಅಥವಾ ಕ್ವಾಲಿಟೇಟಿವ್ ಎಜುಕೇಷನ್ ಕೊಡುವ ದೃಷ್ಟಿಯಿಂದ.ಈ ಕಾರ್ಯ ಮಾಡಿರುವುದಾಗಿ ಹೇಳುವುದಾದರೂ ಕೂಡ ಅದರ ಬಗ್ಗೆ ವಿವರಣೆ ಕೇಳಬೇಕೆಂಬ ಇಚ್ಛೆಯಿದೆ. ಮೊದಲನೆಯದಾಗಿ ಇಂದು ಒಂದು ಪ್ರಶ್ನೆ ಕೇಳುತ್ತೇನೆ, ಆಧಾರವಿಲ್ಲದೆ ನಾನು ಹೇಳುತ್ತಿಲ್ಲ, ಆಧಾರ ಸಹಿತವಾಗಿ ಹೇಳುವುದು. ಉದಾಹರಣೆಗೆ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ರವರಿಗೆ ಒಂದು ಸೂಚನೆ ಕಳಿಸಿದ್ದೀರಿ, ಹತ್ತು ಉಪಾಧ್ಯಾಯರುಗಳನ್ನು ವರ್ಗಮಾಡಿ ಎಂದು ತಿಳಿಸಿದ್ದೀರಿ, ಉಪಾಧ್ಯಾಯರು ಅಂದರೆ ಅಲ್ಲಿರುವ ಲೆಕ್ಚರರುಗಳು ಅಥವಾ ಇನ್‌ಸ್ಟ್ರಕ್ಟರುಗಳು. ಆ ಹತ್ತು ಜನರೂ ಕೂಡ ಒಂದೇ ಕೋಮಿಗೆ ಸೇರಿದವರು, ಅವರನ್ನು ವರ್ಗ ಮಾಡಬೇಕೆಂದು ಆದೇಶವಿದೆ. ಇದಕ್ಕೆ ಕಾರಣವೇನು ? ಯಾವ ಆಧಾರದಮೇಲೆ ಮಾಡಲಾಗಿದೆ ಎಂದು ಪ್ರಶ್ನೆ ಮಾಡಬೇಕಾಗಿದೆ. ಬಹುಶಃ ಇದು ಮಂತ್ರಿಗಳ ಮಟ್ಟದಲ್ಲೋ ಅಥವಾ ಅವರಿಗೆ ಮೇಲ್ಪಟ್ಟವರ ಮಟ್ಟದಲ್ಲೋ ಅಂತೂ ಆಗಿದೆ, ವಿವರ ಗೊತ್ತಿಲ್ಲ. ಅಂತೂ ಸರಕಾರದಿಂದ ಇಂಥ ಸೂಚನೆ ಹೋಗಿದೆ. ಇಂದು ನೊಂದ ಅಧಿಕಾರಿಗಳು ಬಂದು ಈ ವಿಷಯದಲ್ಲಿ ರಕ್ಷಣೆ ಕೊಡಬೇಕೆಂದು ಹೇಳುವುದಾದರೆ, ಶಾಸನಸಭಾಸದಸ್ಯರ ಹತ್ತಿರ ಅಥವಾ ಬೇರೆಯವರ ಹತ್ತಿರ ಹೋಗಿ ಅವರನ್ನು ಉಳಿಸಬೇಕೆಂದು ಹೇಳುವುದಾದರೆ ಇದು ಸರಕಾರಕ್ಕೆ ಒಳ್ಳೆಯ ಹೆಸರು ತರುವುದಿಲ್ಲ. ಇದನ್ನು ನೊಂದ ಮನಸ್ಸಿನಿಂದ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ದಿವಸ ಸುಮಾರು 10 ಜನ ಉಪಾಧ್ಯಾಯರನ್ನು ವರ್ಗ ಮಾಡುವಂತೆ ತಿಳಿಸಲಾಗಿದೆ, ಹೆಸರು ಹೇಳುವುದಿಲ್ಲ, ಅದರ ಅವಶ್ಯಕತೆ ಇಲ್ಲ. ಅವರು ಬೆಂಗಳೂರಿನಲ್ಲಿ ಎಷ್ಟು ಕಾಲದಿಂದ ಇದ್ದಾರೆಂದರೆ 4 ವರ್ಷ, 9 ವರ್ಷ, 7 ವರ್ಷ, 6 ವರ್ಷ, 9 ವರ್ಷ, 5 ವರ್ಷ ಹೀಗೆ ಇಷ್ಟು ಕಾಲದಿಂದ ಇದ್ದಾರೆ, ಒಬ್ಬರು 23 ವರ್ಷಗಳಿಂದಿದ್ದಾರೆ. ಪೂರ್ಣವಾಗಿ ಒಂದು ಜಾತಿಗೆ ಸೇರಿರುವವರನ್ನೇ ವರ್ಗ ಮಾಡಿದ್ದಾರೆ. ಬೇಕಾದರೆ ಅವರ ಹೆಸರು ಮತ್ತು ಅವರು ಎಷ್ಟು ಕಾಲದಿಂದ ಒಂದು ಕಡೆ ಇದ್ದಾರೆ ಎಂಬುದನ್ನು ಹೇಳುತ್ತೇನೆ. ಆ ಅಧಿಕಾರಿಗಳಿಗೆ ನೋವಾಗಬಾರದು, ಅವರನ್ನು ವಿಕ್ಟಿಮೈಜ್ ಮಾಡಬಾರದು. ಒಂದು ಕೆಲಸ ಮಾಡುವಾಗ ಎಲ್ಲರ ಹಿತದೃಷ್ಟಿಯಿಂದ ಮಾಡಬೇಕು. ಒಂದು ಜಾತಿಯನ್ನು ತುಳಿಯುವ ದೃಷ್ಟಿಯಿಂದ ಮಾಡುವುದಾದರೆ ಸರಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಇತರ ಕೋಮಿನವರೂ ಆ ಇನ್‌ಸ್ಟಿಟ್ಯೂಷನ್ನಿನಲ್ಲಿದ್ದಾರೆ, 30–32 ವರ್ಷ ಸರ್ವಿಸ್ ಆಗಿರುವವರೂ ಇದ್ದಾರೆ. ಅವರನ್ನೆಲ್ಲಾ ಬಿಟ್ಟು 4 ರಿಂದ 8 ವರ್ಷಗಳವರೆಗೆ ಸರ್ವಿಸ್ ಆಗಿರುವವರನ್ನು ಅದರಲ್ಲೂ ಒಂದೇ ಕೋಮಿನವರನ್ನು ಹೊರಗೆ ಹಾಕಬೇಕೆಂದು ಸೂಚಿಸಿರುವುದರ ಹಿನ್ನೆಲೆಯೇನು ? ಒಂದು ಜನಾಂಗವನ್ನು ತುಳಿಯುವ ದೃಷ್ಟಿಯಿಂದ ಅಥವಾ ಆ ಜನಾಂಗದವರಿಗೆ ನೋವನ್ನುಂಟುಮಾಡುವ ದೃಷ್ಟಿಯಿಂದ ಅಥವಾ ಯಾವ ದೃಷ್ಟಿಕೋನದಿಂದ ಹೀಗೆ ಮಾಡಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕು. ನನ್ನನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುವುದಾದರೆ ಹೇಳುತ್ತೇನೆ, ಈ ಭಾವನೆ ಬರಲು ಅವಕಾಶವಿರಬಾರದು, ಇದು ಸಾಧುವಾದುದಲ್ಲ, ಒಳ್ಳೆಯ ಆಡಳಿತ ನಡೆಸಲು ಸರಿಹೋಗುವುದಿಲ್ಲ. ಇದರ ಬಗ್ಗೆ ಕಳಕಳಿಯಿಂದ ಪ್ರಾರ್ಥನೆಮಾಡುವುದು ಇಂಥ ಅವಕಾಶವಿರಬಾರದು, ಯಾವುದೇ ಇಲಾಖೆಯಲ್ಲಾಗಲಿ ಹೀಗಾಗಬಾರದು. ಇಂಥ ಸನ್ನಿವೇಶ ಉಂಟಾಗಬಾರದು.

(ಶ್ರೀ ಹೆಚ್. ಡಿ. ದೇವೇಗೌಡ)

ಇನ್ನು ಪ್ರಾಥಮಿಕವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಹಾಗೆ ಕೆಲವು ವಿಚಾರ ಹೇಳುತ್ತೇನೆ. ನಾನು ಮೊನ್ನೆ ಧಾರವಾಡ ಜಿಲ್ಲೆಯಲ್ಲಿ ಪ್ರವಾಸಮಾಡಿದೆ. ಅಲ್ಲಿ ಸುಮಾರು 800 ಉಪಾಧ್ಯಾಯರ ವರ್ಗವಾಗಿದೆ, ಬಿಜಾಪುರದಿಂದ ಸುಮಾರು 1500 ಜನರನ್ನು ವರ್ಗಾಯಿಸಿದ್ದಾರೆಂದು ಹೇಳಿದ್ದಾರೆ. ಸರಿಯಾದ ಅಂಕಿ ಇಲ್ಲ. ಬೆಳಗಾಂ, ಗುಲ್ಬರ್ಗ ಮತ್ತು ರಾಯಚೂರುಗಳಲ್ಲೂ ಹೀಗೆಯೇ ಆಗಿದೆ. ಈ ರೀತಿ ಬೃಹತ್ ಪ್ರಮಾಣದಲ್ಲಿ ವರ್ಗಮಾಡಿರುವುದನ್ನು ಬಹುಶಃ ಸರಕಾರ ಸಮರ್ಥನೆ ಮಾಡಬಹುದು. ವಿದ್ಯಾಭ್ಯಾಸದ ಇಲಾಖೆಯಲ್ಲಿ ಬಿಗಿ ಇರುವ ದೃಷ್ಟಿಯಿಂದ, ಕ್ವಾಲಿಟೇಟಿವ್ ಎಜುಕೇಷನ್ ಕೊಡುವ ದೃಷ್ಟಿಯಿಂದ, ಹೀಗೆ ಮಾಡಿದೆ ಎಂದು ಸಮರ್ಥನೆ ಮಾಡುವುದಾದರೂ ಇದರಿಂದೇನು ಕಷ್ಟವಾಗುವುದೆಂಬುದನ್ನು ಯೋಚನೆಮಾಡಬೇಕು. ಕಾನೂನಿರಬಹುದು. ಯಾವ ದೃಷ್ಟಿಯಿಂದ ಈ ರೀತಿ ಮಾಡಲಾಗಿದೆ? ಚುನಾವಣೆಯನಂತರ ಕೇವಲ ಎರಡುಮೂರು ತಿಂಗಳಲ್ಲಿ ಬೃಹತ್ ಪ್ರಮಾಣದಲ್ಲಿ ವರ್ಗ ಮಾಡಿರುವುದರ ಹಿನ್ನೆಲೆಯಾದರೂ ಏನು? ಇದನ್ನು ಸಮರ್ಥನೆ ಮಾಡುವಾಗ ಅಂಕಿಅಂಶ ಸಂಗ್ರಹಿಸಬೇಕಾಗುವುದು, ಇಲ್ಲದಿದ್ದರೆ ಕಷ್ಟವಾಗುವುದು. ಆದುದರಿಂದ 14 ನೆಯ ತಾರೀಖಿನ ದಿನ ಪುನಃ ಈ ಸಭೆ ಸೇರುವುದು, ಆ ದಿವಸ ಎಲ್ಲವನ್ನೂ ಪರಿಶೀಲಿಸಿ ವಿವರಣೆ ಕೊಡಬಹುದು. ವರ್ಗ ಮಾಡಲು ಒಂದು ನೀತಿಯಿರಬೇಕು. ಯಾವ ಪಕ್ಷವೇ ಆಗಲಿ, ರಾಜಕೀಯ ದೃಷ್ಟಿಯಿಂದ ಮಾಡುವುದು ಸರಿಯಲ್ಲ, ಈ ಸಭೆಯಲ್ಲಿ 216 ಸದಸ್ಯರಿದ್ದಾರೆ. ಅವರೆಲ್ಲರೂ ಕೂಡ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಒಂದಲ್ಲ ಒಂದು ರೀತಿಯಲ್ಲಿ ಸರಕಾರದ ನೆರವನ್ನು ಪಡೆದಿದ್ದಾರೆ, ಅವರು ತಮ್ಮ ಆತ್ಮ ಶೋಧನೆ ಮಾಡಿಕೊಂಡು ಪ್ರಾಮಾಣಿಕವಾಗಿ ನೋಡಿದರೆ ಇದು ಸರಿಯೆಂದು ಗೊತ್ತಾಗುವುದು. ಈ ರೀತಿ ವರ್ಗ ಮಾಡುವುದು ಸರಿಯಲ್ಲ. ಅಧಿಕಾರ ನಿಮ್ಮ ಕೈಲಿರಬಹುದು, ಆದರೆ ಆ ಅನುಕೂಲ ಪಡೆದು ಇಂಥ ಮಾಸ್ ಟ್ರಾನ್ಸ್‌ಫರ್ಸ್ ಮಾಡಬಾರದು, ಹೀಗೆ ಸಾವಿರಗಟ್ಟಲೆ ಉಪಾಧ್ಯಾಯರನ್ನು ವರ್ಗಮಾಡುವುದು ಸರಿಯಲ್ಲ.

ಇನ್ನೊಂದು ಕೆಲವು ಮೇಜರ್ ಕಮ್ಯೂನಿಟಿಗಳಿಗೆ ಸೇರಿದವರನ್ನೇ ವರ್ಗಮಾಡಿದ್ದಾರೆ ಎಂಬ ಸಂದೇಹವಿದೆ. ಎಲ್ಲಾ ಮಾಹಿತಿಯನ್ನೂ ತರಿಸಿಕೊಂಡು ಮತ್ತೆ 14ನೆಯ ತಾರೀಖು ಈ ಸಭೆ ಸೇರಿದಾಗ ಉತ್ತರ ಕೊಡಬೇಕು. ಮಂತ್ರಿಗಳ ಗಮನಕ್ಕೆ ಬಾರದ ಎಷ್ಟೋ ವರ್ಗ ಆಗಿರಬಹುದು ಡಿ. ಡಿ. ಪಿ. ಐ. ಗಳ ಲೆವಲ್‌ನಲ್ಲಿ, ಡೈರೆಕ್ಟರ ಲೆವಲ್‌ನಲ್ಲಿ ಕೆಲವು ವರ್ಗಗಳು ಆಗುವುದುಂಟು. ಅದರ ಬಗ್ಗೆ ಪೂರ್ಣವಾಗಿ ವಿವರ ಪಡೆಯಿರಿ. ಒಂದು ನಿಬಂಧನೆ ಮಾಡಿ 5 ಅಥವ 10 ವರ್ಷಗಳಿಗೆ ಮೇಲ್ಪಟ್ಟು ಒಂದು ಕಡೆ ಇರುವವರನ್ನು ತಾಲ್ಲೂಕಿನಿಂದ ತಾಲ್ಲೂಕಿಗೆ ವರ್ಗ ಮಾಡಬೇಕು ಎಂಬ ನಿರ್ದೇಶವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟು ಅದರಂತೆ ಮಾಡಿದರೆ ರಾಜಕೀಯ ಒತ್ತಡದಿಂದ ವರ್ಗವಾಗಿದೆ ಎಂಬ ಆರೋಪ ಬರುವುದಿಲ್ಲ. ಅದಕ್ಕೆ ಅವಕಾಶವಿರುವುದಿಲ್ಲ. ಪಕ್ಷದ ದೃಷ್ಟಿಯಿಂದ ಏನೂ ಮಾಡದೆ ಸರಕಾರ ಒಂದು ಖಚಿತವಾದ ತೀರ್ಮಾನಮಾಡಿ ಅದರಂತೆ ನಡೆದುಕೊಳ್ಳಬೇಕು. ಕೇವಲ ರಾಜಕೀಯ ಪ್ರಭಾವದಿಂದ ಅಥವ ಒತ್ತಡದಿಂದ ವರ್ಗಮಾಡುವುದು ಸರಿಯಲ್ಲ.

ಶ್ರೀ ಕೆ. ಪ್ರಭಾಕರ್.—ಹಿಂದೆ ಈ ರೀತಿ ಟ್ರಾನ್ಸ್‌ಫರ್ಸ್ ನಡೆಯುತ್ತಾ ಇರಲಿಲ್ಲವೇ?

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಹಿಂದೆ ಮಂತ್ರಿಗಳಾಗಿದ್ದಿರಿ. ರಾಜ್ಯದ ಇತಿಹಾಸದಲ್ಲಿಯೇ ಈ ರೀತಿ ಒಂದೇಬಾರಿ 1,500 ಜನರನ್ನು ವರ್ಗಮಾಡಿರುವುದನ್ನು ತೋರಿಸಿ ಕೊಡುವುದಾದರೆ ಸರ್ಕಾರದಲ್ಲಿ ಈಗ ಮಾಡಿರತಕ್ಕಂಥ ಆಪಾದನೆಗಳನ್ನು ನಾನು ವಾಪಸ್ ತೆಗೆದುಕೊಂಡು ಕ್ಷಮೆ ಕೇಳುತ್ತೇನೆ. ಇಲ್ಲದೇ ಹೋದರೆ ನಿಮ್ಮ ಪಕ್ಷಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ದಯವಿಟ್ಟು ಪ್ರಭಾಕರ್‌ರವರು ಆ ರೀತಿ ಹೇಳಬಾರದು. ಟ್ರಾನ್ಸ್‌ಫರ್ಸ್‌ನ್ನು ನೀವು ಮಾಡಿದ್ದೀರಿ ಎಂದು ಹೇಳುವುದಿಲ್ಲ. ತಮ್ಮ ಗಮನಕ್ಕೂ ಬರದೆ ಡೈರೆಕ್ಟರ್‌ರವರ ಗಮನಕ್ಕೂ ಬರದೆ ನಡೆದು ಹೋಗಿದೆ. ಇದರ ಬಗ್ಗೆ ಒಂದು ಸರಿಯಾದ ನಿರ್ಣಯ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇದರ ಬಗ್ಗೆ ಒಂದ ಕ್ರೈಟೇರಿಯಾ ಹಾಕಿ. ಒಂದು ಪಾಠಶಾಲೆಯಲ್ಲಿ ಜೀರೋ ರಿಸಲ್ಟ್ ಬಂದರೆ, ಎರಡು ಪರ್ಸೆಂಟೋ, ಐದು ಪರ್ಸೆಂಟೋ ಈ ಪ್ರಕಾರ ಕೆಳಮಟ್ಟದಲ್ಲಿ ಫಲಿತಾಂಶ ಬಂದರೆ, ಹಣಅಪವ್ಯಯ ಮಾಡಿದ್ದಾರೆ, ಪೋಲೀಸ್ ಕ್ರಿಮಿನಲ್ ಕೇಸ್‌ಗೆ ಸಿಕ್ಕಿದ್ದರೆ, ಅಂಥವರನ್ನು ಟ್ರಾನ್ಸ್‌ಫರ್ ಮಾಡಬೇಕು ಎನ್ನುವ ಒಂದು ನಿಯಮ ಹಾಕಿ. ಅದು ಬಿಟ್ಟು ಕೆಲವು ಮುಖಂಡರುಗಳ ಪ್ರಭಾವಕ್ಕೆ ಒಳಗಾಗಿ ಇಂತಹ ಒಂದು ಟ್ರಾನ್ಸ್‌ಫರ್ ಮಾಡುವುದಾದರೆ ಅದು ಸರ್ಕಾರಕ್ಕೆ ಒಳ್ಳೆಯ ಅಭಿಪ್ರಾಯವಾಗುವುದಿಲ್ಲ. ನಾನು ಪ್ರವಾಸ ಮಾಡುವಂಥ ಕಾಲದಲ್ಲಿ ಅಲ್ಲಿಯ ಜನರೇ

ಹೇಳಿದರು. ಒಂದು ರಾಜಕೀಯ ದ್ವೇಷದಿಂದ ಇವರನ್ನು ತುಳಿಯಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ಈ ರೀತಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅವರು ಇದರ ಬಗ್ಗೆ ಒಂದು ಮನವಿಯನ್ನು ಕೊಟ್ಟಿದ್ದಾರೆ. ಅದನ್ನು ಕಳುಹಿಸಿಕೊಟ್ಟಿದ್ದೇನೆ. ಈ ರೀತಿ ಮಾಡುವುದು ಸರಿಯಾದುದಲ್ಲ ಎಂದು ಹೇಳುತ್ತೇನೆ. ಮೇಲ್ಮನೆಯಲ್ಲಿ ತಾವು ಉತ್ತರ ಕೊಟ್ಟಂಥ ಕಾಲದಲ್ಲಿ ಇಡೀ ಇಲಾಖೆಯಲ್ಲಿ ಇದರ ಬಗ್ಗೆ ಒಂದು ಸರಿಯಾದ ನಿರ್ಣಯ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಹೇಳಿದ್ದೀರಿ. ಆ ರೀತಿ ಸರಿಯಾದ ನಿಯಮಾವಳಿಗಳನ್ನು ಮಾಡುವುದು ಒಳ್ಳೆಯದು ಎಂದು ನಾನೂ ಕೂಡ ಹೇಳುತ್ತೇನೆ. ಇದರ ಬಗ್ಗೆ ಈಗ ಉತ್ತರ ಕೊಡುವುದಕ್ಕೆ ಸಾಕಷ್ಟು ವಿವರಗಳು ತಮ್ಮ ಹತ್ತಿರ ಇಲ್ಲದೇ ಹೋದರೆ ತಮ್ಮ ಇಲಾಖಾ ಅಧಿಕಾರಿಯಿಂದ ಡಿ.ಡಿ.ಪಿ.ಐ. ಅವರಿಂದ ತರಿಸಿ. 3 ತಿಂಗಳಿನಿಂದಲೂ ಎಷ್ಟು ಟ್ರಾನ್ಸ್‌ಫರ್ ಮಾಡಿದ್ದಾರೆ ಅದರ ಸಂಪೂರ್ಣ ವಿವರವನ್ನು ತರಿಸಿ. ಅದುವರೆಗೆ ಈಗ ಆಗಿರತಕ್ಕಂಥ ಟ್ರಾನ್ಸ್‌ಫರ್ಸ್‌ನ್ನು ತಡೆ ಹಿಡಿಯಬೇಕೆಂದು ಹೇಳುತ್ತೇನೆ. 20 ದಿವಸದಲ್ಲಿ, 15 ದಿವಸದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗವಾಗಿ ಬಂದಿದ್ದವರನ್ನೂ ಕೂಡ ಟ್ರಾನ್ಸ್‌ಫರ್ ಮಾಡಿದ್ದಾರೆ. 30 ವರ್ಷದಿಂದ ಇರತಕ್ಕಂಥಾವರನ್ನು ಅಲ್ಲೇ ಇಟ್ಟಿದ್ದಾರೆ. ಈ ಒಂದು ದೃಷ್ಟಿಕೋನದಿಂದ ನಾನು ಹೇಳುವುದು ಏನೆಂದರೆ ಈಗ ಆಗಿರತಕ್ಕಂಥ ಟ್ರಾನ್ಸ್‌ಫರ್‌ನ್ನು ತಡೆಹಿಡಿಯಬೇಕೆಂದು ಸರ್ಕಾರ ಆದೇಶ ಕೊಡಬೇಕು ಎಂದು ಹೇಳುತ್ತೇನೆ. ತಾವು ಈಗ ಆದೇಶ ಕೊಡಿ. ಆ ಪ್ರಕಾರ ನಡೆಯದೇ ಹೋದರೆ ನಿಮ್ಮ ಅಧಿಕಾರ ವರ್ಗದವರೇ ಇದಕ್ಕೆ ಅಡಚಣೆಯಾಗಿದ್ದಾರೆಂದು ಹೇಳಬೇಕಾಗುತ್ತದೆ. ಧಾರವಾಡದಲ್ಲಿ 800 ಜನ, ಬಿಜಾಪುರದಲ್ಲಿ 700 ಜನ, ಬೆಳಗಾಂನಲ್ಲಿ 700 ಜನ ಟ್ರಾನ್ಸ್‌ಫರ್ ಆಗಿದೆ. ನೀವು ಈ ರೀತಿ ಟ್ರಾನ್ಸ್‌ಫರ್ ಮಾಡಿಬಿಟ್ಟರೆ ಅವರಿಗೆಲ್ಲಾ ವಾಸದ ಮನೆ ಎಲ್ಲಿದೆ? ಎಲ್ಲಿ ಹೋಗಿ ಅವರು ನೆಲೆಸಬೇಕು? ಅವರ ಟಿ.ಎ., ಡಿ.ಎ. ಎಷ್ಟಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಅವರಿಗೆ ಅಲ್ಲಿ ವಾಸದ ಮನೆ ಸಿಕ್ಕದೇ ಹೋದರೆ, ಅವರಿಗೆ ಟಿ.ಎ., ಡಿ.ಎ. ಏನು ಇವೆ ಅದು ಸಿಕ್ಕದೇ ಹೋದರೆ ಈ ಟ್ರಾನ್ಸ್‌ಫರನ್ನು ರಾಜಕೀಯ ದೃಷ್ಟಿಯಿಂದ ಮಾಡಿದ್ದಾರೆ ಎಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ಪೂರ್ಣ ವಿವರಣೆಯನ್ನು ಈವೊತ್ತು ಆಗದಿದ್ದರೂ ಕೂಡ ಸಭೆ ಮುಂದೆ ಸೇರತಕ್ಕಂಥ ಕಾಲದಲ್ಲಾದರೂ ಕೂಡ ಒದಗಿಸಬೇಕು. ಯಾವುದೇ ಓಟಿಗಾಗಿ ತಾವು ಮಣಿಯಬಾರದು. ಮತ್ತು ಈ ಇಲಾಖೆಯನ್ನು ತಿರಸ್ಕರಣೆ ಮಾಡುವುದಕ್ಕೆ ಅವಕಾಶ ಕೊಡಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಅಧ್ಯಕ್ಷರೇ, ಹಿಂದೆ ಶಿಕ್ಷಣ ಇಲಾಖೆಯ ಬಗ್ಗೆ ನಾನು ಮಾತನಾಡುವಾಗಲೂ ಈ ವಿಷಯ ಪ್ರಸ್ತಾಪ ಮಾಡಿದ್ದೆ. ಕಳೆದ 20—25 ವರ್ಷಗಳಿಂದಲೂ ಪರಂಪರೆಯಾಗಿ ಇಡೀ ರಾಜ್ಯದಲ್ಲಿ ಈ ಶಿಕ್ಷಕರ ವರ್ಗ ಏನು ಇದೆ ಆ ಶಿಕ್ಷಕರ ವರ್ಗವನ್ನು ಬಹಳಷ್ಟು ನಿಕೃಷ್ಟವಾಗಿ ಸರ್ಕಾರ ಕಾಣುತ್ತಾ ಇದೆ ಎಂದು ಹೇಳಿದ್ದೇನೆ ಪ್ರತಿಯೊಂದಕ್ಕೂ ಕೂಡ ಅವರ ತಲೆಮೇಲೆ ಹಾಕುವುದನ್ನು ಕಲಿತಿದ್ದಾರೆ. ಅವರೂ ಒಬ್ಬರು ಮನುಷ್ಯರು ಎನ್ನುವ ಕಲ್ಪನೆ ಇಲ್ಲ. ಈವೊತ್ತು ಪ್ರಾಥಮಿಕ ಶಾಲಾ ಅಧ್ಯಾಪಕರ ಸ್ಥಿತಿಗತಿಗಳನ್ನು ತೆಗೆದುಕೊಳ್ಳೋಣ. ಅವರಿಗೆ ಬೇಕಾದಷ್ಟು ತೊಂದರೆಗಳು ಇವೆ. ಅವರಿಗೆ ವಾಸಕ್ಕೆ ಮನೆ ಇಲ್ಲ. ಹಳ್ಳಿಗಳಲ್ಲಿರತಕ್ಕಂಥ ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ಕಡೆಗಾಣಿಸಿದ್ದಾರೆ. ಅವರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡುವುದು ಯಾವ ಸಂದರ್ಭದಲ್ಲಿ ಎಂದರೆ ಮಳೆಗಾಲದ ಸಮಯದಲ್ಲೋ ಅಥವಾ ಆ ಉಪಾಧ್ಯಾಯರಿಗೆ ಅನಾನುಕೂಲವಾದ ಸಮಯದಲ್ಲೋ ವರ್ಗ ಮಾಡಿಬಿಡುತ್ತಾರೆ. ಈ ಒಂದು ಪದ್ಧತಿ ಈ ಇಲಾಖೆಯಲ್ಲಿ ಇದೆ. ಅದನ್ನು ನಾವು ತೀವ್ರವಾಗಿ ಖಂಡನೆ ಮಾಡಬೇಕಾಗಿದೆ. ಈವೊತ್ತು ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಈ ಸರ್ಕಾರ ಬಂದಮೇಲೆ ಅನೇಕ ಕಡೆ ಅನೇಕ ರೀತಿಯಲ್ಲಿ ವರ್ಗಾವರ್ಗಿ ಮಾಡಿರುವ ಆಪಾದನೆ ಇದೆ ಎಂದು ಹೇಳಿದ್ದಾರೆ. ಆ ರೀತಿ ಇವರನ್ನು ವರ್ಗ ಮಾಡುವಾಗ ಪ್ರಬಲವಾದ ಕಾರಣಗಳು ಇರಬೇಕು. ಇದರಲ್ಲಿ ಏನು ಸತ್ಯ ಇದೆ ಎನ್ನುವುದನ್ನು ತಿಳಿಯಬೇಕು. ಚುನಾವಣೆಯಲ್ಲಿ ಯಾರೋ ವಿಶೇಷವಾಗಿ ಭಾಗವಹಿಸಿದ್ದಾರೆ ಎಂದು ಮೇಲಾಧಿಕಾರಿಗಳು ಹೇಳಿದ ಮಾತ್ರಕ್ಕೆ ಅದನ್ನೇ ತಲೆಗೆ ಹಚ್ಚಿಕೊಂಡು ಆ ಉಪಾಧ್ಯಾಯರುಗಳನ್ನು ಬಲಿ ತೆಗೆದುಕೊಳ್ಳುವುದು ನ್ಯಾಯವೇ ? ಅಥವಾ ಬೇರೆ ದೃಷ್ಟಿಕೋಣಗಳಿಂದ ಆ ಪಾಪದ ಭಾರವನ್ನು ಈ ಉಪಾಧ್ಯಾಯರ ತಲೆಮೇಲೆ ಹೊರಿಸಿ ಇವರಿಗೆ ಕಿರುಕುಳ ಕೊಡುವುದು ಸರಿಯೇ ? ಇದರ ಬಗ್ಗೆ ತಾವು ರಾಜ್ಯಾದ್ಯಂತ ತನಿಖೆ ಮಾಡಿರಿ. ಯಾರನ್ನು ಬೇಕಾದರೂ ಎಲ್ಲಿ ಬೇಕಾದರೂ ಕೇಳಿರಿ. ಬೇಕಾದರೆ ಹಳ್ಳಿ ಹಳ್ಳಿಯಲ್ಲಿ ಹೋಗಿ ಕೇಳಿರಿ. ಎಲ್ಲಾ ಕಡೆಗಳಲ್ಲೂ ಈ ಒಂದು ದೊಡ್ಡ ದುರಂತ ನಡೆದಿದೆ ಎಂದು ಹೇಳುತ್ತೇನೆ. 3 ತಿಂಗಳಿನಲ್ಲಿ 8 ತಿಂಗಳಿನಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗವಾಗಿ ಬಂದಿದ್ದವರನ್ನೂ ಕೂಡ ಟ್ರಾನ್ಸ್-

(ಶ್ರೀ ಕೋಣಂದೂರು ಲಿಂಗಪ್ಪ)

ಫರ್ ಮಾಡಿದ್ದಾರೆ. ಶಿವಮೊಗ್ಗಾ ಡಿಸ್ಟ್ರಿಕ್ಟ್ ಚನ್ನಗಿರಿ ತಾಲ್ಲೂಕಿನಲ್ಲಿ 11 ವರ್ಷದಿಂದಲೂ ಒಬ್ಬರು ಉಪಾಧ್ಯಾಯರು ಅಲ್ಲೇ ಇದ್ದಾರೆ. ಅವರು ಯಾರು ಎಂದರೆ ರಾಜಗುರು. ರಾಜಗುರು ಎಂದರೆ ರಾಜಕೀಯದ ಗುರ ಎಂದರ್ಥ. ಅವರನ್ನು ತೆಗೆಯಲಿಕ್ಕಾಗಲಿಲ್ಲ. ಈ ರಾಜಕೀಯ ಗುರುವನ್ನು ಬಹಳ ವರ್ಷದಿಂದಲೂ ಅಲ್ಲೇ ಇಟ್ಟಿದ್ದಾರೆ. ಇವರಿಗೆ ಕರುಣೆ ಬಂದವರನ್ನು ಅಲ್ಲೇ ಇಡುತ್ತಾರೆ. ಕಾಂಗ್ರೆಸ್‌ನವರು ಚುನಾವಣೆಯಲ್ಲಿ ಗೆದ್ದು ಬಂದಿದ್ದಾರಲ್ಲಾ ಅವರು ಉಪಾಧ್ಯಾಯರನ್ನು ಉಪಯೋಗಿಸಿಕೊಳ್ಳಲಿಲ್ಲವೆ? ಅವರ ಪರವಾಗಿ ಯಾವ ಉಪಾಧ್ಯಾಯರೂ ಕೆಲಸ ಮಾಡಲಿಲ್ಲವೆ? ಅವರನ್ನು ಏತಕ್ಕೆ ಟ್ರಾನ್ಸ್‌ಫರ್ ಮಾಡಲಿಲ್ಲ? ಹೇಳಿ. ಚುನಾವಣೆ ಸಂದರ್ಭದಲ್ಲಿ ಎಲ್ಲ ಉಪಾಧ್ಯಾಯರೂ ಕೂಡ ಅವರವರಿಗೆ ಯಾರು ಬೇಕೋ ಅಂಥಾ ಕಡೆ ಹೋಗಿ ಸಹಾಯ ಮಾಡುತ್ತಾರೆಂದು ಶ್ರೀಮಾನ್ ದೇವೇಗೌಡರು ಹೇಳಿದರು. ನಾವು ಸೋಷಿಯಲಿಸ್ಟ್ ಪಕ್ಷದವರು, ಡಾಕ್ಟರ್ ಲೋಹಿಯಾ ಪಕ್ಷದವರು, ನಾವು ಏನು ಹೇಳುತ್ತೇವೆ ಎಂದರೆ ಸೈನ್ಯ ಒಂದನ್ನು ಬಿಟ್ಟು ಯಾರು ಬೇಕಾದರೂ ಚುನಾವಣೆಯಲ್ಲಿ ಪಾತ್ರ ವಹಿಸಬಹುದು ಎಂದು ಹೇಳುತ್ತೇವೆ. ಇದನ್ನೇ ಒಂದು ದೊಡ್ಡ ಗುಡ್ಡದಂತೆ ಬೆಳೆಸಿದ್ದೀರಿ.

ಶ್ರೀ ಎ. ಆರ್. ಬದರಿನಾರಾಯಣ್.—ಅವರು ಸರ್ಕಾರಿ ನೌಕರರು ಉಂಟೋ ಅಲ್ಲವೋ?

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಸರ್ಕಾರಿ ನೌಕರರು ಅನ್ನುವುದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎ. ಆರ್ ಬದರಿನಾರಾಯಣ್.—ಹಾಗಾದರೆ ಇತರೇ ಸರ್ಕಾರಿ ನೌಕರರಿಗೆ ಅನ್ವಯಿಸುವ ಹಾಗೆ ಇವರಿಗೂ ನಿಯಮ ಅನ್ವಯಿಸುತ್ತದೆ. ಈಗ ನೀವು ಹೇಳುತ್ತಾ ಇರುವುದನ್ನು ನೋಡಿದರೆ ರಾಜಕೀಯಕ್ಕೋಸ್ಕರ ಇವರನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ ಎಂದು ಊಹೆ ಮಾಡಿಕೊಂಡು ಹೇಳಿದ್ದೀರಿ ಎಂದು ನನಗೆ ಕಾಣುತ್ತಾ ಇದೆ. On a matter of principle it has been done.

ಶ್ರೀ ಕೋಣಂದೂರು ಲಿಂಗಪ್ಪ.—3 ವರ್ಷದಿಂದ ಒಂದೇ ಕಡೆ ಇರಬಾರದು ಎನ್ನುವ ದೃಷ್ಟಿಯಿಂದ ಈ ಟ್ರಾನ್ಸ್‌ಫರ್ ಮಾಡಿದ್ದೇವೆ ಅಂತ ಹೇಳಿದರೆ ಅದನ್ನು ನಾವು ಒಪ್ಪುತ್ತೇವೆ.

ಯಾರಾದರೂ ಒಬ್ಬ ಕೆಟ್ಟ ಉಪಾಧ್ಯಾಯರಿದ್ದರೆ, ಸ್ಕೂಲಿಗೆ ತಿಂಗಳಿಗೆ ಒಂದು ಸಲ ಹೋಗಿ ರುಜು ಹಾಕುವವರಿದ್ದರೆ ಅವರ ಬಗ್ಗೆ ಕ್ರಮ ತೆಗೆದುಕೊಂಡರೆ ಅವರ ಪರವಾಗಿ ನಾವು ವಾದ ಮಾಡುವುದಿಲ್ಲ. ಇಂಥವರನ್ನು ನಾವು ಹಿಡಿದುಕೊಟ್ಟರೂ ಏನೂ ಮಾಡಿಲ್ಲ, ಮಾಡುವುದಿಲ್ಲ. ಅಂಥವರನ್ನು ನಮ್ಮ ತಾಲ್ಲೂಕಿನಲ್ಲಿ ಒಬ್ಬರು ಹಿಡಿದು ಕೊಟ್ಟರು, ಏನೂ ಮಾಡಲಿಲ್ಲ. ಸರಿಯಾಗಿ ಕೆಲಸ ಮಾಡದೆ ಇರುವವರನ್ನು, ಬೇಕಾದರೆ 500 ಮೈಲಿ ಆಚೆಗೆ ಹಾಕಿ, ನಾವು ಬೇಡವೆನ್ನುವುದಿಲ್ಲ. ಚಿಕ್ಕ ವಯಸ್ಸಿನ, ಮುಗ್ಧ ಬಾಲಕ ಬಾಲಕಿಯರ ವಿದ್ಯಾಭ್ಯಾಸಕ್ಕೆ ಅಡ್ಡಿಯಾಗತಕ್ಕ ಉಪಾಧ್ಯಾಯರ ಬಗ್ಗೆ ಕರುಣೆ ತೋರಿಸಬೇಕು ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಯಾರು ಪ್ರಾಮಾಣಿಕರಾಗಿರುತ್ತಾರೆ, ಅಂಥವರ ಬಗ್ಗೆ ಅನಾವಶ್ಯಕವಾದ ಕಿರುಕುಳ ಕೊಡಬಾರದು.

ಶ್ರೀ ಎ. ಆರ್ ಬದರೀನಾರಾಯಣ್.—ಉಪಾಧ್ಯಾಯರು ಸರ್ಕಾರಿ ನೌಕರರು ಎಂದು ಭಾವಿಸಿದ್ದೀರಾ ಅಥವಾ ಸರ್ಕಾರಿ ರೂಲ್ಸ್ ಅವರಿಗೆ ಅನ್ವಯವಾಗಬೇಕು ಎನ್ನುವ ವಿಚಾರದಲ್ಲಿ ತಮ್ಮ ಅಭಿಪ್ರಾಯವೇನು?

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಸರ್ಕಾರಿ ನೌಕರರು ಎನ್ನುವುದು ಸ್ಪಷ್ಟವಿದೆ. ಹಾಗೆಯೇ ಬೇರೆ ಇಲಾಖೆಯಲ್ಲಿ ನಾನಾ ರೀತಿಯಲ್ಲಿ ಚುನಾವಣೆಯ ಸಮಯದಲ್ಲಿ ಕೆಲಸ ಮಾಡಿದವರು ಇರಬಹುದು. ಅವರಿಗೆಲ್ಲ ಏನಾಗಿದೆ? ಪ್ರಾಥಮಿಕ ಶಾಲೆಗಳಲ್ಲಿರುವ ಉಪಾಧ್ಯಾಯರ ಬಗ್ಗೆ ಮಾತ್ರ ನಿಮ್ಮ ಕಣ್ಣು ಏಕೆ ಎಂದು ಕೇಳುತ್ತಿದ್ದೇನೆ. ಸರ್ಕಾರದ ನಾನಾ ಇಲಾಖೆಗಳಲ್ಲಿರುವ ಅಧಿಕಾರಿಗಳು ತಮ್ಮ ಕೈಲಾದ ಕೆಲಸವನ್ನು ತಮಗೆ ಸರಿ ಕಂಡಂತೆ ಮಾಡಿರಬಹುದು.

ಶ್ರೀ ಎ. ಆರ್. ಬದರಿನಾರಾಯಣ್.—ಅದೇ ಗ್ರಾಮದಲ್ಲಿ ವೆಸ್ಟೆಡ್ ಇಂಟರೆಸ್ಟ್ ಇಟ್ಟುಕೊಂಡು ಲೇವಾದೇವಿ ಮಾಡುತ್ತಿರಬಹುದು, ಗದ್ದೆ ಮಾಡಿಕೊಂಡಿರಬಹುದು, ಒಂದು ಫ್ಲೋರ್ ಮಿಲ್ ಹಾಕಿಕೊಂಡಿರಬಹುದು. ಹಳ್ಳಿಗಳಿಗೆ ಹೋದಾಗ ಹೀಗೆಲ್ಲ ದೂರುಗಳು ಬಂದಿವೆ. ಅನೇಕ ಕಡೆ ಶಾಲೆಗಳನ್ನು ತೆರೆಯುವುದಿಲ್ಲ. ಅಂಥವರಿಗೆ ಏನು ಮಾಡುತ್ತೀರಿ?

ಶ್ರೀ ಕೋಣಂದೂರು ಲಿಂಗಪ್ಪ.—ಅಂಥವರ ಬಗ್ಗೆ ನಾವು ಏನೂ ಹೇಳುವುದಿಲ್ಲ, ಅವರನ್ನು ಅಲ್ಲಿಯೇ ಇಡಿ ಎಂದು ಹೇಳುವುದಿಲ್ಲ. ಫ್ಲೋರ್ ಮಿಲ್ ಹಾಕಿಕೊಂಡಿದ್ದರೆ ಅವನಿಗೆ ಸಣ್ಣ ಕೈಗಾರಿಕೆ ಸಹಾಯ ಕೊಡಿಸಿ ರೈಸ್ ಮಿಲ್ ಹಾಕಿಕೊಡಿ ಎಂದು ಹೇಳುವುದಕ್ಕೆ ನಾವು ತಯಾರಾಗಿಲ್ಲ, ಜಮೀನು ಮಾಡುತ್ತಿರುವವರಿಗೆ ಜಮೀನು ಕೊಡಬೇಕು ಎಂದು ಹೇಳುವುದಕ್ಕೆ ತಯಾರಾಗಿಲ್ಲ. ಒಂದು ಕೆಲಸ ಮಾಡುವವರು ಅದೇ ಕೆಲಸ ಮಾಡಬೇಕು. ಅದಿಲ್ಲವೆ ಬೇರೆ ಮಾಡಿದರೆ ಅವರನ್ನು ಒಂದೇ ಕಡೆ, ತಲೆಮೇಲೆ ಮೊಳೆ ಹೊಡೆದ ಹಾಗೆ ಎಂದು ಹೇಳುತ್ತಾರಲ್ಲ ಹಾಗೆ ಇಡಿ ಎಂದು ಹೇಳುವುದಿಲ್ಲ. ಐದು ವರ್ಷವಾದವರನ್ನು ವರ್ಗ ಮಾಡುವುದಾಗಿ ಒಂದು ನಿಯಮವನ್ನು ಇಟ್ಟುಕೊಂಡರೆ, ಅದಕ್ಕಿಂತ ಹೆಚ್ಚಾಗಿ ಒಂದು ಕಡೆ ಇರುವವರನ್ನು ವರ್ಗ ಮಾಡಬೇಕು. ಅದು ಎಲ್ಲರಿಗೂ ಸಮಾನವಾಗಿ ಲಾಗೂ ಆಗಬೇಕು. ಆದರೆ ಹಾಗೆ ಮಾಡಲಿಲ್ಲ ಎನ್ನುವುದೇ ನಮ್ಮ ಆರೋಪ. ಅದೇ ದೃಷ್ಟಿಯಿಂದ ನಮ್ಮ ನಾಯಕರಾದ ದೇವೇಗೌಡರು ಹೇಳಿದ್ದು. ಯಾವುದೋ ಒಂದು ಕಾರಣದಿಂದ ಯಾರೋ ಬಂದು ತಮಗೆ ಏನೋ ಹೇಳಿದರು ಎಂದು ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗಬಾರದು. ಆರು ತಿಂಗಳು, ಒಂದು ವರ್ಷಕಾಲ ಮಾತ್ರ ಇದ್ದವರನ್ನು ಕೂಡ ವರ್ಗ ಮಾಡಿದ್ದಾರೆ ಎನ್ನುವುದೇ ನಮ್ಮ ಆರೋಪ. ನಿಜವಾಗಿ ಯಾರಿಗಾದರೂ ತೊಂದರೆ ಇದ್ದರೆ, ಉಪಾಧ್ಯಾಯರೇ ವರ್ಗ ಮಾಡಬೇಕೆಂದು ಕೇಳಿಕೊಂಡರೆ, ಅನಾರೋಗ್ಯ ಅಥವಾ ಇನ್ನು ಏನಾದರೂ ಕಾರಣದಿಂದ ಬೇರೆ ಕಡೆಗೆ ವರ್ಗ ಮಾಡಬೇಕು ಎಂದು ಕೇಳಿಕೊಂಡರೆ ಮಾನವೀಯತೆಯ ದೃಷ್ಟಿಯಿಂದ ಅಂಥ ಉಪಾಧ್ಯಾಯರನ್ನು ವರ್ಗ ಮಾಡುವುದರ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಆದರೆ ಬೇರೆ ದೃಷ್ಟಿಕೋಣವನ್ನು ಇಟ್ಟುಕೊಂಡು, ರಾಜಕೀಯ ದೃಷ್ಟಿಕೋಣವನ್ನು ಇಟ್ಟುಕೊಂಡು ಏನಾದರೂ ಮಾಡಿದರೆ ಹಾಗೆ ಮಾಡುವುದು ತಪ್ಪು. ಆದರೆ ಮೂರು ತಿಂಗಳಾದವರಿಗೆ, ಆರು ತಿಂಗಳಾದವರಿಗೆ, ಒಂದು ವರ್ಷವಾದವರಿಗೆ ವರ್ಗ ಮಾಡಿದ್ದೀರಿ ಎನ್ನುವುದೇ ನಿಮ್ಮ ಮೇಲೆ ಇರುವ ಆರೋಪ. ಅದಕ್ಕೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪ್ರಭಾಕರ್ (ವರ್ತೂರು).—ಉಪಾಧ್ಯಾಯರು ಎಂದರೆ ಏನು ಕೀರ್ತಿ ಇರಬೇಕೋ ಅದು ಇರಲೇಬೇಕು ಎನ್ನುವುದು ನಿರ್ವಿವಾದವಾದ ವಿಚಾರ. ಯಾವ ಯಾವ ಸಂದರ್ಭದಲ್ಲಿ ಉಪಾಧ್ಯಾಯ ತನ್ನ ವೃತ್ತಿಗೆ ಧಕ್ಕೆ ಬರುವ ರೀತಿಯಲ್ಲಿ ನಡೆದು ಸಮಾಜದಲ್ಲಿ ಗುರು ಎನ್ನುವವರು ಬಂದಾಗ ಪೂಜ್ಯತೆ ಕಡಿಮೆಯಾಗುತ್ತದೆ. ಅಂಥ ಸಂದರ್ಭದಲ್ಲಿ ವರ್ಗ ಮಾಡುವ ಸನ್ನಿವೇಶ ಉಂಟಾದರೆ, ಅವರು ಬಂದು ಮೂರು ತಿಂಗಳಾಗಿರಲಿ, ಆರು ತಿಂಗಳಾಗಿರಲಿ ಯಾವ ಒಂದು ಮಿತಿ ಇದೆಯೋ ಅದನ್ನು ನೋಡದೆ ವರ್ಗ ಮಾಡಿರುವ ಸಂದರ್ಭಗಳು ಅನೇಕ ಇರುತ್ತವೆ. ಇವುಗಳನ್ನು ನಾವು ತಪ್ಪು ಎನ್ನುವುದಕ್ಕೆ ಸಾಧ್ಯವಿಲ್ಲ. ನನ್ನಲ್ಲಿ ವರ್ಗದ ಬಗ್ಗೆ ಇಬ್ಬರು ಬಂದಿದ್ದಾರೆ. ಅವನು ಬಂದು ಒಂದು ವರ್ಷವಾಗಿದೆ. ಒಬ್ಬನಿಗೆ ಕೈ ಮುರಿದು ಹಾಕಿದ್ದಾನೆ. ಕ್ರಿಮಿನಲ್ ಕೇಸು ನಡೆಯುತ್ತಿದೆ. ಅವನ ಅಪ್ಪನನ್ನು ಕೂಡ ಈ ವಾರದಲ್ಲಿ ಮುಗಿಸುತ್ತೇನೆಂದು ಹೆದರಿಸಿದ್ದಾನೆ. ಅಪ್ಪ ಬಂದು ಅವನನ್ನು ಎಲ್ಲಿಗಾದರೂ ಬೇರೆ ಕಡೆಗೆ ವರ್ಗ ಮಾಡಿಸಿಕೊಡಿ ಎಂದು ಕೇಳುತ್ತಿದ್ದಾನೆ. ಒಂದು ವರ್ಷಕ್ಕೇ ಒಬ್ಬನ ಕೈ ಮುರಿದು ಅಪ್ಪನನ್ನು ಮುಗಿಸುವುದರಲ್ಲಿದ್ದಾನೆ. ಅವನು ಬಂದು ಒಂದು ವರ್ಷ ಮಾತ್ರ ಆಗಿದೆ, ವರ್ಗ ಮಾಡುವುದಿಲ್ಲವೆಂದರೆ ಅಪ್ಪನ ಕಥೆ ಮುಗಿಯುತ್ತದೆ. ಇಂಥ ಸಂದರ್ಭದಲ್ಲಿ ಕಣ್ಣೀರು ಹಾಕಬೇಕಾಗುತ್ತದೆ. ಅವರ ಅಪ್ಪನಿಗೆ ಬೇಕಾದರೆ ಉಪಾಧ್ಯಾಯ ವೃತ್ತಿಯಿಂದಲೇ ತೆಗೆಸಿಬಿಡೋಣ ಎಂದು ಹೇಳಿದ್ದಕ್ಕೆ ಹಾಗೆ ಮಾಡಬೇಡಿ, ಹಾಗೆ ಮಾಡಿದರೆ ಬದುಕುವ ಹಾಗೆಯೇ ಇಲ್ಲ ಎಂದು ಹೇಳುತ್ತಾನೆ. ಇಂಥ ಸಂದರ್ಭಗಳು ಬಂದಾಗ ವಿಧಿ ಇಲ್ಲದೆ ವರ್ಗ ಮಾಡಬೇಕಾಗಿ ಬರುತ್ತದೆ. ಅಂಥ ಉಪಾಧ್ಯಾಯರ ಪರವಾಗಿ ಮಾತನಾಡುವುದು ಸರಿಯಲ್ಲವೆಂದು ನಾನು ತಿಳಿಸುತ್ತೇನೆ.

†ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಅಧ್ಯಕ್ಷರೇ, ನಮ್ಮ ಪಕ್ಷದ ನಾಯಕರು ಸವಿಸ್ತಾರವಾಗಿ ಹೇಳಿದ್ದಾರೆ. ಗೆಳೆಯ ಕೋಣಂದೂರು ಲಿಂಗಪ್ಪನವರು ಹೇಳಿದ್ದಾರೆ. ರಾಜಕೀಯವಾಗಿ ಅಧ್ಯಾಪಕರನ್ನು ವರ್ಗಾವಣೆ ಮಾಡಿದ್ದು ಸರಿಯೇ ಎನ್ನತಕ್ಕದ್ದನ್ನು ಪ್ರಬಲವಾಗಿ ಎತ್ತಿ ಹಿಡಿದು ಮಾತನಾಡಿದ್ದಾರೆ. ನಾನು ಹೇಳುವುದು ಬಹುತೇಕ ಮಾನ್ಯ ಮಂತ್ರಿಗಳವರ ಗಮನಕ್ಕೆ ಈ ರಾಜಕೀಯವಾದ ವರ್ಗಾವಣೆ ಬಾರದೆ ಇರಬಹುದು. ನಿಮ್ಮ ಕೈಕೆಳಗಿನ ಅಧಿಕಾರಿಗಳು ರಾಜಕೀಯವಾಗಿಟ್ಟುಕೊಂಡು ವರ್ಗಾವಣೆ ಮಾಡಿರತಕ್ಕ ನಿದರ್ಶನಗಳು ಬಹಳ ಇವೆ. ಅವರ ಜೊತೆಗೆ ಬಹಳ ಪ್ರಾಮುಖ್ಯವಾಗಿ ನಿಮ್ಮ ಇಲಾಖೆಯ ಡೈರೆಕ್ಟರ್ ಆಫ್ ಪಬ್ಲಿಕ್ ಎಜುಕೇಷನ್ ಅಲ್ಲಿ ಕೆಲಸ ಮಾಡುವ ಅಧ್ಯಾಪಕರನ್ನು ವರ್ಗಾವಣೆ ಮಾಡಬೇಕಾದರೆ ಪ್ರತ್ಯೇಕವಾಗಿ, ನಿರ್ದಿಷ್ಟವಾಗಿ ಒಂದು ಕಮ್ಯೂನಿಟಿಯ ಜನರನ್ನು ತಕ್ಷಣ ಮಾಡಬೇಕು ಎನ್ನುವ ಆದೇಶ ಕೂಡ ಹೋಗಿದೆ.

(ಶ್ರೀ ಎಚ್. ಎಸ್. ಸಿದ್ದಪ್ಪ)

ಅಲ್ಲಿ ಏನಾಗಿದೆ ಎಂದರೆ ಈ ಅಧಿಕಾರಿ ನಡುಗುತ್ತಿದ್ದಾರೆ, ನಾನು ಮಾಡದೆ ಹೋದರೆ ಬದುಕುತ್ತೇನೆಯೋ ಇಲ್ಲವೋ ಎನ್ನುವ ಪರಿಸ್ಥಿತಿ ಬಂದು ಅಧಿಕಾರಿಗಳನ್ನು ಒಬ್ಬೊಬ್ಬರನ್ನಾಗಿ ಕರೆದು ನಿಮಗೆ ಬೇಕಾದ ಸ್ಥಳವನ್ನು ಆರಿಸಿಕೊಳ್ಳಿರಿ ಎಂದು ಹೇಳಿ ಮೇಜರ್ ಕಮ್ಯೂನಿಟೀಸ್ ಏನಿವೆ ಆ ಕೋಮಿನ ಅಧ್ಯಾಪಕ ವರ್ಗದವರನ್ನು ಆದಷ್ಟು ಜಾಗ್ರತೆ ಕಿತ್ತು ಬೇರೆ ಕಡೆಗೆ ಹಾಕತಕ್ಕ ಗಾಳಿ ಬೇಕಾದಷ್ಟು ಇದೆ. ಇದರಿಂದ ಒಬ್ಬ ಗೌರವಾನ್ವಿತ ವ್ಯಕ್ತಿ ಮಂತ್ರಿಯಾಗಿರುವುದಕ್ಕೆ ಆಭಾಸ ಎದ್ದಿದೆ ಎಂದು ನಮಗೆ ವ್ಯಥೆಯಾಗುತ್ತದೆ. ನಿಮ್ಮಂಥವರು ಮಂತ್ರಿ ಪದವಿಯಲ್ಲಿ ಇರುವುದು ಸರಿಯಲ್ಲ ಎಂದು ಕಾಣಿಸುತ್ತದೆ. ಒಂದು ಮೇಜರ್ ಕಮ್ಯೂನಿಟಿಯಲ್ಲಿರುವ ಅಧಿಕಾರಿಗಳನ್ನೆಲ್ಲ ಕಿತ್ತು ಕಿತ್ತು ಸಿಕ್ಕಾಪಟ್ಟೆ ವರ್ಗ ಮಾಡಿ, ನೀರಿನಿಂದ ಮೀನನ್ನು ತೆಗೆದು ರಸ್ತೆಗೆ ಹಾಕಿದ ಹಾಗೆ ಮಾಡುವುದು ಸರಿಯಲ್ಲ. ಹಾಗೆ ಮಾಡುವುದರಿಂದ ನಮ್ಮ ಮೇಲೆ ಒಂದು ಅಪಾದನೆ, ದೇಶದಲ್ಲಿ ಮರೆಯಲಾರದ ಅಪಾದನೆ ಬರುತ್ತದೆ. ಅದಕ್ಕೆ ಅವಕಾಶ ಕೊಡಬೇಡಿ.

ಹಾಗೆಯೇ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರನ್ನು ವರ್ಗ ಮಾಡಿರುವುದನ್ನು ಕೂಡ ಗಮನಿಸಬೇಕು. ಎಷ್ಟೋ ಜನ ಉಪಾಧ್ಯಾಯರು ಮೈಕ್ ಹಿಡಿದುಕೊಂಡು, ಬ್ಯಾಡ್ಜ್ ಹಾಕಿಕೊಂಡು ಚುನಾವಣಾ ಪ್ರಚಾರ ಮಾಡಿದ್ದಾರೆ. ಆದರೂ ನಾವು ಅರ್ಜಿ ಬರೆಯಲಿಲ್ಲ. ಒಬ್ಬ ಅಧಿಕಾರಿಯಿಂದ ಸೋಲುವುದಾದರೆ ನಾವು ಚುನಾವಣೆಗೆ ನಿಲ್ಲುವುದಕ್ಕೆ ಅರ್ಹರಲ್ಲವೆಂದು ತಿಳಿದುಕೊಂಡು ಅಂಥವರ ಮೇಲೆ ಏನೂ ಬರೆದಿಲ್ಲ. ಅಂಥವರನ್ನು ವರ್ಗ ಮಾಡುವುದಕ್ಕೆ ಶಕ್ತಿ ಇಲ್ಲ. ಸಿಕ್ಕಾಪಟ್ಟೆ ವರ್ಗ ಮಾಡುತ್ತೀರಿ. ಅಂಥವರ ಬಗ್ಗೆ ಉಗ್ರ ಕ್ರಮ ತೆಗೆದುಕೊಳ್ಳತಕ್ಕ ಚೈತನ್ಯ ನಿಮ್ಮ ಇಲಾಖೆಯ ಅಧಿಕಾರಿಗಳಿಗೆ ಇಲ್ಲ. ಈ ಅಪಾದನೆ ಸಾಮೂಹಿಕ ವರ್ಗದಲ್ಲಿ, ಜಾತೀಯ ಆಧಾರದ ಮೇಲೆ ವರ್ಗ ಮಾಡತಕ್ಕ ಅಪಾದನೆ ಇರುವಾಗ ನೀವು ಮಂತ್ರಿಗಳಾಗಿರುವುದು ತಪ್ಪು. ಬೇರೆಯವರಿಗೆ ಅವಕಾಶ ಮಾಡಿಕೊಟ್ಟು, ಈ ಅಪಾದನೆಯಿಂದ ತಾವು ವಿಮುಕ್ತರಾಗಿ ಎಂದು ಕೈ ಜೋಡಿಸಿ ಪ್ರಾರ್ಥನೆ ಮಾಡುತ್ತೇನೆ.

3-00 P.M.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಸನ್ಮಾನ್ಯ ಅಧ್ಯಕ್ಷರೇ, ಅನೇಕ ಮಿತ್ರರು ಮಾನ್ಯ ಮಂತ್ರಿಗಳಿಗೆ ಅವರ ಇಲಾಖೆಯಲ್ಲಿ ಏನೇನು ನ್ಯೂನತೆಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ. ನಾವು ಚಿಕ್ಕಮಕ್ಕಳಾಗಿದ್ದಾಗಿಂದೀಚೆ ಕಂಡರಿಯದಂತಹ ಲಂಚ ಕೋರತನ ವಿದ್ಯಾ ಇಲಾಖೆಯಲ್ಲಿ ನಡೆಯುತ್ತಿದೆ ಎಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತೇನೆ. ಮೂರು ತಿಂಗಳಿಂದ ಈಚೆಗೆ, ವಿರೋಧಪಕ್ಷದವರು ಬೇಕು ಅಂತ ಹೇಳುತ್ತಾರೆ ಎಂದು ದಯ ಮಾಡಿ ಮನಸ್ಸುಮಾಡಬೇಡಿ. ಈಗ ಇರತಕ್ಕ 19 ಜಿಲ್ಲೆಗಳಲ್ಲಿ, ಬೆಂಗಳೂರು ಸಿಟಿ ಜಿಲ್ಲೆಯೂ ಸೇರಿ 20 ಜಿಲ್ಲೆಗಳಿಗೂ ಫುಲ್ ಟೈಂ ಡೆಪ್ಯುಟಿ ಡೈರೆಕ್ಟರ್ ಅನ್ನು ಹಾಕಿಲ್ಲ. ತಾವು ಅಧಿಕಾರ ವಹಿಸಿಕೊಂಡ ತಕ್ಷಣ, ನನ್ನ ಇಲಾಖೆ ಎಲ್ಲೆಲ್ಲ ಕುಂಠಿತವಾಗಿದೆ ಹೇಗೆ ಭದ್ರ ಮಾಡಬೇಕು ಎನ್ನುವ ಗೋಜಿಗೆ ಹೋಗದೆ ಶಿವಮೊಗ್ಗದಲ್ಲಿ ರಾಜಕೀಯ ಮಾಡತಕ್ಕ ಉಪಾಧ್ಯಾಯರನ್ನು ವರ್ಗಾವಣೆ ಮಾಡಬೇಕು ಎಂದು ಕೇಳಿದಾಗ ಆ ಇಲಾಖೆಯ ಅಧಿಕಾರಿಗಳಿಗೆ ಮೈ ಕೈ ರೋಮ ನೆಟ್ಟಗೆ ನಿಂತಿತು. ವಯೋವೃದ್ಧರು ಆದ ಮಂತ್ರಿಗಳು ಅವರ ಕೈಗೆ ಸಿಕ್ಕಿದರು, ಎಷ್ಟು ಬೇಕಾದರೂ ದುಡ್ಡು ಮಾಡಬಹುದು ಎಂದು ತೀರ್ಮಾನಮಾಡಿಕೊಂಡರು. ಇವರಿಗೆ ಗೊತ್ತಾಯಿತೋ ಇಲ್ಲವೋ ಎಲ್ಲರನ್ನೂ ವರ್ಗಮಾಡಿದರು. ಇವರ ಪಕ್ಷದ ಜನ ವಿದ್ಯಾ ಇಲಾಖೆಯ ಅಧಿಕಾರಿಗಳನ್ನು ತಮ್ಮ ಜೊತೆಗೆ ಹಾಕಿಕೊಂಡು, ಅವರು ಯಾವರೀತಿ ಹೇಳುತ್ತಾರೋ ಅದರಂತೆ ಅಧಿಕಾರಿಗಳು ಕೆಲಸ ಮಾಡುತ್ತಿದ್ದರು.

ಶ್ರೀ ಎ. ಆರ್. ಬದರಿನಾರಾಯಣ್.—ಇದು ಸರಿಯಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ರುಜುವಾತುಮಾಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಎ. ಆರ್. ಬದರಿನಾರಾಯಣ್.—ಅಪಾದನೆಗಳನ್ನು ಮನಸ್ಸಿಗೆ ಬಂದಂತೆ ಸ್ವೇಚ್ಛೆಯಾಗಿ ಮಾಡುವುದು ಸರಿಯಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಆಡಿದಂಥ ಮಾತನ್ನು ರುಜುವಾತು ಮಾಡುವುದಕ್ಕೆ ಸಿದ್ಧನಿದ್ದೇನೆ ಎಂದು ಮೊದಲೇ ಘೋಷಿಸಿದ್ದೇನೆ. ಈ ರೀತಿ ನಾವು ಲಂಚಕೋರರು ಇದ್ದಾರೆ ಎಂದು ಸರ್ಕಾರಕ್ಕೆ ದೂರು ಹೇಳಿದರೆ, ಅಧಿಕಾರಿಗಳು ಇವರ ಆಶ್ರಯ ಪಡೆದು ಇವರು ಯಾರನ್ನು

ಹೇಳುತ್ತಾರೋ, ಇವರ ಹಿತೈಷಿಗಳನ್ನು ಸ್ವೇಚ್ಛಾನುಸಾರವಾಗಿ ವರ್ಗಾವಣೆ ಮಾಡಿದರು, ವರ್ಗಾ ಮಾಡಿದ್ದನ್ನು 3-4 ಸಾರಿ ವಜಾ ಮಾಡಿದರು. ಒಬ್ಬರನ್ನು 3-4 ಕಡೆಗೆ ಹಾಕಿದರು. ಎಂಟು ದಿವಸದಲ್ಲಿ 5-6 ಕಡೆಗೆ ವರ್ಗಾ ಮಾಡಿದ್ದಾರೆ. ಚಾರ್ಜ್ ತೆಗೆದುಕೊಂಡಂಥವರನ್ನು ಇನ್ನೊಂದು ಕಡೆಗೆ ತಂದು ಹಾಕಿದ್ದಾರೆ.

Sri A. R. BADARINARAYAN.—On a point of information. In fact before I became Minister there were some irregularities comitted by one of the D.D.P.I. Immediately I got him transferred after I became Minister. This has been done at my instance and in my district. But it is too much for the hon. member to make such a statement in this respectable House.

ಶ್ರೀ ಕೋಣಂದೂರು ಲಿಂಗಪ್ಪ.—ಆದರೆ ಸಾಧಾರಣವಾಗಿ ಡಿ.ಡಿ.ಪಿ.ಐ. ತಪ್ಪು ಮಾಡುವುದಕ್ಕೆ ಕಾರಣವಲ್ಲ. ಅಲ್ಲಿರುವ ಗುಮಾಸ್ತರು ಕಾರಣ, ಅವನು ಮಾಡಿದ ತಪ್ಪು ಇವರ ಮೇಲೆ ಹಾಕುತ್ತಾರೆ.

ಶ್ರೀ ಎ. ಆರ್. ಬದರಿನಾರಾಯಣ್.—ವರ್ಗ ಮಾಡಿಸಿದರು ಎಂದು ಹೇಳುವುದು ಸರಿಯಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮಂತ್ರಿಗಳು ನನ್ನ ಮಾತನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳದೆ ತಪ್ಪು ಕಲ್ಪನೆ ಮಾಡುತ್ತಾರೆ. ದೇಶದಾದ್ಯಂತ ಈ ರೀತಿ ಕೆಟ್ಟ ಜನ, ರಾಜಕೀಯ ಮಾಡುವವರು ವರ್ಗಾ ಮಾಡಿಸಿ ಅಧಿಕಾರಿಗಳು ದುಡ್ಡು ಹೊಡೆಯುವಂತೆ ಮಾಡಿದ್ದಾರೆ. ಅಲ್ಲಿಗೆ ಫುಲ್ ಟೈಂ ಡೆಪ್ಯೂಟಿ ಡೈರೆಕ್ಟರ್ ಇಲ್ಲ. ನೀವು ಇದು ಅಲ್ಲ ಎಂದರೆ ನಾನು ಹೇಳಿದ ಮಾತನ್ನು ವಾಪಸ್ ಪಡೆಯುತ್ತೇನೆ. ಆಡಳಿತ ಪಕ್ಷದ ಅನೇಕ ಮಿತ್ರರ ಆಶ್ರಯ ಪಡೆದು ಅನೇಕ ಸಂದರ್ಭಗಳಲ್ಲಿ ಉಪಾಧ್ಯಾಯರನ್ನು ವರ್ಗ ಮಾಡಿರುವ ನಿದರ್ಶನ ಸ್ಪಷ್ಟವಾಗಿದೆ. ಒಬ್ಬ ಉಪಾಧ್ಯಾಯರನ್ನು ಒಂದು ತಿಂಗಳಿಗೆ ನಾಲ್ಕಾರು ಕಡೆಗೆ ವರ್ಗ ಮಾಡಿರುವುದು ಇದೆ. ಮಾನ್ಯ ಮಂತ್ರಿಗಳು ವಯೋವೃದ್ಧರು ಮೃದು ಸ್ವಭಾವದವರು ಇಲಾಖೆಯನ್ನು ಶುದ್ಧೀಕರಣ ಮಾಡುತ್ತಾರೆ ಎಂದರೆ ಅವರಿಗೆ ತಬ್ಬಿಬ್ಬಾಗಿದೆ. ನಮ್ಮ ಮಿತ್ರರು ಹೇಳಿದ ಹಾಗೆ ಟೆಕ್ನಿಕಲ್ ಎಜುಕೇಷನ್‌ನಲ್ಲಿ ಬಹುಸಂಖ್ಯಾತ ವರ್ಗಕ್ಕೆ ಸೇರಿದ ಅಧಿಕಾರಿಗಳನ್ನು ವರ್ಗಾ ಮಾಡಿರುವುದನ್ನು ನೋಡಿದರೆ, ಜಾತೀಯತೆಯಲ್ಲಿ ನೀವು ಎಷ್ಟು ಮುಂದುವರಿದಿದ್ದೀರಿ ಎಂದು ತಿಳಿಯುತ್ತದೆ. ಈ ಒಂದು ನಿದರ್ಶನವನ್ನು ಸರ್ಕಾರಕ್ಕೆ ನಮ್ರತೆಯಿಂದ ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಬಿ. ಶಿವಯ್ಯ (ನಂಜನಗೂಡು).—ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ವರ್ಗಮಾಡುವ ಸಮಸ್ಯೆ ಪ್ರಥಮವಾಗಿ ಸರ್ಕಾರ ಬಂದಮೇಲೆ ಪ್ರಾರಂಭವಾಗಿರುವುದು ಎಂದು ಮಾತನಾಡಿದಂಥ ನನ್ನ ಕೆಲವು ಮಿತ್ರರುಗಳಿಗೆ ನನ್ನ ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಅಧಿಕಾರದಲ್ಲಿರತಕ್ಕ ಅಧಿಕಾರವರ್ಗದವರು ಯಾರು ಇದ್ದಾರೋ, ಅವರಲ್ಲಿ ಕೆಲವರು ಅನುಕೂಲವಾಗಿ ಒಂದು ಕಡೆಗೆ ಹೋದರೆ ಅವರು ಅಲ್ಲಿಯೇ ಇರಬೇಕು ಎನ್ನುವ ಮನೋವೃತ್ತಿಯನ್ನು ಕಲ್ಪಿಸಿಕೊಂಡಿದ್ದಾರೆ. ಈ ಪ್ರವೃತ್ತಿಗೆ ಕಾರಣರು ಮೂರು ತಿಂಗಳಿಂದ ಬಂದಂಥ ಸರ್ಕಾರ ಅಲ್ಲ. 25 ವರ್ಷಗಳ ಹಿಂದೆ ಇದ್ದಂಥವರು ಕಾರಣರಾಗಿದ್ದಾರೆ ಎನ್ನುವುದನ್ನು ನಮ್ಮ ಸ್ನೇಹಿತರು ಮರೆತಂತಾಗಿದೆ. ಇಂಥ ಅಧಿಕಾರಿಗಳು ಒಂದು ಕಡೆ ಇದ್ದಾಗ ತಮ್ಮ ಕಾರ್ಯವನ್ನು ಸರಿಯಾಗಿ ನಿರ್ವಹಿಸದೆ ಇದ್ದಾಗ ನಮ್ಮ ಸರ್ಕಾರದವರು ಅವರ ಮೇಲೆ ಸಾಮಾಜಿಕ ದೃಷ್ಟಿಯಿಂದ ವರ್ಗಾಮಾಡಿ ಬೇರೆಯವರನ್ನು ಹಾಕಿ ಸರಿಯಾದ ವ್ಯವಸ್ಥೆಯನ್ನು ಮಾಡುವುದಕ್ಕೋಸ್ಕರ ಕೆಲವು ವರ್ಗಗಳು ಮಾಡಿರಬಹುದು. ಅದರ ಮೇಲೆ ಹೆಚ್ಚಿನ ಗೊಂದಲವನ್ನು ಉಂಟುಮಾಡಿ, ಪ್ರಾಮುಖ್ಯವಾಗಿ ವರ್ಗಾ ಮಾಡುವುದನ್ನು ತಪ್ಪು, ವರ್ಗ ಆಗುವುದು ತಪ್ಪು. ಇದು ವಿಶೇಷವಾಗಿ ಈ ಸರ್ಕಾರ ಬಂದಮೇಲೆ ನಡೆಯುತ್ತಿದೆ ಎನ್ನುವುದನ್ನು ಯಾರೂ ಒಪ್ಪಲಿಕ್ಕೆ ಆಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ವರ್ಗಗಳನ್ನು ಮಾಡಲೇಬೇಕಾಗುತ್ತದೆ. ಯಾವ ಅಧಿಕಾರಿ ತನ್ನ ಕಾರ್ಯವನ್ನು ಬಿಟ್ಟು ತನ್ನ ಸ್ವಂತ ವ್ಯವಹಾರದಲ್ಲಿ ಸಂಪಾದನೆ ಮಾಡುತ್ತಾನೋ, ಅಂಥ ಲೇವಾದೇವಿ ಕಟ್ಟಿಕೊಂಡಿದ್ದಾನೋ ಮತ್ತು ಒಂದು ಊರಲ್ಲಿ 10-15 ವರ್ಷ ಒಂದು ಸ್ಕೂಲಿನಲ್ಲಿ ಕೆಲಸ ಮಾಡುತ್ತಾನೋ, ಇಂಥಾದ್ದು ಸಮಾಜದಲ್ಲಿ ಹೆಚ್ಚಿನ ತಿಳುವಳಿಕೆ ಬಂದು ಅದನ್ನು ಸರ್ಕಾರದ ಗಮನಕ್ಕೆ ತಂದಾಗ ವರ್ಗ ಮಾಡಬೇಕಾಗುತ್ತದೆ. ಅಧಿಕಾರಿ ವರ್ಗದವರು ನೌಕರರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇಂಥ ಜನರನ್ನು ವರ್ಗ ಮಾಡುವುದರಿಂದ ತಪ್ಪಾಗುವುದಿಲ್ಲ. ಇನ್ನೊಂದು ಕಡೆ ಅನ್ಯಾಯ ನಡೆದಿದೆ, ಕಾನೂನು ವ್ಯತಿರಿಕ್ತ ವರ್ಗ ಮಾಡಿದರು ಎಂದು ನನ್ನ ಮಿತ್ರರು ಯಾರೂ ಹೇಳಲಿಲ್ಲ ಅಂದಮೇಲೆ ವರ್ಗ ಮಾಡಿರುವುದು ತಪ್ಪು ಎನ್ನುವ ವಾದವನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

(ಶ್ರೀ ಕೆ. ಬಿ. ಶಿವಯ್ಯ)

ಕಾನೂನಿಗೆ ವ್ಯತಿರಿಕ್ತವಾಗಿ ನಡೆದಿದ್ದರೆ ಅನ್ಯಾಯವಾಗಿದ್ದರೆ, ಅದರ ಬಗ್ಗೆ ದೂರು ಕೊಟ್ಟಿದ್ದರೆ ನಿದರ್ಶನದ ಮೂಲಕ ತಿಳಿಸುವುದಾದರೆ ಅಂಥಾದ್ದೂ ಒಪ್ಪಬೇಕಾದದ್ದು. ಅಧಿಕಾರಿಗಳು ಅವರ ಕೆಲಸಗಳನ್ನು ಮರೆತು ಮನಸ್ಸಿಗೆ ಬಂದ ಹಾಗೆ ಕೆಲಸ ಮಾಡುವುದಕ್ಕೆ ಫ್ರೀಡಂ ಕೊಡಿ ಎನ್ನುವ ವಾದವನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಯಾವ ಅಧಿಕಾರಿಯೇ ಆಗಲೀ, ಅವನು ತನ್ನ ಕಾರ್ಯವನ್ನು ಮಾಡದೇ ಇದ್ದಾಗ ಅವನನ್ನು ವರ್ಗಾ ಮಾಡಬೇಕಾಗುತ್ತದೆ, ಮತ್ತು ಅವನಮೇಲೆ ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕು. ಇಂಥ ದೃಷ್ಟಿಯಿಂದ ವರ್ಗ ಮಾಡುವುದು ಸರಿಯಾದ ಕ್ರಮ ಇದಕ್ಕೂ ಮುಂದಿನ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬಿಹಾಳ್).—ಮಾನ್ಯ ಸಭಾಪತಿಗಳೇ, ಮುಖ್ಯವಾಗಿ ಆಡಳಿತ ದೃಷ್ಟಿಯಿಂದ ವರ್ಗವಾಗುವುದಿಲ್ಲ. ಆಗಲೇ ಮಾನ್ಯ ದೇವೇಗೌಡರು ಬಿಜಾಪುರದ ಉದಾಹರಣೆಯನ್ನು ನೆನಪು ಮಾಡಿದರು. ನನಗೆ ತಿಳಿದಹಾಗೆ ಬಿಜಾಪುರ ಜಿಲ್ಲೆಯಲ್ಲಿ ಐದು ವರ್ಷಗಳಿಗಿಂತ ಹೆಚ್ಚು ವರ್ಷ ಒಂದೇ ಜಾಗದಲ್ಲಿ ಕೆಲಸಮಾಡಿದಂಥ ಶಿಕ್ಷಕರು ಸುಮಾರು ಹತ್ತು ಸಾವಿರ ಜನರನ್ನು ಕೊಡಬಹುದು.

ಬಿಜಾಪುರ ಜಿಲ್ಲೆ ಡಿ.ಡಿ.ಪಿ.ಐ. ಕನಿಷ್ಠ ಪಕ್ಷ ಒಂದು ಜಾಗದಲ್ಲಿ 5 ವರ್ಷಗಳು ಸತತವಾಗಿ ದುಡಿದಂಥ ಶಿಕ್ಷಕ ಅಥವಾ ಶಿಕ್ಷಕಿಯರಿಗೆ ವರ್ಗಾವಣೆ ಮಾಡಬೇಕೆಂದು ನಿಯಮ ಮಾಡಿಕೊಂಡು ಅಂಥ ನಿಯಮಕ್ಕೆ ಒಳಪಟ್ಟು ವರ್ಗ ಮಾಡಿದ್ದಾರೆ. ಕೆಲವು ಸಂದರ್ಭಗಳಲ್ಲಿ 10 ವರ್ಷಗಳಾದರೂ ಅವರಿಗೆ ವರ್ಗ ಮಾಡದೆ ಅಂಥವರ ಮೇಲೆ ಈ ನಿಯಮ ಅನ್ವಯ ಮಾಡಿಲ್ಲ. ಅಂತಹ ಶಿಕ್ಷಕರನ್ನು ವರ್ಗಾವಣೆ ಮಾಡುವುದಾದರೆ ಇದು ಬಹಳ ಹೆಚ್ಚಿನ ಸಂಖ್ಯೆ ಆಗುತ್ತಿತ್ತು. ಸ್ಕೂಲ್ ಬೋರ್ಡ್ ಆಡಳಿತಾಧಿಕಾರಿಗಳ ಕೃಪಾಕ್ಷೇತ್ರದಲ್ಲಿ ಇದ್ದ ಶಿಕ್ಷಕ ಶಿಕ್ಷಕಿಯರು ಒಂದೇ ಜಾಗದಲ್ಲಿ 10 ವರ್ಷಗಳಿಗಿಂತ ಹೆಚ್ಚು ಕಾಲ ಇದ್ದವರು ಅಲ್ಲೇ ಇದ್ದಾರೆ. 10 ವರ್ಷಕ್ಕಿಂತ ಹೆಚ್ಚಿಗೆ ಇರುವ ಶಿಕ್ಷಕ ಮತ್ತು ಶಿಕ್ಷಕಿಯನ್ನು ಒಮ್ಮೆ ವರ್ಗಾವಣೆ ಮಾಡಿದರೆ ಕ್ರಾಂತಿ ಆದೀತು, ಗದ್ದಲ ಆದೀತು ಎನ್ನುವುದನ್ನು ಗಮನಿಸಿ ಡಿ.ಡಿ.ಪಿ.ಐ. ಕಂಪ್ಲೇಂಟ್ ಇರುವವರನ್ನು ಮಾತ್ರ ವರ್ಗ ಮಾಡಿದರೆ ಸಾಕು ಎಂದು ಲೆಕ್ಕ ಹಾಕಿ ಈ ಜಿಲ್ಲೆಯಲ್ಲಿ ವರ್ಗಾವಣೆ ಮಾಡಿದ್ದಾರೆ. ಅನೇಕ ಸದಸ್ಯರು ಹೇಳುವಂತೆ ರಾಜಕೀಯವಾಗಿ, ರಾಜಕೀಯ ದೃಷ್ಟಿಯಿಂದ ವರ್ಗ ಮಾಡಿದಂಥ ಉದಾಹರಣೆಗಳಿಲ್ಲ. ಅಲ್ಲದೆ ಆಡಳಿತ ದೃಷ್ಟಿಯಿಂದ ಇಂಥ ವರ್ಗಾವಣೆ ಆಗದೇ ಗತಿಯಿಲ್ಲ ಎಂದು ಒಂದು ಮಾತನ್ನು ಹೇಳಿ ಮಾನ್ಯ ಸದಸ್ಯರು ಯಾವುದೇ ವಿಷಯವನ್ನು ಲೆಕ್ಕ, ಆಧಾರವಿಲ್ಲದೆ ಇಂಥ ಆಪಾದನೆಗಳನ್ನು ಮಾಡಬಾರದು ಎಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಜಿ. ಚೆನ್ನಪ್ಪ (ಮಾಗಡಿ).—ಸಭಾಪತಿಗಳೇ, ವರ್ಗಾವಣೆ ವಿಷಯದಲ್ಲಿ ಇಲ್ಲಿಯವರೆಗೆ ಸಾಕಷ್ಟು ಚರ್ಚೆ ನಡೆದಿದೆ, ಆದರೆ ನಾನು ಒಂದು ವಿಷಯ ಸಲಹೆ ಮಾಡಿ ನನ್ನ ಮಾತನ್ನು ಮುಕ್ತಾಯ ಮಾಡಬೇಕೆಂದು ಇಚ್ಛೆಪಡುತ್ತೇನೆ. ಅನ್ಯಾಯ ಮಾಡಿದವರಿಗೆ ವರ್ಗಮಾಡುವುದು ಸರಿ. ಆದರೆ ಕೆಲವರು ನಿಸ್ಪೃಹತೆಯಿಂದ ಕಾರ್ಯದಕ್ಷತೆಯಿಂದ ಕೆಲಸ ಮಾಡಿಕೊಂಡು ಹೋಗುವವರಿಗೂ, ತಪ್ಪು ಮಾಡಿದವರಿಗೂ ಮತ್ತು ತಪ್ಪು ಮಾಡದೆ ಇರುವವರಿಗೂ ಒಂದೇ ಬರೆ ಎಂದರೆ ನನ್ನ ದೃಷ್ಟಿಯಲ್ಲಿ ಸರಿಯಲ್ಲ. ಕೆಲಸ ಮಾಡಿಕೊಂಡು ಹೋದರೆ ಎಷ್ಟು ವರ್ಷಗಳಾದರೂ ಇರಿಸಿಕೊಂಡು ಹೋಗುವುದು ಸರಿ. ಆದರೆ ಕೆಲಸ ಮಾಡದೆ ಇರುವವರ ಜೊತೆಗೆ ಕೆಲಸ ಮಾಡಿದವರನ್ನು ಟ್ರಾನ್ಸ್‌ಫರ್ ಮಾಡುತ್ತಿದ್ದಾರೆ ಅದು ಸರಿಯಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಿ.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಸಾಯುವವರೆಗೆ ಅವರನ್ನು ಒಂದೇ ಕಡೆಯಲ್ಲಿ ಇಡಬೇಕೇ ?

ಶ್ರೀ ಹೆಚ್. ಜಿ. ಚೆನ್ನಪ್ಪ.—ಅದಕ್ಕೂ ಮಿತಿ ಬೇಕು, ನಾಳೆ ದೂರು ಬಂದರೆ, ದೂರಿನ ಆಧಾರದ ಮೇಲೆ ವರ್ಗ ಮಾಡುವುದು ಸರಿಯಲ್ಲ ಎಂದು ನನಗನಿಸುತ್ತದೆ. ಯಾವುದೇ ಆಗಲಿ ಒಂದು ನಿರ್ದಿಷ್ಟವಾದ ಕಾನೂನು ತರಬೇಕು. ವರ್ಗಾವಣೆ ಮಾಡಬೇಕಾದರೂ ಇಂತಿಷ್ಟು ಕಾಲ ಅವರು ಕೆಲಸ ಮಾಡಿದ ಮೇಲೆ ಅಲ್ಲಿಂದ ಆಚೆಗೆ ವರ್ಗಾವಣೆ ಮಾಡುವುದು ಸರಿ. ವರ್ಗಾವಣೆ ಮಾಡಿದ ಮೇಲೆ ಯಾವ ಒತ್ತಾಯಕ್ಕೂ, ದಾಕ್ಷಿಣ್ಯಕ್ಕೂ ಒಳಗಾಗಿ ಕ್ಯಾನ್ಸಲ್ ಮಾಡಬಾರದು. ಒಬ್ಬರು ಹೇಳಿದರೆ ಕ್ಯಾನ್ಸಲ್ ಮಾಡುವುದು, ಇನ್ನೊಬ್ಬರು ಹೇಳಿದರೆ ಕ್ಯಾನ್ಸಲ್ ಮಾಡದೆ ಇರುವುದು ಸರಿಯಲ್ಲ. ಯಾರೇ ಹೇಳಲಿ ಟ್ರಾನ್ಸ್‌ಫರ್ ಮಾಡುವುದಕ್ಕೆ ಹೋಗಬಾರದು. ಏನು ಕಾರಣದಿಂದ ಟ್ರಾನ್ಸ್‌ಫರ್ ಮಾಡಿದರೂ ಒಬ್ಬರು ಹೇಳಿದರೆ ಕ್ಯಾನ್ಸಲ್ ಮಾಡುವುದು ಇನ್ನೊಬ್ಬರು ಹೇಳಿದರೆ

ಕ್ಯಾನ್ಸಲ್ ಮಾಡುವುದಿಲ್ಲ ಎಂದು ಹೇಳುವುದು ಸರಿಯಿಲ್ಲ. ಎಲ್ಲರಿಗೂ ಅನ್ವಯಿಸುವ ರೀತಿ ಕಾನೂನನ್ನು ಅಳವಡಿಸಬೇಕು. ಒಬ್ಬರು ಹೇಳುವಾಗ ಮಾಡಿ, ಇನ್ನೊಬ್ಬರು ಹೇಳುವಾಗ ಮಾಡದೆ ಇದ್ದರೆ ಇವನ ಮಾತಿಗೆ ಗೌರವ ಇದೆ ಇನ್ನೊಬ್ಬನ ಮಾತಿಗೆ ಗೌರವವಿಲ್ಲ ಎಂದು ಹೇಳುವ ಪರಿಸ್ಥಿತಿ ಬರುತ್ತದೆ. ಕಟ್ಟುನಿಟ್ಟಾಗಿ ನಿಯಮವನ್ನು ಅನುಸರಿಸಿ. ಅವರಿಗೆ ಬೇಕಾದವರು ಹೇಳಿದಾಗ ಕ್ಯಾನ್ಸಲ್ ಮಾಡದೆ ಇನ್ನೊಬ್ಬರು ಹೋದರೆ ಅವರಿಗೆ 4--5 ವರ್ಷವಾಗಿದೆ ಅವರನ್ನು ವರ್ಗಾವಣೆ ಮಾಡುತ್ತೇವೆ ಎಂದು ಹೇಳುವುದು ಸರಿಯಿಲ್ಲ. ಕಂಪ್ಲೈಂಟ್ ಮೇಲೆ ಟ್ರಾನ್ಸ್‌ಫರ್ ಮಾಡುತ್ತೇವೆಂದು ಹೇಳುತ್ತಾರೆ. ಅವರ ಮೇಲೆ ಕಂಪ್ಲೈಂಟ್ಸ್ ಮಾಡಿದರೆ ಸಂಬಂಧಪಟ್ಟವರು ಹೋಗಿ ಕಂಪ್ಲೈಟ್ಸ್ ನ್ಯಾಯವಾದುದೆ, ಅಥವಾ ಸತ್ಯಕ್ಕೆ ದೂರವಾದುದೇ ಎಂಬ ವಿಷಯವನ್ನು ಕುಲಂಕುಷವಾಗಿ ಪಬ್ಲಿಕ್‌ನಲ್ಲಿ ಕುಳಿತು ವಿಚಾರಣೆ ಮಾಡಿ ನೋಡಿ ತಪ್ಪಿತಸ್ಥನಾಗಿದ್ದರೆ ಉಗ್ರವಾದ ಶಿಕ್ಷೆ ತೆಗೆದುಕೊಳ್ಳುವ ನೀತಿ ಆಗಬೇಕು. ನಿರಪರಾಧಿಗೆ ಸುಳ್ಳು ಆಪಾದನೆ ಮೇಲೆ ಶಿಕ್ಷೆ ಮಾಡುವುದು ಸರಿಯಾದುದು ಅಲ್ಲ. ಈ ಸಂದರ್ಭದಲ್ಲಿ ನಾನಾದರೂ ಸಭೆಯ ಮುಂದೆ ಈ ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಂಥ ಕಟ್ಟುನಿಟ್ಟಾದ ಕಾನೂನನ್ನು ಜಾರಿಗೆ ತೆಗೆದುಕೊಂಡು ಬರಬೇಕು. ಯಾರೇ ಆಗಲಿ ದಾಕ್ಷಿಣ್ಯಕ್ಕೆ ಒಳಗಾಗಿ ಟ್ರಾನ್ಸ್‌ಫರ್ ಮಾಡಕೂಡದು. ನಿಯಮಾವಳಿಗಳನ್ನು ಅನುಸರಿಸಿ ವರ್ಗಾವಣೆ ಮಾಡಿದರೆ ಯಾರಾದರೂ ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಿಸಿ ಎಂದು ಬಂದರೆ ಅವರಿಗೆ ನಿಯಮಾವಳಿ ಅನುಸರಿಸಿ ಟ್ರಾನ್ಸ್‌ಫರ್ ಮಾಡಿದ್ದಾರೆ, ಅದಕ್ಕೆ ಕೈಹಾಕಿದರೆ ಗೌರವ ಬರುವುದಿಲ್ಲ, ವರ್ಗ ಮಾಡಿದ ಜಾಗಕ್ಕೆ ಹೋಗಿ ಕೆಲಸಮಾಡಿ ಎಂದು ಹೇಳುವುದಕ್ಕೆ ಅವಕಾಶ ಇರುತ್ತದೆ, ನಮಗೂ ಗೌರವ ಬರುತ್ತದೆ. ಒಬ್ಬರು ಹೇಳಿದರೆ ಕ್ಯಾನ್ಸಲ್ ಮಾಡುವುದು ಇನ್ನೊಬ್ಬರು ಹೇಳಿದಾಗ ಕ್ಯಾನ್ಸಲ್ ಮಾಡದೆ ಹೋದಾಗ ನಮ್ಮ ಗೌರವಕ್ಕೆ ಚ್ಯುತಿ ತಂದಂತಾಗುತ್ತದೆ. ಅಂಥ ಕೆಲಸ ಆಗಬಾರದು, ಅಂಥ ಕೆಲಸ ಡಿಪಾರ್ಟ್‌ಮೆಂಟಿನಲ್ಲಿ ನಡೆಯಬಾರದು ಎಂಬುದು ನನ್ನ ಮನವಿ. ಸರ್ಕಾರ ಇದನ್ನು ಈ ನೀತಿಯನ್ನು ಪಾಲಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ನಿರಪರಾಧಿ ಮೇಲೆ ಕಂಪ್ಲೈಂಟ್ ಬಂದಿದೆ ಎಂದು ಶಿಕ್ಷೆ ಏಕ್‌ದಂ ಮಾಡುವುದು ಸರಿಯಲ್ಲ, ವಿಚಾರಣೆ ನಡೆಸಿ ಅವರಿಗೆ ಶಿಕ್ಷೆ ಕೊಡುವುದು ನ್ಯಾಯ ಎಂದು ಹೇಳುತ್ತೇನೆ. ಯಾವ ಡಿಪಾರ್ಟ್‌ಮೆಂಟಾಗಲಿ ವಿದ್ಯಾ ಇಲಾಖೆಯಾಗಲಿ ಯಾವ ಇಲಾಖೆ ಆದರೂ ನಿಯಮಾವಳಿಯನ್ನು ಅನುಸರಿಸಿಕೊಂಡು ಬರಬೇಕು ಎಂದು ಒತ್ತಾಯಪೂರ್ವಕವಾಗಿ ಹೇಳಿ ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಅಮ್ಮಣ್ಣವರ್ ಜಯಕುಮಾರ್ ಶ್ರೀಪಾಲ್ (ಸಾದಲ್ಗ).—ಪ್ರಾಥಮಿಕ ಶಾಲೆ ಶಿಕ್ಷಕರ ಬಗ್ಗೆ ಏನು ಹೇಳಿದ್ದಾರೆ ಅದು ನಿಜವಾದರೂ ಅವರು ರಾಜಕೀಯ ಒತ್ತಡಕ್ಕಾಗಿ ಒಳಗಾಗಿ ಎಲ್ಲಾ ಟ್ರಾನ್ಸ್‌ಫರ್ ಆಗಿವೆ ಪ್ರಾಥಮಿಕ ಶಿಕ್ಷಕರಿಗೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ನನ್ನ ಕ್ಷೇತ್ರದ ಚಿಕ್ಕೋಡಿ ತಾಲ್ಲೂಕಿನ ಬಗ್ಗೆ ಹೇಳಬೇಕಾದರೆ 50—52 ಜನರನ್ನು ಈಗಾಗಲೇ ವರ್ಗಮಾಡಿದ್ದಾರೆ. ಆ ವರ್ಗ ಮಾಡಿದವರಲ್ಲಿ ನನಗೆ ಸಹಾಯ ಮಾಡಿದವರು ಇದ್ದಾರೆ. ಆ ಕಾರಣದಿಂದ ವರ್ಗಮಾಡಿದ್ದಾರೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಆದರೆ ಅವರನ್ನು ವರ್ಗಮಾಡಿದ್ದು ಸರಿಯಿಲ್ಲ. ಇದನ್ನು ಮಾತ್ರ ಒಪ್ಪುತ್ತೇನೆ. ಶ್ರೀಮಾನ್ ದೇವೇಗೌಡರು ಸೂಚನೆ ಕೊಟ್ಟಿದ್ದಾರೆ. ಜೂನ್ 22 ನೇ ತಾರೀಖು ಕನ್ನಡ ಪ್ರಾಥಮಿಕ ಶಾಲೆಗಳು ಶುರು ಆಗುತ್ತವೆ. ವರ್ಗ ಮಾಡಿದ್ದು ನೋಡಿದರೆ 30 ನೇ ತಾರೀಖು ಜೂನ್ ಆರ್ಡರ್ಸ್ ಕೊಟ್ಟಿದ್ದಾರೆ ಇನ್ನು ಕೆಲವು ಕಡೆ ಆರ್ಡರ್ಸ್ ಸರಿಯಾಗಿ ಅಧ್ಯಾಪಕರಿಗೆ ಮುಟ್ಟಿಲ್ಲ. ಅವರ ಮಕ್ಕಳನ್ನು ಎಷ್ಟೋ ಶಾಲೆ, ಕಾಲೇಜು ಕಡೆ ಇಟ್ಟಿದ್ದಾರೆ. ಅವರಿಗೆ ಹೋದ ಕಡೆ ಮನೆ ಸಿಕ್ಕಬೇಕು ಮಳೆಗಾಲದಲ್ಲಿ ಅವನು ಎರಡು ಎಸ್ಟಾಬ್ಲಿಷ್‌ಮೆಂಟ್ ಮಾಡಬೇಕಾಗುತ್ತದೆ. ನಿಯಮದ ಪ್ರಕಾರ ಇದನ್ನು ಸರಿಯಾಗಿ ಮಾಡಿಲ್ಲ ಎನ್ನುವುದನ್ನು ಒಪ್ಪಬೇಕು. 10 ವರ್ಷಗಳ ನಿಯಮ ಹೇಳಿದರು. 10 ವರ್ಷಗಳು ಒಂದೇ ಊರಿನಲ್ಲಿ ಇದ್ದು ರಾಜಕೀಯ ಮಾಡುತ್ತಾನೆಂದರೆ ಬೇರೆ ಒಂದು ಕಡೆಗೆ ಹೋಗಿ ಒಂದೇ ದಿವಸದಲ್ಲಿ ಬದಲಾವಣೆ ಆಗುತ್ತಾನೆಯೇ? 20 ವರ್ಷ ಒಂದೇ ಊರಿನಲ್ಲಿ ಇದ್ದವರು ಇದ್ದಾರೆ. ನಮ್ಮ ತಾಲ್ಲೂಕು ಮಟ್ಟದಲ್ಲಿ ಹೇಳಬೇಕಾದರೆ 52 ಜನ ಏನು ಇದ್ದಾರೆ ಅವರನ್ನು ನಿಯಮದ ಪ್ರಕಾರ 10 ವರ್ಷಗಳು ಆಗಿದ್ದರೆ ಆ ಶಿಕ್ಷಕರಿಗೆ ಆ ಕ್ಷೇತ್ರದಿಂದ ಬದಲಾವಣೆ ಮಾಡಬೇಕು. ಬದಲಿ ಟ್ರಾನ್ಸ್‌ಫರ್ ಮಾಡಬೇಕಾದರೆ ಶಾಲೆ ಶುರು ಆಗುವುದಕ್ಕಿಂಥ ಮುಂಚೆ ಮಾಡಬೇಕು. ವಿದ್ಯಾ ಇಲಾಖೆಯಲ್ಲಿ ಸರ್ಕ್ಯುಲರ್ ಇವೆಯೆಂದು ಕೇಳಿದ್ದೇನೆ. ಅದೂ ಅಲ್ಲದೆ 2 ತಿಂಗಳ ನಂತರ ಮಾಡುವುದು ಯೋಗ್ಯವಲ್ಲ. ಒಂದೇ ಜಾಗದಲ್ಲಿ 30 ವರ್ಷಗಳು ಇದ್ದರೆ ಅವನನ್ನು ಅದೇ ತಾಲ್ಲೂಕಿನಲ್ಲ ವರ್ಗಾವಣೆಮಾಡಬೇಕು. ಬೇರೆ ಜಿಲ್ಲೆಯಲ್ಲಿ ಹಾಕಬೇಕಾದರೆ ಆಪಾದನೆಯಿಲ್ಲದೆ ಇದ್ದರೆ ಲೀಗಲ್ ಆಗಿ ಮಾಡಬಾರದು. ಆ ಪದ್ಧತಿಯನ್ನು ಅನುಸರಿಸಿಕೊಂಡು ಬರಬೇಕೆಂದು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

†ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ).—ಮಾನ್ಯ ಅಧ್ಯಕ್ಷಣಿಯವರೇ, ಇಷ್ಟು ಹೊತ್ತಿನವರೆಗೆ ಕೆಲವೊಂದು ಸದಸ್ಯರು ಮಾತನಾಡಿದ್ದನ್ನು ಕೇಳಿದ್ದೇನೆ.

ನಾನು ಬಿಜಾಪುರ ಜಿಲ್ಲೆಯ ಕೆಲವು ವಿಚಾರಗಳನ್ನು ಇಲ್ಲಿ ತಿಳಿಸಬೇಕಾಗಿದೆ. ಇಲ್ಲಿನ ಅಧಿಕಾರಿಗಳು ಶಿಕ್ಷಕರ ವರ್ಗಾವರ್ಗಿಯನ್ನು ಒಂದು ಉದ್ಯೋಗ ಮಾಡಿಕೊಂಡಿದ್ದಾರೆ. ಇದರಲ್ಲಿ ಕೋಮುವಾರು ವಿಭಾಗದಿಂದಲೂ ಮಾಡುತ್ತಾರೆಂದು ಕೇಳುತ್ತೇವೆ. ಇದನ್ನೆಲ್ಲಾ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕು. ಇನ್ನೊಂದು ರೀತಿ ಮಾಡುತ್ತಾರೆ. ಸರಕಾರದ ನಿಯಮದಂತೆ ಗಂಡ ಹೆಂಡಿರು ಕೆಲಸದಲ್ಲಿದ್ದರೆ ಒಂದೇ ಕಡೆಯಲ್ಲಿ ಅವರು ಇರಲು ಸಹಾಯ ಮಾಡಬೇಕೆಂದು ಇದೆ. ಆದರೆ ಇಲ್ಲಿನ ಅಧಿಕಾರಿಗಳು ಇದೊಂದನ್ನೂ ಗಮನಕ್ಕೆ ತೆಗೆದುಕೊಳ್ಳದೆ ಗಂಡನನ್ನು ಒಂದು ಕಡೆಗೆ, ಅವರ ಹೆಂಡತಿಯನ್ನು ಬೇರೆ ಕಡೆಗೆ ವರ್ಗಾಯಿಸಿ ತೊಂದರೆ ಕೊಡುತ್ತಿದ್ದಾರೆ. ಈ ರೀತಿ ಹುಬ್ಬಳ್ಳಿಯಲ್ಲಿ ಆಗಿದೆ. ಇಂತಹ ಕಿರುಕುಳಗಳನ್ನು ಶಿಕ್ಷಕರುಗಳಿಗೆ ವರ್ಗಾವರ್ಗಿ ಮಾಡುವಾಗ ಕೊಡುತ್ತಿರುತ್ತಾರೆ, ಇದರಲ್ಲಿ ರಾಜಕೀಯ ಬೇರೆ ಮಾಡುತ್ತಾರೆ, ಅಧಿಕಾರಿಗಳೇಕೆ ಇದರಲ್ಲಿ ರಾಜಕೀಯ ಮಾಡಬೇಕು ಎಂದು ನಾನು ಇಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಇದನ್ನೆಲ್ಲಾ ಸರಕಾರ ಪರಿಶೀಲನೆ ಮಾಡಬೇಕಾಗಿದೆ. ಇನ್ನೊಂದು ರೀತಿಯಾಗುತ್ತದೆ. ಸರಕಾರ 1970 ರಲ್ಲಿ ಒಂದು ಆರ್ಡರನ್ನು ಡಿ. ಡಿ. ಪಿ. ಐ. ಮೂಲಕ ಮಾಡಿದ್ದರೂ ಅದನ್ನು ಆಯಾ ವಿಭಾಗದ ಎ. ಇ. ಒ. ಎನ್ನುವ ಅಧಿಕಾರಿಗಳು ಜಾರಿಗೆ ಕೊಡುವುದಿಲ್ಲ, ಇದೇನಾಗಿದೆ ಎಂದರೆ ನಾಯಿ ಬಾಲ ಅಲ್ಲಾಡಿಸುತ್ತೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ಬಾಲವೇ ನಾಯಿಯನ್ನು ಅಲ್ಲಾಡಿಸುತ್ತದೆ ಎನ್ನುವಂತೆ ಆಗಿದೆ, ಕೆಲವು ಕಡೆಗಳಲ್ಲಿ ಹತ್ತು ವರ್ಷಗಳವರೆಗೆ ಒಂದೇ ಜಾಗದಲ್ಲಿದ್ದರೆ ಇಂತಹವರನ್ನು ಬೇರೆ ಕಡೆಗೆ ವರ್ಗ ಮಾಡಬೇಕು ಎಂದು ಇದೆ. ಆದರೆ ಹಿಂದೆ ಇಲ್ಲಿ ಸ್ಕೂಲು ಬೋರ್ಡುಗಳಿದ್ದಾಗ ಇವರೆಲ್ಲಾ ಗುರುಗಳು ಎನ್ನುವ ಒಂದು ಭಾವನೆಯಿಂದ ಇವರೆಲ್ಲಾ ಒಂದೇ ಕಡೆ ಇರುವಂತಾಗಿದೆ ಸರಕಾರ ಇದರ ಕಡೆಗೆ ಗಮನಕೊಟ್ಟು ಸರಿಪಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ. ಎಲ್ಲರೂ ಹೀಗೆ ಮಾಡುತ್ತಾರೆ ಎಂದು ಹೇಳುತ್ತಿಲ್ಲ. ಕೆಲವು ಕಡೆಗಳಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಈ ರೀತಿ ಆಗಿದೆ. ಇವನ್ನೆಲ್ಲಾ ಸರಕಾರ ಸರಿಪಡಿಸಬೇಕು ಎಂದು ಕೇಳುತ್ತೇನೆ.

† ಶ್ರೀ ಎ. ಆರ್. ಬದರೀನಾರಾಯಣ್.—(ವಿದ್ಯಾ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಉಪಾಧ್ಯಾಯರುಗಳ ಟ್ರಾನ್ಸ್‌ಫರು ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಇಲ್ಲಿ ಮಾತನಾಡಿದ್ದಾರೆ. ಏತಕ್ಕೋಸ್ಕರ ಹೀಗೆ ಟ್ರಾನ್ಸ್‌ಫರು ಮಾಡತಕ್ಕ ಒಂದು ಅವಶ್ಯಕತೆ ಬಂತು ಎನ್ನುವ ಒಂದು ಹಿನ್ನಲೆಯನ್ನು ಇಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ನಮ್ಮ ಈ ಸರಕಾರ ಅಧಿಕಾರಕ್ಕೆ ಬಂದ ಕೂಡಲೇ ನಾನು ಅನೇಕ ಕಡೆಗಳಲ್ಲಿ ಪ್ರವಾಸ ಮಾಡಿದಾಗ ಸ್ಕೂಲುಗಳನ್ನು ಇನ್‌ಸ್ಪೆಕ್ಷನ್ ಮಾಡಿ ಬಂದಿದ್ದೇನೆ. ಅನೇಕ ಕಡೆಗೆ ಪ್ರವಾಸ ಹೋಗಿದ್ದೆ, ಧಾರವಾಡ ಜಿಲ್ಲೆಗೆ ಹೋಗಿದ್ದೆ, ಮಂಗಳೂರು ಜಿಲ್ಲೆಗೆ ಹೋಗಿದ್ದೆ, ಚಿಕ್ಕಮಗಳೂರು ಜಿಲ್ಲೆಗೆ ಹೋಗಿದ್ದೆ, ಧಾರವಾಡ ಜಿಲ್ಲೆಗೆ ಹೋದಾಗ ಅಲ್ಲಿ ಕೆಲವು ತಂದೆ ತಾಯಿಗಳು ನನ್ನ ಕಡೆಗೆ ಬಂದು ಇಲ್ಲಿನ ಶಾಲೆಗಳಲ್ಲಿ ಪಟ್ಟ ಭದ್ರ ಹಿತಗಳು ಆಗಿ ಇಲ್ಲಿನ ಶಾಲೆಗಳಲ್ಲಿ ಕೆಲಸಗಳೇ ಆಗುತ್ತಿಲ್ಲ ಮತ್ತು ಉಪಾಧ್ಯಾಯರುಗಳು ಮಕ್ಕಳಿಗೆ ಸರಿಯಾಗಿ ಪಾಠ ಹೇಳಿಕೊಡುತ್ತಿಲ್ಲ. ಇದರಿಂದ ನಾಲ್ಕನೇ ವರ್ಗದ ಹುಡುಗರು ಕೂಡ ಸರಿಯಾಗಿ ಪಾಠ ಕಲಿಯಲು ಆಗುತ್ತಿಲ್ಲ, ಇಂತಹ ಶಿಕ್ಷಕರನ್ನು ಬೇರೆ ಕಡೆಗೆ ವರ್ಗ ಮಾಡಬೇಕು ಮತ್ತು ಒಳ್ಳೆಯ ಉಪಾಧ್ಯಾಯರುಗಳನ್ನು ಇಲ್ಲಿ ಕಳುಹಿಸಬೇಕೆಂದು ಸಲಹೆ ಮಾಡಿದರು. ಇದೇ ರೀತಿ ಚಿಕ್ಕಮಗಳೂರು ಜಿಲ್ಲೆಯಲ್ಲೂ ದೂರುಗಳು ಬಂದವು ಮತ್ತು ಕೆಲವು ಕಡೆಗಳಲ್ಲಿ ಉಪಾಧ್ಯಾಯರುಗಳು ಒಂದೇ ಕಡೆಯಲ್ಲಿ ಸುಮಾರು 15-20 ವರ್ಷಗಳಿಂದಲೂ ಇದ್ದಾರೆ, ಇಂತಹವರನ್ನು ಬದಲಾಯಿಸುವುದು ಸೂಕ್ತವಾಗಿದೆ ಎನ್ನುವ ಮಾತನ್ನು ಅನೇಕ ಕಡೆಗಳಲ್ಲಿ ನನಗೆ ಹೇಳಿದರು. ಇದೂ ಅಲ್ಲದೆ ನಮ್ಮ ಈ ಅಸೆಂಬ್ಲಿಯಲ್ಲಿ ಹಾಗೂ ಕೌನ್ಸಿಲ್‌ನಲ್ಲಿರುವ ಸದಸ್ಯರುಗಳು ಉಪಾಧ್ಯಾಯರುಗಳು ಒಂದೇ ಕಡೆ ಬಹಳ ಕಾಲ ಇರಕೂಡದು, ಹಾಗೆ ಇದ್ದರೆ ಇದರಿಂದ ವಿದ್ಯಾಭ್ಯಾಸದ ಪ್ರಗತಿಗೆ ಧಕ್ಕೆಯಾಗುತ್ತದೆ ಎನ್ನುವ ವಿಚಾರಗಳೂ ಬಂದವು. ಇದೇ ರೀತಿಯಾದ ಅಭಿಪ್ರಾಯಗಳು ಪತ್ರಿಕೆಗಳಲ್ಲಿ ಹಾಗೂ ಸಾರ್ವಜನಿಕ ಸಭೆಗಳಲ್ಲಿ ಕೂಡ ಬಂದುವು. ಇದರಿಂದ ಕೆಲವು ಉಪಾಧ್ಯಾಯರುಗಳಿಗೆ ತೊಂದರೆಯಾಗಬಹುದು. ಕೆಲವು ಕಡೆ ಉಪಾಧ್ಯಾಯರುಗಳು ಬಹಳ ಚೆನ್ನಾಗಿ ಕೆಲಸಗಳನ್ನು ಮಾಡುತ್ತಿದ್ದಾರೆ. ಅದೂ ತಿಳಿದಿದೆ. ಆದರೆ ಒಂದು ತತ್ವವನ್ನು ಅಥವಾ ನೀತಿಯನ್ನು ಅನುಸರಿಸುವಾಗ ಕೆಲವರಿಗೆ ತೊಂದರೆಗಳಾಗಬಹುದು. ಅನೇಕ ಕಡೆಗಳಲ್ಲಿ 20—25 ವರ್ಷಗಳ ಕಾಲ ಒಂದೇ ಊರಿನಲ್ಲಿರುವ ಉಪಾಧ್ಯಾಯರುಗಳೂ ಇದ್ದಾರೆ. ಇದರ ಬಗ್ಗೆ ಸರಕಾರ ವಿಮರ್ಶೆ ಮಾಡಿ ಹತ್ತು ವರ್ಷಗಳ ಕಾಲ ಒಂದೇ ಕಡೆ ಇರುವ ಉಪಾಧ್ಯಾಯರುಗಳನ್ನು ಬೇರೆ ಕಡೆಗೆ ವರ್ಗ ಮಾಡಬೇಕು ಮತ್ತು ಇದನ್ನು ಒಂದು ಫೇಸ್ಡ್ ಪ್ರೋಗ್ರಾಂ

ಪ್ರಕಾರ ಮಾಡಬೇಕೆಂದು ಆಯಾ ಅಧಿಕಾರಿಗಳಿಗೆ ಸೂಚನೆಗಳನ್ನೂ ಕೊಡಲಾಯಿತು. ಇದರ ಬಗ್ಗೆ ಇಲ್ಲಿ ಕೆಲವರು ಐದು ವರ್ಷಕ್ಕೂ ಕಡಿಮೆ ಕೆಲಸ ಮಾಡಿರುವ ಅಧಿಕಾರಿಗಳನ್ನು ವರ್ಗಮಾಡ ಮಾಡಿದ್ದಾರೆ, ಗಂಡ ಹೆಂಡತಿ ಒಂದೇ ಕಡೆ ಇರುವವರನ್ನು ಬೇರೆ ಕಡೆಗೆ ವರ್ಗ ಮಾಡಿದ್ದಾರೆಂಗ ಎಂದೂ ಹೇಳಿದರು. ಸಾಮಾನ್ಯವಾಗಿ ಯಾರ ಮೇಲಾದರೂ ದೂರುಗಳು ಬಂದರೆ ಅಂತಹಾಕ ಕಡೆಗಳಲ್ಲಿ ಸರಕಾರ ವಿಚಾರ ಮಾಡುತ್ತದೆ. ಇದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರಾಡ ಹೇಳಿದ ಮಾತನ್ನೂ ನಾನೂ ಒಪ್ಪುತ್ತೇನೆ. ಯಾವ ಉದ್ದೇಶದಿಂದಲೂ ಇಲ್ಲಿ ವರ್ಗ ಮಾಡುತ್ತಿಲ್ಲಾದ ಮತ್ತು ಇನ್ನೊಬ್ಬರಿಗೆ ತೊಂದರೆ ಮಾಡಬೇಕೆಂದು ಮಾಡುತ್ತಿಲ್ಲ. ಆ ರೀತಿ ಮಾಡುತ್ತಿಲ್ಲ ಎನ್ನುವುದನ್ನು ಇಲ್ಲಿ ಘಂಟಾಘೋಷವಾಗಿ ಹೇಳಬಲ್ಲೆ. ಇದರಲ್ಲಿ ಎಲ್ಲವನ್ನೂ ಜನರಲೈಸ್ ಮಾಡಿ ಹೇಳುವುದು ಸರಿಯಾದುದಲ್ಲ. ಇದನ್ನು ಮಾಡುವಾಗ ಎಲ್ಲೋ ಒಂದು ಅಥವಾ ಎರಡು ಕಡೆಗಳಲ್ಲಿ ನ್ಯೂನತೆಗಳು ಆಗಿರಬಹುದು. ಅಂತಹ ವಿಚಾರಗಳನ್ನು ನಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸಬಹುದು.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಮಾನ್ಯ ಮಂತ್ರಿಗಳ ಗಮನಕ್ಕೆ ಇವೊತ್ತಿನ ಪ್ರಜಾವಾಣಿಯಲ್ಲಿ ಬಂದಿರುವ ಸಮಾಚಾರ ತರುತ್ತೇನೆ. 'ಛೂ ಬಾಣದಲ್ಲಿ ಈ ರೀತಿ ಬಂದಿದೆ :—

''ಜನರಲ್ ಟ್ರಾನ್‌ಫರ್ ಗುಲ್ಬರ್ಗಾ ಜಿಲ್ಲೆಯಲ್ಲಿ ಆಗಿರುವ ಬಗ್ಗೆ ಹೇಳುತ್ತಾ, ಆ ದಿಢೀರ್ ಅನುಕಂಪ ಎಂಬುದಕ್ಕೆ ಅರ್ಥ ವಿವರಣೆ ನೀಡುತ್ತ ಚಿತ್ರಗುಪ್ತ ಹಾಗೆಂದರೆ 'ದಿಢೀರ್' ಕೈ ಬಿಸಿ 'ಅಥವಾ 'ಕ್ಷಿಪ್ರಕಾದಚಾಣ 'ದ ಫಲ ಎಂದು ತಿಳಿಸುತ್ತಾನೆ..........ಇತ್ಯಾದಿ ಇತ್ಯಾದಿ ಎಂದು ಹೇಳಿದ್ದಾರೆ. ಇದರ ಬಗ್ಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ನಡೆದಿರುವುದರ ಸ್ಪಷ್ಟೀಕರಣವನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಯೇ ?

ಶ್ರೀ ಎ. ಆರ್. ಬದರಿನಾರಾಯಣ್.—ಎಲ್ಲವೂ ಕಾಂಚಾಣದ ಮೂಲಕವೇ ನಡೆಯುತ್ತದೆ ಎಂದು ಶ್ರೀ ವಾಟಾಳ್ ನಾಗರಾಜ್ ಹೇಳುವುದನ್ನು ನಾನು ಒಪ್ಪುವುದಿಲ್ಲ. ಇದರಲ್ಲಿ ತಪ್ಪು ಮಾಡಿದ್ದವರನ್ನು ನಾನು ಡಿಫೆಂಡ್ ಮಾಡುವುದಕ್ಕೆ ಹೋಗುತ್ತಿಲ್ಲ. ತಪ್ಪುಗಳಾಗುವುದೇ ಇಲ್ಲ ಎಂದೂ ಹೇಳುವುದಿಲ್ಲ. ಸಾಮೂಹಿಕವಾಗಿ ಟ್ರಾನ್ಸ್‌ಫರುಗಳನ್ನು ಮಾಡುವಾಗ ಅಲ್ಲಿ ಇಲ್ಲಿ ಒಂದೆರಡು ಕಡೆಗಳಲ್ಲಿ ಕೆಲವು ನ್ಯೂನತೆಗಳು ಆಗಿರಬಹುದು. ಅಂತಹ ವಿಚಾರಗಳನ್ನು ಸರಕಾರದ ಗಮನಕ್ಕೆ ತಂದರೆ ಅವುಗಳನ್ನು ಸರಿಮಾಡೋಣ, ವಿದ್ಯಾಭ್ಯಾಸದ ಪದ್ಧತಿ ಈಗ ಸರಿಯಾಗಿಲ್ಲ, ಇದನ್ನು ಬದಲಾಯಿಸಬೇಕು ಎಂದು ಸಲಹೆ ಕೊಡುತ್ತಾರೆ. ಇದರ ಬಗ್ಗೆ ವಿಚಾರಮಾಡಿ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡರೆ ಅದು ಲಂಚದ ಪ್ರಭಾವದ ಮೇಲೆ ಟ್ರಾನ್ಸ್‌ಫರ್ ಮಾಡಿದರು ಎಂದು ಇಲ್ಲಿ ಹೇಳುತ್ತಾರೆ. ಯಾವುದಾದರೂ ಒಂದು ನೀತಿಯನ್ನು ಅನುಸರಿಸುವಾಗ ಇಂತಹ ಬದಲಾವಣೆಗಳನ್ನು ಮಾಡಬೇಕಾಗಿ ಬರುತ್ತದೆ.

3-30 P.M.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಜಾವಾಣಿ ಪತ್ರಿಕೆಯಲ್ಲಿ ಆ ರೀತಿ ಬರೆದಿರಬೇಕಾದರೆ ಅದರಲ್ಲಿ ಸ್ವಲ್ಪವಾದರೂ ಸತ್ಯಾಂಶ ಇರಬಹುದು. ಆದ್ದರಿಂದ ಅದನ್ನು ತಾವು ಅಲ್ಲಗಳೆಯ ಬಾರದು.

ಶ್ರೀ ವಾಟಾಳ್ ನಾಗರಾಜ್.—ಅದರಲ್ಲಿ ರೇಟ್ ಕೂಡ ಕೊಟ್ಟಿದ್ದಾರೆ. ಒಬ್ಬರಿಗೆ 400—500 ರೂಪಾಯಿ ಇರಬಹುದು ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಅದನ್ನೇ ಎಷ್ಟು ಸಲ ಹೇಳುತ್ತೀರಿ ; ಅವರೂ ಸಹ ಅದನ್ನು ಓದಿದ್ದಾರೆ. ಅವರ ಮನೆಗೂ ಪತ್ರಿಕೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಅವರು ಓದಿಲ್ಲ.

ಶ್ರೀ ಎ. ಆರ್. ಬದರಿನಾರಾಯಣ್.—ನಾನು ಓದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಹಾಗಿದ್ದರೆ ಮೊದಲು ಏನಿದೆ ಎಂಬುದನ್ನು ಹೇಳಿ.

ಶ್ರೀ ಎ. ಆರ್. ಬದರಿನಾರಾಯಣ್.—ಬಿಜಾಪುರ ಜಿಲ್ಲೆಯಲ್ಲಿ 588 ಜನರನ್ನು ವರ್ಗ ಮಾಡಲಾಗಿದೆ. ಇವರಲ್ಲಿ 10 ವರ್ಷಕ್ಕೆ ಮೇಲ್ಪಟ್ಟು ಸರ್ವಿಸ್ ಆಗಿರುವವರು 423. 25 ಕೇಸ್‌ಗಳಲ್ಲಿ ಗಂಡಹೆಂಡತಿ ಇಬ್ಬರೂ ಕೆಲಸದಲ್ಲಿ ಇದ್ದಿದ್ದರಿಂದ ಟ್ರಾನ್ಸ್‌ಫರ್ ಮಾಡಿದೆ. ಇನ್ನುಳಿದ 142 ಕೇಸಸ್‌ನಲ್ಲಿ ಸೀರಿಯಸ್ ಕಂಪ್ಲೈಂಟ್ಸ್ ಇದ್ದುದ್ದರಿಂದ ವರ್ಗ ಮಾಡಲಾಯಿತು. ಪ್ರತಿಯೊಂದು ವರ್ಗದಲ್ಲಿಯೂ ಸಕಾರಣಗಳು ಇವೆ. ಇವರನ್ನು ವರ್ಗ ಮಾಡಬೇಕೇ ಬೇಡವೇ, ಇವರು ಸರ್ಕಾರೀ ನೌಕರರೇ ಅಥವಾ ಅಲ್ಲವೇ ಎಂಬುದೆಲ್ಲಾ ನಿಗದಿಯಾಗಬೇಕಾಗಿದೆ, ಅಲ್ಲಿಯವರೆಗೂ ಇವರನ್ನು ವರ್ಗ ಮಾಡಬಾರದು ಎಂಬ ನೀತಿಯನ್ನು ಸರ್ಕಾರ ಒಪ್ಪುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಈ ವಿಷಯವನ್ನು ಈ ಸಭಾನಾಯಕರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ ಯಾರು 10 ವರ್ಷಕ್ಕೆ ಮೇಲ್ಪಟ್ಟು ಸರ್ವಿಸ್ ಮಾಡಿರುತ್ತಾರೋ, ಯಾರು ಊರಲ್ಲಿ ಪಾರ್ಟಿ ಬೆಳೆಸುತ್ತಾರೋ, ಯಾರ ಮೇಲೆ ಕ್ರಿಮಿನಲ್ ಕೇಸ್ ಇರುತ್ತದೋ, ಯಾರು ದುಡ್ಡು ತಿಂದಿರುತ್ತಾರೋ, ಯಾರಿಂದ ರಿಜಲ್ಟ್ ಚೆನ್ನಾಗಿ ಬರುತ್ತಿರುವುದಿಲ್ಲವೋ ಅಂತಹವರನ್ನು ವರ್ಗ ಮಾಡುವುದರಲ್ಲಿ ನಮ್ಮ ಆಕ್ಷೇಪವಿಲ್ಲ. ಆದರೆ ನಮ್ಮಂತಹವರು ಏನಾದರು ವರ್ಗ ಮಾಡಬೇಕು ಎಂದು ಬರೆದರೆ ಅದಕ್ಕೆ ಗಮನ ಕೊಡಬೇಡಿ. ಏಕೆಂದರೆ ಕೆಲವರು ಒಳ್ಳೆಯದಕ್ಕೂ ಬರೆಯಬಹುದು, ಕೆಲವರು ಕೆಟ್ಟದ್ದಕ್ಕೂ ಬರೆಯಬಹುದು. ಆದ್ದರಿಂದ ಅಂಥಾದ್ದಕ್ಕೆ ಗಮನ ಕೊಡಬೇಡಿ. ಈಗ ತಾವು ಕೆಲವರ ಮೇಲೆ ಕಂಪ್ಲೈಂಟ್ಸ್ ಬಂದಿದ್ದರಿಂದ ವರ್ಗ ಮಾಡಲಾಯಿತು ಎಂದು ಹೇಳಿದಿರಿ. ಕಂಪ್ಲೈಂಟ್ ಮಾಡಿದವರು ಯಾರು ಯಾರು ಎಂಬುದನ್ನು ಹೇಳಲಿಲ್ಲ? ಹಿಂದಿನಿಂದಲೂ ಈ ವರ್ಗ ಮಾಡುವುದು ನಡೆದುಕೊಂಡು ಬಂದಿದೆ. ಆದರೆ ಸಾಮೂಹಿಕವಾಗಿ ವರ್ಗ ಮಾಡಿರುವುದು ಮತ್ತು ಬೃಹತ್‌ಸಂಖ್ಯೆಯಲ್ಲಿ ಮಾಡಿರುವುದು ತಮ್ಮ ಕಾಲದಲ್ಲಿ ಆ ರೀತಿ ಆಗಬಾರದಿತ್ತು ಎಂದೇ ನಾವು ಹೇಳುತ್ತಿರುವುದು. ಅದೂ ಕೂಡ ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಆಗಿದೆ.

Sri A. R. BADARINARAYANA.—I Want to know whether the hon. Membsr wants a teacher who has stayed in a particular village for 10 years should be transferred or not ?

Sri H. D. DEVE GOWDA.—My question is : 'Why is this done only in respect of Bijapur District ? Why not do this in Hassan and other Places.' It is seen this type of mass transfers are done in Bijapur, Dharwar and Belgaum Districts. I request the Hon. Minister to please let me know how many transfers have been effected in Hassan. Kindly verify again from the respective Deputy Director of Public Instruction and give accurate information to this House. Do not kindly jump to conclusions. You are only giving the information relating to Dharwar, Bijapur and Belgaum. I made this allegation concerning your Department in regard to the entire State. We are going to meet on the 14th instant. Please call for the information from all the Deputy Directors of Public Instruction, as to whether they have obeyed the instructions of the Government in regard to transfer of those persons who have put in more than 10 years.

Sri A. R. BADARINARAYANA.—I can give you figures in regard to Dharwar.

Sri VIRUPAKSHA M. GHADI.—Wdy is it not applicable to Dharwar-Hubli Corporation area ? Nobody has been transferred from the Corporation area at all.

Sri A. R. BADARINARAYANA.—I will look into it.

Dharwar : Out of 9,049 teachers, 660 persons have been transferred and all of them have stayed for ten years or more in their own village. It is for this House to consider whether such transfers should

be done or not. So, I would like to bring to the notice of this House, Madam Speaker, that there is no political motive behind these transfers. It is under the instructions of Government that they have been transferred. Some irregularities might have been committed here and there and if such things are brought to the notice of the Government, certainly action will be taken against the concerned. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು, ಗ್ರಾಮಾಂತರ ಪ್ರದೇಶಗಳಲ್ಲಿ ಉಪಾಧ್ಯಾಯರುಗಳು ವಾಸ ಮಾಡುವುದಕ್ಕೆ ಮನೆಗಳು ಇಲ್ಲ ಎಂಬುದಾಗಿ. ಆ ವಿಚಾರದಲ್ಲಿ ಮುಖ್ಯಮಂತ್ರಿಗಳು ಯಾವ ರೀತಿಯಲ್ಲಿ ಮಾಡಬೇಕು ಎಂಬುದನ್ನು ಯೋಚನೆ ಮಾಡುತ್ತಿದ್ದಾರೆ. ಈಗ ಕೇವಲ ಟೀಚರ್ಸ್ ಬಗ್ಗೆ ಏತಕ್ಕೆ ಪ್ರಸ್ತಾಪ ಬಂತು. ಅವರ ಜೊತೆಗೆ ಎನ್.ಜಿ.ಒಗಳು ಇಲ್ಲವೆ ? ಅವರಿಗೂ ವರ್ಗ ಇಲ್ಲವೇ ? Why is it that only the teachers are high-lighted ; it is perhaps because they are an intelligent class, they approach the hon. Members and represent things to them.

ಶ್ರೀ ಎಚ್. ಡಿ. ದೇವೇಗೌಡ.—ಟೀಚರ್ಸ್ ಬಗ್ಗೆ ನಮಗೆ ಆಸಕ್ತಿ ಹೆಚ್ಚಿದೆ ಎಂಬ ಭಾವನೆ ಬೇಡ. ಈಗ ಎರಡನೇ ದರ್ಜೆಯ ಗುಮಾಸ್ತರನ್ನು ಗ್ರಾಮಾಂತರ ಪ್ರದೇಶಗಳಿಗೆ ವರ್ಗ ಮಾಡಿದರೆ ಅವರಿಗೆ ಮನೆಗಳು ಸಿಗದೆ ಕಷ್ಟವಾಗುತ್ತಿದೆ. ಈಗ ಎಷ್ಟೋ ಕಡೆಗಳಲ್ಲಿ ಶಾಲೆಗಳಿಗೆ ಸೂಕ್ತ ಕಟ್ಟಡಗಳು ಇಲ್ಲದೆ ದೇವಸ್ಥಾನದಲ್ಲಿ ನಡೆಯುತ್ತಿದೆ. ಇದರ ಕಡೆಗೆ ಸರ್ಕಾರದವರು ಗಮನ ಕೊಡಬೇಕು. ಮನೆಗಳು ಸಿಗದಿದ್ದರೆ ಗುಡಿಸಲಲ್ಲಿ ವಾಸ ಮಾಡುತ್ತಾರೆ. ಆದರೆ ಇದರ ಬಗ್ಗೆ Certain policy should be laid down. ಯಾರ ಬಗ್ಗೆಯೂ ಸಂಶಯ ಬೇಡ. ಈಗ ತಾವು ಮಾಡಿರತಕ್ಕಂಥ ಸಾಮೂಹಿಕ ವರ್ಗದ ಬಗ್ಗೆ ನಾವು ಹೇಳುತ್ತಿದ್ದೇವೆ. ನಮ್ಮ ಜೊತೆಗೆ ತಮ್ಮ ಪಕ್ಷದ ಸದಸ್ಯರು ಸಹ ಹೇಳುತ್ತಿದ್ದಾರೆ.

Sri A. R. BADARINARAYANA.—Did I not mention that it was done under specific policy, *i.e.*, transfers to be effected after ten years' stay in a particular place ?

† ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಇದರಲ್ಲಿ ಮಾನ್ಯ ಸದಸ್ಯರು ಮಾತನಾಡಿದ ಅಭಿಪ್ರಾಯ ನಾನು ತಿಳಿದುಕೊಂಡ ಹಾಗೆ ವರ್ಗ ಮಾಡುವುದಕ್ಕೆ ವಿರೋಧ ಇಲ್ಲ. ಒಂದೇ ಕಡೆ 10-15 ವರ್ಷ ಇದ್ದು ಬೇರೆ ಕಡೆಗೆ ವರ್ಗ ಆಗದೆ ಇರುವುದು ಸರಿಯಲ್ಲ ಎಂಬುದು ತಮ್ಮ ಭಾವನೆ ಇರಬಹುದು ಎಂದು ನಾನು ತಿಳಿದುಕೊಳ್ಳುತ್ತೇನೆ. ಆ ರೀತಿಯಿಂದ ಕಾನೂನು ಎಲ್ಲರಿಗೂ ಅನ್ವಯವಾಗಬೇಕು. ಅದನ್ನು ಅನ್ವಯ ಮಾಡುವುದಕ್ಕೆ ನಮ್ಮದು ಏನೂ ಅಭ್ಯಂತರ ಇಲ್ಲ, ತಮ್ಮದೂ ಅಭ್ಯಂತರ ಇಲ್ಲ. ಅದರಂತೆ ಗುಲ್ಬರ್ಗಾದಲ್ಲಿ ಆಗಲಿ, ಬೆಂಗಳೂರಿನಲ್ಲಿ ಆಗಲಿ ಯೂನಿಫಾರಮ್ ಆಗಿ 10 ವರ್ಷದ ಮೇಲೆ ಸರ್ವಿಸ್ ಆದವರು ಇದ್ದರೆ ಅವರನ್ನು ವರ್ಗ ಮಾಡಬೇಕು. ನಾರ್ಮಲ್ ಆಗಿ ಇರುವುದು ಮೂರು ವರ್ಷ ಎಂದು ; ಕೆಲವು ಮಾನ್ಯ ಸ್ನೇಹಿತರು ಅದರಲ್ಲಿಯೂ ಶ್ರೀಮಾನ್ ಚೆನ್ನಪ್ಪನವರು ಇಷ್ಟೇ ವರ್ಷ ಸರ್ವಿಸ್ ಆಗಿರಬೇಕು ಎಂಬುದಕ್ಕೆ ಏನಾದರು ಕಾನೂನು ಇದೆಯೇ ಎಂದು ಕೇಳಿದರು. ಅದಕ್ಕೆ ಕಾನೂನು ಇದೆ. ಕಾನೂನಿನಲ್ಲಿ ನಾರ್ಮಲ್ ಆಗಿ ಮೂರು ವರ್ಷ ಎಂದು ಮೊದಲಿನಿಂದಲೂ ಇದೆ. ಅದನ್ನು ಹೊಸದಾಗಿ ಮಾಡಬೇಕಾಗಿಲ್ಲ. Normally, an official will be in one office for a period of three years. There are some special departments where they may be retained for more than three years. ನಾನ್ ಗೆಜೆಟೆಡ್ ಅಧಿಕಾರಿಗಳು ಒಂದೇ ಡಿವಿಜನ್‌ನಲ್ಲಿ ಇರುತ್ತಾರೆ. ಅವರನ್ನು ಒಂದು ಡಿವಿಜನ್‌ನಿಂದ ಇನ್ನೊಂದು ಡಿವಿಜನ್‌ಗೆ ವರ್ಗ ಮಾಡುವುದಿಲ್ಲ. ಏಕೆಂದರೆ ಅವರಿಗೆ ಕಡಿಮೆ ಸಂಬಳ ಇರುತ್ತದೆ. ಆದ್ದರಿಂದ ಅವರು ಯಾವ ಡಿವಿಜನ್‌ನಲ್ಲಿ ಕೆಲಸಕ್ಕೆ ಸೇರಿರುತ್ತಾರೋ ಅದೇ ಡಿವಿಜನ್‌ನಲ್ಲಿ ಇರಬೇಕು ಎಂದು ನಿಯಮ ಇರುತ್ತದೆ. ಗಂಡ ಹೆಂಡತಿ ಇಬ್ಬರೂ ಸರ್ಕಾರೀ ನೌಕರಿಯಲ್ಲಿ ಇದ್ದರೆ ಅವರಿಗೆ ಕಡ್ಡಾಯವಾಗಿ ಹೀಗೆ ಮಾಡಬೇಕು ಎಂದು ನಿಯಮವೇನೂ ಇಲ್ಲ. ಸರ್ಕಾರ ತನ್ನ ಡಿಸ್ಕ್ರಿಷನ್ ಉಪಯೋಗಿಸಿ ಅವರ ಸಂಸಾರ ಒಡೆಯದ ಹಾಗೆ ಒಂದೇ ಕಡೆ ಅವರು ಇರುವ ಹಾಗೆ ಪ್ರಯತ್ನ ಮಾಡುತ್ತದೆ.

ಇನ್ನು ಮುಂದೆ ಸ್ವಲ್ಪ ಲಿಬರಲ್ ಆಗಿ ಇರುವುದಕ್ಕೆ ಪ್ರಯತ್ನ ಮಾಡೋಣ. ಪ್ರೈಮರಿ ಸ್ಕೂಲು ಉಪಾಧ್ಯಾಯರನ್ನು 10 ವರ್ಷಕ್ಕೆ ಮೇಲ್ಪಟ್ಟು ಯಾರು ಒಂದೇ ಕಡೆ ಇದ್ದಾರೆ ಅಂಥವರನ್ನು ಬೇರೆ ಕಡೆ ವರ್ಗಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಲಾಗಿದೆ. ಎಲ್ಲರಿಗೂ ಯೂನಿ

(ಶ್ರೀ ಡಿ. ದೇವರಾಜ ಅರಸ್)

ಫಾರಂ ಆಗಿ ಈ ರೂಲ್ಸ್ ಅನ್ನು ಅಪ್ಲೈ ಮಾಡಿ ಎಂದು ಮಾನ್ಯ ಸದಸ್ಯರು ಹೇಳಿದರು. ಒಂದು ಕಡೆ ಪಾಲಿಸಿಯನ್ನು ಜಾರಿಗೆ ತಂದು ಇನ್ನೊಂದು ಕಡೆ ಇದು ಜಾರಿಗೆ ಬಾರದೆ ಇದ್ದರೆ ಅದು ಸರಿಯಲ್ಲ. ಅದನ್ನು ನಾನು ಒಪ್ಪುತ್ತೇನೆ. ಎಲ್ಲಾ ಕಡೆಗಳಲ್ಲಿಯೂ ವರ್ಗಾ ಮಾಡೋಣ. ಏತನ್ಮಧ್ಯೇ ಅನೇಕ ಮಾನ್ಯ ಸದಸ್ಯರುಗಳು ಹೇಳಿದರು, ಈಗ ತಾತ್ಕಾಲಿಕವಾಗಿ ವರ್ಗಾವಣೆ ಮಾಡುವುದು ಬೇಡ, ಈಗಾಗಲೇ ಶಾಲೆಗಳು ಪ್ರಾರಂಭವಾಗಿವೆ, ಈಗ ಉಪಾಧ್ಯಾಯರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬೇಕಾದರೆ ತೊಂದರೆಯಾಗುತ್ತದೆ ಎಂದು. ಅದನ್ನೂ ಯೋಚನೆ ಮಾಡೋಣ. ಈ ಪಾಲಿಸಿಯನ್ನು ಯುನಿಫಾರಂ ಆಗಿ ಅಪ್ಲೈ ಮಾಡಿ ಎಂದರೆ ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದು ಬೇಕಾಗಿಲ್ಲ, ಯಾವ ಜಿಲ್ಲೆಯವರೇ ಆಗಲೀ ಕೆಲವರನ್ನು ವರ್ಗಾ ಮಾಡಿ ಕೆಲವರನ್ನು ಅಲ್ಲಿಯೇ ಬಿಡಬೇಕು ಎನ್ನುವ ಅಭಿಪ್ರಾಯ ಇಲ್ಲ. ಯಾವ ಒತ್ತಾಯಕ್ಕೂ ನಾವು ಮಣಿಯುವುದಿಲ್ಲ. ಇದರಲ್ಲಿ ಯಾವ ರಾಜಕೀಯ ಪ್ರಶ್ನೆಯೂ ಇರಲೇಬಾರದು, ಆ ರೀತಿ ಒಂದು ನೀತಿಯನ್ನು ಅನುಸರಿಸುತ್ತೇವೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ. ಏತನ್ಮಧ್ಯೆ ಇನ್ನೊಂದು ಮಾತು ಏನೆಂದರೆ ಈಗ ಕೆಲವು ಕಡೆ ಸರ್ವೇ ಸಾಧಾರಣವಾಗಿ ಅನೇಕ ಕಡೆಗಳಿಂದ ಮಾನ್ಯ ಮಂತ್ರಿಗಳು ಹೇಳಿದಹಾಗೆ ಶಿಕ್ಷಕರ ಮೇಲೆ ಸ್ಥಳೀಯವಾಗಿ ವಿಪರೀತ ಕಂಪ್ಲೆಂಟ್ ಬಂದಿರುತ್ತವೆ. ಅವರು ಆ ಸ್ಥಳಗಳಲ್ಲಿ 10 ವರ್ಷಕ್ಕೆ ಮೇಲ್ಪಟ್ಟು ಇರುವುದರಿಂದ ಕೆಲವು ರಾಜಕೀಯ ಚಟುವಟಿಕೆಗಳಿಗೂ ಸೇರಿಕೊಂಡಿದ್ದಾರೆ ಎನ್ನುವ ದೂರುಗಳೂ ಬಂದಿವೆ. ಕೆಲವು ಸಂದರ್ಭಗಳಲ್ಲಿ ಅವರು ತಮ್ಮ ಜೀವನ ವ್ಯಾಪಾರ ನಡೆಸಿಕೊಂಡು ನ್ಯಾಯ ಮಾಡಿಸುವುದು, ಅರ್ಜಿ ಬರೆಯುವುದು ಮುಂತಾದ ಚಟುವಟಿಕೆಗಳಲ್ಲಿ ತೊಡಗಿ ಸ್ಕೂಲು ಮಾಡಿದರೆ ಮಾಡುತ್ತಾರೆ ಬಿಟ್ಟರೆ ಬಿಡುತ್ತಾರೆ ಎನ್ನುವ ದೂರುಗಳು ಬಂದಿವೆ. ಕೆಲವು ಸಂದರ್ಭಗಳಲ್ಲಿ ಆಯಾ ಸ್ಥಳೀಯ ಮುಖಂಡರುಗಳಿಂದ ಅರ್ಜಿಗಳನ್ನು ಬರೆಸಿ ಅವರು ಚೆನ್ನಾಗಿ ಸ್ಕೂಲುಗಳನ್ನು ನಡೆಸುತ್ತಿದ್ದಾರೆ, ಇದಕ್ಕೆ ನಾವೇ ಸಾಕ್ಷಿ ಎಂದು ಆ ಊರಿನವರ ಕೈಯಲ್ಲಿ ಅರ್ಜಿಗಳನ್ನೂ ಬರೆಸುತ್ತಾರೆ. ಇಂಥಾ ದೂರುಗಳು ಬಂದಾಗ ಈ ಬಗ್ಗೆ ಯಾವ ರೀತಿ ಮಾಡಬೇಕು ಎಂಬದನ್ನು ಯೋಚನೆ ಮಾಡಿ ಮಾಡಬೇಕಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಕೂಲಂಕಷವಾಗಿ ಯೋಚನೆ ಮಾಡಿ ನಿಷ್ಪಕ್ಷಪಾತವಾಗಿ ಈ ಕೆಲಸವನ್ನು ಮಾಡುತ್ತಾರೆ, ಇದರಲ್ಲಿ ಪಕ್ಷಪಾತ ಮಾಡುವ ಪ್ರಶ್ನೆ ಇಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಈ ದೃಷ್ಟಿಯಿಂದ ಈ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ಒಂದು ನಿಲುವನ್ನು ಇಟ್ಟುಕೊಂಡು ಹೋಗುವುದು ಒಳ್ಳೆಯದು.

ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಯ್ಯನವರು ಈ ವರ್ಗಾವಣೆ ವಿಷಯದಲ್ಲಿ ಜಾತಿ ವಾದ ಬರುತ್ತಿದೆ ಎಂದು ಹೇಳಿದರು. ಅದು ಸರಿಯಲ್ಲ. ಇದರಲ್ಲಿ ಯಾವ ಜಾತೀ ವಾದವೂ ಇಲ್ಲ. ಇದರಲ್ಲಿ ಅಧಿಕಾರಿಗಳದೇ ಒಂದು ಜಾತಿ. ಆದ್ದರಿಂದ ಮಾನ್ಯ ಸದಸ್ಯರು ಆ ಜಾತಿಯ ವಿಚಾರವನ್ನು ಅಂಟಿಸಿಕೊಂಡು ಹೋಗುವುದು ಬೇಡ. ಈ ವರ್ಗಾವಣೆ ಎಲ್ಲರಿಗೂ ಪಾಲಿಸಿಯ ಪ್ರಕಾರವೇ ನಡೆಯಬೇಕಾಗಿದೆ. ಸರ್ಕಾರದ ನೀತಿಯನ್ನು ಏಕ ರೀತಿಯಲ್ಲಿ ಅನುಸರಿಸಲಾಗುವುದು. ಈ ವರ್ಗಾವಣೆಯಲ್ಲಿ ನಾವು ಯಾವುದೇ ರೀತಿಯ ಒತ್ತಾಯಕ್ಕೂ ನಾವು ಮಣಿಯುವುದಿಲ್ಲ ಎಂದು ನಾನು ಇಷ್ಟು ಮಾತ್ರ ಹೇಳುತ್ತೇನೆ.

(ii) *re*: Constitution of a fact finding Committee relating to the benefits procured by several Committees in the State :

† ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಈ ಸಭೆಯಲ್ಲಿ ಒಂದು ಪ್ರಸ್ತಾಪವನ್ನು ಮಾಡುವುದಕ್ಕೆ ಸೂಚನೆಯನ್ನು ಕೊಟ್ಟಿದೆ. ಈ ಸೂಚನೆ ತಮಗೆ ಗೊತ್ತಿರುವ ಹಾಗೆ ಒಂದು ಫ್ಯಾಕ್ಟ್ ಫೈಂಡಿಗ್ ಕಮಿಟಿ ನೇಮಕ ಮಾಡಬೇಕೆಂಬುದು. ಕಳೆದ 25 ವರ್ಷಗಳಿಂದ ಎಂದರೆ ನಮಗೆ ಸ್ವಾತಂತ್ರ್ಯ ಬಂದಮೇಲೆ ಈ ರಾಜ್ಯದಲ್ಲಿ ಹಾಗೂ ಈ ರಾಷ್ಟ್ರದಲ್ಲಿ ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಈಗಾಗಲೇ 3 ವರ್ಷ ಕಳೆದು 4ನೇ ವರ್ಷಕ್ಕೆ ಕಾಲು ಇಟ್ಟಿದ್ದೇವೆ. ಈ ಯೋಜನೆಗಳ ಫಲವನ್ನು ಲೂಟಿ ಮಾಡತಕ್ಕ ಕಾಲದಲ್ಲಿ ಕೇವಲ ಕೆಲವು ಕೋಮುಗಳು ಕೆಲವು ವರ್ಗಗಳು ಅದರ ಫಲವನ್ನು ಲೂಟಿ ಮಾಡುತ್ತಿವೆ ಎನ್ನತಕ್ಕಂಥಾ ರೀತಿಯಲ್ಲಿ ಈ ದೇಶದಲ್ಲಿ ಒಂದು ಭಾವನೆ ಬೆಳೆದಿದೆ. ಕಳೆದ ನಾಲ್ಕು ತಿಂಗಳಿಂದೀಚೆಗೆ ಅದರಲ್ಲೂ ರಾಜಕೀಯ ಸ್ವರೂಪ ಬದಲಾವಣೆ ಆದಮೇಲೆ ಈ ಒಂದು

ವಾದ ಹಬ್ಬಿದೆ. ಇದರ ಬಗ್ಗೆ ನಾವು ಸಾಕಷ್ಟು ವಿಷಯಗಳನ್ನು ತಿಳಿದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಈ ಸೂಚನೆಯನ್ನು ಈ ಸಭೆಯಮುಂದೆ ಮಂಡಿಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ನಮಗೆ ಸ್ವಾತಂತ್ರ್ಯ ಬಂದಮೇಲೆ ಕಳೆದ 25 ವರ್ಷಗಳಿಂದ ಪಂಚವಾರ್ಷಿಕ ಯೋಜನೆಗಳ ಫಲ ಎಲ್ಲಾ ಕೋಮುಗಳಿಗೂ ಸಿಕ್ಕಿಲ್ಲ ಎನ್ನತಕ್ಕಂಥಾ ಭಾವನೆ ಹೆಚ್ಚು ಮೂಡಿದೆ.

[Mr. DEPUTY SPEAKER in the Chair]

ಆದ್ದರಿಂದ ನಾನು ಮೊದಲೇ ಹೇಳಿದ ಹಾಗೆ ನನಗೂ ಸಹ ಇದರಲ್ಲಿ ತಿಳಿದುಕೊಳ್ಳಬೇಕಾದ ಆಸಕ್ತಿ ಹೆಚ್ಚು ಇದೆ. ಏಕೆಂದರೆ 25 ವರ್ಷಗಳಿಂದಲೂ ಕೆಲವು ವರ್ಗಗಳು ಮಾತ್ರ ಹೆಚ್ಚಿನ ಫಲಗಳನ್ನು ಅನುಭವಿಸುತ್ತಿವೆ ಎಂದು ಹೇಳತಕ್ಕದ್ದು ಅದು ಮುಂದುವರಿಯುತ್ತಲೇ ಇರುತ್ತದೆ. ಆದ್ದರಿಂದ ಈ ಒಂದು ಸಮಸ್ಯೆಯನ್ನು ಈಗಲಾದರೂ ಬಿಡುಗಡೆ ಮಾಡತಕ್ಕಂತಹ ಉದ್ದೇಶದಿಂದ ಈ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಮಾಡಲಿ ಎಂದು ಕೇಳಿದ್ದೇನೆ. ಅದಕ್ಕೋಸ್ಕರ ರಾಜ್ಯದಲ್ಲಿ ಯಾವ್ಯಾವ ಕೋಮಿನವರು ರಾಜ್ಯದಲ್ಲಿ ನಡೆದ ಪಂಚವಾರ್ಷಿಕ ಯೋಜನೆಗಳ ಮತ್ತು ಇತರ ಕಾರ್ಯಗಳ ಫಲವನ್ನು ಪಡೆದಿದ್ದಾರೆ ಎಂಬುದನ್ನು ತಿಳಿಯುವುದಕ್ಕೋಸ್ಕರ ಈ ಸೂಚನೆಯನ್ನು ಸಭೆಯ ಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಸಹ ಈ ಸಭೆಯಲ್ಲಿ ಭಾಷಣ ಮಾಡತಕ್ಕ ಕಾಲದಲ್ಲಿ ಕೆಲವು ಮಿತ್ರರು ಪ್ರಸ್ತಾಪ ಮಾಡಿದಂತಹ ಹಿನ್ನಲೆಯಲ್ಲಿ ಕೆಲವು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಅವತ್ತೇ ಅವರ ಗಮನವನ್ನು ಸೆಳೆಯಬೇಕೆಂದಿದ್ದೆ. ಆದರೆ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡತಕ್ಕಂತಹ ಕಾಲದಲ್ಲಿ ಒಂದು ಜಿಜ್ಞಾಸೆ ಮಾಡತಕ್ಕದ್ದು ಸರಿಯಲ್ಲ, ಮತ್ತು ಆ ಸಮಯದಲ್ಲಿ ಒಂದು ಕಹಿ ವಾತಾವರಣವನ್ನು ಉಂಟು ಮಾಡುವುದು ಸರಿಯಲ್ಲವೆಂದು ನಾನು ಅದರ ಬಗ್ಗೆ ಆಗಲೇ ಪ್ರಸ್ತಾಪ ಮಾಡುವುದಕ್ಕೆ ಹೋಗಲಿಲ್ಲ. ಮಾರನೆಯ ದಿವಸ ಒಂದು ಪತ್ರವನ್ನು ತಮ್ಮ ಮುಖಾಂತರ ಬರೆದು ಅವರಿಗೆ ಕಳಿಸಿದ್ದೇನೆ. ಅದರಲ್ಲಿ ಈ ರೀತಿಯಾಗಿ ತಾವು ಪ್ರಸ್ತಾಪ ಮಾಡಿದ್ದೀರಿ, ಮತ್ತು ಯಾವ ಕಾರಣದಿಂದ ಹಾಗೆ ಪ್ರಸ್ತಾಪ ಮಾಡಿದ್ದೀರಿ ಎಂದು ತಿಳಿಯಬೇಕಾಗಿದೆ ಎಂದು ಹೇಳಿದ್ದೇನೆ. ಕಾರಣ ಈ ರಾಜ್ಯದ ಆಡಳಿತವನ್ನು ಕಳೆದ 25 ವರ್ಷಗಳಿಂದಲೂ ಹೊಣೆಗಾರಿಕೆಯನ್ನು ಹೊತ್ತುಕೊಂಡು, ಆಡಳಿತವನ್ನು ನಡೆಸಿಕೊಂಡು ಬಂದ ಸನ್ನಿವೇಶವನ್ನು ನೋಡಿದರೆ ಕೇವಲ ಎರಡು ಕೋಮುಗಳವರು ಆಡಳಿತವನ್ನು ನಡೆಸಿಕೊಂಡು ಬಂದಿದ್ದಾರೆ. ಈ ಎರಡು ಕೋಮಿನವರು ಆಡಳಿತದಲ್ಲಿ ಬೇರೆಯವರ ಶೋಷಣೆಯನ್ನು ಎಷ್ಟು ಮಟ್ಟಿಗೆ ಮಾಡಿದ್ದಾರೆ, ಇದರಿಂದ ಬೇರೆಯವರಿಗೆ ಎಷ್ಟು ಅಘಾತವಾಗಿದೆ, ಮತ್ತು ಆ ಕೋಮಿನವರು ತಮ್ಮ ಸ್ವಾರ್ಥಕ್ಕಾಗಿ ಬೇರೆಯವರ ಶೋಷಣೆ ಎಷ್ಟು ಮಾಡಿದ್ದಾರೆಂಬುದನ್ನು ಕಂಡುಹಿಡಿಯುವುದಕ್ಕಾಗಿ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡುವುದು ಒಳ್ಳೆಯದು ಎಂದು ಇದನ್ನು ತಂದಿದ್ದೇನೆ. ಇವತ್ತು ರಾಜ್ಯದಲ್ಲಿ ಏನು ಒಂದು ಆರೋಪಣೆ ಇದೆ ಅದನ್ನು ನಿವಾರಣೆ ಮಾಡುವುದು ಸೂಕ್ತ. ಇದನ್ನು ಇಲ್ಲಿ ತಂದರೂ ಮಾನ್ಯ ಮುಖ್ಯಮಂತ್ರಿಯವರು ಅದರ ಮೇಲೆ ಏನು ಹೇಳಬಹುದೆಂಬುದು ನನಗೆ ಗೊತ್ತಿದೆ. "ಹೇಗೆ ನಾನು ಈ ವಿಷಯವನ್ನು ಸಂಗ್ರಹಣೆ ಮಾಡಲಿ" ಎಂದು ಹೇಳುತ್ತಾರೆ. ಅದೇ ರೀತಿ ಇವತ್ತು ಜಾತಿಯ ಹೆಸರನ್ನೇ ಕಿತ್ತು ಹಾಕಿರುವಾಗ, ಮತ್ತು ಕಾನ್ಸ್ಟಿಟ್ಯೂಷನ್ ಪ್ರಕಾರ ಅದು ಸರಿಯಲ್ಲವೆಂದಿರುವಾಗ ಅದರ ಬಗ್ಗೆ ಅಂಕಿ ಅಂಶಗಳನ್ನು ಒದಗಿಸುವುದಕ್ಕೆ ಒಂದು ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಮಾಡುವುದು ಕಷ್ಟವೆಂದು ಹೇಳಬಹುದು. ಆದರೆ ಈ ದೊಡ್ಡ ಆರೋಪಣೆ ಬೆಳೆದಿದೆಯಲ್ಲ, ಅದಕ್ಕೆ ತಮ್ಮ ಉತ್ತರದಲ್ಲಿ ಸಮರ್ಪಕವಾಗಿ ಹೇಳಬೇಕು. 25 ವರ್ಷಗಳಿಂದ ರಾಜ್ಯದ ಆಡಳಿತದಲ್ಲಿ ಫಲವನ್ನು ಹೆಚ್ಚಾಗಿ ಯಾರು ಉಂಡಿದ್ದಾರೆಂಬುದು ಇತ್ಯರ್ಥವಾಗದಿದ್ದರೆ ಬಹುಶಃ ಅದು ಹೀಗೆಯೇ ಉಳಿಯುತ್ತದೆ. ಕಳೆದ 25 ವರ್ಷಗಳಲ್ಲಿ ಅನೇಕ ಅನಾಹುತಗಳು ಆಗಿವೆ. ಆದರೆ ಅದಕ್ಕೆ ಕಾರಣರು ಯಾರು ಮತ್ತು ಇದು ಸರಿಯಾಗಿ ವಿತರಣೆಯಾಗದಿರುವುದಕ್ಕೆ ಕಾರಣರು ಯಾರು ಎಂಬುದರ ಬಗ್ಗೆ ನಮಗೆ ವಿವರಣೆ ಬೇಕಾಗಿದೆ. ಆ ಒಂದು ದೃಷ್ಟಿಯಿಂದ ಇದರಲ್ಲಿ ಸ್ಪಷ್ಟೀಕರಣ ಮಾಡಬೇಕೆಂಬ ದೃಷ್ಟಿಯಿಂದ ಇದನ್ನು ತಂದಿದ್ದೇನೆ, ಇದನ್ನು ಮಾನ್ಯ ಮುಖ್ಯಮಂತ್ರಿಯವರು ತಾತ್ವಿಕವಾಗಿ ಒಪ್ಪುತ್ತಾರೆಂದು ನನ್ನ ಭಾವನೆ. ಈಗ ದೇಶದಲ್ಲಿ ಬಹುಸಂಖ್ಯಾತ ಕೋಮಿಗೆ ಸೇರಿರತಕ್ಕ ಜನರು ಅಲ್ಪಸಂಖ್ಯಾತರಿಗೆ ಬಹಳ ದ್ರೋಹ ಮಾಡಿದ್ದಾರೆ, ಶೋಷಣೆ ಮಾಡಿದ್ದಾರೆ, ಅನ್ಯಾಯ ಮಾಡಿದ್ದಾರೆ, ಮತ್ತು ಅವರ ಸ್ವಾರ್ಥಕ್ಕಾಗಿ ಸ್ವಜನ ಪಕ್ಷಪಾತ ಮಾಡಿದ್ದಾರೆ ಎಂಬ ಆರೋಪಣೆಯನ್ನು ನಾವು ಬಹಳ ಜೋರಾಗಿ ಕೇಳುತ್ತಿದ್ದೇವೆ. ಅದರ ಫಲವೇ ಚುನಾವಣೆಯಲ್ಲಿ ಬಂದ ಫಲಿತಾಂಶವೆಂದು ಕಾಣುತ್ತದೆ. ಈ ಒಂದು ವಾತಾವರಣ ನಮ್ಮ ದೇಶದಲ್ಲಿ ಬೆಳೆದಿದೆ. ತಾವೇ ತಮ್ಮ ಭಾಷಣದಲ್ಲಿ ಹೇಳಿದ್ದೀರಿ-ಈ ತರಹ ದೂರುಗಳು ಬಂದಿವೆ, ಆದ ಕಾರಣ ಕೆಲವು ಕಮ್ಯುನಿಟಿಗಳಿಗೆ ರಕ್ಷಣೆ ಕೊಡುವಾಗ ಬೇರೆಯವರಿಗೆ ಅಸಮಾ-

(ಶ್ರೀ ಹೆಚ್. ಡಿ. ದೇವೇಗೌಡ)

ಧಾನ ಆಗಬಹುದು ಎಂದು ಹೇಳಿದ್ದಿರಿ. ಆದರೆ ಇವತ್ತು ನಾನು ತಮ್ಮ ಮೇಲೆ ನೇರವಾದ ಆಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ 25 ವರ್ಷಗಳ ಆಡಳಿತವನ್ನು ನೀವು ಒಬ್ಬರೇ ಹೊತ್ತಿಲ್ಲ. ತಾವು ಕೆಲವು ಕಾಲ ಮಂತ್ರಿಮಂಡಲದ ಸದಸ್ಯರಾಗಿ ಕೆಲಸಮಾಡಿರಬಹುದು. ರಾಜ್ಯದ ಆಡಳಿತದ ಹೊಣೆಯನ್ನು ಪೂರ್ತಿಯಾಗಿ ತಾವು ಹೊತ್ತಿರುವ ಸನ್ನಿವೇಶ ಇದ್ದಿದ್ದರೆ ಆ ಆರೋಪಣೆಯನ್ನು ಪೂರ್ತಿಯಾಗಿ ನಿಮ್ಮ ಮೇಲೆ ಹೊರಿಸುತ್ತಿದ್ದೆ. ಆದರೆ ತಾವು ಕೇವಲ ಎರಡು ಮಂತ್ರಿಮಂಡಲದಲ್ಲಿ ಸದಸ್ಯರಾಗಿ ಕೆಲಸ ಮಾಡಿದ್ದೀರಿ. ಆದ್ದರಿಂದ ಆ ಆರೋಪಣೆಯನ್ನು ನಿಮ್ಮ ಮೇಲೆ ಹೊರಿಸುವುದಕ್ಕೆ ತಯಾರಾಗಿಲ್ಲ. ಇಷ್ಟು ಹೇಳುವಾಗ ಕೆಲವು ವಿಷಯಗಳನ್ನು ವಿಶದವಾಗಿ ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಇವತ್ತು ರಾಜ್ಯದಲ್ಲಿ ಒಂದು ಮೈನಾರಿಟಿ ಪ್ರಶ್ನೆ ಬಂದಿದೆ. ಇವತ್ತು ಯಾರು ಮೈನಾರಿಟಿಗಳು ? ಅದನ್ನು ಮುಖ್ಯಮಂತ್ರಿಯವರು ದಯವಿಟ್ಟು ತಿಳಿಸಬೇಕು. ಇದರ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಅಂಕಿ ಅಂಶಗಳ ಸಂಗ್ರಹಣೆ ಆಗಿದೆಯೇ ? ಬ್ರಾಹ್ಮಣರು ಮೈನಾರಿಟಿಗಳೇ ಕ್ರಿಶ್ಚಿಯನರು ಮೈನಾರಿಟಿಗಳೇ ; ಹರಿಜನರು ಮೈನಾರಿಟಿಗಳೇ, ಮುಸಲ್ಮಾನರು ಮೈನಾರಿಟಿಗಳೇ ಒಕ್ಕಲಿಗರು ಮೈನಾರಿಟಿಗಳೇ, ಅಥವಾ ಲಿಂಗಾಯಿತರು ಮೈನಾರಿಟಿಗಳೇ ಎಂಬುದರ ಬಗ್ಗೆ ವಿವರಣೆ ಅಗತ್ಯವಾಗಿದೆ. ಏಕೆಂದರೆ 25 ವರ್ಷಗಳ ಅಡತಳಿದಲ್ಲಿ ಆದಂತಹ ಕಹಿ ಅನುಭವ ಮತ್ತು ಕೆಲವರು ಸ್ವಾರ್ಥಕ್ಕೋಸ್ಕರ ರಾಜಕೀಯ ಲಾಭವನ್ನು ಮಾಡತಕ್ಕ ಉದ್ದೇಶದಿಂದ ಮಾಡತಕ್ಕ ಕೆಲಸ ಒಂದು ಗೊಬೆ ಕೆಲಸ. ಇವತ್ತು ಮೈನಾರಿಟಿಯವರ ಶೋಷಣೆ ನಡೆಸಿದಂತವರ ಮೇಲೆ ಗಧಾ ಪ್ರಹಾರ ಮಾಡಬೇಕು. ಈ ರೀತಿಯ ವಾತಾವರಣವನ್ನು ಕಲ್ಪನೆ ಮಾಡತಕ್ಕದ್ದು ಸರಿಯಲ್ಲ. ಇದಕ್ಕೆ ಯಾರು ಹೊಣೆಗಾರರು ? ಅರ್ಟಿಕಲ್ 16(4)ರಲ್ಲಿ ಮೈನಾರಿಟಿಗಳಿಗೆ ರಕ್ಷಣೆ ಕೊಡಬೇಕೆಂದು ಇದೆ. ಆಲ್ ಇಂಡಿಯಾ ಲೆವೆಲ್ಲಿನಲ್ಲಿ ಒಕ್ಕಲಿಗರು ಮತ್ತು ಲಿಂಗಾಯಿತರು ಮೈನಾರಿಟಿಗಳೇ ಅಥವಾ ಮೆಜಾರಿಟಿಗಳೇ ಎಂಬುದನ್ನು ಇತ್ಯರ್ಥ ಮಾಡಬೇಕು. ಕಳೆದ 25 ವರ್ಷಗಳಲ್ಲಿ ಯಾರ್ಯಾರು ಎಷ್ಟು ಫಲವನ್ನು ಉಂಡಿದ್ದಾರೆ ಎಂಬುದನ್ನು ವಿಚಾರಣೆ ಮಾಡಬೇಕಾಗಿದೆ. ಮೊನ್ನೆ ಉತ್ತರ ಕೊಡತಕ್ಕ ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಐ.ಎ ಎಸ್.ನಲ್ಲಿ ಒಕ್ಕಲಿಗರು ನಾಲ್ಕು ಜನ ಇದ್ದಾರೆಂದು ಹೇಳಿದರು. ಇದರಲ್ಲಿ ನಾವು ಏನು ಅರ್ಥ ಮಾಡುವುದಕ್ಕಾಗುತ್ತದೆ? ಇದನ್ನು ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಶನ್‌ನವರು ಸೆಲೆಕ್ಟ್ ಮಾಡುತ್ತಾರೆ. ಅವರು ಸಹ ರಾಜ್ಯಾಂಗದ ಒಳಗೆ ಕೆಲಸ ಮಾಡಬೇಕಾಗುತ್ತದೆ. ರಾಷ್ಟ್ರದ ಹಿತರಕ್ಷಣೆಯ ಹೊಣೆಯನ್ನು ಕೇಂದ್ರ ಸರ್ಕಾರದವರು ಹೊರಬೇಕಾಗುತ್ತದೆ. ಏಕೆಂದರೆ ರಾಜ್ಯಾಂಗದ ಪ್ರಕಾರ ಕೆಲಸ ಮಾಡತಕ್ಕ ಕಾಲದಲ್ಲಿ ಅವರು ಎಲ್ಲರ ರಕ್ಷಣೆಯನ್ನು ಮಾಡತಕ್ಕ ಜವಾಬ್ದಾರಿ ಅವರಿಗೆ ಇದೆ. ಇವತ್ತು ಅವರು ಒಂದು ವರ್ಗವನ್ನು ಸೃಷ್ಟಿ ಮಾಡಿದ್ದಾರೆ. ಅದು ಯಾವುದೆಂದರೆ, ಐ.ಎ.ಎಸ್ ಮತ್ತು ಐ.ಸಿ.ಎಸ್ ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿಯೂ ಒಂದು ಭಾವೈಕ್ಯತೆಯು ಬೆಳೆಯಲಿ ಎಂಬ ನೀತಿಯನ್ನು ಇಟ್ಟುಕೊಂಡು ಈ ತರದ ಹುದ್ದೆಗಳನ್ನು ಉಂಟು ಮಾಡಿದ್ದಾರೆ.

4-00 P. M.

ನಾನು ಕೇಳುತ್ತೇನೆ, ಇದು ಎಲ್ಲರ ಕೋಮುಗಳಿಗೂ ಸೇರತಕ್ಕದ್ದು. ಇದನ್ನು ಮಾಡುವುದರಲ್ಲಿ ಸಾಕಷ್ಟು ವಿಚಕ್ಷಣೆಯಿಂದ ಕೆಲಸಮಾಡುವ ಹೊಣೆಗಾರಿಕೆ ಹೊರಬೇಕಾಗಿತ್ತು. ಈ ಕಾರ್ಯ ಕೇವಲ ಯಾರಿಗೂ ಮೀಸಲಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್‌ಗೆ ರಿಜರ್ವ್ ಮಾಡುವ ಬಗ್ಗೆ ಆರ್ಟಿಕಲ್ 16(64) ರಲ್ಲಿ ಹೇಳಿದೆ. ಆದರ ಹೊರತು ಬೇರೆ ಒಂದು ಸನ್ನಿವೇಶಕ್ಕೆ ಅವಕಾಶ ಇಲ್ಲವೇ ಇಲ್ಲ. ಇಂತಹ ಸನ್ನಿವೇಶದಲ್ಲಿ ಇದನ್ನು ಏಕೆ ಮಾಡಲಿಲ್ಲ? ಇವತ್ತು ಎಲ್ಲಿಯವರೆಗೆ ಹೋಗಿದ್ದಾರೆಂಬುದನ್ನು ಹೇಳುತ್ತೇನೆ. ಈ ರಾಜ್ಯದಲ್ಲಿ ಡಾ|| ನಾಗನಗೌಡರ ಕಮಿಟಿ ವರದಿ 1960ರಲ್ಲಿಯೇ ಆಗಿದೆ. ಅವರು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಒಕ್ಕಲಿಗರು 3ನೇ ಜಾಗಕ್ಕೆ ಬರುತ್ತಾರ. ಎರಡನೆಯ ಜಾಗಕ್ಕೆ ಬರುವುದಿಲ್ಲ. ನಮಗಿಂತಲೂ ಮುಂದೆ ಬಂದಿರುವ ಜನಾಂಗವೂ ಇದೆ. ಮೊದಲನೆಯ ಸ್ಥಾನಕ್ಕೆ ಲಿಂಗಾಯಿತರು ಬರುತ್ತಾರೆ, ಪುಟ 45ನ್ನು ನೋಡಿ. ನಾಗನಗೌಡ ಕಮಿಟಿ ವರದಿಯಲ್ಲಿ ಎರಡನೆಯ ಸ್ಥಾನಕ್ಕೆ ಷೆಡ್ಯೂಲ್ ಕ್ಯಾಸ್ಟ್‌ನವರು ಬರುತ್ತಾರೆ. ಇದನ್ನು ಜನಸಂಖ್ಯೆ ಆಧಾರದ ಮೇಲೆ ಅವರು ಮಾಡಿರುವುದನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಬಹುಸಂಖ್ಯಾತರಾದ ನಾವು ಮೂರನೆಯ ಸ್ಥಾನಕ್ಕೆ ಬಂದಿದ್ದೇವೆ. ಇದನ್ನು ಏತಕ್ಕೋಸ್ಕರ ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ, ಆಲ್ ಇಂಡಿಯಾದಲ್ಲಿ ಮೈನಾರಿಟೀಸ್ ಯಾರು ಎಂಬ ಬಗ್ಗೆ ಇತ್ಯರ್ಥವಾಗಬೇಕು. ಇವತ್ತು ಬಹುಶಃ ಆಲ್ ಇಂಡಿಯಾ ರಾಷ್ಟ್ರೀಯ

ಅಂಕಿಅಂಶಗಳನ್ನು ನೋಡಿದರೆ, ಬಹುಶಃ ನೀವು ಯಾವ ಸ್ಥಾನದಲ್ಲಿ ನಿಲ್ಲುತ್ತೀರೋ ಹೇಳುವುದಕ್ಕಾಗುವುದಿಲ್ಲ. ಹಳೆಯ ಮೈಸೂರನ್ನು ಬಿಟ್ಟರೆ, ಅನೇಕ ಮೈನಾರಿಟಿ ಜನಗಳನ್ನು ಇವತ್ತೂ ಮೆಜಾರಿಟಿ ಜನವೆಂದು ಹೇಳುತ್ತಾರೆ. ಯಾರ್ಯಾರು ಇಡೀ ದೇಶದಲ್ಲಿ ಬೇಸಾಯ ಮಾಡುತ್ತಾರೆ ಅವರು ಅಗ್ರಿಕಲ್‌ಚರಿಸ್ಟ್ಸ್. ಅವರು ಜಾಸ್ತಿಯಾಗುತ್ತಾರೆ. ಹರಿಜನರಲ್ಲಿ ಕೆಲವರು ಉಳುಮೆ ಮಾಡುತ್ತಾ ಒಕ್ಕಲಿಗರಾದರು. ಅದು ಬಹಳ ದೊಡ್ಡಮಾತು. ಹರಿಜನರು ಒಕ್ಕಲಿಗರು, ನೀವು ಎಲ್ಲಾ ಉಳುವ ಜನರೇ. ಸೇಕಡ 18 ರಷ್ಟು ರಿಯಾಯತಿ ಇದೆ.

ಶ್ರೀ ಡಿ. ದೇವರಾಜ್ ಅರಸ್.—ಆಗಲೇ ಅವರಿಗೆಲ್ಲರಿಗೂ ಹೆಚ್ಚು ಜಮೀನು ಇದ್ದಿದ್ದರೆ ಆಗ ಅವರೂ ಅದಕ್ಕೆ ಒಪ್ಪಿಕೊಳ್ಳುತ್ತಿದ್ದರು.

ಶ್ರೀ ಎಚ್. ಡಿ. ದೇವೇಗೌಡ.—ಹಾಗಾದರೆ ನಿಮ್ಮನ್ನು ಈಗ ಕಟ್ ಮಾಡುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—ಷೆಡ್ಯೂಲ್ಡ್ ಕ್ಯಾಸ್ಟ್ಸ್, ಷೆಡ್ಯೂಲ್ಡ್ ಟ್ರೈಬ್ಸ್ ಅವರನ್ನು ಯುಗಯುಗಾಂತರದಿಂದ ಊರಿನ ಆಚೆ ಇಟ್ಟಿದ್ದಾರಷ್ಟೆ.

ಶ್ರೀ ಎಚ್. ಡಿ. ದೇವೇಗೌಡ.—ಅನೇಕ ವರ್ಷಗಳಿಂದಲೂ ಒಕ್ಕಲಿಗರು ಶೂದ್ರ ಜಾತಿಯಲ್ಲಿಯೇ ಇದ್ದರು. ಕೆಲವು ಬ್ರಾಹ್ಮಣರೂ..........

ಶ್ರೀ ಡಿ. ದೇವರಾಜ ಅರಸ್.—ಐದನೆಯ ಪಂಚವಾರ್ಷಿಕ ಯೋಜನೆಯ ವರ್ಷಕ್ಕೆ ಈಗ ಷೆಡ್ಯೂಲ್ಡ್ ಟ್ರೈಬ್ಸ್ ಎಂದು ನೀವು ಮಾಡಿವಿರಿ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಆ ರೀತಿ ಮಾಡುವುದಾದರೆ, ನಿಮ್ಮನ್ನು ನಾನು ವೆಲ್‌ಕಂ ಮಾಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ನಾನು ಮುಖ್ಯಮಂತ್ರಿಯಾಗಿ ಇಂಟರ್‌ವೀನ್ ಮಾಡಿದಾಗ ಒಪ್ಪುವುದಾದರೆ ಅದಕ್ಕೆ ನಾನು ಸಹ ವೆಲ್‌ಕಂ ಮಾಡುತ್ತೇನೆ.

Mr. DEPUTY SPEAKER.—Reference to Castes would generate lot of curiosity and even some heat. So let there be some restraint.

ಶ್ರೀ ಎಚ್. ಡಿ. ದೇವೇಗೌಡ.—ನಾವು ಯಾವ ಜಾತಿಯವರಿಗೂ ನೋವು ಮಾಡಬಾರದೆಂಬ ದೃಷ್ಟಿಯಿಂದ ಈ ಒಂದು ನಿರ್ಣಯವನ್ನು ಸ್ಪಷ್ಟೀಕರಣಮಾಡುತ್ತಿದ್ದೇನೆ. ಇದನ್ನು ತಂದಿರುವ ಉದ್ದೇಶವೂ ಅದೇ. ಇವತ್ತು ಏನೋ ಈ ರಾಜ್ಯದಲ್ಲಿ ಒಂದು ಮನೋಭಾವನೆ ಬೆಳೆಯುತ್ತಿದೆ. 25 ವರ್ಷಗಳಲ್ಲಿ ಯಾವುದೋ ಕೆಲವು ಕೋಮುಗಳು ಆಡಳಿತದ ಫಲವನ್ನು ಅನುಭವಿಸುವುದಕ್ಕೆ ಸಾಧ್ಯವಾಗದೇ ಅದರ ಬಗ್ಗೆ ಸರಕಾರದ ಅಂಕಿಅಂಶಗಳನ್ನು ಸಂಗ್ರಹಮಾಡಬೇಕೆಂಬ ದೃಷ್ಟಿಯಿಂದ ಇದನ್ನು ತಂದಿದ್ದಾರೆ ಎಂದು. ಒಂದುವೇಳೆ ಇಂತಹ ಕೆಲಸಮಾಡಿದರೆ ಆ ಕೋಮುಗಳಿಗೆ ಕೆಲಕಾಲ ಎಲ್ಲತರಹದ ಸವಲತ್ತುಗಳನ್ನು ಒದಗಿಸುವಂಥ ಕಾರ್ಯ ನೆರವೇರಿ ಅವರನ್ನು ಒಂದು ಮಟ್ಟದಲ್ಲಿ ನಿಲ್ಲಿಸೋಣ ಎಂದು ಹೇಳಿ ಅದನ್ನು ಈಗ ಸ್ಪಷ್ಟೀಕರಿಸುತ್ತೇನೆ. ಈ 25 ವರ್ಷಗಳ ಕಾಲದಲ್ಲಿ ಒಂದು ಜಾತಿ ಬಹಳವಾಗಿ ಮುಂದುವರಿದಿದೆ. ಯಾರನ್ನು ನೋಯಿಸಬೇಕೆಂಬ ದೃಷ್ಟಿಯಿಂದ ನಾನು ಮಾತನಾಡುತ್ತಾ ಇಲ್ಲ. ಎಲ್ಲಾ ರಾಜ್ಯಗಳಲ್ಲಿ ಇದು ಇದೆ. ಆಡಳಿತದಲ್ಲಿ ಯಾವುದಾದರೊಂದು ಜಾತಿ ಅಧಿಕಾರವನ್ನು ಹೆಚ್ಚು ದುರುಪಯೋಗ ಮಾಡಿಕೊಂಡಿದ್ದರೆ ಅದಕ್ಕೆ ನಾವು ಸ್ವಲ್ಪ ಹಿಡಿತವನ್ನು ಹಾಕಬೇಕಾಗುತ್ತದೆ. ಲಿಂಗಾಯಿತರೇ ಆಗಲೀ, ಒಕ್ಕಲಿಗರೇ ಆಗಲಿ ಕೆಲವುಕಾಲ ಅವರ ಮುಂದೋಟ ನಿಲ್ಲಬೇಕಾಗಿದೆ. ಬೇರೆಯವರು ಮುಂದುವರಿದವರ ಸಮಾನತ್ವಕ್ಕೆ ಬರುವವರೆಗೆ ತಾವು ಇದನ್ನು ಸಹಿಸಬೇಕಾಗುತ್ತದೆ. ಆ ಒಂದು ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇವತ್ತು ನಾನು ಮುಖ್ಯಮಂತ್ರಿಯವರಿಗೆ ಪತ್ರ ಬರೆಯುವುದರಲ್ಲಿ ಕೆಲವು ಅಂಕಿಅಂಶಗಳನ್ನು ಸಂಗ್ರಹಣೆ ಮಾಡಿಕೊಂಡು ಹೇಳಿದ್ದೇನೆ. ಈ 25 ವರ್ಷಗಳಲ್ಲಿ ಸರ್ಕಾರದಲ್ಲಿ ಜಮೀನುಗಳನ್ನು ಮಂಜೂರು ಮಾಡಿದ್ದರೆ, ಒಕ್ಕಲಿಗರು, ಲಿಂಗಾಯಿತರು, ಹರಿಜನರು ಅಥವಾ ಇನ್ನು ಯಾವ ಬೇರೆ ಕೋಮುಗಳವರು ಆ ರೀತಿ ಪಡೆದಿದ್ದರೆ ಅದರ ಬಗ್ಗೆ ಒಂದು ವಿವರಣೆಯನ್ನು ಕೊಡಿ ಎಂದು ನಾನು ಕೇಳಿದ್ದೇನೆ. ಕೆಲವು ಸಾಲಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಈ 25 ವರ್ಷಗಳಲ್ಲಿ ಡೆವಲಪ್‌ಮೆಂಟ್ ಲೋನ್, ಹೌಸ್‌ಬಿಲ್ಡಿಂಗ್ ಲೋನ್, ಅಗ್ರಿಕಲ್‌ಚರಲ್ ಡೆವಲಪ್‌ಮೆಂಟ್ ಲೋನ್, ಇದರ ಬಗ್ಗೆ ವಿವರಣೆಕೊಡಬೇಕು. ಯಾವ್ಯಾವ ಜಾತಿಗಳವರು ಎಷ್ಟೆಷ್ಟು ಸಾಲಗಳನ್ನು ಪಡೆದಿದ್ದಾರೆ, ಅವರ ಪುರೋಭಿವೃದ್ಧಿಗೆ ಇವರು ಶ್ರಮಪಟ್ಟಿದ್ದಾರೆಂಬುದು ಬೇಕು. ಅದರ ಜೊತೆಗೆ ಇಂಡಸ್ಟ್ರಿಯಲ್ ಡೆವಲಪ್‌ಮೆಂಟಿಗೆ ಎಷ್ಟು ಜನರು ಹೊಸದಾಗಿ ಇಂಡಸ್ಟ್ರಿಯಲ್ ಎಸ್ಟೇಟುಗಳಲ್ಲಿ ಹೊಸ

(ಶ್ರೀ ಎಚ್. ಡಿ. ದೇವೇಗೌಡ)

ಕೈಗಾರಿಕೆಗಳನ್ನು ಸ್ಥಾಪಿಸಿ ಯಾವ್ಯಾವ ಜಾತಿಗಳವರು ಒಂದೊಂದರಲ್ಲಿ ಎಷ್ಟೆಷ್ಟು ಲಾಭ ಪಡೆದಿದ್ದಾರೆಂಬ ಬಗ್ಗೆ ವಿವರಣೆ ಆಗಬೇಕು. ಕಳೆದ 25 ವರ್ಷಗಳಲ್ಲಿ ಸರ್ಕಾರೀ ಹುದ್ದೆಗಳಲ್ಲಿ ಇರತಕ್ಕ ಕ್ಲಾಸ್-3, ಕ್ಲಾಸ್-2, ಕ್ಲಾಸ್-1, ಹಾಗೂ ಕ್ಲಾಸ್-4 ವರ್ಗದವರೂ ಮತ್ತು ಎಂ.ಎ.ಎಸ್., ಐ.ಎ.ಎಸ್. ಹಾಗೂ ಐ.ಪಿ.ಎಸ್. ಈ ಎಲ್ಲಾ ವರ್ಗದವರು ಯಾರ್ಯಾರು ಎಷ್ಟೆಷ್ಟು ಜನರು ಇಲ್ಲಿ ಇದ್ದಾರೆಂಬ ಬಗ್ಗೆ ವಿವರಣೆ ಆಗಬೇಕು. ಸ್ಟೇಟ್ ಆವರೇಜ್ ಸೇಕಡ 5ರಷ್ಟು ಇದ್ದೇವೆ. ಅದು ಈ ರಿಪೋರ್ಟ್‌ನಲ್ಲಿದೆ.

ನಮ್ಮ ಮುಖಂಡರು ಭದ್ರವಾದ ಕೆಲಸ ಮಾಡಿದರೆ ಅದಕ್ಕೆ ಅವರಿಗೆ ಛೀಮಾರಿ ಹಾಕಬೇಕು, ಧಿಕ್ಕಾರ ಹಾಕಬೇಕು ಎಂದು ನೀವು ಛೀಮಾರಿ ಹಾಕಿ ಧಿಕ್ಕಾರಮಾಡಿ ಅವರಿಗೆ ದ್ರೋಹ ಮಾಡಿದ್ದೀರಿ. ನಮ್ಮವರು ಅಂತಹ ಅಭದ್ರವಾದ ಕೆಲಸಮಾಡಿದ್ದರೆ ಛೀಮಾರಿ ಹಾಕಬೇಕಾಗುತ್ತದೆ. ಅಂಥಾ ಪಾಪದ ಕೆಲಸವನ್ನು ಅವರು ಮಾಡಿದ್ದರೆ ಅಥವರ ಬಗ್ಗೆ ಈ ದಿವಸ ಒಂದು ಚರ್ಚೆಯಾಗಲೇ ಬೇಕು. ಅದಕ್ಕಾಗಿ ಸಾಕಷ್ಟು ವಿಚಾರಗಳ ಸಂಗ್ರಹಣೆ ಆಗಲೆಂದು ಹೇಳುತ್ತಿದ್ದೇನೆ. ಈ ದಿವಸ ಈ ವಿಚಾರಗಳ ಬಗ್ಗೆ ಒಂದು ಇಡೀ ರಾಷ್ಟ್ರದಲ್ಲೇ ಅಂಧೋಳನ ನಡೆಯುತಕ್ಕಂಥ ಕಾಲ ಬಂದಿದೆ. ಅಲ್ಪಸಂಖ್ಯಾತರ ಸೌಲಭ್ಯಗಳನ್ನು ಬಹುಸಂಖ್ಯಾತ ಕೋಮುಗಳವರು ಕಳೆದ 25 ವರ್ಷಗಳಿಂದ ಅನುಭವಿಸಿದ್ದಾರೆಂಬ ಆಪಾದನೆಗೆ ತಿರುಳಿದ್ದರೆ ಹುರುಳಿದ್ದರೆ ಸರ್ಕಾರದವರು ಅದಕ್ಕೆ ಆಗತ್ಯವಾದ ಅಂಕೀಅಂಶಗಳನ್ನು ಸಂಗ್ರಹ ಮಾಡಲಿ. ಅದನ್ನು ಬಿಟ್ಟು ಸುಮ್ಮನೆ ಯಾರದೋ ತಲೆಯ ಮೇಲೆ ಸುಮ್ಮನೆ ಗೂಬೆ ಕೂರಿಸುವುದಕ್ಕೆ ಹೀಗೆಲ್ಲಾ ಆಪಾದನೆಗಳನ್ನು ಮಾಡುವುದು ಸರಿಯಲ್ಲ. ಒಂದು ವೇಳೆ ಕೆಲವು ಮೇಜರ ಕಮ್ಯೂನಿಟಿಗಳು ಅಂಥ ಪಾಪದ ಕೆಲಸ ಮಾಡಿದ್ದರೆ ಇಡೀ ದೇಶಕ್ಕೆ ಈ ವಿಚಾರದಲ್ಲಿ ಒಂದು ಹೊಸ ಔಟ್‌ಲುಕ್ ಬರಬೇಕಾಗಿರುವುದರಿಂದ, ತಪ್ಪನ್ನು ಮಾಡಿದ್ದರೆ ಅವರು ಅದಕ್ಕೆ ತಕ್ಕ ಫಲವನ್ನು ಊಟ ಮಾಡಲೇ ಬೇಕು. ಈ ದಿವಸ ನನಗೆ ಅಂಕಿ ಸಂಖ್ಯೆಗಳ ಸಮೇತ ಯಾವ ಕೋಮಿನವರಲ್ಲಿ ಎಷ್ಟೆಷ್ಟು ಜನರು ಸರ್ಕಾರಿ ನೌಕರಿಯಲ್ಲಿ ಪ್ರಾತಿನಿಧ್ಯ ಪಡೆದಿದ್ದಾರೆಂಬ ವಿಷಯ ಗೊತ್ತಿದೆ. ಈ ದಿವಸ ಸಹಾ ಕೆಲವು ಕಮ್ಯೂನಿಟಿಗಳು ಸರ್ಕಾರಿ ಉದ್ಯೋಗದಲ್ಲಿ ಶೇ 66ರಷ್ಟು ಪ್ರಾತಿನಿಧ್ಯ ಹೊಂದಿರತಕ್ಕ ವಿಷಯ ನನಗೆ ಗೊತ್ತಿದೆ, ಈ ದಿವಸ ರಾಜ್ಯದಲ್ಲಿ ಲಂಬಾಣಿ ಮತ್ತು ಅರಸಗಳ ಕೋಮು ಇವು ಬಹಳ ಅಲ್ಪಸಂಖ್ಯಾತ ಕೋಮುಗಳೆಂಬುದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಹೀಗೇ ಇರತಕ್ಕ ಇನ್ನೂ ಕೆಲವು ಮೈನರ್ ಕೋಮುಗಳಿಗೆ ಇಲ್ಲಿಯತನಕ ರಾಜಕೀಯ ಸೌಲಭ್ಯಗಳು ದೊರೆತ್ತಿಲ್ಲ. ಕಳೆದ 25 ವರ್ಷಗಳ ಆಡಳಿತದಲ್ಲಿ ಜನರಿಗೆ ಉಂಟಾದ ಪ್ರತಿಫಲ ಏನೆಂದರೆ ಈ ಒಂದು ಜಾಗ್ರತಿ ಅವರಲ್ಲಿ ಬೆಳೆದು ಬಂದಿದೆ. ಇಂಥ ಒಂದು ಹೊಸ ಭಾವನೆ ಅವರಲ್ಲಿ ಉದಯಿಸಿದೆ. ಈಗ 25 ವರ್ಷಗಳು ಕಳೆದ ನಂತರ ಮೈನಾರ್ಟಿ ಕಮ್ಯೂನಿಟಿಯ ಒಬ್ಬರು ಇಲ್ಲಿ ಮುಖ್ಯಮಂತ್ರಿಗಳಾಗುವುದಕ್ಕೆ ಅವಕಾಶ ದೊರೆತಿದೆ. 'ಆದರೆ ನಾನು ಈ ನನ್ನ ನಿರ್ಣಯದ ವ್ಯಾಪ್ತಿಯನ್ನು ಕೇವಲ ರಾಜ್ಯಗಳಿಗೆ ಮಾತ್ರ ಸೀಮಿತ ಮಾಡದೆ ಇದನ್ನು ಇದರ ವ್ಯಾಪ್ತಿಯನ್ನು ಕೇಂದ್ರ ಸರ್ಕಾರಕ್ಕೂ ಅನ್ವಯ ಮಾಡಬೇಕೆಂದು ಹೇಳತಕ್ಕವನಿದ್ದೇನೆ. ಈ ನಮ್ಮ ರಾಜ್ಯ ಒಂದರಲ್ಲಿ ಮಾತ್ರ ರಾಜ್ಯಾಡಳಿತ ಕೆಲವು ಕೋಮುಗಳ ಹಿಡಿತದಲ್ಲಿವೆ ಎಂಬ ಭಾವನೆ ಕೆಲವರ ಮನಸ್ಸಿನಲ್ಲಿರುವುದರಿಂದ, ಇಲ್ಲಿಯವರೆಗೂ ನಡೆದಿರತಕ್ಕ ಕೇಂದ್ರ ಸರ್ಕಾರದಲ್ಲಿ ಅಲ್ಲಿನ ಆಡಳಿತ ಯಾರ ಕೈಲಿತ್ತು, ಯಾವ ಕೋಮಿನವರ ಕೈಲಿತ್ತು, ಯಾವ ಯಾವ ಕೋಮಿಗೆ ಅಲ್ಲಿನ ಮಂತ್ರಿಮಂಡಲದಲ್ಲಿ ಪ್ರಾತಿನಿಧ್ಯ ಎಷ್ಟೆಷ್ಟು ಕೊಡಲಾಗಿದೆ ಎಂಬುದನ್ನೂ ಕೂಡ ನಾವು ಸಂಗ್ರಹಣೆ ಮಾಡಬೇಕಾಗಿದೆ. ಕೇಂದ್ರ ಮಂತ್ರಿಮಂಡಲದಲ್ಲಿ ಬುಡುಬುಡಿಕೆ, ಒಕ್ಕಲಿಗ, ಬ್ರಾಹ್ಮಣ, ಲಿಂಗಾಯಿತ, ಮುಸಲ್ಮಾನ್ ಇತ್ಯಾದಿ ಜಾತಿಯವರು, ಹರಿಜನರು ಇವರೆಲ್ಲಾ ಎಷ್ಟೆಷ್ಟು ಜನರಿದ್ದರು ಎಂಬುದನ್ನು ನಾವು ಅಂಕೀ ಅಂಶಗಳ ಸಮೇತ ಸಂಗ್ರಹಣೆ ಮಾಡಬೇಕಾಗಿದೆ. ಈ ಕಳೆದ 25 ವರ್ಷಗಳ ಅಂಕೀ ಅಂಶಗಳು ಕೇವಲ ರಾಜ್ಯಕ್ಕೆ ಮಾತ್ರ ಸೀಮಿತವಾದುದಲ್ಲ. ಇದು ಅಖಿಲ ಭಾರತಕ್ಕೆ ಸಂಬಂಧಪಟ್ಟ ವಿಷಯ. ಈ ಅಂಕೀಅಂಶಗಳನ್ನು ಆದಷ್ಟೂ ರಾಜ್ಯ ಸರ್ಕಾರದವರು ಸಂಗ್ರಹಣೆ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇದನ್ನು ಕೇವಲ ಒಂದು ಅನುಕೂಲಸಿಂಧುವಾಗಿ ಉಪಯೋಗ ಮಾಡುವುದು ಬೇಡ. ಕೇಂದ್ರ ಸರ್ಕಾರದವರು ತಪ್ಪು ಮಾಡಿದ್ದರೆ ಈ ಸಭೆಯಲ್ಲಿ ಒಂದು ನಿರ್ಣಯವನ್ನು ಮಾಡಿ ಕಳುಹಿಸೋಣ. ಸರ್ಕಾರದವರು ಈ ಎಲ್ಲಾ ಅಂಕೀ ಅಂಶಗಳನ್ನೂ ಸಂಗ್ರಹಣೆ ಮಾಡಬೇಕು. ಇಲ್ಲವೇ ಅವರು ಈ ಒಂದು ಧಾಟಿ ಅಥವಾ ಅವರ ಮಾತನಾಡತಕ್ಕ ಧೋರಣೆ ಏನಿದೆ ಅದನ್ನು ಅವರು ಬದಲಾಯಿಸಬೇಕು. ನಾನು ಇಲ್ಲಿ ಯಾವ ಒಂದು ಜಾತಿಯ

ಮೇಲೂ ಆರೋಪ ಮಾಡುತ್ತಿಲ್ಲ. ಅಂಥ ಒಂದು ಇರಾದೆಯೂ ನನಗಿಲ್ಲ. ಆದರೆ ನಾನು ಇದನ್ನೆಲ್ಲಾ ಏತಕ್ಕೆ ಹೇಳುತ್ತಿದ್ದೇನೆಂದರೆ ಈ ರಾಜ್ಯದ ಮುಖ್ಯಮಂತ್ರಿಗಳು—ರಾಜ್ಯದಲ್ಲಿರತಕ್ಕ ಒಕ್ಕಲಿಗ ಕೋಮಿನ ಮತ್ತು ಲಿಂಗಾಯಿತ ಕೋಮಿನ ಎಂದು ಈ ಕೋಮುಗಳ ಹೆಸರನ್ನು ಹಿಡಿದು ಹೇಳದಿದ್ದರೂ, ಕೆಲವು ಕೋಮುಗಳು ಆ ಹರಿಜನರಿಗೆ ಸಿಕ್ಕತಕ್ಕ ಅನುಕೂಲಗಳನ್ನೂ ಅಥವಾ ಸೌಲಭ್ಯಗಳನ್ನು ಆ ಕೋಮುಗಳು ಪಡೆದಿವೆ, ಈ ಹರಿಜನರ ಶೋಷಣೆ ಆಗಿದೆ ಎನ್ನತಕ್ಕ ಮಾತುಗಳನ್ನಾಡಿದ್ದಾರೆ. ಆದರೆ ಹಿಂದೆ ಈ ರಾಜ್ಯದಲ್ಲಿ ಮುಖ್ಯ ಮಂತ್ರಿಗಳಾಗಿದ್ದವರಲ್ಲಿ ಒಕ್ಕಲಿಗರ ಕೋಮಿಗೆ ಸೇರಿದ ಶ್ರೀಮಾನ್ ಕೆ. ಸಿ. ರೆಡ್ಡಿಯವರು, ಕೆ. ಹನುಮಂತಯ್ಯನವರೂ ಇದ್ದರು. ಇನ್ನು ಲಿಂಗಾಯಿತ ಕೋಮಿಗೆ ಸೇರಿದವರಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರು ಮತ್ತು ಶ್ರೀ ವಿರೇಂದ್ರಪಾಟಿಲರೂ ಇವರೆಲ್ಲಾ ಇದ್ದರು. ಇವರು ಅಂಥ ಶೋಷಣೆ ಮಾಡಿದ್ದರೆ ಅವರಿಗೆ ಛೀಮಾರಿ ಹಾಕೋಣ. ಅವರಿಂದ ಬೇರೆ ಕೋಮುಗಳವರಿಗೆ ಇಂಥ ಒಂದು ಅನ್ಯಾಯವಾಗಿದೆ ಅನಾನುಕೂಲ ಆಗಿದೆ ಅನ್ನತಕ್ಕ ಒಂದು ನಿರ್ಣಯಕ್ಕೆ ಬರಬೇಕಾದರೆ ನಮಗೆ ಈ ಕೆಲವು ಅಂಕೀ ಅಂಶಗಳು ಅತ್ಯಗತ್ಯ. ಅವುಗಳನ್ನು ಸರ್ಕಾರದವರು ಒಂದು ಸಮಿತಿಯನ್ನು ಮಾಡಿ ಒಂದು ವರ್ಷದ ಅವಧಿಯೊಳಗಾದರೂ ಶೇಖರಣೆ ಮಾಡುವಂತೆ ಮಾಡಬೇಕು. ಕಳೆದ 25 ವರ್ಷಗಳಲ್ಲಿ ಯಾವ ಯಾವ ಜಾತಿಗಳವರು ಏನೇನು ಅನುಕೂಲಗಳನ್ನು ಎಷ್ಟೆಷ್ಟು ಅನುಕೂಲಗಳನ್ನು ಪಡೆದಿದ್ದಾರೆ ಯಾವ ಯಾವ ಜಾತಿಗಳನ್ನು ಶೋಷಣೆ ಮಾಡಿದ್ದಾರೆ ಎಂಬ ಬಗ್ಗೆ ಅಗತ್ಯವಾದ ಅಂಕೀ ಅಂಶಗಳನ್ನು ಶೇಖರಣೆ ಮಾಡಬೇಕಾಗಿದೆ. ಮೊನ್ನೆ ಒಂದು ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಈ ಐ. ಎ. ಎಸ್. ದರ್ಜೆ ಅಧಿಕಾರಿಗಳು ರಾಜ್ಯದಲ್ಲಿ ಎಷ್ಟಿರಬಹುದು ಎಂಬ ವಿಷಯ ಎದ್ದಿದ್ದಾಗ ಸುಮಾರು ನಾಲ್ಕು ಜನ ಇರಬಹುದೆಂದು ಹೇಳಿದ್ದರು. ಅಂದರೆ ಸರ್ಕಾರದಲ್ಲಿ ಈ ವಿವರಗಳೆಲ್ಲಾ ಇರುತ್ತವೆಂದು ಗೊತ್ತಾಗುತ್ತದೆ. ಆದರೆ ಇಂಥ ಒಂದು ಗ್ರೇಡಿನಲ್ಲಿ ಒಂದೇ ಕೋಮಿಗೆ ಸೇರಿದ 85 ಜನರಿದ್ದರೆ ಅದನ್ನು ಒಂದು ಹೆಲ್ತಿ ಗ್ರೋತ್ ಎನ್ನುತ್ತೀರಾ ?

ಶ್ರೀ ಕೆ. ಪ್ರಭಾಕರ್.—'ಮೆರಿಟ್' ಅನ್ನತಕ್ಕ ಒಂದು ರೋಗ ಬೆಳೆದುಬಂದು ಅದು ಹಾಗಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಹಿಂದೆ ಬ್ಯಾಕ್‌ವರ್ಡ್ ಕಮಿಷನ್ ಎಂಬುದಾಗಿ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆ ವರದಿಯನ್ನು ನಾನು ನೋಡಿದ್ದೇನೆ. ಆದರೆ ನನ್ನಲ್ಲಿ ಇನ್ನೂ ಅಂಥ ಒಂದು ವಿಶಾಲವಾದ ಹೃದಯ ಅಂದರೆ ಬ್ರಾಂಡ್ ಔಟ್‌ಲುಕ್ ಬೆಳೆದು ಬಂದಿಲ್ಲ. ನನಲ್ಲಿ ಇನ್ನೂ ಆ ಸಂಕುಚಿತ ಮನೋಭಾವ ಇದ್ದೇ ಇದೆ. ಹೀಗೆ ವಿರೋಧಪಕ್ಷದ ನಾಯಕನಾಗಿದ್ದರೂ ಅಂಥ ಒಂದು ಭಾವನೆ ನನ್ನಲ್ಲಿ ಇನ್ನೂ ಇರುವುದರಿಂದ ನಾನು ದೇಶದಲ್ಲಿರತಕ್ಕ ಪ್ರಜೆಗಳಲ್ಲಿ ಕ್ಷಮಾಪಣೆ ಬೇಡುತ್ತೇನೆ. ಆದರೆ ವಿಧಿಯಿಲ್ಲದೆ ನಾನು ಈ ಚರ್ಚೆಯಲ್ಲಿ ಭಾಗವಹಿಸಬೇಕಾಗಿದೆ. ನಾನು ಇದರಲ್ಲಿ ಒಂದು ಅಂಶವನ್ನು ಸ್ಪಷ್ಟಪಡಿಸಬೇಕಾಗಿದೆ. ಆ ಶ್ರೀ ಕೆ. ಸಿ. ರೆಡ್ಡಿಯವರ ಅಥವಾ ಹನುಮಂತಯ್ಯನವರ ಇಲ್ಲವೇ ನಿಜಲಿಂಗಪ್ಪನವರ ಅಳಿಯನೋ ಅಥವಾ ಭಾವಮೈದುನನೋ ಒಬ್ಬ ಅಸಿಸ್ಟೆಂಟ್ ಕಮಿಷನರಾಗಿದ್ದರೆ ಅವರು ಎಲ್ಲಾ ಕೋಮುಗಳನ್ನೂ ಶೋಷಣೆ ಮಾಡಿದ್ದಾರೆಂದು ಹೇಳುವುದಕ್ಕೆ ಆಗುತ್ತದೆಯೇ ? ಅದಕ್ಕಾಗಿ ಸರ್ಕಾರದವರು ಅಂಕೀ ಅಂಶಗಳನ್ನು ಶೇಖರಣೆ ಮಾಡಿ ಎಂದು ನಾನು ಹೇಳುತ್ತಿರುವುದು. ಸರ್ಕಾರದವರು ತಮ್ಮಲ್ಲಿ ಸರಿಯಾದ ಅಂಕೀ ಅಂಶಗಳನ್ನು ಇಟ್ಟುಕೊಳ್ಳದೆ ಆಗಾಗ್ಗೆ ಒಂದು ವೇಗ್ ಅಲಿಗೇಷನ್ ಮಾಡುವುದು ಸರಿಯಾದದ್ದಲ್ಲ–ಅಂಥ ಅಪಾದನೆಗಳನ್ನು ಕೇಳುವುದಕ್ಕೆ ನಾವೂ ತಯಾರಿಲ್ಲ. ಸರ್ಕಾರಕ್ಕೆ ಎಷ್ಟೇ ಕಷ್ಟವಾಗಲಿ ಅವರು ಅಂಕಿ ಅಂಶಗಳನ್ನು ಶೇಖರಣೆ ಮಾಡಲೇಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅವರಿಗೆ ಹಾಗೊಂದು ವೇಳೆ ಸಂಗ್ರಹಣೆ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವುದಾದರೆ ಇನ್ನು ಮೇಲೆ ಇವರು ಜಾತೀ ಆಧಾರದ ಮೇಲೆ ಅರೋಪದ ಮಾತನಾಡಬಾರದೆಂದು ಹೇಳುತ್ತೇನೆ. ನನಗೆ ಹಿಂದೆ ಆ ನಾಗನಗೌಡ ಸಮಿತಿ ಮಾಡಿದ್ದಾಗ ಅವರು ಏನೇನು ಅಂಕೀ ಅಂಶಗಳನ್ನು ಸಂಗ್ರಹಣೆ ಮಾಡಿದ್ದರು ಎಂಬುದು ನನಗೆ ಗೊತ್ತಿದೆ. ಯಾವ ಯಾವ ಕೋಮುಗಳಿಗೆ ಏನೇನು ಸೌಲಭ್ಯಗಳನ್ನು ಕೊಟ್ಟಿದೆ ಎಂಬುದೆಲ್ಲಾ ಅದರಲ್ಲಿ ಹೇಳಿದೆ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಮಾಡುವಾಗ ನಾಳೆ ಆ ಕಮಿಷನ್ ವರದಿ ಬಂದಾಗ ಬಹುಶಃ ಸರಕಾರದವರು ಆರೋಪಕ್ಕೆ ಗುರಿಯಾಗುವರು. ಆದುದರಿಂದ ಅಂಕಿಅಂಶ ಬೇಕಾದ್ದನ್ನು ಸಂಗ್ರಹಿಸಿ ಆ ಕಮಿಷನಿಗೆ ಕೊಟ್ಟರೆ ಕೆಲಸ ಸುಲಲಿತವಾಗುವುದು ಅಥವಾ ಆ ಕಮಿಷನ್ನೇ ಇಂಥ ಅಂಕಿಅಂಶ ಸಂಗ್ರಹಿಸಿ ನಿರ್ಣಯಮಾಡಿದರೆ ಒಳ್ಳೆಯದು. ಒಂದು ವರ್ಗ ಬಹಳ ಜಾಣ್ಮೆಯಿಂದ, ಬುದ್ಧಿವಂತಿಕೆಯಿಂದ ರಾಜ್ಯ ಆಳುವುದಾದರೆ ಬಹಳ ಕಾಲ ಆಳಲು ಸಾಧ್ಯವಾಗುವುದಿಲ್ಲ. ಅವಕಾಶ್ಯ ಕಾಲ ಬರುವುದು. ಇಂದು ಕೇವಲ ಬಣಜಿಗ ಲಿಂಗಾಯಿತರು ಆಳುತ್ತಿದ್ದಾರೆಂದು ಹೇಳುವ ಕಾಲ ಬರಬಹುದು. ಇದನ್ನು ಶ್ರೀ ಸಿದ್ದವೀರಪ್ಪನವರು ಹೇಳಿದ್ದರು. ಬಹಳ ಬುದ್ಧಿ

(ಶ್ರೀ ಎಚ್. ಡಿ. ದೇವೇಗೌಡ)

ಪಂತಿಕೆಯಿಂದ ಡಿವೈಡ್ ಅಂಡ್ ರೂಲ್ ಪಾಲಿಸಿ ರಾಷ್ಟ್ರದಲ್ಲಿ ನಡೆಯುತ್ತಿದೆ. ಎಷ್ಟು ಕಾಲ ಇದು ನಡೆಯುವುದೆಂಬುದನ್ನು ಯೋಚಿಸಬೇಕು. ಕೇಂದ್ರದಲ್ಲಿ ಎಷ್ಟು ಜನ ಮಂತ್ರಿಗಳು ಯಾವ ಯಾವ ಕೋಮಿಗೆ ಸೇರಿದ್ದಾರ ಎಂದು ನೋಡಲು ಜನರು ಜಾಗೃತರಾಗುತ್ತಿದ್ದಾರೆ. ಈ ದೇಶ ಯಾವ ಒಂದು ಜಾತಿಯ ಸ್ವತ್ತಲ್ಲ. ಹಾಗೆ ಒಂದು ಪಂಗಡದವರು ತಮ್ಮ ಸ್ವತ್ತಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಹಾಗೆ ಮಾಡಿಕೊಳ್ಳಲು ಹೋದವರ ಪಾಡನ್ನು ನಾವು ನೋಡಿದ್ದೇವೆ. ಆ ರೀತಿ ಮಾಡುವುದು ಸರಿಯಲ್ಲ. ಈ ಬಗ್ಗೆ ಸ್ಪಷ್ಟೀಕರಣವಾಗಲಿ. ಇದಾಬೇಕು. ಇಂದು ಒಂದು ವರ್ಗವನ್ನು ದ್ವೇಷಿಸಬೇಕೆಂದು ನಾನು ಮಾತನಾಡುತ್ತಿಲ್ಲ. ಮೆರಿಟ್ ಆಧಾರದಮೇಲೆ ಈ ರಾಜ್ಯದಲ್ಲಿ ಕೆಲವರು ಮುಂದೆ ಹೋಗಿದ್ದಾರೆಂದು ಶ್ರೀ ಪ್ರಭಾಕರ್‌ರವರು ಹೇಳಿದರು. ಇದನ್ನು ಮೊದಲು ಕಂಡುಹಿಡಿಯಿರಿ. ಯಾರಿಗೂ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಯಾರಿಗೆ ಈ ದಿವಸ ಅನ್ಯಾಯವಾಗಿದೆ ಎಂದು ಹೇಗೆ ತಿಳಿಯುವುದು ? ಕೇವಲ 5 ಜನ ಒಕ್ಕಲಿಗರು ಮಂತ್ರಿಗಳಾಗಿದ್ದರೆ ಅಥವ ಲಿಂಗಾಯಿತರಲ್ಲಿ ಹೆಚ್ಚು ಜನ ಮಂತ್ರಿಗಳಿದ್ದರೆ ಆ ಕೋಮಿನವರಿಗೆ ಅನ್ಯಾಯವಾಗಿಲ್ಲವೆಂದು ಹೇಳುವುದು ಸರಿಯೇ ?

ಶ್ರೀ ಡಿ. ದೇವರಾಜ ಅರಸ್.—ಒಬ್ಬೊಬ್ಬರು ಇನ್ನೂ ಮಾತನಾಡುವುದಿದ್ದರೆ ನನಗೆ ಜವಾಬು ಕೊಡಲು ಅವಕಾಶವಿರುವುದಿಲ್ಲ, ಅಲ್ಲಿಗೆ ಎರಡೂವರೆ ಗಂಟೆ ಕಾಲ ಮುಗಿದು ಹೋಗಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ಜವಾಬು ಹೇಳುವುದಾದರೆ ನಾವು ಬೇಕಾದರೆ ಹೆಚ್ಚು ಕಾಲ ಕುಳಿತುಕೊಳ್ಳುತ್ತೇವೆ. ಈ ಸಭೆಯಲ್ಲಿ ಈ ವಿಷಯ ಚರ್ಚೆ ಆಗುವಾಗ ಮುಖ್ಯ ಮಂತ್ರಿಗಳ ಜವಾಬು ಕೇಳಲು ಸಭೆಗೆ ಕಾತುರತೆಯಿದೆ. ಒಂದು ವಿಷಯ ಸ್ಪಷ್ಟಪಡಿಸಬೇಕಾಗಿದೆ. ಯಾವುದೇ ಜನಾಂಗಕ್ಕೆ ಅನ್ಯಾಯವಾಗಲು ಬಿಡುವುದಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದುದರಿಂದ ಯಾವ ಜನಾಂಗಕ್ಕೆ ಅನ್ಯಾಯವಾಗಿದೆ ಎಂದು ತಿಳಿದುಕೊಳ್ಳಬೇಕು, ಅದಕ್ಕಾದರೂ ಪರಿಶೀಲನೆ ಮಾಡಿ. ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಅಥವ ಬೇರೆ ರೂಪದ ಸಮಿತಿ ಮಾಡಿ. ಒಂದು ಮಾರ್ಗ ಬೇಕು, ಒಂದು ಸೂತ್ರವಿರಬೇಕು. ಇಲ್ಲದಿದ್ದರೆ ಕಷ್ಟವಾಗುವುದು. ಕೆಲವು ರಾಜಕೀಯ ಮುಖಂಡರು ಉತ್ತಮ ಸ್ಥಿತಿಗೆ ಬಂದಿರಬಹುದು, ಅವರ ಸಂಬಂಧೀಕರು ಅನುಕೂಲಕ್ಕೆ ಬಂದಿರಬಹುದು. ಅರಸುರವರು ಅಧಿಕಾರಕ್ಕೆ ಬಂದಾಗ ಅವರ ಪರಿವಾರದವರು ಮುಂದುವರೆದಿರಬಹುದು. ನಾನು ವಿರೋಧ ಪಕ್ಷದ ನಾಯಕನಾಗಿರುವಾಗ ನಮ್ಮವರು ಮುಂದುವರೆದಿರಬಹುದು. ಆದರೆ ಕಮ್ಯೂನಿಟಿ ಎಲ್ಲಿ ಮುಂದುವರೆಯುವುದು? ಕಮ್ಯೂನಿಟಿ ಮುಂದುವರೆದಿದೆ ಎಂದು ಹೇಳಬೇಕಾದರೆ ಅಂಕಿ ಅಂಶ ಸಂಗ್ರಹಿಸಬೇಕು. ಯಾವ ವರ್ಗ ಈ ದಿವಸ ಮುಂದುವರೆದಿದೆ ಎಂದು ಹೇಳಬೇಕಾದರೆ ರಾಜಕೀಯ ಮುಖಂಡರ ಹಿಂದು ಮುಂದೆ ಓಡಾಡುವವರು ಮುಂದುವರೆದರೆ ಸಾಲದು. ಜುಬ್ಬ ಹಾಕುವವರು, ಮರಿ ಜುಬ್ಬ ಹಾಕುವವರು ಅನುಕೂಲ ಪಡೆದಿರಬಹುದು. ಇದಕ್ಕೆ ಅಂಕಿಅಂಶ ಸಂಗ್ರಹಿಸಿ ಈ ಸಭೆಯ ಮೂಲಕ ಒಂದು ಸಮಿತಿ ನೇಮಕಮಾಡಬೇಕು ಎಂಬುದೇ ಮುಖ್ಯೋದ್ದೇಶ. ಮುಖ್ಯ ಮಂತ್ರಿಗಳು ಒಂದು ನಿಷ್ಪಕ್ಷಪಾತವಾದ ಪರಿಶೀಲನೆ ಮಾಡಲು ಏರ್ಪಾಡು ಮಾಡಬೇಕು. ದಯಮಾಡಿ ಮುಖ್ಯಮಂತ್ರಿಗಳು ಏನೇ ಅಡ್ಡಿ ಆತಂಕ ಬಂದರೂ ಇದರ ಬಗ್ಗೆ ಅಂಕಿಅಂಶ ಸಂಗ್ರಹ ಮಾಡಲು ಅವಕಾಶ ಕಲ್ಪಿಸಬೇಕು. ಈ ರಾಜ್ಯದಲ್ಲಿ ಏನು ವಾದ ಬೆಳೆದಿದೆ ಎಂದರೆ ಕೆಲವು ಕೋಮುಗಳಿಗೆ ಕೊಟ್ಟಿರುವ ಅನುಕೂಲಗಳನ್ನು ಇತರರು ನುಂಗಿದ್ದಾರೆ ಎಂಬ ವಾದವಿದೆ ಇದರ ಬಗ್ಗೆ ಪರಿಶೀಲನೆಯಾಗಬೇಕು. ಶ್ರೀ ಬಸವಲಿಂಗಪ್ಪನವರು ಒಂದೊಂದು ಸಲ ಆವೇಶದಲ್ಲಿ ಮಾತನಾಡುವರು. ಇದರ ಬಗ್ಗೆ ಪರಿಶೀಲನೆ ನಡೆಯಲಿ. ಹರಿಜನರ ಶೋಷಣೆಯಾಗಿದೆ ಎಂದು ಹೇಳಿದ್ದಾರೆ. ಇತರ ಕೋಮುಗಳವರು ಆಸ್ತಿಗಳನ್ನು ಬರೆಸಿಕೊಂಡು, ಬರುವ ಆದಾಯವನ್ನೆಲ್ಲ ಕಿತ್ತುಕೊಂಡು ಎಷ್ಟು ಮೋಸ ಮಾಡಿದ್ದಾರೆಂಬುದರ ಪರಿಶೀಲನೆಯಾಗಬೇಕು. ತಪ್ಪನ್ನು ತಪ್ಪು ಎಂದು ನಾನು ಒಪ್ಪಿಕೊಳ್ಳುತ್ತೇನೆ. ತಪ್ಪನ್ನು ಸರಿ ಎಂದು ವಾದಿಸುವುದಿಲ್ಲ. ಅಂಥ ಕೀಳುಮಟ್ಟಕ್ಕೆ ಹೋಗುವುದಿಲ್ಲ. ಹರಿಜನರ ಜಮೀನನ್ನು ಲಿಂಗಾಯಿತರು, ಒಕ್ಕಲಿಗರು ಮುಂತಾದವರು ಬರೆಸಿಕೊಂಡಿದ್ದಾರೆ ಎಂಬ ಆರೋಪವಿದೆ. ಹರಿಜನರ ಜಮೀನನ್ನು ಹರಿಜನರೇ ಬರೆಸಿಕೊಂಡಿರುವ ನಿದರ್ಶನವೂ ಇದೆ. ಹರಿಜನರ ಹೆಸರಿನಲ್ಲಿರುವುದನ್ನು ಎಂ. ಎಲ್ ಎ. ಗಳು ಮುಂತಾದವರು ಬರೆಸಿಕೊಂಡಿದ್ದಾರೆ ಆದುದರಿಂದ ಇದರ ಬಗ್ಗೆ ಪರಿಶೀಲನೆ ನಡೆಯಬೇಕು. ಹಾಗೆ ನಡೆಯಲು ಒಂದು ಸಮಿತಿ

V-31 N72
1972-7-1-9
(B) 4891

ಮಾಡಿ. ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ, 25 ವರ್ಷದಿಂದ ನಡೆದ ತಪ್ಪುಗಳನ್ನು ತಿದ್ದುಕೊಳ್ಳಲು ಅವಕಾಶವಾಗಲಿ ಎಂಬ ದೃಷ್ಟಿಯಿಂದ ಹೇಳುವುದು. ಕೇಂದ್ರದಲ್ಲಿ ಒಂದು ಕೋಮಿನ ಪ್ರಭಾವವಿದೆಯೆಂದು ನಾನು ಹೇಳುತ್ತಿದ್ದೇನೆ, ಆರೋಪಮಾಡುತ್ತಿದ್ದೇನೆ. ಹಾಗೆ ಮಾಡುವಾಗ ಅದು ತಪ್ಪಾಗಿದ್ದರೆ ತಿದ್ದಿಕೊಳ್ಳುತ್ತೇನೆ. ಮೊನ್ನೆ ಶ್ರೀ ಹನುಮಂತಯ್ಯನವರನ್ನು ಕೇಂದ್ರದ ಮಂತ್ರಿಮಂಡಲದಿಂದ ತೆಗೆದು ಹಾಕಿದ ಬಗ್ಗೆ ಒಬ್ಬ ಎಂ. ಪಿ. ಅವರು ಪೋಲೀಸು ಅಧಿಕಾರಿಗಳಂತೆ ವರ್ತಿಸಿದರೆಂದು ಅವರನ್ನು ತೆಗೆದರಂದು ಹೇಳಿದರು. ತಪ್ಪು ಮಾಡಿದಾಗ ಸೂಕ್ತ ಕ್ರಮ ಕೈಕೊಳ್ಳಬಹುದು. ಒಕ್ಕಲಿಗರನ್ನು ತೆಗೆದರೆಂದು ನಾನು ಹೇಳುವುದಿಲ್ಲ.

4–30 P. M.

ಈ ಹೊತ್ತು ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುವುದಕ್ಕೆ ನಾನು ತಯಾರಾಗಿಲ್ಲ. ಈ ಸಮಾಚಾರ ಎಲ್ಲಿಯವರೆಗೆ ಹೋಗಿದೆ ಎಂದರೆ ಈ ಸಭೆಯ ಒಳಗೂ ಮತ್ತು ಹೊರಗೂ ಜನ ಮಾತನಾಡುತ್ತಿದ್ದಾರೆ. ಅವರು ಒಂದು ಕಾಲದಲ್ಲಿ ದವಲತ್ ನಡೆಸುವ ಹಾಗೆ ಇದ್ದರು ಎಂದು ಎಲ್ಲರೂ ಹೇಳುತ್ತಿದ್ದಾರೆ. Let us come out with frankness ; let us admit our mistakes—defects not pertaining to the community, but defects pertaining to individuals. ಅವರು ಮಾಡಿದ ಪಾಪಕ್ಕೆ ನಮ್ಮನ್ನು ಏತಕ್ಕೆ ಹೊಣೆ ಮಾಡುತ್ತೀರಿ ? ಅದಕ್ಕೋಸ್ಕರ ಇದನ್ನು ವಿಚಾರಣೆ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಈಗ ತಾವು ಏನು ಹೇಳಿದಿರಿ. ಒಬ್ಬರು ಹನುಮಂತಯ್ಯನವರು ಹೋದರೆ ನೂರು ಜನ ಹನುಮಂತಯ್ಯನವರು ಬರುತ್ತಾರೆ ಅನ್ನುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಅವರನ್ನು ರೀಪ್ಲೇಸ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಡಿ ದೇವೇಗೌಡ.—ಅದು ನಿಮ್ಮ ಅಭಿಪ್ರಾಯ ಇರಬಹುದು. ಈ ಹೊತ್ತು ನೀವು ಮಾಡಿರುವುದು ಏನೆಂದರೆ ಬ್ಯಾಂಕ್ ನ್ಯಾಷನಲೈಸೇಷನ್ ಮಾಡಿದ್ದೀರಿ, ಇನ್‌ಷ್ಯೂರೆನ್ಸ್ ನ್ಯಾಷನಲೈಸೇಷನ್ ಮಾಡಿದ್ದೀರಿ. ಈ ಹೊತ್ತು ಅಪಾಯಿಂಟುಮೆಂಟ್ಸ್ ಎಲ್ಲಾ ಹೇಗೆ ನಡೆಯುತ್ತದೆ ಇದನ್ನೆಲ್ಲಾ ವಿಚಾರಣೆ ಮಾಡಬೇಕು. ಅದಕ್ಕಾಗಿ ತಾವು ಒಂದು ಉದಾರ ಮನಸ್ಸಿನಿಂದ ಫ್ಯಾಕ್ಟ್ಸ್ ಫೈಂಡಿಗ್ ಕಮಿಟಿ ಮಾಡುವುದಕ್ಕೆ ಒಪ್ಪಿಕೊಳ್ಳಿ. ಅದಕ್ಕೆ ಹಿಂಜರಿಯಬಾರದು. ಕಾನೂನು ಏನೇ ಇರಲಿ, ಇದರ ಬಗ್ಗೆ ದೇಶದಲ್ಲಿರತಕ್ಕಂಥ ಜನಗಳ ಮನೋಭಾವನೆಯನ್ನು ನಿವಾರಣೆ ಮಾಡಬೇಕು ಎಂದು ಹೇಳುತ್ತೇನೆ. ಅದಕ್ಕಾಗಿ ತಾವು ಏನು ಮಾಡಬೇಕು ಎಂದರೆ There is no other remedy. You please yield to appoint an Enquiry Committee or a Facts Finding Committee. ಇದನ್ನು ನೀವು ಮಾಡದೇ ಹೋದರೆ ಶ್ರೀಮಾನ್ ಅರಸುರವರು ಹೇಳಿದ ಆಪಾದನೆಗೆ ಹುರುಳಿಲ್ಲ, ತಿರುಳಿಲ್ಲ ಎಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ಇನ್ನೂ ಹಲವಾರು ಸದಸ್ಯರು ಚರ್ಚೆ ಮಾಡುವುದರಿಂದ ನಾನು ಇನ್ನು ಒಂದೇ ಒಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಒಂದು ವಾದವನ್ನು ಮುಖ್ಯಮಂತ್ರಿಗಳು ಪುಷ್ಟೀಕರಿಸಿ ಕೆಲಸ ಮಾಡಬೇಕಾದರೆ ಇದಕ್ಕೆ ಒಂದು ಸಮಿತಿ ಮಾಡುವುದು ಅವಶ್ಯಕ ಎಂದು ಹೇಳುತ್ತೇನೆ. ಅದಕ್ಕೆ ಅವರು ಒಪ್ಪಿಕೊಳ್ಳದೇ ಹೋದರೆ ಇದು ಒಂದು ರಾಜಕೀಯದ ಆಪಾದನೆ, ಬುಡವಿಲ್ಲದ ಆಪಾದನೆ ಎಂದು ಹೇಳಬೇಕಾಗುತ್ತದೆ. ರಾಜಕೀಯದ ಒಂದು ನೆಪದಲ್ಲಿ ಇವರನ್ನು ತುಳಿಯಬೇಕು ಅಂತ ಈ ರೀತಿ ಮಾಡಿದ್ದಾರೆ ಎಂದು ನಾವು ಒಂದು ಒಪ್ಪಂದಕ್ಕೆ ಬರಬೇಕಾಗುತ್ತದೆ. I can understand the implication. ನಾವು ಹೇಳಬೇಕಾಗುತ್ತದೆ. ಕೆಲವು ಜಾತಿಯವರು ಅದನ್ನು ಶೋಷಣೆ ಮಾಡಿದ್ದಾರೆ ಎಂದು. ಅವರ ಒಂದು ಸ್ವಾರ್ಥಸಾಧನೆಗೋಸ್ಕರ ಇದನ್ನು ಮಾಡಿಕೊಂಡಿದ್ದಾರೆ ಎಂದು ಹೇಳಬೇಕಾಗುತ್ತದೆ. ಆದುದರಿಂದ ಇದನ್ನು ಪುಷ್ಟೀಕರಿಸಬೇಕಾದರೆ ಇದಕ್ಕೆ ಒಂದು ಕಮಿಟಿ ಮಾಡಬೇಕೆಂದು ಮತ್ತೊಂದು ಸಾರಿ ಒತ್ತೊತ್ತಿ ಹೇಳಬೇಕಾಗುತ್ತದೆ. ಇದನ್ನು ಮಾಡದೇ ಹೋದರೆ, ನಿಮ್ಮ ಆಪಾದನೆಗೆ ಯಾವ ಹುರುಳಿಲ್ಲ, ಯಾವ ತಿರುಳೂ ಇಲ್ಲ. ಯಾವ ಬೇಸಿಸ್ ಕೂಡ ಇಲ್ಲ ಎಂದು ಹೇಳಬೇಕಾಗುತ್ತದೆ. ಅಲ್ಲದೆ ಇದನ್ನು ರಾಜಕೀಯ ಆಧಾರ ರಹಿತದ ಆಪಾದನೆ ಎಂದು ಹೇಳಬೇಕಾಗುತ್ತದೆ. ದೇಶದಲ್ಲಿ ಜನರು ಆಡುತ್ತಾ ಇರತಕ್ಕಂಥ ಮಾತನ್ನು ನಾನು ಹೇಳುತ್ತಾ ಇದ್ದೇನೆ. ಆದುದರಿಂದ ಇದಕ್ಕೆ ಒಂದು ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್.—ರಾಜ್ಯದಲ್ಲಿನ ವಿವಿಧ ಜಾತಿಗಳವರು ಪಡೆದುಕೊಂಡ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಲು ಸಮಿತಿಯೊಂದನ್ನು ರಚಿಸುವ ಬಗ್ಗೆ ಅವಶ್ಯಕತೆ ಇದೆ ಎಂದು ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಸಾಕಷ್ಟು ವಿಚಾರಗಳನ್ನು ಈಗಾಗಲೇ ಈ ಸಭೆಯ ಮುಂದೆ ಇಟ್ಟಿದ್ದಾರೆ. ಆದರೆ ಅವರು ಮಾಡಿರುವ ಒಂದು ಉಪಕಾರ ಏನೆಂದರೆ ರಾಜ್ಯದಲ್ಲಿ ಯಾವ ಯಾವ ಜಾತಿಯವರು ಅಥವ ಕೋಮಿನವರು ಈ ಒಂದು ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ ಎನ್ನುವುದನ್ನು ಹೇಳುವಾಗ ಅವರ ಏಳಿಗೆ ಬಗ್ಗೆ ಏನು ಹೇಳಿಲ್ಲ. ಇದರ ಬಗ್ಗೆ ಒಂದು ಸಮಿತಿಯನ್ನು ಮಾಡಬೇಕು ಎನ್ನುವುದರ ಬಗ್ಗೆ ವಿಪುಲವಾದ ಚರ್ಚೆಯಾಗಿದೆ. ಇದರಲ್ಲಿ ಸಹಜವಾದ ಸಂಗತಿ ಏನು ಎನ್ನುವುದನ್ನು ತಿಳಿದುಕೊಂಡು ಸಹೋದರರೆಲ್ಲರೂ ಸರಿಯಾಗಿ ಬಾಳಬೇಕು ಎನ್ನುವ ಒಂದು ಧಾಟಿಯನ್ನು ಇಟ್ಟುಕೊಳ್ಳಬೇಕು. ಸುಮಾರು 1947 ರಿಂದ 1972ರ ವರೆಗೂ ಕೂಡ, ಅಂದರೆ ಸ್ವರಾಜ್ಯ ಬಂದ ಮೇಲೆ ಹಿಂದುಳಿದವರು ಇತರ ಮುಂದುವರೆದ ಕೋಮಿನವರ ಹಾಗೆ ಸರಿಸಮಾನತೆಯಿಂದ ಉಳಿದು ಬಾಳಬೇಕಾದ ಕಾಲದಲ್ಲಿ ಹಿಂದುಳಿದವರಿಗೆ ಯಾರು ಏನು ಅಪಕಾರ ಮಾಡಿದರು. ಇದರಲ್ಲಿ ಏನು ಏರುಪೇರು ಆಯಿತು, ಇದರಲ್ಲಿ ಏನು ನೋವಾಯಿತು ಇದಕ್ಕೆ ಯಾರು ಕಾರಣರು ಎನ್ನುವುದನ್ನು ಅವರು ತಮ್ಮ ವಾದದಲ್ಲಿ ಇಟ್ಟಿದ್ದಾರೆ. ಇದನ್ನು ನಿರೀಕ್ಷಣೆ ಮಾಡಿ ಹೇಳುವುದಾದರೆ ಇದು ಒಪ್ಪತಕ್ಕಂಥ ಮಾತು. ಇಂತಹ ವಿಚಾರಗಳು, ವಿರೋಧ ಪಕ್ಷದಿಂದಾಗಲಿ, ಆಳುವ ಪಕ್ಷದಿಂದಾಗಲಿ, ಅಳುವ ಪಕ್ಷದಿಂದಾಗಲಿ ನಗುವ ಪಕ್ಷದಿಂದಾಗಲಿ ಯಾರಿಂದಾದರೂ ಬರಲಿ ಸತ್ಯ ಇರುವುದನ್ನು ಸತ್ಯ ಅಂತ ಒಪ್ಪತಕ್ಕಂಥಾದ್ದು ಸಹಜವಾದ ವಿಚಾರ. ಆ ಧಾಟಿಯಲ್ಲಿ ಹೇಳುವುದಾದರೆ ಇದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಸಮಿತಿಯೊಂದನ್ನು ರಚಿಸಬೇಕು ಎಂದು ಏನು ಹೇಳಿದ್ದಾರೋ ಅದನ್ನು ನಾವು ನಂಬಬೇಕಾಗುತ್ತದೆ. ಆ ಪಕ್ಷದವರು ಹೀಗೆ ಹೇಳುತ್ತಾರೆ, ಈ ಪಕ್ಷದವರು ಹೀಗೆ ಹೇಳುತ್ತಾರೆ ಎಂದು ಹೇಳುವ ಗೋಜಿಗೆ ನಾನು ಹೋಗುವುದಿಲ್ಲ. ಪ್ರಗತಿಪರವಾದ ಈ ಕಾಲದಲ್ಲಿ ಎಲ್ಲ ಕೋಮಿನವರೂ, ಎಲ್ಲ ಪಂಗಡದವರೂ ಒಂದು ಪ್ರಗತಿಪರವಾದ ದಾರಿಯಲ್ಲಿ ಒಂದು ದೃಢವಾದ ನಂಬಿಕೆ ಇಟ್ಟುಕೊಂಡು ಹಿಂದುಳಿದವರ ಕಷ್ಟಸುಖಗಳಲ್ಲಿ ಭಾಗಿಯಾಗಿ ಒಳ್ಳೆಯ ಮಾನವ ಸಂಪ್ರದಾಯಗಳನ್ನು ಬೆಳೆಸಿ ಯಾವ ಗೊಂದಲವೂ ಇಲ್ಲದೆ ಸಹಕರಿಸಿಕೊಂಡು ಹೋಗಬೇಕು ಎನ್ನುವ ವಿಚಾರವನ್ನು ಶ್ರೀಮಾನ್ ದೇವೇಗೌಡರು ಹೇಳಿದ್ದಾರೆ. ಆದರೆ ಅದರ ಮೂಲ ವಿಚಾರವನ್ನು ತಿಳಿದುಕೊಳ್ಳದೆ ನಾವು ಮುಂದಕ್ಕೆ ಹೋಗತಕ್ಕದ್ದು ಅಪಾಯ ಎನ್ನುವುದು ನಾನು ನಂಬುತ್ತೇನೆ. ಈ ಒಂದು ಉದ್ದೇಶದಿಂದ ಶ್ರೀಮಾನ್ ದೇವೇಗೌಡರು ಇದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಸಮಿತಿಯೊಂದನ್ನು ರಚಿಸಬೇಕು ಎನ್ನುವ ವಿಚಾರವನ್ನು ಈ ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದನ್ನು ನಾವು ಮೆಚ್ಚಬೇಕು. ಆದರೆ ಒಂದು ವಿಷಯದಲ್ಲಿ ಹೇಳುವುದಾದರೆ ಇಂತಹ ವಿಷಯ ಸಭೆಯ ಮುಂದೆ ಬರತಕ್ಕದ್ದಾಗಲಿ, ಅಥವಾ ಒಂದು ಕ್ಷೇತ್ರದಲ್ಲಿ ಸಾರ್ವಜನಿಕ ಜೀವನದಲ್ಲಿ ಬರತಕ್ಕದ್ದಾಗಲಿ, ವಿಚಾರಣೆಗೆ ಬರುವುದು ಇದೇ ಮೊದಲಲ್ಲ. ಈ ವಿಷಯಗಳು ನಾನಾ ರೂಪದಲ್ಲಿ ಅಂದರೆ ಅನೇಕ ಸಂಸ್ಥೆಗಳಲ್ಲಿ, ಅನೇಕ ಪಾರ್ಟಿಗಳಲ್ಲಿ, ಸಾರ್ವಜನಿಕ ಜೀವನದಲ್ಲಿ ಬಂದು ಚರವಣ ಚರ್ಚೆಯಾಗಿ ಆದ ಮೇಲೆ ಈ ವಿಷಯಗಳು ಬೆಳಕಿಗೆ ಬಂದಿರುವ ಹಾಗೆ ಇದೆ. ಅದಕ್ಕೆ ಇದು ಉಲ್ಬಣವಾಯಿತು. ಈ ವಿಚಾರ ಈರೀತಿ ಒಂದು ಉಲ್ಬಣ ಪರಿಸ್ಥಿತಿಗೆ ಬರುವುದಕ್ಕೆ ಕಾರಣ ಏನು ಎನ್ನುವುದನ್ನು ಒಂದು ಪ್ರಶ್ನೆ ತಮ್ಮಲ್ಲೇ ಹಾಕಿಕೊಂಡು ನಿಜವಾದ ಸತ್ಯಾಂಶಗಳನ್ನು ತಿಳಿಯಬೇಕು. ಅನಾವಶ್ಯಕವಾಗಿ ಒಬ್ಬರು ಇನ್ನೊಬ್ಬರನ್ನು ಆರೋಪ ಮಾಡತಕ್ಕ ಸಂದರ್ಭ ಬಂದರೆ ಅದನ್ನು ಸಹಿಸಿಕೊಂಡು ಹೋಗತಕ್ಕಂಥ ಕಾಲ ಹೋಗಬೇಕು. ರಾಜಕೀಯವೂ ಕೂಡ ತಿಳಿಯಾಗಿ ಬೆಳೆಯಬೇಕು. ಎನ್ನತಕ್ಕ ವಾತಾವರಣ ಬೆಳೆಯುವುದಕ್ಕೆ ಇದು ಸಹಾಯಕವಾಗುತ್ತದೆಯೋ ಏನೋ ಎಂದು ಅವರ ಮನಸ್ಸಿನಲ್ಲಿ ಒಂದು ತಿಳಿಯಾದ ನೋಟವಿದೆ. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ತಾನೇ ಕರ್ನಾಟಕ ಎನ್ನುವ ಹೆಸರನ್ನು ನಮ್ಮ ರಾಜ್ಯಕ್ಕೆ ಇಡಬೇಕು ಎನ್ನುವ ನಿರ್ಣಯವನ್ನು ಮಂಡಿಸಿದಾಗ ಈ ಮಾನ್ಯ ಸಭೆಯಲ್ಲಿ ಮಾತನಾಡಿದ ಥ ಸದಸ್ಯರು ಏನೇನು ಅಪನಂಬಿಕೆ, ಅನ್ಯಾಯ, ಏರುಪೇರು, ದಬ್ಬಾಳಿಕೆ, ಒಬ್ಬರನ್ನೊಬ್ಬರು ತುಳಿಯತಕ್ಕದ್ದು, ಒಬ್ಬರ ಅಷ್ಟೋತ್ತರಗಳನ್ನು ಮತ್ತೊಬ್ಬರು ಅಪೋಶನ ತೆಗೆದುಕೊಳ್ಳತಕ್ಕದ್ದು, ಅದುಮಿ ಇಡತಕ್ಕದ್ದು ಇಂಥ ಪ್ರಶ್ನೆಗಳನ್ನು ಮುಂದೆ ಇಟ್ಟಿದ್ದರು. ಕರ್ನಾಟಕ ಎನ್ನುವ ಹೆಸರು ಇಡುವಾಗ ಯಾವ ಕನ್ನಡ ನಾಡಿನ ಕೀರ್ತಿಯನ್ನು ಎತ್ತಿ ಮಾತನಾಡಿದರೋ, ಅದರ ಹಿನ್ನೆಲೆಯನ್ನು ಕುರಿತು ಮಾನ್ಯ ಮುಖ್ಯ ಮಂತ್ರಿಗಳು ಹೇಳುವಾಗ ಇಂಥ ವಿಚಾರಗಳು ಹಿಂದೆ ಅನೇಕ ನಡೆದಿರಬಹುದು, ಅದಕ್ಕೆ ಕಾರಣಗಳು ಏನೇನೋ ಇರಬಹುದು, ಮುಂದೆಯಾದರೂ ಕೂಡ ಒಳ್ಳೆಯ ವಾತಾವರಣದಲ್ಲಿ ನಾವು ನಡೆದುಕೊಂಡು ಹೋಗಬೇಕು ಎನ್ನುವ ಹೈ ಐಡಿಯಲ್, ಮೇಲ್ಮಟ್ಟಕ್ಕೆ ನಮ್ಮ ಮನಸ್ಸನ್ನು ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ಆ ವಿಚಾರವನ್ನು ಹೇಳಿರತಕ್ಕದ್ದು ಸುಸೂಕ್ತ ಮಾತ್ರವಲ್ಲ, ಸಮಂಜಸವೆಂದು ಹೇಳುತ್ತೇನೆ. ಅದನ್ನು ಹೇಳುವಾಗ

ಮಾನ್ಯ ಮುಖ್ಯ ಮಂತ್ರಿಗಳಿಗೆ ಸವಾಲು ಎನ್ನುವ ರೀತಿಯಲ್ಲಿ ಹೇಳುತ್ತಿದ್ದರು. ಅದು ಸವಾಲು ಅಲ್ಲ, ಅದು ಗುರುಪೀಠದಿಂದ ಹೇಳತಕ್ಕ ಬೋಧನೆಯಲ್ಲ, ಮುಂದೆ ನಮ್ಮ ಸಮಾಜವನ್ನು ಯಾವ ಕಡೆಗೆ ನಡೆಸಿಕೊಂಡು ಹೋಗಬೇಕು ಆ ಕಡೆಗೆ ನಮ್ಮ ಗುರಿ ಇರಬೇಕು ಯಾವ ರೀತಿ ಪ್ರೇರೇಪಣೆ ಮಾಡಿಕೊಂಡು ಬೆಳೆಯಬೇಕು ಎನ್ನುವ ಸತ್ಸಂಗತಿ ಎಂದು ನಾನು ಭಾವಿಸುತ್ತೇನೆ. ಈ ವಿಷಯವನ್ನು ಹೇಳಿದ ಮೇಲೆ ಮಾನ್ಯ ದೇವೇಗೌಡರು ಹೇಳಿದ ನಾಲ್ಕಾರು ವಿಚಾರಗಳನ್ನು ಹೇಳಿ ಪುಷ್ಟೀಕರಿಸತಕ್ಕದ್ದು ನನ್ನ ಧರ್ಮ.

ಅವರು ಪ್ರಸ್ತಾಪಿಸಿದ ವಿಚಾರ ಹೀಗಿದೆ. ಏನೇನೋ ಗೊಂದಲ ನಮ್ಮ ಪ್ರಗತಿಗೆ ಅಡ್ಡಿ ಇದೆ, ಅವುಗಳಲ್ಲಿ ಕೋಮು ಒಂದು, ಜಾತಿ ಇನ್ನೊಂದು. ಅಧಿಕಾರವನ್ನು ಬಹಳ ದಿವಸ ಹಿಡಿದು ಕೊಂಡಿರುವವರು ತಮ್ಮ ಸ್ಥಾನಗಳಲ್ಲಿ ಮುಖ್ಯವಾಗಿ ಚೇಷ್ಟೆಗೋ, ಕುಚೇಷ್ಟೆಗೋ ಅಧಿಕಾರವನ್ನು ದುರ್ವಿನಿಯೋಗಿಸಿದರೆ, ನಮ್ಮ ಪ್ರಗತಿಗೆ ಪಿಡುಗು ತಪ್ಪದು ಎನ್ನುವುದು ಧರ್ಮ. ಕೋಮು ಎಂದರೆ, ಕೋ ಎಂದರೆ ತನ್ನ ಮನಸ್ಸಿನಲ್ಲಿ ಇರತಕ್ಕ ಕೋರಿಕೆಯನ್ನು ನೆರವೇರಿಸುವುದಕ್ಕೋಸ್ಕರವಾಗಿ, 'ಮು' ಎಂದರೆ ಮುಷ್ಟಿಯನ್ನು ಹಿಡಿದುಕೊಳ್ಳುವುದು ತನ್ನ ಮನಸ್ಸಿನಲ್ಲಿರುವ ಕೋರಿಕೆಯನ್ನು ನೆರವೇರಿಸುವುದಕ್ಕೋಸ್ಕರ ಒಬ್ಬ ಅಧಿಕಾರಿಯಾಗಬಹುದು, ಕೆಲವು ಜನವಾಗಬಹುದು, ಕಲೆಕ್ಟಿವ ಆಗಬಹುದು, ಜಾತಿಯ ಬಲವಾಗಬಹುದು, ಧರ್ಮ ಶ್ರದ್ಧೆಯಾಗಬಹುದು, ಅಧರ್ಮದ ಪರಮಾವಧಿಯಾಗಬಹುದು, ಕಪಿಮುಷ್ಟಿ ಹಿಡಿಯುವುದಕ್ಕೆ ಕೋಮು ಎಂದು ಹೆಸರು. ಹಾಗೆಯೇ ಜಾತಸ್ಯ ಎಂದರೆ ಹುಟ್ಟುವುದು. ಹುಟ್ಟುವದು ಎನ್ನುವುದು ಧರ್ಮಲಿಖಿತವಾದುದರಿಂದ ಯಾವುದೇ ಪ್ರಪಂಚದಲ್ಲಿ ಒಬ್ಬ ಮನುಷ್ಯ ಹುಟ್ಟಬಹುದು. ಜಾತ ಎಂದರೆ ಹುಟ್ಟಿದಾಗ ಅವರ ಅಪ್ಪ ಏನು ಕೆಲಸ ಮಾಡಿ ಜೀವನ ಮಾಡುತ್ತಿದ್ದ ಎಂದು ಅರ್ಥವಷ್ಟೆ. ಮೀನು ಹಿಡಿಯುವ ತಂದೆತಾಯಿಗಳಿಗೆ ಹುಟ್ಟಿದವರಿಗೆ ಮೀನುಗಾರ ಎಂದು ಹೇಳುತ್ತಾರೆಯೋ ಏನೋ, ಹೊಲ ಉತ್ತು ಬಿತ್ತು ಮಾಡುವಂಥವರ ಮಗನಿಗೆ ಒಕ್ಕಲುತನದ ಮಗ ಎನ್ನುತ್ತಾರೆಯೋ ಏನೋ, ಕುರಿ ಸಾಕಿ ಜೀವನ ಮಾಡುತ್ತಿದ್ದರೆ ಅವನ ಮಗನಿಗೆ ಕುರುಬ ಎಂದು ಹೇಳುತ್ತಾರೆಯೋ ಏನೋ ಇದರಲ್ಲಿ ದೋಷವಿಲ್ಲ. ಇವುಗಳನ್ನು ಒಬ್ಬರು ಇನ್ನೊಬ್ಬರಿಗೆ ಹೇಗೆ ಉಪಯೋಗಿಸುತ್ತಾರೆ, ಸ್ವಾರ್ಥತೆಯಿಂದ, ಧರ್ಮದೃಷ್ಟಿಯಿಂದ, ಸಮಾಜಕಲ್ಯಾಣದಿಂದ, ಸಹಕಾರದಿಂದ ಎನ್ನುವು ಬಂದಾಗ ನಾನಾ ವಿಧವಾಗಿ ರೋಗಗ್ರಸ್ತವಾಗುತ್ತವೆ. ಪಾದರಸವನ್ನು ಒಂದು ಮರದಲ್ಲಿ ತೂತನ್ನು ಕೊರೆದು ಬಿಟ್ಟರೆ ಸುಳಿ ಸಮೇತ ಒಣಗಿ ಹೋಗುತ್ತದೆ. ಅದೇ ಪಾದರಸವನ್ನು ಔಷಧಿಯಾಗಿ ಉಪಯೋಗಿಸಿದರೆ ರೋಗ ನಿವಾರಣೆಯಾಗುತ್ತದೆ. ಹಾಗೆಯೇ ಜಾತಿ ಮತ್ತು ಕೋಮು, ಯಾವ ಸಂಪ್ರದಾಯದ ಹಿನ್ನೆಲೆಯಲ್ಲಿ, ಯಾವ ದೃಷ್ಟಿಯಿಂದ ಉಪಯೋಗಿಸುತ್ತೇವೆ ಎನ್ನುವುದು ಕೂಡ ನಾವು ತಿಳಿದುಕೊಳ್ಳಬೇಕಾಗಿದೆ. ಈ ಒಂದು ಹಿನ್ನೆಲೆಯಿಂದ ಹುಟ್ಟಿದ ರೋಗ, 1956 ರಲ್ಲಿ ರಾಜ್ಯಗಳ ಏಕೀಕರಣವಾಗಿ ಕರ್ನಾಟಕವಾದ ಮೇಲೆ ಕೊಂಚ ದಿನ ಸುಮ್ಮನೆ ಕೆಲವಾರು ದಿನಗಳಾದ ಮೇಲೆ ಆ ಭಾಗದ ಜನ, ಈ ಭಾಗದ ಜನ, ಅತ್ತ ಕಡೆಯವರು, ಇತ್ತ ಕಡೆಯವರು, ಅವರ ಹಿರಿಮೆ, ಇವರ ಮೇಲ್ಮೆ ಅವರ ಇರವಪಿಡುಗು ಎನ್ನುವ ರೋಗ ಪ್ರಾರಂಭವಾಯಿತು. ಇದು ಹೇಗೆ ಪರ್ಯವಸಾನಯಿತು ಎಂದರೆ ಮೈಸೂರಿನಲ್ಲಿ ನಡೆದ ಎಂ.ಪಿ.ಸಿ.ಸಿ. ಮೀಟಿಂಗಿನಲ್ಲಿ ಶ್ರೀ ಎಂ. ವಿ. ಕೃಷ್ಣಪ್ಪನವರು ಒಂದು ವಿಚಾರ ಮುಂದಿಸಿದರು. ಆವಾಗ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಯಾಗಿದ್ದರು. ಈ ಕಡೆಯವರಿಗೆ ಅನ್ಯಾಯವಾಗಿದೆ, ಆ ಕಡೆಯವರಿಗೆ ಅನ್ಯಾಯವಾಗಿದೆ ಎನ್ನುವ ಬಗ್ಗೆ ಬಂದ ಪ್ರಸ್ತಾಪವನ್ನು ಕುರಿತು ಎರಡೂ ಕಡೆಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ನೋಡಿ ಎಂದು ಭಾಷಣ ಮಾಡಿದರು. ಅದರ ನಂತರ ವೀರೇಂದ್ರ ಪಾಟೀಲರು ಇದೇ ಸಭೆಯಲ್ಲಿ ಉತ್ತರ ಕೊಡುತ್ತ ಎರಡೂ ಕಡೆಗಳಿಗೆ ಸಂಬಂಧಪಟ್ಟಂತೆ ಅಂಕಿ ಅಂಶಗಳನ್ನೊಳಗೊಂಡ ಒಂದು ಪುಸ್ತಕವನ್ನು ಕೊಟ್ಟರು. ಅದರಲ್ಲಿ ನಾವು ನಿರೀಕ್ಷಣೆ ಮಾಡಿದಂತೆ ಒಂದು ಪರ್ಸೆಂಟ್ ವಿಷಯವಿತ್ತು. 99 ಪರ್ಸೆಂಟ್ ಸಂಗ್ರಹಿಸುವುಕ್ಕೆ ಸಾಧ್ಯವಿಲ್ಲ ಎಂದು ಅವರೇ ಒಪ್ಪಿದರು. ಇದೇ ಹಿನ್ನೆಲೆಯಲ್ಲಿ ಮಾನ್ಯ ಹನುಮಂತಯ್ಯನವರು ಒಂದು ಜುಡಿಷಿಯಲ್ ಕಮಿಷನ್ ಅಪಾಯಿಂಟ್ ಮಾಡಬೇಕು, ಅವರು ಎಲ್ಲವನ್ನೂ ಪರಿಶೀಲಿಸಬೇಕು ಎಂದು ಹೇಳಿದ್ದರು. ಇವೆರಡಕ್ಕಿಂತ ದೊಡ್ಡ ದೋಷಪೂರಿತವಾದ ವಿಚಾರವನ್ನು ಈ ಹೊತ್ತು ಮಾನ್ಯ ಮುಖ್ಯ ಮಂತ್ರಿಯವರಾದ ಅರಸು ಅವರು ಹೇಳಿಲ್ಲ ಎಂದು ನಾನು ನಂಬುತ್ತೇನೆ. ಈ ಹಿನ್ನೆಲೆಯಲ್ಲಿ ಈ ರೋಗವನ್ನು ನಾವು ಬಹಳ ದಿವಸ ಬೆಳೆಸುವುದಕ್ಕಾಗುವುದಿಲ್ಲ, ಯಾವುದಾದರೂ ಒಂದು ಕಡೆ ತೀರ್ಮಾನ ತೆಗೆದುಕೊಂಡು ಸಹೋದರ ಭಾವನೆಯಿಂದ ಬಾಳಬೇಕು ಎಂದು ಹೇಳಿದ್ದಾರೆ. ಈ ಎಲ್ಲ ಹಿನ್ನೆಲೆಯಲ್ಲಿ ಅವರು ಈ ಮಾತನ್ನು ಹೇಳಿದ್ದಾರೆಯೇ ಹೊರತು ಬೇರೆ ಯಾವುದಕ್ಕೋಸ್ಕರವೂ ಅಲ್ಲ ಎನ್ನುವುದನ್ನು ನಾನು ಪ್ರತಿಪಾದನೆ ಮಾಡುತ್ತಿದ್ದೇನೆ.

(ಶ್ರೀ ಕೆ. ಪ್ರಭಾಕರ್)

ನಮ್ಮ ಗೆಳೆಯರು ಹೇಳಿದ ಹಾಗೆ ಒಕ್ಕಲಿಗರು, ಲಿಂಗಾಯಿತರು ನಮ್ಮ ರಾಜ್ಯದಲ್ಲಿ ಮುಖ್ಯ ಮಂತ್ರಿಗಳಾಗಿದ್ದರು. ಅದರಲ್ಲಿ ಶ್ರೀ ಅರಸು ಅವರು ಎಂಟನೇ ಮುಖ್ಯ ಮಂತ್ರಿಗಳು ಮೂರು ಜನ ಒಕ್ಕಲಿಗರಿರಬಹುದು, ನಾಲ್ಕು ಜನ ಲಿಂಗಾಯಿತರಿರಬಹುದು. ಇದರಿಂದ ಏನು ಅಪರಾಧ ವಾಯಿತು ಎಂದರೆ, ಈ ಥಿಯರಿ ಕರೆಕ್ಟ್ ಆಗಿ ತಿಳಿದುಕೊಳ್ಳಬೇಕಾದರೆ ಮಾನ್ಯ ಸಿದ್ಧವೀರಪ್ಪನವರನು ಕೇಳಿದರೆ ಕ್ರಿಸ್ಟಲ್ ಕ್ಲಿಯರ್ ಆಗಿ ಹೇಳುತ್ತಾರೆ. ಯಾರೇ ಅಧಿಕಾರಕ್ಕೆ ಬಂದರೂ ತಮ್ಮ ತಮ್ಮ ಕೋಮಿನ ಮೇಲ್ಮೆಗೋಸ್ಕರವಾಗಿ ಯಾರಾದರೂ ಕೆಲಸ ಮಾಡುತ್ತಿದ್ದರೆ ಅದು ಮಹಾಪರಾಧ ತಪ್ಪು ಎಂದು ಹೇಳಿದ್ದಾರೆ. ಅಷ್ಟು ಮಾತ್ರಕ್ಕೇ ತಪ್ಪಲ್ಲ. ಅವರ ಮಗನಿಗೆ ಕೆಲಸ ಸಿಕ್ಕಿರಬಹುದು, ತಾನು ಮನೆ ಕಟ್ಟಿರಬಹುದು, ಯಾರಿಗೋ ಫೋನ್ ಮಾಡಿ ಸಾಲ ಕೊಡಿಸಿರಬಹುದು, ಇಂಥಿಂಥ ಮುಖ್ಯ ಮಂತ್ರಿಗಳಿದ್ದಾಗ ಕೊಟ್ಟಿರತಕ್ಕ ಕಂಟ್ರಾಕ್ಟುಗಳು ಪಿ.ಡಬ್ಲ್ಯು.ಡಿಗೆ ಸಂಬಂಧಪಟ್ಟದ್ದಾಗ ಬಹುದು, ಜನರಲ್ ಆಗಬಹುದು, ಫೇರ್ ಪ್ರೈಸ್ ಡಿಪೋಗಳಾಗಲೀ, ಕಂಟ್ರಾಕ್ಟುಗಳಾಗಲಿ, ಡೆಮಾನ್‌ಸ್ಟ್ರೇಷನ್ ಫಾರಂ ಮಾಡುವುದು, ಕುರಿ ಮುಂತಾದುವನ್ನು ಕೊಡುವುದು ಇದನ್ನು ನೋಡಿದರೆ, ರಾಜ್ಯದಲ್ಲಿರುವ 174 ತಾಲ್ಲೂಕುಗಳಲ್ಲಿ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಯಾವ ಕೋಮಿನವರಿದ್ದಾರೆಂದು ನೋಡಿದರೆ ಪಂಚಾಯಿತಿ ಛೇರಮನ್‌ರಿರಬಹುದು, ಮತ್ತೊಬ್ಬರಿರಬಹುದು, ಯಾರು ಯಾರು ಇದ್ದಾರೆ, ಯಾರು ಯಾರಿಗೆ ಅನುಕೂಲವಾಗಿದೆ ಎನ್ನುವುದು ಗೊತ್ತಾಗುತ್ತದೆ. ಸರ್ಕಾರದ ಅಧಿಕಾರಿಗಳನ್ನು ತೆಗೆದುಕೊಂಡರೆ ಸೇಕಡ 25 ಭಾಗ ಇರುವವರು ಎಂದರೆ ಗೊತ್ತಾಗುತ್ತದೆ ಬ್ರಾಹ್ಮಣರನ್ನು ಕುರಿತು ಹೇಳುವುದು ಎಂದು. ಬ್ರಾಹ್ಮಣರು ಎಷ್ಟೋ ವರ್ಷದಿಂದ ಆಡಳಿತವನ್ನು ನಡೆಸಿಕೊಂಡು ಬಂದಿದ್ದಾರೆ. ಹೊಲಗದ್ದೆಗಳನ್ನು ಒಕ್ಕಲಿಗರು ಮಾಡುತ್ತಿದ್ದರು. ಇದೇನೂ ವಿಚಿತ್ರವಲ್ಲ, ಹಾಗೆಯೇ ಬೆಳೆದುಕೊಂಡು ಬಂದಿತ್ತು. ಎಲ್ಲರೂ ಸಮಾನವಾಗಿ ಆಗಬೇಕು ಎನ್ನುವ ಕಾಲದಲ್ಲಿ ಎಲ್ಲ ಕ್ಷೇತ್ರದ ಅಧಿಕಾರವನ್ನು ಸಮನಾಗಿ ಹಂಚಿಕೊಳ್ಳುವ ಕಾಲ ಬಂದಿದೆ. ಆದರೂ ಕೂಡ ಶ್ರೀಮಂತರು ಬಡವರಿಂದ ಅವರ ಆಸ್ತಿಪಾಸ್ತಿಗಳನ್ನು ಬರೆಸಿಕೊಳ್ಳುತ್ತಿದ್ದಾರೆ. ಇದನ್ನೆ ತಪ್ಪು ಎಂದು ಹೇಳುವುದಿಲ್ಲ. ತೋಟಿ ತಳವಾರರ ಜಮೀನುಗಳನ್ನು ಅವರ ಖಾತೆಯಲ್ಲಿಡಬೇಕು ಎಂದರೆ, ಸೆಕ್ರೆಟರಿ ಮಿಸ್‌ಲೀಡ್ ಮಾಡಿ ನುಣ್ಣಗೆ ಬೇರೆಯವರಿಗೆ ಕೈತಪ್ಪಿ ಹೋಗುವ ಹಾಗೆ ಮಾಡಿದ್ದಾರೆ. ಇದು ಒಂದು ತರಹ ಸೊಸೈಟಿಯಲ್ಲಿ ಡಿಸೀಸ್ ಎಂದು ತಿಳಿದುಕೊಳ್ಳಬೇಕು. ಆ ರೀತಿ ಮುಚ್ಚಿ ಮಾಡುವ ಕಾಲ ರದ್ದಾಗಬೇಕು, ಆ ಕಾಲವೂ ಸನ್ನಿಹಿತವಾಗುತ್ತಿದೆ. ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಕರೆದಿದ್ದೀರಿ, ಅದು ಸಾಲದು, ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಕರೆಯಬೇಕು ಎಂದು ಹೇಳುತ್ತೇನೆ. ಕಳೆದ 25 ವರ್ಷಗಳ ಕಾಲದಲ್ಲಿ ಅಡ್ಮಿನಿಸ್ಟ್ರೇಷನ್ ಹೇಗೆ ನಡೆದಿದೆ ಅದಕ್ಕೆ ಸೀಮಿತವಾಗಬೇಕು. ನಾಗನಗೌಡ ಕಮಿಟಿ ರಿಪೋರ್ಟ್ ಬೇಕು, ಬ್ಯಾಕ್‌ವರ್ಡ್ ಕಮಿಷನ್ ಅಂಕಿಅಂಶ ಬೇಕು, ಇದರ ಜೊತೆಗೆ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಮಾಡಿ ಸುಲಲಿತವಾದ ರೀತಿಯಲ್ಲಿ ಇನ್ನು ಮುಂದೆಯಾದರೂ ಕೂಡ ಶೋಷಣೆ ರದ್ದಾಗುವ ರೀತಿಯಲ್ಲಿ ಸರ್ಕಾರ ನಡೆಯಬೇಕು. ಇದನ್ನು ತಾವು ಮಾಡಿ ಎಂದು ಒತ್ತಾಯ ಮಾಡಿ ಹೇಳುತ್ತೇನೆ. ಎಜುಕೇಷನ್ ಡಿಪಾರ್ಟ್‌ಮೆಂಟಿನವರು ಕೊಟ್ಟಿರತಕ್ಕ ಗ್ರಾಂಟ್, ಲೋನು ಯಾರು ಯಾರಿಗೋ ಹೋಗಿದೆ, ಪರೀಕ್ಷೆ ಮಾಡಿದರೆ; ಒಂದಲ್ಲ ಒಂದು ರೂಪದಲ್ಲಿ ಕಮ್ಯೂನಲ್ ಆಗಿದೆ ಎಂದು ಹೇಳುತ್ತೇನೆ. ಇದರ ಬಗ್ಗೆ ಸಮಗ್ರವಾದ ಅಂಕಿಅಂಶ ತೆಗೆದುಕೊಡು ಸೂಕ್ತ ವ್ಯವಸ್ಥಿತವಾದ ರೀತಿಯಲ್ಲಿ ಕಾರ್ಯಕ್ಕೆಗೊಂಡು ಬೇಗ, ಈ ಒಂದು ರಿಪೋರ್ಟ್‌ನ್ನು ಈ ಸಭೆಯ ಮುಂದೆ ಇಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.––ಈ ವಿಷಯವನ್ನು ಸಭೆಯಲ್ಲಿ ಸ್ವಲ್ಪ ಚರ್ಚೆ ಮಾಡಬೇಕಾದ ಸನ್ನಿವೇಶ ಬರುತ್ತದೆ. ಒಂದು ವೇಳೆ ಬಂದರೆ, ಅಧ್ಯಕ್ಷರ ಅಭಿಪ್ರಾಯ ತೆಗೆದುಕೊಂಡು ಕಾಲ ಎಕ್ಸ್‌ಟೆಂಡ್ ಮಾಡುವುದಕ್ಕೆ ಯೋಚನೆ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರಾದ ಶ್ರೀ ದೇವೇಗೌಡರು ಪ್ರಾಸ್ತಾಪಮಾಡಿರತಕ್ಕ ಈ ಒಂದು ವಿಚಾರ ರಾಜ್ಯದ ದೃಷ್ಟಿಯಿಂದ ಚರ್ಚೆಗೆ ಒಳಪಡತಕ್ಕದ್ದು ನ್ಯಾಯವಾಗಿದೆ. 1947ನೇ ಇಸವಿಯಿಂದ ಇಲ್ಲಿಯವರೆಗೆ ರಾಜ್ಯದಲ್ಲಿರತಕ್ಕ ಯಾವ ಯಾವ ಜನಾಂಗ ಎಷ್ಟೆಷ್ಟು ಸೌಕರ್ಯಗಳನ್ನು ಪಡೆದಿದೆ ಎನ್ನುವುದನ್ನು ಅಂಕಿಅಂಶಗಳ ಮುಖೇನ ಸಂಗ್ರಹಿಸಬೇಕು ಎನ್ನುವ ಮಾತು ಸತ್ಯವಾಗಿದೆ. ಅದನ್ನು ನಾನ ಬೆಂಬಲಿಸುತ್ತೇನೆ. ಒಟ್ಟಿನಲ್ಲಿ ಜಾತಿಯಿಂದಲೇ, ಜಾತಿಯ ವ್ಯವಸ್ಥೆಯಿಂದ ಕೂಡಿರತಕ್ಕ ಈ ಸಮಾಜನಲ್ಲಿ ಕೆಲವರಿಗೆ ಹೆಚ್ಚಿನ ಪ್ರಯೋಜನ ಆಗುವ ಸಂದರ್ಭ ಇರಬಹುದು. ಮಾನ್ಯ ದೇವೇಗೌಡರು ಈ ಮಾತನ್ನು

ಹೇಳುತ್ತಾ ಯಾವುದೋ ಕೆಲವು ಸಮಾಜಗಳು ಬೇರೆಯವರಿಗೆ ಶೋಷಣೆ ಮತ್ತು ದ್ರೋಹ ಮಾಡಿರಬಹುದು ಎನ್ನತಕ್ಕ ಸಂದೇಹವನ್ನು ವ್ಯಕ್ತಪಡಿಸಿದರು, ಆ ಮಾತನ್ನು ನಾನು ಒಪ್ಪುವುದಿಲ್ಲ. ಅವರ ದೃಷ್ಟಿಕೋನದಿಂದ ಅವರು ಹೇಳಿರಬಹುದು, ಅವರಿಗೆ ಸಿಕ್ಕಂತಹ ಸಂಧರ್ಭ ಅನುಕೂಲಕರವಾಗಿರುವುದರಿಂದ ಹೆಚ್ಚಿನ ಪ್ರಯೋಜನ ಸ್ವಾತಂತ್ರ್ಯ ಬಂದಮೇಲೆ ಸಿಕ್ಕಿರಬಹುದು ; ಸಿಕ್ಕಿದೆ. ಮುಖ್ಯಮಂತ್ರಿಗಳು ಒಕ್ಕಲಿಗರು ಆದರು, ಅವರೂ ಹೋದರು, ಲಿಂಗಾಯತರು ಬಂದರು. ಹಾಗೆ ದೊಡ್ಡ ದೊಡ್ಡ ಅಧಿಕಾರದಲ್ಲಿರುವವರನ್ನು ನೋಡಿದರೆ, ಹೆಚ್ಚು ಹೆಚ್ಚು ಎರಡು ಜನಾಂಗದ ಜನ ಕಾಣುವುದರಿಂದ ಹೆಚ್ಚಿನ ಪ್ರಯೋಜನ ಎರಡು ಜನಾಂಗ ಉಪಯೋಗಿಸಿಕೊಂಡಿವೆ ಎನ್ನುವ ಭಾವನೆ ಜನರಲ್ಲಿ ಬೆಳೆದಿದೆ ; ಬೆಳೆದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಅದರ ಜೊತೆಗೆ ಎಲ್ಲೆಲ್ಲಿ ಪ್ರಯೋಜನ ಸಿಕ್ಕಿದೆ, ಯಾರಲ್ಲಿ ಸ್ವಲ್ಪ ಸಂಪತ್ತು ಶೇಖರಣೆಯಾಗಿದೆ, ಅಂಥ ಜನಾಂಗದಲ್ಲಿ ಹೆಚ್ಚು ಜನ ವಿದ್ಯಾವಂತರಾದ್ದಾರೆ. ಸಾರ್ವಜನಿಕ ಕ್ಷೇತ್ರದಲ್ಲಿ ಯಾವ ಜನಾಂಗ ಮುಖಂಡತ್ವ ಹೊಂದಿವೆ, ಅಂಥ ಕಡೆಗಳಲ್ಲಿ ಹೆಚ್ಚು ಪ್ರಯೋಜನ, ಸಂಪತ್ತು ಶೇಖರಣೆಯಾಗತಕ್ಕ ನಿದರ್ಶನ ಕಾಣುತ್ತಿದೆ. ಬೇರೆ ಕೆಲವು ಜನಾಂಗದವರಲ್ಲಿ ಹಿಂದುಳಿದವರು, ಹರಿಜನಗಿರಿಜರು ಇವರಲ್ಲಿ ಸಂಪತ್ತು ಇಲ್ಲ, ವಿದ್ಯಾವಂತರು ಇಲ್ಲ, ಅವರಲ್ಲಿ ಸಾರ್ವಜನಿಕ ಮುಖಂಡತ್ವವೂ ಬೆಳೆದಿಲ್ಲ. ಈ ಮೂರು ಕಾರಣಗಳು ಅವರಲ್ಲಿ ಕಂಡುಬಾರದೆ ಇದ್ದುದರಿಂದ ಅವರಿಗೆ ಹೆಚ್ಚು ಪ್ರಯೋನ ಸಿಕ್ಕಲಿಲ್ಲ. ಇವರು ಎಲ್ಲೆಲ್ಲಿ ಸಹಾಯ ಪಡೆಯಬೇಕಾಗಿತ್ತೋ, ಅಲ್ಲಿ ಪಡೆಯುವುದಕ್ಕೆ ಆಗದೆ ಇರುವುದರಿಂದ ಏರು ಪೇರು ಸಾಮಾನ್ಯವಾಗಿ ಕಾಣುವುದಕ್ಕೆ ಸಾಧ್ಯವಾಗಿದೆ. ವಸ್ತುತಃ ಹೀಗೆ ಇದೆ. ಹೆಚ್ಚು ಭೂಮಿ ಹೊಂದಿರತಕ್ಕ ಜಮೀನ್ದಾರರು 2—3 ಜನಾಂಗದಲ್ಲಿ ಸಿಕ್ಕುತ್ತಾರೆ, ವಿದ್ಯಾವಂತರು ಹೆಚ್ಚು ಸಿಕ್ಕುವುದು 2—3 ಜನಾಂಗದಲ್ಲಿ, ಸಾರ್ವಜನಿಕ ಮುಖಂಡತ್ವ ಹೊಂದಿರತಕ್ಕವರು ಸಿಕ್ಕುವುದು 2—3 ಜನಾಂಗದಲ್ಲಿ, ಒಟ್ಟಿನಲ್ಲಿ ಸಂಪತ್ತು, ವಿದ್ಯಾಭ್ಯಾಸ ಮತ್ತು ಸಾರ್ವಜನಿಕ ಮುಖಂಡತ್ವ 2—3 ಜನಾಂಗದಲ್ಲಿ ಹೆಚ್ಚು ಸಿಕ್ಕುವುದರಿಂದ ಅವರು ಸಾರ್ವಜನಿಕ ಕ್ಷೇತ್ರದಲ್ಲಿ ಇರತಕ್ಕ ಬಹುಭಾಗ ಪ್ರಯೋಜನವನ್ನು ಪಡೆದಿದ್ದಾರೆ. ಲಿಂಗಾಯತರು, ಒಕ್ಕಲಿಗರು ಜಮೀನ್ದಾರರ ಸ್ಥಿತಿಯಲ್ಲಿದ್ದಾರೆ, ಮತ್ತು ಸಂಪತ್ತನ್ನು ಹೊಂದಿರುವ ಮೇಲು ಜಾತಿಯವರು. ಕೆಳಗಿನ ಜಾತಿಯವರು ಸಂಪತ್ತು ಇಲ್ಲದೆ, ನಿರಕ್ಷರರಾಗಿರುವವರು ರಾಜ್ಯದಲ್ಲಿ ಇರುವ ವ್ಯವಸ್ಥೆಯಾಗಿಬಿಟ್ಟಿದೆ. ಆದ್ದರಿಂದ ಎಲ್ಲಿ ಸಾರ್ವಜನಿಕ ಮುಖಂಡತ್ವ ಬೆಳೆದಿಲ್ಲವೋ ಅಂಥ ಕಡೆ ಸಾರ್ವಜನಿಕವಾಗಿ ಹೆಚ್ಚಿನ ಪ್ರಯೋಜನ ಪಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇದು ಜನರಿಗೆ ಮನದಟ್ಟಾಗಬೇಕಾಗಿದೆ. ಅನೇಕ ಸಂದರ್ಭಗಳಲ್ಲಿ ಕುಂಬಾರರನ್ನು ಒಬ್ಬ ಮುಖ್ಯಮಂತ್ರಿಯನ್ನಾಗಿ ಮಾಡಬೇಕು ಎಂದರೆ ಯಾವತ್ತೂ ಕುಂಬಾರರು ಮಂತ್ರಿಯಾಗಿಲ್ಲ, ಕುಂಬಾರರು ಶಾಸನ ಸಭಾ ಸದಸ್ಯರೂ ಆಗಿಲ್ಲ. ಅವರಲ್ಲಿ ಮುಖಂಡತ್ವ ಬೆಳೆದಿಲ್ಲ. ಹಜಾಮರು ಇದ್ದಾರೆ, ಅವರಿಗೆ ದೊಡ್ಡ ಹುದ್ದೆ ಕೊಡಿಸೋಣ ಎಂದರೆ, ಅಂಥ ಜನ ಅವರಲ್ಲಿ ಇರುವುದಿಲ್ಲ. ಹರಿಜನರು ಇದ್ದರೂ ಕೂಡ ಕೊಡುವುದಕ್ಕಾಗುವುದಿಲ್ಲ. ಈ ವಿಷಯದಲ್ಲಿ ಹಿಂದೆ ನಡೆದಂಥ ಘಟನೆಯನ್ನು ಕೇಳಿದ್ದೇವೆ. ಒಬ್ಬ ಮುಖ್ಯಮಂತ್ರಿ ಮಾಡಬೇಕಾದರೆ, ಒಕ್ಕಲಿಗರು ಎಷ್ಟು ಜನ ಇರುತ್ತಾರೆ, ಲಿಂಗಾಯಿತರು ಎಷ್ಟು ಜನ ಇರುತ್ತಾರೆ, ಅವರನ್ನು ಆಧಾರವಾಗಿ ತೆಗೆದುಕೊಂಡು ಮುಖ್ಯಮಂತ್ರಿಸ್ಥಾನವನ್ನು ಕೊಟ್ಟಿರುವುದು ನಡೆಯುತ್ತಾ ಬಂದಿದೆ. ಹರಿಜನರು ಇದ್ದರು ಮುಖ್ಯಮಂತ್ರಿ ಸ್ಥಾನ ಕೊಡುವಾಗ ಅವರ ಪೈಕಿ ಜನ ಇಲ್ಲದಿದ್ದರೆ, ಅವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡುವುದಕ್ಕೆ ಅವಕಾಶ ಆಗುತ್ತಾ ಇಲ್ಲ. ಬೇರೆಯವರ ಸ್ಥಾನ ಕೊಡೋಣ ಎಂದರೆ ಅವರಲ್ಲಿ ತಕ್ಕಂಥ ಜನ ಸಿಕ್ಕುವುದಿಲ್ಲ.

5-00 P. M.

ಅಕಸ್ಮಾತ್ತಾಗಿ ಅಂಥವರು ಸಿಕ್ಕಿದರೆ ಸ್ಥಾನ ಕೊಡುವುದಕ್ಕೆ ಅವರಿಗೆ ಬೆಂಬಲ ಸಿಕ್ಕುವುದಿಲ್ಲ. 20 ಜನ ಸೇರಿ ಅವರನ್ನು ಮಾಡೋಣ ಎಂದರೆ ಅವರು ಇಲ್ಲದಿದ್ದರೆ ಅವರಿಗೆ ಸ್ಥಾನ ಕೊಡುವುದಕ್ಕಾಗುವುದಿಲ್ಲ. ಹೀಗಾಗಿ ತಾರತಮ್ಯ ಭಾವನೆ ಬೆಳೆಸುವುದಕ್ಕೆ ಅವಕಾಶವಾಗಿದೆ. ಇದನ್ನು ಹೋಗಲಾಡಿಸುವ ದೃಷ್ಟಿಯಿಂದ ಸರ್ವೆ ಮಾಡಿ ಅಂಕಿಅಂಶಗಳನ್ನು ಸಂಗ್ರಹಣೆ ಮಾಡುವುದರಿಂದ ಉಪಕಾರವಾಗುತ್ತದೆ. ಯಾರು ನಿರ್ಬಲರು ಇದ್ದಾರೆ ಯಾರು ದುರ್ಬಲರು ಇದ್ದಾರೆ ಅವರಿಗೆ ಸ್ವಲ್ಪ ಹೆಚ್ಚಿನ ಸೌಕರ್ಯವನ್ನು ಒದಗಿಸಿಕೊಡುವುದರಿಂದ ಸಮಾನತೆ ಸಾಧಿಸುವುದಕ್ಕೆ ಸಹಾಯಕವಾಗಿ ಅವರು ಕೂಡ ಮುಂದೆ ಬರುವುದಕ್ಕೆ ಅನುಕೂಲವಾಗುತ್ತದೆ. ಮುಂದಿನ ದೃಷ್ಟಿಯನ್ನು ಇಟ್ಟುಕೊಂಡು ಮನುಷ್ಯನ ಒಳ್ಳೆಯ ಸಾಮಾಜಿಕ ಮತ್ತು ಸಮಾನತೆಯನ್ನು ಸಾಧಿಸುವುದಕ್ಕೆ ನಮಗೆ

(ಶ್ರೀ ಕಾಗೋಡು ತಿಮ್ಮಪ್ಪ)

ಆಧಾರಬೇಕು, ಆ ಆಧಾರ ಕಲ್ಪಿಸುವ ದೃಷ್ಟಿಯಿಂದ ಅಂಕಿಅಂಶಗಳ ಸಂಗ್ರಹಣೆ ಮಾಡುವುದು ಸೂಕ್ತ ಎಂದು ಈ ಸಂದರ್ಭದಲ್ಲಿ ಈ ನಿಲುವಳಿ ಸೂಚನೆಯನ್ನು ಮತ್ತು ಶ್ರೀ ಮಾನ್ ದೇವೇಗೌಡರು ಹೇಳಿರತಕ್ಕ ಮಾತುಗಳನ್ನು ಸಮರ್ಥನೆ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಚರ್ಚೆಗೆ ಮಂಡಿಸಿರತಕ್ಕ ವಿಷಯವನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಸ್ವಾಗತ ಮಾಡುತ್ತಾ ಕೆಲವು ವಿಷಯಗಳನ್ನು ಕೂಡ ಈ ಸದನದ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಮಾತನಾಡಿರತಕ್ಕ ಮಾನ್ಯ ಸದಸ್ಯರುಗಳು ಸ್ಪಷ್ಟವಾದಂಥ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಅದಕ್ಕೆ ಸಕಾರಣವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದಂಥ ಶ್ರೀಮಾನ್ ಪ್ರಭಾಕರ್ ರವರು ಬಹಳ ಒಳ್ಳೆಯ ವಿಷಯ ಚರ್ಚೆ ಮಾಡಿದರು. ಸ್ವಾತಂತ್ರ್ಯ ಬಂದಮೇಲೆ ಯಾವ ರೀತಿ ಜಾತಿಗಳು ಪ್ರಾರಂಭವಾಯಿತು ಎನ್ನತಕ್ಕ ವಿಷಯವನ್ನು ಹಾಗೆ ಮುಟ್ಟಿಬಿಟ್ಟರು. ನನ್ನ ಪ್ರಕಾರ ಇದು ಮುಟ್ಟಿಬಿಡುವ ವಿಷಯವಲ್ಲ. ಬಹಳ ಆಳವಾಗಿ ನೋಡತಕ್ಕ ವಿಷಯ ಮತ್ತು ತೀರ್ಮಾನ ಮಾಡುವ ವಿಷಯ ಆಗಿದೆ. ಸ್ವಾತಂತ್ರ್ಯ ಪೂರ್ವ ಬ್ರಾಹ್ಮಣರ ಕಾಲ ಇತ್ತು. 12ನೇ ಶತಮಾನದಲ್ಲಿ ಲಿಂಗಾಯತರ ಕಾಲ ಇತ್ತು. ಶ್ರೀ ಬಿಜ್ಜಳನ ಆಸ್ಥಾನದಲ್ಲಿ ಬಸವಣ್ಣನವರು ಮಂತ್ರಿಯಾಗಿದ್ದರು, 12ನೇ ಶತಮಾನ ಮುಗಿದ ಮೇಲೆ ಲಿಂಗಾಯಿತರ ಪ್ರಭಾವ ಅಂತ್ಯವಾಗಿ. 20ನೇ ಶತಮಾನದ ಮಧ್ಯೆ ಕಾಲದಲ್ಲಿ ಇತ್ತು ಎಂದು ಹೇಳುತ್ತೇನೆ. ಇರತಕ್ಕ ದಾಖಲೆಗಳ ಪ್ರಕಾರ ಸ್ವಲ್ಪ ಹೆಚ್ಚು ಕಡಿಮೆ 12ನೇ ಶತಮಾನ ಮತ್ತು 20ನೇ ಶತಮಾನದಲ್ಲಿ ಲಿಂಗಾಯಿತರು ಆಳಿದರು. ಬ್ರಾಹ್ಮಣರ ಯುಗ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಇತ್ತು ಅವರನ್ನು ಪಾಪ ಹಿಂಡಿ ಹಿಪ್ಪೆಮಾಡಿ ಬಿಸಾಡಿಬಿಟ್ಟರು. ಅವರಲ್ಲಿ ಭಾರಿ ಭಾರಿ ಆಡಳಿತ ಅಧಿಕಾರಿಗಳು ಇದ್ದಾರೆ. ಅವರನ್ನು ಮರೆಯುವ ಹಾಗಿಲ್ಲ. ಆದರೆ ಈ ಕಾಲೇಜಿಗೆ ಬರತಕ್ಕ ಮಕ್ಕಳಿಗೆ ಸೀಟು ಕೊಡತಕ್ಕ ವಿಷಯದಲ್ಲಿ, ಬೇರೆ ಸೌಲಭ್ಯ ಕೊಡುವ ವಿಷಯದಲ್ಲಿ ಅವರಿಗೆ ಈಗ ತೊಂದರೆಯಾಗುತ್ತಿದೆ. ಸ್ವಾತಂತ್ರ್ಯ ಬರುವ ಮೊದಲು ಅವರಿಗೆ ಆಡಳಿತದ ಹಿಡಿತ ಇತ್ತು. ಆಡಳಿತದ ಕಡಿವಾಣ ಅವರ ಕೈಯಲ್ಲಿ ಇತ್ತು. ಮೊದಲು ಏನು ಶಕ್ತಿಯನ್ನು ಅವರು ಪಡೆದುಕೊಂಡು ಇದ್ದರು ಈಗಲೂ ಕೂಡ ಸೆಕ್ರೆಟೇರಿಯೇಟ್ ಲೆವಲ್‌ನಲ್ಲಿ ಮತ್ತು ಬೇರೆ ಎಲ್ಲಾ ಇಲಾಖೆಯಲ್ಲೂ ಪಡೆದುಕೊಂಡು ಇದ್ದಾರೆ. ಬ್ರಾಹ್ಮಣ ಯುಗ ಹೋದರೂ ಅದು ತನ್ನ ಶಕ್ತಿಯನ್ನು ಇನ್ನೂ ಬೇರು ಬಿಟ್ಟುಕೊಂಡಿದೆ. ಉದಾಹರಣೆಗೆ ವಿಧಾನ ಸೌಧದಲ್ಲಿರುವ ಇಲಾಖೆಯಲ್ಲಿ ಇನ್ನು ಸೆಕ್ರೆಟರಿಗಳು ಇದ್ದಾರೆ. ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್‌ನಲ್ಲಿಯೂ ಅವರು ಇದ್ದಾರೆ. ಬೇರೆಯವರು ಅವರನ್ನು ಮಾತನಾಡಿಸುವ ಹಾಗಿಲ್ಲ. 2ನೆಯದು ಆನಂತರ ಬಂದವರು ವಕ್ಕಲಿಗರು ಇವರು ಕೂಡ ದೇಶ ಉದ್ಧಾರ ಮಾಡುತ್ತೇವೆಂದು ಬಂದರು. ವಕ್ಕಲಿಗರಾದ ಶ್ರೀಮಾನ್ ಹನುಮಂತಯ್ಯನವರ ಕಾಲ ಬಹಳ ಜೋರಾಗಿ ನಡೆಯಿತು. ಅತಿ ವೇಗದಿಂದ ನಡೆಯಿತು, ಅವರು ಕೂಡ ಅವರ ಕಷೆಯುವರನ್ನು ತೂರಿಸುವುದಕ್ಕೆ ಪ್ರಯತ್ನಪಟ್ಟು ಸಾಕಷ್ಟು ತೂರಿಸಿದ್ದಾರೆ. ಆನಂತರ ಬಂತು ಲಿಂಗಾಯಿತರ ಕಾಲ. ಮಾನ್ಯ ದೇವೇಗೌಡರು ಚರ್ಚೆಗೆ ಇಟ್ಟಿರತಕ್ಕದ್ದು ಈ ವಿಷಯಗಳನ್ನು ಆಳವಾಗಿ ನೋಡಿ ಇದರ ಬಗ್ಗೆ ಒಂದು ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಆಗಬೇಕು ಈ ಅನ್ಯಾಯವನ್ನು ಪತ್ತೆ ಹಚ್ಚಬೇಕು ಎನ್ನುವ ವಿಷಯ ಇಟ್ಟಿದ್ದಾರೆ. ಈ ಲಿಂಗಾಯಿತರ ಕಾಲ ಬಂದಮೇಲೆ ಇವರು ಕೂಡ ಸಾಕಷ್ಟು ಪ್ರಮಾಣದಲ್ಲಿ ಆಡಳಿತದಲ್ಲಿ ನೇರವಾಗಿ ಕೈಹಾಕಿದ್ದಾರೆ. ಈಗ ಸ್ವಾತಂತ್ರ್ಯ ಬಂದಮೇಲೆ ನಮಗೆ ಸಿಕ್ಕಿರತಕ್ಕದ್ದು ಎರಡು, ಲಿಂಗವಕ್ಕಲಿಗರಕಾಲ ಎಂದು ಹೇಳಬಹುದು. ಸ್ವಾತಂತ್ರ್ಯ ಬಂದಮೇಲೆ ಲಿಂಗವಕ್ಕಲಿಗರ ಕಾಲದಿಂದ ಇವರು ಇಬ್ಬರು ಕೂಡ ತಮ್ಮ ಅಧಿಕಾರವನ್ನು ಸಂಪೂರ್ಣವಾಗಿ ದುರುಪಯೋಗ ಪಡಿಸಿದ್ದಾರೆ. ತಮಗೆ ಇರತಕ್ಕ ಅಧಿಕಾರವನ್ನು ತಮಗೆ ಇರತಕ್ಕ ಸ್ಥಾನವನ್ನು ಸಂಪೂರ್ಣವಾಗಿ ದುರುಪಯೋಗ ಪಡಿಸಿದ್ದಾರೆ. 25 ವರ್ಷಗಳಿಂದ ಎಷ್ಟು ಒಳ್ಳೆಯದಕ್ಕಾಗಿ ಅಧಿಕಾರವನ್ನು ಉಪಯೋಗಮಾಡಿಕೊಳ್ಳಬೇಕಾಗಿತ್ತೋ ಮಹಾತ್ಮ ಗಾಂಧಿಯವರನ್ನು ನೆನಸಬೇಕಾಗಿತ್ತೋ ಅದನ್ನೆಲ್ಲಾ ಮರೆತು ಹೋಗಿದ್ದಾರೆ. ಗಾಂಧೀಜಿಯವರ ಅನುಯಾಯಿಗಳು ಸೆಕ್ಯೂಲರ್ ಸ್ಟೇಟ್ ಎಂದೆಲ್ಲಾ ಹೇಳಿ ರಾಜ್ಯಾಂಗದಲ್ಲಿ ಬರೆದು ಬಿಸಾಟು ಹೋದರು; ನಮ್ಮ ಕಣ್ಣಿಗೆ ಮಣ್ಣು ಎರಚಿದರು ಈ ರೀತಿ ಸಂಪೂರ್ಣವಾಗಿ ರಾಜ್ಯಾಂಗದ ದುರುಪಯೋಗ ಮಾಡುವ ಕೆಲಸ ಮಾಡಬಾರದಾಗಿತ್ತು. ಮಹಾತ್ಮ ಗಾಂಧಿಯವರು ಹೊಲೆಯರು ಎನ್ನುವ ಮಾತು ಕೀಳು ಭಾವನೆ ಮೂಡಿಸುತ್ತದೆ ಎಂದು ಹೇಳಿ ಅವರು ಮಾನಮರ್ಯಾದೆಯಿಂದ ಜೀವನ ಮಾಡುವುದಕ್ಕೆ ಪೂರಕವಾಗಲು ಅವರಿಗೆ ಹರಿಜನ ಎಂದು ಹೆಸರು ಇಟ್ಟರು, ಅದನ್ನೇ ಪುಣ್ಯಕ್ಕೆ ಸರ್ಕಾರೀ ದಾಖಲೆಯಲ್ಲಾ ಇಟ್ಟರು. ಹೊಲೆಯರು ಊರ ಹೊರಗೆ ಇರುವಂತ ಜನ ಎನ್ನುವ

ಕಾಲ ಇತ್ತು, ಮಹಾತ್ಮಾ ಗಾಂಧಿಯವರ ಮೊಮ್ಮಕ್ಕಳು ಪೂರ್ತಿ ಜಾತಿ ಮರಗಳನ್ನು ಹಾಕಿದ್ದಾರೆ. ಅದು ಯಾವ ಮಟ್ಟಕ್ಕೆ ಬಂದಿದೆ ಎಂದರೆ ಕಾಲೇಜಿನಲ್ಲಿ ಓದತಕ್ಕ ಒಬ್ಬ ಹುಡುಗ ಸೀಟು ಪಡೆದುಕೊಳ್ಳಬೇಕಾದರೆ ಅವನ ಜಾತಿ ಯಾವುದು ಎಂದು ನೋಡುತ್ತಾರೆ. ಅದೇ ರೀತಿ ಆಯಾ ಜಾತಿಗೆ ಸಂಬಂಧಪಟ್ಟವರನ್ನು ನೋಡಿಕೊಂಡು ರ್ಯಾಂಕ್ ಕೊಡುವುದು ಸ್ಕಾಲರ್‌ಷಿಪ್ ಕೊಡುವುದು ಒಂದು ಪದ್ಧತಿಯಾಗಿ ನಡೆದುಕೊಂಡು ಬಂದಿದೆ. ಇದನ್ನು ರಿಪೇರಿ ಮಾಡುವುದಕ್ಕೆ ಗಾಂಧೀಜಿ ಮಕ್ಕಳು ಆಡಳಿತದಲ್ಲಿ 25 ವರ್ಷಗಳು ಏನು ಮಾಡಿದ್ದಾರೆ? ಸ್ವಾತಂತ್ರ್ಯ ಬಂದಮೇಲೆ ನೀವು ಮಾಡಿರತಕ್ಕ ರಾಜಕೀಯ ಇದು. ಇವೊತ್ತು ಜಾತಿ ಅಮಲಿನಲ್ಲಿ ವಿಷ ಬೀಜವನ್ನು ಬಿತ್ತಿ ಜಾತಿಯ ಹೆಸರಿನಲ್ಲಿ ವಿಚಾರ ಮಾಡತಕ್ಕ ಮನಸ್ಸು ಬೆಳೆಯ ಬಿಟ್ಟಿದ್ದೀರಿ. ನಾಳೆ ಅವರ ಉನ್ನತಿ ಆಗಬೇಕು. ಬರೀ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಅಷ್ಟೇ ಅಲ್ಲ ಏನು ಅನ್ಯಾಯ ಮಾಡಿದ್ದಾರೆ ಅದರ ಬಗ್ಗೆ ಕೂಡ ಸಾರ್ವಜನಿಕವಾಗಿ ವಿಚಾರಣೆ ಆಗಬೇಕು. ನೀವು ಮಾಡಿರತಕ್ಕ ಅನ್ಯಾಯಗಳು ಈ ದೇಶದಲ್ಲಿ ಎಷ್ಟು ಆಗಿವೆ ಇದರ ಬಗ್ಗೆ ಸಾರ್ವಜನಿಕ ವಿಚಾರಣೆ ಯಾಗಬೇಕಾದುದು ಅಗತ್ಯ. ಲಿಂಗಾಯತರ ಯೂನಿವರ್ಸಿಟಿ ಮೈಸೂರು ಯೂನಿವರ್ಸಿಟಿಯೋ, ಒಕ್ಕಲಿಗರ ಯೂನಿವರ್ಸಿಟಿ ಬೆಂಗಳೂರು ಯೂನಿವರ್ಸಿಟಿಯೋ ಇನ್ನೂ ತೀರ್ಮಾನವಾಗಿಲ್ಲ. ಈಚೆಗೆ ಶ್ರೀ ಜವರೇಗೌಡರನ್ನು ಮೈಸೂರು ಯೂನಿವರ್ಸಿಟಿಯಿಂದ ತೆಗೆಯುತ್ತಾರೆ ಎಂದು ಅವರು ತಮ್ಮ ಅಳವನ್ನು ಗೋಳಾಡಿಕೊಂಡು ಹೇಳುತ್ತಿದ್ದಾರೆಂದು ಕೇಳಿದ್ದೇವೆ. ಅವರು ಮೈಸೂರು ಯೂನಿವರ್ಸಿಟಿಯಲ್ಲಿ ಇದ್ದರೆ ಅದು ಉದ್ಧಾರವಾಗುವುದಿಲ್ಲ ಎಂತಲೋ ಏನೋ......

ಶ್ರೀ ಕೋಣಂದೂರು ಲಿಂಗಪ್ಪ.—ಈ ಪ್ರಸಂಗವನ್ನು ಇಲ್ಲಿ ತರುವುದು ಅಷ್ಟು ಯೋಗ್ಯವಾದುದಲ್ಲ.

ಶ್ರೀ ಎಸ್. ಬಂಗಾರಪ್ಪ.—ಅನಾವಶ್ಯಕವಾಗಿ ಇಂತಹ ವಿಚಾರಗಳನ್ನು ತರಬಾರದು ಎನ್ನುವುದನ್ನು ನಾನೂ ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ಇಲ್ಲಿರುವ ಕಾರಣ ಬೇರೆಯಾಗಿರುವುದರಿಂದ ಅವರೂ ಕೂಡ ಇದನ್ನು ಒಪ್ಪಲೇ ಬೇಕಾಗುತ್ತದೆ. ಅದಕ್ಕಾಗಿ ನಾನು ಹೇಳುವುದು ಸ್ವಾತಂತ್ರ್ಯ ಬಂದು ಆಡಳಿತವನ್ನು ಸಂಪೂರ್ಣವಾಗಿ ದುರುಪಯೋಗಪಡಿಸಿಕೊಂಡಿದ್ದಾರೆ, ಹೀಗೆ ಅಧಿಕಾರದ ದುರುಪಯೋಗವಾಗಿರುವುದು ಸಂಪೂರ್ಣವಾಗಿ ವಿಚಾರಣೆಯಾಗಲೇ ಬೇಕು, ಇದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡುವುದು ಅತ್ಯಾವಶ್ಯಕ. ಏಕೆಂದರೆ ಅಧಿಕಾರಕ್ಕೆ ಬಂದ ಮಂತ್ರಿಗಳು ಕೂಡ ಒಬ್ಬ ನಾಲ್ಕನೇ ದರ್ಜೆಯ ನೌಕರರನ್ನು ಕೂಡ ನೇಮಕ ಮಾಡಿಕೊಂಡಿರುವ ನಿದರ್ಶನಗಳಿವೆ. ಇದಕ್ಕಾಗಿ ಇಲ್ಲಿ ಒಂದು ಸಮಿತಿಯನ್ನು ನೇಮಕ ಮಾಡುವುದು ಒಳ್ಳೆಯದು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ತಂದಿರುವ ಸೂಚನೆ ಬಹಳ ಒಳ್ಳೆಯದು. ಇದಕ್ಕಾಗಿ ಮಾನ್ಯ ಶ್ರೀ ದೇವೇಗೌಡರವರು ತಂದಿರತಕ್ಕ ನಿರ್ಣಯಕ್ಕೆ ಒಪ್ಪಿಗೆ ಕೊಟ್ಟು ಒಂದು ಸಮಿತಿಯನ್ನು ನೇಮಕ ಮಾಡುವುದಕ್ಕೆ ಅವಕಾಶ ಕೊಡಬೇಕು, ಇದರಲ್ಲಿ ತಪ್ಪು ಯಾರದೇ ಇರಲಿ ಅದು ಸಾರ್ವಜನಿಕರ ದೃಷ್ಟಿಗೆ ಬರಬೇಕೆಂದು ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಹೆಚ್. ಎಸ್. ಸಿದ್ದಪ್ಪ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಏನು ಒಂದು ವಿಷಯ ಮಂಡನೆ ಮಾಡಿದ್ದಾರೆ ಅವರ ಬಗ್ಗೆ ಇದುವರೆಗೆ ನನ್ನ ಗೆಳೆಯರು ಇದನ್ನು ಸಮರ್ಥನೆ ಮಾಡುವುದರ ಅವಶ್ಯಕತೆ ಇದೆ ಎನ್ನುವುದನ್ನು ಇಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಒಟ್ಟಿನಲ್ಲಿ ನಾನೂ ಕೂಡ ಇದನ್ನು ಪ್ರತಿಪಾದಿಸುತ್ತಾ ಒಂದೆರಡು ವಿಷಯಗಳನ್ನು ಇಲ್ಲಿ ಹೇಳಬಯಸುತ್ತೇನೆ. ಹಿಂದೆ ಇದ್ದ ಮಂತ್ರಿಮಂಡಲಗಳು ಯಾವುದೇ ಒಂದು ಕೋಮಿನ ಪ್ರಾತಿನಿಧ್ಯ ಇತ್ತೋ ಅದರಂತೆ ನಡೆಯುತ್ತಿತ್ತು ಎನ್ನುವುದು ಜನಜನಿತವಾಗಿದೆ, ಬಹುಸಂಖ್ಯಾತ ಕೋಮಿನವರು ಯಾರು ಇದ್ದರೋ ಅವರು ಅಲ್ಪಸಂಖ್ಯಾತ ಕೋಮುಗಳನ್ನು ತುಳಿಯುತ್ತ ಬರುತ್ತಿದ್ದರು. ಅಲ್ಪ ಸಂಖ್ಯಾತರಿಗೆ ಯಾವ ಅನುಕೂಲಗಳೂ ದೊರೆಯುತ್ತಿರಲಿಲ್ಲ ಇದರಲ್ಲಿ ಲಯನ್ಸ್ ಷೇರ್ ಎನ್ನುವಂತೆ ಬಹು ಪಾಲು ಬಹು ಸಂಖ್ಯಾತ ಕೋಮಿನವರೇ ಬಳಸಿಕೊಂಡು ಬರುತ್ತಿದ್ದರು, ನಮ್ಮ ನಾಯಕರಾದ ಶ್ರೀ ದೇವೇಗೌಡರರಿಗೆ ಯಾವುದೇ ದೃಷ್ಟಿ ಇರಲಿ, ನಮ್ಮ ಮುಖ್ಯ ಮಂತ್ರಿಗಳಿಗೆ ಯಾವುದೇ ದೃಷ್ಟಿ ಇರಲಿ, ನನ್ನ ದೃಷ್ಟಿಯಿಂದ ಹೇಳುವುದಾದರೆ ನಾವು ಜನಗಳ ಬಳಿ ಹೋಗಿ ಓಡಾಡುವಾಗ ನಾವು ಇಂತಹ ಕೋಮಿನವರು ಎಂದು ಹೇಳುವ ಧೈರ್ಯ ನಮಗೆ ಇಲ್ಲ. ಒಂದು ಬಸ್ಸಿನಲ್ಲಿ ನಾವು ಪ್ರಯಾಣ ಮಾಡುವಾಗ ಅಲ್ಲಿ ನಮ್ಮಂತಹ ಒಬ್ಬರು ಶಾಸಕರೂ ಹೋಗುತ್ತಿದ್ದರೆ ಅವರು ಯಾವ ಕೋಮಿನವರು ಎಂದು ಕೇಳುತ್ತಾರೆ, ಅವರು ಲಿಂಗಾಯತ ಕೋಮಿನವರು ಎಂದು ತಿಳಿದರೆ ಅಲ್ಲಿರುವ ಲಿಂಗಾಯೇತರ ಕೋಮಿನವರು ಎಲ್ಲರೂ ಸೇರಿಕೊಂಡು ನಮ್ಮನ್ನು ಬಹು ಕೀಳು ದೃಷ್ಟಿಯಿಂದ ನೋಡುತ್ತಾರೆ. ನಾವು ಯಾವುದೇ ದೃಷ್ಟಿಯಿಂದ ಚರ್ಚೆ ಮಾಡಲು ಹೋದರೆ ನಮ್ಮ ಮೇಲೆ ಒಂದು ಅಪಾದನೆ ಮಾಡಿದಂತಾಗುತ್ತದೆ. ಇದು ಹೇಗಿದೆ ಎಂದರೆ ನಮ್ಮ ದೇಶದಲ್ಲಿ ಒಬ್ಬ ಮಾನವನ ರಕ್ತ ಕೆಟ್ಟರೆ ಅದಕ್ಕೆ ಯಾವುದೋ ರೀತಿಯಾದ ಡಿಸೀಸ್

(ಶ್ರೀ ಎಚ್. ಎಸ್. ಸಿದ್ದಪ್ಪ)

ಎನ್ನುತ್ತಾರೆ ಸಿಫಿಲಟಿಕ್ ಡಿಸೀಸ್ ಎಂತಲೋ ವೆನೀರಿಯಲ್ ಡಿಸೀಸ್ ಎಂತಲೋ ಕರೆಯುತ್ತಾರೆ. ಇದನ್ನು ವಾಸಿ ಮಾಡುವುದಕ್ಕಾಗುವುದಿಲ್ಲ ಮತ್ತು ಈ ರೋಗ ಅವರ ವಂಶದಲ್ಲಿ ಏಳು ತಲೆಮಾರುಗಳವರೆಗೆ ಇರುತ್ತದೆ ಎಂದು ಹೇಳುತ್ತಾರೆ. ಹೀಗೆ ಇದು ವಂಶಪಾರಂಪರ್ಯವಾಗಿ ಬರುವ ರೋಗವಾಗಿದೆ. ಈ ರೋಗ ಎಲ್ಲ ಕಡೆಯೂ ಹರಡಿ ಹಬ್ಬುತ್ತಿದೆ ಇದನ್ನು ಒಬ್ಬರೂ ವಾಸಿ ಮಾಡಲು ಆಗುವುದಿಲ್ಲ ಎಂದು ಹೇಳುತ್ತಾರೆ.

ಶ್ರೀ ಹೆಚ್. ಸಿದ್ದವೀರಪ್ಪ.—ಈಗ ಇದನ್ನು ಸಂಪೂರ್ಣವಾಗಿ ಕ್ಯೂರು ಮಾಡಬಹುದು. That was at a time when Medicine was not there. Now if a person gets a disease we can cure it.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಈಗ ಇಲ್ಲಿ ಇಂತಹ ಕೋಮುವಾರು ರೋಗ ಬಂದಿರುವುದನ್ನು ತೆಗೆಯಬೇಕಾದರೆ ಇಂತಹ ಒಂದು ಸಮಿತಿ ಮಾಡಬೇಕು, ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡ ಬಯಸುತ್ತೇನೆ. ಇದರ ಔಚಿತ್ಯತೆ ಇಲ್ಲದೇ ಇರಬಹುದು, ಆದರೂ ಹೇಳುತ್ತೇನೆ. ಹಿಂದೆ ಮಾನ್ಯ ಸದಸ್ಯರಾದ ಶ್ರೀ ಬಂಗಾರಪ್ಪನವರು ಬಸವಣ್ಣನವರು ಬಂದರು ಅದರಿಂದಾಗಿ ಲಿಂಗಾಯತರ ರಾಜ್ಯ ಬಂತು ಎಂದು ಹೇಳಿದರು. ಮಾನ್ಯ ಸದಸ್ಯರಾದ ಶ್ರೀ ಕೋಣಂದೂರು ಲಿಂಗಪ್ಪನವರ ಕರ್ನಾಟಕದ ನಿರ್ಣಯದ ಬಗ್ಗೆ ಮಾತಾಡುವಾಗ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನವ ಬಸವಣ್ಣನವರು ನಮ್ಮ ಶ್ರೀ ದೇವರಾಜ ಅರಸ್‌ರವರು ಎಂದರು. ಅರಸ್‌ರವರೂ ಕೂಡ ಲಿಂಗಾಯತ ವರ್ಗಕ್ಕೆ ಸೇರಿದವರೇ ಆದರೆ, ಇವರು ನಿಜಲಿಂಗಪ್ಪನವರಂತೆ, ಜತ್ತಿಯವರಂತೆ ಲಿಂಗಾಯತರು ಅಲ್ಲದಿದ್ದರೂ ಅವರೂ ಲಿಂಗಾಯತ ಮತಕ್ಕೆ ಸೇರಿದ ಅರಸು ಕೋಮಿನವರೇ, ಆದರೆ ಅವರ ಕೋಮು ಏನೇ ಇರಲಿ ಅವರು ಒಕ್ಕಲಿಗ ಕೋಮಿನವರಲ್ಲದವರು ಎನ್ನುವುದು ನಿರ್ವಿವಾದದ ಸಂಗತಿ. ಜನಸಾಮಾನ್ಯರು ಇಂದು ಬಹು ಸಂಖ್ಯಾತ ಕೋಮಿನವರಾದ ಲಿಂಗಾಯತರು ಅಲ್ಪ ಸಂಖ್ಯಾತ ಕೋಮಿನವರನ್ನು ಚೆನ್ನಾಗಿ ಲೂಟಿ ಮಾಡಿದ್ದಾರೆ, ಇಂತಹ ಒಂದು ರೋಗವನ್ನು ನಿವಾರಣೆ ಮಾಡಲು ಆಗದೇ ಇರುವ ಹಾಗಿದೆ, ಇಂತಹ ಒಂದು ರೋಗವನ್ನು ನಿವಾರಣೆ ಮಾಡಲು ಈ ಸಂಜೀವಿನಿ ಮಾತ್ರೆ ಎಂದರೆ ನಮ್ಮ ಪಕ್ಷದ ನಾಯಕರು ಇಟ್ಟಿರುವ ಸಂಜೀವಿನಿ ಅಸ್ತ್ರ ಮಾಡಲು ಇಂತಹ ಒಂದು ಕಮಿಟಿ ಮಾಡಿ ಎಂದು ಈ ಸಭೆಯಲ್ಲಿ ಇಂದು ಹೇಳುತ್ತಿರುವುದು. ಮೊನ್ನೆ ಒಂದು ಪ್ರಶ್ನೆ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಎಷ್ಟು ಜನರು ಪೋಲೀಸು ಸಬ್ ಇನ್ಸ್‌ಪೆಕ್ಟರನ್ನು ನೇಮಕ ಮಾಡಿದರು ಎಂದು ಕೇಳಿದಾಗ ಅದರಲ್ಲಿ ಎಷ್ಟು ಜನರಿಗೆ ಕೋಮು ಆಧಾರದ ಮೇಲೆ ಕೊಟ್ಟಿದ್ದಾರೆ ಎನ್ನುವುದು ಚೆನ್ನಾಗಿ ತಿಳಿದಿದೆ, ಇದನ್ನು ನೋಡಿದರೆ ಬಹು ಸಂಖ್ಯಾತ ಕೋಮಿನವರು ಅಲ್ಪ ಸಂಖ್ಯಾತ ಕೋಮುಗಳವರನ್ನು ತುಳಿಯುತ್ತಾ ಬರುವುದೇ ಸರಕಾರದ ನೀತಿಯಾಗಿದೆ, ಇದು ಸ್ವಾಭಾವಿಕ. ಅಧಿಕಾರದಲ್ಲಿ ಬಂದವರು ಯಾರೇ ಇರಲಿ ಅವರು ಇಂತಹ ಕೋಮುವಾರು ನೀತಿ ಅನುಸರಿಸಿಲ್ಲ ಎನ್ನುವುದನ್ನು ಜನತೆಗೆ ತೋರಿಸುವುದು ಅವರ ಜವಾಬುದಾರಿ. ಈಗಲಾದರೂ ಅಭಿನವ ಬಸವಣ್ಣನವರಾದ ಶ್ರೀಮಾನ್ ದೇವರಾಜಅರಸ್‌ರವರು ಈ ದೇಶದೊಳಗಿರುವ ಕೋಮುವಾರು ವಿಚಾರಗಳನ್ನು ಚೆನ್ನಾಗಿ ದಮನ ಮಾಡಿ ಹಿಂಡಿ ಹಿಂಡಿ ನಮ್ಮ ಈ ಸಭೆಯ ಮುಂದೆ ಇಟ್ಟಿದ್ದಾದರೆ ಇದು ಹೇಗಾಗುತ್ತದೆ ಎಂದರೆ ಹಿಂದೆ ವಿದುರಾಶ್ವತ್ಥದಲ್ಲಿ ಒಂದು ಬಹಳ ಹಳೇ ಕಾಲದ ಆಲದ ಮರ ಇತ್ತು. ಅದು ಹೇಗೆ ಬೇರು ಬಿಟ್ಟಿತ್ತೋ ಹಾಗೆ ನಮ್ಮ ಮುಖ್ಯ ಮಂತ್ರಿಗಳೂ ಕೂಡ ಅವರ ಪಕ್ಷದಲ್ಲಿ ಬೇರು ಬಿಟ್ಟಿರುವಂತಹ ನಾಯಕರು. ಮೆಜಾರಿಟಿ ಕಮ್ಯೂನಿಟಿಯವರನ್ನು ಎಕ್ಸ್‌ಪ್ಲಾಯಿಟ್ ಮಾಡುವುದು ಶ್ರೀ ನಿಜಲಿಂಗಪ್ಪನವರ ನೀತಿಯಾಗಿತ್ತು. The Mysore State population has been affected with the disease called communalism...ಈ ದೃಷ್ಟಿಯಿಂದ ನಾನು ಇದನ್ನು ಸಮರ್ಥನೆ ಮಾಡುತ್ತೇನೆ. ಇದರ ಜೊತೆಗೆ ರಾಜ್ಯಸರಕಾರದಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ ಯಾವ ಜನರ ಮೇಲೂ ದ್ವೇಷಾಸೂಯೆಗಳು ಬೇಡ, ಶಾಂತಿಯಿಂದ ಜೀವನ ಮಾಡಬೇಕು, ಒಬ್ಬರಿಗೊಬ್ಬರು ಅಣ್ಣತಮ್ಮಂದಿರಂತೆ, ಅವರ ಬಂಧು ಬಳಗದವರು ಜೀವನವನ್ನು ನಡೆಸಬೇಕು. ಇದಕ್ಕಾಗಿ ಇಲ್ಲಿ ಹೇಳುವಂತೆ ಒಂದು ಫ್ಯಾಕ್ಟ್ ಫೈಂಡಿಂಗ್ ಕಮಿಟಿಯನ್ನು ಮಾಡುವುದು ಬಹು ಸಮಂಜಸವಾಗಿದೆ, ಇದನ್ನು ಮಾಡಲು ನೀವು ತಿಕ್ಕಾಡುವುದು ಬೇಡ ದ್ವೇಷಾಸೂಯೆಗಳನ್ನು ಉಲ್ಬಣ ಮಾಡುವುದು ಬೇಡ, ಅವರ ಬಗ್ಗೆ ಅಭಿಮಾನ ಇಡಿ.

ಆದ್ದರಿಂದ ಇದುವರೆಗೆ ಜಾಸ್ತಿ ಎಕ್ಸ್‌ಪ್ಲಾಯಿಟ್ ಮಾಡಿರುವ ಜನರು ಇನ್ನು ಮುಂದೆಯೂ ಆಸ್ತಿ ಮಾಡುವುದು ಸರಿಯಲ್ಲ. ಏಕೆಂದರೆ ಅವರಿಗೆ ನಿರೀಕ್ಷಿಸಿದ್ದಕಿಂತ ಹೆಚ್ಚು ದೊರಕಿದೆ. ಆದ್ದರಿಂದ್ದ ಅವರು ಬೇರೆಯವರಿಗೆ ಸೇವೆ ಸಲ್ಲಿಸುವುದಕ್ಕೆ ಅವಕಾಶ ಮಾಡಿಕೊಡುವುದು ಒಳ್ಳೆಯದು. ತಮ್ಮ ಮನಸ್ಸಿನ ಪರಿವರ್ತನೆ ಮಾಡಿಕೊಳ್ಳುವುದು ಈ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದು ಎಂದು ನನಗನ್ನಿಸುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಮನಸ್ಸಿನೊಳಗೆ ಏನು ಒಂದು ಕಳಕಳಿ ಇದೆಯೋ ಅದನ್ನು ಅವರು ಒಳಗೇ ಇಟ್ಟುಕೊಳ್ಳುವುದು ಬೇಡ. ಅದನ್ನು ಬಯಲು ಮಾಡಬೇಕು ಆ ರೀತಿ ಬಯಲು ಮಾಡಿದರೆ ಅದಕ್ಕೆ ನಮ್ಮ ಬೆಂಬಲ ಇದೆ. ಯಾರು ಯಾರು ಈ ರಾಜ್ಯದ ಸಂಪತ್—ಅಭಿವೃದ್ಧಿಯನ್ನು, ಬುದ್ಧಿಶಕ್ತಿಯನ್ನು ಇದುವರೆಗೆ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲವೋ ಅವರಿಗೆ ಅಧಿಕಾರವನ್ನು ಬಿಟ್ಟುಕೊಡಬೇಕಾದುದು ಮತ್ತು ಸಲ್ಲಬೇಕಾದುದು ಅತ್ಯಾವಶ್ಯಕವಾಗಿದೆ. ಆದ್ದರಿಂದ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದನ್ನು ಒಪ್ಪಿಕೊಳ್ಳುವುದರ ಮೂಲಕ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯನ್ನು ರಚನೆ ಮಾಡಬೇಕು. ಆ ರೀತಿ ಮಾಡಿದ್ದೇ ಆದರೆ ತಮಗೆ ಇನ್ನೂ ಪುಷ್ಟಿ ಬರುತ್ತದೆ, ಶಕ್ತಿ ಬರುತ್ತದೆ, ಮತ್ತು ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳಿದಂತೆ ತಾವು ನಿಜವಾಗಿಯೂ ಅಭಿನವ ಬಸವಣ್ಣನವರಾಗುತ್ತೀರಾ ಎಂದು ಹೇಳುತ್ತೇನೆ. ಆದ್ದರಿಂದ ಅದಕ್ಕೆ ಅವಕಾಶ ಮಾಡಿಕೊಡಿ ಎಂದು ಮತ್ತೊಮ್ಮೆ ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† **Sri C. M. ARUMUGHAM** (K. G. F.).—Sir, even the devil reads the Bible. That does not mean it follows it. There were pious statements by various leaders of the political parties and the Ministers that they have purged the society of this caste system, but in their heart of hearts, in their movements and in their way of life they are conscious of their caste. Therefore, I support this short duration discussion raised by my friend Sri Deve Gowda who is not here now.

So many Mahathmas have been born and have died but the society remains the same in India right from Rama's time, and Buddha's time. Today it is there; it is rampant now and the persons who are highly placed are still concious about caste. This subject speaks about the benefits derived by certain communities during the past 25 years after independence. That day I was very very happy to hear Sri Siddaveerappa's statement. He stated that those who have reached 60 years should be called Brahmins, those who are working as labourers should be called as Sudhras, those who do business as Visyas and those who fight as Kshatriyas. It is wrong. I may tell the House that there are certain militant forces having communal names. I may tell the Chief Minister through you, Madam, that in Maharashtra there is what is called a Mahar Battalion. Even in the Army this caste system prevails. He is not called a kshatriya; he is called a Mahar. After 25 years of independence it is there.

Mr DEPUTY SPEAKER.—In the Mahar Battalion there are more Marathas. The former caste structure has gone and only the name has remained. At present, the battalion is not restricted to people belonging to that caste alone. It is a sad thing that they go by caste.

Sri C. M ARUMUGHAM.—With all respect to the Deputy Speaker I must submit that I know a little more than what other members including the Deputy Speaker know.

Mr. DEPUTY SPEAKER.—I do not agree with that.

Sri C. M. ARUMUGHAM.—I still claim that I know a little more about the constitution of the Mahar Battalion than all the other members including the Deputy Speaker. I know this Mahar Battalion. I have seen the headquarters and know how they were recruited. There is a caste, a force, an army, a battalion called the Mahar Battalion. Really speaking, they should be called Kshatriyas. So, the caste has not been abolished as Sri Siddaveerappa has said.

It is therefore necessary to constitute a committee to probe into the benefits derived by various sections of our society. According to the census, the literacy in India is 30 per cent; that is overall percentage. But if you take the village census, the literacy is only 4 per cent. Therefore, how many people have been educated during the past 25 years and what is the expenditure incurred on them? Therefore, what is the amount you have spent right from 1947 when we got independence in Mysore State when K. C. Reddy became the Chief Minister of this State and K.T. Bashyam the Labour Minister? Whether you accept it or not, even today there are certain communities who reside in forests in Coorg and Mangalore where there are no schools at all. There may be only half a dozen houses but there are no schools at all. For example, take the constitution of the present Cabinet. There is a feeling now, whether you accept it or not, that so many Vokkaligars are there, so many Lingayats are there and so many Harijans are there. Some community wants more representation. Thers is no Cabinet Minister to represent some areas like Bijapur and Hyderabad Karnatak.

This feeling is there even amongst the Ministers. Therefore after spending crores of rupees on education it is necessary to know how many are benefited, what percentage of people in each caste have been educated. There are certain communities who are literates—father to son, grand son and like that. So when you calculate the average percentage of literacy you must take each family as a unit. The other day I was telling how averages are being worked out—master getting Rs. 1000 and servant getting Rs. 50 and saying the average is Rs. 525. Like that here also you take all and say the average is 30 per cent.

I will now come to employment. Who are all employed? Of courss everybody wants. Government employment. There are families who are in Government employment continuously father is a Judge, his son an Engineer, a doctor and and so on, You must find out how many castes or groups are fully employed, which are the communities that are not fully employed or inadequately employed. The other day I gave a list wherein it was stated that nearly 2 lakhs of people have registered for employment but they have no employment.

Thirdly, about the business. In Punjab there are certain communities like Jats who concentrate on lands and also in business. Every house in that community do business right from transport to any business. In Mysore we must find out how business is distributed

amongst the various people living in the State. If a particular business is concentrated among one community and if they declare any particular day as holiday, the entire business comes to a standstill and people suffer. So you must create incentives for other people to get into such business.

You must find out how many people have been benefited after Independence. We have been spending crores of rupees on education; Before independence we had about half a dozen universities in the country but now we have more than 80 universities. You must see whether all the communities have been benefited.

Now I come to political status.

[MADAM SPEAKER in the Chair]

Some families have the chance of seeing their members becoming ministers continuously.

MADAM SPEAKER :—The discussion is for 2½ hours. The hon. member has taken 17 minutes. At 6 O' clock we must rise.

Sri D. DEVARAJ URS.—The allotment of time is 2 ½ hours. If they want Government reply, they must abide by the time. Otherwise it cannot be taken up tomorrow.

Sri C. M. ARUMUGAM.—Some of the ministers want to continue to be ministers, sometimes even in the old age. Therefore we must find out which are the communities which have been continuously holding ministership from 1947 and how it is distributed in the entire State. I really compliment our Chief Minister for the service he has done. Certain communities which could not hope to get a ticket to contest for the Assembly have representation in the Cabinet. I am glad about it. But I must say that you should find out which are the communities that have been continuously represented during the times of Sri K. C. Reddy, Sri Hanumanthaiya, Sri Nijalingappa, Sri Kanthi, Sri Jatti and Sri Veerendra Patil. They went on changing their policies and programmes just as one would change his clothings. To get the positions of a Minister, they are prepared to do anything. To get ministersship they are prepared to get into any cabinet, prepared to join any party. This trend must be checked. I am not against any particular community. What I want you to see is about the other communities. There are so many minorities. With reference to their population, have they been given any political appointments? You must look into all these.

Therefore I respectfully submit to check up and find out whether the good done to the people and the State has been distributed eqally, right from 1947 till to-day. The Chief Minister should not try to hide or shield anything in this matter. The President's rule has caused great injustice to the State of Mysore and Mr. Dharma Vira's rule was a

(SRI C. M. ARUMUGAM)

chaos to the State. Appointments were made on the likings and dislikings of officers. During the one year period the Secretaries acted like the Ministers. Can you expect these Secretaries to do justice to the public? No. Ministers have got to face electorate. Madam, you know the difficulties. I faced for my election. The Chief Minister, almost all the Ministers including the Prime Minister visited my humble constituency to work against me. Of course, I give credit to the Ministers because they are politicians and they really do something. The other day Mr. Siddaveerappa on the request of Mr. Siddappa agreed to extend the date for admission to the Medical Colleges and in no time the orders were issued. I compliment him. But can you expect the same thing from the Secretaries? They are like the Britishers, their way of getting into the cars, their style of talking, their style of smoking, all these are nothing but Britishers type. They want to copy it even after 25 years. Even with the Chief Minister they will not behave properly. They must adjust to the changed circumstances. The ICS officers privileges have been taken away. In Tamil Nadu they are thinking of abolishing the privileges of the IAS officers too. Therefore Sir, I feel there is need to have a probe into what these Secretaries have done as Ministers during the President's rule. They have made a mess of the administration and they want to continue it. Now it is time for this Government to check these things and that is why hon. Leader of Opposition Mr. Deve Gowda has raised this matter saying there is need to constitute a committee to ascertain the facts relating to the benefits procured by various communities in Myosore State.

Thank you.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಯವರು).—ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ನಾಯಕರು ಇವತ್ತು ತಂದಿರತಕ್ಕಂತಹ ಅಲ್ಪ ಕಾಲಾವಧಿಯ ಚರ್ಚೆ ಹೀಗೆ ಇದೆ :—

"To raise a discussion regarding the need to constitute a committee to ascertain the facts relating to the benefits procured by the various communities in the State".

ಇದರ ಬಗ್ಗೆ ಅವರು ಚರ್ಚೆ ಪ್ರಾರಂಭ ಮಾಡಿದ್ದಾರೆ. ಅವರು ಮೊದಲಿನಿಂದ ಕೊನೆಯವರೆಗೂ ಮಾಡಿದಂತಹ ಪೂರ್ತಿ ಭಾಷವನ್ನು ನಾನು ಸಾವಧಾನದಿಂದ ಕೇಳಿದ್ದೇನೆ. ಅದರಲ್ಲಿ ಎರಡು ವಿಚಾರದ ಹಿನ್ನಲೆಯಲ್ಲಿ ಕೆಲವು ವಿಷಯಗಳನ್ನು ಎತ್ತಿದ್ದಾರೆ. ಅದೇ ರೀತಿ ನಾನು ಈ ಸಭೆಯಲ್ಲಿ ಮಾತನಾಡಿದ್ದನ್ನು ಉದಾಹರಿಸಿ, ಅದರ ಬಗ್ಗೆ ಅವರಿಗೆ ಕುತೂಹಲ ಉಂಟಾಗಿ ಇದರಲ್ಲಿ ಏನು ಅನ್ಯಾಯವಾಗಿದೆ ಎಂಬುದನ್ನು ಹೇಳಬೇಕು ಎಂದು ಹೇಳಿದರು. ಅವರು ನಾನು ಮೊನ್ನೆ ಇಲ್ಲಿ ಮಾಡಿದಂತಹ ಭಾಷಣವನ್ನು ಓದಿ ತಿಳಿದುಕೊಂಡಿದ್ದಾರೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಅದನ್ನು ಪತ್ರಿಕೆಯಲ್ಲಿ ಓದಿದ್ದಾರೋ ಅಥವಾ ತಮ್ಮ ಸೆಕ್ರೆಟರಿಯೇಟಿನಿಂದ ನನ್ನ ಭಾಷಣವನ್ನು ತೆಗೆದುಕೊಂಡು ಓದಿದ್ದಾರೆಯೋ ಎಂದು ಗೊತ್ತಿಲ್ಲ. ಅಂತೂ ಅವರು ಅದನ್ನು ಓದಿದ್ದಾರೆಂದು ನಾನು ತಿಳಿಯುತ್ತೇನೆ. ಅವರು ಆ ದಿವಸ ಇಲ್ಲಿ ಇದ್ದರೋ ಇಲ್ಲವೋ ಎಂದೂ ಸಹ ನನಗೆ ಗೊತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಇದ್ದೇ ಇದ್ದು ನಿಮ್ಮ ಪೂರ್ತಿ ಭಾಷಣವನ್ನು ಕೇಳಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.— ಅದೇನೋ ನಾನು ಗಮನಿಸಿರಲಿಲ್ಲ, ಸಾರ್. ಹಾಗೆಯೇ ಅವರು ಮಾತನಾಡತಕ್ಕ ಕಾಲದಲ್ಲಿ ಕೆಲವು ವಿಚಾರಗಳನ್ನು ಹೇಳಿದರು. ' ಈ ರೀತಿಯಾಗಿ ಹೋದರೆ ಬಹಳ ದಿನ ಉಳಿಯುವುದಿಲ್ಲ'' ಎಂದು ಅವರು ಹೇಳಿದರು. ಅದು ಯಾವ ರೀತಿಯಾಗಿ ಹೋದರೆ ಎಂಬುದು ನನಗೆ ಸ್ಪಷ್ಟವಾಗಿ ಅರ್ಥವಾಗಿಲ್ಲ. ನಾವು ಏನಾದರೂ ತಪ್ಪು ಮಾಡಿದರೆ ಅದಕ್ಕೆ ಎಚ್ಚರಿಕೆ ಕೊಡಲಿ, ಒಪ್ಪುತ್ತೇನೆ. ಆದರೆ ಅವರ ಮನಸ್ಸಿನಲ್ಲಿ ಏನೋ ಒಂದು ಕಲ್ಪನೆ ಮಾಡಿಕೊಂಡು ಅವರ ಮೇಲೆ ಮಾತನಾಡುತ್ತಾ ಹೋದರೆ ನಾನು ನಮ್ರತೆಯಿಂದ ''ಸ್ವಾಮಿ, ತಮ್ಮ ಕಲ್ಪನೆಯಲ್ಲಿ ಆಧಾರವಿಲ್ಲ'' ಎಂದು ಹೇಳಬೇಕಾಗುತ್ತದೆ. ಮತ್ತು ಒಂದೇ ಮಾತಿನಲ್ಲಿ ಅವರು ಮಾಡಿದಂತಹ ಭಾಷಣದ ಬಗ್ಗೆ ಹೇಳುವುದಾದರೆ, ಅದು ಒಂದು ಗಾದೆಯ ರೀತಿಯಲ್ಲಿ ಇದೆ. ನಮ್ಮಲ್ಲಿ ''ಗಾಳಿಗೆ ಗುದ್ದಿ ಕೈ ನೋಯಿಸಿಕೊಂಡ ಹಾಗೆ'' ಎನ್ನುವ ಒಂದು ಗಾದೆ ಇದೆ. ಆ ರೀತಿಯಲ್ಲಿ ಇವರು ಹೇಳುತ್ತಿದ್ದಾರೆ. ಏನೂ ಇಲ್ಲದ ಕಡೆ ನೋಡಿ ದೇವೇಗೌಡರು ಏಕೆ ಗಾಬರಿ ಬೀಳುತ್ತಾರೆ ಎಂದು ನನಗೆ ಅರ್ಥವಾಗಲಿಲ್ಲ. ಹಾಗೆಯೇ ಜಾತಿಯ ವಿಚಾರವನ್ನು ಪ್ರಸ್ತಾಪ ಮಾಡುವಾಗ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದರು. 25 ವರ್ಷಗಳಿಂದ ಏನೇನು ಆಗಿದೆ; ಯಾರ ಮೇಲೆ ಆರೋಪಣೆ ಬಂದಿದೆ, ಇದು ಸರಿಯೋ ತಪ್ಪೋ ಎಂಬುದನ್ನು ನೋಡಬೇಕು ಎಂದು ಹೇಳಿದ್ದಾರೆ. ಇದರಲ್ಲಿ ಯಾರಿಗೆ ಅನುಮಾನ ಬಂದಿದೆ, ಯಾರು ಇದನ್ನು ಹೇಳಿದ್ದಾರೆ ಎಂದು ಮೊದಲು ಗೊತ್ತಾದರೆ ಏನಾದರೂ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಅವರು ಹೀಗೆ ಹೇಳಿದ ಮೇಲೆ ನಾನು ಮಾಡಿದ ಭಾಷಣದ ಪ್ರತಿಯನ್ನು ಪುನಃ ತರಿಸಿ ನೋಡಬೇಕಾಗಿ ಬಂತು. ಒಂದು ಸಂತೋಷವೇನೆಂದರೆ, ಶ್ರೀಮಾನ್ ದೇವೇಗೌಡರು ಮಾತನಾಡುತ್ತಾ, ಮಾತನಾಡುತ್ತಾ ನಾನು ಹೇಳಬೇಕಾದ ಉತ್ತರವನ್ನು ಅವರೇ ಒಂದು ರೀತಿಯಲ್ಲಿ ಹೇಳಿದ್ದಾರೆ. ಅದು ಹೇಗೆ ಹೇಳಿದ್ದಾರೆಂದರೆ, ನನ್ನ ವಾದವನ್ನು ಅವರೇ ಸಮರ್ಥನೆ ಮಾಡುವ ಹಾಗೆ ಹೇಳಿದ್ದಾರೆ. ಅವರು ಒಂದು ಮುಖ್ಯವಾದ ಮಾತನ್ನು ಹೇಳಿದ್ದಾರೆ. ನಾವೆಲ್ಲರೂ ಜುಬ್ಬವನ್ನು ಹಾಕಿಕೊಂಡ ಜನರು, ಅದರಲ್ಲಿ ಮಂತ್ರಿಯವರೂ ಇರಬಹುದು. ಅವರ ಜೊತೆಗೆ ಚಿಕ್ಕ ಜುಬ್ಬ ಹಾಕಿಕೊಂಡ ಜನರೂ ಇದ್ದಾರೆ ಎಂದು ಹೇಳಿದರು. ಇವತ್ತು ನೋಡಿದರೆ ನಾವಿಬ್ಬರೂ ಜುಬ್ಬವನ್ನು ಹಾಕಿಕೊಂಡಿದ್ದೇವೆ. ಅವರು ಇದ್ದುದು ಇದ್ದಹಾಗೆ ಹೇಳಿದ್ದಾರೆ. ರಾಜಕೀಯದಲ್ಲಿರುವವರು, ಸುತ್ತಮುತ್ತ ಅಧಿಕಾರದಲ್ಲಿರುವವರು ಎಲ್ಲರೂ ಸ್ವಲ್ಪ ದಾರಿ ಬಿಟ್ಟು ಇತರರಿಗೆ ಬೇರೆ ದಾರಿ ತೋರುತ್ತಾ ಇರುವುದನ್ನು ಅವರು ಅಪ್ರಿಸಿಯೇಟ್ ಮಾಡಿ ಲಾಭ ಪಡೆಯುತ್ತಿದ್ದಾರೆ. ಅದು ಇರಬಹುದು. ಅಂಥಾದ್ದನ್ನು ನಾವು ಬಡತನವೆಂದು ನಾವು ಹೇಳುತ್ತೇವೆ. ಅದನ್ನು ಎಲ್ಲರಿಗೂ ಅನ್ವಯಿಸುವುದಕ್ಕೆ ಸಾಧ್ಯವಿಲ್ಲ. ಅದು 100ಕ್ಕೆ 100 ಸತ್ಯವಾದ ಮಾತು. ಇದನ್ನೇ ದೇಶದ ಜನರು ತಿಳಿದುಕೊಂಡಿರುವುದು. ಅದನ್ನೇ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಇದರ ಬಗ್ಗೆ ಹೆಚ್ಚಿಗೆ ಉತ್ತರಿಸುವುದು ಏನು ಇದೆ ? ಇವತ್ತು ತಾವೇನು ಹೇಳಿದ್ದೀರೋ ಅದನ್ನೇ ಅವತ್ತು ನಾನು ಉತ್ತರದಲ್ಲಿ ಹೇಳಿರುವುದು ನಾನು ಹೇಳಿದಮೇಲೆ ತಮಗೆ ಅನುಮಾನ ಏಕೆ ಬಂತು ? ತಾವು ಹೇಳಿರುವುದಕ್ಕೂ ನಾನು ಹೇಳಿರುವುದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವೆಂದು ನಾನು ಒತ್ತಿ ತೋರಿಸುತ್ತಿದ್ದೇನೆ. ನಾನು ಬೇರೆ ಹೇಳುವುದಕ್ಕೆ ಕಾರಣವೇನೂ ಇರಲಿಲ್ಲ. ಅವತ್ತು ತಾವೇ ಹೇಳಿದ್ದೀರಿ. ಇವತ್ತು ಒಳ್ಳೆಯ ವಾತಾವರಣದಲ್ಲಿದ್ದೇವೆ. ಈ ಸಂದರ್ಭದಲ್ಲಿ ಮಾತನಾಡುವುದು ಬೇಡವೆಂದು ಹೇಳುವುದು ನಿಜ. ಅವರು ದೊಡ್ಡಮನಸ್ಸಿನಿಂದಿದ್ದುದು ಒಳ್ಳೆಯದು. ಆದರೆ ಅವರ ಪಕ್ಷದ ಸದಸ್ಯರು ಏನು ಮಾತನಾಡಿದ್ದಾರೆಂಬುದನ್ನು ಉದಹರಿಸಿ ಹೇಳಿದ್ದರೆ ಬಹಳ ಚೆನ್ನಾಗಿತ್ತು. ಅದನ್ನು ಏಕೆ ಬಿಟ್ಟರೋ ಗೊತ್ತಿಲ್ಲ. ದಯಮಾಡಿ ನಾನು ನಮ್ರತೆಯಿಂದ ಒಂದು ಮಾತನ್ನು ಕೇಳುತ್ತೇನೆ. ನಾನು ಅವತ್ತು ಅವರು ಇರಲಿಲ್ಲ. ತಾವು ಇನ್ನೊಂದು ಸಾರಿ ಓದಿಕೊಂಡರೆ ನಾನು ಏತಕ್ಕೆ ಆ ರೀತಿ ಹೇಳಿದ್ದೇನೆ ಎಂಬುದು ವ್ಯಕ್ತವಾಗುತ್ತದೆ. ತಮ್ಮ ಪಕ್ಷದವರಾದಂಥ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಭಾಷಣ ಮಾಡಿದಾಗ ತಾವು ಇದ್ದಿರೋ ಇಲ್ಲವೋ ಗೊತ್ತಿಲ್ಲ. ಇಲ್ಲದೇ ಇದ್ದರೆ ತಾವು ಅದನ್ನು ಓದಿಕೊಂಡಿದ್ದೀರಿ ಎಂದು ನನಗೆ ತೋರುತ್ತದೆ. ಆಗ ನಾನು ಆ ರೀತಿ ಏಕೆ ಮಾತನಾಡಿದ್ದೇನೆ ಎಂಬುದನ್ನು ತಾವು ತಿಳಿದುಕೊಳ್ಳಬಹುದಾಗಿತ್ತು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾವು ಏನೇನು ಹೇಳಿದ್ದೀರಿ ಎಂಬುದು ಇರಲಿ. ಇನ್ನು ನೀವು ಹೇಳಿ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಶ್ರೀ ಆರ್ಮುಗಂ ಅವರು ಹೇಳಿರುವುದನ್ನು ನಾನು ಒಂದು ಉದಾಹರಣೆಯಾಗಿ ಬೇಕಾದರೆ ಕೊಡುತ್ತೇನೆ. ಅವರು ನನಗೇನೂ ಹೊಸಬರಲ್ಲ. ಅವರು ನನಗೆ ಮೊದಲಿನಿಂದಲೂ ಗೊತ್ತು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ಜಾತಿವಾದಿ ಅಲ್ಲದಿದ್ದರೂ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಇವತ್ತಿನ ದಿವಸ ನಿಷ್ಠಾವಂತ ಜನರಿಗೆ ನಿಮ್ಮಲ್ಲಿ ಸ್ಥಾನ ಇಲ್ಲದ ಹಾಗೆ ಆಗಿದೆ. ನಿಮ್ಮವರೇ ಒಕ್ಕಲಿಗರನ್ನು, ಲಿಂಗಾಯಿತರನ್ನು, ಹರಿಜನರನ್ನು ತುಳಿಯುವುದಕ್ಕೆ ಹೊರಟಿದ್ದಾರೆ. ನಾನು ಇನ್ನೊಂದು ಅಂಶವನ್ನು ಹೇಳುತ್ತೇನೆ. ಒಬ್ಬ ಮಂತ್ರಿಯಾಗಿ ಸೇರಿದ ತಕ್ಷಣ ಅವನಿಗೆ ಪ್ರಬಲವಾದ ಕುಮ್ಮಕ್ಕನ್ನು ಕೊಡುವುದಕ್ಕೆ ಅವನಿಗೆ ಶಾಪವೇನು ?

ಶ್ರೀ ಡಿ. ದೇವರಾಜ್ ಅರಸ್.—ಆ ವಿಷಯವಾಗಿ ನಾನು ಹಿಂದೆಯೇ ಹೇಳಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನೂ ಸಹ ಈ ವಿಚಾರದಲ್ಲಿ ಆ ದಿವಸವೇ ಹೇಳಿದ್ದೇನೆ. ಈ ದಿವಸವೂ ಹೇಳಿದ್ದೇನೆ.

ಶ್ರೀ ಡಿ. ದೇವರಾಜ್ ಅರಸ್.—ಮನುಷ್ಯನಿಗೆ ಫ್ರೀಡಂ ಆಫ್ ಸ್ಪೀಚ್‌ಗೆ ಅವಕಾಶವಿದೆ ಯೆಂದು ಸಕಾರಣಗಳನ್ನು ಇಟ್ಟುಕೊಂಡಿದ್ದಾರೆಂದು ನಾನು ಹೇಳಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅದು ನಿಮಗೆ ಇದ್ದರೆ ನೀವೇ ಇಟ್ಟುಕೊಳ್ಳಿ. ಯಾರು ಬೇಡ ವೆಂದು ಹೇಳುತ್ತಾರೆ? ನೀವು ಹೇಳಿದ್ದೀರೆಂದು ನಾನು ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ್ ಅರಸ್.—ಈ ಮಾತನ್ನು ಇವರು ಹೇಳಿದ್ದಾರೆ. ಅದಕ್ಕೆ ಈ ಸಂದರ್ಭ ದಲ್ಲಿ ನಾನು ಮಾತನಾಡುತ್ತಾ ಇರಬೇಕಾದರೆ ಮಾನ್ಯ ಶ್ರೀ ಅರ್ಮುಗಂ ಅವರು ಒಂದು ಮಾತನ್ನು ಹೇಳಿದರು. ಅದೇನು ಹೇಳಿದರೆಂದರೆ, ಅದು ಜಾತಿ, ಮತಗಳ ಮಾತು ಬಂದಾಗ, ಅದನ್ನು ಕಣ್ಣಿನ ಹಾಗೆ ಇಟ್ಟುಕೊಂಡು ಹೋಗಬೇಕು. ಈ ಎರಡು ಜಾತಿಯ ಕೋಮುಗಳನ್ನು ಎರಡು ಕಣ್ಣುಗಳ ಹಾಗೆ ಇಟ್ಟುಕೊಂಡು ಹೋಗಬೇಕೆಂದು ಹೇಳಿದರು. ಅದೇ ರೀತಿ ನಾನು ಇದುವರೆಗೂ ಮಾಡುತ್ತಿದ್ದೇನೆ. ನಾನು ತಮಾಷೆಯಾಗಿ ಹರಿಜನರು ಬೆನ್ನುಮೂಳೆಯಾಗಿ ಇರುತ್ತಾರೆಂದು ಹೇಳಿದೆ. ಆ ಸಂದರ್ಭದಲ್ಲಿ ಆ ಮಾತು ಜ್ಞಾಪಕಕ್ಕೆ ಬಂತು. ಆಗ ಉತ್ತರ ಆ ರೀತಿ ಹೇಳಿದ್ದೇನೆ. ಈಗ ಇಲ್ಲಿ ತಮ್ಮ ಅಪ್ಪಣೆ ಪಡೆದು ನಾನು ಆಗ ಏನು ಹೇಳಿದ್ದೆನೋ ಅದನ್ನು ಓದಲೇ ಬೇಕಾಗುತ್ತದೆ. ನಾನು ಹೇಳಿದ್ದನ್ನು ಮರೆತು ಯಾವುದೋ ಒಂದು ಸಂದರ್ಭದಲ್ಲಿ ಆದುದನ್ನು ಅವರ ಕಲ್ಪನೆಗೆ ಸಂಬಂಧಪಟ್ಟಂತೆ ಏನೋ ವಿಚಾರ ತರಬೇಕೆಂದು ಅದನ್ನು ಬೇರೆ ರೂಪದಲ್ಲಿ ಹೇಳುವುದಕ್ಕೆ ಹೋದಾಗ ಅದನ್ನು ಜ್ಞಾಪಿಸುವುದು ನನ್ನ ಕರ್ತವ್ಯ. ನಾನು ಹಿಂದೆ ಹೇಳಿದ ಉತ್ತರದಲ್ಲಿ ಈ ರೀತಿ ಇದೆ :—

"ನಮ್ಮ ನಾಡಿಗೆ ಕರ್ಣಾಟಕ ಎಂದು ಹೆಸರಿಡುತ್ತಿರುವುದರಿಂದ ಎಲ್ಲರ ಭಾವೈಕ್ಯತೆಗೆ ಇದು ನಾಂದಿಯಾಗಿದೆ. ಅದೇ ರೀತಿ ಎಲ್ಲ ಜನರ ಹಿತಸಾಧನೆಗೆ ಶ್ರಮಿಸಬೇಕು ಎನ್ನುವ ಮಾತನ್ನು ಕೆಲವು ಸ್ನೇಹಿತರು ಹೇಳಿದ್ದಾರೆ. ನಾನು ನೆನ್ನೆ ದಿವಸ ಸಭೆಯಲ್ಲಿ ಇರಲಿಲ್ಲವಾದ್ದರಿಂದ ಒಬ್ಬೊಬ್ಬರು ಮಾನ್ಯ ಸದಸ್ಯರು ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದನ್ನು ನಾನು ಪತ್ರಿಕೆಯಲ್ಲಿ ಓದಿದೆ. ಮುಂದಿನ ಕಾರ್ಯಕ್ರಮಗಳಲ್ಲಿ ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು ಹೋಗುವ ಬಗ್ಗೆ ಸರ್ಕಾರದ ಜವಾಬ್ದಾರಿ ಹೆಚ್ಚು ಇದೆ ಎಂದು ಕೆಲವು ಸ್ನೇಹಿತರು ಹೇಳಿದ್ದಾರೆ. ಅದೇ ರೀತಿ ಶ್ರೀಮಾನ್ ಅರ್ಮುಗಂ ಅವರು ಈಗತಾನೆ ಒಂದು ಮಾತನ್ನು ಹೇಳಿದರು : ಏನೆಂದರೆ ಬಹುಸಂಖ್ಯೆ ಯುಳ್ಳ ಮತಗಳವರು, ಜಾತಿಯವರು ತಮ್ಮ ಕಣ್ಣಿನ ಹಾಗೆ ಇರಬೇಕು, ಬೆನ್ನುಮೂಳೆಯ ಹಾಗೆ ಇರಬೇಕೆಂದು. ಆ ಮಾತಿಗೆ ನಾವೇನೂ ವಿರೋಧಮಾಡುವ ಪ್ರಶ್ನೆಯೇ ಇಲ್ಲ. ಅದನ್ನು ಯಾರೇ ಹೇಳಲಿ ಅಥವಾ ಬಿಡಲಿ. ಅದು ಹಾಗೆಯೇ ಇರಬೇಕು. ಆದರೆ ಆ ಅನುಮಾನ ಏತಕ್ಕೆ ಬರುತ್ತದೆ ಎಂಬುದು ನನಗೆ ಅರ್ಥವಾಗಲಿಲ್ಲ. ಯಾವುದೋ ಒಂದು ಮತವನ್ನು ಅಥವಾ ಜಾತಿಯನ್ನು ವಿರೋಧಮಾಡುತ್ತಿದ್ದಾರೆ. ಹಿಂದಕ್ಕೆ ಹಾಕುತ್ತಿದ್ದಾರೆ ಎಂದು ಏನು ಕೆಲವು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಆ ಮಾತನ್ನು ನಾನು ಎಷ್ಟು ಯೋಚನೆ ಮಾಡಿದರೂ ಅರ್ಥವಾಗಲಿಲ್ಲ.

ಶ್ರೀ ಕೆ. ಪ್ರಭಾಕರ್.—ನೋವು ತಿಂದವರು ಆ ಮಾತನ್ನು ಹೇಳುತ್ತಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ನೋವು ಇಲ್ಲದವರು ನೋವಿದೆ ಅಂತ ಹೇಳುತ್ತಿದ್ದರೆ ಏನು ಮಾಡುವುದು ? ಯಾರೇ ಸರ್ಕಾರ ನಡೆಸಲಿ, ಸರ್ಕಾರಕ್ಕೆ ಪ್ರತಿಯೊಬ್ಬರೂ ಸಮಾನರೆ. ಕಾನೂ ನಿಗೆ ಪ್ರತಿಯೊಬ್ಬರೂ ಅಧೀನರೇ, ಆ ರೀತಿ ಇರಬೇಕಾದರೆ ಯಾರೋ ಕೆಲವರನ್ನು ತುಳಿಯುತ್ತಾರೆ ಎಂದು ಹೇಳುವುದಕ್ಕೆ ಕಾರಣವೇನು ? ನನ್ನ ತಿಳಿವಳಿಕೆಯಲ್ಲಿ ಯಾವುದೇ ಒಂದು ಜಾತಿಯವರನ್ನು ತುಳಿಯುವಂತಹ ಕೆಲಸ ಯಾರಿಂದಲೂ ಆಗುತ್ತಿಲ್ಲ. ಅದು ಕೇವಲ ಭ್ರಾಂತಿಯ ಮಾತು. ಅದು ರಾಜಕೀಯ ಕುಚೇಷ್ಟೆಯ ಮಾತು. ಯಾವ ಜಾತಿಯೇ ಆಗಲಿ ನಾವು ಜಾತಿ ಮತಗಳಿಗೆ ಕಾನೂನು ರೀತ್ಯಾ, ಕಾನ್‌ಸ್ಟಿಟ್ಯೂಷನ್ ರೀತ್ಯಾ ಎಷ್ಟು ಕೊಡಬಹುದೋ ಅಷ್ಟು ಕೊಡುವುದಕ್ಕೆ

ಸಾಧ್ಯ. ಅವರವರ ದೇವಾಲಯಗಳ ಬಗ್ಗೆ, ಅವರು ಪೂಜೆ ಮಾಡುವುದಕ್ಕೆ ಅವರ ಶಾಸ್ತ್ರ ಅವರ ಪುರಾಣ ಮತ್ತು ಮಂತ್ರವನ್ನು ಹೇಳಿಕೊಂಡು ಅವರು ಪೂಜೆ ಮಾಡುವುದಕ್ಕೆ ನಮ್ಮ ಅಡ್ಡಿ ಇಲ್ಲ. ಈಗ ಮೊನ್ನೆ ಮೈಸೂರಿನಲ್ಲಿರತಕ್ಕ ಒಂದು ವಿದ್ಯಾರ್ಥಿ ನಿಲಯಕ್ಕೆ ಸಂಬಂಧಪಟ್ಟ ಹಾಗೆ ಅವರು ವಿದ್ಯಾರ್ಥಿಗಳು ಜುಟ್ಟು ಬಿಟ್ಟರೆ ಮಾತ್ರ ನಾವು ಊಟ ಹಾಕುತ್ತೇವೆ, ಇಲ್ಲದೇ ಹೋದರೆ ನಾವು ಊಟ ಹಾಕುವುದಿಲ್ಲ ಎಂದು ಆ ವಿದ್ಯಾರ್ಥಿನಿಲಯದ ಮ್ಯಾನೇಜ್‌ಮೆಂಟಿನವರು ಹೇಳಿದರು ಎಂದು ಹೇಳಿ ಒಂದು ವಿಷಯ ಪತ್ರಿಕೆಯಲ್ಲಿ ಬಂದಿತ್ತು. ಅದಕ್ಕೆಲ್ಲಾ ನಾವು ಏನೂ ಹೇಳುವುದಕ್ಕಾಗುವುದಿಲ್ಲ. ಅದು ಅವರ ಅಭಿಪ್ರಾಯ. ಈಗ ಭೂಮಿಯನ್ನು ಹಂಚಿಕೆ ಮಾಡ ಬೇಕಾಗಿದೆ. ಇದರಲ್ಲಿ ಯಾವ ಜಾತಿಯವನನ್ನು ತುಳಿಯುವುದಕ್ಕೆ ಸಾಧ್ಯವಿದೆ ? ಇದರಲ್ಲಿ ಬಡವರು ಮತ್ತು ಬಲ್ಲಿದರು ಎರಡು ಜಾತಿಗಳವರೂ ಇದ್ದಾರೆ. ಜನರ ಮನಸ್ಸಿನಲ್ಲಿ ದುಗುಡ ಏನಿತ್ತು ? ''

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೆ ನಾನು ಹೇಳಿದ ಹಾಗೆ ಮಾಡಿ.

ಶ್ರೀ ಡಿ. ದೇವರಾಜ್ ಅರಸ್.—ನಾನು ಅದನ್ನೇ ಸ್ಪಷ್ಟೀಕರಣಮಾಡಿ ಅಂಕಿಅಂಶಗಳನ್ನು ಕೊಟ್ಟಿದ್ದೇನೆ.

"ಕಾನೂನು ರೀತ್ಯಾ ಸರ್ಕಾರದ ಸವಲತ್ತುಗಳು ಯಾವ ಜನಗಳಿಗೆ ಸಲ್ಲಬೇಕೋ ಅದು ಅವರಿಗೆ ಸಲ್ಲುತ್ತಾ ಇಲ್ಲ ಎನ್ನತಕ್ಕಂಥಾ ದೂರು ದೇಶದಲ್ಲಿತ್ತು. ಈ ದೂರಿಗೆ ಕಾರಣ ಏನು ಅಂದರೆ ಈ ಕಾನೂನನ್ನು ಜಾರಿಗೆ ಕೊಡಬೇಕಾಗಿದ್ದವರು ಜಾತಿಯ ಹೆಸರಿನಲ್ಲಿ ಮೋಸ ಮಾಡುತ್ತಿದ್ದರು ಎನ್ನತಕ್ಕಂಥಾ ದೂರೂ ದೇಶದಲ್ಲಿತ್ತು. ಅಂಥಾ ದೂರನ್ನು ನಾವು ಕೇಳುತ್ತಾ ಇದ್ದು, ಈಗ ಅದು ಸರಿಯಲ್ಲ, ಅದು ಬೇಡ ಎಂದು ನಾವು ಹೇಳುತ್ತಿದ್ದೇವೆ. ಯಾರು

6-00 P.M.

ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಈ ವಿಷಯದಲ್ಲಿ ಸ್ಥಾನಮಾನ ಗಳಿಸಿದ್ದರೋ ಅವರು ಇತರರಿಗೆ ಮೋಸಮಾಡುತ್ತಿದ್ದರು ಆ ಜನಗಳಿಗೆ ಈಗ ಬಾಯಿ ಕಟ್ಟಿದ ಹಾಗೆ ಆಗಿದೆ.'' ಈ ಮಾತನ್ನು I have said before not only now, but even during election time and also prior to election time from so many years. ನಾನೊಬ್ಬನೇ ಈ ಮಾತುಗಳನ್ನು ಹೇಳುತ್ತಿಲ್ಲ. ಅನೇಕ ರಾಜಕಾರಣಿಗಳು ಹೇಳಿದ್ದಾರೆ, ತಜ್ಞರು ಹೇಳಿದ್ದಾರೆ, ಹೀಗೆ ಹೇಳುತ್ತಿರುವುದು ಆ ಮಾರ್ಕ್ಸ್ ಕಾಲದಿಂದಲೂ ನಡೆದುಕೊಂಡು ಬರುತ್ತಿದೆ. ನಾನು ಇದನ್ನು ಹೊಸದಾಗಿ ಕಂಡುಹಿಡಿದು ಹೇಳುತ್ತಿಲ್ಲ. ಇದು ಕಳೆದ 25 ವರ್ಷಕ್ಕೆ ಹಿಂದಿನಿಂದಲೂ ನಡೆದು ಕೊಂಡು ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ಆ ಜನಾಂಗದ ಬಾಯಿ ಕಟ್ಟಿದ ಹಾಗಾಗಿದೆ ಎಂದು ಹೇಳಿದ್ದಕ್ಕೆ ನಾನು ಚಿಂತೆಪಡುವುದಿಲ್ಲ. ಅಂಥ ವಿಷಯಗಳಿದ್ದರೆ ಅದನ್ನು ದೇಶದ ಜನರ ಮುಂದೆ ಇಡೋಣ, ಎಲ್ಲರ ಗಮನವನ್ನು ಅತ್ತಕಡೆಗೆ ಸೆಳೆಯೋಣ. ಅಂಥ ಅಕ್ರಮಗಳಾಗಿದ್ದರೆ ಅದನ್ನು ಎಲ್ಲರೂ ಒಪ್ಪಲೇಬೇಕು. ಅದಕ್ಕಾಗೇ ನಾನು ಇದನ್ನೆಲ್ಲಾ ತಮ್ಮ ಮುಂದೆ ಇಟ್ಟಿದ್ದು. ಈ ವಿಚಾರದಲ್ಲಿ ನನಗೂ ತಮಗೂ ಏನೂ ವ್ಯತ್ಯಾಸವಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಅಧ್ಯಕ್ಷರೆ, ಒಟ್ಟಿನಲ್ಲಿ ಈಗ ಈ ಭಾಷಣದಿಂದ ಇಲ್ಲಿ ಈ ಚರ್ಚೆ ಉದ್ಭವಿಸಿದೆ ಎಂದ ಹಾಗಾಯಿತು. ಇದಕ್ಕಾಗಿ ನಮ್ಮ ವಿರೋಧ ಪಕ್ಷದ ನಾಯಕರು ಒಂದು ಸಮಿತಿಯನ್ನು ಮಾಡಿ ಅಂಕಿಅಂಶಗಳನ್ನು ಶೇಖರಿಸಬೇಕೆಂದು ಹೇಳುತ್ತಿದ್ದಾರೆ. ಅವರ ಹೇಳಿಕೆಯ ಪ್ರಕಾರವೇ ಒಂದು ಸಮಿತಿಯನ್ನು ಮಾಡಿ ಪ್ರತಿಯೊಂದು ಜಾತಿಯವರೂ ಕಳೆದ 25 ವರ್ಷಗಳಲ್ಲಿ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಎಷ್ಟು ಅನುಕೂಲವನ್ನು ಪಡೆದುಕೊಂಡಿದ್ದಾರೆ ಹಾಗೂ ಅವರವರ ಊರುಗಳಲ್ಲಿ ಅವರವರ ಜಾತಿಯ ಬಲದ ಮೇಲೆ ಎಷ್ಟು ರಸ್ತೆ, ಬಾವಿ, ತಕಾವಿ ಸಾಲ, ಸರ್ಕಾರಿ ನೌಕರಿ ಇತ್ಯಾದಿ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ, ಅಥವಾ ಇತ್ಯಾದಿ ಸೌಲಭ್ಯಗಳನ್ನು ಜನರಿಗೆ ಜಾತಿ ಆಧಾರದ ಮೇಲೆ ಒದಗಿಸಲಾಗಿದೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿ ಆ ಸಮಿತಿಯವರು ಈ ವಿಚಾರಗಳ ಬಗ್ಗೆ ಒಂದು ಪಟ್ಟಿಯನ್ನು ತಯಾರುಮಾಡಬೇಕೆಂದೂ ಮತ್ತು ಆ ಪಟ್ಟಿಯನ್ನು ಈ ಸಭೆಯ ಮುಂದಿಡಬೇಕೆಂದೂ ಹೇಳಿರತಕ್ಕ ಮಾತೇನಿದೆ ಅದು ಸಾಧ್ಯವಿಲ್ಲದ ಮಾತು. ಅದಕ್ಕೆ ಬೇಕಾದ ಅಂಕಿಅಂಶಗಳು ಎಲ್ಲಿಯೂ ಸಿಕ್ಕುವುದಿಲ್ಲ. ಹಾಗೆ ಎಲ್ಲಿಯೂ ಸಿಕ್ಕುವುದಿಲ್ಲವೆಂದ ಮಾತ್ರಕ್ಕೇ ರಾಜಕೀಯ, ಆರ್ಥಿಕ ಮತ್ತು

(ಶ್ರೀ ಡಿ. ದೇವರಾಜ ಅರಸ್)

ಸಾಮಾಜಿಕ ಕ್ಷೇತ್ರಗಳಲ್ಲಿ ಕೆಲವು ಕೋಮುಗಳವರು ಬೇರೆ ಕೆಲವು ಕೋಮುಗಳವರನ್ನು ಶೋಷಣೆ ಮಾಡಿದ್ದಾರೆಂಬುದು ಬುಡವಿಲ್ಲದ ಮಾತು ಎಂಬುದಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಭಾವಿಸುವುದಾದರೆ ಅವರು ಹಾಗೇ ಭಾವಿಸಿಕೊಳ್ಳಲಿ. ಆದರೆ ಎಷ್ಟೆಷ್ಟು ಜಾತಿಯವರು ಎಷ್ಟೆಷ್ಟು ವರ್ಷಗಳ ಕಾಲ ಯಾವ ಯಾವ ಜಾತಿಗಳನ್ನು ಶೋಷಣೆ ಮಾಡಿದ್ದಾರೆ ಎಂಬುದು ಲೋಕವಿಧಿತವಾಗಿದೆ. ಅಲ್ಲದೆ ಈ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳು ಯಾವುದೇ ಒಂದು ಜಾತಿಗೆ ಸೀಮಿತವಾದವುಗಳಲ್ಲ. ಸಮಾಜದಲ್ಲಿ ಉನ್ನತಸ್ಥಾನದಲ್ಲಿರತಕ್ಕಂಥ ಐಶ್ವರ್ಯವಂತರು ಸಾಮಾನ್ಯ ಜನರಿಗಿಂತ, ಬಡವರಿಗಿಂತ ಮೇಲ್ಮಟ್ಟದಲ್ಲಿರುತ್ತಾರೆ. ಇದು ಅನೂಚಾನವಾಗಿ ನಡೆದುಕೊಂಡು ಬಂದಿದೆ. ಹಾಗೆ ಅವರಿಗೆ ಸಮಾಜದಲ್ಲಿ ಒಂದು ಮೇಲ್ಮಟ್ಟದ ಸ್ಥಾನವಿದೆ ಅನ್ನುವುದರಿಂದಲೇ By reason of one's caste, he is looked down by another person. Is it not a fact? Does it require a committee to go into the question? Everybody knows in life what it is. Supposing as compared to a potter or a Kammara or a shoe-maker or who toils in the sun, some of us who are placed socially above these people, look down those people. That is the tradition in over society. That is the convention that has been built up over ages. By virtue of one's position, he is always looked down; it does not require a committee to go and prove it. Take for instance the power of money. It is not confined to one caste or community. If my friends want to make it appears that because I say this, it is aimed against only a majority community, I can only submit that they are wrong. It is not correct. I would request the Hon'ble members to interpret it in its true perspective.

ಶ್ರೀ ಎಚ್. ಡಿ. ದೇವೇಗೌಡ.—ನಾನು ಮುಖ್ಯ ಮಂತ್ರಿಗಳಿಗೆ ಒಂದು ಮಾತನ್ನು ಹೇಳಬಯಸುತ್ತೇನೆ. 'ಒಕ್ಕಲಿಗರು, ಲಿಂಗಾಯಿತರು' ಬೇರೆ ಕೋಮುಗಳಿಗೆ ಅನ್ಯಾಯ ಮಾಡಿದ್ದಾರೆ. ಆದುದರಿಂದ ಈಗ ಮುಖ್ಯಮಂತ್ರಿಗಳು ಈ ಕೋಮುಗಳನ್ನು ತುಳಿಯಲು ಹೊರಟಿದ್ದಾರೆ—ಎಂದು ತಾವು ಹೇಳಿದ್ದಕ್ಕೆ ನಾನು ಇಷ್ಟನ್ನೆಲ್ಲಾ ಹೇಳಬೇಕಾಗಿ ಬಂತು. ಮುಖ್ಯ ಮಂತ್ರಿಗಳು ಈ ಒಂದು ಹಿನ್ನೆಲೆಯನ್ನು ಇಟ್ಟುಕೊಂಡು ಮಾತನಾಡಿದ್ದಾರೆಂಬುದು ನನ್ನ ವಾದ. ಹೀಗೆ ಈ ಕೋಮಿನವರು ಯಾರನ್ನು ಎಷ್ಟು ದಿವಸಗಳಿಂದ ಶೋಷಣೆ ಮಾಡುತ್ತಿದ್ದರು ಎಂಬುದನ್ನು ತಿಳಿಸಿ ಎಂದೇ ನಾನೂ ಕೇಳುತ್ತಿರುವುದು. ನಾನು ವಿನಾ ಕಾರಣ ಯಾರ ಮುಖಕ್ಕೂ ಮಸಿ ಹಚ್ಚಬೇಕೆಂದು ಹೊರಟಿರುವುದಿಲ್ಲ. ಶ್ರೀ ಬಿ. ಪುಟ್ಟಸ್ವಾಮಯ್ಯನವರು ಯಾವ ಜಾತಿಗಳ ಬಗ್ಗೆ ವಾದ ಮಾಡಿದ್ದಾರೋ ಆ ಜಾತಿಗಳು ಇತರರನ್ನು ಶೋಷಣೆ ಮಾಡಿದ್ದರಿಂದ ಅವರಿಗೆ ಈಗ ಬಾಯಿಕಟ್ಟಿದ ಹಾಗೆ ಆಗಿದೆ ಎಂಬುದು ಬಹಳ ವೇಗ್ ಆದ ಅಲಗೇಷನ್. You please come out with facts. Why do you say that we have exploited others. If you say so, you must prove it with facts.

Sri B. BASAVALINGAPPA (Minister for Municipal Administration).—If you go and see in the villages, you will find it out yourselves.

ಶ್ರೀ ಎಚ್. ಡಿ. ದೇವೇಗೌಡ.—ಅದನ್ನೇ ಪ್ರೂವ್ ಮಾಡಿ ಎಂದು ಕೇಳುತ್ತಿರುವುದು.

ಶ್ರೀ ಡಿ. ದೇವರಾಜ ಅರಸ್.—ನಾನು ಯಾರೋ ಶೋಷಣೆ ಮಾಡಿದ್ದಾರೆಂದು ಹೇಳಿದರೆ ಅದನ್ನು ನಾನೇ ಎಂದು ತಾವು ಅಂದುಕೊಂಡರೆ ಅದಕ್ಕೆ ನಾನು ಏನು ಹೇಳಲಿ?

ಶ್ರೀ ಎಚ್. ಡಿ. ದೇವೇಗೌಡ.—ತಾವು ಹಾಗೆ ಹೇಳಬಾರದಾಗಿತ್ತು.

ಶ್ರೀ ಡಿ. ದೇವರಾಜ ಅರಸ್.—ಇಲ್ಲಿ what is the vague allegation that I have made? ಶ್ರೀ ದೇವೇಗೌಡರೇನು ತಿದುಕೊಂಡಿದ್ದಾರೆಯೋ ಆ ಜಾತಿಯ ವಿಷಯ ನಾನು ಹೇಳಿರತಕ್ಕದ್ದು.

ಶ್ರೀ ಎಚ್. ಡಿ. ದೇವೇಗೌಡ.—ತಾವು ಹೇಳಿರತಕ್ಕದ್ದರಲ್ಲಿ ಆ ರೀತಿ ಭಾವನೆ ಬರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ನಿಮಗೆ ನಾನು ಹೇಳಿದ್ದು ಸರಿಯಾಗಿ ಅರ್ಥವಾಗದೆ ಇದ್ದರೆ ಈಗ ನಾನು ಹೇಳಿದ ಮೇಲಾದರೂ ಆ ನಿಮ್ಮ ಭಾವನೆಯನ್ನು ಸರಿಪಡಿಸಿಕೊಳ್ಳಿ.

ಶ್ರೀ ಎಚ್. ಡಿ. ದೇವೇಗೌಡ.—ತಮ್ಮಲ್ಲೂ ಕೂಡ ಅಂಥ ಭಾವನೆ ಇರಬಾರದು, ಇದ್ದರೆ You must face certain facts.

Sri D. DEVARAJ URS.—I have faced the facts and I am going to face them.

Sri H. D. DEVE GOWDA.—You cannot make a vague allegation.

Sri D. DEVARAJ URS.—I now assert and say that there are people and people in this country who by virtue of their position both in the political field, economic field as well as in social field have exploited others. It does not refer to one single community or caste. I do assert it. ಆದುದರಿಂದ ಈ ಒಂದು ವಿಚಾರವನ್ನು ವರ್ಷಾನುಗಟ್ಟಲೆಯಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲೂ ಕೂಡ ಚರ್ಚೆ ಮಾಡುತ್ತಾ ಬಂದಿದೆ. ಇದನ್ನು ನಾನೇನೂ ಈಗ ಹೊಸದಾಗಿ ಪ್ರಸ್ತಾಪಮಾಡುತ್ತಿಲ್ಲ. ಈ ವಿಚಾರದಲ್ಲಿ ಅನೇಕರು ಪುಸ್ತಕಗಳನ್ನು ಬರೆದಿದ್ದಾರೆ. ಈ ಮಾತುಗಳನ್ನು ಅನೇಕ ಅನುಭವಿಗಳೂ ಹೇಳುತ್ತಿದ್ದಾರೆ. ಆದರೆ ಈ ಮಾತುಗಳೇನಿವೆ ಇವು ಕೇವಲ ಒಂದು ಜಾತಿಗೇ ಅನ್ವಯಿಸಿದ ಮಾತುಗಳು ಎಂದು ಹೇಳತಕ್ಕ ಅಧಿಕಾರ ವಿರೋಧ ಪಕ್ಷದ ನಾಯಕರಲ್ಲಿಲ್ಲ. ನಾನು ಹೇಳುತ್ತಿರುವ ಈ ಮೂರು ರಂಗಗಳಲ್ಲೂ ಎಲ್ಲಾ ಜಾತಿಗಳವರೂ ಇದ್ದಾರೆ. ಅದರಲ್ಲಿ ಒಕ್ಕಲಿಗರಿದ್ದಾರೆ, ಲಿಂಗಾಯಿತರಿದ್ದಾರೆ, ಕ್ಷತ್ರಿಯರಿದ್ದಾರೆ, ಮುಸಲ್ಮಾನರಿದ್ದಾರೆ, ಕ್ರೈಸ್ತರಿದ್ದಾರೆ, ಹೀಗೇ ಇನ್ನೂ ಅನೇಕ ಜಾತಿಯವರಿದ್ದಾರೆ. ಅದರಲ್ಲಿ ಬ್ರಾಹ್ಮಣರೂ ಇದ್ದಾರೆ. ಇವರು ಬೇರೆ ಜಾತಿಯವರನ್ನು ಶೋಷಣೆ ಮಾಡಿದ್ದಾರೆಂಬುದು ಸತ್ಯವಾದ ಮಾತು. ಈಗ ಈ ವಿಚಾರವನ್ನು ವಿರೋಧಪಕ್ಷದ ನಾಯಕರು ತಪ್ಪು ಮೇಲೆಳೆದುಕೊಂಡು ನನ್ನ ಮೇಲೆ ಆಕ್ರೋಶ ಮಾಡಿದರೆ ಆ ನಿಮ್ಮ ಆಟ ನನ್ನ ಮೇಲೆ ಏನೂ ನಡೆಯಲಾರದು ಎಂಬುದನ್ನು ನಾನು ತಮಗೆ ಸ್ಪಷ್ಟವಾಗಿ ಹೇಳುತ್ತೇನೆ. ಇದನ್ನೆಲ್ಲಾ ಸಾಮಾನ್ಯವಾಗಿ ನೋಡಿದ್ದಾರೆ. ಚುನಾವಣೆಯ ಕಾಲದಲ್ಲಿ ಇದರ ಪ್ರಸ್ತಾಪ ಮಾಡಿದ್ದಾರೆ. ಈಗಲೂ ಒಬ್ಬೊಬ್ಬರು ಇದನ್ನು ಹೇಳುವುದಕ್ಕೆ ಹೊರಟಿದ್ದಾರೆ. ಜಾತಿ ದ್ವೇಷದಿಂದ ಹೋರಾಡಲು ಕೆಲವರು ಹೊರಟಿರುವುದು ಸರಿಯಲ್ಲ ಎಂದು ಹೇಳಿದ್ದಾರೆ. ಇದು ಪತ್ರಿಕೆಯಲ್ಲೂ ಬಂದಿದೆ. ಇದನ್ನು ಕೇಳಿ ಜನ ಓಟು ಕೊಟ್ಟಿದ್ದಾರೆ. ಇದಕ್ಕಾಗಿ ಈ ಸಭೆಯಲ್ಲಿ ಒಂದು ಮಾತು ಹೇಳುವುದು ಯಾವ ಒಬ್ಬ ಸದಸ್ಯರೇ ಆಗಲಿ ಯಾವ ಜಾತಿಯವರೇ ಆಗಲಿ, ತಮ್ಮ ಜಾತಿಯ ಓಟಿನಿಂದ ಗೆದ್ದು ಬಂದಿರುವ ಒಬ್ಬ ಸದಸ್ಯರು ಈ ಮನೆಯಲ್ಲಿದ್ದರೆ ನಾನು ಈ ಸ್ಥಾನ ಬಿಟ್ಟುಹೋಗಲು ತಯಾರಾಗಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ಸ್ಥಾನ ಬಿಡಲು ಈ ಕಾರಣ ಸರಿಯಲ್ಲ.

ಶ್ರೀ ಡಿ. ದೇವರಾಜ ಅರಸ್.—ಈ ದೇಶದಲ್ಲಿ ಬಂದಿದೆ. ಅದನ್ನು ನನ್ನ ಭಾಷಣದಲ್ಲಿ ಹೇಳಿದ್ದೇನೆ. ದೇಶದಲ್ಲಿ ಎರಡು ಜಾತಿಗಳಿವೆ, ಒಂದು ಬಡವರ ಜಾತಿ, ಒಂದು ದೊಡ್ಡವರ ಜಾತಿ. ಇದನ್ನು ಮೊದಲಿನಿಂದ ಸ್ಪಷ್ಟವಾಗಿ ಹೇಳಿದ್ದೇನೆ; ಚುನಾವಣೆ ಕಾಲದಲ್ಲೂ ಹೇಳಿದ್ದೇನೆ. ಈ ದೇಶದಲ್ಲಿ ನಮ್ಮ ಪಕ್ಷಕ್ಕೆ ಹೆಚ್ಚು ಜನ ಬಡವರೇ ಓಟು ಕೊಟ್ಟಿರುವವರು ಎಂದು ಹೇಳುವುದಕ್ಕೆ ಹಿಂಜರಿಯಬೇಕಾಗಿಲ್ಲ. ಹರಿಜನರೂ ಓಟು ಕೊಟ್ಟಿದ್ದಾರೆ. ಯಾರು ರಾಜ್ಯದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಣೆ ಮಾಡುತ್ತಿದ್ದಾರೆ. ಇಂಗ್ಲೀಷಿನಲ್ಲಿ ಹೇಳುವುದಾದರೆ ವೆಸ್ಟೆಡ್ ಇಂಟರೆಸ್ಟ್ ಇರುವವರು ಯಾರಿದ್ದಾರೆ. ಅವರು ನಮಗೆ ಓಟು ಕೊಟ್ಟಿಲ್ಲ. ಇದರಲ್ಲಿ ಎಲ್ಲ ಜಾತಿಯವರೂ ಇದ್ದಾರೆ. ಅವರು ನಮಗೆ ಬೆಂಬಲ ಕೊಟ್ಟಿಲ್ಲ. ನಾವು ತರುವ ಕಾರ್ಯಕ್ರಮಗಳಿಂದ ಅವರ ಸ್ಥಾನಕ್ಕೆ ಧಕ್ಕೆ ಬರುವುದೆಂದು ಅವರು ತಿಳಿದುಕೊಂಡು ಹೀಗೆ ಮಾಡಿದ್ದಾರೆ. ಶ್ರೀಮತಿ ಇಂದಿರಾಗಾಂಧಿಯವರ ನೀತಿಗೆ ಸಮಾಜದಲ್ಲಿ ಮನ್ನಣೆಯಿದೆ. ವೀಕರ್ ಸೆಕ್ಷನ್, ಹಿಂದುಳಿದವರು, ಮೈನಾರಿಟಿ ಕೋಮುಗಳವರು, ಹರಿಜನ ಗಿರಿಜನರು ಮುಂತಾದವರಿಗೆ ಸಾಮಾಜಿಕ ನ್ಯಾಯ ದೊರಕಿಸಲು ಕೆಲವು ಕಾರ್ಯಕ್ರಮ ಅವರು ಹಾಕಿದ್ದಾರೆ. ಅದಕ್ಕಾಗಿ ಸಂವಿಧಾನದಲ್ಲಿ ಕೆಲವೊಂದು ತಿದ್ದುಪಾಟು ಮಾಡಬೇಕೆಂದು ಹೇಳಿರುವುದು ಎಲ್ಲರಿಗೂ ಗೊತ್ತಿದೆ. ಅಲ್ಲದೆ ಆಸ್ತಿ ಹಕ್ಕಿನ ಬಗ್ಗೆ ಸಂವಿಧಾನದ ತಿದ್ದುಪಡಿಯಾಗಬೇಕೆಂದು ಹೇಳುತ್ತಿದ್ದಾರೆ. ಇದಕ್ಕೆ ಕಾಂಗ್ರೆಸ್ (ಒ)ನವರು ಈ ದೇಶದಲ್ಲಿ ಇಂದಿರಾಗಾಂಧಿಯವರು ವಾರ್ತಾ ಅಂಡ್ ಹೋಂ ಕಿತ್ತುಕೊಂಡು ಹೋಗುವುದಕ್ಕೆ ಹೊರಟಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ನೀವು ರಾಜಕೀಯ ಹೇಳಬೇಕಾಗಿಲ್ಲ.

ಶ್ರೀ ಡಿ. ದೇವರಾಜ ಅರಸ್.—I have every right to say. I am not yielding. ಸಂವಿಧಾನದ ತಿದ್ದುಪಡಿ ಮಾಡಿದಾಗ ಸರ್ಕಾರದವರು ಜನರ ಗುಡಿಸಲುಗಳು, ಮಡಿಕೆ ಮುಂತಾದುದನ್ನು ಕಿತ್ತುಕೊಂಡು ಹೋಗಲು ಹೊರಟಿದ್ದಾರೆ ಎಂದು ಪ್ರಚಾರಮಾಡಿದ್ದಾರೆ. ಹಾಗೆ ಹೇಳಿದವರು ಈಗ ಜಾತಿ ಬೆಳೆಸಲು ಹೊರಟಿದ್ದಾರೆ ಎಂದು ಹೇಳುತ್ತಿದ್ದಾರೆ. ನಾನು ಹಿಂದೆಯೂ ಹೇಳಿದ್ದೇನೆ ಈಗಲೂ ಹೇಳುತ್ತೇನೆ. ಎಲ್ಲಾ ಜಾತಿಗಳಲ್ಲೂ ಬಡವರಿದ್ದಾರೆ. ಯಾವುದಾದರೂ ಒಂದು ಜಾತಿಯಲ್ಲಿ ಎಲ್ಲರೂ ಪ್ರಬಲರಾಗಿದ್ದಾರೆ, ಅನುಕೂಲವಾಗಿದ್ದಾರೆ ಎಂದು ಶ್ರೀ ದೇವೇಗೌಡರು ಹೇಳಿದರೆ ಒಪ್ಪಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೇ ಪಕ್ಷ ಹುಟ್ಟಿ ಎಂದು ಹೇಳುವುದು.

ಶ್ರೀ ಡಿ. ದೇವರಾಜ ಅರಸ್.—ಅದನ್ನು ಮಾಡಬೇಕಾಗಿಲ್ಲ. ಹಿಂದೆ ಸರಕಾರ ಒಂದು ತೀರ್ಮಾನ ಮಾಡಿದಾಗ ಜನರಿಗೆ ಕೆಲವು ಸೌಲತ್ತು ಕೊಡಬೇಕೆಂದಾಗ ಜಾತಿಯ ಪ್ರಶ್ನೆ ಬೇಡ, ವರಮಾನ ನೋಡಿ ಸೌಲಭ್ಯ ಒದಗಿಸಬೇಕು ಎಂದು ಹೇಳಿದರು. ಈಗ ವರಮಾನವೊಂದೇ ಅಳತೆಗೋಲಾದರೆ ಅದರಿಂದ ಅನೇಕರಿಗೆ ಸಾಮಾಜಿಕ ನ್ಯಾಯ ದೊರೆಯುವುದಿಲ್ಲ ಎಂಬ ಅಭಿಪ್ರಾಯ ಅನೇಕ ಮಿತ್ರರಿಗಿದೆ. ಈ ಸಭೆಯೊಳಗೆ ಅನೇಕರಿಗೆ ಈ ಅಭಿಪ್ರಾಯವಿದೆ. ಆ ದೃಷ್ಟಿಯಿಂದ ನಾವೀಗ ಯೋಚನೆಮಾಡಿರುವುದು ಸಂವಿಧಾನದ ಪ್ರಕಾರ ನಮ್ಮ ಮಿತ್ರರು ಹೇಳಿದ ಹಾಗೆ ಅನುಕೂಲ ಒದಗಿಸಬೇಕೆಂದು. ಆರ್ಟಿಕಲ್ 16 (4) ರಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಸಿಟಿಜನ್ಸ್ ವಿಚಾರವಿದೆ. ಸಂವಿಧಾನದ ಆರ್ಟಿಕಲ್ 16 (4)ರಲ್ಲಿ ಈ ರೀತಿಯಿದೆ:

> "Nothing in this article shall prevent the State from making any provision for the reservation of appointments or Posts in favour of any backward class of citizens, which, in the opinion of the State, is not adequately represented in the services under the State."

ಸಂವಿಧಾನದಲ್ಲಿ ಹೇಳಿರುವ ಪ್ರಕಾರ ಬ್ಯಾಕ್‌ವರ್ಡ್ ಕ್ಲಾಸ್ ಆಫ್ ಸಿಟಿಜನ್ಸ್ ಯಾರು ಎಂದು ತಿಳಿಯಲು ಕೇಂದ್ರ ಸರಕಾರದವರು ಪ್ರಯತ್ನಮಾಡಿದ್ದಾರೆ. ಇದಕ್ಕಾಗಿ ಕಾಕಾ ಕಾಲೇಲ್ಕರ್ ಸಮಿತಿ ಮಾಡಿದರು. ಆದರೆ ವರದಿ ಒಪ್ಪಿದರೋ ಇಲ್ಲವೋ ಅಂತೂ ಸರಿಯಾಗಿ ಅದನ್ನು ಜಾರಿ ಮಾಡಲಿಲ್ಲ. ಅದು ಹಾಗೆಯೇ ಇದೆ. ಪ್ರತಿಯೊಂದು ರಾಜ್ಯದವರೂ ತಮ್ಮ ಇಚ್ಛಾನುಸಾರ ಅದನ್ನು ಇಂಟರ್‌ಪ್ರಿಟ್ ಮಾಡಿ ಕಾನೂನು ಮಾಡಿದರು. ಆದರಿಂದ ಯಾರಿಗೂ ಅಷ್ಟಾಗಿ ತೃಪ್ತಿಯಾಗಿಲ್ಲ. ನನಗೆ ತಿಳಿದಮಟ್ಟಿಗೆ ನಮ್ಮ ದೇಶದಲ್ಲಿ ಎಕನಾಮಿಕಲಿ ಬ್ಯಾಕ್‌ವರ್ಡ್ ಆಗಿರುವವರು ಎಲ್ಲ ಜಾತಿಗಳಲ್ಲೂ ಇದ್ದಾರೆ, ಎಲ್ಲ ಜಾತಿಯವರಲ್ಲೂ ಅಂಥವರು ಸ್ವಲ್ಪ ಜನರಾದರೂ ಇದ್ದಾರೆ, ಅನುಕೂಲಸ್ಥರೂ ಸ್ವಲ್ಪ ಮಂದಿ ಇರಬಹುದು. ಲಿಂಗಾಯಿತರು, ಒಕ್ಕಲಿಗರು, ಬ್ರಾಹ್ಮಣರು, ಕ್ಷತ್ರಿಯರು ಮುಂತಾದ ಎಲ್ಲ ಪಂಗಡಗಳವರಲ್ಲೂ ಬಡವರಿದ್ದಾರೆ. ಹರಿಜನರು ಮುಂತಾದವರಲ್ಲಿ ಬಡವರ ಸಂಖ್ಯೆ ಹೆಚ್ಚಾಗಿದೆ. ಅವರಿಗೆ ದೇಶದಲ್ಲಿ ಎಷ್ಟು ಆಸ್ತಿ ಇದೆ? ಅವರಿಗೆ ಸ್ವಲ್ಪ ಜಮೀನು ಕೊಡಬೇಕೆಂದು ನಾವು ಕಾನೂನು ತಿದ್ದುಪಡಿ ಮಾಡಿದ್ದೇವೆ; ಸೇಕಡ 50 ರಷ್ಟು ಕೊಡಬೇಕೆಂದು ಮಾಡಿರುವುದರಿಂದ ಸ್ವಲ್ಪಮಟ್ಟಿಗೆ ಜಮೀನು ಅವರಿಗೆ ಸಿಕ್ಕಿರಬಹುದು. ಅವರಿಗೆ ಹಣದ ಕೊರತೆಯಾದಾಗ ಅದರಲ್ಲಿದ್ದ ಜಮೀನನ್ನು ಮಾರುವುದುಂಟು. ಅದೂ ಕೂಡ ಗೊತ್ತಿದೆ. ಇದು ಎಲ್ಲರಿಗೂ ಗೊತ್ತಿದೆ, ಇದನ್ನೆಲ್ಲಾ ಸಮಿತಿ ಮಾಡಿ ಅದರ ಮೂಲಕ ತಿಳಿದುಕೊಳ್ಳಬೇಕಾಗಿಲ್ಲ.

> "So far as the Scheduled Castes and Scheduled Tribes are concerned, 15 plus 3 *i.e.*, 18 per cent should be given to them in making appointments to Government services."

ಎಂದು ಇತ್ತು. ಈಗ ವರದಿಯಾಗಿರುವ ಪ್ರಕಾರ ಸೇಕಡ 18 ರಷ್ಟು ಅವರಿಗೆ ದೊರೆತಿಲ್ಲ. ಕೆಲವು ಕಡೆ ಹಾಗಾಗಿರಬಹುದು. ಇದು ಅನ್ಯಾಯ ಎಂದು ಹೇಳುತ್ತೇನೆ; ಇದು ನಿಜ. ಇದನ್ನು ಸರಿಪಡಿಸಬೇಕಾದ್ದು ನಮ್ಮ ಕರ್ತವ್ಯ ಎಂದು ಹೇಳುತ್ತೇನೆ. ಇದು ಗೊತ್ತಿರುವ ವಿಚಾರ. ಇದೇ ರೀತಿಯಲ್ಲಿ ಕೆಲವು ಕೋಮುಗಳಿವೆ, ಬೆಸ್ತರು, ಪರಿವಾರ, ಕುಂಬಾರ, ಅಗಸ, ಕಲಸಿ, ಕೊರಮರು ಮುಂತಾದವರಿದ್ದಾರೆ. ಇವರಲ್ಲಿ ಅನೇಕರು ಬಡವರು; ಅಲ್ಲವೆಂದು ಹೇಳುವುದಾದರೆ ಹೇಳಬಹುದು; ಇಂಥವರಿದ್ದಾರೆ. As a caste, as a community they are

all backward. ಅವರಲ್ಲಿ ಒಂದು ಸಾವಿರ ಸಂಸಾರ ತೆಗೆದುಕೊಂಡರೆ 10 ಸಂಸಾರಗಳಿಗೆ ಎಕರೆ ಭೂಮಿ ಕೂಡ ಇಲ್ಲ. ನೂರು ಸಂಸಾರ ತೆಗೆದುಕೊಂಡರೆ 50 ಹಳ್ಳಿಯ ಮಟ್ಟದಲ್ಲಿ ಜೀವನ ಮಾಡಬಹುದು, ನೂರಕ್ಕೆ ನೂರು ಬಡವರೂ ಕೆಲವು ಕಡೆ ಇದ್ದಾರೆ. ಇದು ಬ್ಯಾಕ್‌ವರ್ಡ್‌ನೆಸ್. ನಾವು ಅವರಿಗೆ ಯಾವ ಸೌಲಭ್ಯ ಕೊಡಬೇಕು ನೌಕರಿ ಮುಂತಾದದ್ದು ಅಂಥ ಸಂದರ್ಭದಲ್ಲಿ ಅವರಿಗೆ ನ್ಯಾಯ ದೊರಕಿಸಲು ಸಾಧ್ಯವೇ ಎಂಬುದನ್ನು ಸ್ವಲ್ಪ ವಿಶದಪಡಿಸಬೇಕು. ಹಿಂದೆ ನಾಗನಗೌಡ ಸಮಿತಿ ಮಾಡಿದಾಗ ಅವಶ್ಯಕವಾದ ಕ್ರಮ ಕೈಕೊಳ್ಳಬೇಕೆಂಬ ಅಭಿಪ್ರಾಯವಿತ್ತು.

ಆದರೆ ಇದರಲ್ಲಿ ಕಾರಣ ಇದೆ: ಈ ರಿಪೋರ್ಟನ್ನು ತಾವೇ ಓದಿದರೆ ಗೊತ್ತಾಗುತ್ತದೆ. ಇದನ್ನು ಯಾವರೀತಿ ಜಾರಿಗೆ ತರಬೇಕು ಎಂದು ಆಗಿನ ಸರ್ಕಾರಕ್ಕೆ ಕಠಿಣವಾಯಿತು. ಆಗ ಏನು ಮಾಡಿದರು ಎಂದರೆ ಒಂದು ಗೌರ್ನಮೆಂಟ್ ಆರ್ಡರನ್ನು ಜಾರಿಗೆ ತಂದರು. ಅದರಲ್ಲಿ ಏನು ಹೇಳಿದ್ದಾರೆ ಎಂದರೆ ಬ್ಯಾಕ್‌ವರ್ಡ್‌ನೆಸ್, ಎಕನಾಮಿಕ್ ಬ್ಯಾಕ್‌ವರ್ಡ್ ಹೇಗೆ ಎಂದರೆ ವರ್ಷಕ್ಕೆ 2 ಸಾವಿರ ರೂಪಾಯಿ ಅಥವಾ 1200 ರೂಪಾಯಿ ಆದಾಯ ಇದ್ದರೆ ಮಾತ್ರ ಬ್ಯಾಕ್‌ವರ್ಡ್ ಅದಕ್ಕಿಂತ ಹೆಚ್ಚಿಗೆ ಇದ್ದರೆ ಬೇಡ ಅಂತ ನಿಗದಿ ಮಾಡಿದರು. ಇದರಲ್ಲಿ ಸ್ವಲ್ಪ ಮಟ್ಟಿಗೆ ನ್ಯಾಯ ದೊರಕುತ್ತದೆಯೋ ಎಂದು ನೋಡಿದರೆ ನಿಜವಾಗಿಯೂ ಬ್ಯಾಕ್‌ವರ್ಡ್ ಪೀಪಲ್‌ಗೆ ನ್ಯಾಯ ಸಿಕ್ಕುವುದಿಲ್ಲ. ಹೇಗೆಂದರೆ 10 ಸಾವಿರ ರೂಪಾಯಿ ಆದಾಯ ಬಂದರೂ ಕೂಡ 2 ಸಾವಿರ ರೂಪಾಯಿ ಆದಾಯ ಬರುತ್ತದೆ ಎಂದು ಸುಳ್ಳು ಸರ್ಟಿಫಿಕೇಟ್ ತಂದುಬಿಡುತ್ತಾರೆ. ಈ ರೀತಿ ಲಾಭ ಪಡೆದಿರುವವರು ಇದ್ದಾರೆ. ನಿಜವಾಗಿ ಇದರಿಂದ ಲಾಭ ಪಡೆದುಕೊಳ್ಳುವವರು ಸ್ವಲ್ಪ ಮಟ್ಟಿಗೆ ಸಿಕ್ಕಿಲ್ಲ. ಈ ದೃಷ್ಟಿಯಿಂದ ಇದರಲ್ಲಿ ಕೆಲವು ನ್ಯೂನತೆಗಳು ಇವೆ. ಖಂಡಿತವಾಗಿಯೂ ಇದನ್ನು ಬೇರೆ ಸ್ಟೇಟ್‌ನಲ್ಲೂ ಯೋಚನೆ ಮಾಡಿದ್ದಾರೆ. ಷೆಡ್ಯೂಲ್ ಕ್ಯಾಸ್ಟ್‌ನಲ್ಲೂ ಕೂಡ ಇದರ ಬಗ್ಗೆ ಸುಪ್ರೀಂ ಕೋರ್ಟ್ ಡಿಸಿಷನ್ ಇವೆ. ಆದುದರಿಂದ ಬ್ಯಾಕ್‌ವರ್ಡ್ ಕ್ಲಾಸ್ ಆಫ್ ಸಿಟಿಜನ್ಸ್ ಯಾರು ಎನ್ನುವುದನ್ನು ಡಿಫೈನ್ ಮಾಡಬೇಕು. ಅದಕ್ಕಾಗಿ ಒಂದು ಕಮೀಷನ್ ಇರಲಿ ಎಂದು ಮಾಡಿದ್ದೇವೆ. ಅವರಿಗೆ ಕೊಡಬೇಕಾದಂಥ ಸವಲತ್ತುಗಳನ್ನು ಅವರಿಗೇ ಮೀಸಲಾಗಿಡೋಣ ಎನ್ನುವುದೇ ನಮ್ಮ ಉದ್ದೇಶ. ಅಧ್ಯಕ್ಷರೇ, ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುವುದು ಇಷ್ಟೆ. ನಾವು ಇದನ್ನು ಹೇಳಬೇಕಾದರೆ ಬ್ಯಾಕ್‌ವರ್ಡ್‌ನೆಸ್ ಇರತಕ್ಕವರನ್ನು ಇಟ್ಟುಕೊಂಡು ಬೇರೆ ಕಮ್ಯೂನಿಟಿಯವರನ್ನು ದೂರ ಇಡಬೇಕು ಎಂತ ಉದ್ದೇಶ ಅಲ್ಲ. ಅಥವಾ ತುಳಿಯುತ್ತೇವೆ ಎನ್ನುವ ಉದ್ದೇಶ ಅಲ್ಲ. ಇದನ್ನು ಮತ್ತೆ ಮತ್ತೆ ಒತ್ತಿ ಹೇಳುವುದಕ್ಕೆ ಕಾರಣ ಇಷ್ಟೆ. ನಾನು ರಾಜಕೀಯಕ್ಕೆ ಹೊಸಬನಲ್ಲ. ನನ್ನ ಚುನಾವಣಾ ಕ್ಷೇತ್ರದಲ್ಲಿ ಎಲ್ಲ ಕೋಮಿನವರೂ ಇದ್ದಾರೆ. ಒಕ್ಕಲಿಗರು, ಲಿಂಗಾಯತರು ಇದ್ದಾರೆ, ಮೆಜಾರಿಟಿ ಕಮ್ಯೂನಿಟಿಯವರೂ ಇದ್ದಾರೆ. ಎಲೆಕ್ಷನ್‌ನ್ನು, ಅವರು ನನಗೆ ಓಟು ಕೊಟ್ಟಿದ್ದಾರೆ. ನನ್ನ ಓಟರ್ಸ್ ಯಾರು ಎಂಬುದು ನನಗೆ ಚೆನ್ನಾಗಿ ಗೊತ್ತು. ಆದುದರಿಂದ ನಾನು ಇಷ್ಟು ಮಾತ್ರ ಹೇಳುತ್ತೇನೆ. ಯಾವೊತ್ತೂ ಕೂಡ ಒಂದು ಕೋಮಿನವರನ್ನು ತುಳಿದು ಹಾಕುತ್ತೇವೆ ಎನ್ನತಕ್ಕಂಥಾದ್ದು ಸರ್ವಥಾ ಸಾಧುವಲ್ಲ. ಒಂದುವೇಳೆ ತಮ್ಮ ಮನಸ್ಸಿನಲ್ಲಿ ಆ ರೀತಿ ಶಂಕೆ ಇದ್ದರೆ ದಯವಿಟ್ಟು ಈವೊತ್ತೇ ಬಿಟ್ಟುಬಿಡಿ ಎಂದು ನಾನು ವಿನಂತಿಸುತ್ತೇನೆ. ನಿಮ್ಮ ಉದ್ದೇಶ ಏನೆಂದರೆ ಈ ಒಂದು ಎಲೆಕ್ಷನ್‌ನಲ್ಲಿ ಇದನ್ನು ಒಂದು ಸ್ಲೋಗನ್ಸ್ ಆಗಿ ಮಾಡಿಕೊಳ್ಳಬೇಕೆಂದು ನಿಮ್ಮ ಉದ್ದೇಶ ಇರಬಹುದು. ಆ ರೀತಿ ಇದ್ದ ಪಕ್ಷದಲ್ಲಿ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಈಗ ನಮ್ಮ ದೇಶದಲ್ಲಿ 1967ರ ಎಲೆಕ್ಷನ್ ಆದಮೇಲೆ ಜನರು ಬಹಳ ಬುದ್ಧಿವಂತರಾಗಿದ್ದಾರೆ. ಯಾರು ಹೇಳಿದರೂ ಕೂಡ ಕೇಳುವುದಿಲ್ಲ, ಶ್ರೀ ಪುಟ್ಟಸ್ವಾಮಯ್ಯನವರಿಗೆ ಹೇಳುತ್ತೇನೆ. ಏನು ಬೇಕಾದರೂ ಈವಾಗ ಜನರನ್ನು ಮೋಸ ಮಾಡುವುದಕ್ಕಾಗುವುದಿಲ್ಲ. ಜನಗಳು ಬಹಳ ಎಚ್ಚೆತ್ತುಕೊಂಡಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಒಂದು ವರ್ಗವನ್ನು ಶೋಷಣೆ ಮಾಡುತ್ತಾರೆ ಎನ್ನುವುದನ್ನು ಹಿಂದಿನ ಭಾಷಣದಲ್ಲಿ ಸರಿಯಾಗಿ ಹೇಳಿಲ್ಲ. ಈವೊತ್ತು ಇಂಟರ್‌ಪ್ರಿಟೇಷನ್ ಆಗಿ ಕೊಡುತ್ತಾ ಇದ್ದೀರಿ. ಆ ದಿವಸ ಹೇಳಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ನಾನು ಅವೊತ್ತಿನ ಭಾಷಣದಲ್ಲಿ ಅದೇರೀತಿ ಹೇಳಿದ್ದೇನೆ. ನಿಮಗೆ ಶಾಂತಿ ತಾಳ್ಮೆ ಬೇಕು, ತಾಳ್ಮೆಯಿಂದ ಅದನ್ನು ಓದಿದರೆ ಅರ್ಥವಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಬಾಕಿಯವರನ್ನು ಶೋಷಣೆ ಮಾಡಿರತಕ್ಕ ಕಮ್ಯೂನಿಟಿ ಯಾವುದು ?

ಶ್ರೀ ಡಿ. ದೇವರಾಜ್ ಅರಸ್.—ನಾನು ಇಲ್ಲದೇ ಇರತಕ್ಕಂಥಾದ್ದನ್ನು ಯಾವುದನ್ನೂ ಹೇಳಿಲ್ಲ. ಇವೊತ್ತೂ ಹೇಳಿಲ್ಲ. ನಾನು ಯಾರನ್ನೂ ಮೋಸ ಮಾಡುವುದಕ್ಕೆ ಹೊರಟಿಲ್ಲ, ನಿಮಗೆ ಭಯ ಬಂದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಮತ್ತೆ ಪುನಃ ಹೇಳಬೇಕೇ ಹೇಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಹೇಳಿ.

ಶ್ರೀ ಡಿ. ದೇವರಾಜ್ ಅರಸ್.—ಯಾರೋ ಕೆಲವು ಜಾತಿಗಳನ್ನು ತುಳಿಯುತ್ತಾರೆ ಎಂದು ಹೇಳಿದಂತಹ ಮಾತು ಏನಿದೆ ಅದು ಇದುವರೆಗೆ ಯಾರು ಇತರರನ್ನು ಶೋಷಿಸುತ್ತಿದ್ದರೋ ಅವರಿಗೆ ಈಗ ಬಾಯಿ ಕಟ್ಟಿದ ಹಾಗೆ ಆಗಿದೆ. ಈ ರೀತಿ ಹೇಳಿದೆ. ಅದಕ್ಕೆ ಅವರು ಯಾವರೀತಿ ಇಂಟರ್ ಪ್ರಿಟೇಷನ್ ಬೇಕಾದರೂ ಕೊಡಬಹುದು.

ಶ್ರೀ ಕೆ. ಬಿ. ಶಿವಯ್ಯ.—ಅಲ್ಲಿ ಇಂತಹ ಜಾತಿ ಎಂದು ಹೇಳಲಿಲ್ಲವಲ್ಲಾ.

ಶ್ರೀ ಡಿ. ದೇವರಾಜ್ ಅರಸ್.—ಈ ಟ್ರಾನ್ಸ್‌ಕ್ರಿಪ್‌ಷನ್‌ನ್ನು ನಾನು ಇದುವರಿಗೆ ಓದಿರಲಿಲ್ಲ. ಈಗತಾನೇ ನೋಡಿದೆ. ಆದುರಿಂದ ನಾನು ಹೇಳುವುದು ಏನೆಂದರೆ ಯಾವ ಒಂದು ಜಾತಿಯೂ ನನ್ನ ಮನಸ್ಸನಲ್ಲಿರಲಿಲ್ಲ. ಒಂದು ವರ್ಗವೇ ಮತ ನೀಡಿಲ್ಲ. ಅನೇಕ ವರ್ಗಗಳು ಮತ ನೀಡಿದ್ದಾರೆ ಇಲ್ಲ ಎಂದು ಹೇಳುವುದಿಲ್ಲ. ಇದರ ಬಗ್ಗೆ ಶೋಷಣೆ ಮಾಡಿರತಕ್ಕಂಥವರದ್ದು ಒಂದು ಗುಂಪು ಇದೆ. ಅವರ ಕೆಲಸವೇ ಇದು. ಇದು ಎಲ್ಲರಿಗೂ ಗೊತ್ತು. ನಮ್ಮ ಜನಗಳ ವಿಚಾರ ನನಗೆ ಗೊತ್ತಿದೆ. ಇದರ ಬಗ್ಗೆ ಅದಲು ಬದಲು ಹೇಳುವುದಿಲ್ಲ. ಇವೊತ್ತಿನ ದಿವಸ ಜಾತಿ ಬಗ್ಗೆ ಹೇಳುವವರು ದಡ್ಡರಾದರೂ ಕೇಳುವವರು ಕಿವುಡರಲ್ಲ. ಈಗ ದೇಶದ ಜನ ಅಷ್ಟು ಕಿವುಡರಲ್ಲ. ಅವರನ್ನು ತಪ್ಪು ದಾರಿಗೆ ಎಳೆಯುವುದಕ್ಕಾಗುವುದಿಲ್ಲ. ಇದರ ಜೊತೆಗೆ ಮೈನಾರಿಟಿ ಕೋಮು ಇದೆ ಎಂದರೆ ಕಮ್ಯೂನಿಟೀಸ್ ಮೈನಾರಿಟಿ ಅಂತ ಹೇಳುತ್ತಿದ್ದಾರೆಯೋ ಹೊರತು ರಾಜಕೀಯ ಜೀವನದಲ್ಲಿ ಪೊಲಿಟಿಕಲ್ ಮೈನಾರಿಟೀಸ್ ಇಲ್ಲ. ಲಿಂಗ್ವಿಸ್ಟಿಕ್ ಮೈನಾರಿಟಿ ಇರಬಹುದು, ರಿಲಿಜಿಯಸ್ ಮೈನಾರಿಟಿ ಇರಬಹುದು, ನಾವೂ ನೀವೂ ಹಿಂದೂಗಳು, ಮೆಜಾರಿಟಿಯೂ ಅಲ್ಲ, ಮೈನಾರಿಟಿಯೂ ಅಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಅದನ್ನು ಹೇಳಿದವರು ಸಹ ನೀವೇ, ನಾವಲ್ಲ.

ಶ್ರೀ ಡಿ. ದೇವರಾಜ್ ಅರಸ್.—ನಾನು ಹೇಳಿಲ್ಲ, ನಿಮಗೆ ಭ್ರಾಂತು ಬಂದಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ನೀವು ನಮ್ಮ ಮುಂದೆ ಇಟ್ಟಿರತಕ್ಕಂಥಾದ್ದು ನಿಜಾಂಶ. ಅವರೆ ಪೇಪರ್‌ನಲ್ಲಿ ಓದಿರತಕ್ಕಂಥಾದ್ದನ್ನು ನಿಮ್ಮ ಮುಂದೆ ಇಟ್ಟಿದ್ದೇನೆ.

ಶ್ರೀ ಡಿ. ದೇವರಾಜ್ ಅರಸ್.—ನಾನು ಈ ಸಭೆಯಲ್ಲೇ ಅಲ್ಲ, ಹೊರಗಡೆ ಕೇಳಿಕೊಳ್ಳಿ. ನಾನು ಮೈನಾರಿಟಿ ಎಂದು ಹೇಳಿಕೊಂಡಿಲ್ಲ. ನೀವು ಮೈನಾರಿಟಿ ಎಂದು ಹೇಳಿದರೆ ನಾನು ಒಪ್ಪಿಕೊಳ್ಳುವುದಿಲ್ಲ. ಯಾವ ತರಹ ಮೈನಾರಿಟಿ ಎಂದು ನೀವು ಹೇಳಬಹುದು ?

ಶ್ರೀ ಎಚ್. ಡಿ. ದೇವೇಗೌಡ.—ತಾವೇ ಮೈಸೂರಿನಲ್ಲಿ ಹೇಳಿದ್ದೀರಿ.

ಶ್ರೀ ಡಿ. ದೇವರಾಜ್ ಅರಸ್.—ಹೇಳಿದ್ದನ್ನು ತೋರಿಸಿ.

ಶ್ರೀ ಎಸ್. ಬಂಗಾರಪ್ಪ.—ಮೈನಾರಿಟಿಗೆ ಸೇರಿರತಕ್ಕಂಥವರು ಒಬ್ಬರು ಮುಖ್ಯ ಮಂತ್ರಿಗಳಾಗಿದ್ದಾರೆ ಎಂದು ತಾವೇ ಮೈಸೂರಿನಲ್ಲಿ ಹೇಳಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.—ತಾವೇ ಮೈಸೂರಿನಲ್ಲಿ ಹೇಳಿದ್ದೀರಿ.

ಶ್ರೀ ಡಿ. ದೇವರಾಜ್ ಅರಸ್.—ನಾನು ಆರೀತಿ ಹೇಳಿಲ್ಲ ಹಾಗಾದರೆ ಶ್ರೀಮಾನ್ ದೇವೇಗೌಡರಿಗೆ ಮೆಜಾರಿಟಿ ಕಮ್ಯೂನಿಟಿ ಯಾವುದು ಎಂದು ಹೇಳುವುದಕ್ಕೆ ಅವರಿಗೇ ಬಿಟ್ಟು ಬಿಟ್ಟಿದ್ದೇನೆ. ನಾನು ಮಾತನಾಡುವುದಿಲ್ಲ. ನಾನು ಇದರ ಬಗ್ಗೆ ನೂರು ಸಲ ಹೇಳಿದ್ದೇನೆ. ನೀವು ಊಹೆ ಮಾಡಿಕೊಂಡು ಹೇಳುವುದಾದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಅವರು ಮೆಜಾರಿಟಿಯೂ ಅಲ್ಲ, ನಾನು ಮೈನಾರಿಟಿಯೂ ಅಲ್ಲ. ನಾವು ಇಂಡಿಯಾ ದೇಶದಲ್ಲಿ ತೆಗೆದುಕೊಂಡರೂ ಕೂಡ ನೀವು ಮೈನಾರಿಟಿ ಇದ್ದ ಹಾಗೆ ಆಗಲಿಲ್ಲ. ಶ್ರೀಮಾನ್ ಹೆಚ್. ಡಿ. ದೇವೇಗೌಡರು ಮೈನಾರಿಟಿಯೂ ಅಲ್ಲ, ಮೆಜಾರಿಟಿಯೂ ಅಲ್ಲ. ಒಬ್ಬ ವ್ಯಕ್ತಿ ತನ್ನ ಜಾತಿಯಿಂದಲೇ ಗೆದ್ದು ಬಂದಿರುವುದನ್ನು ತೋರಿಸಿ. ಇದನ್ನು ಸರಿಯಾಗಿ ಅನಲೈಸ್ ಮಾಡಿ ನೋಡಿದರೆ ಪ್ರತಿಯೊಬ್ಬರಿಗೂ ಗೊತ್ತಾಗುತ್ತದೆ. ಯಾವ ಮೆಂಬರ್ ಆಗಲಿ ಇಲ್ಲಿರತಕ್ಕಂಥವರು ಒಂದು ಕಮ್ಯೂನಿಟಿಯಿಂದಲೇ ಓಟು ತೆಗೆದುಕೊಂಡು ಆರಿಸಿ ಬಂದಿದ್ದಾರೆ ಎಂದು ಹೇಳುವುದು ಸಾಧ್ಯವಿಲ್ಲ. ಆರೀತಿ ಒಂದು ಜಾತಿಯಿಂದಲೇ ಓಟು ತೆಗೆದುಕೊಂಡು ಆರಿಸಿ ಬರುವುದು ಸಾಧ್ಯವಿಲ್ಲ. ನೀವು ಅದನ್ನು ತಿಳಿದು

ಕೊಂಡರೆ ಎಲ್ಲರಿಗೂ ಸೇರಿದವರು. ಒಕ್ಕಲಿಗರೂ ಕೂಡ ಓಟು ಕೊಟ್ಟಿದ್ದಾರೆ, ಹರಿಜನರೂ ಕೂಡ ಓಟು ಕೊಟ್ಟಿದ್ದಾರೆ. ಇಂಡಿಯಾ ದೇಶದಲ್ಲಿರುವ ಎಲ್ಲಾ ಜಾತಿಯವರೂ ಓಟು ಕೊಟ್ಟಿದ್ದಾರೆ. ಒಕ್ಕಲಿಗರು ನಮಗೂ ಅಪೋಸ್ ಮಾಡಿದ್ದಾರೆ, ನಿಮಗೂ ಅಪೋಸ್ ಮಾಡಿದ್ದಾರೆ. ಆದುದರಿಂದ ಇದು ಯಾವುದೇ ಒಂದು ಕಮ್ಯೂನಿಟಿಗಾಗಲಿ ಸೀಮಿತವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಇದರಲ್ಲಿ ಎರಡು ಗ್ರೂಪುಗಳು ಇವೆ. ವರ್ತಕ ವರ್ಗ, ಕಮ್ಯೂನಿಟಿ ಇದೆ, ಆಫಿಷಿಯಲ್ಸ್ ಕಮ್ಯೂನಿಟಿ ಇದೆ, ಜಮೀನ್ದಾರರು ಇದ್ದಾರೆ, ದುಡ್ಡು ಇಟ್ಟಿರತಕ್ಕ ವರ್ಗ ಇದ್ದಾರೆ, ಬಡವರ ವರ್ಗ ಇದ್ದಾರೆ. ಈ ರೀತಿ ವರ್ಗಗಳಲ್ಲಿ ವ್ಯತ್ಯಾಸ ಇದೆಯೇ ಹೊರತು, ಅದರಲ್ಲಿ ಕೆಲವರು ನಿಮಗೂ ಸಪೋರ್ಟ್ ಮಾಡಿದ್ದಾರೆ, ನಮಗೂ ಸಪೋರ್ಟ್ ಮಾಡಿದ್ದಾರೆ.

6-30 P.M.

It cuts across all castes and communities. So, I do not think anybody is more alive to this problem than I am today in this respect. ಆದುದರಿಂದ ತಾವು ನನಗೆ ಏನು ಬಣ್ಣ ಹಚ್ಚಿದರೂ ಏನೂ ಪ್ರಯೋಜನವಿಲ್ಲ, ಅದು ಸರಿಯಲ್ಲ ಎಂದು ಮಾತ್ರ ಹೇಳಬಲ್ಲೆ. ಶ್ರೀ ಆರ್ಮುಗಂ ಅವರು ಹೇಳಿದ ಮಾತು ಬೇರೆ. I have already stated that I know Sri Armugam well because he was my colleague in the previous Assembly. We have heard him on more than hundred occasions in this House.

ಅವರು ಯಾವ ಒಂದು ಹಿನ್ನಲೆಯಲ್ಲಿ ಕಮಿಟಿ ಆಗಬೇಕೆಂದು ಹೇಳುತ್ತಿದ್ದರು, that is totally different from the background with which my hon. friend the Leader of the Opposition is trying to make out a case. I would like to submit that by a Committee nothing can be achieved; nor can you get all this information because it becomes endless. Moreover my hon. friend anticipated, ಏನೆಂದರೆ ಮಾಹಿತಿ ಸಿಕ್ಕುವುದು ಕಷ್ಟ ಎಂದು. ಎಲ್ಲೆಲ್ಲಿ ಕೆಲಸವಾಗಿಲ್ಲ, ಜಮೀನು ಕೊಟ್ಟಿಲ್ಲ, ಸಾಲ ಕೊಟ್ಟಿಲ್ಲ, ಬಾವಿ ತೋಡುವುದಕ್ಕೆ ಮತ್ತೊಂದು ಮಗದೊಂದು ಕೊಟ್ಟಿಲ್ಲ, ಈ 25 ವರ್ಷದಿಂದ ಯಾವ ಕೆಲಸ ಆಗಿಲ್ಲ, ಇದನ್ನೆಲ್ಲ ಒಂದು ಸಂಹಿತೆ ಬರೆಸಿ ಎಂದು ಹೇಳುವುದಾದರೆ ಎಲ್ಲಿಗೆ ಹೋಗುತ್ತದೆ ? ಹಾಗೆ ಮಾಡುವುದಾದರೆ ಇದು ನಮ್ಮ ಹುಚ್ಚುತನ ಎಂದು ಬೇರೆಯವರು ಹೇಳುತ್ತಾರೆ. ಒಂದು ವೇಳೆ ಇದನ್ನು ಬರೆಸಿದರೆ ಆಗುವ ಪ್ರಯೋಜನವೇನು ? ಇದು ಸಾಧುವಾದ ಕೆಲಸವಾಗುವುದಿಲ್ಲ, ಇದರಿಂದ ಯಾವ ಆದಾಯವೂ ಕೂಡ ಇಲ್ಲ. ನಿಜವಾಗಿ ಯಾರಿಗೆ ತೊಂದರೆ ಇದೆ, ಯಾರಿಗೆ ಸರ್ಕಾರದ ಸಹಾಯ ದೊರೆಯಬೇಕಾಗಿದ್ದೆ, ಅದು ದೊರೆಯಬೇಕು ಎನ್ನುವ ವಿಚಾರದಲ್ಲಿ ಅವರ ಉದ್ದೇಶ ಮತ್ತು ನಮ್ಮ ಉದ್ದೇಶ ಒಂದೇ ಎನ್ನುವುದು ನನ್ನ ನಂಬಿಕೆ. ಆ ಉದ್ದೇಶ ಸಾಧನೆಯಾಗಬೇಕು ಎನ್ನುವುದರಿಂದಲೇ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಮಾಡಿದೆ. ಅವರು ಈ ಮಾಹಿತಿಯನ್ನೆಲ್ಲ ನೋಡಿ ಯಾವ ರೀತಿಯಲ್ಲಿ ಸರ್ಕಾರದ ಕೆಲವು ಕಾರ್ಯಕ್ರಮಗಳನ್ನು ರೂಪಿಸಿ ಹೆಚ್ಚು ಸವಲತ್ತನ್ನು ಕೊಡುವ ಅವಕಾಶವಿದೆ ಅಂಥ ಜನರಿಗೆ ಸಹಾಯ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಸರ್ಕಾರಕ್ಕೆ ಸಲಹೆ ಮಾಡಲು ಕಮಿಟಿಯನ್ನು ಮಾಡಿದೆ. ವಿದ್ಯಾಭ್ಯಾಸದಲ್ಲಿ ಯಾರು ಹೆಚ್ಚು ಮುಂದುವರೆದಿದ್ದಾರೆ ಎನ್ನುವ ವಿಷಯಗಳನ್ನೆಲ್ಲ ಎಷ್ಟುಮಟ್ಟಿಗೆ ತಿಳಿದುಕೊಳ್ಳುವುದಕ್ಕಾಗುತ್ತದೆ ಎಂಬ ಬಗ್ಗೆ ನೋಡಿ ಎಂದು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್‌ನವರಿಗೆ ಬೇಕಾದರೆ ಹೇಳೋಣ. ಒಂದು ವೇಳೆ ಹಿಂದುಳಿದ ವರ್ಗಗಳನ್ನು ಗೊತ್ತು ಮಾಡುವ ಕ್ರೈಟೀರಿಯಾ ಏನಿದೆ ಅದನ್ನು ಬೇಕಾದರೂ ಬದಲಾವಣೆ ಮಾಡಿ ಕೊಡೋಣ. ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಏನಾದರೂ ಬದಲಾವಣೆ ಮಾಡಬೇಕಾಗಿದ್ದರೆ ಅದನ್ನೂ ಯೋಚನೆ ಮಾಡೋಣ. We will examine. If it is necessary we will do. But the aims and objectives I have and he has, I am sure, are not different from the objectives of the Government. We are all one there. We shall see, as far as possible, to what extent the two inequalities—the economic inequality and the social inequality which are there, could be reduced. ಎಲ್ಲವನ್ನೂ ಒಂದೇ ಸಮ ಮಾಡುವುದಕ್ಕೆ ಸೋಷಿಯಲಿಸಂ ಎಂದು ಹೇಳಿದರೆ ಎಲ್ಲರೂ ಐದು ಅಡಿ ಇರಬೇಕು ಎನ್ನುವ ಆಬ್ಜೆಕ್ಟಿವ್ ನಮ್ಮದಲ್ಲ. ಸಮಾಜದಲ್ಲಿರುವ ಅಂತರ ಏನಿದೆ, ವರ್ಗ ವರ್ಗಕ್ಕೆ ಏನು ಅಂತರವಿದೆ ಅದನ್ನು ಸಾಧ್ಯವಾದಷ್ಟು ಕಡಮೆ ಮಾಡಬೇಕು ಎನ್ನುವುದು

(ಶ್ರೀ ಡಿ. ದೇವರಾಜ ಅರಸ್)

ನಮ್ಮ ಗುರಿಯಾಗಿದೆ. ಶ್ರೀ ವಿನೋಬ ಭಾವೆ ಅವರು ಇದನ್ನು ಬಹಳ ಚೆನ್ನಾಗಿ ಉದಾಹರಣೆಯ ಮೂಲಕ ಹೇಳಿದ್ದಾರೆ. ಈ ಸಮಾಜದಲ್ಲಿರತಕ್ಕ ಅಂತರ ಹೇಗಿರಬೇಕು, ವರ್ಗ ವರ್ಗದ ಅಂತರ ಹೇಗಿರಬೇಕು ಎಂದರೆ ಕೈಯಲ್ಲಿರುವ ಐದು ಬೆರಳುಗಳು ಇದ್ದ ಹಾಗೆ ಇರಬೇಕು ಎಂದು ಅವರು ಇಡೀ ಸಮಾಜವನ್ನು ಒಂದು ಕೈಗೆ ಹೋಲಿಸಿ ಐದು ಬೆರಳುಗಳಲ್ಲಿರುವ ಅಂತರದಿಂದ ಅದನ್ನು ಒಟ್ಟಿಗೆ ಕೂಡಿಸುವುದಕ್ಕೆ ಸಾಧ್ಯವಿದೆ, ಅದರಿಂದ ಮುಷ್ಟಿಗೆ ಶಕ್ತಿ ಬರುತ್ತದೆ. ಯಾವ ಒಂದು ಬೆರಳನ್ನಾದರೂ ಒಂದು ಅಂಗುಲ ಹೆಚ್ಚಾಗಿರುವಂತೆ ಮಾಡಿದರೆ ಏನಾಗುತ್ತದೆ ಎಂದರೆ ಒಂದು ಬೆರಳನ್ನು ಕತ್ತರಿಸಬೇಕಾಗುತ್ತದೆ. ಇಲ್ಲದೆ ಕೈ ಮುಷ್ಟಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಉದ್ದೇಶವೇನಿದೆ ಅದನ್ನು ಸಾಧಿಸುವುದಕ್ಕೋಸ್ಕರವಾಗಿ ನಾವು ಕೆಲಸ ಮಾಡಬೇಕೆಂದು ಹೊರಟಿದ್ದೇವೆ. ವರ್ಗ ದ್ವೇಷವಾಗಬಾರದು, ವರ್ಗ ವರ್ಗಕ್ಕೆ ಘರ್ಷಣೆಯಾಗಬಾರದು ಎಂದು ಆ ದಿಕ್ಕಿನಲ್ಲಿ ಕೆಲಸ ಮಾಡಬೇಕು. ಘರ್ಷಣೆಯಾಗಬಾರದು ಎಂದರೆ, ವರ್ಗ ವರ್ಗಕ್ಕೆ ಭೇದವಿದೆ, ವರ್ಗ ವರ್ಗಕ್ಕೆ ಕಿತ್ತಾಟವಿದೆ. ಇದನ್ನು ಇಲ್ಲ ಎನ್ನುವುದು ಹಿಸ್ಟಾರಿಕಲ್ ಫ್ಯಾಕ್ಟ್ಸ್ ಇಲ್ಲ ಎಂದು ಹೇಳಿದ ಹಾಗೆ ಆಗುತ್ತದೆ. ಅದನ್ನು ತಪ್ಪಿಸುವುದು ಹೇಗೆ, ಸರಿ ಮಾಡುವುದು ಹೇಗೆ ಎಂದರೆ ನಮ್ಮಲ್ಲಿ ಭೇದವಿದೆ. ನೀವು ಹೇಳುವ ಮಾರ್ಗ ಬೇರೆ, ನಾವು ಹೇಳುವ ಮಾರ್ಗ ಬೇರೆ ಇರಬಹುದು. ಕಮ್ಯೂನಿಸ್ಟರ ಮಾರ್ಗವೇ ಬೇರೆ ಇರಬಹುದು. ಅವರು ಹೇಳುವಂತೆ ಹಿಂಸಾ ಮಾರ್ಗದಿಂದಲೇ ಆಗಬೇಕು, ಡೆಮಾಕ್ರಸಿಯಿಂದ ಸಾಧ್ಯವಿಲ್ಲ ಎಂದು ಹೇಳುವವರು ಅವರು, ರೆವಲ್ಯೂಷನ್ ಆಗಬೇಕು, ಬ್ಲಡಿ ರೆವಲ್ಯೂಷನ್ ಆಗಬೇಕು ಎಂದು ಹೇಳುವವರು. ಬ್ಲಡಿ ರೆವೆಲ್ಯೂಷನ್ನಿಗೂ ನಮ್ಮ ಭಾರತ ದೇಶದ ಸಂಸ್ಕೃತಿಗೂ ನಮ್ಮ ಜನತೆಯ ಮನೋಭೂಮಿಕೆಗೂ ಹೊಂದುವುದಿಲ್ಲ. ನ್ಯಾಯ, ಧರ್ಮ ಅಥವಾ ಶಾಂತಿ ಮಾರ್ಗ ಪ್ರಜಾತಂತ್ರದ ಮುಖೇನ ಪರ್ಸುಯೇಷನ್, ಡಿಸ್ಕಷನ್ ಮೂಲಕ ಮನಸ್ಸನ್ನು ಬದಲಾವಣೆ ಮಾಡುವ ಮುಖೇನ ಕಾನೂನು ಮಾಡಿ ಮಾಡೋಣ ಎಂದು ಹೇಳತಕ್ಕುದು ನಮ್ಮ ಗುರಿಯಾಗಿದೆ. ಆದುದರಿಂದ ತಾವು ಏನು ಅಭಿಪ್ರಾಯ ಪಟ್ಟಿದ್ದೀರಿ ಅದನ್ನು ಸಾಧನೆ ಮಾಡುವುದಕ್ಕೆ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಇದೆ, ಈ ಸಮಿತಿಯ ಅಗತ್ಯವೇನೂ ಇಲ್ಲ, ಅದನ್ನು ಮಾಡುವುದರಿಂದಲೇ ಏನೂ ಪ್ರಯೋಜನವಾಗುವುದಿಲ್ಲ ಎಂದು ನನ್ನ ವಿನಂತಿ.

Statement of the Minister for Agriculture and Forests, re: distribution of fertilisers in the State and Davangere in particular

SRI K. H. PATIL (Minister for Agriculture and Forests).—I am aware of the feelings of the Members of this Hon'ble House about the distribution of fertilisers in Davanagere. On receipt of complaints last week about the malpractices indulged in the distribution of fertilisers and also the short supply of fertilisers in Davanagere, the Joint Director (Headquarters) was deputed to Davanagere to look into the alleged malpractices and submit a report for the consideration of Government. In the meantime, further representations were received from the Presidents of Co-operative Institutions and the leading agriculturists in Davanagere. The Deputy Director of Agriculture (Headquarters) dealing with fertilisers was also deputed to enquire into the matter. I myself proceeded to Davanagere on the 30th July 1972. The detailed reports of these two officers are awaited.

On my visit to Davanagere, my first reaction was that all was not well and the situation was somewhat tense. One of the agriculturists expressed the view "Sir your administration is of a strict nature. How is it that you are permitting your officers to allow black market in

fertilisers to go on?" I was happy that I could know the reaction of the agriculturists. Immediately, I called the Deputy Commissioner, Chitradurga and other officers of the Revenue, Police and Agriculture Departments and held discussions with them. After going into details, I have found that *Prima facie* some of the officers of the Agriculture Department were not straight in dealing with the distribution of fertilisers and each officer was trying to Put the blame on the other. The *modus operandi* adopted by the officers of the Agriculture Department resulting in malpractices in the distribution of fertilisers and creating artificial shortage of fertilisers was that permits were issued under the signatures of the various officers of the Agriculture Department without regard to the competence of the individual officers and also the availability of stocks in Davanagere. On the strength of indiscriminate issue of permits for fertilisers, the officers of the Agro-Industries Corporation took action to release stocks of fertilisers without verifying as to the authenticity of the permits and also the availability of stocks in the godowns. I was very much pained to notice that even the Fertiliser Inspector also made himself bold to issue permits when he had absolutely no authority to issue them. These officers have acted in an irresponsible manner ignoring the directions issued by Government from time to time. Even the permits for fertilisers issued in favour of the Co-operatives have not been judiciously used because a large portion of fertilisers covered by the permits has not reached the hands of the genuine agrieulturists. This is, no doubt, a matter about which one cannot be proud of. The investigations against the offiers is still in progress. Preliminary investigations have shown that the officers primarily responsible are (1) Deputy Director of Agriculture, Chitradurga: (2) Assistant Director of Agriculture (Fertilisers); (3) Assistant Director of Agriculture, Davangere; (4) Assistant Agricultural Extension Officers; and (5) lastly the Fertiliser Inspectors who have issued permits without authority. Having satisfied that *Prima facie* there is a case against them in having indulged in malpractices in the distribution of fertilisers, I have already issued orders placing them under suspension.

The Agro-Industries Corporation has also deputed its officers for enquiring into the matter. It appears that the officers of the Corporation have also unfortunately indulged in malpractices and connived with the officers of the Department of Agriculture who are *Prima facie* found guilty of malpractices. The accounts maintained by the officers of the Agro-Industries Corporation at Davanagere are not upto-date. In some cases, cash memo and delivery notes which were expected to be delivered to the permit holders were not actually given. Hundreds of them were found in the office itself. As a Preliminary measure, I have asked the Police to take charge of these cash memo and delivery notes. On enquiry, I could not get any satisfactory reply from the officers of the Agro-Industries Corporation stationed at Davanagere. Having regard to the findings in the preliminary investigation, the Agro-Industries Corporation are also taking suitable action in the matter.

(SRI K. H. PATIL)

Government are thinking of appointing an Enquiry Officer to take up Departmental Enquiry against the officers who are placed under suspension and to submit the report to Government within the shortest period. Steps have, however, been taken to supply adequate quantities of fertilisers to Davanagere and instructions have been issued to supply them to the agriculturists immediately. I request the Members of this Hon'ble House to co-operate with me and the new officers and officials who are expected to be posted at Davanagere in a day or two. The agriculturists need not find it difficult to get fertilisers in adequate quantities and without any difficulty. I also appeal to the Members of this Hon'ble House to kindly bear with me till detailed reports are received by Government in this behalf.

Half an hour discussion arises out of Answer to Question No. 98 *re* : Expenditure incurred on the visit of the Prime Minister

† ಶ್ರೀ ಕೋಣಂದೂರು ಲಿಂಗಪ್ಪ.—ಸನ್ಮಾನ್ಯ ಅಧ್ಯಕ್ಷಣಿಯವರೇ, ಸಮಾಜವಾದವನ್ನು ತರುತ್ತೇವೆ ಎಂದು ಹೊರಟಿರತಕ್ಕಂಥವರು, ಎಂದರೆ, ಕಾಂಗ್ರೆಸ್‌ನವರು ಚುನಾವಣೆಯ ಪೂರ್ವದಲ್ಲಿ ರಾಷ್ಟ್ರದ ಪ್ರಧಾನಮಂತ್ರಿ ಇಂದಿರಾಗಾಂಧಿಯವರು ರಾಜ್ಯದಲ್ಲಿ ಪ್ರವಾಸ ಮಾಡಿದಾಗ ಮೂರು ದಿನಕ್ಕೆ, 3,36,000 ರೂಪಾಯಿಗಳನ್ನು ಖರ್ಚು ಮಾಡಿರುವ ಲೆಕ್ಕವನ್ನು ಕೊಟ್ಟಿದ್ದಾರೆ. ನಮ್ಮ ರಾಷ್ಟ್ರ ಬಡವರ ರಾಷ್ಟ್ರ, ಬಡತನದ ಬೇಗೆಯಲ್ಲಿ ಬೇಯುತ್ತಿರುವ ರಾಷ್ಟ್ರ. ಬಡವರೇ ಅತ್ಯಧಿಕ ಸಂಖ್ಯೆಯಲ್ಲಿ ಇರುವ ರಾಷ್ಟ್ರ. ಇಡೀ ರಾಷ್ಟ್ರದಲ್ಲಿ ಒಬ್ಬನ ವರಮಾನ ಒಂದು ದಿನಕ್ಕೆ 27 ಪೈಸೆ ಎಂದು ಡಾಕ್ಟರ್ ಲೋಹಿಯಾ ಅವರು ಲೋಕಸಭೆಯಲ್ಲಿ ಹೇಳಿದ್ದಾರೆ. ಇಂಥ ಬಡ ರಾಷ್ಟ್ರದಲ್ಲಿ ಬಡತನವನ್ನು ತೊಲಗಿಸುತ್ತೇವೆ ಎಂದು ಹೇಳುವ ಆಡಳಿತ ಕಾಂಗ್ರೆಸ್, ಅವರ ನಾಯಕಿ ಶ್ರೀಮತಿ ಇಂದಿರಾಗಾಂಧಿ ಅವರು ರಾಜ್ಯದಲ್ಲಿ ಪ್ರವಾಸಕ್ಕೆ ಕರೆದುಕೊಂಡು ಬಂದಾಗ ಮೂರು ದಿನಕ್ಕೆ ಅಷ್ಟೊಂದು ಸಾವಿರ ರೂಪಾಯಿಗಳನ್ನು ಖರ್ಚುಮಾಡಿರುವ ಅಂಶವನ್ನು ನೋಡಿದರೆ, ಈ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಈ ಸರ್ಕಾರ ಯಾವ ರೀತಿ ಬಡತನವನ್ನು ತೊಲಗಿಸುತ್ತದೆ ಎನ್ನುವುದು ರುಜುವಾತಾಗಿದ. ಇವತ್ತು ಚುನಾವಣೆ ಪ್ರಚಾರಕ್ಕೆ ಇಂತಿಷ್ಟು ಖರ್ಚು ಮಾಡಬೇಕು ಎಂದು ನಿಯಮ ಇದೆ. ಪ್ರಧಾನ ಮಂತ್ರಿ ಇಂದಿರಾ ನೆಹರು ಗಾಂಧಿಯವರು ಪ್ರವಾಸ ಮಾಡಿದಂಥ ಖರ್ಚನ್ನು ಯಾರ ಯಾರ ಪಾಲಿಗೆ ಹಾಕಿದ್ದೀರಿ, ಇದರ ಲೆಕ್ಕವನ್ನು ಎಷ್ಟು ಜನ ಕೊಟ್ಟಿದ್ದಾರೆ ಎನ್ನುವುದನ್ನು ತಿಳಿಸಬೇಕು. ಹಾಗೇ ತಮ್ಮ ಪಕ್ಷ ಖರ್ಚು ಮಾಡಿರುವುದರ ಬಗ್ಗೆ ಇಲ್ಲಿ ಲೆಕ್ಕ ಇಲ್ಲ, ಕೇವಲ ಸರ್ಕಾರದ ಬೊಕ್ಕಸದಿಂದ ಮೂರು ಲಕ್ಷ ಮೂವತ್ತಾರು ಸಾವಿರ ರೂಪಾಯಿಗಳನ್ನು ಮೂರು ದಿನಕ್ಕೆ ಖರ್ಚು ಮಾಡಿರತಕ್ಕವರು ನೀವು. ಪಕ್ಷದ ವತಿಯಿಂದ ಎಷ್ಟು ಖರ್ಚಾಗಿದೆ ಎನ್ನುವ ಬಗ್ಗೆ ತಾವು ಏನೂ ಹೇಳಿಲ್ಲ. ಇದನ್ನೆಲ್ಲಾ ನಾವು ನೋಡಿದಾಗ ಸಾಮಾನ್ಯ ಜನಕ್ಕೆ ಏನು ತಾವು ಭರವಸೆಗಳನ್ನು ಕೊಟ್ಟಿದ್ದೀರೋ, ಬಡತನ ತೊಲಗಿಸುತ್ತೇವೆ ಎಂದು ಘೋಷಣೆಯನ್ನು ಮಾಡಿದ್ದೀರೋ, ಅದರ ವಿರುದ್ಧ ಕೆಲಸಗಳನ್ನು ಮಾಡಿರುವುದಕ್ಕೆ ಇದು ಒಂದೇ ಸಾಕ್ಷಿ ಸಾಕು. ತಾವು ಬಡತನ ತೊಲಗಿಸತಕ್ಕಂಥ ಘೋಷಣೆಯನ್ನು ಹೊರಡಿಸಿ ಬಡ ಜನರನ್ನು ವಂಚಿಸಿ ಓಟನ್ನು ತೆಗೆದುಕೊಂಡು ಬಂದಿದ್ದೀರೋ, ಅದಕ್ಕೆ ಸರಿಯಾಗಿ ತಾವು ಈ ಖರ್ಚಿನ ಬಗ್ಗೆ ಈಗ ಉತ್ತರ ಕೊಡಬೇಕು. ಸರ್ಕಾರಿ ಖಜಾನೆಯಿಂದ ಮಾಡಿರತಕ್ಕ ಖರ್ಚು, ಬೇರೆ ಪಕ್ಷಗಳಿಂದ ಮಾಡಿರತಕ್ಕ ಖರ್ಚು, ಇತರೆ ಖರ್ಚುಗಳು, ವೈಯಕ್ತಿಕವಾಗಿ ಮಾಡಿದ ಖರ್ಚು, ಯಾರು ಈ ಎಲ್ಲಾ ಲೆಕ್ಕವನ್ನು ಕೊಟ್ಟಿದ್ದೀರಿ ? ಸಮಾಜವಾದವನ್ನು ತರುತ್ತೇವೆ ಎಂದು ಹೇಳತಕ್ಕವರು ನೀವು, ಇವತ್ತಿನದಿವಸ ನೀವು ನಕ್ಸಲಿಯರ ಮಾರ್ಗವನ್ನು ಒಪ್ಪದೆ ಇರಬಹುದು, ನಾವು ಅವರ ಮಾರ್ಗವನ್ನು ಸಂಪೂರ್ಣವಾಗಿ ವಿರೋಧಿಸುತ್ತೇವೆ ಎಂದು ಹೇಳತಕ್ಕವರು

ನೀವು ಅವರ ಗುರಿಯನ್ನು ಯೋಚನೆ ಮಾಡಬೇಕು. ಇದರ ನಾಯಕರಾದಂಥ ಚಾರು ಮುಜುಂದಾರ್ ಅವರನ್ನು ಪೋಲೀಸ್ ಸ್ಟೇಷನ್‌ನಲ್ಲಿ ತಾವು ಕೊಲೆ ಮಾಡಿಸಿದ್ದೀರಿ. ನಿಜವಾಗಿಯೂ ಸಮಾಜವಾದಿಗಳಾದಂಥವರನ್ನು ಕೊಲೆ ಮಾಡಿರತಕ್ಕ ನೀವು ಸಮಾಜವಾದವನ್ನು ತರುವುದಕ್ಕೆ ಹೊರಟಿದ್ದೀರಿ.

Sri D. B. KALMANKAR.—He was suffering?

ಶ್ರೀ ಕೋಣಂದೂರು ಲಿಂಗಪ್ಪ.—ಗಂಜಿ ಕುಡಿಯುತ್ತಿದ್ದವರನ್ನು ಸಫರಿಂಗ್ ಎಂದು ಹೇಳುತ್ತೀರಿ, ಸತ್ಯಾಗ್ರಹ ಮಾಡುತ್ತಾ ಕೂತಿದ್ದರೆ, ಅವರಿಗೆ ಡಿಸೀಸ್ ಇದೆ ಎಂದು ಪ್ರಚಾರ ಮಾಡುತ್ತೀರಿ, ನಗರವಾಲ ಅವರನ್ನು ಕೊಂದಿದ್ದು ಗೊತ್ತಿದೆ, ಈರೀತಿ ಕೆಲವರ ಜೀವವನ್ನು ಆಹುತಿ ತೆಗೆದುಕೊಳ್ಳುವ ನೀವು ಸಹಜವಾದ ಸಮಾಜವಾದವನ್ನು ದೇಶದಲ್ಲಿ ತರಲಿಕ್ಕೆ ಸಮರ್ಥರೆ ಎಂದು ನಾನು ಪ್ರಶ್ನೆ ಮಾಡುತ್ತೇನೆ.! ಈ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ, ಈ ಸರ್ಕಾರದವರೇ ಕೊಟ್ಟಿರತಕ್ಕ ಲೆಕ್ಕದ ಪ್ರಕಾರ ಒಂದು ದಿನಕ್ಕೆ 811 ರೂಪಾಯಿಗಳು ಖರ್ಚು ಆಗುತ್ತಿದೆ. ಇವತ್ತಿನ ದಿವಸ ಡಾಕ್ಟರ್ ಲೋಹಿಯಾ ಅವರು, ಲೋಕಸಭೆಯಲ್ಲಿ ಹೇಳಿದ್ದಕ್ಕೆ ಪ್ರಧಾನಮಂತ್ರಿಗಳ ಸಲುವಾಗಿ ಒಂದು ದಿನಕ್ಕೆ 25 ಸಾವಿರ ರೂಪಾಯಿಗಳು ಖರ್ಚಾಗುತ್ತಿದೆ ಎಂದು ಹೇಳಿದ್ದಾರೆ. ಆಡಳಿತ ಕಾಂಗ್ರೆಸ್ಸಿನ ತಾವು ಬಡವರಿಗೆ ದೊಡ್ಡ ಘೋಷಣೆಯನ್ನು ಮಾಡಿ ಬಂದಿದ್ದೀರಿ. ಬಡವರ ಉದ್ಧಾರ, ಬಡತನ ತೊಲಗಿಸುವುದಕ್ಕಾಗಿ, ಗರೀಬಿ ಹಠಾವ್ ಮಾಡುತ್ತೇವೆ ಎಂದು ಘೋಷಣೆ ಮಾಡಿ ಬಂದು ಈ ರೀತಿ ಸರ್ಕಾರದಿಂದ ಹಣವನ್ನು ಖರ್ಚು ಮಾಡಿದ್ದೀರಿ. ಹೆಲಿಕ್ಯಾಪ್ಟರ್, ಕಾರು ಇದರ ಖರ್ಚುಗಳನ್ನು ಕೊಡುವವರು ಯಾರು! ರಕ್ಷಣಾ ವೆಚ್ಚ ಯಾವುದು! ಎಲ್ಲಾ ಇದರೊಳಗೆ ಸೇರಿವೆಯೋ ಎನ್ನುವುದನ್ನು ಈ ಸಭೆಗೆ ತಿಳಿಸಬೇಕು. ಹೀಗೆ ಅವರು ಬಂದ ಕಾಲದಲ್ಲಿ ಇಷ್ಟೊಂದು ಖರ್ಚಾಯಿತು ಎಂದು ಇಲ್ಲಿ ತೋರಿಸಿರುತ್ತಾರೆ. ಇದಕ್ಕೆಲ್ಲಾ ಲೆಕ್ಕಪತ್ರಗಳಿವೆಯೋ ಇಲ್ಲವೋ, ಇದನ್ನು ಯೋಚನೆ ಮಾಡಿ ಹೇಳಬೇಕು, ಬಡತನವನ್ನು ನಾಶಮಾಡುತ್ತೇವೆ ಎಂದು ಹೇಳುವುದೇನೋ ಬಹಳ ಸುಲಭ. ಆದರೆ ಇದು ತಲೆ ತಲಾಂತರಗಳಿಂದಲೂ ಹೇಳುತ್ತ ಇರುವಂತಹ ಮಾತುಗಳು. ಇದರಿಂದ ಜನ ಇವರನ್ನು ನಂಬುವುದೇ ಇಲ್ಲ, ಜನರಲ್ಲಿ ನಂಬಿಕೆ ಬರುವಂತಹ ಕೆಲಸಗಳನ್ನು ಮಾಡುತ್ತಿಲ್ಲ, ಬಡ ಜನರು ಹೇಗೇ ಇದ್ದರೂ ಅದನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. ಇನ್ನು ಕ್ಷಾಮ ಪರಿಸ್ಥಿತಿಯ ಬಗ್ಗೆ ಹೇಳಿದ್ದಾರೆ, ನಮ್ಮ ರಾಜ್ಯದಲ್ಲಿ ಇಂತಹ ಎಷ್ಟು ಕೆಲಸಗಳನ್ನು ಮಾಡಿದರೂ ಕೂಡ ದೇಶದಲ್ಲಿರುವ ಬಡತನ ಹಾಗೂ ನಿರುದ್ಯೋಗವನ್ನು ನಿವಾರಣೆ ಮಾಡುವಂತಹ ಕ್ರಮಗಳನ್ನು ನಮ್ಮ ಸರ್ಕಾರ ಮಾಡಿದ್ದರೆ ಆಗ ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತಿದ್ದೆ, ಬಾಯಲ್ಲಿ ಮಾತ್ರ ಎಲ್ಲ ರೀತಿಯಾದ ಘೋಷಣೆಗಳನ್ನು ಮಾಡುತ್ತಿದ್ದಾರೆ. ಭಾಷಣಗಳನ್ನು ಬಿಗಿಯುತ್ತಿದ್ದಾರೆ. ದೇಶದಲ್ಲಿರುವ ಬಡತನವನ್ನು ಹೋಗಲಾಡಿಸುತ್ತೇವೆ ಎಂದು ದೊಡ್ಡದಾಗಿ ಹೇಳುತ್ತಾ ಇದು ಇಲ್ಲಿ ಒಂದು ದೊಡ್ಡ ದಂಡನ್ನೇ ತೆಗೆದುಕೊಂಡು ಬಂದು ಇಲ್ಲಿ ಆಡಳಿತ ಮಾಡಲು ಕುಳಿತಿದ್ದಾರೆ. ಆದರೆ ನಿಜವಾಗಿ ನಿಮ್ಮ ಘೋಷಣೆಗಳನ್ನು ಹಾಗೂ ನೀವು ಮಾಡುತ್ತಿರುವ ಭಾಷಣಗಳೆಲ್ಲಾ ಬರೀ ಟೊಳ್ಳು ಎಂದು ಜನ ವ್ಯಾಖ್ಯಾನ ಮಾಡುತ್ತಿದ್ದಾರೆ. ಆದುದರಿಂದ ಇಂದು ಇಲ್ಲಿ ಸರಕಾರ ಯಾವುದಕ್ಕಾಗಿ ಇಷ್ಟು ಖರ್ಚು ಮಾಡಿದರು ಇದರ ಬಗ್ಗೆ ವಿವರವಾದ ಉತ್ತರವನ್ನು ಕೊಡಬೇಕೆಂದು ನಾನು ಕೇಳುತ್ತೇನೆ.

†ಶ್ರೀ ಜೆ. ಎಲ್. ಕಬಾಡಿ.—ಮಾನ್ಯ ಅಧ್ಯಕ್ಷರೇ, ಇಂದಿರಾಗಾಂಧಿಯವರು ಚುನಾವಣಾ ಪ್ರಚಾರಕ್ಕಾಗಿ ಬಿಜಾಪುರಕ್ಕೆ ಬಂದಾಗ ಬಂದೋಬಸ್ತು ಇತ್ಯಾದಿಗಳಿಗಾಗಿ ಬೇಕಾದಷ್ಟು ರೊಕ್ಕ ಖರ್ಚು ಮಾಡಿದರು, ಇದರಲ್ಲಿ ಇವರಿಗೆ ಸ್ಪೆಷಲ್ ಆಗಿ ಬಾತ್ ರೂಂ ವ್ಯವಸ್ಥೆ ಮಾಡಲು ಹಾಗೂ ಕಮೋಡು, ಸ್ಪೆಷಲ್ ರೀತಿಯಾದ ಒಂದು ಟಬ್ ಇತ್ಯಾದಿಗಳನ್ನು ಮಾಡಲು ಬಹಳ ದುಂದು ವೆಚ್ಚ ಮಾಡಿದ್ದಾರೆ. ಇದಕ್ಕಾಗಿ ಒಂದು ಲಾರಿಯೆಂದಷ್ಟೆ ಅಲ್ಲಾಗಿ ಹೈದರಾಬಾದಿಗೆ ಕಳುಹಿಸಿ ಬೇಕಾದಷ್ಟು ಸಾಮಾನುಗಳನ್ನು ತಂದು ಇಲ್ಲಿ ಖರ್ಚು ಮಾಡಬೇಕಾಗಿ ಬಂತು, ಇದರಿಂದ ಬಡತನ ನಿವಾರಣೆಯಾಗುತ್ತದೆಯೇ?

ಶ್ರೀ ಡಿ. ದೇವರಾಜ ಅರಸ್.—ಲಂಗೋಟಿ ಕಟ್ಟಿಕೊಂಡು ಬಂದು ಇಲ್ಲಿ ಕುಳಿತುಕೊಳ್ಳಿ ಎಂದು ಹೇಳುತ್ತೀರಾ?

ಶ್ರೀ ಜೆ. ಎಲ್. ಕಬಾಡಿ.—ಸಮಾಜವಾದ ಎನ್ನುವುದು ಲಂಗೋಟಿಯಲ್ಲಿಲ್ಲ. ಲಂಗೋಟಿ ಕಟ್ಟಿಕೊಂಡು ಬರಬೇಕೆಂದು ಜನ ಹೇಳಿದರೆ ಆಗ ಅದರಂತೆ ಬರೋಣ. ಇದು ಇಲ್ಲಿನ ಪ್ರಶ್ನೆಯಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನಮ್ಮ ದೇಶದ ಪ್ರಧಾನಮಂತ್ರಿಗಳು ಯಾವುದಾದರೂ ರಾಜ್ಯದಲ್ಲಿ ಪ್ರವಾಸಮಾಡುವಾಗ ಅವರಿಗೆ ಸೂಕ್ತವಾದ ವ್ಯವಸ್ಥೆಯನ್ನು ರಾಜ್ಯದ ಮಂತ್ರಿಮಂಡಲ ಯಾವುದೇ ಇರಲಿ ಅದರ ಬಗ್ಗೆ ತಕ್ಕ ವ್ಯವಸ್ಥೆ ಮಾಡಲೇ ಬೇಕು. ಇದರಲ್ಲಿ ಮಾನ್ಯ ಸದಸ್ಯರು ಕಮೋಡು ಇತ್ಯಾದಿಗಳ ಬಗ್ಗೆ ತರಿಸಿದರು ಎಂದು ಹೇಳುವುದು ಅಷ್ಟು ಯೋಗ್ಯವಾದುದೂ ಅಲ್ಲ ಮತ್ತು ಆ ರೀತಿ ಮಾತಾಡುವುದು ಸರಿಯೂ ಅಲ್ಲ.

ಶ್ರೀ ಜೆ. ಎಲ್. ಕಬಾಡಿ.—ಸ್ಟೇಟಿನವರು ಇಷ್ಟೊಂದು ದೊಡ್ಡ ಮೊತ್ತದಲ್ಲಿ ಹಣ ಖರ್ಚು ಮಾಡಿದರೆ ಇದು ಸೋಷಿಯಲಿಸ್ಟಿಕ್ ಸಮಾಜವಾಗುತ್ತದೆಯೇ! ಇದರಲ್ಲಿ ಅವರು ಬಂದಾಗ ಒಂದು ಮನೆಯ ಕಾಂಪೌಂಡನ್ನು ಒಡೆದು ಹಾಕಿ ಅದನ್ನು ನೆಲಸಮ ಮಾಡಲು ಬೇಕಾದಷ್ಟು ಖರ್ಚು ಮಾಡಿದರು, ಕಾಂಪೌಂಡನ್ನು ನೆಲಸಮಮಾಡುವಾಗ ಅದಕ್ಕೆ ಬೇಕಾದ ರೋಲರುಗಳು ಹಾಗೂ ಇನ್ನಿತರ ಕೆಲಸಗಳಿಗಾಗಿ ಬೇಕಾದಷ್ಟು ಹಣವನ್ನು ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದಾರೆ. ಮತ್ತು ಇಲ್ಲಿ ಹೊಸದಾಗಿ ಚಪ್ಪರ ಇತ್ಯಾದಿಗಳಿಗಾಗಿ ಬಹಳ ಹೆಚ್ಚು ಮೊತ್ತದ ಹಣವನ್ನು ಖರ್ಚು ಮಾಡಿದ್ದಾರೆ, ಇಂದು ಬಿಜಾಪುರದಲ್ಲಿ ಚುನಾವಣೆ ನಡೆಯುತ್ತಿದ್ದ ಸಂದರ್ಭದಲ್ಲಿ ಇಲ್ಲಿ ಕ್ಯಾಂಡಿಡೇಟರ ಬಗ್ಗೆ ಪ್ರಚಾರ ಭಾಷಣ ಮಾಡಲು ಇಷ್ಟು ಖರ್ಚು ಮಾಡಿರುವುದನ್ನು ಎಲೆಕ್ಷನ್ ಕಮಿಷನ್‌ಗೆ ತೋರಿಸಿದ್ದೀರಾ? ಇದರ ಬಗ್ಗೆ ಜನರಲ್ಲಿ ಶಂಕೆ ಬರಲು ಕಾರಣ, ಇಷ್ಟು ಭಾರಿ ಮೊತ್ತದಲ್ಲಿ ಖರ್ಚು ಮಾಡಬೇಕಾದರೆ ಇಲ್ಲಿನ ಚುನಾವಣೆಗೆ ನಿಂತಿದ್ದ ಅಭ್ಯರ್ಥಿಗಳು ಸರಿಯಾದ ಲೆಕ್ಕ ಪುಸ್ತಕಗಳನ್ನು ಚುನಾವಣಾ ಕಮಿಷನ್‌ಗೆ ಒಪ್ಪಿಸಿದ್ದಾರೋ ಇಲ್ಲವೋ ಎನ್ನುವ ಶಂಕೆ ಸಾಮಾನ್ಯವಾಗಿ ಜನರಲ್ಲಿ ಬರುತ್ತದೆ. ಇದಕ್ಕೋಸ್ಕರ ನಾನು ತಮ್ಮ ಮುಖೇನ ಇದರ ಎಲ್ಲ ವಿವರಗಳನ್ನೂ ಸಭೆಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† Sri D. DEVARAJ URS.—The approximate expenditure incurred during the election visit of the Prime Minister to Mysore State has been communicated as 3.37 lakhs in reply to L.A. question No. 98 put by the same hon.member. After the receipt of some more items of expenditure the total expenditure comes to Rs. 3,46,998 . Out of this expenditure incurred is as follows :

		Rs.
Bangalore District (Security and transport)	...	91,544
Kolar	...	52,373
Chitradurga	...	21,396
Shimoga	...	4,663
Bijapur	...	38,933
Mysore	...	15,710
South Kanara	...	46,699
Chickmagalur	...	18,365
Kolar	...	551
Food (billed to MPCC) Chitradurga (by District Congress Committee)	...	423
South Kanara	...	939
Chickamagalur	...	1,000
Mikes, telephones, etc. Kolar	...	2,324
Mysore	...	1,400
Amount spent by Municipality ; Bijapur	...	4,498
Amount spent by P.W.D.	...	48,680

In all total comes to Rs. 3,46,998. Out of this, such amounts as are re-imbursable shall be recovered as per the standing instructions. According to the instructions of the Home Ministery the initial expenditure has to be incurred by the State Government and then recovered from the political parties. Expenditure relating to construction of

rostrum, etc. or Rs. 25,000 whichever is less has to be recovered as per the standing orders issued by the Home Ministry. Expenditure incurred for the protection of the Prime Minister, making arrangements for the election meetings of the Prime Minister, barricading, lighting, policing, etc. has to be borne by the State Government while expenditure on public address and decorative arrangements should be mat by the political parties. This is the procedure that is being followed uniformaly throughout the country and it has been ascertained that this being done in the adjoining States of Andhra Pradesh, Tamilnadu. The Prime Minister during her visit during the President's Rule was treated as State Guest.

When the Prime Minister visited the State, all facilities and the usual courtesies have to be extended. It is true that the size of expenditure appears to be rather heavy; but it is found to be inevitable in view of the fact that the Prime Minister had to cover seven districts within a short period of 2 or 3 days. Certain expenditure is stated to be incurred on movement of vehicles, and police force for security arrangments.

ಈ ಸಂದರ್ಭದಲ್ಲಿ ಖರ್ಚು ಮಾಡಿರುವ ದುಡ್ಡು ಸ್ವಲ್ಪ ಹೆಚ್ಚಾಗಿ ಕಾಣುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ಕಾರಣಗಳನ್ನೂ ಹೇಳಿದ್ದೇನೆ. ಇದಕ್ಕೆ ಮುಖ್ಯ ಕಾರಣ ಪ್ರಧಾನ ಮಂತ್ರಿಗಳು ನಮ್ಮ ರಾಜ್ಯದಲ್ಲಿ ಮೂರು ದಿನಗಳ ಕಾಲ ಪ್ರವಾಸ ಮಾಡಲು ಬಂದಾಗ ಏಳು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದರು. ಇದಕ್ಕೆ ಸರಿಯಾದ ಕಾರ್ಯಕ್ರಮಗಳನ್ನು ಮಾಡುವಾಗ ಕಾರುಗಳು ಹಾಗೂ ಇನ್ನಿತರ ವಾಹನಗಳನ್ನು ಓಡಾಡುವುದಕ್ಕೆ ಇನ್ನಿತರ ವ್ಯವಸ್ಥೆಗಳನ್ನು ಮಾಡುವುದಕ್ಕೆ ಸ್ವಲ್ಪ ಹಣವನ್ನು ಜಾಸ್ತಿ ಖರ್ಚು ಮಾಡಬೇಕಾಗಿ ಬರುತ್ತದೆ. ಇವರಿಗೆಲ್ಲಾ ಹೋದ ಕಡೆ ಸೆಕ್ಯೂರಿಟಿ ಅರೇಂಜುಮೆಂಟು ಮಾಡಬೇಕಾಗುತ್ತದೆ, ಯಾವ ರಾಜ್ಯದಲ್ಲೇ ಆಗಲಿ ಪ್ರೈಂ ಮಿನಿಸ್ಟರು ಪ್ರವಾಸ ಮಾಡುವಾಗ ಅವರಿಗೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನೆಲ್ಲಾ ಮಾಡಲೇ ಬೇಕಾಗುತ್ತದೆ. ಅವರಿಗೆ ಸರಿಯಾದ ಸೆಕ್ಯುರಿಟಿ ಅರೇಂಜುಮೆಂಟುಗಳನ್ನು ಮಾಡಲೇಬೇಕು, ಇದರಲ್ಲಿ ಬಹು ಭಾಗ ಇದಕ್ಕೇ ಖರ್ಚಾಗಿದೆ, ಆದರೆ ಮಾನ್ಯ ಸದಸ್ಯರು ಇಲ್ಲಿ ಒಂದು ಕಾಂಪೌಂಡು ಒಡೆದರು ಎಂದು ಹೇಳಿದರು, ಅಲ್ಲಿನ ಆಗಿನ ಸಂದರ್ಭದಲ್ಲಿ ಅದನ್ನು ಒಡೆಯಲೇ ಬೇಕಾಗಿ ಬಂತು. ಪ್ರೈಂ ಮಿನಿಸ್ಟರು ಬರುವಾಗ ಅಲ್ಲಿ ಜನಗಳು ಓಡಾಡಲು ಎಲ್ಲ ಕ್ರಮಗಳನ್ನೂ ತೆಗೆದುಕೊಳ್ಳಲೇ ಬೇಕುತ್ತದೆ, ಸುಮಾರು ಎರಡು ಲಕ್ಷ ಜನ ಅಂದಿನ ಸಮಾರಂಭದಲ್ಲಿ ಬಂದು ಸೇರಿದ್ದರು. ಇಷ್ಟು ಜನ ಸೇರಿರುವಾಗ ಕಾಂಪೌಂಡನ್ನು ಒಡೆಯುವುದು ಹಾಗೂ ಇನ್ನಿತರ ವ್ಯವಸ್ಥೆಗಳನ್ನು ಮಾಡಬೇಕಾಗುತ್ತದೆ, ಜನರೂ ಕೂಡ ಅಗತ್ಯವಾದ ಸಹಕಾರವನ್ನು ಕೊಡಲೇ ಬೇಕಾಗುತ್ತದೆ, ಅಲ್ಲಿನ ಹೈಸ್ಕೂಲು ಹಾಗೂ ವಿದ್ಯಾ ಸಂಸ್ಥೆಗಳ ಅಧಿಕಾರವರ್ಗದವರು ಅಲ್ಲ ನಮಗೆ ಬೇರೆ ಜಾಗ ಇಲ್ಲ ಎಂದರು. ಇದ್ದುದು ಇದು ಒಂದು ಜಾಗ, ಇಲ್ಲಿನ ಕಾಂಪೌಂಡು ಒಡೆದರೆ ಜಾಗ ದೊಡ್ಡದಾಗುತ್ತಿತ್ತು. ಇದನ್ನು ನಾವು ಒಡೆಯಬೇಕಾಗಿ ಬಂತು. ನಾವು ಒಡೆಯದೇ ಇದ್ದರೆ ಜನರೇ ಅದನ್ನು ಒಡೆಯುತ್ತಿದ್ದರು, ಜನಸಂದಣಿ ಅಷ್ಟು ಜಾಸ್ತಿ ಇತ್ತು. ಇದನ್ನು ಪಿಡಬ್ಲ್ಯುಡಿ ಇಲಾಖೆಯವರು ಮಾಡಿದರು. ಈಚೆಗೆ ಇದನ್ನು ರಿಪೇರಿ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ.

7-00 P.M.

ಶ್ರೀ ಮಾನ್ ಕಬಾಡಿಯವರು ಪ್ರಧಾನಮಂತ್ರಿಗಳು ಬಂದಿದ್ದಾಗ ಹೆಚ್ಚು ಹಣ ಖರ್ಚು ಮಾಡಿದ್ದಗೆ ಎಂದು ಹೇಳಿದರು. ಡೆಮಾಕ್ರಸಿಯಲ್ಲಿ ಚುನಾವಣೆಗೆ ಎಷ್ಟು ಖರ್ಚಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತು. ಇಷ್ಟೊಂದು ಏಕೆ ಖರ್ಚು ಮಾಡುತ್ತಾರೆ ಎಂದು ಕೆಲವರು ಹೇಳುತ್ತಾರೆ. ನಮ್ಮಷ್ಟು ಅವರಿಗೆ ಮಾತನಾಡುವುದಕ್ಕೆ ಬರುವುದಿಲ್ಲ ಎಂದು ಹೇಳುವವರು ಇದ್ದಾರೆ. ತಮ್ಮ ಪ್ರತಿನಿಧಿಯ ಅನುಕೂಲಕ್ಕಾಗಿ ಇಷ್ಟೊಂದು ಹಣ ಏತಕ್ಕೆ ಖರ್ಚು ಮಾಡಬೇಕು ಎಂದು ಹೇಳುವವರು ಇದ್ದಾರೆ. ಡೆಮಾಕ್ರಸಿಯಲ್ಲಿ ಕೆಲವು ಖರ್ಚುಗಳನ್ನು ಅನಿವಾರ್ಯವಾಗಿ ಮಾಡಲೇ

(SRI D. DEVARAJ URS)

ಬೇಕಾಗುತ್ತದೆ. 5 ವರ್ಷಕ್ಕೆ ಒಂದು ಸಲ ಚುನಾವಣೆಯಾಗಬೇಕೆಂದು ನಿಯಮ ಇದ್ದರೂ ಕೆಲವು ಸಲ 5 ವರ್ಷದಲ್ಲಿ ಮೂರು ನಾಲ್ಕು ಸಲ ಚುನಾವಣೆಗಳಾಗುವುದೂ ಉಂಟು. ಪ್ರಜಾಪ್ರಭುತ್ವದಲ್ಲಿ ಇದೆಲ್ಲಾ ಅನಿವಾರ್ಯ. ಮಾನ್ಯ ಕೋಣಂದೂರು ಲಿಂಗಪ್ಪನವರ ಪಾರ್ಟಿಯವರು ಸರ್ಕಾರ ನಡೆಸಿರುವ ಕಡೆಯಲ್ಲಿ ನಾಲ್ಕಾರು ತಿಂಗಳಿಗೆಲ್ಲಾ ಚುನಾವಣೆ ನಡೆಯಿತು. ಅಂದರೆ ಚುನಾವಣೆಯನ್ನು ಕಾನೂನು ಪ್ರಕಾರ ಮಾಡಬೇಕಾಯಿತು. ಪ್ರಧಾನಮಂತ್ರಿಗಳು ಪ್ರವಾಸ ಬಂದಾಗ ಏನು ಖರ್ಚಾಗುತ್ತದೋ ಅದನ್ನು ಕೊಡಬೇಕಾಗುತ್ತದೆ. ಹಿಂದೆ ನಾನು ಮೈಸೂರು ರೆಪ್ರಸೆಂಟೆಟಿವ್ ಅಸೆಂಬ್ಲಿಯ ಸದಸ್ಯನಾಗಿದ್ದಾಗ ಸಂಬಳವನ್ನು ಈಗಿನಂತೆ ಕೊಡುತ್ತಿರಲಿಲ್ಲ. ಅವರೇ ಅಕ್ಕಿ, ಬೇಳೆ ಎಲ್ಲ ತರಿಸಿ ಅಡಿಗೆ ಮಾಡಿಸಿ ನಮಗೆ ಊಟ ಹಾಕಿಸುತ್ತಿದ್ದರು. ನಾವು ಊಟ ಮಾಡಿಕೊಂಡು ಅಸೆಂಬ್ಲಿಯ ಕೆಲಸ ಮಾಡಿಕೊಂಡು ಬರುತ್ತಿದ್ದೆವು.

ಶ್ರೀ ಎಸ್. ವೈ. ಪಾಟೀಲ್.—ಈಗಲೂ ಅದೇ ರೀತಿ ಮಾಡಿಸಿ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಸಂಬಳ ಬಿಟ್ಟುಕೊಡಿ, ಊಟ ಹಾಕಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಗಳು ಸಹ ಹಾಗೆಯೇ ಮಾಡಲಿ.

ಶ್ರೀ ಡಿ. ದೇವರಾಜ ಅರಸ್.—ನಾನು ಆ ರೀತಿ ಹೇಳುವುದಿಲ್ಲ. ಮಾನ್ಯ ಸದಸ್ಯರು ಹೇಳಿದ್ದಕ್ಕೆ ನಾನು ಹೇಳಿದೆ. ಕೆಲವು ಖರ್ಚುಗಳು ಪ್ರಜಾಪ್ರಭುತ್ವ ಇರುವ ದೇಶಗಳಲ್ಲಿ ಆಗಲೇಬೇಕಾಗುತ್ತದೆ. ಆ ರೀತಿ ಆಗಬಾರದು ಎಂದರೆ ಡಿಕ್ಟೇಟರಷಿಪ್ ಇಟ್ಟರೆ ಆಗುವುದಿಲ್ಲ. ಕೆಲವು ನಿಯಮಗಳು ಪ್ರಜಾಪ್ರಭುತ್ವ ಇರುವ ದೇಶಗಳಲ್ಲಿ ಇರುತ್ತವೆ. ಅದರ ಪ್ರಕಾರ ಖರ್ಚು ಆಗಬೇಕಾಗುತ್ತದೆ. ಮಾನ್ಯ ಸದಸ್ಯರು ಸಂಬಳ ತೆಗೆದುಕೊಳ್ಳಬೇಡಿ ಎಂದು ನಾನು ಹೇಳುವುದಿಲ್ಲ. ಜನರ ಪ್ರತಿನಿಧಿಗಳಾಗಿ ಕೆಲಸ ಮಾಡುತ್ತಿರುವುದರಿಂದ ಸಂಬಳ ಕೊಡಬೇಕಾಗುತ್ತದೆ. ಯಾರೂ ಸಹ ಹಸಿದುಕೊಂಡಿರುವುದಕ್ಕಾಗುವುಲ್ಲ. ಹಸಿದುಕೊಂಡು ಕೆಲಸ ಮಾಡುವುದಕ್ಕೂ ಆಗುವುದಿಲ್ಲ. ರೈತನೂ ಸಹ ಉಳುಮೆ ಮಾಡತಕ್ಕಂಥ ಎತ್ತುಗಳಿಗೆ ಹೆಚ್ಚು ಮೇವು ಹಾಕುತ್ತಾನೆ. ಮತ್ತು ಚೆನ್ನಾಗಿ ಪೋಷಣೆ ಮಾಡುತ್ತಾನೆ. ಆ ರೀತಿ ಹೆಚ್ಚು ಮೇವು ಹಾಕಿದರೆ ಮತ್ತು ಚೆನ್ನಾಗಿ ಪೋಷಣೆ ಮಾಡಿದರೆ ಅದೂ ಕೂಡ ಹೆಚ್ಚು ಕೆಲಸ ಮಾಡುತ್ತದೆ. ಯಾವ ಎತ್ತು ಕೆಲಸಕ್ಕೆ ಯೋಗ್ಯವಾಗಿರುವುದಿಲ್ಲವೋ ಅಂತಹ ಎತ್ತನ್ನು ರೈತನು ಬೀದಿಗೆ ಅಟ್ಟುವುದು ಉಂಟು. ಉಳುಮೆ ಮಾಡುವ ಎತ್ತುಗಳಿಗೆ ಹೆಚ್ಚು ಮೇವು ಹಾಕುವುದು ಹೇಗೆ ಅನಿವಾರ್ಯವೋ ಅದರಂತೆ ಜನರ ಪ್ರತಿನಿಧಿಗಳಾಗಿ ಕೆಲಸ ಮಾಡುವವರಿಗೆ ಸಂಬಳ ಕೊಡಬೇಕಾಗುತ್ತದೆ. ಮತ್ತು ಪ್ರಧಾನ ಮಂತ್ರಿಗಳು ಪ್ರವಾಸ ಬಂದಾಗಲೂ ಖರ್ಚು ಮಾಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ :—ದೇಶಕ್ಕೋಸ್ಕರ ಪ್ರಧಾನ ಮಂತ್ರಿಗಳು ಕೆಲಸ ಮಾಡುವುದರಿಂದ ಹಣ ಖರ್ಚು ಮಾಡಬೇಕಾಗುತ್ತದೆಂದು ತಾವು ಹೇಳಿದಿರಿ. ಈಗ ತಾವು ಪ್ರಧಾನಮಂತ್ರಿಗಳು ನಮ್ಮ ರಾಜ್ಯಕ್ಕೆ ಪ್ರವಾಸ ಬಂದಾಗ ಎಷ್ಟು ಖರ್ಚಾಯಿತು ಎಂಬುದನ್ನು ಮಾತ್ರ ತಿಳಿಸಿದಿರಿ ಅದರಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಖರ್ಚಾಯಿತು ಮತ್ತು ಅದರ ಪೈಕಿ ತಮ್ಮ ಪಾರ್ಟಿಯವರು ಎಷ್ಟೆಷ್ಟು ಕೊಟ್ಟಿದ್ದಾರೆಂಬ ವಿವರವನ್ನು ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್ :—ಆ ವಿವರ ಬೇಕಾದರೆ ಒದಗಿಸಿಕೊಡುತ್ತೇನೆ. ಪಾರ್ಟಿಯವರು ಕೆಲವನ್ನು ಕೊಟ್ಟಿದ್ದಾರೆ. ಕೊಡಬೇಕಾದ್ದು ಕೆಲವು ಇರಬಹುದು.

Message from the Chairman, L. C.

(Announcement)

MADAM SPEAKER : I have received a message from the Hon Chairman, Legislative Council, which reads as follows :

"Dear Madam Speaker,

As required by Rule 107 of the Rules of Procedure and Conduct of Business in the Mysore Legislative Council, I retransmit the following Bills without any recommendations from the Council

The Mysore Sales Tax (Amendment) Billl, 1972.	...	Passed	31-7-1972
The Mysore Sales Tax (Second Amendment) Bill, 1972.	...	do	31-7-1972
The Mysore Motor Vehicles Taxation (Amendment)Bill, 1972.	...	do	1-8-1972
The Mysore Motor vehicles (Taxation on Passengers and Goods) (Amendment) Bill, 1972.	...	do	1-8-1972

The House now stands adjourned to meet again tomorrow at 1-00 P.M.

The House adjourned at Five Minutes past Seven of the Clock to meet again at One of the Clock on Thursday, the 3rd August, 1972.

WD 18316 – GPB – 550 – 28-5-73

V-31 N 72
N74-7-1-9
(13) 4891

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, dated 3rd August 1972, (Sravana, 12, 1894 S.E.)

The House met in the Assembly Chamber, Vidhana Soudha, at One of the Clock.

MADAM SPEAKER [SMT. K.S. NAGARATHNAMMA] in the Chair.

STARRED QUESTIONS

(to which oral answers were given)

MADAM SPEAKER – Question No. 535, 615 and 594 will be held over since the Hon'ble Minister for Industries has gone to Delhi.

TRAVELLING FACILITIES TO THE CHILDREN POSSESSING PASSES

563. SRI S. KARIYAPPA (Kanakapura).—

Will the Minister for Labour be pleased to state:—

(*a*) the number of school children in road side villages who have obtained bus passes to go and come from Kanakapura;

(*b*) whether it has come to the notice of the Government that the conductors seldom stop the buses to pickup these children;

(*c*) whether these passes will have to be obtained every month?

SRI AZEEZ SAIT (Minister for Labour).—

(*a*) In June 1972, 20 School Children have obtained passes.

(*b*) No.

(*c*) These passes can be obtained either monthly or quarterly.

ಶ್ರೀ ಎಸ್. ಕರಿಯಪ್ಪ —ಬಸ್ ಪಾಸ್‌ಗಳನ್ನು ತಿಂಗಳು ತಿಂಗಳೂ ರಿನ್ಯೂ ಮಾಡುವ ಪದ್ಧತಿ ಉಂಟೆ?

† ಶ್ರೀ ಅಜೀಜ್ ಸೇಟ್.—ಇದರ ಬಗ್ಗೆ ನೋಟೀಸ್ ಬೇಕು.

ಶ್ರೀ ಎಸ್. ಕರಿಯಪ್ಪ.—ತಿಂಗಳು ತಿಂಗಳು ರಿನ್ಯೂ ಮಾಡತಕ್ಕ ಪದ್ಧತಿ ಇದ್ದ ಪಕ್ಷದಲ್ಲಿ ಅದನ್ನು ಜಜಾ ಮಾಡಿಸುತ್ತೀರಾ?

ಶ್ರೀ ಅಜೀಜ್ ಸೇಟ್.—ಪಾಸ್ ಅನ್ನು ತಿಂಗಳು ಒಂದಕ್ಕೆ ತೆಗೆದುಕೊಂಡಿದ್ದರೆ, ಬೇರೆ ತಿಂಗಳಿಗೆ ಪುನಃ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ರಿನ್ಯೂ ಮಾಡುವ ಪದ್ಧತಿ ಇರಲೇಬೇಕಾಗುತ್ತದೆ. ಇಲ್ಲದಿದ್ದರೆ ಆರು ತಿಂಗಳಿಗೆ ಒಂದು ಸಾರಿ ವರ್ಷಕ್ಕೆ ಒಂದು ಸರತಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ನನ್ನ (ಬಿ) ಪ್ರಶ್ನೆಗೆ ಉತ್ತರದಲ್ಲಿ ಇಲ್ಲ ಅಂತ ಹೇಳಿದ್ದೀರಿ, ನಾನು ಕಣ್ಣಾರೆ ಕಂಡಿದ್ದೇನೆ, ನನ್ನ ತಿಳುವಳಿಕೆಗೆ ಬಸ್ಸುಗಳಲ್ಲಿ ತಿರುಗಾಡಿದವರೂ ತಂದಿದ್ದಾರೆ. ಮಕ್ಕಳು ಕೈ ತೋರಿಸಿದರೆ ನಿಲ್ಲಿಸಿ ಬಸ್ಸುಗಳಲ್ಲಿ ಕೂರಿಸಿಕೊಳ್ಳುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀ ಅಜೀಜ್ ಸೇಟ್.— ತಾವು ಹೇಳುವುದನ್ನು ಒಪ್ಪಿಕೊಂಡು ಆ ರೀತಿ ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಕ್ಕಳಿಗೆ ಪಾಸ್ ಅನ್ನು ಪ್ರತಿ ತಿಂಗಳು ರಿನ್ಯೂ ಮಾಡತಕ್ಕ ಪದ್ಧತಿಯಿಂದ ತೊಂದರೆಯಾಗುತ್ತದೆ. ಅವರು ರಿನ್ಯೂ ಮಾಡಿಸುವುದಕ್ಕೆ ಹೋಗಿ, ಶಾಲೆಗ್ಗೆ ಅಬ್ಸೆಂಟ್ ಆಗುವ ಪರಿಸ್ಥಿತಿ ಬರುತ್ತದೆ; ಸೀಸನಲ್ ಟಿಕೆಟ್ಸ್ ಇದ್ದ ಹಾಗೆ, ಆರು ತಿಂಗಳಿಗೆ, ಅಥವಾ ವರ್ಷಕ್ಕೆ ಒಂದು ಸಾರಿ ರಿನ್ಯೂ ಮಾಡತಕ್ಕ ತರಹ ಮಾಡುತ್ತೀರಾ?

ಶ್ರೀ ಅಜೀಜ್ ಸೇಟ್.—ತಿಂಗಳಿಗ ತೆಗೆದುಕೊಳ್ಳುವುದರಿಂದ, ಬೇರೆ ತಿಂಗಳು ಬಂದರೆ, ಪುನಃ ತೆಗೆದುಕೊಳ್ಳಬೇಕಾಗುತ್ತದೆ. ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಕ್ವಾರ್ಟರಲಿ ಹಾಫ್ ಇಯರಲಿ ಅಥವಾ ಆನ್ಯುಯಲಿ ತೆಗದುಕೊಳ್ಳುವ ಹಾಗಿದರೆ ಏರ್ಪಾಡು ಮಾಡಿಕೊಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಬೆಳ್ಳಿ ಹಬ್ಬ ಬರುವುದರಿಂದ, ಸ್ವಾತಂತ್ರ್ಯ ದಿನೋತ್ಸವದಂದ ಹಳ್ಳಿಯ ವಿದ್ಯಾರ್ಥಿಗಳಿಗೆ ಮುಫತ್ತಾಗಿ ಪಾಸ್ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಅಜೀಜ್ ಸೇಟ್.—೨೫ ವರ್ಷದ Silver Jubilee ಅನಿವರ್ಸರಿಗೆ ಈಗಾಗಲೇ ಕೆಲವು ನಿಯಮಗಳನ್ನು ಮಾಡಿಸುತ್ತಿದ್ದೇವೆ, ಆ ಡಿಟೇಲ್ಸ್ ನನ್ನ ಹತ್ತಿರ ಇಲ್ಲ. ಏನು ಏನು ಮಾಡಬೇಕಾಗಿದೆಯೋ ಅದನ್ನು ಸದಸ್ಯರ ಗಮನಕ್ಕೆ ತೆಗೆದುಕೊಂಡು ಬರುತ್ತೇವೆ.

ಶ್ರೀ* ಎಸ್. ಕರಿಯಪ್ಪ.—ಈ ಪಾಸಸ್ ಅನ್ನು ಕೊಡತಕ್ಕ ವ್ಯವಸ್ಥೆಯನ್ನು ಅಲ್ಲಲ್ಲಿ ಮಾಡುವುದಕೆ ಸಾಧ್ಯವೇ, ಅಥವಾ ಬೆಂಗಳೂರಿಗೆ ಬಂದು ತೆಗೆದುಕೊಂಡು ಹೋಗಬೇಕೆ?

ಶ್ರೀ ಅಜೀಜ್‌ಸೇಟ್.—ತಮ್ಮ ಮಾತಿನಲ್ಲಿ ಸ್ವಲ್ಪ ಅರ್ಥವಿದೆ, ಏನಾದರೂ ಡೀಸೆಂಟ್ರಲೈಸ್ ಮಾಡಬೇಕಿದ್ದರೆ, ಈ ತರಹ ಮಾಡುವುದಕ್ಕೆ ಅವಕಾಶ ಇದ್ದರೆ, ಆ ರೀತಿ ಮಾಡುವುದಕ್ಕೆ ಏರ್ಪಾಡು ಮಾಡುತೇವೆ.

AVAILABILITY OF BUSES ON SPECIAL OR CASUAL CONTRACTS

645 Sri N. B. Sirdesai (Khanapur).—

Will theanister for Labour be pleased to state:—

(a) whether Government have made any provision to provide M. S. R. T. C buses on special or casual contracts etc., for the convenience of tourists and marriage parties;

(b) if so, the reasons why the Divisional Controller, Belgaum has not been able to provide buses for tourists and marriage parties, on special or causal contract system and thus causing loss to Government.

(c) the steps taken to provide extra buses for Belgaum Depot as stand-by buses for the tourists and marriage parties;

---

* Asterisks indicate that remarks or speeches have not been revised by the member concerned.

(*d*) whether Department of Tourism has any proposal to consider the question of encouraging private bus services instead of providing special buses for tourists on contracts system and there by earn revenue?

SRI AZEEZ SAIT (Minister for Labour).—

(*a*) Mysore State Road Transport Corporation, provides buses on casual contract for special occasions and for the convenience of the tourists and marriage parties.

(*b*) Divisional Controller, Mysore State Road Transport Corporation has provided and has been providing buses on casual contracts to the extent, he could spare buses. Thus, the question of loss to Government does not arise.

(*c*) 20 per cent of Spare buses are provided on the basis of Schedules operated and the buses are spared to the extent of their being available.

(*d*) The Department of Information and Tourism has no schems for providing transport facilities to tourists departmently. The Mysore State Tourism Development Corporation also has no plans at present to encourage Private bus operators for providing transport facilities to tourists. The Corporation however is contemplating operating on its own, bus services in a limited sphere for the benifit of tourists.

SRI N. B. SIRDESAI.—May I know whether the Government is aware of the fact that neighbouring States like Maharashtra have been providing buses for the marriage parties to go to places outside the State limits; where as the Government of Mysore have not made such provision?

SRI AZEEZ SAIT.—The idea is good. The whole difficulty is, for some time we were running short of buses. Now that we have made provision to get some more buses, probably this idea can be considered.

SRI N. B SIRDESAI.-May I know whether the Government is taking it for granted that buses have been provided and are being provided by the Divisional Controller, Belgaum, without getting full information in regard to this matter. Since I supply the information that the buses have not been provided, will the Government be of opinion that the information supplied is false or incorrect?

SRI AZEEZ SAIT.—Government is not here to take things for granted. But we will take for reality what the hon. Member has stated. If buses are not being provided for want of buses, immediately we have buses, we will take this matter into consideration.

(Sri Azeez Sait)

When the Maharashtra Road Transport Corporation can provide special permits for buses, I think Mysore R. T. C. should also do it. I take both things for granted. I would like to assure the member again that we do not take things for granted. We will take in consideration reality. If there is any difficulty and if anything is wrong, we will set it right.

SRI H. S. SIDDAPPA —Has it come to the notice of the Government and the Minister that the Depot Managers are refusing to give buses on special or causual contracts for marriage parties? Will the Hon. Minister make arrangements so that they may be provided for marriage purpose; it must be treated as emergency demand.

SRI AZEEZ SAIT.— At that rate everything is emergent. In the case of Belgaum, I have kept 20% buses as extra. I do not know whye those spare buses were not made available. It is possible that it may be due to acute shortage of buses then. Wherever it is possible to provide them, I will see that this idea of giving buses on casual contract for special occasions and for tourists and marriage parties, shall be suggested to the M. S. R. T. C. for implementation.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಪ್ರವಾಸೋದ್ಯಮ ಹೆಚ್ಚಾಗುತ್ತಾ ಇರುವುದರಿಂದ, ಪ್ರವಾಸೋಧ್ಯಮಕ್ಕೆ ಬಸ್ಸುಗಳು ಇಲ್ಲ ಎನ್ನುವ ಟೀಕೆಗಳು ಬಂದಿದ್ದರಿಂದ, ಇದಕ್ಕೆ ಸ್ಪೆಷಲ್ ಬಸಸ್ ಗ್ಯಾಡ್‌ಗೇಟ್ಸ್, ಫ್ಯಾನ್, ಫಂಕ ಇರುವಂಥ ಬಸ್ಸುಗಳನ್ನು ಹಾಕಿ ಪ್ರವಾಸೋದ್ಯಮಕ್ಕೆ ಅನುಕೂಲಮಾಡಿಕೊಡುತ್ತೀರಾ?

SRI AZEEZ SAIT .— I have already said that I will bear all those ideas in mind. The hon. Members must wait and see and they must give me some breathing time.

SRI B.B. SAYANAK.—As some of the city buses are diverted for the Yellama Fair, the city people are hampered due to shortage of buses.

SRI AZEEZ SAIT .— That is inevitable ; During fairs we will have to provide that facility to the pilgrims and as a result there might be a little temporary inconvenience to the people.

ಶ್ರೀ ಆರ್. ಎಸ್. ಪಾಟೀಲ್.— ತಾವು ಹೇಳಿದಿರಿ ಕಾಂಟ್ರಾಕ್ಟ್ ಆಧಾರದ ಮೇಲೆ ಬಸ್ಸುಗಳನ್ನು ಒದಗಿಸುವ ಸಲುವಾಗಿ ೨೦ ಪರ್ಸೆಂಟ್ ಹೆಚ್ಚಾಗಿ ಒದಗಿಸಲಾಗಿದೆ. ಎಂದು. ಆದರೆ ಆ ರೀತಿ ಓದಗಿಸಲು ಯಾತಕ್ಕೆ ಸೂಚನೆ ಕೊಡಲಿಲ್ಲ ? ಬೆಳಗಾಮ್ ಜಿಲ್ಲೆಯಲ್ಲಿ ೧೦ ತಾಲ್ಲೂಕುಗಳು ಇರುವುದರಿಂದ ಒಂದೊಂದು ತಾಲ್ಲೂಕಿಗೆ ೨-೩ ಬಸ್ಸು ಬರುತ್ತವೆ. ಅದು ಸಾಕಾಗುವುದಿಲ್ಲ. ಜನಸಂದಣಿ ಬಹಳ ಜಾಸ್ತಿ. ಇರುವ ಎಲ್ಲಮ್ಮ ಜಾತ್ರೆಗೆ ಹೆಚ್ಚು ಬಸ್ಸುಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಅಜೀಜ್ ಸೇಟ್ .— ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಇರುವಷ್ಟು ಬಸ್ಸು ಕೊಟ್ಟೇ ಕೊಡುತ್ತೇವೆ. ಎಲ್ಲಾ ಬಸ್ಸುಗಳು ಬರೀ ಮದುವೆ ಗೋಸ್ಕರ ಅಥವಾ ಜಾತ್ರೆಗೋಸ್ಕರ ಇಟ್ಟುಕೊಳ್ಳುವುದು ಕಷ್ಟವಾಗುತ್ತದೆ ತಮ್ಮ ಇಚ್ಛೆಯನ್ನು ಪೂರೈಸುವುದಕ್ಕೆ ಸಾಕಷ್ಟು ಬಸ್ಸುಗಳು ಬಂದರೆ ಆದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಶರಣಪ್ಪ .— ಬಸ್ಸುಗಳ ಕೊರತೆ ಇರುವ ಕಾರಣದಿಂದ ಸರಿಯಾಗಿ ಬಸ್ಸುಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದಿರಿ ಅನೇಕ ಕಡೆ ಡಿಪೋಗಳಲ್ಲಿ ಬಸ್ಸುಗಳಿಗೆ ಟೈರ್ಸ್ ಇಲ್ಲದೆ, ಅವುಗಳಿಗೆ ಬೇಕಾದ ಸಾಮಾನುಗಳು ಸಿಕ್ಕದೆ ಎಷ್ಟೋ ಡಿಪೋಗಳಲ್ಲಿ ಕೆಟ್ಟು ನಿಂತಿರತಕ್ಕ ಬಸ್ಸುಗಳನ್ನು ತೀವ್ರವಾಗಿ ರೋಡುಗಳಲ್ಲಿ ಬರುವ ಹಾಗೆ ಮಾಡುವ ವಿಚಾರ ಸರ್ಕಾರ ಗಮನಿಸುತ್ತದೆಯೋ ?

ಶ್ರೀ ಅಜೀಜ್ ಸೇಟ್ .— ನಟ್ ಬೋಲ್ಟ್ಸ್ ಇಲ್ಲದ ಬಸ್ಸು ಇವೆ. ಟೈರ್ ಇಲ್ಲದ ಬಸ್ಸುಗಳು ಇವೆ ಅವಕ್ಕೆ ಟೈರ್ ಇಲ್ಲದೆ ಇದ್ದರೆ ಟೈರ್ ಒದಗಿಸುತ್ತೇವೆ. ನಟ್ ಬೋಲ್ಟ್ಸ್ ಇಲ್ಲದ ಕಡೆ ನಟ್ ಬೋಲ್ಟ್ಸ್ ಒದಗಿಸುತ್ತೇವೆ. ಈಗ ಪರಿಸ್ಥಿತಿ ಸಾಕಷ್ಟು ಸುಧಾರಿಸುತ್ತಿದೆ. ಅದನ್ನೇ ಮುಖ್ಯವಾಗಿ ಮಾಡುತ್ತಿದ್ದೇವೆ. ಸ್ವಲ್ಪ ಕಾಲಾವಕಾಶ ಬೇಕು ಅದೇ ಮಾತು ಪದೇ ಪದೇ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಎನ್. ವೀರಪ್ಪಗೌಡ .— ತಾವು ಕಾಂಟ್ರಾಕ್ಟ್ ಆಧಾರದಮೇಲೆ ಸರ್ಕಾರದಿಂದಲೇ ಬಸ್ಸುಗಳನ್ನು ವಿಶೇಷವಾಗಿ ಕೊಡುವ ವಿಷಯ ಪ್ರಸ್ತಾಪಕ್ಕೆ ಬಂದಿದೆ. ಈಗಾಗಲೇ ಸಾಕಷ್ಟು ಕಂಟ್ರಾಕ್ಟ್ ಟೂರಿಸ್ಟ್ ಬಸ್ಸುಗಳಿಗೆ ಪರಿಮಿಟ್ ಕೊಟ್ಟಿರುವಾಗ ನಮ್ಮ ಬಸ್ಸುಗಳನ್ನು ಓಡಿಸತಕ್ಕ ಸಂದರ್ಭದಲ್ಲಿ ಹೆಚ್ಚಿನ ಲುಕ್ಸಾನಿಗೆ ಅವಕಾಶವಾಗುವುದಿಲ್ಲವೆ? ಸರ್ವೀಸ್ ಬಸ್ಸುಗಳಲ್ಲಿ ಲುಕ್ಸಾನು ಬರುತ್ತಿದೆ. ಎಲ್ಲಾ ಕಂಟ್ರಾಕ್ಟ್ ಬಸ್ ನಿಲ್ಲಿಸತಕ್ಕ ಅಧಿಕಾರ ಪಡೆದಮೇಲೆ ನಮ್ಮ ಸರ್ವೀಸ್ ಬಸ್ಸುಗಳನ್ನು ಓಡಿಸುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಅಜೀಜ್ ಸೇಟ್ .— ಮಾನ್ಯ ಸದಸ್ಯರು ಒಂದಕ್ಕೆ ಒಂದು ಸಂಬಂಧವಿಲ್ಲದ ಪ್ರಶ್ನೆ ಕೇಳಿದ್ದಾರೆ. ಕಂಟ್ರಾಕ್ಟ್ ಬಸ್ಸುಗಳಿಗೆ ಪರ್ಮಿಟ್ ಕೊಡುವ ಅಧಿಕಾರ ನನಗೆ ಇಲ್ಲ. ಅವರು ಆರ್. ಟಿ. ಎ. ಮತ್ತು ಎಸ್. ಟಿ. ಎ. ಮುಖಾಂತರ ಪರ್ಮಿಟ್ ಪಡೆದುಕೊಂಡಿದ್ದಾರೆ. ಅದರಲ್ಲಿ ಕೆಲವು ಟೆಂಪರರಿ ಪರ್ಮಿಟ್ಸ್ ಕೆಲವು ಪಕ್ಕಾ ಪರ್ಮಿಟ್ಸ್ ೩ ವರ್ಷ, ೫ ವರ್ಷಗಳು ಇವೆ ಪರ್ಮಿಟ್ ಇಲ್ಲದೆ ನಡೆಯುತ್ತಾ ಇರುವ ಬಸ್ಸುಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಸ್ಪೆಷಲ್ ಸ್ಕ್ವಾಡ್ ಇಟ್ಟಿರುತ್ತೇವೆ. ಸುಮಾರು ೧೦೦ ಚಿಲ್ಲರೆ ಬಸ್‌ಗಳನ್ನು ಸಿಫ್ಟ್ ಮಾಡಿದ್ದೇವೆ. ಮೋಟಾರ್ ವಹಿಕಲ್ ಆಕ್ಟ್ ವಯಲೇಟ್ ಮಾಡುವುದಕ್ಕೂ, ನಾವು ಬಸ್ಸು ಓಡಿಸುವುದಕ್ಕು ವ್ಯತ್ಯಾಸ ಇದೆ. ಬಸ್ಸುಗಳನ್ನು ನಮ್ಮ ಕೈಲಾದಷ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

MADAM SPEEKER .— Sri B. V. Kakkilaya may put Question No 677 as behelf of Sri V. N. Patil.

BINNY MILLS LABOUR ASSOCIATION.

SRI B. V. KAKKILAYA (Bantwal) [on behalf of 677 Sri V. N. Pati (Humanbad)]

Will the Minister for Labour be pleased to state :—

(*a*) whether the office bearers of the Binny Mills Labour Association have been restrained from functioning as such by an order of the court.

(*b*) whether after the order of the Court, the office bearers have entered into a settlement with the management of the Bangalore Woollen, Cotton and Silk Mills Limited ?

SRI AZEEZ SAIT — (Minister for Labour)

(*a*) Yes.

(*b*) No.

SRI KAKKILAYA .— Has it come to the notice of the Government that a settlement was signed by the office bearers of this union in the presence of the Deputy and Assistant Labour Commissioners though the union has been restrained from functioning by the court ?

SRI AZEEZ SAIT .— The settlement was not signed by the office bearers of the Labour Association but it was signed by the eleeted representatives of the General Body before the Assistant Labour Commissioner and the conciliation Officer, Bangalore Division.

ಶ್ರೀ ಎಂ. ಎಸ್. ಕೃಷ್ಣನ್ .— ತಾವು ರೆಪ್ರಸೆಂಟೇಟಿವ್ಸ್ ಆಫ್ ದಿ ಅಸೋಶಿಯೇಷನ್ ಎಂದು ಹೇಳಿದಿರಿ ರೆಪ್ರಸೆಂಟೇಟೇವ್ಸ್ ಯಾರು ಯಾರು ಸೈನ್ ಮಾಡಿದ್ದಾರೆ ಹೇಳುವುದಕ್ಕೆ ಸಾಧ್ಯ ಆಗುತ್ತದೆಯೇ

SRI AZEEZ SAIT .— I require notice.

ಶ್ರೀ ಎಂ. ಎಸ್. ಕೃಷ್ಣನ್.— ರೆಪ್ರಸೆಂಟೇಟೀವ್ಸ್ ಎನ್ನುವವರಲ್ಲಿ ಕೆಲಸಗಾರರಲ್ಲದೆ ಇರುವವರು ಇರುವುದರಿಂದ ಅದು ಇಂಡಸ್ಟ್ರೀಯಲ್ ಡಿಸ್‌ಪ್ಯೂಟ್ ಆಕ್ಟ್‌ಗೆ ವಿರುದ್ಧವಾಗಿದೆ ಎನ್ನುವುದು ಗೊತ್ತಿದೆಯೇ

SRI AZEEZ SAIT .— Because the settlement was rigned before the Assistant Labour Commissioner by the duly elected representatives of the General Body, I do not think it becomes invalid.

SRI M. S. KRISHNAN .— Under the Industrial Disputes Act, five workmen are to be elected. Since a non-workman is elected and he has signed it is a continuing illegality. is the hon. Minister prepared to stop it or continue it ?

SRI AZEEZ SAIT.— The hon. Member as a labour leader knows that no outsider can be elected from the general body.

MADAM SPEAKER .— The Chief Minister has to reply to the next two questions. He is not here. Next question the Minister for Public Works is to reply, but he is also not here. If Minister do not co-operate with me it will be difficult to carry on. Is any other hon Minister going to reply on behalf of the Minister for Public Works.

(None of the ministers came forward to reply)

If they are not going to co-operate, I will as well adjourn the House. This is the third time I am seeing this.

SRI M. S. KRISHNAN .— Madam, I pointed out the very same thing to the Chair yesterday. These Ministers go on tour when the House is in session and we are treated with scant respect. If this is the case, during question hour we will walk out. we do not want to hear anything from the Ministers.

MADAM SPEAKER .— The Chief Minister is held up in a meeting, he will be coming shortly. But what about the other Ministers . If they do not come, I will drop the question hour.

SRI M. S. KRISHNAN .—Yesterday over the very same matter there was pandamonium in the Council and we do not want to have pandamonium here.

(At this stage, hon. minister for Public Works entered the house and took his seat)

BRIDGE ON TUNGABHADRA RIVER IN RAICHUR DISTRICT

729. SRI SHARANAPPA (Deodurg).—

Will the Minister for Public Works and Electricity be pleaed to state.—

(a) whether Inter State Link Bridge on Tungabhadra river in Raichur District at Madhavaram has been sanctioned ;

(b) the estimated cost of the bridge ;

(c) whether the expenditure on this bridge will be borne equally by Mysore State, Andhra Pradesh and Government of India;

(d) whether it is a fact that the foundation of the bridge has been laid down by the then Central Government Minister Sri V. K. R. V. Rao; If so, on what date;

(e) whether the work is in progress; If so, the amount spent so far and when it will be completed ?

SRI H. M. CHANNABASAPPA (Minister for Public Works).—

(a) Yes

		Rs.
(b)	Bridge Proper	34,25,000
	Approaches	10,50,000
	Total cost :	44,75,000

(c) Central liability as grant-in-aid is 1/3rd cost of work subject to a maximum of Rs. 14,92,000 and the balance of cost including excess if any over and above Central grant-in-aid, is to be shared equally by Mysore State and Andhra Pradesh.

(d) Yes. On 8th December 1968.

(e) Yes. Rs. 11,49,455 has been spent so far. It is expected to be completed by March 1974.

ಶ್ರೀ ಶರಣಪ್ಪ.—ಈ ಸೇತುವೆ ೧೯೬೮ರಲ್ಲಿ ಮಂಜೂರಾಗಿದ್ದರೂ ಇದುವರೆಗೆ ಇದರ ಕೆಲಸವನ್ನು ತೆಗೆದುಕೊಂಡು ಮುಗಿಸದೇ ಇರಲು ಕಾರಣಗಳೇನು ?

‡ ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈ ಸೇತುವೆ ತೆಗೆದುಕೊಂಡ ಕಾಲದಲ್ಲಿ ಸರಕಾರ ನಿರೀಕ್ಷೆ ಮಾಡಿದುದಕ್ಕಿಂತ, ಅದರ ಅಡಿಪಾಯ ಹೆಚ್ಚು ಆಳ ಮಾಡಬೇಕಾದುದರಿಂದ ಇದರ ಟೆಂಡರು ರೇಟು ಇತ್ಯಾದಿಗಳ ಬಗ್ಗೆ ಡಿಸ್‌ಪ್ಯೂಟುಗಳು ಉಂಟಾದುದರಿಂದ ಕೆಲಸಗಳಾಗದೆ ನಿಂತಿದೆ.

ಶ್ರೀ ಶರಣಪ್ಪ.—ಇಂತಿಷ್ಟೇ ಕಾಲದಲ್ಲಿ ಇದನ್ನು ಮುಗಿಸಬೇಕೆಂದು ನಿಗದಿ ಮಾಡಿರಲಿಲ್ಲವೆ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದಕ್ಕೆ ಕಾಲ ನಿಗದಿಯಾಗಿದೆ.

ಶ್ರೀ ಶರಣಪ್ಪ.—ಈ ಸೇತುವೆ ಹತ್ತಿರ ಒಂದು ಸಬ್ ಡಿವಿಜನ್ನು ಆಂಧ್ರ ಸರಕಾರಕ್ಕೆ ಸೇರಿದಂತೆ ಇದೆ ಮತ್ತು ನಮ್ಮ ರಾಜ್ಯ ಸರಕಾರದ ಒಂದು ಸಬ್ ಡಿವಿಜನ್ನೂ ಇದೆ. ಇದರ ಬಗ್ಗೆ ಎಲ್ಲ ಖರ್ಚನ್ನೂ ನಮ್ಮ ರಾಜ್ಯ ಸರಕಾರ ವಹಿಸಿಕೊಳ್ಳುತ್ತೋ ಇಲ್ಲವೇ ಕೇಂದ್ರ ಸರಕಾರದವರು ಇದರ ಖರ್ಚನ್ನು ಕೊಡುತ್ತಾರೋ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದರ ಸೇತುವೆ ಕಟ್ಟತಕ್ಕ ಜವಾಬುದಾರಿಯೆಲ್ಲಾ ನಮ್ಮ ರಾಜ್ಯ ಸರಕಾರದ ಪಿ. ಡಬ್ಯ್ಲು. ಡಿ. ಇಲಾಖೆಗೆ ಸೇರಿದೆ.

ಶ್ರೀ ಎ. ವಿ. ಪಾಟೀಲ್.—ಇದನ್ನು ಯಾವ ವರ್ಷದಲ್ಲಿ ಮುಗಿಸಬೇಕೆಂದು ಇದೆ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—೧೯೭೪ನೇ ಮಾರ್ಚ್ ಆಖೈರಿನೊಳಗೆ ಇದನ್ನು ಮುಗಿಸಬೇಕಾಗಿ.ದೆ

ಶ್ರೀ ಶರಣಪ್ಪ.—ಈ ಸೇತುವೆ ಮುಗಿಸಿದರೆ ಇದರಿಂದ ಮಂತ್ರಾಲಯಕ್ಕೆ ಹೋಗಲು ಹಾಗೂ ಇತರ ರಾಜ್ಯಗಳ ಕಡೆಗೆ ನೇರ ಸಂಪರ್ಕ ಕಲ್ಪಿಸಿದಂತಾಗುತ್ತದೆ. ಇಷ್ಟು ಹೆಚ್ಚು ಮಹತ್ವವುಳ್ಳ ಸೇತುವೆಯಾಗಿರುವುದರಿಂದ ತಕ್ಷಣವೇ ಇದರ ಕೆಲಸಗಳನ್ನು ತೆಗೆದುಕೊಂಡು ಏಕೆ ಮುಗಿಸಬಾರದು ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈ ಸೇತುವೆಯ ಒಂದು ಕಡೆ ಆದೋಣಿ ಆಂಧ್ರ ಪ್ರದೇಶಕ್ಕೆ ಸೇರಿದ್ದು ಇದೆ ಇನ್ನೊಂದು ಕಡೆ ರಾಯಚೂರು ಕಡೆಗೆ ಹೋಗುತ್ತದೆ. ಮಂತ್ರಾಲಯದ ಕಡೆಗೆ ಇದು ಹೋಗುವುದಿಲ್ಲ.

RAMTHAL LIFT IRRIGATION SCHEME ACROSS MALAPRABHA

735. Sri G. P. Nanjayyanamath (Guledgud).—

Will the Minister for Public Works and Electricity be pleased to state.—

(a) whether the survey work on Ramthal Lift Irrigation Scheme across Malaprabha river in Hungund Taluk has been completed;

(b) if so, whether Government is contemplating to take up the work for execution during the current years ?

Sri H. M. Channabasappa (Minister for Public Work) —

(a) Survey work is not yet completed.

(b) Does not arise in view of the replies above.

ಶ್ರೀ ಜಿ. ಪಿ. ನಂಜಯ್ಯನ ಮಠ.—ಇಲ್ಲಿನ ಲಿಫ್ಟ್ ಇರಿಗೇಷನ್ ಸ್ಕೀಂ ಇನ್ನು, ಎಷ್ಟು ವರ್ಷಗಳಲ್ಲಿ ಪೂರ್ತಿಯಾಗುತ್ತದೆ ?

† ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದರ ಸರ್ವೇ ಕೆಲಸವೆಲ್ಲ ನಡೆದಿದ್ದು ನಮಗೆ ಇದು ಫೀಸಿಬಲ್ ಆಗಿವೆ ಎನ್ನುವುದು ಕಂಡು ಬಂದಿದೆ ಮತ್ತು ಇದನ್ನು ಕಾರ್ಯಗತಮಾಡಬೇಕು. ಆದರೆ ಇದಕ್ಕೆ ಸಂಬಂಧವಾಗಿ ಕೃಷ್ಣಾ ನದಿ ನೀರಿನ ವಿವಾದಗಳು ಬಂದಿರುವುದರಿಂದ ಅದು ಇತ್ಯರ್ಥವಾದ ಮೇಲೆ ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ.

ALLOTMENT OF MANURE TO GULBARGA DISTRICT

743. Sri A. V. Patil (Aland).—

Minister for Agriculture and Forests be pleased to state.—

whether the Government has allotted quote of manure to Gulbarga District and if so, the quantity allotted ?

Sri K. H. Patil (Minister for Agriculture and Forests).—

Yes.

Ammonium Sulphate	50 tonnes
Urea	650 tonnes
Complex 15 : 15 : 15 :	50 tonnes

SRI A. V. PATIL.—May I know the date on which the quota was allotted to Gulbarga District ?

† SRI K. H. PATIL.—Between 15th June 1972 to 31st July 1972. The fertiliser given to Gulbarga is like this :

Urea 70 tons

Mysore State Agro Industries Corporation 256 tons

Ammonium Sulphate-Co-operative marketing federation 12 tons

Ammonium Sulphate-Agro Industries Corporation 176 tons

Potassium 30 tons

Ammonium Phosphate—Agro Industries Corporation 157 tons In all 659 tons with the Co-operative Marketing Federation and 422 tons with the State Agro Industries Corporation.

SRI D. B. KALMANKAR.—May I know how much was provided in the first instance ?

SRI K. H. PATIL.—I have total figures. I must admit that there was negligible quota in the beginning.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.—ಗೊಬ್ಬರವನ್ನು ಹಂಚಿಕೆ ಮಾಡುವಾಗ ಇಲ್ಲಿ ಕೊಟ್ಟಿರತಕ್ಕ ಅಂಕೆ ಸಂಖ್ಯೆಗಳನ್ನು ನೋಡಿದರೆ ಬಹು ಕಡಿಮೆಯಾಗಿದೆ. ಇದರಿಂದ ವ್ಯವಸಾಯ ಮಾಡುವವರಿಗೆ ಹೆಚ್ಚು ಉತ್ಪಾದನೆ ಮಾಡಲು ಆಗುವುದಿಲ್ಲ, ಇದನ್ನು ಸರಿಪಡಿಸುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಈಗಾಗಲೇ ಶೇಕಡಾ ೭೫ರ ಪ್ರಮಾಣದಷ್ಟು ಗೊಬ್ಬರವನ್ನು ಹಂಚಿಕೆ ಮಾಡಿಯಾಗಿದೆ ಮತ್ತು ಇನ್ನೂ ಶೇಕಡ ೨೫ರಷ್ಟು ಹಂಚುವ ಪ್ರಯತ್ನವೂ ನಡೆದಿದೆ.

ಶ್ರೀ ಟಿ. ಎಂ. ಮಂಜುನಾಥ್.—ಮದ್ರಾಸು ಫರ್ಟಿಲೈಸರು ಕಂಪನಿಯಿಂದ ಹಾಗೂ ಇನ್ನಿತರ ಕಡೆಗಳಿಂದ ಫರ್ಟಿಲೈಸರನ್ನು ಹಂಚಿಕೆ ಮಾಡಿರುವುದರಲ್ಲಿ ಸುಮಾರು ೨೫೦ ಗ್ರಾಂ ನಷ್ಟು ಇಲ್ಲವೇ ಅರ್ಧ ಕೆ. ಜಿ. ಯಷ್ಟು ಮರಳು ಮಿಶ್ರಮಾಡಿ ಹಂಚುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೋ ? ಮತ್ತು ಹಾಗೆ ಸರಕಾರ ಕಳುಹಿಸಿರುವ ಫರ್ಟಿಲೈಸರುಗಳನ್ನು ಒಂದು ಟನ್ನಿಗೆ 200 ರೂಪಾಯಿಗಳಷ್ಟು ಹೆಚ್ಚು ದರದಲ್ಲಿ ಮಾರುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಕೆ. ಹೆಚ್. ಪಾಟೀಲ್.—ಮರಳು ಮಿಶ್ರಣ ಮಾಡಿರುವ ಫರ್ಟಿಲೈಸರು ಬಂದಿರುವುದು ಸರಕಾರದ ಗಮನಕ್ಕೆ ಬಂದರೆ ಅಂತಹವರನ್ನು ಕೂಡಲೇ ಪೋಲಿಸಿನವರ ಕಡೆಗೆ ಕಳುಹಿಸುತ್ತೇವೆ. ಹೆಚ್ಚು ರೇಟುಗಳಲ್ಲಿ ಮಾರಾಟವಾಗುತ್ತಿದೆ ಎನ್ನುವುದು ಸರಕಾರದ ಗಮನಕ್ಕೂ ಬಂದಿದೆ. ಇದರ ಬಗ್ಗೆ ಯಾವ ರೀತಿ ಮಾಡಬೇಕು ಎನ್ನುವುದಕ್ಕೆ ಕಾಯಂದೆ ವಿಚಾರ ಆಲೋಚನೆ ಮಾಡುತ್ತಿದ್ದೇವೆ.

SRI D. B. KALMANKAR.—It is not a fact that you have not allotted the quota in time ?

SRI K. H. PATIL.—Is it a fact that we did not allot quota before the season started. But fortunately or unfortunately rain is helping us and now we have sufficient stock there.

ಶ್ರೀ ಸಿ. ಎನ್. ಪಾಟೀಲ್.—ತಾವು ಇಲ್ಲಿ ಒದಗಿಸಿರುವ ಪಟ್ಟಿ ನೋಡಿದರೆ ಡಿಮ್ಯಾಂಡು ಎಷ್ಟು ಇತ್ತೋ ಅದರ ಶೇಕಡ ಐವತ್ತರಷ್ಟು ಕೂಡ ಆಗುವುದಿಲ್ಲ. ಕೆಲವು ಜಿಲ್ಲೆಗಳಲ್ಲಿ ಎಂದರೆ ಗುಲ್ಬರ್ಗಾ ಜಿಲ್ಲೆಯಲ್ಲೇ ಆಗಲಿ ಬೇರೆ ಜಿಲ್ಲೆಯಲ್ಲೇ ಆಗಲೀ ಒಂದಕ್ಕೆ ಎರಡರಷ್ಟು ಬೆಲೆ ಹೆಚ್ಚು ಮಾಡಿ ತೆಗೆದುಕೊಳ್ಳುವ ಸ್ಥಿತಿ ಬಂದಿದೆ. ಇದರ ರೇಟನ್ನಾದರೂ ಕಡಿಮೆ ಮಾಡಲು ಪ್ರಯತ್ನ ಮಾಡುತ್ತಾರೆಯೋ ?

ಶ್ರೀ ಕೆ ಹೆಚ್. ಪಾಟೀಲ್.—ಗೊಬ್ಬರವನ್ನು ಯಾವ ಯಾವ ಹಂತದಲ್ಲಿ ಕೊಡಬೇಕು ಎಂದು ನೋಡಿಕೊಂಡು ಹಂಚಲಾಗುತ್ತಿದೆ ಮತ್ತು ಆದಷ್ಟು ಹೆಚ್ಚು ಗೊಬ್ಬರವನ್ನು ಖರೀದಿ ಮಾಡಬೇಕೆಂದು ಸರಕಾರ ವಿಶ್ವ ಪ್ರಯತ್ನ ಮಾಡುತ್ತಿದೆ. ಮದ್ರಾಸು ಕಡೆಯಿಂದ ಎಲ್ಲೆಲ್ಲಿ ಸಿಗುತ್ತದೋ ಅಲ್ಲಿಂದ ತರಿಸಿ ಕೊಂಡು ಅವನ್ನು ಡಿಸ್ಟ್ರಿಬ್ಯೂಟು ಮಾಡಲಾಗಿದೆ. ಆದರೆ ಇದರ ಬೆಲೆ ಹೆಚ್ಚಾಗಿದೆ ಎಂದು ಹೇಳಿವರು. ಎಲ್ಲಿ ಹೆಚ್ಚು ಬೆಲೆಯಾಗಿದೆ ಎನ್ನುವುದನ್ನು ಮಾನ್ಯ ಸದಸ್ಯರು ಸರಕಾರದ ಗಮನಕ್ಕೆ ತಂದರೆ ಅದರ ಬಗ್ಗೆ ಅತಿ ಶೀಘ್ರವಾದ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಆಶ್ವಾಸನೆಯನ್ನು ಇಲ್ಲಿ ಕೊಡುತ್ತೇನೆ.

1-30 P.M.

SRI B. B. SAYANAK.—There is accute shortage of foodgrains in Belgaum and prices are soaring up. Will the Government take drastic steps against the blackmarketeers ?

MADAM SPEAKER.—That is not allowed.

CONSTRUCTION OF A BUS STAND AT GORUR VILLAGE

744. SRI K. H. HANUME GOWDA (Hassan).—

Will the Minister for Labour be pleased to state :—

(*a*) whether it is a fact that the M.S.R.T.C has sanctioned an estin ate for constructing a bus stand at Gorur village of Hassan Taluk.

(*b*) if so, the estimated amount ;

(*c*) whether it is a fact that the ex-transport Minister had laid the foundation stone for starting construction work of the bus-stand ;

(*d*) if so, the progress achieved so far in this behalf ?

SRI AZEEZ SAIT (Minister for Labour).—

(*a*) No.

(*b*) Does not arise in view of reply to clause (*a*).

(*c*) Yes.

(*d*) The work has not yet been started

ಶ್ರೀ ಕೆ. ಎಚ್. ಹನುಮೇಗೌಡ.—ಈ ಬಸ್‌ಸ್ಟ್ಯಾಂಡ್ ನಿರ್ಮಿಸಲು ಅಸ್ತಿಭಾರ ಹಾಕಿದ್ದು ಯಾವಾಗ ?

†ಶ್ರೀ ಅಜೀಜ್ ಸೇಟ್.—ತಾ : ೧೨ನೇ ಸೆಪ್ಟೆಂಬರ್ ೧೯೬೬ರಂದು

ಶ್ರೀ ಕೆ. ಎಚ್. ಹನುಮೇಗೌಡ.—ಎಸ್ಟಿಮೇಟ್ ಮಂಜೂರು ಆಗದೆ ಅಸ್ತಿಭಾರ ಹಾಕಿದ್ದು ಏತಕ್ಕಾಗಿ ?

ಶ್ರೀ ಅಜೀಜ್ ಸೇಟ್.—ಬಸ್‌ಸ್ಟ್ಯಾಂಡ್ ಕಟ್ಟಬೇಕು ಎಂದು ಅಸ್ತಿಭಾರ ಹಾಕಲಾಯಿತು.

ಶ್ರೀ ಕೆ. ಎಚ್. ಹನುಮೇಗೌಡ.—೧೯೬೬ರಲ್ಲಿ ಅಸ್ತಿಭಾರ ಶಿಲೆಯನ್ನು ಹಾಕಲಾಯಿತು ಎಂದು ಹೇಳಿದಿರಿ. ಅಲ್ಲಿಂದ ಇಲ್ಲಿಯವರೆಗೆ ಯಾವ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು ?

ಶ್ರೀ ಅಜೀಜ್ ಸೇಟ್.—ಈ ಬಸ್‌ಸ್ಟಾಂಡ್ ಕಟ್ಟುವ ಬಗ್ಗೆ ಜಮೀನನ್ನು ತಾ : ೨ನೇ ಜೂನ್ ೧೯೭೨ ರಂದು ಸ್ವಾಧೀನಪಡಿಸಿಕೊಳ್ಳಲಾಯಿತು. ಕಟ್ಟಡ ಯಾವ ರೀತಿ ಕಟ್ಟಬೇಕು ಎಂಬ ಬಗ್ಗೆ ಪ್ಲಾನ್ ತಯಾರಿಸಬೇಕಾಗಿದೆ. ಅಲ್ಲಿ ಅಸ್ತಿಭಾರ ಶಿಲೆ ಹಾಕಿದ್ದು, ಅದನ್ನು ಇದುವರೆಗೆ ಏತಕ್ಕೆ ಕಟ್ಟಿಸಲಿಲ್ಲ ಎಂಬ ಬಗ್ಗೆ ನಾನು ಏನನ್ನೂ ಹೇಳುವುದಕ್ಕೆ ಈಗ ಅಪೇಕ್ಷೆ ಪಡುವುದಿಲ್ಲ. ಎಲ್ಲೆಲ್ಲಿ ಅಗತ್ಯವಾಗಿ ಬಸ್‌ಸ್ಟಾಂಡ್‌ಗಳನ್ನು ಕಟ್ಟಿಸಬೇಕು ಎಂಬ ಬಗ್ಗೆ ಒಂದು ಕಮಿಟಿಯನ್ನು ಮಾಡಿದ್ದೇವೆ. ಆದರಿಂದ ಇನ್ನು ಒಂದು ತಿಂಗಳಲ್ಲಿ ವರದಿ ಬರಬಹುದು. ಈಗ ಎಲ್ಲ ಕಡೆಗಳಲ್ಲಿಯೂ ಒಂದೇ ಸಲ ಕಟ್ಟಿಸುವುದಕ್ಕಾಗುವುದಿಲ್ಲ. ಕಮಿಟಿಯವರ ವರದಿ ಬಂದಮೇಲೆ ಅದಕ್ಕೆ ಒಂದು, ಎರಡು ಮೂರು ಎಂದು ಪ್ರಯಾರಿಟಿ ಕೊಟ್ಟು ಅದರಂತೆ ಕಟ್ಟಿಸುತ್ತೇವೆ. ಬಸ್‌ಗಳು ಓಡಾಡದೇ ಇರುವ ಕಡೆಗಳಲ್ಲಿ ಬಸ್‌ಸ್ಟಾಂಡ್ ಕಟ್ಟಿಸಿಕೊಡಬೇಕೆಂದು ಹೇಳುವ ಸಂದರ್ಭಗಳು ಸಹ ಇವೆ. ಆದ್ದರಿಂದ ಪ್ರಯಾರಿಟಿ ನೋಡಿಕೊಂಡು ಮಾಡಬೇಕಾಗುತ್ತದೆ. ಗೊರೂರಿನಲ್ಲಿಯೂ ಜಾಗ್ರತೆ ಬಸ್‌ಸ್ಟ್ಯಾಂಡ್ ಕಟ್ಟಿಸಿಕೊಡುತ್ತೇನೆಂದು ಭರವಸೆ ಕೊಡುತ್ತೇನೆ

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಬಸ್‌ಸ್ಟಾಂಡ್ ಕಟ್ಟಲಿಕ್ಕೆ ಅಸ್ತಿಭಾರ ಶಿಲೆ ಹಾಕಲಾಯಿತು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಎಷ್ಟು ದಿವಸಗಳಲ್ಲಿ ಈ ಕೆಲಸವಾಗುತ್ತದೆ, ಮತ್ತು ಈ ಕೆಲಸವಾಗದಿರುವುದಕ್ಕೆ ರಾಜಕೀಯದ ಅಡ್ಡಿ ಏನಾದರೂ ಇದೆಯೋ ?

ಶ್ರೀ ಅಜೀಜ್ ಸೇಟ್.—ಅಡ್ಡಿಯೇನೂ ಇಲ್ಲ. ಕಾಲ, ಶಾಸ್ತ್ರಗಳಿಗೆ ಚೆನ್ನಾಗಿತ್ತು ಎಂದು ಆ ಸಮಯದಲ್ಲಿ ಅಸ್ತಿಭಾರ ಶಿಲೆ ಹಾಕಿರಬಹುದು. ಪ್ಲಾನ್ ಅಂಡ್ ಎಸ್ಟಿಮೇಟ್ ಆಗದೆ ಇದುವರೆಗೆ ಆ ಕೆಲಸವಾಗಿಲ್ಲ. ಆದಷ್ಟು ಶೀಘ್ರದಲ್ಲಿಯೇ ಗೊರೂರಿನಲ್ಲಿ ಬಸ್ ನಿಲ್ದಾಣವನ್ನು ಕಟ್ಟಿಸಿಕೊಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್.—ಇಲಾಖೆಯ ಮಂಜೂರಾತಿ ಇಲ್ಲದೆ ಮಾಜಿ ಮಂತ್ರಿಗಳು ಇದಕ್ಕೆ ಅಸ್ತಿಭಾರ ಶಿಲೆಯನ್ನು ಹಾಕಿರುವುದರಿಂದ, ಅವರ ಮೇಲೆ ಏನಾದರೂ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಅಜೀಜ್ ಸೇಟ್.—ಅಲ್ಲಿ ಬಸ್‌ಸ್ಟಾಂಡ್ ಕಟ್ಟಬೇಕೆಂದು ಜಾಗ ತೆಗೆದುಕೊಳ್ಳಲಾಗಿದೆ. ಅಂದು ಶಾಸ್ತ್ರ, ಕಾಲ, ಘಳಿಗೆ ಚೆನ್ನಾಗಿತ್ತೆಂದು ಅಸ್ತಿಭಾರ ಶಿಲೆ ಹಾಕಿರಬಹುದು. ಈಗ ಅದನ್ನು ಕಟ್ಟಿಸಿಕೊಡುವ ಭಾರ ನನ್ನದು.

WATER SUPPLY TO SHORAPUR TOWN

745. SRI RAJAPID NAIK (Shorapur).—

Will the Minister for Municipal Administration be pleased to stat ;—

(a) whether work of Water Supply at Shorapur Town has been started ;

(b) if so, since when ;

(c) the period within which it is expected to be completed ?

SRI B. BASAVALINGAPPA (Minister for Municipal Administration).—

(a) Yes.

(d) 24th December 1971.

(c) By the middle of 1975.

SRI RAJA PID NAIK.—May I know the estimated cost of the work ?

†SRI B. BASAVALINGAPPA.—It is 30 laks 50 thousands and the technical sanction has now come to about Rs. 31,50,000.

SRI RAJA PID NAIK.—Whether it was come to the notice of the Government that progress of the work is very slow ?

SRI B BASAVALINGAPPA.—The work was actully started on 24th December 1971 and the progress so for made is to the extent of about Rs. 2.77,684.

SRI RAJA PID NAIK.—In view of the scarcity of drinking water in the town will the Government complete the work earlier than 1975 ?

SRI B. BASAVALINGAPPA.—We have a programme to complete this work in the month of March 1975, If we could complete it earlier we shall just pursue it.

SRI H. S. SIDDAPPA.—May I know under which scheme this work has been taken up ?

SRI B. BASAVALINGAPPA.—Uuder National Water Supply Scheme.

ಅಧ್ಯಕ್ಷರು.—ಶ್ರೀ ಜಿ ಪುಟ್ಟಸ್ವಾಮಿ ಅವರ ಪರವಾಗಿ ಶ್ರೀ ಕೆ. ಆರ್, ಶ್ರೀನಿವಾಸಲು ನಾಯುಡಂ ಅವರು ಪ್ರಶ್ನೆ ನಂ. ೬೮೮ ಕೇಳಬಹುದು.

THEFT CASES IN MUDIGERE TOWN

688 SRI K. R. SRINIVASALU NAIDU (Shantinager) on behalf of

SRI G. PUTTASWAMY (Mudigere).—

Will the Cheif Minister be pleased to state :—

(*a*) whether thefts are on the increase day by day in Mudigere Town ;

(*b*) whether it has come to the notice of Government that in one of the theft cases in Mudigere town, paddy was found but the police have failed to confiscate the same ;

(*c*) the number of theft cases occurred during 1971-72 and their places ;

(*d*) the number of cases where thefts have been committed by opening the tiles of the houses and the amount involved in such cases ;

(*e*) the action taken by Government to prevent such cases ?

SRI D. DEVARAJ URS (Chief Minister).—

(*a*) There is an increase in the number of thefts in Mudigere town in the year 1972 when compared with the number of thefts in the previous years as detailed below.—

Year	*Number of cases of thefts*
1970	5
1971	4
1972	6

(b) Paddy was stolen in only one case. But it could not be found. Hence, the question of failure to confiscate does not arise.

(c) *No. of cases* — *Places*

4 —
1. M. G. Road, Mudigere.
2. T. B. Mudigere.
3. M. G. Road, Mudigere.
4. Chatra Maidana, Mudigere.

(From 1-4-1971 to 31-3-1972).

(d) Two cases : In one case house-hold articles valued Rs. 126 were stolen on 9th September 1970.

In another case, cash Rs. 1,600 was stolen on 20th May 1972.

(e) 1. Night beats are intensified.

2. Movements of ex-convicts who were addicted to this modus operandi are closely watched and they are rounded up if they come to adverse notice.

3. Staff is drafted in mufti to keep watch, in important places, on strangers without ostensible means.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಇಲ್ಲಿ ಪ್ರಶ್ನೆಗೆ ಉತ್ತರವಾಗಿ ಭತ್ತವನ್ನು ಕಳುವು ಮಾಡಲಾಗಿದ್ದಿತು, ಆದರೆ ಅದನ್ನು ಪತ್ತೆ ಹಚ್ಚಲಾಗಲಿಲ್ಲ ಎಂದು ಹೇಳಿದ್ದೀರಿ. ಭತ್ತ ಕಳವಾಗಿರುವುದನ್ನು ತೋರಿಸುತ್ತೇನೆ ಎಂದು ಒಬ್ಬರು ಬಂದು ಹೇಳಿದ್ದು ನಿಜವೇ ?

†ಶ್ರೀ ಡಿ. ದೇವರಾಜ ಅರಸ್.—ಕಳ್ಳತನ ಯಾರು ಮಾಡಿರಬಹುದು ಎಂಬ ಬಗ್ಗೆ ಗುಮಾನಿ ಬಂದವನರನ್ನು ಹಿಡಿದು ಸರ್ಚ ಮಾಡಿದ್ದಾರೆ. ಆದರೆ ಭತ್ತ ಸಿಕ್ಕಲಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—೧೯೭೦,೧೯೭೧,೧೯೭೨ ಈ ಮೂರು ವರ್ಷಗಳಲ್ಲಿ ಪ್ರತಿ ವರ್ಷವೂ ಕಳ್ಳತನಗಳು ಜಾಸ್ತಿಯಾಗುತ್ತಿವೆ ಎಂಬುದು ಗೊತ್ತಾಗುತ್ತದೆ. ಇದರಿಂದ ಅಡ್ಮಿನಿಸ್ಟ್ರೇಷನ್ ಮೇಲೆ ಕೆಟ್ಟ ಪರಿಣಾಮ ಉಂಟಾಗುವುದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಅದು ಒಂದು ತರಹ ಇಂಟರ್‌ಪ್ರಿಟೇಷನ್ ಹೌದು. ಕಳ್ಳತನ ಆಗಿದ್ದನ್ನು ಹಿಡಿದಿದ್ದು ಒಂದು ತರಹ ಎಫಿಷಿಯೆನ್ಸಿ ಎಂದು ಹೇಳಬಹುದು.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈ ಪ್ರಶ್ನೆ ಕೇಳಿದ ನಂತರ ಅಲ್ಲಿಯ ಸೋಡಾ ಕಾರ್ಖಾನೆಯಲ್ಲಿ ಕಳ್ಳತನವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಡಿ. ದೇವರಾಜ ಅರಸ್.—ಅದು ಯಾವಾಗ ಆಗಿದೆ ಎಂಬ ವಿವರ ಈಗ ಇಲ್ಲ. ಅದನ್ನು ತರಿಸಿಕೊಂಡು ನೋಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕಳ್ಳತನ ಆದಾಗ ಆಹಾರ ಪದಾರ್ಥಗಳು ಸಿಕ್ಕಿದರೆ ಅದು ಕಳ್ಳತನದ್ದೋ ಅಥವಾ ಸ್ವಂತದ್ದೋ ಎಂದು ಪೋಲೀಸಿನವರಿಗೆ ಕಂಡುಹಿಡಿಯುವುದಕ್ಕಾಗದೆ ಹಾಗೆಯೇ ಬಿಟ್ಟುಬಿಡುತ್ತಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಅಂತಹ ಕೇಸ್‌ಗಳು ಏನಾದರೂ ಇದ್ದರೆ ಅದನ್ನು ನಮಗೆ ತಿಳಿಸಿದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಇದುವರೆಗೆ ಅಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ. ಮೂಡಿಗೆರೆ ಕೇಸ್‌ನಲ್ಲಿ ಸರ್ಚ್ ಮಾಡಿದ್ದಾರೆ. ಗುಮಾನಿ ಬಂದವರ ಮನೆಯಲ್ಲಿ ಎಲ್ಲ ಕಡೆ ಸರ್ಚ್ ಮಾಡಿದಾಗ ಮಾಲು ಸಿಕ್ಕಲಿಲ್ಲ. ಈಗ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ.

ಶ್ರೀ ಬಿ. ಬೈರಪ್ಪಾಜಿ.—ಮೊನ್ನೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ನಡೆಸಿದ ಪರೀಕ್ಷೆಗೆ ಸುಮಾರು ೩೦ ಸಾವಿರ ಜನಗಳು ಕುಳಿತುಕೊಂಡಿದ್ದರು ಆ ಪರೀಕ್ಷೆಗೆ ಇಂಗ್ಲೀಷಿನಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಕೊಟ್ಟಿದ್ದಾರೆ. ಸಾಮಾನ್ಯವಾಗಿ ಎಲ್ಲಾ ಪಬ್ಲಿಕ್ ಸರ್ವೀಸ್ ಕಮಿಷನ್ನಿನಲ್ಲಿಯೂ ಕೂಡ ಎರಡು ಭಾಷೆಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಕೊಡತಕ್ಕಂಥಾ ಪದ್ಧತಿ ಇದೆ ಆದರೂ ಸಹ ಮೊನ್ನೆ ನಡೆದ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಪರೀಕ್ಷೆಯಲ್ಲಿ ಇಂಗ್ಲೀಷ್‌ನಲ್ಲಿ ಮಾತ್ರ ಪ್ರಶ್ನೆ ಪತ್ರಿಕೆಗಳನ್ನು ಕೊಟ್ಟಿದ್ದರಿಂದ ಕನ್ನಡವನ್ನು ಸೆಕೆಂಡ್ ಲಾಂಗ್ವೇಜ್ ಆಗಿ ತೆಗೆದುಕೊಂಡಿರತಕ್ಕ ಅಭ್ಯರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಇನ್ನು ಮುಂದೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಪರೀಕ್ಷೆಗೆ ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಗಳಲ್ಲಿಯೂ ಪ್ರಶ್ನೆಪತ್ರಿಕೆಗಳನ್ನು ಪ್ರಿಂಟ್ ಮಾಡಿಕೊಡುವ ರೀತಿ ವ್ಯವಸ್ಥೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಅಧ್ಯಕ್ಷರು.—ಆ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಕೆ. ಎಸ್. ವೀರಪ್ಪಗೌಡ.—ಈ ಪ್ರಶ್ನೆಯಲ್ಲಿ (ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ಳಿಮ ಸರ್ಕಾರಿ ನೌಕರರಿಗೆ ಹೆಚ್ಚಿನ ವಯೋಮಿತಿಯನ್ನು ವಿಧಿಸಲು ಕಾನೂನಿನ ರೀತ್ಯಾ ಸಾಧ್ಯವಿಲ್ಲ ಎಂದು ಹೇಳಿದ್ದೀರಿ. ಲೋಕಲ್ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡಿಕೊಳ್ಳಬಾರದು ಎಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದಾರೆ. ಆದರೂ ಈಗಲೂ ಸಹ ಲೋಕಲ್ ಕ್ಯಾಂಡೀಡೇಟ್‌ಗಳನ್ನು ಸರ್ಕಾರದವರು ನೇಮಕ ಮಾಡಿಕೊಳ್ಳುತ್ತಿದ್ದಾರೆಯೇ ?

ಶ್ರೀ ಡಿ. ದೇವರಾಜಅರಸ್.—ಲೋಕಲ್ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡಿಕೊಳ್ಳಬಾರದು ಎಂದು ಸರ್ಕಾರದ ಆಜ್ಞೆ ಇದ್ದರೂ ಕೂಡ ಅದು ನಡೆದುಕೊಂಡೇ ಬರುತ್ತಿದೆ. ೧೯೭೧ನೇ ಇಸವಿಯಲ್ಲಿ ಕೂಡ ಕೆಲವು ಡಿಪಾರ್ಟ್‌ಮೆಂಟಿನಲ್ಲಿ ಲೋಕಲ್ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡಿದಂಥಾದ್ದು ಕನ್‌ಫರ್ಮ್ ಮಾಡಿದೆ. ನಿತ್ಯೀಚೆಗೆ ಲೋಕಲ್ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡುವುದು ತಪ್ಪು ಅದು ಸರಿಯಲ್ಲ ಎಂದು ಹೇಳಿದೆ. ಆದರೂ ಸಹ ವಾಸ್ತವವಾಗಿ ಅನೇಕ ಸಂದರ್ಭಗಳಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರ ಮುಖೇಣ ಅಪಾಯಿಂಟ್‌ಮೆಂಟ್‌ಗಳನ್ನು ಮಾಡುವುದಕ್ಕೆ ಆಗದೇ ಇದ್ದಾಗ ಕೆಲಸದ ಒತ್ತಡದ ದೃಷ್ಟಿಯಿಂದ ಕೆಲವು ಕಡೆ ಲೋಕಲ್ ಕ್ಯಾಂಡಿಡೇಟ್‌ಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಹೊಸಬರನ್ನು ಸೆಲೆಕ್ಟ್ ಮಾಡಿ ಲಿಸ್ಟ್ ಮಾಡಿ ಕಳುಹಿಸುವಂತಹ ಸಂದರ್ಭದಲ್ಲಿ ಲೋಕಲ್ ಆಗಿ ಅಪಾಯಿಂಟ್ ಆದಂತಹವರು ಕೆಲಸದಿಂದ ನಿವೃತ್ತರಾಗಬೇಕು.

ಕೆಲಸದಿಂದ ನೀವು ಇಲ್ಲ ಹೋಗಿ ಎಂದು ಹೇಳಿದಾಗ ಅವರು ಏನು ಹೇಳುತ್ತಾರೆ ಅಂದರೆ, ನಮ್ಮನ್ನು ನೀವು ಸರ್ಕಾರದ ಕೆಲಸ ನಿಲ್ಲಬಾರದು ಎಂದು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ತೆಗೆದುಕೊಂಡಿದ್ದೀರಿ. ಈಗ ೨—೩—೪ ವರ್ಷಗಳ ಸರ್ವೀಸ್ ಮಾಡಿಕೊಂಡು ಇದ್ದಕ್ಕಿದ್ದ ಹಾಗೆ ನಮ್ಮನ್ನು ತಳ್ಳಿ ಬಿಟ್ಟರೆ ನಮ್ಮ ಗತಿ ಏನು ಎಂದು ಆಗಿಂದಾಗ್ಗೆ ಮನವಿಮಾಡಿಕೊಳ್ಳುತ್ತಾ ಬಂದಿದ್ದಾರೆ. ಈ ಕಾರಣದಿಂದ ೧—೨—೩ ಸಾರಿ ಸಾವಿರಾರು ಲೋಕಲ್ ಕ್ಯಾಂಡಿಡೇಟ್ಸ್‌ಗಳ ನೇಮಕವನ್ನು ರೆಗ್ಯುಲರೈಸ್ ಮಾಡಿದರು. ಆ ಮೇಲೆಯೂ ಸಹ ಅನೇಕ ಸಾರಿ ನೇಮಕಮಾಡುವಂತಹ ಸಂದರ್ಭಗಳು ಬಂದವು. ಮತ್ತು ಪ್ರತಿಯೊಂದು ನೇಮಕವನ್ನು ಮಾಡುವಾಗ ಅದನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಕಳಿಸಿ ಅವರ ಸಲಹೆಯನ್ನು ತೆಗೆದುಕೊಂಡು ನೇಮಕ ಮಾಡುವುದೆಂದರೆ ವಾಸ್ತವಿಕವಾಗಿ ವ್ಯವಹಾರ ದೃಷ್ಟಿಯಲ್ಲಿ ಬೇಗನೆ ಆಗುವುದಿಲ್ಲ ಆದ್ದರಿಂದ ಕೆಲವು ಸಂದರ್ಭಗಳಲ್ಲಿ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ನೇಮಕ ಮಾಡಲೇ ಬೇಕಾಗುತ್ತದೆ. ಹೀಗೆ ಅವರನ್ನು ರೆಗ್ಯುಲರೈಸ್ ಮಾಡದ ಅವರಿಗೂ ಒಂದು ಚಾನ್ಸ್ ಈಗ ಕೊಟ್ಟು ನೀವು ಸಹ ಪುಲ್ಲೆಲ್ಲಿ ಸಾರ್ವತ್ರಿಕವಾಗಿ ಕೆಲಸಗಳಿಗೆ ಅರ್ಜಿಗಳನ್ನು ಕರೆಯುತ್ತಾರೆ ಮತ್ತು ಪರೀಕ್ಷೆಗಳನ್ನು ನಡೆಸುತ್ತಾರೆ, ಅಲ್ಲಿಗೆ ಅರ್ಜಿಗಳನ್ನು ಹಾಕಿ ಪರೀಕ್ಷೆಗಳಿಗೆ ಹೋಗಿ ಮತ್ತು ನೀವು ಏನು ಸರ್ವಿಸ್ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಬೇರೆ ಕಡೆ ಮಾಡಿರುತ್ತೀರೋ, ಅದನ್ನು ಪುನಃ ನೀವು ಹೊಸ ಹುದ್ದೆಗೆ ಸೆಲೆಕ್ಟ್ ಆದರೂ ಸಹ ನಿಮಗೆ ಕೊಡುತ್ತೇವೆ. ಎಂದು ಎಂದು ಹೇಳಿ ಅವರಿಗೆ ಒಂದು ಕನ್‌ಸೆಕ್ಷನ್ ಕೊಟ್ಟಿದೆ.

Sri D. B. Kalmanka.—My question No. 615 may kindly be taken up.

Madam Speaker.—Since the Hon'ble Minister for Industries has gone to Delhi, I shall take up This question on his return to Bangalore Now the Question Hour is over.

QUESTION FOR ANSWERS ON THE DAY (BUT NOT TAKEN UP).

GBANT OF LOANS TO RYOTS

634. SRI P. MUNIYAPPA (Mulbagal).—

13. Will the Minister for Revenue be pleased to staee;—

(a) whether it is proposed to grant loans to ryots at 3 per cent of interest for digging irrigation wells and to in stal pumpsets;

(b) if so, the aotion taken in this behalf ?

SRI N. HUTCHAMASTHY GOWDA.—(Minister for Revenue)

(a) No.

(b) Does not arise

EMPLOYMENT EXCHANGE AT DAVANGERE

731. SMT. C. NAGAMMA KESHAVA MURTHY.—(Davangere)

Will the Minister for Labour be pleased to state:—

(a) whether the proposal to start an independent Employment Exchange Office at Davangere it being taken up :

(b) if so, when it will be started ?

SRI AZEEZ SAIT. (Minister for Labour).—

(a) and (b) Yes. It is proposed to set up a Town Employment Exchange at Davangere, during, the current year.

CALLING ATTENTION TO MATTERS OF URGENT PUBLIC IMPORTANCE.

(i) *Re. Termination of Services of teacher of private College of Karnatake University*

SRI KONANDUR LINGAPPA (Thirthahalli) —I call the attention of the Ministes for Education to the possible termination of services of teachers of Private Colleges affiliated to Karnatak University.

SRI A. R. BADRINARAYAN (Minister for Education)

Sri I State as follows:—

The Hon'ble Member has stated that the private College Teachers are afraid that the respective Managements mey terminate their services. Unless their fears are well founded and maulfests itself in specific cases of termination, notaction can be taken. If some of these

(Sri A. R. Badrinarayan)

teachers are appointed against leave vacancies or deputation vacancies their term of appointment being co-terminus with either the leave vacancy or deputation vacancy, their services will have to be terminated so as to make room for the regular incumbents who have either returned from training or leave.

The Grant-in-Aid Code of Collegiate Education contemplates only two courses of action against the erringmanagements (a) to derecognise the institutions and (b) to stop or reduce the grants payable to institu tions. Experience has shown that whenever any of these courses are resorted to the sufferers are the teachers and the students concerned. It is with a view to suggest suiteble administrative and statutory remedies that the Government have appointed a 'one Man Commission of Enquiry' Concurrently, action is also being taken to amend the Grant-in-aid to ensure reasonable opportunity to the persons who are removed from service to defence their cases by prefering an appeal to the Director of Collegiate Education in the first instance.

ಶ್ರೀ ಕೋಣಂದೂರು ಲಿಂಗಪ್ಪ :—ತಮ್ಮ ಉತ್ತರದಲ್ಲಿ ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಷನ್ ಅವರಿಗೆ ಅಪೀಲ್ ಮಾಡಿಕೊಂಡರೆ, ಅವರಿಗೆ ಇರತಕ್ಕಂತಹ ಏನು ತೊಂದರೆಗಳು ಇವೆ, ಅವುಗಳನ್ನು ಇತ್ಯರ್ಥ ಮಾಡುತ್ತಾರೆಂದು ಹೇಳಿದ್ದಾರೆ. ಆದರೆ ಡೈರೆಕ್ಟರ್ ಆಫ್ ಕೊಲೇಜ್‌ಯೇಟ್ ಎಜುಕೇಷನ್ ಇವರಿಗೆ ಜುಲೈ ೨೧, ೧೯೭೧ನೇ ದಿನ ಶ್ರೀ ಎಸ್. ಸಿ. ಪಾಟೀಲ್ ಲೆಕ್ಚರರ್, ಆರ್ಟ್ಸ್ ಅಂಡ್ ಸಯನ್ಸ್ ಕಾಲೇಜ್, ಹಿಡ್‌ಕಲ್, ಬಿಜಾಪುರ—ಇವರು ಒಂದು ರೆಪ್ರಸೆಂಟೇಷನ್ ಕಳಿಸಿದ್ದಾರೆ. ಹಾಗೆಯೇ ಚಿಕ್ಕೋಡಿ ಕಾಲೇಜಿನ ಅನೇಕ ಉಪಾಧ್ಯಾಯರುಗಳನ್ನು ಬರ್ತಫ್ ಮಾಡಿದ್ದಾರೆ. ಅಷ್ಟೇ ಅಲ್ಲದೆ ಅಲ್ಲಿ ಖಾಸಗೀ ಕಾಲೇಜುಗಳಲ್ಲಿ ಉಪಾಧ್ಯಾಯರುಗಳಿಗೆ ಮ್ಯಾನೇಜ್‌ಮೆಂಟಿನವರು ನಾನಾ ರೀತಿಯ ಕಿರುಕುಳ ಕೊಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಎಂದು ಕೇಳುತ್ತೇನೆ. ಅಲ್ಲದೆ ಅಲ್ಲಿ ಅವರಿಗೆ ಏನು ತೊಂದರೆ ಇದೆ, ಅದರ ಬಗ್ಗೆ ಏನೊಂದು ರೆಪ್ರಸೆಂಟೇಷನ್ ಕಳಿಸಿದ್ದಾರೆ ಅದನ್ನು ಗಮನಕ್ಕೆ ಇವರು ತೆಗೆದುಕೊಂಡಿಲ್ಲವೆಂದು ಇವರು ಕೊಟ್ಟ ಉತ್ತರದಿಂದ ಗೊತ್ತಾಗುತ್ತದೆ. ಆದ್ದರಿಂದ ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಅವರ ತೊಂದರೆಗಳನ್ನು ನಿವಾರಿಸುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಎ ಆರ್. ಬದರಿನಾರಾಯಣ್ : ಕಾನೂನಿಗೆ ವಿರುದ್ಧವಾಗಿ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಕ್ರಮ ತೆಗೆದುಕೊಂಡಿದ್ದರೆ, ಅವರ ಮೇಲೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

(ii) re : Closure of Schools in Hosanagar *taluk.*

SRI S. M. SHEERANALY CHANDRASHEKAR (Hosanagar) : I call the attention of the Minister for Education to the closure of schools in Hosangagar Taluk due to non-appointment of teachers.

SRI A. R. BADRINARAYAN (Minister for Education) ; Sir I Statei as follows :

It has been ascertained that there were 69 vacancies in this taluk. These posts could not be filled up immediately; as orders appointing the District Level Recruitment Committees to appoint Primary School Teachers were issued only in February 1972 *vide* Government Order No. ED 289 DPI 71 dated 9th February 1972. Immediately after issue

of the Government Order action has been taken to fill up these posts. The matter has been attdneed to on top-priority basis and appointment orders have already issued for all these posts.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ಇವತ್ತು ಬೆಳಿಗ್ಗೆ ಕೂಡ ಹೊಸನಗರದಿಂದ ನನಗೆ ಟ್ರಂಕ್‌ಕಾಲ್ ಬಂದಿದೆ. ಇನ್ನೂ ಕೆಲವು ಸ್ಕೂಲುಗಳ ಬಾಗಿಲುಗಳನ್ನು ತೆಗೆಯಲಿಲ್ಲವೆಂದು ಹೇಳಿದ್ದಾರೆ. ಅದರ ಬಗ್ಗೆ ನಾನು ಜಾಯಿಂಟ್ ಡೈರೆಕ್ಟರನ್ನು ಕೇಳಿದಾಗ ಲೋಕಲ್ ಕಾಂಡಿಡೇಟ್ ಆಗಿ ನೇಮಕ ಮಾಡಿ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಪರ್ಮಿಷನ್ ಕೇಳಿ ಬರೆದಿದ್ದೇವೆ. ಅಲ್ಲಿಂದ ಬಂದ ಕೂಡಲೆ ನೇಮಕ ಮಾಡುತ್ತೇವೆಂದು ಹೇಳಿದರು. ಆದ್ದರಿಂದ ನೀವು ಯಾವಗ ಪರ್ಮಿಷನ್ ಕೊಡುತ್ತೀರಿ ಮತ್ತು ಯಾವಾಗ ನೇಮಕ ಮಾಡಿಸುತ್ತೀರಿ ?

SRI A. R. BADRINARAYAN .—According to my information, appointment orders have already been issued ; but according to Hon. Member's information if there are any shortcomings, they will be attended to immediately.

ಶ್ರೀ ಕೋಣಂದೂರು ಲಿಂಗಪ್ಪ :—ತಾವು ಆರ್ಡರ್ಸ್ ಇಷ್ಯೂ ಮಾಡಿದ್ದೇವೆಂದು ಹೇಳುತ್ತಿದ್ದೀರಿ· ಆದರೆ ಈಗಾಗಲೇ ನೂರಾರು ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಇದರಿಂದ ಅಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಕೊನೆಗೆ ಪೋರ್ಷನ್ ಪೂರ್ತಿಯಾಗದೆ ಫೇಲ್ ಆಗುವ ಸಂದರ್ಭ ಬರುತ್ತದೆ. ಆದ್ದರಿಂದ ತಾವು ೨೪ ಗಂಟೆಗಳಲ್ಲಿ ಉಪಾಧ್ಯಾಯರುಗಳು ಕೆಲಸಕ್ಕೆ ಹಾಜರಾಗಬೇಕೆಂದು ಆದೇಶವನ್ನು ಆದಷ್ಟು ಜಾಗ್ರತೆಯಾಗಿ ಕೊಡುತ್ತೀರಾ ?

SRI A. R. BADRINARAYAN. District Yes.

(iii) Re : rise in Priee of Jowan in Bijapur District

SRI M. M. SAJJAN (Muddebihal) :—I call the attention of the Minister of State for Food and Civil Supplies to the rise in price of jowar in Bijapur District.

SRIMATI E. E. VAZ (Minister of State for Food and Civil Supplies) .—I State as follows :

Calling Attention : Notice No. 166 by Shri M. M. Sajjan, M.L.A.	"I call the attention of the Minister of State for Food and Civil Supplies to the serious situation arisen in Bijapur District, due to the rising price of Jowar under the scarcity conditions and also due to the fact that Jowar is carried out of Bijapur District by merchants for selling in adjoining States, *viz.*, Maharshtra etc."

STATEMENT

A target of 30,000 tonnes of jowar was fixed for procurement for the crop year 1971-72, commencing from September, 1971. Due to all round failure of crops in the major jowar growing areas of the State and intervention of General Election, not much jowar could be

(Smt. E. E. Vaz)

procured. The quantity of jowar procured during the last khariff season is as follows :

			In Tonnes
(1)	Belgaum	...	551
(2)	Dharwar	...	Nil
(3)	Bijapgr	...	Nil
(4)	Gulbarga	...	8
(5)	Raichur	...	Nil
(6)	Bidar	...	143
	Total khariff Jowar procured.		702 tones

Compared to the jowar precured during the last khariff season, procurement of jowar during the rabi season has been somewhat better. A total quarntity of 1,957 tonnes of rabi jowar has been procured as on 19th July 1972. The District-wise procurement of rabi jowar is as follows :—

(1)	Belgaum	...	Nil
(2)	Dharwar	...	32 tonnes
(3)	Bijapur	...	795 ,,
(4)	Raichur	...	105 ,,
(5)	Gulbarga	...	1,025 ,,
(6)	Bidar	...	Nil
	Total Rabi jowar procured		1,957 tonnes

It is seen from the above while the procurement of jowar in Bijapur District during the last khariff season is nil, a total quantity of 800 tonnes of robi jowar has been procured so far in Bijapur District and the sam would be released for local cousumption for August, 1972 and till then, bajra, wheat and rice are being issued.

The rise in the paice of jowar is obnormal from the 1st week of July, 1972 mainly on account of failure of khariff crop in Bijapur District.

Regarding smuggling of jowar, the Superintendent of Police has issued strict instructions to the subordinate officers to be more vigilant, to see that the smuggling of jowar out of the State is put an end to and to book the offenders.

2-00 P.M.

ಶ್ರೀ ಎಂ. ಎಂ. ಸಜ್ಜನ್.—ಜೋಳದ ಅಭಾವವನ್ನು ಕಡಿಮೆ ಮಾಡುವುದಕ್ಕೆ ಯಾವ್ಯಾವ ಕ್ರಮಂ ಗಳನ್ನು ಕೈಗೊಂಡಿದೆ ?

Smt. E. E. VAZ.—It is under the active consideration of the Government.

SRI M. M. SAJJAN.—There are serious drought conditions in Bijapur District and the Commodities are being carried to other places and sold at high prices. Why is the Government not taking serious measures against such smugglers and to bring down prices immediately?

Smt. E. E. VAZ.—We are taking active measures to book the offenders.

Controlling the rise in prices of food materials

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷಣಿಯವರೇ, ಸುಮಾರು 2 ದಿವಸಗಳಿಂದಲೂ ನಾನು ಇಲ್ಲಿ ಹೇಳುತ್ತಿದ್ದೇನೆ. ಮಾನ್ಯ ಆಹಾರ ಮಂತ್ರಿಗಳು ಆಹಾರ ಪದಾರ್ಥಗಳ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದರು. ಇದುವರೆಗೆ ಅವರು ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಬೆಂಗಳೂರು ಜನತೆಗೆ ಇದರಿಂದ ತುಂಬಾ ತೊಂದರೆಯಾಗಿದೆ. ಹೊಸ ಸರ್ಕಾರಕ್ಕೆ ಯಾವ ತರಹದಲ್ಲಿಯೂ ಅಪಾದನೆ ಬಾರದೇ ಇರಲಿ ಎಂದು ಅವರು ಸೂಕ್ತ ಕ್ರಮವನ್ನು ತೆಗೆದುಕೊಂಡರೆ ಒಳ್ಳೆಯದು. ಆದರೆ ಅವರು ಇದುವರೆಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಆದ್ದರಿಂದ ಸರ್ಕಾರದವರಲ್ಲಿ ನನ್ನ ಬೇಡಿಕೆ ಏನೆಂದರೆ, ಈಗಲಾದರೂ ಅದರ ಬಗ್ಗೆ ಸೂಕ್ತ ಕ್ರಮವನ್ನು ಜಾಗ್ರತೆಯಾಗಿ ತೆಗೆದುಕೊಳ್ಳಬೇಕು. ಅದರ ಬಗ್ಗೆ ಸರ್ಕಾರದ ಆಜ್ಞೆಯನ್ನು ಹೊರಡಿಸಬೇಕು. ಕ್ರಮ ಯಾವಾಗ ತೆಗೆದುಕೊಳ್ಳುತ್ತಾರೆಂಬುದನ್ನು ನನಗೆ ತಿಳಿಸುವುದಕ್ಕೆ ಆಗುತ್ತದೆಯೇ ?

ಅಧ್ಯಕ್ಷರು : ತಾವೇನಾದರೂ ಸ್ಟೇಟ್‌ಮೆಂಟ್ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್ : ಅದನ್ನು ನಾಳೆ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ : ಕೆ.ಜಿ.ಎಫ್. ಕಾಲೇಜಿನ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದಾರೆಂದು ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಮಂತ್ರಿಗಳು ಇಲ್ಲಿದ್ದಾರೆ. ಅವರು ಹೇಳಬೇಕು.

ಅಧ್ಯಕ್ಷರು ; ಅವರಿಗೆ ವರದಿ ಬಂದಮೇಲೆ ಹೇಳುತ್ತಾರೆ. ನಾಳೆ ಅದನ್ನು ಅವರು ಹೇಳುತ್ತಾರೆ.

Replies by Ministers to be in Kannada

ಶ್ರೀ ಎಸ್. ವೈ. ಪಾಟೀಲ್.—ಈಗ ಆಹಾರದ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಅಪ್ಪಣೆ ಕೊಡಿಸಿದರು. ಏಕೋ ಕನ್ನಡದಲ್ಲಿ ಮಾತನಾಡುವುದೇ ಹೋಗಿದೆ. ಪ್ರಶ್ನೆ ಕೇಳುವವರೂ ಇಂಗ್ಲಿಷ್‌ನಲ್ಲಿ ಕೇಳುತ್ತಿದ್ದಾರೆ. ಉತ್ತರ ಕೊಡುವವರೂ ಸಹ ಇಂಗ್ಲಿಷ್‌ನಲ್ಲಿ ಉತ್ತರ ಹೇಳುತ್ತಿದ್ದಾರೆ. ಇವರಿಗೆ ಕನ್ನಡ ಬರುವುದಿಲ್ಲವೇ ? ಅನಿವಾರ್ಯವಾಗಿ ಯಾರ್ಯಾರಿಗೆ ಕನ್ನಡ ಮಾತನಾಡಲು ಬರುವುದಿಲ್ಲವೋ ಅಂತಹವರು ಇಂಗ್ಲಿಷ್‌ನಲ್ಲಿ ಮಾತನಾಡಲಿ. ಈಗ ಅವರು ಏನು ಹೇಳಿದರೋ ನನಗೆ ತಿಳಿಯಲಿಲ್ಲ. ನಾವು ಇಲ್ಲಿ ಏನು ಕೇಳಬೇಕೋ ಅದು ಗೊತ್ತಾಗಲಿಲ್ಲ. ಇದು ಅಪಮಾನವಾಗುತ್ತದೆ. ನಿಮ್ಮಲ್ಲಿ ಯಾರಿಗೆ ಕನ್ನಡ ಬರುವುದಿಲ್ಲವೋ ಅವರು ಅನಿವಾರ್ಯವಾಗಿ ಇಂಗ್ಲಿಷ್‌ನಲ್ಲಿ ಮಾತನಾಡಬಹುದು. ಕನ್ನಡ ಬರುವವರು ಇಂಗ್ಲಿಷ್‌ನಲ್ಲಿ ಮಾತನಾಡಿದರೆ ಅಪಮಾನವಾಗುವುದಿಲ್ಲವೇ ? matter expunged as ordered by the chair.

ಅಧ್ಯಕ್ಷರು.—ಅವರು ಇಂಗ್ಲಿಷ್‌ನಲ್ಲಿಯೂ, ಕನ್ನಡದಲ್ಲಿಯೂ ಮಾತನಾಡಬಹುದು ಅದು ಭಾಷೆ. ಎಲ್ಲದಕ್ಕೂ ಕರುಳು ಹಿಡಿದುಕೊಂಡು ಮಾತನಾಡಿದರೆ ಒಳ್ಳೆಯದು.

ಶ್ರೀ ಎಸ್. ವೈ. ಪಾಟೀಲ್.—ಏಕೆ ಅಪಮಾನದ ಮಾತು ?

ಅಧ್ಯಕ್ಷರು.—ಯಾವುದು ಅಪಮಾನದ ಮಾತು, ಯಾವದು ಅಪಮಾನದ ಮಾತಲ್ಲವೆಂಬುದು ನನಗೆ ಗೊತ್ತಾಗುತ್ತದೆ.

ಶ್ರೀ ಎಸ್. ವೈ. ಪಾಟೀಲ್.—ಅವರು ಕನ್ನಡದಲ್ಲಿ ಏಕೆ ಮಾತನಾಡಬಾರದು ?

ಅಧ್ಯಕ್ಷರು.—ಸರ್ವೇಸಾಧಾರಣವಾಗಿ ಮಾತನಾಡುವಾಗ ಶಬ್ದದಲ್ಲಿ ಮಾತನಾಡವುದನ್ನು ಅಕ್ಷನಿ ನಲ್ಲಿಯೂ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಷುಗರ್ ಕಂಪ್ಲೇಂಟ್ ಇರತಕ್ಕವರು ಈ ಸಭೆಯಲ್ಲಿ ಕೆಲವರು ಇದ್ದಾರೆ.

ಅಧ್ಯಕ್ಷರು.—ಇಲ್ಲಿ ಮಾತನಾಡಬೇಕಾದರೆ ಸ್ವಲ್ಪ ಹತೋಟಿಯಿಂದ ಮಾತನಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ತಮಗೆ ಒಂದು ವಿಷಯವನ್ನು ಕೇಳುತ್ತೇನೆ. ಮಾನ್ಯ ಶ್ರೀ ಪಾಟೀಲ್ ಅವರು ಉದ್ವೇಗವಾಗಿ ಮಾತನಾಡಿದರು. Matter expunger as ordered by the chair.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ತಾವು ಹೆಂಗಸರ ಪರವಾಗಿ ಮಾದ ವಾತಿ, ನನ್ನ ಅಭ್ಯಂತರವಿಲ್ಲ. ಆದರೆ, ಕನ್ನಡ ಬರತಕ್ಕವರು ಏಕೆ ಕನ್ನಡದಲ್ಲಿ ಮಾತನಾಡಬಾರದು ?

ಶ್ರೀ ಎಸ್. ವೈ. ಪಾಟೀಲ್.—ನಾನೂ ಅದನ್ನೇ ಹೇಳುತ್ತಿರುವುದು. ಯಾರಿಗೆ ಕನ್ನಡ ಮಾತನಾಡುವುದಕ್ಕೆ ಬರುವುದಿಲ್ಲವೋ ಅವರು ಬೇರೆ ಯಾವ ಭಾಷೆಯಲ್ಲಿ ಬೇಕಾದರೂ ಮಾತನಾಡಲಿ. ಆದರೆ, ಕನ್ನಡ ಬರತಕ್ಕವರು ಮಾತ್ರ ಕನ್ನಡದಲ್ಲೇ ಮಾತನಾಡಬೇಕೆಂದು ಹೇಳುತ್ತೇನೆ.

PURCHASE OF PRIZE WINNING LOTTERY STICKETS

SRI H. S. SIDDAPPA.—Madam Speaker, Before you go to the next subject, I want to submit a point because the Chief Minister is here and that is about the black money which the Government knowingly or unknowingly is allowing. The price winning lottery tickets are being purchased by black-money people paying a higher rate.

ಅಧ್ಯಕ್ಷರು.—ಈ ವಿಚಾರ ಬಹಳ ದಿನಗಳಿಂದಲೂ ಕೇಳಿಬರುತ್ತಿದೆ.

SRI H. S. SIDDAPPA.—To avoid this, I would like to suggest that when the lottery tickets are sold, purchaser's name should be entered. Otherwise, lakhs of rupees are taken over by black-money people and they convert it into white money very easily by paying a thousand rupees more. To avoid that, I would request the Chief Minister to see that it is regularised so that black-money is not converted into white money and Government income is not lost and the encouragement to black-market is taken away. I wanted to draw the attention of the Hon'ble Chief Minister to this matter.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಲಾಟರಿಯಲ್ಲಿ ಬಹುಮಾನ ಬರತಕ್ಕ ವಿಚಾರದಲ್ಲಿ ಕೆಲವು ಅಕ್ರಮಗಳು ನಡೆಯುತ್ತಿವೆಯೆಂದು ಅವರತ್ತ ಮಾನ್ಯ ಸದಸ್ಯರು ಸರ್ಕಾರದವರ ಗಮನವನ್ನು ಸೆಳೆದದ್ದು ಒಳ್ಳೆಯದೇ. ಆದರೆ ಶ್ರೀ ಪಾಟೀಲರು ಈಗೇನೋ ಗಂಭೀರವಾಗಿ ಕುಳಿತಿದ್ದಾರೆ. ಯಾರೇ ಆಗಲಿ ಇಂಥ ವಿಚಾರದಲ್ಲಿ ಮನಸ್ಸನ್ನು ಅಷ್ಟೊಂದು ಕೆಡಿಸಿಕೊಳ್ಳಬಾರದು. ನಮಗೆ ಭಾಷೆಯ ಮೇಲೆ ಅಭಿಮಾನವಿರಬೇಕು. ಆದರೆ ಅದು ತೀರಾ ಅತಿರೇಕಕ್ಕೆ ಹೋಗಬಾರದು. ಆದರೆ ಮಾನ್ಯ ಅಧ್ಯಕ್ಷರು ಈ ಸಭೆಯ ಹಾಗೂ ಮಾನ್ಯ ಸದಸ್ಯರುಗಳ ಘನತೆ ಗೌರವಗಳನ್ನು ಬಹಳ ಚೆನ್ನಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ. ಮಾನ್ಯ ಅಧ್ಯಕ್ಷರು ಹೇಳಿದ್ದೆಲ್ಲವೂ ವಾಸ್ತವವಾದ ಅಂಶಗಳು

ಇನ್ನು ಮಾನ್ಯ ಸದಸ್ಯರಾದ ಶ್ರೀ ಸಿದ್ದಪ್ಪನವರು ಲಾಟರಿ ಟಿಕೆಟುಗಳಲ್ಲಿ ಅವನ್ನ ಯಾರಿಗೆ ಮಾರಾಟ ಮಾಡಲಾಗುತ್ತದೆಯೋ ಅವುಗಳಲ್ಲಿ ಕೊಳ್ಳತಕ್ಕವರ ಹೆಸರನ್ನು ನಮೂದಿಸಬೇಕೆಂದು ಸಲಹೆ ಮಾಡುತ್ತಿದ್ದಾರೆ. ಆದರೆ ಇದನ್ನು ಕೂಡಲೇ ಮಾಡುತ್ತೇನೆಂದು ಅಷ್ಟು ಹಗುರವಾಗಿ ಹೇಳುವುದಕ್ಕಾಗುವುದಿಲ್ಲ, ಕಾರಣ ಕೆಲವರು ಈಗಾಗಲೇ ೧೫-೨೦ ಸಾವಿರ ಟಿಕೆಟ್ಟುಗಳನ್ನು ಕೊಂಡು ಇಟ್ಟುಕೊಂಡಿರುತ್ತಾರೆ. ತಾವೀಗ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದೀರಿ ಇದನ್ನು ನಾನು ಕೂಡಲೆ ಎಗ್ಸಾಮಿನ್ ಮಾಡಿಸುತ್ತೇನೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ನಾನು ಒಂದು ವಿಷಯ ಹೇಳಬೇಕಾಗಿದೆ. ನಾಲ್ಕು ಜನ ಸೀಮೆಎಣ್ಣೆ ಸುರಿದುಕೊಂಡು ಸತ್ತಿದ್ದಾರೆ. ಇಲ್ಲಿ ಇವರು ಸಮಾಜವಾದ ತರುತ್ತೇವೆಂದು......,

ಅಧ್ಯಕ್ಷರು.—ಬಾಳುವುದಕ್ಕೆ ಇಷ್ಟವಿಲ್ಲದವರು ಸತ್ತರೆ ಅದಕ್ಕೆ ಇಲ್ಲಿ ಚರ್ಚೆ ಮಾಡಬೇಕೇ ?

ಆ ವಿಚಾರ ಮಾನ್ಯ ಸದಸ್ಯರು ತಿಳಿದುಕೊಂಡಿರುವುದಕ್ಕಿಂತ ಹೆಚ್ಚಿಗೆ ನಾನು ತಿಳಿದುಕೊಂಡಿದ್ದೇನೆ. ಆ ಮನೆಯ ಯಜಮಾನ ವ್ಯಾಪಾರದಲ್ಲಿ ಎಲ್ಲವನ್ನೂ ಕಳೆದುಕೊಂಡ ಹಾಗೆ ವ್ಯಾಪಾರದಲ್ಲಿ ನಷ್ಟವಾದ ಮೇಲೆ ಇನ್ನೇತಕ್ಕೆ ಜೀವಿಸಿಕೊಂಡಿರಬೇಕು, ಬದುಕುವುದೇ ಬೇಡ ಎಂದು ಹಾಗೆ ಮಾಡಿಕೊಂಡಿದ್ದಾನೆ. ಆತನಿಗೆ ವ್ಯಾಪಾರ ಮಾಡು ಎಂದು ಯಾರೂ ಹೇಳಲಿಲ್ಲ ಆ ವ್ಯಾಪಾರದಲ್ಲಿ ನಷ್ಟಮಾಡಿಕೋ ಎಂದು ಯಾರೂ ಆತನಿಗೆ ಹೇಳಲಿಲ್ಲ. ಅವರವರ ಸ್ವಾತಂತ್ರ್ಯದಲ್ಲಿ ನಡೆದ ವ್ಯವಹಾರದಲ್ಲಿ ಈ ದುರಂತವಾಗಿದೆ. ಸದ್ಯಕ್ಕೆ ಈ ಸದನದಲ್ಲಿ ಆ ವಿಷಯ ಚರ್ಚೆ ಮಾಡಿ ಮಾಡುವುದಾದರೂ ಏನು ?

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ಇದು ತೀರಾ ನಾಚಿಗೆಗೇಡಿನ, Matter not recorded or expuged as ordered by the chair.

ಅಧ್ಯಕ್ಷರು :—ಮಾನ್ಯ ಸದಸ್ಯರು ಯಾವ ವಿಷಯಗಳನ್ನು ಹೇಳಿದರೂ ರೆಕಾರ್ಡ್ ಮಾಡಬಾರದು.

CONDITIONS AT THE GOVERNMENT HOSPITALS

(MADAM SPEAKER on legs)

ಶ್ರೀ ವಾಟಾಳ್ ನಾಗರಾಜ್.—ನಾನು ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿನ ದೃಶ್ಯ ನೋಡಿದರೆ ಕಣ್ಣೀರು ಬರುತ್ತದೆ. ನಮ್ಮ ಪರವಾಗಿ ವಿರೋಧ ಪಕ್ಷದ ನಾಯಕರಾದರೂ ಕೇಳಬೇಕು. ಈ ರೀತಿ ಅನೇಕ ಸಂಸಾರಗಳು ದುರ್ಗತಿಗೀಡಾಗಿವೆ. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕು. ಇದಕ್ಕೆ ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಡಬೇಕು ಎಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಹೀಗೆ ಅನೇಕ ಸಂಸಾರಗಳು ಹಾಳಾಗಿವೆ, ಹೊಟ್ಟೆಬಟ್ಟೆಗಿಲ್ಲದೆ ಅನೇಕರು ಸಾಯುತ್ತಿದ್ದಾರೆ. ಅವರಿಗೆ ರಕ್ಷಣೆ ಕೊಡಬೇಕು, ಈ ವಿಚಾರವನ್ನು ಲಘುವಾಗಿ ತೆಗೆದುಕೊಳ್ಳಬಾರದು, ನನಗೆ ಸಂಕಟವಾಗಿದೆ. ಮುಖ್ಯ ಮಂತ್ರಿಗಳು ಒಂದು ಹೇಳಿಕೆ ಕೊಡಬೇಕು. ಇದು ಪ್ರಾಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು.—ಮುಖ್ಯ ಮಂತ್ರಿಗಳ ಹತ್ತಿರವೇ ಹೋಗಿ ತಾವು ಕೇಳಿ, ಈಗ ಕುಳಿತುಕೊಳ್ಳಿ, ತಾವು ಕುಳಿತುಕೊಳ್ಳದಿದ್ದರೆ ಕಷ್ಟವಾಗುತ್ತದೆ. ತಾವು ಕುಳಿತುಕೊಳ್ಳದಿದ್ದರೆ ನಿಮ್ಮನ್ನು ಹೊರಗೆ ಕಳಿಸ ಬೇಕಾಗುತ್ತದೆ. ಇನ್ನು ಎರಡು ದಿವಸ ಮಾತ್ರ ಅಧಿವೇಶನವಿದೆ, ಸುಮ್ಮನೆ ಗಲಾಟೆ ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್.—ನೀವು ಏನು ಬೇಕಾದರೂ ಮಾಡಿ.

MADAM SPEAKER.—Will Sri Vatal Nagaraj withdrw from the House...... ? Will be withdraw from the House immediately ;...... I am going to name him now ..... Will he please sit down ?

(SRI VATAL NAGARAJ aresumed his seat.)

SALE OF FERTILIZERS BY THE MADRAS FERTRILIZERS COMPANY

ಶ್ರೀ ಟಿ. ಎಂ. ಮಂಜುನಾಥ್.—ತಾಲ್ಲೂಕು ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಸೊಸೈಟಿಯವರು ರೈತರಿಗೆ ಗೊಬ್ಬರ ಸರಬರಾಯಿ ಮಾಡಿದ್ದಾರೆ. ಅದು ಮದ್ರಾಸಿನ ಫರ್ಟಿಲೈಜರ್ಸ್ ಕಂಪನಿಯಿಂದ ಬಂದಿರುವುದು. ಅದರಲ್ಲಿ ಒಂದು ಕೆಜಿಗೆ ಸುಮಾರು 200 ಗ್ರಾಂ ಮರಳು ಬೆರಕೆಯಾಗಿದೆ. ಒಂದು ಟನ್ ಗೊಬ್ಬರಕ್ಕೆ ಬೆರಸಿರುವ ಮರಳಿನ ಬೆಲೆ ಸುಮಾರು ನೂರು ರೂಪಾಯಿ ಆಗಬಹುದು. ಗೊಬ್ಬರದ ಮಾಟೆ ತರಿಸಿ ಪರೀಕ್ಷೆ ಮಾಡಬೇಕು. ಅನ್ಯಾಯವನ್ನು ತಪ್ಪಿಸಬೇಕು ಎಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

(ಶ್ರೀ ಟಿ. ಎಂ. ಮಂಜುನಾಥ್.—)

ಇನ್ನೊಂದು ೧೬ನೇ ಜೂನ್ ೧೯೭೨ರ ಡೆಕನ್ ಹೆರಾಲ್ಡ್‌ನಲ್ಲಿ Case against city advocate ಎಂದಿದೆ. ಸೆನೇಟ್ ಮೆಂಬರೊಬ್ಬರು ಹಿಂದಿನ ಎಲ್. ಸಿ. ಮೆಂಬರ್ ಮೇಲೆ ಕೇಸು ಹಾಕಿದ್ದಾರೆ. ಅದರ ಬಗ್ಗೆ ಮುಖ್ಯ ಮಂತ್ರಿಗಳೋ ಏನೋ ಪ್ರಭಾವ ಬೀರಿದ್ದಾರೆ ಎಂದು......

ಅಧ್ಯಕ್ಷರು.—ಮಾನ್ಯ ಸದಸ್ಯರು ಒಂದು ವಿಷಯ ಹೇಳುತ್ತೇನೆಂದು ಇನ್ನೊಂದು ವಿಷಯ ಹೇಳುತ್ತಿದ್ದಾರೆ.

SRI D. DEVARAJ URS.—I am not prapared to make allowance for such allegations without giving notice. Without letting me know what it is ; if the Hon. Member goes on making allegations, it should not be allowed. This is not the way for the member to raise it. I resent the allegations.

ಶ್ರೀ ಟಿ. ಎಂ. ಮಂಜುನಾಥ್.—ನನ್ನ ಕ್ಷೇತ್ರದಲ್ಲಿ ರೆವೆನ್ಯೂ ಮಂತ್ರಿಗಳು ಪ್ರವಾಸ ಮಾಡಿದಾಗ ರಾತ್ರಿ ೧೦ ಗಂಟೆಯಲ್ಲಿ ರಿಕಾರ್ಡ್ ನೋಡಿದರು, ಹೀಗಾದರೆ ನಮಗೆ ರಕ್ಷಣೆಯೇನು ?

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳಿಲ್ಲ, ಅವರು ಬರಲಿ.

ಶ್ರೀ ಕೋಣಂದೂರು ಲಿಂಗಪ್ಪ.—ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್ ಎಂದಿರುವುದರಲ್ಲಿ ಕರ್ನಾಟಕದವರಿಗೆ ಯಾವುದೇ ಕೆಲಸ ಕೊಡುತ್ತಿಲ್ಲ, ಪ್ರತಿಯೊಂದು ಸಣ್ಣಪುಟ್ಟ ಕೆಲಸಕೂ ಮದ್ರಾಸಿನವರನ್ನೇ ಕರೆಸಿ ಅವರಿಗೆ ಕೆಲಸ ಕೊಡುತ್ತಿದ್ದಾರೆ.

ಅಧ್ಯಕ್ಷರು.—ಇಂಡಸ್ಟ್ರೀಸ್ ಮಿನಿಸ್ಟರ್ ಬರಲಿ.

DISCUSSION FOR SHORT DURATION

Re : The Palacs of the former Maharaja of Mysore.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಸನ್ಮಾನ್ಯ ಸಭಾಧ್ಯಕ್ಷರೇ, ಮಹಾರಾಜರ ಮೂರು ಅರಮನೆಗಳು ಮೈಸೂರು, ಬೆಂಗಳೂರು ಮತ್ತು ಊಟಿಯಲ್ಲಿವೆ. ಇದರ ಬಗ್ಗೆ ಈಗಾಗಲೇ ಈ ಸಭೆಯಲ್ಲಿ ಕೆಲವರು ಮಾತನಾಡಿದ್ದಾರೆ. ಈ ವಿಷಯ ಬಹಳ ಮುಖ್ಯವಾದದ್ದು ಅನಿಸುವುದು. ಏಕೆಂದರೆ ವೈಯಕ್ತಿಕವಾಗಿ ಒಬ್ಬ ರಾಜರ ವಿಷಯದಲ್ಲಿ ಮಾತನಾಡಬೇಕೆಂದಿಲ್ಲ. ಒಂದು ತತ್ವದ ಆಧಾರದ ಮೇಲೆ ಈ ವಿಷಯ ಅತಿ ಮುಖ್ಯವಾದುದು. ಸರಕಾರದವರು ಸಮಾಜವಾದವನ್ನು ಜಾರಿಗೆ ತರುವುದಾಗಿ ಘೋಷಿಸಿದ್ದಾರೆ. ಆ ತತ್ವಕ್ಕನುಗುಣವಾಗಿ ಈ ಸಂಬಂಧವಾದ ವ್ಯವಹಾರ ನಡೆದಿದೆಯೇ, ಅದಕ್ಕನುಗುಣವಾಗಿ ನಡೆಯಬೇಕಾದರೆ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂಬ ಅಂಶಗಳೆಲ್ಲಾ ಇದರಲ್ಲಿ ಅಡಕವಾಗಿದೆ. ಅಲ್ಲದೆ ರಾಜಮಹಾರಾಜರ ರಾಜಧನ ರದ್ದಾದಮೇಲೆ ಅವರಿಗೆ ಹೆಚ್ಚಿಗೆ ಅನುಕೂಲಮಾಡಿಕೊಡಬೇಕೇ ಎಂಬ ಪ್ರಶ್ನೆ ಸಹ ಇದರಲ್ಲಿ ಅಡಕವಾಗಿದೆ. ಆದುದರಿಂದಲೇ ಇದು ಮುಖ್ಯವಾದ ವಿಷಯ ಎಂದು ಮೊದಲೇ ಹೇಳಬೇಕಾಗಿದೆ.

ಇಷ್ಟು ಮಾತ್ರ ಅಲ್ಲ, ಅದರ ಬಗ್ಗೆ ಚರ್ಚೆ ಆಗಬೇಕು ಎಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ. ಮತ್ತು ಅವರ ಪಾರ್ಟಿಯಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಪತ್ರಿಕೆಯಲ್ಲೂ ಕೂಡ ವರದಿಯಾಗಿದೆ. ನನಗೆ ಇದರಲ್ಲಿ ಅನೇಕ ವಿರೋಧಾಭಾಸಗಳು ಕಂಡುಬಂದಿವೆ. ಈ ಅರಮನೆಯ ವ್ಯವಹಾರದಲ್ಲಿ ಸ್ವಲ್ಪಮಟ್ಟಿಗೆ ಅನುಮಾನವಾಗಿದೆ ಎಂದು ನನಗೆ ಅನಿಸುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಯಾವಾಗಲೂ ಹೇಳುತ್ತಿದ್ದಾರೆ "ನಾನು ಯಾವುದನ್ನೂ ಮುಚ್ಚಿಡುವುದಿಲ್ಲ, ಈ ಸಭೆಯ ಮುಂದೆ ಇಡುತ್ತೇನೆ" ಎಂದು. ಈ ಮಹಾರಾಜರ ಅರಮನೆಯ ವಿಷಯದ ವ್ಯವಹಾರ ಪೂರ್ತಿ ಸರಿಯಾಗಿದೆಯೋ ಇಲ್ಲವೆ ಎನ್ನುವ ಸಂಶಯ ಬಂದಿದೆ; ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯಲ್ಲಿ ಇದರ ಮುಖ್ಯತೆ ಕಾಣುವುದಿಲ್ಲ. ಇದರಲ್ಲಿ ೨-೩ ಪ್ರಶ್ನೆಗಳು ಉದ್ಭವವಾಗುತ್ತವೆ.

ಮೊದಲನೆಯದಾಗಿ ಮಹಾರಾಜರ ಸ್ವತ್ತು ಅಂದರೆ ಈ ಅರಮನೆಗಳನ್ನು ಮಾರಾಟ ಮಾಡುವುದಕ್ಕೆ ಹಕ್ಕು ಇದೆಯೇ ?

ಎರಡನೆಯದಾಗಿ ಈ ಸ್ವತ್ತನ್ನು ತೆಗೆದುಕೊಳ್ಳಬೇಕಾದರೆ ಲೀಗಲಿಸ್ಟಿಕ್ ಮತ್ತು ಹ್ಯೂಮನಿಸ್ಟಿಕ್ ಪಾಯಿಂಟ್ ಆಫ್ ವ್ಯೂನಿಂದ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ದೊರಕಿಸಿಕೊಳ್ಳಬೇಕಾಗಿದೆ, ಅದಕ್ಕೆ ಸಮಂಜಸವಾದ ಉತ್ತರ ಬರಬೇಕು, ಬಂದಮೇಲೆ ಸರ್ಕಾರದ ನಿಲುವು ಸರಿಯೋ ತಪ್ಪೋ ಅನ್ನುವುದನ್ನು ಆಲೋಚನೆ ಮಾಡಬಹುದು. ಮೊದಲನೆಯದಾಗಿ ಕಾನೂನಿನ ಆಧಾರದ ಮೇಲೆ ಏನು ಹೇಳುತ್ತಾರೋ ಅದು ಅಷ್ಟು ನಮಗೆ ಸಂಬಂಧಪಟ್ಟಿದಲ್ಲ. ಶ್ರೀ ಮಾನ್ ಕೆ. ಸಿ. ರೆಡ್ಡಿಯವರ ಸರ್ಕಾರ ಇದ್ದಾಗ ಆಗಿನ ಸರ್ಕಾರದಲ್ಲಿ ಪ್ರಾಪರ್ಟಿ ಲಿಸ್ಟನ್ನು ಕಳುಹಿಸಿಕೊಟ್ಟಿದ್ದಾರೆ. ಅದು ಮಹಾರಾಜರ ಸ್ವಂತ ಆಸ್ತಿ ಎಂದು ಕೇಂದ್ರ ಸರ್ಕಾರದವರೂ ಸಹ ಒಪ್ಪಿ ಕೊಂಡಿದ್ದಾರೆಯೇ ? ಒಪ್ಪಿಕೊಂಡು ಅದನ್ನು ಈವೊತ್ತಿನ ದಿವಸ ಮಾರಾಟ ಮಾಡಬೇಕೆನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ ಎಂದು ಹೇಳುತ್ತೀರಾ ? ಈ ರೀತಿ ಮಾರಾಟ ಮಾಡುವುದಕ್ಕೆ ಡಾಕ್ಯುಮೆಂಟರಿ ಪ್ರೂಫ್ ಏನು ಇದೆ? ಇದರ ಬಗ್ಗೆ ಮೇಲ್ಮನೆಯಲ್ಲೂ ಕೂಡ ಚರ್ಚೆಯಾಗಿದೆ. ಇದಕ್ಕೆ ಸಂಬಂಧಪಟ್ಟ ದಾಖಲೆಪತ್ರಗಳನ್ನು ಈ ಮನೆಯ ಮುಂದೆ ಇಡಿ ಎಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ ಎಂದು ಹೇಳಿದ್ದಾರೆ. ಯಾವ ಆಧಾರದ ಮೇಲೆ ಈ ಒಪ್ಪಂದ ಮಾಡಿದ್ದಾರೆ ? ಈ ಒಪ್ಪಂದಕ್ಕೆ ಹಿಂದೆ ಅಡಕವಾಗಿರತಕ್ಕಂಥ ನಿಬಂಧನೆಗಳು ಏನು ಇವೆ ? ಇದರ ಬಗ್ಗೆ ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ಏನು ಹೇಳುತ್ತದೆ ? ಮತ್ತು ಪ್ರೀವಿ ಪರ್ಸಸ್ ಅಂಡ್ ಪ್ರಿವಿಲೇಜಸ್ ಬಗ್ಗೆ ಏನು ಒಪ್ಪಂದವಾಗಿದೆ ಅದನ್ನೆಲ್ಲಾ ಹೇಳಿರಿ. ಈ ಡಾಕ್ಯುಮೆಂಟ್ಸ್ ಎಲ್ಲಾ ಈ ಸಭೆಯ ಮುಂದೆ ಇಟ್ಟರೆ ಇದು ಸಮಂಜಸವಾಗಿದೆಯೋ ಅಸಮಂಜಸವಾಗಿದೆಯೋ ಎಂಬುದನ್ನು ಹೇಳಬಹುದು. ಇನ್‌ಸ್ಟ್ರುಮೆಂಟ್ಸ್ ಆಫ್ ಅಕ್ಸೆಷನ್ ಕಾಪಿ ನಾನು ತಂದಿದ್ದೇನೆ. ಅವನ್ನು ತಾವು ಬೇಕಾದರೆ ಓದಿ. ಅದರಲ್ಲಿ ಈ ಪ್ರಾಪರ್ಟೀಸ್ ಅವರಿಗೇ ಸಂಬಂಧಪಟ್ಟದ್ದು ಎನ್ನುವ ಅಂಶ ಕಂಡುಬರುವುದಿಲ್ಲ. ಈಗ ಹಿಂದಿನ ರಾಜರ ಆಳ್ವಿಕೆ ಹೋಯಿತ, ಹೊಸದಾದ ಆಳ್ವಿಕೆ ಬಂದಿದೆ ಆದ್ದರಿಂದ ಕಾನ್ಸ್ಟಿಟ್ಯೂಷನ್‌ನಲ್ಲಿ ಯಾದ ಬದಲಾವಣೆ ಮಾಡಬೇಕಾದರೂ ಅದು ಅಸೆಂಬ್ಲಿ ಮುಂದೆ ಬರಬೇಕು. ಅದು ಹಾಗಿರಲಿ. ಈ ಮೈಸೂರು ಮಹಾರಾಜರ ಮೂರು ಅರಮನೆಗಳ ವಿಚಾರವೂ ಈಗ ಈ ಸಭೆಯ ಮುಂದೆ ಬಂದಿದೆ. ಇದರ ಬಗ್ಗೆ ಲಿಸ್ಟ್ ಆಫ್ ಪ್ರಾಪರ್ಟೀಸ್‌ನ್ನು ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿ ಬಹಳ ಖಚಿತವಾಗಿ ಹೇಳಲಾಗಿದೆ. ಅದನ್ನು ವೆರಿಫೈ ಮಾಡಿ ಅವರು ಆ ಪ್ರಾಪರ್ಟೀಸ್‌ನ್ನು ಮಾರಾಟ ಮಾಡುವ ಹಾಗಿಲ್ಲ ಎಂದು ಸ್ಪಷ್ಟವಾಗಿ ತಿಳಿದು ಬಂದಿದೆ. ಆ ಲಿಸ್ಟ್ ನಿಮ್ಮ ಇದೆ. ಆ ಲಿಸ್ಟನ್ನು ನಮಗೆ ಕೊಡಿ. ಆ ಲಿಸ್ಟನಲ್ಲಿ ಏನಿದೆ ಅಂತ ನನಗಂತೂ ಗೊತ್ತಿಲ್ಲ, ಬಲ್ಲವರಿಂದ ತಿಳಿದು ಬಂದಿದೆ. ಆ ದಾಖಲೆಯನ್ನು ಸಭೆಯ ಮುಂದೆ ಇಡಿ. ಅದರ ಬಗ್ಗೆ ನಮ್ಮನ್ನು ಸ್ಯಾಟಿಸ್‌ಫೈ ಮಾಡಿದರೆ ಒಳ್ಳೆಯದು, ಇಲ್ಲದೇ ಹೋದರೆ ಏನೋ ಇದರಲ್ಲಿ ಮುಚ್ಚುಮರೆ ಮಾಡುತ್ತೀರಿ, ಕಣ್ಣುಮುಚ್ಚಾಲೆ ಆಡುತ್ತೀರಿ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಆ ಲಿಸ್ಟನಲ್ಲಿ ಸ್ಪಷ್ಟವಾಗಿ ನಮೂದು ಮಾಡಿದೆ; ಈ ಮೂರು ಅರಮನೆಗಳನ್ನೂ ಮಾರಾಟ ಮಾಡುವ ಹಾಗಿಲ್ಲ ಎಂದು. ಇದು ಸರ್ಕಾರದ ಸ್ವತ್ತು; ಇದು ಸಾರ್ವಜನಿಕ ಸ್ವತ್ತು ಎನ್ನುವುದು ಸ್ಪಷ್ಟವಾಗಿದೆ. ಒಂದು ವೇಳೆ ಆ ರೀತಿ ಹೇಳಲಿ, ಹೇಳದೆ ಇರಲಿ ಸರ್ಕಾರದ ನಡವಳಿಕೆಗಳಿಂದ ಇಲ್ಲಿಯವರೆಗೂ ತಿಳಿದು ಬಂದಿರುವ ಪ್ರಕಾರ ಮಹಾರಾಜರ ಅರಮನೆಗಳು ಏನು ಇವೆಯೋ ಅದು ಸಾರ್ವಜನಿಕರ ಸ್ವತ್ತು ಎಂದು ನಾನಾದರೂ ಹೇಳುತ್ತೇನೆ. ಹೇಗೆಂದರೆ ಮೈಸೂರು ಅರಮನೆ ಯಾರ ಹಣದಿಂದ ಕಟ್ಟಿದ್ದು ? ಅದು ಮುಖ್ಯ. ಅದು ಸಾರ್ವಜನಿಕ ಹಣದಿಂದ ಕಟ್ಟಿದ್ದು. ಅದು ತಮಗೂ ಗೊತ್ತಿದೆ ದೇಶಕ್ಕೂ ಗೊತ್ತಿದೆ. ಸರ್ಕಾರಕ್ಕೂ ಗೊತ್ತಿದೆ. ಹೀಗಿರಬೇಕಾದರೆ ಜನಗಳ ದುಡ್ಡಿನಿಂದ ಕಟ್ಟಿದಂಥ ಅರಮನೆಗಳಿಗೆ ಮತ್ತು ಇದರ ಜೊತೆಗೆ ಅದರ ಮೇಂಟೇನೆನ್ಸ್ ನಾವೇ ಮಾಡುತ್ತೇವೆ. ಅಂದಮೇಲೆ ಸಾರ್ವಜನಿಕರಿಗೆ ಸೇರಿದ್ದಲ್ಲವೇ ? ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲ ಎಂದು ಹೇಳುವ ಹಾಗಿಲ್ಲ. ಈ ಅರಮನೆಗಳಿಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದೇವೆ ಇದಕ್ಕೆ ತೆರಿಗೆ ವಸೂಲ್ಮಾಡುವುದಿಲ್ಲ ಇದು ಸಾರ್ವಜನಿಕರ ಹಣದಿಂದ ಕಟ್ಟಿದ ಮೇಲೆ ಇದು ಸಾರ್ವಜನಿಕರ ಸ್ವತ್ತು ಆಗುತ್ತದೆಯೇ ವಿನಾ ಅದು ಒಬ್ಬ ರಾಜರ ಸ್ವತ್ತು ಆಗುವುದಕ್ಕೆ ಸಾಧ್ಯವಿಲ್ಲ. ಇದು ಸ್ಪಷ್ಟವಾದ ವಿಷಯ.

ಇನ್ನು ಪ್ರಾಪರ್ಟಿ ಲಿಸ್ಟನಲ್ಲಿ ಇವರ ಬಗ್ಗೆ ಸ್ಪಷ್ಟವಾಗಿ ಇದೆ. ಅದಕ್ಕೋಸ್ಕರ ಆ ಡಾಕ್ಯುಮೆಂಟ್ಸ್‌ನು ಕೇಳಿದ್ದು ನಮಗೆ ಇನ್ನೂ ಸಿಕ್ಕಿಲ್ಲ. ನಾನು ಆಗಲೇ ಲೆಜಿಸ್ಲೇಚರ್ ಸಕ್ರೆಟರಿಯವರಿಗೆ ಈ ಪ್ರಾಪರ್ಟಿ ಲಿಸ್ಟ್ ಒಂದನ್ನು ಒದಗಿಸಿಕೊಡಿ ಎಂದು ಕೇಳಿದೆ. ಅವು ಕಾನ್‌ಫಿಡೆನ್‌ಷಿಯಲ್ ಡಾಕ್ಯುಮೆಂಟ್ಸ್ ಎಂದು ಹೇಳುತ್ತಾರೆ, ನನಗೆ ಇವರ ಬಗ್ಗೆ ಅರ್ಥವಾಗುವುದಿಲ್ಲ. ಏಕೆಂದರೆ ನಮ್ಮ ಮನೆ ವ್ಯವಹಾರ ಎಲ್ಲವೂ ಕೂಡ ಕಾರ್ಪೋರೇಷನ್ ದಾಖಲೆಯಲ್ಲಿ ಬಂದೇ ಬರಬೇಕು. ಮೈಸೂರು ಮಹಾರಾಜರು ದೊಡ್ಡವರು ಇರಬಹುದು. ಆದರೆ ಅವರ ಅರಮನೆಗಳು ಮುನಿಸಿಪಲ್ ದಾಖಲೆಯಲ್ಲಿ ಬರಬೇಕು: It is a Public document. It cannot be hidden at all. ಈ ವಿಷಯದ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಾ ಇರಬೇಕಾದರೆ ಇದು ಸೀಕ್ರೆಟ್ ಡಾಕ್ಯುಮೆಂಟ್ ಕೊಡುವುದಕ್ಕಾಗುವುದಿಲ್ಲ ಎಂದು ಸರ್ಕಾರ ಹೇಳಿದರೆ ಇದು ಅವರ ಒಂದು ತತ್ವಕ್ಕೆ, ಅವರ ಒಂದು ನಿರ್ಣಯಕ್ಕೆ ತಿಲಾಂಜಲಿ ಕೊಟ್ಟಂತಾಗುತ್ತದೆ.

(ಶ್ರೀ ಎಂ. ಎಸ್. ಕೃಷ್ಣನ್)

ಈ ಪ್ರಜಾಪ್ರಭುತ್ವದಲ್ಲಿ ಅವರು ಕಣ್ಣುಮುಚ್ಚಾಲೆ ಆಟವನ್ನು ಆಡುತ್ತಿದ್ದಾರೆ ಎನ್ನುವ ಸಂಶಯಕ್ಕೆ ಆಸ್ಪದವಾಗಿದೆ ಆದುದರಿಂದ ನಾನಾದರೂ ಹೇಳುವುದು ಅದರ ಡಾಕ್ಯುಮೆಂಟ್ಸ್ ಮತ್ತು ಪ್ರಾಪರ್ಟಿ ಲಿಸ್ಟನ್ನು ಈ ಮನೆಯ ಮುಂದೆ ಇಡಬೇಕು ಎಂದು. ಸರ್ಕಾರದವರು ಹೇಳುವುದು ನಿಜವೆ, ಅಥವಾ ಸತ್ಯಕ್ಕೆ ದೂರವಾದದ್ದೆ, ಅಲ್ಲವೇ ಎನ್ನುವ ಮುಖ್ಯವಾದ ಅಂಶಗಳು ಗೊತ್ತಾಗುತ್ತದೆ.

ಇನ್ನೊಂದು ಪ್ರಶ್ನೆ ಏನೆಂದರೆ ಮೈಸೂರು ಮಹಾರಾಜರ ಅರಮನೆ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆಗಳು ಪತ್ರಿಕೆಗಳಲ್ಲೂ ಬಂದಿವೆ. ಏನೆಂದರೆ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಕೆ ಸಿ. ರೆಡ್ಡಿಯವರ ಕಾಲದಲ್ಲಿ ಮತ್ತು ಅವರ ಹಿಂದೆ ಮತ್ತು ಮುಂದೆ ಇದ್ದಂಥ ಮಂತ್ರಿಗಳು ಎಲ್ಲಾ ಮಂತ್ರಿಗಳು ಕೂಡ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಇದು ಇನ್‌ವಲಿನಿಯಬಲ್ ಎಂದು. ಮಾನ್ಯ ಶ್ರೀ ಕೆ. ಹನುಮಂತಯ್ಯನವರೂ ಕೂಡ ಹೇಳಿದ್ದಾರೆ, ಅದು ಅದು ಪತ್ರಿಕೆಯಲ್ಲೂ ಬಂದಿದೆ. I know for certain that it cannot be sold ಎಂದು. ದಿನಾಂಕ ೨೨ನೇ ಜುಲೈ ೧೯೭೨ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲೂ ಕೂಡ ಒಂದು ಹೇಳಿಕೆ ಕೊಟ್ಟರು. ಅದು ಈ ರೀತಿ ಇದೆ :—

> "The most significant statement he made was that the Central Government had not yet taken a final decision to remove the inalienability caluse in the Instrument of Accession which has picked up all the dust in the State in the past few days."

ಇದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಅರ್ಥ ಮಾಡಿರುವುದು ಏನೆಂದರೆ ಈವರೆಗೆ ಕೇಂದ್ರ ಸರ್ಕಾರದವರು ಅದನ್ನು ಮಾರಾಟ ಮಾಡಬೇಕೋ ಇಲ್ಲವೋ ಎನ್ನುವ ತೀರ್ಮಾನ ಮಾಡಿಲ್ಲ ಎಂದು ಹೇಳಿದ್ದಾರೆ ಡೆಕ್ಕನ್ ಹೆರಾಲ್ಡ್ ಕೂಡ ನನಗೆ ತಿಳಿದ ಮಟ್ಟಿಗೆ ಅದನ್ನು ಮಾರಾಟ ಮಾಡುವ ಹಾಗಿಲ್ಲ ಎಂದು ಶ್ರೀ ಹನುಮಂತಯ್ಯನವರು ಹೇಳಿದ್ದಾರೆ ಎಂದು ಇದೆ.

ಶ್ರೀ ಹನುಮಂತಯ್ಯನವರು ಹೇಳಿರುವ ಹೇಳಿಕೆ ಸಾಧಾರಣ ಯಾರೋ ಹೇಳುವಂಥ ಹೇಳಿಕೆಯಲ್ಲ. ಶ್ರೀ ಹನುಮಂತಯ್ಯನವರು ಕೇಂದ್ರ ಮಂತ್ರಿಗಳಾಗಿದ್ದರು, ನಮ್ಮ ರಾಜ್ಯದಲ್ಲಿ ಸಹ ಮುಖ್ಯ ಮಂತ್ರಿಗಳಾಗಿದ್ದರು. ಅವರ ಮಾತಿಗೆ ಬೆಲೆ ಕೊಡಬೇಕಾಗಿ ಬರುತ್ತದೆ. ಒಬ್ಬ ಗಣ್ಯ ವ್ಯಕ್ತಿಯಿಂದ ಸರ್ಕಾರದ ಆಡಳಿತ ನಡೆಸಿದಂಥ ವ್ಯಕ್ತಿಯಿಂದ ಇಂಥ ಹೇಳಿಕೆ ಬಂದಿರಬೇಕಾದರೆ ಅದರ ಕಡೆಗೆ ನಾವು ಸರಿಯಾದ ಗಮನವನ್ನು ಹರಿಸಬೇಕಾಗುತ್ತದೆ. ನನಗೆ ತಿಳಿದು ಬಂದಿರುವುದೇನೆಂದರೆ, ನಮ್ಮ ರಾಜ್ಯದಲ್ಲಿ ಒಂದು ಕಾಲಕ್ಕೆ ಪಾರ್ಲಿಮೆಂಟ್ ನಡೆಯಬೇಕು ಎಂದು ಮಾತುಕತೆ ನಡೆಯುತ್ತಿತ್ತು. ಸಮ್ಮರ್ ಸೆಷನ್ನು ಬೆಂಗಳೂರಿನಲ್ಲಿ ನಡೆಯಬೇಕೆಂದು ಮಾತು ನಡೆಯುತ್ತಿತ್ತು. ಆಗ ಅಧಿವೇಶನವನ್ನು ಎಲ್ಲಿ ನಡೆಸುವುದು ಈ ಅಸೆಂಬ್ಲಿ ಹಾಲಿನಲ್ಲಿ ಸಾಕಷ್ಟು ಜಾಗವಿಲ್ಲ, ಬೇರೆ ಎಲ್ಲಿಯಾದರೂ ನಡೆಸಬೇಕು ಎನ್ನುವ ಅಭಿಪ್ರಾಯ ಇದ್ದು, ಆ ಸಂದರ್ಭದಲ್ಲಿ ಬೆಂಗಳೂರು ಅರಮನೆಯನ್ನು ತೆಗೆದುಕೊಳ್ಳಬಹುದು. ಅಲ್ಲಿ ಅಧಿವೇಶನಗಳನ್ನು ನಡೆಸುವುದಕ್ಕೆ ಸಾಧ್ಯವಿದೆ, ಎಂದು ಶ್ರೀ ಹನುಮಂತಯ್ಯನವರು ಮತ್ತು ಇತರ ಮಂತ್ರಿಗಳು ಆಗಿನ ಕಾಲದಲ್ಲಿ ಹೇಳಿದ್ದಾರೆ. ಮಾನ್ಯ ಪುಟ್ಟಸ್ವಾಮಿಯವರೂ ಹೇಳಿದ್ದಾರೆಂದು ಕಾಣುತ್ತದೆ. ಅವರು ಕಂಟಿನ್ಯೂಯಿಟಿ ಇರುವ ಜನ. ಮಾನ್ಯ ಪುಟ್ಟಸ್ವಾಮಿಯವರು, ಹನುಮಂತಯ್ಯನವರೂ ಇದರ ಬಗ್ಗೆ ಮಾತನಾಡಿ, ಬೆಂಗಳೂರಿನಲ್ಲಿ ಪಾರ್ಲಿಮೆಂಟ್ ಅಧಿವೇಶನಗಳನ್ನು ನಡೆಸುವುದಕ್ಕೆ ಸಾಧ್ಯವಿದೆ, ಬೆಂಗಳೂರು ಅರಮನೆಯನ್ನು ನಾವೇ ತೆಗೆದುಕೊಳ್ಳಬೇಕು, ಅದನ್ನು ಮಾರಾಟ ಮಾಡುವುದಕ್ಕೆ ರಾಜರಿಗೆ ಅಧಿಕಾರವಿಲ್ಲ, ಪರಭಾರೆ ಮಾಡಬಾರದು ಎನ್ನುವ ಕ್ಲಾಜ್ ಇದೆ ಎಂದು ಹೇಳಿದ್ದಾರೆ. ಈಗಲೂ ಸಹ ಹೇಳುತ್ತಿದ್ದಾರೆ. ಮಾನ್ಯ ವೀರೇಂದ್ರ ಪಾಟೀಲರು ಕೂಡ ಇದರ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ, ಅದನ್ನು ಕೂಡ ಓದಿದ್ದೇನೆ. ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಇದ್ದಾಗ ವಿಚಾರ ಬಂದಿದ್ದು ಪರಭಾರೆ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಹೇಳಿದ್ದೀವೆಂದು ಅವರು ಸ್ಪಷ್ಟಪಡಿಸಿದ್ದಾರೆ. ಮಂತ್ರಿಗಳು, ಹಿಂದಿನ ಮಂತ್ರಿಗಳು, ಈ ಮಾನ್ಯ ಸಭೆಯ ಸದಸ್ಯರು ಹೇಳಿರುವುದನ್ನು ಮೀರಿ ಡೆಯಯುಲಿಕ್ಕೆ ಸಾಧ್ಯವಿಲ್ಲ. ಇನ್‌ಪಾಲಿಯಬಿಲಿಟಿ ಕ್ಲಾಜ್ ಇದೆ. ಆದ್ದರಿಂದ ಅವರು ಅದನ್ನು ಮಾರುವುದಕ್ಕೆ ಆಗುವುದಿಲ್ಲ ಆದರೂ ಲೀಗಲಿಸ್ಟಿಟಿಕ್ ಆಗಿ ಹೋಗಿದ್ದೇವೆಂದು ಹೇಳಿದ್ದಾರೆ. ನನಗೆ ಅದು ಲೀಗಲಿಸ್ಟಿಕ್ ಎಂದು ಕಾಣುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಎಲ್ಲ ಪತ್ರವ್ಯವಹಾರವನ್ನೂ ಸಭೆಯ ಮುಂದೆ ಇಡಬೇಕು. ನಾನು ಹೋದ ಸಲ ಕೇಳಿದಾಗ ಪತ್ರವ್ಯವಹಾರವನ್ನು ಹಾಗೆ ಇಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು.

They must place the entire correspondence before the House. The Chief minister must take us into his confidence. The Government must act like caesers wife-above suspicion. If they want to be suspicion naturally they must place everything before the House ;

ಏನೋ ಮುಚ್ಚುತ್ತಿದ್ದಾರೆ ಎಂದು ಜನ ಒಳಗೊಳಗೇ ಮಾತನಾಡಿಕೊಳ್ಳುತ್ತಿದ್ದಾರೆ. ಮೈಸೂರಿನ ಜನತೆಯ ಮನಸ್ಸಿನಲ್ಲಿ ತಪ್ಪು ತಿಳುವಳಿಕೆ ಬರ ವುದಕ್ಕೆ ಅವಕಾಶವಾಗುತ್ತದೆ ; ಅಂಥ ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಸರ್ಕಾರದವರು ಈ ರೀತಿ ನಡೆದುಕೊಳ್ಳಬೇಕೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ.

ಇದರೊಳಗೆ ಇನ್ನೊಂದು ವಿಚಾರವೇನೆಂದರೆ, ಈ ತರಹ ಒಂದು ಪಕ್ಷ ಕೇಂದ್ರ ಸರ್ಕಾರಕ್ಕೆ ಸೇರಿದ್ದು, ನಮಗೆ ಸೇರಿದ್ದಲ್ಲ ಎನ್ನುವ ವಿಷಯವನ್ನು ಹೇಳಿದರೆ ಕೇಂದ್ರ ಸರ್ಕಾರದವರು ತಾವಾಗಿಯೇ ನೇರವಾಗಿ ವ್ಯವಹಾರ ಮಾಡಬೇಕಾಗಿತ್ತು. ಆದರೆ ಅವರು ನಮ್ಮ ಸರ್ಕಾರದ ಅಭಿಪ್ರಾಯವನ್ನು ಏಕೆ ಕೇಳಬೇಕಾಗಿತ್ತು? ಮೇಲಿಂದ ಮೇಲೆ ಹಿಂದೆ ಇದ್ದ ಎಲ್ಲ ಸರ್ಕಾರಗಳನ್ನೂ ಕೇಳಿದ್ದಾರೆ. ಏಕೆ ಕೇಳಿದ್ದಾರೆ? ಅಭಿಪ್ರಾಯ ಕೇಳತಕ್ಕ ಅವಶ್ಯಕತೆಯೇ ಇರಲಿಲ್ಲ. ನೇರವಾಗಿ ವ್ಯವಹಾರ ಮಾಡಬಹುದಾಗಿತು ;

Only because the property does not belong to the Maharaja and because there is the inalienability clause, the Government of India asked the previous Government and the present Government as to what their opinion is.

ಕೇಂದ್ರ ಸರ್ಕಾರದವರು ಮಾಡಿದ್ದಾರೆಂದು ನೀವು ನಮ್ಮ ಬಾಯಿ ಮುಚ್ಚಿಸುವುಕ್ಕಾಗುವುದಿಲ್ಲ. ಚೀಫ್ ಸೆಕ್ರೆಟರಿಯವರು ಹೋಗಿ ಮಾತನಾಡಿಕೊಂಡು ಬಂದು, ವಿಚಾರವಿನಿಮಯ ಮಾಡಿ ಏನೋ ಅಭಿಪ್ರಾಯಕ್ಕೆ ಬಂದು ಅದರ ಬಗ್ಗೆ ಚರ್ಚೆ ನಡೆಯಿತು. ಇದನ್ನೆಲ್ಲ ಒಟ್ಟಾರೆ ನೋಡಿದರೆ ಹಿಂದೆ ಏನೋ ನಡೆದಿದೆ ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಮಹಾರಾಜರಿಗೆ ಅರಮನೆಗಳನ್ನು ಮಾರಾಟ ಮಾಡುವುದಕ್ಕೆ ಅಧಿಕಾರವಿಲ್ಲ, ಲೀಗಲಿಸ್ಟಿಕ್ ಪಾಯಿಂಟ್ ಆಫ್ ವ್ಯೂ ಇಲ್ಲ ಎಂದು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದೇ ಒಂದು ದಾರಿ ಎಂದರೆ ಅವರು ನಮಗೆ ಎಲ್ಲ ಪತ್ರವ್ಯವಹಾರವನ್ನೂ ಕೊಡಬೇಕು. ಲಿಸ್ಟ್ ಆಫ್ ಪ್ರಾಪರ್ಟಿ ಇಡಬೇಕು ಆಮೇಲೆ ಕೆಲವು ಪುರಾವೆ ಕೊಡಬೇಕಾಗಿದೆ.

ಹ್ಯೂಮನಿಸ್ಟಿಕ್ ಎಂದರೆ ಮಾನವೀಯತೆಯ ದೃಷ್ಟಿಯಿಂದ ಈ ರೀತಿ ತೀರ್ಮಾನ ಮಾಡಿದ್ದಾರೆ ಎನ್ನುವ ವಿಚಾರ. ನಾನು ವೈಯಕ್ತಿಕವಾಗಿ ಮಹಾರಾಜರಿಗೆ ಏನೂ ಅನ್ನುವುದಕ್ಕೆ ಹೋಗುವುದಿಲ್ಲ. ಅವರು ಒಳ್ಳೆಯವರೇ ಇರಬಹುದು. ದೇಶದಲ್ಲಿ ಎಲ್ಲರೂ ಒಳ್ಳೆಯವರು. ಅವರೂ ಒಳ್ಳೆಯವರಿರ ಬಹುದು, ನನಗೆ ಗೊತ್ತಿಲ್ಲ. ಒಳ್ಳೆಯತನ, ಕೆಟ್ಟತನ, ಇವನ್ನು ಒರೆಹಚ್ಚಿ ನೋಡಬೇಕಾಗಿದೆ ಒಳ್ಳೆಯತನದ ಪ್ರಶ್ನೆಯಲ್ಲ. ಪಾಳೆಯಗಾರಿಕೆ ಪದ್ಧತಿ ಹೋಗಬೇಕೆಂದು ನಮ್ಮ ಜನ ಹೋರಾಟ ನಡೆಸಿದರು, ಪ್ರಜಾಪ್ರಭುತ್ವ ಸರ್ಕಾರ ಮಾಡಬೇಕೆಂದು ಹೋರಾಟ ನಡೆಸಿದರು. ನಮ್ಮ ರಾಜ್ಯದಲ್ಲಿ ಅನೇಕ ಜನ ತ್ಯಾಗ, ಬಲಿದಾನ ಮಾಡಿದ್ದಾರೆ, ಜೈಲಿಗೆ ಹೋಗಿದ್ದಾರೆ, ಲಾಠಿ ಏಟು ತಿಂದಿದ್ದಾರೆ ಕೆಲವು ಪಾಳೆಗಾರಿಕೆ ಪದ್ಧತಿಯ ಅವಶೇಷಗಳಿವೆ. ಸಮಾಜವಾದವನ್ನು ಜಾರಿಗೆ ತರುತ್ತೇವೆಂದರೆ ಇಂತಹ ಪಾಳೆಯಗಾರಿಕೆ ಪದ್ಧತಿಯ ಅವಶೇಷಗಳೆಲ್ಲ ಇರಬಾರದು. ಸಮಾಜವಾದವನ್ನು ತರುತ್ತೇವೆಂದು ಹೇಳುವಾಗ ಯಾವ ಪ್ರತಿಗಾಮೀ ದೃಷ್ಟಿಯೂ ಇರಬಾರದು ಮಾನವೀಯತೆಯ ದೃಷ್ಟಿ ಎಂದರೆ ಅವರು ಪಾಪರಾಗಿದ್ದಾರೆಯೇ? ನನಗೆ ಹಾಗೆ ಕಾಣುವುದಿಲ್ಲ. ಅವರು ೨೬ ಲಕ್ಷ ರೂಪಾಯಿ ವರ್ಷಂಪ್ರತಿ ಪಡೆಯುತ್ತಿದ್ದರು. ೧೦೨ ಕೋಟಿ ರೂಪಾಯಿಗಳನ್ನು ನಮ್ಮ ದೇಶದಲ್ಲಿ ರಾಜಮಹಾರಾಜರುಗಳಿಗೆ ಹಿಂದಿನ ಸರ್ಕಾರದವರು ಕೊಟ್ಟಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಯವರು ಮೊದಲಿನಿಂದಲೂ ಹೇಳುತ್ತಿದ್ದೇವೆ ಒಂದು ನಯಾಪೈಸೆ ಕೂಡ ಕೊಡಬಾರದು ಎಂದು. ಮೈಸೂರು ಮಹಾರಾಜರು ಸ್ವಿಟ್ಜರ್ಲೆಂಡ್, ಇಂಗ್ಲೆಂಡ್, ಅಮೆರಿಕ ಮುಂತಾದ ದೇಶಗಳಲ್ಲಿ ಬ್ಯಾಂಕ್ ಅಕೌಂಟ್ ಇಟ್ಟಿದ್ದಾರೆ. ಶ್ರೀ ಕೆ. ಗಾಬಾ ಎಂಬುವರು, ರಾಜಮಹಾರಾಜರ ವಿಷಯವನ್ನು ತಿಳಿದವರು ಒಂದು ಪುಸ್ತಕವನ್ನು ಬರೆದಿದ್ದಾರೆ. ಅದರಲ್ಲಿ ಅವರು ಮಾಡುತ್ತಿರುವ ಅನ್ಯಾಯಗಳು, ಅನೀತಿಗಳು ಇವನ್ನೆಲ್ಲ ವರ್ಣರಂಜಿತವಾಗಿ ಚಿತ್ರಿಸಿದ್ದಾರೆ. ಈ ರಾಜರು ಒಳ್ಳೆಯವರಾದರೂ ಕೂಡ ಪಾಳೆಗಾರಿಕೆ ಪದ್ಧತಿ ಹೋಗಬೇಕು ಎಂದು ಮೈಸೂರಿನ ಜನತೆ ಮತ್ತು ನಾವು ಹೋರಾಟ ನಡೆಸಿದ್ದೇವೆ. ಹ್ಯೂಮನಿಸ್ಟಿಕ್ ಕನಸಿಡರೇಶನ್ ಎಂದರೆ ಏನು ಎಂದು ಹೇಳಬೇಕಾಗಿದೆ. ಈ ಮುಂಚೆ ಶ್ರೀ ವಾಟಾಳ್ ನಾಗರಾಜ್ ಅವರು ಎತ್ತಿದ ಪ್ರಶ್ನೆ ಏನಿದೆ, ಒಬ್ಬ ವ್ಯಾಪಾರಸ್ಥ ಸೀಮೆ ಎಣ್ಣೆ

(ಶ್ರೀ ಎಂ. ಎಸ್. ಕೃಷ್ಣನ್)

ಸುರಿದುಕೊಂಡು ಬೆಂಕಿ ಹೊತ್ತಿಸಿಕೊಂಡು ಸಾಯುವುದಕ್ಕೆ ಪ್ರಯತ್ನ ಪಟ್ಟ. ನಿಜವಾಗಿಯೂ ಇಂಥದು ಕರುಳು ಕತ್ತರಿಸುವ ವಿಷಯ. ಆದರೆ ಆತ ಸೀಮೆ ಎಣ್ಣೆ ಸುರಿದುಕೊಂಡು ಸುಟ್ಟುಕೊಂಡದ್ದನ್ನು ನಾನು ಒಪ್ಪುವುದಿಲ್ಲ. ಅಂಥವರ ವಿಷಯಕ್ಕೆ ಸಂಕಟವಾಗುತ್ತದೆ. ಮೊನ್ನೆ ದಿನ ಶ್ರೀ ಜಯಪ್ರಕಾಶ ನಾರಾಯಣ ಅವರು ಒಬ್ಬ ಹರಿಜನರ ಮನೆ ಲೂಟಿ ಆಯಿತು, ಪಾತ್ರೆ ಪಡಗ ಎಲ್ಲ ತೆಗೆದುಕೊಂಡು ಹೋದರು ಎಂದು ಮುಂಚಾಗಿ ಹೇಳಿದರು. ಇದು ಬಹಳ ಅನ್ಯಾಯ, ಕರುಳು ಕತ್ತರಿಸುವ ವಿಚಾರ. ಇದರ ಬಗೆ ಅನುಕಂಪ ಜಾಸ್ತಿಯಾಗುತ್ತದೆ. ಎನ್. ಜಿ. ಇ ಎಫ್ ನಲ್ಲಿ ಪೋಲೀಸರು ಸಿಕ್ಕಾಪಟ್ಟೆ ಕಾರ್ಮಿಕರನ್ನು ಹೊಡೆದು ದಬ್ಬಾಳಿಕೆ ನಡೆಸಿ ಅನ್ಯಾಯ ಮಾಡಿದ್ದಾರೆ. ಅಲ್ಲಿ ಸಂಕಟಕ್ಕೆ ಒಳಗಾದ ಕಾರ್ಮಿಕರ ಬಗ್ಗೆ ಅನುಕಂಪ ಇರುವುದು ಸಹಜ. ಇಲ್ಲಿ ಏನು ಅನುಕಂಪ ಇರಬೇಕು ? ಹ್ಯೂಮನಿಸ್ಟಿಕ್ ಫೀಲಿಂಗ್ ಏನು ಇರಬೇಕು ಎನ್ನುವುದು ಅರ್ಥವಾಗುವುದಿಲ್ಲ. ಸಮಾಜವಾದ ಮಾತನಾಡುವವರು ಇವು ಎಲ್ಲವನ್ನೂ ಮರೆತು ರಾಜರಿಗೆ ಅನುಕಂಪ ತೋರಿಸಬೇಕೆಂದರೆ ಅರ್ಥವಿದೆಯೇ ? ಭಿಕಾರಿಯಾಗುವ ಪರಿಸ್ಥಿತಿ ಏನಾದರೂ ರಾಜರಿಗೆ ಬಂದಿದೆಯೇ ? ಹಾಗಿದ್ದರೆ ಆವಾಗ ಯೋಚನೆ ಮಾಡಬಹುದಿತ್ತು, ರಾಜಕೀಯ ಸಂತ್ರಸ್ತರಿಗೆ ಏನೋ ಪೆನ್‌ಷನ್ ಕೊಡುತ್ತೀರಲ್ಲ, ಆ ರೀತಿ ಪೆನ್‌ಷನ್ ಕೊಡಬಹುದೋ ಏನೋ ಎಂದು ಯೋಚನೆ ಮಾಡಬಹುದಾಗಿತ್ತು. ನಾನು ಬೇಡ ಎನ್ನುವುದಿಲ್ಲ.

ಮಾನವೀಯತೆಯ ಬಗ್ಗೆ ಇನ್ನೊಂದು ಅಂಶ ಗಮನಿಸೋಣ. ನನ್ನ ವಿಷಯವನ್ನೇ ತೆಗೆದುಕೊಳ್ಳಿ I also get fevere and go to hospital and most often we do not get treatment. ಈಗ ಎಂ.ಎಲ್.ಎ. ಆಗಿರುವುದರಿಂದ ಪುಕ್ಕಟೆಯಾಗಿ ಔಷಧ ಕೊಡುತ್ತಾರೆ. ಹಿಂದೆ ನಾನು ಕೂಡ ಕಷ್ಟಪಟ್ಟಿದ್ದೇನೆ. ಜೈಲಿಗೆ ಹೋಗಿದ್ದೇನೆ. ಬಗ್ಗೆ ಅದರ ಮಾನವೀಯತೆ ತೋರಿಸಲಿಲ್ಲ, ಈಗ ಮಹಾರಾಜರ ವಿಷಯದಲ್ಲಿ ಹ್ಯೂಮನಿಸ್ಟಿಕ್ ಕನ್ಸಿಡರೇಷನ್ ಎಂದರೆ ಅರ್ಥವಿಲ್ಲದ ಮಾತು.

There is no place for this humanistic approach. If you really find that there are some people around the Maharaja who are exploiting him you deal with them severely I have no objection.

ಯಾವನೋ ಒಬ್ಬ ಡ್ರೈವರ್, ಅಥವಾ ಮೈಸೂರು ರಾಜ್ಯದ ಅಧಿಕಾರಿಯೊಬ್ಬರು ಮಹಾರಾಜರ ಹಣ ನುಂಗಿ ಹಾಕಿದ್ದಾರೆ, ತಿಂದು ಹಾಕಿದ್ದಾರೆ. ಎಂಬುವುದಾದರೆ ಇವೆ ಅಂಥವರನ್ನು ಕರೆದುಕೊಂಡು ಬನ್ನಿ ಕಾನೂನು ಪ್ರಕಾರ ಶಿಕ್ಷೆ ಮಾಡಿ. ನಾನು ಮೆಚ್ಚುತ್ತೇನೆ. ಮೈಸೂರು ಮಹಾರಾಜನ್ನು ನೋಡಿ, ಅವರಿಗೆ ಹಣ ಇದೆ ಅಮೆರಿಕಾಕ್ಕೆ ಹೋಗಬಹುದು ಭಗವದ್ಗೀತೆ ಪಾರಾಯಣ ಮಾಡಬಹುದು, ರೇಸಿಗೆ ಹೋಗಬಹುದು, ಕುಡಿಯಲೂ ಬಹುದು, ಏನು ಬೇಕಾದರೂ ಮಾಡಬಹುದು. ಇಂತಹವರು ಈಗ ಆಸ್ತಿಪಾಸ್ತಿ ಕಳೆದುಕೊಂಡು ಕುಳಿತಿದ್ದಾರೆ ಎಂದು ಹೇಳಿ ಅವರಿಗೆ ಅನುಕಂಪ ತೋರಿಸಿ ಎಂದರೆ ನಾನು ತಯಾರಾಗಿಲ್ಲ. ಭೂಸುಧಾರಣೆ ಜಾರಿಗೆ ತನ್ನಿ, ಸೀಲಿಂಗ್ ತನ್ನಿ, ಬಡವರ ಬಗ್ಗೆ ಹೇಳಿ ಅವರಿಗೆ ಪರಿಹಾರ ಕೊಡಿ ನ್ಯಾಯವಾಗಿದೆ, ಆದರೆ ಇವರ ಬಗ್ಗೆ ಯಾವ ಗ್ರೌಂಡ್‌ನಲ್ಲೂ ಕೂಡ ಮಾನವೀಯತೆ ಪ್ರಶ್ನೆ ತೆಗೆದುಕೊಂಡು ಬರಕೂಡದು. ಇಷ್ಟರಮೇಲೆ, ಅವರಿಗೆ ಕಾಂಪೆನ್‌ಸೇಷನ್ ಕೊಡಲೇಬೇಕು ಎಂದರೆ You can see that whatever compensation is to be paid is given to him as a nominal token amount. ಘಟನಾವಳಿಯ ೨೫ನೇ ತಿದ್ದುಪಡಿ ಪ್ರಕಾರ ಎಲ್ಲಾ ಸ್ವತ್ತನ್ನು ಜನರ ದೃಷ್ಟಿಯಿಂದ ಅಕ್ವೈರ್ ಮಾಡಿಕೊಳ್ಳಬಹುದು, ಆದರೂ ಕೂಡ ನಾಮಿನಲ್ "ಅಮೌಂಟು" ಕೊಟ್ಟುಬಿಟ್ಟು ಮಾಡಬೇಕೇ ವಿನಹ ಬೇರೆ ರೀತಿಯಲ್ಲ ವೈಯಕ್ತಿಕವಾಗಿ, as far as my party is concerned you should not pay anything. No humanistic question, arises in this case. He can live to-day, tomorrow and for generations. himself and his family.

ಬಹಳ ಮುಖ್ಯವಾದ ಪ್ರಶ್ನೆ ಏನೆಂದರೆ, ಶ್ರೀ ದೇವರಾಜ್ ಅರಸ್ ಅವರು ಮಾತನಾಡುತ್ತಾ ಹೇಳಿದ್ದಾರೆ. Of course he is a very very clever Chief Minister, "The decision of the State Government was based on the advice that since the private property settlement of the Maharaja was finalised by the Government of India it was open to the Government of India alone to modify that settlement and revoke the inalienability clause." ಎಂದು

ಹೀಗೆ ಹೇಳಿದ್ದಾರೆ. It is a very important point. ನನ್ನ ಅಭಿಪ್ರಾಯದಲ್ಲಿ even according to the Chief Minister this issue is still open, it is not at all a closed issue. He has got a right to sell away the property. I must take it as correct only because these days even whatever appears in the press is also questioned.

Even taken for granted what is stated here is true, ಬೇರೆ ಆಧಾರವಿಲ್ಲ. ಇನ್ ಎಲಿಯಬಿಲಿಟಿ ಕ್ಲಾಸ್ ಇನ್ನೂ ಓಪನ್ ಆಗಿದೆ. ಹೀಗೆ ಇರಬೇಕಾದರೆ ನಾನಾದರೂ ಕೇಳಿಕೊಳ್ಳುವುದು ಇಷ್ಟೆ, ರಾಜ್ಯಸರ್ಕಾರದವರು ಅವರ ಅಭಿಪ್ರಾಯ ಕೊಟ್ಟುಬಿಟ್ಟಿದ್ದಾರೆ. ಕೇಂದ್ರದವರು ಮೊದಲು ಅವಕಾಶ ಕೊಟ್ಟು ಬಿಟ್ಟಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗುತ್ತದೆ. ಅದಕ್ಕೆ ಬದಲು ರಾಜ್ಯ ಸರ್ಕಾರದವರು ಖಂಡಿತವಾಗಿ ಆಸ್ತಿ ಆಧಾರದ ಮೇಲೆ ಏನು ಏನು ಘೋಷಿಸಿದ್ದಾರೋ, ಗರೀಬಿ ಹಠಾವ್ ಅಂತ ಪುನಃ ಹೇಳುತ್ತಿದ್ದಾರೋ ಅದರ ಆಧಾರದಮೇಲೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕು. ಆ ರೀತಿ ಮಾಡುವುದಕ್ಕೆ ಅಧಿಕಾರವಿಲ್ಲ; ಮಾಡುವ ಹಾಗೆ ಇಲ್ಲ. ಎಂದರೆ ಒಪ್ಪುವಂತಿಲ್ಲ. ಈ ಆಸ್ತಿಯನ್ನು ಮೇಂಟೇನ್ ಮಾಡುವುದಕ್ಕೆ ನಮ್ಮ ಸರ್ಕಾರದ ಹಣ ಖರ್ಚಾಗಿದೆ. ಅಷ್ಟು ಮಾತ್ರವಲ್ಲ, ಸಾಮಾಜದ ದೃಷ್ಟಿಯಿಂದ ಕಾನೂನು ದೃಷ್ಟಿಯಿಂದ ಸ್ಪಷ್ಟವಾದ ದಿಟ್ಟತನ ತೋರಿಸಬೇಕು ಎಂದು ಮುಖ್ಯಮಂತ್ರಿಗಳನ್ನು ಕೇಳಿ ಕೊಳುತ್ತೇನೆ, ಕೇಂದ್ರದವರು ಇದನ್ನು ಮಾರಾಟ ಮಾಡಬೇಕು ಎಂದು ಹೇಳುವುದು ಸರಿಯಲ್ಲ. ಈ ವಿಷಯದಲ್ಲಿ ಕೇಂದ್ರ ಸರ್ಕಾರದವರು ಏನಾದರೂ ಹೇಳಿದ್ದರೆ ಅದು ತಪ್ಪು ಅದನ್ನು ಮಾರಾಟ ಮಾಡಿಕೊಳ್ಳಬೇಕು ಎಂದರೆ ನಾನು ಒಪ್ಪುವುದಿಲ್ಲ: ತೀವ್ರವಾಗಿ ಖಂಡಿಸಬೇಕಾಗುತ್ತದೆ. ಇನ್ನು ಮುಖ್ಯಮಂತ್ರಿಗಳೂ ಕೂಡ ಸಾಮಾನ್ಯ ಜನತೆಯ ಅಭಿಪ್ರಾಯ ಬಗ್ಗೆ ಮಾತನಾಡುತ್ತಾ ಹೀಗಂದಿದ್ದಾರೆ I find the pulse of the people and that is why I am naming the state as Karnataka. In this case also the pu'se of the peop'e is against giving the right of sale to Maharaja. ಆದರಿಂದ ಇದನ್ನು ಮಾರಾಟ ಮಾಡಕೂಡದು ಎಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ದಿಟ್ಟತನ ತೋರಿಸಬೇಕು, ಎಂದು ಕೇಳಿಕೊಂಡು, ರಾಜ್ಯ ಸರ್ಕಾರಕ್ಕೂ ಮತ್ತು ಕೇಂದ್ರಸರ್ಕಾರಕ್ಕೂ ಆಗಿರುವ ಕರೆಸ್ಪಾಂಡೆನ್ಸ್ ಅನ್ನು ದಯವಿಟ್ಟು ಟೇಬಲ್ ಮುಂದೆ ಇಡಬೇಕು, ಇನ್ನೊಂದು ಸೂಚನೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ರಾಜ್ಯ ಸರ್ಕಾರ ಮೈಸೂರು, ಬೆಂಗಳೂರು ಮತ್ತು ಊಟಿಯಲ್ಲಿರುವ ಮೂರು ಅರಮನೆಗಳನ್ನು ಅವರೇ ತೆಗೆದುಕೊಳ್ಳಲಿ ಎರಡನೆಯದು ಇವಕ್ಕೆ ಪರಿಹಾರವನ್ನು ಕೊಡುವ ಪ್ರಶ್ನೆ ಬರುವುದಿಲ್ಲ. ಸರ್ಕಾರ ನೇರವಾಗಿ ವಶಪಡಿಸಿಕೊಳ್ಳಬಹುದು; ಮೂರನೆಯದು, ಈ ಬೆಂಗಳೂರು ಅರಮನೆಯ ಬಗ್ಗೆ ಬೇಕಾದಷ್ಟು ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಕೆಲವರು, ಸೈಟ್ ಮಾಡಿ ಎಂದು ಹೇಳುತ್ತಾರೆ, ನಮ್ಮ ಪಕ್ಷದ ಅಭಿಪ್ರಾಯ ಏನೆಂದರೆ, ಇದನ್ನು ಒಳ್ಳೆಯ ಮ್ಯೂಸಿಯಂ ಮಾಡಿ, ಪಬ್ಲಿಕ್ ಪರ್ಪಸ್‌ಗೆ ಉಪಯೋಗ ಮಾಡಿ ಒಳ್ಳೆಯ ವಿಶಾಲವಾದ ಪಾರ್ಕ್ ಮಾಡಿ ಸಾರ್ವಜನಿಕರಿಗೆ ಉಪಯೋಗ ಮಾಡಬೇಕೇ ವಿನಾ ಪ್ರೈವೇಟ್‌ನವರು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಕೂಡದು. ಮೈಸೂರು ಅರಮನೆಯನ್ನು ಮ್ಯೂಜಿಯಂ ಆಗಿ ಪರಿವರ್ತಿಸಬಹುದು ಈ ರೀತಿಯ ಕಾರ್ಯಕ್ರಮ ತೆಗೆದುಕೊಂಡರೆ, ದೇಶ ಮೆಚ್ಚುತ್ತದೆ, ರಾಜ್ಯದ ಜನತೆ ಮೆಚ್ಚುತ್ತಾರೆ. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI K. PUTTASWAMY (Chamundeswari).—Madam Speaker, before proceeding to speak on this issue I went to make one point clear that I have all respect for the person of his Highness the Maharaja I also know that the Chief Minister is second to none in safeguarding the interests of the State. With these introductory remarks I would like to make a few observations on this issue.

Madam Speaker, I am sure the House is fully aware of the history of Mysore State in the 19th century. For about half a century the State was under the direct administration of Britishers and the administration was handed over to the Royal family in the year 1880. While doing so, some conditions were imposed. One of the conditions was that the Civil list of His Highness the Maharaja should be separate

(SRI K. PUTTASWAMY)

from the funds of theGovernment and the second condition was the creation of the Representative Assembly and the third one was the Dewan had to be appointed with the approval of the British Government. These three were the important conditions among other conditions. Why I am taking the house to the history of 19th century is to show that these three palaces were not acquired entirely from the funds of the palace. They were acquired, as far as I understand, from the funds of the State. Perhaps this was the reason for imposing the condition of inalienability at the time of preparing the private property list.

Madam Speaker, I am also sure, that the House knows to what extent the native princes enjoyed the sovereign powers. Before 1947 the sovereignity vested in the Britishers. The major princes were however enjoying as much freedom as any of us in this country. They were not at all sovereign in the full sense of the term It so happened because of the fight waged by the people, because of the sacrifices made by the people the country became free. The paradox is when the entire India became free, in the native States, it was only the ruling princes, who became free and not their subjects.

3-00 P.M.

Literally, constitutionally on 15th August 1947, the former Maharaja became fully sovereign and the people of the erstwhile Mysore State became under his rule. The House is also aware that the people had to wage another fight to wrest the responsible Government from the hands of his Highness the Maharaja. Anyway all that is past history. His highness the Maharaja entered in to an accession Agreement with the Dominion of India on 15th August 1947. Later on by another supplementary accession treaty the date was put back to 9th August 1947. All that we have to remember is that till 26th January 1950 His Highness the Maharaja enjoyed full sovereign powers That is why, before the Indian Constitution was brought into force His Highness the Maharaja issued a Proclamation on 25th November 1949 dissolving the than Representative Assembly and the then Legislative Council and converting the Constituent Assembly into an interim Legislative Assembly. Because he enjoyed the full sovereign powers, he could constitutionally adopt the Indian Constitution for Mysore State also. That is contained in the Proclamation that was issued by the former Highness on 25th November 1949. Then comes the very important document for purposes of examining the matter at issue. That Agreement is dated 23rd January 1950. That is the Agreement which His Highness the Maharaja entered into regarding privy purse, private property and rights and privileges. It is the interpretation of this document which becomes very pertinent for

deciding the matter at issue. I request the Chair to kindly bear with me if I take the House through some of the very important clauses relating to this matter. Sub-clause (1) says:—

> " The Maharaja of Mysore, shall, with effect from the first day of April 1950 be entitled to receive annually for his privy purse a sum of Rs. 26 lakhs free of all taxes."

I am not making any comment on the quantum of privy purse. But there is a proviso which is relevant and important. It is

> " The said amount is intended to cover all the expenses of the Maharaja and his family including the expenses on account of his personal staff and maintenance of his residences marriage and other ceremonies, and will neither be increased nor reduced for any reason whatsoever".

Here I would like to make one comment. I would take to request the house to mark the words maintainance of his residences This sum of Rs. 26 lakhs was intended to cover maintenance of his residence which are his residences? According to me, this are his private residences, not the Places, not at all these three Places, because the maintenance of these Places is covered by the Mysore Government Order of the year 1951. How did this list of private property come into existence? There has been an impression in this House and also elsewhere that this private property list came into existence as a result of the accession treaty which was entered into in the year 1947. It is not so. The private property list came into existence as a result of the Agreement relating to privy purse, private property and rights and privileges, which was entered into between the Secretary to the Government of India in the Ministry of States and the former Maharaja of Mysore. I will now make a reference to Article 2 which says:—

> " The Maharaja shall be entilled to the full ownership, use and enjoyment of all private properities as distinct from State properties belonging to him on the date of this Agreement".

This Agreement is dated 23rd January 1950 and he was entitled to the full owenership and use and enjoyment of all private properties. He owned on that date Clause 2 of Article 2 reads thus:

> " The Maharaja will furnish to the Government of India, before the 23rd day of January 1950, an inventory of all moveable properties including cash balances held by him".

The date mentioned here by which he had to furnish a list of his private property is the date of this Agreement itself. I take it that there was a lot of consultation and discussion between the Place Government of Mysore and also Government of India, and therefore I presume that the private property list was also fully and on the date all this was before the Government of India. There is an obligation cast on the former ruler of Mysore by clause 2 of Article 2 to furnish a

(SRI K. PUTTASWAMY)

ist of private property before 23rd January 1950, and accordingly the former Maharaja of Mysore has submitted a list. Then what follows? It is stated in clause 3 that if any dispute arises as to whether any item of property is the property of Maharaja or State property it shall be referred to such person as the Government of India may nominate and the decision of such person shall be final and binding on all concerned. This is a very important article. Under this, should there be any dispute between the State and the Palace regarding the list of private properties, the mode of settlement has been decided. What is the mode? It is this the Government of India will have to refer the matter to a person nominated by the Government of India and the decision of that person shall be final and binding on all concerned.

Madam Speaker, this is a very important clause. I presume that the former Maharaja had submitted a list of private properties to the Government of India and I also presume that the then Mysore Government should have exercised its mind regarding what property had to be treated as private property and what property had to be treated as State property. When the list was finalised, certain conditions were attached to some of the private properties in the list? There are five properties to which certain conditions are attached. The three properties that are at issue are the three Palaces—one at Mysore, one at Bangalore another at Ooty. For all these three palaces there is a common condition and that condition is that these are inalenable properties and the State shall maintain these palaces for the use of the Ruler & its successor. Why this condition was attached why did the Maharaja agree for this condition? I take it perhaps the then Govt. of Mysore must have taken a stand that they were the State properties. There must have been a contention between His Highness the Maharaja and the Government of Mysore regarding the nature of these three properties The Maharaja might have claimed these properties as belonging to his private property, and the State Government might have disputed his right to claim them as private property on the ground that these properties had been acquired by the funds of the State. Perhaps then they must have come to an understanding. The understanding was, the condition that has been included in the private property list According to that condition, it is unnecessary for me to state over again that the Maharaja had no power of alienation There was an obligation on the part of the State Government to maintain these three places. There are two other properties, one is the palace Offices. The Maharaja undertook to sell to Government when he did not require it for office purposes. The other property was Doddakere tankbed-about 90 acres of land. The Maharaja agreed to give it over for public purposes. These are the conditions as far as I rember for 5 of the properties in the private property list.

Now let us examine, whether it is open to His Highness the Maharaja to request the Government of India to make an alternation in the list of private property? My humble submission is that the Maharaja has no right to do so. The clause 3 of Article (2) came into operation only at the time of the preparation of the private property list. The private property list was prepared and it has been an agreed list. Therefore the mode prescribed for resolving the dispute also no longer exists. One other thing is that on the date on which the former Maharaja entered in to an agreement, he enjoyed the sovereign power. This is a document which has come into existence between the Dominion of India and also the Maharaja of Mysore for which the then Government of Mysore as a beneficiary of this agreement has also agreed. The Chief Secretary to Government of Mysore, Sri K. Srinivasan, has signed this private property list. My humble submission is that the Maharaja has no right to request the Government of India to remove the inalienability clause. Another interpretation that I pnt on this is that even supposing should the Government of India recognise that there is an existance of a dispute, there is a difference of opinion between the Government of Mysore and the Maharaja regarding the nature of these properties. What is it that they have to do, is I humbly submit, that the Government of India will have to nominate since other person to decide and that decision shall have to be considered as binding on both the parties. My point is that once the private property list is finalised, than everybody concerned becomes functus officio void and no power is left in them to reconsider the same; and even if it is going to be interpreted to mean that clause 3 of article 2 can be made use of. Now my humble submission is that the Government of India will have to nominate a person to decide this issue and that decision will have to be binding. This seems to be the legal position as far as I can see. I would like to make one more observation before I finish. Madam Speaker, the other day, the Chief Minister was kind enough to take the House into his confidence and read out the letter the Government had received from the Government of India and explained all the circustances leading on the settlement of this issue. The impression left in my mind then was, the present Cabinet to an inquiry made by the Government of India, have said that they have no objection for removing the inalienability clause. In the Upper House, Hon Sri Siddaveerappa who I expect has gone through the records fully, has stated on behalf of the Government that this Cabinet did not take any decision and it was the Governer during the Presidencial Rule who, had taken a decision. As for as I know Madam Speaker, the opinion of the Governor during the Presidential Rule was that he had no bjection for removing the inalienability clause provided Maharaja agrees to sell these properties only to Government of Mysore. That means, he restricted his power of alienation. This is an embargo or alienation private property. But according to the Governor, he was prepared to make the properties alienable only to Covernment of Mysore. A severe restriction on the

(Sri K. Puttaswamy)

powers of alienation was proposed. But I understood from the Chief Minister that the present Cabinet had no objection for these properties being treated as alienable. But I was very much surprised, by the Statement made by Siddaveerappa in the upper house. I take it that what the Chief Minister has stated on the floor of this House is a fact. But there is another matter which has confused me just now. The Hon. Member Sri Krishnan has made a reference to the Press Conference held by Sri Hanumanthaiya. Sri Hanumanthiah has said that the matter is not yet decided. He has also stated that the Government of India has not taken a final decision in this matter. If per chance, Government of India has not taken a final decision in this matter, I shall be very happy, in the light of these observations which I have made and after going through the several documents which are within the custody of the Government of Mysore, I am sure, the Chief Minister will definitely take a stand that the former Maharaja should not be permitted to alienate these properties.

I firmly believe that these three properties—considered from whatever angle, from the point of view of the Constitution or from the from the point of view of the interests of the State or from the point of view of historical facts-shall have to be treated as State properties and I am sure, Madam Speaker, that the Hon. Chief Minister will be able to consider all these points and take a decision, which would help to secure these properties for this State.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಈಗ ಈ ಎರಡು ಗಂಟೆಗಳ ಕಾಲದ ಚರ್ಚೆಯ ಸಂದರ್ಭದಲ್ಲಿ ಶ್ರೀಮಾನ್ ಪುಟ್ಟಸ್ವಾಮಿಯವರು ಮತ್ತು ಶ್ರೀಮಾನ್ ಕೃಷ್ಣನ್ ಅವರು ಈ ವಿಷಯದ ಬಗ್ಗೆ ಸುದೀರ್ಘವಾದಂಥ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕಳೆದ ಸಲ ನಾನು ಜಿ.ಎ.ಡಿ ಡಿಮ್ಯಾಂಡ್‌ನಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟರು. ಪುನಃ ಇನ್ನೊಂದು ಸಂದರ್ಭದಲ್ಲಿ ಈ ವಿಷಯ ಪ್ರಸ್ತಾಪಕ್ಕೆ ಬಂದಾಗಲೂ ಸಹ ಮಾನ್ಯ ಮುಖ್ಯ ಮಂತ್ರಿಗಳು ಸುದೀರ್ಘವಾದ ಹೇಳಿಕೆ ಕೊಟ್ಟರು. ಈ ವಿಷಯದ ಬಗ್ಗೆ ಸರ್ಕಾರದವರು ಹೇಳಿಕೆ ಕೊಡುವಾಗ ತಮ್ಮ ಹೇಳಿಕೆಯಲ್ಲಿ ಭಿನ್ನಭಿನ್ನವಾದಂಥ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹೇಳಿಕೆ ಕೊಡತಕ್ಕಂಥ ಕಾಲದಲ್ಲಿ ೧೯೭೦ರ ಸೆಪ್ಟೆಂಬರ್‌ನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿರತಕ್ಕ ಪತ್ರದ ಕೆಲವು ಅಂಶಗಳನ್ನು ತಿಳಿಸಿದರು. ಈ ಮೂರು ಅರಮನೆಗಳ ಬಗ್ಗೆ ಎದ್ದಿರತಕ್ಕಂಥ ವಿವಾದಗಳು ಏನಿದೆ ಅದಕ್ಕೆ ನಾವು ಹೋಗೆಯಲ್ಲ, ರಾಷ್ಟ್ರಪತಿಯವರ ಆಳ್ವಿಕೆಯಲ್ಲಿ ಅದು ನಡೆದಿದೆ ಎಂಬ ಮಾತನ್ನು ಶ್ರೀಮಾನ್ ಸಿದ್ಧವೀರಪ್ಪನವರು ಇದೇ ವಿಷಯದ ಬಗ್ಗೆ ಮೇಲ್ಮನೆಯಲ್ಲಿ ಪ್ರಸ್ತಾಪ ಮಾಡುತ್ತಾ ಅವರ ಅಭಿಪ್ರಾಯವನ್ನು ತಿಳಿಸಿದ್ದಾರೆ. ಇದರಿಂದ ಗೊಂದಲಕ್ಕೆ ಎಡೆ ಕೊಡುತ್ತಿದೆ. ಸರ್ಕಾರದವರು ಮಾಡಿರತಕ್ಕ ಒಂದು ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ನಾನಾ ತಪ್ಪುಗಳನ್ನು ಮಾಡುವುದಕ್ಕೆ ಹೊರಟಿದ್ದಾರೋ ಏನೋ ಎಂಬ ಅನುಮಾನ ನಮಗೆ ಬಂದಿದೆ. ಈ ಸಂದರ್ಭದಲ್ಲಿ ಸುಳ್ಳು ಎಂಬ ಪದವನ್ನು ಉಪಯೋಗಿಸುವುದು ಸರಿಯಲ್ಲ. ಏಕೆಂದರೆ ಅದು ಪಾರ್ಲಿಮೆಂಟರಿ ಪದವಲ್ಲ. ಆದರೂ ನಮ್ಮ ವಾದವನ್ನು ಪುಷ್ಟೀಕರಿಸುವುದಕ್ಕೆ ಆ ಪದವನ್ನು ಉಪಯೋಗ ಮಾಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯದ ಬಗ್ಗೆ ಸ್ಪಷ್ಟೀಕರಣ ಮಾಡಬೇಕೆಂದು ಕೇಳುತ್ತೇನೆ. ಒಂದು ಸುಳ್ಳನ್ನು ಹೇಳಿದರೆ ಅದನ್ನು ಸಮರ್ಥಿಸಿಕೊಳ್ಳಲು ನಾನಾ ಸುಳ್ಳುಗಳನ್ನು ಹೇಳಬೇಕಾಗುವುದರಿಂದ ಇರತಕ್ಕಂಥ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಮಾನ್ಯ ಹನುಮಂತಯ್ಯನವರು ಸಹ ರಾಜೀನಾಮೆ ಕೊಡುವುದಕ್ಕೆ ಎರಡು ದಿವಸಕ್ಕೆ ಮೊದಲು ಈ ಬಗ್ಗೆ ಕೇಂದ್ರ ಸರ್ಕಾರದವರು ಅಂತಿಮ

ನಿರ್ಣಯ ತೆಗೆದುಕೊಂಡಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಆದರೆ ತಾವು ೧೯೭೧ರ ಸೆಪ್ಟೆಂಬರ್ ತಿಂಗಳಲ್ಲಿಯೇ ಕೇಂದ್ರ ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದಾರೆಂದು ಅವರಿಂದ ಬಂದಂಥ ಪತ್ರದ ಮೂಲಕ ಸ್ಪಷ್ಟೀಕರಣ ಮಾಡಿದ್ದೀರಿ. ೧೯೭೧ರ ಸೆಪ್ಟೆಂಬರ್ ತಿಂಗಳಲ್ಲಿಯೇ ಅವರು ಅಂತಿಮ ನಿರ್ಣಯ ತೆಗೆದುಕೊಂಡಿರಬೇಕಾದರೆ ಪುನಃ ಕೇಂದ್ರ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಕೇಳುವ ಗೋಜಿಗೆ ಏತಕ್ಕೆ ಹೋಗಬೇಕಾಗಿತ್ತು. ಈ ಒಂದು ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಇದರ ಜೊತೆಗೆ ನಾನು ಅವೊತ್ತು ಮುಖ್ಯಮಂತ್ರಿಗಳ ಮೇಲೆ ಇದೇ ವಿಷಯದಲ್ಲಿ ಒಂದು ಆರೋಪಣೆ ಮಾಡಿದಾಗ ಅವರು ಹೇಳಿದರು, ನಾನು ಲಾ-ಡಿಪಾರ್ಟ್‌ಮೆಂಟಿನ ಒಪೀನಿಯನ್ ಮೀರಿ ಹೋಗಿಲ್ಲ, ಅವರ ಒಪೀನಿಯನ್‌ಗೆ ಅನುಗುಣವಾಗಿ ತೀರ್ಮಾನ ತೆಗೆದುಕೊಂಡಿದ್ದೇನೆಂದು ಹೇಳಿದರು. ಶ್ರೀಮಾನ್ ಪುಟ್ಟಸ್ವಾಮಿಯವರು ತಮ್ಮ ಭಾಷಣದಲ್ಲಿ ಈ ಸ್ಟೇಟ್ ಪ್ರಾಪರ್ಟಿ ಬಗ್ಗೆ ಮಹಾರಾಜರಿಗೂ ಮತ್ತು ಕೇಂದ್ರ ಸರ್ಕಾರಕ್ಕೂ ಏನಾದರೂ ವಿವಾದ ಉಂಟಾದರೆ ಮೂರನೇ ಒಬ್ಬ ವ್ಯಕ್ತಿಯನ್ನು ನೇಮಕ ಮಾಡಿ, ಅವರು ಕೊಡತಕ್ಕಂಥ ಒಂದು ತೀರ್ಪಿಗೆ ಇಬ್ಬರೂ ಬದ್ಧರಾಗಬೇಕು ಎಂಬ ಕಲಂನ್ನು ಮಹಾರಾಜರಿಗೂ, ಕೇಂದ್ರ ಸರ್ಕಾರಕ್ಕೂ ಆಗಿರತಕ್ಕ ಒಪ್ಪಂದದಲ್ಲಿ ಸೇರಿಸಲಾಗಿದೆ ಎಂಬ ಮಾತನ್ನು ಉಲ್ಲೇಖ ಮಾಡಿದರು. ಇದರ ಬಗ್ಗೆ ಕೆಲವು ಕಾನ್ಫಿಡೆನ್ಷಿಯಲ್ ಡಾಕ್ಯುಮೆಂಟ್ಸ್ ಇರುವುದರಿಂದ ಅವುಗಳನ್ನು ಸಭೆಯ ಮುಂದೆ ಇಡುವುದಕ್ಕಾಗುವುದಿಲ್ಲವೆಂದು ಸರ್ಕಾರದವರು ಲೆಜಿಸ್ಲೇಚರ್ ಸೆಕ್ರೆಟರಿಯವರಿಗೆ ತಿಳಿಸಿದ್ದಾರೆಂಬ ಅಂಶವನ್ನು ಮಾನ್ಯ ಕೃಷ್ಣನ್ ಅವರು ಹೇಳಿದರು. ಮುಖ್ಯವಾಗಿ ಇದರ ಬಗ್ಗೆ ಲಾ-ಡಿಪಾರ್ಟ್‌ಮೆಂಟಿನವರು ಕೊಟ್ಟಿರುವ ಅಭಿಪ್ರಾಯವನ್ನು ಈ ಸಭೆಯ ಮುಂದೆ ಇಡಬೇಕಾಗುತ್ತದೆ. ಹಿಂದೆ ಈ ರಾಜ್ಯದಲ್ಲಿ ಜನತಂತ್ರ ಆಡಳಿತ ಇದ್ದಾಗ, ಲಾ-ಡಿಪಾರ್ಟ್‌ಮೆಂಟಿನವರು ಈ ಮೂರು ಅರಮನೆಗಳನ್ನು ಪರಭಾರೆ ಮಾಡುವುದಕ್ಕೆ ಅವಕಾಶ ಇಲ್ಲದಿರುವುದನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ. ಅದರ ಒಂದು ಆಧಾರದ ಮೇಲೆ ಅಂದಿನ ಸರ್ಕಾರದವರು ಪರಭಾರೆ ಮಾಡುವುದಕ್ಕೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಸ್ಪಷ್ಟೀಕರಣ ಮಾಡಿದ್ದಾರೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಕಳೆದ ಸಲ ಇದರ ಬಗ್ಗೆ ಉತ್ತರ ಕೊಡುವಾಗ ಯಾವುದೇ ಕಾರಣದಿಂದ ಲಾ-ಡಿಪಾರ್ಟ್‌ಮೆಂಟಿನ ಒಪೀನಿಯನನ್ನು ಉಲ್ಲಂಘನೆ ಮಾಡಿಲ್ಲ ಎಂದು ಸ್ಪಷ್ಟೀಕರಣ ಮಾಡಿದರು. ಆದರಿಂದ ನಮಗೆ ಸಂಶಯ ಬಂದಿದೆ. ಈ ಒಂದು ಸಂಶಯದಿಂದ ನಾವು ವಿಮುಕ್ತರಾಗಬೇಕಾದರೆ ಲಾ-ಡಿಪಾರ್ಟ್‌ಮೆಂಟಿನವರು ಏನು ಒಪೀನಿಯನ್ ಕೊಟ್ಟಿದ್ದಾರೆಂಬುದನ್ನು ಸರ್ಕಾರದವರು ಈ ಸಭೆಯ ಮುಂದೆ ಇಡಬೇಕು. ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಈ ಸಭೆಯ ಮುಂದೆ ಇಡುವುದು ಸೂಕ್ತ ಎಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಮೊನ್ನೆ ಆಂಧ್ರ ರಾಜ್ಯದಲ್ಲಿ ಅಲ್ಲಿಯ ಹೌಸಿಂಗ್ ಬೋರ್ಡಿನವರು ಒಂದು ಕಟ್ಟಡವನ್ನು ೪೦ ಲಕ್ಷ ರೂಪಾಯಿಗಳಿಗೆ ಕೊಳ್ಳುವ ಪರಿಸ್ಥಿತಿ ಬಂದಾಗ, ಅದು ಅಲ್ಲಿಯ ಶಾಸನ ಸಭೆಯಲ್ಲಿ ಪ್ರಸ್ತಾಪಕ್ಕೆ ಬಂದು, ಅದು ಒಂದು ಪಾಲಿಸಿಗೆ ಸಂಬಂಧಪಟ್ಟ ಪ್ರಶ್ನೆಯಾದ್ದರಿಂದ ಅದರ ಬಗ್ಗೆ ಅಲ್ಲಿಯ ಸರ್ಕಾರಕ್ಕೂ ಮತ್ತು ಸದಸ್ಯರಿಗೂ ಜಿಜ್ಞಾಸೆ ಬಂದು, ಕೊನೆಗೆ ಅಲ್ಲಿಯ ಮಾನ್ಯ ಸದಸ್ಯರ ಅಭಿಪ್ರಾಯದ ಮೇಲೆ ಮುಖ್ಯ ಮಂತ್ರಿಗಳು ಅದನ್ನು ಖರೀದಿ ಮಾಡುವುದನ್ನು ಕೈಬಿಡುತ್ತೇನೆಂಬ ಮಾತನ್ನು ಹೇಳಿದ್ದಾರೆ. ಇಂತಹ ಒಂದು ಘಟನೆ ಅಲ್ಲಿ ನಡೆದಿದೆ. ಆ ಪ್ರಕರಣವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ತಾವು ಇದರ ಬಗ್ಗೆ ಏನಾದರು ಒಂದು ನಿಲುವನ್ನು ತಾಳಬೇಕಾದರೆ ಅದಕ್ಕೆ ಆಧಾರ ಇರಬೇಕು. ಆಧಾರ ಇಲ್ಲದಿದ್ದರೆ, ಬಹುಶಃ ಈಗಿನ ಒಂದು ಆರೋಪಣೆ ಏನಿದೆ, ಆ ಆರೋಪಣೆಗೆ ಪೂರ್ಣವಾದ ಸಮಜಾಯಿಷಿ ಕೊಡುವುದಕ್ಕೆ ಕಷ್ಟವಾಗುತ್ತದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ತಮ್ಮ ವಾದನ್ನು ಸಮರ್ಥನೆ ಮಾಡಿಕೊಳ್ಳುವ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ಬಂದಂಥ ಪತ್ರವನ್ನು ಬಹಿರಂಗಪಡಿಸಿದ್ದಾರೆ. ಅದೇ ರೀತಿ ಕಳೆದ ಎರಡು ವರ್ಷಗಳಿಂದ ಇದರ ಬಗ್ಗೆ ನಡೆದಿರತಕ್ಕಂಥ ಪತ್ರ ವ್ಯವಹಾರಗಳನ್ನು ಮತ್ತು ಲಾ-ಡಿಪಾರ್ಟ್‌ಮೆಂಟಿನ ಒಪೀನಿಯನನ್ನು ಈ ಸಭೆಯ ಪರಿಶೀಲನೆಗೆ ಇಡಬೇಕು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಈ ವಿಷಯದ ಬಗ್ಗೆ ನಾವೇನೂ ಕಾನೂನು ಪಂಡಿತರಲ್ಲವಾದ್ದರಿಂದ, ಈ ಸಭೆಗೆ ಅಡ್ವೊಕೇಟ್ ಜನರಲ್ ಅವರು ಬಂದು ಅವರ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಅವಕಾಶವಿದೆ. ಅವರು ಬಂದು ಇದರ ಬಗ್ಗೆ ಏನು ಕರಾರು ಇದೆ ಎಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದೇ ಆದರೆ ಮಾನ್ಯ ಸದಸ್ಯರಲ್ಲಿರತಕ್ಕ ಅನುಮಾನವನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ತಮ್ಮ ಮೇಲೆ ಏನು ಒಂದು ಅಪಾದನೆ ಇದೆ ತಾವು ಏನು ಇದಕ್ಕೆ ಒಂದು ಒಪ್ಪಿಗೆಯನ್ನು ಕೊಡುವುದಕ್ಕೆ ಕೈಹಾಕಿದ್ದೀರಿ, ಆ ರೀತಿ ಒಪ್ಪಿಗೆ ಕೊಡುವುದರಿಂದ ಈ ರಾಜ್ಯದ ಹಿತಕ್ಕೆ ಧಕ್ಕೆಯಾಗುತ್ತದೆ ಎಂದು ಏನು ಅಭಿಪ್ರಾಯ ಇದೆ ಅದನ್ನು ಸ್ಪಷ್ಟೀಕರಣ ಮಾಡಬೇಕಾದ ಅವಶ್ಯಕತೆ ಇದೆ ಎಂದು ಹೇಳುತ್ತೇನೆ. ಈ ಬಗ್ಗೆ ಅಡ್ವೊಕೇಟ್ ಜನರಲ್ ಅವರು ಕೆಲವು ಕಾಲ ಸಂಬಂಧಪಟ್ಟ ದಾಖಲೆಗಳನ್ನು ನೋಡಲು ತೆಗೆದುಕೊಂಡರೂ ಸರಿಯೆ, ಅನಂತರವಾದರೂ ಅವರು ಈ ಸಭೆಗೆ ಬಂದು ತಮ್ಮ ಅಭಿಪ್ರಾಯವನ್ನು ಈ ಸಭೆಗೆ ಕೊಡುವುದು ಸೂಕ್ತ ಎಂದು ಹೇಳುತ್ತೇನೆ.

(ಶ್ರೀ ಎಚ್. ಡಿ. ದೇವೇಗೌಡ)

3-30 P. M.

ಲಾ ಡಿಪಾರ್ಟ್‌ಮೆಂಟ್ ಏನು ಒಪೀನಿಯನ್ ಈ ಬಗ್ಗೆ ಕೊಟ್ಟಿದೆ ಎನುವುದನ್ನು ಈ ಸಭೆಗೆ ಸ್ಪಷ್ಟೀಕರಣ ಮಾಡಬೇಕು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನೂ ಈ ಸಭೆಯ ಮುಂದೆ ಇಡಬೇಕು, ಮತ್ತು ಇದಕ್ಕೆ ಸಂಬಂಧಪಟ್ಟ ಹಾಗೆ ಪೂರ್ಣವಾಗಿ ಸ್ಪಷ್ಟೀಕರಣ ಮಾಡಬೇಕು. ಈ ಬಗ್ಗೆ ಕಾನೂನು ಪ್ರಕಾರ ನಿರ್ಣಯ ತೆಗೆದುಕೊಂಡಿದ್ದೀರಾ ಹೇಗೆ ? ಈ ವಿಚಾರದಲ್ಲಿ ನಿಮ್ಮ ಪಾರ್ಟಿಯಲ್ಲಿ ಏನು ಚರ್ಚೆ ನಡೆದಿದೆ ? ಇವೊತ್ತು ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿದ ಹಾಗೆ ರಾಜ್ಯ ಸರ್ಕಾರದವರು ಮಹಾರಾಜರಿಗೆ ಪ್ರತಿ ವರ್ಷ ೨೬ ಲಕ್ಷ ರೂಪಾಯಿ ಗಳನ್ನು ಕೊಡುತ್ತಾ ಬಂದಿದ್ದಾರೆ. ಇದರ ಜೊತೆಗೆ ಮೂರು ಅರಮನೆಗಳಿಗೂ ಕೂಡ ೭ ಸಾವಿರ ರೂಪಾಯಿಗಳವರೆಗೂ ಪ್ರತಿ ವರ್ಷ ರಾಜ್ಯ ಸರ್ಕಾರದವರು ಕೊಡುತಾ ಬಂದಿದ್ದಾರೆ. ಈ ಅರಮನೆಯ ವಿಚಾರ ಎಲ್ಲಾ ಜನತೆಯ ಮನಸ್ಸನ್ನೂ ಕೆರಳಿಸಿದೆ. ಅದ್ದರಿಂದ ಈ ಬಗ್ಗೆ ಒಂದು ಸುಧೀರ್ಘವಾದ ಹೇಳಿಕೆಯನ್ನು ಕೊಟ್ಟು ಈ ವ್ಯವಹಾರಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಈ ಸಭೆಯ ಮುಂದೆ ಇಡಬೇಕು. ಈ ವಿಚಾರದಲ್ಲಿ ಜನತೆಗೆ ಏನು ಸಂಶಯ ಬಂದಿದೆ. ಅದನ್ನು ಬಗೆಹರಿಸಬೇಕು. ಮತ್ತು ಈ ಪ್ರಶ್ನೆಯನ್ನು ಕರಾರುವಾಕ್ಕಾಗಿ ತಿಳಿಯಲು ಇವೊತ್ತು ಅಡ್ವೊಕೇಟ್ ಜನರಲ್ ಅವರನ್ನು ಕರೆಸಿ ಇದರ ಬಗ್ಗೆ ಪೂರ್ಣವಾದ ವಿಷಯವನ್ನು ಈ ಸಭೆಯ ಎಲ್ಲಾ ಸದಸ್ಯರ ಗಮನಕ್ಕೂ ತರುವುದು ಸೂಕ್ತ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಮೂರು ಅರಮನೆಗಳ ವಿಚಾರದಲ್ಲಿ ಈ ಈಗಾಗಲೇ ನಮ್ಮ ಮಾನ್ಯ ಮಿತ್ರರು ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸರ್ಕಾರ ಈ ಮೂರು ಅರಮನೆಗಳನ್ನೂ ತನ್ನ ಸ್ವಾಧೀನದಲ್ಲಿ ಉಳಿಸಿಕೊಳ್ಳುವುದರಲ್ಲಿ ಏತಕ್ಕೆ ಹಿಂದೆಮುಂದೆ ನೋಡುತ್ತಿದೆ. ಈ ಬಗ್ಗೆ ಹಿಂದಿನ ಸರ್ಕಾರ ಕೂಡ ಒಂದು ನಿಲುವನ್ನು ತೆಗೆದುಕೊಂಡದ್ದನ್ನು ಪ್ರಸ್ತಾಪ ಮಾಡಲಾಗಿದೆ. ಈ ಮೂರು ಅರಮನೆಗಳೂ ರಾಜ್ಯಸರ್ಕಾರಕ್ಕೆ ಸೇರತಕ್ಕಂಥಾ ಸ್ವತ್ತುಗಳು. ಅವುಗಳನ್ನು ಮಾರಾಟ ಮಾಡುವುದಕ್ಕೆ ಮಹಾರಾಜರಿಗೆ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹಿಂದಿನ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದರು ಎನ್ನುವ ಬಗ್ಗೆ ಒಂದು ಪತ್ರವನ್ನು ಹಿಂದಿನ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಓದಿದ್ದು ನಮಗೆ ಗೊತ್ತಿದೆ. ಹಿಂದಿನ ಸರ್ಕಾರ ಪ್ರಗತಿವಿರೋಧಿ ಸರ್ಕಾರ ಎಂದು ನೀವು ಅನೇಕ ಸಂದರ್ಭದಲ್ಲಿ ವರ್ಣನೆ ಮಾಡಿದ್ದೀರಿ. ಅಂಥಾ ಪ್ರಗತಿ ವಿರೋಧಿ ಸರ್ಕಾರ ಮೂರು ಅರಮನೆಗಳನ್ನು ರಾಜ್ಯಸರ್ಕಾರದ ಸ್ವಾಧೀನಕ್ಕೆ ಉಳಿಸಿಕೊಳ್ಳುವುದಕ್ಕೆ ತೀರ್ಮಾನವನ್ನು ಕೈಗೊಂಡಿದ್ದಾಗ ಪ್ರಗತಿಪರ ಸರ್ಕಾರ ಎಂದು ಹೇಳಿಕೊಳ್ಳುವ ಈಗಿನ ಸರ್ಕಾರ ಮೂರು ಅರಮನೆಗಳನ್ನು ಪರಭಾರೆ ಮಾಡುವುದಕ್ಕೆ ಏತಕ್ಕೆ ಒಪ್ಪಿತು ? ಇವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ಅರಮನೆಗಳು ರಾಜ್ಯ ಸರ್ಕಾರಕ್ಕೆ ಸೇರಬೇಕಾದ್ದು ಇದರಲ್ಲಿ ಮಹಾರಾಜರಿಗೆ ಹಕ್ಕು ಇಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗಿತ್ತು. ಈ ವಿಷಯದಲ್ಲಿ ರಾಜ್ಯ ಸರ್ಕಾರದವರು ಹಿಂದೆ ಬಿದ್ದಿದ್ದಾರೆ. ಇವುಗಳನ್ನು ರಾಜ್ಯ ಸರ್ಕಾರಕ್ಕೆ ಉಳಿಸಿಕೊಳ್ಳುವುದರಲ್ಲಿ ಈ ಸರ್ಕಾರದ ಮುಖ್ಯ ಮಂತ್ರಿಗಳು ಸಂಪೂರ್ಣವಾಗಿ ವಿಫಲರಾಗಿದ್ದಾರೆಂದು ನಾನು ಬಹಳ ವಿಷದದಿಂದ ಹೇಳುತ್ತಿದ್ದೇನೆ. ಈ ಮೂರು ಅರಮನೆಗಳನ್ನು ಕಟ್ಟುವ ಸಂಧರ್ಭದಲ್ಲಿ ಇದಕ್ಕೆ ಸರ್ಕಾರದವರು ಹಣವನ್ನು ಖರ್ಚು ಮಾಡಿದ್ದಾರೆಯೋ ಅಥವಾ ಮಹಾರಾಜರು ತಮ್ಮ ಸ್ವಂತ ಹಣವನ್ನು ಖರ್ಚು ಮಾಡಿದ್ದಾರೆಯೋ ಎನ್ನುವುದು ದಾಖಲೆಯಲ್ಲಿ ನೋಡಿದರೆ ಸಿಕ್ಕುತ್ತದೆ. ಈ ಅರಮನೆಗಳನ್ನು ಕಟ್ಟುವಾಗ ಸರ್ಕಾರದ ಬೊಕ್ಕಸದಿಂದ ಹಣ ಖರ್ಚಾಗಿದ್ದರೆ ಅದು ಲೆಕ್ಕದಲ್ಲಿ ಇದ್ದರೆ ಅದು ನ್ಯಾಯವಾಗಿ ಸರ್ಕಾರಕ್ಕೆ ಸೇರಬೇಕು. ಆದ್ದರಿಂದ ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕು. ಹಿಂದಿನ ಸರ್ಕಾರದವರು ಈ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ತಿಳಿಸುವಾಗ ನ್ಯಾಯಾಂಗ ಇಲಾಖೆಯವರು ಕೂಡ ತಮ್ಮ ಅಭಿಪ್ರಾಯವನ್ನೂ ಸರ್ಕಾರಕ್ಕೆ ತಿಳಿಸಿದ್ದಾರೆಂದು ಗೊತ್ತಾಗಿದೆ. ಅದ್ದರಿಂದ ನ್ಯಾಯಾಂಗ ಇಲಾಖೆಯವರು ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ ಎಂಬುದನ್ನು ಈ ಸದನದ ಮುಂದೆ ಇಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಈ ಗಾಗಲೇ ಶ್ರೀ ಮಾನ್ ದೇವೇಗೌಡರು ಹೇಳಿದ ಹಾಗೆ ಈ ಬಗ್ಗೆ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯವನ್ನೂ ಪಡೆಯುವುದು ಸೂಕ್ತ. ಇದು ೫೦ ಸಾವಿರ ಅಥವಾ ಲಕ್ಷ ರೂಪಾಯಿಗಳಿಗೆ ಸಂಬಂಧಪಟ್ಟ ವಿಷಯವಲ್ಲ. ಇದು ಸುಮಾರು ೧೦ ಕೋಟಿ ರೂಪಾಯಿ ಬೆಲೆ ಬಾಳುವ ಸ್ವತ್ತು. ಇದುವರೆಗೂ ಕೂಡ ಈ ಅರಮನೆಗಳ ಮೇಲೆ ಸರ್ಕಾರ ಪ್ರತಿ ವರ್ಷವೂ ಹಣವನ್ನು ಖರ್ಚು ಮಾಡಿದೆ. ಇದನ್ನು ಪರಭಾರೆ ಮಾಡುವುದಕ್ಕೆ ಅವರಿಗೆ ಅವಕಾಶವಿಲ್ಲ. ಇದು ಮಹಾರಾಜರ ಸ್ವಂತ ಆಗಿ ಆಗುವುದಕ್ಕೆ ಅವಕಾಶವಿಲ್ಲ. ಆದ ರಿಂದ ಅವರು ಆ ಅರಮನೆಗಳನ್ನು ಮಾರಾಟ ಮಾಡುವುದಕ್ಕೆ ಅವಕಾಶವಿ

ಅದು ಸರ್ಕಾರಕ್ಕೆ ಸೇರಿದ ಆಸ್ತಿ. ಸರ್ಕಾರದವರು ಈ ಅರಮನೆಗಳಿಗೆ ಹಣವನ್ನು ಖರ್ಚು ಮಾಡಿದ್ದಾರೆಸಿ ಆದ್ದರಿಂದ ಇದು ಸರ್ಕಾರದ್ದು ಎಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಈ ಅರಮನೆಗಳಿಲ್ಲ ಐತಿಹಾಸಿಕ ಹಿನ್ನೆಲೆ ಇರುವ ಕಾರಣದಿಂದ ಇವುಗಳನ್ನು ಉಳಿಸಿಕೊಂಡು ಜನಗಳಿಗೆ ತೋರಿಸಬೇಕಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದಲೂ ಮತ್ತು ನ್ಯಾಯಾಂಗ ದೃಷ್ಟಿಯಿಂದಲೂ ಕೂಡ ಇವು ರಾಜ್ಯ ಸರ್ಕಾರಕ್ಕೆ ಸೇರತಕ್ಕವುಗಳು ಎಂದು ಹಿಂದಿನ ಸರ್ಕಾರದವರು ತೀರ್ಮಾನ ಕೈಗೊಂಡದ್ದನ್ನು ಬದಲಾಯಿಸುವುದಕ್ಕೆ ಯಾವ ಸಕಾರಣ ಕೂಡ ಇಲ್ಲ. ಅಗ್ರಿಮೆಂಟ್ ಪ್ರಕಾರ ಆ ಬಗ್ಗೆ ಡಿಸ್‌ಪ್ಯೂಟ್ ರೈಜ್ ಮಾಡಬಹುದು. ಆಗ ಕೇಂದ್ರ ಸರ್ಕಾರದವರು ಒಬ್ಬ ಅಧಿಕಾರಿಯನ್ನು ನೇಮಿಸಿ ಅವರು ಈ ಬಗ್ಗೆ ಒಂದು ತೀರ್ಮಾನ ಕೊಟ್ಟರೆ ಅದಕ್ಕೆ ಎಲ್ಲರೂ ಬದ್ಧರಾಗಿರಬೇಕು ಎಂದು ಹೇಳಬಹುದು. ಅಕಸ್ಮಾತ್ತಾಗಿ ರಾಜ್ಯಪಾಲರು ಇವುಗಳನ್ನು ಪರಭಾರೆ ಮಾಡುವುದಕ್ಕೆ ಏನು ಅಭಿಪ್ರಾಯವನ್ನು ಕೊಟ್ಟಿದ್ದರು ಅದನ್ನು ಅವರು ತಿರಸ್ಕಾರ ಮಾಡಬಹುದು. ಆದ್ದರಿಂದ ಇದು ಇತ್ಯರ್ಥವಾಗಬೇಕು. [ಅವು ಮಹಾರಾಜರ ಆಸ್ತಿಯೆಂದು ತೀರ್ಮಾನವಾಗಿದ್ದರೆ. ಆ ಬಗ್ಗೆ ನಾವು ಮುಂದೆ ಏನು ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಮೂರು ಅರಮನೆಗಳನ್ನೂ ಉಳಿಸಿಕೊಳ್ಳುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಯೋಜನೆ ಮಾಡಬೇಕು ಅದನ್ನು ಬೇರೆಯವರಿಗೆ ಮಾರಾಟ ಮಾಡುವುದಕ್ಕೆ ಅವಕಾಶ ಕೊಡಬಾರದು ಈ ಪ್ರಾಪರ್ಟಿ ವಿಚಾರದಲ್ಲಿ ಡಿಸ್‌ಪ್ಯೂಟ್ ಬಂದರೆ ಅದನು ತೀರ್ಮಾನ ಮಾಡುವುದಕ್ಕೆ ಯಾವುದಾದರೂ ಒಂದು ಟ್ರಿಬ್ಯುನಲ್‌ಗೆ ಒಳಪಡಿಸಿ ಈ ಬಗ್ಗೆ ತೀರ್ಮಾನವನ್ನು ಪಡೆಯಬಹುದು. ಈ ರೀತಿಯಿಂದ ಯಾವುದೇ ರೀತಿಯಿಂದಲಾದರೂ ಯೋಚನೆ ಮಾಡಿ ಈ ಮೂರು ಅರಮನೆಗಳನ್ನೂ ಉಳಿಸಿಕೊಳ್ಳುವುದಕ್ಕೆ ಸರ್ಕಾರದವರು ಸರ್ವ ಪ್ರಯತ್ನವನ್ನೂ ಮಾಡಬೇಕು ಎಂದು ನಾನು ಒತ್ತಾಯ ಪಡಿಸುತ್ತೇನೆ. ಶ್ರೀಮಾನ್ ಕೃಷ್ಣನ್ ಅವರು ಹೇಳಿದ ಮಾತನ್ನು ನಾನು ಪುಷ್ಟೀಕರಿಸುತ್ತಾ ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ,

MR. DEPUTY SPEAKER —in the chair

‡ ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸತತವಾಗಿ ೨೦ ವರ್ಷಗಳಿಂದ ಆಡಳಿತವನ್ನು ನಡೆಸಿಕೊಂಡು ಬಂದಿರತಕ್ಕ ನಮ್ಮ ಪಕ್ಷಕ್ಕೆ ಎದುರು ಕಡೆ ಕುಳಿತಿರತಕ್ಕಂತಹ ಮಿತ್ರರು ನಮ್ಮಿಂದ ರಾಜ್ಯದಲ್ಲಿ ಅನರ್ಥವಾಯಿತು. ಮತ್ತು ದೇಶ ಹೋಯಿತು ಎಂದು ಹೇಳಿದ್ದಾರೆ. ನಾವು ಗೌರವದಿಂದ ಇವರು ಹೇಳಿದ್ದನ್ನು ತಲೆಬಾಗಿ ಕೇಳಿದ್ದೇವೆ. ಪ್ರಗತಿಪರವಾದ ಕಾರ್ಯಗಳನ್ನು ಮಾಡತಕ್ಕವರು ಮತ್ತು ಬಡವರನ್ನು ಉದ್ಧಾರ ಮಾಡತಕ್ಕವರು ಮತ್ತು ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ತಿ ಮಿತಿಯನ್ನು ತರುವುದಕ್ಕೆ ಹೋರಾಟ ಜನರು ನೀವು ಇವತ್ತು ಈ ಅರಮನೆಗಳಿಗೆ ೧೫ ಕೋಟಿ ರೂಪಾಯಿ ಬೆಲೆಬಾಳುತ್ತದೆ ಎಂಬುದನ್ನು ಎಲ್ಲರೂ ಹೇಳುತ್ತಿದ್ದಾರೆ. ಇಷ್ಟು ಬೆಲೆ ಬಾಳುತ್ತದೆ. ಎಂದು ನಿಗದಿ ಮಾಡಲ್ಪಡಿರತಕ್ಕ ಸೊತ್ತನ್ನು ಒಬ್ಬ ವ್ಯಕ್ತಿಗೆ ಇಟ್ಟುಕೊಳ್ಳುವುದಕ್ಕೆ ಹೆಚ್ಚಿನ ಅವಕಾಶ ಮಾಡಿಕೊಡುವುದನ್ನು ನೋಡುವುದಾದರೆ ನೀವು ಬಡವರ ಉದ್ಧಾರವನ್ನು ಮತ್ತು ಸಾಮಾನ್ಯ ಜನರ ಏಳಿಗೆಯನ್ನು ಎಷ್ಟರಮಟ್ಟಿಗೆ ಮಾಡಬಹುದು ಎಂದು ತಿಳಿದುಕೊಳ್ಳಬಹುದು ಆದರಲ್ಲೂ ಈ ರೀತಿಯಾದಾಗ ನಮ್ಮಂತಹ ಜನರ ಕರುಳು ಕಿತ್ತುಹೋದ ಹಾಗಾಗುತ್ತದೆ. ನೀವು ಇವತ್ತು ಪಟ್ಟಣ ಮತ್ತು ಗ್ರಾಮಗಳಲ್ಲಿ ಆಸ್ತಿ ಮಿತಿಯನ್ನು ತರುವುದಕ್ಕೆ ಹೊರಟಂತಹ ಜನರು ಹೀಗಿರುವಾಗ ನೀವು ಏನು ಇವತ್ತು ಮಾಡುತ್ತಿದ್ದೀರಿ ಅದನ್ನು ದೇಶದ ಜನತೆ ಪರೀಕ್ಷೆ ಮಾಡಿ ನೋಡುತ್ತಾರೆ. ನೀವು ಅಂಥ ಒಂದು ಮಹಾಗ್ನಿ ಪರೀಕ್ಷೆಗೆ ಒಳಗಾಗಬೇಡಿ ಪ್ರಗತಿಪರವಾಗಿ ಏನು ಮಾಡುತ್ತೇನೆಂದು ಹೇಳುತ್ತಿದ್ದೀರಿ ಅದನ್ನು ಕಾರ್ಯಗತಮಾಡಿ ಅದು ಇವತು ರಾಜ್ಯ ಸರ್ಕಾರದ ಸೊತ್ತು ಆಗದಿದ್ದ ಪಕ್ಷದಲ್ಲಿ ಈ ಮೂರು ಅರಮನೆಗಳಿಗೆ ಕಾಮಗಾರಿ ಬಗ್ಗೆ ೨೦ ಸಾವಿರ ರೂಪಾಯಿಗಳನ್ನು ಒಂದು ವರ್ಷಕ್ಕೆ ಕೊಟ್ಟುಕೊಂಡು ಬರುವ ಅವಶ್ಯಕತೆ ಏನಿತ್ತು ? ಇವತ್ತು ಮಾನ್ಯ ಮುಖ್ಯಮಂತ್ರಿಯವರು ಪಟ್ಟಣದಲ್ಲಿ ಒಂದು ಸಾರಿ ಎರಡು ಲಕ್ಷ ಆಸ್ತಿ ಮಿತಿ ಇಡುತ್ತೇವೆಂದು ಹೇಳುತ್ತಾರೆ ಇನ್ನೊಂದು ಸಲ ಮೂರು ಲಕ್ಷ ಇಡುತ್ತೇವೆಂದು ಹೇಳುತ್ತಿದ್ದಾರೆ. ಹೀಗೆ ಹೇಳಿದ ಮುಖ್ಯಮಂತ್ರಿಯವರು ಅವರ ಅಧಿಕಾರದಲ್ಲಿ ೧೫ ಕೋಟಿ ಬೆಲೆ ಬಾಳುವ ಒಂದು ಆಸ್ತಿಯನ್ನು ಒಬ್ಬರಿಗೆ ಬಿಟ್ಟುಕೊಡುವುದು ಅಂದರೆ ನಮಗೆ ಭಯವಾಗುತ್ತಿದೆ. ಸಾಮಾನ್ಯ ಜನರ ಬಗ್ಗೆ ಬಡವರ ಬಗ್ಗೆ ಅನುಕಂಪ ತೋರಿಸುತ್ತಿರುವ ಮುಖ್ಯಮಂತ್ರಿಯವರು ಹೀಗೆ ಬಿಡುತ್ತಾ ಇರುವಾಗ ಇಂತಹ ಒಂದು ಅನಿಷ್ಟ ಕಾಲ ಮೈಸೂರು ರಾಜ್ಯಕ್ಕೆ ಬಂತಲ್ಲಾ ಎಂದು ಎಲ್ಲಾ ಜನರು ವಿವೇಚನೆಯಿಂದ ಯೋಚನೆ ಮಾಡತಕ್ಕ ಪರಿಸ್ಥಿತಿ ಬಂದಿದೆ. ನೀವು ಇಂದಿರಾ ಗಾಂಧಿಯ ನೇತೃತ್ವದಲ್ಲಿ ಮತ್ತು ಪೋಷಕತ್ವದಲ್ಲಿ ಬೆಳೆದವರು ಆಗಿರುವುದರಿಂದ ಇವತ್ತು ಹೀಗೆ ಮಾಡಿ ಆ ಮಹಾ ತಾಯಿಗೆ ಕೆಟ್ಟ ಹೆಸರು ತರಬೇಡಿ ಹಾಗೂ ಅವರಿಗೆ ಕೊಡತಕ್ಕದ್ದನ್ನು ಕೊಡಬೇಕೆಂದು ತೀರ್ಮಾನ ಮಾಡುವುದಾದರೆ, ನೀವು ಒಂದು ಆಸ್ತಿ ಪರಿಮಿತಿ ಏನು ಹಾಕುತ್ತೀರಿ, ಅಷ್ಟನ್ನು ಮಾತ್ರ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಕೊಟ್ಟು ಬಾಕಿಯುದನ್ನು ರಾಜ್ಯದ ಆಸ್ತಿಯಾಗಿ ಉಳಿಸಿಕೊಳ್ಳಬೇಕೆಂದು ನಮ್ರತೆಯಿಂದ ಪ್ರಾರ್ಥಿಸುತ್ತೇನೆ. ಇವತ್ತು ನೀವು ಜನತೆ ಒಂದು ಅನುಮಾನ ಪಡುವುದಕ್ಕೆ ಅವಕಾಶ ಮಾಡಬೇಡಿ ನಿಮ್ಮ ಪಕ್ಷದವರೇ ಆದ ಮುಖ್ಯಮಂತ್ರಿ ಯವರು ಇಲ್ಲಿ ಒಂದು ರೀತಿ ಹೇಳುತ್ತಾರೆ. ನಿಮ್ಮ ಪಕ್ಷದವರೇ ಆದ ಆರೋಗ್ಯ ಮಂತ್ರಿ ಯವರು ಮೇಲ್ಮನೆಯಲ್ಲಿ ಒಂದು ರೀತಿ ಹೇಳುತ್ತಾರೆ, ಮತ್ತು ನಿಮ್ಮವರೇ ಆದ ಕೇಂದ್ರದ ಮಂತ್ರಿಯವರು ಇನ್ನೊಂದು ರೀತಿ ಹೇಳುತ್ತಾರೆ. ಈ ರೀತಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳಬಾರದು. ಒಂದು ವಿಚಾರದಲ್ಲಿ ಯಾರಿಗೂ ಮೂರು ನಾಲಿಗೆ ಇರಬಾರದು. ಇವನ್ನು ಪ್ರಗತಿಪರರು, ಬಡವರ ಬಗ್ಗೆ ಅನುಕಂಪ ಇರುವಂತಹ ಮತ್ತು ಹಿಂದುಳಿದವರ ಬಗ್ಗೆ ಸಹೃದಯವುಳ್ಳಂತಹ ದೇವರಾಜ ಅರಸರವರಿಗೆ ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಇಂತಹ ರಾಜ್ಯದ ಆಸ್ತಿನ್ನು ರಾಜ್ಯದಲ್ಲಿರುವ ಬಡ ಜನರ ಉದ್ಧಾರಕ್ಕಾಗಿ ಉಪಯೋಗಿಸಿಕೊಂಡು ಬಡ ಜನರ ರಕ್ಷಣೆ ಮಾಡುತ್ತೀರಿ ಎಂದು ನಂಬಿಕೊಡು. ಅವರಲ್ಲಿರತಕ್ಕಂತಹ ಎಲ್ಲಾ ದಾಖಲೆಗಳನ್ನು ಈ ಸಭೆಯ ಮುಂದೆ ಇಟ್ಟು, ಅಡ್ವೋಕೇಟ್ ಜನರಲ ಅವರನ್ನು ಈ ಸಭೆಗೆ ಕರೆಸಿ ಈ ವಿಚಾರದಲ್ಲಿ ಒಂದು ಹೇಳಿಕೆ ಕೊಡಿಸುತ್ತೀರೆಂದು ನಂಬಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಈ ವಿಷಯದ ಬಗ್ಗೆ ಮಾತನಾಡಿದ್ದನ್ನು ನಾನು ಕೇಳಿದ್ದೇನೆ ಮೊದಲನೆಯದಾಗಿ ಶ್ರೀಮಾನ್ ಕೃಷ್ಣಪ್ಪನವರು ಹಿಂದೆ ಈ ವಿಚಾರದಲ್ಲಿ ಏನು ಮಾತನಾಡಿದ್ದರೋ, ಅದನ್ನೆ ಲಂಬಿಸಿ ಮಾತನಾಡಿದ್ದಾರೆ; ಹೊಸದಾಗಿ ಏನೂ ಹೇಳಿದಂತೆ ಕಾಣಲಿಲ್ಲ. ಅವತ್ತು ಕೂಡ ಇದೇ ಮಾತನ್ನು ಹೇಳಿದ್ದಾರೆ; ಈಗಲೂ ಅದನ್ನೇ ಹೇಳಿದ್ದಾರೆ, ಅವರ ಪಾರ್ಟಿ ತೀರ್ಮಾನದ ಪ್ರಕಾರ, ಅಥವಾ ಅವರ ಪಾರ್ಟಿ ತತ್ವದ ಪ್ರಕಾರ, ಆಸ್ತಿ ನಮ್ಮದೇ ಆಗಿರಬೇಕು, ಕಾಂಪೆನ್ ಸೇಷನ್ ಕೊಡಬಾರದು ಎಂದು ಇರಬಹುದು. ಅದು ಅವರ ತತ್ವ ಇರಬಹುದು. ಅದರ ಬಗ್ಗೆ ನನ್ನ ವಾದ ಏನೂ ಇಲ್ಲ, ಆದರೆ ಅವರ ಪಾರ್ಟಿ ತತ್ವವನ್ನಾಗಲಿ ಅಥವಾ ಅವರ ಇತರ ಕಾರ್ಯಕ್ರಮವನ್ನಾಗಲಿ ಅವರ ಪಕ್ಷ ಅಧಿಕಾರಕ್ಕೆ ಬಂದಾಗ ಬದಲಾವಣೆ ಮಾಡಿಕೊಳ್ಳುವುದು ಸರಿಯಾದುದು ಈಗ ಲಾ ಆಫ್ ದಿ ಲ್ಯಾಂಡ್ ಏನಿದೆ ಅದರ ಪ್ರಕಾರ ನಾವು ಹೋಗಬೇಕಾಗಿದೆ. ಒಂದು ವೇಳೆ ಪಾರ್ಲಿಮೆಂಟ್ ಕಾಂಪೆನ್ಸೇಷನ್ ಕೊಡವೆ ತೆಗೆದುಕೊಳ್ಳಬೇಕೆಂದು ಮಾಡಿದರೆ ಆದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ; ನಾವು ಮಾಡಬಹುದು. ಅವರು ಹಾಗೆಯೇ ಇನ್ನೊಂದು ಮಾತು ಹೇಳಿದರು. ನೀವು ಇಲ್ಲಿ ಹೇಳಿದ್ದು ಸರಿಯೇ ಅಥವಾ ಮೇಲ್ಮನೆಯಲ್ಲಿ ಮತ್ತು ಇದಕ್ಕೂ ಅದಕ್ಕೂ ವ್ಯತ್ಯಾಸ ಕಾಣುತ್ತದೆ. ಮತ್ತು ಇದರ ಇನ್ನೊಬ್ಬ ಸಚಿವರು ಹೇಳಿದ್ದು ಸರಿಯೋ ಬಗ್ಗ ನಮಗೆ ಸಂಸಯ ಬಂದಿದೆ ಎಂದು ಹೇಳಿದರು. ನಾನು ಈಗ ಮೇಲ್ಮನೆಯಲ್ಲಿ ಏನು ಹೇಳಿದ್ದಾರೆ. ಅದನ್ನು ಪ್ರಸ್ತಾವ ಮಾಡುವುದು ಸೂಕ್ತವಲ್ಲವೆಂದು ಕಾಣುತ್ತದೆ. ಅವರ ಬಗ್ಗೆ ಉತ್ತರ ಕೊಡಬೇಕಾದುದು ಅಗತ್ಯವಿಲ್ಲ. ಆದರೆ ನಾನು ಇಲ್ಲಿ ಹೇಳಿರುವ ಮಾತನ್ನು ತಾವೆಲ್ಲರೂ ಕೇಳಿದ್ದೀರಿ ಮತ್ತು ಅದು ಅಧಿಕೃತ ವರದಿಯಲ್ಲಿಯೂ ಇದೆ. ನಾನು ಹೇಳಿರುವ ಮಾತಿನಲ್ಲಿ ಏನು ತಪ್ಪಾಗಿದೆ ಎಂಬುದನ್ನು ನೀವು ಏನೂ ತೋರಿಸಿಲ್ಲ. ನಾನು ಅವತ್ತು ಹೇಳಿದ್ದನ್ನೇ ಇವತ್ತು ಸಹ ಹೇಳುತ್ತಿದ್ದೇನೆ. ಮಾನ್ಯ ದೇವೇಗೌಡರು ಇನ್ನೊಂದು ಮಾತನ್ನು ಹೇಳಿದರು. ' To cover one lie one has to tell many lies " ಎಂದು ಹೇಳಿದರು. ಅಂಥ ಪ್ರಕರಣ ಏನೂ ಬಂದಿಲ್ಲ. ಆದ್ದರಿಂದ ತಾವು ಈ ರೀತಿ ಏನೂ ಅನುಮಾನಪಡ ಬೇಕಾದ್ದಿಲ್ಲ. ತಾವು ಹೇಳಿದಂತಹ ಮಾತು ಸುಳ್ಳು ಹೇಳಿದವರಿಗೆ ಬರುತ್ತದೆ. ಆದ್ದರಿಂದ ಸುಳ್ಳು ಹೇಳದ ವರು ಅದನ್ನು ಕವರ್ ಮಾಡಬೇಕಾದ ಅಗತ್ಯ ಬರುವುದಿಲ್ಲ; ಅಥವಾ ಇನ್ನೊಂದು ಸುಳ್ಳು ಹೇಳಬೇಕಾದ ಅಗತ್ಯವಿಲ್ಲ. ಮತ್ತು ಇದನ್ನು ಮುಚ್ಚಿಬಿಡಬೇಕೆನ್ನುವ ಉದ್ದೇಶದಿಂದ ಪೂರ್ತಿಯಾಗಿ ಡಾಕ್ಯುಮೆಂಟ್ಸ್ ಇಲ್ಲಿ ಇಡುತ್ತಾ ಇಲ್ಲವೆಂದು ಅವರು ಹೇಳುತ್ತಿದ್ದಾರೆ. ಇವತ್ತು ಸರ್ಕಾರದವರು ಎಲ್ಲಾ ಡಾಕ್ಯುಮೆಂಟ್ಸ್ ಇಡು ವುದು ಅವಶ್ಯ ಇದೆಯೋ ಅಲ್ಲಿ ಇಡಬೇಕಾಗುತ್ತದೆ ಅದಕ್ಕಿಂತಲೂ ಹೆಚ್ಚಿನದು ನಾನೇನೂ ಹೇಳುವುದಿಲ್ಲ. ನಾನು ಸರ್ಕಾರದ ಅಭಿಪ್ರಾಯ ಏನಿದೆ, ಇರತಕ್ಕಂತಹ ವಿಚಾರ ಏನಿದೆ, ಮತ್ತು ಕೇಂದ್ರ ಸರ್ಕಾರದ ಅಭಿಪ್ರಾಯ ಏನು ಎಂಬುದರ ಬಗ್ಗೆ ಸ್ಪಷ್ಟವಾಗಿ ಬಿಡಿಸಿ ಹೇಳಿದ್ದೇನೆ. ಅವರ ಬಗ್ಗೆ ಪುನಃ ಅನುಮಾನ ಬಂದಿಬ ಎಂದು ಹೇಳುವುದಾದರೆ ಅದೇ ಕಾಗದ ಮತ್ತು ವರದಿಯನ್ನು ಓದಬೇಕಾಗಿ ಬರುತ್ತದೆ. ಇದನ್ನು ತಾವು ಜ್ಞಾಪಿಸಿಕೊಳ್ಳದೆ ಹೋದರೆ, ತಪ್ಪು ಜ್ಞಾಪಕಕ್ಕೆ ತರಲು ಇಷ್ಟಪಡುತ್ತೇನೆ.

"We are unable to accept the *view* held by the State Government that the Maharaja has only the user's right in these properties. We are also advised that since the private property settlement was finalised by the Government of

India, it is open only to that Government to modify the private property settlement and to revoke the inalienability clause."

ಹಾಗೆಂದು ಅದರಲ್ಲಿ ಅವರು ಬರೆದಿದ್ದಾರೆ. ಅದನ್ನೇ ಅವತ್ತು ಹೇಳಿದ್ದು. ಇವತ್ತೂ ಅದನ್ನೇ ಹೇಳುತ್ತಿದ್ದೇನೆ. ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಹೇಳಿದ್ದು ಆಮೇಲೆ ಬರುತ್ತದೆ. ಮಾನ್ಯ ಶ್ರೀ ಸಿದ್ಧವೀರಪ್ಪನವರು ಏನೋ ಅಲ್ಲಿ ಹೇಳಿದ್ದಾರೆ ಎಂಬುದಾಗಿ ಹೇಳಿದರು. ಅವರೂ ಹೇಳಿದ್ದಾರೆ. ಅದರಲ್ಲಿ ಏನೂ ವ್ಯತ್ಯಾಸವಿಲ್ಲ. ಹಿಂದೆ ಸರ್ಕಾರದವರು ಇದನ್ನು ತೆಗೆಯಬಾರದು, ಅಗತ್ಯವಿಲ್ಲ, ಲೀಗಲ್ ಒಪೀನಿಯನ್ ಈ ರೀತಿ ಇದೆಯೆಂದು ಹೇಳಿದ್ದಾರೆ. ನಮ್ಮದು ಇದರಲ್ಲಿ ಏನೂ ಅಡ್ಡಿ ಇಲ್ಲವೆಂದು ಹಿಂದಿದ್ದಂಥ ಮಾನ್ಯ ಶ್ರೀ ವಿರೇಂದ್ರ ಪಾಟೀಲರ ಸರ್ಕಾರದವರೂ ಹೇಳಿದ್ದಾರೆ. ತಂದಮೇಲೆ ಅವರೂ ಸಹ ಪ್ರೈವೇಟ್ ಪ್ರಾಪರ್ಟಿ ಅಲ್ಲವೆಂದು ಹೇಳುವುದಕ್ಕಾಗಲಿಲ್ಲ. ಇದಕ್ಕೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದೆ, ಲೀಗಲ್ ಒಪೀನಿಯನ್ ಕಲೆಕ್ಟ್ ಮಾಡಿ ಹೇಳಿದ್ದಾರೆ. ಶ್ರೀಮಾನ್ ಪುಟ್ಟಸ್ವಾಮಿಯವರು ತೆಗೆದುಕೊಂಡಂಥ ನಿಲವು ಏನೆಂಬುದನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಇನ್‌ಅಲಿಯನಬಿಲಿಟಿ ಕ್ಲಾಜ್ ತೆಗೆಯುವುದಕ್ಕೆ ಸಾಧ್ಯವಿಲ್ಲ. ಅದನ್ನು ಒಪ್ಪುತ್ತೇನೆ. ಇದಾದಮೇಲೆ ಒಂದು ಪತ್ರ ಬಂತು. ಮಾನ್ಯ ಶ್ರೀ ಧರ್ಮವೀರ ಅವರು ರಾಜ್ಯಪಾಲರಾಗಿದ್ದಾಗ ಅವರೂ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಅದೂ ಸರಿ. ಆ ಒಂದು ತೀರ್ಮಾನದ ಪ್ರಕಾರ ಇದನ್ನು ಪ್ರೈವೇಟ್ ಪ್ರಾಪರ್ಟಿ ಎಂದು ಕೊಡಬಹುದು. ಆದರೆ ಅವರು ಮಾರಾಟ ಮಾಡುವ ಕಾಲಕ್ಕೆ ಸರ್ಕಾರಕ್ಕೇ ಮೊದಲನೆಯ ಚಾಯ್ಸ್ ಕೊಡಬೇಕೆಂದು ಅವರು ಬರೆದು ಕಳುಹಿಸಿದ್ದಾರೆ. ಇದರಲ್ಲಿ ಮುಚ್ಚುಮರೆ ಇಲ್ಲ. ಇದನ್ನು ಸರ್ಕಾರಕ್ಕೆ ಕೊಡುವುದು ಸರಿಯಲ್ಲವೆಂದು ಅವರವರಿಗೆ ನಡೆದಿರಬೇಕು. ಅದನ್ನು ಪ್ರೈವೇಟ್ ಪ್ರಾಪರ್ಟಿ ಎಂದು ಒಪ್ಪಿಕೊಂಡಮೇಲೆ ಸರ್ಕಾರಕ್ಕೇ ಕೊಡಬೇಕು ಎನ್ನುವ ಕಂಡೀಷನ್ ಏನು ಇದೆ ಆದರಿಂದ ಏನೂ ಅಭ್ಯಂತರವಿಲ್ಲ. ನಮ್ಮ ಈ ಒಂದು ಅಭಿಪ್ರಾಯವನ್ನು ಅವತ್ತು ಹೇಳಿದ್ದೇವೆ. ಇವತ್ತೂ ಅದನ್ನು ಹೇಳುತ್ತಿದ್ದೇವೆ. ಯಾವುದೇ ಅಭಿಪ್ರಾಯವನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡಿದ್ದನ್ನು ಇಲ್ಲವೆಂದು ಹೇಳುವುದಿಲ್ಲ. ಅದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆ ಒಂದು ಅನುಮಾನದ ಬಗ್ಗೆ ಏನೂ ಇಲ್ಲ. ಅವತ್ತೂ ಬದಲಾಯಿಸಿ ಹೇಳಲಿಲ್ಲ. ಇವತ್ತೂ ಬದಲಾಯಿಸಿ ಹೇಳಲಿಲ್ಲ. ಇದು ತಮ್ಮ ಮನಸ್ಸಿಗೆ ಗೊತ್ತಾದಮೇಲೆ ಬಹುಶಃ ನಾನು ಸುಳ್ಳು ಹೇಳುತ್ತಿದ್ದೇನೆಂದು ಹೇಳುವ ಹಾಗೆ ಇಲ್ಲ.

SRI H. S. SIDDAPPA.—If this is declared as private property, has the Municipality of Mysore and the Corpoation of the City of Bangalore levied any tax and collected it ?

SRI D. DEVARAJ URS.—I have no idea about it.

SRI K. PUTTASWAMY.—On that aspect, in the year 1943 or 1954, an amendment to both the City Municipalities Act and to the City of Bangalore Corporation Act has been passed exempting these two palaces from payment of all taxes.

SRI D. DEVARAJ URS —Thank you for the information. Now, the position may alter, That aspect has to be examined separately,

ಆಮೇಲೆ ಅದರ ಜೊತೆಗೆ ಮಾನ್ಯ ಶ್ರೀ ಕೃಷ್ಣನ್ ಅವರು ಅವರ ಅನುಮಾನವನ್ನು ಸಮರ್ಥನೆ ಮಾಡಿ ಮುಖ್ಯವಾಗಿ ಎರಡು ವಾದಗಳನ್ನು ಇಟ್ಟರು. ಒಂದು ಮೇಲ್ಮನೆಯಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆಂಬುದು ಇನ್ನೊಂದು ಮಾನ್ಯ ಶ್ರೀ ಹನುಮಂತಯ್ಯನವರು ಏನು ಹೇಳಿಕೆಯನ್ನು ಇದರ ಬಗ್ಗೆ ಕೊಟ್ಟಿದ್ದಾರೋ ಅದರಲ್ಲಿ ಏನು ನಿರೂಪಣೆ ಮಾಡಿದ್ದಾರೆ ಎಂಬುದು ಇದು ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿಯೂ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಓದಿದ್ದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿದ್ದುದನ್ನು. ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಏನಿದೆಯೋ ಅದು ನನಗೆ ಗೊತ್ತಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಮಾನ್ಯ ಹನುಮಂತಯ್ಯನವರು ಏನು ಹೇಳಿದ್ದಾರೋ ಅದನ್ನೆಲ್ಲಾ ವಿವರವಾಗಿ ಇಲ್ಲಿ ಓದುವುದಕ್ಕೆ ನಾನು ಹೋಗುವುದಿಲ್ಲ. ಆ ಪತ್ರಿಕೆಯೂ ನನ್ನಲ್ಲಿದೆ. ಆದರೆ ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಏನು ಪ್ರಕಟವಾಗಿದೆಯೋ ಅದನ್ನು ಇಲ್ಲಿ ಓದುತ್ತೇನೆ. ಅದು ಈ ರೀತಿ ಇದೆ ;—

"Railway Minister Hanumanthaiya today opposed any proposal to allow the former Mysore Ruler to alienate his palaces in Bangalore and Mysore.

He said the Government of Mysore should take them over and make the palace grounds into public gardens. The Mysore palace could be kept as a museum, like the palaces of French emperors at Fontainbleu and Varsailles and the Bangalore Palace converted into an art gallery. 'For all the people who know the Maharaja, it is a matter of great unhappiness that any one of the two palaces should be converted into a hotel.'

Mr. Hanumanthaiya, who said he had high regard and esteem for the former Maharaj and his ancesters, however felt that the Government, after taking over the palaces, should meet his financial needs.

He had discussed this proposal with the Union Home Ministry and Mysore's Chief Minister. 'We want to see that the Maharaja lives comfortably with the required annual monthly income. We will meet his needs by cash payment to the extent necessary. We are in full agreement with the position that he and the members of his family should be kept happy and comfortable.'

He added : 'It is a matter for negotiation between the Maharaja and the two Governments to come to a settlement on these issues. I have advised them accordingly.'

Answering a question, Mr. Hanumanthaiya said the Government of India had not yet taken a final decision on removing the inalienability clause from the accession instrument in regard to the three palaces of the Maharaja. The issue was still under discussion.

As regards the palace in Ooty, Mr. Hanumanthaiya said he did not want to make much of this. 'It is a small palace and if of the Maharaja wants he may have it for his own use.'

The future of the palaces, he said, should not become questions of law. It was a question of the relation between the Maharaja and the people, a question of mutual affection.

Mr. Hanumanthaiya said the Maharaja and his ancestors were held in great esteem by the people ; 'them themselves were public institutions'. All properly owned by them belonged to the people and, in fact, when he ascended the throne. Mr. Jayacpamaraja Wadiar had made a public statement that all that he owned belonged to the public.

Mr. Hanumunthaiya said the Maharaja had been 'continuously 'exploited and deceived' by a few unscrupulous people. 'He is now ill, and he must be freed from this unscrupulous set.'

He said the Maharaja had met him in Delhi twice. 'I have deep regard for him. The only difficulty is in freeing him from the exploiting coterie. In fact, I want to suggest that a committee of enquiry be instituted to find out who have all made property and wealth in a surreptitions manner.'

Asked about his reported proposal to the Chief Minister that the Railways would buy the Bangalore Palace and convert it into a railway station, Mr. Hanumanthaiya said : 'I had only said that if nobody was there to buy it, the Railways might purchase it, and make it the biggest railway station. As Railway Minister, I had planned a similar station in Varanasi—the oldest city in the world—costing one to two crores on the scale of a Vidhana Soudha.

ಅಧ್ಯಕ್ಷರೇ.—ಇದನ್ನು ಓದಿದ ಮೇಲೆ ಬಹುಶಃ ನಮ್ಮ ಕೃಷ್ಣನ್ ಅವರಿಗೆ ಒಂದು ಅನುಮಾನ ಬಂದು, ಕೇಂದ್ರ ಸರ್ಕಾರದಲ್ಲಿ ಇದಿನ್ನೂ ಫೈನಲ್ಲಾಗಿ ಡಿಸಿಷನ್ ತೆಗೆದುಕೊಂಡಿಲ್ಲ ಎನ್ನತಕ್ಕ ಭಾವನೆಯ ಮೇಲೆ ಅವರು ಹಾಗೆ ಹೇಳಿರ ಬಹುದು ಎಂದು ನನಗೆ ಅನಿಸುತ್ತಿದೆ.

SRI M. S. KRISHNAN.—I am referring to the statement he has made.

4-00 P.M.

ಶ್ರೀ ಡಿ. ದೇವರಾಜ ಅರಸ್.—ನಾನು ಈಗ ಓದಿದ್ದನ್ನು ತಾವು ಓದಿದ್ದೀರಾ? ಇಲ್ಲಿ ಕೈಲಿ ಕನ್ನಡಿ ಇರುವಾಗ ಅದನ್ನೇಕೆ ನೋಡಬೇಕು?

MR. DEPUTY SPEAKER.—The position is, the hon. member can refer to the statement made here. He can have a copy of the stament if he wants. But it would be harsh and unfair on the part of the hon. member to refer to newspapers unless he accepts the responsibility for the statement he makes.

SRI M. S, KRISHNAN.—May I Submit by way of clarfication? What I read out is from newspaper. Of course I did not go through what has been stated in the official record. I have nothing to disbelieve what has been printed in this paper, What is wrong in it?

SRI D DEVARAJ URS.—There, I object. Unless the hon. member quotes me and says there is inconsistency, I treat what he says as something borne out of ignorance or for some other purpose.

Let the hon. member point out what is the inconsistency. The statement I made here is available to the hon. member and as such I cannot understand how he says there is inconsistency. I would not have referred to or spoken about Sri Hanumanthaiya's statement but for the fact that the member relied on that statement to cast a doubt as to what has happen or on the role the Government is playing.

(Sri D. Devaraj Urs)

That is why I took the statement and read. Otherwise, I know that I need not have gone through it. I am not here to score a point over any person. To the best of my ability I am trying to clarify genuine doubts raised by the hon. members. Beyond that I cannot do anything

Answering a question Sri Hanmanthaiya said that the Government of India had not yet taken a final decision That might have been understood to mean that there is no final decision. If the hon. members will please remember what I said on the floor of the House the other day they need not have any. dcuff perhaps there is no difference of opinion between what I stated on the floor and what Sri Hanumanthaiya stated in his press meeting. I did say the other day that I have received a letter in the matter of removing the inalienability clause, which was after the intervention of Sri Hanumanthaiya at Delhi leave and the Government of India wanted me to keep the whole thing in abeyance I have not kept it secret. The other day I said it and it is in my statement. Even Now I am saying there is no final decision taken.

Secondly with regard to the legal position, Sri K. puttaswamy has quoted from a document or agreement regarding the manner of settins the dispute over the question of any property, be it called the state property or private property. He has also argued the legal aspect whereby he means to say that when at the time of entering into this agreement the Maharaja of Mysore or the ruler had certain rights and now after the rights and privileges are taken away, one of the parties to the agreemet does not enjoy the same status. That is what I have understood from what he said. According to the hon. members, the Maharaja has no right to ask for changing or modifying the agreement entered into at a time when he enjoyed a different status constitutionally, legally and otherwise, and which status he has lost at the moment. Yes, the hon. member being an able lawyer who might have understood the legal implications has every right to put forth that view. I have no quarrel because in any case if you ask the lawyers they have their own interpretations to give. So, his interpretation may be correct also. Therefore I have no comments to make on his interpretation. But one thing he said and that is quoting from the agreement which is said to be in existence. I must be thank the hon.member for he has brought to the notice the existence of that agreement which I was not aware of. I have asked the Secretaries to find out what that agreement is and I can assure this much that in the light of what he has stated I will bring to the notice of the Government the existence of this agreement. The hon. member was good enough to give a copy of the agreement the other day when I requested him. It is just before me. In that agreement there is one point which he quoted. If there is a dispute the manner and method in which that dispute has to be settled is enumerated in the document.

It says that the third party to be appointed is to go into this question and it has to be settled. I don't know whether it refers to the point of settling the private property list which was asked at that time. I don't know whether that agreement stands for all the times. Anyway, assuming it stands good, that means, the question has to be legally settled. Straightaway it cannot be argued that it is not his private property. If one party, *viz.*, the Maharaja who is supposed to be the owner at the moment were to say it is a private property, it becomes a dispute. and it has to be decided. The manner in which the Government of India decided is correct or not I am not going to say anything about that.

SRI K. PUTTASWAMY.—I would like to read out the clause 3, article 2 again to make the point clear. It says:

> "If any dispute arises as to whether any item of property is the private property of the Maharaja or State property it shall be referred to such person as the Government of India may nominate and the decision of that person shall be final and binding on all concerned."

I imagine perhaps there was a dispute. But that dispute or controversy was settled. If that controversy had continued in the year 1950 this method had to be reported to by the Government of India. Fortunately or unfortunately the controversy ented by an understanding that this private property should be treated as inalienable and an obligation was cast on the Government of Mysore for maintaining all these three palaces. Therefore the dispute having arose and settled amicably there was no need to refer it to the third party. It is not open now to any of the parties to this settlement to seek to re-open the issue. Instead of 2 parties there are three parties. The Hon. Chief Minister may kindly refer to this file there is a private property list for which Mr. Srinivasan who happened to be the Chief Secretary has signed the list. The point I sought to make out was that the matter was settled and no longer the Government of India can resort to clause 3, article 2 and should the Government of India hold that there is existenee of dispute between two parties, *viz*, the Maharaja and Government of Mysore then they have to resort to it:

SRI D. DEVARAJ URS.—So the points made out by the hon. member are that this agreement is no more in existence, *i. e.*, it happened at the time when the whole thing had to be settled in the year 1950-51 and it has been settled. I don't know whether there was any dispute at all. Perhaps not at that time. So, that clause was never resorted to. Now, according to the clarification that clause connot be applicable and according to his interpretation it is already settled that it is not his property. But the property list says it is the private property. The only point that now arises is

(Sri D. Devaraj Urs)

whether that property which is called the private property of Maharaja should be alienable or not. So far as this alienability clause is concerned there is a condition that the Palaces of Mysore, Bangalore and Ooty are not alienable. But they have the right of using these palaces in perpetuity from generation to generation.

ಇದು ಅವರ ಪ್ರೈವೇಟ್ ಪ್ರಾಪರ್ಟಿ ಅಲ್ಲ ಎಂದು ಅವರ ಇಂಟರ್‌ಪ್ರಿಟೇಷನ್ ಇದೆ. ಅದರ ಬಗ್ಗೆ I am not here to h ld brief either far or against. I have made it clear the other day also and even today, I make it very clear. I have merely stated what the G vernment of India have stated and what the Government of Mysore stated. The Government of Mysore does not necessary mean Mr. Veerendra Patil's Government. Subsequently there was al so a Government—whether it is Presiden's rule or Tovernor's rule—that was also the Mysore Government. Previous to our coming into office the previous Government did gave its pinion. Mr. Dharma Vira, the then Governor has taken that decision. occording to which he merely stated 'yes', it is his private property. Aut if he wants to sell it he shall sell it to the Government first Bnd if the Government does not buy then he could sell it to anybody. aI don't know how this makes the whole position more rigid. Th Government of India and other lawyers take the view that once you say it is a private property you can't say that he should sell it to Government alone, because the Transfer of Property Act does not give that right. That is the interpretation given by the Government of India. At that time the Government of India took the decision and stated that it is the private property of the Maharaja and they have no objection to remove the inalienability clause.. Subsequently what happened I have already stated. Mr. Hanumanthaiah did talk to his colleagues there and afterwards what happened and what discussions took place between him and myself also I have stated. He referred at the Press Conference to the meeting he had with me and the discussion that took place. He too says if nobody buys the Railways are prepared to buy it. What does it mean ? It means in other words, that Mr. Hanumanthaiah does not seem to dispute that it is not the private property of the Maharaja. If a thing is to be bought somebody must be the owner of that thing; otherwise, if it is a State property there is no question of buying it at all. He has also stated that Maharaja is a go d person and we all respect and we must see that he is not put into troubles.

Then hon. member Sri Krishnan was talking about human aspect. I haue not said about that anything in my speech. The hon. member may go through my speech.

Sir, Sri Hanumanthiya has also talked about the human aspects of the problem. I am not trying to find fault with Sri Hanumanthiya. In his wisdom, in his thinking, what he has said may be correct. I have nothing to comment upon it. If you want to give something to the Maharaja, what is it you want to give ? Is it your gratis, *daanha* or *bhiksha* ? Sri Hanumanthaiya has himself said that he will buy it for the Railways. Whether you buy it for Rs. 10 or Rs. 10 crores is another matter.

ಶ್ರೀ ಎಚ್. ಡಿ. ದೇವೇಗೌಡ.—ನಾನು ಒಂದು ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ಹಿಂದಿನ ಸರ್ಕಾರ ಲಾ ಡಿಪಾರ್ಟಮೆಂಟಿನ ಒಪಿನಿಯನ್ ತೆಗೆದುಕೊಂಡು ಈ ರೀತಿ ಒಂದು ಅಭಿಪ್ರಾಯಕ್ಕೆ ಬಂದಿದ್ದರು ಎಂಬುದು ನನ್ನ ಭಾವನೆ. ಧರ್ಮವೀರರ ಸರ್ಕಾರದಲ್ಲಿ ಇದು ಸ್ಟೇಟ್ ಪ್ರಾಪರ್ಟಿ ಅಲ್ಲ. ಇದು ಪ್ರೈವೇಟ್ ಪ್ರಾಪರ್ಟಿ ಎಂದು ಒಪ್ಪಿಗೆ ಕೊಟ್ಟು ಇದನ್ನು ಮಾರುವಾಗ ಸರ್ಕಾರಕ್ಕೆ ಕೊಡಬೇಕು ಎನ್ನುವ ಕಂಡೀಷನ್ ಹಾಕಿದ್ದರು. ಶ್ರೀ ಧರ್ಮವೀರರು ಇದನ್ನು ದಾನವಾಗಿ ಕೊಡುವುದಕ್ಕೆ ಅವರ ತಾತನ ಮನೆ ಆಸ್ತಿ ಅಲ್ಲ.

SRI D. DEVARAJ URS.— Sir this is not fair.

SRI H. D. DEVE GOWDA.—I am going to withdraw those words if it is going to hurt anybody. The point is whether Dharma Vira's decision is based on the opinion of the Law Department. I want to konw about it. That is way I said it.

MR. DEPUTY SPEAKER,— Very strong words or vociferous words will yield nothing I would very much appreciate if sober language is used, as a rule sober language should be used.

ಶ್ರೀ ಎಚ್. ಡಿ ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಇದು ಮಹಾರಾಜರ ಸ್ವಂತ ಪ್ರಾಪರ್ಟಿ ಇದನ್ನು ಮಾರಾಟ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಟ್ಟಿದ್ದಾರೆ ಎಂದು ಇದರ ಬಗ್ಗೆ ಹೇಳುವುದಾದರೆ ಶ್ರೀ ಧರ್ಮವೀರರು ಇದ್ದ ಕಾಲದಲ್ಲಿ ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಂಡಿದ್ದರು. ಇದು ಸಹ ಮಹಾರಾಜರ ಸ್ವಂತ ಆಸ್ತಿಯಾದರೂ ಕೂಡ ಒಂದು ವೇಳೆ ಇದನ್ನು ಮಾರಾಟ ಮಾಡತಕ್ಕಂಥ ಸಂದರ್ಭ ಬಂದ ಕಾಲದಲ್ಲಿ ಸರ್ಕಾರಕ್ಕೆ ಮಾರಾಟ ಮಾಡಬೇಕು ಎಂದು ಅದರು ಹೇಳಿದ್ದಾರೆ. ಹೀಗಿದ್ದ ಮೇಲೆ ಶ್ರೀ ಜಯಚಾಮರಾಜ ಒಡೆಯರವರಿಗೆ ಇರಲಿಲ್ಲ ವೈಯಕ್ತಿಕವಾದ ಅಧಿಕಾರವಿಲ್ಲ ಆದುದರಿಂದ ಇದರ ಬಗ್ಗೆ ಲಾ ಡಿಪಾರ್ಟ್‌ಮೆಂಟಿನ ಒಪಿನಿಯನ್ ಮತ್ತು ಅದಕ್ಕೆ ಸಂಬಂಧಪಟ್ಟ ರಿಕಾರ್ಡುಗಳನ್ನು ಸಭೆಯ ಮುಂದೆ ಒದಗಿಸಿ ಕೊಡಿ.

ಶ್ರೀ ಡಿ. ದೇವರಾಜ್ ಅರಸ್.—ಹಿಂದಿನ ಸರ್ಕಾರದಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರು ಯಾವ ಆಧಾರದಮೇಲೆ ಇದನ್ನು ಮಾಡಿದ್ದರು ?

ಶ್ರೀ ಹೆಚ್. ಡಿ. ದೇವೇಗೌಡ.—ಲಾ ಡಿಪಾರ್ಟ್‌ಮೆಂಟಿನಲ್ಲಿ ತೆಗೆಸಿ ನೋಡಿ.

SRI DEVRAJ URS —I do not want to go into all hear says. I do want to go on indulging into the stories that I might heard or some body I am not hear to question the motives either of Veerandra Potils Government of Dharma Vira's Government, who took this decision. Why is the Opposition Leader angry with a person who is not here at all ? I am not saying anything which is not on record. Suppose I say somthing here and it is not found in the record, what is my porition ? Please do not concede that I am not that much responsible I am not coming in the way of your interpretation or if you want to question anybody's motive. Let us not at least use such nowords so as he was here as the Rules or the Governor looking after the affairs of State, he had every right.

ಶ್ರೀ ಎಚ್. ಡಿ. ದೇವೇಗೌಡ.—ಅವರು ತಪ್ಪು ಮಾಡಿಲ್ಲ, ನೀವು ತಪ್ಪು ಮಾಡಿದ್ದೀರಿ ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನಾನು ತಪ್ಪು ಮಾಡಿದ್ದೇನೆ ಎಂದು ನೀವು ತಿಳಿದುಕೊಳ್ಳಬಹುದು. ನಾನು ತಪ್ಪು ಮಾಡಿಲ್ಲ ಎಂದು ಹೇಳುತ್ತೇನೆ. ನೀವು ನಾನು ತಪ್ಪು ಮಾಡಿದ್ದೇನೆ ಎಂದು ಹೇಳುವುದಾದರೆ ನಾನು ಏನು ಮಾಡುವುದಕ್ಕಾಗುತ್ತದೆ.

Then why is the Opposition Leader simply agitated about it ? I am only stating how things have developed so far and how things have stood at the moment, With all this, even tomorrow if my Hon. frind Sri Deve Gowda were to give one kind of interpretation which is not to the taste of the Government, nobody can find fault with it. That is all.

Sir, I was referring to the statement I made the other day, a copy of which is being gone into at the moment by my hon. firend Sri Krishna. I stick to it and I stand by every word I have said the other day on this issue. The other day I have made one point clear Beyond what I have stated the other day, I do not want to go in to further discusssion on the matter. because what has been stated here, the feelings and other ideas or suggestions given. have all been conveyed to the Government of India. The Government of India are seized of the whole question and they are at it. Therefore Sir, it may not be right on my part to make any statement which might embarass the Government of India or the party concerned.

SRI S. BANGARAPPA.—Why Sir?

SRI D. DEVARAJ URS —Sir, I am extremely sorry for the very short memory of some of these socialist friends. I do not know whether the is still a socialist or left the party.

SRI S BANGARAPPA.—I am sorry for the very poor knowledge of the Hon 'ble Chief Minister. ರಾಜ್ಯ ಸರ್ಕಾರದವರು ನಮ್ಮ ಸರ್ಕಾರದ ನಿಲುವು ಈ ರೀತಿ ಇದೆ ಎಂದು ನೀವು ಕೇಂದ್ರ ಸರ್ಕಾರದವರಿಗೆ ತಿಳಿಸಬಹುದಲ್ಲಾ.

4-30 P.M.

SRI D. DEVARAJ URS :—What I said the other day I reiterate and say that my personal view is that I am one of those who is interested in making it a beautiful garden. Even now I say the same thing. But here the question is : whether it is a private property or not is the question which concerns the legal pandits Now the Government of India is seized of the matter. Beyond that what is it that I can say ? I can at best say what I said the other day and I again repeat what I said : The law of the land should be made applicable to every person to every property. Supposing tomorrow the Government wants to acquire, we are going to acquire it. That I stated the other and I repeat it now also. When the ceiling on property comes tomorrow, it will be applied to the property of the Maharaja.

I say it now again. Even Mr. Hanumanthiah, for the information of Sri Krishnan, has never at any time said that it must be confiscated. He wants the Maharaja also to get something in lieu of the property to be given to the State.

Under these circumstances, there is nothing to warrant that Government of Mysore is trying to sell away the right which the Government of Mysore has in this issue. We are merely acting in accordance with the Constitutional position. And I make it very clear, Sir, when we want this property to the State, we do not hesitate to take it in accordance with law. The question now is with regard to Mysore Palace. I have said the other day that we recommend for a Trusteeship to be created and it has to be converted into a Museum and to which the Government of India has also agreed and the Maharaja has also agreed. Therefore there is no question of buying or selling away so far as that property is concerned.

With regard to Ooty Palace, we have said that we are not interested in taking it over because that Palace is in a different State where a differedt Government is functioning. So, will be like any other private person as regards this Ooty property is concerned. Even Sri Hanumanthaiah has referred to the Ooty Palace and he has said that the Maharaja can do as he likes. It is only the question of Bangalore Palace remains. As I said earlier, the whole question is before the Central Government for its decision. I think I have covered most of the points raised by some of the Hon. Members.

ಶ್ರೀ ಕಾಗೋಡು ತಿಮ್ಮಪ್ಪ :—ಅರಮನೆಗಳ ವಿಚಾರ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದರು. ಈಗ ಕೇಂದ್ರ ಸರ್ಕಾರದವರು ಯಾವ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ ಎನ್ನುವುದು ಅವರಿಗೆ ಸೇರಿರತಕ್ಕ ವಿಷಯಂ. ನಮ್ಮ ರಾಜ್ಯ ಸರ್ಕಾರದ ಪರವಾಗಿ, ಇದು ನಮ್ಮ ರಾಜ್ಯ ಸರ್ಕಾರಕ್ಕೆ ಸೇರಬೇಕು ಎನ್ನುವ ಮಾತನ್ನು ನಮ್ಮ ಸರ್ಕಾರದವರು ಹೇಳಬೇಕು ಮತ್ತು ಆ ಬಗ್ಗೆ ಒಂದು ನಿಲುವನ್ನು ತೆಗೆದುಕೊಳ್ಳುತ್ತಾರೆಯೋ ?

SRI D. DEVARAJ URS :—I have already stated. Perhaps my Hon. friend did not carefully listened to what I said I have conveyed the feelings of this House already to the Government of India.

SRI K. PUTTASWAMY :—I am very much struck by the sincerity in the statement made by the Hon. Cheif Minister and I think him for the same. I also thank the Chair for the indulgence shown to us. Under Rule 59. the scope is very much limited. May I seek permission, Sir, to ask a short clarification from the Cheif Minister. From the agreement which I read out when I made the speech relating to privy Purse and Privillages. Under Article 1 (2), Rs 26 lakhs privy purse was intented for the maintainance of his residences. In the year 1950 Government has passed an order dated 6th Feb. 1951 relating to the maintenance and taking over of several obligations from the Palace. Among the several obligations that were taken over by the State Government, one obligation relates,

(Sri K. Puttaswamy)

to the maintenance of Palaces. Under clause 3, Government will incur an expenditure to a limit of Rs. 75,000 towards maintenance of the Palaces; another Rs. 75,000 towards the maintenance of the gardens attached to the Palaces at Mysore, Bangalore and Ooty. Palace Electricity was taken over and palace dispensary was also taken over. But Orchards and Mazrai grants to the temples recognised as private property of Maharaja will continue to be paid at present by Government. When under the Agreement the Maharaja had to maintain his residences out of Rs. 26 lakhs, but how the Government has taken over the obligation of maintening the Palaces under the Government Order of 6th February 1951? When Government have taken this obligation and in curred lakhs and lakhs of Rupees expenditure in these 25 years, whether it is open to a party to this settlement to ask for reopening the issue?

SRI D. DEVARAJ URS :—Again I repeat that what I am told was that Mysore Government at one stage wanted all this money to be recovered back from the Maharaja—the money that had been spent for the maintenance of the Palaces, electricity charges and so on and so forth which my Hon. friend just now referred. I do not know why they have asked the Government of India to see that money should be recovered back. That also I am not in a position to state anything. However, it is the Government of India perhaps thought that it was not necessary to recover. Anyway I do not know the exact position.

ಶ್ರೀ ಕೆ. ಪುಟ್ಟಸ್ವಾಮಿ :—ಮೂರು ಅರಮನೆಗಳೂ ಇನ್ ಏಲಿಯನಬಲ್. ಹಾಗೆಯೇ ಮೈಸೂರು ಮಹಾರಾಜರ ಮತ್ತು ಅವರ ವಂಶದವರಿಗೆ ಉಪಯೋಗಕ್ಕಾಗಿ ಈ ಅರಮನೆಗಳನ್ನು ಅನಿಶ್ಚಿತ ಕಾಲದವರೆಗೆ ಮೆಂಟೇನ್ ಮಾಡಬೇಕು.

SRI D. DEVARAJ URS.—The point is this. Even according to what he has read, it is still in his enjoyment. The question is how to take it back, and whether the Government of India or the Mysore Government can make a statement that it is all State property and not his. We have to consider what the position is legally. It continues to be in his possession. If he does not want to give it up and if it continues to be in his position or in the possession of his sons and grandsons, what will be the position? It is not so simple a matter. I have said this the other day and now also I am saying it the Mysore Government wants they can acquire it like any other-house. Whether the cost is 10 rupees or 10 crores of rupees or whatever it is, you have to move according to Law. That is all I can state at the moment.

SRI M. S. KRISHNAN.—I just want a clarification.

MR. DEPUTY SPEAKER.—This is not the occasion to confront the Hon. Chief Minister on his own speech. This amounts to virtually cross-examination. I cannot permit it under the rules.

SRI D. DEVARAJ URS.—Every time, the hon. Member wants to cross-examine on that. Alright, let him raise it on some other occasion. I will answer it.

MR. DEPUTY SPEAKER.—The Rules of Procedure are very clear. All sorts of things cannot be introduced and the scope of discussion is extremely limited. Some leniency is shown but the hon. Members are not satisfied. I do not want to limit the scope to the letter of the rules but to take the spirit of the Law. The hon. Members take undue leniency with the result that some heat is generated, dignity is thrown to the winds and the situation goes out of control. The best way is to follow the spirit of the rules giving due leniency and nothing further. Therefore, I cannot permit cross-examination.

SRI M. S. KRISHNAN.—I am not going to cross-examine the Hon. Chief Minister or anybody else. I only want that an impression should not be created that irresponsible statements are being made on this side without any basis.

SRI D. DEVARAJ URS.—I am sorry. We have taken more than 2½ hours and I am not prepared to say anything further. If he has any other doubt, he will raise it on some other occasion, either in this House or elsewhere.

MR. DEPUTY SPEAKER.—We have taken more than the scheduled time.

(ii) *Execution of the Cauvery Water Supply Scheme by the BWS & S Board.*

ಶ್ರೀ ಎಂ. ಎಸ್. ಕೃಷ್ಣನ್.—ಸನ್ಮಾನ್ಯ ಸಭಾಪತಿಗಳೇ, ನಾನು ಬೆಂಗಳೂರು ಜಲಮಂಡಳಿಯ ವಿಷಯದ ಬಗ್ಗೆ ತಮ್ಮ ಗಮನವನ್ನು ಸೆಳೆಯುವುದಕ್ಕೆ ಮತ್ತು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ಜಲಮಂಡಳಿಯ ವ್ಯವಹಾರ, ಅದರಲ್ಲೂ ಮುಖ್ಯವಾಗಿ ಕಾವೇರಿ ನೀರನ್ನು ಬೆಂಗಳೂರು ನಗರಕ್ಕೆ ತರತಕ್ಕಂಥ ಯೋಜನೆ ಏನು ಇದೆ, ಆ ಯೋಜನೆಯ ಬಗ್ಗೆ ಮಾತನಾಡಬೇಕು ಎಂದು ಇಚ್ಛಿಸುತ್ತೇನೆ. ಇದನ್ನು ಆರಂಭಮಾಡುವುದಕ್ಕೆ ಮುಂದೆ, ನಾನು ಒಂದು ವಿಷಯವನ್ನು ಮಾನ್ಯ ಮಂತ್ರಿಗಳಿಲ್ಲರಿಗೂ, ಸಂಬಂಧಪಟ್ಟವರೆಲ್ಲರಿಗೂ ಸ್ಪಷ್ಟಪಡಿಸಬೇಕಾಗಿದೆ. ಈ ವಿಷಯ ಇಲ್ಲಿ ತಂದಿರುವುದು, ಅಧಿಕಾರಿಗಳು ಯಾರೇ ಇರಲಿ, ಅವರನ್ನು ತೆಗಳಬೇಕು ಎನ್ನುವ ಉದ್ದೇಶದಿಂದ ಅಲ್ಲ. ನನಗಾದರೂ ನನ್ನ ರಾಜಕೀಯ ಜೀವನದಲ್ಲಿ, ಅಸೆಂಬ್ಲಿ ಮೆಂಬರ್ ಆಗಿರುವುದು, ಯಾರೋ ಒಬ್ಬ ಮನುಷ್ಯನನ್ನು ತೆಗಳುವುದಕ್ಕೆ ಅಲ್ಲ. ಆದರೆ ಒಂದು ಇಲಾಖೆಯ ವಿಷಯದ ಬಗ್ಗೆ, ಇಲಾಖೆಯು ನಡೆದುಕೊಳ್ಳುವ ರೀತಿ, ಇಂಥಾದ್ದು ಏನಾದರೂ ಪ್ರಶ್ನೆ ಬಂದರೆ, ಖಂಡಿತವಾಗಿ ಟೀಕೆ ಮಾಡಬೇಕಾಗಿ ಬರುತ್ತದೆ; ಕಟುವಾಗಿ ಟೀಕೆ ಮಾಡಬೇಕಾಗಿ ಬರುತ್ತದೆ. ಈ ದೃಷ್ಟಿಯಿಂದ ಟೀಕೆ ಮಾಡಿದ್ದೇನೆಯೇ ವಿನಃ ಬೇರೆ ದೃಷ್ಟಿಯಿಂದ ಅಲ್ಲ. ನನಗೆ ಸಿಕ್ಕಿರುವ ಪುರಾವೆಗಳಲ್ಲಿ, ಯಾರೇ ಅಧಿಕಾರಿ ಇರಲಿ, ಮಂತ್ರಿಗಳು ಇರಲಿ, ಭ್ರಷ್ಟಾಚಾರಕ್ಕೆ ಒಳಪಟ್ಟಿದ್ದಾರೆ ಎಂದು ತಿಳಿದು ಬಂದರೆ ನಾನು ಅದನ್ನು ಹೇಳಲೇಬೇಕಾಗುತ್ತದೆ. ಬೇಜವಾಬ್ದಾರಿಯಿಂದ ಸಿಕ್ಕಾಪಟ್ಟೆ ಮಾತನಾಡಬೇಕು ಎನ್ನುವ ದೃಷ್ಟಿಯಿಂದಲ್ಲ; ಹಾಗೆ ಮಾತನಾಡಿ ಪಾಯಿಂಟ್ ಪಡೆಯಬೇಕು ಎಂದಲ್ಲ. ಈ ದಿನ ಬೆಳಿಗ್ಗೆ ಜ್ವಾಲಾಮುಖಿ ಎನ್ನುವ ಪತ್ರಿಕೆಯನ್ನು ನಾನು ಓದಿದೆ. ತಾವೂ ಓದಿರಬಹುದು, ಅದರಲ್ಲಿ ನಮ್ಮ ಪೌರಾಡಳಿತ ಮಂತ್ರಿಗಳಾದ ಬಸವಲಿಂಗಪ್ಪನವರ ಬಗ್ಗೆ ಬಹಳ ಬಂದಿದೆ. ಮತ್ತು ಶ್ರೀಮಾನ್ ಮಗ್ದುಂ ಅವರ ಬಗ್ಗೆಯೂ ಫೋಟೋ ಸಹಿತ ಬಂದಿದೆ. ಪತ್ರಿಕೆಯಲ್ಲಿ ಹೇಳಿರುವುದು ಎಲ್ಲಾ ನಿಜಾಂಶ ಎನ್ನುವ ಒಂದು ಇಂಪ್ರೆಷನ್ ಕ್ರಿಯೇಟ್ ಆಗುತ್ತದೆ. ದಕ್ಷತೆಯಿಂದ ಇರುವಂಥ ಅಧಿಕಾರಿಗಳನ್ನು ಶಾಸಕರು ಕೆಲವರು ಹೆದರಿಸಿ, ಅವರು ಕೆಲಸ ಮಾಡದ ಹಾಗೆ ಮಾಡುತ್ತಾರೆ ಎನ್ನುವ ಅಭಿಪ್ರಾಯವನ್ನು ಅದರಲ್ಲಿ ಹೇಳಿದ್ದಾರೆ. ಆ ಅಭಿಪ್ರಾಯದ ಬಗ್ಗೆ ಮಾತನಾಡುತ್ತೇನೆ. ಕೆಲವು ಅಧಿಕಾರಿಗಳ ಮನಸ್ಸಿಗೆ ಬೇರೆ ತರಹದ ಅಭಿಪ್ರಾಯ ಬಂದಿದ್ದರೆ, ಅಥವಾ ಬಂದರೆ ನನ್ನ ತಪ್ಪಲ್ಲ.

(ಶ್ರೀ ಎಂ. ಎಸ್. ಕೃಷ್ಣನ್)

ನನ್ನ ಮನಸಿಗೆ ಸರಿ ಎಂದು ತೋರಿದ ಅಂಶವನ್ನು ನಾನು ಇಲ್ಲಿ ಹೇಳಬೇಕೆಂದು ಇಷ್ಟಪಡುತ್ತೇನೆ. ಇಷ್ಟು ಮಾತ್ರವಲ್ಲ, ಇನ್ನೊಂದು ಕಾರಣದಿಂದ ಬಹಳ ಮುಖ್ಯವಿದೆ, ಏಕೆಂದರೆ, ತಮಗೆಲ್ಲಾ ಗೊತ್ತಿರುವಂತೆ, ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡುವ ಪ್ರಶ್ನೆ, ಇದು. ಮಾನ್ಯ ಶಾಸಕರು ಕೆಲವರು ಹೇಳುತ್ತಾರೆ, ಈ ಅಸೆಂಬ್ಲಿ ಬರೀ ಬೆಂಗಳೂರಿನವರಿಗೇ ಮಾಡಿರುತ್ತಾರೆ ಎಂದು. ಆದರೆ ಬೆಂಗಳೂರಿನ ವಿಷಯವಾಗಿ ಈಗ ನಾನು ಮಾತನಾಡಬೇಕಾಗಿದೆ. ಎಲ್ಲಾ ಅಸೆಂಬ್ಲಿ ಮೆಂಬರ್‌ಗಳು ಬೆಂಗಳೂರಿಗೆ ಬರುತ್ತಾರೆ, ಆ ದೃಷ್ಟಿಯಿಂದಲೂ ನೀರಿನ ಪ್ರಶ್ನೆ ಬಹಳ ಮುಖ್ಯವಾದ ಪ್ರಶ್ನೆ. ಬೆಂಗಳೂರು ನಗರ ಬೃಹದಾಕಾರವಾಗಿ ಬೆಳೆಯುತ್ತಿದೆ, ನಗರ ಹೆಚ್ಚು ಹೆಚ್ಚಾಗಿ ಬೆಳೆದಂತೆ ನೀರು ಹೆಚ್ಚು ಸಿಗಬೇಕು, ಆದಷ್ಟು ಕಡಿಮೆ ದರದಲ್ಲಿ ನೀರು ಸಿಗಬೇಕು ಎನ್ನುವ ಮೂರು ಅಂಶಗಳನ್ನು ಇಟ್ಟುಕೊಂಡು, ಕಾವೇರಿ ಯೋಜನೆಯನ್ನು ಜಾರಿಗೆ ತರಬೇಕು ಎಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಕಾವೇರಿ ನೀರನ್ನು ಬೆಂಗಳೂರಿಗೆ ತರಬೇಕು ಇಲ್ಲಿರುವ ಜನಕ್ಕೆ ಒಳ್ಳೆಯ ನೀರು ಸರಬರಾಜು ಮಾಡಬೇಕು ಎನ್ನುವುದರ ಬಗ್ಗೆ ನನ್ನ ಭಿನ್ನಾಭಿಪ್ರಾಯವಿಲ್ಲ. ಈಗ ಪ್ರಶ್ನೆ ಏನು ಎಂದರೆ, ಈ ಯೋಜನೆಯಿಂದ ನೀರು ಬರುತ್ತದೋ, ಬರುವುದಿಲ್ಲವೋ ಎನ್ನುವ ಸಂಶಯವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ಈ ಸಭೆಯೊಳಗೆ ಮಾನ್ಯ ಮಿತ್ರರು ಅನೇಕರು ಹೇಳುತ್ತಾರೆ, ಕಾವೇರಿ ನೀರು ಎಲ್ಲಿ ಬರುತ್ತದೆ ಎಂದು, ಆದರೆ ನಮ್ಮ ಮಂತ್ರಿಗಳು ಬಸವಲಿಂಗಪ್ಪನವರು ೧೯೭೩ನೇ ಇಸವಿಯೊಳಗೆ ಕಾವೇರಿ ನೀರನ್ನು ಬೆಂಗಳೂರು ನಗರಕ್ಕೆ ಕೊಟ್ಟೇ ಕೊಡುತ್ತೇವೆ, ನೀರು ಬಂದೇ ಬರುತ್ತದೆ ಎಂದು ಆಗ್ರಹಪೂರ್ವಕವಾಗಿ ಮಾತನಾಡಿದ್ದಾರೆ, ಅದು ನನಗೆ ಜ್ಞಾಪಕವಿದೆ. ಈ ವಿವಾದಕ್ಕೆ ನಾನು ಈವೊತ್ತಿನ ದಿವಸ ಹೋಗುವುದಿಲ್ಲ. ಕಾವೇರಿ ನೀರು ಬರುತ್ತದೆಯೋ ಇಲ್ಲವೋ ಎನ್ನುವ ಸಂಶಯದ ಬಗ್ಗೆ ನಾನು ಮಾತನಾಡುವುದಕ್ಕೆ ತಯಾರಿಲ್ಲ. ಒಂದು ಪಕ್ಷ ನೀರು ಬಂದರೆ, ಯಾವ ರೀತಿ ನೀರು ಬರುತ್ತದೆ, ಸ್ವಚ್ಛವಾದ ಶುಭ್ರವಾದ ನೀರು ಬರುತ್ತದೆಯೋ ಎಂದು ಯೋಚನೆ ಮಾಡುವ ಕಾಲ ಈಗಾಗಲೇ ಬಂದಿದೆ. ನನ್ನ ಅಭಿಪ್ರಾಯದಲ್ಲಿ, ಯಾವ ರೀತಿ ಕೆಲಸ ನಡೆಯುತ್ತಿದೆ, ಆ ಕೆಲಸ ಸರಿಯಾಗಿ ನಡೆಯದೆ ಹೋದರೆ, ಬೆಂಗಳೂರು ನಗರಕ್ಕೆ ಕೊಳಚೆ ನೀರು, ಸಿಮೆಂಟ್, ಸುಣ್ಣ ಬೆರಕೆಯಾದ ಮತ್ತು ಪೊಲ್ಯೂಟೆಡ್ ನೀರು ಬರಬಹುದು. ಸರಿಯಾದ ರೀತಿಯಲ್ಲಿ ಕೆಲಸ ನಡೆದರೆ ಒಳ್ಳೆಯ ನೀರು ಬರುತ್ತದೆ. ನಮಗೆ ಬೇಕಾಗಿರುವುದು ಒಳ್ಳೆಯ ನೀರು, ಈ ದೃಷ್ಟಿಯಿಂದ ನಾನು ಇಲ್ಲಿ ಮಾತನಾಡುತ್ತಿದ್ದೇನೆ, ಬೇರೆ ದೃಷ್ಟಿಯಿಂದಲ್ಲ, ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಮಾಡುವ ಟೀಕೆಗಳನ್ನು ಈ ಸಭೆಯಲ್ಲಿ ಹಿಂದೆ ಇದರ ಬಗ್ಗೆ ಚರ್ಚೆ ನಡೆದಾಗ ನಮ್ಮ ಮಾನ್ಯ ಮಿತ್ರರು ಹೇಳಿದ್ದಾರೆ.

ಅಸೆಂಬ್ಲಿಯಲ್ಲಿ ಡಿಪಾರ್ಟ್‌ಮೆಂಟಿನ ಬಗ್ಗೆ ಚರ್ಚೆಗೆ ಮಾನ್ಯ ಮಂತ್ರಿಗಳು ಉತ್ತರಕೊಡುತ್ತಾ ಟೆಕ್ನಿಕಲ್ ಆಗಿ ಎಲ್ಲಾ ಸರಿಯಾಗಿ ಇದೆ, ಸರಿಪಡಿಸಬೇಕಾದರೆ ಸರಿಪಡಿಸುತ್ತೇವೆ, ಅಂಥಾದ್ದು ಏನೂ ಇಲ್ಲ ಎಂದು ತಿಳಿಸಿ ಮಾತನಾಡಿದ್ದಾರೆ. ನಾನು ತಮ್ಮ ಮೂಲಕ ಇದು ಗಹನವಾದ ವಿಷಯ ಆಳವಾಗಿ ನೋಡಬೇಕು, ಎಂದು ತಿಳಿಸಿ ಮಾತನಾಡುವ ವಿಷಯವಲ್ಲ ಎಂದು ಹೇಳಬೇಕಾಗಿದೆ. ಇದರ ಬಗ್ಗೆ ಸ್ವಲ್ಪ ತಾಂತ್ರಿಕ ಜ್ಞಾನಬೇಕು. ಈ ವಿಷಯ ತಮಗೆ ಗೊತ್ತಿರುವ ಹಾಗೆ ಮುಖ್ಯವಾಗಿರುವುದು ಕಾವೇರಿ ನೀರು ಪ್ರಾರಂಭದಿಂದ ಪ್ರೀಸ್ಟ್ರೆಸ್ಡ್ ಕಾಂಕ್ರೀಟ್ ಪೈಪಿನಲ್ಲಿ ಬರಬೇಕೆ ಅಥವಾ ಸ್ಟೀಲ್ ಪೈಪಿನಲ್ಲಿ ಬರಬೇಕೇ ಎನ್ನುವ ವಾದ ಇದ್ದು, ಈಗ ಸ್ಟೀಲ್ ಪೈಪ್ ಎಂದು ತೀರ್ಮಾನಿಸಲಾಗಿದೆ. ಆ ವಾದಕ್ಕೆ ನಾನು ಹೋಗುವುದಿಲ್ಲ. ಪ್ರೀಸ್ಟ್ರೆಸ್ಡ್ ಕಾಂಕ್ರೀಟ್ ಪೈಪಿನಲ್ಲಿ ನೀರು ಬರಬೇಕು ಎಂದು ಶ್ರೀಮಾನ್ ಶಾಮಣ್ಣನವರು ಕೂಡ ವಾದ ಮಾಡಿದರು, ಶ್ರೀಮಾನ್ ದೇವರಾಜ ಅರಸ್‌ರವರು ವಾದ ಮಾಡಿದರು, ಎಲ್ಲರೂ ಮಾತನಾಡಿದ್ದಾರೆ ನಾನು ಈ ಕೆಲಸದ ಬಗ್ಗೆ ಒಂದು ದಿನ ನೋಡಲು ಲೈನಿನ ಉದಕ್ಕೂ ಹೋಗಿದ್ದೆ. ಆದಿನ ಶ್ರೀಮಾನ್ ಬಸವಲಿಂಗಪ್ಪನವರು ನನ್ನ ಜೊತೆಯಲ್ಲಿ ಬರಲಿಲ್ಲ. ಅವರು ಇದ್ದಿದ್ದರೆ ನನ್ನಂತೆಯೇ ವಾದ ಮಾಡುತ್ತಿದ್ದರು ಎಂದು ನನಗನಿಸುತ್ತದೆ. ಹೀಗಿದ್ದರೂ ಸ್ಟೀಲ್ ಪೈಪ್ ಮಾಡಬೇಕೆಂದು ಮೆಜಾರಿಟಿ ಇದ್ದದ್ದರಿಂದ ಇಸಿಸಿ ಕಂಪನಿ ಜೊತೆಯಲ್ಲಿ ಅಗ್ರಿಮೆಂಟ್ ಮಾಡಿಕೊಂಡು ಜಾರಿಗೆ ತಂದಿದ್ದಾರೆ. ಈಗಲೇ ಹಲವಾರು ಮೈಲಿಗಳಷ್ಟು ಕೆಲಸ ನಡೆದಿದೆ. ಇನ್ನೂ ೪೦-೫೦ ಮೈಲಿಯಷ್ಟು ನಡೆಯಬೇಕಾಗಿದೆ, ಇದು ನಡೆಯುತ್ತಾ ಇರಬೇಕಾದರೆ, ಈ ಪ್ರಶ್ನೆ ಎತ್ತಿಬಿಟ್ಟು ಮನಸ್ಸು ಕೆಡಿಸಬೇಕು ಆ ಕೆಲಸಗಳಿಗೆ ಹರಕತ್ತು ಮಾಡಬೇಕೆಂದು ಅಲ್ಲ, ಶರಾವತಿಯಲ್ಲಿ ಏನು ನಡೆಯಿತು ಯಾವ ಕಳಕಳಿಯಿಂದ ಚರ್ಚೆ ಮಾಡಿದೆವು ಅದರ ಬಗ್ಗೆ ಏನಾಗಿದೆ ಎಂಬುದು ತಮಗೂ ಗೊತ್ತಿದೆ. ೮ ವರ್ಷಗಳು ಆದಮೇಲೆ ಈಗ ಸಿಮೆಂಟ್ ಎಲ್ಲಾ ಹೊರಗಡೆ ಬರುತ್ತದೆ, ಕಲ್ಲು ಹೊರಗಡೆ ಬರುತ್ತಿದೆ ಎಂದು ಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ಶ್ರೀಮಾನ್ ಚೆನ್ನಬಸಪ್ಪನವರು ಹೊಣೆಯಾಗಿದ್ದಾರೆ. ಅವರು ನ್ಯಾಯವಾಗಿ ಈ ವಿಷಯದ ಬಗ್ಗೆ ವಿಚಾರಣೆ ಮಾಡಲು ಆಜ್ಞೆ ಹೊರಡಿಸಬೇಕಿತ್ತು. ಇದರಲ್ಲಿ ತಪ್ಪಿದ್ದಾರೆ. ಈಗ ಎಲೆಕ್ಟ್ರಿಸಿಟಿ ಬರುವುದು ತಡವಾಗುತ್ತದೆ ಎಂದು ಹೇಳಲಾಗುತ್ತಿದೆ. ೯ ವರ್ಷಗಳು ಆದಮೇಲೆ, ೮ ವರ್ಷಗಳ ಹಿಂದಿನ ಈ ಕರ್ಮಕಾಂಡ ಗೊತ್ತಾಗಿದೆ.

MR. DEPUTY SPEAKER.—Mr. Krishna, will note that this discussion is regarding Cauvery waters.

SRI S. M. KRISHNA —I was trying to say that just as after eight years we are repenting for what has happened in Sharavathi. Let not the same thing happen in regard to the Cauvery Scheme. I do not want to raise any discussion on Sharavathi.

The most important point is. I am not trying to bring extraneous things. I mentioned Sharavathi because the analogy is on all fours. There also certain incidents have taken place and they have come to light now. The way the work was done there was bad and shabby. Now we are in a soup practically. Government is trying to rectify. Let not this Government be charged again tomorrow that in the case of Cauvery Scheme also the same thing has happened. That is my concern. When I say this there must be good reasons. My reasons are not based ou hearsay, let me tell you frankly. My reasons are not based on politics. My reasons are purely based on what I saw there. I myself went there. Once you see, the Hon'ble Minister was pleased to arrange for a trip for all the MLA's who ever could come and see the Cauvery scheme. It was a very nicely arranged trip. We had a good trip ; we drank well-neither beer nor vodukd we drank cocacola and a lot of coconut water. What happended was, we were taken round and it was a good tour conducted tour. You go to Delhi, there is a bus which takes you to important places around Delhi. By that the tourist will get the impression that every thing is good in Delhi. That it is not the impression that I would like to get on a superficial visit. The Hon'ble Minister was pleased to say : last time I took all of them, including Sri M. S. Krishnan of couse I said : YES. But that is not the way in which I look at it. I have gone there myself separately, and then after seeing the place, I have come to these conclusions which place before this house. The way in which things are going on, it is rather serious, and apprehensive and leads to lots of doubts. Of that I am speaking.

MR. DEPUTY SPEAKER.—The Hon'ble Member is equally forceful in both languages. The language in which he commenced his speech must be adhered to.

SRI M. S. KRISANA.—The Hon'ble Speaker is kind to me. I will speak in whatever language he asks me to speak.

MR. DEPUTY SPEAKER.—At least now, he may make up his mind and stick on to one language.

SRI M. S. KRISHNA.—I will continue in English Sir. Now, I was on this point : I am basing all my comments on first hand information and not on that basis of hearsay or newspaper statements, etc. It is based on my own examination of this work.

(Sri M. S. Krishnan):

On another day, the Hon'ble Minister asked me and some other MLAs including the Leader of the Opposition to accompany him and see this again, That day of course we did not go, I do not want to go further than that, Now after having seen everything, I have come back with a feeling that a big fraud is being perpetrated on the State ; if I may say so, the Exchequer is going to be drained and has already been drained and the people of the State and the citizens of Bangalore in particular, are going to pay for it if this continues. This opinion is passed on three or four actors.

ಸರಕಾರ ಕಾರ್ಯಕ್ರಮ ಹಾಕಿಕೊಂಡಿದೆ, ಏಕ್‌ದಂ ಇವನ್ನೆಲ್ಲಾ ಜಾರಿಗೆ ತರಬೇಕು ಎಂದರೆ ವ್ಯಾವಹಾರಿಕವಾಗಿ ಇದು ಸ್ವಲ್ಪ ಕಷ್ಟವಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಕನ್ನಡದ ಬೆರಳಚ್ಚು ಯಂತ್ರಗಳ ಬಗ್ಗೆ ನಿಧಾನವಾಗುವುದರ ಬಗ್ಗೆ ನಾವು ಹೇಳುತ್ತಿಲ್ಲ. ಇದನ್ನು ಬಿಟ್ಟು ಇದರಲ್ಲಿ ಇನ್ನೂ ಅನೇಕ ಶಿಫಾರಸುಗಳಿವೆ, ಇವನ್ನು ಸರಕಾರ ಕೂಡಲೇ ಜಾರಿಗೆ ತರಬಹುದು. ಆದರೆ ಇದಕ್ಕೆ ಸರಕಾರದ ಅಧಿಕಾರಿಗಳು ಸಾಕಷ್ಟು ಉತ್ಸಾಹ ತೋರಿಸುತ್ತಿಲ್ಲ ಎನ್ನುವುದು ಕೇಳುತ್ತಿದ್ದೇವೆ. ಇತರ ಶಿಫಾರಸುಗಳನ್ನೇಕೆ ಬೇಗ ಜಾರಿಗೆ ತರಬಾರದು ?

ಶ್ರೀ ಡಿ. ದೇವರಾಜ ಅರಸ್.—ಇದರ ಶಿಫಾರಸುಗಳು ಬಂದ ಕೂಡಲೆ ಸರಕಾರದವರು 9-6-72 ರಲ್ಲಿ ಒಂದು ಪ್ರೆಸ್ ನೋಟನ್ನು ಪತ್ರಿಕೆಗಳಲ್ಲಿ ಪ್ರಕಟ ಮಾಡಿದೆ ಅದರಂತೆ ಸರಕಾರ ಕಾರ್ಯಕ್ರಮ ಹಾಕಿಕೊಂಡು ಮಾಡಬೇಕಾಗಿದೆ. ಸರಕಾರ ಬೇಕಂತಲೇ ನಿಧಾನ ಮಾಡುತ್ತಿಲ್ಲ. ಇದರಲ್ಲಿ ಯಾವ ಯಾವ ಶಿಫಾರಸುಗಳನ್ನು ಪರಿಶೀಲನೆ ಮಾಡಬೇಕು ಮತ್ತು ಯಾವುದನ್ನು ಜಾರಿಗೆ ಕೊಡಬಹುದು ಎನ್ನುವ ವಿವರಗಳನ್ನೆಲ್ಲಾ ಪ್ರೆಸ್ ನೋಟಿನಲ್ಲಿ ಕೊಡಲಾಗಿದೆ. ಇವನ್ನೆಲ್ಲಾ ಸರಕಾರ ಪರಿಶೀಲನೆ ಮಾಡುತ್ತಿದೆ. ಇವನ್ನೆಲ್ಲಾ ಪರಿಶೀಲನೆ ಮಾಡಿ ಇವುಗಳಲ್ಲಿ ಯಾವ ಯಾವುದನ್ನು ಜಾರಿಗೆ ಕೊಡಬಹುದೋ ಅಂತಹ ಶಿಫಾರಸುಗಳನ್ನು ಹಂತ ಹಂತವಾಗಿ ಮಾಡಿಕೊಂಡು ಹೋಗುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಕನ್ನಡದ ಬೆರಳಚ್ಚು ಯಂತ್ರದ ಬಗ್ಗೆ ನಮಗೆ ಗೊತ್ತಿದೆ ಇದು ನಿಧಾನವಾಗುತ್ತದೆ ಎನ್ನುವುದು ಮತ್ತು ಇದಕ್ಕಾಗಿ ಹೆಚ್ಚಿಗೆ ಹಣವನ್ನು ಸರಕಾರ ಮಂಜೂರು ಮಾಡಬೇಕಾಗಿ ಬರುತ್ತದೆ. ಆದರೆ ಇದರಲ್ಲಿ ಉಳಿದಿರತಕ್ಕ ಅಂಶಗಳನ್ನು ಆದಷ್ಟು ಶೀಘ್ರವಾಗಿ ಜಾರಿಗೆ ಕೊಡಲು ಸರಕಾರ ಪ್ರಯತ್ನಿಸುತ್ತದೆಯೇ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರ ಅಭಿಪ್ರಾಯ ಸರಕಾರದ ಗಮನದಲ್ಲಿ ಇದೆ ಅದನ್ನು ಉದ್ದೇಶಪೂರ್ವಕವಾಗಿ ನಾವು ತಡ ಮಾಡುತ್ತಿಲ್ಲ. ಅದನ್ನು ಹಂತ ಹಂತವಾಗಿ ಬೇಗ ಜಾರಿಗೆ ಕೊಡಬೇಕೆಂದು ಇದೆ.

Mysore Implements Factory, Hassan

851. Sri A. G. KODGI (Baindur).—

Will the Minister for Industries be pleased to state :—

(*a*) the total loss incurred by the Mysore Implements Factory, Hassan, from the date of its inception to this date (Yearly figures may please be furnished);

(*b*) the reasons for the heavy loss ;

(*c*) the steps taken by the Government to remedy the same ?

Sri S. M. KRISHNA (Minister for Industries).—

(*a*) *Vide* Statement 'A' appended.

(*b*) *Vide* Statement 'B' appended.

(*c*) *Vide* Statement 'C' appended.

(SRI S. M. KRISHNA)

STATEMENT 'A'

Year		Loss (Rs. in lakhs)
1940-41	...	0.05
1950-51	...	0.01
1951-52	...	0.58
1952-53	...	1.21
1953-54	...	0.82
1954-55	...	0.31
1966-67	...	1.92
1967-68	...	6.20
1968-69	...	5.55
1969-70	...	5.22
1970-71	...	10.13
1971-72	...	10.00 (Provisional)
	Total	42.00 lakhs

STATEMENT 'B'

The Mysore Implements Factory, Hassan, is incurring losses regularly since 1966-67 due to the following reasons :—

(i) Increased cost of raw materials especially Steel Sections by 100 per cent and non-availability of the same in required quantities and in desired times.

(ii) Revision of grades and scales to the employees of the Factory and also frequent revision of Dearness Allowance and other Allowances.

(iii) Increase in the payment of interest on Capital.

(iv) Increase in the cost of advertisement charges.

(v) Increase in the cost of freight charges.

(vi) Increase in the cost of power charges.

(vii) Increase under repairs and renewals.

(viii) Transfer of development expenditure to regular assets without achieving full revenue, depreciation at the prescribed rate is provided and there is very heavy increase under depreciation.

(ix) Recession in the Engineering Industry.

(x) Payment of extra contribution for Provident Fund Account due to revision of Grades and Scales and since the E. S. I. Scheme is implemented in Hassan, the Factory had to pay increased rate of Contribution.

STATEMENT 'C'

The following steps have been taken to reduce the losses :—

(i) Procurement of steel, which is the main raw-material by getting allotment of released rails and using it after being re-rolled.

(ii) Diversification of production has been taken up and also taking up of new lines of manufacture like, Tractor and Tiller Implements and equipments, Tractor trailors, etc., required by the Mysore State Agro-Industries Corporation Ltd., Bangalore.

(iii) Procurement of D. G. S. & D. Orders on Rate Contract and Running Contract basis.

(iv) Action has also been taken to increase production capacity of the Factory by purchasing automatic machinery and other equipments, besides improving the quality of products by introducing the heat treatment technique.

(v) The question of conversion of the Factory into a Joint Stock Company to run on purely commercial lines is also under consideration.

(vi) Action has also been taken to introduce the Incentive Production Bonus Scheme to achieve the maximum target of Production.

(vii) Action has been taken to minimise in all items of expenditure.

ಶ್ರೀ ಎ. ಜಿ. ಕೊಡಗಿ:—ಈ ಕಾರ್ಖಾನೆ ಸರಿಯಾಗಿ ಕೆಲಸಮಾಡದೇ ಇರುವುದರಿಂದ ರೈತರಿಗೆ ವ್ಯವಸಾಯಕ್ಕೆ ಬೇಕಾದ ಉಪಕರಣಗಳು ಸಿಕ್ಕುತ್ತಿಲ್ಲ ಎನ್ನುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ಎಸ್. ಎಂ. ಕೃಷ್ಣ.—ಈ ಕಾರ್ಖಾನೆ ಕೆಲವು ವರ್ಷಗಳಿಂದ ಸರಿಯಾಗಿ ಕೆಲಸಮಾಡದೇ ಇರುವ ಪರಿಸ್ಥಿತಿಯಿಂದಾಗಿ ಹೀಗಾಗಿದೆ. ಇದರ ಬಗ್ಗೆ ನೋಡುವಾಗ ಇದು ಅಷ್ಟು ಸಮರ್ಪಕವಾಗಿ ಕೆಲಸ ಮಾಡುತ್ತದೆ ಎಂದು ಕಂಡುಬರುವುದಿಲ್ಲ. ಆದುದರಿಂದ ಇದರ ಬಗ್ಗೆ ನಾನು ಯಾವ ಅಭಿಪ್ರಾಯವನ್ನು ಕೊಡಬಯಸುವುದಿಲ್ಲ. ಈ ಕಾರ್ಖಾನೆಯನ್ನು ಸರಿಯಾದ ರೀತಿಯಲ್ಲಿ ನಡೆಸ್ಬೇಕಾದರೆ ಯಾವ ರೀತಿ ಮಾಡಬಹುದು ಎನ್ನುವುದನ್ನು ಸರಕಾರ ಯೋಚನೆ ಮಾಡುತ್ತಿದೆ. ಆಗ ಇದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.—ಖಾಸಗೀ ಕೈಗಾರಿಕೆಗಳಲ್ಲ ಲಾಭಾಂಶದಿಂದ ನಡೆಯುತ್ತಿರಬೇಕಾಗ ಈ ಕೈಗಾರಿಕೆ ನಷ್ಟದಲ್ಲಿ ನಡೆಯುತ್ತಿರುವುದಕ್ಕೆ ಕಾರಣವೇನು ? ಈಗಲಾದರೂ ಇದನ್ನು ಮಾರ್ಪಡಿಸಿ ಲಾಭಾಂಶದಲ್ಲಿ ನಡೆಯುವಂತೆ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಈ ಕಾರ್ಖಾನೆ ಸರಿಯಾಗಿ ನಡೆಯುತ್ತಿಲ್ಲ ಎಂಬುದನ್ನು ನಾನು ಒಪ್ಪಿಕೊಂಡಿದ್ದೇನೆ. ಇದಕ್ಕೆ ಕಾಯಕಲ್ಪ ಮಾಡಬೇಕಾಗಿದೆ. ಅದಕ್ಕಾಗಿ ಕಾರ್ಯ ಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೇವೆ. ಬಹುಶಃ ಕೆಲವು ತಿಂಗಳುಗಳಲ್ಲಿಯೇ ಸರಿಯಾದಂಥ ದಾರಿಯಲ್ಲಿ ಹೋಗ್ಗುವುದಕ್ಕೆ, ಲಾಭದಾಯಕವಾದಂಥ ಕಾರ್ಖಾನೆಯನ್ನಾಗಿ ಮಾರ್ಪಡಿಸುವುದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಜಿ. ಕೊಡಗಿ.—ಸಾರ್ವಜನಿಕ ಸಂಸ್ಥೆಗಳಲ್ಲಿ ನಷ್ಟವಾದರೆ ಅದರ ಹೊಣೆಗಾರಿಕೆಯನ್ನು ಯಾರ ಮೇಲಾದರೂ ನಿಗದಿ ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದಾರೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಅಲ್ಲಿ ಯಾರು ಕಾರ್ಯನಿರ್ವಾಹಕರು ಇರುತ್ತಾರೋ ಅವರ ಮೇಲೆ ಜವಾಬ್ದಾರಿ ಇರುತ್ತದೆ. ಸರ್ಕಾರೀ ಉದ್ಯಮಗಳು ಲಾಭದಾಯಕವಾಗದೇ ಇರುವುದಕ್ಕೆ ಹಲವಾರು ಕಾರಣಗಳು ಇರುತ್ತವೆ. ಆ ಕಾರಣಗಳನ್ನೆಲ್ಲಾ ಗಮನದಲ್ಲಿ ಇಟ್ಟುಕೊಂಡು ಜವಾಬ್ದಾರಿಯನ್ನು ಹೊರಿಸಬೇಕಾಗುತ್ತದೆ.

ಶ್ರೀ ಎ. ಜಿ. ಕೊಡಗಿ.—ಈ ಕಾರ್ಖಾನೆಯಲ್ಲಿ ತಯಾರಾಗತಕ್ಕ ಸಾಮಾನುಗಳನ್ನು ವಿತರಣೆ ಮಾಡಲು ಏಜೆನ್ಸಿ ಯಾರಿದ್ದಾರೆ ಮತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಯಾರಿದ್ದಾರೆ ?

ಶ್ರೀ ಎಸ್. ಎಂ. ಕೃಷ್ಣ.—ಯಾರು ಬೇಕಾದರೂ ಕೊಂಡುಕೊಳ್ಳಬಹುದು. ಈ ಉಪಕರಣಗಳನ್ನು ಕೋಆಪರೇಟಿವ್ ಸೊಸೈಟಿಗಳ ಮೂಲಕ ಮಾರಾಟ ಮಾಡುತ್ತೇವೆ. ಅಲ್ಲಿಂದ ಯಾರು ಬೇಕಾದರೂ ತೆಗೆದುಕೊಂಡು ಹೋಗಬಹುದು.

ಶ್ರೀ ಜಿ. ಮಾದೇಗೌಡ.—ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ಗೆ ಕೇಂದ್ರ ಸರ್ಕಾರದವರು ವ್ಯವಸಾಯ ಉಪಕರಣಗಳನ್ನು ತಯಾರು ಮಾಡುವ ಬಗ್ಗೆ ಗ್ರಾಂಟ್ ಕೊಟ್ಟು ಲೈಸನ್ಸ್ ಕೊಟ್ಟೂ ಸಹ ಅವರು ಇನ್ನೂ ಪ್ರಾರಂಭ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಎಂ. ಕೃಷ್ಣ.—ಈ ಕಾರ್ಖಾನೆಯನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಕೊಟ್ಟರೆ, ವ್ಯವಸಾಯವನ್ನೇ ಅವಲಂಬಿಸಿರತಕ್ಕಂಥ ಈ ಒಂದು ಉದ್ಯಮದವರಿಂದ ಹೆಚ್ಚು ಕೋಆರ್ಡಿನೇಷನ್ ಉಂಟಾಗಿ ಚೆನ್ನಾಗಿ ನಡೆಸಬಹುದು, ಎಂಬ ಆಲೋಚನೆಯಿಂದ ಅವರಿಗೆ ವಹಿಸಬೇಕೆಂದಿದ್ದೇವೆ. ಅದು ಸರ್ಕಾರದ ಗಮನದಲ್ಲಿದೆ. ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ ಕೇಂದ್ರಸರ್ಕಾರದವರು ಹೊಸ ಲೈಸನ್ಸ್ ಕೊಟ್ಟಿದ್ದರೂ ಅವರು ಇನ್ನೂ ಪ್ರಾರಂಭ ಮಾಡಲಿಲ್ಲ ಎಂಬುದು. ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ನನಗೆ ಸೇರಿದ್ದಲ್ಲ. ಸಂಬಂಧಪಟ್ಟ ಮಂತ್ರಿಗಳಿಗೆ ಬೇರೆ ಪ್ರಶ್ನೆ ಹಾಕಿದರೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಎಂ. ನಂಜೇಗೌಡ.—ಈ ಕಾರ್ಖಾನೆಯನ್ನು ಖಾಸಗೀಯವರಿಗೆ ವಹಿಸುವ ಯೋಚನೆ ಏನಾದರೂ ಇದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಇಲ್ಲ.

ಶ್ರೀ ಎ. ಜಿ. ಕೊಡಗಿ.—ನನ್ನ ತಿಳಿವಳಿಕೆಯ ಪ್ರಕಾರ ಈ ಉಪಕರಣಗಳನ್ನು ಮಾರಾಟ ಮಾಡಲು ಪ್ರತಿಯೊಂದು ಜಿಲ್ಲೆಯಲ್ಲಿಯೂ ಏಜೆಂಟ್ ಇರುತ್ತಾರೆ. ಹಾಗೇನಾದರೂ ಇದ್ದರೆ ಅದನ್ನು ತಪ್ಪಿಸಿ ಕೋಆಪರೇಟಿವ್ ಸೊಸೈಟಿಗಳಿಗೆ ಡಿಸ್ಟ್ರಿಬ್ಯೂಷನ್ ಏಜೆನ್ಸಿ ಕೊಟ್ಟು ಆ ಮೂಲಕ ಮಾರಾಟ ಮಾಡಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇವೆ.

Facilities to the Tourists at Srirangapatna

858. Smt. DAMAYANTHI BOREGOWDA (Srirangapatna).—

Will the Minister for Labour be pleased to state :—

(a) whether it has come to the notice of the Government that Srirangapatna attracts the highest number of tourists in the State ;

(b) if so, the facilities provided by the Government to tourists ;

(c) whether there was proposal of constructing motel and cam ing grounds there, if so, whether it has been implemented ;

Sri D. DEVARAJ URS (Chief Minister) [on behalf of SRI AZEEZ SAIT (Minister for Labour)].—

(*a*) Yes.

(*b*) Accommodation by way of an Inspection Bungalow and Travellers' Bungalow is provided.

(*c*) A proposal to construct a motel is under consideration of Government.

Smt. DAMAYANTHI BOREGOWDA.—The hon. Minister has stated that accommodation by way of an Inspection Bungalow and Travellers' Bungalow are provided. Is the Government aware that both these are situated in one and the same building and they are outside the Town and beyond the reach of middle-class tourists ?

†**Sri D. DEVARAJ URS.**—It has been stated that a proposal to construct a motel is under the consideration of Government.

Smt. DAMAYANTHI BOREGOWDA.—Will the Government bring out a comprehensive scheme to develop the beautiful town of Srirangapatna which was once the glorious capital of Karnataka ?

Sri D. DEVARAJ URS.—Yes. The Gumbaz and other buildings which attract tourists not only from India but also from outside are under the control of the Archaeological Department of the Government of India. During the last meeting of the Chief Ministers of South Zone held in Hyderabad this point was brought to the notice of the Central Government that more attention should be paid not only for maintenance of these very valuable buildings but also they should see that it is developed into a tourist complex to attract more and more tourists.

Smt. DAMAYANTHI BOREGOWDA.—There is not even a bus stand in that place and a foundation-stone for construction of bus stand was laid by a Minister some 2½ years back and the work has not been taken up yet. May I know when the Government will complete the construction of Bus Stand there ?

Sri D. DEVARAJ URS.—That will also be looked into.

ಶ್ರೀ ಟಿ. ಎಂ. ಮಂಜುನಾಥ್.—ಶ್ರೀರಂಗಪಟ್ಟಣದಲ್ಲಿರುವ ಗುಮುಜ್ ಮುಂತಾದ ಹಳೆಯ ಕಟ್ಟಡಗಳು ಆರ್ಕಿಯಾಲಾಜಿಕಲ್ ಇಲಾಖೆಯವರಿಗೆ ಸೇರಿದೆ ಎಂದು ತಾವು ಹೇಳಿದಿರಿ, ಈಗ ಆ ಕಟ್ಟಡಗಳು ಬಹಳ ಶಿಥಿಲವಾಗಿರುವುದರಿಂದ ತಾವು ಕೇಂದ್ರ ಸರ್ಕಾರದ ಗಮನಕ್ಕೆ ತರುವುದರ ಮೂಲಕ ಆ ಕಟ್ಟಡಗಳನ್ನು ರಿಪೇರಿ ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

Sri D. DEVARAJ URS.—I have already stated that it is under the control of the Central Archaeological Department and that is why we cannot directly deal with it.

Smt. DAMAYANTHI BOREGOWDA.—The Town Municipal Council of Mandya resolved to make Srirangapatna a tourist centre some 12 years' back and they recommended to the Government also. May I know what has happened to that ?

Sri D. DEVARAJ URS.—It is too late. Anyway, now that we have stated Government is interested in not only maintaining it but also developing this into a tourist complex, I think the hon. member should be satisfied Whatever might have happened 12 years' back, now the Government has taken note of it.

Excess Land available due to implementation of Land Reforms

881. Smt. RENUKA RAJENDRAN (Bagepalli) .—

Will the Minister for Revenue be pleased to state :—

(*a*) the number of ryots in each taluk who are having more than 18 standard acres of lands in the context of Land Reforms Act ;

(*b*) amongst landlords and ryots the number of cases wherein ryots are cultivating the lands ;

(*c*) the number of landless agriculturists families in each taluk ;

(*d*) the extent of land available due to implementation of land reforms ;

(*e*) the extent of forest land in each taluk ;

(*f*) out of this land, the extent of land where forests do not exist and is cultivable ?

Sri N. HUTCHAMASTHY GOWDA (Minister for Revenue).—

(*a*) to (*f*) These details have not been collected. It is not possible to furnish the information as it entails lot of time and establishment.

ಶ್ರೀಮತಿ ರೇಣುಕಾ ರಾಜೇಂದ್ರನ್.—ವಿವರಗಳನ್ನು ಸಂಗ್ರಹಿಸಲು ಹೆಚ್ಚು ಕಾಲ ಮತ್ತು ಸಿಬ್ಬಂದಿ ಬೇಕಾಗಿರುವುದರಿಂದ ವಿವರಗಳನ್ನು ಒದಗಿಸಲು ಸಾಧ್ಯವಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದೀರಿ ; ಭೂಸುಧಾರಣಾ ಕಾನೂನನ್ನು ಜಾರಿಗೆ ತರುವುದಕ್ಕೆ ಮುಂಚೆ ಈ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಹಾಲಿ ಇರತಕ್ಕಂಥ ಭೂಸುಧಾರಣಾ ಕಾನೂನು ಪ್ರಕಾರ ಸೀಲಿಂಗಿಗಿಂತ ಹೆಚ್ಚು ಜಮೀನು ಇರುವವರು ಡಿಕ್ಲೇರ್ ಮಾಡಬೇಕಾಗಿತ್ತು. ಆದರೆ ಆದರಂತೆ ಕೆಲವರು ಮಾಡಿಲ್ಲ. ಆದರಿಂದ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈಗ ಮತ್ತೆ ಗರಿಷ್ಠ ಮಿತಿಯನ್ನು ಗೊತ್ತು ಮಾಡಿದ ಮೇಲೆ ಅಂಕಿಅಂಶಗಳನ್ನು ಸಂಗ್ರಹ ಮಾಡಬೇಕಾಗುತ್ತದೆ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಗೇಣಿದಾರರ ಅನುಕೂಲಕ್ಕಾಗಿ ಮದ್ರಾಸ್ ರಾಜ್ಯದಲ್ಲಿ ಒಂದು ಕಾರ್ಪೊರೇಷನ್ ಮಾಡಿದ್ದಾರೆ. ಆ ಕಾರ್ಪೊರೇಷನ್ ಅವರು ಗೇಣಿದಾರರಿಗೆ ಸಾಲ ಕೊಟ್ಟು ಓನರ್ಸ್‌ಗೆ ಸಾಲ ತೀರಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಅದರಂತೆ ಇಲ್ಲಿಯೂ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೊಸದಾಗಿ ತಿದ್ದುಪಡಿ ತಂದ ಮೇಲೆ ಅದನ್ನೆಲ್ಲಾ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಅಂಕಿಅಂಶಗಳನ್ನು ಸಂಗ್ರಹ ಮಾಡಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ಭೂಸುಧಾರಣೆಯನ್ನು ಜಾರಿಗೆ ತಂದಿರುವ ಉದ್ದೇಶ ಬಂಡವಾಳಶಾಹಿಯನ್ನು ಹೋಗಲಾಡಿಸಿ ಭೂಹೀನರಿಗೆ ರಕ್ಷಣೆ ಕೊಡಬೇಕೆಂಬ ತತ್ವದ ಮೇಲೆ ಅಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅನೇಕ ಸಂದರ್ಭಗಳಲ್ಲಿ ಅಂಕಿಅಂಶಗಳನ್ನು ಸಂಗ್ರಹ ಮಾಡಬೇಕಾಗಿರುವುದು ನಿಜ.

ಶ್ರೀ ಬಿ. ವಿ. ಕಕ್ಕಿಲಾಯ.—ಮೈಸೂರು ರಾಜ್ಯದಲ್ಲಿ ಲ್ಯಾಂಡ್ ಸೆನ್‌ಸಸ್ ಇಲಾಖೆಯವರಿಗೆ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡಲು ಏನಾದರೂ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೀರಾ ? ಆ ರೀತಿ ಕೊಟ್ಟಿದ್ದರೆ ಭೂಸುಧಾರಣಾ ಕಾನೂನು ಈ ಸಭೆಯ ಮುಂದೆ ಬರುವುದಕ್ಕೆ ಮೊದಲು ಅದನ್ನು ಒದಗಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಭೂಸುಧಾರಣ ಕಾನೂನು 1965ನೇ ಇಸವಿಯಲ್ಲಿಯೇ ಜಾರಿಗೆ ಬಂದಿದೆ. ಅದು ಬಂದು 7 ವರ್ಷಗಳಾಗಿವೆ. ಈ 7 ವರ್ಷಗಳಲ್ಲಿ ಯಾರು ಯಾರಿಗೆ ಗರಿಷ್ಠ ಮಿತಿಗಿಂತ ಹೆಚ್ಚು ಜಮೀನು ಇದೆಯೋ ಅದನ್ನು ಅವರು ಡಿಕ್ಲೇರ್ ಮಾಡಬೇಕಾಗಿತ್ತು. ಅದರಂತೆ ಕೆಲವರು ಮಾಡದಿರುವುದರಿಂದ ಈಗ ಅಂಕಿಅಂಶಗಳು ಕರಾರುವಾಕ್ಕಾಗಿ ಇಲ್ಲ. ಭೂಸುಧಾರಣಾ ಕಾನೂನಿಗೆ ಕೆಲವು ತಿದ್ದುಪಡಿಗಳು ಬರುವುದು ಇದೆ. ಆಗ ಹಂಚುವುದಕ್ಕೆ ಎಷ್ಟು ಭೂಮಿ ಸಿಗುತ್ತದೆಂಬ ಅಂಕಿಅಂಶಗಳನ್ನು ಸಂಗ್ರಹಿಸಿ ಸರ್ಕಾರ ಒದಗಿಸಿಕೊಡುತ್ತದೆ.

1–30 P.M.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಭೂಸುಧಾರಣೆಯ ತಿದ್ದುಪಡಿ ಮಸೂದೆಯನ್ನು ನಾಳೆ ಈ ಸಭೆಯಲ್ಲಿ ತಂದು ಆ ಮೇಲೆ ಈ ಅಂಕಿ ಅಂಶಗಳನ್ನು ಸಂಗ್ರಹಿಸುತ್ತೇವೆ ಎಂದು ಹೇಳುವ ಮಾತು ಕುದುರೆಯ ಮುಂದೆ ಗಾಡಿಯನ್ನು ಕಟ್ಟಿದಹಾಗಾಗುತ್ತದೆ. ಮೂಲಭೂತವಾಗಿ ಎಷ್ಟು ಭೂಮಿ ಇದೆ, ಎಷ್ಟು ಜನ ಭೂಹೀನ ರೈತರು ಇದ್ದಾರೆ ಎನ್ನತಕ್ಕ ಅಂಕಿ ಅಂಶಗಳನ್ನು ಈ ಸಭೆಯಮುಂದೆ ಇಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರುವ ಪರಿಸ್ಥಿತಿಯಲ್ಲಿ ಕುದುರೆ ಮುಂದೆ ಗಾಡಿ ಇದೆಯೋ, ಗಾಡಿಮುಂದೆ ಕುದುರೆ ಇದೆಯೋ ಗೊತ್ತಿಲ್ಲ. ಆದರೆ ಈಗ ಆ ಅಂಕಿ ಅಂಶಗಳು ಇಲ್ಲ. ಈಗ ಹಾಲಿ ಎಷ್ಟು ಭೂಮಿ ಇದೆ, ಎಷ್ಟು ಜನ ಭೂಹೀನ ರೈತರು ಇದ್ದಾರೆ ಎನ್ನುವ ಅಂಕಿಅಂಶಗಳನ್ನೆಲ್ಲಾ ಸಂಗ್ರಹ ಮಾಡುತ್ತಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ್.—ಈಗ ತಾವು ಭೂಮಿತಿಯ ಕಾನೂನನ್ನು ತರುತ್ತೀರಿ, ಇದು ಸಂತೋಷ. ಸೀಲಿಂಗ್ ಲಿಮಿಟಗಿಂತ ಹೆಚ್ಚಾಗಿರುವ ಭೂಮಿಯನ್ನು ಸರ್ಕಾರದ ವಶದಲ್ಲಿ ಇಟ್ಟುಕೊಳ್ಳುತ್ತೀರಾ ಅಥವಾ ಯಾವರೀತಿ ಮಾಡುತ್ತೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಭೂಸುಧಾರಣೆಯ ವಿಧೇಯಕವನ್ನು ಓದಿ ತಿಳಿದುಕೊಂಡರೆ ಅದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಮಗೆ ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ಪ್ರತಿ ತಾಲ್ಲೂಕಿನಲ್ಲಿ ಭೂಹೀನ ರೈತರ ಕುಟುಂಬಗಳು ಎಷ್ಟು ಇವೆ, ಎಷ್ಟು ಭೂಮಿ ಇದೆ ಎನ್ನುವ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡಿಲ್ಲ. ಆದ್ದರಿಂದ ಈಗಲಾದರೂ ಸಮಗ್ರ ಭೂಸುಧಾರಣೆಯನ್ನು ತರುವುದಕ್ಕೆ ಮೊದಲು ಆ ಅಂಕಿ ಅಂಶಗಳನ್ನು ಸಿದ್ಧಗೊಳಿಸಿ ಅನಂತರ ಸಮಗ್ರವಾದ ಭೂಸುಧಾರಣೆಯ ತಿದ್ದುಪಡಿ ಮಸೂದೆಯನ್ನು ತರುತ್ತೀರಾ ?

ಶ್ರೀ ಪಿ. ಎಂ. ಬಂಗಿ.—ಈಗ ಇರುವ ಭೂಸುಧಾರಣಾ ಕಾನೂನಿನ 63 ನೇ ಸೆಕ್ಷನ್ ಪ್ರಕಾರ ಎಲ್ಲಾ ಲ್ಯಾಂಡ್ ಲಾರ್ಡ್‌ಗಳೂ ಡಿಕ್ಲರೇಷನ್ ಕೊಟ್ಟಿದ್ದಾರೆ. ಮತ್ತು ಎಲ್ಲಾ ತಹಶೀಲ್ದಾರರು ಸರ್‌ಪ್ಲಸ್ ಲ್ಯಾಂಡನ್ನು ಜಾಹಿರಾತು ಮಾಡಿದ್ದಾರೆ. ಆದ್ದರಿಂದ ಆ ಅಂಕಿ ಅಂಶಗಳನ್ನು ಕೊಡುವುದಕ್ಕೆ ಅಡಚಣೆ ಏನಿದೆ ?

ಶ್ರೀ ಎಸ್ ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರ ಪ್ರಶ್ನೆಗೆ ಹಿಂದೆಯೇ ನಾನು ಉತ್ತರವನ್ನು ಹೇಳಿದ್ದೇನೆ. ಬಿಜಾಪುರ ಜಿಲ್ಲೆಯಲ್ಲಿ ಮಾತ್ರ ಸ್ವಲ್ಪಮಟ್ಟಿಗೆ ಭೂಸುಧಾರಣಾ ಕಾನೂನಿನ 64 ನೇ ಸೆಕ್ಷನ್ ಪ್ರಕಾರ ಲ್ಯಾಂಡ್ ಲಾರ್ಡ್ ಡಿಕ್ಲರೇಷನ್ ಮಾಡಿಕೊಂಡಿದ್ದಾರೆ. ಆದ್ದರಿಂದ ಅಲ್ಲಿ ಒಂದು ಕಡೆ ಮಾತ್ರ ಆ ಅಂಕಿಅಂಶಗಳು ಗೊತ್ತಾಗಿವೆ. ಬೇರೆ ಜಿಲ್ಲೆಗಳಲ್ಲಿ ಈ ಡಿಕ್ಲರೇಷನ್ ಮಾಡಿಕೊಳ್ಳಲಿಲ್ಲ. ಆ ಬಗ್ಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಆದ್ದರಿಂದ ಆ ಅಂಕಿ ಅಂಶಗಳನ್ನು ಸಂಗ್ರಹಿಸಲಿಲ್ಲ.

Sri B. B. SAYANAK.—Madam Speaker, I want to put my supplementary in Marathi. I want to know whether there is a Reporter who could take down in Marathi ?

MADAM SPEAKER.—No.

Sri B. B. SAYANAK.—If that is so, I stage a walkout in protest.

(Hon. Member Sri B. B. Sayanak withdrew from the House.)

Sri N. B. SIRDESAI.—In spite of our repeated requests, Government has not appointed a Marathi Reporter.

MADAM SPEAKER.—We could not find one such Reporter and therefore we could not appoint.

Sri. N. B. SIRDESAI.—In protest, I am also staging a walk-out.

(Hon. Member Sri N. B. Sirdesai withdrew from the House.)

Sri P. A. PAWASHE.—(Hindi).

(Hon. Member Sri P. A. Pawashe also withdrew from the House.)

ಶ್ರೀಮತಿ ರೇಣುಕಾ ರಾಜೇಂದ್ರನ್.—ಗೇಣಿದಾರರಿಗೆ ನೇರವಾಗಿ ಎಷ್ಟು ಹಣ ಪರಿಹಾರ ದೊರೆಯುತ್ತದೆ, ಅದನ್ನು ಸರ್ಕಾರದವರು ಪಡೆಯುತ್ತಾರೆಯೋ ಅಥವಾ ಭೂಮಾಲೀಕರು ಪಡೆಯುತ್ತಾರೆಯೋ ಎಂಬುದನ್ನು ಹೇಳಬೇಕು.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಈಗ ಇರತಕ್ಕ ಕಾನೂನಿನಲ್ಲಿ ಗೇಣಿದಾರರಿಗೆ ಮಾಲೀಕತ್ವವನ್ನು ಕೊಟ್ಟಮೇಲೆ ಸರ್ಕಾರಕ್ಕೆ ಎಷ್ಟು ಕೊಡಬೇಕು, ಮತ್ತು ಭೂಮಾಲೀಕರಿಗೆ ಎಷ್ಟು ಕೊಡಬೇಕು ಎಂದು ನಿರ್ಧಾರವಾಗಿದೆ.

Sri H. LINGAREDDY.—Why such a long delay is there in collecting data for Questions (*b*), (*c*), (*e*) and (*f*) though there was enough time for the Government to collect data ?

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಅದನ್ನು ಸಂಗ್ರಹಿಸಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಯಾವ ಕಾರಣದಿಂದ ಅದನ್ನು ಸಂಗ್ರಹಿಸುವುದಕ್ಕೆ ಆಗಲಿಲ್ಲ ಎನ್ನುವುದನ್ನು ಈ ಸಮಯದಲ್ಲಿ ಹೇಳುವುದಕ್ಕಾಗುವುದಿಲ್ಲ.

Schools without Kannada Medium

558. Sri KONANDUR LINGAPPA (Thirthahalli).—

Will the Minister for Education be pleased to state :—

(*a*) the number of Nursery, Primary, Middle and the High Schools in the State without Kannada medium and their location :

(*b*) the basis on which the Government is giving grants to these schools ?

SRI A. R. BADARINARAYANA (Minister for Education).—

(*a*) 1. Nursery Schools ... 112
2. Primary and Middle Schools ... 236
3. High Schools ... 168

The details are appended,

(*b*) The grants are being given to schools started prior to 1965 according to Grant-in-aid code. The Primary Schools with English medium started after 1965 are not given grants.

The Nursery, Primary, Middle and High Schools without Kannada medium in the State (Districtwise information).

Sl. No.	Name of the District	Nursery schools	Primary and Middle schools	High schools
1	Bangalore City	99	110	56
2	Bangalore District	4	17	1
3	Kolar	1	23	11
4	Tumkur	—	—	2
5	Chitradurga	—	—	—
6	Shimoga	—	—	2
7	Mysore	1	15	13
8	Mandya	—	—	—
9	South Kanara	—	8	1
10	Coorg	—	—	—
11	Chikkamagalur	—	—	1
12	Hassan	—	1	3
13	Belgaum	—	25	38
14	Bijapur	—	2	9
15	Dharwar	—	17	11
16	North Kanara	7	12	7
17	Gulbarga	—	—	3
18	Raichur	—	2	2
19	Bellary	—	—	2
20	Bidar	—	4	6
	Total	112	236	168

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ ನಮ್ಮ ರಾಜ್ಯದಲ್ಲಿ ಕನ್ನಡ ಮಾಧ್ಯಮ ಇಲ್ಲದೆ ಇರತಕ್ಕ ನರ್ಸರಿ ಶಾಲೆಗಳು 112 ಇವೆ, ಕನ್ನಡ ಮಾಧ್ಯಮ ಇಲ್ಲದೇ ಇರತಕ್ಕ ಪ್ರಾಥಮಿಕ ಶಾಲೆಗಳು 236, ಕನ್ನಡ ಮಾಧ್ಯಮ ಇಲ್ಲದೇ ಇರತಕ್ಕ ಪ್ರೌಢಶಾಲೆಗಳು 168 ಇವೆ ಎಂದು ಹೇಳಿದ್ದೀರಿ, ಈ ಸಂಖ್ಯೆಯನ್ನು ನೋಡಿದರೆ ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿ ಈ ಪರಿಸ್ಥಿತಿ ಇದೆಯೇ ಎನ್ನುವುದನ್ನು ಗಮನಿಸಬೇಕು. ಬೇರೆ ರಾಜ್ಯಗಳಲ್ಲಿ ಅಲ್ಲಿಯ ಮಾತೃಭಾಷೆ ಕಡ್ಡಾಯ ಇಲ್ಲದೇ ಇರತಕ್ಕ ಯಾವ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳು ಇಲ್ಲ ಎಂದು ನಾನು ಕೇಳಿದ್ದೇನೆ. ಆದರೆ ಇಲ್ಲಿ ನಮ್ಮ ರಾಜ್ಯದಲ್ಲಿ ಕನ್ನಡ ಮಾಧ್ಯಮ ಇಲ್ಲದೇ ಇರತಕ್ಕ ಶಾಲೆಗಳಿಗೆ ಸರ್ಕಾರದವರು ಗ್ರಾಂಟನ್ನು ಕೊಡುವುದರ ಮೂಲಕ ತಮ್ಮ ಅಭಿಮಾನ ಶೂನ್ಯತೆಯನ್ನೂ ಮತ್ತು ಬೇರೆ ಭಾಷೆಯ ಬಗ್ಗೆ ವ್ಯಾಮೋಹವನ್ನೂ ವ್ಯಕ್ತಪಡಿಸಿದ್ದಾರೆ ಎಂದು ನಾವು ತಿಳಿದು ಕೊಳ್ಳಬಹುದೇ ?

† ಶ್ರೀ ಎ. ಆರ್. ಬದರೀನಾರಾಯಣ್.—ಈಗ ಇಲ್ಲಿ ಕೊಟ್ಟಿರತಕ್ಕ ಕನ್ನಡ ಮಾಧ್ಯಮ ಇಲ್ಲದೇ ಇರತಕ್ಕ ಶಾಲೆಗಳಲ್ಲಿ ಬರೀ ಇಂಗ್ಲೀಷ್ ಮಾಧ್ಯಮ ಇರುವ ಶಾಲೆಗಳು ಮಾತ್ರವಲ್ಲ, ಹಿಂದಿ ಶಾಲೆಗಳು, ತಮಿಳು ಮಾಧ್ಯಮ ಶಾಲೆಗಳು, ತೆಲುಗು ಮಾಧ್ಯಮ ಶಾಲೆಗಳು ಇಷ್ಟೂ ಅದರಲ್ಲಿ ಸೇರುತ್ತವೆ. ಇದು ಆಯಾಯ ಕ್ಷೇತ್ರದಲ್ಲಿ ಸ್ಕೂಲುಗಳು ಬೇಕು ಎಂದು ಕಂಡುಬಂದದ್ದರಿಂದ ಅವುಗಳನ್ನು ಕೊಟ್ಟಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಎಲ್ಲಾ ಕ್ಷೇತ್ರಗಳಲ್ಲಿಯೂ ಕನ್ನಡ ಆಗಬೇಕು, ಕನ್ನಡ ಸ್ಕೂಲುಗಳು ಆಗಬೇಕು, ಎಂದು ಎಲ್ಲರೂ ಹೇಳುತ್ತಿರುವಾಗ ಕನ್ನಡವನ್ನು ಕಡ್ಡಾಯವಾಗಿ ಎಲ್ಲಾ ಶಾಲೆಗಳಲ್ಲಿಯೂ ಕಡ್ಡಾಯವಾಗಿ ಕಲಿಸಬೇಕು ಎಂದು ಸರ್ಕಾರದ ನೀತಿ ಹೌದೇ ಅಥವಾ ಇಲ್ಲವೇ ?

ಶ್ರೀ ಎ. ಆರ್ ಬದರೀನಾರಾಯಣ್.—ಎಲ್ಲರಿಗೂ ಕನ್ನಡವನ್ನು ಕಲಿಸತಕ್ಕದ್ದು ಸರ್ಕಾರದ ನೀತಿಯಾಗಿದೆ. ಮತ್ತು ಬೇರೆ ಭಾಷೆಯನ್ನು ಕಲಿಯತಕ್ಕವರಿಗೂ ಅವಕಾಶವನ್ನು ಕಲ್ಪಿಸಿಕೊಡು ಬೇಕಾದ್ದು ಸರ್ಕಾರದ ಕರ್ತವ್ಯ.

ಶ್ರೀ ಕೆ. ಎಫ್. ಪಾಟೀಲ್.—ಆ ಶಾಲೆಗಳಲ್ಲಿ ಕನ್ನಡವನ್ನು ಆಪ್ಷನಲ್ ಸಬ್ಜೆಕ್ಟಾಗಿ ಕಲಿಸತ್ತಿದ್ದಾರೆಯೇ ?

ಶ್ರೀ ಎ. ಆರ್. ಬದರೀನಾರಾಯಣ್.—ಅದು ಗೊತ್ತಿಲ್ಲ. ಅದಕ್ಕೆ ನೋಟೀಸ್ ಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಕನ್ನಡ ಮಾಧ್ಯಮ ಇಲ್ಲದೆ ಇರತಕ್ಕ 112 ನರ್ಸರಿ ಶಾಲೆಗಳು, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ 236 ಇವೆ, 168 ಪ್ರೌಢಶಾಲೆಗಳು ಇವೆ ಎಂದು ಹೇಳಿದ್ದೀರಿ, ಇನ್ನು ಮುಂದಾದರೂ ಆ ಶಾಲೆಗಳಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೆ ತರುವುದಕ್ಕೆ ಆಲೋಚನೆ ಮಾಡುತ್ತೀರಾ ?

Sri A. R. BADARINARAYANA.—The suggestion will be noted.

ಶ್ರೀ ಬಿ. ವಿ. ಕಕ್ಕಿಲಾಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ ಮಾಧ್ಯಮ ಇಲ್ಲದೆ ಇರತಕ್ಕ 8 ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿವೆ, 1 ಪ್ರೌಢ ಶಾಲೆ ಇದೆ ಎಂದು ಹೇಳಿದ್ದೀರಿ, ಅಲ್ಲಿ ಕನ್ನಡ ಮಾಧ್ಯಮ ಇಲ್ಲದೇ ಇರುವುದಕ್ಕೆ ಕಾರಣವೇನು ?

ಶ್ರೀ ಎ. ಆರ್. ಬದರೀನಾರಾಯಣ್.—ಆ ರೀತಿ ಏತಕ್ಕೆ ಆಗಿದೆ ಎಂಬುದನ್ನು ವಿಚಾರಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—16ನೇ ಪುಟದಲ್ಲಿ ಕೊಟ್ಟಿರತಕ್ಕಂತಹ ಉತ್ತರದ ಪ್ರಕಾರ ಬೆಂಗಳೂರಿನಲ್ಲಿ ಕನ್ನಡ ಮಾಧ್ಯಮ ಇಲ್ಲದಿರತಕ್ಕಂತಹ ಸ್ಕೂಲುಗಳು ಬಹಳ ಹೆಚ್ಚಾಗಿವೆ. 112 ನರ್ಸರಿ ಸ್ಕೂಲುಗಳಲ್ಲಿ 99 ಕನ್ನಡ ಮಾಧ್ಯಮ ಇಲ್ಲದಿರತಕ್ಕಂತಹ ಸ್ಕೂಲುಗಳು ಇವೆ. ಇದಕ್ಕೆ ಕಾರಣವೇನು ? ಮತ್ತು ಹೀಗೆ ಪರಿಸ್ಥಿತಿ ಇರುವುದರಿಂದ ಹುಡುಗರಿಗೆ ಇಂಗ್ಲಿಷ್ ಭಾಷೆಯನ್ನೇ ತೆಗೆದುಕೊಳ್ಳಬೇಕೆಂಬ ಮನೋಭಾವ ಬರುವುದಿಲ್ಲವೇ ? ಆದ್ದರಿಂದ ಈ ಎಲ್ಲಾ ಸ್ಕೂಲುಗಳಲ್ಲಿ ಕನ್ನಡವನ್ನು ಮಾಧ್ಯಮವನ್ನಾಗಿ ತರುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎ. ಆರ್ ಬದರೀನಾರಾಯಣ.—ಬೆಂಗಳೂರು ಕಾಸ್ಮೊಪಾಲಿಟನ್ ಸಿಟಿಯಾಗಿರುವುದರಿಂದ ಮತ್ತು ಇಲ್ಲಿ ಬೇರೆ ಬೇರೆ ಪ್ರದೇಶಗಳ ಜನರು ಇರುವುದರಿಂದ, ಅವರ ಸೌಕರ್ಯಕ್ಕೋಸ್ಕರ ಇಂಗ್ಲೀಷ್ ಮತ್ತು ಇತರ ಭಾಷೆಗಳನ್ನು ಮಾಧ್ಯಮವಾಗಿ ಸ್ಕೂಲುಗಳಲ್ಲಿ ಬಳಸುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಉತ್ತರದಲ್ಲಿ 112, 236 ಮತ್ತು 168—ಹೀಗೆ ಕನ್ನಡ ಮಾಧ್ಯಮವಲ್ಲದ ಸ್ಕೂಲುಗಳ ಸಂಖ್ಯೆಯನ್ನು ಕೊಟ್ಟಿದ್ದೀರಿ. ಇವುಗಳು ಒಟ್ಟು 516 ಸ್ಕೂಲುಗಳಾಗುತ್ತವೆ. ಇವತ್ತು ಸರ್ಕಾರದವರು ಈ ಸಭೆಯಲ್ಲಿ ಮತ್ತು ಪ್ರತಿಯೊಂದು ಹಂತದಲ್ಲಿಯೂ ಕನ್ನಡವನ್ನು ಜಾರಿಗೆ ತರಬೇಕೆಂದು ಹೇಳುತ್ತಿರುವಾಗ, ಹೀಗೆ ಮಾಡುತ್ತಿರುವುದ ಅದಕ್ಕೆ ವಿರುದ್ಧವಾದ ನೀತಿಯಲ್ಲವೇ ; ಮತ್ತು ಈ ಸ್ಕೂಲುಗಳಲ್ಲಿ ಕನ್ನಡ ಮಾಧ್ಯಮವನ್ನು ತರುವುದಕ್ಕೆ ಎಷ್ಟು ಕಾಲ ತೆಗೆದುಕೊಳ್ಳುತ್ತೀರಿ ಮತ್ತು ಒತ್ತಾಯವಾಗಿ ಜಾರಿಗೆ ಅದನ್ನು ತರುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಸಭೆಯಲ್ಲಿ ಕನ್ನಡವನ್ನು ಜಾರಿಗೆ ತರುವುದು ನನಗೆ ಸೇರಿದ್ದಲ್ಲ. ಅದರ ಬಗ್ಗೆ ಮುಖ್ಯಮಂತ್ರಿಯವರಿಗೆ ಕೇಳಬೇಕಾಗುತ್ತದೆಂದು ಕಾಣುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಿಂದೆ ಆದದ್ದು ಆಯಿತು. ಇನ್ನು ಮುಂದಾದರೂ ಈ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸುವ ಒಂದು ನಿಯಮವನ್ನು ಹಾಕುತ್ತೀರಾ : ಮತ್ತು ಮುಂದೆ ಆರಂಭವಾಗತಕ್ಕಂತಹ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕೆಂದು ಒಂದು ನೀತಿಯನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಅದರ ಬಗ್ಗೆ ಮಾನ್ಯ ತಿಮ್ಮಪ್ಪನವರು ಪ್ರಶ್ನೆ ಕೇಳಿದಾಗ ಉತ್ತರ ಹೇಳಿದ್ದೇನೆ.

Vacant Posts in Technical Education Department

847. SRI J. L. KABADE (Ballolli).—

Will the Minister for Education be pleased to state :—

(*a*) whether there are any vacancies of posts of Head of Section *cum*-Principal (Gazetted Class II) or its equivalent posts in the Department of Technical Education, if so, since when the posts are lying vacant ;

(*b*) the reason for not filling up vacant posts by promotions as per recruitment and cadre rules ;

(*c*) whether it is a fact that some lent officials from PWD have been posted against some vacant posts ; if so, the number of such officials ;

(*d*) the steps taken to repatriate PWD Officials and to fill up the posts by promoting the Officials of the Department of Technical Education ?

SRI A. R. BADARINARAYANA (Minister for Education).—

(*a*) There are no posts of Head of Section-*cum*-Principal. But there are vacancies of Heads of Sections. The vacancies arose prior to 1971.

(*b*) As per the C and R Rules of the Department of Technical Education, the vacancies have o be filled up by direct recruitment through M.P.S.C. Hence the posts have not been filled up by promotion.

(*c*) Yes, 6 (six) Officers.

(SRI A. R. BADARINARAYANA)

(*d*) The question of filling up the direct recruitment vacancies of Heads of Sections through P.S.C. is under consideration of Government. Immediately after the posts are filled up, the lent officials from P W.D will be repatriated.

As these vacancies have to be filled in by direct recruitment they cannot be filled in by promotion.

ಶ್ರೀ ಜೆ. ಎಲ್. ಕಬಾಡಿ.—ತಮ್ಮ ಉತ್ತರದಲ್ಲಿ ಹೆಡ್ಸ್ ಆಫ್ ಸೆಕ್ಷನ್ಸ್ ಉದ್ಯೋಗಗಳು ಖಾಲಿ ಇವೆಯೆಂದು ಹೇಳಿದ್ದೀರಿ. ಅಂದರೆ 1971 ಕ್ಕಿಂತ ಮೊದಲು ಎಷ್ಟು ಉದ್ಯೋಗಗಳು ಇದ್ದವು ?

† ಶ್ರೀ ಎ. ಆರ್. ಬದರೀನಾರಾಯಣ. —15.

ಶ್ರೀ ಜೆ. ಎಲ್. ಕಬಾಡಿ.—15 ಜಾಗಗಳಲ್ಲಿ ಡೈರೆಕ್ಟ್ ರಿಕ್ರೂಟ್‌ಮೆಂಟ್ ಎಷ್ಟು ಮತ್ತು ಪ್ರೊಮೋಷನಿನಲ್ಲಿ ಎಷ್ಟು ಕೊಡುತ್ತೀರಿ ಎಂಬುದರ ಪರಸೆಂಟೇಜನ್ನು ಹೇಳುತ್ತೀರಾ ? ನೀವು ಕೇಡರ್ ಅಂಡ್ ರೂಲ್ಸ್ ಪ್ರಕಾರ ಎಷ್ಟು ಇಟ್ಟುಕೊಂಡಿದ್ದೀರಿ ?

ಶ್ರೀ ಎ. ಆರ್. ಬದರಿನಾರಾಯಣ.—ಹಿಂದಿನ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಯಾವ್ಯಾವ ಪೋಸ್ಟುಗಳಿಗೆ ಎಷ್ಟೆಷ್ಟು ನಿಗದಿ ಮಾಡಬೇಕೆಂಬುದು ಇರಲಿಲ್ಲವಾದ್ದರಿಂದ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸನ್ನು ಅಮೆಂಡ್ ಮಾಡಿದೆ. 19—4—72ರಲ್ಲಿ ರೂಲ್ಸ್ ಅಮೆಂಡ್ ಮಾಡಿದೆ. ಅದರ ಪ್ರಕಾರ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಡೈರೆಕ್ಟರಿಂದ ಪ್ರೊಪೋಸಲ್ಸ್ ಬಂದಿವೆ. ಅದರ ಪ್ರಕಾರ ಅದನ್ನು ನಾವು ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—1971ರಿಂದ ಖಾಲಿ ಇರತಕ್ಕಂತಹ ಜಾಗಗಳಿಗೆ ಇನ್ನೂ ಪರಿಶೀಲನೆ ಮಾಡಿ ಪಿ. ಎಸ್. ಸಿ. ಯವರಿಗೆ ಕಳಿಸುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಪಿ.ಎಸ್.ಸಿ. ಯವರು ಇಲ್ಲಿಯವರೆಗೂ ಕಾಲ್ ಫಾರ್ ಮಾಡಿಲ್ಲ. ಇದಕ್ಕೆ ಬೇರೆ ಇಲಾಖೆಯಿಂದ ಈ ಇಲಾಖೆಗೆ ತೆಗೆದುಕೊಂಡು ಕೆಲವರಿಗೆ ಫೇವರಿಟಿಸಂ ತೋರಿಸಬೇಕೆಂಬ ಉದ್ದೇಶದಿಂದ ಹೀಗೆ ಮಾಡಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರೀನಾರಾಯಣ.—ಈಗ ಅಲ್ಲಿದ್ದಂತಹ ಕೇಡರ್ ರಿಕ್ರೂಟ್‌ಮೆಂಟ್ಸ್ ರೂಲ್ಸ್‌ಗಳಲ್ಲಿ ನ್ಯೂನತೆ ಇದ್ದುದರಿಂದ ಈ ನ್ಯೂನತೆಗಳನ್ನು ಸರಿಪಡಿಸಿ, ವೇಕೆನ್ಸಿ ಎಷ್ಟು ಇದೆಯೆಂಬುದನ್ನು ತಿಳಿಸಿಕೊಂಡು, ಅವನ್ನು ಈಗ ಪಿ.ಎಸ್.ಸಿ.ಗೆ ಕಳಿಸಿದ್ದೇವೆ.

ಶ್ರೀ ಜೆ. ಎಲ್. ಕಬಾಡಿ.—ಡಿಪಾರ್ಟ್‌ಮೆಂಟಿನಲ್ಲಿರತಕ್ಕಂತಹ ಷೆಡ್ಯೂಲ್ ಕ್ಯಾಸ್ಟ್ ಜನರು ಸೀನಿಯರ್ ಆಗಿರುವುದರಿಂದ ಅವರಿಗೆ ಬೇಗನೇ ಪ್ರೊಮೋಷನ್ ಸಿಗುತ್ತದೆ ಎಂದು ಈ ರೀತಿ ಮಾಡಿದ್ದಾರೆಂಬುದು ನಿಜವೇ ?

ಶ್ರೀ ಎ. ಆರ್. ಬದರೀನಾರಾಯಣ.—ಶೆಡ್ಯೂಲ್ ಕ್ಯಾಸ್ಟಿನವರು ಅಲ್ಲಿ ಇದ್ದು ಅವರಿಗೆ ಸಿಗುತ್ತದೆ ಎಂದಾದರೆ ಅದನ್ನು ಅಗತ್ಯವಾಗಿ ನೋಡುತ್ತೇನೆ.

Entertainment Clubs in Gulbarga City

752. Sri PRABHAKAR TELKAR (Kalagi).—

Will the Chief Minister be pleased to state :—

(*a*) whether it has come to the notice of the Government that numerous entertainment clubs have sprung up during the recent past in Gulbarga City ; if so, the number of such clubs ;

(b) whether it has come to the notice of Government that these clubs are indulging in gambling and anti-social activities ;

(c) whether these clubs have been given licences to carryout such activities or whether they are registered bodies ;

(d) whether the Government has taken any steps to stop such anti-social activities of these clubs ?

Sri D. DEVARAJ URS (Chief Minister).—

(a) There are five clubs in Gulbarga City which are registered under the Mysore Societies Registration Act 1960 for the past few years. Of these one is closed.

(b) No.

(c) These clubs are registered and certificates of Registration are given to them by the concerned authorities for carrying on legitimate activities.

(d) Surprise raids were conducted on these clubs, but no gambling or anti-social activities were detected.

Sri PRABHAKAR TELKAR.—To a question—"whether it has come to the notice of Government that these clubs are indulging in gambling and anti-social activities;" the reply given is 'no'. But may I bring to the notice of Government that there are many complaints of anti-social activities going on and some gambling is also going on; if so, what steps the Government would take to check them ?

† Sri D. DEVARAJ URS.—On the complaints received, we have asked the Police to go and look into those complaints and after making surprise raids, they have found out that there were no anti-social activities going on.

Sri PRABHAKAR TELKAR.—What kind of games are allowed in these clubs ?

Sri D. DEVARAJ URS.—I do not know what kind of card games are played there. But it is said that the game popularly known as Remmy is said to be played there.

Sri PRABHAKAR TELKAR.—In these clubs, apart from playing cards, other games are also played which come under the term of gambling; may I know which are those games which come under the term gambliag ?

Sri D. DEVARAJ URS.—When the people know that there might not be a raid by the Police, then they might be playing some other games, but it is some what difficult to find out. But cards are being played, is a fact and it is permissible under the rules.

Smt. VIJAYA DESAI.—The Chief Minister mentioned in his reply that one of the clubs is closed. Is it because of the anti-social activitiee that it is closed ?

†Sri D. DEVARAJ URS.—Why it is closed, I have no information.

Sri MALLIKARJUN.—Whether it has come to the notice of Government that in the Office s' Club of Gulbarga, even Police Officers are playing Remmi and other things ?

Sri D. DEVARAJ URS.—I will have to verify whether Remmy amounts to gambling or not. But according to my information Remmy is not considered as gambling. Some of the Hon. Members seem to know these things much better than myself. I take it that Remmy is not gambling and if the Police Officers play Remmy, I cannot find fault with them.

ಶ್ರೀ ಧರಮ್‌ಸಿಂಗ್ ನಾರಾಯಣ ಸಿಂಗ್.—ಮೊನ್ನೆ ಮಾನ್ಯ ಕಿತ್ತೂರವರು ಅಲ್ಲಿ ಬಂದಾಗ ಸಹ ಅವರ ಗಮನಕ್ಕೆ ಇದನ್ನು ತಂದಿದ್ದೇವೆ. ತಾವು ಉತ್ತರದಲ್ಲಿ ಸರ್‌ಪ್ರೈಸ್ ರೇಡ್ ಮಾಡಿದಾಗ ಏನೂ ಪತ್ತೆಯಾಗಲಿಲ್ಲವೆಂದು ಹೇಳಿದ್ದೀರಿ. ಇದಲ್ಲದೆ ಅಲ್ಲಿ ಒರಿಯಂಟಲ್ ಡಾನ್ಸ್ ಎಲ್ಲ ನಡೆಯುತ್ತಿದೆ. ಇವುಗಳನ್ನೆಲ್ಲಾ ತಡೆಗಟ್ಟಲು ಯಾವ ರೀತಿಯ ಕ್ರಮವನ್ನು ಕೈಗೊಳ್ಳುತ್ತೀರೆಂದು ಹೇಳಬೇಕು.

Sri D. DEVARAJ URS.—From Remmy it has gone to oriental dancing and then it goes to occidental. I cannot sav whether oriental dances are taking place in the clubs. That is a different question, I have to verify.

Sri PRABHAKAR TELKAR.—Is it not a fact that these clubs are running with the connivance of the Police, and if the Management does not pay anything to these Policemen, they will raid and if they pay then they connive with them and allow them to run ?

Sri D. DEVARAJ URS.—There need not be any connivance of the Police because all these clubs are registered clubs. When once a club is registered they are not under anybody's obligation and least under the obligation of the Police. If the hon. Member wants to get deep into the matter, I would suggest that he might try locally to collect information, if possible, if there are any unauthorised clubs being run. If the Police do not take cognizance of these unauthorised clubs and do not take effective steps, they will be at fault. According to the information furnished, there are no such unauthorised clubs. I will again ask the Police Officers not to allow unauthorised clubs, if any, to run.

Shimoga Dairy

755. Sri ABDUL K. ANWAR (Bhadravathi).—

Will the Minister of State for Animal Husbandry be pleased to state :—

(a) the amount spent over Shimoga Dairy (separate figures for building and machinery may be furnished) ;

(b) the total daily output of milk and its distribution ;

(c) the quantity of milk daily that is supplied to Bhadravathi and the source of supply ;

(d) whether there are complaints that milk is supplied only to hotels and officials but not to the public and school going children and about the quality of milk ;

(e) the rate per litre at which it is purchased and sold to the public.

Sri N. CHIKKEGOWDA (Minister of State for Animal Husbandry).—

(a)	(1) Buildings	...	Rs.	10,60,000-00
	(2) Machineries	...	Rs.	12,94,041-80
	(3) Erection	...	Rs.	80,070-00
	Total	...	Rs.	24,34,111-80

(b) On an average 1,020 litres of milk per day as in June 1972.

(c) Bhadravathi 305 litres per day

Source of supply

Government Dairy, Machanahalli, Bidare P. O., Shimoga Taluk.

(d) Yes.

(e) *Current.*

Purchase rate Rs. 0-90 per litre with effect from February 11, 1972.

Selling rate Rs. 1-20 per litre with effect from September 11, 1971.

Sri ABDUL K. ANWAR.—In answer to (b) the Minister of State stated that the out-put of milk is 1, 020 litres every day, but he has not stated how this is distributed.

†ಶ್ರೀ ಎನ್. ಚಿಕ್ಕೇ ಗೌಡ.—ಭದ್ರಾವತಿ ಮತ್ತು ಶಿವಮೊಗ್ಗದಲ್ಲಿ 13 ಡಿಪೋಗಳಿವೆ. ಈ ಡಿಪೋಗಳ ಮೂಲಕ ಜಿಲ್ಲಾವಾರು ಸರ್ಕಾರದ ಆಸ್ಪತ್ರೆಗಳಿಗೆ, ಲ್ಯಾಬೊರೇಟರಿಗಳ ಮೂಲಕ ಗೆಸ್ಟ್ ಹೌಸ್‌ಗಳಿಗೆ ಮತ್ತು ಶಿವಮೊಗ್ಗದ ಸಾರ್ವಜನಿಕರಿಗೆ ಇತರೇ ಡಿಪೋಗಳ ಮೂಲಕ ಹಾಲಿನ ವಿತರಣೆ ಮಾಡುತ್ತೇವೆ.

Sri ABDUL K. ANWAR —The Minister has stated that 13 lakhs of rupees are invested over the machineries. Is the machinery fully utilised ?

Sri N. CHIKKE GOWDA.—I have stated in reply to (b) that on an average 1020 litres of milk are processed per day and in reply to (a) I have stated that a sum of Rs. 24,34,111-80 is invested on buildings, machineries and erection. We have been processing 1020 litres of milk per day-at Bhadravathi 305 litres and at Shimoga 715 litres.

Sri ABDUL K. ANWAR:—In answer to question (*d*) whether there are complaints that milk is supplied only to hotels and officials but not to the public and school-going children and he is satisfied about the quality of milk, he has replied 'yes'. Will the hon. Minister make arrangements to supply milk to the school-going children instead of hotels and other consumers ?

Sri N. CHIKKE GOWDA.—We are not supplying milk to hotels or any other private agency. We have stopped supplying milk to hotels from 1-3-1972, on complaints that milk was being supplied by the Dairy to hotels depriving others of such supplies. Regarding nutrition programme, unless we achieve the target, we will not be in a position to supply to the nutrition programme.

ಶ್ರೀ ಎಸ್. ಬಂಗಾರಪ್ಪ.—ಈ ಹಾಲಿನ ಡೈರಿಯಿಂದ ಎರಡು ನಗರಗಳು ಅಂದರೆ ಶಿವಮೊಗ್ಗ ಮತ್ತು ಭದ್ರಾವತಿಗಳಿಗೆ ಹಾಲನ್ನು ಸಪ್ಲೈ ಮಾಡಬೇಕು. ಈಗಿರತಕ್ಕ ಕೆಪಾಸಿಟಿ ಬಹಳ ಕಡಿಮೆ ಇದೆ. ಆದ್ದರಿಂದ ಇದನ್ನು ದೊಡ್ಡದಾಗಿ ಮಾಡಿ ಎರಡು ನಗರಗಳಿಗೂ ಸಾಕಾದಷ್ಟು ಹಾಲನ್ನು ಒದಗಿಸಲು ಏನಾದರೂ ಒಂದು ದೊಡ್ಡಯೋಜನೆ ಇದೆಯೇ !

ಶ್ರೀ ಎನ್. ಚಿಕ್ಕೇಗೌಡ.—ಸರ್ಕಾರ ಅದನ್ನು ಯೋಚನೆ ಮಾಡುತ್ತಿದೆ. ಮ್ಯಾಗ್ಸಿಮಂ ಕೆಪಾಸಿಟಿ 10,008 ಲೀಟರುಗಳು. ಸಹಕಾರ ಸಂಘಗಳ ಮೂಲಕ ಸರ್ಕಾರದವರು ಹಾಲನ್ನು ಡೈರಿಗಳಿಗೆ ಸಪ್ಲೈ ಮಾಡುವುದಕ್ಕೆ ಅನುಕೂಲವಾಗುವುದಕ್ಕೋಸ್ಕರ ಜಿಲ್ಲಾ ಅಸಿಸ್ಟೆಂಟ್ ವೆಟರಿನರಿ ಇನ್‌ಸ್ಪೆಕ್ಟರ್ ಅವರು ತಕ್ಕ ಫೆಸಿಲಿಟೀಸ್ ಕೊಟ್ಟು ಅವರಿಗೆ ಬೇಕಾದ ಅವ್ಯೃತಮುಹಲ್ ರಾಸುಗಳನ್ನು ಸಾಕಲು ಸಹಕಾರ ಸಂಘಗಳ ಮೂಲಕ, ಷೆಡ್ಯೂಲ್ಡ್ ಬ್ಯಾಂಕುಗಳ ಮೂಲಕ ಸಣ್ಣ ಮತ್ತು ಮಾಧ್ಯಮ ರೈತರಿಗೆಹಾಲನ್ನು ಹೆಚ್ಚಿಗೆ ಉತ್ಪಾದನೆಮಾಡಲು ಸಹಾಯ ಮಾಡಿರುತ್ತಾರೆ. ಭದ್ರಾವತಿಗೆ 10 ಸಾವಿರದವರೆಗೆ ಪರಮಾವಧಿ ಮಾಡಿ ಈಗ ಹಾಲನ್ನು ಆ ಎರಡು ನಗರಗಳಲ್ಲಿ ಪೂರ್ತಿ ಸರಬರಾಜು ಮಾಡಬೇಕೆಂದು ಸರ್ಕಾರದವರು ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಇಚ್ಛೆ ಪಟ್ಟಿದ್ದಾರೆ.

Sri ABDUL K. ANWAR.—There is a margin of 30 NP. between the selling price and the purchasing price and thereby you are making a profit of 9,000 rupees per annum. In spite of this, how is it that the Dairy is running at a loss ?

Sri N. CHIKKE GOWDA.—The purchasing rate is 90 p. and our selling rate 1.20 p. We are procuring only 1020 litres, and hence, the cost of processing and distribution are more. I quite agree that to bring down the selling prices, we have to procure more milk. In that direction, we have taken up sufficient programmes to get more milk produced and also to get it processed.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಹಾಲಿನ ಪ್ರಮಾಣವನ್ನು ಹೆಚ್ಚಿಗೆ ಮಾಡುವುದಕೆ ಹೇಳಿದ್ದೀರಿ. ಹೊಸದಾಗಿ ಕೊಡುವಾಗ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಿಜವಾಗಿ ಬಡ ರೈತರು ಯಾರು ಇದ್ದಾರೆಯೋ ಅವರಿಗೆ ಕೊಡುತ್ತೀರಾ ? ಅಥವಾ ಈ ಎರಡು ನಗರಗಳಲ್ಲಿ ಈಗಾಗಲೇ ಕೊಟ್ಟಿರುವವರಿಗೇ ಹಾಗೂ ಶ್ರೀಮಂತರಿಗೇ ಕೊಡುತ್ತೀರಾ ? ಗೇಣೀದಾರರಿಗೆ, ಪಹಣಿದಾರರಿಗೇ ಹೆಚ್ಚಿಗೆ ಎಷ್ಟು ಪ್ರಮಾಣದಲ್ಲಿ ಕೊಡುತ್ತೀರಾ !

ಶ್ರೀ ಎನ್. ಚಿಕ್ಕೇಗೌಡ.—ನಾವು ಸಣ್ಣ ಹಾಗೂ ಮಧ್ಯಮವರ್ಗದ ರೈತರಿಗೆ ಮಾತ್ರ ಆ ರೀತಿ ಕೊಡಬೇಕೆಂದು ಬ್ಯಾಂಕ್‌ಗಳಿಗೆ ಆದೇಶ ಕೊಟ್ಟಿದ್ದೇವೆ. ದೊಡ್ಡ ದೊಡ್ಡ ರೈತರಿಗ ಹಾಗೂ ದೊಡ್ಡ ದೊಡ್ಡ ಡೈರಿಗಳನ್ನು ಪ್ರಾರಂಭಮಾಡುವವರಿಗೆ ಕೊಡಬಾರದೆಂದು ಹೇಳಿದೆ. ನೂರಕ್ಕೆ ಜಾಸ್ತಿ ಎರಡರಷ್ಟು ಕೊಡಬೇಕು. ಅವರಿಗೆ ಕೊಲ್ಯಾಟರಲ್ ಸೆಕ್ಯೂರಿಟಿ ತೆಗೆದುಕೊಂಡು ಹೆಚ್ಚಿಗೆ ಕೊಡಬೇಕೆಂದು ಹೇಳಿದೆ. ಕೋಆಪರೇಟಿವ್ ಬ್ಯಾಂಕ್ ಮತ್ತು ಷೆಡ್ಯೂಲ್ಡ್ ಬ್ಯಾಂಕಿನ

ವರನ್ನು ಕರೆಸಿ ಒಂದು ಸಭೆಯನ್ನು ಮಾಡಿದ್ದೇವೆ. ಕೇವಲ ಒಂದು ತಿಂಗಳೊಳಗೆ ಒಂದು ಸಭೆ ಕರೆದು 3 ತಿಂಗಳಲ್ಲಿ ಸಂಬಂಧಪಟ್ಟ ಕಾರ್ಯಗಳನ್ನು ಮಾಡಿದ್ದೇವೆ. ಗ್ರಾಹಕರಿಗೆ ಕೊಡುವಾಗ ಅದನ್ನು ಕಡಿಮೆಮಾಡುವುದಕ್ಕೆ ಸಾಧ್ಯವಿದೆ. ಅದನ್ನು ಮಾಡುತ್ತಾರೆ.

Sri ABDUL K. ANWAR.—Will you increase the supply of milk to Bhadravathi from 300 to 800 litres so as to enable supply of milk to the school going children and the workers under the Nutrition Food Programme ?

Sri N. CHIKKE GOWDA.—As I have already stated, immeditely after procuring sufficient quantity, we will be able to supply to the Nutrition Programme. Regarding supply of milk to factory and other workers I have visited that area one and a half months back and I have come to know the necessity of supplying milk to these factory workers. We are implementing some programmes which will boost the production of milk and as soon as these are fully implemented we will be able to do this.

MADAM SPEAKER.—Question Hour is over.

QUESTIONS FOR ANSWERS ON THE DAY

(but not taken up)

Allotment to Stainless Steel Quota To S. K. District

595. Smt. ADDY SALDHNA (Mangalore).—

Will the Minister for Industries be pleased to state :—

(*a*) whether it is a fact that the additional Stainless Steel quota is not allotted to South Kanara District ;

(*b*) whether it is a fact that some bogus firms in Bangalore are receiving additional quota of Stainless Steel ?

Sri S. M. KRISHNA (Minister for Industries).—

(*a*) No. There is no question of denying any District any quota of Stainless Steel. In fact at present some quantity of this material is available with The Mysore Small Industries Corporation for free sale to small scale units registered for manufacture of Stainless Steel Articles.

(*b*) No. The Department is not aware of any bogus units in Bangalore getting stainless steel. As and when it comes to the notice of the Directorate that an unit is not genuine, appropriate action is taken to stop issue of any further licences to such units.

(SRI S. M. KRISHNA)

Filling up The Post of Assistant Commissioner, Bangalore

769. Sri BAPU GOWDA (Shahapur).—

Will the Chief Minister be pleased to state :—

(*a*) since when the post of Assistant Commissioner of Bangalore is vacant :

(*b*) the reasons for not filling up this post immediately ?

Sri D. DEVARAJ URS (Chief Minister).—

(*a*) The post is not vacant at present.

(*b*) Does not arise in view of reply to Clause (*a*).

Calling Attention to Matters of Urgent Public Importance

(i) *re* : non availability of grazing land for cattle in Haliyal Taluk.

Sri V. M. GHADI (Haliyal).—I beg to call the attention of the Hon. Minister for Agriculture and Forests to the non-availability of grazing land for village cattle at Haliyal Taluk.

Sri K. H. PATIL (Minister for Agriculture and forests).—

The Forest area of Haliyal Taluk is 327.18 sq. miles of which 224.54 sq.miles is under forests. The West Coast Paper Mills have been leased 156. 19 sq. mills of forest area for exploitation of bamboos.

Mature bamboo had died in this belt about decade back and the new regeneration from the seeds take a few years to establish. In the early years the regeneration of bomboo is avidly browzed by cattle and thus needs protection. Bamboo is necessary not only for the paper tndus'ry but also for the public. Hence it is in the interest of Government that the new regeneration of bamboo is protected and allowed to establish. The West Coast Paper Mills were hence permitted to fence some extent of the leased area at their cost. This was allowed on the express condition that it shall not prejudicially affect the privileges enjoyed by the local population. In consideration of this, the fencing is not continuous but openings are made. The breaks allow the village cattle to graze, while at the same time it restricts free movement of cattle all over the area. The restricted movement is confined to 56.35 sq. miles while over 37.20 sq.miles grazing can take place quite freely even within the overall fenced area.

Suitable instructions are being issued to see that the privileges of the local population are in no way infringed.

It may be made out that while over 56.35 sq.miles grazing is permitted though on a restricted scale there are no restrictions on grazing in the balance area of 168. 19 sq.miles of Forest.

2-00 P.M.

ಶ್ರೀ ವಿ. ಎಂ. ಘಾಡಿ.—ದಾಂಡೇಲಿ ಫ್ಯಾಕ್ಟರಿಯವರೊಂದಿಗೆ ಹಿಂದಿದ್ದ ಸರ್ಕಾರದವರು ಎಷ್ಟು ವರ್ಷಗಳವರೆಗೆ ಅಗ್ರಿಮೆಂಟ್ ಮಾಡಿಕೊಂಡಿದ್ದರು ? ಅವರಿಗೆ ಅಲ್ಲಿ ತಂತೀ ಬೇಲಿ ಹಾಕುವುದಕ್ಕೆ ಅವಕಾಶ ಇದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಆ ಕರಾರು 1983 ರವರೆಗೂ ಇದೆ. ಅವರಿಗೆ ಅಲ್ಲಿ ಬೇಲಿ ಹಾಕಿಕೊಳ್ಳುವುದಕ್ಕೆ ಕರಾರಿನಲ್ಲಿ ಏನೂ ನಮೂದಾಗಿಲ್ಲ. ಆದರೆ ಅವರು ಬೆಳೆಸತಕ್ಕ ಬಿದಿರನ್ನು ದನಗಳು ತುಳಿದು ಹಾಳುಮಾಡುತ್ತವೆಂದು ಅಲ್ಲಿ ಬೇಲಿ ಹಾಕಿಕೊಂಡಿದ್ದಾರೆ. ಆದರೆ ನಾವು ಅವರಿಗೆ ದನಕರುಗಳಿಗೆ ಮೇಯುವುದಕ್ಕೆ ಆ ಜಾಗದಲ್ಲಿ ಅವಕಾಶ ಕೊಡಬೇಕೆಂದು ಹೇಳಿದ್ದೇವೆ. ಅದಕ್ಕೆ ಅವರೂ ಒಪ್ಪಿದ್ದಾರೆ.

ಶ್ರೀ ವಿ. ಎಂ. ಘಾಡಿ.—ತಾವು ಈಗತಾನೇ ತಮ್ಮ ಹೇಳಿಕೆಯಲ್ಲಿ ವ್ಯಕ್ತಪಡಿಸಿದಂಥ 37.20 ಚ. ಮೈ. ಪ್ರದೇಶವನ್ನು ದನಗಳ ಮೇವಿಗಾಗಿ ಯಾವಾಗ ರಿಲೀಜ್ ಮಾಡಲಾಯಿತು ?

ಶ್ರೀ ಕೆ. ಎಚ್. ಪಾಟೀಲ್.—ಇಲ್ಲಿಗೆ ಎರಡು ತಿಂಗಳಾಯಿತು.

ಒಬ್ಬ ಮಾನ್ಯ ಸದಸ್ಯರು.—ಅಲ್ಲಿ ಹಾಕಿರತಕ್ಕ ತಂತೀ ಬೇಲಿಯನ್ನು ತೆಗೆದರೆ ಅಲ್ಲಿ ವನ್ಯ ಮೃಗಗಳಿಗೆ ತೊಂದರೆಯಾಗುವುದಿಲ್ಲವೆ ?

ಶ್ರೀ ಕೆ. ಎಚ್. ಪಾಟೀಲ್.—ಅವುಗಳಿಗೇನೂ ತೊಂದರೆಯಾಗುವುದಿಲ್ಲ. ಅಲ್ಲಿ ಊರಿನ ದನಕರುಗಳಿಗೆ ಮೇಯಲಿಕ್ಕೆ ಬೇಲಿಯನ್ನು ತೆಗೆಯಬೇಕೆಂದು ತಿಳಿಸಿದ್ದೇವೆ.

ಶ್ರೀ ವಿ. ಎಂ. ಘಾಡಿ.—ಬಿದಿರನ್ನು ದನಗಳು ತಿನ್ನುವುದಿಲ್ಲ. ಕತ್ತರಿಸಿ ಹಾಕಿದರೂ ತಿನ್ನುವುದಿಲ್ಲ. ಅಲ್ಲಿ ಮಂಗಗಳ ಕಾಟಕ್ಕಾಗಿ ಬೇಲಿ ಹಾಕಿರಬಹುದು. ಅದ್ದರಿಂದ ಪೂರ್ಣವಾಗಿ ಬೇಲಿಯನ್ನು ತೆಗೆದುಹಾಕುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ದನಕರುಗಳು ಬಿದಿರು ಎಳೆಯದಾಗಿರುವುದನ್ನು ತುಳಿದು ನಾಶಮಾಡುತ್ತವೆಂದು ಬೇಲಿಹಾಕಿದ್ದಾರೆ. ಅಲ್ಲಿ ಜಾನುವಾರುಗಳಿಗೆ ಮೇವಿಗೆ ತೊಂದರೆಯಾಗಬಾರದೆಂದು ತಿಳಿಸಿದ್ದೇವೆ.

(ii) *Re* : Attack on Harijan huts in Hanumaiahnapalya of Parvathapura Village, Kudur Hobli, Magadi Taluk.

SRI M. H. JAYAPRAKASH NARAYAN (Sirsi).—Madam Speaker, I rise to call the attention of the Hon'ble Chief Minister to the attack on Harijan huts in Hanumaiahnapalya of Parvathapura Village, Kudur Hobli, Magadi Taluk.

SRI D. DEVARAJ URS (Chief Minister).—I state as follows :—

The land in Survey Number 16, and measuring 10 acres and 30 guntas, in Parvathapura village in Kudur Hobli, Bangalore District, was sold by its owner Sri Ramaswamy Sastry, son of Narasimha Sastry to Sri Nizammuddin, S/o Abdul Rehman, a Unani doctor of Kudur on 25-12-1967 for a sum of Rs. 5,000. According to Sri Ramaswamy Sastry and Sri Nizammuddin, this land, prior to its sale had been mortgaged by the former to one Sri Lingappa for Rs. 8,00.

2. Sri Hanumaiah, S/o Sri Kempaiah, has, in a Statement made before the Station House Officer, Kudur Police Station stated that he has been cultivating this land as a tenant for a number of years and living in a shed on this land. He has stated that he had been cultivating this land even when it had been mortgaged to Sri Lingappa by Sri Ramaswamy Sastry. He had learnt that the land had been sold to

(SRI D. DEVARAJ URS)

Sri Nizammuddin. Sri Nizammuddin had asked him to vacate the land but he had refused to do so and had filed a suit under the Tenancy Act before the Tahsildar and also a Civil Suit in the Court of the First Additional Second Munsiff and had obtained a temporary injunction restraining the counter petitioners from interfering with his possession. He does not know the final outcome of this case. On 24-7-1972 he had gone to Bangalore to meet his Lawyer and on his return he found that his hut had been demolished and damages caused etc.

3. It is reported that the temporary injunction was vacated by the Munsiff on 11-1-1972 and that he (the Munsiff) dismissed the suit filed by Sri Hanumaiah to restrain Sri Nizammuddin and Sri Ramaswamy Sastry permanently from interfering in any manner with the peaceful possession and enjoyment of the properties either by themselves or through their agents, etc. It is also reported that soon after the vacation of the stay order Sri Nizammuddin had entered into possession of the land and had demolished the farm-shed therein. The decree of the Munsiff discloses that the land in question had only a farm-shed and four Banyan trees standing thereon.

4. On 26th July 1972 a petition was presented to the Superintendent of Police, Bangalore District, on behalf of Sri Hanumaiah. In this petition it was alleged that during the temporary absence of petitioner Sri Hanumaiah on 24-7-1972, Sri Kari Rangappa a r sident of Pura village and 40 others had trespassed into his land and hut, stolen articles worth about Rs. 3,500 and including a cow, a she-goat, vessels, sarees, jewellery and a ricultural implements, that they had threatened and assaulted the petitioner's daughter-in-law and her children, that they had demolished the huts and that they had removed the materials in two bullock carts. Enquiry into the allegations in this petition was taken up immediately. On receipt of Telephonic instructions from the Superintendent of Police's office, the in-charge Circle Inspector proceeded to the spot on the same day, i.e. 26-7-1972, made spot enquiries and recorded the statements of Hanumaiah and of others. A case was also registered in crime No. 28/72 under Sections 143, 147, 148, 447 448, 427, 323, and 379 of IPC against Nizammuddin, Ramaswamy Sastry and 40 others in Kudur Police Station on 27-7-72, the date of receipt of petition at the Police Station. Searches of the residence of five accused persons including those of Sri Nizammuddin and Sri Ramaswamy Sastry were conducted on 28-7-72, and a search of the house of another accused was conducted on 31-7-1972. No incriminating materials were recovered during the searches. Witnesses examined by the investigating officer have stated that the hut had been demolished by Nizammuddin about two months back.

5. The Superintendent of Police visited the spot on 1-8-1972, checked up investigation conducted so far and has issued instructions to the local police to be alert and to prevent any possible breach of peace. The investigation is in progress.

6. A petition dated 4-7-72 from Sri Hanumaiah addressed to the Minister of State for Home which was received in Government was sent to the Inspector General of Police and it was received by the Superintendent of Police, Bangalore District on 31-7-1972. The petitioner has alleged there in that his earlier representation to the Police had not been enquired into, that he and his son were taken to Kudur Police Station on 23-6-72 and were kept in the Police Station without food and were asked to sign on a blank paper. There allegations are being enquired into. If there is any lapse on the part of the police, suitable action will be taken against them.

7. It is not correct to state that police had not taken immediate action.

Now I have received a subsequent report also in continuation of the previous report that I have just now read.

The D.S.P., Channapatna, visited Kudur on 3-8-1972 and made enquiries into the petition dated 4-7-72 of Sri Hanumaiah, which he had submitted to the Minister of State for Home. During the course of enquiry he has recorded the statements of Hanumiah, petitioner, Thimmakka, daughter-in-law of petitioner and Head Constable Choode Gowda and the S.H.O., Kudur Police Station. Both the petitioner and Thimmakka have admitted that they have not been harassed by Kudur Police and they have not been taken to the Police Station at any time prior to 27-7-1972. They have also stated that they had not submitted any petition to the Police earlier than 27-7-1972. They have further stated that their signatures were not taken by Kudur Police on any blank paper or on any other paper so far. They have categorically stated that they did not go to the Police Stati n and they were not also called by the Police to the Police Station.

The petitioner's son Gangaiah was not available for enquiry at Kudur as he is stated to be at Bangalore and his whereabouts in Bangalore are also not known. The Station records also do not show that the petitioner or his son, etc., had been summoned to the Police Station on 23-6-1972. H. C. Choode Gowda, S.H.O., Kudur Police Station, has denied the allegations made in the petition against the Police staff of Kudur Police Station. The D.S.P. has come to the conclusion that the allegations contained in the petition are not substantiated.

†ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಹೇಳಿದ ಉತ್ತರವನ್ನು ನಾವು ಪರಿಶೀಲಿಸಲಾಗಿ ನಮ್ಮ ಮುಖ್ಯ ಮಂತ್ರಿಗಳು ಈ ರಾಜ್ಯದ ಹರಿಜನರಿಗೆ ಸಂಪೂರ್ಣ ರಕ್ಷಣೆ ಕೊಡುತ್ತಾರೆ ಎಂಬ ನಂಬಿಕೆ 40 ಲಕ್ಷ ಹರಿಜನರು ಮತ್ತು ಗಿರಿಜನರಿಗೆ ಇದೆ. ಈ ಸಂದರ್ಭದಲ್ಲಿ ಹನುಮಯ್ಯ ಎನ್ನುವವರು ನಮ್ಮ ಖಾಸ ದೊಡ್ಡಪ್ಪ. ನಾನು 1935 ರಲ್ಲಿ ಕುದೂರಿನಲ್ಲಿ ಮಿಡ್ಲ್‌ಸ್ಕೂಲಿನಲ್ಲಿ ಓದುತ್ತಿದ್ದಾಗ ಅವರ ಮನೆಯಲ್ಲಿ ಊಟ ಮಾಡುತ್ತಿದ್ದೆ. 1951 ನೆಯ ಇಸವಿಯ ಓಟರ್ ಲಿಸ್ಟಿನಲ್ಲಿ ಅವರ ಹೆಸರಿದೆ, 1961 ರ ಓಟರ್ ಲಿಸ್ಟಿನಲ್ಲೂ ಅವರ ಹೆಸರಿದೆ,

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

1971ರ ಓಟರ್ ಲಿಸ್ಟಿನಲ್ಲೂ ಅವರ ಹೆಸರಿದೆ. ಅವರು ಓಟರು ಅಲ್ಲವೇ ಎಂಬುದನ್ನು ನೋಡಿ. ಅಲ್ಲಿ ಒಂದು ಕ್ವಾಟರ್ ಷೆಡ್ ಇತ್ತು; ಮನೆ ಇರಲಿಲ್ಲ—ಎಂದು ಅಧಿಕೃತವಾಗಿ ಪೋಲೀಸರು ತಿಳಿಸಿದ್ದಾರೆ. 27ನೆಯ ತಾರೀಖು ಪೋಲೀಸು ಸ್ಟೇಷನ್ನಿಗೆ ಅರ್ಜಿ ಬಂದಿದೆ ಎಂದು ಎಫ್.ಐ.ಆರ್ ಕಳಿಸಿದ್ದಾರೆ. 29 ರಂದು ಈ ಸಭೆಯ ನಾಲ್ಕು ಮಂದಿ ಸದಸ್ಯರು ಶ್ರೀ ಕೆ. ಪ್ರಭಾಕರ್, ಶ್ರೀ ರಾಮಸ್ವಾಮಿ, ತಾಲ್ಲೂಕು ಬೋರ್ಡ್ ಅಧ್ಯಕ್ಷರು ಮತ್ತು ಈ ಮನೆ ಸದಸ್ಯರೂ ಆದ ಶ್ರೀ ಚನ್ನಪ್ಪ, ಮತ್ತು ನಾನು ಹೋಗಿದ್ದೆವು. ಆ ಸ್ಥಳ ನೋಡಲು ಹೋಗಿದ್ದೆವು. ಸ್ಥಳಪರಿಶೀಲನೆಯನ್ನು ಸಮಾಜ ಕಲ್ಯಾಣ ಇಲಾಖೆಯ ಡೈರೆಕ್ಟರು ಮತ್ತು ಡೆಪ್ಯುಟಿ ಡೈರೆಕ್ಟರು ಮಾಡುತ್ತಿದ್ದರು. ನಾವು ಪೋಲೀಸು ಸ್ಟೇಷನ್ನಿಗೆ ಹೋಗಿ ಸಬ್‌ಇನ್‌ಸ್ಪೆಕ್ಟರು ಯಾರು ಎಂದು ಕೇಳಿದೆವು. ಅಶೋಕ್ ಎನ್ನುವವರಿದ್ದಾರೆ, ಒಂದೂವರೆ ತಿಂಗಳಿಂದ ಸ್ಕ್ವಾಡ್‌ಗೆ ಹೋಗಿದ್ದಾರೆ, ಇಲ್ಲ ಎಂದು ಹೇಳಿದರು. ನಂತರ ನೆಲಮಂಗಲಕ್ಕೆ ಹೋಗಿ ಸರ್ಕಲ್ ಇನ್‌ಸ್ಪೆಕ್ಟರಿರುವರೇ ಎಂದು ವಿಚಾರಮಾಡಿದೆವು. ಅವರಿಗೆ ವರ್ಗವಾಗಿದೆ, ಇಲ್ಲ ಎಂದು ಹೇಳಿ ಆಗ ಸ್ಟೇಷನ್ನಿನಲ್ಲಿ ಒಬ್ಬ ಸಬ್ ಇನ್‌ಸ್ಪೆಕ್ಟರು, ಒಬ್ಬ ದಫೇದಾರರು 11 ಪೋಲೀಸು ಕಾನ್‌ಸ್ಟೇಬಲ್ಲುಗಳು ಇರುವ ಪಟ್ಟಿ ಇತ್ತು. ಇಬ್ಬರು ಪೋಲೀಸು ಕಾನ್‌ಸ್ಟೇಬಲ್ಲು ಗಳಿದ್ದರು. ನಮಗೆ ಅರ್ಜಿ ಬಂದಿಲ್ಲ, ಆಕ್ಷನ್ ತೆಗೆದುಕೊಂಡಿಲ್ಲ ಎಂದು 29 ರಂದು ಹೇಳಿದರು. 27 ರಂದು ಅರ್ಜಿ ದಾಖಲಾಗಿದೆ.

ಮುಖ್ಯವಾದ ಅಂಶ ಕೋರ್ಟಿನಲ್ಲಿ ಸಿವಿಲ್ ಕೇಸಿತ್ತು, ಜನವರಿಯಲ್ಲಿ ತೀರ್ಮಾನವಾದಾಗ ನೈಜಾಮುದ್ದೀನ್‌ರವರು ಕ್ವಾಟರ್ ಶೆಡ್ಡನ್ನು ಕಿತ್ತುಹಾಕಿದ್ದಾರೆ. ಇದಕ್ಕೆ ದಾಖಲೆಯಿದೆ. ವರದಿಯಲ್ಲಿ ಹೀಗಿದೆ :

On 24-7-72 he had gone to Bangalore to meet his lawyer and on his return he found his hut had been demolished and damages caused, etc. ವರದಿಯ ಪ್ರಕಾರ ಶ್ರೀ ನೈಜಾಮುದ್ದೀನ್ ಕೊಳ್ಳುವುದಕ್ಕೆ ಮುಂಚೆ ಜಮೀನು ಶ್ರೀ ರಾಮಶಾಸ್ತ್ರಿ ಗಳಿಗೆ ಸೇರಿತ್ತು. ಹರಿಜನರ ಶ್ರೀ ಹನುಮಯ್ಯ ಗೇಣಿದಾರ ನಾಗಿ 50 ವರ್ಷಗಳಿಂದ ಎರಡು ತಲೆಯಿಂದ ಈ ಜಮೀನನ್ನು ಸಾಗುವಳಿ ಮಾಡುತ್ತಿದ್ದಾನೆ. ಇದು ಸತ್ಯವಾದ ಅಂಶ. ಪೋಲೀಸು ವರದಿ ನೋಡಿ ತೀರ್ಮಾನಕ್ಕೆ ಬರುವುದಾದರೆ ತೊಂದರೆಯಾಗುವುದು, ಹರಿಜನರಿಗೆ ನ್ಯಾಯ ದೊರೆಯುವುದಿಲ್ಲ. ಮೂರು ನಾಲ್ಕು ಸಲ ಸಮಾಜ ಕಲ್ಯಾಣ ಇಲಾಖೆ ಸ್ಥಳ ಪರೀಕ್ಷೆ ಮಾಡಿ ವರದಿ ಮಾಡಿದೆ. ದಯಿಯಿಟ್ಟು ಆ ವರದಿ ತರಿಸಿ ಪರಿಶೀಲಿಸಿ ಸೂಕ್ತ ಕ್ರಮ ಕೈಕೊಳ್ಳಬೇಕು. ನಿಜಾಮುದ್ದೀನ್ ಎಂಬುವವರು ಚನ್ನಪಟ್ಟಣದಲ್ಲಿ ಡಾಕ್ಟರು, ಚೂಡೇಗೌಡರು ಅಲ್ಲಿಗೆ ಬಂದರು, ಚನ್ನಪಟ್ಟಣದಲ್ಲಿ ಅವರಿಬ್ಬರಿಗೆ ಸಂಪರ್ಕ, ಸ್ನೇಹ ಬೆಳೆಯಿತು. ಇದರಿಂದ ಹರಿಜನರಿಗೆ ರಕ್ಷಣೆ ಸಿಕ್ಕಿಲ್ಲ. ಚೂಡೇಗೌಡರು ಪೋಲೀಸು ಇಲಾಖೆಯ ಕಾರ್ಯ ಸರಿಯಾದ ರೀತಿಯಲ್ಲಿ ಮಾಡಿಲ್ಲ. ಹೀಗಾದರೆ ಹರಿಜನರಿಗೆ ಹೇಗೆ ರಕ್ಷಣೆ ದೊರೆಯುವುದು? ಮತ್ತೊಬ್ಬರು 4 ವರ್ಷದಿಂದ ಅಲ್ಲೇ ಇದ್ದಾರೆ, ಅವರ ಹೆಸರು ಲಕ್ಷ್ಮೀನರಸಪ್ಪ, ಅವರು ಪೋಲೀಸು ಕಾನ್‌ಸ್ಟೇಬಲ್. ಅವರಿಗೆ ಹರಿಜನರು ಹೋಗಿ ಹೇಳಿದರೆ ಕಪಾಳಕ್ಕೆ ನಾಲ್ಕು ಸಲ ಹೊಡೆದು ನಿನಗೆ ಜಮೀನು ಕೊಡುವುದು ಹೇಗೆ, ಕೋರ್ಟಿನಲ್ಲಿ ಬೇರೆ ಆಗಿದೆ ಎಂದು ಹೇಳಿದರು. 10-15 ಜನ ಸದಸ್ಯರನ್ನು ಈ ಸಭೆಯಿಂದ ಕಳಿಸಿ ವರದಿ ತರಿಸಿದರೆ ಒಳ್ಳೆಯದು. ಗೇಣೀದಾರರಿಗೆ ಅವರು ಸಾಗುವಳಿ ಮಾಡುವ ಜಮೀನನ್ನು ಕೊಡಿಸುವ ತತ್ವವನ್ನು ಸರಕಾರ ಒಪ್ಪಿದೆ, ಆ ಬಗ್ಗೆ ಸರಕಾರ ಕ್ರಮ ತೆಗೆದುಕೊಂಡಿದೆ. ಅವರಿಗೆ ಸರಿಯಾದ ರಕ್ಷಣೆ ಕೊಡ ಬೇಕು. ಮುಖ್ಯಮಂತ್ರಿಗಳು ಈ ಅಂಶವನ್ನು ಗಮನಿಸಿ ಮತ್ತೆ ಪರಿಶೀಲಿಸಿ ನಿರ್ಗತಿಕ ಹರಿಜನರಿಗೆ, ಗೇಣಿದಾರರಿಗೆ ರಕ್ಷಣೆ ಕೊಡುವುದೂ ಅಲ್ಲದೆ ಈಗ ಅವರಿಗಾಗಿರುವ ನಷ್ಟಕ್ಕೆ ಪರಿಹಾರ ಕೊಡಿಸ ಬೇಕು ಮತ್ತು ಪೋಲೀಸು ಇಲಾಖೆ ಈಗ ಮಾಡಿರುವ ಕೇಸಿನ ಬಗ್ಗೆ ಹೆಚ್ಚಿನ ಗಮನಕೊಡಬೇಕು. ಅಶೋಕ್ ಎಂಬ ಸಬ್ ಇನ್‌ಸ್ಪೆಕ್ಟರನ್ನು ವಾಪಸು ಕರೆಸಬೇಕು, ಸರ್ಕಲ್ ಇನ್‌ಸ್ಪೆಕ್ಟರನ್ನು ಪೋಸ್ಟ್ ಮಾಡಿ ಇನ್‌ವೆಸ್ಟಿಗೇಷನ್ ಮಾಡಿಸಬೇಕು, ಲಕ್ಷ್ಮೀನರಸಪ್ಪ ಮತ್ತು ಚೂಡೇಗೌಡರನ್ನು ಬೇರೆ ಕಡೆಗೆ ವರ್ಗಮಾಡಬೇಕು. ಈ ಕೇಸನ್ನು ಸಸ್ಪೆಂಡ್‌ಮಾಡಬೇಕೋ ಅಥವಾ ಡಿಸ್‌ಮಿಸ್ ಮಾಡ ಬೇಕೋ ಅದು ಸರಕಾರದ ವಿವೇಚನೆಗೆ ಬಿಟ್ಟಿದ್ದು.

ಈ ರಚನಾತ್ಮಕವಾದ ಅಂಶಗಳನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು. ಈ ನತದೃಷ್ಟ ಹರಿಜನರು ಕಟ್ಟು ಪಾಲಾಗಿದ್ದಾರೆ. ಅವರಿಗೆ ರಕ್ಷಣೆಇಲ್ಲ. ಅವರು ಉಪಯೋಗಿಸು ತ್ತಿರುವ ಮಡಕೆ ಕುಡಿಕೆಗಳೆಲ್ಲಾ ಬೀದಿಯಲ್ಲಿ ಬಿದ್ದಿವೆ. ಸಾಮಾನುಗಳೆಲ್ಲಾ ಕಳ್ಳತನವಾಗಿ ಹೋಗಿದೆ. ಅವರಿಗೆ ತಿನ್ನುವುದಕ್ಕೆ ಯಾವ ದವಸವೂ ಇಲ್ಲ. ಅವರ ಸ್ಥಿತಿ ಬಂಗಾಳ ದೇಶದ ಚಿತ್ರ

ನೋಡಿದಂತೆ ಆಗಿದೆ. ಅವರು ದಾರುಣ ಸ್ಥಿತಿಯಲ್ಲಿದ್ದಾರೆ. ನಾವು 4 ಜನ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇವೆ. ಆದುದರಿಂದ ನಾವು ಹೇಳಿದ ಅಂಶವನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸಿ ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಅವರಿಗೆ ರಕ್ಷಣೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ......

ಅಧ್ಯಕ್ಷರು.—ಶ್ರೀ ಜಯಪ್ರಕಾಶ ನಾರಾಯಣ್ ಅವರು ಎಲ್ಲವನ್ನೂ ಹೇಳಿದ್ದಾರೆ ತಾವು ಕೂತುಕೊಳ್ಳಿ.

ಶ್ರೀ ಎಂ. ಬಿ. ರಾಮಸ್ವಾಮಿ.—ಅವರು ಹೇಳಿರುವುದರಲ್ಲಿ ಒಂದು ಅಂಶ ಬಿಟ್ಟಿದೆ. ಅದು ಬಹಳ ಮುಖ್ಯವಾದ ಸಂಗತಿ. ಅದನ್ನು ಹೇಳುತ್ತೇನೆ.

ಅಧ್ಯಕ್ಷರು.—ಅವರು ಹೇಳದೇ ಇದ್ದ ವಿಷಯ ಇದ್ದರೆ ತಾವು ಹೇಳಿ.

ಶ್ರೀ ಎಂ. ಬಿ. ರಾಮಸ್ವಾಮಿ.—ಈಗ ನಡೆದಿರತಕ್ಕಂಥಾದ್ದು ಈ ಒಂದು ತಾಲ್ಲೂಕಿನಲ್ಲಿ. ಆದರೆ ಇದು ಎಲ್ಲಾ ತಾಲ್ಲೂಕುಗಳಿಗೂ ಹರಡಿದೆ. ಇದರ ಬಗ್ಗೆ ಈಗಾಗಲೇ ನಮ್ಮ ಹಿರಿಯ ಸ್ನೇಹಿತರು ವಿಶದವಾಗಿ ಹೇಳಿದ್ದಾರೆ. ಆದರೆ ಪೋಲೀಸಿನವರು ಎಫ್.ಐ.ಆರ್.......

ಅಧ್ಯಕ್ಷರು.—ತಾವು ಒಂದು ವರ್ಡ್ ರಿಪೀಟ್ ಮಾಡಿದರೂ ಅದನ್ನು ತೆಗೆಸಿಬಿಡಬೇಕಾಗುತ್ತದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ತಾವು ಕೋಪದಿಂದ ಹೇಳಬೇಡಿ. ತಾವು ಕರುಣೆ ಉಳ್ಳಂಥ ಅಧ್ಯಕ್ಷಿಣಿಯವರು. ತಾವು ಕೂತುಕೊಳ್ಳಬೇಕು ಎಂದರೆ ಕೂತುಕೊಳ್ಳುತ್ತೇನೆ.

ಅಧ್ಯಕ್ಷರು.—ಈ ಹೌಸ್‌ನ ಟೈಂನ್ನು ವ್ಯರ್ಥವಾಗಿ ಕಳೆಯುವುದಲ್ಲ. ಅವರು ಹೇಳಿದುದನ್ನೇ ರಿಪೀಟ್ ಮಾಡಿದರೆ ಪ್ರಯೋಜನವಾಗುವುದಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಅದನ್ನೇ ರಿಪೀಟ್ ಮಾಡುವುದಿಲ್ಲ.

ಅಧ್ಯಕ್ಷರು.—ಅದರಲ್ಲಿ ಒಂದು ವರ್ಡ್ ರಿಪೀಟ್ ಮಾಡಿದರೂ ರಿಕಾರ್ಡ್‌ನಿಂದ ತೆಗೆಸಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ್.—On a point of order. ಈ ಒಂದು ಇನ್ಸಿಡೆಂಟ್ ನಡೆದಿರತಕ್ಕದ್ದರಲ್ಲಿ ಊರ ಹೆಸರು, ಜನರ ಹೆಸರು, ಪೋಲೀಸ್ ಸ್ಟೇಷನ್ನಿನ ಹೆಸರು, ಪೋಲೀಸ್ ಕಾನ್ಸ್‌ಟೇಬಲ್ ಹೆಸರು, ಎಕ್ಸ್ಯಾಕ್ಟ್ ಡೇಟ್ ಇವು ಯಾರು ಮಾತನಾಡಿದರೂ ರಿಪಿಟಿಷನ್ ಬಂದೇ ಬರುತ್ತದೆ. ನಾನು ಮಾತನಾಡಿದರೂ ರಿಪಿಟಿಷನ್ ಬಂದೇ ಬರುತ್ತದೆ. ಅದು ರಿಪೀಟ್ ಆದರೆ ತೆಗೆಸಿಹಾಕುತ್ತೇವೆ ಎಂದು ಹೇಳುವುದು ಅನುಚಿತವೆ ?

ಅಧ್ಯಕ್ಷರು.—ರಿಪಿಟಿಷನ್ ಆದರೆ ಹೊಸ ವಿಷಯ ಏನೂ ಇಲ್ಲ. ಅದರಿಂದ ತಾವು ಹೇಳುವುದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ.

ಶ್ರೀ ಕೆ. ಪ್ರಭಾಕರ್.—ನಾವು ಮಾತನಾಡುವಾಗ ಊರ ಹೆಸರು, ಪೋಲೀಸ್ ಸ್ಟೇಷನ್ ಹೆಸರು, ಡೇಟ್ ಇವೆಲ್ಲಾ ರಿಪಿಟಿಷನ್ ಆಗಿಯೇ ಆಗುತ್ತದೆ. ಅಲ್ಲಿ ನಡೆದಿರುವ ಸತ್ಯವನ್ನು ಹೇಳಬೇಕಾಗಿರುವುದರಿಂದ ನೀವು ಸತ್ಯವನ್ನು ಕೊಲೆ ಮಾಡಬೇಡಿ.

ಅಧ್ಯಕ್ಷರು.—ಯಾರು ಸತ್ಯವನ್ನು ಕೊಲೆ ಮಾಡುತ್ತಾರೆ ? ಮಾತನಾಡುವುದು ನಮಗೆ ಬರುತ್ತಾ ಇಲ್ಲ ಎಂದು ತಾವು ಈ ರೀತಿ ಮಾತನಾಡುತ್ತಿದ್ದೀರಾ ?

ಶ್ರೀ ಕೆ. ಪ್ರಭಾಕರ್.—ಅವರು ಮೊದಲು ಮಾತನಾಡಲಿ, ಆಮೇಲೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು.—ಈ ಸಭೆಯಲ್ಲಿ ಇನ್ನೂ ಕೆಲವು ಹರಿಜನರು ಇದ್ದಾರೆ. ಯಾರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು ಎನ್ನುವುದು ನನಗೆ ಗೊತ್ತಿದೆ. ತಾವು ಹೇಳಿದ ಹಾಗೆ ಕೇಳಿಬಿಟ್ಟರೆ ಸತ್ಯ ಉಳಿದುಕೊಳ್ಳುತ್ತದೆ, ಇಲ್ಲದೇ ಹೋದರೆ ಕೊಲೆ ಆಗುತ್ತದೆ ಎಂದು ಹೇಳುವುದು ಸರಿಯೇ ?

* * *

* * Matter not recorded as ordered by the Chair.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ಅಷ್ಟೊಂದು ಉದ್ರೇಕ ಮಾಡಿಕೊಳ್ಳುವುದು ಯೋಗ್ಯವಲ್ಲ ಎಂದು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಈ ರೀತಿ ಉದ್ರೇಕ ಮಾಡಿಕೊಳ್ಳುವುದಕ್ಕೆ ಕಾರಣ ಇದೆ.

ಶ್ರೀ ಡಿ. ದೇವರಾಜ್ ಅರಸ್.—ಏನೇ ಕಾರಣ ಇರಲಿ. ಈ ಮನೆಯಲ್ಲಿ ಕ್ರಮವರಿತು ಹೋಗಬೇಕು. ಕೋಪ ಮಾಡಿಕೊಂಡರೆ ಏನೂ ಪ್ರಯೋಜನವಿಲ್ಲ.

ಶ್ರೀ ಕೆ. ಪ್ರಭಾಕರ್.—ಈ ಸಾವಿನ ವಿಷಯವನ್ನು ನುಂಗಿಕೊಂಡು ಮಾತನಾಡದೇ ಇರುವುದಕ್ಕೆ ಮನಸ್ಸು ಬರುವುದಿಲ್ಲ. ಕೋಪ ಬಂದೇ ಬರುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಇಷ್ಟು ಕೋಪ ಮಾಡಿದರೆ ಕೋಪದ ಪರಿಣಾಮದಿಂದ ಏನಾಗುತ್ತದೆ? I would like to submit through you, Madam, to the House that even though what has been said is not all correct...Members have a right to say that such and such a fact is different from what is stated by the Government. Again, we will look into it. But the Speaker, according to the Rules of Procedure, has a right to regulate the debate and also to tell hon. Members not to repeat what has already been stated. Therefore, the hon. Member need not be exercised to the extent of saying that truth is sought to be murdered or whatever it is. It may not be appropriate for the occasion and I request the hon. Member who is a seasoned member and who has been here for more than one term to kindly desist from making such remarks and the matter may be left at that. If the other hon. Members have to say anything more than what the hon. Member Sri Jayaprakash Narayan has stated, I request that they may be allowed to make brief statements.

† ಶ್ರೀ ಎಂ. ಬಿ. ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ಈ ಒಂದು ಸ್ಟೇಟ್‌ಮೆಂಟಿನ ಎರಡನೇ ಪುಟದಲ್ಲಿ ಈರೀತಿ ಹೇಳಿದ್ದಾರೆ: No incriminating materials were recovered during the searches. Witnesses examined by the ivestigating officer have stated that the hut had been demolished by Nizammuddin about two months back.

ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ ಇದು ಸತ್ಯಕ್ಕೆ ದೂರವಾದ ವಿಚಾರ. ಈ ಹನುಮಯ್ಯ ಎಂಬುವನು ಹನುಮನಪಾಳ್ಯದಲ್ಲಿ ಸುಮಾರು 40–50 ವರ್ಷದಿಂದಲೂ ಕೂಡ ಆ ಊರಿನಲ್ಲೇ ವಾಸವಾಗಿರತಕ್ಕಂಥ ಹರಿಜನ. ಈಗಾಗಲೇ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಅದನ್ನು ಹೆಚ್ಚಿಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ 27 ನೇ ತಾರೀಖು ಹನುಮಯ್ಯನ ಹೆಂಡತಿ ರಿಪೋರ್ಟ್ ಕೊಡುವುದಕ್ಕೆ ಹೋದಾಗ ಅವರ ಕಂಪ್ಲೇಂಟನ್ನು ವಾಪಸ್ಸು ಮಾಡಿದ್ದಾರೆ. ಮತ್ತು ಆ ಜಮೀನನ್ನು ಮೊದಲು ಬಿಟ್ಟುಬಿಡಬೇಕು, ಅದು ನಿಮ್ಮ ಅಪ್ಪ, ನಿಮ್ಮ ಅಮ್ಮನ ಭೂಮಿಯೋ ಎಂದು ಹೆದರಿಸಿ ಪೋಲೀಸ್ ಕಾನ್‌ಸ್ಟೇಬಲ್ ತಲೆಮೇಲೆ ಹೊಡೆದಿದ್ದಾನೆ. ಇದರಿಂದ ಅವರು ಬಹಳ ನೊಂದುಕೊಂಡಿದ್ದಾರೆ. ಇದರಿಂದ ಜೀವನದಲ್ಲಿ ಜಿಗುಪ್ಸೆಯಾಗಿ ಇಂತಹ ಘಟನೆ ನಡೆಯಿತು. ಆವೊತ್ತಿನ ದಿವಸ ಅಲ್ಲಿ ಮಳೆ ಆಗಿದೆ. ಮಳೆಯಲ್ಲೇ ನೆಂದುಕೊಂಡು ಬಂದು ಹೇಳಿದ್ದಾನೆ. ನಾನೂ ಕೂಡ ಎರಡು ದಿವಸದಿಂದಲೂ ನೊಂದು ಕೊಂಡು ಹೇಳಲಿಕ್ಕೆ ಆಗಲಿಲ್ಲ. ಆ ಮನೆಯನ್ನು ಕಿತ್ತು ನೆಲಸಮ ಮಾಡಿದ್ದಾರೆ. ಪಾಯ, ಕಲ್ಲು ಎಲ್ಲವನ್ನೂ ಕಿತ್ತು ಹಾಕಿಬಿಟ್ಟಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ತಾವು ಯಾವಾಗ ಹೋಗಿದ್ದಿರಿ ?

ಶ್ರೀ ಎಂ. ಬಿ. ರಾಮಸ್ವಾಮಿ.—29 ನೇ ತಾರಿಖು ಹೋಗಿ ಬಂದಿದ್ದೇವೆ. ಸಮಾಜ ಕಲ್ಯಾಣ ಮಂತ್ರಿಗಳನ್ನೂ ಕೂಡ ಕರೆದೆವು. ಅವರು ಹೇಳಿದರು "ನನಗೆ ಬೇರೆ ಕಾರ್ಯ ಇದೆ. ನೀವು ಹೋಗಿ ನೋಡಿಕೊಂಡು ಬನ್ನಿ" ಎಂದು. ಅವರು ಬರಲಿಕ್ಕೆ ಆಗಲಿಲ್ಲ. ಅಲ್ಲಿ ಹೋಗಿ ನೋಡಿದರೆ ಆತನಿಗೆ ಚಳಿ, ಜ್ವರ ಬಂದಿದೆ ಮಡಿಕೆ ಕುಡಿಕೆಗಳನ್ನು ಗುಡ್ಡದ ಹತ್ತಿರ ಹೋಗಿ ಇಟ್ಟುಕೊಂಡು ವಾಸ ಮಾಡುತ್ತಿದ್ದರು. ಅದನ್ನು ನೋಡಿದರೆ ಕಣ್ಣೀರು ಇಡಬೇಕಾಗುತ್ತದೆ.

2-30. P.M.

ಡೆಪ್ಯುಟಿ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರವರೂ ಕಂಡರು. ಪ್ರಜಾಪ್ರಭುತ್ವದಲ್ಲಿ ಹರಿಜನರಿಗೆ ರಕ್ಷಣೆ ಬೇಡವೇ? ಕೋರ್ಟಿನಲ್ಲಿರುವ ವಿಷಯ ಯಾವ ರೀತಿಯಲ್ಲಾದರೂ ತೀರ್ಮಾನವಾಗಲಿ. ನಾನು ಅದರ ಬಗ್ಗೆ ಏನೂ ಹೇಳುವುದಿಲ್ಲ. ಹನುಮಯ್ಯ ಅಲ್ಲಿ ಇರಬಾರದು, ಅಲ್ಲಿದ್ದರೆ ಅವನಿಗೆ ಟೆನ್ನ್ಸಿ ಬರುತ್ತದೆ, ಅವನ ಮನೆಯನ್ನು ತೆಗೆದುಹಾಕಿದರೆ ಅವನ ಹಕ್ಕು ಹೋಗುತ್ತದೆ ಎಂದು ತಿಳಿದುಕೊಂಡು they have completely screened the evidence. ಈ ರೀತಿ ಅನ್ಯಾಯ ಮಾಡಿದ್ದಾರೆ. ಕೆಲವರು ಗೂಂಡಾಗಳು ಯಾರೋ ಮುಖಂಡರ ಜೊತೆಯಲ್ಲಿ ಸೇರಿಕೊಂಡು 2 ಡಜನ್ ಕೋಳಿಮೊಟ್ಟೆಯನ್ನು ಸುಟ್ಟು ತಿಂದಿದ್ದಾರೆ, ಕುಡಿದಿದ್ದಾರೆ, ಕಳ್ಳೆಕಾಯಿ ತಿಂದಿದ್ದಾರೆ, ಎಂಬುದಾಗಿ ನೊಂದುಕೊಂಡು ನಮ್ಮಲ್ಲಿ ಹೇಳಿದರು. ನಾನು ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಇದು ಸತ್ಯವಾದ ಸಂಗತಿ. ಹರಿಜನರು ನಿಜವಾಗಿ ಪ್ರಜಾಪ್ರಭುತ್ವದಲ್ಲಿ ಬದುಕಬೇಕಾದರೆ, ಸತ್ಪ್ರಜೆಗಳಾಗಿ ಬಾಳಬೇಕಾದರೆ ಇಂಥ ಅನ್ಯಾಯ ವಾಗಬಾರದು, ಇದರ ಬಗ್ಗೆ ಆಜಮಾಯಿಷಿ ಮಾಡಿ ಸತ್ಯವಾಗಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳಿ. ಪೋಲೀಸರ ವರ್ತನೆ ಬಹಳ ಅನ್ಯಾಯವಾದುದು. ಪೋಲಿಸಿನವರು ಬಹುಶಃ ಕೆಲವೇ ಜನ ಮುಖಂಡರನ್ನು ಕೈಯಲ್ಲಿ ಹಾಕಿಕೊಂಡು ಬಹಳ ಅನ್ಯಾಯ ಮಾಡುತ್ತಿದ್ದರು. ಚೂಡೇಗೌಡ ಎಂಬ ಕಾನ್‌ಸ್ಟೇಬಲ್ ವಿಷಯ ನಾನು ಆನೇಕಲ್ ಕ್ಷೇತ್ರದಲ್ಲಿ ಹೋಗಿದ್ದಾಗ ತಿಳಿಯಿತು. ಅವನು ಎಲ್ಲೆಲ್ಲಿದ್ದ, ಏನೇನು ಮಾಡಿದ್ದಾನೆ ಎಂಬುದೆಲ್ಲ ಗೊತ್ತಾಯಿತು. ನಾನು ಹೇಳುತ್ತಿರುವುದರಲ್ಲಿ ಸತ್ಯವಿದ್ದರೆ ಕ್ರಮ ತೆಗೆದುಕೊಳ್ಳಿ. ನಾನು ಅಸತ್ಯವಾದ ವಿಷಯ ಮಾತನಾಡುವುದಿಲ್ಲ. ಹರಿಜನರು ಬೆನ್ನು ಮೂಳೆ ಎಂದು ಹೇಳಿದ್ದೀರಿ. ಅದಕ್ಕೆ ಚ್ಯುತಿ ಬರಬಾರದು. ಮಾನ್ಯ ಮುಖ್ಯ ಮಂತ್ರಿಗಳು ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು. ಹರಿಜನರಿಗೆ ರಕ್ಷಣೆ ಇಲ್ಲದೆ ಹೋದರೆ ಅವರು ಬದುಕು ವುದಕ್ಕೇ ಸಾಧ್ಯವಿಲ್ಲ. ಅವರಿಗೆ ಏನೇನು ಪರಿಹಾರ ಕೊಡಬೇಕೋ ಅದನ್ನೆಲ್ಲ ಕೊಟ್ಟು, ತಕ್ಷಣ ಒಂದು ಷೆಡ್ ಹಾಕಿಕೊಳ್ಳುವುದಕ್ಕಾದರೂ ವ್ಯವಸ್ಥೆ ಮಾಡಬೇಕು ಮತ್ತು ಅವರು ಸತ್ಪ್ರಜೆಗಳಾಗಿ ಬದುಕಿ, ಪ್ರಾಮಾಣಿಕವಾಗಿ ಬದುಕಬೇಕು ಎನ್ನುವ ಮನೋಭಾವನೆ ಸರ್ಕಾರದಲ್ಲಿ ಇರಬೇಕು ಎಂದು ಹೇಳುತ್ತೇನೆ.

† ಶ್ರೀ ಎಂ. ವಿ. ರುದ್ರಪ್ಪ.—ಈಗಾಗಲೇ ಮಾನ್ಯ ಸ್ನೇಹಿತರಾದ ರಾಮಸ್ವಾಮಿ ಅವರು ವಿಷಯವನ್ನೆಲ್ಲ ತಿಳಿಸಿದ್ದಾರೆ. ಹನುಮಯ್ಯ ಎಂಬುವವರು ಆಸ್ತಿಯನ್ನು 40—50 ವರ್ಷಗಳಿಂದ ಅನುಭವಿಸಿಕೊಂಡು ಬಂದಿದ್ದಾರೆ. ಕೋರ್ಟಿನಲ್ಲಿ ಇರುವ ವ್ಯವಹಾರದ ಬಗ್ಗೆ ಇತ್ಯರ್ಥವಾಗ ಬೇಕಾಗಿದೆ. ಏಕಾಏಕಿ ಬಂದು, ಈ ತರಹ ಮನೆಗಳನ್ನು ನಷ್ಟಪಡಿಸಿ, ಹೊಡೆದು, ಬಡಿದು ಅನ್ಯಾಯ ಮಾಡುತ್ತಿರುವುದನ್ನು ನೋಡಿದರೆ ಪೋಲೀಸರ ದೌರ್ಜನ್ಯ ಹೇಳುವುದಕ್ಕೆ ಸಾಧ್ಯವಿಲ್ಲ ದಂತಾಗಿದೆ. ಏಕೆಂದರೆ ಮೇಲಾಧಿಕಾರಿಗಳು ಕ್ರಮ ತೆಗೆದುಕೊಂಡು ತಕ್ಕ ಶಾಸ್ತಿ ಮಾಡ ಬೇಕಾದವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ, ಸರಿಯಾದ ರೀತಿಯಲ್ಲಿ ವಿಚಾರಣೆ ನಡೆಸಿಲ್ಲ ಎಂದು ತಿಳಿದು ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ವಿಚಾರಣೆ ನಡೆಸಿ ಉಗ್ರ ಕ್ರಮ ತೆಗೆದುಕೊಂಡು ಹರಿಜನರಿಗೆ ರಕ್ಷಣೆ ನೀಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕಳಕಳಿ ಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಪುಟ್ಟದಾಸ.—ಅಧ್ಯಕ್ಷರೇ, ಇದೆ ರೀತಿ ಬಹುಶಃ ದೇಶದಲ್ಲೆಲ್ಲ ನಡೆಯುತ್ತಿದೆ. ಅವರು ಜಯಪ್ರಕಾಶ ನಾರಾಯಣ ಅವರ ಸಂಬಂಧಿಗಳಾದುದರಿಂದ ಈ ಒಂದು ಘಟನೆ ಸಾರ್ವಜನಿಕರ ದೃಷ್ಟಿಯನ್ನು ಸೆಳೆದಿದೆ. ನಾನು ಸ್ಥಳಕ್ಕೆ ಹೋದವನಲ್ಲ, ವಿಷಯ ತಿಳಿದವನಲ್ಲ. ಸಾಮಾನ್ಯವಾಗಿ ನಡೆಯುತ್ತಿರುವುದರ ಬಗ್ಗೆ ಹೇಳಬೇಕೆಂದರೆ ಎಷ್ಟೋ ಹರಿಜನರಿಗೆ ಪೋಲೀಸ್ ಸ್ಟೇಷನ್ನಿಗೆ ಹೋಗಿ ದೂರು ಕೊಡತಕ್ಕ ಶಕ್ತಿ ಇಲ್ಲ. ದೂರು ಕೊಡುವುದಕ್ಕೆ ಯಾರಾದರೂ ಹೋದರೆ ಅವರನ್ನೇ ಹೊಡೆಯುತ್ತಾರೆನ್ನುವ ಭೀತಿ ಇದೆ. ಹರಿಜನರಿಗೆ ಪ್ರಾಮಾಣಿಕವಾಗಿ, ಶಾಶ್ವತವಾಗಿ ರಕ್ಷಣೆ ದೊರಕಬೇಕಾದರೆ ತಮಿಳುನಾಡಿನಲ್ಲಿರುವ ರೀತಿಯಲ್ಲಿ ಇಲ್ಲಿಯೂ ಮೊಬೈಲ್ ಸ್ಕ್ವಾಡ್ ಏರ್ಪಾಟು ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ಶ್ರೀ ಎಚ್. ಮಾರೇಗೌಡ.—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ವಿಷಯದಲ್ಲಿ ಸಾಕಷ್ಟು ಚರ್ಚೆಯಾಗಿದೆ ಆದರೂ ಕೂಡ ಸ್ಟೇಷನ್ ಆಫೀಸರ್ ಚೂಡೇಗೌಡ ಮತ್ತು ಕಾನ್‌ಸ್ಟೇಬಲ್ ವಿಷಯದಲ್ಲಿ ಹೇಳುವುದಾದರೆ ಇನ್ನೂ ಮುಂದೆ ಒಂದೆರಡು ದೌರ್ಜನ್ಯದ ಕೇಸುಗಳು ಆಗಿವೆ, ಅವರಿಗೆ ರಕ್ಷಣೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಬಹಳ ದೀರ್ಘವಾಗಿ ಆಲೋಚನೆ ಮಾಡಿ ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಂಡು ಪೋಲೀಸ್ ಅಧಿಕಾರಿಗಳ ದೌರ್ಜನ್ಯ ಕುದೂರು ಕ್ಷೇತ್ರದಲ್ಲಿ ಕಡಿಮೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಕೆ. ಪ್ರಭಾಕರ್.—ಮಾನ್ಯ ಅಧ್ಯಕ್ಷರೇ, ಪ್ರಕೃತ ಚರ್ಚೆಯಲ್ಲಿ ಉದ್ಭವವಾಗಿರತಕ್ಕ ಪೋಲೀಸರಿಂದ ಯಾರು ನೊಂದಿದ್ದಾರೆ ಎನ್ನುವ ವಿಷಯ ಯಾರು ತೊಂದರೆಪಟ್ಟಿದ್ದಾರೆ ಎನ್ನುವ ವಿಷಯ ತಿಳಿಸುವಾಗ ನೊಂದಿರತಕ್ಕ ಜನಗಳು ನನಗೆ 22 ವರ್ಷದಿಂದ ಗೊತ್ತು. 1952ರಲ್ಲಿ ನಾನು ಚುನಾವಣೆಗೆ ನಿಂತಾಗ ನನ್ನ ವೋಟರ್ಸ್ ಆಗಿದ್ದರು. ಅವರು 40—50 ವರ್ಷದಿಂದ ಅಲ್ಲಿರತಕ್ಕ ಖಾಯಂ ಸಂಸಾರಿಗರು, ಬೇಸಾಯಗಾರರು. ಈ ಜಮೀನು ಈತನ ಪೂರ್ವಜರದ್ದು, ಪಿತ್ರಾರ್ಜಿತ ವಾದ ಆಸ್ತಿ. ಇದನ್ನು ಕಂದಾಯ ಬಾಕಿಗಾಗಿ ಘತ ಬಂದಾಗ ಶ್ಯಾನುಭೋಗರು ಖಾತೆ ಮುಖಾಂತರ ತಾವು ಮಾಡಿಕೊಂಡರು. ಆಲಾಗಾಯಿತು ಸದರಿ ಬೇಸಾಯಗಾರ ಅದನ್ನು ಅನೂಚಾನವಾಗಿ ಮಾಡಿಕೊಂಡೇ ಬಂದ. ಗೇಣೀದಾರರ ಶಾಸನ ಬಂದಾಗ ಪೂರ್ವಜರ ಸ್ವತ್ತು ಅವನಿಗೇ ಹೋದೀತು ಎಂದು ಇದನ್ನು ಒಬ್ಬರಿಗೆ ಭೋಗ್ಯ ಮಾಡಿ ಈತನನ್ನು ಓಡಿಸುವುದಕ್ಕೆ ಪ್ರಯತ್ನ ಪಟ್ಟರು. ಆದರೆ ಆತನು ಅಲ್ಲಿಂದ ಓಡಿ ಹೋಗಲಿಲ್ಲ. ಆದುದರಿಂದ ಈತನಿಗೆ ಆ ಭೂಮಿಯ ಸಂಬಂಧವಿರಲಿಲ್ಲ ಎಂದು ಒಬ್ಬ ಸಾಹುಕಾರನ ಕೈಯಲ್ಲಿ ಸಾಕ್ಷಿ ಹೇಳಿಸಿದರು. ಕೊನೆಗೆ ಕೇಸು ಮಾಗಡಿ ತಹಸೀಲ್ದಾರರ ಹತ್ತಿರ ಬಿದ್ದು 10 ವರ್ಷದ ಪಹಣಿಯಲ್ಲಿ ಈತನ ಹೆಸರು ಇದ್ದುದರಿಂದ ಈತನೇ ಗೇಣೀದಾರ ಎಂದಾಯಿತು. ಅದರ ಮೇಲೆ ಯಾರು ಆ ಜಮೀನನ್ನು ಕ್ರಯ ಮಾಡಿಸಿಕೊಂಡಿದ್ದನೋ ಆತ ಅಪೀಲು ಹೋಗಿ, ಮುನಸೀಫ್ ಕೋರ್ಟಿನಲ್ಲಿ ಈತನೇ ಹಕ್ಕುದಾರ, ಜಮೀನ್ದಾರ ಪಹಣಿಯಲ್ಲಿ ಏನೇನು ವಿಚಿತ್ರ ಮಾಡಿದರೋ ಗೊತ್ತಿಲ್ಲ; ತಹಸೀಲ್ದಾರರ ಕೋರ್ಟಿನಲ್ಲಿ ಎಂಟಾಣಿಯನ್ನು ಎಂಟಾಣಿ ಎಂದು ಮಾಡಿದುದನ್ನು ಮುನಸೀಫ್ ಕೋರ್ಟಿನಲ್ಲಿ ಅಲ್ಲ ಎಂದು ಮಾಡಿದರು. ಇದು ಒಂದು ವಿಚಿತ್ರ. ಆದಾದ ಮೇಲೆ ಲಾ ಪ್ರಕಾರ ಪೊಸೆಷನ್ ತೆಗೆದುಕೊಳ್ಳುವು ದಕ್ಕೆ ಹಕೀಂ ಎನ್ನುವವರು ಹೋದರು. ಅದು ಅವರ ಹೆಸರಲ್ಲ. ಅವರು ಚನ್ನಪಟ್ಟಣದ ಕಡೆಯ ಒಬ್ಬ ಪಂಡಿತರು. ಅವರು ನಾನು ಈ ಜಮೀನಿಗೆ ಹಕ್ಕುದಾರ, ನಿಮ್ಮನ್ನು ಗೇಣೀದಾರನೆಂದು ನಾನು ತಿಳಿಯುವುದಿಲ್ಲ ಎಂದು ಹೇಳಿದಾಗ, ಇದು ನಮ್ಮ ಪೂರ್ವಿಕರ ಸ್ವತ್ತು, ನಾವು ಇಲ್ಲಿಂದ ಹೋಗುವುದಿಲ್ಲವೆಂದರು. ಈ ಉಪಾಯ ನಡೆಯುವುದಿಲ್ಲವೆಂದು ಐದಾರು ತಿಂಗಳು ಸುಮ್ಮನೆ ಇದ್ದು, ನಾನು ಜಮೀನನ್ನು ಸುಪರ್ದಿಗೆ ತೆಗೆದುಕೊಳ್ಳಬೇಕಾದರೆ ಏನು ಮಾಡಬೇಕು ಎಂದು ಕೆಲವು ಸ್ನೇಹಿತರನ್ನು, ತಜ್ಞರನ್ನು ಕೇಳಿದ್ದಾನೆ. ಗುಡಿಸಲನ್ನು ಕಿತ್ತು, ಒದ್ದು ಓಡಿಸಿ ನಿರ್ನಾಮ ಮಾಡಿದರೆ ಯಾರು ರಕ್ಷಣೆ ಕೊಡುತ್ತಾರೆ ಎಂದು ಹೇಳಿ ಕೊಟ್ಟರು. ಪೋಲೀಸಿನವರನ್ನು ಕೂಡ ಕೇಳಿದ, ಗುಡಿಸಲನ್ನು ಕಿತ್ತು ಹಾಕಿ ಓಡಿಸುವುದಕ್ಕೆ ಏನಾದರೂ ಮಾಡುತ್ತೀರಾ ಎಂದು ಕೇಳಿ ಅವರಿಗೆ ದುಡ್ಡು ಕೊಟ್ಟಿದ್ದಾನೆ ಎಂದು ವರ್ತಮಾನ. ಅವರು ಸಮಯ ನೋಡಿ ಉಪಕಾರ ಮಾಡುತ್ತೇವೆಂದು ಹೇಳಿದರು. ಬೆಂಗಳೂರಿಗೆ ಕೇಸಿನ ಸಂಬಂಧದಲ್ಲಿ ಮನೆ ಮಕ್ಕಳು ಬಂದು, ಮುದುಕ ಕೂಡ ಇಲ್ಲಿಯೇ ಇದ್ದರು. ಹೀಗಿರುವಾಗ ಒಂದು ದಿವಸ ರಾತ್ರಿ ಬಂದು, ಅವರ ಗುಡಿಸಲು, ಮನೆ, ಮಠ, ಎಲ್ಲ ಕಿತ್ತು ಹಾಕಿ, ಸಾಮಾನು ತೆಗೆದುಕೊಂಡು ಹೋದರು. ಎರಡು ಎತ್ತಿನ ಗಾಡಿಯಲ್ಲಿ ಸಾಮಾನು ತುಂಬಿಕೊಂಡು ಹೋದರು ಎಂದು ವರ್ತಮಾನ. ಈ ದೌರ್ಜನ್ಯ ನಡೆದ ಮೇಲೆ ಎತ್ತಿನ ಗಾಡಿಗಳನ್ನು ಪೋಲೀಸ್ ಸ್ಟೇಷನ್ ಮುಂದೆಯೇ ಹೊಡೆದುಕೊಂಡು ಹೋದರು. ಇಂಥ ದೌರ್ಜನ್ಯ ಯಾವುದೋ ಕಾಲದಲ್ಲಿ ನಡೆಯುತ್ತಿತ್ತು, ಟಿಪ್ಪುಸುಲ್ತಾನನ ಕಾಲ ದಲ್ಲಿ ನಡೆಯುತ್ತಿತ್ತು, ಹಿಂದಿನ ಸರ್ಕಾರದಲ್ಲಿ ನಡೆಯುತ್ತಿತ್ತು ಎಂದು ಹೇಳಬಹುದು. ಆದರೆ ಇಂದಿರಾ ಗಾಂಧೀಜಿ ಅವರು ಬಡವರ ಪರವಾಗಿ ಇದ್ದಾರೆ, ನೈತಿಕವಾಗಿ ಬಡ ಜನರಿಗೆ ಬೆಂಬಲ ವಾಗಿದ್ದಾರೆನ್ನುವ ಕಾಲದಲ್ಲಿ, ಇಂಥದು ಆಗಬಾರದಾಗಿತ್ತು ಎನ್ನುವುದು ನಮ್ಮ ನಿರೀಕ್ಷೆ. ಎಲ್ಲಕ್ಕಿಂತ ಹೆಚ್ಚಾಗಿ ಪೋಲೀಸ್ ಸ್ಟೇಷನ್ ಮುಂದೆ ಗಾಡಿ ಬಂದು, ದೌರ್ಜನ್ಯ ಮಾಡಿ, ಸಾಮಾನುಗಳನ್ನು ತುಂಬಿಕೊಂಡು ವಾಪಸು ಹೋದರು ಎನ್ನುವ ವರ್ತಮಾನ ಬಂದಿದೆ.

ಅದಕ್ಕೆ ಪಾಳ್ಯ ಎಂದು ಹೇಳುತ್ತಾರೆ, ಆ ಜಾಗದಲ್ಲಿ ಮೂರು ಮನೆಗಳು ಇರುತ್ತವೆ, ಒಂದು ಹರಿಜನರದು, ಇನ್ನು ಎರಡು ಮುಸಲ್ಮಾನರದು. ಇಂಥ ಪಾಳ್ಯದಲ್ಲಿ ದೌರ್ಜನ್ಯ ನಡೆಯಿತು, ಸರ್ಕಾರದವರು ಇದು ಹೇಗೆ ನಡೆಯಿತು, ಯಾರೇ ಮುಖ್ಯ ಮಂತ್ರಿಗಳಾಗಲಿ, ಅವರು ದೇಶದಲ್ಲಿ ನ್ಯಾಯವನ್ನು ಹೇಗೆ ಪಾಲಿಸಿಕೊಂಡು ಹೋಗಬೇಕು ? 29ನೇ ತಾರೀಖು ಹರಿಜನ ಮನೆಯನ್ನು ಕಿತ್ತು ಹಾಕಿದ್ದಾರೆ. ನಾನು ಒಬ್ಬ ಹರಿಜನರ ಬಗ್ಗೆ ಇಲ್ಲಿ ಮಾತನಾಡುತ್ತಿಲ್ಲ, ಯಾವುದೋ ಒಂದು ಊರಿನಲ್ಲಿ ಒಂದು ಮನೆ ಇರತಕ್ಕಂಥ ಲಿಂಗಾಯತನಾಗಲೀ, ಹರಿಜನ ಆಗಲೀ ಅವರಿಗೆ ಸೇರಿದ ವಿಚಾರವಲ್ಲ, ಒಂದು ಕುಟುಂಬಕ್ಕೆ ಒಬ್ಬ ವ್ಯಕ್ತಿ, ಒಬ್ಬ ಸನ್ಮಾರ್ಗದಲ್ಲಿ ಇರುವ ಸಂಸಾರಿಯನ್ನು ಕಾರಣಾಂತರದಿಂದ ಕೊಲೆ ಮಾಡುವುದಾದರೆ, ಸರ್ಕಾರ ಭೂಲೋಕದಲ್ಲಿ ಇದೆಯೇ ಎಂದು ಕೋಪ ಬಂತು. ನಾವು ಅಲ್ಲಿಗೆ ಹೋಗಿ, ಅವರು ವಾಸ ಮಾಡುವಂಥ ಗುಡಿಸಲನ್ನು ನೋಡಿದರೆ ಅದನ್ನು ನೆಲಸಮ ಮಾಡಿದ್ದಾರೆ. ಹರಳೆ ಸೊಪ್ಪು ಹಾಕಲಿಕ್ಕೆ ನೆಲವನ್ನು ಕೊಚ್ಚಿದ ಹಾಗೆ, ಆ ಜಾಗವನ್ನು

ಅಗೆದು ಹಾಕಿದ್ದಾರೆ. ಅಲ್ಲಿ ದೌರ್ಜನ್ಯದ ಪರಮಾವಧಿ ನಡೆದಿದೆ. ಇಟ್ಟಿಗೆ, ಕಲ್ಲು ಸಾಮಾನು ಎಲ್ಲಾ ತೆಗೆದುಕೊಂಡು ಹೋಗಿ ಒಂದು ಕಡೆ ಗುಡ್ಡೆ ಹಾಕಿ ಬಿಟ್ಟಿದ್ದಾರೆ. ಅಲ್ಲಿ ಸಾಮಾನು ಬಿದ್ದಿರುವುದನ್ನು ನೋಡಿದರೆ, ಆ ಜಾಗವನ್ನು ನಿನ್ನೆ ರಾತ್ರಿ ಅಗಿಸಿದ್ದು ಎಂದು ನಮ್ಮ ಕಣ್ಣಿಗೆ ಕಾಣುತ್ತದೆ. ಯಾರಾದರೂ ಅಗಿಸಿರಬಹುದು, ಎಂದು ಪೋಲೀಸ್ ಸ್ಟೇಷನ್‌ಗೆ ಹೋದೆವು, ಅಲ್ಲಿಯ ಜನ ಬಂದು ಕಣ್ಣೀರು ಸುರಿಸಿದರು ಅವರನ್ನು ಕೇಳಿದಾಗ, ನಮ್ಮ ಹತ್ತಿರ ಏನೂ ಕಂಪ್ಲೇಂಟ್ ಬಂದಿಲ್ಲ, ಯಾವ ಅರ್ಜಿಯ ಮೇಲೂ ನಾವು ಎನ್‌ಕ್ವೈರ್ ಮಾಡಿಲ್ಲ, ಏನು ನಡೆಯಿತೋ ಗೊತ್ತಿಲ್ಲ ಎಂದು ಅಲ್ಲಿದ್ದವರು ಹೇಳಿದರು. ಅಲ್ಲಿ ಬೋರ್ಡಿನಲ್ಲಿ 11 ಜನ ಎಂದು ಬರೆದಿತ್ತು, ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಇರಲಿಲ್ಲ. ಕೇಸ್ ರಿಜಿಸ್ಟರ್ ಮಾಡಿದ್ದಾರೆಯೋ ಎಂದು ಬರೆದಿದ್ದಾರೆಯೋ ಅಂತ ನೋಡಿದರೆ ಕ್ರೈಮ್ ನಂಬರ್ 28-72 ಅಂತ ಇದೆ. ಇದು ಜನವರಿ 72 ರಿಂದ ಆಗಸ್ಟ್ ತಿಂಗಳವರೆಗೂ ಆಗಬಹುದು. ಕ್ರಿಮಿನಲ್ ಕೇಸ್ ಯಾವ ರಿಜಿಸ್ಟರ್, ಯಾರ ಅರ್ಜಿಯ ಮೇಲೆ ಯಾರು ಡೈರೆಕ್ಷನ್ ಕೊಟ್ಟರು ಅಂಥದ್ದು ಇರಬೇಕಾಗಿತ್ತು. ಬರೀ 28—72 ಅಂದರೆ ಜನವರಿ ಯಿಂದ ಆಗಸ್ಟ್ 72ರ ವರೆಗೆ ಎಂದು ಅರ್ಥವಾಗುತ್ತದೆ, ಹಿಂದು ಮುಂದು ಮಾಡುವುದಕ್ಕೆ ಅವಕಾಶವಾಗುತ್ತದೆ. ಪೋಲೀಸಿನವರು ಚಮತ್ಕಾರ ಮಾಡುವುದು ಸುವೇದ್ಯವಾದ ವಿಚಾರ. ಈ ವಿಚಾರ ತಿಳಿದ ಮೇಲೆ ನಮ್ಮವರು ಕಣ್ಣು ಕೆಂಪು ಮಾಡಿದರು, ದುಃಖದಿಂದ ಇದ್ದರು, ಆಗ ನಾವು ಬಹಳ ಸೌಜನ್ಯದಿಂದ, ಜವಾಬ್ದಾರಿಯಿಂದ ಹತ್ತು ಮಾತು ಕೇಳುವುದಕ್ಕಿಂತ ಒಂದು ಮಾತು ಕೇಳೋಣ ಎಂದು, ನೀವು ಈಗಲಾದರೂ ಆ ಜಾಗಕ್ಕೆ ಬಂದು ನೋಡುವುದಕ್ಕೆ ಧೈರ್ಯವಿದೆಯೋ ಎಂದು ಕೇಳಿದೆವು. ಅವರು ನಮಗೆ ಡ್ಯೂಟಿ ಅಲಾಟ್ ಮಾಡಿಲ್ಲ, ಆ ಕಡೆ ಬೀಟ್ ಹಾಕಿಲ್ಲ ಹೇಗೆ ಬರುವುದು ಎಂದು ಹೇಳಿದರು. ಅಲ್ಲಿ ತಲೆ ಉರುಳುತ್ತಿದ್ದರೂ, ದಿಕ್ಕಿಲ್ಲದ ಜನ ಚೀರಾಡುತ್ತಿದ್ದರೂ, ಅಲ್ಲಿ ನೋಡುವವರು ದಿಕ್ಕೇ ಇಲ್ಲ. ಪೋಲೀಸ್ ಸ್ಟೇಷನ್‌ಗೆ ಹೋದರೆ ಈ ರೀತಿ ಹೇಳುತ್ತಾರೆ, ಇದರಿಂದ We can very well imagine how the police administration is going on in this country. ಆಗ ನಾನೇ ನಿಮ್ಮ ಕರ್ತವ್ಯಕ್ಕೆ ಚ್ಯುತಿ ಇಲ್ಲ, ಧೈರ್ಯ ವಿದ್ದರೆ ನಮ್ಮ ಜೊತೆಯಲ್ಲಿ ಬನ್ನಿ ಎಂದಾಗ, ಇಬ್ಬರು ಕಾನ್ಸ್‌ಟೇಬಲ್‌ಗಳು ಬಂದರು. ಒಬ್ಬ ಸೆಂಟ್ರಿ ಸ್ಟೇಷನ್ ಬಿಟ್ಟು ಹೋಗಲೇಬಾರದು ಎನ್ನುವುದು ಸಿದ್ಧಾಂತ. ಶಾಸಕರು ಸೆಂಟ್ರಿ ಇಲ್ಲದ ಹಾಗೆ ಕರೆದುಕೊಂಡು ಹೋದರು ಎಂದು ಕ್ರಿಮಿನಲ್ ಕೇಸ್ ಆಗುತ್ತದೆ ಎಂದು, ಆ ಸೆಂಟ್ರಿಯನ್ನು ಅಲ್ಲಿಯೇ ಬಿಟ್ಟು ಬಂದೆವು. ಅವರನ್ನು ನಾವು ಈ ನೆಲವನ್ನು ಯಾವಾಗ ಅಗೆಸಿದ್ದು ಇರಬಹುದು ಎಂದು ಕೇಳಿದೆವು, ಇವತ್ತು ಇರಬಹುದು ಸ್ವಾಮಿ, ಎಂದು ಹೇಳಿದರು. ಅಲ್ಲಿಂದ ಮನೆ ಇಲ್ಲಿ ಇರ ಬಹುದೇ ಎಂದು ಕೇಳಿದ್ದಕ್ಕೆ, ಮನೆ ನೋಡಿದ್ದೇವೆ ಎಂದು ಒಪ್ಪಿಕೊಂಡರು, ಮನೆಬಾಗಿಲು ಯಾವ ಕಡೆಗೆ ಇತ್ತು ಎಂದು ಕೇಳಿದ್ದಕ್ಕೆ, ಅವರು ಎತ್ತ ಕಡೆಗೋ ಒಂದು ಕಡೆ ಇರಬಹುದು ಎಂದು ಹೇಳಿದರು. ಪೋಲೀಸಿನವರಿಗೆ ಅಷ್ಟು ಭಯ ಹುಟ್ಟಿಸಿದ್ದಾರೆ. ಆ ಮನೆಯ ಬಾಗಿಲು ಯಾವ ದಿಕ್ಕಿಗೆ ಇದೆ ಎಂದರೆ, ಗೊತ್ತಿಲ್ಲ ಎನ್ನುವಷ್ಟು ಮಟ್ಟಿಗೆ ಪೋಲೀಸರಿಗೆ ಭಯ ಹುಟ್ಟಿಸಿದ್ದಾರೆ. ವಾಸದ ಮನೆ ಯನ್ನು ಹುಲ್ಲಿನ ಮನೆ ಎಂದು ಬರೆದಿದ್ದಾರೆ. ಅಲ್ಲಿ ಮನೆ ಇದೆಯೋ ಇಲ್ಲವೋ, ಬಾಗಿಲು ಇತ್ತೋ ಇಲ್ಲವೋ ಎಂದು ಕೇಳಿದರೆ, ರಿಪೋರ್ಟಿನ ಪ್ರಕಾರ ನಿಜಾಮುದ್ದೀನ್ ಕಿತ್ತುಹಾಕಿರುವುದು ಫಾರಂ ಹೌಸ್ ಎಂದು ಬರೆದಿದ್ದಾರೆ. ಹೊಲದ ಹತ್ತಿರ, ಬೀಜ ನೆನೆಯದೆ ಇರುವಹಾಗೆ, ದನಕರು ನೆನೆಯದೇ ಇರುವ ಹಾಗೆ, ಹೊತ್ತು ಮೀರಿದಾಗ ರಕ್ಷಣೆ ಪಡೆಯುವುದಕ್ಕೆ ಕಟ್ಟಿದಂಥ ಮನೆಗಳು. ಗಂಡ ಹೆಂಡರು ಮಲಗುವುದಕ್ಕೆ ಕಟ್ಟಿದಂಥ ಮನೆಗಳಲ್ಲ ಇವು. ಬಾಗಿಲಿಗೆ ಕುಂಕುಮ ಇಡುವುದಿಲ್ಲ ಇಂಥ ಮನೆಗಳು ಬಹಳ ಪುರಾತನವಾದುವು, ಇವುಗಳಿಗೆ ಫಾರಂ ಹೌಸ್ ಎಂದು ಹೇಳುತ್ತಾರೆ. ಇವತ್ತಿನ ದಿವಸ, ಈ ಹನುಮಯ್ಯ 60-40 ವರ್ಷದಿಂದ, ಕೊನೆಯಪಕ್ಷ 22-7-72 ಆ ಊರಲ್ಲಿ ದ್ದಾನೆಯೇ, ಹುಟ್ಟು ಮನೆ ಇದೆಯೇ, ಅಸಲು ಊರು ಎಷ್ಟು ದೂರದಲ್ಲಿತ್ತು, ಎನ್ನುವುದನ್ನು ಮತ್ತು ಇದು ಫಾರಂ ಹೌಸ್ ಅಥವಾ ಲಿವಿಂಗ್ ಹೌಸ್ ಎನ್ನುವುದು ಅಲ್ಲಿ ನೋಡಿದರೆ ವೇದ್ಯವಾಗು ತ್ತದೆ. ಹೋಮ್ ಮಿನಿಸ್ಟರವರಿಗೆ ಅರ್ಜಿಯನ್ನು 4-7-1972 ರಲ್ಲಿ ಕೊಟ್ಟರೆ, ಬೆಂಗಳೂರು ಸೂಪರಿಂಟೆಂಡೆಂಟ್ ಆಫ್ ಪೋಲೀಸ್‌ರವರ ತನಕ ಹೋಗಲಿಕ್ಕೆ 27 ದಿನವಾಗಿದೆ. ಇಂಥ ರೆಡ್ ಟೇಪಿಸಂ ಹೋಗಬೇಕು. ಪ್ರಾಣ ತೆಗೆಯುತ್ತಿದ್ದಾರೆ ಎಂದರೂ ಅರ್ಜಿಗಳು ಮಲಗಿಕೊಂಡು ಹೋಗುತ್ತಾ ಇರಬೇಕಾದರೆ ಇದನ್ನು ಎಂಥಹ ಅಡ್ಮಿನಿಸ್ಟ್ರೇಷನ್ ಎಂದು ಕರೆಯಬೇಕು ? I am least bothered whether that family belongs to Harijans or non-Harijans. I am concerned only with the method of administration and good administration. ಹೌಸಿಂಗ್ ವಿಷಯಕ್ಕೆ ಬಂದರೆ ಕರಾರುವಾಕ್ ಆಗಿ ಮಾತನಾಡುವವರು, ಕ್ರಿಸ್ಟಲ್‌ಕ್ಲಿಯರ್ ಆಗಿ ವಿಷಯ ತಿಳಿದುಕೊಂಡಿರುವವರು, ಏನೋ ಒಂದು ಕಾರಣದಿಂದ ಸಪ್ರೆಸ್

(ಶ್ರೀ ಕೆ. ಪ್ರಭಾಕರ್)

ಮಾಡುವುದು ಬೇಡ ಎಂದು ಸಾಕಷ್ಟು ಹೇಳಿದರೂ, ಡಿಬೇಟ್ ರೆಗ್ಯುಲೇಟ್ ಮಾಡುವುದಕ್ಕೆ ಇದ್ದಾರೆ ಎಂದರೆ-ಸತ್ಯದ ಕೊಲೆ ಮಾಡಿದಂಥಾಗುತ್ತದೆ. ರೆಗ್ಯುಲೇಷನ್ Regulation of debate means never to supress justice and facts. ಪೋಲೀಸ್ ಸ್ಟೇಷನ್‌ಗೆ ಒಂದು ಮೀಟರ್ ಜಾಗದಲ್ಲಿ ನಡೆದ ದೌರ್ಜನ್ಯದ ಹಿನ್ನಲೆ ಏನು ? ಪೋಲೀಸನವರನ್ನು ಹೆದರಿಸಿ ಇಟ್ಟುಬಿಟ್ಟಿದ್ದಾರೆ, ಅವರೂ ಇದರಲ್ಲಿ ಕೊಲ್ಯೂಡ್ ಆಗಿದ್ದಾರೆ. I am concerned with the spirit of good administration. ಪೋಲೀಸರು ನಮ್ಮ ಕೈಯಲ್ಲಿ ಸಿಕ್ಕಿಬಿಟ್ಟಗೆ ಮುಗಿಸಿಬಿಡುತ್ತೇವೆ ಎಂದು ನಮ್ಮ ಕೈಯಲ್ಲಿ ಏನೂ ಇಲ್ಲ ಎಂದು ಅಂಡರ್ ಸೆಕ್ರೆಟರಿಗೆ ಬರೆದರು. There are seven points of importance misleading the situation and misleading even the Chief Minister. ಚೀಫ್ ಮಿನಿಸ್ಟರ್ ಕೈಯಲ್ಲಿ ಕೊಟ್ಟಿದ್ದಾರೆ, ಅವರು ಏನು ಸಾಧನೆ ಮಾಡಿದ್ದಾರೆ ಎನ್ನುವುದು ಫೈಲ್ ನೋಡಿದರೆ ಸಿಕ್ಕುತ್ತದೆ. ಆದ್ದರಿಂದ ಅಲ್ಲಿಗೆ ಬೇಗ ಎನ್‌ಕ್ವೈರಿ ಇನ್‌ಸ್ಟಿಟ್ಯೂಟ್ ಮಾಡಬೇಕು. ಹರಿಜನರಿಗೆ ಸೌಲಭ್ಯಗಳನ್ನು ಕೊಡತಕ್ಕದ್ದು ಗೊತ್ತಿದೆ, ಆದರೆ ಇಂಥಾದ್ದು ಇನ್ನೊಂದು ಕಡೆ ಆಗಬಾರದು ಎಂದು ಹೇಳುತ್ತಿದ್ದೇನೆ. There should be voice of law. there should be fear of law. ಇವತ್ತಿನ ಪೇಪರ್‌ನಲ್ಲಿ ಓದಿದ್ದೇನೆ, ದಾವಣಗೆರೆಯಲ್ಲಿ ನಡೆದಿರತಕ್ಕ ವಿಚಾರ, ಏಟು ಬಿದ್ದಿರುವವರನ್ನು ಆಸ್ಪತ್ರೆಗೆ ಸಾಗಿಸುವಾಗ ಜನಗಳ ಗುಂಪು ಅಡ್ಡ ಹಾಕಿದ್ದರಿಂದ ಚಿತ್ರದುರ್ಗದ ಆಸ್ಪತ್ರೆಗೆ ಸಾಗಿಸಲಾಯಿತು ಎಂದು ಇದೆ. ಇನ್ನೊಸೆಂಟ್ ಪೀಪಲ್‌ಗೆ ಮಾಡಿರತಕ್ಕ ಕೊಲೆ ಎಂದರೆ, ಅಲ್ಲಿಯ ಜನ ನಮ್ಮನ್ನು ನಿಮ್ಮ ಜೊತೆಯಲ್ಲಿ ಬೆಂಗಳೂರಿಗೆ ಕರೆದು ಕೊಂಡು ಹೋಗಿ ಎಂದು ಹೆದರಿ, ಸಾಯಿಸಿಬಿಡುತ್ತಾರೆ ಎಂದು ಕಣ್ಣೀರು ಹಾಕುತ್ತಾರೆ. ಪೋಲೀಸಿನವರು ಇದ್ದರೂ ಯಾರೂ ಕೊಂದು ಹಾಕುವುದಿಲ್ಲ, ಕೊಂದು ಹಾಕಿದರೂ ನಾವು ಇರುತ್ತೇವೆ, ಕೊಂದು ಹಾಕಿದ ಮೇಲೆ ಇವರು ಇರುವುದು ಏನು? ಒಂದು ಒಳ್ಳೆಯ ಮಾತು ಅವರ ಬಾಯಿಂದ ಬರುವುದಿಲ್ಲ ಎಂದು ಹೇಳುತ್ತೇನೆ. ಯಾರಾದರೂ ಬಂದು ಕೇಳಿ, ಬಾ ಎಂದರೆ ಬರುತ್ತೇವೆ ಎಂದು ಹೇಳುತ್ತಾರೆ. "ಲುಕ್ ಅಟ್ ದಿ ಟ್ರ್ಯಾಜಿಡಿ. ಷುಡ್ ದೆ ನಾಟ್ ಹ್ಯಾವ್ ಎನಿ ಸೆನ್ಸ್?" ಇಬ್ಬರು ಇದ್ದಾರೆ, ತೊಂದರೆಕೊಟ್ಟಾರು ಎಂದು ಹೆದರಿಬಿಡುತ್ತಾರೆ, ಅವರ ಬಾಯೇ ಬರಲಿಲ್ಲ. ರಕ್ಷಣೆ ಎನ್ನುವ ಎಲಿಮೆಂಟ್ ಪೋಲೀಸ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಯಾವರೀತಿ ಅಳಿಸಿ ಹೋಗಿದೆ ಎಂದರೆ, ಸವಕಲ ಕಾಸು ಆದ ಹಾಗೆ ಆಗಿದೆ. ಪರ್ಸನಲ್ ಪ್ರೆಜುಡಿಸ್ ಅಲ್ಲ, ತತ್ರಾಪಿ ಮುಖ್ಯಮಂತ್ರಿಗಳು ತಮ್ಮ ಕಾಲದಲ್ಲಿ ಅನ್ಯಾಯವಾಗಿದೆ ಎಂದು ಹೇಳಿದರೆ, ಅನ್ಯಾಯವನ್ನು ಯಾರೇ ಮಾಡಿರಲಿ, ಅವರ ಮೇಲೆ ಎನ್‌ಕ್ವೈರಿ ಮಾಡಿ, ಸಿವಿಲ್ ಕೇಸ್ ಹಾಕಬೇಕು. ಹರಿಜನರು ವಿಕ್ಟಿಂಸ್ ಆದಾಗ ಕಾನೂನಿನ ರಕ್ಷಣೆ ಕೊಡಬೇಕು, ದುಡ್ಡು ಕೊಡಬೇಕು. ಮಾಕ್ಸಿಮಂ ದುಡ್ಡನ್ನು ಕೊಟ್ಟು, ಈ ಡಿಪಾರ್ಟ್‌ಮೆಂಟ್ ಕಾರ್ಯ ಮಾಡುವುದರ ಜೊತೆಗೆ ಪೋಲೀಸ್ ಅಡ್ಮಿನಿಸ್ಟ್ರೇಷನ್ ಅನ್ನು ದುರ್ವ್ಯವಸ್ಥೆಗೆ ಹೋಗಬಾರದು ಎನ್ನುವ ರೀತಿಯಲ್ಲಿ ಎಸ್ಟಾಬ್ಲಿಷ್ ಮಾಡಬೇಕು. ಇದರ ಬ್ಯಾಕ್‌ಗ್ರೌಂಡ್ ಏನೆಂದರೆ, ಲಿಂಗಪ್ಪನವರು ನಮ್ಮ ಊರಿನ ಕಾಯಂ ಮನುಷ್ಯ. ಹಕೀಮು, ಚೌಡೇಗೌಡ ಇವರು ಚನ್ನಪಟ್ಟಣದವರು, ಹತ್ತು ಗುಂಟೆ ಜಮೀನನ್ನು ಐದು ಸಾವಿರ ರೂಪಾಯಿಗೆ ಬರೆಸಿಕೊಂಡಿದ್ದಾರೆ, ಬಡವರ ದುಡ್ಡು ನಾಕ್ ಆಫ್ ಮಾಡಬೇಕು, ಮಾಡಿದ್ದಾರೆ; ಇಂಥ ದೌರ್ಜನ್ಯ ಆಗಬಾರದು ಎಂದು ಪ್ರಾರ್ಥನೆ ಮಾಡಿಕೊಂಡು, ಇದರ ಬಗ್ಗೆ ಅಂಕಿಅಂಶಗಳನ್ನು ನೇರವಾಗಿ ಕೊಡುವುದಕ್ಕೆ ಸಿದ್ಧನಿದ್ದೇನೆ ಎಂದು ಹೇಳುತ್ತೇನೆ. ಒಲ್ಲೇ ಕಣ್ಣು ಒರೆಸುತ್ತಾರೆ ನಂಬಿಕೆ ಇಲ್ಲ ಎನ್ನುವುದಿದ್ದರೆ ಇಷ್ಟೊಂದು ಜನ ಹೇಳಬೇಕಾದರೆ ನಿಜವಾಗಿಯೂ ಅದರಲ್ಲಿ ಸತ್ಯಾಂಶ ಇದೆಯೆಂದು ಕೂಲಂಕುಷವಾಗಿ ಪರಿಶೀಲನೆಮಾಡಿ ಹರಿಜನರೇ ಆಗಲೀ, ಬೇರೆ ಯಾವ ಜನಾಂಗದವರೇ ಆಗಲೀ ಒಂದು ಮನೆ ಇದ್ದರೆ, ಅವರಿಗೆ ಇಂಥ ಒಂದು ಪರಿಸ್ಥಿತಿ ಬರಬಾರದು. ಪೋಲೀಸಿನವರು ಬರೆದು ಕಳುಹಿಸಿದ್ದನ್ನು ಓದುವ ಕಾಲ ಹೋಯಿತು. ಈಗ ಅರಸ್‌ರವರು ಇರುತ್ತಾರೆ ಎನ್ನುವ ಬಿಸಿ ಬರಬೇಕು. ನ್ಯಾಯ ದೊರಕಬೇಕು ಹರಿಜನರ ಮನೆ ಕಿತ್ತುಹಾಕಿದ್ದಾರೆ ಎನ್ನುವುದು I am concerned with the protection of weak and weaker sections. Justice ಬರಬೇಕು. ಅಧ್ಯಕ್ಷಣಿಯವರು ನನ್ನನ್ನು ಗದರಿಕೊಂಡು ಕಂಡರೂ ಕೂಲಂಕಷವಾಗಿ ಕೇಳಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಹರಿಜನ ವಿರುದ್ಧವಾಗಿ ಸಿವಿಲ್ ಕೋರ್ಟ್ ಡಿಕ್ರಿ ಪಡೆದು ಕೊಂಡಿದ್ದಾರೆ ಎಂದು ಹೇಳುತ್ತಾರೆ. ಡಿಕ್ರಿ ಪಡೆದುಕೊಂಡಿರುವುದನ್ನು ಹೇಗೆ 10 ವರ್ಷಗಳ ಕಾಲ ಹರಿಜನ ಹೆಸರಿಗೆ ಪಹಣಿ ದಾಖಲೆ ಇದ್ದುದನ್ನು 5 ವರ್ಷಗಳಲ್ಲಿ ಬದಲಾಯಿಸಿಕೊಂಡಿದ್ದಾರೆ? ಪರಮನೆಂಟ್ ಇಂಜಕ್ಷನ್ ಅವರು ಹಾಕಿಕೊಂಡಿದ್ದಾರೆ. ದಾವಾ ಹಾಕುವ ಕಾಲದಲ್ಲಿ ಸ್ವಾಧೀನದಲ್ಲಿ

ತೋರಿಸಿಬಿಟ್ಟರೆ ಯಾರು ಧಾವಾ ಹಾಕುತ್ತಾರೆ ಅವರಿಗೆ ಸಿಕ್ಕುವುದಿಲ್ಲ. ಹರಿಜನ ದಾವಾ ಹಾಕಿಲ್ಲ ಹೆಸರಿಗೆ ಪಹಣಿ ದಾಖಲೆ ಇಲ್ಲ ಅವರಿಗೆ ವಜಾ ಆಗಿದೆ ಇಂಜಕ್ಷನ್ ವಜಾ ಆಗಿದೆ ನೇರವಾಗಿ ಕಾರ್ಯಕ್ರಮ ತೆಗೆದುಕೊಂಡು ಗುಡಿಸಲು ಹೊಡೆದು ಹಾಕಿದ್ದಾರೆ. ಪಹಣಿಯಲ್ಲಿ 10 ವರ್ಷಗಳು ಗೇಣಿದಾರ ಎಂದು ಹರಿಜನರ ಹೆಸರು ಇದ್ದಮೇಲೆ ಯಾವ ಕಾರಣಕ್ಕಾಗಿ ಅದನ್ನು ಬದಲಾಯಿಸಿದರು ? ತಹಸಿಲ್ದಾರ್ ಆರ್ಡರ್ ಇತ್ತೇ ? ಕೋರ್ಟಿನ ಮುಖಾಂತರ ಟೆನೆನ್ಸಿ ಆಕ್ಟ್ ಮುಖಾಂತರ ಎವಿಕ್ಷನ್ ಮಾಡಿ ಸ್ವತ್ತು ಸ್ವಾಧೀನ ಪಡೆದುಕೊಂಡಿರೇ ? ಬದಲಾಯಿಸಿಕೊಂಡರೇ ? ಇದೆಲ್ಲಾ ಶ್ಯಾನುಭೋಗರು ಮಾಡಿರತಕ್ಕ ಕೆಲಸ. ಇದರಿಂದ ರಾಜ್ಯದಲ್ಲಿ ನೂರಾರು ಜನ ತಲೆಹೊಡಿಸಿ ಕೊಂಡಿದ್ದಾರೆ; ಸಾಗರದಲ್ಲಿ 50 ಜನ ಜೈಲಿಗೆ ಹೋಗಿದ್ದಾರೆ. ನೆನ್ನೆ ಕೂಡ 22 ಜನ ಅರೆಸ್ಟ್ ಆಗಿದ್ದಾರೆ. ಇದು ಪಹಣಿ ಹಗರಣ. 4—5 ವರ್ಷಗಳಲ್ಲಿ ಪಹಣಿ ಬದಲಾಯಿಸಿದ್ದಾರೆ. ಕ್ರಿಮಿನಲ್ ಪ್ರೊಸೀಜರ್ ಕೋಡು 145 ನೇ ಸೆಕ್ಷನ್ ಪ್ರಕಾರ ಜಮೀನ್ ಪ್ರವೇಶ ಮಾಡಕೂಡದು, ಎಂದು ಹೇಳಿದರೂ ಅವರು ಉತ್ತಿದ್ದಾರೆ, ಪೈರು ಬೆಳೆಸಿದ್ದಾರೆ. ಇದಕ್ಕೆಲ್ಲಾ ಪಹಣಿ ಬದಲಾವಣೆ ಮಾಡಿದ್ದೇ ಮುಖ್ಯ ಕಾರಣ ತಲೆಗೆ ಕಲ್ಲು ಹಾಕಿದವರು ಶಾನುಭೋಗರು. ಇದಕ್ಕೆ ಹಿನ್ನಲೆ ಇದೆ. ಇದರ ಮೂಲ ಹುಡುಕದೇ ಹೋದರೆ ಪರಿಹಾರ ಕಂಡು ಹಿಡಿಯುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಹಿಂದೆ ಒಂದು ಸಂಪ್ರದಾಯ ಆಗಿದೆ. ಎಲ್ಲಿಯಾದರೂ ಗಲಾಟೆ ಆಗಿ ಗಲಾಟೆ ನಡೆದಮೇಲೆ ಪೋಲೀಸ್ ಬಂದು ಪೋಲೀಸಿರಿಂದ ಬಂದ ರಿಪೋರ್ಟು ಏನಿದೆ ಅದನ್ನೇ ಸಭೆಗೆ ಓದುವ ಸಂಪ್ರದಾಯ ಹಿಂದಿನ ಸರ್ಕಾರದಿಂದ ಬಂದಿದೆ. ಖುದ್ದಾಗಿ ಹೋಗಿ ಪರಿಶೀಲನೆಮಾಡಿ ಎಲ್ಲಿಯಾದರು ಅನ್ಯಾಯ ನಡೆದ್ದಿದರೆ ಅದನ್ನು ಸರಿಪಡಿಸಬೇಕೆಂದು ಈ ದಿನ ಸಲಹೆ ಮಾಡುತ್ತೇನೆ. ಪೋಲೀಸರ ರಿಪೋರ್ಟು ಆಧಾರದಮೇಲೆ ಅಭಿಪ್ರಾಯ ಇಟ್ಟುಕೊಳ್ಳಬೇಡಿ. ಪೋಲೀಸ್ ರಿಪೋರ್ಟು ಬಂದಮೇಲೆ ಯಾರಾದರೂ ನಾನ್ ಅಫಿಸಿಯಲ್ಸ್‌ನ್ನು ಕಳುಹಿಸಿ ಅಥವಾ ಮಂತ್ರಿಗಳನ್ನು ಕಳುಹಿಸಿ ಅವರಿಗೆ ಕಾಲಾವಕಾಶ ಇಲ್ಲದಿದ್ದರೆ ಎಂ. ಎಲ್. ಎ. ಕಳುಹಿಸಿ ಸ್ಥಳ ಪರಿಶೀಲನೆ ಮಾಡಿಕೊಂಡು ಬರಲಿ. ಅದು ಬಿಟ್ಟು ಪೋಲೀಸರ ರಿಪೋರ್ಟನ್ನು ಓದುವುದು 25 ವರ್ಷಗಳಿಂದ ಏನು ಬಂದಿವೆ, ಅದು ಬರೀ ಚಾರ್ಜ್‌ಷೀಟ್, ಸುಳ್ಳು ಕೇಸು ಹಾಕುವುದು ಇಲ್ಲಿ ಪೋಲೀಸರ ರಿಪೋರ್ಟು ಓದಿದ ಮೇಲೆ ಅದು ಎಲ್ಲಾ ಪತ್ರಿಕೆಗಳಲ್ಲಿ ಬರುವುದು ಸಾಮಾನ್ಯ ಜನರ ಅಹವಾಲನ್ನು ಪೋಲೀಸರು ಕೇಳುವುದಿಲ್ಲ. ಸಾಮಾನ್ಯ ಜನರನ್ನು ಮಾತನಾಡಿಸ ಬಹುದು; ಆದರೆ ಪೋಲೀಸರಿಗೆ ಹೆದರಿಕೊಂಡು ಏನು ಪರಿಸ್ಥಿತಿಯಾಗಿದೆ ಎಂದರೆ ಪೋಲೀಸರು ಯಾರನ್ನು ಬೇಕಾದರೂ ಮಾತನಾಡಿಸಬಹುದು ; ಆದರೆ ಪೋಲೀಸ್ ಕ್ಲಾಸ್ ವರ್ಗ ಏನಿದೆ ಅವರನ್ನು ಮಾತನಾಡಿಸುವುದು ಕಷ್ಟವಾಗಿದೆ. ತಮ್ಮ ಕಾಲದಲ್ಲಿ ಸಿ.ಬಿಐ. ನಿಂದ ಎನ್‌ಕ್ವೈರಿ ಆಗಿ ರಿಪೋರ್ಟ್ ಆಗಿರುವವರಿಗೆ ಉನ್ನತ ಸ್ಥಾನ ಕೊಟ್ಟಿದ್ದೀರಿ. ಆದ್ದರಿಂದ ಪೋಲೀಸ ಇಲಾಖೆ ಏನಾಗಿದೆ ?

ಅಧ್ಯಕ್ಷರು.—ಪೋಲೀಸ್ ಡಿಮ್ಯಾಂಡ್ ಬಂದಾಗ ಈ ವಿಷಯದ ಮೇಲೆ ಮಾತನಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ಮುಂದೆ ಇಂಥ ಗಂಡಾಂತರ ಬಂದಾಗ, ತೊಂದರೆ ಬಂದಾಗ ಅರಿಕೆಮಾಡಿಕೊಳ್ಳುತ್ತೇನೆ. ತಾವೇ ಖುದ್ದಾಗಿ ಹೋಗಿ ಪರಿಶೀಲನೆ ಮಾಡಬೇಕು. ಪೋಲೀಸ್ ಚಾರ್ಜ್‌ಷೀಟ್ ಪೋಲೀಸ್ ಎಫ್. ಐ. ಅರ್. ಮೇಲೆ ನಂಬಬೇಡಿ ?

ಶ್ರೀ ಎಚ್. ಜಿ. ಚೆನ್ನಪ್ಪ.—ನಾನು ಹೇಳುವುದು ಇಷ್ಟೇ. ಕೋರ್ಟಿನ ಆರ್ಡರ್ ಅವನ ಪರವಾಗಿ ಆಗಿರಬಹುದು. ಕಾನೂನು ರೀತಿ, ಪೋಲೀಸ್ ಮುಖಾಂತರ ಸ್ವತ್ತನ್ನು ಪಡೆದುಕೊಳ್ಳಬಹುದಿತ್ತು ಏಕಂದರೆ ಹೋಗಿ ದೌರ್ಜನ್ಯ ನಡೆಸಿರುವುದು ಸರಿಯಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಈಗ ಶ್ರೀಮಾನ್ ಪ್ರಭಾಕರ್‌ರವರು ಹೇಳಿದರು, ಅವರ ಮಾತಿಗೆ ರೆಫರ್ ಮಾಡುತ್ತೇನೆ ಎಲ್ಲಾ ವಿಷಯವನ್ನು ಕೂಲಂಕಷವಾಗಿ ಹೇಳಿದ್ದಾರೆ ಮತ್ತು ಯಾರೇ ಆಗಲಿ ಹರಿಜನರೇ ಆಗಲಿ, ಹರಿಜನೇತರರಾಗಲಿ, ಬಡವರು ಆದವರಿಗೆ ಯಾರಿಗೆ ಸ್ಥಳದಲ್ಲಿ ಹೆಚ್ಚು ಬೆಂಬಲ ಇರುವುದಿಲ್ಲ ಅಂಥ ಎಲ್ಲಾ ಜನರಿಗೂ ಇಂಥ ಒಂದು ಅನ್ಯಾಯ ನಡೆಯಬಹುದು ಅದರಲ್ಲೂ ಭೂಮಿ ಸಂಬಂಧವಾಗಿ ವಿಚಾರ ಬಂದರೆ ಹೀಗಾಗುತ್ತದೆ ಈ ಕೇಸುಗಳನ್ನು ಹಾಕಿರುವುದು ಕ್ರೈಮ್ ನಂಬರ್ 28-72 ಎಂದರು ಕೇಸ್ ಹಾಕಿರುವುದು 26-7-72ರಲ್ಲಿ ಅವರ ವರದಿ ಪ್ರಕಾರ ಇನ್‌ವೆಸ್ಟಿಗೇಷನ್ ನಡೆದು 27ನೇ ತಾರೀಖಿನ ದಿವಸ ಕೇಸನ್ನು ದಾಖಲೆ ಮಾಡಿದ್ದಾರೆ ಆದುದರಿಂದ ಇದನ್ನು ಮೇಲಿಂದ ಓದಿಕೊಂಡಿದ್ದರೆ ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ಇದು ಮುನ್ಸಿಫ್ ಕೋರ್ಟು ತೀರ್ಮಾನ ಎಂದು ಶ್ರೀಮಾನ್ ಚೆನ್ನಪ್ಪನವರು ಹೇಳಿದಹಾಗೆ, ಮುನ್ಸಿಫ್ ಕೋರ್ಟಿನಲ್ಲಿ ತೀರ್ಮಾನವಾಗಿದೆ ತಿಮ್ಮಪ್ಪನವರು ಕೂಡ ಹೀಗಾಗುತ್ತದೆ ಎಂದು ಹೇಳಿದರು ವ್ಯವಹಾರಿಕವಾಗಿ ಹೀಗೆ ಆಗುವುದಿಲ್ಲ ಎಂದು ನಾನು ಹೇಳುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.— ಅಪ್‌ಲೇಟ್ ಕೋರ್ಟಿನಲ್ಲಿ ಅಪೀಲ್ ಇದೆ.

ಶ್ರೀ ಡಿ. ದೇವರಾಜ್ ಅರಸ್.—ಸ್ಟೇ ಬಂದಿಲ್ಲವಲ್ಲ ? ಮೇಲಿನ ಮುನ್ಸಿಫ್ ಕೋರ್ಟಿನ ಆರ್ಡರ್‌ಗೆ ಸ್ಟೇ ಕೊಟ್ಟಿದ್ದಾರೆಯೇ ?

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ಟೇ ಕೊಡಬೇಕೇ ಅಥವಾ ಬೇಡವೇ ಎನ್ನುವುದಕ್ಕೆ 8ನೇ ತಾರೀಖಿಗೆ ಮುಂದೆ ಹಾಕಿಕೊಂಡಿದ್ದಾರೆ.

† ಶ್ರೀ ಡಿ. ದೇವರಾಜ್ ಅರಸ್.—ಸ್ಟೇ ಕೊಟ್ಟರೆ ಆಮೇಲೆ ನೋಡೋಣ. ಗುಡಿಸಲು ತೆಗೆದ ಮಾತ್ರಕ್ಕೆ ಎಲ್ಲಾ ಹೋಗುವುದಿಲ್ಲ ಯಾರ ಅಡ್ವೈಸ್ ಮೇಲೆ ಮಾಡಿದ್ದಾರೆ. ಆ ಮಾತು ಬೇರೆ ಸ್ಟೇ ಕೊಡುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. The Position as it is ನಮಗೆ ಕಾಣುತ್ತಾ ಇರತಕ್ಕದ್ದು ಮುನ್ಸಿಫ್ ಕೋರ್ಟಿನಲ್ಲಿ ಇದು ತೀರ್ಮಾನವಾಗಿದೆ. ಆ ತೀರ್ಮಾನದ ರೀತ್ಯ ಪ್ರೊಸೀಡ್ ಆಗುತ್ತದೆ ಎಂದು ಹೇಳುತ್ತಿದ್ದೇನೆ.

3–00 P.M.

ಲೀಗಲ್ ಆಗಿ ಇವರ ಪೊಸಿಷನ್ ಏನಿದೆಯೋ ಅದು ಗೊತ್ತಿಲ್ಲ. ನಮಗೆ ಗೊತ್ತಿರುವ ಹಾಗೆ ಮುನ್‌ಸೀಫ್ ಕೋರ್ಟಿನಲ್ಲಿ ಒಂದು ತೀರ್ಮಾನವಾಗಿದೆ, ಇದರ ಮೇಲೆ ಮಾನ್ಯ ಸದಸ್ಯರು ಅಪೀಲು ಹೋಗಿದ್ದಾರೆ ಎಂದು ಹೇಳುತ್ತಾರೆ. ಇದರಲ್ಲಿ ಮಾನ್ಯ ಸದಸ್ಯರಿಗೆ ಒಂದು ವಿಚಾರ ಹೇಳಬೇಕಾಗಿದೆ. ಹಿಂದೆ ನಮ್ಮ ರಾಜ್ಯದಲ್ಲಿ ಶ್ಯಾನುಭೋಗರು ಹಳ್ಳಿಗಳಲ್ಲಿ ಲೆಕ್ಕಗಳನ್ನು ಬರೆಯುತ್ತಿದ್ದರು ಅದೇ ಕಾಲದಲ್ಲಿ ಕೆಲವರು ಪಹಣಿ ಲೆಕ್ಕವನ್ನು ಸರಿಯಾಗಿ ಬರೆಯುತ್ತಿಲ್ಲ, ಎಂದು ದೂರುಗಳು ಬರುತ್ತಿದ್ದವು. ಆದರೆ ಆಗಿನ ಶ್ಯಾನುಭೋಗರುಗಳು ಲೆಕ್ಕ ಬರೆಯುವಾಗ ಯಾರೂ ಟೆನೆಂಟುಗಳಿಗೆ ಅನುಕೂಲವಾಗುವಂತೆ ಪಹಣಿ ಬರೆಯುತ್ತಿರಲಿಲ್ಲ ಮತ್ತು ಅವರು ಬರೆಯುವ ಪಹಣಿ ಲೆಕ್ಕವೆಲ್ಲಾ ಟೆನೆಂಟುಗಳಿಗೆ ವಿರೋಧವಾಗೇ ಇರುತಿತ್ತು ಮತ್ತು ಅದು ಲ್ಯಾಂಡ್ ಲಾರ್ಡ್ಸ್‌ಗಳಿಗೆ ಅನುಕೂಲವಾಗುವ ಹಾಗೆ ಬರೆಯುತ್ತಿದ್ದರು. ಎಲ್ಲೋ ಕೆಲವರು ಟೆನೆಂಟುಗಳಿಗೆ ಅನುಕೂಲವಾಗಿ ಲೆಕ್ಕ ಬರೆಯುತ್ತಿದ್ದರು. ಟೆನೆಂಟ್ಸ್‌ಗಳಿಗೆ ಅನುಕೂಲವಾಗಿ ಬರೆಯುವವರು ಬಹಳ ಕಡಿಮೆಯಾಗಿದ್ದರು. ಶೇಕಡ ನೂರರಲ್ಲಿ ಹತ್ತು ಕೇಸುಗಳಲ್ಲಿ ಮಾತ್ರ ಟೆನೆಂಟುಗಳಿಗೆ ಅನುಕೂಲವಾಗಿ ಲೆಕ್ಕಗಳನ್ನು ಬರೆಯುತ್ತಿದ್ದರು. ಈಗ ಈ ಶ್ಯಾನುಭೋಗರುಗಳನ್ನು ತೆಗೆಯಬೇಕು ಎಂದು ಹೇಳುತ್ತಿದ್ದರು. ಇವರನ್ನು ತೆಗೆದು ಈಗ ವಿಲೇಜು ಅಕೌಂಟೆಂಟುಗಳು ಎಂದು ನೇಮಕ ಮಾಡಿದ್ದೇವೆ. ಇದರಲ್ಲಿ ಎಷ್ಟೋ ಜನರು ಕೆಲಸಕ್ಕೆ ಬಂದಿದ್ದಾರೆ. ಇವರುಗಳು ಚೆನ್ನಾಗಿ ಲೆಕ್ಕಗಳನ್ನು ಬರೆಯುತ್ತಾರೆ ಎಂದು ನನ್ನ ಆಸೆ. ಆದರೆ ಇದೂ ಕೂಡ ಸರಿಯಾಗಿಲ್ಲ ಎಂದು ಹೇಳುತ್ತಾರೆ. ಎಷ್ಟೋ ಕಡೆಗಳಲ್ಲಿ ನನಗೆ ತಿಳಿದಿರುವ ಹಾಗೆ ವಿಲೇಜು ಅಕೌಂಟೆಂಟುಗಳು ಕೆಲಸಕ್ಕೇ ಬಂದಿಲ್ಲ. ಆದೂ ಅವರು ಇರುವ ಊರಿನಲ್ಲೇ ಹಾಕಿದರೆ ಕೆಲಸ ಮಾಡುತ್ತೇವೆ ಇಲ್ಲದೆ ಇದ್ದರೆ ಬರುವುದಿಲ್ಲ ಎಂದು ಹೇಳುತ್ತಾರೆ. ಹೀಗಾಗಿ ಅನೇಕ ಕಡೆಗಳಲ್ಲಿ ವಿಲೇಜು ಅಕೌಂಟೆಂಟುಗಳ ಕೆಲಸಗಳೇ ಖಾಲಿ ಬಿದ್ದಿವೆ. ಕೆಲಸಕ್ಕೆ ಬಂದಿರುವವರೂ ಕೂಡ ಸರಿಯಾಗಿ ಲೆಕ್ಕಗಳನ್ನು ಬರೆಯುತ್ತಿಲ್ಲ ಎಂದು ಇಲ್ಲಿ ಹೇಳುತ್ತಾರೆ. ಹೀಗಾದರೆ ಈ ಲೆಕ್ಕಗಳನ್ನು ಯಾರು ಬರೆಯಬೇಕು ಎನ್ನುವುದು ಇನ್ನೂ ನಮಗೆ ಅರ್ಥವಾಗುತ್ತಿಲ್ಲ. ಇದು ನಮಗೆ ಅಡ್ಮಿನಿಸ್ಟ್ರೇಷನ್‌ನಲ್ಲಿ ಇರುವ ನಿಜವಾದ ತೊಂದರೆ. ಇದಕ್ಕೆ ತಮ್ಮೆಲ್ಲರ ಸಹಾಯ ನನಗೆ ಬೇಕಾಗಿದೆ. ಇದರ ಬಗ್ಗೆ ಏನು ಮಾಡಬೇಕು ಎನ್ನುವುದಕ್ಕಾಗಿ ನೀವು ಹಾಗೂ ನಾವು ಇಬ್ಬರೂ ಸೇರಿ ಯೋಚನೆ ಮಾಡಬೇಕಾಗಿದೆ. ಒಂದು ವೇಳೆ ಎಂ.ಎಲ್.ಎ.ಗಳೇ ಆಯಾ ಸ್ಥಳಗಳಲ್ಲಿ ಇರುವವರಾದುದರಿಂದ ಅವರ ಮೂಲಕ ಲೆಕ್ಕಗಳನ್ನು ಬರೆಸೋಣವೆಂದರೆ ಇದರಲ್ಲಿ ಮಾನ್ಯ ಸದಸ್ಯರಾದ ಶ್ರೀ ದೇವೇಗೌಡರು ಅವರಿಗೆ ಬೇಕಾದ ಗೌಡರ ಹೆಸರುಗಳನ್ನು ಹೆಚ್ಚಾಗಿ ಲೆಕ್ಕದಲ್ಲಿ ಬರಿಸಿಟ್ಟಿದ್ದಾರೆ ಎಂದು ಹೇಳುತ್ತಾರೆ. ಇಲ್ಲವೇ ಅಲ್ಲಿ ಒಬ್ಬರು ಲಿಂಗಾಯಿತರು ಎಂ.ಎಲ್.ಎ ಇದ್ದರೆ ಅವರು ಲಿಂಗಾಯಿತರ ಹೆಸರುಗಳನ್ನು ಹೆಚ್ಚಾಗಿ ಬರಿಸಿದರು ಎಂದು ಹೇಳುತ್ತಾರೆ, ಇಲ್ಲವೇ ಒಕ್ಕಲಿಗರು ಎಂ.ಎಲ್.ಎ. ಇರುವ ಜಾಗದಲ್ಲಿ ಅವರೆಲ್ಲಾ ಒಕ್ಕಲಿಗರ ಹೆಸರನ್ನು ಹೆಚ್ಚು ಬರಿಸಿದ್ದಾರೆ ಎಂದು ಈ ರೀತಿಯಾದ ಒಂದು ಜಾತಿಯ ಗೊಂದಲಗಳಲ್ಲಿ ಸಿಕ್ಕಿಕೊಂಡು ಇವೆಲ್ಲಾ ಆಗ ಶುರುವಾಗುತ್ತದೆ, ಇದರಿಂದಾಗಿ ಇವರ ಮೇಲೆ ನಾವು ಯಾವುದನ್ನೂ ಮಾಡಬೇಕು ಎನ್ನುವುದು ಗೊತ್ತಿಲ್ಲ, ಇದನ್ನು ಬಿಟ್ಟು ಆಯಾ ಊರಿನಲ್ಲಿರುವ ಪಂಚಾಯಿತಿಗಳನ್ನು ನಂಬೋಣವೇ ಎಂದರೆ ಇದರಲ್ಲಿ ತಮಗೆಲ್ಲಾ ಗೊತ್ತಿರುವ ಹಾಗೆ ಕೆಲವು ಪಂಚಾಯಿತಿಗಳಲ್ಲಿ ಮುಖಂಡರುಗಳು ಸೇರಿಕೊಂಡು ಅವರಿಗಿಷ್ಟ ಬಂದಂತೆ ಮಾಡುತ್ತಾರೆ ಎಂದು ಹೇಳುತ್ತಾರೆ. ಇದನ್ನು ತಪ್ಪಿಸುವುದು ಕಷ್ಟವಾಗುತ್ತದೆ ಎಂದು ಹೇಳುತ್ತಾರೆ. ಇದರಲ್ಲಿ ನಮ್ಮದೂ ತಪ್ಪಿದೆ

ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅಕಸ್ಮಾತ್ ಸಾಂಕೇತಿಕವಾಗಿ ಏನಾದರೂ ತೊಂದರೆಯಾಗಿದ್ದರೆ ಅದನ್ನು ಕೂಡಲೇ ಪರಿಹರಿಸಬಹುದು. ಆದುದರಿಂದ ನನಗೆ ನಿಜವಾಗಿಯೂ ತಾವೆಲ್ಲ ಹೇಳುವುದನ್ನು ಇಲ್ಲಿ ನಾನು ಪಾಯಿಂಟ್ ಮಾಡಬೇಕೆಂದು ಹೇಳುತ್ತಿಲ್ಲ. ಇದರಲ್ಲಿ ಜನ್ಯುಯಿನ್ ಆಗಿ ಯಾವ ಡಿಫಿಕಲ್ಟೀಸ್‌ಗಳಿವೆ ಮತ್ತು ಯಾವ ರೀತಿಯಾಗಿ ಈ ಪ್ರಾಬ್ಲಂನ್ನು ಟ್ಯಾಕಲ್ ಮಾಡಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ, ಆದರೆ ಇದರ ಬಗ್ಗೆ ಮಾನ್ಯ ಸದಸ್ಯರು ಹೀಗೆ ಮಾಡಬೇಕು ಎಂದು ಒಳ್ಳೆಯ ಸಲಹೆಗಳನ್ನು ಕೊಟ್ಟರೆ ಅಂತಹ ಸಲಹೆಗಳನ್ನು ಶೀಘ್ರವಾಗಿ ತೆಗೆದುಕೊಂಡು ಇದರ ಬಗ್ಗೆ ಯೋಚನೆ ಮಾಡಬಹುದು. ಮಾನ್ಯ ಸದಸ್ಯರು ಅಂತಹ ಸಲಹೆಗಳನ್ನು ಕೊಟ್ಟರೆ ನಾನು ತುಂಬಾ ಸಂತೋಷ ಪಡುತ್ತೇನೆ. ಏಕೆಂದರೆ ಮುಂದೆ ಲ್ಯಾಂಡ್ ರಿಫಾರಂಸ್ ಬಿಲ್ಲನ್ನು ತರುವುದರಲ್ಲಿದ್ದೇವೆ. ಆಗ ಇದರಲ್ಲಿ ಎಂತಹ ಕಷ್ಟಗಳಿವೆ ಎನ್ನುವುದನ್ನೆಲ್ಲಾ ಯೋಚನೆ ಮಾಡಬಹುದು. ಪೋಲೀಸು ಆಡ್ಮಿನಿಸ್ಟ್ರೇಷನ್ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಪ್ರಭಾಕರ್‌ರವರು ಸರಿಯಾಗಿಯೇ ಹೇಳಿದ್ದಾರೆ. ಅವರು ಹೇಳಿದಂತೆ ಅದು ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆಯಾಗಬೇಕು, ಆ ರೀತಿ ಮಾಡಿಲ್ಲ ಎಂದರು. ಶ್ರೀಮತಿ ಇಂದಿರಾಗಾಂಧಿಯವರು ಕೂಡ ಇಂತಹ ಒಂದು ಬದಲಾವಣೆ ಮಾಡಬೇಕೆಂದು ಹೇಳಿದ್ದಾರೆ ಮತ್ತು ಅದರಂತೆ ನಾವೂ ನಿರೀಕ್ಷೆ ಮಾಡುತ್ತಿದ್ದೇವೆ. ಅವರು ಹೇಳಿರುವುದು ಒಂದೇ, ನಾವು ಹೇಳುವುದೂ ಒಂದೇ. ಇದನ್ನು ಹೇಳುತ್ತಲೇ ಬರುತ್ತಿದ್ದೇವೆ. ಆದರೆ ಇದರಲ್ಲಿ ಸ್ವಲ್ಪ ವ್ಯತ್ಯಾಸ ಏನಿದೆ ಎಂದರೆ ಇಂತಹ ಇನ್‌ಸಿಡೆಂಟುಗಳು ಆದಾಗ ನಮ್ಮ ಅಡ್ಮಿನಿಸ್ಟ್ರೇಷನ್‌ನಲ್ಲಿರುವ ನ್ಯೂನತೆಗಳು ಅವಕ್ಕೆ ಸರಿಹೋಗುತ್ತಿಲ್ಲ, ಆದರೆ ಇದರ ಬಗ್ಗೆ ಎಲ್ಲರೂ ಕೋಪ ಮಾಡಿದರೆ ಅದು ಸರಿಹೋಗುವುದಿಲ್ಲ. ಹಿಂದೆ ಏನು ಅಡ್ಮಿನಿಸ್ಟ್ರೇಷನ್ ಏನಿತ್ತೋ ಅದೇ ಈಗಲೂ ಕೂಡ ಇದೆ. ಅಧಿಕಾರಿಗಳೂ ಕೂಡ ಹಾಗೇ ಇದ್ದಾರೆ ಮತ್ತು ಅವರು ತಮ್ಮ ಜೀವನವನ್ನು ಮಾಡಿಕೊಂಡು ಇಲ್ಲಿ ಬರುತ್ತಿದ್ದಾರೆ. ಆದರೆ ಇದರಲ್ಲಿ ಲೋಪ ದೋಷಗಳಿಲ್ಲ ಎಂದು ಎಲ್ಲವೂ ಸರಿಯಾಗಿದೆ ಎಂದು ಹೇಳುವುದು ಕಷ್ಟ. ತಾಲ್ಲೂಕು ಮಟ್ಟದಲ್ಲಿರುವ ಯಾರೋ ಒಬ್ಬರು ಹೆಡ್ ಕಾನ್‌ಸ್ಟೇಬಲ್ ಅಥವಾ ಸಬ್‌ಇನ್‌ಸಪೆಕ್ಟರು ಕೆಲವು ಕಡೆಗಳಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎಂದರೆ ಅದನ್ನು ವಿಚಾರ ಮಾಡಬಹುದು. ಆದರೆ ನಮಗೆ ತಾವೇ ಹೇಳುವಂತೆ ಕೆಲವು ಕಡೆಗಳಲ್ಲಿ ಇವರೆಲ್ಲ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಇಲ್ಲಿ ಹೇಳುತ್ತಾರೆ. ಹೀಗೆ ಒಂದು ಸೆಕ್ಷನ್ ನವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ, ಒಂದು ಸೆಕ್ಷನ್‌ನಲ್ಲಿ ಇಲ್ಲ ಎಂದು ಹೇಳುವವರೂ ಇದ್ದಾರೆ. ಅಡ್ಮಿನಿಸ್ಟ್ರೇಷನ್ ತೀರಾ ಕೆಟ್ಟು ಹೋಗಿದೆ ಎಂದು ಹೇಳುವ ಜನರೂ ಇದ್ದಾರೆ. ಆದರೆ ಎಲ್ಲ ವಿಚಾರಗಳನ್ನು ಸರಕಾರ ಲಕ್ಷಕ್ಕೆ ತೆಗೆದುಕೊಂಡು ಇವನ್ನೆಲ್ಲಾ ಸರಿ ಮಾಡುವ ಕಾಲವೂ ಬರುತ್ತದೆ ಎನ್ನುವುದನ್ನು ಮಾತ್ರ ಇಲ್ಲಿ ಆಶ್ವಾಸನೆ ಕೊಡಬಹುದು, ಆದರೆ ಇಲ್ಲಿ ತಾವು ಕೆಲವರು ಬಂದು ಹೇಳುವುದೇ ವೇದ ವಾಕ್ಯ ಎಂದು ಹೇಳಿ ಬೇರೆ ಯಾವುದೂ ಸರಿಯಿಲ್ಲ ಎಂದು ಹೇಳಿದರೆ ಅದನ್ನು ನಾನು ಸಮರ್ಥನೆ ಮಾಡುವ ಸ್ಥಿತಿಯಲ್ಲಿಲ್ಲ. ಮಾನ್ಯ ಸದಸ್ಯರು ಹೊಸ ಹೊಸ ವಿಚಾರಗಳನ್ನು ಇಲ್ಲಿ ತರುತ್ತಿದ್ದಾರೆ, ಇದರ ಬಗ್ಗೆ ಏನಾದರೂ ಹೊಸ ವಿಚಾರಗಳು ಬೆಳಕಿಗೆ ಬಂದರೆ ಅದನ್ನು ಆಳವಾಗಿ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಆದರೆ ಇದರಲ್ಲಿ ಕೆಲವರ ಪ್ರಭಾವದಿಂದ ತಪ್ಪು ಆಗುತ್ತದೆ ಅಥವಾ ಇನ್ನಾವುದಾದರೂ ಒತ್ತಡಗಳಿಗಾಗಿ ತಪ್ಪುಗಳಾಗುತ್ತಿವೆ ಎಂದು ಹೇಳಿದರೆ ಅದನ್ನು ಸರಕಾರ ಒಪ್ಪುವುದಕ್ಕಾಗುವುದಿಲ್ಲ. ನಮ್ಮ ನಿಮ್ಮಲ್ಲಿ ವೈಯುಕ್ತಿಕವಾಗಿ ಕೆಲವು ವೇಳೆ ತಪ್ಪುಗಳಾಗಬಹುದು. ಆದರೆ ಮಾಡಿರುವುದೆಲ್ಲಾ ತಪ್ಪು ಎಂದು ಹೇಳಿ ಅದರಿಂದ ಸರಕಾರದ ಕೆಲಸಗಳು ಯಾವುದೂ ನಡೆಯುತ್ತಿಲ್ಲ ಎಂದು ಹೇಳುವುದನ್ನು ಯಾರೂ ಒಪ್ಪುವುದಕ್ಕಾಗುವುದಿಲ್ಲ. ನಮ್ಮಲ್ಲಿ ಯಾವ ಜಾತಿಯಾಗಲೀ ಅಥವಾ ರಾಜಕೀಯವಾಗಲೀ ಅಥವಾ ಇನ್ನಾವುದೇ ರೀತಿಯಲ್ಲಿ ನ್ಯಾಯಕ್ಕೆ ಚ್ಯುತಿ ಬರುವ ರೀತಿಯಲ್ಲಿ ಆದರೆ ಅದನ್ನು ಸರಕಾರ ನೋಡಿಕೊಳ್ಳುತ್ತದೆ ಎನ್ನುವ ಆಶ್ವಾಸನೆಯನ್ನು ಇಲ್ಲಿ ಕೊಡುತ್ತೇನೆ. ಒಂದಲ್ಲ ಒಂದು ರೀತಿಯಲ್ಲಿ ಇದನ್ನು ಮಾಡುತ್ತಾ ಹೋದರೆ ಕ್ರಮೇಣ ಇದು ಸರಿಹೋಗಬಹುದು ಎನ್ನುವುದು ನನ್ನ ನಂಬಿಕೆ. ಒಂದು ಕಾಲದಲ್ಲಿ ಅಧಿಕಾರಿಗಳು ದೊಡ್ಡವರ ಪ್ರಭಾವಕ್ಕೆ ಒಳಗಾಗಿ ಕೆಲವು ಕಡೆ ಕೆಲಸಗಳು ತಡವಾಗಿ ಆಗುತ್ತಿತ್ತು ಎನ್ನುವ ಒಂದು ಮನೋಭಾವನೆ ಹಿಂದಿನಿಂದ ಬೆಳೆದು ಬಂದಿತ್ತು. ಇನ್ನು ಮೇಲೆ ಅಂತಹ ಅಟಕ್ಕೆ ಯಾವ ಅವಕಾಶವೂ ಇಲ್ಲ ಎನ್ನುವುದನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀಮಾನ್ ನಾಗರಾಜ್‌ರವರು ಇಲ್ಲಿ ಒಂದು ಮಾತು ಹೇಳಿದರು, ಇಂತಹ ಪರಿಸ್ಥಿತಿಗಳು ಬಂದಾಗ ಮಂತ್ರಿಗಳೇ ಆ ಸ್ಥಳಕ್ಕೆ ಹೋಗಿ ಬರಬೇಕು ಎಂದು. ಆ ರೀತಿ ಮಾಡಲು ಆಗುವುದಿಲ್ಲ. ಅದರಿಂದ ಏನು ಪರಿಣಾಮಗಳಾಗುತ್ತವೆ ಎನ್ನುವುದನ್ನು ಅವರು ತಿಳಿಯಲಿಲ್ಲ. ಯಾರಾದರೂ ಮಂತ್ರಿಗಳು ಹೋಗಿ ನೋಡಿದರು ಎಂದರೆ ಅವರೂ ಕೂಡ ಕೆಲವು ವೇಳೆ ಸಾಕ್ಷಿ ಹೇಳಬೇಕಾಗಿ

(ಶ್ರೀ ಡಿ. ದೇವರಾಜ್ ಅರಸ್)

ಬರಬಹುದು. ಇವೆಲ್ಲಾ ಅಡ್ಮಿನಿಸ್ಟ್ರೇಷನ್ ವಿಚಾರಗಳು, ಇದರ ಬಗ್ಗೆ ಅಧಿಕಾರಿಗಳು ಸರಿಯಾಗಿ ನೋಡಿ ಅಲ್ಲಿ ಅಧಿಕಾರಿಗಳಿಂದ ತಪ್ಪು ಆಗಿದ್ದರೆ ಅಂತಹವರಿಗೆ ಶಿಕ್ಷೆಯಾಗುತ್ತದೆ. ನಾಳೆ ನೀವು ಮಂತ್ರಿಯಾದರೂ ಕೂಡ ನೀವು ಇಂತಹ ಕೆಲಸಗಳನ್ನು ಮಾಡುವುದಕ್ಕೆ ಹೋಗಬೇಡಿ. (ನಗು) ಹಿಂದೆ ಒಂದು ಸಾರಿ ಎಂ. ಎಲ್. ಎ. ಗಳು ಇಂತಹ ಕೆಲವು ಸಂದರ್ಭಗಳಲ್ಲಿ ಹೋಗಿ ಯಾವ ರೀತಿ ಆಗಿವೆ ಎನ್ನುವುದರ ಅನುಭವ ನಮಗೆ ಇದೆ. Strictly speaking that is not the method at all to run the A ministration.

ಆ ರೀತಿ ಏನಾದರೂ ವಿಚಾರಗಳು ಇದ್ದರೆ ತಾವು ತಿಳಿಸಬಹುದು. ತಾವು ಹೇಳುವ ರೀತಿಯಲ್ಲಿ, ಸುಲಭ ಮಾರ್ಗವೆಂದರೆ ಒಂದು ರೀತಿಯಲ್ಲಿ ಪೋಲೀಸಿನವರೇ ಇಲ್ಲದ ಹಾಗೆ ಮಾಡುವುದಕ್ಕಾಗುವುದಿಲ್ಲ. ಅವರು ಇಲ್ಲದಿದ್ದರೆ ಕಾನೂನನ್ನು ರಕ್ಷಣೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಪೋಲೀಸಿನವರು ಸಹ ಇರಬೇಕು. ಏನಾದರೂ ಒಂದು ಸಂದರ್ಭದಲ್ಲಿ ಎಲ್ಲಿಯಾದರೂ ತಲೆ ಒಡೆದುಹಾಕುತ್ತಿದ್ದಾರೆ, ಕಳ್ಳತನ ಮಾಡುತ್ತಿದ್ದಾರೆ ಎಂದು ಕಂಡುಬಂದರೆ ಅಂತಹ ಸಂದರ್ಭಗಳಲ್ಲಿ ರಕ್ಷಣೆ ಕೊಡಲು ಪೋಲೀಸಿನವರು ಹೋಗಬೇಕಾಗುತ್ತದೆ. ಪೋಲೀಸಿನವರೇ ಇಲ್ಲದಿದ್ದರೆ ದೌರ್ಜನ್ಯವಾಗುತ್ತಿರುವುದನ್ನು ತಪ್ಪಿಸುವುದಾದರೂ ಹೇಗೆ? ಒಂದು ವೇಳೆ ಪೋಲೀಸಿನವರೇ ಏನಾದರೂ ದೌರ್ಜನ್ಯವೆಸಗಿದರೆ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಈ ಸಭೆ ಇದ್ದೇ ಇದೆ. ಯಾರು ತಪ್ಪುಮಾಡಿದರೂ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಜಾಪ್ರಭುತ್ವದಲ್ಲಿ ಅವಕಾಶ ಇದ್ದೇ ಇರುತ್ತದೆ. ಆ ರೀತಿ ಅವಕಾಶ ಇಲ್ಲ ಎಂದು ನಾನು ವಾದ ಮಾಡುತ್ತಿಲ್ಲ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ಮನುಷ್ಯ ಒಂದೇ ಕಡೆಯಲ್ಲಿ ಕಳೆದ 40—50 ವರ್ಷದಿಂದ ವ್ಯವಸಾಯ ಮಾಡಿಕೊಂಡಿದ್ದ ಎಂದು ತಿಳಿಸಿದರು. ಆ ರೀತಿ ಬಹಳ ಕಾಲದಿಂದ ಇರುವವರಿಗೆ ಯಾವ ರೀತಿಯ ರಕ್ಷಣೆ ಕೊಡಬೇಕು ಎಂಬುದನ್ನು ಲ್ಯಾಂಡ್ ರಿಫಾರಮ್ಸ್ ಬಿಲ್ ತಯಾರು ಮಾಡುವಾಗ ಗಮನಿಸಬೇಕಾಗುತ್ತದೆ. ಕಾನೂನಿನ ದೋಷ ಇದ್ದರೆ ಸರಿಪಡಿಸಬೇಕಾಗುತ್ತದೆ. ಏಕೆಂದರೆ ಈ ಕೇಸ್‌ನಲ್ಲಿ ಗೇಣಿ ಮಾಡುತ್ತಿದ್ದ ಮನುಷ್ಯ ಕೋರ್ಟಿಗೆ ಹೋದಾಗ, ಮುನ್ಸೀಫ್ ಕೋರ್ಟಿನವರು ಆತ ಟೆನೆಂಟ್ ಅಲ್ಲ ಎಂದು ತೀರ್ಮಾನ ಕೊಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಇದರಲ್ಲಿ ಕಾನೂನಿನ ವೈಪರೀತ್ಯ ಇರಬಹುದು. ಆ ರೀತಿ ಇದ್ದರೆ ಅದನ್ನು ಯಾವ ರೀತಿ ಸರಿಪಡಿಸಬಹುದು ಎಂಬುದು ಈ ಮಾನ್ಯ ಸಭೆಯ ಕೈಯಲ್ಲಿಯೇ ಇದೆ. ಈ ಒಂದು ಕೇಸ್‌ನಲ್ಲಿ ಪೋಲೀಸಿನವರ ಪಾತ್ರ ಎಲ್ಲಿ ಬರುತ್ತದೆ ಎಂಬುದನ್ನು ನಾವು ನೋಡಬೇಕು. ಮುನ್ಸೀಫ್ ಕೋರ್ಟಿನಲ್ಲಿ ಆದ ತೀರ್ಮಾನಕ್ಕೆ ಅವರು ಜವಾಬ್ದಾರರಾಗುವುದಕ್ಕಾಗುವುದಿಲ್ಲ. ಕೋರ್ಟು ಯಾರ ಪರವಾಗಿ ತೀರ್ಮಾನ ಕೊಟ್ಟಿದೆಯೋ ಅದನ್ನು ಜಾರಿಗೆ ಕೊಡುವ ಕಾಲದಲ್ಲಿ, ಪೋಲೀಸಿನವರು ಈಗ ಆ ರಕ್ತಕ್ಕಂಥ ಅನಾಹುತವನ್ನು ಎಷ್ಟು ಪ್ರಮಾಣದಲ್ಲಿ ತಗ್ಗಿಸಬಹುದಾಗಿತ್ತು ಎಂಬ ಪ್ರಶ್ನೆ ಇಲ್ಲಿ ಬರುತ್ತದೆ. ಆ ಜಮೀನನ್ನು ಕ್ರಯಕ್ಕೆ ಪಡೆದ ಮನುಷ್ಯನ ಜೊತೆಯಲ್ಲಿ ಪೋಲೀಸಿನವರು ಸೇರಿಕೊಂಡು, ಆತನು ಮಾಡಿರುವ ತಪ್ಪನ್ನು ನೋಡಿಯೂ ಕಣ್ಣುಮುಚ್ಚಿಕೊಂಡಿದ್ದಾರೆಂಬುದು ತಮ್ಮ ಅಭಿಪ್ರಾಯವಾಗಿದೆ. ಮತ್ತು ಆತನು ಮಾಡಿರುವ ತಪ್ಪನ್ನು ಬಿಟ್ಟುಬಿಟ್ಟಿದ್ದಾರೆ ಎನ್ನುವ ಅಭಿಪ್ರಾಯ ತಮ್ಮದಾಗಿದೆ ಇದರ ಜೊತೆಗೆ ಮನೆ ಕೆಡವಿರುವ ವಿಚಾರದಲ್ಲಿ ಸರ್ಕಾರಕ್ಕೆ, ಪೋಲೀಸ್ ಸೂಪರಿಂಟೆಂಡೆಂಟ್ ಅವರಿಗೆ ಗೇಣಿದಾರನಿಂದ ಬಂದಿರುವ ಅರ್ಜಿ ಏನಿವೆ ಆ ಅರ್ಜಿಗೂ ಮತ್ತು ಮನೆ ಕೆಡವಿರುವುದಕ್ಕೂ ಅಂತರ ಬಹಳ ಇದೆ ಎಂದು ಹೇಳುತ್ತಿದ್ದಾರೆ. ಪೋಲೀಸ್ ಸ್ಟೇಷನ್‌ನಿಂದ ಬಂದಿರುವ ವರದಿಯ ಪ್ರಕಾರ ಆ ಅರ್ಜಿ ಇತ್ತೀಚೆಗೆ ಬಂದಿರುವುದು ಎಂದು ಗೊತ್ತಾಗಿದೆ, ಪೋಲೀಸಿನವರ ಮಾತನ್ನು ನಂಬಬೇಡಿ ಎಂದು ಮಾನ್ಯ ಸದಸ್ಯರು ಹೇಳಿದರು. ಸ್ಟೇಷನ್ ಡೈರಿಯಲ್ಲಿ ಅರ್ಜಿ ಬಂದಿರುವುದು ಒಂದು ಪಕ್ಷ ಎಂಟ್ರಿಯಾಗಿದ್ದರೆ ಅರ್ಜಿ ಬಂದಿತ್ತು ಎಂದು ನಾವು ನಂಬುವುದಾದರೂ ಹೇಗೆ? ಡೈರಿಯಲ್ಲಿ ಎಂಟ್ರಿಯಾದ ಮೇಲೆ ಸ್ಥಳದ ಅಧಿಕಾರಿ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ, ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಏಕೆ ನಿಧಾನ ಮಾಡಿದ್ದೀಯ ಎಂದು ನಾವು ಕೇಳಬಹುದು. ಎಂಟ್ರಿಯೇ ಆಗದಿದ್ದರೆ ನಾವು ಯಾರ ಸಾಕ್ಷಿ ಕೇಳಬೇಕು ಎಂಬುದು ಕಷ್ಟವಾಗುತ್ತದೆ. ಈಗ ಮನೆ ಕೆಡವಿರುವ ಬಗ್ಗೆ ಮತ್ತು ಸಾಮಾನುಗಳನ್ನು ಕಳವುಮಾಡಿರುವ ಬಗ್ಗೆ ನಾಲ್ಕಾರು ಸೆಕ್ಷನ್‌ಗಳ ಪ್ರಕಾರ ಕೇಸ್‌ನ್ನು ಸಂಬಂಧಪಟ್ಟವರ ಮೇಲೆ ಹಾಕಲಾಗಿದೆ. ಮನೆಯನ್ನು ಕೆಡವುವುದಾಗಲೀ, ಸಾಮಾನುಗಳನ್ನು ಕದಿಯುವುದಾಗಲೀ ಕಾನೂನಿಗೆ ವಿರುದ್ಧವಾಗುತ್ತದೆ. ಈಗ ಪೋಲೀಸಿನವರು ನಿಜಾಮುದ್ದೀನ್ ಮತ್ತು ರಾಮಸ್ವಾಮಿ ಅವರ ಮೇಲೆ ಹಾಕಿದ್ದರೂ ಸಹ, ಎಲ್ಲಿ ಪೋಲೀಸಿನವರು ಅವರ ಕಡೆಯೇ

ಸೇರಿಕೊಂಡು ಗೇಣಿದಾರನಿಗೆ ಸರಿಯಾದ ರಕ್ಷಣೆ ಕೊಡುವುದಿಲ್ಲವೋ ಎಂಬುದು ಮಾನ್ಯ ಸದಸ್ಯರಿಗೆ ಇರುವ ಅನುಮಾನ. ತಪ್ಪು ಮಾಡುವವರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ಗಮನಿಸಿ ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದು ನಮ್ಮ ಕರ್ತವ್ಯ ಇದೆ. ಅದನ್ನು ಮಾಡುತ್ತೇವೆ. ಈ ಕೇಸ್ ಬಗ್ಗೆ ಮಾನ್ಯ ಮಾರೇಗೌಡರು ಒಂದು ಅನುಮಾನ ವ್ಯಕ್ತಪಡಿಸಿದರು ಏನೆಂದರೆ ಈ ಕೇಸ್ ವಿಚಾರದಲ್ಲಿ ಸಂಬಧಪಟ್ಟ ಪೋಲೀಸ್ ಅಧಿಕಾರಿಯಾದ ಶ್ರೀ ಚೂಡೇಗೌಡ ಎಂಬುವರು ತಮ್ಮ ಅಧಿಕಾರದಲ್ಲಿ ಕೆಲಸಕಾರ್ಯಗಳನ್ನು ಸರಿಯಾಗಿ ಮಾಡುತ್ತಿಲ್ಲ ಮತ್ತು ಈ ಹಿಂದೆ ಏನೇನು ಮಾಡುತ್ತಿದ್ದರು ಎಂಬುದನ್ನು ಹೇಳಿದರು.

ಶ್ರೀ ಎಚ್. ಮಾರೇಗೌಡ.—ಆ ಅಧಿಕಾರಿ ನಾಲ್ಕೈದು ಕೇಸ್‌ಗಳಲ್ಲಿ ಬಡವರಿಗೆ ರಕ್ಷಣೆ ಕೊಡದೆ ತಮಗೆ ಬೇಕಾದವರಿಗೆ ಕುಮ್ಮಕ್ ಕೊಟ್ಟಿದ್ದಾರೆ. ಒಂದು ಕೇಸ್‌ನಲ್ಲಿ ಕೋರ್ಟಿನಲ್ಲಿ ಗೇಣಿದಾರನ ಪರವಾಗಿ ತೀರ್ಮಾನವಾದ ಮೇಲೆ ಅತನಿಗೆ ರಕ್ಷಣೆ ಕೊಡದೆ ಭೂಮಾಲೀಕರಿಗೇ ಕುಮ್ಮಕ್ ಕೊಟ್ಟಿದ್ದಾರೆ. ತಾವು ಬೇಕಾದರೆ ಅದನ್ನು ವಿಚಾರ ಮಾಡಬಹುದು.

ಶ್ರೀ ಡಿ. ದೇವರಾಜ ಅರಸ್.—ಅದನ್ನು ವಿಚಾರ ಮಾಡೋಣ. ಇಂತಹ ವ್ಯಾಜ್ಯಗಳಲ್ಲಿ ಪೋಲೀಸಿನವರ ಪಾತ್ರ ಏನು ಎಂಬುದು ಇನ್ನೊಂದು ವಿಚಾರ ಬರುತ್ತದೆ. It has become a very delicate issue and it is a very difficult issue also. Police is not a wing of the Government to decide this issue. ಸಿವಿಲ್ ನೇಚರ್ ಲಿಟಿಗೇಷನ್ ಅರ್ಜಿ ಕೊಟ್ಟಾಗ ಪೋಲೀಸಿನವರು ಯಾರ ಕಡೆ ಹೋಗಿ ಸಾಕ್ಷಿ ಹೇಳಬೇಕು. ಯಾರ ಕಡೆ ಸಾಕ್ಷಿ ಕೊಟ್ಟರೂ ಕೆಲವರು ಸರಿ ಎಂದು ಹೇಳುತ್ತಾರೆ. ಕೆಲವರು ಸರಿಯಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಜಮೀನು ಅವನಿಗೆ ಸೇರಬೇಕು, ಇವನಿಗೆ ಸೇರಬೇಕು ಎಂದು ಹೇಳುವುದಕ್ಕೆ ಅವರಿಗೆ ಆಗುವುದಿಲ್ಲ. ಕಾನೂನು ಪ್ರಕಾರ ಯಾರಿಗಾದರೂ ಜಮೀನನ್ನು ಅನುಭವಿಸುವುದಕ್ಕೆ ಅಡ್ಡಿ ಇದ್ದರೆ, ಅಡಚಣೆ ಇದ್ದರೆ ಅದನ್ನು ತಪ್ಪಿಸತಕ್ಕಂಥ ಜವಾಬ್ದಾರಿ ಪೋಲೀಸಿನವರಿಗೆ ಇರುತ್ತದೆ. ಒಬ್ಬನಿಗೆ ಹಕ್ಕಿರುವ ಜಮೀನಿನಲ್ಲಿ ಇನ್ನೊಬ್ಬನನ್ನು ತಂದು ಕೂರಿಸುವುದಕ್ಕೆ ಪೋಲೀಸಿನವರಿಗೆ ಅಧಿಕಾರ ಇಲ್ಲ. ಜಮೀನು ವಿವಾದದ ಬಗ್ಗೆ ಅನೇಕ ರೀತಿಯ ಕೇಸಸ್‌ಗಳು ಬರುತ್ತಿವೆ, ನಾವು ಯಾವ ರೀತಿ ವರ್ತಿಸಬೇಕು ಎಂದು ಪೋಲೀಸ್ ಅಧಿಕಾರಿಗಳು ಸರ್ಕಾರದವರನ್ನು ಕೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಮುಚ್ಚುಮರೆ ಇಲ್ಲದೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ನಾನು ಪೋಲೀಸಿನವರಿಗೆ ಏನು ಹೇಳುತ್ತಿದ್ದೇನೆಂದರೆ, ಸರ್ಕಾರದ ಧೋರಣೆ, ನೀತಿ ಏನಿದೆ ಎಂಬುದನ್ನು ತಿಳಿದುಕೊಂಡು ವೀಕರ್ ಸೆಕ್ಷನ್ ಪರವಾಗಿ ಇದ್ದುಕೊಂಡು, ಅವರಿಗೆ ರಕ್ಷಣೆ ಕೊಡಬೇಕು ಎಂದು ಹೇಳುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅವರು ತಪ್ಪು ಮಾಡಿದ್ದರೂ ರಕ್ಷಣೆ ಕೊಡಬೇಕೇ ?

ಶ್ರೀ ಡಿ. ದೇವರಾಜ ಅರಸ್.—ಕಾನೂನು ಪ್ರಕಾರ ಎಲ್ಲರೂ ನಡೆಯಬೇಕು. ಇನ್ನು ಇದನ್ನು ವಿಶದಪಡಿಸುವುದಾದರೆ, ವ್ಯವಹಾರಿಕವಾಗಿ ಇದುವರೆಗೆ ಏನು ನಡೆಯುತ್ತಿತ್ತು ಎಂದರೆ, ಯಾರು ಸಮಾಜದಲ್ಲಿ ಆಸ್ತಿವಂತರು ಇದ್ದಾರೆ, ಯಾರು ಸಮಾಜದಲ್ಲಿ ಮೇಲ್ಮಟ್ಟದಲ್ಲಿ ಇದ್ದಾರೆ ಅವರ ಕಡೆಯೇ ಹೆಚ್ಚಿನ ಒಲವು ಇರುತ್ತಿತ್ತು. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಅಧಿಕಾರಿಗಳು ಇಲ್ಲಿಂದೀಚೆಗೆ ಆ ರೀತಿ ಮಾಡಬಾರದು ಎಂದು ತಿಳಿಸಿದ್ದೇವೆ. ಆದರೆ ಆಸ್ತಿವಂತರನ್ನು ವಿರೋಧ ಮಾಡಬೇಕು ಎಂದು ಅಲ್ಲ. ಇದುವರೆಗೆ They were partial towards the haves or the propertied people. ಇನ್ನು ಮುಂದೆ ಆ ಒಂದು ಪಾರ್ಶಿಯಾಲಿಟಿ ಸ್ವಲ್ಪಮಟ್ಟಿಗೆ ಹೋಗಿ ಬಡವರ ಬಗ್ಗೆ ಸಿಂಪತಿ ಇದ್ದರೆ ಅವರಿಗೆ ಅನುಕೂಲವಾಗುತ್ತದೆ. This is the Government's attitude. This is our approach; this is what you call, our principle. ಆ ರೀತಿ ಅಧಿಕಾರಿಗಳು ನಡೆಯಬೇಕು ಹಾಗೆ ಎಂದು ಅವರಿಗೆ ಹೇಳುತ್ತಿದ್ದೇವೆ. ಹೇಳಿದ್ದೇವೆ. ಹಾಗೆ ನಡೆಯಬೇಕು ಎಂದು ಹೇಳುವಾಗ ಇಂತಹ ಕೆಲವು ಸಂದರ್ಭಗಳು, ಬಿಕ್ಕಟ್ಟಿನ ಸನ್ನಿವೇಶಗಳು ಬರುತ್ತಿರುತ್ತವೆ. ಅಡಚಣೆಗಳು ಬರುತ್ತಿರುತ್ತವೆ. ಆ ರೀತಿ ಬಂದಾಗ ನಾವು ಸುಮ್ಮನಿರುವುದಿಲ್ಲ. ಹೇಗೋ ನಡೆದುಕೊಂಡು ಹೋಗುತ್ತಿರುತ್ತದೆ. ಅದು ಬಂದಾಗ ಒಂದು ಕೈ ನೋಡೋಣ ಎಂದು ಹೇಳುವುದು ನಮ್ಮಲ್ಲಿ ಇಲ್ಲ.

When you really want to see that the Law prevails everywhere and everybody acts according to Law, when you want to enforce it, situation come up. Certainly, it is not the intention of the Government to close its eyes and sit. I am as anxious as members to see that lawful

(ಶ್ರೀ ಡಿ, ದೇವರಾಜ ಅರಸ್)

protection to the tenants is given and that weaker sections are given protection by the Government. ಅದನ್ನು ಮಾಡುವಾಗ ಅಡಚಣೆಗಳು ಬರುತ್ತಿರುತ್ತವೆ. That is what I am submitting before this House. ಆದ್ದರಿಂದ ಈ ಪೋಲೀಸಿನವರನ್ನು ನಾವು ಏಕಾಏಕಿ ಸರಿ ಮಾಡುತ್ತೇವೆ ಎಂದರೆ, ಬಹಳ ದಿವಸಗಳಿಂದ ಬಂದಿರತಕ್ಕಂಥ ಆಡಳಿತದ ರೀತಿನೀತಿಯನ್ನು ಏಕಾಏಕಿ ಬದಲಾವಣೆ ಮಾಡುವುದು ಅಷ್ಟು ಸುಲಭವಲ್ಲ.

ಆದರೆ ನಾನು ಈ ವಿಷಯವನ್ನು ಹೇಳುವಾಗ ಈ ವಿಷಯ ಎಷ್ಟು ಗಹನವಾಗಿದೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ಇದು ಹೀಗಿದೆ. ಆದ್ದರಿಂದ ಈ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದು ನಾನು ಮನಸ್ಸು ಸೋತು ಈ ಮಾತನ್ನು ಹೇಳುತ್ತಿಲ್ಲ. ಈ ವಿಷಯದಲ್ಲಿ ಸಾಧ್ಯವಾದಷ್ಟು ಸರ್ವ ಪ್ರಯತ್ನ ಮಾಡಿ ನಮ್ಮ ಸರ್ಕಾರದ ನೀತಿ ಧೋರಣೆ ಏನಿದೆ ಅದರಂತೆ ನಡೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಎಂದು ತಮಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.— ಸಾಧ್ಯವಾದಷ್ಟು ಅವರಿಗೆ ಪ್ರೊಟೆಕ್ಷನ್ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Sri D. DEVARAJ URS.— That I will bear in mind. I cannot make a straight promise. I must be convinced also. In the light of what is stated against the particular officer, I must get convinced whether that officer has given scope for the charges that have been made against him. Otherwise, I am harming a man who is quite innocent. So, let me assure myself before I proceed to act in the manner in which suggetions are made. I can say this much : "I will see that the whole matter is more properly investigated and looked into".

re : **Misappropriation by MSRTC Conductor in Sirsi Division.**

Sri B. SATYANARAYAN SINGH (Hospet).— I call the attention of the Minister for Labour to the misappropriation done by the Conductor of MSRTC in Sirsi Division.

Sri AZEEZ SAIT (Minister for Labour) : Sir I State as follows :

On 31st May 1972 the Line Checking Staff of Kolar Division while on checking duty in Bangalore at about 22.00 Hrs. noticed the conductor Shri V. M. Naik of bus No. MYF. 5678 plying from Sirsi to Bangalore collecting tickets from the alighting passengers and pocketing them. Suspecting the *bonafides* of the conductor, they interrogated him as to the purpose for which he was collecing the tickets and on refusal of the conductor having done so, they conducted the personal search of the conductor and noticed a ticket book of Rs. 12.40 Ps. denomination bearing Nos. 09700 to 09799, without a corresponding entry in his C.W.A. as required. The conductor had not accounted for the sale of tickets of Rs. 2.40 and 4.60 in the C.W.A. and had excess cash of Rs. 184.65 The conductor had stealthily collected and retained with him all 66 used tickets of different denominations and apart from this he was found to have unauthorisedly retained 29 way bills previously used by him in the month of March, April and May 1972.

In view of the seriousness of the case, the matter was entrusted to the Security Department for a detailed investigation, to find out as to whether any employee other than the conductor, are involved in this case.

The Security Officer, Central Region, was deputed with instructions to seize the connected records like the way bill abstracts, way bills, 18 column registers used by the conductor during the last 6 months in order to find out whether there is any misappropriation. On a preliminary verification of the records,it is obseved that the conductor has indulged in misappropriation of revenue to the extent of Rs. 1660.50 by way of re-issue of tickets of higher denominations, falsification of documents and fabrication of false records. Quite a few instances of improper and false closure of entries representing the opening and closing Nos. and sale of ticketes have also been unearthed.

In order to ascertain the exact amount of misappropriation and type of modus-operandi adopted, it has been decided to audit the receipt, issue and accountal of tickets of different denominations issued to the said conductor during the last six months. This is being taken up on top priority basis and after a thorough audit, detailed investigation would be instituted to find out whether there is any collusion by the supervisory staff of the Depot and also the Traffic Controllers at different control points. As it is the culpable omissions on the part of the Traffic Controllers and Issue Clerks of the Depot, have been established.

The said conuctor has been placed under suspension pending investigation.

The Traffic Inspector (Stand In-charge) and a Traffic Controller have since been transferred from Sirsi Division to Kolar and Hubli Divisions respectively. The matter is being pursued vigorously and finalised as early as possible.

(iv) *Re* : Eviction of tenants by the land lord at Agatamadaka Village in Bagepalli Taluk

SRI B. V. KAKKILAYA (Bantwal).—Madam Speaker, I rise to call the attention of the hon' ble Minister for Revenue to the eviction of tenants by the landlord at Agalamadaka Village,Bagepalli Taluk.

SRI N. HUTCHAMASTHI GOWDA (Minister for Revenue).—Two notices of calling attention are received and since both of them relates to the same subject, they are dealt with in the same note :

Under Rule 63 of t e Rules of Procedure and Conduct of Business in the Mysore Legislative Assembly, we call the attention of the Minister for Revenue to a matter of urgent public importance *viz.*, the serious situation arising out of the attempts to evict tenants of the lands of their more than 40 years of possession at Agatamadaka village of Bagepalli Taluka, by landlords, Somashekara Reddy and Govinda Reddy.

(SRI N. HUTCHAMASTI GOWDA)

Under Rule 63 of the Rules of Procedure and Conduct of Business in the Mysore Legislative Assembly I would like to call the attention of the Minister for Revenue about the Hunger Strike of Kissan Workers in front of Tahsildar, Bagepalli against the wholesale eviction of tenants by the landlord at Agatamadaka village in Bagepalli Taluk.

3. This first notice relates to the serious situation arising out of the attempts to evict tenants from the land of their more than 40 years of possession, by landlords Sri Somashekhara Reddy and Govinda Reddy of Agatamadaka village of Bagepelli Taluk, District Kolar.

4. The Second notice relates to Hunger Strike of Kissan workers in front of Tahsildar's office, Bagepalli against the wholesale eviction of tenants by the landlord at Agatamadaka village in Bagepalli Taluk, District Kolar.

5. Since the two notices relates to the same subject, they are dealt with together.

6. The Deputy Commissioner, Kolar, has furnished his report on the notices. The facts of the case are given below :—

(i) It is seen that the Ryots of Agatamadaka village, Bagepalli Taluk have represented that the landlord Sri T. Govinda Reddy and his son Sri Somashekara Reddy under whom they allege to be tenante, are trying to evict them from the lands.

(ii) Sriyuths. T. Govinda Reddy and Sri T. G. Somasekhara Reddy are owners of land in Agatamadaka village. Bagepalli Taluk. In respect of following S. Nos. under 'Brahmankere' atchkat dispute arose between the villagers and land owners.

S. No.		*Extent* A—G	*S. No.*		*Extent* A—G
7	...	1—00	15/3	...	0—11
8	...	2—29	16	...	1—13
9/1	...	0—17	17	...	1—12
9/3	...	1—10	18/1	...	0—25
10/1	...	1—27	20	...	4—27
12/1	...	0—09	26	...	1—06
14/1	...	0—05	28	...	1—20
			Total	...	18—11

(iii) 38 persons of the village contended that they were cultivating the land on 'Vara' basis and they h ve been obstructed from cultivating the lands, this year.

(iv) The Tahsildar has not yet passed any order in this disputed case of mutation under Rule 67 of the M. L. R. Rules. Further the landlord has also obtained temporary injunction from the Civil Court.

(v) The Tahsildar, Bagepalli Taluk has been directed to pass orders in regard to the entry of their names in Pahani within 8 days.

(vi) Morever it is seen from the available records that the Ryots have no documentary evidence to prove and also there is temporary injunctions from the Court.

(vii) Making their grievance an issue Sri Appiswamy Reddy and his supporters led a procession on 14-7-72 to Taluk Office, Bagepalli. The said Appiswamy Reddy and 14 others are observing 'Dharni Satyagraha' in front of Taluk Office. The situation is however peaceful.

(viii) It will thus be seen that the matter is both *sub judice* as well as pending before the Tahsildar for final orders.

3-30 P.M.

ಶ್ರೀ ಬಿ. ವಿ. ಕಕ್ಕಿಲಾಯ.—ಈಗ ಪುಟ 2 ರಲ್ಲಿ, 6ನೇ ಐಟಮಿನಲ್ಲಿ ಯಾವುದೇ ದಾಖಲೆ ಪತ್ರಗಳು ಇರಲಿಲ್ಲವೆಂದು ವರದಿ ಬಂದಿವೆ ಎಂದು ಹೇಳಿದ್ದೀರಿ. ಅಲ್ಲಿ ಕಳೆದ 40 ವರ್ಷಗಳಿಂದ ಈಚೆಗೆ ಪಹಣಿ ಗಳಿವೆ. ಆದರೆ ಪ್ರತಿ ವರ್ಷ ಬದಲಾವಣೆ ಮಾಡಿಕೊಂಡು ಬೇರೆ ಬೇರೆ ಹೆಸರಿನಲ್ಲಿ ಬರೆದು ಅವರು ಪರ್ಮನೆಂಟ್ ಟೆನೆಂಟ್ ಅಲ್ಲವೆಂದು ಹೇಳುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ. ಆದ್ದರಿಂದ ಅದನ್ನು ಲ್ಯಾಂಡ್ ರಿಫಾರಂ ಸೆಕ್ಷನ್ 130 ನೆಯ ಪ್ರಕಾರ ಸೂಮೋಟೊ ಕ್ರಮ ತೆಗೆದುಕೊಂಡು ಸರಿಪಡಿಸುವುದಕ್ಕೆ ಬರುತ್ತದೆ. ಆದ್ದರಿಂದ ಅಲ್ಲಿ ಸ್ಥಳ ಪರಿಶೀಲನೆ ಮಾಡಿ ಪಹಣಿ ಬರೆದುದು ನಿಜವೇ ಮತ್ತು ಹಿಂದಿನಿಂದಲೂ ರೈತರು ಜಮೀನನ್ನು ಸಾಗುವಳಿ ಮಾಡಿಕೊಂಡು ಬಂದಿರುವುದರಿಂದ, ಅದನ್ನು ಪರಿಶೀಲನೆ ಮಾಡಿ ಜಮೀನಿನ ಹಕ್ಕು ರೈತರಿಗೆ ಸಿಗುವ ಹಾಗೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಈ ಕಾಲಿಂಗ್‌ಅಟೆನ್‌ಷನ್ ನೋಟೀಸ್ ಕೊಡುವುದರ ಜೊತೆಗೆ ರೈತರ ವಿಷಯ ಖುದ್ದಾಗಿ ತಿಳಿಸಿದ ಕೂಡಲೆ ನಾನು ಜಿಲ್ಲಾಧಿಕಾರಿಗೆ ಹಾಗೂ ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರಿಗೆ ತಿಳಿಸಿ, ಕೂಡಲೇ ಸ್ಥಳಕ್ಕೆ ಹೋಗಿ ಸ್ಥಳ ಪರಿಶೀಲನೆ ಮಾಡಿ, ಅಲ್ಲಿ ಏನೇನು ಬದಲಾವಣೆ ಮಾಡಿದ್ದಾರೆಂಬುದನ್ನು ತಿಳಿದುಕೊಂಡು ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಯಾವ ರೀತಿಯ ರಕ್ಷಣೆ ಅವರಿಗೆ ಕೊಡಬೇಕೊ ಅದನ್ನು ಕೊಡಬೇಕೆಂದು ಆಗಲೇ ತಿಳಿಸಿದ್ದೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ರೆವೆನ್ಯೂ ಮಂತ್ರಿಯವರು the Tahsildar has been directed to pass orders in regard to the entry of their names in the Pahni within eight days ಎಂದು ಹೇಳಿದ್ದಾರೆ. ಆದರೆ ಆ ರಿಪೋರ್ಟ್ ಬಂದು ಬಹಳ ದಿವಸವಾಗಿದೆ ಎಂದು ನನ್ನ ಭಾವನೆ. ನನಗೆ ಇವತ್ತು ಸಹ ಒಂದು ಸಮಾಚಾರ ಬಂದಿದೆ. 66ನೇ ಇಸವಿಯಿಂದ ನಿಮ್ಮ ಹೆಸರಿಗೆ ಪಹಣಿ ಇಲ್ಲ ಮತ್ತು ನಿಮ್ಮ ಹೆಸರಿಗೆ ಬರೆಯುವುದಕ್ಕೆ ಸಾಧ್ಯವಿಲ್ಲ ವೆಂದು ಹೇಳಿ ಈಗಾಗಲೇ 40 ಜನರಿಗೆ ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆಂದು ತಿಳಿದುಬಂದಿದೆ. ಆಮೇಲೆ ಡಾಕ್ಯುಮೆಂಟರಿ ಎವಿಡೆನ್ಸ್ ಇಲ್ಲವೆಂದು ಮಾನ್ಯ ಮಂತ್ರಿಯವರು ತಿಳಿಸಿದ್ದಾರೆ. ಆ ಊರಿನಲ್ಲಿ ಭೂಮಾಲೀಕರನ್ನು ಬಿಟ್ಟು ಉಳಿದ ಯಾವ ಜನರಾದರೂ ಇವರು ಆ ಭೂಮಿಯನ್ನು ಹಿಂದಿನಿಂದಲೂ ಸಾಗುವಳಿ ಮಾಡುತ್ತಿದ್ದಾರೆಂದು ಹೇಳುತ್ತಾರೆ. ಒಂದು ಸಣ್ಣ ಮಗು ಸಹ ಅದನ್ನು ಹೇಳುತ್ತದೆ. ಏನಿದ್ದರೂ ಅವರೆಲ್ಲರೂ ಎಡಗೈಯ ಹೆಬ್ಬೆಟ್ಟನ್ನು ಹಾಕತಕ್ಕ ಜನರಾಗಿರುವುದರಿಂದ ಈ ರೀತಿಯ ಅನ್ಯಾಯ ನಡೆದಿದೆ. ತಹಸೀಲ್ದಾರರು ಅಲ್ಲಿಗೆ ಬಂದಾಗ ಆ ಊರಿನಲ್ಲಿರತಕ್ಕಂತಹ ಭೂಮಾಲೀಕರ ಮನೆಗೆ ಹೋಗಿ ಕಾಫಿ ತಿಂಡಿ ತಿಂದುಕೊಂಡು ಅವರು ಹೇಳಿದಂತೆ ಮಾಡಿದ್ದಾರೆ. 1966ನೇ ಇಸವಿಗಿಂತ ಮೊದಲು ಇವರ ಹೆಸರಿನಲ್ಲಿಯೇ ಇತ್ತು. ಅನಂತರ ಬದಲಾವಣೆ

(ಶ್ರೀ ಸಿ. ಬೈರೇಗೌಡ)

ಮಾಡಿದ್ದಾರೆ. ಆದ್ದರಿಂದ ತಹಸೀಲ್ದಾರವರು ಏನೊಂದು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ ಅದನ್ನು ಪುನರ್‌ವಿಮರ್ಶೆ ಮಾಡಬೇಕಾಗಿದೆ. ಇದು ಇಲ್ಲಿ ಒಂದೇ ಕಡೆಯಲ್ಲಿ ನಡೆಯುವುದಿಲ್ಲ; ರಾಜ್ಯದ ನಾನಾ ಕಡೆಗಳಲ್ಲಿ ಈ ಲ್ಯಾಂಡ್ ರಿಫಾರಂ ಬಂತ್ತದೆ ಎಂದು ಈ ರೀತಿ ಮಾಡಿ ಗೇಣೀದಾರ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಆದ್ದರಿಂದ ಸರ್ಕಾರದಿಂದ ನೇರವಾದ ಒಂದು ಆರ್ಡರ್ ಮಾಡಿ ತಹಸೀಲ್ದಾರರು ಏನಾದರೂ ಎಂಡಾರ್ಸ್‌ಮೆಂಟ್ ಕೊಟ್ಟಿದ್ದರೆ, ಅದನ್ನು ರಿವೈಸ್‌ಮಾಡಿ ಆ ಊರಿನವರ ಅಭಿಪ್ರಾಯದ ಪ್ರಕಾರ ಪಹಣಿ ಬರೆಯಿಸಿ, ಗೇಣೀದಾರರಿಗೆ ಜಮೀನಿನ ಹಕ್ಕನ್ನು ಒದಗಿಸುವಂತೆ ಏರ್ಪಾಡು ಮಾಡಬೇಕೆಂದು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶ್ರೀಮಾನ್ ಕಕ್ಕಿಲಾಯರು ಹೇಳಿದ ಹಾಗೆ ತಹಸೀಲ್ದಾರವರು ಕೈಗೊಂಡಿರತಕ್ಕ ಕ್ರಮದ ಮೇಲೆ ಅಪೀಲ್ ಬರಲಿ ಅಥವಾ ಬರದೆ ಇರಲಿ, ಜಿಲ್ಲಾಧಿಕಾರಿಗಳಿಗೆ ನೇರವಾಗಿ ಪ್ರವೇಶ ಮಾಡಿ ಭೂಮಿಯು ಯಾರ ಹೆಸರಲ್ಲಿ ಇದೆಯೆಂಬುದನ್ನು ನೋಡಿ ಸರಿಪಡಿಸತಕ್ಕ ಅಧಿಕಾರ ಅವರಿಗೆ ಇದೆ. ಇದರ ಬಗ್ಗೆ ಈಗಾಗಲೇ ಜಿಲ್ಲಾಧಿಕಾರಿಗೆ ಹೇಳಿದ್ದೇನೆ. ಕೂಡಲೇ ಸ್ಥಳಕ್ಕೆ ಹೋಗಿ ಪಹಣಿ ಇಲ್ಲದಿದ್ದರೆ ನಿಜವಾಗಿಯೂ ಅವರು ಆ ಜಮೀನಿನಲ್ಲಿ ವ್ಯವಸಾಯ ಮಾಡತಕ್ಕ ಜನ ಹೌದೊ ಅಲ್ಲವೋ ಎಂಬುದನ್ನು ತಿಳಿದುಕೊಂಡು ಅವರಿಗೆ ಪಹಣಿ ಎಷ್ಟು ಮಟ್ಟಿಗೆ ಒದಗಿಸಬಹುದು ಎಂಬುದನ್ನು ನಾನು ಆಗಲೇ ತಿಳಿಸಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದೇ ಪಹಣಿ ಸಂಬಂಧದಲ್ಲಿ ಸೊರಬ ತಾಲ್ಲೂಕಿನ ಒಂದು ವಿಚಾರದ ಬಗ್ಗೆ ಗಮನ ಸೆಳೆಯುವ ಸೂಚನೆ ಕಳಿಸಿದ್ದೆ.

ಅಧ್ಯಕ್ಷರು.—ಅದನ್ನು ಈಗ ಹೇಗೆ ಅವರು ಹೇಳುವುದಕ್ಕಾಗುತ್ತದೆ ?

Notice of Adjournment motion *re*: Police firing at Davangere

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ದಾವಣಗೆರೆಯಲ್ಲಿ ಒಂದು ದುರಂತ ನಡೆದಿದೆ. ಅದರ ಬಗ್ಗೆ ಒಂದು ಜುಡಿಷಿಯಲ್ ಎನ್‌ಕ್ವಯರಿ ನಡೆಸಬೇಕು.

ಅಧ್ಯಕ್ಷರು.—ಅದರ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್ ಬಂದಿದೆ, ಮತ್ತು ಕಾಲಿಂಗ್ ಅಟೆನ್‌ಷನ್ ಮೋಷನ್ ಸಹ ಬಂದಿದೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಅಧ್ಯಕ್ಷರೇ, ನಿನ್ನೆ ಸುಮಾರು ಎರಡು ಗಂಟೆಗೆ ದಾವಣಗೆರೆಯಲ್ಲಿ ನಡೆದ ಒಂದು ಗಲಭೆಯಲ್ಲಿ ಎರಡು ಜನ ಸತ್ತಿದ್ದಾರೆ ಮತ್ತು ನಾಲ್ಕು ಜನರು ಗಾಯಗೊಂಡಿದ್ದಾರೆಂದು ತಿಳಿದು ಬಂದಿದೆ. ಈ ದುರ್ಘಟನೆ ನಡೆಯಬಾರದಾಗಿತ್ತು; ಆದರೆ ನಡೆದಿದೆ. ಇದರ ಬಗ್ಗೆ ನನ್ನ ಅತೀವ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಈ ಪ್ರಕರಣದಲ್ಲಿ ಒಬ್ಬರು ಬಿ. ಪಿ. ಶೆಟ್ಟಿ ಎನ್ನುವ ಜನರಲ್ ಮ್ಯಾನೇಜರ್‌ರವರು ಈ ಒಂದು ಗಲಭೆಯಲ್ಲಿ ಆಹುತಿಯಾಗಿದ್ದಾರೆ. ಅವರು ಬಹಳ ದಕ್ಷ ಆಡಳಿತಗಾರರು, ನಿಷ್ಠಾವಂತರು ಮತ್ತು ತುಂಬಾ ಒಳ್ಳೆಯ ಸ್ವಭಾವದವರಾಗಿದ್ದರು. ಇಂತಹ ಒಬ್ಬ ಅಧಿಕಾರಿಯನ್ನು ನಾವು ಕಳೆದುಕೊಂಡಿರುವುದು ಬಹಳ ದುರದೃಷ್ಟಕರವಾದ ಸಂಗತಿ ಎಂದೆನಿಸುತ್ತದೆ. ಇನ್ನು ಈ ಘಟನೆ ಬಗ್ಗೆ ಹೇಳುವುದಾದರೆ, ಈ ತರದ ಘಟನೆ ಮೊದಲಿನಿಂದಲೂ ಅಲ್ಲಿ ನಡೆಯುತ್ತಿದೆ. ಇದೇ ತರಹ ಕಳೆದ ವರ್ಷ ಒಂದು ಘಟನೆ ನಡೆದಿತ್ತು, ಮತ್ತು ಅದಕ್ಕಿಂತ ಹಿಂದಿನ ವರ್ಷವೂ ನಡೆದಿತ್ತು. ಹೀಗೆ 5—6 ವರ್ಷಗಳಿಂದ ಇಂತಹ ಘಟನೆಗಳು ನಡೆಯುತ್ತಾ ಬಂದಿದೆ. ಇದೇ ವಿಷಯದಲ್ಲಿ ಪೋಲೀಸ್ ಫೋರ್ಸ್ ಅಲ್ಲಿ ರೀ-ಇನ್‌ಫೋರ್ಸ್ ಮಾಡಿದ್ದಾರೆ. ಅಲ್ಲಿ ವಾತಾವರಣ ತೃಪ್ತಿಕರವಾಗಿದ್ದ ಹಾಗೆ......

(ಹಲವು ಸದಸ್ಯರು ಎದ್ದು ಪ್ರತಿಭಟನೆಯನ್ನು ಮಾಡಿದರು)

ನಾನು ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಅಲ್ಲಿ ಏನೊಂದು ಮ್ಯಾನೇಜ್‌ಮೆಂಟಿಗೆ ಮತ್ತು ನೌಕರರಿಗೆ ಡಿಸ್ಪ್ಯೂಟ್ ಇದೆ, ಮನಸ್ತಾಪ ಇದೆ, ಅದನ್ನು ಸರಿಪಡಿಸಿ, ವಾತಾವರಣವನ್ನು ಶಾಂತ ರೀತಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

[MR. DEPUTY SPEAKER in the Chair]

ಅಲ್ಲಿ ಮ್ಯಾನೇಜ್‌ಮೆಂಟ್ ಮತ್ತು ಎಂಪ್ಲಾಯೀಸ್ ಇವರಿಬ್ಬರಲ್ಲಿ ಭಿನ್ನಾಭಿಪ್ರಾಯ ಇದೆ. ಆ ವಿಷಯದಲ್ಲಿ ನಮ್ಮ ಸರ್ಕಾರದವರು ಪ್ರವೇಶಿಸಿ ಈ ಭಿನ್ನಾಭಿಪ್ರಾಯವನ್ನು ಸರಿಮಾಡಬೇಕೆಂದು ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕು ಎಂಬುದಾಗಿ ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಅಲ್ಲಿ ಸಾರ್ವಜನಿಕರ ಭದ್ರತೆಗೆ ಹೆಚ್ಚಿನ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಒಂದು ವಿಷಯವನ್ನು ಹೇಳಿದರೆ ಬಹುಶಃ ಮಾನ್ಯ ಸದಸ್ಯರು ಒಪ್ಪುತ್ತಾರೆಂದು ತಿಳಿದಿದ್ದೇನೆ. ಈ ಒಂದು ದುರ್ಘಟನೆ, ಒಂದು ವಿಷಾದಕರವಾದ ಪ್ರಸಂಗ ಅಲ್ಲಿ ನಡೆದುಹೋಗಿದೆ. ಇಡೀ ದಾವಣಗೆರೆ ನಗರವನ್ನು ತಲ್ಲಣಿಸಿದೆ ಮತ್ತು ಅಲ್ಲಿನ ಜನರನ್ನು ಗಾಬರಿಪಡಿಸಿದೆ. ಈಗತಾನೆ ನಿನ್ನೆ ನಡೆದ ಘಟನೆಯ ಬಗ್ಗೆ ಕೇಸು ರಿಜಿಸ್ಟರ್ ಆಗಿದೆ. ಇನ್‌ವೆಸ್ಟಿಗೇಷನ್ ಪ್ರಾರಂಭವಾಗಿದೆ. ಪೋಲೀಸಿನವರು ತ್ವರಿತವಾಗಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ತೆಗೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ನನ್ನದೊಂದು ಪ್ರಾರ್ಥನೆ. ಈಗ ಇದನ್ನು ಚರ್ಚೆ ಮಾಡುವುದು ಸರಿಯಲ್ಲ. ಅದು ಸಬ್‌ಜುಡೀಸ್. The moment the F.I.R. is filed in the court the matter becomes *sub-judice*. ಎಫ್.ಐ.ಆರ್. ಕೋರ್ಟಿಗೆ ಹೋಗಿದೆ. ಆದ್ದರಿಂದ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಮಗೆಲ್ಲರಿಗೂ ಕಳವಳಪಡಿಸುವ ವಿಷಯ ಈಗ ಶಾಂತಿಯಾಗಿದೆ. ಆದರೆ ಈ ಒಂದು ಸಂದರ್ಭದಲ್ಲಿ ಇನ್ನೂ ತ್ವರಿತವಾಗಿ ತನಿಖೆ ನಡೆಯುತ್ತಿದೆ. ಆದ್ದರಿಂದ ದಯಮಾಡಿ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವಲ್ಲ. ಕಾನೂನು ಪ್ರಕಾರ ಸರಿಯಲ್ಲವೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಕೋರ್ಟಿಗೆ ಹೋಗಿರುವ ವಿಷಯದ ಬಗ್ಗೆ ನಾನು ಮಾತನಾಡುವುದಿಲ್ಲ. ನಿನ್ನೆ ನಡೆದಂಥ ಗೋಲೀಬಾರ್ ಪ್ರಕರಣದಲ್ಲಿ ಪೋಲೀಸಿನವರು ಇರಲಿಲ್ಲವೇ? ಅಲ್ಲಿ ಕೇವಲ ಪೋಲೀಸ್ ಸ್ಟೇಷನ್ ಇತ್ತು ಅಂದರೇನು? ಗೋಲೀಬಾರ್ ಮಾಡುವ ಪ್ರಕರಣ ಏನಿತ್ತು? ನೀವು ಹೇಳಿಕೆ ಕೊಡಬಾರದೆಂದರೇನು? ಗೋಲೀಬಾರ್ ಮಾಡುವುದಕ್ಕೆ ಕಾರಣವೇನು? ಅನೇಕರು ಅಲ್ಲಿ ಸಾಯುವುದಕ್ಕೆ ಕಾರಣವೇನು? ಇದಕ್ಕೂ ಕೋರ್ಟಿಗೂ ಸಂಬಂಧವಿಲ್ಲ. ಗೋಲೀಬಾರ್ ಪ್ರಕರಣ ಏತಕ್ಕೆ ಆಯಿತು? ಏನು ಆಯಿತು? ಅದೇನು ಕೇಸು ಹಾಕಿದ್ದಾರೆ? ಒಂದಕ್ಕೊಂದಕ್ಕೆ ಲಿಂಕ್ ಇದೆಯೇ? ಗೋಲೀಬಾರ್ ಪ್ರಕರಣಕ್ಕೆ ಮುಂಚೆ ಏನು ಒಳಗೆ ಘಟನೆ ನಡೆಯಿತು, ಪೋಲೀಸಿನವರು ಯಾವಾಗ ಹೊರಗೆ ಹೋದರು? ಅಲ್ಲಿ ಎರಡು ಮರಣಗಳಾಗಿವೆ, ಕೆಲವರು ಗಾಯಪಟ್ಟಿದ್ದಾರೆ, ಕೆಲವರು ಆಸ್ಪತ್ರೆಯಲ್ಲಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ತಾವು ಸ್ವಲ್ಪ ಶಾಂತವಾಗಿ ಇರಬೇಕು. ಎಫ್.ಐ.ಆರ್. ಕೋರ್ಟಿನಲ್ಲಿ ಫೈಲ್ ಮಾಡಿದ್ದಾರೆ. ತನಿಖೆ ಆಗುವವರೆಗೂ ಏನನ್ನೂ ಹೇಳುವುದಕ್ಕಾಗುವುದಿಲ್ಲ. ಈಗ ಈ ವಿಷಯವನ್ನು ಮಾತನಾಡಿದರೆ ಬಹುಶಃ ತನಿಖೆಗೆ ಅಡ್ಡಿಬರಬಹುದು, ಎಂಬುದಾಗಿ ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಈ ಸಮಯದಲ್ಲಿ ಕಾಲ್ ಅಟೆನ್‌ಷನ್ ಆಗಲೀ ಅಥವಾ ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡುವುದು ಆಗಲಿ ಸೂಕ್ತವಲ್ಲವೆಂದು ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

† SRI C. M. ARUMUGAM (KGF).—Madam, we are not concerned with the merits of the case; we are not concerned how the workers went in a procession, what are the grievances of the workers, whether they were properly considered, whether there was any conciliation or discussion between the management and the workers and so on and so forth. We want a sort of guidelines for the Opposition so far as these matters are concerned. What we are asking is a normal thing. When Sri Siddaveerappa was in the Opposition, the Opposition wanted to gherao the Speaker. As long as you preside, we will refrain from it; the Opposition has imposed on itself the restriction of not gheraoing the Speaker. If there is a change in the Speaker, I cannot say what will happen. But I may assure you that so long as you preside we will not do that.

(SRI C. M. ARUMUGAM)

It is the practice in several States of our country that if anybody dies as a result of police firing, immediately the Chief Minister or the Home Minister comes out with a statement. In all cases of police firing my experience is that the person who fires will not come into the picture at all. In one case a person shot a twelve-year old boy. The body was not give to the party but was buried in the forest and that police officer became a top man in the State. He has now retired. I am only submittitg that what we are concerned with is whether police firing was warranted, and whether they have taken the permission of the Assistant Commissioner or the Deputy Commissioner before firing was resorted to. In a gathering besides the workers there will be so many innocent people like merchants and students. I have seen a workers procession in the city. Usually so many others follow such a procession. When the police fire they need not necessarily shoot the people who are indulging in violence as some innocent people also die. Now I ask the Government whether it would appoint a Judge to probe into this matter just as they did in the case of Madhugiri incident. Whatever may be the findings we are not concerned with the merits of it. Let them appoint somebody to go into this matter and find out who are the two persons who died. Are they the workers or the emploees of the mill? If there is a little injury to the police men, they resort to firing. The police has so much protection. The moment there is a little violence immediately they shoot. Of course, that has been going on all these years. Some time back the Indian Penal Code was amended so as to give protection to the railway property. Railway property is the property of the Central Government and they are wise enough to protect their property. Take the case of EXPO in which the previous Government was completely exposed. The students were very much aggrieved. Then the then Opposition including my elder Sri Siddaveerappa demanded a judicial enquiry into that matter. The records about that are now with the present Government. They know who have all gone. Why donot they come out with the list? In that connection there was a police firing and so many students were put in Jail. The Opposition then demanded a judicial enquiry. Therefore, I would only submit that since there was a police firing in Davangere as a result of which two persons died and several persons were injured, we want a judicial probe into the matter.

†ಶ್ರೀ ಕೆ. ಪುಟ್ಟಸ್ವಾಮಿ (ಚಾಮುಂಡೇಶ್ವರಿ).—ಮಾನ್ಯ ಅಧ್ಯಕ್ಷರೇ, ಈಗತಾನೆ ಶ್ರೀಮಾನ ಸಿದ್ಧವೀರಪ್ಪನವರು ಈ ಬಗ್ಗೆ ಕೋರ್ಟಿಗೆ ಈಗಾಗಲೇ ಮೊಕದ್ದಮ್ಮೆ ಹೋಗಿರುವುದರಿಂದ ಇದರ ವಿಚಾರದಲ್ಲಿ ಹೇಳಿಕೆಯನ್ನು ಕೊಡುವುದರಿಂದ ಅಷ್ಟೇನೂ ಅನುಕೂಲವಾಗುವುದಿಲ್ಲ ಅನ್ನುವುದಾಗಿ ಹೇಳಿದರು. ಶ್ರೀ ಸಿದ್ಧವೀರಪ್ಪನವರು ದಾವಣಗೆರೆ ನಿವಾಸಿಗಳು. ಆದುದರಿಂದ ಅವರು ಎಷ್ಟೇ ನಿರ್ವಿಕಾರ ಮನೋಭಾವನೆಯಿಂದ ಮಾತನಾಡಿದ್ದರೂ ಅಲ್ಲಿ ಸ್ಥಳದಲ್ಲಿರತಕ್ಕ ಜನರ ಬಗ್ಗೆ ಮತ್ತು ಅಲ್ಲಿ ನಡೆದಿರತಕ್ಕ ಘಟನೆಗಳ ಬಗ್ಗೆ ಇಲ್ಲಿ ಒಂದು ಹೇಳಿಕೆಯನ್ನು ಕೊಡುವುದರಿಂದ ಯಾರಿಗೆ ನ್ಯಾಯ ದೊರೆಯಬೇಕೋ ಅವರಿಗೆ ನ್ಯಾಯ ಸಲ್ಲುತ್ತದೆಯೋ ಅಥವಾ ಇಲ್ಲವೋ ಎನ್ನುವ ಒಂದು ಅನುಮಾನ ಅವರಿಗೆ ಬಂದಿದೆ ಎಂಬುದಾಗಿ ಅವರ ಹೇಳಿಕೆಯಿಂದ ಗೊತ್ತಾಗುತ್ತದೆ. ಆದರೆ ನಿನ್ನೆ ಅಲ್ಲಿ ನಡೆದಿರುವುದು ಒಂದು ಭೀಕರ ದುರ್ಘಟನೆ ಎಂಬುದು ಎಲ್ಲರಿಗೂ ಮನದಟ್ಟಾಗಿದೆ. ಆದುದರಿಂದ ಸರ್ಕಾರದವರು ಈ ಸಭೆಯನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಯಾವ ವಿಷಯ ಸಬ್‌ಜುಡೀಸ್

ಆಗುತ್ತದೋ ಅದನ್ನು ಕೈಬಿಟ್ಟು ಇನ್ನುಳಿದ ವಿಷಯಗಳನ್ನು ಸಭೆಗೆ ತಿಳಿಸಬೇಕಾದ್ದು ಅತ್ಯವಶ್ಯಕ. ಆದರೆ ಇದು ಒಮ್ಮೆಗೇ ನಡೆದಂಥ ವಿಚಾರವೇನೂ ಅಲ್ಲ. ಆ ದಿವಸ ಬೆಳಗ್ಗೆ ತಾತ್ಕಾಲಿಕವಾಗಿ ಯಾರೋ ಒಬ್ಬ ಕಾರ್ಮಿಕನನ್ನು ಸಸ್ಪೆಂಡ್ ಮಾಡಿದ್ದಕ್ಕೆ ಪ್ರಾರಂಭವಾದ ಘಟನೆ ಕೊನೆಗೆ ಅದು ಅಲ್ಲಿನ ಜನರಲ್ ಮ್ಯಾನೇಜರನ್ನು ಹಿಡಿದು ಅವರ ಮೇಲೆ ಹಲ್ಲೆ ಮಾಡಿ—ಅದರ ಪರಿಣಾಮವಾಗಿ ಅವರ ಪ್ರಾಣವೇ ಹೋಗಿದೆ; ಆದರೆ ನಾನು ಅದನ್ನು ಖೂನಿ ಎಂತ ಹೇಳದಿದ್ದರೂ ಅದು ಸಾವಿನಲ್ಲಿ ಪರ್ಯವಸಾನವಾಗಿದೆ. ಅಲ್ಲಿ ಅಷ್ಟು ಕೃತ್ಯ ನಡೆಯುವವರೆಗೂ ಪೋಲಿಸಿನವರೇನು ಮಾಡುತ್ತಿದ್ದರು? ಈ ವಿಚಾರದಲ್ಲಿ ಈ ಸಭೆಯವರು ಬಹಳ ತವಕದಿಂದ್ದಾರೆ—ಕಾತರತೆ ಇಂದಿದ್ದಾರೆ. ಆ ದಾವಣಗೆರೆಯ ವಿಷಯ ಶ್ರೀಮಾನ್ ಸಿದ್ದವೀರಪ್ಪನವರಿಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೂ ಹೊಸದೇನೂ ಅಲ್ಲ. ಶ್ರೀ ದೇವರಾಜೇ ಅರಸರು ಹಿಂದೆ ಕಾರ್ಮಿಕ ಮಂತ್ರಿಗಳೂ ಆಗಿದ್ದರು. ಅಲ್ಲಿರತಕ್ಕ ಬಟ್ಟೆಗಿರಣಿ ಮಾಲೀಕರಿಗೂ ಮತ್ತು ಕಾರ್ಮಿಕರಿಗೂ ವಿರಸವಿತ್ತೇ ವಿನಾ ಅವರಲ್ಲಿ ಸಾಮರಸ್ಯವಿರಲಿಲ್ಲ. ಹಿಂದೆ ಒಬ್ಬ ಮಾಲೀಕನು ಒಂದು ಸಹಸ್ರ ಕಾರ್ಮಿಕರನ್ನು ಗಿರಣಿಯಿಂದ ವಜಾ ಮಾಡಿದ್ದರು. ಅಂದರೆ ಸಹಸ್ರಾರು ಸಂಖ್ಯೆಯಲ್ಲಿ ವಜಾಮಾಡಿದ್ದರು. ಆದರೆ ಆ ದಿವಸ ಅಲ್ಲಿ ಕೆಲಸದಿಂದ ತೆಗೆದುಹಾಕಲ್ಪಟ್ಟ ಜನರೆಲ್ಲಾ ಸಂಯಮದಿಂದಲೇ ವರ್ತಿಸಿದರೆಂದು ನಾನು ಹೇಳುವುದಕ್ಕೆ ಸಿದ್ಧವಾಗಿಲ್ಲ. ಬೇರೊಂದು ಸಂದರ್ಭದಲ್ಲಿ ಅಲ್ಲಿ ನಡೆದ ಖೂನಿ ಕೇಸಿನ ತೀರ್ಮಾನ ಮೊನ್ನೆ ಒಂದೆರಡು ತಿಂಗಳ ಹಿಂದೆ ಬಂದಿದೆ. ಅಗ್ಗೆ ಆ ಕೇಸು ಐ.ಪಿ.ಸಿ. 302 ರ ಪ್ರಕಾರ ನಡೆದಿತ್ತು ಅದು ಎರಡು ತಿಂಗಳ ಕೆಳಗೆ ಬಿಡುಗಡೆಯಾಗಿದೆ. ಆದರೆ ಇದೇ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಈ ಸಭೆಯ ಗಮನಕ್ಕೆ ತರುವುದರಲ್ಲಿ ಅದು ಅಷ್ಟೇನೂ ಅಪ್ರಾಸಂಗಿಕವಾಗಲಾರದು.

Sri H. SIDDAVEERAPPA (Minister for Health).—May I bring to the notice of the hon. member that that dispute was between two factions among labour and not between labour and management?

ಶ್ರೀ ಕೆ. ಪುಟ್ಟಸ್ವಾಮಿ.—ಒಂದೊಂದು ವೇಳೆ ಒಂದು ಕಾರ್ಮಿಕರ ಸಂಘಕ್ಕೂ ಇನ್ನೊಂದು ಕಾರ್ಮಿಕರ ಸಂಘಕ್ಕೂ, ಇನ್ನು ಕೆಲವು ವೇಳೆ ಕಾರ್ಮಿಕರ ಸಂಘಕ್ಕೂ ಮತ್ತು ಮಾಲೀಕರಿಗೂ ಅಲ್ಲಿ ಘರ್ಷಣೆಗಳಾಗುತ್ತಿರುತ್ತವೆ. ಕೆಲವು ವೇಳೆ ಮ್ಯಾನೇಜ್‌ಮೆಂಟಿನವರ ಜೊತೆಗೆ ಕಾರ್ಮಿಕರೂ ಸಹಾ ಸೇರುವುದುಂಟು. ಆದರೆ ಇದು ಬಹಳ ಗಂಭೀರವಾದ ವಿಚಾರ.

Sri D. DEVARAJ URS.—May I submit onething? We can understand the hon'ble member's anxiety to know certain steps taken by the police between this period. I can also understand the hon. member saying that the House may be taken into confidence to know the facts. It may not be desirable to go into the background of what has happened. The backgroucd with regard to the previous incidents may not be same as in this incident. We do not know that. I am not in a position to say yes or no. Therefore, it is better to refrain from making reference to past incidents.

Sri K. PUTTASWAMY.—I thank the hon. Chief Minister for the kind intervention. I shall confine to the present incident.

ನಾನು ಈಗ ಆ ವಿಚಾರವನ್ನು ಪ್ರಸ್ತಾಪ ಮಾಡದೆ ದಾವಣಗೆರೆ ಕಾರ್ಮಿಕರಿಗೂ ಮತ್ತು ಮಾಲೀಕರಿಗೂ ಯಾವ ಹೊತ್ತಿನಲ್ಲಾದರು ಸಾಮರಸ್ಯ ಕೆಡಬಹುದು ಅನ್ನುವುದಕ್ಕೆ ಅಲ್ಲಿ ಸಾಕಷ್ಟು ಕಾರಣಗಳಿವೆ ಹಾಗಿದ್ದಾಗ ಅಲ್ಲಿ ಪೋಲೀಸ್‌ನವರಿಗೆ ಒಂದು ಮುಂಜಾಗ್ರತೆ ಕಾರ್ಯಕ್ರಮ ಕೈಗೊಳ್ಳಬೇಕೆಂಬುದು ಇವರಿಗೆ ತಿಳಿದಿರಲಿಲ್ಲವೇ? ಆ ಸ್ಥಳದಲ್ಲಿ ಆ ದುರ್ಘಟನೆ ನಡೆಯದೆ ಇರುವಂತೆ ಅದನ್ನು ತಡೆಗಟ್ಟಲು ಇವರು ಕೈಕೊಂಡ ಕ್ರಮಗಳೇನು? ಅಷ್ಟೊಂದು ಜನರು ಆ ಮ್ಯಾನೇಜರ ಕಛೇರಿಯಲ್ಲಿ ನುಗ್ಗಿ ಅವರನ್ನು ಅಲ್ಲಿ ಹೊಡೆದುದಲ್ಲದೆ ಅವರನ್ನು ಹೊರಗೂ ಎಳೆದು ಅನಂತರ ಅವರ ತಲೆಯನ್ನು ಕಲ್ಲಲ್ಲಿ ಜಜ್ಜಿದರು ಎಂತಲೋ ಏನೋ ಬರೆದಿದೆ, ಅಂತಹ ಕೃತ್ಯವನ್ನು ತಪ್ಪಿಸುವುದಕ್ಕೆ ಸ್ಥಳೀಯ ಪೋಲೀಸರಿಗೆ ಶಕ್ಯವಿರಲಿಲ್ಲವೇ? ಇಂಥ ಒಂದು ಘಟನೆ ಬರಬಹುದು ಎಂಬ ಸುಳಿವು ಸಿಕ್ಕರಲಿಲ್ಲವೇ? ಈ ವಿಚಾರಗಳಲ್ಲಿ ಸರ್ಕಾರದವರು ಈ ಮನೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದೆ ಇಂಥ ಘಟನೆಗಳನ್ನು ತಪ್ಪಿಸತಕ್ಕ ಬಗ್ಗೆ ಏನು ಮಾಡಬೇಕೆಂಬುದರ ಬಗ್ಗೆ ಒಂದು ಹೇಳಿಕೆ ಕೊಡುವುದು ಅತ್ಯಗತ್ಯ. ಇದರಿಂದ ದಾವಣಗೆರೆಯ ಜನಕ್ಕೆ ಒಂದು ನೆಮ್ಮದಿ ಯುಂಟಾಗಬಹುದು, ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

Sri D. DEVARAJ URS (Chief Minister).—The Hon. Minister has already submitted that it is not advisable to take up this as an adjournment motion. If it is allowed, I can understand that this may be taken up for discussion. At this stage I would like to know whether even before decision is given by the Chair, where is the point in discussing this issue one after the other ? I can understand the hon. member Sri K. Puttaswamy's point of view and another hon. member's view. Beyond that I cannot understand if everyone of us want to talk about it. I am afraid it will lead us nowhere.

4-00 P.M.

Sri B. B. SAYANAK.—The firing ordered is to shoot at sight...

Sri D. DEVARAJ URS.—Whether firing is justified or not is a matter again that has to be looked into.

Mr. DEPUTY SPEAKER.—We have read in to-day's newspapers about the incident and the hon. lady member from Davangere and the Hon. Health Minister have stated something about it. Over and above that, we have been informed that the matter has already gone to the court and F.I.R. has been sent.

ಶ್ರೀ ವಾಟಾಳ್ ನಾಗರಾಜ್.—ಎಫ್. ಐ. ಆರ್. ಬಗ್ಗೆ ಚರ್ಚೆ ಮಾಡಬಹುದು. ಇಂಥ ಕೇಸ್ ಬಂದಿರುವುದು ಇದು ಮೊದಲನೆಯ ಸಲವಲ್ಲ, ಇಂಥಾದ್ದು ಎಷ್ಟೋ ಆಗಿವೆ. ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹಿಂದೆ 3 ದಿನ ಕುರಿತು ಚರ್ಚೆಮಾಡಿದ್ದೇವೆ. ಇದರ ಚರ್ಚೆಗೆ ಅವಕಾಶ ಕೊಡಬೇಕು.

Mr. DEPUTY SPEAKER.—Is this the way of saying things ? Do you think that if you become angry you are very strong ? In fact you render yourselves very weak and feeble. I know the feelings of the hon. members. If the matter has gone to the court we cannot assume things. The hon. members who have given notice of adjournment motion, may speak for a minute in one sentence. That I may allow. But this can't be the occasion for a full fledged debate on the matter.

ಶ್ರೀ ಎಸ್. ಬಂಗಾರಪ್ಪ.—ಒಂದು ವಾಕ್ಯದಲ್ಲಿ ವಿಷಯ ಹೇಳಲು ನನಗೆ ಶಕ್ತಿಯಿಲ್ಲ, ಹಲವಾರು ವಾಕ್ಯದಲ್ಲಿ ವಿಷಯ ತಿಳಿಸಬೇಕಾಗಿದೆ. ಇದರಲ್ಲಿ ಎರಡು ವಿಷಯಗಳು ಅಡಕವಾಗಿವೆ, ಒಂದು ಸಬ್‌ಜುಡಿಸ್ ಆಗುವುದೇ ಎಂಬುದು, ಆಗುವುದಾದರೆ ಎಷ್ಟುಮಟ್ಟಿಗೆ ಈ ಸಭೆ ಚರ್ಚೆ ಮಾಡಬೇಕು ಎಂಬುದು.

ಶ್ರೀ ಎಚ್. ಸಿದ್ದವೀರಪ್ಪ.—ಈ ಸಮಯದಲ್ಲಿ ಚರ್ಚೆಮಾಡಬಾರದು, ಔಚಿತ್ಯ ಗಮನಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಅದನ್ನೂ ಗಮನಿಸಬೇಕಾಗುವುದು.

ಶ್ರೀ ಕೋಣಂದೂರು ಲಿಂಗಪ್ಪ.—ಕೋರ್ಟಿನಲ್ಲಿರುವಾಗ ಗೋಲಿಬಾರ್ ಮಾಡುವುದರ ಔಚಿತ್ಯವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಗೋಲೀಬಾರ್ ಆದಮೇಲೆ ಕೋರ್ಟಿಗೆ ಹೋಗಿರುವುದು.

Mr. DEPUTY SPEAKER.—If the FIR has been sent to the court it becomes *sub-judice*.

ಶ್ರೀ ವಾಟಾಳ್ ನಾಗರಾಜ್.—ಪೋಲೀಸರು 12 ಜನರನ್ನು ಕೊಂದು ಎಫ್. ಐ. ಆರ್. ಕಳಿಸಿದರೆ ಈ ಸಭೆಯಲ್ಲಿ ಏನೂ ಮಾಡುವಂತಿಲ್ಲ! ಹೀಗಾದರೆ ದೇವರೇ ಕಾಪಾಡಬೇಕು.

MR DEPUTY SPEAKER.—Even just referring to facts will have our own conclusions and that will cast reflections. It would be better on the part of the hon. members to restrain themselves and say whatever they want in brief.

ಶ್ರೀ ಎಸ್. ಬಂಗಾರಪ್ಪ (ಸೊರಬ).—ನಾನು ಕಳೆದ ಶಾಸನಸಭೆಯಲ್ಲಿ ಸದಸ್ಯನಾಗಿದ್ದೆ, ಮಾನ್ಯ ಸಿದ್ದವೀರಪ್ಪನವರು ಈ ಕಡೆ ಕುಳಿತಿದ್ದಾಗ ಮಧುಗಿರಿ ಪ್ರಕರಣದ ವಿಚಾರ ಪ್ರಸ್ತಾಪಿಸಲ್ಪಟ್ಟಿತ್ತು. ಹಿಂದೆ ಕೆಲವು ಸಂದರ್ಭಗಳಲ್ಲಿ ಗೋಲಿಬಾರ್ ಆಗಿತ್ತು. ಇಂಥ ಗಲಭೆಗಳಾದಾಗ ಪೋಲೀಸರು ಕಾನೂನು ಪ್ರಕಾರ ಎಫ್. ಐ. ಆರ್. ಕಳಿಸುವರು. ಹಾಗೆ ಮಾಡಿದಾಗ ಈ ಸಭೆ ಹಲವಾರು ಬಾರಿ ಹಲವಾರು ವಿಷಯಗಳಮೇಲೆ ಚರ್ಚೆಮಾಡಿದೆ. ಈ ವಿಷಯ ಸಬ್‌ಜುಡಿಸ್ ಆಗುವುದೇ ಇಲ್ಲವೇ ಎಂಬ ವಿಚಾರ ಸಭೆಗೆ ಬಿಡುತ್ತೇನೆ. ಪತ್ರಿಕೆಯಲ್ಲಿ ಬಂದಿರುವ ವಿಷಯಗಳ ಮೇಲೆ, ಕೇಳಿಬಂದುದರ ಮೇಲೆ ಏನೂ ಮಾಡುವುದಕ್ಕಾಗುವುದಿಲ್ಲ. ಎಫ್.ಐ.ಆರ್ ಕಳಿಸಿದ ತಕ್ಷಣ ಸಬ್‌ಜುಡಿಸ್ ಆಗುವುದಿಲ್ಲ. ಛಾರ್ಜ್ ಷೀಟ್ ಹಾಕಿದಮೇಲೆ ಸಬ್ ಜುಡಿಸ್ ಆಗುವುದು. ಎಫ್.ಐ ಆರ್ ಕಳಿಸಿದಮೇಲೂ ಕೂಡ ತನಿಖೆ ಮಾಡುವುದನ್ನು ಕೋರ್ಟ್ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ತನಿಖೆ ವಿಷಯದ ಬಗ್ಗೆ, ನಡೆದ ಘಟನೆ ಬಗ್ಗೆ ಚರ್ಚೆಮಾಡಲು ಸಂಪೂರ್ಣ ಹಕ್ಕಿದೆ. ಆ ದೃಷ್ಟಿಯಿಂದ ಎಫ್.ಐ.ಆರ್ ಕಳಿಸಿದ ಕೂಡಲೆ ಈ ಸಭೆಗೆ ಹಕ್ಕಿಲ್ಲ ಎಂದು ಅರ್ಥ ಬರುವ ರೀತಿಯಲ್ಲಿ ಸಚಿವರು ಹೇಳಿರುವುದು ಈ ಸಭೆಯ ಹಕ್ಕಿಗೆ ಚ್ಯುತಿ ತರಬಹುದು ಎಂಬ ಅನುಮಾನವಿದೆ. ಈ ಘಟನೆ ನಡೆದಿರುವುದು ವಿಷಾದಕರ. ದಾವಣಗೆರೆ ಸದಸ್ಯರು ಹೇಳಿದ್ದಾರೆ. ಅದರೆ ಸಂಪೂರ್ಣವಾದ ವಿಚಾರವನ್ನು ಅವರು ಹೇಳಲು ಸಾಧ್ಯವಿಲ್ಲ. ನಿಲುವಳಿ ಸೂಚನೆಯ ಮೇಲೆ ಚರ್ಚೆಯಾಗಬೇಕಾದರೆ ನಿಯಮದ ಪ್ರಕಾರ ಅಧ್ಯಕ್ಷರು ಅಪ್ಪಣೆ ಕೊಡಬೇಕು. ಈಗ ಒಪ್ಪಿಗೆ ಬಗ್ಗೆ ಈ ವಿಷಯದಲ್ಲಿ ಪ್ರಸ್ತಾಪಮಾಡುತ್ತಿದ್ದೇವೆ. ಅವಗಾಹನೆಗೆ ವಿಷಯ ತರುತ್ತಿದ್ದೇವೆ. ಒಬ್ಬ ವ್ಯಕ್ತಿಯನ್ನು ಕೆಲಸದಿಂದ ತೆಗೆದಿದ್ದಾರೆ, ಅದರಿಂದ ಗಲಾಟೆ ಪ್ರಾರಂಭವಾಗಿದೆ. ಶ್ರೀ ಪುಟ್ಟಸ್ವಾಮಿಯವರು ಹೇಳಿದಹಾಗೆ ಹಿಂದಿನ ಚರಿತ್ರೆ ಎಷ್ಟೋ ಹೇಳಬಹುದು. ಅದರ ಪ್ರಸ್ತಾಪ ಈ ಸಂದರ್ಭದಲ್ಲಿ ಅನಾವಶ್ಯಕ ಎಂಬ ಭಾವನೆ ಇದೆ. ಒಬ್ಬ ವ್ಯಕ್ತಿಯನ್ನು ಕೆಲಸದಿಂದ ತೆಗೆದ ಮ್ಯಾನೇಜಿಂಗ್ ಡೈರೆಕ್ಟರು ಎಂದು ಕಾಣುತ್ತದೆ, ಅವರನ್ನು ಚುಚ್ಚಿದ್ದಾರೆ, ತಲೆಯಮೇಲೆ ಕಲ್ಲಿನಿಂದ ಹೊಡೆದಿದ್ದಾರೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಸತ್ಯಾಂಶ ಗೊತ್ತಿಲ್ಲ. ಈ ವಿಷಯದಲ್ಲಿ ಸರಕಾರ ಇಲ್ಲಿಯವರೆಗೆ ಏನು ಸಮಾಚಾರ ಸಂಗ್ರಹಿಸಿದೆ ಅದನ್ನು ಸಭೆಗೆ ತಿಳಿಸಬೇಕು. ಇದರ ಹಿನ್ನೆಲೆಯೇನು ಎಂಬುದನ್ನು ಕೇಳಲು ಹಕ್ಕಿದೆ. ಇದನ್ನು ಒದಗಿಸಬೇಕು. ಮತ್ತು ಇದರ ಬಗ್ಗೆ ನಿಷ್ಪಕ್ಷಪಾತವಾದ ಒಂದು ತನಿಖೆಮಾಡಬೇಕು. ತಪ್ಪು ಮ್ಯಾನೇಜಿಂಗ್ ಡೈರೆಕ್ಟರದಿರಬಹುದು ಅಥವಾ ಕೆಲಸಗಾರರದಿರಬಹುದು. ಇದುವರೆಗೆ ನಡೆದಿರುವ ವಿಚಾರ ಸಂಪೂರ್ಣವಾಗಿ ಸರಕಾರ ತಿಳಿದುಕೊಂಡಿರಲೇಬೇಕು. ಅದನ್ನು ಈಗ ಹೇಳಬೇಕು. ಮುಖ್ಯ ಮಂತ್ರಿಗಳಿದ್ದಾರೆ. ಮೊದಲನೆಯ ಸಾರಿ ಇಂಥಾದ್ದು ನಡೆದಿಲ್ಲ. ಹಲವಾರು ಬಾರಿ ಆಗಿದೆ. ಶ್ರೀ ಅಮರ್ಗೋಳರವರು ಹೇಳಿದಂತೆ ಪೋಲೀಸರಿಗೆ ಅವರ ರಕ್ಷಣೆಗೆ ಬಂದೂಕವಿವೆ, ಬೇರೆಯವರಿಗಿಲ್ಲ. ಬೇರೆಯವರು ತಮ್ಮ ರಕ್ಷಣೆಗೆ ಕೈಗೆ ಸಿಕ್ಕಿದನ್ನು ತೆಗೆದುಕೊಳ್ಳುವರು. ಈ ಸಂದರ್ಭದಲ್ಲಿ ಶ್ರೀ ಗೋಪಾಲಗೌಡರು ಹೇಳುತ್ತಿದ್ದ ಮಾತು ಜ್ಞಾಪಕಕ್ಕೆ ಬರುವುದು. ಇಂಡಿಯನ್ ಪೀನಲ್ ಕೋಡ್ ಯಾವಾಗ ಜಾರಿಗೆ ಬರುವುದು ?

ಶ್ರೀ ಹೆಚ್. ಸಿದ್ದವೀರಪ್ಪ.—ಕ್ರಿಮಿನಲ್ ಪ್ರೊಸೀಜರ್‌ನಲ್ಲಿ ಸೆಕ್ಷನ್ 107 ಇದೆ.

ಶ್ರೀ ಎಸ್. ಬಂಗಾರಪ್ಪ.—ಅದು ಎಲ್ಲಾ ಜಾರಿಗೆ ಬರುವುದಿಲ್ಲ. ಈ ಸದನಕ್ಕೆ ಒಂದು ವಿಷಯ ಹೇಳುತ್ತೇನೆ. ಆಡಳಿತವರ್ಗದವರದ್ದೇ ತಪ್ಪು ಇರಲಿ, ಮತ್ತೊಬ್ಬರದೇ ತಪ್ಪು ಇರಲಿ, ಇದರಲ್ಲಿ ನಿಷ್ಪಕ್ಷಪಾತವಾದ ವಿಚಾರಣೆ ಮಾಡಿ. ಇಲ್ಲಿಯವರೆಗೂ ಕೊಟ್ಟಿರತಕ್ಕಂಥ ಹೇಳಿಕೆಯಲ್ಲಿ ಏನು ಮಾಡುತ್ತೇವೆ ಎಂದು ಹೇಳಲಿಲ್ಲ. ನೀವು ಯಾವರೀತಿ ತನಿಖೆ ನಡೆಸುತ್ತೀರೆಂದು ನಾವು ಕೇಳಲಿಲ್ಲ, ನಾವು ಹೇಳುವುದು ಇದರ ಬಗ್ಗೆ ಡಿಸ್‌ಕಷನ್‌ಗೆ ಅವಕಾಶ ಕೊಡಿ. ಇದು ಸಬ್‌ಜುಡಿಸ್ ಆಗುವುದಿಲ್ಲ.

SRI B. B. SAYANAK.—Mr Deputy Speaker, I have stood not to defend the workers, but to condemn the police firing. There, there are three Unions, C. P. M., C. P. I. and the Managers Union. I want to know why the Government has not looked into this matter. The police rushed to the mill immediately on receipt of information and

(SRI B. B. SAYANAK)

at once fired. The firing must be first in the air. They have not done that. The firing is shoot-at-sight, this must be condemned. Here eight persons have received bullet injuries. Hence, I request the Government to have an impartial judicial enquiry so that justice is done to them.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸಿದ್ಧವೀರಪ್ಪನವರು ಇದನ್ನು ಸಬ್‌ಜುಡಿಸ್ ಆಗುತ್ತದೆ ಎಂದು ಹೇಳಿದರು. ಎಫ್. ಐ. ಆರ್. ಹಾಕಿದರೆ ಸಬ್‌ಜುಡಿಸ್ ಆಗುವುದಿಲ್ಲ. ಛಾರ್ಜ್‌ಷೀಟ್ ಹಾಕಿದರೆ ಮಾತ್ರ ಸಬ್‌ಜುಡಿಸ್ ಆಗುತ್ತದೆ. ಶ್ರೀ ಕಂಠಿಯವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಮುನಿಯಮ್ಮನ ಪ್ರಕರಣದಲ್ಲಿ ಈ ಬಗ್ಗೆ ರೂಲಿಂಗ್ ಕೊಟ್ಟಿದ್ದಾರೆ.

MR. DEPUTY SPEAKER.—There are conflicting judgements on the issue. I may tell the hon. member for his information that in 1962 I myself had opposed the Ruling of the then Speaker. Even then it was held that if F.I.R. has been sent it is *sub-judice.*

ಶ್ರೀ ವಾಟಾಳ್ ನಾಗರಾಜ್.—ಹಿಂದೆ ಶ್ರೀ ಕಂಠಿಯವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಈ ಬಗ್ಗೆ ರೂಲಿಂಗ್ ಕೊಟ್ಟಿದ್ದಾರೆ. ಎಫ್.ಐ.ಆರ್. ಹಾಕಿದರೆ ಸಬ್ ಜುಡಿಸ್ ಆಗುವುದಿಲ್ಲ ಚರ್ಚೆ ಮಾಡಬಹುದು ಎಂದು. ಛಾರ್ಜ್‌ಷೀಟ್ ಹಾಕಿದರೆ ಮಾತ್ರ ಸಬ್‌ಜುಡಿಸ್ ಆಗುತ್ತದೆ. ಆ ದಾವಣಗೆರೆಯಲ್ಲಿ ಪೋಲೀಸ್ ಫೈರಿಂಗ್ ಆದಮೇಲೆ ಡಿ.ಐ.ಜಿ. ಯವರು ಇಲ್ಲಿಂದ ಓಡಿದರಂತೆ, ಎಲ್ಲಾ ಅಂತೆ ಕಂತೆ ವಿಷಯ. 1,25,000 ಜನಸಂಖ್ಯೆ ಇರತಕ್ಕಂಥ ದಾವಣಗೆರೆಯಲ್ಲಿ ಪೋಲೀಸಿನವರು ಇದ್ದಾರೇ ಇಲ್ಲವೇ, ಅಲ್ಲಿ ಪೋಲೀಸ್ ಫೋರ್ಸ್ ಎಷ್ಟು ಜನ ಇದ್ದಾರೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಇದು ಸಬ್‌ಜುಡಿಸ್ ಆಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಸದಸ್ಯರೊಬ್ಬರು ದಾವಣಗೆರೆಯ ಈ ಗಲಾಟೆ ಸಂಬಂಧವಾಗಿ ಸಿ.ಪಿ.ಐ. ಯೂನಿಯನ್ ಕೂಡ ಸೇರಿದೆ ಎಂದು ಹೇಳಿದರು. ನಾನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದಿಂದ ಗೆದ್ದು ಬಂದಿರುವುದರಿಂದ ಆ ವಿಚಾರದ ಬಗ್ಗೆ ಹೇಳಬೇಕಾಗಿದೆ. ಅವರಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸೇರಿಲ್ಲ ಎಂದು ಈ ಸಭೆಯ ಮುಂದೆ ಹೇಳುತ್ತೇನೆ. ಅಷ್ಟೇ ಅಲ್ಲದೆ ಈವೊತ್ತಿನ ದಿವಸ ಅಲ್ಲಿ ಈ ರೀತಿ ಒಂದು ದುರ್ಘಟನೆ ಆಗಿರತಕ್ಕಂಥಾದ್ದು ದುರಾದೃಷ್ಟಕರ. ಅಲ್ಲಿ ಪೋಲೀಸರು ನಡೆದುಕೊಂಡಿರತಕ್ಕಂಥ ನಡವಳಿಕೆಗಳ ಬಗ್ಗೆ ಏನು ಹೇಳಿದ್ದಾರೋ ಅದರ ಬಗ್ಗೆ ನಿಷ್ಪಕ್ಷಪಾತವಾದ ವಿಚಾರಣೆ ಮಾಡಬೇಕು ಎಂದು ಹೇಳುತ್ತೇನೆ. ಅಲ್ಲಿ ಆ ಸಂದರ್ಭದಲ್ಲಿ ಫೈರಿಂಗ್ ಮಾಡಬೇಕಾದ ಅವಶ್ಯಕತೆ ಇತ್ತೇ? ಬೆಳಿಗ್ಗೆ 11 ಗಂಟೆಯಿಂದ 3-4 ಗಂಟೆಯವರೆಗೂ ಪೋಲೀಸಿನವರು ಏನು ಮಾಡುತ್ತಿದ್ದರು ಎನ್ನುವ ವಿವರ ಈ ಸಭೆಯ ಮುಂದೆ ಇಡಬೇಕು. ಅಲ್ಲಿ ಏನೇನು ನಡೆಯಿತು ಎಂಬುದು ನಮಗೂ ಗೊತ್ತಿದೆ. ಕೆಲವು ಸದಸ್ಯರ ಅಭಿಪ್ರಾಯ ಸಬ್‌ಜುಡಿಸ್ ಆಗುವುದಿಲ್ಲ ಅಂತ ಏನು ಇದೆ, ಅದೇರೀತಿ ನನ್ನ ಅಭಿಪ್ರಾಯವೂ ಕೂಡ ಇದೆ. ಆದುದರಿಂದ ಪೋಲೀಸರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವ ವಿವರವನ್ನು ಈ ಸಭೆಯ ಮುಂದೆ ಇಡಿ. ನೀವು ತೆಗೆದುಕೊಂಡಂಥ ಕಾರ್ಯಕ್ರಮ ಸಮಯೋಚಿತವಾಗಿತ್ತೇ, ಇಲ್ಲವೇ ಎನ್ನುವುದನ್ನು ನಾವು ತಿಳಿಯಬಯಸುತ್ತೇವೆ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಒಂದು ಹೇಳಿಕೆ ಕೂಡ ಕೊಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ದಾವಣಗೆರೆ ಪ್ರಕರಣದಲ್ಲಿ ಮಾನ್ಯ ಸದಸ್ಯರುಗಳು ಈಗಾಗಲೇ ಸಾಕಷ್ಟು ಮಾತನಾಡಿದ್ದಾರೆ. ನಾನು ಹೆಚ್ಚು ಮಾತನಾಡುವುದಿಲ್ಲ. ಮಂತ್ರಿಮಂಡಲದಲ್ಲಿ ಹಿರಿಯ ಸದಸ್ಯರಾದ ಶ್ರೀ ಸಿದ್ಧವೀರಪ್ಪನವರು ಇದು ಸಬ್‌ಜುಡಿಸ್ ಆಗುವುದರಿಂದ ಈ ಸಂದರ್ಭದಲ್ಲಿ ಅದನ್ನು ಡಿಸ್‌ಕಷನ್ ಮಾಡುವುದು ಸರಿಯಲ್ಲ ಎಂದು ಹೇಳಿದರು. ಮೊಲ್ಮನೆಯಲ್ಲಿ ಈಗಾಗಲೇ ಕಾರ್ಮಿಕ ಸಚಿವರು ಹೇಳಿಕೆ ನೀಡಿದ್ದಾರೆ.

SRI H. SIDDAVEERAPPA.—I am sorry, I did not know that. The Hon'ble Chief Minister knows about it and he will say what it is. As a matter of fact, I only initiated an abstract principle.

Sri D. DEVARAJ URS.—As was pointed out, as a matter of principle it ought to be the position. However, this matter, when it came to my notice, it is I who said : 'we shall take the Houses into confidence : we shall give some factual report of what has happened'. Whatever might have been said just now, I have no objection to give the facts as we have received. If the House and the Chair permits, I will make a statement.

Mr. DEPUTY SPEAKER.—Considering the whole position, until the charge-sheet goes to the Court, it will not be a matter which is *sub-judice*. So far as F.I.R. being sent, there are conflicting judgements. If mere facts are to be given, it can be given by the Government.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ. ದಾವಣಗೆರೆಯಲ್ಲಿ ನಡೆದಂಥ ಈ ಘಟನೆಯನ್ನು ಕೇಳಿ ನಮಗೆ ಗಾಬರಿಯಾಗಿದೆ. ಈವೊತ್ತು ನಾವು ಸಮಾಜವಾದದ ಅಂಚಿನಲ್ಲಿ ಬೆಳೆದು ಬಂದವರು ಇನ್ನೊಬ್ಬರ ತಲೆಯನ್ನು ತೆಗೆಯುವ ಗೋಜಿಗೆ ಹೋಗುವುದಿಲ್ಲ. ಕೆಲವು ಸಂದರ್ಭದಲ್ಲಿ ಆ ಜನರಿಂದಲೇ ನಮ್ಮ ತಲೆಯನ್ನು ಒಡೆಸಿಕೊಂಡಿದ್ದೇವೆ. ಒಬ್ಬ ನಿರಾಯುಧನನ್ನು ಯಾರೇ ಅಗಲಿ ಯಾವುದೇ ಅಂಧೋಲನದ ಹೆಸರಿನಲ್ಲಿ ಹತ್ಯ ಮಾಡುವುದನ್ನು ನಾವು ಸಹಿಸುವುದಕ್ಕಾಗುವುದಿಲ್ಲ.

Sri H, SIDDAVEERAPPA.—The hon. Member is assuming the man is murdered. The fact is he is dead. If he is murdered or not will have to be proved.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಹಿನ್ನೆಲೆ ನೋಡಿದರೆ ಗೊತ್ತಾಗುತ್ತದೆ. ಇದನ್ನು ನೋಡಿದರೆ ಪಶ್ಚಿಮ ಬಂಗಾಳದ ಪುನರಾವರ್ತನೆ ಇಲ್ಲೂ ಆದೀತು. ಆದ್ದರಿಂದ ಈ ಬಗ್ಗೆ ಎಚ್ಚರಿಕೆ ವಹಿಸಬೇಕಾದುದು ಅಗತ್ಯ ಎಂದು ನಾನು ಹೇಳಬಯಸುತ್ತೇನೆ.

Sri H. SIDDAVEERAPPA.—Every one of us deplore the incident. You could have waited until the whole thing was looked into.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿನ ಕಾರ್ಮಿಕ ಸಂಘಗಳು ಮತ್ತು ಅವುಗಳ ಸಂಘಟನೆ ಇವುಗಳ ಪರಿಚಯ ನಮಗೆ ಇದೆ. ನೀವು ಏನಾದರೂ ಸ್ನೇಹಕ್ಕೆ ಒಲಿದರೆ ಮತ್ತೆ ಪಶ್ಚಿಮ ಬಂಗಾಳದ ಪುನರಾವರ್ತನೆ ಇಲ್ಲಿಯೂ ಆದೀತು. ನಾವು ಸಮಾಜವಾದಿ ಆಂದೋಳನವನ್ನು ನಡೆಸಿದವರು. ನಮ್ಮ ಇತಿಹಾಸ ಬೇಕಾದರೆ ಹುಡುಕಿ ತೆಗೆಯಿರಿ. ಕಾರ್ಮಿಕ ರಂಗದಲ್ಲಿದ್ದೇವೆ, ರೈತರಂಗದಲ್ಲಿದ್ದೇವೆ. ಎಲ್ಲ ಕ್ಷೇತ್ರಗಳಲ್ಲಿಯೂ ನಾವು ಇದ್ದೇವೆ. ನಮ್ಮ ಇತಿಹಾಸವನ್ನು ತೆಗೆದು ನೋಡಿ. ಇನ್ನೊಬ್ಬರ ಮೇಲೆ ಕೈ ಮಾಡಿದ ಪ್ರಸಂಗವಿಲ್ಲ. ಇಲ್ಲಿ ನಡೆದಿರುವ ಪ್ರಸಂಗವನ್ನು ಕೇಳಿ ನಮ್ಮ ಎದೆ ಕಲಕುತ್ತಿದೆ. ಆದುದರಿಂದ ದಯವಿಟ್ಟು ಸರ್ಕಾರದವರು ಇದರ ಬಗ್ಗೆ ನ್ಯಾಯಾಂಗ ತನಿಖೆ ಮಾಡುವ ದೃಷ್ಟಿಯಿಂದ ಮಾತ್ರವಲ್ಲ, ಇಂಥ ಘಟನೆಗಳು ಮುಂದೆ ಆಗದೆ ಇರುವ ರೀತಿಯಲ್ಲಿ ಮೊಳಕೆಯಲ್ಲಿಯೇ ಚಿವುಟಿ ಹಾಕಬೇಕು, ಅಂಥ ಕೆಲಸವನ್ನು ಮಾಡಬೇಕು ಎಂದು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

† **Sri D: DEVARAJ URS.**—Sir, before I proceed to make a factual statement, I would like to express my sympathies to those who are dead. According to the report, one person of the management is dead and two persons who have received bullet injuries are also dead. I do not like to say anything at this stage. It is too early for me, nor is it proper for me, to make any other comment for or against. I think my business is to confine my remarks to state facts as Government is aware of at the moment, although I can very well appreciate the ideas that were expressed by Hon. Member Sri Thimmappa. The whole thing is a very sorry episode ; it ought not to have occurred. Anyway it has occurred and it is for the Government to take all precautions and care to see that such things will not repeat.

(SRI D. DEVARAJ URS)

STATEMENT

Davangere Cotton Mills is the biggest textile Mills in Davangere with over 2,000 w rkers. The morning shift starts at 7 a, m with an interval at 11.30 a. m. for half-an-hour, On 3-8-72 *i.e.*, yesterday, an Assistant Machine Starter by name Sri Bora, absented from work. As per the working arrangements of the Mill, another worker of the same section was asked to work in place of the absentee. So, the management ordered the Senior Spinning Starter by name Sri Khasim Sab to work in place of Sri Bora; but he refused to do so. The management, therefore, placed him under suspension pending enquiry.

After the interval at 11.30 A. M., the workers of Loom Fixtures Section struck work protesting against the suspension of Sri Kasim Sab and resorted to stay-in strike without any valid reasons and also without notice to the management. On receipt of the information from the Management of the Mills, the Circle Inspector along with the Police Sub Inspector visited the Mills and found the situation peaceful. He therefore returned from the Mills.

At about 2-30 P. M. the workers of the first shift and the workers of the different sections started assembling outside the mill premises. A section of the workers inside the mill premises entered the room of the Administrative Officer, Sri Sharma and threatened him and demanded that suspenion order be lifted and the worker taken back to duty. The Administrative Officer having pleaded his inability to do so, the workers assaulted him and dragged him outside. He became unconscious due to head injuries. Thereafter, some other workers entered the Time Office and assaulted the Time Keeper. Sri B. P. Setty, Manager, Sri Anjaniah Setty, Labour Officer Sri M. Nagabushan, Welfare Officer who came there were also surrounded and assaulted. Sri B. P. Setty and other injured persons were given first aid and removed to Hospital. Immediately on receipt of information regarding the disturbances, the Circle Inspector, Davangere City, rushed to the spot with available Police force and found that a mob of 5,000 persons including the persons of neighbouring Mills had gathered there. The workers were violent and pelting stones at the building and the approaching police men. The Circle Inspector tried to make his way through the violent crowd to rescue Sri Setty from the hands of the mob, but the mob surrounded the police. The Circle Inspector warned the mob to disperse but as they failed to heed his advice, the police fired teargas shells and resorted to lathi charge. As the workers continued to pelt stones and were trying to outpower the police, the police opened fire in self-defence. In all the police fired, 12 teargas shells and 15 rounds from point 3.3 rifles. As a result of Police firing, 8 persons sustained injuries and they were removed to the hospital. Two of them succumded to bullet injuries. Sri Setty, Manager succumded to the injuries at the Hospital. Five other

officials *viz.*, Sri Sharma, Administrative Officer, Sri Anjaniah Setty, Labour Officer, Sri Nagabhushan, Welfare Officer, Sri Selvaraj, Supervisor, Weaving Section and Sri Azeez Ahmed were also injured. They are progressing in the Hospital. The Circle Inspector of Police Sri M. A. Rahim and a Constable of the DAR who sustained injuries have been admitted into the Hospital. Other Police personnel have also been injured.

The Superintendent of Police, Chitradurga, rushed to the spot immediately. The Sub Divisional Magistrate has promulgated an order under Section 144 of the Criminal Procedure Code for a period of 7 days. The District Magistrate also rushed to that place immediately. The additional police reinforcement has been rushed from Bangalore. The D.I.G. Central Range, Bangalore, has proceeded to the spot. So far 72 persons have been taken into custody and a case under Sections 147, 148, 302 read with 149 IPC and another case under Sections 332, 147 and 148 IPS have been registered and are being investigated. The situation is reported to be under control. The development are under strict watch.

Mr. DEPUTY SPEAKER.—In view of the Chief Minister's Statement I withold my Consent to the notice of privilege motion.

4-30 P. M.

Allegations against the Minister for Revenue

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು). ಮಾನ್ಯ ರೆವಿನ್ಯೂ ಮಂತ್ರಿಗಳು ನಮ್ಮ ಊರಿಗೆ ಬಂದಾಗ, ರಾತ್ರಿ ಹನ್ನೆರಡು ಗಂಟೆಗೆ ದಯಮಾಡಿಸಿದರು. ಅವರು ಮಾಡಿರತಕ್ಕ ಅನ್ಯಾಯ ಏನು ಇದೆ, ಅದನ್ನು ಸರ್ಕಾರಕ್ಕೆ ಬರೆದು ಕಳುಹಿಸಿಕೊಟ್ಟಿದ್ದೇನೆ. 12 ಗಂಟೆ ಸಮಯದಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರನ್ನು ಕರೆಸಿ, ಆಫೀಸಿನಲ್ಲಿರತಕ್ಕ ಫೈಲುಗಳನ್ನು ತೆಗೆಸಿ ಯಾವ ರೀತಿಯ ಕಾರ್ಯಕ್ರಮ ಹಾಕಿಕೊಳ್ಳಬೇಕು, ನಮ್ಮ ಪಕ್ಷಕ್ಕೆ ಸಹಾಯ ಮಾಡಬೇಕು ಎನ್ನುವ ಬೆದರಿಕೆ ಹಾಕಿದ್ದಾರೆಂದು ತಿಳಿದುಬಂದಿದೆ. ತಾಲ್ಲೂಕು ಅಭಿವೃದ್ಧಿಮಂಡಲ ಚುನಾವಣ್‌ಗಳು ಸರಿಯಾಗಿ, ಪರಿಶುದ್ಧವಾಗಿ ನಡೆಸಬೇಕು ಎಂದು ಹೊರಟಿದ್ದಾರೆ. ಮಂತ್ರಿಗಳವರು ಈ ರೀತಿ ಅಧಿಕಾರಿಗಳಿಗೆ, ತಮಗೆ ಈ ದಾಟಿಯಲ್ಲಿ ಸಹಾಯ ಮಾಡಬೇಕು, ಹಾಗೆ, ಹೀಗೆ ಎಂದು ಆದೇಶಕೊಟ್ಟು ಬಂದಿದ್ದಾರೆ.

Mr. DEPUTY SPEAKER.—Has the hon. member sent it to the Legislature Secretariat ?

ಶ್ರೀ ಟಿ. ಎಂ. ಮಂಜುನಾಥ್.—ಅದನ್ನು ಕೊಟ್ಟು ಮೂರುದಿವಸವಾಯಿತು. ಮುಖ್ಯಮಂತ್ರಿಗಳು ಇದ್ದಾರೆ, ಶಾಸನ ಸಭೆ ಇವತ್ತು ಮುಗಿದು ಹೋಗುತ್ತದೆ, ಐದು ನಿಮಿಷ ತಾವು ಅಪ್ಪಣೆ ಕೊಡಿಸಿದರೆ, ಹೇಳುತ್ತೇನೆ.

Mr. DEPUTY SPEAKER.—I will enquire into that matter. The Hon. Minister for Revenue against whom allegation is made is not here

Sri D. DEVARAJ URS.—Is it the desire of the hon. Member to make certain charges or allegations ? I do not know whether the charges have been sent to the Minister concerned. If it has been sent to the concerned Minister and if he is ready, then, he can make a statement.

ಶ್ರೀ ಟಿ. ಎಂ. ಮಂಜುನಾಥ್. –ಈ ರೀತಿ ನನ್ನ ಕ್ಷೇತ್ರದಲ್ಲಿ ಮೂರನೇ ಸಾರಿ ನಡೆಯುತ್ತಾ ಇರುವುದು.

Sri D. DEVARAJ URS.—I am not in a position to state anything, because I do not know the A B C D of it.

Sri H. D. DEVE GOWDA.—The point is, he has sent the notice to the Legislature Secretariat. If the Hon. Minister is ready to make a statement in connection with this, whatever the allegation he has raised in the notice, it can be taken up either to-day or tomorrow.

Sri D. DEVARAJ URS.—He may know from the Minister when he is ready.

Mr. DEPUTY SPEAKER.—That is why I will have it enquired whether the Hon. Revenue Minister is ready to make a statement.

ಶ್ರೀ ಡಿ. ದೇವರಾಜ ಅರಸ್.—ಚಾರ್ಜ್‌ಸ್ ಹೇಳುವುದಕ್ಕೆ ಅಭ್ಯಂತರವಿಲ್ಲ. You have a right to say anything you consider to be proper. Even if it has gone to the Minister, you must give some time to the Minister to look into the matter. Sooner or later, the Hon. Speaker can ask the Government whether it is ready or not. Then only it can come up.

Scarcity Conditions in Bijapur District

ಶ್ರೀ ಜಿ. ಎಲ್. ಕಬಾಡಿ.—ಬಿಜಾಪುರ ಜಿಲ್ಲೆಯೊಳಗೆ ಜನಸಾಯುವುದಕ್ಕೆ ಹತ್ತಿದ್ದಾರೆ. ಜನಗಳಿಗೆ ತಿನ್ನುವುದಕ್ಕೆ ಕೂಳು ಇಲ್ಲ.

Mr. DEPUTY SPEAKER.—The hon. Members should take the permission of the chair to speak.

Sri D. DEVARAJ URS.—There is no point in raising the same issue over and over again. The Revenue Minister has spoken on this and I have also spoken on the floor of the House. I have met the Members of the different districts and regions where there are scarcity conditions, and Government is taking all possible steps. There should be some space between the statement and the action taken. It will take a couple of days. It is not as if we switch on a button and everything gets started. There are some works going on.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಸ್ನೇಹಿತರು ಊರಿನಿಂದ ಬಂದಿದ್ದಾರೆ. ಸರ್ಕಾರ ಏನು ನಿರ್ಣಯ ಮಾಡಿದ್ದಾರೆ ಅದು ಕಾರ್ಯತಃ ಆಗಬೇಕಾದರೆ, ನಾಲ್ಕು ದಿವಸ ಟೈಂ ಬೇಕಾಗುತ್ತದೆ. ಒಂದೊಂದು ಸಾರಿ ಮಾನ್ಯ ಸಚಿವರಾದ ಚೆನ್ನಬಸಪ್ಪನವರು ಸ್ವಿಚ್ ಹಾಕಿದ ತಕ್ಷಣ ಮಾಡುತ್ತೇವೆ ಎಂದು ಹೇಳಿದರು. 4 ಗಂಟೆಗೆ ಕೆಲಸ ಶುರು ಮಾಡುತ್ತೇವೆ ಆರ್ಡರ್ ಕೈಗೆ ಕೊಡುತ್ತೇವೆ ಎಂದು ಹೇಳಿದರು. 4-5 ದಿವಸವಾದರೂ ಈಗ ಏನೂ ಕಾಣಲಿಲ್ಲ.

Sri D. DEVARAJ URS.—Government is aware of the position. It is not as if we have forgotten or we are lethargic or we are indifferent about it. It is being done. The Minister might have stated that things would be done immediately, but it does not mean it will be like pressing the switch and everything will be done. You will appreciate his anxiety to do it quickly. Things are on the move and by the time you go, in

a day or two, things will start moving even at that level. We have issued all necessary orders with regard to food grains. I have made a statement on the floor of the House. Though fodder and other things we cannot directly supply, we are going to give takavi loans. I can understand the anxiety of the hon. Members. I am not saying we do not take up the work, but some preliminaries have to be gone through. Sometimes what happens is this. The local Officers, in some cases, are simply waiting for orders from here. Even though there are orders, ಅವರು ಎಂ.ಎಲ್.ಎ.ಸ್ ಗೆ. ಏನೇನೋ ಹೇಳಬಿಡುತ್ತಾರೆ. That is why they are upset. I sometimes find that even though there are some orders, they interpret them in their own fashion and go on delaying matters. Yesterday, I told the officers that they should ask the local officers to go ahead and start the work even if the orders have not reached their hands.

ಶ್ರೀ ಜೆ. ಎಲ್. ಕಬಾಡಿ.—ಮಾನ್ಯ ಸದಸ್ಯರಾದ ಬಿ. ಎಸ್. ಪಾಟೀಲರು ಸ್ಥಳದಿಂದ ಬಂದಿದ್ದಾರೆ. ಡೆಪ್ಯೂಟಿ ಕಮಿಷನರ್ ಅನ್ನು ಭೇಟಿ ಆಗಬೇಕಾಗಿದ್ದರೂ ಸಹಿತ ಅವರು ಸಿಕ್ಕುವುದಿಲ್ಲ. ಮನೆಯಲ್ಲಿ ಫೋನ್ ಕೆಳಗೆ ಇಟ್ಟುಕೊಂಡು ಮಲಗಿಕೊಂಡು ಬಿಡುತ್ತಾರೆ. ಪರಿಸ್ಥಿತಿ ಈ ರೀತಿ ಇರುವುದರಿಂದ, ತಾವು ಆರ್ಡರ್ ಕೊಡುತ್ತೀರಿ, ಹೇಳಿಕೆ ಕೊಡುತ್ತೀರಿ, ಆದರೆ ಆರೀತಿ ನಡೆಯುತ್ತಾ ಇಲ್ಲ.

Sri D. DEVARAJ URS.—We will expedite the orders. This scarcity is a grave problem. The hon. Member knows that the Revenue Minister has got a programme of hurricane tour. He can contact him personally.

ಶ್ರೀ ಜೆ. ಎಲ್. ಕಬಾಡಿ.—ಮುಖ್ಯಮಂತ್ರಿಗಳು ತಮ್ಮ ಕಳಕಳಿಯನ್ನು ಸಭೆಯಲ್ಲಿ ವ್ಯಕ್ತ ಮಾಡಿದ್ದಾರೆ. ಅಲ್ಲಿ ಕೆಲಸಗಳು ತೀವ್ರವಾಗಿ ಆಗಬೇಕು ಎಂದು ಹೇಳಿದ್ದಾರೆ, ಬಹಳ ಸಂತೋಷ. ಸರ್ಕಾರದ ಗಮನಕ್ಕೆ ಈ ಪರಿಸ್ಥಿತಿಯನ್ನು ತರಬೇಕು ಎನ್ನುವ ದೃಷ್ಟಿಯಿಂದ ಹೇಳಿದೆ.

Mr. DEPUTY SPEAKER.—I have understood that point. Nobody disagrees in fact every one concurs with the Hon. member. Every one is anxious to help. When that is the position, where is the cause for vehemence?

(Hon. Member Sri B. S. Patil stood up to speak).

Mr. DEPUTY SPEAKER.—Sri Patil, will have some patience. I wanted to give a final decision on the Adjournment Motion and I will not allow him to speak now.

In the circumstances which have been stated by the Hon. Chief-Minister, I think it is not desirable to allow the Adjournment Motion. Hence, it is not allowed.

ಶ್ರೀ ಶರಣಪ್ಪ.—ರಾಯಚೂರು, ಗುಲ್ಬರ್ಗದ ಬಗ್ಗೆಯೂ ತಮಗೆ ಪ್ರಾರ್ಥನೆ ಮಾಡಿದ್ದೇನೆ. ಮೈಸೂರು ಸರ್ಕಾರದವರು ಮುಂದೆ ಇದರ ಬಗ್ಗೆ ಮುಂದೆ ಬರುತ್ತಿಲ್ಲ ಎಂದು ಕೇಂದ್ರದಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಆದ್ದರಿಂದ ಮೈಸೂರು ಸರ್ಕಾರದವರು ಕೇಂದ್ರಕ್ಕೆ ಮನವಿ ಮಾಡಿ ಅವರಿಂದ ಬೇಕಾದ ಹಣ ಒದಗಿಸಿ ಈ ಬರಗಾಲ ಪರಿಸ್ಥಿತಿಯನ್ನು ಎದುರಿಸಬೇಕು ಎಂದು ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

Union of the Class III Employees of the Karnataka University

ಶ್ರೀ ಸಿ. ಬೈರೇಗೌಡ.—ನಾವು ಗಮನ ಸೆಳೆಯುವ ಸೂಚನೆಗಳನ್ನು ಬರೆದು ಕಳುಹಿಸಿದರೂ ಚರ್ಚೆಗೆ ಬರುವುದಿಲ್ಲ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕ್ಲಾಸ್-3 ಎಂಪ್ಲಾಯೀಸ್ ಯೂನಿಯನ್ ಇದೆ. ಪತ್ರಿಕೆಗಳಲ್ಲಿಯೂ ಈ ವಿಷಯ ಬಂದಿದೆ, ಅಲ್ಲಿ ಕೆಲಸ ಮಾಡತಕ್ಕ ಜನ ತಮ್ಮ ಒಂದು ಸಂಘವನ್ನು ಸಂಘಟನೆ ಮಾಡಿಕೊಂಡು ಹಕ್ಕುಗಳನ್ನು ಸ್ಥಿರ ಪಡಿಸುವುದಕ್ಕೆ ಅದನ್ನು ಸ್ಥಾಪನೆಮಾಡಿದರು.

ಯೂನಿಯನ್ ಸದಸ್ಯರನ್ನು ಬಲವಂತವಾಗಿ ಕರೆಸಿ ಯೂನಿಯನ್‌ಗೆ ರಾಜಿನಾಮೆ ಕೊಡಿ ಎಂದು ಒತ್ತಾಯ ಮಾಡಿ ಯೂನಿಯನ್ ಇಲ್ಲದ ಹಾಗೆ ಮಾಡಬೇಕು ಯೂನಿಯನ್ ಇದ್ದರೆ ಕೆಲಸಗಳು ಅತ್ಯಾಚಾರಗಳು ನಡೆಯುತ್ತವೆಂದು ಈ ರೀತಿ ಮಾಡುತ್ತಿದ್ದಾರೆ. ನೋಟೀಸ್ ಕೊಟ್ಟರೆ ಬರುವುದು ತಡವಾಗುತ್ತದೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಉಪಾಧ್ಯಕ್ಷರು.—ಸುಮ್ಮನೆ ನಿಂತುಕೊಂಡು ಹೇಳಿದರೆ ಸರ್ಕಾರದ ಗಮನಕ್ಕೆ ಬರುತ್ತದೆಯೇ ?

ಶ್ರೀ ಸಿ. ಬೈರೇಗೌಡ.—ಬರೆದು ಕೊಡಿ ಎಂದರೆ ಬರೆದು ಕೊಡುತ್ತೇನೆ. ಇದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಚ್. ಜಿ. ಚೆನ್ನಪ್ಪ.—ಕೆಲವು ವಿಷಯ ಬರೆದು ಕೊಟ್ಟರು. ನಾನು ಬರೆದು ಕೊಟ್ಟದ್ದು ಒಂದೂ ಬಂದಿಲ್ಲ ಕಾರಣ ಏನು ಗೊತ್ತಿಲ್ಲ.

ಉಪಾಧ್ಯಕ್ಷರು.—ಬರೆದು ಕಳುಹಿಸಿದರೆ ಬರದೆ ಹೋದರೆ ನೀವು ಮತ್ತೊಮ್ಮೆ ಒತ್ತಾಯ ಮಾಡಿ ನನಗೆ ಹೇಳಬೇಕು.

OFFICIAL RESOLUTION

re : Protection of Wild Animals and Birds—Parliament Legislation thereon

Sri D. DEVARAJ URS (Chief Minister).—I beg to move the following Resolution :

"Whereas this Assembly considers that it is desirable to have a uniform law throughout India for the protection of wild animals and birds and for all matters connected therewith or anciallary and incidental thereto ;

And whereas the subject matter of such a law is relatable mainly to entry 20 (Protection of wild animals and birds) of List II of the Seventh Schedule to the Constitution of India ;

And whereas Parliament has no power to make laws for the States with respect to the matters aforesaid except as provided in articles 249 and 250 of the Constitution of India ;

And whereas it appears to this Assembly to be desirable that the aforesaid matters should be regulated in the State of Mysore by Parliament by Law ;

Now, therefore, in exercise of the powers conferred by clause (1) of article 252 of the Constitution of India, this Assembly hereby resolves

that the Protection of wild animals and birds and all matters connected therewith or ancillary and incidental thereto should be regulated in the State of Mysore by Parliament by law."

Mr. DEPUTY SPEAKER.—Motion moved :

Hon'ble Members are hereby informed that notice of the following resolution has been received from the Minister for Agriculture and Forests :—

"Whereas this Assembly considers that it is desirable to have a uniform law throughout India for the protection of wild animals and birds and for all matters connected therewith or ancillary and incidental thereto ;

And whereas the subject-matter of such a law is relatable mainly to entry 20 (Protection of wild animals and birds) of List II of the Seventh Schedule to the Constitution of India ;

And whereas Parliament has no power to make laws for the States with respect to the matters aforesaid except as provided in articles 249 and 250 of the Constitution of India ;

And whereas it appears to this Assembly to be desirable that the aforesaid matters should be regulated in the State of Mysore by Parliament by Law ;

Now, therefore, in exercise of the powers conferred by clause (1) of article 252 of the Constitution of India, this Assembly hereby resolves that the Protection of wild animals and birds and all matters connected therewith or ancillary and incidental thereto should be regulated in the State of Mysore by Parliament by law."

† ಶ್ರೀ ಡಿ. ದೇವರಾಜ ಅರಸ್.—ಇದನ್ನು ತಂದಿರತಕ್ಕ ಉದ್ದೇಶ್ಯ ಇಷ್ಟೆ. ಇಷ್ಟರಲ್ಲೇ ನಮ್ಮ ಇಂಡಿಯಾ ದೇಶದಲ್ಲಿ ವನ್ಯ ಮೃಗಗಳ ರಕ್ಷಣೆ ಮಾಡುವುದಕ್ಕೆ ಅಲ್ಲಲ್ಲೇ ಕಾನೂನುಗಳು ಇದ್ದರೂ ಕೂಡ ನಮಗೆ ಸ್ವತಂತ್ರ ಬಂದ ಮೇಲೂ ವನ್ಯಮೃಗಗಳ ರಕ್ಷಣೆ ಬಗ್ಗೆ ಬಹಳವಾಗಿ ನಾವು ದೀರ್ಘವಾಗಿ ಯೋಚನೆ ಮಾಡುವ ಕಾಲ ಈಗ ಬಂದಿದೆ. ಕಾರಣ ಅನೇಕ ಕಡೆ ಜಮೀನುಗಳನ್ನು ಕೊಡುತ್ತಾ ಇರುವುದರಿಂದ ಜನರು ವಾಸಮಾಡುವುದಕ್ಕೆ ಹೋಗುತ್ತಾರೆ. ಹೊಸ ಹೊಸದಾಗಿ ನಾಲೆ ಮಾಡುತ್ತಾರೆ. ಅನೇಕ ರೀತಿಯಲ್ಲಿ ಕಾಡನ್ನು ಉಪಯೋಗ ಮಾಡಿಕೊಳ್ಳುತ್ತಾ ಇದ್ದಾರೆ. ಮರಗಳನ್ನು ಕಡಿಯುತ್ತಾರೆ. ಈ ಎಲ್ಲಾ ಕಾರಣಗಳಿಂದ ಕಾಡು ದಟ್ಟವಾಗಿರುವುದು ಬರು ಬರುತ್ತಾ ತೆಳುವಾಗುತ್ತಾ ಇದೆ. ಅದೇ ರೀತಿಯಲ್ಲಿ ಇತ್ತೀಚೆಗೆ ಕಾಡಿನ ಹತ್ತಿರ ಹತ್ತಿರ ಜನರು ವಾಸ ಮಾಡುವುದಕ್ಕೆ ಹೋದ ಹಾಗೆ ಪ್ರಾಣಿಗಳನ್ನು ಕೊಲೆ ಮಾಡುವುದು ಜಾಸ್ತಿಯಾಗಿದೆ. ಒಂದೊಂದ ಸಂದರ್ಭದಲ್ಲಿ ಅವುಗಳನ್ನು ವಧೆ ಮಾಡುವುದಕ್ಕೆ ಕಾರಣ ಅವು ಬೆಳೆ ನಾಶ ಮಾಡುತ್ತವೆ ಎಂದು, ಆ ಕಾರಣಕ್ಕೂ ವಧೆ ಮಾಡುತ್ತಾರೆ, ಅಲ್ಲದೆ ಆಹಾರಕ್ಕಾಗಿ ಉಪಯೋಗ ಮಾಡುವುದಕ್ಕೆ ಮತ್ತು ಪೋಚಿಂಗ್‌ಗೋಸ್ಕರವಾಗಿ ವಧೆ ಮಾಡುತ್ತಾರೆ. ಈ ಪ್ರಕಾರ ಹಕ್ಕಿಗಳನ್ನು ಹಿಡಿದು ಮಾರಾಟ ಮಾಡುವುದು ಜಾಸ್ತಿಯಾಗುತ್ತಾ ಇದೆ. ಹೀಗೆ ನಮ್ಮಲ್ಲಿ ಬಹಳ ವಿಧವಾಗಿ ಕಾಡು ಪ್ರಾಣಿಗಳು ಅಂದರೆ, ಹುಲಿ, ಕಿರುಬ, ಸಿಂಹ, ಆನೆ, ಜಿಂಕೆ, ಚಿರತೆ ಜಾತಿಗೆ ಸೇರಿದ ಬೇರೆ ಬೇರೆ ಪ್ರಾಣಿಗಳು, ನವಿಲು, ಹಕ್ಕಿಪಕ್ಷಿಗಳು ಇಂಥವುಗಳ ಸಂಖ್ಯೆ ನಮ್ಮ ದೇಶದಲ್ಲಿ ಬಹಳ ಕಡಿಮೆಯಾಗಿ ಹೋಗಿದೆ, ಕೆಲವು ಕಡೆ ಹುಲಿ, ಕಿರುಬ ಹೊಡೆಯುವುದಕ್ಕೆ ಫಾಲಿಡಾಲ್ ಉಪಯೋಗಿಸಿ ಕೊಲೆ ಮಾಡುತ್ತಾರೆ. ಒಂದು ರೀತಿಯಲ್ಲಿ ಗೋವುಗಳನ್ನು ತಿನ್ನುತ್ತವೆ ಅದಕ್ಕೋಸ್ಕರ ಕೊಲೆ ಮಾಡುತ್ತೇವೆ ಎಂದು ಹೇಳಬಹುದು. ಅಷ್ಟಾಗಿ ಅವುಗಳ ಚರ್ಮ ಹೊರದೇಶಕ್ಕೆ ಕಳುಹಿಸುತ್ತಾರೆ ಬಹಳ ಬೆಲೆ ಇದೆ. ಆ ಕಾರಣಕ್ಕೆ ಕೊಲೆ ಮಾಡುವುದು, ಪ್ರಾಣಿಗಳ ಸಂಖ್ಯೆ ಅಪರೂಪವಾಗಿದೆ ಎಕ್ಷ್‌ಟಿಂಗ್ಟ್ ಪ್ರಕೃತಿಯಲ್ಲಿ

(ಶ್ರೀ ಡಿ. ದೇವರಾಜ ಅರಸ್)

ಇಲ್ಲದ ಹಾಗೆ ಆಗತಕ್ಕ ಸನ್ನಿವೇಶ ಬಹು ಬೇಗ ಇಂಡಿಯಾ ದೇಶದಲ್ಲಿ ಬರುತ್ತಾ ಇದೆ. ಆ ಕಾರಣದಿಂದ ಕೇಂದ್ರ ಸರ್ಕಾರದವರು ವನ್ಯಮೃಗಗಳನ್ನು ರಕ್ಷಣೆ ಮಾಡಬೇಕು ಎನ್ನುವುದರಲ್ಲಿ ಇತ್ತೀಚೆಗೆ ಬಹಳ ಆಸಕ್ತಿಯನ್ನು ವಹಿಸಿದ್ದಾರೆ. ಅದರ ಬಗ್ಗೆ ವಿಶೇಷವಾದ ಕ್ರಮಗಳನ್ನು ಕೂಡ ತೆಗೆದುಕೊಳ್ಳುತ್ತಾ ಇದ್ದಾರೆ ಈ ಕೆಲಸಗಳು ಕೇಂದ್ರ ಸರ್ಕಾರದವರು ಅವರ ಅಭಿಪ್ರಾಯದಲ್ಲಿ ಇದು ರಕ್ಷಣೆ ಮಾಡಬೇಕೆಂದು ಇದ್ದರೂ ಕಾನೂನಿನ ಬಲ ಕೇಂದ್ರ ಸರ್ಕಾರಕ್ಕೆ ಬೇಕಾಗಿದೆ. ಯಾತಕ್ಕೆಂದರೆ ಈಗ ಇರತಕ್ಕ ರೀತಿಯಲ್ಲಿ ಮೃಗಗಳ ರಕ್ಷಣೆ ಕಾನ್‌ಸ್ಟಿಟ್ಯೂಷನ್ ಪ್ರಕಾರ ನಮ್ಮ ಸ್ಟೇಟ್ ಸಬ್‌ಜೆಕ್ಟ್ ಆಗಿದೆ. ಆದುದರಿಂದ ಅವರು ಇಲ್ಲಿ ನಮ್ಮ ಸ್ಟೇಟ್‌ಗಳಲ್ಲಿ ಬಂದು ರಕ್ಷಣೆ ಮಾಡುವುದಕ್ಕೆ ಆಗುವುದಿಲ್ಲ ಆಯಾಯ ಸ್ಟೇಟಿನವರಿಗೆ ರಕ್ಷಣೆ ಮಾಡಿಕೊಳ್ಳುವುದು ಎಂದು ಬರೆದರೂ ಅನೇಕ ಕಡೆ ರಾಜ್ಯ ಮಟ್ಟದಲ್ಲಿ ಅಷ್ಟಾಗಿ ಇದರ ಬಗ್ಗೆ ಆಸಕ್ತಿ ಇದ್ದ ಹಾಗೆ ಕಾಣುತ್ತಾ ಇಲ್ಲ. ಇದನ್ನೆಲ್ಲಾ ಗಮನಿಸಿ ಕೇಂದ್ರ ಸರ್ಕಾರದವರು ಏನು ಹೇಳುತ್ತಿದ್ದಾರೆ ಎಂದರೆ, ಈ ಬಗ್ಗೆ ಆ ವಿಚಾರವನ್ನು ನಮಗೆ ವಹಿಸುವುದಾದರೆ ಇಡೀ ಇಂಡಿಯಾ ದೇಶಕ್ಕೆ ಅನ್ವಯಿಸುವ ಕಾನೂನು ಮಾಡಿ ಕಾನೂನು ಶಕ್ತಿಯಿಂದ ವನ್ಯಮೃಗಗಳನ್ನು ರಕ್ಷಣೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದು ಅವರು ಹೇಳಿದ್ದಾರೆ. ಆ ಪ್ರಕಾರ ಕೇಂದ್ರ ಸರಕಾರದವರು ವನ್ಯ ಮೃಗಗಳನ್ನು ಎಲ್ಲ ಪ್ರದೇಶಗಳಲ್ಲೂ ಯಾವ ರೀತಿ ಸಂರಕ್ಷಣೆ ಮಾಡಬೇಕು ಎನ್ನುವುದರ ಬಗ್ಗೆ ನಮ್ಮ ರಾಜ್ಯಕ್ಕೂ ತಿಳಿಸಿದ್ದಾರೆ. ಇಂಡಿಯಾ ದೇಶದಲ್ಲಿರುವ ಎಲ್ಲ ರಾಜ್ಯಗಳಿಗೂ ಅನ್ವಯವಾಗುವಂತಹ ಒಂದು ಕಾನೂನನ್ನು ಮಾಡಿ ಆ ಮೂಲಕ ರಾಜ್ಯದಲ್ಲಿ ಎಲ್ಲ ಕಡೆಗಳಲ್ಲಿರುವ ಕಾಡುಗಳಲ್ಲಿರುವ ವನ್ಯಮೃಗಗಳು ಹಾಗೂ ಇತರ ಪ್ರಾಣಿಗಳನ್ನು ರಕ್ಷಣೆ ಮಾಡಬೇಕೆಂದು ಇದರಲ್ಲಿ ತಿಳಿಸಿದ್ದಾರೆ. ಆದಕ್ಕಾಗಿ ನಮ್ಮ ರಾಜ್ಯದ ಈ ಸಭೆಯವರು ಇದಕ್ಕೆ ಒಪ್ಪಿಗೆ ಕೊಡಬೇಕು. ಈ ಸಭೆ ಒಪ್ಪುವುದಾದರೆ, ಆಗ ಇದನ್ನು ಕೇಂದ್ರ ಸರಕಾರಕ್ಕೆ ತಿಳಿಸಿದ ನಂತರ, ಅವರು ಇದಕ್ಕೆ ತಕ್ಕ ಕಾನೂನನ್ನು ಪಾರ್ಲಿಮೆಂಟಿನಲ್ಲಿ ಮಾಡಲು ಅನುಕೂಲವಾಗುತ್ತದೆ. ಆದರಂತೆ ನಮ್ಮ ದೇಶದಲ್ಲಿ ಕೂಡ ಇರತಕ್ಕ ಯಾವುದೇ ಪ್ರಾಣಿಗಳೇ ಆಗಲಿ ಅವುಗಳನ್ನು ರಕ್ಷಣೆ ಮಾಡುವ ಕಾರ್ಯಕ್ಕೆ ಕೈ ಹಾಕಬಹುದು, ಒಂದು ದೃಷ್ಟಿಯಿಂದ ಇದು ರಾಜ್ಯಾಂಗಕ್ಕೆ ಅನುಗುಣವಾಗಿರುವುದರಿಂದ ಇದಕ್ಕೆ ನಮ್ಮ ಈ ಸಭೆಯು ಒಪ್ಪಿಗೆ ಅವರಿಗೆ ಕೊಡಬೇಕು, ಆಗ ಅವರು ಇಡೀ ಇಂಡಿಯಾದೇಶದಲ್ಲಿರುವ ಎಲ್ಲಾ ರಾಜ್ಯಗಳಿಗೂ ಅನ್ವಯವಾಗುವಂತಹ ಒಂದು ಕಾನೂನನ್ನು ಮಾಡಿ ಪಾರ್ಲಿಮೆಂಟಿನ ಮುಂದೆ ತರಲು ಸಹಾಯವಾಗುತ್ತದೆ, ಆದಕ್ಕಾಗಿ ಈ ನಿರ್ಣಯವನ್ನು ಈ ಸಭೆಯ ಮುಂದೆ ತಂದು ಸಭೆಯ ಅನುಮತಿಕೊಡಬೇಕೆಂದು ಕೇಳುತ್ತಿದ್ದೇವೆ. ಸಭೆ ಒಪ್ಪಿಗೆ ಕೊಟ್ಟನಂತರ ಇದನ್ನು ಕೇಂದ್ರ ಸರಕಾರದ ಕಡೆಗೆ ಕಳುಹಿಸಲು ಅನುಕೂಲವಾಗುತ್ತದೆ, ಇಂತಹ ಒಂದು ನಿರ್ಣಯಕ್ಕೆ ಸಭೆಯ ಒಪ್ಪಿಗೆ ಇದೆ ಎಂದು ತಂದಿದ್ದೇನೆ. ಇದಕ್ಕೆ ಎಲ್ಲ ಸದಸ್ಯರೂ ಅವರ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಇಲ್ಲ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ತಂದಿರತಕ್ಕ ಸಂಸತ್ತಿನ ತಿದ್ದುಪಡಿಗೆ ನಮ್ಮ ಒಪ್ಪಿಗೆ ಇದೆ. ಒಪ್ಪಿಗೆ ಇದ್ದರೂ ಕೂಡ ಇದರ ಅವಶ್ಯಕತೆ ಮತ್ತು ಈ ಕೆಲಸದಿಂದ ಯಾವ ರೀತಿ ಅನುಕೂಲ ವಾಗುತ್ತದೆ ಎನ್ನುವುದರ ಬಗ್ಗೆ ಎರಡು ಮಾತುಗಳನ್ನು ಇಲ್ಲಿ ಹೇಳಲು ಅಪೇಕ್ಷೆಪಡುತ್ತೇನೆ.

ಮೊದಲನೆಯದಾಗಿ ವೈಲ್ಡ್ ಅನಿಮಲ್ಸ್‌ಗಳನ್ನು ರಕ್ಷಣೆ ಮಾಡಬೇಕಾದುದು ಅಗತ್ಯ. ಇದಕ್ಕೆ ಕಾಡುಗಳು ಹೆಚ್ಚಾಗಿ ಬೆಳೆಯಬೇಕು. ಇಂದು ಇಂತಹ ವನ್ಯ ಪ್ರಾಣಿಗಳು ಹಾಳಾಗುವುದಕ್ಕೆ ಮುಖ್ಯ ಕಾರಣ ಕಾಡುಗಳನ್ನು ಹಾಳು ಮಾಡಿ ಅಲ್ಲಿರುವ ಮರಗಳನ್ನು ಕಡಿದು ಸೌದೆಗಳಿಗಾಗಿ ಉಪಯೋಗಿಸುತ್ತಿರುವುದು. ಕಾಡುಗಳು ಹೀಗೆ ನಾಶವಾದರೆ ಇಂತಹ ವನ್ಯ ಪ್ರಾಣಿಗಳನ್ನು ರಕ್ಷಿಸುವುದಾದರೂ ಹೇಗೆ ಎಂದು ಇಲ್ಲಿ ಕೇಳಬೇಕಾಗಿದೆ. ಇಂದು ಅರ್ಧಭಾಗ ಕಾಡುಗಳಲ್ಲಿರುವ ಮರಗಳನ್ನು ಕಡಿದು ಸೌದೆಗಾಗಿ ಮಾರುತ್ತಿದ್ದಾರೆ. ಇನ್ನುಳಿದ ಅರ್ಧಭಾಗಗಳಲ್ಲಿ ವ್ಯವಸಾಯ ಮಾಡಬೇಕೆಂದು ಭೂಮಿ ಬಿಟ್ಟುಕೊಡುತ್ತಿದ್ದಾರೆ, ಇದರಿಂದಾಗಿ ದೊಡ್ಡ ಕಾಡುಗಳೆಲ್ಲಾ ನಾಶವಾಗುತ್ತ ಬರುತ್ತಿವೆ, ಸರಕಾರದ ಇಂತಹ ನೀತಿಯಿಂದಾಗಿ ಇದ್ದ ಪ್ರಾಣಿಗಳೆಲ್ಲಾ ನಾಶವಾಗುತ್ತ ಬರುತ್ತಿವೆ, ನಮ್ಮ ಮೈಸೂರು ದೇಶದಲ್ಲಿ ಹಿಂದೆ ಮಲೆನಾಡಿನಲ್ಲಿ ಬೇಕಾದಷ್ಟು ದೊಡ್ಡ ಕಾಡುಗಳಿದ್ದವು. ಇದರಿಂದಾಗಿ ಆಗ ಮಳೆಯೂ ಕೂಡ ಸಕಾಲದಲ್ಲಿ ಬರುತ್ತಿತ್ತು. ಈಚೆಗೆ ಮಲೆನಾಡಿನಲ್ಲಿರುವ ಮರಗಳನ್ನೆಲ್ಲಾ ಕಡಿದು ಕಾಡುಗಳನ್ನು ನಾಶಮಾಡಿದ್ದಾರೆ ಮತ್ತು ಇಲ್ಲಿರುವ ದೊಡ್ಡ ಮರಗಳೂ ನಾಶವಾದುದರಿಂದ ಮಳೆ ಕೂಡ ಕಡಿಮೆಯಾಗಿದೆ. ಇದರಿಂದಾಗಿ

ಮಳೆಗಾಲದಲ್ಲಿ ಮಳೆ ಬರುವುದಕ್ಕೆ ಕೂಡ ಧಕ್ಕೆ ಬರುತ್ತಿದೆ. ಮತ್ತು ಹವಾಮಾನಕ್ಕೆ ಕೂಡ ತೊಂದರೆಯಾಗುತ್ತಿದೆ, ಈಗಿರುವ ಕಾಡುಗಳೇ ನಾಶವಾಗುತ್ತಿರುವಾಗ ಇಂತಹ ವನ್ಯ ಪ್ರಾಣಿಗಳನ್ನು ಯಾವ ರೀತಿ ಸಂರಕ್ಷಣೆ ಮಾಡುತ್ತಾರೆ, ಇದು ಸಾಧ್ಯವೇ ಆಗುವುದಿಲ್ಲ. ವನ್ಯ ಪ್ರಾಣಿಗಳು ಜೀವಿಸಬೇಕಾದರೆ ಅದಕ್ಕೆ ಅನುಕೂಲವಾದ ಕಾಡುಗಳು ಇರಬೇಕು, ಹೆಚ್ಚು ಕಾಡುಗಳು ಬೆಳೆಯಲು ಅವಕಾಶ ಕೊಡಬೇಕು. ಇದರ ಬಗ್ಗೆ ಕೇಂದ್ರ ಸರಕಾರದವರು ಹಾಗೂ ರಾಜ್ಯ ಸರಕಾರದವರು ಒಟ್ಟಿಗೆ ಕೆಲಸ ಮಾಡಿದರೆ ಅನುಕೂಲವಾಗಬಹುದು. ಈಗ ಕೇಂದ್ರ ಸರಕಾರದವರು ಇದರ ಬಗ್ಗೆ ವನ್ಯ ಪ್ರಾಣಿಗಳ ರಕ್ಷಣೆ ಮಾಡಬೇಕೆಂದು ಹೇಳುತ್ತಿದ್ದಾರೆ. ಆದರೆ ಇದಕ್ಕೆ ತಕ್ಕ ಅನುಕೂಲಗಳನ್ನು ಮಾಡುತ್ತಿಲ್ಲ. ಇರುವ ಕಾಡುಗಳೇ ಹಾಳಾಗುತ್ತಿರುವಾಗ ಇಂತಹ ಪ್ರಾಣಿಗಳನ್ನು ಯಾವ ರೀತಿ ರಕ್ಷಣೆ ಮಾಡುತ್ತಾರೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಇದಕ್ಕಾಗಿ ನಮ್ಮ ರಾಜ್ಯ ಸರಕಾರದವರು ಕಾಡುಗಳ ಎಲ್ಲ ಜವಾಬ್ದಾರಿಯನ್ನು ಕೇಂದ್ರ ಸರಕಾರದವರಿಗೇ ವಹಿಸಿ ರಾಜ್ಯ ಸರಕಾರದವರೂ ಒಂದು ರೀತಿಯ ಹೊಂದಾಣಿಕೆ ಮೇಲೆ ಕೆಲಸ ಮಾಡಿದರೆ ಆಗ ಕಾಡುಗಳೇನಾದರೂ ಬೆಳಸಲು ಅನುಕೂಲವಾಗಬಹುದು ಮತ್ತು ಇಂತಹ ವನ್ಯ ಪ್ರಾಣಿಗಳನ್ನು ರಕ್ಷಣೆ ಮಾಡಬಹುದು, ಇದರ ಬಗ್ಗೆ ಒಂದು ಸೂಕ್ತವಾದ ಕಾರ್ಯಕ್ರಮ ಹಾಕಿಕೊಂಡು ರಾಜ್ಯ ಸರಕಾರ ಕೆಲಸ ಮಾಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಬಿ. ಶಿವಯ್ಯ (ನಂಜನಗೂಡು).—ಸನ್ಮಾನ್ಯ ಅಧ್ಯಕ್ಷರೇ, ಇಂತಹ ಒಂದು ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಗಳು ಏನು ಮಂಡಿಸಿದ್ದಾರೆ ಇದು ಬಹುಶಃ ವನ್ಯ ಪ್ರಾಣಿಗಳಿಗೆ ಮಾತ್ರ ರಕ್ಷಣೆ ಕೊಡಬೇಕು ಎಂದು ಇರುವುದಕ್ಕಿಂತ ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ ಪ್ರಾಣಿಗಳಿಗೂ ರಕ್ಷಣೆ ಕೊಡಬೇಕಾದುದು ಅಗತ್ಯ ಮತ್ತು ಅದರಲ್ಲೂ ಇದು ಇಂದಿನ ದಿನಗಳಲ್ಲಿ ಅತ್ಯಗತ್ಯ ಎಂದು ನಾನು ಭಾವಿಸುತ್ತೇನೆ. ಈಗಾಗಲೇ ವನ್ಯ ಮೃಗಗಳ ರಕ್ಷಣೆ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಮುಖ್ಯಮಂತ್ರಿಗಳಿಗೆ ಅವರ ಸಲಹೆಗಳನ್ನು ತಿಳಿಸಿದ್ದಾರೆ ಮತ್ತು ಯಾವ ರೀತಿ ವನ್ಯ ಪ್ರಾಣಿಗಳಿಗೆ ತೊಂದರೆಗಳಾಗುತ್ತಿವೆ ಎನ್ನುವುದನ್ನೂ ತಿಳಿಸಿದ್ದಾರೆ, ಕಾಡುಗಳೇ ಹಾಳಾಗುತ್ತಿರುವಾಗ ಕಾಡುಪ್ರಾಣಿಗಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಾ ಹೋಗುತ್ತಿವೆ, ಮುಂದೆ ಇದು ಎಲ್ಲಿಗೆ ಹೋಗುತ್ತಾ ಬಂದಿದೆ ಎಂದರೆ ಇಂತಹ ಪ್ರಾಣಿಗಳ ಒಂದು ಸ್ಪಿಷೀಸ್ ಕೂಡ ಸಿಗುತ್ತದೋ ಇಲ್ಲವೋ ಎನ್ನುವಷ್ಟು ಮಟ್ಟಿಗೆ ಬಂದಿದೆ. ಇನ್ನು ಹತ್ತಾರು ವರ್ಷಗಳಲ್ಲಿ ಇಂತಹ ಪ್ರಾಣಿಗಳೇ ಇರುವುದಿಲ್ಲವೋ ಏನೋ ಎನ್ನುವ ಒಂದು ಅನುಮಾನವೂ ಬರುತ್ತಿದೆ. ಈಗಾಗಲೇ ಅನೇಕ ಕಡೆಗಳಲ್ಲಿ ಇರುವ ಕಾಡುಗಳಲ್ಲಿ ಇರುವ ಮರಗಳನ್ನು ಕಡಿದಿದ್ದಾರೆ ಮತ್ತು ಆನೆಯ ಕೊಂಬು ಪಡೆಯಬೇಕು ಎನ್ನುವ ಆಸೆಯಿಂದ ಆನೆಗಳನ್ನು ಕೊಲ್ಲುತ್ತಿದ್ದಾರೆ, ಇಂತಹ ಕೊಂಬುಗಳನ್ನು ಪರದೇಶಕ್ಕೆ ಕಳುಹಿಸಬೇಕೆಂದು ಮತ್ತು ಇದರ ಮಾಂಸವನ್ನು ಇತರ ಕಡೆಗಳಿಗೆ ಹೆಚ್ಚು ಬೆಲೆ ಕೊಟ್ಟು ಮಾರಲು ಪ್ರಯತ್ನ ಮಾಡುತ್ತಿದ್ದಾರೆ, ಇಂತಹ ಬೇಟೆಗಳಿಗೆ ಸರಕಾರ ಆಸ್ಪದ ಕೊಡಬಾರದು, ಬೇಟೆಗೆ ಅವಕಾಶ ಕೊಡುತ್ತಿರುವುದರಿಂದ ಇಂದು ಒಳ್ಳೆಯ ಪ್ರಾಣಿಗಳ ವಂಶವೇ ಹಾಳಾಗಿ ಹೋಗುತ್ತಿದೆ, ಇದರಿಂದಾಗಿ ಕಾಡುಗಳು ವಿಶಾಲವಾಗುತ್ತಿರುವುದರಿಂದ ಇನ್ನು ಮುಂದೆ ಕಾಡುಗಳು ಯಾವ ರೀತಿ ಬೆಳೆಯುತ್ತವೋ ಹೇಳುವುದು ಕಷ್ಟವಾಗಿದೆ. ಇದಕ್ಕಾಗಿ ಸರಕಾರ ಕಟ್ಟುನಿಟ್ಟಾದ ಕ್ರಮಗಳನ್ನು ಅನುಸರಿಸಬೇಕು ಮತ್ತು ಕಡ್ಡಾಯವಾಗಿ ಇಂತಹ ಪ್ರಾಣಿಗಳನ್ನು ರಕ್ಷಣೆ ಮಾಡಲು ಸರಿಯಾದ ನಿಯಮಗಳನ್ನು ಮಾಡಿ ಈ ಪ್ರಾಣಿಗಳನ್ನು ರಕ್ಷಣೆ ಮಾಡಬೇಕು. ಇದಕ್ಕಾಗಿ ಕೆಲವು ಯೋಜನೆಗಳನ್ನು ಎಂದರೆ ಅಫೊರೆಸ್ಟೇಷನ್ ಇತ್ಯಾದಿ ಯೋಜನೆಗಳನ್ನು ಮಾಡಿ ಹೆಚ್ಚು ಕಾಡುಗಳನ್ನು ಬೆಳೆಸಲು ತಕ್ಕ ಕ್ರಮ ತೆಗೆದುಕೊಂಡು ಇಂತಹ ವನ್ಯ ಪ್ರಾಣಿಗಳನ್ನು ರಕ್ಷಣೆ ಮಾಡುವುದರ ಕಡೆಗೆ ಗಮನ ಕೊಡಬೇಕು ಮತ್ತು ಇನ್ನು ಮುಂದೆ ಬಂದೂಕು ಇತ್ಯಾದಿಗಳನ್ನು ಪಯೋಗಿಸಿ ಬೇಟೆಯಾಡುವವರಿಗೆ ಅವಕಾಶ ಕೊಡಬಾರದು. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕು ಮತ್ತು ಅವರು ತಂದಿರುವ ನಿರ್ಣಯವನ್ನು ಸರ್ವಾನುಮತದಿಂದ ನಾವೆಲ್ಲರೂ ಒಪ್ಪಿ ಸಹಾಯ ಮಾಡಬೇಕು ಮತ್ತು ರಾಜ್ಯ ಸರಕಾರದವರು ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡಿ ಇಂತಹ ಒಂದು ಕಾನೂನನ್ನು ಬೇಗನೆ ಮಾಡಿ ತರಬೇಕೆಂದು ಹೇಳಬೇಕು ಮತ್ತು ಈ ದೇಶದಲ್ಲಿರುವ ಪ್ರಕೃತಿ ಸಂಪತ್ತನ್ನು ಪ್ರಕೃತಿ ನಿಯಮಗಳಿಗನುಸಾರವಾಗಿ ಯಾವ ರೀತಿ ಮಾಡಬೇಕು ಎನ್ನುವುದನ್ನು ಪರಿಶೀಲಿಸಿ ಆ ರೀತಿ ಹೆಚ್ಚು ಹೆಚ್ಚು ಕಾಡುಗಳು ಬೆಳೆಯಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು, ನಾನು ಸಂಪೂರ್ಣವಾಗಿ ಇಲ್ಲಿ ತಂದಿರುವ ನಿರ್ಣಯಕ್ಕೆ ನನ್ನ ಬೆಂಬಲವನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ವನ್ಯ ಮೃಗಗಳ ರಕ್ಷಣೆ ಬಗ್ಗೆ ನಮ್ಮ ನಾಡಿನಲ್ಲಿ ಹಾಗೂ ನಮ್ಮ ರಾಷ್ಟ್ರದಲ್ಲಿ ಬಹಳ ಪುರಾತನ ಕಾಲದಿಂದಲೂ ಕೂಡ ವಿಶೇಷವಾದ ಗಮನವನ್ನು ಕೊಟ್ಟು ಕಾಪಾಡಿಕೊಂಡು ಬರುತ್ತಿರುವುದನ್ನು ನಾವು ಕಂಡಿದ್ದೇವೆ. ಇತಿಹಾಸದಲ್ಲಿ ಕೂಡ ನಾವು ಇದನ್ನು ಓದಿದ್ದೇವೆ. ಕಾವ್ಯಗಳಲ್ಲಿ ಕೂಡ ನಾವು ಮೃಗಯಾ ವಿಹಾರ ಎನ್ನುವುದನ್ನು ನೋಡಿದ್ದೇವೆ. ಹಿಂದೆ ರಾಜರುಗಳು ಹಾಗೂ ಇತರರು ಮೃಗಯಾ ವಿಹಾರ ಎಂದು ಕಾಡುಗಳಿಗೆ ಹೋಗುತ್ತಿದ್ದರು, ಹಿಂದೆ ಅರಣ್ಯಗಳಿಗೆ ಬೇಟೆಯಾಡಲು ರಾಜರುಗಳು ಹೋಗುತ್ತಿದ್ದರು, ತಮಗೆಲ್ಲ ಗೊತ್ತಿರುವಂತೆ ದುಷ್ಯಂತ ಮಹಾರಾಜ ಮೃಗಯಾ ವಿಹಾರಕ್ಕೆಂದು ಕಾಡಿಗೆ ಹೋಗಿ ಕಣ್ವರ ಆಶ್ರಮದಲ್ಲಿದ್ದ ಶಕುಂತಳೆಯನ್ನು ವಿವಾಹ ಮಾಡಿಕೊಂಡು ಭರತನೆಂಬ ಸುಪುತ್ರನನ್ನು ಕೊಟ್ಟಳು. ಇಂದು ಅದೇ ಭರತನ ಹೆಸರು ಭಾರತ ದೇಶವೆಂದು ಹೆಸರನ್ನು ತಂದು ಕೊಟ್ಟಿದೆ.

5-00 P.M.

ಆ ಶಾಕುಂತಲೆಯ ಕಥೆಯನ್ನು ನಾವು ಕಾಳಿದಾಸನ ರಮ್ಯ ನಾಟಕದಿಂದ ನೋಡುತ್ತೇವೆ ಮತ್ತು ಓದುತ್ತೇವೆ. ಆ ಕಾಲದಿಂದಲೂ ವನ್ಯಪ್ರಾಣಿಗಳನ್ನು ಸಾಕತಕ್ಕಂಥದ್ದನ್ನು ನಾವು ನೋಡಿದ್ದೇವೆ. ಇದು ಮೊದಲಿನಿಂದಲೂ ಭಾರತ ದೇಶದಲ್ಲಿ ನಡೆದುಕೊಂಡು ಬಂದಿರುವ ಪದ್ಧತಿಯಾಗಿದೆ. ಹಿಂದೆ ಋಷಿಗಳ ಆಶ್ರಮಗಳಲ್ಲಿಯೂ ಸಹ ಕ್ರೂರ ಪ್ರಾಣಿಗಳು ಸಾಧು ಪ್ರಾಣಿಗಳಾಗಿ ಇದ್ದುವಂತೆ. ಆಗಿನ ಒಂದು ಪರಿಸ್ಥಿತಿ ಈಗ ಇಲ್ಲವಾಗಿದೆ. ಬರಬರುತ್ತಾ ನಮ್ಮ ರಾಷ್ಟ್ರದಲ್ಲಿ ನಮ್ಮ ರಾಜ್ಯದಲ್ಲಿ ನಮ್ಮ ಸುಂದರ ಪ್ರಾಣಿಗಳ ಸಂಖ್ಯೆ ಕಡಿಮೆಯಾಗುತ್ತಾ ಬಂದಿರುವುದಲ್ಲದೆ, ಕೆಲವು ವರ್ಗದ ಪ್ರಾಣಿಗಳು ಇಲ್ಲವೇ ಇಲ್ಲವೇನೋ ಎನ್ನುವ ಹಾಗೆ ಆಗಿದೆ. ಹುಲಿ ಎಂಬ ಪ್ರಾಣಿ ಸುಂದರವಾದ ಪ್ರಾಣಿ. ಅವು ಇಂದು ಕಾಡಿನಲ್ಲಿ ಇಲ್ಲ. ಅವೆಲ್ಲಾ ಪೇಟೆ ಸೇರಿವೆ. ಆದ್ದರಿಂದಲೇ ಸರ್ಕಾರದವರು ಪಟ್ಟಣದ ಆಸ್ತಿಯ ಮೇಲೆ ಮಿತಿ ತರುತ್ತಿರುವುದು ಎಂದು ಕಾಣುತ್ತದೆ.

[Mr. Chairman (SRI T. R. SHAMANNA) in the Chair]

ವನ್ಯಮೃಗಗಳಿಗೆ ಸಂಬಂಧಪಟ್ಟ ಹಾಗೆ, ಹುಲಿ, ಕರಡಿ, ಸಿಂಹ ಮುಂತಾದ ಕಾಡು ಪ್ರಾಣಿಗಳನ್ನು ಮೊದಲು ನಮ್ಮ ಮಲೆನಾಡಿನಲ್ಲಿ ನೋಡಬಹುದಾಗಿತ್ತು. ಆದರೆ ಇಂದು ಅಲ್ಲಿ ಕಾಡಿದೆಯೇ ಹೊರತು, ಪ್ರಾಣಿಗಳಿಲ್ಲ. ಇದಕ್ಕೆ ಕಾರಣವೆಂದರೆ, ಈ ಪ್ರಾಣಿಗಳನ್ನು ರಕ್ಷಣೆ ಮಾಡಬೇಕೆಂದು ಸರ್ಕಾರದವರು ಯಾರನ್ನು ನೇಮಕ ಮಾಡಿದ್ದಾರೋ ಅವರೇ ಆ ಪ್ರಾಣಿಗಳನ್ನು ಭಕ್ಷಣೆ ಮಾಡುತ್ತಿದ್ದಾರೆ. ನಿಜವಾಗಿ ಯಾವ ಪ್ರಾಣಿಗಳು ಜನರಿಗೆ ತೊಂದರೆ ಕೊಡುತ್ತಿವೆಯೋ ಅವುಗಳನ್ನು ಷಿಕಾರಿ ಮಾಡದೆ, ಸರ್ಕಾರದವರು ಅರಣ್ಯವನ್ನು ನೋಡಿಕೊಳ್ಳುವುದಕ್ಕೆ ನೇಮಕ ಮಾಡಿರತಕ್ಕಂಥ ಗಾರ್ಡ್‌ಗಳು ಏನು ಮಾಡುತ್ತಿದ್ದಾರೆಂದರೆ, ಊರಿನ ಜನರನ್ನು ಸೇರಿಸಿಕೊಂಡು ರಕ್ಷಣೆ ಮಾಡತಕ್ಕಂಥ ಪ್ರಾಣಿಗಳನ್ನು ಷಿಕಾರಿ ಮಾಡಿ ಭಕ್ಷಣೆ ಮಾಡುತ್ತಿದ್ದಾರೆ. ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ, ನನ್ನ ಕ್ಷೇತ್ರದಲ್ಲಿರುವ ಮಂಡಗದ್ದೆ, ಸಿಂಗಬಿದರೆ ಪ್ರದೇಶಗಳಲ್ಲಿ ಸಕ್ಕರೆಬಯಲಿನಿಂದ ಆನೆಗಳು ಬಂದು ಕಳೆದ 5–6 ತಿಂಗಳುಗಳಿಂದ ರೈತರ ಜಮೀನುಗಳನ್ನು ನಾಶ ಮಾಡುತ್ತಿವೆ, ತೋಟಗಳನ್ನು ನಾಶ ಮಾಡುತ್ತಿವೆ. ಅವುಗಳನ್ನು ಹಿಡಿಯಿರಿ ಎಂದು ಅರಣ್ಯ ಇಲಾಖೆಯವರಿಗೆ ಹೇಳಿದರೆ ಅವರು ಸುಮ್ಮನೆ ರಸ್ತೆಯಲ್ಲಿ ತಿರುಗಾಡಿಕೊಂಡು ವಾಪಸ್ ಬರುತ್ತಿದ್ದಾರೆಯೇ ವಿನಃ ಅವುಗಳನ್ನು ಹಿಡಿದು ಪಳಗಿಸುತ್ತಿಲ್ಲ. ಮತ್ತೆ ಯಾವ ರೀತಿ ಜನರಿಗೆ ರಕ್ಷಣೆ ಕೊಡುತ್ತೀರಾ ? ಅದೇ ಮಲೆನಾಡಿನ ಸುಂದರ ಪ್ರಾಣಿಗಳಾದ ಜಿಂಕೆಗಳು ಏನಾದರೂ ಇದ್ದರೆ ಅವುಗಳನ್ನು ರಕ್ಷಣೆ ಮಾಡುವ ಬದಲು ಷಿಕಾರಿ ಮಾಡಿ, ಬಂದೂಕದಿಂದ ಹೊಡೆದು ಆ ಮೂಲಕ ಭಕ್ಷಣೆ ಮಾಡುತ್ತಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಬೇರೆ ಜನರು ಯಾರೂ ಹೊಡೆಯುವುದಿಲ್ಲವೇ ?

ಶ್ರೀ ಕೋಣಂದೂರು ಲಿಂಗಪ್ಪ.—ರಕ್ಷಣೆ ಮಾಡತಕ್ಕಂಥವರೇ ಕೊಂದು ಭಕ್ಷಣೆ ಮಾಡುತ್ತಿದ್ದಾರೆಂದು ನಾನು ಹೇಳುತ್ತಿರುವುದು. ಕೆಲವು ಸಮಯದಲ್ಲಿ ಅಂದರೆ ಹಬ್ಬಗಳು ಬಂದಾಗ ಇವರು ಷಿಕಾರಿ ಮಾಡುವುದು ಒಂದು ಪದ್ಧತಿಯಾಗಿಬಿಟ್ಟಿದೆ. ಅಂದು ಕಾನೂನಿಗೆ ವಿರುದ್ಧವಾಗಿ ಜಿಂಕೆ, ಸಾರಂಗ ಮುಂತಾದ ಪ್ರಾಣಿಗಳನ್ನು ಷಿಕಾರಿ ಮಾಡಿ ಭಕ್ಷಣೆ ಮಾಡುತ್ತಾರೆ. ಕಾಡು ಸ್ವಾಭಾವಿಕವಾಗಿಯೇ ಚೆನ್ನಾಗಿ ಬೆಳೆಯಬೇಕು, ಅದರಲ್ಲಿಯೂ ಮಲೆನಾಡಿನ ಕಾಡುಗಳು ಸಾಂದ್ರವಾಗಿ ಬೆಳೆಯಬೇಕು ಎಂದು ನಿಯಮವಿದ್ದರೂ ಸಹ, ಸರ್ಕಾರದವರೇ ಕಾಡನ್ನು ನಾಶಮಾಡಿ ನೀಲಗಿರಿ ಮರಗಳನ್ನು ಬೆಳೆಸುತ್ತಿದ್ದಾರೆ. ಯಾವಾಗ ಕಾಡಿನ ಸಾಂದ್ರತೆ ಕಡಿಮೆಯಾಗುತ್ತದೋ ಆಗ

ಮಳೆಯೂ ಸಹ ಕಡಿಮೆಯಾಗಿ ಹವಾಗುಣ ಹಾಳಾಗುತ್ತದೆ. ಆಗ ಕಾಡುಪ್ರಾಣಿಗಳು ದಿಕ್ಕಾಪಾಲಾಗಿ ಬೇರೆ ಕಡೆಗಳಿಗೆ ಹೋಗಿ ಬಿಡುತ್ತವೆ. ಈ ಕಾರಣದಿಂದ ಅರಣ್ಯ ಸಂಪತ್ತು ಸ್ವಾಭಾವಿಕವಾಗಿಯೇ ಬೆಳೆಯುವುದಕ್ಕೆ ಬಿಡಬೇಕು. ಈಗ ಬಿರ್ಲಾ ಅವರಿಗೆ ರೆಯಾನ್ ಸಿಲ್ಕ್ ತಯಾರಿಸಲು ಸರ್ಕಾರದವರು ನೀಲಗಿರಿ ಮರ ಬೆಳೆಸಲು ಏನು ವನಮಹೋತ್ಸವ ಮಾಡುತ್ತಿದ್ದಾರೆ ಅದನ್ನು ಕೂಡಲೇ ಕೈಬಿಡಬೇಕು. ಮತ್ತು ಕಾಡು ಸ್ವಾಭಾವಿಕವಾಗಿಯೇ ಬೆಳೆಯುವುದಕ್ಕೆ ಬಿಡಬೇಕು. ಕಾಡನ್ನು ನಾಶ ಮಾಡುವುದರಿಂದ ಸಾಂದ್ರತೆ ಕಡಿಮೆಯಾಗಿ ಮಳೆ ಬರುವುದು ಸಹ ಕಡಿಮೆಯಾಗಿ ಬಿಡುತ್ತದೆ. ಈಗ ಬಿಜಾಪುರ ಮತ್ತಿತರ ಭಾಗದವರು ಕ್ಷಾಮ ಎಂದು ಏನು ಹೇಳುತ್ತಿದ್ದಾರೆ, ಅದೇ ಮಾತನ್ನು ಇದೇ ರೀತಿ ಕಾಡನ್ನು ಕಡಿಯುತ್ತಾ ಹೋದರೆ ಮಲೆನಾಡಿನ ಶಿವಮೊಗ್ಗ ಜಿಲ್ಲೆಯವರು ಮತ್ತು ತೀರ್ಥಹಳ್ಳಿ ಕ್ಷೇತ್ರದವರು ಸಹ ಹೇಳಬೇಕಾದೀತು ಎಂಬ ಮುನ್ನೆಚ್ಚರಿಕೆಯನ್ನು ಕೊಡುತ್ತಿದ್ದೇನೆ. ಈಗ ಆಗುಂಬೆಯನ್ನು ದಕ್ಷಿಣ ಭಾರತದ ಚಿರಾಪುಂಜಿ ಎಂದು ಏಕೆ ಕರೆಯುತ್ತಿದ್ದಾರೆ, ಅಲ್ಲಿಯೂ ಸಹ ಕಾಡಿನ ನಾಶದ ಕಾರಣ ಮಳೆ ಕಡಿಮೆಯಾಗಿದೆ, ಸಾಂದ್ರತೆ ಕಡಿಮೆಯಾಗಿದೆ. ಈ ಕಾರಣದಿಂದ ಇನ್ನುಮುಂದೆ ಕಾಡಿಗೆ ಹೆಚ್ಚಿನ ಮಾನ್ಯತೆ ಕೊಟ್ಟು ಕಡಿಯುವುದಕ್ಕೆ ಹೋಗಬಾರದು ಎಂದು ಕೇಳಿಕೊಳ್ಳುತ್ತೇನೆ. ಕಾಡು ಇದ್ದರೆ ವನ್ಯಮೃಗಗಳು ಬದುಕುವುದಕ್ಕೆ ಅನುಕೂಲವಾಗುತ್ತದೆ. ಇಂದು ನಾವು ಸುಂದರ ಕಾಡುಪ್ರಾಣಿಗಳನ್ನು ಸಾಕಷ್ಟು ಹೆಚ್ಚಿನ ರೀತಿಯಲ್ಲಿ ರಕ್ಷಣೆ ಮಾಡಬೇಕಾಗಿದೆ. ಕೆಲವು ಕ್ರೂರ ಪ್ರಾಣಿಗಳು ಸುಂದರವಾಗಿ ಕಾಣುತ್ತದೆ. ಅವುಗಳನ್ನು ರಕ್ಷಣೆ ಮಾಡಬೇಕು. ಏನು ಕಾಡು ಪ್ರಾಣಿಗಳು ನಾನಾ ತರಹ ಇವೆ ಅವುಗಳೆಲ್ಲವನ್ನೂ ಒಂದೇ ಕಾಡಿನಲ್ಲಿ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಇಂದು ಎಲ್ಲ ಪ್ರಾಣಿಗಳನ್ನು ಒಂದೇ ಕಡೆ ನೋಡಬೇಕಾಗಿದ್ದರೆ ಮೈಸೂರಿನ ಜೂಗೆ ಹೋಗಬೇಕು. ಈ ಸಂದರ್ಭದಲ್ಲಿ ಮೈಸೂರು ಜೂನ ಅಧಿಕಾರಿಗಳಾದ ಶ್ರೀ ಕೃಷ್ಣೇಗೌಡರನ್ನು ಅಭಿನಂದಿಸುತ್ತೇನೆ. ಏಕೆಂದರೆ ಅವರು ಮೈಸೂರಿನ ಜೂವನ್ನು ಆಕರ್ಷಣೀಯವಾಗಿ ಮಾಡಿ ಇಟ್ಟಿದ್ದಾರೆ. ಮತ್ತು ಪ್ರಾಣಿಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಅವರಿಗೆ ಸರ್ಕಾರದವರು ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಟ್ಟರೆ ಈ ವನ್ಯ ಪ್ರಾಣಿಗಳನ್ನು ಅವರು ಯಾವ ರೀತಿ ರಕ್ಷಣೆ ಮಾಡಬಹುದು ಎಂಬ ಬಗ್ಗೆ ಸಲಹೆ ಕೊಡಬಹುದು. ಆದ್ದರಿಂದ ಮಾನ್ಯ ಮಂತ್ರಿಗಳು ಈ ಕಡೆ ಗಮನ ಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ವನ್ಯಪ್ರಾಣಿಗಳು ಏನಿವೆ, ಅವುಗಳ ರಕ್ಷಣೆ ಜನರ ರಕ್ಷಣೆಯಷ್ಟೇ ಮುಖ್ಯ. ಏಕೆಂದರೆ ಅವುಗಳಿಗೆ ಮಾತನಾಡಲು ಬಾಯಿ ಇಲ್ಲ. ಬಾಯಿ ಇದ್ದು ನಾವೇ ಎಷ್ಟು ಕೂಗಿಕೊಂಡರೂ ಕಿವಿ ಕೇಳದ ಹಾಗೆ ಇರುತ್ತಾರೆ. ಹಾಗಿರಬೇಕಾದರೆ ಅವನ್ನು ಕೇಳುವವರು ಯಾರು ? ಆದಕಾರಣ ವನ್ಯಪ್ರಾಣಿಗಳ ರಕ್ಷಣೆ ಮಾಡಬೇಕಾದುದು ನಮ್ಮೆಲ್ಲರ ಕರ್ತವ್ಯ. ಅದಕ್ಕೋಸ್ಕರ ಹೆಚ್ಚಿನ ಆಸಕ್ತಿ ವಹಿಸಬೇಕು. ಈ ವನ್ಯಪ್ರಾಣಿಗಳನ್ನು ರಕ್ಷಣೆ ಮಾಡುವ ವಿಷಯದಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಅನುಮತಿ ಪಡೆದು, ತಾನೇ ಅವುಗಳ ರಕ್ಷಣೆ ನೋಡಿಕೊಳ್ಳುವ ಬಗ್ಗೆ ಸಂವಿಧಾನಕ್ಕೆ ತಿದ್ದುಪಡಿ ಮಾಡುವುದಕ್ಕೆ ಇದನ್ನು ಕಳಿಸಿದ್ದಾರೆ. ಇನ್ನು ವನ್ಯಪ್ರಾಣಿಗಳನ್ನು ಕೇಂದ್ರ ಸರ್ಕಾರವೇ ರಕ್ಷಣೆ ಮಾಡುವುದಾದರೆ, ಇದರ ಹಾಗೆ ಎಲ್ಲ ಅಧಿಕಾರಗಳನ್ನು ಅವರೇ ಒಂದೊಂದಾಗಿ ತೆಗೆದುಕೊಳ್ಳುವುದಾದರೆ, ಈ ರಾಜ್ಯದ ಅಸ್ತಿತ್ವವಾದರೂ ಎಲ್ಲಿ ಉಳಿಯುತ್ತದೆ. ನಮ್ಮ ಕೆಲಸಗಳನ್ನು ನಡೆಸುವ ಸ್ವಾತಂತ್ರ್ಯದ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಈಗ ಒಂದು ರೀತಿಯಲ್ಲಿ ಅಧಿಕಾರದ ಕೇಂದ್ರೀಕರಣವಾಗುತ್ತಿದೆಯೆಂಬುದಕ್ಕೆ ಇದು ಸಾಕ್ಷಿಯಾಗಿದೆ. ಕೇಂದ್ರದಿಂದ ನಮಗೆ ಅಪಾಯವಿದೆ. ಈ ವಿಚಾರದಲ್ಲಿ ನಾವು ಪಾಕಿಸ್ಥಾನವನ್ನು ನೆನಪಿಗೆ ತಂದುಕೊಳ್ಳಬಹುದಾಗಿದೆ. ಅಲ್ಲಿ ಎಲ್ಲ ಅಧಿಕಾರಿಗಳು ಕೇಂದ್ರೀಕರಣವಾಗಿದ್ದರಿಂದಲೇ ಬಾಂಗ್ಲಾ ದೇಶ ಉದಯವಾಯಿತು.

ಈಗ ಅಧಿಕಾರ ಅತಿ ಕೇಂದ್ರೀಕರಣವಾಗುತ್ತದೆ. ಇದರಿಂದಾಗಿ ಅವರು ಸ್ವೇಚ್ಛೆಯಾಗಿ ನಡೆಯುವುದಕ್ಕೆ ಪ್ರಾರಂಭವಾಗಿದೆ. ಈ ರೀತಿಯಾಗಿ ಪ್ರತಿಯೊಂದನ್ನು ಕೇಂದ್ರಸರ್ಕಾರಕ್ಕೆ ಅಧಿಕಾರವನ್ನು ಕೊಡುತ್ತಾ ಹೋದರೆ ಇದು ಮೂಲಭೂತವಾಗಿ ನಮ್ಮ ರಾಷ್ಟ್ರದ, ನಮ್ಮ ರಾಜ್ಯದ ಪ್ರಜಾಪ್ರಭುತ್ವದ ಅಸ್ತಿತ್ವಕ್ಕೇ ಧಕ್ಕೆ ಬಂದೀತು, ಅಪಾಯ ಉಂಟಾಗುವಂತಹ ಸನ್ನಿವೇಶ ಬಂದೀತು ಎಂದು ನಾನು ತಮಗೆ ಮುನ್ನೆಚ್ಚರಿಕೆ ಕೊಡುತ್ತೇನೆ.

ವನ್ಯ ಮೃಗಗಳನ್ನು ರಕ್ಷಣೆ ಮಾಡಬೇಕಾದ್ದು ಎಲ್ಲರ ಕರ್ತವ್ಯ. ಮತ್ತು ಅವುಗಳ ವಂಶ ವೃದ್ಧಿಗೆ ಏನು ಸದವಕಾಶಗಳನ್ನು ಕಲ್ಪಿಸಿಕೊಡಬೇಕೋ ಅವುಗಳನ್ನು ಕಲ್ಪಿಸಿಕೊಡಬೇಕು. ಇವೊತ್ತು ನಮ್ಮಲ್ಲಿಂತಕ್ಕ ಒಳ್ಳೊಳ್ಳೆಯ ಜಾತಿಯ ಪ್ರಾಣಿಗಳು ಏನಿವೆ ಅವುಗಳಲ್ಲಿ ಕೆಲವು ಜಾತಿಗಳು ಅಳಿದು ಹೋಗುತ್ತಿವೆ. ಅದಕ್ಕೆ ಸ್ವಾಭಾವಿಕವಾದ ಕಾರಣಗಳು ಇದ್ದರೂ ಇರಬಹುದು. ಅವುಗಳಿಗೆ ಜನಗಳಿಂದ ನಾನಾ ರೀತಿಯ ತೊಂದರೆಗಳೂ ಕೂಡ ಆಗಬಹುದು. ಆದರೆ ನಮ್ಮಲ್ಲಿ ಜನಗಳ ಅಂಥಾ ಹೆಚ್ಚಿನ ತೊಂದರೆಯನ್ನು ಪ್ರಾಣಿಗಳಿಗೆ ಕೊಡುವುದಿಲ್ಲ. ಈಗ ಮನೆಯ ಹಿಂದುಗಡೆ

(ಶ್ರೀ ಕೋಣಂದೂರು ಲಿಂಗಪ್ಪ)

ಇರತಕ್ಕ ಕೊಟ್ಟಿಗೆಯಲ್ಲಿ ಕಟ್ಟಿರತಕ್ಕ ದನಕರುಗಳನ್ನು ತಿಂದು ಹೋಗತಕ್ಕ ಹುಲಿಯನ್ನು ಹೊಡೆಯುವುದಕ್ಕೆ ಮಲೆನಾಡಿನ ಜನ ಹೆದರಿ ಮುಂದು ನೋಡುತ್ತಾರೆ. ಕ್ರೂರವಾದ ಮತ್ತು ಕೆಟ್ಟ ಪ್ರಾಣಿಗಳನ್ನು ಹೊಡೆಯಬೇಕಾಗುತ್ತದೆ. ಏತಕ್ಕೆಂದರೆ ಕಾಡಿನ ಅಕ್ಕಪಕ್ಕಗಳಲ್ಲಿರುವ ಹಳ್ಳಿಗಳಲ್ಲಿರತಕ್ಕ ಜಾನುವಾರುಗಳನ್ನು ಅವು ನಾಶ ಮಾಡುತ್ತವೆ. ಅಂಥಾ ದೂರುಗಳು ಸಾರ್ವಜನಿಕರಿಂದ ಬಂದರೆ ಸರ್ಕಾರದವರು ಆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕ್ರೂರ ಪ್ರಾಣಿಗಳನ್ನು ಹೊಡೆಯುವುದಕ್ಕೆ ಅವಕಾಶವನ್ನು ಕಲ್ಪಿಸಬೇಕು. ಈಗ ನಮ್ಮ ಕ್ಷೇತ್ರದಲ್ಲಿ ಎರಡು ಆನೆಗಳು ಬಹಳ ನಾಶ ಮಾಡುತ್ತವೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಶಿವಮೊಗ್ಗ ಜಿಲ್ಲೆಯ ಡಿ. ಎಫ್. ಒ. ಅವರಿಗೆ ನಾನು ಹೇಳಿದ್ದೇನೆ. ತೀರ್ಥಹಳ್ಳಿ, ಮಂಡಗದ್ದೆ ಈ ಪ್ರದೇಶಗಳಲ್ಲಿ ಎರಡು ಆನೆಗಳು ಕೆಲವು ತೋಟ ಮತ್ತು ಇತರ ಬೆಳೆಗಳನ್ನು ನಾಶ ಮಾಡಿವೆ. 60--70 ಎಕರೆ ಬೆಳೆ ಬಂದ ತರಿ ಜಮೀನನ್ನು ಹಾಳು ಮಾಡಿವೆ. ಇಂಥಾ ಆನೆಗಳನ್ನು ಹಿಡಿಯಬೇಕು. ಎಂದು ನಾನು ಹೇಳುತ್ತೇನೆ.

ಹುಲಿಗಳು ಮತ್ತು ಇತರ ಕಾಡುಪ್ರಾಣಿಗಳು ನಾನು ಈಗಾಗಲೇ ಹೇಳಿದಹಾಗೆ ನಮ್ಮಲ್ಲಿ ಕಡಿಮೆಯಾಗಿವೆ. ಎಲ್ಲೆಲ್ಲೋ ಬೆಟ್ಟ ಗುಡ್ಡಗಳಲ್ಲಿ ಹೋಗಿ ಸೇರಿಕೊಂಡಿವೆ. ಕೆಲವರು ಕೆಲವು ಪ್ರಾಣಿಗಳಿಗೆ ಚಿತ್ರ ಹಿಂಸೆಯನ್ನು ಕೊಡುತ್ತಾರೆ. ನಿಜವಾಗಿ ಆ ಪ್ರಾಣಿಗಳ ಬಗ್ಗೆ ವಿಚಾರ ಮಾಡಬೇಕು ಕೆಲವು ವನ್ಯ ಪ್ರಾಣಿಗಳಿಗೆ ರಕ್ಷಣೆ ಕೊಡುವ ಬಗ್ಗೆ ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು ಎಂದು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗಾಡಿ ವಿರೂಪಾಕ್ಷಪ್ಪ ಮಲ್ಲಪ್ಪ (ಹಳಿಯಾಳ್).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವ್ಯವಸಾಯ ಮತ್ತು ಅರಣ್ಯಶಾಖೆಯ ಮಂತ್ರಿಗಳು ಈ ಸಭೆಯ ಮುಂದಿಟ್ಟಿರತಕ್ಕ ವನ್ಯ ಮೃಗಗಳ ಹಾಗೂ ಪಕ್ಷಿಗಳ ಸಂರಕ್ಷಣೆಗೆ ಸಂಬಂಧಪಟ್ಟ ನಿರ್ಣಯವನ್ನು ಸ್ವಾಗತ ಮಾಡುತ್ತಾ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಅರಣ್ಯಪ್ರದೇಶ ಹೆಚ್ಚಾಗಿ ಇದೆ. ಅಂಥಾ ಒಂದು ಕ್ಷೇತ್ರದಿಂದ ನಾನು ಆರಿಸಿ ಬಂದವನಾಗಿದ್ದೇನೆ. ನಮ್ಮಲ್ಲಿ ಹಿಂದೆ ಬಹಳ ದಟ್ಟವಾದ ಕಾಡು ಇತ್ತು. ಈಗ ಕಾಡು ಸ್ವಲ್ಪ ಕಡಿಮೆಯಾಗಿದೆ. ಆದ್ದರಿಂದ ಈಗ ಆ ಕಾಡುಗಳಲ್ಲಿ ಚಿಗರೆ, ಹಂದಿ ಇತ್ಯಾದಿ ಯಾವುದೇ ಪ್ರಾಣಿಗಳೂ ಇಲ್ಲದಂತಾಗಿದೆ. ಸರ್ವೇ ಸಾಧಾರಣವಾಗಿ ದಾಂಡೇಲಿಯಲ್ಲಿಯೂ ಕೂಡ ಪ್ರಾಣಿಗಳು ಸ್ವಲ್ಪ ಕಡಿಮೆ ಆಗಿವೆ. ಅರಣ್ಯದಲ್ಲಿ ಜಿಂಕೆಗಳು, ಆನೆಗಳು ಮುಂತಾದ ಮೃಗಪಕ್ಷಿಗಳಿಂದ ತುಂಬಿರತಕ್ಕ ಅರಣ್ಯವನ್ನು ನೋಡುವುದಕ್ಕೆ ಬಹಳ ಸುಂದರವಾಗಿ ಕಾಣುತ್ತಿತ್ತು. ನಿಜವಾಗಿಯೂ ಆ ರೀತಿ ಅರಣ್ಯಗಳಲ್ಲಿ ಮೃಗಪಕ್ಷಿಗಳು ಇರುವುದನ್ನು ನೋಡುವುದಕ್ಕೆ ಸಂತೋಷ ಕಂಡುಬರುತ್ತದೆ. ಮೊನ್ನೆ ದಾಂಡೇಲಿಯ ಅರಣ್ಯಕ್ಕೆ ಮಂತ್ರಿಗಳು ಹೋದಾಗ ಚಿಕ್ಕ ಚಿಕ್ಕ ಮರಿಗಳನ್ನು ಕಂಡರು. ಹಿಂದೆ ರಾಜ್ಯಪಾಲರು ಈ ದಾಂಡೇಲಿ ಅರಣ್ಯಕ್ಕೆ ಹೋಗಿದ್ದಾಗ ಅಲ್ಲಿದ್ದ ಪ್ರಾಣಿಗಳನ್ನು ನೋಡಿ ಬಹಳ ಸಂತೋಷಪಟ್ಟಿದ್ದಾರೆ. ವನ್ಯ ಪ್ರಾಣಿಗಳು ಕಡಿಮೆಯಾಗುವಾಗ ಅವುಗಳ ಸಂರಕ್ಷಣೆ ಮಾಡುವುದು ನಮ್ಮ ಆದ್ಯಕರ್ತವ್ಯ. ಮತ್ತು ಕೆಲವೊಂದು ಕ್ರೂರ ಪ್ರಾಣಿಗಳು ಏನಿವೆ ಅವು ಕೆಲವು ಹಳ್ಳಿಗಳಿಗೆ ರಾತ್ರಿ ಹೊತ್ತು ನುಗ್ಗಿ ದನಗಳನ್ನು ಕೊಲ್ಲುತ್ತವೆ. ಅಂಥಾದ್ದನ್ನು ತಪ್ಪಿಸುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು. ಆ ರೀತಿ ಕ್ರೂರ ಪ್ರಾಣಿಗಳು ರೈತರ ದನಕರುಗಳನ್ನು ಕೊಂದು ಅವರಿಗೆ ನಷ್ಟವನ್ನುಂಟುಮಾಡಿದಾಗ ಸರ್ಕಾರದವರು ಸಂಬಂಧಪಟ್ಟ ರೈತರಿಗೆ ಪರಿಹಾರವನ್ನು ಕೊಡಬೇಕು. ಇಲ್ಲದಿದ್ದರೆ ಅವರು ಪೂರ್ಣವಾಗಿ ಹಾಳಾಗುತ್ತಾರೆ. ಈ ದೃಷ್ಟಿಯಿಂದ ಕ್ರೂರಮೃಗಗಳಿಂದ ತೊಂದರೆಗೊಳಗಾಗಿ ದನಕರುಗಳನ್ನು ಕಳೆದುಕೊಂಡ ರೈತರಿಗೆ ಸರ್ಕಾರದವರು ಪರಿಹಾರವನ್ನು ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಮತ್ತು ಕೆಲವರು ಕೆಲವು ಪ್ರಾಣಿಗಳಿಗೆ ವಿಷವನ್ನು ಕೊಟ್ಟು ಕೊಲ್ಲುತ್ತಾರೆ. ಅಂಥಾ ಅನಾಹುತಗಳು ಆಗಿದ್ದು ನಮಗೆ ಕಂಡುಬರುತ್ತಿದೆ. ಆದ್ದರಿಂದ ಅಂಥಾ ಅನಾಹುತಗಳನ್ನು ತಪ್ಪಿಸಬೇಕು. ವನ್ಯ ಮೃಗಗಳನ್ನು ಸಾಕುವುದನ್ನು ಕೈಗೊಂಡರೆ ಇಂಥಾ ಅನಾಹುತಗಳನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಎರಡನೆಯದು ಸಂಸ್ಕೃತಿ ದೃಷ್ಟಿಯಿಂದ ನೋಡಿದರೂ ಕೂಡ ವನ್ಯ ಪ್ರಾಣಿಗಳನ್ನು ಸಾಕುವಂಥಾದ್ದು ಅವಶ್ಯಕ. ಕೆಲವಾರು ಪಟ್ಟಣಗಳಲ್ಲಿರತಕ್ಕ ಜೂ ಅಥವಾ ಪ್ರಾಣಿ ಸಂಗ್ರಹಾಲಯಗಳಲ್ಲಿ ಕೂಡ ವನ್ಯ ಮೃಗಪಕ್ಷಿಗಳು ಕಡಿಮೆ ಯಾಗಿವೆ ಎಂದು ಕಂಡು ಬರುತ್ತಿದೆ. ನವಿಲು ಸುಂದರವಾದ ರಾಷ್ಟ್ರೀಯ ಪಕ್ಷಿ. ಸರ್ಕಾರದವರು ಇದನ್ನು ಮಾನ್ಯ ಮಾಡಿದ್ದಾರೆಂದು ಕಂಡುಬರುತ್ತದೆ. ಕಾಡಿನಲ್ಲಿ ವನ್ಯ ಮೃಗ ಪಕ್ಷಿಗಳು ಇದ್ದರೆ ನೋಡುವುದಕ್ಕೆ ಆನಂದವಾಗಿರುತ್ತದೆ. ಪ್ರಾಣಿಗಳು ಇರುವುದು ನಮ್ಮ ಸಂಸ್ಕೃತಿ ಮತ್ತು ಸಾಹಿತ್ಯದ ಬೆಳವಣಿಗೆಗೆ ಒಂದು ಪೂರಕವಾಗಿರುತ್ತದೆ. ಈ ಎಲ್ಲಾ ದೃಷ್ಟಿಯಿಂದ ವನ್ಯ ಮೃಗಪಕ್ಷಿಗಳನ್ನು ಸಂರಕ್ಷಣೆ

ಮಾಡುವುದು ಬಹಳ ಅವಶ್ಯಕ ಇದೆ. ಅದನ್ನು ಮಾಡಲೇ ಬೇಕು. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರದವರು ತಂದಿರುವ ನಿರ್ಣಯವನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಕೆಲವು ಸೂಕ್ತ ಸಲಹೆಗಳನ್ನು ಹೇಳುತ್ತೇನೆ. ಈ ವನ್ಯ ಮೃಗಗಳನ್ನು ಕಾಪಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದು ನಮ್ಮ ಭಾರತ ದೇಶದ ಇತಿಹಾಸದಲ್ಲಿ ಹೊಸದೇನೂ ಅಲ್ಲ. ಯಾವ ದೇಶದಲ್ಲಿ ಬುದ್ಧ ಹುಟ್ಟಿದನೋ, ಯಾವ ದೇಶದಲ್ಲಿ ಸನ್ಯಾಸಿಗಳು, ಸಂತರು, ಗುರುನಾನಕರು, ಕೃಷ್ಣ ಮತ್ತು ಕಬೀರರು ಹುಟ್ಟಿದರೋ, ಅಂತಹ ದೇಶದಲ್ಲಿ ಇಂತಹ ಮೃಗಗಳನ್ನು ಕಾಪಾಡಿಕೊಂಡು ಬರುವುದು ಹಿಂದಿನಿಂದಲೂ ನಡೆದಿದೆ. ಹಿಂದೆ ನಮ್ಮ ರಾಮಾಯಣ, ಮಹಾಭಾರತದಲ್ಲಿಯೂ ಇದು ನಡೆದುಕೊಂಡು ಬಂದಿದೆ. ಇವೊತ್ತಿನ ದಿವಸ ವನ್ಯ ಮೃಗಗಳ ವಿಚಾರದಲ್ಲಿ ಬಹಳ ಎಚ್ಚರಿಕೆಯನ್ನು ನಾವು ವಹಿಸಬೇಕಾಗಿದೆಯೆಂದು ಹೇಳುತ್ತೇನೆ. ತಮಗೆಲ್ಲರಿಗೂ ಗೊತ್ತಿದ್ದ ಹಾಗೆ ಮಾನವನು ಸಹ ಕಾಡು ಪ್ರಾಣಿಯಾಗಿದ್ದ. ನಾಗರೀಕತೆ ಬೆಳೆದ ಹಾಗೆ ಕಾಡನ್ನು ಬಿಟ್ಟು ನಾಡಿನಲ್ಲಿ ಮನುಷ್ಯ ನೆಲೆಸುವುದಕ್ಕೆ ಪ್ರಾರಂಭ ಮಾಡಿದ. ಅವನ ಜೊತೆಗೆ ಪ್ರಾಣಿಗಳಾದ ಹಸು, ನಾಯಿ, ಬೆಕ್ಕುಗಳನ್ನು ಸಾಕಿಕೊಂಡು ಜೀವನ ಮಾಡಲು ಪ್ರಾರಂಭ ಮಾಡಿದ. ಕೊನೆಗೆ ಅವುಗಳು ಕಾಡನ್ನು ಬಿಟ್ಟು ನಾಡು ಪ್ರಾಣಿಗಳಾದವು. ಈ ದೆಸೆಯಲ್ಲಿ ಸರ್ಕಾರದವರು ಒಂದು ದಿಟ್ಟ ನಿಲುವನ್ನು ತೆಗೆದುಕೊಳ್ಳುವ ಕಾಲ ಬಂದಿದೆ. ಇವತ್ತು ನಮ್ಮಲ್ಲಿರತಕ್ಕಂತಹ ನೆಲ ಏನಿದೆ ಅದು ಇದ್ದಷ್ಟೇ ಇರುತ್ತದೆ. ಭಾರತ ದೇಶ ಪ್ರಪಂಚದ ಐವತ್ತನೇ ಒಂದು ಭಾಗದಷ್ಟು ಇದೆ. ಆದರೆ ಪ್ರಜಾಸಂಖ್ಯೆ ಮಾತ್ರ ಪ್ರಪಂಚದ ಐದನೇ ಒಂದು ಭಾಗದಷ್ಟು ಇದೆ. ಇದಕ್ಕೆ ಕಾರಣ ಕಾಡುಗಳನ್ನು ಹೆಚ್ಚಾಗಿ ಕಡಿದಿರುವುದು. ನಮ್ಮ ವಿಂಧ್ಯ ಪರ್ವತ ಪ್ರದೇಶಗಳಲ್ಲಿಯೂ ಸಹ ಹಿಂದೆ ಕಪ್ಪು ಜನರು ಇದ್ದರು ಎಂದು ತಿಳಿದು ಬಂದಿದೆ. ನಮ್ಮ ಚರಿತ್ರೆಯನ್ನು ಜ್ಞಾಪಕಕ್ಕೆ ತಂದರೆ ವನ್ಯ ಮೃಗಗಳನ್ನು ಎಷ್ಟು ಆಸಕ್ತಿಯಿಂದ ಕಾಪಾಡುತ್ತಿದ್ದರು ಎಂದು ಗೊತ್ತಾಗುತ್ತದೆ. ಇವತ್ತು ನಮ್ಮಲ್ಲಿ ಇರತಕ್ಕಂತಹ ಫಾರೆಸ್ಟ್ ಲ್ಯಾಂಡ ಸುಮಾರು 23 ಪರ್‌ಸೆಂಟ್ ಇದೆ. ಆದರೆ ರಿಸರ್ವ್ ಫಾರೆಸ್ಟ್ ಫಾರ್ ಗೇಮ್ಸ ಅಂಡ್ ಸ್ಯಾಂಕ್ಚುಯರಿ''ಗೆ ಇರುವುದು ಕೇವಲ 4 ಪರ್‌ಸೆಂಟ್. ಇದು ಬಹಳ ಕಡಿಮೆ. ಇದನ್ನು ನಾವು ಇನ್ನೂ ವಿಸ್ತಾರ ಮಾಡಬೇಕಾಗಿದೆ. ವನ್ಯ ಪ್ರಾಣಿಯ ವಿಷಯದಲ್ಲಿ ಪರದೇಶಗಳಲ್ಲಿ ಸಹ ಬೇಕಾದಷ್ಟು ಚರ್ಚೆಗಳು ನಡೆದಿವೆ. 1822ರಲ್ಲಿ ಮಾರ್ಟಿನ್ ಆಕ್ಟ್ ಎಂಬುದನ್ನು ಇಂಗ್ಲೇಂಡಿನಲ್ಲಿ ತಂದರು. ಅದೇ ತರಹ 1933ರಲ್ಲಿ ಇಂಡಿಯಾ ದೇಶದಲ್ಲಿ ಒಂದು ಕಾನೂನನ್ನೂ ಜಾರಿಗೆ ತಂದರು. 1954ರಲ್ಲಿ ಮತ್ತು 1957ರಲ್ಲಿ ಇದರ ಬಗ್ಗೆ ಒಂದು ಕಮಿಟಿಯನ್ನು ಮಾಡಿದರು. ಅಂತೂ 1962ರಲ್ಲಿ ಅನಿಮಲ್ ವೆಲ್‌ಫೇರ್ ಬೋರ್ಡು ಎಂಬುದು ಸ್ಥಾಪನೆಯಾಯಿತು. ನಮ್ಮಲ್ಲಿ ಹೆಚ್ಚು ಅವಿದ್ಯಾವಂತ ಜನರು ಇದ್ದಾರೆ. ಹೆಚ್ಚಾಗಿ ಅವಿದ್ಯಾವಂತರಾಗಿರುವ ಬಡ ಜನರು ಸರಿಯಾದ ಉದ್ಯೋಗವಿಲ್ಲದೆ ಈ ರೀತಿ ಬೇಟೆಯಾಡಿ ತಮ್ಮ ಜೀವನವನ್ನು ಮಾಡುತ್ತಿದ್ದರು. ಮತ್ತು ಅನೇಕ ಬಡ ಜನರು, ನೊಂದ ಜನರು ಏನಿದ್ದಾರೆ, ಅವರು ಈ ಪ್ರಾಣಿಗಳನ್ನು ಹಿಡಿದು ಅಥವಾ ಕಾಡುಗಳನ್ನು ಕಡಿದು ಜೀವನ ಮಾಡಬೇಕಾದ ಪ್ರಸಂಗಗಳು ಅನೇಕ ಇವೆ. ಆದ್ದರಿಂದ ನಮ್ಮ ದೇಶದಲ್ಲಿ ಈ ಸಂಪತ್ತು ನಾಶವಾಗಿ ಕಾಡು ಕಡಿಮೆಯಾಗುವುದಕ್ಕೆ ಇದೂ ಒಂದು ಕಾರಣವೆಂದು ಹೇಳುತ್ತೇನೆ. ಇವತ್ತು ಪ್ರಾಣಿಗಳಿಗೋಸ್ಕರ ಕೇವಲ ನಾಲ್ಕು ಪರ್‌ಸೆಂಟ್ ಜಾಗವನ್ನು ಇಟ್ಟುಕೊಂಡಿದ್ದಾರೆ. ಇತ್ತೀಚೆಗೆ ಸುಮಾರು 100 ವರ್ಷಗಳಿಂದೀಚೆಗೆ ಅರಣ್ಯ ಇಲಾಖೆಯವರು ಇದರ ಬಗ್ಗೆ ಸತತ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದರೂ ಸಹ ಕೇವಲ "ನಾಲ್ಕು ಪರ್‌ಸೆಂಟ್" ಮಾತ್ರ ಇರುವುದು. ಅನೇಕ ರಾಜಕಾರಣಿಗಳು ಸಹ ಈ ಚುನಾವಣೆಯ ಸಂಬಂಧದಲ್ಲಿ ಮತ್ತು ಬಡವರ ಏಳಿಗೆಗಾಗಿ ಭೂಮಿ ಇಲ್ಲದ ಬಡ ಜನರಿಗೆ ಕಾಡು ಬೆಳೆಯುವ ಜಾಗವನ್ನು ಅಲ್ಲಿರತಕ್ಕಂತಹ ಕಾಡುಗಳನ್ನು ಅನೇಕರು ಕಡಿದು ಕೊಟ್ಟಿರುವುದರಿಂದ ಸ್ವಲ್ಪ ಮಟ್ಟಿಗೆ ಕಾಡುಗಳು ನಾಶವಾಗಿವೆ. ಇದರ ಜೊತೆಗೆ (Hunting and Pouching) ಹಂಟಿಂಗ್ ಅಂಡ್ ಪೋಚಿಂಗ್ ನಿಂದಲೂ ಈ ಸಂಪತ್ತು ನಾಶವಾಗುತ್ತಿದೆ. ಅದೇರೀತಿ ಫಾರಿನ್ ಎಕ್ಸ್‌ಚೇಂಜ್ ಗಳಿಸುವುದಕ್ಕೋಸ್ಕರ ನಮ್ಮ ಕಾಡನ್ನು ಕಡಿದು ಮರಗಳನ್ನು ಸಾಗಿಸುವುದರಿಂದ, ಕಾಡು ಕಡಿಮೆ ಮಾಡುತ್ತಿದ್ದಾರೆ. ನಮ್ಮ ಮಾನ್ಯ ಮಿತ್ರರು ಹೇಳಿದಹಾಗೆ ಇನ್ನೊಂದು ಜನರೇಶನ್ ಬರುವಾಗ ನಮ್ಮಲ್ಲಿ ಇಂತಹ ಪ್ರಾಣಿಗಳನ್ನು ನಿಜವಾಗಿಯೂ ನೋಡುವುದಕ್ಕಾಗುತ್ತದೆಯೋ, ಅಥವಾ ಬರೀ ಚಿತ್ರಗಳಲ್ಲಿ ನೋಡಬೇಕಾಗುತ್ತದೆಯೋ ಎಂಬ ಸಂಶಯ ಬರುತ್ತಿದೆ. ಆದ್ದರಿಂದ ಸಾಧ್ಯವಾದಷ್ಟು ಮಟ್ಟಿಗೆ ವನ್ಯ ಪ್ರಾಣಿಗಳನ್ನು ನಾವು ಕಾಪಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದೂ ಅಲ್ಲದೆ ರಾಷ್ಟ್ರಮಟ್ಟದಲ್ಲಿ ಇದರ ಬಗ್ಗೆ ಒಂದು ಕೋಆರ್ಡಿನೇಟೆಡ್ ಪಾಲಿಸಿ ಇರಬೇಕು. ಹಿಂದಿನ ಕಾಲದಲ್ಲಿ ಈ ಪ್ರಾಣಿಗಳನ್ನು ಬಾಣಗಳಿಂದ

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು)

ಹೊಡೆಯುತ್ತಿದ್ದರು. ಆದರೆ ಇವತ್ತು ಕಾಡಿನಲ್ಲಿ ಕೆಲವರು ಈ ಫಾಲಿಡಾರ್‌ನ್ನು ಇಟ್ಟು ಕೊಲ್ಲುತ್ತಿದ್ದಾರೆ. ಇದರಿಂದ ಅನೇಕ ವನ್ಯ ಮೃಗಗಳು ನಾಶವಾಗುತ್ತಿವೆ. ಈ ರೀತಿಯಾಗುವುದನ್ನು ತಪ್ಪಿಸಬೇಕೆಂದು ಸಲಹೆಮಾಡುತ್ತೇನೆ.

ಇನ್ನೊಂದು ವಿಚಾರವೇನೆಂದರೆ ಫಾರೆಸ್ಟ್ ಇಲಾಖೆಯವರಿಗೆ ಮತ್ತು ಪೋಲೀಸ್ ಇಲಾಖೆಯವರಿಗೆ ಈ ವಿಷಯದಲ್ಲಿ ಒಂದು ಕೋರ್ಡಿನೇಶನ್ ಇರಬೇಕಾಗುತ್ತದೆ. ಇವೆರಡೂ ಇಲಾಖೆಯವರು ಒಂದು ಸಂಪರ್ಕ ಇಟ್ಟುಕೊಂಡು ವನ್ಯ ಮೃಗಗಳನ್ನು ಕಾಪಾಡಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಕಾರ್ಪೊರೇಶನ್ನುಗಳು ಮತ್ತು ಮುನಿಸಿಪಾಲಿಟಿಗಳು ಈ ಕಾಡು ಪ್ರಾಣಿಗಳ ಸಾಕಾಣಿಕೆಯ ಬಗ್ಗೆ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ಅದೇ ರೀತಿಯಲ್ಲಿ ಇವರು ಹೆಚ್ಚು "ಜೂ" ಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಉದಾಹರಣೆಗೆ ನಮ್ಮ ಬೆಂಗಳೂರಿನಲ್ಲಿ ಇವತ್ತು ಇಷ್ಟು ದೊಡ್ಡ ಜನಸಂಖ್ಯೆ ಇದ್ದರೂ ಒಂದು ಜೂ ಇಲ್ಲ. ನಾವು ಇವತ್ತು ಮದ್ರಾಸ್ ಅಥವಾ ಹೈದರಾಬಾದ್ ಇಲ್ಲವೇ ಡೆಲ್ಲಿಗೆ ಹೋಗಿ ನೋಡಿಕೊಂಡು ಬರಬೇಕಾಗಿದೆ. ಬನ್ನೇರುಘಟ್ಟದಲ್ಲಿ ಏನೊಂದು ಪ್ರಾಣಿಗಳ ಸಾಕಾಣಿಕೆ ಕೇಂದ್ರವನ್ನು ಮಾಡಬೇಕೆಂದು ಇದ್ದಾರೆ ಅದನ್ನು ಆದಷ್ಟು ಜಾಗ್ರತೆ ಮಾಡಿ ಬೆಂಗಳೂರು ನಗರದ ಜನರಿಗೆ ಅಲ್ಲಿರತಕ್ಕಂತಹ ವನ್ಯ ಮೃಗಗಳನ್ನು ನೋಡುವ ಒಂದು ಅನ್ಪದವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ತರಹ ಕಾಡು ಪ್ರಾಣಿಗಳನ್ನು ಯಾರಾದರೂ ಅನ್ಯಾಯವಾಗಿ ಹಾಳು ಮಾಡದಂತೆ ಪೋಲೀಸ್ ಇಲಾಖೆಯವರು ನೋಡಿಕೊಳ್ಳಬೇಕು. ಹಾಗೆಯೇ ವೆಟರಿನರಿ ಇಲಾಖೆಯವರು ಈ ಮೃಗಗಳಿಗೆ ಬೇಕಾದಂತಹ ಔಷಧಿ, ಚಿಕಿತ್ಸೆ ಕೊಡುವುದನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ವಿದ್ಯಾಭ್ಯಾಸ ಇಲಾಖೆಯವರು ಪಠ್ಯ ಪುಸ್ತಕಗಳನ್ನು ಮಾಡುವಾಗ ಮತ್ತು ಪಾಠಗಳನ್ನು ಹೇಳಿಕೊಡುವಾಗ ಈ ವನ್ಯ ಪ್ರಾಣಿಗಳ ಬಗ್ಗೆ ಹೆಚ್ಚು ಅರ್ಥವಾಗುವ ರೀತಿಯಲ್ಲಿ ಹೇಳಿಕೊಡಬೇಕು. ಅದೇ ತರಹ ಪುಸ್ತಕಗಳಲ್ಲಿ, ಗ್ರಂಥಗಳಲ್ಲಿ ಮತ್ತು ಇತರ ಲೀಫಲೆಟುಗಳಲ್ಲಿ ಇದರ ಬಗ್ಗೆ ಹೆಚ್ಚು ಪ್ರಕಟ ಮಾಡಿ ಪ್ರಚಾರ ಮಾಡಬೇಕೆಂದು ಹೇಳುತ್ತೇನೆ. ಜೊತೆಗೆ ಫಾರೆಸ್ಟ್ ಇಲಾಖೆ ಮತ್ತು ಅಗ್ರಿಕಲ್ಚರಲ್ ಇಲಾಖೆಗೆ ನಿಕಟ ಸಂಬಂಧ ಇರಬೇಕು. ಅವರೊಡನೆ ಸಹಕರಿಸಿ ಹೆಚ್ಚು ಹುಲ್ಲುಗಾವಲುಗಳನ್ನು ಪ್ರಾಣಿಗಳಿಗೋಸ್ಕರ ಇಟ್ಟುಕೊಂಡಿರಬೇಕು. ಇಂದು ಪ್ರಾಣಿಗಳಲ್ಲಿ ನೋಡಿದರೆ ಎರಡು ತರದ ಪ್ರಾಣಿಗಳು ಇವೆ. ಕೆಲವು ಮಾಂಸಾಹಾರಿಗಳು ಇವೆ; ಕೆಲವು ಸಸ್ಯಾಹಾರಿಗಳು ಇವೆ. ಜೊತೆಗೆ ಫುಡ್ ಡಿಪಾರ್ಟ್‌ಮೆಂಟಿನವರು ಪ್ರಾಣಿಗಳಿಗೂ ರೇಶನ್ ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಮತ್ತು ಮ್ಯಾಜಿಸ್ಟ್ರೇಟರು ವನ್ಯ ಪ್ರಾಣಿಗಳನ್ನು ಯಾರು ಕ್ರೂರತೆಯಿಂದ ನೋಡುತ್ತಾರೆ, ಅವರನ್ನು ಶಿಕ್ಷೆಗೆ ಗುರಿಪಡಿಸಬೇಕು. ಈ ರೀತಿ ಕಾಡು ಮೃಗಗಳನ್ನು ಕಾಪಾಡದೆ ಹೋದರೆ ಇಂಡಿಯಾ ದೇಶದಲ್ಲಿ ಮೈಸೂರು ಕಾಡು ಎಂದು ಏನು ಹೆಸರು ಇತ್ತು ಅಲ್ಲದೆ ಕಾಡು ಎಮ್ಮೆ ಇತ್ತು, ಬಂಗಾಳದ ಟೈಗರ್ ಎಂದು ಏನು ಹೆಸರು ಇತ್ತು, ಇವುಗಳೆಲ್ಲವೂ ಮಾಯವಾಗಿ ನಮ್ಮ ಮುಂದಿನ ಪೀಳಿಗೆಯು ಸಹ ಇಂತಹ ಪ್ರಾಣಿಗಳನ್ನು ನೋಡುವುದಕ್ಕೂ ಅವಕಾಶ ಇಲ್ಲದೆ ಚಿತ್ರಗಳಲ್ಲಿ ಮಾತ್ರ ನೋಡುವಂತಹ ಪರಿಸ್ಥಿತಿ ಬರಬಹುದು. ಆದ್ದರಿಂದ ಇದರ ಬಗ್ಗೆ ಇಡೀ ದೇಶದಲ್ಲಿ ಒಂದು ಯುನಿಫಾರ್ಮ್ ಪಾಲಿಸಿಯನ್ನು ಇಟ್ಟುಕೊಂಡು ಈ ವನ್ಯಪ್ರಾಣಿಗಳನ್ನು ರಕ್ಷಣೆ ಮಾಡಬೇಕೆಂದು ಹೇಳಿ, ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5-30 P.M.

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರಣ್ಯ ಮಂತ್ರಿಗಳು ತಂದಿರತಕ್ಕ ಒಂದು ಬಿಲ್ಲಿಗೆ ನಾನು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ ಕೆಲವು ಮಾತುಗಳನ್ನು ಹೇಳುತ್ತೇನೆ. ನಾನು ದೊಡ್ಡದಾದ ಅರಣ್ಯ ಪ್ರದೇಶದಿಂದ ಬಂದವನು. ನಾನು ಚಿಕ್ಕಂದಿನಲ್ಲಿ ಸಾಮಾನ್ಯವಾಗಿ ಸಂಜೆಯ ಹೊತ್ತು ಗಾಳಿ ಹವಾ ತೆಗೆದುಕೊಳ್ಳುವುದಕ್ಕೆ ಹೋದರೆ ಹುಲಿಯನ್ನು ಜೋಡಿಜೋಡಿ ನೋಡಿದಂಥ ನೆನಪು ಇದೆ. ಇಂತಹ ಕಾಲ ಇವತ್ತು ಹೋಗಿದೆ. ನಾವು ಸಾಯಂಕಾಲ ಹೊರಗಡೆ ಹೋಗಬೇಕಾದರೆ ಲ್ಯಾಟಿನ್‌ಗಳನ್ನು ಹಿಡಿಯಬೇಕಾಗಿತ್ತು. ಇಲ್ಲದೇ ಹೋದರೆ ನಮ್ಮ ರಕ್ಷಣೆ ಬ್ರಹ್ಮನಿಗೇ ಗೊತ್ತಾಗಬೇಕಾಗಿತ್ತು. ಅದು ಇವತ್ತು ದೂರವಾಗಿದೆ. ಮೊದಲನೆಯ ಕಾರಣ, ಮನುಷ್ಯ ತನಗೆ ಸಿಕ್ಕಿರತಕ್ಕ ಒಂದು ಯಾಂತ್ರಿಕ ಬೆಂಬಲ ಏನಿದೆಯೋ ಆ ಒಂದು ಬೆಂಬಲದಿಂದ ಅಟ್ಟಹಾಸದಿಂದ ಪ್ರಾಣಿಗಳನ್ನು

ಕೊಲ್ಲುವ ಒಂದು ಉದ್ಯಮವನ್ನು ಕೈಗೊಂಡಿದ್ದಾನೆ. ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಹೇಳಿದ್ದು ನಮ್ಮ ಸಂಸ್ಕೃತಿಯಲ್ಲಿ ಹಿಂದೆ ರಾಜಮಹಾರಾಜರು ಬೇಟೆ ಎಂದು ಆಡುತ್ತಿದ್ದರು ಜನಗಳಿಗೆ ಅವುಗಳಿಂದ ಹಿಂಸೆ ಆಗುತ್ತಿದ್ದುದು ಬೇಡವೆಂದು ಆ ರೀತಿಯಾಗಿ ಬೇಟೆ ಆಡುತ್ತಿದ್ದರು. ಆದರೆ ನಮ್ಮ ಸಂಸ್ಕೃತಿಯಲ್ಲಿ ಒಂದು ಪ್ರಾಣಿಯನ್ನೂ ಕೊಲ್ಲುವ ಹವ್ಯಾಸ ಇರಲಿಲ್ಲ. ರಾಜಮಹಾರಾಜರಿಗೆ ಬೇಟೆ ಯಾಡುವುದು ಪ್ರಾಚೀನ ಕಾಲದಿಂದ ಬಂದಂಥ ಅಭ್ಯಾಸ. ಅವರಿಗೆ ಬೇಟೆ ಆಡುವುದೇ ಒಂದು ಆಟ. ಸಾಹೇಬರು ಬೇಟೆಯಾಡಲು ಒಂದು ಕಾರ್ಯಕ್ರಮದ ನಿಯಮಾವಳಿ ಇರುತ್ತಿತ್ತು. ಅದರಂತೆ ಈಗಲೂ ಜನರು ಸಿಕ್ಕಾಬಟ್ಟೆ ಪ್ರಾಣಿಗಳನ್ನು ಕೊಲ್ಲುತ್ತಿದ್ದಾರೆ. ಕೊಂದ ಪಾಪ ತಿಂದ ಪರಿಹಾರವೆಂದು ಹೇಳುವ ಹಾಗೆ, ಯಾವಾಗ ಅದನ್ನು ತಿನ್ನುತ್ತಾನೆ ಆಗ ಪಾಪ ಬಾರದು. ಆದ್ದರಿಂದ ಆ ಒಂದು ಆಟವಾಡುವುದಕ್ಕೋಸ್ಕರವೇ ಪ್ರಾಣಿಗಳನ್ನು ಕೊಲ್ಲುವ ಒಂದು ಹವ್ಯಾಸವನ್ನು ಇಟ್ಟುಕೊಂಡಿದ್ದಾರೆ. ಎಲ್ಲಾ ಪ್ರಾಣಿಗಳ ಜೀವದ ಮೇಲೂ ಪರಮಾತ್ಮ ಆವಿರ್ಭವಿಸಿದ್ದಾರೆ. ಆದ್ದರಿಂದ ವಿನಾಕಾರಣ ಒಂದು ಪ್ರಾಣಿಯನ್ನು ಕೊಂದರೆ ಅದು ಪರಮಾತ್ಮನಿಗೆ ಹಿಂಸೆ ಮಾಡಿದಂತಾಗುತ್ತದೆ. ಯಾವ ಪ್ರಾಣಿಯನ್ನೂ ಕೊಲ್ಲುವುದಕ್ಕೆ ನಮಗೆ ಅಧಿಕಾರವಿಲ್ಲ ಜಗತ್ತಿನಲ್ಲಿ ಹುಟ್ಟಿದ ಪ್ರತಿಯೊಂದೂ ಸ್ಥಿರವಲ್ಲವೆಂದು ಹೇಳುತ್ತಾರೆ. ಯಾವುದನ್ನು ಸೃಷ್ಟಿಮಾಡುವುದಕ್ಕೆ ನಮಗೆ ಅದಿಕಾರವಿಲ್ಲವೋ ಅದನ್ನು ನಾಶಮಾಡುವುದಕ್ಕೂ ನಮಗೆ ಅಧಿಕಾರವಿಲ್ಲ. ಅಧಿಕಾರವಿಲ್ಲದಂಥ ಕೆಲಸವನ್ನು ಮಾಡುವುದು ಸರಿಯಲ್ಲ. ಪಾಶ್ಚಿಮಾತ್ಯರ ಪರಂಪರೆಯನ್ನು ಈಗ ಅನುಕರಣ ಮಾಡುತ್ತಿದ್ದಾರೆ. ಅದಕ್ಕೇನು ಹೇಳಬೇಕೋ ಗೊತ್ತಿಲ್ಲ. ನಾನು ಒಂದು ಕಡೆ ವನ್ಯಮೃಗಗಳ ರಕ್ಷಣೆಯ ದಿನಾಚರಣೆಯಲ್ಲಿ ಅಧ್ಯಕ್ಷತೆ ವಹಿಸಿದ್ದೆ. ಅಲ್ಲಿಗೆ ಮಾಜಿಮಂತ್ರಿಗಳಾದ ಮಾನ್ಯ ಶ್ರೀ ಡಿ. ಪರಮೇಶ್ವರಪ್ಪನವರು ಬಂದಿದ್ದರು. ಅಲ್ಲಿ ವನ್ಯಮೃಗಗಳ ರಕ್ಷಣೆ ಪ್ರಶ್ನೆ ಬಂತು ಆಗಿರುವ ಕೆಲಸನೋಡಿದರೆ ಅದು ಒಂದು ದೊಡ್ಡ ಸೊನ್ನೆ. ಅವುಗಳಿಗೆ ರಕ್ಷಣೆಯೇ ಇರುವುದಿಲ್ಲ. ಸಂಬಂಧಪಟ್ಟ ಆಫೀಸರುಗಳು ಬೇಟೆಯಾಡುವುದನ್ನು ನಾನು ನೋಡಿದ್ದೇನೆ. ಹೀಗಾದರೆ ಯಾರು ನೀತಿ ಹೇಳುತ್ತಾರೆ ಅವರೇ ಬೇಟೆಯಾಡಿದರೆ ಬೇಲಿ ಎದ್ದು ಹೊಲ ಮೇದಂತೆ ಆಗುತ್ತದೆ. ಗಾಂಧೀಜಿಯವರ ಹೆಸರು ಹೇಳಿ ನಾವು ಕೆಲವು ಸಮಿತಿಗಳನ್ನು ಮಾಡುತ್ತೇವೆ. ಆದರೆ ಅವು ಎಷ್ಟರಮಟ್ಟಿಗೆ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿವೆ ಯೆಂಬುದನ್ನು ನೋಡುವುದೇ ಇಲ್ಲ. ವನ್ಯಮೃಗ ರಕ್ಷಣೆಯ ದಿನಾಚರಣೆ ಮಾಡುವ ಉದ್ದೇಶ ಮುಂದೆ ಬರುವ ವರ್ಷದವರೆಗೆ ನಾವು ಅವುಗಳ ರಕ್ಷಣೆಯ ಕಾರ್ಯವನ್ನು ನೆನಪಿನಲ್ಲಿಡಬೇಕು ಎಂದು ಆದರೆ ಆ ರೀತಿ ನೆನಪಿನಲ್ಲಿ ಅನೇಕರು ಇಡುವುದಿಲ್ಲ. ಇದು ಮುಖ್ಯವಾದ ಅಂಶ. ನನ್ನ ಪ್ರಾಂತದ ವಿಷಯವಾಗಿ ನಾನು ಹಿಂದೆ ಮಾತನಾಡುವಾಗ ಈ ವಿಚಾರ ತಿಮ್ಮಪ್ಪನ ಮುಡಿಪಿಟ್ಟ ತಲೆಯಂತಾಗಿದೆಯೆಂದು ಹೇಳಿದೆ. ಕಾಡನ್ನು ಸಾಗುವಳಿಗೆ ಕೊಡಬೇಡಿ. ಆ ರೀತಿ ಯಾರೂ ಕೇಳಬೇಡಿ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಕಾಡು ಬೆಳೆಯುವ ಜಾಗವನ್ನು ಯಾವ ರೈತನೂ ಬಯಸುವುದಿಲ್ಲ. ರೈತ ಬಯಸುವುದು ವ್ಯವಸಾಯಕ್ಕೆ ಸಾಗುವಳಿಗೆ ಯೋಗ್ಯವಾಗಿರುವ ಜಮೀನನ್ನು ಬಯಸುತ್ತಾರೆ. ವನ್ಯಮೃಗಗಳ ಬೇಟೆಯಿಂದಾಗಿ ಇವತ್ತು ಮಲೆನಾಡು ಪ್ರಾಂತಗಳಲ್ಲಿ ಕಾಡುಹಂದಿ ಸಿಗುವಂಥದು ಕನಸಿನ ಮಾತಾಗಿದೆ. ಚಿಕ್ಕಂದಿನಲ್ಲಿ ನೋಡಿದಂಥ ಪ್ರಾಣಿಗಳನ್ನು ಮೈಸೂರಿನ ಜೂನ್‌ನಲ್ಲಿ ನೋಡಬೇಕಷ್ಟೇ. ಇನ್ನು ಗೇಮ್ ಸ್ಯಾಂಕ್ಚುಯರಿ ವಿಷಯವಾಗಿ ಅಲ್ಲಿ ಹೋಗಿ ನೋಡಿದವರು ಬಹಳ ಚೆನ್ನಾಗಿ ಹೇಳಿದರು. ಅದನ್ನು ಬಂಡಿಪುರದಲ್ಲಿ ನೋಡಬಹುದಷ್ಟೇ. ಮೂರು ನಾಲ್ಕು ಸಾರಿ ಹಿಂದೆ ಕೆಲವು ಕಾಡುಕೋಣಗಳನ್ನು ನೋಡಿದ್ದೇನೆ. ಅವು ಈಗ ನನ್ನ ದೃಷ್ಟಿಗೆ ಬೀಳಲಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಅವನ್ನು ನೋಡಿದ್ದೇನೆ. ಅಲ್ಲಿ ಇನ್ನು ಎಲ್ಲಾ ಪ್ರಾಣಿಗಳನ್ನೂ ನೋಡಬಹುದು. ನಮಗೆ ಸ್ವತಂತ್ರ ಬಂದಮೇಲೆ ನೂರಾರು ಎಕರೆಜಮೀನನ್ನು ಗೇಮ್ ಸಾಂಕ್ಚುಯರಿಗೆಂದು ತೆಗೆದುಕೊಂಡರು. ಅದು ಇವತ್ತು ಏನಾಗಿದೆಯೋ ಗೊತ್ತಿಲ್ಲ. ಇನ್ನು ಮೈಸೂರಿನಲ್ಲಿರತಕ್ಕ ಜೂ ವಿಷಯವನ್ನು ಮತ್ತು ಅಲ್ಲಿನ ವ್ಯವಸ್ಥೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿ ಒಬ್ಬರು ಮಾನ್ಯ ಶ್ರೀ ಕೃಷ್ಣೇಗೌಡ ಎಂಬುವರು ಇದ್ದಾರೆ. ಅದನ್ನು ಬಹಳ ಚೆನ್ನಾಗಿ ಅಲ್ಲಿ ನೋಡಿಕೊಳ್ಳುತ್ತಿದ್ದಾರೆ. ಆದರೆ ಆತನಿಗೆ ಬೇಕಾದಂಥ ಸವಲತ್ತು ಇಲ್ಲ. ಸಿಬ್ಬಂದಿ ಇಲ್ಲ. ಒಂದು ಗಾಡಿ ಇಲ್ಲ. ಸರ್ಕಾರದವರು ಅವನಿಗೆ ಯಾವ ರೀತಿಯ ಸವಲತ್ತನ್ನೂ ಕೊಡುತ್ತಾ ಇಲ್ಲ. ಏನಾದರೂ ಅಲ್ಲಿಗೆ ಕಳ್ಳರು ನುಗ್ಗುತ್ತಾ ಇದ್ದರೆ ಅವನೇನು ಮಾಡಬೇಕು ? ಸರ್ಕಾರದ ಬೆಂಬಲವಿಲ್ಲದೆ ಎಷ್ಟು ತಾನೇ ಅವರು ನೋಡಿಕೊಳ್ಳುತ್ತಾರೆ. ಹೀಗಾದರೆ ಅಲ್ಲಿರತಕ್ಕವರು ಏನುತಾನೇ ಕೆಲಸಮಾಡಿಯಾರು ಇದು ಅಂತರಾಷ್ಟ್ರೀಯ ಜೂ ಎಂಬುದಾಗಿ ಹೆಸರುಪಡೆದಿದೆ. ಅಂಥಮೇಲೆ ಈ ರೀತಿಯಾದರೆ ಇನ್ನು ಯಾವರೀತಿ ಪ್ರಾಣಿಗಳ ಸಂರಕ್ಷಣೆ ಮಾಡಬೇಕೋ ಗೊತ್ತಿಲ್ಲ. ಇಷ್ಟು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಕೆ. ಸುಬ್ಬಯ್ಯ (ವಿರಾಜಪೇಟೆ) — ಅಧ್ಯಕ್ಷರೇ, ಈ ದಿನ ವನ್ಯ ಪ್ರಾಣಿ ಪಕ್ಷಿಗಳ ರಕ್ಷಣೆಯ ಈ ಠರಾವನ್ನು ನಾನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಹೇಳಬಯಸು ತ್ತೇನೆ. ನನ್ನ ತಾಲ್ಲೂಕು ವಿರಾಜಪೇಟೆ ತಾಲ್ಲೂಕು. ಅಲ್ಲಿ ನಗರಹೊಳೆಎಂಬುದು ಒಂದು ರಿಜರ್ವ್ ಫಾರೆಸ್ಟ್, ಇದು ಇಡೀ ರಾಜ್ಯದ ಜನರಿಗೆ ತಿಳಿದಿರುವ ವಿಷಯ. ನಗರಹೊಳೆ ಎಂಬುದು ಗೇಮ್ ಸ್ಯಾಂಕ್ಚುರಿ. ಬಂಡಿಪುರದ ನಂತರ ಇದು ಎರಡನೇ ಗೇಮ್ ಸ್ಯಾಂಕ್ಚುರಿ, ನಮ್ಮ ರಾಜ್ಯದಲ್ಲಿ. ಸಾಮಾನ್ಯವಾಗಿ ಪ್ರಾಣಿಗಳ ರಕ್ಷಣೆ ಕಾನೂನು ಇತರ ಕಡೆಗಳಲ್ಲಿ ಇಲ್ಲದಿದ್ದರೂ ಇಲ್ಲಿನ ಗೇಮ್ ಸ್ಯಾಂಕ್ಚುರಿಯಲ್ಲಿ ಕೆಲವು ಕಾನೂನುಗಳು ಇವೆ. ಹೀಗಿದ್ದರೂ ಕೂಡ ಯಾವ ಒಂದು ಕಾಡಿನಲ್ಲಿ ನಿಜವಾಗಿ ಪ್ರಾಣಿಗಳನ್ನು ಬೆಳೆಸಿ ಸಾಕಬೇಕೆಂಬ ಉದ್ದೇಶ ಇದೆಯೋ ಆ ಒಂದು ಉದ್ದೇಶ ಸಾಧನೆಗೆ ಸಾಕಷ್ಟು ಅವಕಾಶ ಇಲ್ಲಿ ಇಲ್ಲದೇ ಇದ್ದುದರಿಂದ ನಮ್ಮ ಕಾನೂನು ಗಳಲ್ಲಿ ಅವುಗಳ ರಕ್ಷಣೆಗೆ ಧಕ್ಕೆ ಉಂಟಾಗಿದೆ. ನಮ್ಮಲ್ಲಿ ನಗರಹೊಳೆ ಎಂಬಲ್ಲಿ ಗೇಮ್ ಸ್ಯಾಂಕ್ಚುರಿ ಬಹಳ ದೂರ ಹರಡಿಕೊಂಡಿದೆ. ಅಲ್ಲಿಗೆ ಪ್ರೇಕ್ಷಕರು ಬಂದರೆ ಅವರು ಬಸ್ಸುಗಳಲ್ಲಿ ಅಥವಾ ಕಾರು ಗಳಲ್ಲಿ ಅಲ್ಲಿಗೆ ಹೋದರೆ ಅಲ್ಲಿ ಒಂದು ಆನೆ ಚೌಕವೆದಿಂದೆ. ಅಲ್ಲಿ ಒಂದು ಬೋರ್ಡ್ ಇದೆ. ಅದರಲ್ಲಿ ಈ ರೀತಿಯಾಗಿ ಬರೆದಿದ್ದಾರೆ:

> "Wild life is the national asset—Do not sound horn—look either side of the roads to witness games—Nehru loved wild life—Do not kill the wild life".

ಹೊರಗಿನಿಂದ ಬರತಕ್ಕ ಪ್ರವಾಸಿಗಳು ಅಲ್ಲಿ ಹಾಕಿರತಕ್ಕ ಬೋರ್ಡನ್ನು ನೋಡಿಕೊಂಡು ಅವರ ವಾಹನಗಳನ್ನು ಹಾರನ್ ಮಾಡದೆ ವನ್ಯ ಮೃಗಗಳನ್ನು ನೋಡತಕ್ಕ ಆಕಾಂಕ್ಷೆಯಿಂದ ಬರುತ್ತಿದ್ದರೆ ಆ ಆನೆ ಚೌಕದಿಂದ ಹಿಡಿದು ಗೋಣಿಕೊಪ್ಪಲವರೆಗೂ ಬರಿ ಸಾಕಿದ ದನಕರುಗಳನ್ನು ಕಾಣಬಹುದೇ ವಿನಾ ಒಂದು ವನ್ಯಮೃಗಗಳೂ ಅವರಿಗೆ ಕಾಣಿಸುವುದಿಲ್ಲ. ಹೀಗೆ ಆ ಬಾಳೆಕೊಪ್ಪಲು ಗೇಂ ಸ್ಯಾಂಕ್ಚುಯರಿಯಲ್ಲೂ ಪ್ರವಾಸಿಗಳಿಗೆ ಹಾರನ್ ಮಾಡಬಾರದೆಂದು ಅಲ್ಲಿ ಬೋರ್ಡನ್ನು ಹಾಕಿದ್ದಾರೆ. ಆ ಕಾಡಿನಲ್ಲೂ ಕೂಡ ಒಂದೂ ವನ್ಯಮೃಗಗಳಿಲ್ಲ. ನಾನು ಆ ಸ್ಯಾಂಕ್ಚುಯೆರಿಗೆ ಕೇವಲ ಒಂದೂವರೆ ಮೈಲಿಯ ದೂರದಲ್ಲಿ ವಾಸಮಾಡತಕ್ಕವನಾಗಿದ್ದೇನೆ. ಆ ಸ್ಯಾಂಕ್ಚುಯೆರಿ ನನ್ನ ಕಾನ್‌ಸ್ಟಿಟ್ಯುಯನ್ಸಿಯಲ್ಲೇ ಇದೆ, ಕಳೆದ 5 ವರ್ಷಗಳಲ್ಲಿ ಆ ಕಾಡಿನಲ್ಲಿ 15 ಆನೆಗಳನ್ನು ಗುಂಡಿಕ್ಕಿ ಕೊಂದಿದ್ದಾರೆ. ಕೊಂದು ಆ ಆನೆಗಳ ಕೋಡನ್ನು ಮಾರಿಕೊಂಡಿದ್ದಾರೆ. ಆದರೆ ಇಲ್ಲಿ ಯ ರೆಗೂ ಆ ಆನೆಗಳನ್ನು ಕೊಂದವರ ಬಗ್ಗೆ ಯಾರೂ ಕ್ರಮ ಕೈಗೊಂಡಿದ್ದನ್ನು ನಾನು ನೋಡಲಿಲ್ಲ ಮಾತ್ರ ಅದೇ ಕಾಡಿನಲ್ಲಿ ಇಲ್ಲಿಗೆ 2–3 ತಿಂಗಳ ಕೆಳಗೆ ಆನೆಯನ್ನು ಗುಂಡಿಕ್ಕಿ ಕೊಂದಿದ್ದಾರೆ. ಅದೇ ಗೇಂ ಸ್ಯಾಂಕ್ಚುಯೆರಿಗೆ ಸೇರಿದ ಕಾಡಿನಲ್ಲಿ ಒಂದು ಹುಲಿಯನ್ನೂ ಕೂಡ ಕೊಂದಿದ್ದಾರೆ, ಅದರ ಚರ್ಮವನ್ನು ಮಾರಾಟ ಮಾಡಿಕೊಂಡಿದ್ದಾರೆ. ಈ ಹಿಂದೆ ಅದೇ ಕಾಡಿನಲ್ಲಿ ಮೂರು ದೊಡ್ಡ ಕಾಡು ಕೋಣಗಳ ಕೋಡುಗಳನ್ನೂ ಮತ್ತು ಎರಡು ದೊಡ್ಡ ಆನೆಯ ಕೊಂಬುಗಳನ್ನೂ ಲಾಲ್ ಬಹದೂರ್ ಶಾಸ್ತ್ರಿಗಳವರಿಗೆ ಕೊಡಬೇಕೆಂದು ಪ್ರಾಣಿಗಳನ್ನು ಕೊಂದು ಶೇಖರಿಸಿಟ್ಟಿದ್ದವನ್ನು ಯಾರೋ ಕಳುವು ಮಾಡಿಕೊಂಡು ಹೋದರು, ಆ ಕೇಸು ಇಲ್ಲಿಯವರೆಗೂ ಕೂಡ ಪತ್ತೆಯೇ ಆಗಲಿಲ್ಲ. ಇಲ್ಲಿಗೆ 2–3 ವರ್ಷಗಳಾದರೂ ಅದರ ಸುಳಿವೂ ಕೂಡ ಸಿಕ್ಕಲಿಲ್ಲ. ನಾವು ನಿಜ ವಾಗಿಯೂ ಒಂದು ಬಿಗಿಯಾದ ಕಾನೂನನ್ನು ತಂದು ವನ್ಯಮೃಗಗಳನ್ನು ಸಂರಕ್ಷಣೆ ಮಾಡಿದರೆ, ಆ ನಗರಹೊಳೆ ಗೇಂ-ಸ್ಯಾಂಕ್ಚುಯರಿಯಲ್ಲಿ ಸಾಧು ಪ್ರಾಣಿಗಳನ್ನು ನೋಡುವುದಕ್ಕೆ ಬಹಳ ಆನಂದ ವಾಗುತ್ತದೆ. ಆ ವನ್ಯಮೃಗಗಳು ಭಯವಿಲ್ಲದೆ ನಮ್ಮ ಬಳಿಗೇ ಬಂದು ನಿಲ್ಲುತ್ತವೆ. ಈ ದಿವಸ ಅಂಥಾ ಜಾಗದಲ್ಲೂ ಕೂಡ ನಾವು ಸ್ವಲ್ಪ ದೂರ ಹಾಗೇ ಕಾಡಿನಲ್ಲಿ ಮುಂದಕ್ಕೆ ಹೋದರೆ ನಾವು ಪ್ರಾಣಿಗಳನ್ನು ಕೊಲ್ಲಲು ಹಾರಿಸತಕ್ಕ ಗುಂಡಿನ ಶಬ್ದವನ್ನು ಕೇಳಬಹುದು. ನಾನು ಸ್ವತಃ ಗುಂಡಿನ ಶಬ್ದವನ್ನು ಕೇಳಿದ್ದೇನೆ. ಕೆಲವರು ತಪ್ಪಿತಸ್ಥರನ್ನು ಹಿಡಿದು ಶಿಕ್ಷೆಗೊಳಪಡಿಸಿದುದನ್ನು ನಾನು ನೋಡಿದ್ದೇನೆ, ಆದರೆ ಈ ವನ್ಯ ಮೃಗಗಳ ರಕ್ಷಣೆಗೆ ಈ ಕಾನೂನನ್ನು ಒಂದನ್ನೆ ಮಾಡಿದರೆ ಸಾಲದು. ಅಲ್ಲಿ ಇಡತಕ್ಕ ಸಿಬ್ಬಂದಿಯನ್ನೂ ಕೂಡ ಜಾಸ್ತಿಮಾಡಬೇಕು. ಈಗ ಅಲ್ಲಿರತಕ್ಕ ಸ್ಯಾಂಕ್ಚುಯರಿಯಲ್ಲಿ ಒಬ್ಬ ರೇಂಜರ್, ಒಬ್ಬ ಫಾರೆಸ್ಟರ್ ಮತ್ತು ನಾಲ್ಕು ಜನ ಗಾರ್ಡುಗಳನ್ನು ಇಟ್ಟಿದ್ದಾರೆ, ಇಷ್ಟು ಸಿಬ್ಬಂದಿ ಸಾಲದು. ಇದನ್ನು ದ್ವಿಗುಣಗೊಳಿಸಬೇಕು ಮತ್ತು ಇವರಿಗೆ ಒಂದು ವಾಹನ ಸೌಕರ್ಯವನ್ನು ಒದಗಿಸಬೇಕು. ಜೊತೆಗೆ ಅವರಿಗೆ ಎಲ್ಲಾ ತರಹೆಯ ಆಯುಧಗಳನ್ನೂ ಕೂಡ ಒದಗಿಸಬೇಕು. ಮೊನ್ನೆ ಅಲ್ಲಿ ಆ ನಗರಹೊಳೆ ಗೇಂ ಸ್ಯಾಂಕ್ಚುಯೆರಿಗೆ ಮಾನ್ಯ ಸಚಿವರು ಬಂದಿದ್ದಾಗ್ಗೆ ಅಲ್ಲಿನ ಕೊರತೆಗಳನ್ನೆಲ್ಲಾ ತಿಳಿಸಲಾಗಿದೆ. ನಮಗೆ ಇದರಿಂದ ಹೆಚ್ಚಿನ ಆದಾಯ ಕೂಡ ಬರುತ್ತದೆ, ಇದನ್ನು ಅಭಿವೃದ್ಧಿಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

†ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ಸ್ವಾಮಿ ಅಧ್ಯಕ್ಷರೇ, ನಮ್ಮ ಕಾಡು ಮಂತ್ರಿಗಳು ಮಂಡಿಸಿರತಕ್ಕ ನಿರ್ಣಯಕ್ಕೆ ಬೆಂಬಲ ಕೊಡುತ್ತಾ ನಾನು ಒಂದೆರಡು ಸಲಹೆಗಳನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ರಾಜ್ಯದಲ್ಲಿ ಈ ಹಿಂದೆ ಬಹುಕಾಲದಿಂದಲೂ ದಟ್ಟವಾಗಿ ಬೆಳೆದುಕೊಂಡಿದ್ದ ಕಾಡುಗಳು ಇರುತ್ತಿದ್ದವು. ಆ ದೊಡ್ಡ ದೊಡ್ಡ ಕಾಡುಗಳಲ್ಲಿ ವನ್ಯಮೃಗಗಳು ವಿಶೇಷವಾಗಿ ಇರುತ್ತಿದ್ದವು. ಆದರೆ ಇತ್ತೀಚೆಗೆ ಸರ್ಕಾರದವರು ಆ ಕಾಡುಗಳನ್ನೆಲ್ಲಾ ನಾಶಮಾಡಿ ಆ ಜಾಗದಲ್ಲಿ ದೊಡ್ಡ ದೊಡ್ಡ ಕೆರೆಗಳನ್ನು—ರಿಜರ್ವಾಯಿರುಗಳನ್ನು ಕಟ್ಟುವುದಕ್ಕೆ ಹೊರಟಿದ್ದರಿಂದ ವನವೆಲ್ಲಾ ಹಾಳಾಗಿ ಈ ದಿವಸ ಆ ವನ್ಯ ಮೃಗಗಳಿಗೆ ವಾಸಮಾಡುವುದಕ್ಕೆ ಪ್ರಕೃತಿದತ್ತವಾಗಿ ಬಂದಂಥ ವನವಿಲ್ಲದೆ ಅವುಗಳಿಗೆ ವಾಸಮಾಡುವುದಕ್ಕೆ ಸ್ಥಳವಿಲ್ಲದಂತಾಗಿದೆ. ನಮ್ಮ ಕಾಡುಗಳಲ್ಲಿ ವನ್ಯಮೃಗಗಳು ಕಡಮೆ ಆಗುವುದಕ್ಕೆ ಇದೇ ಕಾರಣ. ಸಾಮಾನ್ಯವಾಗಿ ವಾಸಮಾಡುವುದಕ್ಕೆ ಒಬ್ಬ ಮನುಷ್ಯನಿಗೆ ಹೇಗೆ ಒಂದು ಮನೆ ಆಗತ್ಯವೋ ಹಾಗೇ ಆ ಕಾಡು ಪ್ರಾಣಿಗಳಿಗೂ ಕೂಡ ವಾಸಮಾಡುವುದಕ್ಕೆ ಒಂದು ಯೋಗ್ಯವಾದ ಸ್ಥಳಬೇಕು. ಆದರೆ ಅವುಗಳಿಗೆ ಈ ಕಾನೂನಿನ ರಕ್ಷಣೆಗಿಂತ ಪ್ರಕೃತಿದತ್ತವಾದ ಕಾಡಿನ ಆಗತ್ಯ ಜಾಸ್ತಿ ಇದೆ. ಆದರೆ ಈ ಎರಡೂ ಅಗತ್ಯ. ಈ ದಿವಸ ನಾವು ಬಂಡೀಪುರಕ್ಕೆ ಹೋಗಿ ನೋಡಿದರೆ ಅಲ್ಲಿ ಯಾವ ಪ್ರಾಣಿಗಳು ಬೇಕು ? ಎಷ್ಟು ಬೇಕು ? ಅದಕ್ಕೆ ಕಾರಣ ಅಲ್ಲಿ ದಟ್ಟವಾದ ಕಾಡಿದೆ. ಆದರೆ ಅಲ್ಲಿರತಕ್ಕ ಜನರು ಹೇಳುತ್ತಾರೆ. ಕೆಲವು ದಿನಗಳ ಕೆಳಗೆ ಅಲ್ಲಿ ಏನೋ ಒಂದು ಕಾಯಿಲೆ ಬಂದು ಅನೇಕ ಕಾಡುಕೋಣಗಳು ಸತ್ತುಹೋದವೆಂದು ಹೇಳುತ್ತಾರೆ. ಆ ಕಾಲದಲ್ಲಿ ಅದರ ಬಗ್ಗೆ ಸರ್ಕಾರದವರು ಸಾಕಷ್ಟು ನಿಗಾ ವಹಿಸದಿದ್ದ ಕಾರಣ ಅವುಗಳೆಲ್ಲಾ ಮದ್ರಾಸ್ ರಾಜ್ಯದಕಡೆ ಹೋದವು ಎಂಬುದಾಗಿ ಹೇಳುತ್ತಿದ್ದಾರೆ. ಆದುದರಿಂದ ಒಟ್ಟಿನಲ್ಲಿ ಈ ವನ್ಯ ಮೃಗಗಳ ಅಭಿವೃದ್ಧಿಗೆ ಒಂದು ಪ್ರಕೃತಿದತ್ತವಾದ ಕಿಂಕಾರಣ್ಯ ಜೊತೆಗೆ ಕಟ್ಟುನಿಟ್ಟಾದ ಕಾನೂನು ಮತ್ತು ಬೇಟೆ ಷಿಕಾರಿ ಆಡತಕ್ಕವರಿಗೆ ಇರತಕ್ಕ ಅವಕಾಶಗಳನ್ನು ತಪ್ಪಿಸಿದರೆ ಇವುಗಳ ಬೆಳವಣಿಗೆಗೆ ಅನುಕೂಲವಾಗಬಹುದೆಂದು ಸಲಹೆ ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಯವರೇ, ಮಾನ್ಯ ಅರಣ್ಯ ಸಚಿವರು ವನ್ಯಮೃಗಗಳ ಸಂರಕ್ಷಣೆಗಾಗಿ ತಂದಿರತಕ್ಕ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತಾ ಒಂದೆರಡು ಮಾತುಗಳನ್ನಾಡುವುದಕ್ಕೆ ಇಚ್ಛೆಪಡುತ್ತೇನೆ.

ಈ ದಿವಸ ಮನುಷ್ಯನ ರಕ್ಷಣೆ ಎಷ್ಟು ಅಗತ್ಯವೋ ಮತ್ತು ಅವಶ್ಯಕವೋ ಈ ವನ್ಯಮೃಗಗಳ ರಕ್ಷಣೆಯೂ ಅಷ್ಟೇ ಅಗತ್ಯ ಮತ್ತು ಅವಶ್ಯಕ. ಈ ವನ್ಯಮೃಗಗಳ ಸಂಖ್ಯೆ ಇತ್ತೀಚೆಗೆ ಕಡಮೆ ಯಾಗುತ್ತಿದೆ ಎಂಬ ಕೂಗು ಎದ್ದಿದೆ. ಹಿಂದೆ ನಾವು ಹುಡುಗರಾಗಿದ್ದಾಗ ಎಲ್ಲಿ ನೋಡಲಿ ದಟ್ಟವಾದ ದೊಡ್ಡ ದೊಡ್ಡ ಕಾಡುಗಳಿರುತ್ತಿದ್ದವು. ಇತ್ತೀಚೆಗೆ ಜನಸಂಖ್ಯೆ ದಿನದಿನಕ್ಕೂ ಹೆಚ್ಚಿಗೆ ಬೆಳೆಯುತ್ತಾ ಬಂದಹಾಗೆಲ್ಲಾ ಈ ಕಾಡುಗಳು ಕಡಿಯಲ್ಪಟ್ಟು ಬೇಸಾಯದ ಭೂಮಿಗಳಾಗಿ ಪರಿವರ್ತನೆಯಾಗುತ್ತಿವೆ. ಜನರಿಗೆ ಈ ದಿವಸ ಎಷ್ಟು ಜಮೀನಿದ್ದರೂ ಅದನ್ನೂ ಸಾಲದಾಗಿದೆ. ಕಾಡುಗಳು ಈ ದಿವಸ ಮಾಯವಾಗುತ್ತಿರುವುದಕ್ಕೆ ಇದೇ ಕಾರಣ. ನಮ್ಮ ಹಳ್ಳಿಗಳ ಕಡೆ ಬೈಲು ಪ್ರದೇಶ ಜಾಸ್ತಿಯಿರುವುದರಿಂದ ಹತ್ತು ಮೈಲಿ ಹೋದರೂ ಒಂದು ಕಾಡು ಪ್ರಾಣಿ ನೋಡಲು ಸಾಧ್ಯವಿಲ್ಲ. ಕಾಡು ಹೆಚ್ಚಾಗಿದ್ದಾಗ ಕಾಡು ಪ್ರಾಣಿಗಳೂ ಹೆಚ್ಚಾಗಿದ್ದುವು. ಅಲ್ಲಿ ಅವಕ್ಕೆ ಬೇಕಾದ ಆಹಾರವೂ ದೊರೆಯುತ್ತಿತ್ತು. ಕಾಡು ಕಡಮೆಯಾಗುತ್ತಾ ಬಂದಿರುವುದರಿಂದ ಅಲ್ಲಿನ ಪ್ರಾಣಿಗಳ ಸಂಖ್ಯೆ ಸಹ ಕಡಮೆಯಾಗುತ್ತಿದೆ. ಕಾಡುಗಳ ಹತ್ತಿರದ ಗ್ರಾಮಗಳಲ್ಲಿರುವವರು ಕಾಡು ಪ್ರಾಣಿಗಳು ಊರಿಗೆ ಬಂದರೆ ಬೆಳೆಗೆ ಉಪಯೋಗಿಸುವ ಕ್ರಿಮಿನಾಶಕಗಳನ್ನು ಹಾಕಿ ಅವನ್ನು ಕೊಲ್ಲುತ್ತಿದ್ದಾರೆ. ಏಕೆಂದರೆ ಕಾಡು ಪ್ರಾಣಿಗಳಿಂದ ದನಕರುಗಳಿಗೆ ತೊಂದರೆಯಾಗುವುದು. ಆದುದರಿಂದ ಹೀಗೆ ಮಾಡುತ್ತಿರುವರು. ವನ್ಯಮೃಗಗಳನ್ನು ರಕ್ಷಣೆ ಮಾಡಬೇಕೆಂದು ಹೇಳುವಾಗ ಜನರು ಕ್ರಿಮಿನಾಶಕ ವಗೈರೆ ಉಪಯೋಗಿಸಿ ಅಥವ ಬೇರೆ ರೀತಿಯಲ್ಲಿ ಕಾಡು ಪ್ರಾಣಿಗಳನ್ನು ಕೊಲ್ಲದಂತೆ ನಿರ್ಬಂಧ ಮಾಡಬೇಕು. ಅಲ್ಲದೆ ಕಾಡು ಜಾಸ್ತಿಯಿದ್ದರೆ ವನ್ಯ ಮೃಗಗಳನ್ನು ರಕ್ಷಿಸಬಹುದು. ಇಲ್ಲದಿದ್ದರೆ ಸಾಧ್ಯವಿಲ್ಲ. ಇದಕ್ಕಾಗಿ ಕಾಡುಗಳನ್ನು ಚೆನ್ನಾಗಿ ಬೆಳೆಸಬೇಕು, ಹಾಗೆ ಮಾಡದಿದ್ದರೆ ವನ್ಯಮೃಗಗಳ ಸಂಖ್ಯೆ ಕಡಮೆಯಾಗುವುದು. ಶಿವಮೊಗ್ಗ, ಹಾಸನ ಮುಂತಾದ ಕಡೆ ಇರುವ ಕಾಡುಗಳಲ್ಲಿ ಹುಲಿ, ಚಿರತೆ ಮುಂತಾದುವುಗಳನ್ನು ನೋಡಬಹುದು. ಅದೇ ಬೈಲು ಪ್ರದೇಶದಲ್ಲಿ ಯಾವ ವಿಧವಾದ ಕಾಡು ಪ್ರಾಣಿಯನ್ನೂ ನೋಡಲು ಸಾಧ್ಯವಿಲ್ಲ. ಈಗ ಅನೇಕ ಕಡೆಗಳಲ್ಲಿ ಮೊಲಗಳೂ ಕೂಡ ಕಣ್ಣಿಗೆ ಬೀಳುವುದಿಲ್ಲ. ಬ್ಯಾಟರಿಗಳನ್ನು ಉಪಯೋಗಿಸಿ ಮೊಲಗಳನ್ನು ರಾತ್ರಿ

(ಶ್ರೀ ಎಚ್. ಜಿ. ಚನ್ನಪ್ಪ)

ವೇಳೆ ಬೇಟೆಯಾಡುವುದನ್ನು ನಿರ್ಬಂಧಿಸಬೇಕು. ಕಾಡು ಬೆಳೆಸಲು ಆದ್ಯತೆ ಕೊಡಬೇಕು, ಹಾಗೆ ಮಾಡಿದರೆ ವನ್ಯ ಮೃಗಗಳು ಹೆಚ್ಚಾಗಲು ಅವಕಾಶವಾಗುವುದು. ಈಗ ಕಾಡನ್ನು ಸಾಗುವಳಿಗೆ ಕೊಡಬೇಕೆಂದು ಕೇಳುವುದು, ಅರಣ್ಯ ಪ್ರದೇಶವನ್ನು ಸಾಗುವಳಿಗೆ ಬಿಡುಗಡೆ ಮಾಡುವುದೂ ಇದೆ. ಹಾಗೆ ಅರಣ್ಯದ ಭೂಮಿಯನ್ನು ವ್ಯವಸಾಯಕ್ಕೆ ಬಿಡುಗಡೆ ಮಾಡಿದರೆ ಅರಣ್ಯ ಪ್ರದೇಶ ಕಡಮೆಯಾಗುವುದು. ಬೆಟ್ಟಗುಡ್ಡಗಳಲ್ಲಿ ಕಾಡನ್ನು ಬೆಳೆಸಬೇಕು ಎಂದು ಹೇಳುವುದೂ ಇದೆ. ಮೈಸೂರಿಗೆ ಹೋಗುವಾಗ ಕಡವಗೆರೆ ಹತ್ತಿರ ನೀಲಗಿರಿ ಗಿಡ ಹಾಕಿದ್ದಾರೆ. ಆದರೆ ಅವು ಅಲ್ಲಿ 10 ಅಡಿಯಷ್ಟು ಎತ್ತರಕ್ಕೂ ಬೆಳೆದಿಲ್ಲ. ಅಂಥ ಜಾಗಗಳಲ್ಲಿ ಗಿಡಗಳು ಸರಿಯಾಗಿ ಬೆಳೆಯದಿರುವುದರಿಂದ ಎಲ್ಲಿ ಬೆಳೆಯಬಹುದೋ ಅಂಥ ಕಡೆ ಗಿಡ ಹಾಕಿ ಕಾಡು ಬೆಳೆಸಬೇಕು ಮತ್ತು ಅದಕ್ಕೂ ಸಾರವತ್ತಾದ ಭೂಮಿಬೇಕು. ಇಲ್ಲದಿದ್ದರೆ ಕಾಡೂ ಬೆಳೆಯುವುದಿಲ್ಲ, ವನ್ಯ ಮೃಗಗಳ ಸಂಖ್ಯೆಯೂ ಹೆಚ್ಚಾಗುವುದಿಲ್ಲ. ಆದುದರಿಂದ ಕಾಡು ಬೆಳೆಸಲು ಆದ್ಯತೆ ತರಬೇಕೆಂಬುದನ್ನು ಮಂತ್ರಿಗಳ ಗಮನಕ್ಕೆ ತರುತ್ತೇನೆ. ಹಿಂದೆ ಇದ್ದ ಮಂತ್ರಿ ಮಂಡಲ ಕಾಡು ಬೆಳೆಸಲು ತಗಲುವ ಖರ್ಚಿನ ಅರ್ಧ ಭಾಗ ಸರಕಾರ ಇನ್ನರ್ಧ ಭಾಗ ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡುಗಳು ಸಹಾಯ ಮಾಡುತ್ತಿದ್ದುವು, ಸಾಧ್ಯವಿರುವ ಕಡೆ ಗಿಡಮರಗಳನ್ನು ಬೆಳೆಸುತ್ತಿದ್ದರು. ಅದಕ್ಕೆ ಒಂದು ಕಾನೂನಿತ್ತು. ಅದರ ಪ್ರಕಾರ ಅನೇಕ ಗೋಮಾಳಗಳಲ್ಲಿ ನೀಲಗಿರಿ ಗಿಡ ಬೆಳೆಸಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು ನೂರು ಎಕರೆಗಳಲ್ಲಿ ನೀಲಗಿರಿ ಗಿಡ ಬೆಳೆಸಿದ್ದೇವೆ. ಹೀಗೆ ಪ್ರಯತ್ನ ಮಾಡುವುದಾದರೆ ಕಾಡು ಬೆಳೆಸಲು ಸಾಧ್ಯ. ಸ್ವಂತ ಹಿಡುವಳಿಯಲ್ಲಿ ಮರ ಬೆಳೆಸುವವರಿಗೂ ಕೂಡ ಸಹಾಯಧನ ಕೊಡಬೇಕೆಂಬ ನಿಯಮವಿತ್ತು. ಹಾಗೆ ಮಾಡದಿದ್ದರೆ ಕಷ್ಟ. ಈಗ ಕಾಡು ಕಡಮೆಯಾಗಿ ಒಲೆಗೆ ಸೌದೆ ಸಿಕ್ಕುವುದೇ ಕಷ್ಟವಾಗಿದೆ. ಹೀಗಾಗಿ ಮಲೆನಾಡಿನಿಂದ ಸೌದೆ ತರಬೇಕಾದ ಪರಿಸ್ಥಿತಿ ಬಂದಿದೆ ಎಲ್ಲಾ ಕಡೆಗಳಲ್ಲೂ ಅಡಿಗೆ ಮಗ್ಗೆರೆಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವುದಕ್ಕಾಗುವುದಿಲ್ಲ. ಆದುದರಿಂದ ಕಾಡು ಬೆಳೆಸಲು ಹೆಚ್ಚು ಪ್ರಯತ್ನ ಮಾಡಬೇಕು. ವನ್ಯಮೃಗಗಳ ಸಂರಕ್ಷಣೆ ಮಾಡಬೇಕೆಂದು ಹೇಳುವಾಗ ಕಾಡು ಬೆಳೆಸಬೇಕು, ಅದಕ್ಕೆ ಆದ್ಯತೆ ಕೊಡಬೇಕೆಂದು ಹೇಳುತ್ತಿದ್ದಾರೆ, ಒಂದಕ್ಕೊಂದಕ್ಕೆ ಸಂಬಂಧವಿಲ್ಲ ಎಂದು ಹೇಳಬಹುದು. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ ಸನ್ಯಾಸಿ ಕಥೆ ಜ್ಞಾಪಕಕ್ಕೆ ಬರುವುದು. ಸನ್ಯಾಸಿಯೊಬ್ಬ, ಇಲಿ ಕಾಟ ತಡೆಯಲಾರದೆ ಬೆಕ್ಕನ್ನು ಸಾಕಿದ, ಬೆಕ್ಕಿಗೆ ಹಾಲು ಬೇಕಾಯ್ತು, ಅದಕ್ಕಾಗಿ ಹಸು ಸಾಕಿದ, ಹಸು ಕಾಯಲು ಒಬ್ಬ ಆಳು ಬೇಕಾಯ್ತು. ನಂತರ ಆತ ಮದುವೆಯಾದ, ಹೀಗೆ ಅವನ ಸಂಸಾರ ಬೆಳೆಯಿತು ಎಂದು ಹೇಳುವರು. ಹೀಗೆ ಒಂದಕ್ಕೊಂದಕ್ಕೆ ತಾರತಮ್ಯವಿದೆ. ಇದರ ಪ್ರಕಾರ ವನ್ಯಮೃಗಗಳ ರಕ್ಷಣೆಯಾಗಬೇಕಾದರೆ ಕಾಡನ್ನು ಬೆಳೆಸಿದರೆ ಮಾತ್ರ ಸಾಧ್ಯ. ಇಲ್ಲದಿದ್ದರೆ ಊರ ಪಕ್ಕದಲ್ಲಿ ವನ್ಯ ಮೃಗಗಳನ್ನು ಸಾಕುವುದಕ್ಕಾಗುವುದಿಲ್ಲ. ಇಂದು ಊರುಗಳಲ್ಲಿ ಕೋತಿಗಳನ್ನು ನೋಡಬಹುದು. ಅವು ಮೊದಲು ಕಾಡುಗಳಲ್ಲಿರುತ್ತಿದ್ದುವು. ಕಾಡು ನಾಶವಾದುದರಿಂದ ಅವು ಕಾಡು ಬಿಟ್ಟು ಊರಿಗೆ ಬಂದಿವೆ. ಅವು ಇಂದು ಮನೆಗಳ ಹೆಂಚನ್ನೆತ್ತಿ ಒಳಕ್ಕೆ ಬಂದು ಪದಾರ್ಥಗಳನ್ನು ಹಾಳುಮಾಡುತ್ತಿವೆ. ಇವೆಲ್ಲಾ ಯೋಚನೆಮಾಡುವುದಾದರೆ ಕಾಡನ್ನು ಹೆಚ್ಚಾಗಿ ಬೆಳೆಸಬೇಕು. ಇದಕ್ಕೆ ಜನರೂ ಹೆಚ್ಚು ಸಹಕಾರ ನೀಡಬೇಕು. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಭಾಪತಿಗಳೇ, ಈ ಮೊದಲೇ ಮುಖ್ಯ ಮಂತ್ರಿಗಳು ನಮ್ಮ ಸರಕಾರದ ಪರವಾಗಿ ಕೇಂದ್ರ ಸರಕಾರಕ್ಕೆ ಅಥವ ಪಾರ್ಲಿಮೆಂಟಿಗೆ ಅಧಿಕಾರ ಕೊಡುವ ಒಂದು ನಿರ್ಣಯವನ್ನು ವನ್ಯ ಮೃಗಗಳ ಸಂರಕ್ಷಣೆ ವಿಷಯವಾಗಿ ಮಂಡಿಸಿದ್ದನ್ನು ಈ ಸಭೆ ಸ್ಪೂರ್ತಿಪೂರ್ವಕವಾಗಿ ಸ್ವಾಗತಿಸಿರುವುದನ್ನು ನೋಡಿ ಸಂತೋಷವಾಗುತ್ತಿದೆ. ನನಗಂತೂ ಈ ವಿಷಯದಲ್ಲಿ ಅದೂ ನಾನು ಅರಣ್ಯ ಶಾಖಾ ಮಂತ್ರಿ ಆಗಿರುವಾಗ ನನಗೆ ಈ ಸೇವೆ ಮಾಡುವ ಭಾಗ್ಯ ಬಂದಿರುವುದು ಬಹಳ ಆನಂದವನ್ನುಂಟು ಮಾಡಿದೆ. ಈವರೆಗೆ ಮಾತನಾಡಿದ ಸದಸ್ಯರೆಲ್ಲರೂ ಬಹಳ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀ ಕೋಣಂದೂರು ಲಿಂಗಪ್ಪನವರು ಮುಂತಾದವರು ಚಿಕ್ಕ ಕಾಡುಗಳಿದ್ದರೆ ಪ್ರಾಣಿಗಳಿರಲು ಅವಕಾಶ ಕಡಮೆ, ಕಾಡನ್ನು ದೊಡ್ಡದಾಗಿ ಬೆಳೆಸಬೇಕು ಎಂದು ಮುಂತಾಗಿ ತಿಳಿಸಿರುವುದೂ ಅಲ್ಲದೆ ಯಾವರೀತಿ ವನ್ಯ ಮೃಗಗಳನ್ನು ಸಂರಕ್ಷಣೆ ಮಾಡಬೇಕು, ಸರಕಾರ ಎಷ್ಟು ಹೊಣೆ ಹೊರಬೇಕು ಎಂಬುದರ ಕಡೆಯೂ ಕೂಡ ಗಮನ ಹರಿಸಿದ್ದಾರೆ. ಅವರೆಲ್ಲರಿಗೂ ಧನ್ಯವಾದಗಳನ್ನರ್ಪಿಸುತ್ತಾ ಇದ್ದೇನೆ. ಈ ವಿಷಯ

ದಲ್ಲಿ ಒಬ್ಬೊಬ್ಬರು ಹೇಳಿದ ಮಾತಿಗೆ ಉತ್ತರ ಕೊಡದೆ ಎಲ್ಲವನ್ನೂ ಸರ್ಕಾರ ಗಮನಿಸಿದೆ; ಎಲ್ಲರೂ ಬಹುಮಟ್ಟಿಗೆ ಮಾತನಾಡುತ್ತಾ ಬಹಳ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ ಎಂದು ತಿಳಿಸುತ್ತೇನೆ.

[MR. DEPUTY SPEAKER in the Chair]

ಪ್ರಾಮುಖ್ಯವಾಗಿ ವನ್ಯ ಮೃಗಗಳ ಸಂಖ್ಯೆ ಕಡಿಮೆ ಇದೆ ಎನ್ನುವುದನ್ನು ಮಾನ್ಯ ಸದಸ್ಯರೂ ಒಪ್ಪಿದ್ದಾರೆ. ಅದನ್ನು ಹೆಚ್ಚಿಸುವ ಸಲುವಾಗಿ ಮಾನ್ಯ ಸದಸ್ಯರು ಸರ್ಕಾರಕ್ಕೆ ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ವಿಷಯದಲ್ಲಿ ನಮ್ಮ ನೆಚ್ಚಿನ ಪ್ರಧಾನಿ ಇಂದಿರಾಗಾಂಧಿಯವರು ರಾಜ್ಯ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ. ಅದನ್ನು ಈ ಸಭೆಯ ಮುಂದೆ ಓದುವುದಕ್ಕೆ ಇಚ್ಛೆಪಡುತ್ತೇನೆ. ಅದು ಈ ರೀತಿ ಇದೆ :—

> "I have written to you in the past about the wild life conservation and management. Though there is a greater consciousness now about this problem than a few years ago, we have not been able to significantly arrest the continuing decline of our FAUNA among the dangerous species. We continue to receive reports of lucrative trade in the skin of even these animals. Tiger shooting is still going on though the law prohibits it throughout the country. Regretably our overseas emporia are also involved in this business."

ಈ ರೀತಿ ಅವರು ಮನನೊಂದು ನುಡಿದಿದ್ದಾರೆ. ನಮ್ಮ ರಾಜ್ಯದಲ್ಲಿ ಇದರ ಬಗ್ಗೆ ವಿಚಾರಣೆ ಮಾಡುವುದಾದರೆ ಸಿಂಹ ಒಂದೂ ಇಲ್ಲ. ಸಿಂಹವನ್ನು ಇಲ್ಲಿ ಇಡಬೇಕಾದರೆ ಬೇರೆ ಬೇರೆ ರಾಜ್ಯದಿಂದ ತರಿಸಬೇಕು. ಹುಲಿಯನ್ನೂ ಅದೇ ರೀತಿ ತರಿಸಬೇಕು. ಒಂದಾನೊಂದು ಕಾಲದಲ್ಲಿ ಮೈಸೂರು ದೇಶ ಹುಲಿಗಳಿಗೆ ಪ್ರಸಿದ್ಧವಾಗಿತ್ತು. ಆದುದರಿಂದಲೇ ಟಿಪ್ಪುಸುಲ್ತಾನನ್ನು "ಮೈಸೂರು ಹುಲಿ" ಎಂದು ಹೇಳುತ್ತಾ ಇದ್ದರು. ಆದರೆ ಈವೊತ್ತಿನ ದಿವಸ 102 ಹುಲಿಗಳು ಮೈಸೂರಿನಲ್ಲಿ ಇವೆ ಎಂದು ನಮಗೆ ಪುಸ್ತಕದಲ್ಲಿ ಮಾತ್ರ ಇದೆ. ಲೆಕ್ಕಾಚಾರ ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಡಿಪಾರ್ಟ್‌ಮೆಂಟ್‌ನವರು 102 ಟೈಗರ್ ಇದೆ ಎಂದು ವರದಿ ಮಾಡಿದ್ದಾರೆ. ವಾಸ್ತವವಾಗಿ ಇದು ಕಡಿಮೆ ಸಂಖ್ಯೆಯಲ್ಲಿ ಇದೆ. ಇದು ಬಂಡೀಪುರ, ನಾಗರಹೊಳೆ, ದಾಂಡೇಲಿ ಈ ಸ್ಥಳಗಳಲ್ಲಿ ಇರಬಹುದು. ಈ ವನ್ಯಮೃಗಗಳನ್ನು ನೋಡುವುದಕ್ಕೆ ನಮ್ಮ ದೇಶಕ್ಕೆ ಪರರಾಷ್ಟ್ರದಿಂದ ಬರುತ್ತಾರೆ. ಈ ಸ್ಯಾಂಕ್ಚುಯರಿಯಲ್ಲಿ ನಾವು ಅನೇಕ ಅನುಕೂಲತೆಗಳನ್ನು ಕೊಟ್ಟಿದ್ದೇವೆ. ಇದರಿಂದ ಬೇಕಾದಷ್ಟು ಫಾರಿನ್ ಎಕ್ಸ್‌ಛೇಂಜ್ ಸಂಪಾದನೆಯಾಗುತ್ತದೆ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ. ಈ ಸ್ಯಾಂಕ್ಚುಯರಿಯಲ್ಲೂ ಕೂಡ ವನ್ಯಮೃಗಗಳು ಸುರಕ್ಷಿತವಾಗಿರುತ್ತೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ನಮ್ಮ ಕಣ್ಣಿಗೆ ಕಾಣತಕ್ಕಂಥದ್ದು ಜಿಂಕೆ, ಕಾಡುಕೋಣ ಮತ್ತು ಹುಲಿ ಯಾವಾಗಲೋ ಒಂದು ಸಲ ಇಲ್ಲಿ ಅಲ್ಲಿ ಕಾಣುತ್ತಾ ಇದೆ. ಅದಕ್ಕೆ ಕಾರಣ ಏನೆಂದರೆ ಅವು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲ. ನಮಗೆ ಹುಲಿ ಚರ್ಮ ಬೇಕು, ಅದರಿಂದ ನಾವು ದುಡ್ಡು ಸಂಪಾದನೆ ಮಾಡಬೇಕು. ಹುಲಿ ದೇಶದಲ್ಲಿ ಇಲ್ಲದೆ ಹಾನಿಯಾಗುತ್ತಾ ಇದೆ. ಆದರೂ ಕೂಡ ನಾವು ಟೈಗರ್ ಬೇಟೆಯಾಡುತ್ತೇವೆ, ಹುಲಿಯ ಚರ್ಮವನ್ನು ಮಾರುತ್ತೇವೆ, ಅದರಿಂದ ಬೇಕಾದಷ್ಟು ದುಡ್ಡು ಸಂಪಾದನೆ ಮಾಡುತ್ತೇವೆ. ಅದಕ್ಕೋಸ್ಕರ ಈ ವನ್ಯಮೃಗಗಳನ್ನು ಕಾಪಾಡುವುದಕ್ಕೋಸ್ಕರ ಕೆಲವು ವಿಧೇಯಕಗಳನ್ನು ಗೌರ್ನಮೆಂಟ್ ಆಫ್ ಇಂಡಿಯಾದವರು ತಂದಿದ್ದಾರೆ. ಈಗ ಒಂದೊಂದು ಸ್ಟೇಟ್‌ನಲ್ಲಿ ಒಂದೊಂದು ತರಹ ಇದೆ. ಹೀಗಿರುವಾಗ ಒಂದು ಸ್ಟೇಟಿನ ಕಾಡು ಇನ್ನೊಂದು ಸ್ಟೇಟಿನ ಕಾಡಿನ ಪಕ್ಕದಲ್ಲಿ ಇರುತ್ತದೆ. ಈ ವನ್ಯಮೃಗಗಳು ಒಂದು ಸ್ಟೇಟಿನಿಂದ ಮತ್ತೊಂದು ಸ್ಟೇಟ್‌ಗೆ ಕಾಡುಗಳಲ್ಲಿ ಓಡಾಡುತ್ತಿರುತ್ತವೆ. ಅದನ್ನು ತಡೆಗಟ್ಟುವುದಕ್ಕಾಗುವುದಿಲ್ಲ. ಈ ಅನಿಮಲ್ಸ್‌ಗೆ ಹೆಚ್ಚು ದಯೆ ತೋರಿಸಬೇಕೆಂದು ಈ ವೈಲ್ಡ್ ಲೈಫ್‌ಗೆ ಪ್ರೊಟೆಕ್ಷನ್ ಕೊಡಬೇಕು ಎಂದು ಹೇಳಿದ್ದಾರೆ. ಆದುದರಿಂದ ಈ ಒಂದು ರೆಸಲ್ಯೂಷನ್‌ನ್ನು ತಾವು ಒಪ್ಪಿಕೊಳ್ಳ

(ಶ್ರೀ ಕೆ. ಎಚ್. ಪಾಟೀಲ್)

ಬೇಕೆಂದು ಹೇಳುತ್ತಿದ್ದೇನೆ. ಇದಕ್ಕೆ ಒಂದು ಸಮಗ್ರವಾದ ಕಾಯಿದೆಯನ್ನು ಮಾಡುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅದಕ್ಕಾಗಿ ತಾವೆಲ್ಲರೂ ಇದನ್ನು ಒಪ್ಪಿಕೊಳ್ಳುತ್ತೀರೆಂದು ನಂಬಿರುತ್ತೇನೆ. ಶ್ರೀ ಕೋಣಂದೂರು ಲಿಂಗಪ್ಪನವರು ವೈಲ್ಡ್ ಲೈಫ್ ಜೊತೆಗೆ ಫಾರೆಸ್ಟ್ ಕೂಡ ಹೆಚ್ಚಿಗೆ ಬೆಳೆಸಬೇಕು ಎಂದು ಹೇಳಿದ್ದಾರೆ. ಶ್ರೀ ಚೆನ್ನಪ್ಪನವರೂ ಕೂಡ ಅದೇ ಮಾತು ಹೇಳಿದ್ದಾರೆ. ಅವರು ಹೇಳಿದ್ದು ಏನೆಂದರೆ ಫಾರೆಸ್ಟ್ ದೊಡ್ಡದಾಗಿ ಬೆಳೆದ ಹೊರತು ಈ ವನ್ಯ ಮೃಗಗಳಿಗೆ ಪ್ರೊಟೆಕ್ಷನ್ ಸಿಕ್ಕುವುದಿಲ್ಲ ಎಂದು. ಅವರು ಇದರ ಬಗ್ಗೆ ಹೇಳುವುದು ನಿಜ. ಆದರೆ ಈ ಕಾಡನ್ನು ನಾವು ಪ್ರಿಸರ್ವ್ ಮಾಡಬೇಕಾದರೆ ಮಾನ್ಯ ಸದಸ್ಯರ ಸಹಕಾರ ಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮುಂದಿನ ಸಭೆ 15 ಆಗಸ್ಟ್‌ಗೆ ಸೇರುತ್ತದೆ. ಮಾನ್ಯ ಸದಸ್ಯರು ಒಪ್ಪಿದರೆ ಅವರನ್ನು ನಾವು ಬೇರೆ ಬೇರೆ ಕಾಡುಗಳಿಗೆ ಕರೆದುಕೊಂಡು ಹೋಗಿ ತೋರಿಸಬೇಕು ಎಂದು ಆಲೋಚನೆ ಮಾಡಿದ್ದೇವೆ. ಫಾರೆಸ್ಟ್ ಪ್ರಾಪರ್ಟೀಸ್ ಮತ್ತು ಫಾರೆಸ್ಟ್ ಅನಿಮಲ್ಸ್ ಇದರ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳುವುದಕ್ಕೆ ಆವಾಗ ಅನುಕೂಲವಾಗುತ್ತದೆ. ಇಲ್ಲಿ ಸುಮ್ಮನೆ ಭಾಷಣಗಳನ್ನು ಕೇಳಿ, ಪೇಪರ್‌ನಲ್ಲಿ ಓದಿ ಸುಮ್ಮನೆ ಆಗಬಾರದು. ಅದನ್ನು ನೀವು ಕಣ್ಣಿನಲ್ಲಿ ನೋಡಬೇಕು. ದಯವಿಟ್ಟು ನೀವು ಹೋಗುವುದಕ್ಕೆ ಮುಂಚೆ ಯಾರು ಯಾರು ಅರಣ್ಯಗಳನ್ನು ನೋಡಲು ಬರುತ್ತಾರೋ ಅವರ ಹೆಸರನ್ನು ಕಳುಹಿಸಿ ಕೊಟ್ಟರೆ ಅವರನ್ನು ತಂಡ ತಂಡವಾಗಿ ಅಲ್ಲಿಗೆ ಕರೆದುಕೊಂಡು ಹೋಗಲು ಏರ್ಪಾಡು ಮಾಡುತ್ತೇವೆ. ಅಲ್ಲಿಗೆ ತಮ್ಮೆಲ್ಲರನ್ನೂ ಕರೆದುಕೊಂಡು ಹೋಗಿ ಪ್ರತ್ಯಕ್ಷವಾಗಿ ತೋರಿಸಬೇಕೆನ್ನುವ ಆಸೆ ಇದೆ. ನೀವು ಬರುವುದಾದರೆ ತಮ್ಮ ಹೆಸರನ್ನು ತಿಳಿಸಬೇಕೆಂದು ಹೇಳುತ್ತೇನೆ. ಅಲ್ಲಿ ಹೋಗಿ ನೋಡಿದರೆ ಯಾವ ರೀತಿಯಾಗಿ ಕಾಡುಗಳನ್ನು ಹಾಳು ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಅದನ್ನು ನೋಡಿದರೆ ತಮಗೆ ಕಣ್ಣೀರು ಬರುತ್ತದೆ. ಮೈಸೂರು ಅರಣ್ಯ ಸಂಪತ್ತು ಎಷ್ಟು ಹೆಸರುವಾಸಿಯಾಗಿತ್ತೋ ಅಷ್ಟೂ ಕೆಟ್ಟುಹೋಗಿದೆ. ಅದನ್ನು ಜನಗಳೇ ಹಾಳು ಮಾಡುತ್ತಿದ್ದಾರೆ. ಆದುದರಿಂದ ತಾವು ಕೊಟ್ಟರತಕ್ಕಂಥ ಅಮೂಲ್ಯವಾದ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಈ ಕಾಡನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ. ಮತ್ತು ಅದೇ ರೀತಿ ವೈಲ್ಡ್ ಲೈಫ್‌ಗೂ ಕೂಡ ಎಚ್ಚರಿಕೆ ತೆಗೆದುಕೊಳ್ಳುತ್ತೇವೆ.

ಇನ್ನು ಇದರ ಜೊತೆಗೆ ಈಗ ಸ್ಕೇರ್ಸಿಟಿ ಕಂಡೀಷನ್ಸ್ ಇದೆ. ಎಲ್ಲೆಲ್ಲಿ ಜನತೆಗೆ ಕೂಲಿ ಇಲ್ಲ ಅಲ್ಲಿ ಲೇಬರ್ ಪ್ರೊವೈಡ್ ಮಾಡುವುದಕ್ಕೆ ಅಫಾರೆಸ್ಟೇಷನ್ ವರ್ಕ್ಸ್ ಕೂಡ ಸೇರಿ ಮಾಡಬೇಕು ಎಂದು ಇದ್ದೇವೆ. ಅಲ್ಲಿ ಗಿಡಗಳನ್ನು ಬೆಳೆಸುವುದು, ಇಂತಹ ಕೆಲಸಗಳನ್ನು ಮಾಡಬೇಕೆಂದು ಮಾಡಿದ್ದೇವೆ. ಆದರಲ್ಲಿ ಕೆಲವು ಟೀಕೆಗಳು ಬರುತ್ತವೆ. ಗಿಡಗಳು ಬೆಳೆಯುವುದಿಲ್ಲ ದುಡ್ಡು ತೆಗೆದುಕೊಳುತ್ತಾರೆ ಎನ್ನುವ ಟೀಕೆ ಬರುತ್ತದೆ. ಆದರೆ ಈವೊತ್ತಿನ ಹವಾಮಾನದ ಪರಿಸ್ಥಿಯಿಂದ ಮಳೆ ಇಲ್ಲದೇ ಇರುವಾಗ ಗಿಡಗಳನ್ನು ಹಾಕಿ ಬೆಳೆಸುತ್ತೇವೆ ಎನ್ನುವುದು ನಾನು ಆಗಲೇ ಹೇಳಿದ ಹಾಗೆ ವೈಲ್ಡ್ ಲೈಫನ್ನು ನಾವು ಕಾಪಾಡಲೇ ಬೇಕು. ಅರಣ್ಯಗಳು ಬೆಳೆದಾಗ ಇವುಗಳು ನಿಲ್ಲುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ವನ್ಯ ಸಂಪತ್ತನ್ನು ಬೆಳೆಸುವುದಕ್ಕೆ ತಾವು ಕೊಟ್ಟಿರ ತಕ್ಕಂಥ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಚಾಚೂತಪ್ಪದೆ ಪಾಲನೆ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ವನ್ಯ ಮೃಗಗಳ ಸೌಂದರ್ಯ, ಇದರ ಐತಿಹಾಸಿಕ ಜ್ಞಾನ, ಇದೂ ಸೇರಿದೆ. ಇದು ವೃದ್ಧಿ ಮಾನಕ್ಕೆ ಬರುತ್ತಾ ಇದೆಯೇ ಎನ್ನುವುದೂ ಕೂಡ ಸರ್ಕಾರ ಎಚ್ಚರಿಕೆ ತೆಗೆದುಕೊಳ್ಳುತ್ತದೆ. ಈ ವನ್ಯಮೃಗಗಳ ಪರಿಜ್ಞಾನ ಎಲ್ಲರಿಗೂ ಒದಗಿಸಬೇಕು ಎನ್ನುವುದು ನನ್ನ ಅಭಿಪ್ರಾಯ. ಅದಕ್ಕಾಗಿ ಒಂದು ಲಕ್ಷ ಅಥವಾ ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವಂಥ ಪ್ರದೇಶದಲ್ಲಿ ಸಣ್ಣ ಪ್ರಮಾಣದ ಜೂ ಮಾಡಬೇಕೆನ್ನುವ ಉದ್ದೇಶ ಇದೆ. ಈ ರೀತಿ ಸಣ್ಣ ಮೃಗಾಲಯವನ್ನು ಸ್ಥಾಪಿಸಿದರೆ ಎಷ್ಟು ಪ್ರಾಣಿಗಳು ಬೇಕು, ಇದಕ್ಕೆ ತಗಲುವ ವೆಚ್ಚ ಎಷ್ಟು, ಈ ವೆಚ್ಚವನ್ನು ಪೂರ್ತಿಯಾಗಿ ರಾಜ್ಯ ಸರ್ಕಾರದವರು ವಹಿಸಿ ಕೊಳ್ಳಬೇಕೇ, ಕೇಂದ್ರ ಸರ್ಕಾರದವರು ವಹಿಸಿ ಕೊಳ್ಳಬೇಕೇ ಎನ್ನುವ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ. ಶ್ರೀ ನಾಯುಡುರವರು ಜೂವನ್ನು ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ಈಗ ಇರುವಂತೆ 200 ಜೂಗಳು ಆದರೂ ಸಾಲದು. ಆದುದರಿಂದ ಕನಿಷ್ಠಪಕ್ಷ 15-16 ಜೂಗಳು ಆದರೂ ಕೂಡ ಮೈಸೂರು ರಾಜ್ಯದಲ್ಲಿ ಸ್ಥಾಪನೆ ಮಾಡಬೇಕೆನ್ನುವುದು ಸರ್ಕಾರದ ಧೋರಣೆಯಾಗಿದೆ. ಅದಕ್ಕಾಗಿ ಪ್ರಯತ್ನವೂ ಕೂಡ ನಡೆದಿದೆ. ನಮ್ಮ ಮುಖ್ಯ ಮಂತ್ರಿಗಳು ಮತ್ತು ಆರ್ಥಿಕ ಮಂತ್ರಿಗಳೂ ಕೂಡ ಈ ವಿಷಯದಲ್ಲಿ

ಸಹಾನುಭೂತಿಯಿಂದ ಆಸಕ್ತಿ ವಹಿಸಿ ಈ ಸಮಸ್ಯೆಯನ್ನು ಪರಿಶೀಲಿಸುತ್ತಿದ್ದಾರೆ ಎಂದು ಹೇಳು ವುದಕ್ಕೆ ನಾನು ಇಚ್ಛೆಪಡುತ್ತೇನೆ. ವನ್ಯ ಮೃಗಗಳನ್ನು ಕೊಲ್ಲುವುದು ಎನ್ನುವುದಲ್ಲ, ಅವುಗಳಿಗೆ ಸರ್ವ ವಿಧವಾದ ಸಂರಕ್ಷಣೆಯನ್ನು ಕೊಡಬೇಕು, ಮತ್ತು ಈ ಬಗ್ಗೆ ಕೇಂದ್ರ ಸರ್ಕಾರದವರಿಗೆ ಕೆಲವು ಅಧಿಕಾರಗಳನ್ನು ಕೊಡುವುದರ ಸಲುವಾಗಿ ಈ ಠರಾವು ಬರಬೇಕಾಯಿತು.

ವನ್ಯ ಮೃಗಗಳಿಗೆ ರೋಗರುಜಿನಬಾರದಂತೆ ಪ್ರಯತ್ನ ಮಾಡಬೇಕೆಂದು ಹೇಳಿದ್ದಾರೆ. ಯಾವ ರೀತಿಯಿಂದ ರೋಗರುಜಿನಗಳು ಅವುಗಳಿಗೆ ಬಾರದಂತೆ ಔಷಧಿ ಕೊಡಲಿಕ್ಕೆ ಸಾಧ್ಯವಾಗು ವುದೋ ಗೊತ್ತಿಲ್ಲ. ಪರಮಾತ್ಮ ಮಾತ್ರ ಅವುಗಳನ್ನು ರಕ್ಷಣೆ ಮಾಡಬಲ್ಲ. ಆದರೂ ಸಹ ಅವು ಗಳಿಗೆ ರೋಗರುಜಿನಗಳು, ಎಪಿಡಿಮಿಕ್ ಇಂಥವು ಬಾರದ ಹಾಗೆ ನಾವು ಹವಾಮಾನದಲ್ಲಾಗಲೀ ನೀರಿನಲ್ಲಾಗಲಿ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಿದ್ದರೆ ಪರಿಶೀಲನೆ ಮಾಡಬಹುದು ಎನ್ನುವ ಮಾತನ್ನು ಹೇಳಿ, ತಾವೆಲ್ಲರೂ ಹೃತ್ಪೂರ್ವಕವಾಗಿ ಈ ಠರಾವನ್ನು ಬೆಂಬಲಿಸಿದ ಬಗ್ಗೆ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The question is :—

"That whereas this Assembly considers that it is desirable to have a uniform law throughout India for the protection of wild animals and birds and for all matters connected therewith or ancillary and incidental thereto ;

And whereas the subject matter of such a law is relatable mainly to entry 20 (Protection of wild animals and birds) of List II of the Seventh Schedule to the Constitution of India ;

And whereas Parliament has no power to make laws for the States with respect to the matters aforesaid except as provided in Articles 249 and 250 of the Constitution of India ;

And whereas it appears to this Assembly to be desirable that the aforesaid matter should be regulated in the State of Mysore by Parliament by law ;

Now, therefore, in exercise of the powers conferred by clause (1) of Article 252 of the Constitution of India, this Assembly hereby resolves that the protection of wild animals and birds and all matters connected therewith or ancillary and incidental thereto should be regulated in the State of Mysore by Parliament by law."

The motion was adopted.

Half-an-hour Discussion Arising Out of Answers to Question No. 184

Re : Construction of Vijayanagar Anecut in Siruguppa Taluk

† Sri B. E. RAMAIAH (Siruguppa).—Sir, I raise half-an-hour discussion on a matter arising out of answers to the Starred Question No. 179(184) of the 24th List regarding construction of Vijayanagar Anecut in Siruguppa Taluk.

ವಿಜಯನಗರ ಅಣೆಕಟ್ಟು ಕೃಷ್ಣ ದೇವರಾಯರ ಕಾಲದಲ್ಲಿ 15ನೇ ಶತಮಾನದಲ್ಲಿ ಚಂದ್ರಗುಡಿ ಹತ್ತಿರ ಕಟ್ಟಲ್ಪಟ್ಟಿತು. 400 ವರ್ಷವಾದರೂ ಕೂಡ ಇದು ರಿಪೇರಿ ಕಂಡಿಲ್ಲ. 1960ರಲ್ಲಿ ಈ ಅಣೆಕಟ್ಟು ಬಹಳ ಶಿಥಿಲವಾಗಿದೆ, ಇದನ್ನು ಆದಷ್ಟು ಜಾಗ್ರತೆ ರಿಪೇರಿ ಮಾಡಿಸಬೇಕೆಂದು ಸರ್ಕಾರದ ಗಮನಕ್ಕೆ ತರಲಾಗಿ ಸರ್ಕಾರದವರು ಹತ್ತು ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿಟ್ಟು ಅದನ್ನು

(SRI B. E. RAMAIAH)

ರಿಪೇರಿ ಮಾಡಬೇಕೆಂದು ಆಜ್ಞೆ ಮಾಡಿದರು. ಆಮೇಲೆ ಚೀಫ್ ಇಂಜಿನಿಯರು ಮತ್ತು ಇತರ ತಜ್ಞರು ಅಣೆಕಟ್ಟಿಗೆ ಭೇಟಿ ಕೊಟ್ಟು ರಿಪೇರಿ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಒಂದೆರಡು ಲಕ್ಷ ರೂಪಾಯಿ ಖರ್ಚು ಮಾಡಿದರು. ರಿಪೇರಿ ಮಾಡಲಿಕ್ಕೆ ಶಕ್ಯವಿದ್ದರೆ ಮಾಡಬಹುದು, ದುರದೃಷ್ಟದಿಂದ ರಿಪೇರಿ ಮಾಡಲಿಕ್ಕೆ ಶಕ್ಯವಿಲ್ಲ ಎಂದು ಹೇಳಿದರು. 15ನೇ ಶತಮಾನದಲ್ಲಿ ಸಿಮೆಂಟ್ ಮುಂತಾದುವು ಇರಲಿಲ್ಲ. ದೊಡ್ಡ ದೊಡ್ಡ ಗುಂಡುಗಳನ್ನು ಹಾಕಿ ಅದನ್ನು ಕಟ್ಟಲಾಗಿದೆ. ಅದಕ್ಕೋಸ್ಕರ ಅಣೆಕಟ್ಟನ್ನು ರಿಪೇರಿ ಮಾಡುವುದಕ್ಕೆ ಶಕ್ಯವಿಲ್ಲ ಎಂದು ಸರ್ಕಾರಕ್ಕೆ ರಿಪೋರ್ಟ್ ಕೊಟ್ಟರು. ಸರ್ಕಾರದವರು ಇದನ್ನು ಏನು ಮಾಡಬೇಕು, ಹೇಗೆ ಮಾಡಿದರೆ ಇದು ನಿಲ್ಲುತ್ತದೆ ಎನ್ನುವ ವಿಷಯದ ಮೇಲೆ ತಜ್ಞರನ್ನು ಕಳುಹಿಸಿಕೊಟ್ಟರು. ತಜ್ಞರು ಕೂಡ ಅದನ್ನು ನೋಡಿ ರಿಪೇರಿ ಮಾಡಲಿಕ್ಕೆ ಶಕ್ಯವಿಲ್ಲ ಎಂದು ಕಡೆಗೆ ಎಸ್ಟಿಮೇಟ್ ಮಾಡಬೇಕು ಎಂದು ಸರ್ಕಾರ ಆರ್ಡರ್ ಕೊಟ್ಟ ಮೇಲೆ ಎಸ್ಟಿಮೇಟನ್ನು ಕೂಡ ತಯಾರು ಮಾಡಿದರು. ಸಿರಗುಪ್ಪ ತಾಲ್ಲೂಕಿನಲ್ಲಿ ಕೆಂಚನಗುಡ್ಡ ಹತ್ತಿರ ಮತ್ತು ದೇಸನೂರು ಎರಡು ಕಡೆ 60 ಲಕ್ಷ ರೂಪಾಯಿ ಮತ್ತು 20 ಲಕ್ಷ ರೂಪಾಯಿ, ಒಟ್ಟು 80 ಲಕ್ಷ ರೂಪಾಯಿಗಳಿಗೆ ಎರಡೂ ಅಣೆಕಟ್ಟುಗಳಿಗೆ ಸೇರಿ ಅಂದಾಜು ಮಾಡಿದರು. ಸಿರಗುಪ್ಪ ಅಣೆಕಟ್ಟಿನಿಂದ 1800 ಎಕರೆ ನೀರಾವರಿಯಾಗುತ್ತದೆ. ಈಗ ಅಲ್ಲಿನ ರೈತರ ಗೋಳು ಹೇಳಿಕೊಳ್ಳತಕ್ಕ ಪರಿಸ್ಥಿತಿಯಲ್ಲಿಲ್ಲ. 10 ವರ್ಷದಿಂದ ಸರ್ಕಾರಕ್ಕೆ ಅವರ ಕೂಗನ್ನು ಮುಟ್ಟಿಸಿದರೂ ಕೂಡ ಸರ್ಕಾರ ಆ ಕಡೆ ಲಕ್ಷ್ಯ ಕೊಟ್ಟಿಲ್ಲ. ಈಗಲಾದರೂ ಸರ್ಕಾರದವರು 60 ಲಕ್ಷ ರೂಪಾಯಿ ಎಸ್ಟಿಮೇಟ್ ಏನಿದೆ ಅದನ್ನು ಆದಷ್ಟು ಜಾಗ್ರತೆ ಮಂಜೂರು ಮಾಡಬೇಕು. ಇಲ್ಲವಾದರೆ ಈಗಾಗಲೇ ಸಿರುಗುಪ್ಪದಲ್ಲಿ ಒಂದು ಸಕ್ಕರೆ ಕಾರ್ಖಾನೆ ಬರುವುದಿದ್ದು ಅದರ ಕೆಲಸ ಪ್ರಾರಂಭವಾಗಿ 1973ರಲ್ಲಿ ಕಾರ್ಖಾನೆ ಪ್ರಾರಂಭವಾಗುತ್ತದೆ. 400 ವರ್ಷಗಳ ಹಿಂದೆ ಕಟ್ಟಿರುವ ಅಣೆಕಟ್ಟಿನಿಂದ ನೀರು ಈ ಆಯಕಟ್ಟು ಪ್ರದೇಶಕ್ಕೆ ಬರುವುದಿಲ್ಲ. ಅಲ್ಲಿನ ರೈತರ ಗೋಳನ್ನು ಹೇಳುವಂತೆ ಇಲ್ಲ. ಬೇಸಿಗೆ ಬೆಳೆಗಾಗಿ ಹಾಕಿರತಕ್ಕ ಪೈರಿಗೆ ನೀರಿಲ್ಲದೆ ಬಹಳ ಭವಣೆಯಾಗಿದೆ. ಸರ್ಕಾರದವರು ಆದಷ್ಟು ಜಾಗ್ರತೆ ಕೃಷ್ಣದೇವರಾಯರು ಕಟ್ಟಿರತಕ್ಕ ಅಣೆಕಟ್ಟನ್ನು ರೀಕನ್ಸ್ಟ್ರಕ್ಟ್ ಮಾಡಬೇಕು—60 ಲಕ್ಷ ರೂಪಾಯಿನ ಸಿರಗುಪ್ಪ ಅಣೆಕಟ್ಟು ಮತ್ತು 20 ಲಕ್ಷ ರೂಪಾಯಿನ ದೇಸನೂರು ಅಣೆಕಟ್ಟು ಇದರ ಬಗ್ಗೆ ಅಂದಾಜುಗಳು ಸರ್ಕಾರದ ಮುಂದೆ ಇವೆ ಈ ಅಂದಾಜುಗಳು ಆರ್ಥಿಕ ದೃಷ್ಟಿಯಿಂದ ನೋಡುವಾಗ ಲಾಭದಾಯಕವಾಗಿಲ್ಲದೆ ಇದ್ದರೂ, ಬರೀ ಆರ್ಥಿಕ ದೃಷ್ಟಿಯನ್ನೇ ಇಟ್ಟು ಕೊಳ್ಳದೆ ಜನಗಳಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ ನೋಡಿ, ದೊಡ್ಡ ಮನಸ್ಸುಮಾಡಿ ಸರ್ಕಾರದ ಮುಂದೆ ಇರುವ ಅಂದಾಜುಗಳಿಗೆ ಮಂಜೂರಾತಿಯನ್ನು ಕೊಡಬೇಕು. ಇದರಿಂದ ಸುಮಾರು ಒಂದು ಸಾವಿರ ಎಕರೆ ಹೆಚ್ಚು ನೀರಾವರಿಯಾಗುವುದಕ್ಕೆ ಅವಕಾಶವಿದೆ. ಸಕ್ಕರೆ ಕಾರ್ಖಾನೆಗೂ ಇದರಿಂದ ಅನುಕೂಲವಾಗುತ್ತದೆಯಲ್ಲದೆ ಅಲ್ಲಿನ ರೈತರ ಬವಣೆಯನ್ನೂ ತಪ್ಪಿಸಬಹುದು. ಆದ್ದರಿಂದ ಆದಷ್ಟು ಜಾಗ್ರತೆ ಸರ್ಕಾರ 80 ಲಕ್ಷ ರೂಪಾಯಿ ಅಂದಾಜುಗಳಿಗೆ ಮಂಜೂರಾತಿಯನ್ನು ಕೊಡಬೇಕೆಂದು ತಮ್ಮ ಮುಖೇನ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ (ದೊಡ್ಡ ನೀರಾವರಿ ಶಾಖೆಯ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರಕೊಟ್ಟಾಗಲೇ ನಾನು ಹೇಳಿದ್ದೇನೆ. ಅವರು ಹೇಳುವ ಹಾಗೆ ಆ ಅಣೆಕಟ್ಟು ಗುಂಡುಕಲ್ಲುಗಳಿಂದ ಕಟ್ಟಿರತಕ್ಕದ್ದು ನಿಜ. ಅದನ್ನು ಗ್ರೌಟ್ ಮಾಡಿ ಲೀಕೇಜನ್ನು ನಿಲ್ಲಿಸುವುದಕ್ಕಾಗುತ್ತದೆಯೋ ಎಂದು ಸರ್ಕಾರ ಪ್ರಯತ್ನ ಪಟ್ಟಿದೆ. ಈಗ ಹೊಸದಾಗಿ ಮಾಡಿರತಕ್ಕ 55 ಲಕ್ಷ ರೂಪಾಯಿಗಳ ಅಂದಾಜು ಏನಿದೆ ಅದನ್ನು ಮಂಜೂರು ಮಾಡಬೇಕಾದರೆ ಕಷ್ಟ ಎನ್ನುವುದು ಸರ್ಕಾರದ ಅಭಿಪ್ರಾಯ. ಅಂತೂ ಮಾನ್ಯ ಸದಸ್ಯರು ಭಾರಿ ಕಳಕಳಿಯಿಂದ ರೈತರಿಗೆ ಆಗತಕ್ಕ ತೊಂದರೆಯನ್ನು ನಿವಾರಿಸಬೇಕೆಂದು ಕೇಳಿಕೊಂಡಿದ್ದಾರೆ. ಅದನ್ನು ನಾವು ಪುನಃ ಪರಿಶೀಲನೆ ಏನಾದರೂ ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನು ಪರಿಶೀಲಿಸಬಹುದು ಎಂದು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಈಗಾಗಲೇ ಆರ್ಥಿಕವಾಗಿ ಸರಿಯಾದುದಲ್ಲ ಎನ್ನುವ ತೀರ್ಮಾನವನ್ನು ತೆಗೆದುಕೊಂಡಿದೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ನೂರಾರು ವರ್ಷದಿಂದ ರೈತರಿಗೆ ನೀರಿನ ಹಕ್ಕು ಇದೆ. ಅದನ್ನು ಹೇಗೆ ಕಳೆಯುತ್ತೀರಿ ಎಂದು ಹೇಳಬೇಕು.

ಶ್ರೀ ಎಚ್. ಎನ್. ನಂಜೇ ಗೌಡ.—ರೈತರಿಗೆ ಅನಾನುಕೂಲವಾಗುವಂಥ ಪರಿಸ್ಥಿತಿ ಬಂದಲ್ಲಿ ಅಷ್ಟನ್ನು ಮಾತ್ರ ಖಚಿತವಾಗಿ ಹೇಳುತ್ತೇನೆ. 1750 ಎಕರೆಯಲ್ಲಿ ಬಂದ ಬೆಳೆಯಿಂದೂ, 50 ಎಕರೆಯಲ್ಲಿ ಬೇಸಿಗ ಬೆಳೆ ಎಂದೂ ಒಟ್ಟು 1800 ಎಕರೆಗೆ ನೀರಾವರಿಗೆ ಅವಕಾಶವಿದೆ. ಆದರೆ ಅನಧಿಕೃತವಾಗಿ ಏನು ಮಾಡುತ್ತಿದ್ದಾರೆಂದರೆ, ಬೇಸಿಗೆಯಲ್ಲಿ ಕೂಡ ಬೆಳೆ ಬೆಳೆಯುತ್ತ ಇದ್ದಾರೆ. ತುಂಗಭದ್ರ ನಾಲಾ ಪ್ರದೇಶದ ಜಿನುಗು ನೀರನ್ನು ರೈತರು ಉಪಯೋಗ ಮಾಡಿಕೊಳ್ಳತಕ್ಕ ಕಾರ್ಯಕ್ರಮ ಕೈಗೊಳ್ಳಬಾರದು ಎಂಬ ಉದ್ದೇಶದಿಂದ, ಅವರಿಗೆ ಆದರಿಂದ ಯಾವುದೇ ಹಕ್ಕು ಬರಲಾರದು ಎಂದು ತಿಳಿದುಕೊಂಡು ಸ್ವಲ್ಪ ಲೀನಿಯೆಂಟ್ ಆಗಿ ವ್ಯೂ ಮಾಡುತ್ತಿದ್ದೆವು. ನಾನು ಒಮ್ಮೆ ಅಲ್ಲಿಗೆ ಹೋಗಿ ಬರಬೇಕೆಂದಿದ್ದೇನೆ. ಆ ನಂತರ ಪುನರ್ಪರಿಶೀಲನೆ ಮಾಡುವುದಕ್ಕೆ ಸಾಧ್ಯ ವಿದ್ದರೆ ಅದನ್ನು ಮಾಡಿಕೊಡಬೇಕೆಂಬ ಮನಸ್ಸು ವೈಯಕ್ತಿಕವಾಗಿ ನನಗೆ ಇದೆ. ಸರ್ಕಾರ ಈ ವಿಚಾರವಾಗಿ ಪುನರ್ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಪಡುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇದರಿಂದ ಮಾನ್ಯ ಸದಸ್ಯರು ಸಂತೋಷ ಪಡುತ್ತಾರೆಂದು ತಿಳಿದುಕೊಳ್ಳುತ್ತೇನೆ.

Mr. DEPUTY SPEAKER.—The House will now rise and meet tomorrow at 9 A.M.

The House adjourned at Twenty Minutes past Six of the Clock to meet again at Nine of the Clock on Saturday, the 5th August, 1972.

WD 18326—GPB—500—12-6-1973

V-31°N72
N74-7-1-9
(B)4891

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Saturday, 5th August 1972/Shravana 14, 1894 S.E.

The House met in the Assembly Chamber, Vidhana Soudha, at Nine of the Clock.

MADAM SPEAKER.—[Smt. K. S. Nagarathnamma] in the Chair.

STARRED QUESTION

(To which oral Answers were given)

MADAM SPEAKER.— Question Numbers 342 and 540 may be taken together.

MANGALORE FERTILISER FACTORY

342. SRI H. D. DEVE GOWDA (Holenarasipur).—

Will the Minister for Industries be pleased to state :—

(*a*) the progress achieved by the Malabar Chemicals in establishing a fertiliser factory at Mangalore ;

(*b*) the cost of the project ;

(*c*) the time required to complete the project in all respect ?

SRI S. M. KRISHNA.— (Minister for Industries)

(*a*) Necessary preliminary steps to set up the factory at Mangalore have been taken up and the work is progressing according to the schedule.

(*b*) Rs. 58 crores.

(*c*) It is expected that the installation of the plant will be completed by September 1974.

MANGALORE FERTILISER AND CHEMICAL FACTORY

540. SMT. ADDY SALDANHA (Mangalore).—

Will the Minister for Industries be pleased to state ;—

(*a*) the proposed date for the commencement of Mangalore Fetiliser and Chemical Factory at Mangalore ;

(*b*) the percentage of employees representing the State of Mysore in the above factory ;

(*c*) whether the top policy making official in the factory are all from outside the State ;

(*d*) if so, whether the Government would take early action to post officers from the Mysore State to safeguard the State interest ;

(*e*) whether the Government would take action to give 50 per cent of the employment in said factory in labour section to the people of South Kanara District to solve unemployment of this area?

SRI S. M. KRISHNA (Minister for Industries).—

(*a*) By September 1974.

(*b*) 53 per cent.

(*c*) No. The Board of Directors consists of eminent men Including the State Government Officers.

(*d*) Does not arise in view of the reply to clause (c) above.

(*e*) The Company proposes to recruit most of the labour, both skilled and un-skilled, from around the Mangalore area.

ಶ್ರೀ ಹೆಚ್. ಡಿ. ದೇವೇಗೌಡ :— ಇದರ ಬಗ್ಗೆ ಖರ್ಚಾಗಿರುವ ಹಣವೆಷ್ಟು ? ಮತ್ತು ಇದರಲ್ಲಿ ಇಲ್ಲಿಯವರೆಗೆ ಏನೇನು ಕೆಲಸಕಾರ್ಯಗಳು ಪ್ರೊಗ್ರೆಸ್ ಆಗಿವೆ ?

† ಶ್ರೀ ಎಸ್.ಎಂ. ಕೃಷ್ಣ :—೧೯೭೧ನೇ ಸೆಪ್ಟೆಂಬರ್‌ವರೆಗೆ ಸುಮಾರು ೬೬ ರೂಪಾಯಿಗಳ ಷ್ಟು ಹಣ ಖರ್ಚಾಗಿದೆ ಮತ್ತು ೧೯೭೧ ರಿಂದ ೧೯೭೩ ರವರೆಗೆ ಸುಮಾರು ೪,೮೪,೦೦೦ ರೂಪಾಯಿಗಳಷ್ಟು ಖರ್ಚಾಗಿದೆ, ಇದರಲ್ಲಿ ಸುಮಾರು ಒಂದು ನೂರು ಎಕರೆ ಭೂಮಿ ತೆಗೆದುಕೊಂಡು ಅದನ್ನು ಮಟ್ಟ ಮಾಡಲು ಟ್ರಾಕ್ಟರು ಇತ್ಯಾದಿಗಳನ್ನು ಪ್ರಯೋಗಿಸಲು ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಆಗಿ ಈಗಾಗಲೇ ಇದರ ಕೆಲಸವು ಮುಗಿದಿದೆ ಮತ್ತೆ ಕಾರ್ಖಾನೆಗೆ ಕೊಟ್ಟಿರುವ ಭೂಮಿ ಮಟ್ಟ ಮಾಡುವ ಕೆಲಸಗಳೇ ಹಾಗೂ ಇನ್ನಿತರ ಸಿವಿಲ್ ವರ್ಕ್ಸ್ ಕೆಲಸಗಳನ್ನು ತಡ ಮಾಡದೇ ಮಾಡಲು ತರದೂದುಗಳು ನಡೆಯುತ್ತಿವೆ

ಶ್ರೀ ಹೆಚ್. ಡಿ. ದೇವೇಗೌಡ :— ಇದರಲ್ಲಿ ಸುಮಾರು ಎಪ್ಪತ್ತು ಲಕ್ಷದಷ್ಟು ಹಣ ಬರಿ ಇಲ್ಲಿನ ಸಂಬಳ ಸಾರಿಗೆ ಕೊಡಲು ಅಧಿಕಾರಿಗಳಿಗೆ ಖರ್ಚಾಗಿದೆ ಎಂದು ಇಲ್ಲಿನ ಲೋಕೋಪಯೋಗಿ ಮಂತ್ರಿಗಳು ಈಗೆ ಒಂದು ಸಾರಿ ಪ್ರವಾಸಕ್ಕೆ ಬಂದ ಕಾಲದಲ್ಲಿ ಹೇಳಿದ್ದಾರೆ; ೬೫ ಲಕ್ಷದಷ್ಟು ಖರ್ಚಾಗಿದ್ದರೆ ಇದರ ಪ್ರೋಗ್ರೆಸ್ ಝೀರೋ (ಜೀರೋ) ಆಗುತ್ತದೆ, ಇದರ ಬಗ್ಗೆ ಸ್ಪಷ್ಟೀಕರಣ ಕೊಡುತ್ತಾರೆಯೋ ?

ಶ್ರೀ ಎಸ್. ಎಂ. ಕೃಷ್ಣ :— ಈ ಕೈಗಾರಿಕಾ ಉದ್ಯಮದಲ್ಲಿ ಒಂದು ದೊಡ್ಡ ಇತಿಹಾಸವೇ ಇದೆ, ಬಹಳ ವರ್ಷಗಳ ಹಿಂದೆ ದುಗಾಲ್ ಎನ್ನುತಕ್ಕ ಒಬ್ಬರ ಹೆಸರಿನಲ್ಲಿ ಲೈಸನ್ಸ್ ಎಂದರೆ ಲೆಟರ್ ಆಫ್ ಇಂಟೆಂಟ ಕೊಟ್ಟು ಇದನ್ನು ಪ್ರವೇಟು ಸೆಕ್ಟರಿನಲ್ಲಿ ಒಂದು ಗೊಬ್ಬರದ ಕಾರ್ಖಾನೆಯನ್ನು ಮಂಗಳೂರಿನಲ್ಲಿ ಮಾಡಬೇಕು ಎಂದು ಕೊಡಲಾಗಿತ್ತು. ಆ ನಂತರ ಇದನ್ನು ಬದಲಾವಣೆ ಮಾಡಿ ಬಹಳ ದೊಡ್ಡದಾಗಿ ಮಾಡಬೇಕೆಂದು ಹಿಂದಿನ ಮೈಸೂರು ಸರಕಾರಕ್ಕೆ ಇದರಲ್ಲಿ ಬಹಳ ಆಸಕ್ತಿ ಹೊಂದಿ ಇದನ್ನು ಕ್ರಮೇಣ ಸರಕಾರೀ ಉದ್ಯಮವಾಗಿ ಮಾಡಬೇಕೆಂದು ಶ್ರೀ ದುಗಾಲ್ ಹೆಸರಿನಲ್ಲಿದ್ದ ಲೈಸನ್ಸನ್ನು ಬದಲಾಯಿಸಿ ತೆಗೆದುಕೊಳ್ಳಬೇಕಾಗಿದ್ದರೆ ನಾವು ಕೆಲವು ಒಪ್ಪಂದಗಳಿಗೆ ಅವರ ಜೊತೆಯಲ್ಲಿ ಬರಬೇಕಾಗಿ ಬಂತು.

ಅವರಿಗೆ ಫೀಸು ಹಾಗೂ ಪ್ರಮೋಟರುಗಳ ಎಕ್ಸ್‌ಪೆನ್ಸ್ ಹಾಗೆ ಇನ್ನೂ ಇತರ ಬಾಬುಗಳಿಗೆ ಸ್ವಲ್ಪ ಹಣ ಹೆಚ್ಚು ಕೊಡಬೇಕಾಗಿ ಬಂತು ಮತ್ತು ಅವಕ್ಕಾಗಿ ಇಲ್ಲಿ ಹಣ ಖರ್ಚಾಗಿದೆ, ಇದರ ಹಿನ್ನೆಲೆ ಇಷ್ಟು ಹೇಳುವುದು ಅವಶ್ಯಕ ಎಂದು ನಾನು ತಮಗೆ ಹೇಳಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ :— ಇದನ್ನು ೧೯೭೪ ರೊಳಗೆ ಮುಗಿಸುತ್ತೇವೆಂದು ಹೇಳುತ್ತೀರಿ! ಆದರೆ ಇದುವರೆಗೆ ಖರ್ಚಾಗಿರುವುದು ನೋಡಿದರೆ ಸುಮಾರು ಎಪ್ಪತ್ತು ಲಕ್ಷದಷ್ಟು ಬರುತ್ತವೆ, ಇದರ ಪ್ರಾಜೆಕ್ಟ್ ಒಟ್ಟು ಅಂದಾಜಾಗಿರುವುದು ಸುಮಾರು ೫೨ ಕೋಟಿ ಇದೆ. ಇದನ್ನು ಇನ್ನು ಎರಡು ವರ್ಷಗಳಲ್ಲಿ ಮುಗಿಸುವ ಭರವಸೆ ಇದೆಯೇ ಮತ್ತು ಇವಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಾ ?

ಶ್ರೀ ಎಸ್. ಎಂ. ಕೃಷ್ಣ :— ಇದಕ್ಕೆ ಒಂದು ಕ್ಯಾಲೆಂಡರ್ ಆಫ್ ಇವೆಂಟ್ ಹಾಕಿಕೊಂಡು ಅದರಂತೆ ಕೆಲಸಗಳು ನಡೆಯುತ್ತಿವೆ, ಇದಕ್ಕೆ ಬೇಕಾದ ಫೈನಾನ್ಷಿಯಲ್ ಆರೇಂಜ್‌ಮೆಂಟ್, ಫಾರಿನ್ ಎಕ್ಸ್ ಚೇಂಜ್ ಸೇರಿ ಎಲ್ಲಾ ಆಗಿದೆ. ನಮಗೆ ಸುಮಾರು ೨೧ ಕೋಟಿಯಷ್ಟು ಫಾರಿನ್ ಎಕ್ಸ್‌ಚೇಂಜು ಇದರಲ್ಲಿ ಬೇಕಾಗುತ್ತದೆ. ಇದರಲ್ಲಿ ೧೦.೫ ಕೋಟಿಯಷ್ಟು ಯುಟಿಲೈಸು ಮಾಡಿಕೊಳ್ಳಲು ಅಡ್ವಾನ್ಸ್ ಆಗಿ ಕೇಂದ್ರ ಸರಕಾರದೊಡನೆ ವ್ಯವಹಾರ ಮಾಡಿ ಒಂದು ಬ್ಲಾಂಕೆಟ್ ಆರ್ಡರನ್ನು ಪಡೆದುಕೊಂಡಿದ್ದೇವೆ. ಎಲ್ಲಾ ಡಿಸೈನುಗಳು ಆಗಿವೆ ಮತ್ತು ಇದರಂತೆ ಇಂಜಿನೀಯರುಗಳು ಕೆಲಸ ಮಾಡುತ್ತಿದ್ದಾರೆ ಮತ್ತು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕಿನವರು ಕೂಡ ನಮಗೆ ಬೇಕಾಗಿರತಕ್ಕ ಹಣವನ್ನು ಈಗಾಗಲೇ ಕೊಡುತ್ತೇವೆಂದು ಹೇಳಿದ್ದಾರೆ. ಎಲ್ಲ ವಿಧವಾದ ಫೈನಾನ್ಷಿಯಲ್ ಅರೇಂಜುಮೆಂಟುಗಳೂ ಮುಗಿದಿರುವಾಗ ಇನ್ನು ಉಳಿದಿರುವುದು ಕೆಲಸಗಳನ್ನು ಪ್ರಾರಂಭ ಮಾಡುವುದು ಮಾತ್ರ, ತಮಗೆಲ್ಲಾ ತಿಳಿದಿರುವ ಹಾಗೆ ಮಂಗಳೂರಿನಲ್ಲಿ ಈಗ ಮಳೆ ಆರಂಭವಾಗಿದೆ. ಇದು ಮುಗಿದ ತಕ್ಷಣ ಇಲ್ಲಿನ ಸಿವಿಲ್ ವರ್ಕ್ಸ್‌ಗಳನ್ನು ಆರಂಭ ಮಾಡಬೇಕೆಂದು ನಮ್ಮ ಉದ್ದೇಶವಾಗಿದೆ ಮತ್ತು ಯಾರು ಈ ಕಾರ್ಖಾನೆಯನ್ನು ಹೊತ್ತುಕೊಂಡಿದ್ದಾರೋ ಅವರ ಉದ್ದೇಶ ಕೂಡ ೧೯೭೪ನೇ ನವೆಂಬರು ಇಲ್ಲವೇ ಡಿಸೆಂಬರು ತಿಂಗಳೊಳಗೆ ಈ ಪ್ಲಾಂಟನ್ನು ಕಮಿಷನ್ ಮಾಡಬೇಕೆಂದು ಆಶಾಭಾವನೆ ಅವರಿಗೂ ಕೂಡ ಇದೆ.

SRI B. SUBBIAH SHETTY :— Would the Government make knowledge of Kannada essential for the candidates while making recruitment ?

SRI S. M. KRISHNA :— I realise the anxiety of the hon. member Sri Subbiah Shetty. But in a large venture like this it will be very difficult for us to specify that any person who comes to work know Kannada.

SRI B. SUBBIAH SHETTY :— In Tamilnadu Tamil has been made essential for recruitment in the Fertilisers Factory.

SRI S. M. KRISHNA :— I am not aware of the conditions stipulated by the Government of Tamilnadu. But it would be certainly the endeavour of the Government here to so see that applicants from Karnatak, other things being equal, are preferred.

ಶ್ರೀ ಎ. ಪಿ. ಕೊಡಗಿ :— ಈ ಯೋಜನೆಗಾಗಿ ಒದಗಿಸಿರುವ ಒಟ್ಟು ಹಣ ಎಷ್ಟು ? ಮತ್ತು ಇದುವರೆಗೆ ಎಷ್ಟು ಕರಾರುವಾಕ್ಕಾಗಿ ಇದರಲ್ಲಿ ಖರ್ಚಾಗಿದೆ ತಿಳಿಸುತ್ತಾರೆಯೇ ?

ಶ್ರೀ ಎಸ್ ಎಂ. ಕೃಷ್ಣ :— ಮಾನ್ಯ ಸದಸ್ಯರು ಮತ್ತೊಂದು ನಿರ್ದಿಷ್ಟವಾದ ಪ್ರಶ್ನೆ ಕಳುಹಿಸಿದರೆ ಅಗತ್ಯವಾದ ಎಲ್ಲ ಮಾಹಿತಿಗಳನ್ನು ಅವರಿಗೆ ಒದಗಿಸಿಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಇದರಲ್ಲಿ ಕೆಲಸಕ್ಕೆ ನೇಮಕ ಮಾಡಿಕೊಳ್ಳುವ ಕಮಿಟಿಯಲ್ಲಿ ಕರ್ನಾಟಕದವರು ಯಾರಾದರೂ ಒಬ್ಬರು ಅಧಿಕಾರಿಗಳಾಗಿದ್ದಾರೆಯೇ ?

ಶ್ರೀ ಎಸ್. ಎಂ. ಕೃಷ್ಣ :— ಈ ಬೋರ್ಡ್‌ನಲ್ಲಿ ಇರುವ ಉಪಸಮಿತಿಯಲ್ಲಿ ನಮ್ಮ ರಾಜ್ಯದವರೂ ಒಬ್ಬರು ಇದ್ದಾರೆ.

ಶ್ರೀ ಎ. ಎಂ. ಸೂರ್ಯನಾರಾಯಣಗೌಡ :— ಕೆಲಸಕ್ಕೆ ಸೇರಿಸಿಕೊಳ್ಳುವಾಗ ಇಲ್ಲಿನ ಅಧಿಕಾರಿಗಳು ನೂರಕ್ಕೆ ತೊಂಬತ್ತರಷ್ಟು ಕನ್ನಡ ಸಂಸ್ಥಾನದವರನ್ನು ಸೇರಿಸಬೇಕು ಎಂದು ಸರಕಾರದವರು ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎಸ್. ಎಂ. ಕೃಷ್ಣ :— ಇದುವರೆಗೆ ನನ್ನಲ್ಲಿರುವ ಮಾಹಿತಿ ಪ್ರಕಾರ ೭೫ ಜನರನ್ನು ಇಲ್ಲಿ ನೇಮಕ ಮಾಡಿದ್ದಾರೆ. ಇದರಲ್ಲಿ ಮೈಸೂರು ಪ್ರದೇಶದವರು ೪೦ ಜನ, ತಮಿಳು ನಾಡಿನವರು ೨೨ ಜನ, ಆಂಧ್ರ ಪ್ರದೇಶದವರು ೫ ಜನ ವೆಸ್ಟ್ ಬೆಂಗಾಲ್‌ನವರು ಇಬ್ಬರು, ಮಹಾರಾಷ್ಟ್ರದವರು ಒಬ್ಬರು, ಕೇರಳದವರು ೫ ಜನ, ಹೀಗೆ ಒಟ್ಟು ೭೫ ಜನರಿದ್ದಾರೆ. ಇವರೆಲ್ಲಾ ಈಗ ಇಲ್ಲಿ ಕೆಲಸ ಮಾಡುತ್ತಿದ್ದಾರೆ.

SRI G PUTTASWAMY :— What is the representation given for scheduled castes and scheduled tribes in this factory ?

ಶ್ರೀ ಎಸ್. ಎಂ. ಕೃಷ್ಣ :— ಆ ಮಾಹಿತಿ ಸದ್ಯದಲ್ಲಿ ನನ್ನ ಹತ್ತಿರ ಇಲ್ಲ.

SRI G. PUTTASWAMY—Will you give instructions to the authorities concerned to give proper representation to the Scheduled Caste and Scheduled Tribes?

SRI S. M. KRISHNA .—Depending upon the qualifications we would certainly take Scheduled Caste applicants also.

SRI B. SUBBAIAH SHETTY.—Since many people were displaced while acquiring land for this project, will the Government consider to give preference to those displaced persons while making appointments?

SRI S. M. KRISHNA .—I should concede that this should be one of the plan by which we could rehabilitate those displaced persons.

ಶ್ರೀ ಎಚ್. ಡಿ. ದೇವೇಗೌಡ .—ಈಗ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಮತ್ತು ಸಿವಿಲ್ ಕೆಲಸ ನಡೆಯುತ್ತದೆ ಎಂದು ಹೇಳಿದ್ದೀರಿ. ಇದುವರೆಗೆ ಎಸ್ಟಾಬಿಷ್‌ಮೆಂಟಿಗೆ ಎಷ್ಟು ಖರ್ಚಾಗಿದೆ, ಲ್ಯಾಂಡ್ ಅಕ್ವಿಜಿಷನ್‌ಗೆ ಎಷ್ಟು ಖರ್ಚಾಗಿದೆ ಎಂಬುದರ ವಿವರ ಕೊಡುತ್ತೀರಾ?

SRI S. M. KRISHNA .—It is not readily available.

ಅಧ್ಯಕ್ಷರು : ವಿದ್ಯಾಶಾಖೆಯ ಮಂತ್ರಿಗಳು ಮೆಲ್ಕನೆಯಲ್ಲಿರುವುದರಿಂದ ಅವರ ಪ್ರಶ್ನೆಗಳೆಲ್ಲ ಅನಂತರ ತೆಗೆದು ಕೊಳ್ಳುತ್ತೇನೆ.

CONSTRUCTION OF BUS STANDS IN BIJAPUR DISTRICT

438. SRI P. M. BANGI (Jamkhandi).—

Will the Minister for Labour be pleased to state.—

(a) whether the sites for bus stands at Banhatti, Terdal, Mahalingapur and Lokapur in Bijapur District were acquired and teken possession of by M. S. R. T. C. since long ;

(b) if so, the reasons for not taking up construction of these bus stands so far ;

(c) the reasons for not issuing orders for constructing these bus stands through contractors or by taking the work departmentally:

(d) whether the Government is aware that the foundation stones in Lokapur Bus Stand site was laid more than 5 years ago by Sri D. Devarj Urs, the then Transport Minister?

SRI S. M. KRISHNA (Ministr for Industries) on behalf of

SRI AZEEZ SAIT (Minister for Labour)

(a) Yes.

(b) (i) *Banhatti*—A permanent shelter is already constructed during 1961 and it is in use since then.

(ii *Terdal*—An estimate was sanctioned for Rs. 1, 12, 000 during 1967–68. The Contractor to whom the work was entrusted absconded. His agency is terminated. The estimate is since recast and fresh tenders have been invited.

(iii) *Mahlingapur*—An estimate was sanctioned for Rs. 1,11,900 during 1967–68. The contractor to whom the work was entrusted absconded. His agency is terminated. The estimate is since recast and work is recently taken up.

(iv) *Lokapur*.—The work could not be taken up owing to paucity of funds.

(c) As replies to para (b) above.

(d) Yes.

ಶ್ರೀ ಪಿ. ಎಂ. ಬಾಂಗಿ.—ಈಗ ಬನಹಟ್ಟಿಯಲ್ಲಿರುವ ಸೆಡ್ ಪ್ರವಾಸಿಗಳು ಒಂದು ಇಳಿದು ಕೊಳ್ಳುವುದಕ್ಕೇ ಸಾಕಾಗುತ್ತಿಲ್ಲವಾದ್ದರಿಂದ ಹೊಸದಾಗಿ ಬಸ್‌ಸ್ಟ್ಯಾಂಡ್ ಕಟ್ಟಲು ಸೈಟ್ ತೆಗೆದುಕೊಂಡಿದ್ದೀರಿ. ಆದರೂ ಇನ್ನೂ ಏತಕ್ಕೆ ಇದುವರೆಗೆ ಬಸ್‌ಸ್ಟ್ಯಾಂಡ್ ಕಟ್ಟಿಸಿಲ್ಲ?

ತೇರದಾಳದಲ್ಲಿ ಬಸ್‌ಸ್ಟ್ಯಾಂಡ್ ಕಟ್ಟಿಸಲು ಎಸ್ಟಿಮೇಟ್ ಮಂಜೂರು ಮಾಡಿದ ನಂತರ ಪುನಃ ಅದರ ಬಗ್ಗೆ ರಿವೈಸ್ಡ್ ಎಸ್ಟಿಮೇಟನ್ನು ಕಡಿಮೆ ಅಂದಾಜಿಗೆ ಮಾಡುವುದಕ್ಕೆ ಕಾರಣವೇನು?

ಮಹಾಲಿಂಗಪುರದಲ್ಲಿ ಬಸ್‌ಸ್ಟ್ಯಾಂಡ್ ಕಟ್ಟಲು ರಿವೈಸ್ಡ್ ಎಸ್ಟಿಮೇಟ್ ಮಾಡಿದ್ದರೆ ಅದರ ಅಂದಾಜು ಮೊಬಲಗು ಎಷ್ಟು ಎಂದು ಹೇಳಬೇಕು?

ಲೋಕಾಪುರದಲ್ಲಿ ಬಸ್‌ಸ್ಟ್ಯಾಂಡ್ ಕಟ್ಟಲು ಅಸ್ತಿಭಾರ ಶಿಲೆಯನ್ನು ಹಿಂದೆ ಟ್ರಾನ್ಸ್‌ಪೋರ್ಟ್ ಮಂತ್ರಿಗಳಾಗಿದ್ದ ಶ್ರೀ ದೇವರಾಜ ಅರಸ್ ಅವರು ಹಾಕಿದ್ದರು. ಆ ಕಾರಣದಿಂದ ಅಲ್ಲಿ ಜಾಗ್ರತೆ ಬಸ್‌ಸ್ಟ್ಯಾಂಡ್ ಬರುತ್ತದೆಂದು ಜನರು ಆಶೆ ಪಟ್ಟಿದ್ದರು. ಅದು ಒಂದು ಸೆಂಟರ್ ಜಾಗವಾಗಿರುವುದರಿಂದ ಅಲ್ಲಿ ಇನ್ನೂ ಕಟ್ಟದಿರುವುದಕ್ಕೆ ಕಾರಣವೇನು?

† ಶ್ರೀ ಎಸ್. ಎಂ. ಕೃಷ್ಣ.—ಬನಹಟ್ಟಿಯಲ್ಲಿ ೧೯೬೧ನೇ ಇಸವಿಯಲ್ಲಿ ಒಂದು ಶಾಶ್ವತವಾದ ಷೆಲ್ಟರನ್ನು ಕಟ್ಟಿಸಿದೆ. ಅದರ ಉಪಯೋಗವನ್ನು ಜನರು ಪಡೆಯುತ್ತಿದ್ದಾರೆ. ಅಲ್ಲಿಗೆ ಒಂದು ಬಸ್‌ಸ್ಟ್ಯಾಂಡ್ ಬೇಕು ಎಂದು ತಾವು ಸರ್ಕಾರದ ಮುಂದೆ ಒತ್ತಾಯಪೂರ್ವಕವಾಗಿ ಪ್ರತಿಪಾದಿಸಿದ್ದೀರಿ.

ತೇರದಾಳ್‌ದಲ್ಲಿ ೧, ೧೨,೦೦೦ ರೂ.ಗಳ ಒಂದು ಅಂದಾಜೊಂದನ್ನು ೧೯೬೭–೬೮ರಲ್ಲಿ ಮಂಜೂರ್ಮಾಡಲಾಗಿದ್ದಿತು. ಆ ಕೆಲಸವನ್ನು ವಹಿಸಿದ್ದ ಕಂಟ್ರಾಕ್ಟರ್ ದುರಾದೃಷ್ಟವಶಾತ್ ಕಣ್ಮರೆಯಾಗಿದ್ದಾರೆ. ಈ ಎಸ್ಟಿಮೇಟನ್ನು ರೀಕಾಸ್ಟ್ ಮಾಡಿ ಟೆಂಡರ್ ಕರೆದಿದ್ದಾರೆ. ಟೆಂಡರ್ ಬಂದಮೇಲೆ ಕೆಲಸ ವಹಿಸಿಕೊಟ್ಟು ಕೆಲಸ ಮಾಡಿಸುತ್ತೇವೆ.

ಶ್ರೀ ಎಸ್. ಎಂ. ಕೃಷ್ಣ —

ಮಹಾಗಲಿಂಪುರದಲ್ಲಿ ೧೯೭೭-೭೮ರಲ್ಲಿ ೧. ೧೧, ೨೦೦ ರೂಪಾಯಿಗಳ ಅಂದಾಜನ್ನು ಬಸ್‌ಸ್ಟಾಂಡ್ ಕಟ್ಟಲು ಮಂಜೂರು ಮಾಡಿ ಕೆಲಸ ವಹಿಸಲಾಗಿದ್ದಿತು. ಆದರೆ ಇಲ್ಲಿಯೂ ಕಂಟ್ರಾಕ್ಟರ್ ಕಣ್ಮರೆಯಾಗಿದ್ದಾರೆ. ಈ ಎರಡು ಕೆಲಸದ ಕಂಟ್ರಾಕ್ಟರ್ ಒಬ್ಬರೇ ಇರಬಹುದೆಂದು ನಾನು ಊಹೆ ಮಾಡುತ್ತೇನೆ. ಈಗ ಎಸ್ಟಿಮೇಟ್ ರೀಕಾಸ್ಟ್ ಮಾಡಿ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ.

ಇನ್ನು ನಮ್ಮ ರಾಜ್ಯದಲ್ಲಿ ಬಸ್‌ಸ್ಟಾಂಡ್‌ಗಳನ್ನು ಕಟ್ಟಿಸಲು ಆದ್ಯತೆ ಕೊಡುವುದಕ್ಕೋಸ್ಕರ ಒಂದು ಉಪಸಮಿತಿಯನ್ನು ಸಾರಿಗೆ ಉದ್ಯಮದವರು ನೇಮಕ ಮಾಡಿದ್ದಾರೆ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಬಸ್ ಸ್ಟಾಂಡ್‌ಗಳನ್ನು ಕಟ್ಟಲು ಮೊದಲು ಆದ್ಯತೆ ಕೊಡಬೇಕೆಂದು ಅವರು ತೀರ್ಮಾನ ಮಾಡುತ್ತಿದ್ದಾರೆ. ಆ ರೀತಿ ತೀರ್ಮಾನ ಮಾಡತಕ್ಕಂಥ ಸಮಯದಲ್ಲಿ ಬನಹಟ್ಟಿ, ಲೋಕಾಪುರ ಪ್ರದೇಶಗಳನ್ನು ಅವರು ಗಮನದಲ್ಲಿ ಇಟ್ಟುಕೊಂಡು ತೀರ್ಮಾನ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಕಾರ್ಮಿಕ ಮಂತ್ರಿಗಳಾಗಿದ್ದಾಗ ಅನೇಕ ಬಸ್‌ಸ್ಟಾಂಡ್‌ಗಳನ್ನು ಕಟ್ಟಿಸಲು ಅಸ್ತಿಭಾರಶಿಲೆಯನ್ನು ಹಾಕಿದರೂ ಅವು ಇನ್ನೂವರೆಗೆ ಕಾರ್ಯಗತವಾಗದಿರುವುದಕ್ಕೆ ಏನಾದರು ಕಾರಣ ಇದೆಯೋ?

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಬಸ್‌ಸ್ಟಾಂಡ್ ಕಟ್ಟಿಸಬೇಕೆಂದು ಏರ್ಪಾಡಾದಮೇಲೆ ಹಣದ ಅಭಾವದಿಂದ ಏನಾದರೂ ಅದು ನಿಂತು ಹೋಗಿರಬೇಕು. ಈಗ ಅವರ ಬಗ್ಗೆ ಮಾನ್ಯ ಸದಸ್ಯರು ಗಮನ ಸೆಳೆಯುತ್ತಿದ್ದಾರೆ. ಅದನ್ನೆಲ್ಲಾ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.

COMPENSATION TO REVENUE SITE HOLDERS IN BANGALORE CITY

450 SRI K. R SRINIVASULU NAYADU (Shanthinagar). —

Will the Minister for Municipal Administration be pleased to state.

(a) whether land in revenue pockets around the City of Bangalore is being acquired by the City Improvement Trust Board ;

(b) if so, the nature of compensation that Government intends to pay to the revenue site holders ;

(c) whether there is any alternative scheme before Government to compensate the revenue site holders ;

(d) whether Government has directed the City Improvement Trust Board to form sites of smaller size within the reach of low and middle class people, nearer the place where big and small industries are located/would be located ;

(e) the steps propsed to be taken in respect of transferable Government employees who according to Rule 4 of the City of Bangalore Improvement (Dispsoal of sites) Rules 1971 are not eligible to possess a site in the City of Bangalore?

†Asterisks indicates that remards or speeches have not been revised by the member concerned.

SRI B. BASAVALINGAPPA.—(Minister for Municipal Administration)

(*a*) Yes.

(*b*) Compensation for acquired lands, including revenue sites is determined on the principles enunciated under sections 23 and 24 of the Mysore Land Acquisition Act.

(*c*) No.

(*d*) No.

(*e*) This is being examined

ಶ್ರೀ ಕೆ.ಆರ್. ಶ್ರೀನಿವಾಸಲುನಾಯ್ಡು.— ಈಗ ಬೆಂಗಳೂರಿನಲ್ಲಿ ರೆವಿನ್ಯೂ ಸೈಟ್ಸ್ ಹೆಚ್ಚಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿರುವುದರಿಂದ, ಎಷ್ಟು ಜನರು ರವಿನ್ಯೂ ಸೈಟ್ಸ್ ಹೊಂದಿದ್ದಾರೆ ಮತ್ತು ಎಷ್ಟು ಜನಮನೆಕಟ್ಟಿಕೊಂಡಿದ್ದಾರೆಂಬ ಬಗ್ಗೆ ಅಂಕಿಅಂಶವನ್ನು ಕೊಡುತ್ತೀರಾ?

† ಶ್ರೀ ಬಿ. ಬಸವಲಿಂಗಪ್ಪ.—ರೆವಿನ್ಯೂ ಸೈಟ್ಸ್ ಎಷ್ಟಿವೆ ಎಂಬ ಬಗ್ಗೆ ಮಾಹಿತಿ ಇಲ್ಲ. ಇಷ್ಟು ಮಾತ್ರ ಹೇಳಬಲ್ಲೆ, ರೆವಿನ್ಯೂ ಸೈಟ್ಸ್ ಬಹಳ ಮಾಡಿಕೊಂಡು ಅಲ್ಲಿ ಮನೆಗಳನ್ನು ಕಟ್ಟಿಕೊಂಡು ಬಹಳ ದಿವಸಗಳಿಂದ ವಾಸ ಮಾಡುತ್ತಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ರೆವಿನ್ಯೂ ಸೈಟ್ಸ್ ಬೆಳೆಯುಂದಕ್ಕೆ ಕಾರಣ ಸಿ.ಐ.ಟಿ.ಬಿ. ಅಲ್ಲವೇ?

ಶ್ರೀ ಬಿ. ಬಸವಲಿಂಗಪ್ಪ.—ಅದು ಒಂದು ಕಾರಣ ಇರಬಹುದು. ರೆವಿನ್ಯೂ ಲ್ಯಾಂಡ್‌ನ ಖಾಸಗೀ ಓನರ್ಸ್ ಅಂದರೆ ಹಕ್ಕುದಾರರು ಏನಿದ್ದಾರೆ ಅವರ ಸ್ವಾರ್ಥತೆಯೂ ಇದರಲ್ಲಿ ಉಂಟು.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಈಗ ರೆವಿನ್ಯೂ ಸೈಟ್ಸ್‌ನ್ನು ಅಕ್ರಮವಾಗಿ ಮಾರಾಟ ಮಾಡಲಾಗುತ್ತದೆ. ಈ ಕಾರಣದಿಂದ ಮುಂದೆ ಸಿ. ಐ.ಟಿ.ಬಿ. ಅವರು ಆ ಭಾಗಗಳನ್ನು ರೆಗ್ಯುಲರೈಜ್ ಮಾಡುವುದಕ್ಕೆ ಹೋದಾಗ ಅದು ಕಾನೂನಿಗೆ ವಿರೋಧವಾಗುವುದರಿಂದ, ರೆವಿನ್ಯೂ ಸೈಟ್ ಗಳ ಮಾರಾಟವನ್ನು ಕಡ್ಡಾಯವಾಗಿ ತಪ್ಪಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಬಿ. ಬಸಲಿಂಗಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರಬಹುದು, ಈ ವಿಚಾರವನ್ನು ತೀವ್ರಗತಿಯಿಂದ ಸರ್ಕಾರ ಪರಿಶೀಲನೆ ಮಾಡಿ ಈಗಾಗಲೇ ತಡೆ ಆಜ್ಞೆಯನ್ನು ಹೊರಡಿಸಿದೆ. ಅದನ್ನು ಯಾವರೀತಿಯಲ್ಲಿ ಕಂಟ್ರೋಲ್ ಮಾಡಬೇಕು ಎಂಬುದನ್ನು ಸರ್ಕಾರ ತೀವ್ರವಾಗಿ ಆಲೋಚನೆ ಮಾಡುತ್ತದೆ. ಮಾನ್ಯ ಸದಸ್ಯರಿಗೆ ಇಷ್ಟು ಮಾತ್ರ ಹೇಳಬಲ್ಲೆ, ರೆವಿನ್ಯೂ ಸೈಟ್‌ಗಳು ಬೆಳೆಯತಕ್ಕಂಥ ವಿಚಾರಸರಣಿ ಏನಿದೆ, ಅವು ಇನ್ನೂ ಮುಂದೆ ಬೆಳೆಯದಂತೆ ಹಿಡಿತಕ್ಕೆ ಇಟ್ಟುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಈಗ ರೆವಿನ್ಯೂ ಸೈಟ್‌ಗಳ ಓನರ್ಸ್ ಏನಿದ್ದಾರೆ ಅವರು ಕಾನೂನು ಪ್ರಕಾರ ಸೈಟ್‌ಮಾಡಿ ಹಂಚಿಕೆ ಮಾಡಿದ್ದು, ಅಲ್ಲಿ ಮನೆಗಳನ್ನು ಕಟ್ಟಿಸಿದ್ದರೆ. ಮುಂದೆ ಎಲ್ಲಿಯಾದರೂ ಅಡ್ಡಿ ಬರುವ ಕಡೆಗಳಲ್ಲಿ ಇರುವ ಮನೆಗಳನ್ನು ಒಡೆಸುವುದಕ್ಕೆ ಅವರು ಸಿದ್ಧರಿದ್ದರೆ ಅಂತಹ ಪ್ರದೇಶಗಳನ್ನು ಅಪ್ರೂವ್ಡ್ ಸೈಟ್ಸ್ ಎಂದು ಡಿಕ್ಲೇರ್ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಸಂಬಂಧಪಟ್ಟ ಪ್ರಶ್ನೆ ಈಗ ಸರ್ಕಾರದ ಪರಿಶೀಲನೆಯಲ್ಲಿದೆ. ಯಾರು ಕಾನೂನನ್ನು ಉಲ್ಲಂಘನೆ ಮಾಡಿ ಮನೆಗಳನ್ನು ಕಟ್ಟಿರುತ್ತಾರೋ ಅವರ ವಿರುದ್ಧ ಕಾರ್ಯಕ್ರಮ ತೆಗೆದುಕೊಂಡು, ಯಾರು ಹತ್ತಿಪ್ಪತ್ತು ವರ್ಷಗಳಿಂದ ರೆವಿನ್ಯೂ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿಸಿಕೊಂಡು ವಾಸ ಮಾಡುತ್ತಿದ್ದಾರೋ, ಅವುಗಳನ್ನು ಯಾವ ರೀತಿ ರೆಗ್ಯುಲರೈಜ್ ಮಾಡಬೇಕು ಎಂಬ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

DEMOLITION OF A SHED

637. SRI K. M. NAGANNA (Chickpet).—

Will the Minister for Municipal Administration be pleased to state :—

(*a*) whether the Government has received any complaint from one Sri Venkateshaiah of Channapatna regarding illegal demolition of shed constructed by him in his land under license from the Channapatna Municipality ;

(*b*) if so, whether any action has been taken on the above complaint ;

(*c*) whether any Minister was involved in this ?

SRI B. BASAVALINGAPPA (Minister for Municipal Administration).—

(*a*) No.

(*b*) Does not arise in view of reply to item (*a*) above.

(*c*) Yes. The Minister for Labour has given instructions through phone message to the Administrator, Town Municipal Council, Channapatna. Accordingly action has been taken to demolish the shed put up on the land of Sri Venkateshaiah.

ಶ್ರೀ ಕೆ. ಎಂ. ನಾಗಣ್ಣ.—ನನ್ನ ಮೊದಲ ಪ್ರಶ್ನೆಗೆ ಉತ್ತರವಾಗಿ 'ಬಂದಿಲ್ಲ' ಎಂದು ಹೇಳಿದ್ದೀರಿ. ತಾರೀಖು ೧೩ನೇ ಜೂನ್ ೧೯೭೨ ರಂದು ಶ್ರೀ ವೆಂಕಟೇಶಯ್ಯ ಅವರು ಮುಖ್ಯ ಮಂತ್ರಿಗಳಿಗೆ, ಟ್ರಾನ್ಸ್‌ಪೋರ್ಟ್ ಮಂತ್ರಿಗಳಿಗೆ ಮತ್ತು ಲೋಕಲ್ ಸೆಲ್ಫ್ ಮಂತ್ರಿಗಳಿಗೆ ದೂರು ಕೊಟ್ಟು ಅದರ ಒಂದು ಕಾಪಿಯನ್ನು ನನಗೆ ಕಳಿಸಿಕೊಟ್ಟಿದ್ದಾರೆ. ಆದ್ದರಿಂದ ತಾವು ಬಂದಿಲ್ಲ ಎಂದು ಹೇಳಿರುವುದು ಸರಿಯೇ ?

†ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಹತ್ತಿರ ಬಂದಿಲ್ಲ. ಅದಕ್ಕೆ ಆ ರೀತಿ ಹೇಳಿದೆ.

ಶ್ರೀ ಕೆ. ಎಂ. ನಾಗಣ್ಣ.—ವೆಂಕಟೇಶಯ್ಯನವರು ಅಲ್ಲಿ ಷೆಡ್ ಹಾಕಿದ್ದರು. ಅವರು ಮುನಿಸಿಪಾಲಿಟಿಯಿಂದ ಲೈಸೆನ್ಸ್ ನಂಬರ್ ೮೭೨ ತಾರೀಖು ೨೩ನೇ ಫೆಬ್ರುವರಿ ೧೯೭೧ ರಲ್ಲಿ ಲೈಸೆನ್ಸ್ ಪಡೆದುಕೊಂಡಿದ್ದರು. ಆ ಷೆಡ್ಡು ಶಿಥಿಲವಾದ ಪ್ರಯುಕ್ತ ಬೇರೆ ಷೆಡ್ಡನ್ನು ನಿರ್ಮಿಸಲು ಪುನಃ ಲೈಸೆನ್ಸ್ ನಂ. ೭೨೫ ತಾರೀಖು ೨೫ನೇ ಮೇ ೧೯೭೨ ರಲ್ಲಿ ಪುನಃ ಲೈಸೆನ್ಸ್ ತೆಗೆದುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಬಿ. ಬಸವಲಿಂಗಪ್ಪ.—ಅದು ಬಂದಿದೆ.

ಶ್ರೀ ಕೆ. ಎಂ. ನಾಗಣ್ಣ.—ಅವರು ಷೆಡ್ಡನ್ನು ನಿರ್ಮಿಸಲು ಕಾನೂನು ಪ್ರಕಾರ ಲೈಸೆನ್ಸ್ ಅನ್ನು ಪಡೆದಿದ್ದರೂ ಕೂಡ ಮತ್ತೆ ಅದನ್ನು ೨ನೇ ಜೂನ್ ೧೯೭೨ರಲ್ಲಿ ವಾಪಸ್ಸು ತೆಗೆದುಕೊಂಡಿದ್ದೇವೆ ಎಂದು ಹೇಳುವುದಕ್ಕೆ ಕಾರಣವೇನು ?

ಶ್ರೀ ಬಿ. ಬಸವಲಿಂಗಪ್ಪ.—ವೆಂಕಟೇಶಯ್ಯನವರಿಗೆ ಷೆಡ್ಡನ್ನು ಕಟ್ಟುವುದಕ್ಕೆ ಮುನಿಸಿಪಾಲಿಟಿಯಿಂದ ಲೈಸೆನ್ಸ್ ಕೊಟ್ಟಿದ್ದರು. ಆದರೆ ಅವರು ಅವರ ಪಕ್ಕದಲ್ಲಿರತಕ್ಕ ಜಮೀನಿನಲ್ಲಿ ಅಕ್ರಮವಾಗಿ ಮನೆಯನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಆ ಲೈಸೆನ್ಸ್ ಅನ್ನು ಮುನಿಸಿಪಾಲಿಟಿಯವರು ವಿತ್‌ಡ್ರಾ ಮಾಡಿದ್ದಾರೆ.

ಶ್ರೀ ಕೆ. ಎಂ. ನಾಗಣ್ಣ.—ಚೀಫ್ ಆಫೀಸರು ೨ನೇ ಜೂನ್ ೧೯೭೨ ರಂದು ಲೈಸೆನ್ಸ್ ಅನ್ನು ವಿತ್‌ಡ್ರಾ ಮಾಡಿದ ಮೇಲೆ ೩ನೇ ಜೂನ್ ೧೯೭೨ ರಂದು ಆ ಷೆಡ್ಡನ್ನು ಡೆಮಾಲಿಷ್ ಮಾಡಿದ್ದಾರೆ. ಮುನಿಸಿಪಾಲಿಟಿಯ ಕಾನೂನು ಪ್ರಕಾರ ಆ ಷೆಡ್ಡನ್ನು ಡೆಮಾಲಿಷ್ ಮಾಡುವುದಕ್ಕೆ ಮುಂಚೆ ಮುನಿಸಿಪಲ್ ಆಕ್ಟ್ ನಂಬರ್ ೧೮೭ (ಎ) ಪ್ರಕಾರ ಅವರಿಗೆ ನೋಟೀಸ್ ಕೊಡಬೇಕು ಮತ್ತು ಸೆಕ್ಷನ್ ೧೮೯ (ಬಿ) ಪ್ರಕಾರ ೩ ದಿವಸ ಅವರಿಗೆ ಅವಧಿಯನ್ನು ಕೊಡಬೇಕು ಎಂದು ಇದೆ. ಈ ವಿಧಿಯನ್ನು ಅವರು ಅನುಸರಿಸಿದಾರೆಯೇ ?

ಆ ಬಡ ಮನುಷ್ಯನಿಗೆ ೨ನೇ ಜೂನ್ ೧೯೭೨ ರಂದು ನೋಟೀಸ್ ಕೊಟ್ಟು, ೩ನೇ ಜೂನ್ ೧೯೭೨ ರಂದು ಆ ಷೆಡ್ಡನ್ನು ಡೆಮಾಲಿಷ್ ಮಾಡಿದ್ದಾರೆ. ಇದಕ್ಕೆ ಕಾರಣ ಆ ಮನೆಯ ಪಕ್ಕದಲ್ಲಿ ಮುಸ್ಲಿಮರ ಗೋರಿ ಇರುವ ಪ್ರಯುಕ್ತ ಯಾವ ಮನೆಗಳು ಆ ಗೋರಿಯ ಪಕ್ಕದಲ್ಲಿ ಇರಬಾರದು ಎನ್ನುವ ದೃಷ್ಟಿಯಿಂದ ಆ ರೀತಿ ಮಾಡಿದ್ದಾರೆ. ಈ ವಿಚಾರ ಶ್ರೀಮಾನ್ ಬಸವಲಿಂಗಪ್ಪನವರಿಗೆ ಗೊತ್ತಿದ್ದರೂ ಅವರು ಆ ದಿವಸ ಊರಿನಲ್ಲಿ ಇದ್ದರೂ ಕೂಡ ಸಾರಿಗೆ ಶಾಖೆಯ ಮಂತ್ರಿಗಳು ದೂರವಾಣಿಯ ಮೂಲಕ ಆ ಷೆಡ್ಡನ್ನು ಒಡೆಯುವುದಕ್ಕೆ ಚನ್ನಪಟ್ಟಣ ಪುರಸಭಾ ಆಡಳಿತಗಾರರಿಗೆ ಏತಕ್ಕೆ ಆದೇಶವನ್ನು ಕೊಟ್ಟಿದ್ದಾರೆ ? ಈ ವಿಚಾರದಲ್ಲಿ ಸಾರಿಗೆ ಮಂತ್ರಿಗಳು ಪ್ರವೇಶ ಮಾಡುವುದಕ್ಕೆ ಅವರಿಗೂ ಇದಕ್ಕೂ ಏನು ಸಂಬಂಧ ಇದೆ ?

ಶ್ರೀ ಬಿ. ಬಸವಲಿಂಗಪ್ಪ.—ಸಾರಿಗೆ ಇಲಾಖೆಯ ಮಂತ್ರಿಗಳು ಮುನಿಸಿಪಾಲಟಿಗೆ ಸಂಬಂಧಪಟ್ಟ, ಹಾಗೆ ಕ್ರಮತೆಗೆದುಕೊಳ್ಳುವುದು ಜಂಟಿ ಜವಾಬ್ದಾರಿಯ ವ್ಯಾಪ್ತಿಯಲ್ಲಿ ಬರುತ್ತದೆ. ನಾನು ಆ ದಿವಸ ಊರಿನಲ್ಲಿ ಇದ್ದನೋ ಅಥವಾ ಇಲ್ಲವೋ ಗೊತ್ತಿಲ್ಲ. ಅವರು ಅಕ್ರಮವಾಗಿ ಮನೆಯನ್ನು ಕಟ್ಟುತ್ತಿದ್ದಾರೆ ಎಂದು ಸಾರಿಗೆ ಮಂತ್ರಿಗಳಿಗೆ ದೂರು ಬಂದಾಗ ಅವರು ಫೋನ್ ಮುಖಾಂತರ ಕ್ರಮ ತೆಗೆದುಕೊಂಡಿದ್ದಾರೆ.

DROUGHT STRICKEN AREAS IN SHIMOGA TALUK

791. SRI S. M. SHEERANALY CHANDRASHEKAR (Hosanagar).—

Will the Minister for Revenue be pleased to state :—

the reasons for the delay in declaring about seventyfour villages of Shimoga taluk as drought striken areas ?

SRI N. HUTCHAMASTHY GOWDA (Minister for Revenue).—

As the Seasonal Conditions in Shimoga taluk covering 74 villages were good during the year 1971-72 there was no necessity to declare that area as drought stricken.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ.—ತಾವು ನನ್ನ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ೧೯೭೧-೭೨ನೇ ಸಾಲಿನಲ್ಲಿ ಶಿವಮೊಗ್ಗ ತಾಲ್ಲೂಕಿನ ೭೪ ಗ್ರಾಮಗಳನ್ನು ಒಳಗೊಂಡ ಪ್ರದೇಶದಲ್ಲಿ ರುತುಮಾನ ಪರಿಸ್ಥಿತಿಯು ಚೆನ್ನಾಗಿದ್ದುದರಿಂದ ಸದರಿ ಪ್ರದೇಶವನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಅವಶ್ಯಕತೆ ಕಂಡುಬರಲಿಲ್ಲ ಎಂದು ಹೇಳಿದ್ದೀರಿ, ಹೋದ ವರ್ಷ ಈ ಪ್ರದೇಶವನ್ನು ಬರಗಾಲ ಪ್ರದೇಶವೆಂದು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಈ ವರ್ಷ ಜೂನ್ ಮತ್ತು ಜುಲೈ ತಿಂಗಳಲ್ಲಿ ಇಲ್ಲಿ ಮಳೆ ಆಗಿಲ್ಲ, ಆದ್ದರಿಂದ ಅಲ್ಲಿ ಬರಗಾಲ ಪರಿಸ್ಥಿತಿ ಇದೆಂಬುದು ಗೊತ್ತಿದೆಯೆ?

739. SRI V. MASIYAPPA (Challakere).—

Will the Minister for Public Works and Electricity be pleased to state.—

(*a*) when the estimate for the construction of a bridge near Jajur in Challakere Taluk across Vedavathy river was sanctioned ;

(*b*) when the work was started ;

(*c*) the firm of Contractors to which the work was entrusted :

(*d*) the time stipulated for completion of work ;

(*e*) the stage at which the work is at present :

(*f*) the action taken by the Government to complete the wark early ?

SRI H. M. CHANNABASAPPA (Minister for Public Works).—

(*a*) 13th September 1967

(*b*) 2nd July 1968

(*c*) M/s. Karnataka Traders, Chitradurga

(*d*) By 15th December 1970

(*e*) The substructure work of entire bridge (namely piers and abutments, etc) has come up to deck level. R. C. C. Box girder superstructure for the first span is laid. Approaches on either side have been formed partly.

(*f*) Since M/s. Karnataka Traders did not give adequate progress and complete the work in time, the agency has been terminated Tenders have been invited for the balance work so as to complete them early.

ಶ್ರೀ ವಿ. ಮಸಿಯಪ್ಪ (ಊ)ಗೆ ಉತ್ತರವಾಗಿ ಹೇಳಿರುವ ಪ್ರಕಾರ, ನನ್ನ ಪ್ರಶ್ನೆಗೆ ಉತ್ತರ ಕಳುಹಿಸಿದಿಂದೀಚೆಗೆ ಟೆಂಡರ್ ಏನಾದರೂ ಫೈನಲೈಜ್ ಆಗಿದೆಯೋ ? ಹಾಗಿದ್ದರೆ ಅದು ಯಾರಿಗೆ ಆಗಿದೆ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಟೆಂಡರುಗಳನ್ನು ಪಡೆಯುವುದಕ್ಕೆ ಕೊನೆಯ ತಾರೀಖು ೧೮ನೇ ಆಗಸ್ಟ್ ೧೯೭೨. ಆದ್ದರಿಂದ ಇನ್ನೂ ೪ ದಿವಸಗಳು ಇವೆ. ಅದಾದಮೇಲೆ ಆ ಟೆಂಡರುಗಳನ್ನು ಪಡೆಯಲಾಗುತ್ತೆ.

ಶ್ರೀ ವಿ. ಮಂಸಿಯಪ್ಪ.—ಸರ್ಕಾರದವರು ಈ ಕೆಲಸವನ್ನು ಡಿಪಾರ್ಟ್‌ಮೆಂಟಾಗಿ ಮಾಡಿಸಿ ಮುಗಿಸುವುದಕ್ಕೆ ಆಗುತ್ತಿರಲಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಅಭಿಪ್ರಾಯದ ಮಾತು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಈಗ ಬರಬಹುದು. ಪ್ರಶ್ನೆ ನಂ. ೮೩೦ ಆನಂತರ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಧ್ಯಕ್ಷರಲ್ಲಿ ಒಂದು ವಿಜ್ಞಾಪನೆ. ಮಾನ್ಯ ಮಂತ್ರಿಗಳಾದವರು ಆಯಾ ದಿನಗಳಲ್ಲಿ ಈ ಸಭೆಯಲ್ಲಿ ಬರುತ್ತಿರತಕ್ಕ ಸಂಬಂಧಪಟ್ಟ ಪ್ರಶ್ನೆಗಳಿಗೆ ಜವಾಬು ಕೊಡುವ ಒಂದು ನೀತಿಯನ್ನು ತಾವು ಕಡ್ಡಾಯ ಮಾಡದೇ ಹೋದರೆ, ಸದಸ್ಯರು ಇಲ್ಲಿಗೆ ಬಂದು ಪ್ರಶ್ನೆಗಳನ್ನು ಕೇಳುವ ಹಕ್ಕನ್ನು ಮೊಟಕು ಮಾಡಿದಂತಾಗುತ್ತದೆ. ಈ ರಾಜ್ಯಕ್ಕೆ ಸಂಬಂಧಪಟ್ಟ ಕುತೂಹಲಕರವಾದ ವಿಷಯಗಳನ್ನು ಕೇಳಿದಾಗ ಇವರಿಗೆ ಉತ್ತರ ಕೊಡುವುದಕ್ಕೆ ಇಷ್ಟವಿಲ್ಲವೆಂಬುದು ವ್ಯಕ್ತವಾಗುತ್ತದೆ. ಪದೇ ಪದೇ ಈ ಸಭೆಯಲ್ಲಿ ಇಂತಹ ವಿಷಯಗಳು ಉದ್ಭವಿಸುತ್ತಿರುವುದನ್ನು ನೋಡಿದರೆ, ಮಂತ್ರಿಗಳ ಅನಾದರಣೆ ಎಷ್ಟರಮಟ್ಟಿಗೆ ಇದೆಯೆಂಬುದು ವ್ಯಕ್ತವಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ಖಚಿತವಾದ ಒಂದು ರೂಲಿಂಗ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಶ್ರೀ ಸತ್ಯನಾರಾಯಣ ಸಿಂಗ್ ಅವರ ಪ್ರಶ್ನೆಗೆ ಉತ್ತರ ಕೊಡುವ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ತಮಗೆ ತಿಳುವಳಿಕೆ ಕೊಟ್ಟಿದ್ದಾರೆಂದು ಹೇಳಿದಿರಿ. ಆದರೆ ನನ್ನ ಪ್ರಶ್ನೆಗೆ ಉತ್ತರ ಕೊಡುವ ಮಂತ್ರಿಗಳು ಈ ಸದನದಲ್ಲಿ ಈಗ ಇಲ್ಲ. ನನ್ನ ಪ್ರಶ್ನೆಗೆ ಉತ್ತರ ಪಡೆಯಬೇಕೆಂಬ ಆಶೆ ನನಗಿದೆ. ಈ ಸಭೆಯ ಘನತೆ ಹಾಗೂ ಗೌರವಗಳನ್ನು ಕಾಪಾಡುವ ಜವಾಬ್ದಾರಿ ಮಂತ್ರಿಗಳ ಮೇಲೆಯೂ ಇದೆ. ನನ್ನ ಪ್ರಶ್ನೆಯನ್ನು ಆಮೇಲೆ ತೆಗೆದುಕೊಳ್ಳಬಹುದೆಂದು ಹೇಳುತ್ತೀರಿ. ಇದರಲ್ಲಿ ಮಾನ್ಯ ಮಂತ್ರಿಗಳ ನಡೆವಳಿಕೆ ಸರಿಯಿಲ್ಲ ಅವರು ಸದನಕ್ಕೆ ಕೊಡಬೇಕಾದ ಗೌರವವನ್ನು ಈ ರೀತಿ ಕೊಡುವುದಿಲ್ಲ. ಆದ ರಿಂದ ದಯಮಾಡಿ ತಾವು ಇನ್ನುಮುಂದೆ ಯಾವ ಮಂತ್ರಿಗಳು ಅವರಿಗೆ ಸಂಬಂಧಪಟ್ಟ ಪ್ರಶ್ನೆಗೆ ಉತ್ತರ ಕೊಡಲು ಇಲ್ಲಿಗೆ ಬಂದಿರುವುದಿಲ್ಲವೋ ಅಂತಹವರಿಗೆ ತಿಳುವಳಿಕೆಯನ್ನು ಎಷ್ಟು ಕಠಿಣವಾಗಿ ಕೊಡಬೇಕೋ ಅಷ್ಟು ಕಠಿಣವಾಗಿ ಕೊಡಬೇಕು. ಕೆಲವುಸಾರಿ ಇನ್ನು ಮುಂದೆ ಮಂತ್ರಿಗಳು ಬಾರದೇ ಇದ್ದರೇ ಅವರಿಗೆ ಛೀಮಾರಿ ಹಾಕಬೇಕು ಅವರಿಗೆ ನಿಜವಾಗಿ ಛೀಮಾರಿ ಹಾಕುವುದು ಒಳ್ಳೆಯದು. ಏಕೆಂದರೆ, ಅವರು ಬಹಳ ಸಣ್ಣ ರೀತಿಯಲ್ಲಿ ಈ ಸದನವನ್ನು ಕಂಡಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದು ಪ್ರೈಮರಿ ಸ್ಕೂಲಲ್ಲ. ಹೆಡ್‌ಮಾಸ್ಟರ್ ಬಾರದೇ ಇದರೆ, ಅಸಿಸ್ಟೆಂಟ್ ಮಾಸ್ಟರಿಗೆ ಹೇಳಿಕಳುಹಿಸುವುದಕ್ಕೆ. ತಾವು ಮುಖ್ಯಮಂತ್ರಿಗಳಿಗೆ ಹೇಳಿ ಕಳುಹಿಸುತ್ತೇನೆ. ಸಂಬಂಧಪಟ್ಟ ಮಂತ್ರಿಗಳಿಗೂ ಹೇಳಿಕಳುಹಿಸುತ್ತೇನೆಂದು ಈ ಸಭೆಯಲ್ಲಿ ಹೇಳುವುದಕ್ಕೆ ಇದು ಪಾಠಶಾಲೆಯಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಸದಸ್ಯರೊಬ್ಬರು ಬೀಮಾರಿ ಎಂಬ ಒಂದು ಪದವನ್ನು ಈ ಸಭೆಯಲ್ಲಿ ಉಪಯೋಗಿಸಿದರು. ಆ ಪದ ಅನ್‌ಪಾರ್ಲಿಮೆಂಟರಿ ಎಂದ ನನ್ನ ಭಾವನೆ. ಆದ್ದರಿಂದ ತಾವು ಅದರ ಬಗ್ಗೆ ಒಂದು ರೂಲಿಂಗ್ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಈಗ ನನ್ನ ಪ್ರಶ್ನೆ ಏನಾಯಿತು ? ಏಕೆಂದರೆ ಆಮೇಲೆ ಟೈಂ ಆಗಿ ಹೋಯಿತು ಎಂಬುದಾಗಿ ಹೇಳುತ್ತೀರಿ.

ಅಧ್ಯಕ್ಷರು.—ತಮಗೆ ಆಮೇಲೆ ಅವಕಾಶ ಕೊಡುತ್ತೇನೆ.

Madam Speaker.—I Will take up Question No. 873 tomorrow

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಇಲ್ಲಿಯವರೆಗೂ ಎಲ್ಲಿಗೆ ಹೋಗಿದ್ದರು ?

1—30 P.M.

ಅಧ್ಯಕ್ಷರು.—ಮಾನ್ಯ ಸದಸ್ಯರು ಯಾವಾಗಲೂ ಅಧ್ಯಕ್ಷರ ಮೂಲಕ ಪ್ರಶ್ನೆಹಾಕಬೇಕೇ ವಿನಾ, ನೇರವಾಗಿ ಯಾವ ಪ್ರಶ್ನೆಯನ್ನೂ ಕೇಳಬಾರದು.

ಶ್ರೀ ಎಸ್. ಬಂಗಾರಪ್ಪ.—ನಾನು ಕೇಳಿದ್ದು ತಮ್ಮ ಮೂಲಕವೇ......

ಅಧ್ಯಕ್ಷರು.—ನನ್ನ ಮೂಲಕ ಎಂದು ಮಾನ್ಯ ಸದಸ್ಯರು ಬಾಯಿಗೆ ಬಂದ ಪ್ರಶ್ನೆ ಕೇಳುವುದಕ್ಕೆ ಇಲ್ಲಿ ಅವಕಾಶವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಸಚಿವರು ಪದೇ ಪದೇ ಅವರ ಮನಸೊ ಇಚ್ಛೆ ಇಲ್ಲಿಗೆ ಬರಬಹುದೋ ?

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರಿಗೆ ಅವರ ಪ್ರಶ್ನೆಗೆ ಉತ್ತರಬೇಕೋ, ಬೇಡವೋ ?

BHADRAVATHI-SHIMOGA CITY CORPORATION

830 SRI S. BANGARAPPA (Sorab).—Will the Minister for Municipal Administration be pleased to state.—

(a) whether it has come to the notice of the Government that Bhadravathi and Shimoga City are situated at a very short distance between them ;

(b) if so, whether there is a proposal before the Government to sanction a Corporation to these cities on the line of Hubli-Dharwar City Corporation ?

SRI B. BASAVALINGAPPA (Minister for Municipal Administration).—

(a) Yes

(b) No

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ (ಅ) ಪ್ರಶ್ನೆಗೆ 'ಬಂದಿದೆ' ಎಂದು ಉತ್ತರವನ್ನು ಹೇಳಿ (ಆ) ಪ್ರಶ್ನೆಗೆ—'ಇಲ್ಲ' ಎಂದು ಉತ್ತರ ಕೊಡುವುದಕ್ಕೆ ಕಾರಣಗಳೇನು ?

† ಶ್ರೀ ಬಿ. ಬಸವಲಿಂಗಪ್ಪ.— ಆ ವಿಷಯ ಸಧ್ಯಕ್ಕೆ ಸರ್ಕಾರದವರ ಪರಿಶೀಲನೆಯಲ್ಲಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಒಂದು ಕಾರ್ಪೊರೇಷನ್ ಮಾಡುವುದಕ್ಕೆ ಏನೇನು ನೀತಿ ನಿಯಮಾಗಳಿರಬೇಕೋ, ಭದ್ರಾವತಿ ಮತ್ತು ಶಿವಮೊಗ್ಗ ಇವೆರಡನ್ನೂ ಸೇರಿಸಿ ಒಂದು ಕಾರ್ಪೊರೇಷನ್ ಮಾಡುವುದಕ್ಕೆ, ಆ ಅನುಕೂಲಗಳಿವೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ನಾನಾಗಲೇ ಉತ್ತರ ಹೇಳಿದ್ದೇನೆ.

SRI ABDUL KHUDDUS ANWAR.—Is it not a fact that there was a proposal to form Shimoga-Bhadravathi Corporation, but the M.I. S. L. has proved to be a bottlen ck ?

SRI B. BASAVALINGAPPA.—There is no information about this.

ಶ್ರೀ ಕೆ. ಎಂ. ನಾಗಣ್ಣ.—ಅಲ್ಲಿ ಒಂದು ಕಾರ್ಪೊರೇಷನ್ ಮಾಡುವುದಕ್ಕೆ ಆಗದೆ ಇರುವಂಥ ಪ್ರಬಲವಾದ ಕಾರಣಗಳೇನು ಎಂಬುದನ್ನು ಮತ್ತೊಮ್ಮೆ ಪರಿಶೀಲನೆ ಮಾಡುವುದು ಸೂಕ್ತವಲ್ಲವೆ ?

ಶ್ರೀ ಬಿ. ಬಸವಲಿಂಗಪ್ಪ.—ಅಂಥ ಪ್ರಬಲವಾದ ಕಾರಣಗಳೇನು ಎಂಬುದಕ್ಕೆ ಇನ್ನೊಂದು ಪ್ರಶ್ನೆಯನ್ನು ಕಳುಹಿಸಿದರೆ ಅದಕ್ಕೆ ಉತ್ತರವನ್ನು ಒದಗಿಸಲಾಗುತ್ತದೆ. ಶಿವಮೊಗ್ಗದಲ್ಲಿರತಕ್ಕ ಪ್ರಜಾಸಂಖ್ಯೆ ಒಂದು ಲಕ್ಷ ಎರಡುಸಾವಿರದ ಒಂಭತ್ತು, ಮತ್ತು ಭದ್ರಾವತಿಯ ಜನಸಂಖ್ಯೆ ಒಂದು ಲಕ್ಷದ ಒಂದುಸಾವಿರದ ಮೂನ್ನೂರ ಐವತ್ತೆರಡು. ಇವೆರಡೂ ಬಹಳ ದೂರದಲ್ಲಿವೆ. ಆದುದರಿಂದ ಒಂದನ್ನೊಂದು ಕೂಡಿಸುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಕಾರ್ಪೊರೇಷನ್ ಮಾಡುವುದಕ್ಕಾಗುವುದಿಲ್ಲ.

SRI ABDUL KHUDDUS ANWAR.—In view of the fact that there is a Sugar Factory in between the two towns and of their being situated very near, is it not feasible to form a Corporation ?

ಶ್ರೀ ಬಿ. ಬಸವಲಿಂಗಪ್ಪ.—ಮುಂದೆ ಅವು ಹಾಗೆ ಬೆಳೆದಾಗ ಅದಕ್ಕೆ ಗಮನವನ್ನು ಕೊಡಲಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಭದ್ರಾವತಿಗೂ ಶಿವಮೊಗ್ಗಾಕ್ಕೂ ಅಷ್ಟೇನೂ ದೂರವಿಲ್ಲ. ಅವೆರಡೂ ಹತ್ತು ಮೈಲಿಗಳ ಅಂತರದಲ್ಲಿದ್ದರೂ ಈಗಾಗಲೇ ಅವೆರಡರ ಮಧ್ಯದಲ್ಲಿ ಹಾಲಿನಡೈರಿ ಮತ್ತು ಸಕ್ಕರೆ ಕಾರ್ಖಾನೆಗಳು ಬಂದಿರುವುದರಿಂದ ಒಂದಕ್ಕೊಂದು ಕೂಡಿದ ಹಾಗೆ ಆಗಿದೆ. ಹುಬ್ಬಳ್ಳಿ ಧಾರವಾಡಗಳಿಗೆ ಎಷ್ಟು ದೂರವಿದೆಯೋ ಅಷ್ಟೇ ದೂರ ಇಲ್ಲಿಯೂ ಇದೆ. ಆದ್ದರಿಂದ ಇಲ್ಲಿ ಒಂದು ಕಾರ್ಪೊರೇಷನ್ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಅಲ್ಲಿರತಕ್ಕ ಸನ್ನಿವೇಶಗಳೇ ಬೇರೆ. ಇಲ್ಲಿರತಕ್ಕ ಸನ್ನಿವೇಶಗಳೇ ಬೇರೆ.

ಶ್ರೀ ವಿ. ಎಸ್. ಪಾಟೀಲ್.—ಇವೆರಡಕ್ಕೂ ಇರತಕ್ಕ ಸನ್ನಿವೇಶಗಳನ್ನು ಹೋಲಿಸಿ ಎರಡೂ ಒಂದೇ ಆಗಿದ್ದರೆ ಆಗ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಆ ಕಂಡೀಷನ್ನುಗಳು ಒಂದೇ ಆಗಿದ್ದರೆ ಹುಬ್ಬಳ್ಳಿ—ಧಾರವಾಡ ಕಾರ್ಪೊರೇಷನ್ನನ್ನೂ ತೆಗೆದುಬಿಡಿ ಎಂದು ಹೇಳುತ್ತೀರಾ ?

ಶ್ರೀ ವಿ. ಎಸ್. ಪಾಟೀಲ್.—ಇಲ್ಲಿಯೂ ಅಲ್ಲಿನ ಹಾಗೇ ಕಾರ್ಪೊರೇಷನ್ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಧಾರವಾಡದಲ್ಲಿ ಅನೇಕ ವಿದ್ಯಾ ಸಂಸ್ಥೆಗಳೂ ಕಾಲೇಜುಗಳೂ ಇವೆ. ಹುಬ್ಬಳ್ಳಿಯಲ್ಲಿ ಅನೇಕ ಕೈಗಾರಿಕೆಗಳಿವೆ. ಅಲ್ಲದೆ ಇವೆರಡರ ಮಧ್ಯೆ ಉಳಿದಿರತಕ್ಕ ಪ್ರದೇಶವಾದರೋ ಬಹಳ ಕಡಿಮೆ. ಅಲ್ಲಿ ಇನ್ನು ಐದು ಹತ್ತು ವರ್ಷಗಳಲ್ಲಿ ಅವೆರಡೂ ಸೇರಿ ಒಂದು ದೊಡ್ಡ ಪಟ್ಟಣವಾಗತಕ್ಕ ಚಿಹ್ನೆಗಳಿದ್ದರೆ ಇಲ್ಲಿ ಶಿವಮೊಗ್ಗಾ ಮತ್ತು ಭದ್ರಾವತಿಗೆ ಹೋಲಿಸಿದರೆ ಅಂಥ ಚಿಹ್ನೆಗಳಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಮಲೆನಾಡಿನಲ್ಲೂ ಒಂದು ಯೂನಿವರ್ಸಿಟಿ ಆಗುವುದರಲ್ಲಿದೆಯಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ಅದು ಭವಿಷ್ಯದ ಮಾತಾಯಿತು.

ಶ್ರೀ ಕೋಣಂದೂರು ಲಿಂಗಪ್ಪ.—ಈಗತಾನೆ ಮಾನ್ಯ ಸಚಿವರೇನು ಧಾರವಾಡ ಮತ್ತು ಹುಬ್ಬಳ್ಳಿಗಳ ಸಾಮ್ಯ ಹೇಳಿದರೋ ಅದೇ ಸಾಮ್ಯ ಮತ್ತು ಪರಿಸ್ಥಿತಿಗಳು ಇಲ್ಲಿಯೂ ಇರುತ್ತವೆ. ಆದ್ದರಿಂದ ಇದನು ಮತ್ತೊಮ್ಮೆ ಪರಿಶೀಲನೆ ಮಾಡುತ್ತಾರೆಯೋ ?

ಶ್ರೀ ಬಿ. ಬಸವಲಿಂಗಪ್ಪ.—ಆಗಲೇ ಉತ್ತರವನ್ನು ಹೇಳಿದ್ದೇನೆ.

ಅಧ್ಯಕ್ಷರು.—ಪ್ರಶ್ನೋತ್ತರಗಳ ವೇಳೆ ಮುಗಿಯಿತು.

[QUESTION FOR ANSWERS ON THE DATE]

(BUT NOT TAKEN UP)

PRODUCTION OF DISEASE-FREE SEEDS

447 SRI S. KARIYAPPA (Kanakapur).—Will the Minister of State for Sericulture be pleased to state.

(a) the various steps the Government have taken in the direction of producing disease-free seeds ;

(b) the quantity of chakies that are being supplied by the Government grainages ;

(c) the percentage of successful resultsin (i) Seeds (ii) Chakies ?

SRI S. B. NAGARAL (Minister of State for Sericulture).—

(a) The Department has tackled this problem by establishing Government Grainages as well as by licensed private grainages in the Sericultural areas.

(b) No Chawkies are supplied,

(c) Not available.

ELECTRIFICATION OF VILLAGES IN COORG DISTRICT

844 SRI A. M. BELLIAPPA (Mercara).—Will the Minister for Public Works and Electricity be pleased to state.

(a) the number of villages in Coorg district not electrified so far

(b) out of these, the number of villages for which estimates for supply of electricity have been prepared and their names ;

(c) of these estimates, the number of estimates sanctioned ?

SRI H. M. CHANNABASAPPA (Minister for Public Works).—

(a) 211 villages on 30th June 1972.

(b) Estimates for supply of electricity have deen prepared in respect of 10 villages *viz.*, 1. Arapathur in Mercare Taluk and 2. Shettyhalli, 3. Shantihalli, 4. Kambikane, 5. Belagunda, 6. Besur. 7. Yedur, 8, Kodagarahalli, 9. Virajpet and 10. Shettigere-B in Somwarpet Taluk under rural electrification scheme and in recepect of another 2 villages *viz*, Nelagi and Emmemadu in Mercara Taluk under Service Connection Scheme.

(c) All the estimates under rural electrification scheme have been sanctioned, while two estimates under Service Connection Scheme are under scrutiny of the Board.

MALNAD DEVELOPMENT BOARD FOR IMPROVEMENT OF MALNAD AREA

852 SRI A. G. KODGI (Baindur).—Will the Chief Minister be pleased to state.

whether there is any proposal before Government to constitute Malnad Development Board for the improvement of Malnad area of the State ?

SRI D. DEVARAJ URS (Chief Minister).—

No, Sir

But the Government of India is thinking of Western Ghat development including the coastal area.

CALLING ATTENTION TO MATTER OF URGENT PUBLIC IMPORTANCE.

Re: Mal-administration of Virupaksheshawaraswamy Temple at Hampi.

SRI B. SATYANARAYANA SINGH (Hospet).—I call the attention of the Hon. Minister for Revenue to the mal-administration of Virupaksheswara Swamy Temple at Hampi.

SRI N. HUTCHAMASTHY GOWDA (Minister for Revenue).—I state as follows:

(1)	No lease amounts have been collected from the lessees of about 58 acres of wet land belonging to the temple for the last 2 years.	Sri Virupakshaswamy Temple at Hampi is having 57-87 acres of wet land and all the lands are being leased out in public auction and the annual lease demand is fixed in terms of kinds like sugarcane and paddy. The total lease is 369-42 tons of sugarcane or 369-42 gudies of paddy whichever is grown in the land. For D C. B. purpose the value of kind is converted into cash and taken to demand register The total average annual demand in terms of cash works out of Rs. 25,000 per annum. The temple authorities* have collected a sum of Rs. 9,258-84 during last two years and the total arrears to be collected as on 1st July 1972 in Rs. 86,822. Action is being taken by the temple authorities to file suits for collection of arrears.

(Sri Santanarayana Sing

(2)	Joint operation of funds of the temple contrary to the provisions of the scheme passed in O P. No. 624/51 by the Civil Judge, Bellary.	The Endowment Commissioner, Bangalore, in his O. M. No. EST. 242/70-71, dated 13th May 1971 placed the temple clerk as incharge Executive Officer as the Executive Officer of Sri Virupakshaswamy Temple Sri P. B, Patil has been promoted as Manager in the Office of the Deputy Commissioner, H. R. & C. E., Mangalore. The D puty Commissioner, H.R & C.E. Bellary, in his Order No, 61/71-72 DVS/R8, dated 15th June 1971 has authorised the Agent to hereditary Trustee of Sri Virupakshaswamy Temple, Hampi for countersigning the cheques issued under the Signature of the I/c. Executive Officer until further Orders. The same procedure was ordered to be continued further by the Deputy Commissioner, H.R. & C. E. in his letter dated 10th May 1972. The Deputy Commissioner has powers to issue such orders under clause 17 of the Scheme settled by the Sub Court, in O.P. No. 624/51, dated 28th April 1953.
(3)	Lease of lands belonging to the temple have expired by Fasli 1380. No fresh auctions for leasing of land has been held.	Th re are 13 tenants cultivating these lands. Out of 13 tenants the lease period of 8 tenants is upto Fasli 1382 to 1384 and the term of remaining five tenants has expired in F. 1380. These five tenants are continued at the same rent by the temple authorities as they were cultivating the said lands since a long time, and it is the accepted policy not to dispossess tenants who are paying rents regularly. The rent cannot be enhanced in view of section 8 of Mysore Land Reforms Act.

(4) The preparation of 'Gajavahana' and 'Aswavahana' the missing silver and different tail than the reco-ds of 'Aswavahana'.	During the inspection of the temple by the Deputy Commissioner, Hindu Religious & Charitable Endowments, Bellery in the year 1970, The Deputy Commissioner, H R & C.R suggested to get silver Vahana prepared out of he silver available in the temple As per the suggestion of H. H. the Swamier of Sri Vidyaranya Peeta, the hereditary trustee of the temple, the Executive Officer called the tenders for manufacturing the following Vahanas:— **Vahanas:** 1. Gajavahana 2. Aswavahana 3. Chandramandala The Deputy Commissioner, Hindu Religious & Charitable Endowments, Bellary in his Order No. 10939/70-71 DVS/R3, dated 2?th December 1970 has approved the lowest quotation of one Sri G. Armuga Achary at Rs. 2-25 per tola being the making charge and ordered to prepare the above said Vahanas of 1000 tolas of silver each. Some discrepancies have been noticed in the weight of silver given to the silversmith and the silver actually used for the Vahanas. This is under investigation.

ಶ್ರೀ ಬಿ. ಸತ್ಯನಾರಾಯಣಸಿಂಗ್:—ಈ ವರದಿ ನೋಡಿದರೆ ದೇವಸ್ಥಾನದ ಆಡಳಿತ ಪೂರ್ಣವಾಗಿ ಕುಸಿದಿದೆಯೆಂದು ಗೊತ್ತಾಗುವುದು. ನಾಲ್ಕು ವರ್ಷಗಳಿಂದ ಲಕ್ಷ ಸಾವಿರ ರೂಪಾಯಿ ಚಿಲ್ಲರೆ ಗುತ್ತಿಗೆ ಹಣ ವಸೂಲಾಗಬೇಕಾಗಿದೆ. ಈ ಪರಿಸ್ಥಿತಿ ಬರಲು ಕಾರಣರಾದ ಅಧಿಕಾರಿಗಳ ಮೇಲೆ ಜವಾಬ್ದಾರಿ ಹೊರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಿರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ನಮ್ಮ ಎಂಡೋಮೆಂಟ್ ಕಮೀಷನರನ್ನು ಕಳಿಸಿ ವಿವರ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಸತ್ಯನಾರಾಯಣಸಿಂಗ್:—ಇಬ್ಬರು ಆಡಳಿತ ನಡೆಸುವುದರಿಂದ ತೊಂದರೆಯಾಗಿದೆ. ಆದುದರಿಂದ ಒಬ್ಬರೇ ಆಡಳಿತ ನಡೆಸುವಂತೆ ವ್ಯವಸ್ಥೆ ಮಾಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಹಾಗೆ ಬದಲಾಯಿಸಬೇಕಾದರೆ ಲಾ ಇಲಾಖೆಯನ್ನು ಕೇಳಿ ಮುಂದಿನ ಕಾರ್ಯಕ್ರಮ ಕೈಗೊಳ್ಳಬೇಕಾಗುವುದು.

ಶ್ರೀ ಬಿ. ಸತ್ಯನಾರಾಯಣಸಿಂಗ್:—ಬಂಗಾರದ ಒಡವೆ ಇತ್ಯಾದಿ ಮಾಡುವಾಗ ಲೋಪದೋಷಗಳಾಗಿರುವುದು ಕಂಡುಬಂದಿದೆ. ಯಾವ ರೀತಿಯ ಲೋಪದೋಷಗಳು ಎಷ್ಟು ಕಾಲದಿಂದ ಕಂಡುಬಂದಿದೆ, ಮುಂದೆ ಯಾವಾಗ ಪೂರ್ಣವಾಗಿ ತನಿಖೆ ಮಾಡಲಾಗುವುದು?

ಶ್ರೀ ಎನ್. ಹುಚ್ಚಮಾಸ್ತಿಗೌಡ;—ಬೆಳ್ಳಿ ಸಾಮಾನು, ಬಂಗಾರದಲ್ಲಿ. ಬೆಳ್ಳಿ ಸಾಮಾನು ಮಾಡುವಾಗ ಲೋಪದೋಷ ಕಂಡು ಬಂದಿದೆಯೆಂದು ತಿಳಿದುಬಂದಿದೆ. ವಿವರ ಗೊತ್ತಾಗಲಿಲ್ಲ. ಆದುದರಿಂದ ಎಂಡೋಮೆಂಟ್ ಕಮೀಷನರನ್ನು ಕಳಿಸಿ ವಿವರವಾಗಿ ತನಿಖೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುವುದು.

MADAM SPEAKER;—As regar ! the other two call attention notices, the hon. members are not here.

CONSIDERATION OF THE REPORTS OF MPSC FOR 1967-68, 1968-69 AND 1969-70.

MADAM SPEAKER;—Next business Consideration of the Reposts of the Mysore Public Service Commission for the years 1967-68, 68-69 and 69-70.

SRI D. DEVARAJ URS (Chief Minister) ;—Sir, I beg to move;

> "That the Repoits of the Public Service Commission for the years 1967-68, 1968-69 aud 1969-70 be taken for consideration."

MADAM SPEAKER :—Motion moved :

> "That the Reports of th7 Publtc Service Commission for the years 1967-68, 1968-69 and 1969-70 be taken into consideration."

†SRI C. M. ARUMUGHAM (K G F.):—Madam Speaker, if the latest report of the Commission is not before the House, what is the use of discussing this report relating to 1967-68. These reports ought to have been placed before the House by the previous Govts. Why they have not placed is the question. Let us have some explanation. I must say that this is a sad commentary on the functioning of the P.S.C. If the latest report is not ready, it is no good discussing these old reports. What is the good of having a Public Service Commission apart from its functioning good or bad. I think it is the habit to to appoint all retired officers to this commission a d some concession is shown them. Such of those who are not wanted and those who have tried their best to do injustice, they have been sent to the Public Service Commission. Are they worth functioning as the Public Service Commission? I object to this and I object to the way in which the Assembly has been treated.

MADAM SPEAKER:—When the hon. member gets the chance to speak, he may say this.

SRI C.M. ARUMUGHAM.—That is all right Madam. But my question is how far it is fair for the Government to come here suddenly one fine afternoon and ask us to take this report for discussion which is five years old? As I could see even the Chief Minister was reluctant to move this motion. He knows that it is no good discussing this report. In spite of this, quite against his conscience he has moved the Motion. I want to know why these reports were not placed before the Assembly by the Previous Govts. I expect a little explanation from the Chief Minister.

SRI D. DEVARAJ URS.—I was thinking that the House was very eagar to discuss the Land Reforms Bill. At the same time, I Partly agree with the Hon'ble Member Sri Arumugam when he says that these reports refer to previous years. It is there. I cannot say it is not so. That was exactly the reason why I thought the House may not be anxious to discuss these reports. How the Hon'ble Leader of the Opposition felt that the previous arrangement was such as to discuss these reports today, I have placed them before the House for discussion. So far as the other reports are concerned, I am getting the information about it and I will let the House know about it in due course.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ. ಈಗ ಮಾನ್ಯ ಮುಖ್ಯಮಂತ್ರಿಗಳು ಇತ್ತೀಚಿನ ರಿಪೋರ್ಟ್ ಏತಕ್ಕೆ ಬಂದಿಲ್ಲ ಎಂದು ಹೇಳಿದ್ದಕ್ಕೆ ಇನ್ ಡ್ಯೂ ಕೋರ್ಸ್ ತಿಳಿಸುತ್ತೇವೆ ಎಂದು ಹೇಳಿದರು. ಶ್ರೀ ಆರುಮುಗಂ ಎತ್ತಿದ ಪ್ರಶ್ನೆ ಬಹಳ ಪ್ರಾಮುಖ್ಯವಾದದು. ೧೯೬೭-೬೮ನೇ ಇಸವಿಯ ರಿಪೋರ್ಟ್ ಅಂದರೆ ಸುಮಾರು ೫ ವರ್ಷದ ಹಿಂದಿನ ರಿಪೋರ್ಟ್‌ನ್ನು ಏತಕ್ಕ ಇಷ್ಟು ತಡವಾಗಿ ಕಳುಹಿಸಿದ್ದಾರೆ, ಇದರ ಬಗ್ಗೆ ಪಬ್ಲಿಕ್ ಸರ್ವಿಸ್ ಕಮೀಷನ್‌ನವರು ಸರ್ಕಾರಕ್ಕೆ ಏತಕ್ಕ ಬರೆದು ತಿಳಿಸಲಿಲ್ಲ ಎಂದು. ಹಿಂದೆ ಇದ್ದ ಶ್ರೀಮಾನ್ ವೀರೇಂದ್ರ ಪಾಟೀಲರ ಸರ್ಕಾರವಾಗಿಲಿ, ಶ್ರೀಮಾನ್ ನಿಜಲಿಂಗಪ್ಪನವರ ಸರ್ಕಾರವಾಗಲಿ ಯಾವ ಸರ್ಕಾರವೇ ಆಗಲಿ ಆ ರಿಪೋರ್ಟ್‌ನ್ನು ಏತಕ್ಕೆ ಈ ಸಭೆಯ ಮುಂದೆ ಇಡಲಿಲ್ಲ ಅನ್ನುವ ಪ್ರಶ್ನೆ ಅಲ್ಲ. ಯಾರು ಮುಖ್ಯ ಮಂತ್ರಿಗಳಾಗಿ ಬಂದರೂ ಸರ್ಕಾರ ನಡೆದುಕೊಂಡು ಹೋಗುತ್ತದೆ. ಆದುದರಿಂದ ನಾನು ಕೇಳುವುದು ಪಬ್ಲಿಕ್ ಸರ್ವಿಸ್ ಕಮೀಷನ್‌ನವರು ಏತಕ್ಕೆ ಇಷ್ಟು ತಡವಾಗಿ ರಿಪೋರ್ಟನ್ನು ಕಳುಹಿಸಿದರು ಅನ್ನುವುದನ್ನು ಸರ್ಕಾರ ತಿಳಿಸಬೇಕು ಎಂದು ಇಚ್ಛೆಪಡುತ್ತೇನೆ. ಇದಕ್ಕೆ ಸಕಾರಣವಾಗಿ ಸಮಂಜಸವಾಗಿ ಉತ್ತರ ಬರೆದಿದ್ದರೆ ಈ ಹಳೆಯ ವರದಿ ಬಗ್ಗೆ ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ. ಏತಕ್ಕೆಂದರೆ ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿರುವ ಅನೇಕರು ರಿಟೈರ್ ಆಗಿ ಹೋಗಿದ್ದಾರೆ. ಬಹಳ ಜನರನ್ನು ಹೊಸದಾಗಿ ತುಂಬಿದ್ದಾರೆ, ಶ್ರೀ ಧರ್ಮವೀರರು ಇದ್ದ ಕಾಲದಲ್ಲೂ ಕೂಡ ಅನೇಕ ಜನರನ್ನು ತುಂಬಿದ್ದಾರೆ.

ಅಧ್ಯಕ್ಷರು.—ತಾವು ಈಗ ಹೇಳುತ್ತಿರುವ ವಿಷಯವನ್ನೆಲ್ಲಾ ಶ್ರೀ ಆರುಮುಗಂರವರು ಹೇಳಿದ್ದಾಗ. ಅದನ್ನು ಇಡದೇ ಇರುವ ವರದಿಯನ್ನು ಈಗ ಇಟ್ಟಿದ್ದಾರೆ. ಅದರ ಮೇಲೆ ಚರ್ಚೆ ನಡೆಯುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಹಿಂದಿನ ವರದಿಯ ಮೇಲೆ ಚರ್ಚೆ ಮಾಡಿದರೆ ಏನು ಪ್ರಯೋಜನ?

ಅಧ್ಯಕ್ಷರು.—ಈಗ ಇಟ್ಟಿರುವ ವರದಿ ಮೇಲೆ ನಿಮಗೆ ಮಾತನಾಡಲು ಇಷ್ಟವಿದ್ದರೆ ಮಾತನಾಡ ಬಹುದು. ಇಲ್ಲದಿದ್ದರೆ ಇಲ್ಲ. ಅದರ ಬಗ್ಗೆ ಹೆಚ್ಚು ಬೆಳೆಸಿಕೊಂಡು ಹೋಗುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಈ ಹಳೆ ವರದಿಯನ್ನು ಈ ಸಭೆಯ ಮುಂದೆ ಏನು ಇಟ್ಟಿದ್ದೀರಿ ಅದರ ಬಗ್ಗೆ ಚರ್ಚೆ ಮಾಡುವುದರಿಂದ ಏನು ಪ್ರತಿಫಲ ಬರುತ್ತದೆ. ಏತಕ್ಕೆ ಚರ್ಚೆ ಮಾಡಬೇಕು ? ೧೯೬೭ನೇ ಇಸವಿಯಿಂದಲೂ ಅಸೆಂಬ್ಲಿ ನಡೆಯುತ್ತಾ ಇದೆ. ಮಧ್ಯೆ ಒಂದು ವರ್ಷ ಮಾತ್ರ ರಾಷ್ಟ್ರಪತಿ ಆಳ್ವಿಕೆ ಇತ್ತು. ಆವಾಗ ಅಸೆಂಬ್ಲಿ ನಡೆಯಲಿಲ್ಲ ಆದುದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಮಾತ ನಾಡಲು ಪ್ರಾರಂಭವಾಗುವುದಕ್ಕೆ ಮೊದಲು ಪಿ. ಎಸ್. ಸಿ. ರಿಪೋರ್ಟ್ ಇಲ್ಲಿಯವರೆಗೂ ಏತಕ್ಕೆ ಇಡಲಿಲ್ಲ ಎನ್ನುವುದರ ಬಗ್ಗೆ ಸರ್ಕಾರದವರಿಗೆ ಒತ್ತಾಯ ಮಾಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ೧೯೬೯-೭೦ಕ್ಕೆ ಹಿಂದಿನ ೩ ವರ್ಷದ ರಿಪೋರ್ಟನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದರ ಅವಶ್ಯಕತೆ ಇದೆಯೋ ಇಲ್ಲವೇ ಎನ್ನುವ ಪ್ರಶ್ನೆ ಬಂದಿದೆ. ನನ್ನ ೧೦ ವರ್ಷದ ಅನುಭವ ಹೇಳುವುದಾದರೆ ಇದರ ಬಗ್ಗೆ ಈ ಸಭೆಯಲ್ಲಿ ಬಹುಶಃ ಒಂದು ಸಾರಿಯೋ ಎರಡು ಸಾರಿಯೋ ಚರ್ಚೆ ಆಗಿರಬಹುದು. ೧೯೬೩-೬೪ರ ಮುಂದೆ ಇದು ಚರ್ಚೆ ಆಗಿಲ್ಲ. ಪಬ್ಲಿಕ್ ಸರ್ವಿಸ್ ಕಮೀಷನ್ ರಿಪೋರ್ಟನ್ನು ಕಾನೂನು ರೀತ್ಯ ಮಂಡಿಸ ಬೇಕಾಗುತ್ತದೆ. ಅದರ ಬಗ್ಗೆ ಚರ್ಚೆ ಮಾಡಬೇಕೇ, ಬೇಡವೇ ಎನ್ನುವುದು ಈ ಸಭೆಗೆ ಬಿಟ್ಟ ವಿಷಯ. ಶ್ರೀ ಬಂಗಾರಪ್ಪನವರೇ ಆಗಲಿ, ಯಾರೇ ಆಗಲಿ ಇದರ ಬಗ್ಗೆ ಇನ್‌ಸಿಸ್ಟ್ ಮಾಡಿ ಚರ್ಚೆ ಆಗಬೇಕು ಎಂದು ಹೇಳಿದಾಗ ಬೇಡ ಎಂದು ಹೇಳುವುದಕ್ಕಾಗುವುದಿಲ್ಲ. ಆಗ ಇದರ ಬಗ್ಗೆ ಚರ್ಚೆಯನ್ನು ಇನ್‌ಸಿಸ್ಟ್ ಮಾಡಲಿಲ್ಲ, ಆ ಕಡೆಯವರೂ ಮಾಡಲಿಲ್ಲ, ಈ ಕಡೆಯವರೂ ಮಾಡಲಿಲ್ಲ ಎಂದು ಕಾಣುತ್ತೆ.

ಶ್ರೀ ಹೆಚ್ ಎನ್. ನಂಜೇಗೌಡ.—ಆಗ ಮಾಡಿದ್ದರು, ನಾನೇ ಮಾಡಿದ್ದೆ.

ಶ್ರೀ ಹೆಚ್. ಡಿ. ದೇವೇಗೌಡ.—ಆಗ ಪಬ್ಲಿಕ್ ಸರ್ವಿಸ್ ಕಮೀಷನ್ ರಿಪೋರ್ಟ್ ಚರ್ಚೆ ಆಗಬೇಕೋ ಬೇಡವೋ ಎನ್ನುವ ಪ್ರಶ್ನೆ ಬಂದಾಗ ಶ್ರೀ ಆರ್ಮುಗಂರವರು ಈ ಸಭೆಯಲ್ಲಿ ಇರಲಿಲ್ಲ. ೧೯೭೧ನೇ ಇಸವಿಯಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಆಗ ಈ ಸಭೆ ಇರಲಿಲ್ಲ ನನಗೆ ತಿಳಿದ ಹಾಗೆ ಆಗ ಇದರ ಬಗ್ಗೆ ಚರ್ಚೆ ಆಗುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಮುಖ್ಯ ಮಂತ್ರಿಗಳೂ ಕೂಡ ಪಬ್ಲಿಕ್ ಸರ್ವಿಸ್ ಕಮೀಷನ್ ಅವರಿಗೆ ಬರೆದಿದ್ದಾರೆ. ಇದು ಚರ್ಚೆ ಆಗುವುದು ಒಳ್ಳೆಯದು ಎಂದು ಮುಖ್ಯಮಂತ್ರಿಗಳು ಒಪ್ಪಿಗೆ ಕೊಟ್ಟಿದ್ದಾರೆ. ಇದು ಬಹಳ ಗಹನವಾದ ವಿಷಯ. ಇದರ ಬಗ್ಗೆ ಏತಕ್ಕೆ ತಡವಾಯಿತು ಎಂದು ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಒಳ್ಳೆಯದು. ಹಿಂದಿನ ೩ ವರ್ಷದ ರಿಪೋರ್ಟ್‌ನ್ನು ಈಗ ಚರ್ಚೆ ಮಾಡುವುದರಿಂದ ಏನು ಪ್ರತಿಫಲ ಬರುತ್ತದೆ ಎಂದು ಶ್ರೀ ಬಂಗಾರಪ್ಪನವರು ಹೇಳಿದ್ದಾರೆ. ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೇ ಬೇಡವೇ ಎಂದು ಬಿಸಿನೆಸ್ ಅಡ್ವೈಸರಿ ಕಮಿಟಿ ಮುಂದೆ ಬಂದಾಗ ಇದನ್ನು ತೆಗೆದುಕೊಳ್ಳಬೇಕು ಎಂದು ನಿರ್ಣಯವಾಗಿದೆ. ಇಂದು ಸಭೆಯ ಮುಂದೆ ಲ್ಯಾಂಡ್ ರೀಫಾರಂಸ್ ಬಿಲ್ಲು ಚರ್ಚೆಗೆ ಬರಬೇಕಾಗಿತ್ತು. ರೆವಿನ್ಯೂ ಮಿನಿಸ್ಟರು ಬೆಂಗಳೂರಿಗೆ ತಡವಾಗಿ ಬರುತ್ತಾರೆ, ಅವರು ಬಂದ ನಂತರ ಭೂಸುಧಾರಣಾ ಮಸೂದೆಯನ್ನು ತೆಗೆದು ಕೊಳ್ಳೋಣ ಎಂದು ಕಾರ್ಯದರ್ಶಿಯವರು ಹೇಳಿದ್ದರ ಮೇಲೆ, ಪಬ್ಲಿಕ್ ಸರ್ವಿಸ್ ಕಮೀಷನ್ ರಿಪೋರ್ಟ್‌ನ್ನು ಈ ಸಭೆಯಲ್ಲಿ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದ್ದರ ಮೇಲೆ, ಈ ರಿಪೋರ್ಟ್ ಈಗ ಚರ್ಚೆಗೆ ಬಂದಿದೆ.

ಶ್ರೀ ಎಸ್ ಬಂಗಾರಪ್ಪ.—ಈ ಪಬ್ಲಿಕ್ ಸರ್ವಿಸ್ ಕಮೀಷನ್ ರಿಪೋರ್ಟ್ ಏತಕ್ಕೆ ಇಷ್ಟು ತಡವಾಯಿತು ಎಂದು ಸಮಂಜಸವಾದ ಉತ್ತರ ಕೊಟ್ಟಮೇಲೆ ತೆಗೆದುಕೊಳ್ಳೋಣ.

ಶ್ರೀ ಹೆಚ್. ಡಿ ದೇವೇಗೌಡ.—ಸರ್ಕಾರ ರಿಪ್ಲೈ ಕೊಡತಕ್ಕಂಥ ಕಾಲದಲ್ಲಿ ಇದು ತಡವಾಗಿರುವುದಕ್ಕೆ ಕಾರಣ ಏನು ಎಂದು ಉತ್ತರ ಕೊಡಬಹುದು. ಆದುದರಿಂದ ಈಗ ಚರ್ಚೆಗೆ ಅವಕಾಶ ಕೊಡಬೇಕು ಎಂದು ಹೇಳುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಈಗ ಇಟ್ಟಿರತಕ್ಕಂಥ ಲೋಕಸೇವಾ ಆಯೋಗದ ರಿಪೋರ್ಟ್ ಏನು ಇದೆ ಅದರ ಬಗ್ಗೆ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ಸರ್ಕಾರದ ಗಮನಕ್ಕೆ ತರಬಿಚ್ಛಿಸುತ್ತೇನೆ. ೧೯೭೧-೭೨ರಲ್ಲಿ ಈ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಇತ್ತು......

2-00 P. M.

SRI D. DEVARAJ URS :— Madam, among the reports placed here this is the latest report. It is stated on it 'Mysore Public Service Commission Report dated 15th December 970'. Now, we have published it and as soon as the House wanted it we have place it before it. From December 970 to March 1972 there was Governor's rule. So it could ont be placed earlier. So, we have taken the earliest opportunity on the request of the Leader of the Opposition to place it before the House. In light of what I stated just now, there is not much to say with regard to the other reports. Why they were not discussed is a different matter. I do not think proper for us to go into the quesition whether the House wanted to discuss it or they did not consider it necessary to do so. Nothing precludes this House from discussing those reports now. As to the usefulness of it it is left to the House to decide ; I cannot say anything in the matter.

† ಶ್ರೀ ಎಚ್. ಡಿ. ದೇವೇಗೌಡ :— ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ಈಗಾಗಲೇ ಹೇಳಿದ ಹಾಗೇ ಕಳೆದ ಒಂದು ವರ್ಷದಲ್ಲಿ ಎಂದರೆ ಮಾರ್ಚಿ ೧೯೭೨ ರವರೆಗೆ ನಮ್ಮ ರಾಜ್ಯದಲ್ಲಿ ರಾಜ್ಯಪಾಲರ ಆಡಳಿತವಿದ್ದಾಗ ಲೋಕಸೇವಾ ಆಯೋಗದ ನೇಮಕಗಳ ಬಗ್ಗೆ ಕೆಲವೊಂದು ಆಜ್ಞೆಗಳನ್ನು ಹೊರಡಿಸಿದ್ದರಿಂದ ಆಗಿರುವ ಅನ್ಯಾಯಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕೆಂದು ಪಬ್ಲಿಕ್ ಸರ್ವಿಸ್ ಕಮಿಷನ್ ರಿಪೋರ್ಟುಗಳ ಬಗ್ಗೆ ಚರ್ಚೆಯಾಗಬೇಕು ಎಂದು ಮುಖ್ಯ ಮಂತ್ರಿಯವರನ್ನು ಒತ್ತಾಯ ಮಾಡಿದೆ. ಹಿಂದೆ ಇದ್ದ ರಾಜ್ಯಪಾಲರನ್ನು ಟೀಕೆ ಮಾಡಬೇಕೆಂಬ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. ರಾಷ್ಟ್ರಾಧ್ಯಕ್ಷರ ಆಳ್ವಿಕೆಯಲ್ಲಿ ನಡೆದ ಕೆಲವು ಅವ್ಯವಹಾರಗಳ ಬಗ್ಗೆ ಕಟುವಾಗಿ ಟೀಕೆ ಮಾಡಬೇಕಾಗುತ್ತದೆ. ಅದು ಮೂಲಭೂತವಾದ ವಿಚಾರ. ಹಿಂದೆ ನಡೆದಿರುವ ವಿಷಯಗಳ ಬಗ್ಗೆ ಚರ್ಚೆ ಮಾಡುವುದರಿಂದ ಮುಂದೆ ಅಂಥ ತಪ್ಪುಗಳು ಆಗದಂತೆ ಎಚ್ಚರಿಕೆಯನ್ನು ಮಾತ್ರ ನಾವು ಕೊಡಬಹುದು. ಆದರೆ ಅಲ್ಲಿ ಮೂಲಭೂತವಾಗಿ ಆಗಿರುವ ಕೆಲವು ತಪ್ಪುಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ಮಾತನಾಡುತ್ತಿದ್ದೇನೆ. ರಾಜ್ಯಪಾಲರ ಆಡಳಿತದ ಕಾಲದಲ್ಲಿ ನಡೆದ ಕೆಲವು ಅವ್ಯವಹಾರಗಳು ಎಂದರೆ ಮೂಲಕ್ಕೇ ಪೆಟ್ಟು ಬಿದ್ದಿದೆ ಎಂದು ನಾನು ಈ ಸಂದರ್ಭದಲ್ಲಿ ಟೀಕೆ ಮಾಡಬೇಕಾಗಿದೆ. ರಾಷ್ಟ್ರಾಧ್ಯಕ್ಷರ ಆಳ್ವಿಕೆ ನಮಗೆ ಒಂದು ಶಾಪವಾಗಿ ಪರಿಣಮಿಸಿತು ಎಂದು ಹೇಳಬೇಕಾಗಿದೆ. ಆ ಅವಧಿಯಲ್ಲಿ ನಡೆದಿರತಕ್ಕ ಘಟನೆಗಳನ್ನು ಸಭೆಯ ಗಮನಕ್ಕೆ ತಂದು, ಮಾನ್ಯ ಮುಖ್ಯ ಮಂತ್ರಿಗಳು ಅತಿ ಶೀಘ್ರದಲ್ಲಿಯೇ ಕೆಲವು ಮಾರ್ಪಾಡುಗಳನ್ನು ಆ ಬಗ್ಗೆ ಮಾಡುತ್ತಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಏಕೆಂದರೆ ಒಂದು ವರ್ಷದಲ್ಲಿ ನಡೆದಿರುವ ಕೆಲವು ಘಟನೆಗಳನ್ನು ಸರ್ಕಾರದ ಹುಕುಮುಗಳನ್ನು ತಮ್ಮ ಗಮನಕ್ಕೆ ತಂದರೆ ಅದರಿಂದ ಎಷ್ಟು ಪೆಟ್ಟು ಬಿದ್ದಿದೆ ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ಅದರ ಬಗ್ಗೆ ಕೆಲವು ಮಾತುಗಳನ್ನು ಆಡಬೇಕೆಂದಿದ್ದೇನೆ.

SRI D. DEVARAJ URS :— The only latest report which we should have placed before you is that if 1-70-71 because that is the only report we have received. That report we will place next because it is to be placed before the Cabinet, its approvl is to be given and then it is to be printed and placed before the House.

ಶ್ರೀ ಎಚ್. ಡಿ. ದೇವೇಗೌಡ :— ರಾಜ್ಯಪಾಲರ ಆಡಳಿತಕಾಲದಲ್ಲಿ ನಡೆದಿರತಕ್ಕ ಕೆಲವು ಘಟನೆಗಳನ್ನು ನಾನು ಪ್ರಸ್ತಾಪ ಮಾಡಬೇಕೆಂದಿದ್ದೆ. ಆಗ ಮಾಡಿರತಕ್ಕ ಆಜ್ಞೆಗಳಿಂದ ಆಗಿರುವ ಅನ್ಯಾಯಗಳನ್ನು ಇಂದಿನ ಮುಖ್ಯ ಮಂತ್ರಿಗಳು ಸರಿಪಡಿಸತಕ್ಕದ್ದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು; ಇದಕ್ಕೆ ಒಂದು ಪರಿಹಾರವನ್ನು ಸರ್ಕಾರ ಹುಡುಕಬೇಕೆಂದು ಈ ಸಂದರ್ಭದಲ್ಲಿ ನಾನು ಮೊದಲು ಸೂಚನೆ ಮಾಡುತ್ತೇನೆ. ಪಬ್ಲಿಕ್ ಸರ್ವಿಸ್ ಕಮೀಷನ್ ವ್ಯವಹಾರದಲ್ಲಿ ಹಿಂದಿನ ರಾಜ್ಯಪಾಲರು ಎಲ್ಲಿಯವರೆಗೆ ಹೋದರು ಎಂದರೆ, ಕಮಿಷನ್‌ನಲ್ಲಿ ಖಾಲಿ ಆಗತಕ್ಕ ಸ್ಥಾನವನ್ನು ಭರ್ತಿ ಮಾಡತಕ್ಕ ಕಾಲದಲ್ಲಿ ಅಲ್ಲಿನ ಚೇರ್‌ಮನ್ ಅವರ ಸಲಹೆಯನ್ನು ಕೂಡ ಪಡೆಯದೆ ಮಾಡಿದರು. ಆಲ್ ಇಂಡಿಯಾ ಪಬ್ಲಿಕ್ ಸರ್ವಿಸ್

(ಶ್ರೀ ಎಚ್. ಡಿ. ದೇವೇಗೌಡ)

ಕಮೀಷನ್ ಚೇರ್‌ಮನ್ಸ್ ಕಾನ್‌ಫರೆನ್ಸ್‌ನಲ್ಲಿ ಅವರು ಒಂದು ನಿರ್ಣಯವನ್ನು ತೆಗೆದುಕೊಂಡು, ಯಾವುದೇ ಒಂದು ಸ್ಥಾನ ಖಾಲಿಯಾದರೂ ಅದನ್ನು ಭರ್ತಿ ಮಾಡತಕ್ಕ ಕಾಲದಲ್ಲಿ ಸರ್ವಿಸ್ ಕಮೀಷನ್ನಿನ ಅಭಿಪ್ರಾಯವನ್ನು ತೆಗೆದುಕೊಂಡು ಭರ್ತಿ ಮಾಡಬೇಕೆಂದು ತೀರ್ಮಾನ ಮಾಡಿದರು. ಅದರಂತೆ ಮೈಸೂರು ಸರ್ಕಾರದವರು ಒಂದು ಸಂಪ್ರದಾಯವನ್ನು ಬೆಳೆಸಿಕೊಂಡು ಆಲ್ ಇಂಡಿಯಾ ಪಬ್ಲಿಕ್ ಸರ್ವಿಸ್ ಕಮಿಷನ್ ಚೇರ್‌ಮನ್ಸ್ ಕಾನ್‌ಫರೆನ್ಸ್‌ನಲ್ಲಿ ತೆಗೆದುಕೊಂಡಂತ ನಿರ್ಣಯಕ್ಕೆ, ತೀರ್ಮಾನಕ್ಕೆ ಬದ್ಧರಾದರು. ಸರ್ಕಾರ ಅದನ್ನು ಒಪ್ಪಿಕೊಂಡಿದ್ದರಿಂದ ಸರ್ವಿಸ್ ಕಮಿಷನ್‌ನಲ್ಲಿ ಯಾವುದೇ ಸ್ಥಾನ ಖಾಲಿ ಬಿದ್ದರೂ ಅದನ್ನು ಭರ್ತಿ ಮಾಡತಕ್ಕ ಕಾಲದಲ್ಲಿ ಸರ್ವಿಸ್ ಕಮಿಷನ್ ಚೇರ್‌ಮನ್ ಅವರ ಅಭಿಪ್ರಾಯವನ್ನು ತೆಗೆದುಕೊಂಡು ನೇಮಕಗಳನ್ನು ಮಾಡಬೇಕಾಗಿತ್ತು. ಆದರೆ ರಾಜ್ಯಪಾಲರ ಆಡಳಿತ ಕಾಲದಲ್ಲಿ ಖಾಲಿ ಬಿದ್ದ ಸ್ಥಾನಕ್ಕೆ ನೇಮಕ ಮಾಡುವಾಗ ಸರ್ವಿಸ್ ಕಮಿಷನ್ ಚೇರ್‌ಮನ್ ಅವರ ಅಭಿಪ್ರಾಯವನ್ನು ಕೇಳಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಒಬ್ಬ ಸದಸ್ಯರು ರಾಜಿನಾಮೆ ಕೊಟ್ಟರು ರಾಜಿನಾಮೆ ಕೊಟ್ಟದ್ದನ್ನು ಕೂಡ ಸರ್ವಿಸ್ ಕಮಿಷನ್ ಗಮನಕ್ಕೆ ತರಲಿಲ್ಲ. ಹಾಗೆಯೇ ಆಜ್ಞೆಯನ್ನು ಹೊರಡಿಸಿದರು ಎಂದು ಬಹಳ ಕಟುವಾಗಿ ಹೇಳಬೇಕಾಗುತ್ತದೆ. ಯಾವುದೇ ಬಣ್ಣ ಹಚ್ಚಿ ಹೇಳಬೇಕು ಎನ್ನುವ ಅಭಿಪ್ರಾಯ ನನಗೆ ಇಲ್ಲ. ರಾಜ್ಯಪಾಲರ ಆಡಳಿತದಲ್ಲಿ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳತಕ್ಕ ಕೆಲವು ನಿರ್ಣಯಗಳನ್ನು ಕೆಲವರು ತೆಗೆದುಕೊಂಡರು. ಮೊನ್ನೆ ಮುಖ್ಯ ಮಂತ್ರಿಗಳು ಒಂದು ಸಂದರ್ಭದಲ್ಲಿ ಬೇರೆಯವರನ್ನು ಶೋಷಣೆ ಮಾಡತಕ್ಕ ಪ್ರವೃತ್ತಿ ಬೆಳೆಯಬಾರದು ಎಂದು ಹೇಳಿದರು. ಆ ದೃಷ್ಟಿಯಿಂದ ನೋಡಿದರೆ ಇದು ಭಿನ್ನತೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮತ್ತು ಆ ಬಗ್ಗೆ ಕಟುವಾಗಿ ಟೀಕೆ ಮಾಡಬೇಕಾಗುತ್ತದೆ. ಇಂಥ ನಿರ್ಣಯವನ್ನು ತಗೆದುಕೊಂಡದ್ದು ಸರ್ಕಾರಕ್ಕೆ ಸರಿಯಿಲ್ಲ. ಸರ್ಕಾರ ಆಗ ಸರ್ವಿಸ್ ಕಮಿಷನ್ನಿನ ಅಭಿಪ್ರಾಯವನ್ನು ತೆಗೆದುಕೊಂಡು ಭರ್ತಿ ಮಾಡಿತೇ ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುತ್ತೇನೆ. ಅವರು ಇದರ ಬಗ್ಗೆ ಉತ್ತರ ಕೊಡಬೇಕು.

ಮೂರನೆ ದರ್ಜೆ ಹುದ್ದೆಗಳಿಗೆ ನೇಮಕ ಮಾಡತಕ್ಕ ಕಾಲದಲ್ಲಿ ಸರ್ವಿಸ್ ಕಮಿಷನ್‌ನಲ್ಲಿ ಹಿಂದೆ ಇದ್ದ ನಿಯಮಾವಳಿಗಳನ್ನು ಬದಲಾಯಿಸುವುದಕ್ಕೆ ಹಿಂದೆ ಇದ್ದ ರಾಜ್ಯಪಾಲರು ಆದೇಶ ಕೊಟ್ಟರು. ಹಿಂದೆ ನೇಮಕ ಮಾಡತಕ್ಕ ಕಾಲದಲ್ಲಿ ಸಂಬಂಧಪಟ್ಟ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಪಡೆದಿರತಕ್ಕ ಅಂಕಗಳನ್ನು ಗಮನಕ್ಕೆ ತೆಗೆದುಕೊಂಡು ಇಂಟರ್‌ವ್ಯೂಗೆ ಕರೆಯತಕ್ಕ ಪದ್ಧತಿ ಇತ್ತು. ಪಬ್ಲಿಕ್ ಸರ್ವಿಸ್ ಕಮಿಷನ್‌ರವರು ಇಂಟರ್‌ವ್ಯೂ ಮಾಡಿ ನೂರಕ್ಕೆ ಇಷ್ಟು ನಂಬರು ಎಂದು ಕೊಡುತ್ತಿದ್ದರು. ಮೂರನೆ ದರ್ಜೆ ಹುದ್ದೆಗಳಿಗೆ ಒಂದು ಹುದ್ದೆಗೆ ನಾಲ್ಕು ಅಭ್ಯರ್ಥಿಗಳನ್ನೂ, ಎರಡನೇ ದರ್ಜೆ ಹುದ್ದೆಗಳಿಗೆ ಒಂದಕ್ಕೆ ಐದು ಜನರನ್ನೂ ಇಂಟರ್‌ವ್ಯೂಗೆ ಕರೆಯತಕ್ಕ ಒಂದು ಸಂಪ್ರದಾಯವಿತ್ತು. ಇಂಟರ್‌ವ್ಯೂನಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ನೂರು ಅಂಕಗಳನ್ನು ಕೊಟ್ಟಿದ್ದರು. ಇಂಟರ್‌ವ್ಯೂನಲ್ಲಿ ಅಭ್ಯರ್ಥಿಗಳು ಯಾವ ರೀತಿ ಉತ್ತರಗಳನ್ನು ಕೊಡುತ್ತಿದ್ದರು. ಅದರ ಪರಿಣತಿಯ ಮೇಲೆ ಅಂಕಗಳನ್ನು ಕೊಟ್ಟು ತೇರ್ಗಡೆಯಾದವರನ್ನು ಆಯ್ಕೆ ಮಾಡುತ್ತಿದ್ದರು. ಇವರು ಒಂದು ಹುಕುಂ ತೆಗೆದು ಇಂಟರ್‌ವ್ಯೂ ಮಾರ್ಕ್ಸ್ ೩೦ ಎಂದು ಒಂದು ವ್ಯವಸ್ಥೆ ಮಾಡಿದರು. ಹಳ್ಳಿಗಾಡುಗಳಿಂದ ಬಂದಿರತಕ್ಕ ಮಕ್ಕಳಿಗೆ ಇದು ಕುಠಾರ ಪ್ರಾಯವಾಗಿದೆ. ಅವರು ತಮ್ಮ ಹಿತಾಸಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡಿದ್ದಾರೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗುವುದಿಲ್ಲ. ಯಾವ ಅಭ್ಯರ್ಥಿಯನ್ನು ಸೆಲೆಕ್ಟ್ ಮಾಡಬೇಕಾದರೂ ಯೂನಿವರ್ಸಿಟಿ ಮಾರ್ಕ್ಸ್ ಅನ್ನು ಗಣನೆಗೆ ತೆಗೆದುಕೊಂಡ ೩೦ ನಂಬರ್ ಇಂಟರ್‌ವ್ಯೂ ಮಾರ್ಕ್ಸ್ ಸೇರಿಸುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಎರಡನ್ನು ಜೋಡಿಸಿ ಅಭ್ಯರ್ಥಿಯನ್ನು ಸೆಲೆಕ್ಟ್ ಮಾಡಬೇಕು ಎನ್ನು ಆಧಾರ ಇಟ್ಟುಕೊಳ್ಳಬೇಕು ಎಂದು ಸರ್ಕಾರ ಕೊಟ್ಟಂತಹ ಒಂದು ನಿರ್ಣಯ. ನಾನು ಕೇಳುತ್ತೇನೆ, ಇದರ ಹಿನ್ನೆಲೆಯಾದರೂ ಏನು? ಇಂಥ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಗವರ್ನರ್ ಅವರಿಗೆ ಬಂದಂಥ ಒತ್ತಾಯ ಏನು ಎಂದು ಕೇಳುತ್ತೇನೆ. ತಮಗೆಲ್ಲಾ ಗೊತ್ತಿದೆ, ಹಳ್ಳಿಯ ವಿದ್ಯಾಭ್ಯಾಸ ಮಾಡಿಕೊಂಡಿರುವವರು ಹೆಚ್ಚು ಅಂಕಗಳನ್ನು ಪಡೆದು ಯಾವುದೇ ರ್‍ಯಾಂಕುಗಳನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ. ಯೂನಿವರ್ಸಿಟಿಯವರು ಕೊಟ್ಟಂಥ ಅಂಕಗಳಿಗೆ, ಇಂಟರವ್ಯೂ ಮಾರ್ಕ್ಸ್ ಅನ್ನು ಸೇರಿಸಿ, ಈ ಆಧಾರ ಇಟ್ಟುಕೊಂಡು ತಾವು ನೇಮಕಗಳನ್ನು ಮಾಡುವುದರ ಬಗ್ಗೆ, ಕೊಟ್ಟಿರತಕ್ಕ ಆದೇಶದ ಹಿನ್ನೆಲೆಯಾದರೂ ಏನೂ ಎಂದು ಹೇಳಬೇಕಾಗುತ್ತದೆ. ಇದರಿಂದ ಎಂಥ ಅನ್ಯಾಯವಾಗಿದೆ ಎಂದು ಆಲೋಚನೆ ಮಾಡಬೇಕಾಗಿದೆ. ನಮಗೆ ಗೊತ್ತಿರತಕ್ಕ ರೀತಿ ಯಾರೇ ಹಳ್ಳಿಯ ಹುಡುಗರು ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿದವರು, ಪಬ್ಲಿಕ್ ಸರ್ವೀಸ್ ಕಮಿಷನ್‌ನಲ್ಲಿ ಸೆಲೆಕ್ಟ್ ಆಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಹೊಸ ಸಂಪ್ರದಾಯ ಹಾಕಿರತಕ್ಕ ಉದ್ದೇಶ ಏನು ಎಂದು ಕೇಳಬೇಕಾಗುತ್ತದೆ ಇವತ್ತು ಪರೀಕ್ಷೆಗಳೂ ಕೂಡ ಸರಿಯಾಗಿ

ನಡೆಯುತ್ತಿಲ್ಲ; ಎಂದು ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ನನಗೆ ಒಬ್ಬ ಪ್ರೊಫೆಸರ್ ಹೇಳಿದರು. ಆನರ್ಸ್ ಕೋರ್ಸ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಾ ಇರುವರು ಗೌಡ ಎಂದು ಹೆಸರು ಇಟ್ಟರೆ, ರ್ಯಾಂಕ್ ಗಳಿಸುವುದು ಕಷ್ಟವಾಗುತ್ತದೆ ಎಂದು ಇದು ಉತ್ಪ್ರೇಕ್ಷೆಯಿಂದ ಹೇಳತಕ್ಕ ಮಾತು ಅಲ್ಲ. ರ್ಯಾಂಕ್ ಪಡೆಯುವುದು ಬಹಳ ಕಷ್ಟವಾಗುತ್ತದೆ ಎಂದು ಪ್ರೊಫೆಸರ್ ನಿರ್ಣಯಕ್ಕೆ ಬಂದಂತಾಗಿದೆ. ಈ ರೀತಿ ರಾಜ್ಯದಲ್ಲಿ ನಡೆಯತಕ್ಕದನ್ನು ಹಿಂದಿನ ಅನುಭವದಿಂದ ಹೇಳಬೇಕಾಗುತದೆ. ಅವರು ಗೌಡ ಎನ್ನುವ ಹೆಸರನ್ನು ಬದಲಾಯಿಸಿ ಎಂದು ಹೇಳಿದ ಮಾತು. ಎಂ. ಎ., ಎ. ಎಸ್. ಸಿ. ಯಲ್ಲಿ ತೇರ್ಗಡೆ ಆಗುಂತಿ ಕಾಲದಲ್ಲಿ ಪ್ರೊಫೆಸರ್ ಇಚ್ಛೆಯಂತೆ ನಡೆಯುತ್ತದೆ ಎಂದು ಕೇಳಿದ್ದೇನೆ. ಇದರಲ್ಲಿ ಸತ್ಯಾಂಶವಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ, ಈ ಸರ್ಕಾರದವರು ಗವರ್ನರ್ ಆಜ್ಞೆಯನ್ನು ಸರಿಪಡಿಸದೇ ಹೋದರೆ ಹಳ್ಳಿಯ ಮಕ್ಕಳ ಕಗ್ಗೊಲೆಯಾಗುತ್ತದೆ ಎಂದು ಹೇಳಬೇಕಾಗಿದೆ. ತಾವು ಇದಕ್ಕೆ ಹೊಣೆಯಾಗದೆ ಇರಬಹುದು; ಅಂಕಗಳನ್ನು ಪಡೆಯುವುದು ಹುಡುಗನ ಎಫಿಷಿಯನ್ಸಿಯಿಂದಲ್ಲ, ಅಂಕಗಳನ್ನು ಬೈ ಹಾರ್ಟ ಮಾಡಿ ತೆಗೆಯಬಹುದು, ಕಾಪಿ ಹೊಡೆದು ತೆಗೆಯಬಹುದು; ಹಿಂದೆ ಕಾಪಿ ಹೊಡೆಯುವುದನ್ನು ತಪ್ಪಿಸುವುದಕ್ಕೆ ಹೋದಾಗ ಎಕ್ಸಾಮಿನರ್ ಅನ್ನು ಹೊಡೆದದ್ದನ್ನು ಕೇಳಿದ್ದೇನೆ. ಗೋಲ್ಡ್ ಮೆಡಲಿಸ್ಟ್, ಇಂಟರ್‌ವ್ಯೂ ಕಮಿಟಿ ಮುಂದೆ ಬಂದಾಗ, ಥರೋ ಫೇಲ್ಯೂರ್ ಆಗಿರುವುದನ್ನು ನೋಡಿದ್ದೇನೆ. ಪಬ್ಲಿಕ್ ಸರ್ವೀಸ್ ಕಮಿಷನ್ ಮುಂದೆ ಐ ಎ ಎಸ್ ಪ್ರೊಬೇಷನರ್ಸ್ ಕಮಿಟಿ ಮುಂದೆ, ಕೆಲವು ವಿಷಯಗಳಿಗೆ ಉತ್ತರ ಕೊಡುವ ಕಾಲದಲ್ಲಿ ತಬ್ಬಿಬ್ಬಾಗಿರುವುದನ್ನು ನೋಡಿದ್ದೇನೆ. ಪಬ್ಲಿಕ್ ಪರೀಕ್ಷೆಯಲ್ಲಿ ಪಡೆದ ಅಂಕಗಳಿಗೆ ಇಂಟರವ್ಯೂ ಮಾರ್ಕ್ಸ್ ಅನ್ನು ಸೇರಿಸಬೇಕು ಎಂದು ಹೇಳಿರುವ ಹಿನ್ನಲೆ ಏನು ಎನ್ನುವುದನ್ನು ವಿಮರ್ಶೆ ಮಾಡಬೇಕಾಗುತ್ತದೆ. ಜೊತೆಗೆ ಪತ್ರಿಕೆಗಳನ್ನು ಅಸೇಸ್ ಮಾಡುವುದರಲ್ಲಿ ಕೂಡ ಒಂದು ಯೂನಿವರ್ಸಿಟಿಯಿಂದ ಇನ್ನೊಂದು ಯೂನಿವರ್ಸಿಟಿಗೆ ವ್ಯತ್ಯಾಸ ಇದೆ. ಕೆಲವು ಯೂನಿವರ್ಸಿಟಿಗಳಲ್ಲಿ ೭೦ ಪರ್ಸೆಂಟ್ ಮಾರ್ಕ್ಸ್‌ಗೆ ಫಸ್ಟ್‌ಕ್ಲಾಸ್ ಕೊಡುವುದು, ಕೆಲವುಕಡೆ ೬೦ ಪರ್ಸೆಂಟ್‌ಗೆ ಫಸ್ಟ್‌ಕ್ಲಾಸ್ ಕೊಡುವುದು, ಈ ರೀತಿ ಮಾಡುವುದರಲ್ಲಿ ಒಂದು ಯೂನಿಫಾರ್ಮಿಟಿ ಇಲ್ಲ. ಎಂದು ಗೊತ್ತಿದೆ. ಇಂಟರ್‌ವ್ಯೂ ಮಾರ್ಕ್ಸ್ ಬಗ್ಗೆ ಮಾರ್ಪಾಡು ಮಾಡಿ ಹುಕ್ಕುಂ ಮಾಡಿದ ಹಿನ್ನಲೆ ಏನು ಎಂದು ಕೇಳಬೇಕಾಗುತ್ತದೆ. ಆದ್ದರಿಂದ ಸರ್ಕಾರ ಇದಕ್ಕೆ ಒಂದು ಕ್ಷಣವೂ ಕೂಡ ತಡಮಾಡದೆ, ಇವತ್ತು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಇದರಿಂದ ದೊಡ್ಡ ಪೆಟ್ಟು ಹಳ್ಳಿಯ ಮಕ್ಕಳ ಮೇಲೆ ಬಿದ್ದಿದೆ. ಮತ್ತು ದೊಡ್ಡ ಆಘಾತವಾಗಿದೆ ಎಂದು ಹೇಳಬೇಕಾಗುತ್ತದೆ. ಇದರ ಜೊತೆಗೆ ಡಿಗ್ರಿ ಕೋರ್ಸ್‌ನಲ್ಲಿ ಫಿಸಿಕ್ಸ್, ಮ್ಯಾಥಮ್ಯಾಟಿಕ್ಸ್‌ನಲ್ಲಿ ೮೦ ಪರ್ಸೆಂಟ್ ತೆಗೆಯಬಹುದು, ರ್ಯಾಂಕ್ ಪಡೆಯುವುದು ಸುಲಭ. ಆದರೆ ಹಿಸ್ಟರಿ ಪೊಲಿಟಿಕಲ್ ಸೈನ್ಸ್‌ನಲ್ಲಿ ಅಂಕಗಳನ್ನು ಪಡೆಯುವುದು ಕಷ್ಟ ಇದೆ. ಯೂನಿವರ್ಸಿಟಿ ಎಕ್ಸಾಮಿನೇಷನ್‌ನವರು ಕೊಟ್ಟಂತಕ್ಕ ಮಾರ್ಕ್ಸ್ ಆಧಾರದ ಮೇಲೆ ಅಪಾಯಿಂಟ್ ಮಾಡಬೇಕು ಎನ್ನುವ ನಿರ್ದೇಶ ಏನು ಕೊಟ್ಟಿದ್ದೀರಿ ಅದು ಹಳ್ಳಿಯ ಮಕ್ಕಳಿಗೆ ಕುಠಾರಪ್ರಾಯವಾದ ವ್ಯವಹಾರ ಎಂದು ಕಟುವಾದ ಮನಸ್ಸಿನಿಂದ ಹೇಳಬೇಕಾಗುತ್ತದೆ. ಜೊತೆಗೆ ಔಟ್ ಆಫ್ ಸ್ಟೇಟ್‌ನಿಂದ ಬರತಕ್ಕ ಅಭ್ಯರ್ಥಿಗಳಿಗೆ ಅನುಕೂಲವಾಗುತ್ತದೆ, ರಾಜ್ಯದ ಮಕ್ಕಳಿಗೆ ಅನ್ಯಾಯವಾಗುತ್ತದೆ. ಗವರ್ನರ್ ಕಾಲದಲ್ಲಿ ಇದಕ್ಕಿಂಥ ಕೆಟ್ಟ ಕೆಲಸ, ಹೀನಾಯವಾದ ಕೆಲಸ ಮತ್ತೊಂದು ಬೇರೆ ಯಾವುದು ಆಗಿಲ್ಲ ಎಂದು ಹೇಳಬೇಕಾಗುತ್ತದೆ ಗವರ್ನರ್ ಅವರಿಗೆ ಕೆಟ್ಟ ಅಡ್ವೈಸ್ ಕೊಟ್ಟವರು ಜಿ. ಎ. ಡಿ. ಅವರು ಎಂದು ಹೇಳಬೇಕಾಗುತ್ತದೆ. ಈ ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟಮೆಂಟ್ ಮೇಲೆ ಕಳೆದ ೨೫ ವರ್ಷಗಳಿಂದ ಯಾವ ಮುಖ್ಯ ಮಂತ್ರಿಯ ಹಿಡಿತ ಸಹ ಇರಲಿಲ್ಲ, ಅಲ್ಲಿ ಇರುವ ರೆಡ್ ಟೇಪಿಸಂ ಸರಿ ಮಾಡುವುದಕ್ಕೆ ಆಗಲಿಲ್ಲ. ಶ್ರೀ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗಲೂ ಅವರು ಈ ಜಿ. ಎ. ಡಿ. ಯ ಬಲಿಗೆ ತುತ್ತಾಗಿದ್ದರು. ಯಾವ ಮುಖ್ಯ ಮಂತ್ರಿಯ ಕೈಯಲ್ಲಿಯೂ ಅದನ್ನು ಸರಿಪಡಿಸುವುದಕ್ಕೆ ಸಾಧ್ಯ ಆಗಲಿಲ್ಲ. ಜಿ. ಎ. ಡಿ. ಕೊಟ್ಟಂಥ ಒಪೀನಿಯನ್ ಅನ್ನು ಟರ್ನ್ ಡೌನ್ ಮಾಡುವುದಕ್ಕೆ ರಾಜ್ಯದ ಯಾವ ನಾಯಕನಿಗೂ ಸಾಧ್ಯವಾಗಲಿಲ್ಲ. ಇಂಥ ಒಂದು ಶಕ್ತಿಯನ್ನು ಅವರು ಪ್ರಯೋಗ ಮಾಡುತ್ತಿದ್ದಾರೆ. ಇಲ್ಲಿಯೂ ಜಿ. ಎ. ಡಿ. ಕೊಟ್ಟ ಸಲಹೆಯ ಮೇಲೆ ಗವರ್ನರ್ ಅವರು ನಿರ್ಣಯ ತೆಗೆದುಕೊಂಡಿದ್ದಾರೆ ಎಂದು ಹೇಳಬೇಕಾಗುತ್ತದೆ, ಇದು ಪಾಪದ ಕೆಲಸ ಎಂದು ನೊಂದ ಮನಸ್ಸಿನಿಂದ ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್ (ಸೋಮವಾರ ಪೇಟೆ) .— ಮುಂದೆ ನೋಡಬೇಕು.

ಶ್ರೀ ಎಚ್. ಡಿ. ದೇವೇಗೌಡ .— ನೋಡಬೇಕಾದ ಅವಶ್ಯಕ ಇಲ್ಲ. ಕಳೆದ ನಾಲ್ಕು ತಿಂಗಳಿಂದ ಅಧಿಕಾರಿಗಳ ಬಗ್ಗೆ ಬಂದಂಥ ಉತ್ತರದಿಂದ ಇಲ್ಲಿ ಚರ್ಚೆ ಮಾಡಿ ತಿಳಿದುಕೊಂಡಿದ್ದೇನೆ. ಅಧಿಕಾರಿಗಳನ್ನು ಬೆಂಬಲಿಸುತ್ತಿದ್ದಾರೆ ಎಂದು ಗೊತ್ತಿದೆ; ಆ ವಿವಾದಕ್ಕೆ ಈಗ ಹೋಗುವುದಿಲ್ಲ. ಅಂಥ ದೃಢವಾದ, ಬಲಯುತವಾದ ನಿರ್ಣಯ ತೆಗೆದುಕೊಳ್ಳುವುದಾದರೆ, ಸ್ವಾಗತ ಮಾಡುತ್ತೇನೆ, ಪ್ರಶಂಸೆ ಮಾಡುತ್ತೇನೆ. ಜಿ. ಎ. ಡಿ. ಯವರು ಕೊಟ್ಟಿರತಕ್ಕ ಸಲಹೆಯ ಮೇಲೆ ನಿರ್ಣಯ ಆಗುವುದು ಬೇಡ. ಸೆಕ್ರೆಟೇರಿಯೇಟ್ ಹೇಗೆ ರನ್ ಆಗುತ್ತಿದೆ ಎಂದು ಗೊತ್ತಿದೆ. ಸೆಕ್ರೆಟರಿ ಕೊಟ್ಟ ಸಲಹೆಯನ್ನು ಟರ್ನ್ ಡೌನ್ ಮಾಡುವ ಒಬ್ಬ

(ಶ್ರೀ ಹೆಚ್. ಡಿ. ದೇವೇಗೌಡ)

ಮಂತ್ರಿಯೂ ಸಿಗುವುದು ಕಷ್ಟ. ಸೆಕ್ರೆಟೇರಿಯೇಟ್ ಬಳಿಗೆ ಎಲ್ಲರೂ ಬಿದ್ದಿದ್ದಾರೆ, ಅವರು ಕೊಟ್ಟಂಥ ಸಲಹೆಗಳನ್ನು ಅವರ ಮುಖಕ್ಕೆ ತಿರುವಿ ಹೇಳತಕ್ಕ ಶಕ್ತಿ ಬರಬೇಕಾದರೆ, ಆಳವಾಗಿ ಅಭ್ಯಾಸ ಮಾಡಿದರೆ ಮಾತ್ರ ಬರುತ್ತದೆ. ಅದಕ್ಕೆ ಅನುಭವವು ಇರಬೇಕು; ತಮಗೆ ಹೇಳುವುದಾದರೆ, ಆಡಳಿತದಲ್ಲಿ ಹಿತಾಸಕ್ತಿ ಇರುವ ಜನ ಬಹಳ ಇದ್ದಾರೆ. ಇವತ್ತು ಯಾವನೇ ಮುಖ್ಯ ಮಂತ್ರಿ ಕೆಲಸ ಮಾಡಬೇಕಾದರೆ, ಸಾಕಷ್ಟು ಹಿತಾಸಕ್ತಿಗಳು ಅಡ್ಡಿ ಬರುವ ಸಾಧ್ಯತೆ ಇದೆ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ರಾಜ್ಯದಲ್ಲಿ ಕಳೆದ ೨೫ ವರ್ಷಗಳಿಂದ ಯಾವನೇ ಮುಖ್ಯ ಮಂತ್ರಿಯಾದರೂ, ಆ ಕಾರ್ಯ ಸಾಧನೆ ಮಾಡುವುದಕ್ಕೆ ಆಗಲಿಲ್ಲ.

(MR. DEPUTY SPEAKER. in the chair) .—

ಮಾನ್ಯ ಸಭಾಧ್ಯಕ್ಷರವರೇ, ಇಂಟರ್‌ವ್ಯೂ ಮಾರ್ಕ್ಸ್ ಬಗ್ಗೆ ತೆಗೆದುಕೊಂಡ ನಿರ್ಣಯವನ್ನು ಕಾಲ ವಿಳಂಬ ಇಲ್ಲದೆ ಹಳ್ಳಿ ಮಕ್ಕಳಿಗೆ ಆಗುವ ಅನ್ಯಾಯವನ್ನು ಸರಿಪಡಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ರಾಷ್ಟ್ರಾಧ್ಯಕ್ಷರ ಆಳ್ವಿಕೆಯಲ್ಲಿ ಇನ್ನೊಂದು ದೊಡ್ಡ ಉಪಕಾರವನ್ನು ಮಾಡಿಕೊಟ್ಟು ಹೋದರು. ೧೩೦ ರೂಪಾಯಿ ಬೇಸಿಕ್ ಸ್ಕೇಲಿಗಿಂತ ಕಡಿಮೆ ಇರುವ ಹುದ್ದೆಗಳಿಗೆ ನೇಮಕಗಳನ್ನು ಮಾಡುವುದಕ್ಕೆ ೫೨ ಡಿಪಾರ್ಟ್‌ಮೆಂಟ್ ರಿಕ್ರ್ಯೂಟ್‌ಮೆಂಟ್ ಕಮಿಟಿಗಳನ್ನು ಕಾನ್ಸ್‌ಟಿಟ್ಯೂಟ್ ಮಾಡಿದ್ದಾರೆ. ಬಹುಶಃ ಮತ್ತೆ ಯಾವುದೇ ರಾಜ್ಯದಲ್ಲಿ ಇಂಥ ಡಿಪಾರ್ಟ್‌ಮೆಂಟ್ ರಿಕ್ರೂಟ್‌ಮೆಂಟ್ ಕಮಿಟೀ ಪದ್ಧತಿ ಇಲ್ಲವೆಂದು ಕೇಳಿದ್ದೇನೆ. ಇಂಥ ನಿಯಮಗಳೆಲ್ಲಾ ರಾಷ್ಟ್ರಾಧ್ಯಕ್ಷರ ಆಳ್ವಿಕೆಯ ಕಾಲದಲ್ಲಿ ಇತ್ತು. ಕಳೆದ ೨೫ ವರ್ಷಗಳಲ್ಲಿ ಹಲವಾರು ಕಮಿಟಿಗಳನ್ನು ಮಾಡಿರುವುದು ಕೇಳಿದ್ದೇನೆ. ಸ್ಟೇಟ್ ಲೆವೆಲ್, ಡಿವಿಜನಲ್ ಕಮಿಟೀಗಳನ್ನು ಒಂದೆ ಮಾಡಿದ್ದಾರೆ. ಅವರು ಸೆಲೆಕ್ಟ್ ಮಾಡಿದ ಕಾಲದಲ್ಲಿ ಡಿವಿಜನಲ್ ಕಮಿಷನರ್ ತನ್ನ ಜಾತಿಯವರನ್ನು ೧೪೫ ಜನರನ್ನು ಅಪಾಯಿಂಟ್ ಮಾಡಿದ್ದರ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾಯಿತು. ಆಮೇಲೆ ಆ ಕಮಿಟಿಗಳನ್ನು ರದ್ದುಮಾಡಿ ಪುನಃ ಪಿ. ಎಸ್. ಸಿ. ಗೆ ಕೊಟ್ಟರು. ಅವರು ಕೊಟ್ಟಂತ ಅಭಿಪ್ರಾಯ ಬೇರೆ, ಆದರೆ ನಮ್ಮ ರಾಷ್ಟ್ರಾಧ್ಯಕ್ಷರ ಆಳ್ವಿಕೆಯಲ್ಲಿ ಕೊಟ್ಟಂತ ನಿರ್ಣಯ ಬೇರೆ. ಜಿಲ್ಲಾ ಮಟ್ಟದಲ್ಲಿ ೩ನೇ ದರ್ಜೆ ಅಪಾಯಿಂಟ್‌ಮೆಂಟ್ಸ್ ಏನಿವೆ ಅವುಗಳಿಗೆ ನೇಮಕ ಮಾಡುವ ಕಾಲದಲ್ಲಿ ಜಿಲ್ಲೆ ಮಟ್ಟದಲ್ಲಿ ಸಮಿತಿ ಮಾಡಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಸೂಪರ್‌ವಿಷನ್ ಇರುವ ಆಧಾರದ ಮೇಲೆ ಮಾಡಿರೆ ಜಿಲ್ಲೆಯಲ್ಲಿ ಇರತಕ್ಕ ಮಕ್ಕಳಿಗೆ ಹೆಚ್ಚು ಕೆಲಸ ಸಿಕ್ಕುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಸಲಹೆಯನ್ನು ಪಬ್ಲಿಕ್ ಸರ್ವೀಸ್ ಕಮಿಷನ್ ಕೊಟ್ಟರು. ಅದನ್ನು ಸರ್ಕಾರ ಅಂಗೀಕಾರ ಮಾಡಲಿಲ್ಲ. ಹಳ್ಳಿ ಮಕ್ಕಳಿಗೆ ಕೆಲಸ ಸಿಕ್ಕುತ್ತದೆ. ಅದಕ್ಕೆ ಅವಕಾಶ ಆಗಬಾರದು, ಎನ್ನುವ ಉದ್ದೇಶದಿಂದ ಡಿಪಾರ್ಟ್‌ಮೆಂಟ್ ರಿಕ್ರೂಟ್‌ಮೆಂಟ್ ಕಮಿಟೀಸ್ ಮಾಡುವುದು ಒಳ್ಳೆಯದು ಎಂದು ಪಿ.ಎ.ಡಿ. ಯವರು ಸಲಹೆ ಕೊಟ್ಟರು. ೨೫ ವರ್ಷಗಳಲ್ಲಿ ಯಾವ ಮುಖ್ಯ ಮಂತ್ರಿಯವರು ಅವರು ಕೊಟ್ಟಂತ ಸಲಹೆಯನ್ನು ಟರ್ನ್‌ಡೌನ್ ಮಾಡಿದ್ದಾರೆ? ಮಾಡುವುದಕ್ಕೆ ಯೋಗ್ಯತೆ ಇಲ್ಲ ಎಂದು ಹೇಳಬೇಕಾಗುತ್ತದೆ. ಶ್ರೀಮಾನ್ ಅರಸ್‌ರವರು ಆ ಕೆಲಸ ಮಾಡಿದರೆ ನಾನು ಅವರನ್ನು ಸ್ವಾಗತ ಮಾಡುತ್ತೇನೆ. ಆದರ ಹಿನ್ನೆಲೆ ನನಗೂ ಗೊತ್ತಿದೆ. ಅವರು ಹಾಗೆ ಮಾಡುವುದು ಕಷ್ಟವಾಗುತ್ತದೆ. ಯಾವ ಸರ್ಕಾರವೇ ಆಗಿರಲಿ ಇದರ ಪರಿಣಾಮ ಏನು ಎಂದು ಆಲೋಚನೆ ಮಾಡಬೇಕಾಗುತ್ತದೆ. ಇವೊತ್ತು, ಏನು ಡಿಸ್ಟ್ರಿಕ್ಟ್ ಲೆವೆಲ್ ಕಮಿಟಿಸ್ ಮಾಡಿ ಪಬ್ಲಿಕ್ ಸರ್ವೀಸ್ ಕಮಿಷನ್ ಸೂಪರ್‌ವಿಷನ್ ಆಧಾರದ ಮೇಲೆ ನೀವು ಜಿಲ್ಲೆಯಲ್ಲಿ ಕ್ಲಾಸ್ ೩ ಪೋಸ್ಟ್ಸ್ ಫಿಲ್ ಅಪ್ ಮಾಡುವ ಬಗ್ಗೆ ಪಿ. ಎಸ್. ಸಿ. ಶಿಫಾರಸ್ಸು ಏನು ಇದೆ ಅದಕ್ಕೆ ಮನ್ನಣೆ ಮಾಡತಕ್ಕದ್ದು ಸೂಕ್ತ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. Article 16(2) No citizen shall, on groundds only of religion, race, caste, sex, descent, place of bith, residence or any of them, be ineligible for, or discrim'nated against in respect of, any employment or offiice under the State. ಬಹುಶಃ ಡಿಸ್ಟ್ರಿಕ್ಟ್ ಲೆವೆಲ್ ಕಮಿಟೀಸ್ ಮಾಡಿ ಆಯಾಯ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಹಳ್ಳಿಗಾಡಿನ ಮಕ್ಕಳಿಗೆ ಹೆಚ್ಚು ಅವಕಾಶ ಸಿಕ್ಕಬಹುದು ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಒಂದು ಸಲಹೆ ಕೊಡುತ್ತೇನೆ. ಪ್ರೊಫೆಷನ್ ಮೇಲೆ ರಿಸರ್ವ್ ಮಾಡುವುದಕ್ಕೆ ಕಾನ್‌ಸ್ಟಿಟ್ಯೂಷನ್ ಅಡ್ಡಿ ಬರುವುದಿಲ್ಲ. ಆದುದರಿಂದ ವ್ಯವಸಾಯದಲ್ಲಿರುವ ಮಕ್ಕಳಿಗೆ ರಿಸರ್ವೇಷನ್ ಮಾಡುವುದಾದರೆ ಜಾತಿಯ ಮೇಲೆ ವ್ಯವಸಾಯ ಅವಲಂಬನೆ ಆಗಿಲ್ಲ. ಆ ದೃಷ್ಟಿಯಿಂದ ರಿಸರ್ವೇಷನ್ ಮಾಡುವುದಾದರೆ ಇಲ್ಲಿಯವರೆಗೆ ಹಳ್ಳಿಗಾಡಿನ ಮಕ್ಕಳಿಗೆ ಆಗಿರುವ ಅನ್ಯಾಯವನ್ನು ತಾವು ಸರಿಮಾಡುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರದವರು ಈ ಸಲಹೆಯನ್ನು ಕಾನೂನು ತಜ್ಞರಿಂದ ಪರಿಶೀಲನೆ ಒಳಿತು ಎಂದು ಈ ಸಂದರ್ಭದಲ್ಲಿ

ಹಾಳುತ್ತೇನೆ. ಗ್ರಾಮಾಂತರ ಜನತೆ ಮಕ್ಕಳಿಗೆ ನೀವು ಕೊಡತಕ್ಕ ವಿದ್ಯಾಭ್ಯಾಸ ಏನು ಇದೆ ಎಂದು ಆಲೋಚನೆ ಮಾಡಬೇಕು. ಹೈಸ್ಕೂಲಿನಲ್ಲಿ ೩೫ ಅಂಕಗಳನ್ನು ಪಡೆದು ಪಾಸ್ ಮಾಡುವುದು ಕಷ್ಟವಾಗಿದೆ. ಎಲ್ಲಾ ಕಡೆ ತಾಲ್ಲೋಕು ಬೋರ್ಡು, ಮುನಿಸಿಪಾಲಿಟಿಗಳು ಖಾಸಗಿಯವರು ಇನಿ ಟ್ಯೂಷನ್, ಗಳನ್ನು ತೆಗೆದಿದ್ದಾರೆ ಅಲ್ಲಿ ವಿದ್ಯಾಭ್ಯಾಸದ ಗುಣಮಟ್ಟ ಸಾಕಷ್ಟು ಇಲ್ಲ. ಅಲ್ಲಿ ಪಾಸಾದ ಹುಡುಗನ ಜೊತೆಗೆ ನ್ಯಾಷನಲ್ ಹೈಸ್ಕೂಲು, ವಿಜಯ ಹೈಸ್ಕೂಲಿನಲ್ಲಿ ಪಾಸ್ ಮಾಡಿದ ಹುಡುಗನಿಗೆ ಹೋಲಿಕೆ ಮಾಡುವುದಾದರೆ ಆ ಮಕ್ಕಳ ಮುಂದೆ ಹಳ್ಳಿ ಮಕ್ಕಳು ಕಂಪೀಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಜಾತಿಯ ಆಧಾರದ ಮೇಲೆ ರಿಸರ್ವ್ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ವೃತ್ತಿಯ ಆಧಾರದ ಮೇಲೆ ರಿಸರ್ವ್ ಮಾಡುವುದಕ್ಕೆ ಸಾಧ್ಯವಿದೆ. ಕಾನೂನು ತಜ್ಞರಿಂದ ಈ ಸಲಹೆಯನ್ನು ಪರಿಶೀಲನೆ ಮಾಡಬೇಕು ಎಂದು ಹೇಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಅತಿ ಜಾಗ್ರತೆ ನಿರ್ಣಯ ತೆಗೆದುಕೊಳ್ಳುವುದು ಸೂಕ್ತ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಸಭಾಧ್ಯಕ್ಷಿಣಿಯವರೇ ಇವೊತ್ತು ನೊಂದ ಹೃದಯದಿಂದ ಹೇಳಬೇಕಾಗುತ್ತದೆ. ಕೆಲವು ಪೋಸ್ಟುಗಳನ್ನು ರಾಜ್ಯ ಸರ್ಕಾರದ ಹಿಡಿತದಲ್ಲಿ ಇಟ್ಟುಕೊಂಡಿದ್ದಾರೆ. ಡಿಪಾರ್ಟ್‌ಮೆಂಟ್ ಕಂಟ್ರೋಲ್ ಏಕೆ ಬೇಕು ? ಉದಾಹರಣೆಗೆ ಸಬ್ ಇನ್ಸ್‌ಪೆಕ್ಟರ್ ಪೋಸ್ಟ್ ಏತಕ್ಕೆ ನಿಮ್ಮ ಪರಿಮಿತಿಯಲ್ಲಿ ಇರಬೇಕು ? ಒಂದೊಂದು ಪೋಸ್ಟಿಗೂ ೧೫–೨೦ ಸಾವಿರ ರೂಪಾಯಿ ವ್ಯಾಪಾರವಾಗುತ್ತದೆ ಎಂದು ದೇಶದಲ್ಲಿ ಇದರ ಬಗ್ಗೆ ಅಪಾದನೆ ಇದೆ. ಪಿ. ಎಸ್. ಸಿ. ಗೆ ಏತಕ್ಕೆ ಕೊಡಬಾರದು, ಅದಕ್ಕೆ ಇರತಕ್ಕ ಅಡಚಣೆ ಏನು ಎಂದು ಕೇಳುತ್ತೇನೆ. ಈ ರೀತಿ ಯಾವ ರಾಜ್ಯದಲ್ಲಿಯೂ ಇಲ್ಲ. ಫಿಸಿಕಲ್ ಫಿಟ್‌ನೆಸ್ ಮುಂತಾದ ಟೆಸ್ಟ್‌ಗಳನ್ನು ಪಿ. ಎಸ್. ಸಿ ಗೆ ಮಾಡುವುದಕ್ಕೆ ಕಷ್ಟ ಇದೆ ಎಂದು ತಾವು ಹೇಳಬಹುದು. ಈ ಪದ್ಧತಿಯನ್ನು ಹಿಂದಿನ ಸರ್ಕಾರದವರೂ ಅನುಸರಿಸಿಕೊಂಡು ಬಂದಿದ್ದಾರೆ, ನಿಮ್ಮ ಸರ್ಕಾರದಿಂದ ಪ್ರಾರಂಭವಾಗಿದೆಯೆಂದು ಹೇಳುವುದಿಲ್ಲ ಕಳೆದ ೨೫ ವರ್ಷಗಳಿಂದ ಈ ಜಾಡ್ಯ ಇದೆ. ಅದೇ ರೀತಿ ಶ್ರೀಮಾನ್ ಕೆ. ಎಚ್. ಪಾಟೀಲರ ಇಲಾಖೆಯಲ್ಲಿ ಫಾರೆಸ್ಟ್ ರೇಂಜರ್ಸ್ ಪೋಸ್ಟು ಪಿ ಎಸ್. ಸಿ. ಯವರು ನೇಮಕ ಮಾಡುವುದಿಲ್ಲ. ಅಸಿಸ್ಟೆಂಟ್ ಕನ್ಸರ್ವೇಟರ್ ಆಫ್ ಫಾರೆಸ್ಟ್ ಆ ಪೋಸ್ಟು ಪಿ. ಎಸ್. ಸಿ. ಯವರು ನೇಮಕ ಮಾಡುತ್ತಾರೆ, ಫಾರೆಸ್ಟ್ ರೇಂಜರ್ ಪೋಸ್ಟ್‌ಗೆ ನೇಮಕವನ್ನು ಪಿ ಎಸ್. ಸಿ ಯವರು ಮಾಡುವುದು ಬೇಡ ಡಿಪಾರ್ಟ್‌ಮೆಂಟ್‌ನವರು ಟೆಸ್ಟ್ ಕಂಡಕ್ಟ್ ಮಾಡಬೇಕು ಎಂದು ಹೇಳತಕ್ಕ ಪದ್ಧತಿ ಸರಿಯಲ್ಲ ಕೆಲವು ಟೆಸ್ಟ್‌ಗಳನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಆದುದರಿಂದ ಅವರನ್ನು ನೇಮಕ ಮಾಡುವುದು ನಮ್ಮ ಕೈಯಲ್ಲಿ ಇರಬೇಕು ಎನ್ನುವ ವಾದವನ್ನು ಮುಂದಿಡುತ್ತೀರಿ. ಆದರೇ ಅದೇ ಇಲಾಖೆಯ ಅಸಿಸ್ಟೆಂಟ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಅಪಾಯಿಂಟ್ ಮಾಡುವುದಕ್ಕೆ ಪಿ. ಎಸ್. ಸಿ. ಯವರಿಗೆ ಅವಕಾಶ ಕೊಟ್ಟಿದ್ದೀರಿ, ಇವೊತ್ತು ಈ ಒಂದು ನೇಮಕದ ಅರ್ಹತೆಯನ್ನು ಏನು ಇಟ್ಟಿದ್ದೀರಿ ಅದರಲ್ಲಿ ಅವನ ಫಿಸಿಕಲ್ ಫಿಟ್‌ನೆಸ್ ವಗೈರೆ ಎಲ್ಲಾ ವಿವರಗಳನ್ನು ಅರ್ಜಿ ಫಾರಂನಲ್ಲಿ ಒದಗಿಸಬೇಕು ಎಂಬ ನಿಯಮಗಳನು ಸೂಚಿಸಿದ್ದೀರಿ ಅದನ್ನು ಯಾತಕ್ಕೆ ಫಾರೆಸ್ಟ್ ರೇಂಜರ್‌ಗೆ ಅಪ್ಲೈ ಮಾಡಬಾರದು ? ಮೆಡಿಕಲ್ ಬೋರ್ಡಿಗೆ ಕಳುಹಿಸಿ ಅರ್ಹತೆ ಇದೆಯೋ ಇಲ್ಲವೇ ಪರಿಶೀಲನೆ ಮಾಡಿ ಮಾಡುವುದಕ್ಕೆ ಸಾಧ್ಯ ಇದೆ. ಆದುದರಿಂದ ಸಬ್ ಇನ್ಸ್‌ಪೆಕ್ಟರ್ ಪೋಸ್ಟ್ ಅಗಲಿ ಫಾರೆಸ್ಟ್ ರೇಂಜರ್ ಪೋಸ್ಟ್ ಆಗಲಿ ನಿಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವುದು ಬೇಡ. ಪಿ. ಎಸ್ ಸಿ. ಅಗದೆ ಇರುವ ಕೆಲಸ ಯಾವುದೂ ಇಲ್ಲ. ಸರ್ಕಾರದ ಹಿಡಿತದಲ್ಲಿ ಇಟ್ಟುಕೊಳ್ಳುವುದು ಬೇಡ ಸಾಕಷ್ಟು ಇದರ ಬಗ್ಗೆ ಅಪಾದನೆಯಾಗಿದೆ. ಸರ್ಕಾರದ ಈ ದಿಶೆಯಲ್ಲಿ ನಿರ್ಣಯ ತೆಗೆದುಕೊಳ್ಳುವುದು ಸೂಕ್ತ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

2-30 P. M.

ಸ್ವಾಮೀ, ಎರಡನೇ ದರ್ಜೆ ಗುಮಾಸ್ತರುಗಳ ಕೆಲಸವನ್ನು ಹಳ್ಳಿಗಾಡಿನಿಂದ ಬರುವ ಹುಡುಗರಿಗೆ ಕೊಡಲು ನಿಮ್ಮ ಸರಕಾರಕ್ಕೆ ಶಕ್ತಿ ಇಲ್ಲ. ಇದನ್ನು ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಒಪ್ಪಿಸಲಾಗಿದೆ ಮತ್ತು ಇಲ್ಲಿಗೆ ಅರ್ಜಿಗಳನ್ನು ಹಾಕಿ ಬಂದವರು ಇವರು ಮಾಡುವ ಟೆಸ್ಟ್‌ಗಳಲ್ಲಿ ಪಾಸಾಗಬೇಕೆಂಬ ನಿಯಮ ಮಾಡಿದ್ದಾರೆ. ಇದರಿಂದ ಯಾರಿಗೂ ಉಪಯೋಗವಾಗುತ್ತಿಲ್ಲ. ಇಲ್ಲಿ ನಾನು ಬಹು ಸಂಕಟದಿಂದ ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ಸಿದ್ದವೀರಪ್ಪನವರ ಕಡೆಗೆ ಇಬ್ಬರು ಹುಡುಗರ ಹೆಸರುಗಳನ್ನು ಕೊಡುತ್ತೇನೆ. ಅವರು ಧೈರ್ಯವಾಗಿ ಇವರಿಗೆ ಕೆಲಸಗಳನ್ನು ಕೊಟ್ಟರೆ ನಾನು ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈಗಿನ ಪಿ ಎಸ್. ಸಿ. ನಿಯಮಾವಳಿಗಳಂತೆ ಯಾರಿಗೂ ಕೆಲಸ ಕೊಡಲು ನಿಮಗೆ ಸಾಧ್ಯವಿಲ್ಲ. ಇಂತಹ ಒಂದು ಹೀನವಾದ ಪರಿಸ್ಥಿತಿ ಎರಡನೇ ದರ್ಜೆ ಗುಮಾಸ್ತರುಗಳ ನೇಮಕದಲ್ಲಿ ಆಗುತ್ತಿದೆ. ಸುಮಾರು ಐವತ್ತು ಸಾವಿರ ಹುಡುಗರು ಎಲ್ಲ ಕಡೆಯಿಂದಲೂ ಇಲ್ಲಗೆ ಬಂದರೆ ಅವರ ಖರ್ಚು ವೆಚ್ಚಗಳೇನಾದಾವು ಅದನ್ನು ಯಾರಾದರೂ ಗಮನಕ್ಕೆ ತೆಗೆದುಕೊಂಡಿದ್ದಾರೆಯೋ ? ಇಲ್ಲಿ ರಿಟನ್ ಟೆಸ್ಟ್ ಎಂದು ಮಾಡಿರುವುದರಿಂದ ಹಳ್ಳಿಗಾಡಿನ ಜನಕ್ಕೆ ಯಾವ ಪ್ರಯೋಜನವೂ ಆಗುವುದಿಲ್ಲ. ಆದುದರಿಂದ ಎರಡನೇ ದರ್ಜೆ ಗುಮಾಸ್ತರುಗಳ ನೇಮಕವನ್ನು ಇವರಿಂದ ಡಿಸ್ಟ್ರಿಕ್ಟ್ ಲೆವೆಲ್ ಕಮಿಟಿಗಳಿಗೇಕೆ ಕೊಡಬಾರದು

(ಶ್ರೀ ಹೆಚ್. ಡಿ. ದೇವೇಗೌಡ)

ಇದರಿಂದ ಹಳ್ಳಿಗಾಡಿನ ಕೆಲವು ಹುಡುಗರಿಗಾದರೂ ಕೆಲಸಗಳು ಸಿಗಬಹುದು. ಈಗೇನಾಗಿದೆ ಎಂದರೆ ಸಾವಿರಾರು ಹಳ್ಳಿಗಾಡಿನ ಹುಡುಗರು ಒಂದು ಕೆಲಸ ಸಿಗದೇ ನಿರಾಶರಾಗಿ ಸರಕಾರಕ್ಕೆ ಶಾಪ ಹಾಕಿ ಹೋಗುತ್ತಿದ್ದಾರೆ, ಇದಕ್ಕೆ ಇನ್ನು ಮುಂದೆ ಅವಕಾಶ ಕೊಡಬಾರದು ಎಂದು ಇಲ್ಲಿ ಸಲಹೆ ಮಾಡುತ್ತಿದ್ದೇನೆ. ಇದರಲ್ಲಿ ಇನ್ನೂ ಒಂದು ರೀತಿಯಾಗಿ ಮೆರಿಟೆಡ್ ಕ್ಲಾಸ್ ಎನ್ನುವ ಒಂದು ವರ್ಗ ಇರುತ್ತದೆ. ಇವರೆಲ್ಲಾ ಪಾಸಾಗಿ ಬರುವವರು ಮತ್ತು ಇನ್ನುಳಿದವರು ಪಾಸಾಗುವುದು ಕಷ್ಟ. ಇಂತಹ ಒಂದು ವರ್ಗಕ್ಕಾಗಿಯೇ ಇಲ್ಲಿ ನಿಯಮಗಳನ್ನು ಮಾಡಿದರೆ ಇತರ ಹುಡುಗರಿಗೆ ಹೇಗೆ ಅವಕಾಶಗಳು ಸಿಗಬೇಕು ? ಇವನ್ನು ಸರಕಾರ ಯೋಚನೆ ಮಾಡಬೇಕು, ಇದರಿಂದಾಗಿ ಇಲ್ಲಿ ಹೆಚ್ಚು ಅವ್ಯವಹಾರಗಳಿಗೆ ಅವಕಾಶವಾಗುತ್ತದೆ ಇದಕ್ಕೆ ಸರಕಾರ ಅವಕಾಶ ಕೊಡಬಾರದು. ಇದೂ ಅಲ್ಲದೆ ಇಲ್ಲಿ ಇನ್ನೂ ಒಂದು ತೊಂದರೆ ಇದೆ. ಟೆಸ್ಟ್‌ಗಳಿಗೆ ಕುಳಿತುಕೊಂಡ ಹುಡುಗರು ಬರೀ ಇಂಗ್ಲೀಷಿನಲ್ಲೇ ಉತ್ತರ ಕೊಡಬೇಕು ಎಂದು ಇದೆ. ಇದನ್ನು ರೀಜನಲ್ ಲ್ಯಾಂಗ್ವೇಜ್‌ನಲ್ಲಿರುವಂತೆ ಏಕೆ ಮಾಡಬಾರದು? ಹಳ್ಳಿಗಾಡಿನ ಹುಡುಗರು ಆಯಾ ರಾಜ್ಯದ ಭಾಷೆಯಲ್ಲಿ ಉತ್ತರ ಕೊಡಲು ಅವಕಾಶ ಕೊಟ್ಟರೆ ಇದರಿಂದ ಸ್ವಲ್ಪ ಮಟ್ಟಿನ ಅನುಕೂಲಗಳಾದರೂ ಸಿಗಬಹುದು. ಈಗ ಇಂಗ್ಲಿಷಿನಲ್ಲೇ ಬರೆಯಬೇಕೆಂದು ಒತ್ತಾಯ ಮಾಡುವುದು ಅಷ್ಟು ಸರಿಯಲ್ಲ. ಹಳ್ಳಿಗಾಡಿನಿಂದ ಬರುವ ಹುಡುಗರು, ಎಸ್.ಎಸ್.ಎಲ್.ಸಿ. ಪಾಸು ಮಾಡಿರುವವರು ಎರಡನೇ ದರ್ಜೆಯ ಗುಮಾಸ್ತರುಗಳ ಟೆಸ್ಟ್‌ಗೆ ಕೂತುಕೊಂಡಾಗ ಅವರಿಗೆ ರಾಜ್ಯದ ಭಾಷೆಯಲ್ಲೇ ಬರೆಯಲು ಅವಕಾಶ ಮಾಡಿಕೊಡಬೇಕು. ಮಹಾರಾಷ್ಟ್ರದಲ್ಲಿ ರೀಜನಲ್ ಲಾಂಗ್ವೇಜ್‌ನಲ್ಲಿ ಉತ್ತರ ಬರೆಯಲು ಅವಕಾಶ ಕೊಡಲಾಗಿದೆ. ಒರಿಸ್ಸಾದಲ್ಲಿ ಕೊಡಲಾಗಿದೆ. ಯು.ಪಿ ನಲ್ಲಿ ಕೊಡಲಾಗಿದೆ, ಪ್ರಾಯಶಃ ಇದನ್ನು ೧೯೬೫ ರಲ್ಲೇ ಮಾಡಿದರು ಎಂದು ನನಗೆ ನೆನಪು ಉಂಟು ಮತ್ತು ಒರಿಸ್ಸಾ ಹೈ ಕೋರ್ಟಿನಲ್ಲಿ ಇದರ ಬಗ್ಗೆ ಒಂದು ತೀರ್ಮಾನ ಕೂಡ ಆಗಿದೆ, ಅದರಂತೆ ಅಲ್ಲಿನ ಸರಕಾರ ಒಂದು ನಿರ್ಣಯ ಕೂಡ ಮಾಡಿದರು. ಆದುದರಿಂದ ನಾನು ಈ ಸರಕಾರಕ್ಕೆ ಸಲಹೆ ಮಾಡುವುದು ಇಂದು ಜಿ.ಎ.ಡಿ ಯವರು ಕೊಡುವ ಇಂತಹ ಸಲಹೆಗಳನ್ನು ಕಿತ್ತುಹಾಕುವ ಧೈರ್ಯ ಅಥವಾ ಶಕ್ತಿ ಯಾವ ಮಂತ್ರಿಗಳಿಗಾಗಲೀ ಇಲ್ಲ ಎಂದು ಹೇಳಬೇಕಾಗಿದೆ. ಇನ್ನು ಮುಂದಾದರೂ ಇಂತಹ ಸಲಹೆಗಳಿಗೆ ಗಮನ ಕೊಡದೆ ಸರಕಾರ ತೀವ್ರವಾಗಿ ಪರಿಶೀಲನೆ ಮಾಡಿ ಇದರ ಬಗ್ಗೆ ಸೂಕ್ತವಾದ ನಿರ್ಣಯ ಮಾಡಿ ಸರಿಯಾದ ಹುಕುಂ ಸರ್ಕಾರ ಮಾಡಬೇಕೆಂದು ಸಲಹೆ ಮಾಡುತ್ತೇನೆ, ಇದರ ಬಗ್ಗೆ ಕಾಲವಿಳಂಬ ಮಾಡಬಾರದು.

ಶ್ರೀ ಬಾಪುಗೌಡ ರಾಯಪ್ಪ (ಶಹಪುರ) :—ಪಿ.ಎಸ್.ಸಿ. ಯಲ್ಲಿ ಎರಡನೇ ದರ್ಜೆ ಕ್ಲಾರ್ಕುಗಳಿಗೆ ಕೊಟ್ಟಿರುವ ಟೆಸ್ಟ್ ಪೇಪರ್‌ನಲ್ಲಿ ಸಿಮ್ಲಾ ಪ್ಯಾಕ್ಟ್ ಬಗ್ಗೆ ಬರೆಯಿರಿ ಎಂದು ಕೇಳಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ :—ಹಳ್ಳಿಗಾಡಿನಿಂದ ಬರುವ ಹುಡುಗರಿಗೆ ಇಂತಹ ಪರೀಕ್ಷೆಗಳಲ್ಲಿ ಕುಳಿತು ಬರೆಯುವ ಶಕ್ತಿ ಇರುವುದಿಲ್ಲ. ಇಂದು ಡಿಗ್ರಿ ತೆಗೆದುಕೊಂಡವರಿಗೆ ಸರಿಯಾಗಿ ಬರೆಯಲು ಬರುವುದಿಲ್ಲ. ಅವರು ಬರೆಯುವ ಕಾಗದಗಳಲ್ಲಿ ಅನೇಕ ತಪ್ಪುಗಳಿರುತ್ತವೆ. ಇಂಗ್ಲೀಷಿನಲ್ಲಿ ಬರೆಯುವುದನು ತಪ್ಪಿಸಿ ರೀಜನಲ್ ಲ್ಯಾಂಗ್ವೇಜ್‌ನಲ್ಲೇ ಉತ್ತರ ಬರೆಯುವ ಅವಕಾಶವನ್ನು ಕೊಡಬೇಕು. ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಕೂಡ ಹಿಂದಿಯಲ್ಲಿ ಉತ್ತರ ಬರೆಯಲು ಅವಕಾಶಗಳನ್ನು ಕೊಟ್ಟಿದ್ದಾರೆ. ಇಲ್ಲಿ ನಮ್ಮ ರಾಜ್ಯದ ಪಿ.ಎಸ್.ಸಿ. ಯವರು ರೀಜನಲ್ ಲ್ಯಾಂಗ್ವೇಜ್‌ನಲ್ಲಿ ಉತ್ತರ ಬರೆಯಲು ಏಕೆ ಅವಕಾಶ ಕೊಡಬಾರದು ?

ಇನ್ನು ಮುಂದೆ ಪಿ.ಎಸ್.ಸಿ. ಯವರು ರಿಟನ್ ಟೆಸ್ಟ್ ಎಂದು ಮಾಡುವುದೇ ಬೇಡ ಇದಕ್ಕೆ ಬದಲು ಎರಡನೇ ದರ್ಜೆ ಗುಮಾಸ್ತರುಗಳ ನೇಮಕಗಳನ್ನೆಲ್ಲಾ ಆಯಾ ಡಿಸ್ಟ್ರಿಕ್ಟ್ ಲೆವಲ್ ರೆಕ್ರೂಟಿಂಗ್ ಕಮಿಟಿಗೆ ವಹಿಸಿದರೆ ಸ್ವಲ್ಪವಾದರೂ ಹಳ್ಳಿಗಾಡಿನ ಹುಡುಗರಿಗೆ ಅನುಕೂಲವಾಗುತ್ತದೆ. ಇದರ ಕಡೆಗೆ ಸರಕಾರ ತೀವ್ರವಾಗಿ ಗಮನ ಕೊಡಬೇಕು ಮತ್ತು ಸೂಕ್ತವಾದ ಒಂದು ನಿರ್ಣಯವನ್ನು ಸರಕಾರ ಬೇಗ ತೆಗೆದುಕೊಳ್ಳುವುದು ಅಗತ್ಯ ಎಂದು ಇಲ್ಲಿ ಹೇಳುತ್ತೇನೆ. ಇದರ ಜೊತೆಗೆ ಸದ್ಯದಲ್ಲಿ ಟೆಸ್ಟ್ ಪತ್ರಿಕೆಗಳನ್ನು ಬರೆಯುವಾಗ ರೀಜನಲ್ ಲಾಂಗ್ವೇಜ್‌ನಲ್ಲಿ ಬರೆಯಲು ಅವಕಾಶ ಮಾಡಿಕೊಡಬೇಕು. ಇದರ ಬಗ್ಗೆ ಕೂಡ ಒಂದು ನಿರ್ಣಯ ಸರಕಾರ ಕೈಗೊಳ್ಳುವುದು ಅವಶ್ಯಕ ಎಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ಗವರ್ನರವರ ಆಡಳಿತದಲ್ಲಿ ಕೆಲವು ನಿರ್ಣಯಗಳು ಆಗಿವೆ. ಇದು ಒಂದು ವರಪ್ರಸಾದವೋ ಏನೋ, ಇದರಿಂದ ಹಳ್ಳಿಗಾಡಿನ ಮಕ್ಕಳಿಗೆ ಯಾವ ಅನುಕೂಲವೂ ಆಗಲಿಲ್ಲ. ಇಂತಹ ವಿಚಾರಗಳ ಬಗ್ಗೆ ಸರಕಾರ ಗಮನ ಕೊಟ್ಟು ಸರಿಯಾದ ಒಂದು ನಿರ್ಣಯ ತೆಗೆದುಕೊಳ್ಳಬೇಕಾಗಿದೆ. ಬಿ.ಡಿ.ಓ. ಗಳ ಸೆಲೆಕ್ಷನ್ ನಡೆಯಿತು. ಇದರ ಸೆಲೆಕ್ಷನ್ ಕಮಿಟಿ ಮುಂದೆ ಹುಡುಗರು ಬಂದಾಗ ಅವರೇನೂ ಮಾತಾಡದೆ ಇದ್ದಂತಹ ಒಂದು ಪರಿಸ್ಥಿತಿ ಬಂದಿತ್ತು ಎಂದು ಕೇಳಿದ್ದೇವು. ಇದರಲ್ಲಿ ಸುಮಾರು ಮೂವತ್ತು ಅಂಕಗಳನ್ನು ಸೇರಿಸಿದರೂ ಇವರನ್ನು ಸೆಲೆಕ್ಟ್ ಮಾಡಲಾಗಲಿಲ್ಲ, ಇಂತಹ ಬಿಡಿಓಗಳನ್ನು ನೇಮಕ ಮಾಡಿ ಹಳ್ಳಿಗಳಿಗೆ ಕಳುಹಿಸಿದರೆ

ಅವರು ಹಳ್ಳಿಯ ಜನರ ಮುಂದೆ ಹೇಗೆ ತಾನೆ ಮಾತಾಡಿ ಅವರಿಗಿರುವ ಕಷ್ಟಗಳನ್ನು ಪರಿಹರಿಸುತ್ತಾರೆ ? ಇದರ ಕಡೆಗೆ ಸರಕಾರ ಗಮನ ಕೊಟ್ಟು ಇಂತಹ ಎಕ್ಸಿಕ್ಯುಟೀವ್ ಜಾಬ್ಸ್‌ಗಳ ಬಗ್ಗೆ ಇರುವ ಅಡ್ಡಿ ಅತಂಕಗಳನ್ನು ತೆಗೆಯಲು ಪ್ರಯತ್ನ ಮಾಡಬೇಕು. ನಾನಾಗಲೇ ಹೇಳಿದಂತೆ ಸಬ್ ಇನ್ಸ್‌ಪೆಕ್ಟರವರ ನೇಮಕಗಳು ಹಾಗೂ ಫಾರೆಸ್ಟ್ ರೇಂಜರುಗಳ ನೇಮಕಗಳನ್ನು ಡಿಪಾರ್ಟ್‌ಮೆಂಟಿನವರು ಮಾಡುವುದನ್ನು ತಪ್ಪಿಸಿ ಬಿಡಬೇಕು ; ಇದೇ ರೀತಿ ಇತರ ಕೆಲವು ರಾಜ್ಯಗಳಲ್ಲಿ ಕೂಡ ಮಾಡಿದ್ದಾರೆ. ಕೇರಳದಲ್ಲಿ ತೆಗೆದಿದ್ದಾರೆ. ಎರಡನೇ ದರ್ಜೆ ಗುಮಾಸ್ತರುಗಳ ನೇಮಕಗಳನ್ನು ಈಗಿರುವ ನಿಯಮಗಳಂತೆ ಪಿಎಸ್‌ಸಿಗೆ ಕೊಡುವುದರಿಂದ ಹಳ್ಳಿಗಾಡಿನ ಹುಡುಗರಿಗೆ ಅನುಕೂಲಗಳು ಸಿಗುವುದಿಲ್ಲ. ಇದಕ್ಕಾಗಿ ಇದರ ಬಗ್ಗೆ ಸರಕಾರ ಪುನರಾಲೋಚನೆ ಮಾಡುವುದು ಅಗತ್ಯ ಎಂದು ಹೇಳುತ್ತಿದ್ದೇನೆ. ಇದನ್ನು ಸರಿ ಮಾಡಲು ಸರಕಾರಕ್ಕೆ ಸಾಧ್ಯವಾಗುತ್ತದೆ. ಕೇರಳದಲ್ಲಿ ಕೂಡ ಎಂ.ಎಸ್ ಆರ್ ಟಿ.ಸಿ. ಎಂ.ಎಸ್.ಇ.ಬಿ. ಹಾಗೂ ಇನ್ನಿತರ ಲೋಕಲ್ ಬಾಡೀಸ್‌ಗಳಲ್ಲಿ ಆಯಾ ಇಲಾಖೆಗಳವರೇ ನೇಮಕ ಮಾಡಲು ಅವಕಾಶಗಳನ್ನು ಕೊಡಲಾಗಿದೆ. ಆ ರೀತಿ ಮಾಡುವುದರಿಂದ ಸ್ವಲ್ಪ ಮಟ್ಟಿಗಾದರೂ ಈಗ ಆಗುತ್ತಿರುವ ಕಷ್ಟಗಳನ್ನು ತಪ್ಪಿಸಲು ಅನುಕೂಲವಾಗುತ್ತದೆ. ಇಂದು ಕೇರಳದಲ್ಲಿ ಎಜ್ಯುಕೇಷನ್ ಪರ್ಸೆಂಟೇಜು ಶೇಕಡಾ ೭೫ ರಷ್ಟು ಇದೆ. ಅಲ್ಲಿನ ಜನರು ಹೆಚ್ಚು ಪ್ರಜ್ಞಾವಂತರಾಗಿದ್ದಾರೆ ಆದರಿಂದ ಅಲ್ಲಿ ಸರಿಯಾದ ನಿರ್ಣಯ ತೆಗೆದುಕೊಂಡಿದ್ದಾರೆ ಎಂದು ಹೇಳಬಹುದು ಆದುದರಿಂದ ಸರಕಾರ ಈಗ ಆಗುತ್ತಿರುವ ಕಷ್ಟಗಳನ್ನು ನಿವಾರಣೆ ಮಾಡಲು ತಕ್ಕ ಕ್ರಮ ತೆಗೆದುಕೊಳ್ಳಬೇಕು. ಮತ್ತು ನಾವು ಇಲ್ಲಿ ಪಿ ಎಸ್.ಸಿ ರಿಪೋರ್ಟನ್ನು ಇಲ್ಲಿ ಏಕೆ ಚರ್ಚೆ ಮಾಡಬೇಕೆಂದರೆ ಇದರಲ್ಲಿರುವ ಲೋಪದೋಷಗಳನ್ನು ಸರಕಾರಕ್ಕೆ ತಿಳಿಸಿ ಅದನ್ನು ಮಾರ್ಪಾಡು ಮಾಡಲು ಸಲಹೆ ಕೊಡುತ್ತಿದ್ದೇವೆ. ಇದರಲ್ಲಿರುವ ಹಳೆಯ ವರದಿಗಳ ಬಗ್ಗೆ ಹೆಚ್ಚು ಚರ್ಚೆಗೆ ಹೋಗುತ್ತಿಲ್ಲ, ಇದರಲ್ಲಿರುವ ನ್ಯೂನತೆಗಳನ್ನು ಸರಕಾರ ಬೇಗನೆ ಪರಿಹರಿಸಬೇಕು. ಇನ್ನು ಬ್ಯಾಕ್‌ವರ್ಡ್‌ಕ್ಲಾಸ್ ಹಾಗೂ ಷೆಡ್ಯೂಲ ಕ್ಯಾಸ್ಟು ವರ್ಗದ ಹುಡುಗರಿಗೂ ಓಪನ್ ಕಾಂಪಿಟಿಷನ್‌ನಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಇದೆ. ಇದಲ್ಲದೆ ಇವರಿಗೆ ಬೇರೆ ರಿಸರ್ವೇಷನ್ ಬೇರೆ ಕೂಡ ಇದೆ. ಶೇಕಡಾ ೧೮ ಅಥವಾ ೨೫ ರವರೆಗೆ ಎಂದೋ ಏನೋ ನಿಗದಿಯಾಗಿದೆ. ಆದರೆ ಇದರಲ್ಲಿ ಯಾರಾದರೂ ಚೆನ್ನಾಗಿ ಪಾಸಾದರೆ ಅಂತಹವರನ್ನು ನೇಮಕ ಮಾಡುವಾಗ ಇವರಿಗೆ ಕೊಟ್ಟಿರುವ ರಿಸರ್ವೇಷನ್ ಕೋಟಾ ಸಂಖ್ಯೆಯಲ್ಲಿ ಕಡಿಮೆ ಮಾಡುತ್ತಾರೆ. ಈ ರೀತಿಯಾಗಬಾರದು. ಯಾರೋ ಒಬ್ಬಗೂ ಆ ರೀತಿ ಬರಬಹುದು. ಆದರೆ ರಿಸರ್ವೇಷನ್ ಕೋಟಾವನ್ನು ಕಡಿಮೆ ಮಾಡಬಾರದು. ಇದೇ ರೀತಿ ಇತರ ರಾಜ್ಯಗಳಲ್ಲಿ ಇದೆ. ಕೇರಳದಲ್ಲಿದೆ, ಮದ್ರಾಸ್‌ನಲ್ಲಿದೆ. ಇಲ್ಲಿರುವ ಕೋಟಾ ಸಂಖ್ಯೆಯನ್ನು ಕಡಿಮೆ ಮಾಡುತಿಲ್ಲ. ಆದುದರಿಂದ ನಾನು ಸರಕಾರಕ್ಕೆ ಹೇಳುವುದು ನಿಮ್ಮ ಜಿ.ಎ.ಡಿ. ಯವರು ಕೊಡುವ ಸಲಹೆಗಳಿಗೆ ಹೆಚ್ಚು ಬೆಲೆ ಕೊಡಬಾರದು ಎಂದು ಮತ್ತು ಅಂತಶಕ್ತಿಯುಳ್ಳ ನಾಯಕರು ಇಂದು ಸರಕಾರದಲ್ಲಿ ಇಲ್ಲ ಎಂದು ಹೇಳಬೇಕಾಗಿದೆ. ಜಾತಿಯ ಮೇಲೆ ನೇಮಕಗಳನ್ನು ಮಾಡಲು ಹೋದರೆ ಇತರ ವರ್ಗದವರಿಗೆ ದ್ರೋಹ ಮಾಡಿದಂತಾಗುತ್ತದೆ. ಆದುದರಿಂದ ಸರಕಾರ ನಿರ್ಣಯ ತೆಗೆದುಕೊಳ್ಳುವಾಗ ಕೆಳವರ್ಗದವರಿಗೆ ಇರುವ ಅವಕಾಶಗಳನ್ನು ತೆಗೆಯದೇ ಅದು ಮುಂದುವರಿಯುವಂತೆ ಮಾಡಬೇಕು. ಹಾಗೆ ಇಂತಹ ನಿಮ್ನ ವರ್ಗಗಳವರ ಕಡೆಗೆ ತೊಂದರೆ ಮಾಡಬಾರದು ಮತ್ತು ಇವರಿಗೆ ಇರುವ ನಿಯಮಗಳಂತೆ ಎಲ್ಲ ಅನುಕೂಲಗಳನ್ನೂ ದೊರಕಿಸಿಕೊಡಲು ಯತ್ನ ಮಾಡಬೇಕು.

ಅದಕ್ಕೆ ಕಾನೂನಿನ ಅಡ್ಡಿ ಇದೆ, ಕಾನ್‌ಸ್ಟಿಟ್ಯೂಷನ್ ಅಡ್ಡಿ ಬರುತ್ತದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಆ ರೀತಿ ಏನಾದರೂ ಅಡ್ಡಿ ಬಂದರೆ ಲಾ ಡಿಪಾರ್ಟ್‌ಮೆಂಟ್‌ನವರ ಅಭಿಪ್ರಾಯವನ್ನಾಗಲೀ, ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯವನ್ನಾಗಲೀ ಪಡೆದುಕೊಳ್ಳುವುದು ಒಳ್ಳೆಯದು. ನಿಮ್ನವರ್ಗದವರು ಏನಾದರೂ ಓಪನ್ ಕಾಂಪಿಟಿಷನ್‌ನಲ್ಲಿ ಸೆಲೆಕ್ಟ್ ಆದರೆ ಅದನ್ನು ೧೮ ಪರ್ಸೆಂಟ್ ರಿಜರ್ವೇಷನ್‌ನಲ್ಲಿ ಕಳೆಯುವುದು ಸರಿಯಲ್ಲ, ಈ ಪದ್ಧತಿಯನ್ನು ಮುಂದುವರಿಸುವುದು ಒಳ್ಳೆಯದಲ್ಲ ಎಂದು ಹೇಳುತ್ತೇನೆ. ಪಿ.ಎಸ್.ಸಿ. ಅವರು ಸೆಲೆಕ್ಟ್ ಮಾಡಿದ ಪಟ್ಟಿಯನ್ನು ಸಂಬಂಧಪಟ್ಟ ಇಲಾಖೆಗೆ ಕಳಿಸಿಕೊಡುತ್ತಾರೆ. ಅದಕ್ಕೆ ಒಂದು ವರ್ಷ ಜೀವದಾನ ಇರುತ್ತದೆ. ಆ ಪಟ್ಟಿಯಲ್ಲಿ ತಮಗೆ ಬೇಕಾದವರು ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ಕೆಲವರನ್ನು ಮಾತ್ರ ಕೆಲಸಕ್ಕೆ ತೆಗೆದುಕೊಂಡು, ಬಾಕಿಯವರನ್ನು ಕೆಲಸಕ್ಕೇ ತೆಗೆದುಕೊಳ್ಳದೆ ಆ ಪಟ್ಟಿಯನ್ನು ಲ್ಯಾಪ್ಸ್ ಮಾಡಿ ಮತ್ತೆ ಸೆಲೆಕ್ಟ್ ಮಾಡುವಂತೆ ಪಿ.ಎಸ್.ಸಿ. ಅವರಿಗೆ ತಿಳಿಸತಕ್ಕಂಥ ಒಂದು ಪದ್ಧತಿ ನಡೆಯುತ್ತಿದೆ. ಇದರಿಂದ ಆ ಪಟ್ಟಿಯ ಕೊನೆಯಲ್ಲಿರತಕ್ಕಂಥ ಹಿಂದುಳಿದ ವರ್ಗದ ಜನರಿಗೆ ಕೆಲಸ ಸಿಗದೆ ತೊಂದರೆಯಾಗುತ್ತಿದೆ. ಇವರಿಗೆ ಕಡಿಮೆ ಅಂಕಗಳು ಬಂದಿರುವುದರಿಂದ ಯಾವಾಗಲೂ ಪಟ್ಟಿಯ ಕೊನೆಯಲ್ಲಿರುತ್ತಾರೆ. ಹೆಚ್ಚಿನ ನಂಬರ್ ಅಂದರೆ ರ್‍ಯಾಂಕ್ ಬಂದಿರುವವರಿಗೆ ಕೆಲಸ ಸಿಕ್ಕಿ ಹಿಂದುಳಿದ ವರ್ಗದವರಿಗೆ ಕೆಲಸ ಸಿಗುತ್ತಿಲ್ಲ. ಕೇವಲ ಮುಂದುವರಿದ ಜನಾಂಗದವರಿಗೆ ಕೆಲಸ ಸಿಗುತ್ತಿರುವುದನ್ನು ತಪ್ಪಿಸಲು ರೊಟೇಷನ್ ಸಿಸ್ಟಮ್‌ನ್ನು ಅನುಸರಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ರೀತಿ ಮಾಡದಿದ್ದರೆ ರಿಜರ್ವೇಷನು ಏನು ಇದೆ ಅದು ಕೇವಲ ನಾಟಕೀಯವಾಗುತ್ತದೆಯೇ ಹೊರತು ಅದರ ಒಂದು ಉದ್ದೇಶ ಸಾಧನೆಯಾಗುವುದಿಲ್ಲವೆಂದು ಹೇಳುತ್ತೇನೆ. ಈಗಿನ ಪದ್ಧತಿಯಿಂದ ಹಳ್ಳಿ

ಶ್ರೀ (ಎಚ್. ಡಿ. ದೇವೇಗೌಡ)

ಗಾಡಿನಿಂದ ಬರತಕ್ಕವರಿಗೆ ಬಹಳ ತೊಂದರೆಯಾಗುತ್ತಿದೆ ಎಂಬ ಮಾತನ್ನು ಕಳಕಳಿಯಿಂದ ಹೇಳುತ್ತಿದ್ದೇನೆ. ಇನ್ನು ಮುಂದಾದರೂ ಮೆರಿಟ್ ಸೀಂಕಿನಲ್ಲಿ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಈಗಿನ ಸರ್ಕಾರದವರು ಬಡವರನ್ನು ಹಿಂದುಳಿದ ವರ್ಗದವರನ್ನು ಮುಂದೆ ತರುತ್ತೇವೆ ಎಂದು ಏನು ಹೇಳುತ್ತಿದ್ದಾರೆ, ಅದು ಕೇವಲ ಘೋಷಣೆಯಲ್ಲಿಯೇ ಉಳಿಯುವಂತಾಗುತ್ತದೆಂದು ಹೇಳುತ್ತೇನೆ. ಈಗಾಗಲೇ ಸೈಕಲಾಜಿಕಲ್ ಅಟ್‌ಮಾಸ್ಫಿಯರ್ ಬರುತ್ತಿದೆ. ಏಕೆಂದರೆ ಸರ್ಕಾರದವರು ಬಡವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಬೇರೆ ಮೇಲ್ ನಿವೇಶನ ಹಂಚುವುದಕ್ಕೆ ಹೊರಟಿದ್ದಾರೆ. ಆ ಮೂಲಕವಾಗಿಯೇ ಸಮಾಜವಾದವನ್ನು ನಿರ್ಮಾಣ ಮಾಡುವುದಕ್ಕೆ ಹೊರಟಿದ್ದಾರೆ. ಆ ರೀತಿ ಹೊರಟಿರುವಾಗ ಈ ಸೆಲೆಕ್ಷನ್ ಆಗುತ್ತಿರುವ ಅನ್ಯಾಯಗಳನ್ನು ಸಹ ಸರಿಪಡಿಸಿ ಬಡವರಿಗೆ ಅನುಕೂಲ ಮಾಡಿಕೊಡಬೇಕೆಂದು, ಅದಕ್ಕಾಗಿ ಹೆಚ್ಚು ಶ್ರಮಿಸಬೇಕೆಂದು ಸರ್ಕಾರದವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ಅಪಾಯಿಂಟ್ ಮಾಡಿಕೊಳ್ಳುವ ಬಗ್ಗೆ ಇರುವ ಕೇಡರ್ ಅಂಡ್ ರೆಕ್ರೂಟ್‌ಮೆಂಟನ್ನು ಆಗಾಗ ಬದಲಾವಣೆ ಮಾಡುವುದು ಸಹ ನಡೆಯುತ್ತಿದೆ. ಒಂದೊಂದು ಮಂತ್ರಿಮಂಡಲ ಬದಲಾವಣೆಯಾದಂತೆ ಇದು ಸಹ ಬದಲಾವಣೆಯಾಗುತ್ತಿರುತ್ತದೆ. ತಮಗೆ ಬೇಕಾದ ಹಾಗೆ, ವಶೀಲಿಬಾಜಿಗೆ ಒಳಗಾಗಿ ಬದಲಾವಣೆ ಮಾಡತಕ್ಕಂಥದ್ದು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಭ್ರಷ್ಟಾಚಾರದಿಂದ ದೂರವಿರುವ ಈ ಸರ್ಕಾರ, ಮತ್ತು ಬಹಳ ಉತ್ತಮ ಮಟ್ಟದ ಸರ್ಕಾರವೆಂದು ಹೇಳಿಕೊಳ್ಳುತ್ತಿರುವ ಈ ಸರ್ಕಾರವಾದರೂ ಸಹ ಇನ್ನು ಮುಂದೆ ಇವಕ್ಕೆಲ್ಲಾ ಅವಕಾಶ ಕೊಡುವುದಿಲ್ಲವೆಂದು ತಿಳಿಯುತ್ತೇನೆ. ಈ ಸರ್ಕಾರದವರು ಅಧಿಕಾರಕ್ಕೆ ಬಂದು ಇನ್ನೂ ನಾಲ್ಕು ತಿಂಗಳಾಗಿರುವುದರಿಂದ ಈ ಸರ್ಕಾರದ ಮೇಲೆ ನಾನು ಯಾವ ಅಪಾದನೆಯನ್ನು ಈಗ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನು ಮುಂದೆ ಯಾವ ರೀತಿ ನಡೆದುಕೊಳ್ಳುತ್ತಾರೆಂಬುದನ್ನು ನಾವು ನೋಡಬೇಕಾಗಿದೆ. ಇಂದು ಬೆಳಿಗ್ಗೆ ತಾನೆ ಪ್ರಶ್ನೋತ್ತರ ಕಾಲದಲ್ಲಿ ಮಾನ್ಯ ರಾಮಸ್ವಾಮಿಯವರ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ, ಡೆಪ್ಯುಟಿ ರಿಜಿಸ್ಟ್ರಾರ್ ಪೋಸ್ಟ್‌ಗೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಪೋಸ್ಟಿನಿಂದ ಪ್ರಮೋಷನ್ ಕೊಡಬೇಕಾದರೆ ಕಾನ್ಫಿಡೆನ್ಷಿಯಲ್ ರಿಪೋರ್ಟ್ ನೋಡಲಾಗುತ್ತದೆ ಎಂದು ಮಂತ್ರಿಗಳು ಉತ್ತರ ಕೊಟ್ಟರು. ಮಾನ್ಯ ಮುಖ್ಯ ಮಂತ್ರಿಗಳು ಈಗ ಸಭೆಯಲ್ಲಿ ಇದ್ದಾರೆ. ಈ ಕಾನ್ಫಿಡೆನ್ಷಿಯಲ್ ರಿಪೋರ್ಟ್ ಯಾವ ರೀತಿ ತಯಾರಾಗುತ್ತದೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳಿಗೆ ಅನುಭವ ಕಡಿಮೆ ಎಂದು ಕಾಣುತ್ತದೆ. ಇಂದು ಕೆಲಸದ ಆಧಾರದ ಮೇಲೆ ಇದು ತಯಾರಾಗದೆ, ಫಾರಿಸ್ ಬಾಟಲ್‌ನ ಆಧಾರದ ಮೇಲೆ ಕಾನ್ಫಿಡೆನ್ಷಿಯಲ್ ರಿಪೋರ್ಟ್ ತಯಾರು ಮಾಡುವ ಬಗ್ಗೆ ಹೊಸ ಪದ್ಧತಿಯನ್ನು ಏನಾದರೂ ಈಗಿನ ಸರ್ಕಾರದವರು ಜಾರಿಗೆ ತರುವುದಾದರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. ನಮಗೆ ಗೊತ್ತಿರುವಂತೆ ಪಿ.ಎ.ಡಿ. ಯಲ್ಲಿರತಕ್ಕಂಥ ಉನ್ನತ ಅಧಿಕಾರಿಗಳು ಎಲ್ಲರೂ ಅಲ್ಲದಿದ್ದರೂ ಕೆಲವು ಜನ ಅಧಿಕಾರಿಗಳು ಈ ವಿಷಯದಲ್ಲಿ ಹೆಚ್ಚು ಪಾಪದ ಕೆಲಸ ಮಾಡುತ್ತಿದ್ದಾರೆ. ಮೆಸಾಕರ್ ಮಾಡುತ್ತಿದ್ದಾರೆ. ಕಟುಕನಿಗಿಂತಲೂ ಹೆಚ್ಚು ಪಾಪದ ಕೆಲಸ ಮಾಡುತ್ತಿದ್ದಾರೆ. ಅವರೆಲ್ಲಾ ಒಳ್ಳೆಯವರೆಂದು ಮಂತ್ರಿಗಳು ತಿಳಿದುಕೊಂಡಿರಬಹುದು. ಆದರೆ ಅವರು ಕಾನ್ಫಿಡೆನ್ಷಿಯಲ್ ರಿಪೋರ್ಟ್ ತಯಾರು ಮಾಡುವ ವಿಚಾರದಲ್ಲಿ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಕೆಲವು ವರ್ಗದವರನ್ನು ಅದುಮಿಡುತ್ತಿದ್ದಾರೆ. ಈ ರೀತಿ ಅದುಮಿಡುವ ಕೆಲಸವನ್ನು ಉನ್ನತ ಅಧಿಕಾರಿಗಳು ಕೈಬಿಡಬೇಕು. ಇಲ್ಲದಿದ್ದರೆ ಒಂದಲ್ಲ ಒಂದು ದಿನ ಈ ರೀತಿ ಸಂಕಟಕ್ಕೆ ಒಳಗಾದವರು ಎಚ್ಚೆತ್ತಾಗ ಅಸ್ಫೋಟನೆಯಾಗುತ್ತದೆ. ಇದು ಖಂಡಿತವಾದ ಮಾತು. ಈ ಕಾರಣದಿಂದ ನಾನು ಇದುವರೆಗೆ ಏನೇನು ಸಮಸ್ಯೆಗಳನ್ನು ಪ್ರಸ್ತಾಪ ಮಾಡಿದ್ದೇನೆ ಅವುಗಳೆಲ್ಲವನ್ನೂ ಬಗೆಹರಿಸುವುದಕ್ಕೆ ಈಗಿನ ಹೊಸ ನಾಯಕತ್ವದಲ್ಲಿ ಪ್ರಯತ್ನ ಮಾಡುತ್ತಾರೆಂದು ನಂಬಿದ್ದೇನೆ. ನಾನೇನು ಜಾತೀವಾದಿ ಅಲ್ಲ, ಆದರೂ ಈಗ ನಡೆಯುತ್ತಿರುವ ಅನ್ಯಾಯದ ಬಗ್ಗೆ ಹೇಳುವಾಗ ಇದನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ನಾನು ಜಾತಿ ಬಗ್ಗೆ ಹೇಳಿದರೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಕೋಪ ಬರುತ್ತದೆ. ನಮ್ಮ ರಾಜ್ಯದಲ್ಲಿರತಕ್ಕಂಥ ಐ.ಎ.ಎಸ್. ಅಧಿಕಾರಿಗಳ ಪೈಕಿ ಯಾವ ಯಾವ ಜನಾಂಗದವರು ಎಷ್ಟೆಷ್ಟು ಜನ ಇದ್ದಾರೆಂದು ಕೇಳಿದ್ದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ ಒಂದು ಜನಾಂಗದವರು ನಾಲ್ಕೈದು ಜನರು, ಮತ್ತೊಂದು ಜನಾಂಗದವರು ೭-೮ ಜನರು ಮಾತ್ರ ಇದ್ದಾರೆಂದು ಸೌಜನ್ಯ ತೋರಿಸಿ ಒಪ್ಪಿಕೊಂಡರು. ಒಂದು ಜನಾಂಗದವರು, ಮತ್ತೊಂದು ಜನಾಂಗದವರು ಎಂದರೆ ಒಕ್ಕಲಿಗರು ಮತ್ತು ಲಿಂಗಾಯಿತರು. ಇವರನ್ನು ಆಯ್ಕೆ ಮಾಡುವವರು ನಾವಲ್ಲ. ಯು.ಪಿ.ಎಸ್.ಸಿ. ಅವರು ಎಂದು ಸಹ ಅವರು ಹೇಳಿದರು. ಆದರೆ ಇವರೆಲ್ಲಾ ಸೆಲೆಕ್ಷನ್ ಮೇಲೆ ಆಯ್ಕೆಯಾದವರಲ್ಲ, ಪ್ರಮೋಷನ್ ಕೋಟಾದಿಂದ ಬಂದವರು ಸಹ ಇದ್ದಾರೆ. ಐ.ಎ.ಎಸ್. ಅಧಿಕಾರಿಗಳ ಆಯ್ಕೆ ವಿಚಾರವನ್ನು ಪಾರ್ಲಿಮೆಂಟ್‌ನಲ್ಲಿ ಚರ್ಚೆ ಮಾಡಬೇಕಾಗುತ್ತದೆಂದು ಕಾಣುತ್ತದೆ. ಈ ಯು.ಪಿ.ಎಸ್.ಸಿ. ಯಲ್ಲಿ ಇರತಕ್ಕಂಥ ಸದಸ್ಯರುಗಳು ಯು.ಪಿ., ಮತ್ತು ವೆಸ್ಟ್‌ಬೆಂಗಾಲ್ ಕಡೆಯವರು ಆದ್ದರಿಂದ ಇಲ್ಲಿ ಆಯ್ಕೆ ಮಾಡುವಲ್ಲಿ ಏನು ಪ್ರಾದೇಶಿಕ

ತಾರತಮ್ಯ ಮತ್ತು ಅನ್ಯಾಯಗಳಾಗುತ್ತಿವೆ, ಅವುಗಳನ್ನು ತಡೆಗಟ್ಟುವಂತೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೂಲಕ ಅವರಿಗೆ ತಿಳಿಸಬೇಕಾಗುತ್ತದೆ. ಆದರೆ ಕೇಂದ್ರ ಸರ್ಕಾರದ ಲೀಡರ್ಸ್‌ನ್ನು ಮೇಲೆ ಹಾಕಿ ಕೊಳ್ಳುವುದಕ್ಕೆ, ಅವರ ಮನಸ್ಸನ್ನು ನೋಯಿಸುವುದಕ್ಕೆ ಇವರಾರು ತಯಾರಿಲ್ಲ. ತಮ್ಮ ಸ್ಥಾನವನ್ನು ಉಳಿಸಿಕೊಳ್ಳಲು, ಮಂತ್ರಿ ಸ್ಥಾನವನ್ನು ಉಳಿಸಿಕೊಳ್ಳಲು, ಗೂಟದ ಕಾರನ್ನು ಉಳಿಸಿ ಕೊಳ್ಳಲು. ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡದಿರುವುದು ಸರಿಯಲ್ಲ. ನನಗೇನೂ ಗೂಟದ ಕಾರಿನ ಆಶೆ ಇಲ್ಲ. ಆದರೆ ತಾವು ಅಧಿಕಾರವನ್ನು ಉಳಿಸಿಕೊಳ್ಳಲು, ಹಿಂದುಳಿದ ವರ್ಗದವರಿಗೆ ಆಗುತ್ತಿರುವ ಅನ್ಯಾಯವನ್ನು ಕೇಂದ್ರ ಸರ್ಕಾರದ ಮೂಲಕ ತಡೆಗಟ್ಟುವುದಕ್ಕೆ ಪ್ರಯತ್ನ ಮಾಡದಿದ್ದರೆ ಮುಂದಿನ ಪೀಳಿಗೆ ನಿಮ್ಮನ್ನು ಶಪಿಸುತ್ತದೆ ಎಂಬುದನ್ನು ತಾವು ಮರೆಯಬಾರದು. ಈಗ ಮುಖ್ಯ ಮಂತ್ರಿಗಳು ಇಲ್ಲ. ಅವರದ್ದು ಡೈನಾಮಿಕ್ ಲೀಡರ್‌ಶಿಪ್ ಎಂದು ಕರೆಯೋಣ. ಏಕೆಂದರೆ ಅವರಿಗೆ ಈಗ ಬರುವ ಬಹುಮತದಲ್ಲಿ ನಾಲ್ಕೈದು ಜನ ಬಿಟ್ಟು ಹೋದರೂ ಅವನು ಯೋಚನೆ ಮಾಡಬೇಕಾಗಿಲ್ಲ. ಈಗ ಬಡವರಿಗೆ ಬೇರೆ ಮೇಲೆ ಮನೆ ಕಟ್ಟಿಸಿಕೊಳ್ಳಲು ಸೈಟ್‌ಗಳನ್ನು ಹಂಚುತ್ತಿರುವುದರಿಂದ ಯಾರೂ ಸಧ್ಯಕ್ಕೆ ಬಿಟ್ಟು ಹೋಗುವುದಿಲ್ಲ. ಜನದಲ್ಲಿ ಒಂದು ರೀತಿಯ ಸೈಕಲಾಜಿಕಲ್ ಆಟ್‌ಮಾಸಫಿಯರ್ ಕ್ರಿಯೇಟ್ ಮಾಡಿದ್ದೀರಿ. ಆದ್ದರಿಂದ ಸಧ್ಯಕ್ಕೆ ಜನರ ಒಲವು ನಿಮ್ಮ ಕಡೆ ಇದೆ. ಅದು ಬೇರೆ ವಿಷಯ. ಆದರೆ ಇಂದು ಪಿ.ಎಸ್.ಸಿ. ಯಲ್ಲಿಯೇ ಆಗಲೀ, ಯು.ಪಿ.ಎಸ್.ಸಿ. ಯಲ್ಲಿಯೇ ಆಗಲಿ ಸೆಲೆಕ್ಟ್ ಮಾಡುವಾಗ ಹಿತಾಸಕ್ತಿಯನ್ನು ಇಟ್ಟು ಕೊಂಡು ಕೆಲಸ ಮಾಡುವುದಾದರೆ, ಅದಕ್ಕೆ ಅಸಮ್ಮತಿ ಸೂಚಿಸಬೇಕಾಗುತ್ತದೆ. ತಾವು ಜಾತ್ಯಾತೀತ ರಾಷ್ಟ್ರ ಎಂದು ಹೇಳುತ್ತೀರಿ, ಆದರೆ ಬರೀ ಘೋಷಣೆಯಲ್ಲಿಯೇ ಇರಬಾರದು. ಅದು ಕಾರ್ಯಗತವಾಗಬೇಕು. ಈಗ ನಾನು ಹೇಳಿದಂಥ ಅನ್ಯಾಯಗಳಿಗೆ ಇನ್ನು ಮುಂದೆ ಎಡೆಗೊಡಬಾರದು ಎಂದು ಹೇಳಿ, ಈ ಪಬ್ಲಿಕ್ ಸರ್ವಿಸ್ ಕಮಿಷನ್ ವರದಿಯನ್ನು ಚರ್ಚೆಗೆ ತೆಗೆದುಕೊಂಡು, ಅದರ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ : (ಸಕಲೇಶಪುರ).— ಮಾನ್ಯ ಸಭಾಧ್ಯಕ್ಷರೇ, ಈ ದಿವಸ ನಮ್ಮ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳು ಲೋಕಸೇವಾ ಆಯೋಗದ ವರದಿಯನ್ನು ಚರ್ಚೆಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ನಮ್ಮ ದೇಶಕ್ಕೆ ಒಂದು ದೊಡ್ಡ ಉಪಕಾರ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಆಗಲೇ ಮಾನ್ಯಶ್ರೀ ದೇವೇಗೌಡರು ಅನೇಕ ವಿಚಾರಗಳನ್ನು ತಿಳಿಸಿದ್ದಾರೆ ಈಗ ನಾನು ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಹಿಂದಿನ ಸರ್ಕಾರದವರು ಏನೇನು ತಪ್ಪು ಮಾಡಿದ್ದಾರೆ ಅದನ್ನು ಈ ಸರ್ಕಾರ ತಿದ್ದುಕೊಂಡು ಹೋದರೆ ಮಾತ್ರ ಜನತೆಗೆ ನಾವು ಏನು ಆಶ್ವಾಸನೆಯನ್ನು ಕೊಟ್ಟಿದ್ದೇವೆ ಅದನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ಆಶ್ವಾಸನೆಯನ್ನು ಈಡೇರಿಸಬೇಕಾದರೆ ದಕ್ಷ ಆಡಳಿತವನ್ನು ಕೊಡಬೇಕು. ದಕ್ಷ ಆಡಳಿತವನ್ನು ಕೊಡಬೇಕಾದರೆ ಅಧಿಕಾರಿಗಳು ದಕ್ಷರಾಗಿರಬೇಕು. ಬುದ್ಧಿವಂತರಾಗಿರಬೇಕು. ಪ್ರಾಮಾಣಿಕರಾಗಿರಬೇಕು. ನಿಷ್ಪಕ್ಷಪಾತರಾಗಿರಬೇಕು. ಅಂಥಾ ಒಂದು ಅಧಿಕಾರಿಗಳನ್ನು ನೇಮಕ ಮಾಡುವ ಒಂದು ಶಕ್ತಿ ಲೋಕಸೇವಾ ಆಯೋಗಕ್ಕೆ ಇದೆ. ಆದ್ದರಿಂದ ಲೋಕಸೇವಾ ಆಯೋಗದವರು ದಕ್ಷರಾಗಿರಬೇಕು ಮತ್ತು ಪ್ರಮಾಣಿಕರಾಗಿರಬೇಕು ಅಂಥವರನ್ನು ಮಾತ್ರ ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಸರ್ಕಾರ ನೇಮಕ ಮಾಡಬೇಕು. ಶ್ರೀಮಾನ್ ನಿಜಲಿಂಗಪ್ಪನವರ ಸರ್ಕಾರದಲ್ಲಿ ಲೋಕಸೇವಾ ಆಯೋಗದಲ್ಲಿ ಒಂದು ದಕ್ಷತೆಯಾಗಲೀ ಒಂದು ಪ್ರಾಮಾಣಿಕತೆಯಾಗಲೀ ಇರಲಿಲ್ಲ. ಆದ್ದರಿಂದ ಅವರ ಆಡಳಿತ ಚೆನ್ನಾಗಿ ಇರಲಿಲ್ಲ. ಎಂದು ಅವರಿಗೆ ಬಹಳ ಕೆಟ್ಟ ಹೆಸರು ಬಂತು. ಈಗಿನ ಸರ್ಕಾರದವರು ಅಂಥಾ ಒಂದು ತಪ್ಪನ್ನು ಮಾಡುವುದಿಲ್ಲ. ಈಗಿನ ಮಂತ್ರಿಮಂಡಲದವರು ಮುಂದೆ ಲೋಕಸೇವಾ ಆಯೋಗದ ಸದಸ್ಯರು ಮತ್ತು ಚೇರ್ಮನ್ ಅವರನ್ನು ನೇಮಕ ಮಾಡುವಾಗ ದಕ್ಷರಾದಂತ ಮತ್ತು ಪ್ರಾಮಾಣಿಕರಾದಂಥವರನ್ನು ನೇಮಕ ಮಾಡಲು ಹೆಚ್ಚು ಗಮನ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಕ್ಲಾಸ್-ಮೂರರ ಅಪಾಯಿಂಟ್‌ಮೆಂಟ್‌ಗಳನ್ನು ಡಿಸ್ಟ್ರಿಕ್ಟ್ ರೆಕ್ರೂಟ್‌ಮೆಂಟ್ ಕಮಿಟಿ, ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿಗಳು ಮಾಡುವಾಗ ಅನೇಕ ನ್ಯೂನತೆಗಳು, ಟೀಕೆಗಳು ಬಂದಿವೆ. ಮಾನ್ಯ ಶ್ರೀ ದೇವೇಗೌಡರ ಹೇಳಿದಹಾಗೆ ರಾಷ್ಟ್ರಪತಿಗಳ ಆಳ್ವಿಕೆಯಲ್ಲಿ ಗೌರ್ನರ್ ಅವರ ಆಡಳಿತದಲ್ಲಿ ಡಿಪಾರ್ಟ್‌ಮೆಂಟಿನವರು ನೇಮಕಗಳನ್ನು ಮಾಡುವಾಗ ಅದರಲ್ಲಿ ಅನೇಕ ಲೋಪದೋಷಗಳು ಆಗಿವೆ. ಈಗ ಹಳ್ಳಿಗಾಡಿನವರಿಗೆ ಒಂದು ಜವಾನನ ಕೆಲಸ ಕೂಡ ಸಿಗುವುದಿಲ್ಲ. ಇದು ಅನೇಕ ಜನಗಳ ಅಭಿಪ್ರಾಯ ಎಂದು ನಾನು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಹಳ್ಳಿಗಾಡಿನಲ್ಲಿರತಕ್ಕ ಕ್ಯಾಂಡಿಡೇಟ್‌ಗಳಿಗೆ ಪೇಟೆಯಲ್ಲಿರತಕ್ಕವರಿಗೆ ಸರಿಸಮಾನವಾಗಿ ಪರೀಕ್ಷೆಯಲ್ಲಿ ಬರೆಯುವುದಕ್ಕೆ ಸಾಧ್ಯವಾಗದೇ ಇರಬಹುದು. ಆದರೆ ಸಣ್ಣಪುಟ್ಟ ಅಪಾಯಿಂಟ್‌ಮೆಂಟ್‌ಗಳಿಗೂ ಸಹ ಟೆಸ್ಟ್ ಮಾಡಿ ಡಿಪಾರ್ಟ್‌ಮೆಂಟ್ ಮುಖಾಂತರ ಅಪಾಯಿಂಟ್‌ಮೆಂಟ್‌ಗಳನ್ನು ಮಾಡುತ್ತಿದ್ದಾರೆ. ಇದು ಬಹಳ ತಪ್ಪು. ಆದ್ದರಿಂದ ಎಲ್ಲಾ ಭಾಗದ ಜನಗಳಿಗೂ ಅದರಲ್ಲೂ ಬಹುಮುಖ್ಯವಾಗಿ ರೈತರಿಗೆ ಬೇಸಾಯಗಾರರಿಗೆ ಬಹಳ ತೊಂದರೆಯಾಗಿದೆ. ಎಂದು ಈ ಸಭೆಯಲ್ಲಿ ಒತ್ತಾಯಪೂರ್ವಕವಾಗಿ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆದ್ದರಿಂದ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಕ್ಯಾಂಡಿಡೇಟ್‌ಗಳನ್ನು ಇಂಟರ್‌ವ್ಯೂಗೆ

(ಶ್ರೀ ಕೆ. ಎಂ. ರುದ್ರಪ್ಪ)

ಕರೆದಾಗ ಅವರಿಗೆ ವೈ.ಪಿ.ಪಿ.ಸಿ. (ವೈವಾವೋಸಿ)ಯಲ್ಲಿ ಸೂಕ್ತವಾಗಿ ನಂಬರುಗಳನ್ನು ಕೊಡುವುದಕ್ಕೆ ಅವಕಾಶ ಇರಬೇಕು. ಫಿಜಿಕಲ್ ಫಿಟ್‌ನೆಸ್ ಇತ್ಯಾದಿಗಳಲ್ಲಿ ಬೇಸಾಯಗಾರರ ಮಕ್ಕಳಿಗೆ ಸ್ವಲ್ಪ ಮಾರ್ಜಿನ್ ಕೊಡಬೇಕು. ಆ ರೀತಿ ಅಪಾಯಿಂಟ್‌ಮೆಂಟ್‌ಗಳನ್ನು ಮಾಡಿದರೆ ದೇಶದಲ್ಲಿ ಜನಗಳಿಗೆ ನ್ಯಾಯವನು ಕೊಟ್ಟಂತಾಗುತ್ತದೆ. ನಮ್ಮದು ಜಾತ್ಯಾತೀತ ರಾಷ್ಟ್ರ ಎಂದು ಹೇಳುತ್ತಿರುವಾಗ ಕೆಲವು ಅಪಾಯಿಂಟ್‌ಮೆಂಟ್‌ಗಳು ಕೇವಲ ಕೆಲವರಿಗೆ ಮಾತ್ರ ಸೀಮಿತವಾದರೆ ಅದು ಜಾತ್ಯಾತೀತ ರಾಷ್ಟ್ರವಾಗುವುದಿಲ್ಲ. ನ್ಯಾಯವಾದ ರೀತಿಯಲ್ಲಿ ಸೋಷಿಯಲ್ ಜಸ್ಟೀಸ್ ಇರಬೇಕು. ಆದ್ದರಿಂದ ಅಪಾಂಟ್‌ಮೆಂಟ್‌ಗಳನ್ನು ಮಾಡಬೇಕಾದರೆ ಈಗಿನ ನಿಯಮಾವಳಿಗಳು ಏನಿವೆ ಅವುಗಳನ್ನು ಸರ್ಕಾರದವರು ತಕ್ಷಣ ಬದಲಾವಣೆ ಮಾಡಿ ರಾಜ್ಯಪಾಲರ ಕಾಲದಲ್ಲಿ ಏನು ಲೋಪದೋಷಗಳಾಗಿವೆ. ಅವನ್ನು ಖಂಡಿತಾ ಸರಿಪಡಿಸಬೇಕು.

ಇನ್ನೊಂದು ವಿಷಯ, ನಾನು ಇದನ್ನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ನಾನು ಇದನ್ನು ಮಂತ್ರಿಮಂಡಲದ ಬಗ್ಗೆ ಹೇಳುತ್ತಿಲ್ಲ. ಕೆಲವು ಲೋಪದೋಷಗಳನ್ನು ಸೆಕ್ರೆಟರಿಗಳು ಮತ್ತು ಐ.ಎ.ಎಸ್., ಐ.ಪಿ.ಎಸ್. ಆಫೀಸರ್‌ಗಳು ಹೆಚ್ಚಾಗಿ ಮಾಡುತ್ತಾರೆ. ಈಗ ಮಂತ್ರಿಮಂಡಲದಲ್ಲಿ ದಕ್ಷರಾದ ಮತ್ತು ಮೇಧಾವಿಗಳಾದ ಮಂತ್ರಿಗಳು ಇದ್ದಾರೆ ಅವರು ಸೆಕ್ರೇಟರಿಗಳು ಐ.ಎ.ಎಸ್. ಮತ್ತು ಐ.ಪಿ.ಎಸ್ ಆಫೀಸರ್‌ಗಳ ಮೇಲೆ ಸ್ವಲ್ಪ ಲಗಾಮು ಹಾಕಿ ಆಗಿಂದಾಗ್ಗೆ ಅವರು ಮಾಡತಕ್ಕ ತಪ್ಪುಗಳನ್ನು ತಿದ್ದಬೇಕು. ಇಲ್ಲದಿದ್ದರೆ ಅವರು ಸೆರಮೋನಿಯಲ್ ಸಿಗ್ನೇಚರ್‌ಗಳನ್ನು ಮಂತ್ರಿಗಳಿಂದ ಹಾಕಿಸಿಕೊಂಡು ಅವರ ಮನಸ್ಸಿಗೆ ಬಂದ ಹಾಗೆ ಕೆಲಸಗಳನ್ನು ಮಾಡುತ್ತಾರೆ ಸೆಕ್ರೆಟರಿಗಳು ಹೇಳಿದ ಹಾಗೆ ಕೇಳತಕ್ಕಂಥಾ ಕೆಲವು ಮಂತ್ರಿಗಳು ಇದ್ದಾರೆ. ದಕ್ಷರಾದಂಥ ಮಂತ್ರಿಗಳೂ ಇದ್ದಾರೆ. ಉದಾಹರಣೆಗೆ ನಮ್ಮ ಮಾನ್ಯ ಸಿದ್ಧವೀರಪ್ಪನವರು ಒಳ್ಳೆಯ ದಕ್ಷರು ಇನ್ನೂ ಕೆಲವರು ದಕ್ಷರು ಈ ಮಂತ್ರಿಮಂಡಲದಲ್ಲಿ ಇದ್ದಾರೆ. ಇವರ ಕಣ್ಣಿಗೆ ಮಣ್ಣು ಎರಚುವುದಕ್ಕಾಗುವುದಿಲ್ಲ ಈ ಅಪಾಯಿಂಟ್‌ಮೆಂಟ್‌ಗಳನ್ನು ಮಾಡುವುದಕ್ಕೆ ನಿಯಮಾವಳಿಗಳನ್ನು ರಚನೆ ಮಾಡಬೇಕು ಅದರ ಪ್ರಕಾರ ಅಪಾಯಿಂಟ್‌ಮೆಂಟ್‌ಗಳನ್ನು ಮಾಡಬೇಕು. ಅಧಿಕಾರಿಗಳು ಯಾವ ತರಹ ಲೋಪದೋಷ ಮಾಡುವುದಕ್ಕೆ ಅವಕಾಶ ಇಲ್ಲದ ಹಾಗೆ ನೋಡಿಕೊಳ್ಳಬೇಕು. ಐ.ಎ.ಎಸ್. ಮತ್ತು ಐ.ಪಿ.ಎಸ್. ಹುದ್ದೆಗಳಲ್ಲಿ ಕನ್ನಡಿಗರು ಹೆಚ್ಚಾಗಿ ಇಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಶ್ರೀಮಾನ್ ದೇವೇಗೌಡರೂ ಈ ವಿಷಯವನ್ನು ಹೇಳಿದರು. ಏತಕ್ಕೆ ಹಾಗೆ ಆಗಿದೆ ಅಂದರೆ, ಕೇಂದ್ರ ಸರ್ಕಾರದ (Union Public Servici Commission) ಪಬ್ಲಿಕ್ ಸರ್ವೀಸ್ ಕಮಿಷನ್ನಿನಲ್ಲಿ ಯಾವ ಕನ್ನಡಿಗರೂ ಇಲ್ಲ. ನಮಗೆ ಸ್ವರಾಜ್ಯ ಬಂದು ೨೫ ವರ್ಷಗಳಾಯಿತು. ಅಂದಿನಿಂದಲೂ ಕೇಂದ್ರ ಸರ್ಕಾರದ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಒಬ್ಬರೂ ಕನ್ನಡಿಗರೂ ಇಲ್ಲ, ನಮ್ಮ ಹಿಂದಿನ ಮಂತ್ರಿಮಂಡಲದವರು ಕೇಂದ್ರದ ಮೇಲೆ ಯಾವ ವರ್ಚಸ್ಸನ್ನು ಬೀರಲಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ಕೇಂದ್ರದೊಡನೆ ವ್ಯಾಜ್ಯ ಮಾಡುತ್ತಿದ್ದರೇ ಹೊರತು ಅಲ್ಲಿ ತಮ್ಮ ಪ್ರಭಾವವನ್ನು ಬೀರಿ ಶಕ್ತಿಯುತವಾಗಿ ಈ ರಾಜ್ಯಕ್ಕೆ ಏನು ಅನುಕೂಲವಾಗಬೇಕು ಅದನ್ನು ಮಾಡಲಿಲ್ಲ. ಯಾರು ಕನ್ನಡಿಗರು ದಕ್ಷರಿದ್ದಾರೆ. ಪ್ರಾಮಾಣಿಕರಾಗಿದ್ದಾರೆ. ಅಂಥವರನ್ನು ಐ.ಎ.ಎಸ್. ಮತ್ತು ಐ.ಪಿ.ಎಸ್. ಹುದ್ದೆಗಳಿಗೆ ನೇಮಿಸುವಂತಹ ಒಂದು ಕೆಲಸವನ್ನು ಮಾಡಬೇಕಾಗಿತ್ತು. ಆದರೆ ಅವರು ಆ ಒಂದು ಕೆಲಸವನ್ನು ಮಾಡಲಿಲ್ಲ. ನಮ್ಮ ಈಗಿನ ಮಂತ್ರಿಮಂಡಲದವರು ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಪ್ರಭಾವ ಬೀರಿ ಕೇಂದ್ರ ಸರ್ಕಾರದ ಪಬ್ಲಿಕ್ ಸರ್ವೀಸ್ ಕಮಿಷನ್ನಿನಲ್ಲಿ ನಮ್ಮ ಕನ್ನಡಿಗರೊಬ್ಬರು ಇರುವುದಕ್ಕೆ ಅವಕಾಶ ಮಾಡಿಕೊಡಬೇಕು, ಅವರು ಆ ರೀತಿ ಮಾಡುತ್ತಾರೆಂದು ನಾನು ನಂಬಿದ್ದೇನೆ. ಕೆಲವು ಅಧಿಕಾರಿಗಳ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಲು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರ ಒಪೀನಿಯನ್‌ಗಾಗಿ ಫೈಲು ಕಳುಹಿಸಿದರೆ ಅವರು ಬಹಳ ನಿಧಾನವಾಗಿ ಸರ್ಕಾರಕ್ಕೆ ತಮ್ಮ ಒಪೀನಿಯನ್ ಕಳುಹಿಸುತ್ತಾರೆ. ಇದರಿಂದ ಅನೇಕ ಜನಗಳಿಗೆ ತೊಂದರೆಯಾಗುತ್ತದೆ ಆದ್ದರಿಂದ ಇಂಥಾ ರೆಫರೆನ್ಸ್‌ಗಳು ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಹೋದಾಗ ಅವುಗಳಿಗೆ ಅವರು ಹೆಚ್ಚಿನ ಆದ್ಯತೆ ಕೊಡಬೇಕು. ಬಹಳ ಬೇಗ ಫೈಲ್‌ಗಳ ಮೇಲೆ ತಮ್ಮ ಒಪೀನಿಯನ್ ಸರ್ಕಾರಕ್ಕೆ ಅವರು ಕಳುಹಿಸಿಕೊಡುವಂತಾಗಬೇಕು ಪಬ್ಲಿಕ್ ಸರ್ವೀಸ್ ಕಮಿಷನ್ನಿನಲ್ಲಿ ಸಿಬ್ಬಂದಿವರ್ಗದವರು ಬಹಳ ಉತ್ತಮವಾದ ರೀತಿಯಲ್ಲಿ ಕೆಲಸಮಾಡಬೇಕು. ಅನೇಕ ಕ್ಯಾಂಡಿಡೇಟ್ಸ್ ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಹೋದಾಗ ಅಲ್ಲಿ ಲಂಚ ವಗೈರೆಯನ್ನು ಗುಮಾಸ್ತರುಗಳು ತೆಗೆದುಕೊಳ್ಳುತ್ತಿದ್ದಾರೆ ಎನ್ನುವ ದೂರುಗಳು ಇವೆ. ಇದಕ್ಕೆಲ್ಲಾ ಅವಕಾಶ ಇಲ್ಲದಂತ ಪಬ್ಲಿಕ್ ಸರ್ವೀಸ್ ಚೇರ್ಮನರು ಮತ್ತು ಸದಸ್ಯರು ನೋಡಿಕೊಳ್ಳಬೇಕು. ಇಲ್ಲದಿದ್ದರೆ ಹಳ್ಳಿಗಾಡಿನ ಅಭ್ಯರ್ಥಿಗಳಿಗೆ ಅದರಲ್ಲಿಯೂ ಮೂರನೇ ದರ್ಜೆಯ ಕೆಲಸಗಳಿಗೆ ಟೆಸ್ಟ್ ಇಟ್ಟಿರುವುದರಿಂದ ಬಹಳ ತೊಂದರೆಯಾಗಿದೆ. ಅದರಲ್ಲೂ ಇಂಗ್ಲೀಷ್‌ನಲ್ಲಿ ಟೆಸ್ಟ್ ಇಟ್ಟಿರುವುದರಿಂದ ಅವರಿಗೆ ಬರೆಯುವುದು ಕಷ್ಟವಾಗುತ್ತದೆ; ಆದ್ದರಿಂದ ೩ ಮತ್ತು ೪ನೇ ದರ್ಜೆಯ ಕೆಲಸಗಳಿಗೆ ಟೆಸ್ಟ್ ಇಟ್ಟಿರುವುದು ಪ್ರಯೋಜನವಿಲ್ಲ. ಅದನ್ನು ತೆಗೆದುಹಾಕಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯವಾಗಿದೆ. ಇಂಟರ್‌ವ್ಯೂನಲ್ಲಿ ವೈ.ಪಿ.

ಒ. ಸಿ ಪರೀಕ್ಷೆಗೆ ತಮ್ಮ ಕಡೆಯುವರಿಗೇ ಹೆಚ್ಚು ನಂಬರು ಹಾಕಿ ತಮಗೆ ಬೇಕಾದವರನ್ನು ನೇಮಕ ಮಾಡುವ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದಾರೆ, ಇದು ಸರಿಯಲ್ಲ. ಈ ಅಪಾಯಿಂಟ್‌ಮೆಂಟ್‌ಗಳನ್ನು ಮಾಡುವುದಕ್ಕೆ ಒಂದು ನಿಯಮಾವಳಿಯನ್ನು ತಯಾರುಮಾಡಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಮಾಡಿ ಪ್ರತಿಯೊಂದು ಇಲಾಖೆಯಲ್ಲಿಯೂ ಅದನ್ನು ಜಾರಿಗೆ ತರುವಂತೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಹಿಂದಿನ ಸರ್ಕಾರದವರು ಏನು ಮಾಡುತ್ತಿದ್ದರು ಎಂದರೆ, ಬೇರೆಯವರಿಗೆ ಉಪಕಾರ ಮಾಡುತ್ತಿದ್ದರೇ ಹೊರತು ಕನ್ನಡಿಗರಿಗೆ ಅಷ್ಟು ಮನ್ನಣೆ ಕೊಡುತ್ತಿರಲಿಲ್ಲ. ಬೇರೆ ರಾಜ್ಯಗಳವರು ಬಂದರೆ ಅವರಿಗೆ ಹೆಚ್ಚಿನ ಮನ್ನಣೆ ಮತ್ತು ಗೌರವಗಳನ್ನು ಕೊಡುತ್ತಿದ್ದರು. ನಮ್ಮ ರಾಷ್ಟ್ರದಲ್ಲಿ ಒಂದು ರಾಜ್ಯಕ್ಕೂ ಇನ್ನೊಂದು ರಾಜ್ಯಕ್ಕೂ ಭೇದಭಾವವನ್ನು ಇಟ್ಟುಕೊಳ್ಳಬಾರದು; ಇಂಡಿಯನ್ ಸಿಟಿಜನ್ ಎಂದರೆ ಒಂದೇ ಭಾವನೆಯನ್ನು ಇಟ್ಟುಕೊಳ್ಳಬೇಕು. ಆದರೆ ನಮ್ಮವರನ್ನು ಅಲಕ್ಷ್ಯ ಮಾಡದೆ ನಮ್ಮ ಕನ್ನಡಿಗರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕು. ಈಗ ಉದಾಹರಣೆಗೆ ಹೇಳುವುದಾದರೆ, ಕೇರಳಾದವರು ನಮ್ಮಲ್ಲಿ ಅನೇಕ ಕೆಲಸಗಳಲ್ಲಿ ಇದ್ದಾರೆ. ಆದರೆ ಕನ್ನಡಿಗರು ಕೇರಳಕ್ಕೆ ಹೋದರೆ ಯಾವ ಕೆಲಸವಾಗಲೀ ಅಂದರೆ ಒಂದು ಟೀಚರ್ಸ್ ಕೆಲಸವಾಗಲೀ ಅಥವಾ ಜವಾನನ ಕೆಲಸವಾಗಲಿ ಸಿಕ್ಕುವುದಿಲ್ಲ. ಇವರು ಯಾವಾಗಲೂ ನೇಮಕಗಳನ್ನು ಮಾಡುವಾಗ ಇವರು ಕನ್ನಡಿಗರು ಹೌದೇ ಅಲ್ಲವೇ, ಅವರೇನಾದರೂ ಬೇರೆ ರಾಜ್ಯದವರೇ ಎಷ್ಟು ದಿವಸಗಳಿಂದ ಇಲ್ಲಿ ಅಪಾಯಿಂಟ್‌ಮೆಂಟ್‌ನಲ್ಲಿದ್ದಾರೆ. ಮತ್ತು ಎಷ್ಟು ದಿವಸಗಳಿಂದ ಈ ಊರಿನಲ್ಲಿದ್ದಾರೆ, ಇವರ ಉದ್ದೇಶವೇನು--ಈ ಅಂಶಗಳನ್ನೆಲ್ಲಾ ಇವರು ಮಾಡತಕ್ಕ ಇಂಟರ್‌ವ್ಯೂನಲ್ಲಿ ಪರಿಗಣನೆಗೆ ತೆಗೆದುಕೊಂಡು ಅವರನ್ನು ನೇಮಿಸಬೇಕು. ನಮ್ಮ ಸರ್ಕಾರದವರು ಈ ವಿಚಾರವನ್ನು ನಿಜವಾಗಿ ಲೋಕಸೇವಾ ಆಯೋಗದವರಿಗೆ ಕೂಡಲೇ ತಿಳಿಸಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ಅಪಾಯಿಂಟ್‌ಮೆಂಟ್ಸ್ ವಿಷಯದಲ್ಲಿ ಕೆಲವು ಹಿತಾಸಕ್ತಿಗಳು ಇರುತ್ತವೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಎಲ್ಲಕ್ಕಿಂತಲೂ ಮುಖ್ಯವಾಗಿ ನಮ್ಮ ದೇಶದಲ್ಲಿ ವ್ಯವಸಾಯ ವೃತ್ತಿಯಿಂದ ಬಂದಂಥ ಜನರಿಗೆ ಅಪಾಯಿಂಟ್‌ಮೆಂಟ್ ವಿಷಯದಲ್ಲಿ ಹೆಚ್ಚಿನ ಪ್ರಾತಿನಿಧ್ಯ ಇರಬೇಕು. ಅವರಿಗೆ ಕೊನೆಯ ಪಕ್ಷ ಎರಡನೇ ಮೂರನೇ ಅಥವಾ ನಾಲ್ಕನೆ ದರ್ಜೆಯ ಅಪಾಯಿಂಟ್‌ಮೆಂಟ್ ಸಿಗುವ ಹಾಗೆ ನೋಡಿಕೊಳ್ಳದೇ ಹೋದರೆ ಜನಗಳಲ್ಲಿ ಒಂದು ರೀತಿಯ ಅಸಮಾಧಾನತೆ ಬರುತ್ತದೆ. ರಾಜ್ಯದ ಆಡಳಿತದ ಬಿಗಿ ತಪ್ಪಿಹೋಗುತ್ತದೆ. ಅಂತಹ ಒಂದು ಕಾಲ ಮುಂದೆ ಬಂದೀತೆಂದು ನಾನು ಹೇಳುತ್ತೇನೆ.

3-00 P. M.

ಇನ್ನು ಪ್ರೊಫೆಸರುಗಳನ್ನು ನೇಮಕಮಾಡುವಾಗ ಒಂದು ಮೆರಿಟ್ ಇಟ್ಟುಕೊಂಡು ಮಾಡಬೇಕು. ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳಿಗೆ ಇನ್ನುಮುಂದೆ ಹೆಚ್ಚಿಗೆ ಮಹಿಳೆಯರನ್ನೇ ನೇಮಕಮಾಡಬೇಕು. ಏಕೆಂದರೆ ಅವರಿಗೆ ಕೆಲಸಮಾಡುವುದಕ್ಕೆ ಒಂದು ನಿಷ್ಠೆ ಇರುತ್ತದೆ. ಆದ್ದರಿಂದ ಇನ್ನುಮುಂದೆ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಶಾಲೆಗಳಿಗೆ ಶಿಕ್ಷಕರನ್ನು ನೇಮಕಮಾಡುವಾಗ ಆಯಾ ಪ್ರದೇಶಗಳಲ್ಲಿ ಇರತಕ್ಕಂಥ ಅವರಲ್ಲಿಯೂ ಮುಖ್ಯವಾಗಿ ಹಳ್ಳಿಗಾಡುಗಳಿಂದ ಬಂದಿರತಕ್ಕ ಮಹಿಳೆಯರಿಗೆ ಹೆಚ್ಚಿನ ಅವಕಾಶ ಕೊಡಬೇಕು ಈಗಿನ ಕಾಲದಲ್ಲಿ ಅವರು ಎಸ್.ಎಸ್.ಎಲ್.ಸಿ. ಪಾಸ್ ಮಾಡಿರುವುದೇ ಹೆಚ್ಚು. ಅವರಿಗೆ ಟೀಚರ್ಸ್ ಟ್ರೈನಿಂಗ್ ಕೊಟ್ಟು ಅಂತಹವರನ್ನೇ ವಿಶೇಷವಾಗಿ ಶಿಕ್ಷಕಿಯರನ್ನಾಗಿ ಪ್ರೈಮರಿ ಮತ್ತು ಮಾಧ್ಯಮಿಕ ಶಾಲೆಗಳಿಗೆ ನೇಮಕ ಮಾಡುವುದಾದರೆ, ವಿದ್ಯಾಭ್ಯಾಸ ಕ್ರಮದಲ್ಲಿ ಹೆಚ್ಚಿನ ದಕ್ಷತೆ ಹೆಚ್ಚಿ ನಮ್ಮ ರಾಜ್ಯದ ಜನರು ಮುಂದೆ ಸತ್ಪ್ರಜೆಗಳಾಗುವುದಕ್ಕೆ ಅವಕಾಶವಾಗುತ್ತದೆ. ಬಹುಮುಖ್ಯವಾಗಿ ಈ ಲೋಕಸೇವಾಯೋಗದವರು ದಕ್ಷರಾಗಿದ್ದರೆ ನಿಜವಾಗಿ ಅನೇಕ ಸಮಸ್ಯೆಗಳು ಪರಿಹಾರವಾಗುತ್ತವೆ. ಒಂದು ರಾಜ್ಯದಲ್ಲಿ ಆಡಳಿತ ಸುವ್ಯವಸ್ಥೆಯಿಂದ ಕೂಡಿರಬೇಕಾದರೆ ಹೈಕೋರ್ಟ್ ಚೆನ್ನಾಗಿರಬೇಕು, ಅದೇ ರೀತಿಯಲ್ಲಿ ಲೋಕಸೇವಾಯೋಗವೂ ಚೆನ್ನಾಗಿರಬೇಕು. ಮತ್ತೆ ವಿಜಿಲೆನ್ಸ್ ಕಮಿಷನ್ ಚೆನ್ನಾಗಿರಬೇಕು, ಇವರೆಲ್ಲರೂ ತಂತಮ್ಮ ಕರ್ತವ್ಯಗಳನ್ನು ಚೆನ್ನಾಗಿ ಮಾಡಿದರೆ ನಮ್ಮ ದೇಶದಲ್ಲಿ ಆಡಳಿತ ಬಿಗಿ ಬರುತ್ತದೆ. ಇಲ್ಲವಾದರೆ ಆಡಳಿತದಲ್ಲಿ ಬಿಗಿ ತಪ್ಪುತ್ತದೆ. ಆರೀತಿ ಆಡಳಿತದಲ್ಲಿ ಬಿಗಿ ತಪ್ಪುವುದರಿಂದ ಜನರಲ್ಲಿ ಸಾಮಾಜಿಕ ನ್ಯಾಯವೇ ದೊರಕುವುದಿಲ್ಲ. ಆ ಸಾಮಾಜಿಕ ನ್ಯಾಯ ದೊರಕದೇ ಹೋದರೆ, ಜನರಲ್ಲಿ ಅಸಮಾಧಾನತೆ ಬರುತ್ತದೆ. ಕೊನೆಗೆ ವಿದ್ಯಾರ್ಥಿಗಳಲ್ಲಿ ಒಂದು ರೀತಿಯ ಪ್ರಸ್ಟ್ರೇಷನ್ (Furstration) ಬಂದು ರಾಜ್ಯಕ್ಕೆ ಹಾನಿಯಾಗುತ್ತದೆ.

ನಾನು ಇಷ್ಟು ಹೊತ್ತು ಮಾತನಾಡಲು ಅಧ್ಯಕ್ಷರು ನನಗೆ ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಆರ್, ಶಾಮಣ್ಣ (ಪೋರ್ಟ್) :- ಮಾನ್ಯ ಸಭಾಧ್ಯಕ್ಷರೇ, ಈ ದಿನ ಲೋಕಸೇವಾಯೋಗದವರು ಕೊಟ್ಟಿರತಕ್ಕ ೧೯೬೭-೬೮ನೇ, ೧೯೬೮-೬೯ನೇ ಮತ್ತು ೧೯೬೯-೭೦ನೇ ವರದಿಗಳ ಬಗ್ಗೆ ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಲೋಕಸೇವಾಯೋಗವನ್ನು ಇಟ್ಟಿರತಕ್ಕಂಥಾದ್ದು ಸರ್ಕಾರದ ಆಡಳಿತ ಸುಲಲಿತವಾಗಿ ನಡೆಯುವುದಕ್ಕೆ ಹಾಗೂ ದಕ್ಷತೆಯಿಂದ ನಡೆಯುವುದಕ್ಕೆ, ಜೊತೆಗೆ ನ್ಯಾಯವಾದಂಥ ರೀತಿಯಲ್ಲಿ ಅಭ್ಯರ್ಥಿ

ಶ್ರೀ ಟಿ. ಆರ್. ಶಾಮಣ್ಣ))

ಗಳನ್ನು ಚುನಾವಣೆಮಾಡಿ ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಸಹಾಯಕವಾಗುವಾಗಲು ಈ ಲೋಕ ಸೇವಾಯೋಗ ಇದೆಯೆಂದು ನಾನು ತಿಳಿದಿದ್ದೇನೆ. ಆದರೆ ನನಗೆ ತಿಳಿದಿರುವ ಹಾಗೆ ಈ ಲೋಕಸೇವಾಯೋಗ ದಲ್ಲಿ ಕೆಳಮಟ್ಟದಲ್ಲಿ ದುಡ್ಡನ್ನು ಕಾಸನ್ನು ತೆಗೆದುಕೊಳ್ಳತಕ್ಕ ಒಂದು ವ್ಯವಹಾರ ನಡೆಯುತ್ತಿದೆಯೆಂದು ಹೇಳುತ್ತೇನೆ. ಮೇಲ್ಮಟ್ಟದಲ್ಲಿ ಒತ್ತಡಗಳು ಹಾಗೂ ಶಿಫಾರಸುಗಳು ಬರುವುದರಿಂದ ಅವುಗಳ ಮೇಲೆ ಅನೇಕ ಕೆಲಸಗಳು ನಡೆಯುತ್ತಿವೆಯೆಂದು ಹೇಳುತ್ತೇನೆ. ಸರ್ಕಾರ ಈ ಒಂದು ಆಡಳಿತ ಏನಿದೆ, ಅದನ್ನು ಪ್ರತ್ಯೇಕ ಮಾಡಿರುವ ಉದ್ದೇಶ, ಮತ್ತು ಈ ಆಯೋಗವನ್ನು ರಚನೆಮಾಡಿದ ಉದ್ದೇಶ. ನಿಜವಾಗಿ ನ್ಯಾಯವಾದ ರೀತಿಯಲ್ಲಿ ಅಭ್ಯರ್ಥಿಗಳನ್ನು ಚುನಾವಣೆ ಮಾಡಬೇಕೆಂಬ ಉದ್ದೇಶದಿಂದ. ಆದರೆ ಇದಕ್ಕೆ ಅವಕಾಶಕೊಟ್ಟರೆ. ನ್ಯಾಯವಾಗಿ ಆಡಳಿತ ನಡೆಯುತ್ತದೆಯೋ. ಆಡಳಿತಕ್ಕೆ ಬೇಕಾದಂಥ ಸಿಬ್ಬಂದಿಯನ್ನು ಅವರು ಚುನಾವಣೆ ಮಾಡುತ್ತಿದ್ದಾರೆಯೋ ಎಂಬ ಬಗ್ಗೆ ನಾವು ಈಗ ಯೋಚನೆ ಮಾಡಬೇಕಾಗಿದೆ. ೧೯೬೭-೬೮ರಲ್ಲಿ ಬಂದಂಥ ಅರ್ಜಿಗಳು ೩೫ ಸಾವಿರ, ೬೮-೬೯ರಲ್ಲಿ ಬಂದಂಥ ಅರ್ಜಿಗಳು ೫೮ ಸಾವಿರ, ೬೯-೭೦ರಲ್ಲಿ ೫೧ ಸಾವಿರ ಅರ್ಜಿಗಳು. ಇದರ ಬಗ್ಗೆ ಖರ್ಚಾಗಿರುವುದು ೧೯೬೭-೬೮ರಲ್ಲಿ ಬಂದಂಥ ವರಮಾನ ೨.೬೫ ಲಕ್ಷ, ಖರ್ಚು ೫.೦೮ ಲಕ್ಷ. ೬೮-೬೯ರಲ್ಲಿ ೪ ಲಕ್ಷ ವರಮಾನ, ೮.೭ ಲಕ್ಷ ಖರ್ಚು ಆದರೆ ೧೯೬೯-೭೦ರಲ್ಲಿ ಬಂದಂಥ ವರಮಾನ ೧.೩ ಲಕ್ಷ ಮಾತ್ರ ಖರ್ಚು ೭.೭. ಲಕ್ಷ. ಈ ಮೂರು ವರ್ಷಗಳಲ್ಲಿ ಏಕೆ ಈ ರೀತಿ ವ್ಯತ್ಯಾಸ ಬಂತೆಂಬ ಬಗ್ಗೆ ಸರ್ಕಾರದವರು ಉತ್ತರ ಕೊಡುವಾಗ ಸ್ವಲ್ಪ ವಿವರಗಳನ್ನು ಹೇಳಿದರೆ ಬಹಳ ಒಳ್ಳೆಯದು. ಆದರೆ ಒಂದು ವಿಚಾರ. ೧೯೬೮-೬೯ರಲ್ಲಿ ಒಂದನೇ, ಎರಡನೇ ಮತ್ತು ಮೂರನೇ ತರಗತಿಗಳ ದರ್ಜೆಗೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ರಿಜರ್ವ್ ಕ್ಲಾಸ್‌ನಿಂದ ಸಾಕಾದಷ್ಟು ಅಭ್ಯರ್ಥಿಗಳು ಸಂಖ್ಯೆಯಲ್ಲಿ ಬಂದಿರ ಲಿಲ್ಲ. ಇದು ಅವರ ಒಂದು ವರದಿಯಲ್ಲಿಯೇ ಇದೆ. ಹಾಗೆ ಯಾವುದಾದರೂ ಮೀಸಲಾಗಿಟ್ಟಿರತಕ್ಕ ಸ್ಥಾನಗಳಲ್ಲಿ ಸಾಕಾದಷ್ಟು ಅಭ್ಯರ್ಥಿಗಳು ಬಾರದೇ ಹೋದರೆ, ಅದಕ್ಕೆ ಬೇಕಾದಂಥ ಅಭ್ಯರ್ಥಿಗಳನ್ನು ತರಪೇತು ಮಾಡಿ ಆ ಹುದ್ದೆಗಳನ್ನು ಭರ್ತಿಮಾಡುವ ಕಾರ್ಯ ಸರ್ಕಾರದ ಕಡೆ ಇದೆ. ಆ ಒಂದು ಜವಾಬ್ದಾರಿಯೂ ಸರ್ಕಾರದ್ದೇ. ಯಾವುದಕ್ಕೆ ರಿಜರ್ವೇಷನ್ ಇದೆಯೋ ಅಂತಹ ಕೋಮಿನವರು ಸಾಕಾದಷ್ಟು ಅಭ್ಯರ್ಥಿಗಳನ್ನು ಮುಂದೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಆ ಹುದ್ದೆಗಳನ್ನು ಭರ್ತಿ ಇಲ್ಲದೆ ಖಾಲಿ ಬಿಡಬಾರದೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇವರ ಒಂದು ವರದಿಯಲ್ಲಿ ಒಂದುಕಡೆ ಒಂದು ಮಾತನ್ನು ಹೇಳಿದ್ದಾರೆ ಲೋಕಲ್ ಕ್ಯಾಂಡಿಡೇಟ್ಸನ್ನು ಟೆಂಪೊರರಿಯಾಗಿ ನೇಮಕಮಾಡಿರುವುದರಿಂದ ಬಹಳ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಅದಕ್ಕಾಗಿ ತರಬೇತಿ ಕೇಂದ್ರಗಳನ್ನು ಏರ್ಪಾಡುಮಾಡಿ ಅದಕ್ಕೆ ಬೇಕಾದಂಥ ಸಿಬ್ಬಂದಿ ಯನ್ನು ಸರಿಯಾದ ರೀತಿಯಲ್ಲಿ ಚುನಾವಣೆ ಮಾಡಿಕೊಳ್ಳುವುದಕ್ಕೆ ಏರ್ಪಾಡುಮಾಡಬೇಕು. ಹಿಂದೆ ಮಾನ್ಯ ಶ್ರೀ ನಾಗನಗೌಡರ ಕಮಿಟಿಯಲ್ಲಿ ಹೇಳಿರುವ ಹಾಗೆ ನಮ್ಮ ಆಡಳಿತ ಸುಲಲಿತವಾಗಿ ಹಾಗೂ ದಕ್ಷತೆಯಿಂದ ನಡೆಯಬೇಕಾದರೆ, ಅದರಲ್ಲಿಯೂ ಮುಖ್ಯವಾಗಿ ಮೆಡಿಕಲ್ ಡಿಪಾರ್ಟ್‌ಮೆಂಟ್, ಎಜುಕೇಷನ್ ಡಿಪಾರ್ಟ್ ಮೆಂಟ್, ಮತ್ತು ಇಂಜನಿಯರಿಂಗ್ ಡಿಪಾರ್ಟ್‌ಮೆಂಟ್. ಜುಡಿಷಿಯಲ್ ಡಿಪಾರ್ಟ್‌ಮೆಂಟಿನಲ್ಲಿ ದಕ್ಷತೆಗೆ ಮತ್ತು ಮೆರಿಟ್ಟಿಗೆ ಪ್ರಾಧಾನ್ಯತೆ ಕೊಟ್ಟು ಅದರಲ್ಲಿ ರಿಜರ್ವೇಷನ್ ಇದ್ದರೆ ಅಂತಹ ಸ್ಥಳಗಳಿಗೂ ಮೆರಿಟ್ ಮೇಲೆ ಸಾಧ್ಯವಾದಷ್ಟೂ ಕೂಡ ದಕ್ಷರಾದವರನ್ನು ತರಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳು ತ್ತೇನೆ. ದಕ್ಷತೆ ಅಂದರೆ, ಬರೀ ಪುಸ್ತಕವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದಲ್ಲ ಹುದ್ದೆಗೆ ನೇಮಕರಾದವರು ಆರು ತಿಂಗಳಕಾಲ ದಕ್ಷತೆಯಿಂದ ಕೆಲಸಮಾಡಿದ್ದರೆ ಮಾತ್ರ ಅವರನ್ನು ಆ ಹುದ್ದೆಯಲ್ಲಿ ಇಟ್ಟುಕೊಳ್ಳಿ. ಅದನ್ನು ಬಿಟ್ಟು ಪುಸ್ತಕದ ಬದನೆಕಾಯಿಗೇ ಮನ್ನಣೆ ಕೊಟ್ಟು ಅವರನ್ನೇ ತೆಗೆದುಕೊಳ್ಳಬೇಕೆಂದು ನಾನು ಹೇಳುವುದಿಲ್ಲ. ಆದ್ದರಿಂದ ಆಡಳಿತದ ಹಿತದೃಷ್ಟಿಯಿಂದ ಯಾವುದಾದರೂ ಒಂದು ಸರಿಯಾದಂಥ ಕ್ರಮವನ್ನು ಅನುಸರಿಸುವುದು ಬಹಳ ಒಳ್ಳೆಯದು.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) : ನಮ್ಮ ಸ್ವಾತಂತ್ರ್ಯ ಬಂದನಂತರ ನಮ್ಮ ಪ್ರಜಾ ಪ್ರಭುತ್ವಕ್ಕೆ ಸಂಬಂಧಪಟ್ಟ ಸರ್ಕಾರಗಳಿಗಿಂತ ಹಿಂದಿದ್ದ ಬ್ರಿಟಿಷರು ಬಹಳ ದಕ್ಷರಾಗಿ ಆಡಳಿತವನ್ನು ನಡೆ ಸ್ತಿದ್ದರೆಂಬುದನ್ನಾದರೂ ಒಪ್ಪಿಕೊಳ್ಳುವುದಕ್ಕಾಗುತ್ತದೆಯೋ ?

ಶ್ರೀ ಟಿ. ಆರ್. ಶಾಮಣ್ಣ : ೧೯೬೮-೬೯ರಲ್ಲಿ ಮತ್ತು ಮುಂದಿನ ವರ್ಷಗಳಲ್ಲಿ ರೀ-ಎಂಪ್ಲಾಯ್ ಮೆಂಟ್ಸ್ ಆಫ್ ರಿಟೈರ್ಡ್ ಪರ್ಸನ್ಸ್ ಮತ್ತು ಅಪಾಯಿಂಟ್‌ಮೆಂಟ್ ಆನ್ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಬೇಕಾದಷ್ಟು ಮಾಡಿದ್ದಾರೆ. ಇದು ಕೂಡಲೇ ಹೋಗಬೇಕು. ಸರ್ಕಾರದವರು ಇಂಥಾದಕ್ಕೆ ಖಂಡಿತವಾಗಿ ಅವಕಾಶವನ್ನು ಕೊಡಬಾರದು. ಈಗ ಸಾಕಾದಷ್ಟು ಹೆಚ್ಚು ಹೆಚ್ಚಿಗೆ ಹೆಚ್ಚಿನ ಅರ್ಹತೆಯುಳ್ಳ ಯುವಕರು ಮುಂದೆಮುಂದೆ ಬರುತ್ತಿರುವಾಗ ಈಗ ರಿಟೈರ್ಡ್ ಪರ್ಸನ್ಸ್‌ನ್ನೇ ರೀ-ಎಂಪ್ಲಾಯ್ ಮಾಡುವುದಾಗಲೀ ಅಥವಾ ಅಂತಹವರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಪುನಃ ಕೆಲಸಕ್ಕೆ ತೆಗೆದುಕೊಳ್ಳುವುದಾಗಲೀ ಸರಿಯಲ್ಲ.

ಇದಕ್ಕೆ ಏನು ಅವಶ್ಯಕತೆ ಇದೆ ? ಇದು ಬಹಳ ಜಾಗ್ರತೆಯಾಗಿ ಹೋಗಬೇಕು. ಇಲ್ಲದಿದ್ದರೆ ನಿರುದ್ಯೋಗದ ಸಮಸ್ಯೆ ಖಂಡಿತವಾಗಿ ಬಗೆಹರಿಯುವುದಿಲ್ಲ ರಿಟೈರ್ಡ್ ಆಗಿರುವವರನ್ನೂ ಪುನಃ ನೇಮಕ ಮಾಡುವುದನ್ನು ಮತ್ತು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಅವರನ್ನು ರೀ-ಎಂಪ್ಲಾಯ್ ಮಾಡುವುದನ್ನು ಆದಷ್ಟು ಇನ್ನು ಮುಂದೆ ಸರ್ಕಾರದವರು ಕಡಿಮೆಮಾಡಬೇಕು. ಈ ವರದಿಯಲ್ಲಿ ಒಂದು ಕಡೆ ಒಬ್ಬ ತಹಸೀಲ್ದಾರರು ಪೆಟ್ಟಿ ಕ್ಯಾಷ್ ಮೇಲಿರುವಷನಾದರೂ ಅವನು ೧೬೦೦ ರೂಪಾಯಿಗಳ ಚಿಲ್ಲರೆಯನ್ನು ದುರುಪಯೋಗ ಮಾಡಿದರೆಂದು ಕರಪ್ಷನ್ ಚಾರ್ಜಸ್‌ನ್ನು ಅವರಮೇಲೆ ಹಾಕಿದ್ದಾರೆ.

ಇಂಥ ಸಾಕಷ್ಟು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು, ಸರ್ಕಾರಕ್ಕೆ ಆಯೋಗದವರು ಶಿಫಾರ್ಸು ಮಾಡಿದ್ದಾರೆ. ಆದಾಗ್ಯೂ ಇಲ್ಲಿ ಒಬ್ಬ ತಹಸೀಲ್ದಾರರು ನಿವೃತ್ತಿಯಾಗುವವರೆಗೂ ಸುಮ್ಮನಿದ್ದು ನಂತರ ಅವರ ಕೈಕೆಳಗಿದ್ದ ರೆವಿನ್ಯೂ ಇನ್‌ಸ್ಪೆಕ್ಟರ ಮೇಲೆ ಈಗ ಸರ್ಕಾರದವರು ಕ್ರಮ ಕೈಗೊಂಡಿದ್ದಾರೆ. ಇದು ಸರಿಯಾದುದಲ್ಲ. ಆ ಆಯೋಗದವರು ಹೀಗೆ ಇನ್ನೂ ಅನೇಕ ಅಕ್ರಮಗಳನ್ನು ತೋರಿಸಿ ಕೊಟ್ಟಿದ್ದಾಗ್ಯೂ ಸರ್ಕಾರದವರು ಅವುಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಗಮನ ಕೊಟ್ಟಿಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ಸರ್ಕಾರದವರು ಪ್ರಮೋಷನ್‌ಗಳನ್ನು ಕೊಟ್ಟನಂತರ ಆಯೋಗದವರ ಶಿಫಾರ್ಸನ್ನು ಕೇಳುತ್ತಿದ್ದಾರೆ. ಇದು ಸರಿಯಾದ್ದಲ್ಲ. ಹೀಗೆ ಇನ್ನು ಡಿಸಿಪ್ಲಿನರಿ ಆಕ್ಷನ್ ವಿಷಯದಲ್ಲೂ ಕೂಡ ಸರ್ಕಾರದವರು ಆಯೋಗದವರ ಸಲಹೆಯನ್ನು ಪಾಲಿಸದಿರುವುದು ಸರಿಯಾದುದಲ್ಲ. ಪ್ರತಿಯೊಂದು ಸಂದರ್ಭದಲ್ಲೂ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ಮಾಡಿರುವುದು ಸರಿಯಾಗಿಲ್ಲ ಅದನ್ನು ಕೂಡಲೆ ಸರಿಪಡಿಸಬೇಕೆಂದು ಸೂಚನೆಗಳನ್ನು ಕೊಟ್ಟಿದ್ದಾರೆ. ಸರ್ಕಾರ ಮತ್ತು ಸರ್ಕಾರ ನಡೆಸತಕ್ಕ ಅಧಿಕಾರಿಗಳು ಈ ವಿಚಾರಕ್ಕೆ ಗಮನಕೊಡುತ್ತಿಲ್ಲ ಎಂಬುದಾಗಿ ಅವರು ಹೇಳಿದ್ದಾರೆ. ಈ ವಿಚಾರಕ್ಕೆ ಸರ್ಕಾರ ಕೂಡಲೆ ಗಮನಕೊಡಬೇಕೆಂದು ಹೇಳುತ್ತೇನೆ.

ಇನ್ನು ರಾಜ್ಯಾಂಗಕ್ಕೆ ವಿರುದ್ಧವಾಗಿ ಅನೇಕ ರೂಲ್ಸ್‌ಗಳನ್ನು ಮಾಡಿದ್ದಾರೆಂದು ಕೆಲವನ್ನು ಎತ್ತಿ ತೋರಿಸಿದ್ದಾರೆ. ಕನ್ನಡ ಸ್ಟೆನೋಗ್ರಾಫರ್, ಟೈಪಿಸ್ಟ್‌ಗಳು ಸಾಕಷ್ಟು ಸಿಗುತ್ತಿಲ್ಲವೆಂಬುದಾಗಿ ಹೇಳಿದ್ದಾರೆ. ಇಂಥ ಹುದ್ದೆಗಳಿಗೆ ಜನರನ್ನು ಆಕರ್ಷಣೆ ಮಾಡಲು ಸರ್ಕಾರ ಹೆಚ್ಚಿನ ಪ್ರೋತ್ಸಾಹಗಳನ್ನು ಕೊಟ್ಟು ಜನರನ್ನು ಆ ಬಾಬಿನಲ್ಲಿ ತಯಾರಿಸಬೇಕಾದುದು ಅತ್ಯಗತ್ಯ. ರಾಜ್ಯದಲ್ಲಿ ಇತ್ತೀಚೆಗೆ ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯನ್ನಾಗಿ ಮಾಡಿರುವುದರಿಂದ ಆಫೀಸುಗಳ ಕೆಲಸ ಕಾರ್ಯಗಳು ಸುಲಲಿತವಾಗಿ ಶೀಘ್ರವಾಗಿ ನಡೆಯಬೇಕಾಗಿದ್ದರೆ ಕನ್ನಡ ಶೀಘ್ರಲಿಪಿಗಾರರು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯಬೇಕಾದ್ದು ಅತ್ಯವಶ್ಯಕ. ಸರ್ಕಾರ ಇದಕ್ಕೆ ಹೆಚ್ಚಿನ ಗಮನ ಕೊಡಬೇಕು.

ಇನ್ನು ಲೋಕಲ್ ಕ್ಯಾಂಡಿಡೇಟುಗಳ ವಿಚಾರಕ್ಕೆ ಬಂದರೆ ಎಂಪ್ಲಾಯಿಮೆಂಟ್ ಎಕ್ಸ್‌ಛೇಂಜಿನಿಂದ ತೆಗೆದುಕೊಂಡ ಜನರನ್ನೇ ೩-೪ ವರ್ಷಗಳ ಕಾಲ ಕಂಟಿನ್ಯೂ ಮಾಡಿಕೊಂಡು ಬರುತ್ತಿದ್ದಾರೆ. ಖಾಲಿಬಿದ್ದಿರತಕ್ಕ ಸ್ಥಾನಗಳನ್ನು ಸಕಾಲಕ್ಕೆ ಭರ್ತಿಮಾಡುತ್ತಿಲ್ಲ ಇದರಿಂದ ಸರ್ಕಾರಿ ನೌಕರಿಗೆ ಸೇರತಕ್ಕ ಜನರಿಗೆ ಏಜ್ ಬಾರಾಗಿ ಅನೇಕರು ತೊಂದರೆಗೀಡಾಗಿದ್ದಾರೆ. ಇನ್ನು ಕೆಲವು ಸಂದರ್ಭದಲ್ಲಿ ಇನ್‌ಛಾರ್ಜ್ ಅರೇಂಜ್‌ಮೆಂಟ್ ಮಾಡಿ ಅಲ್ಲಿ ಕೂಡ ಖಾಲಿ ಹುದ್ದೆಗಳನ್ನು ಭರ್ತಿಮಾಡುತ್ತಿಲ್ಲ. ಇದರಿಂದ ಆ ಸ್ಥಾನಗಳಲ್ಲಿ ಕೆಲಸಮಾಡತಕ್ಕ ಜನರಿಗೆ ಹುಮ್ಮಸ್ಸಿರುವುದಿಲ್ಲ. ಅವರು ಅಂಥಾ ಸ್ಥಾನಗಳಲ್ಲಿ ಶ್ರದ್ಧೆಯಿಂದ ಕೆಲಸ ಮಾಡಬೇಕಾಗಿದ್ದರೆ ಆ ಸ್ಥಾನಗಳಲ್ಲಿ ಅರ್ಹರಾದಂಥ ಜನರನ್ನು ದಕ್ಷರಾದಂಥ ಜನರನ್ನು ಬೇಗ ಭರ್ತಿ ಮಾಡುವುದು ಒಳ್ಳೆಯದು. ಈ ದಿವಸ ಬೆಂಗಳೂರು ರೂರಲ್ ಡಿ.ಇ.ಒ. ಹುದ್ದೆ ಹೀಗೆ ಇನ್‌ಛಾರ್ಜ್ ಅರೇಂಜ್ ಮಾಡಿದ್ದಾರೆ. ಆ ಸ್ಥಾನ ಖಾಲಿ ಇದ್ದರೂ ಅದನ್ನು ಭರ್ತಿಮಾಡುವುದಕ್ಕೆ ಕಾರ್ಯಕ್ರಮ ಕೈಗೊಂಡಿಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ಹಂಗಾಮಿಯಾಗಿ ಬಡ್ತಿ ನೀಡಿದಂತೆ ನಟಿಸಿ ಕೊನೆಯಲ್ಲಿ 'ಹಿ ಮೇಬಿ ಅಪಾಯಿಂಟೆಡ್ ವಿತ್ ರಿಟ್ರಾಸ್ಪೆಕ್ಟೀವ್ ಇಂದಿ ಸೆಡ್ ಪೋಸ್ಟ್' ಎಂದು ಬರೆಯುತ್ತಿದ್ದಾರೆ. ಹೀಗೆಲ್ಲಾ ಮಾಡತಕದ್ದು ಹೈಲಿ ಇರ್ರೆಗುಲರ್ ಎಂದು ಆಯೋಗದವರು ಹೇಳಿದ್ದಾರೆ. ಇನ್ನು ಆ ಆಯೋಗದವರು 'ಡಿಲೆ ಇನ್ ಫರ್ನಿಷಿಂಗ್ ದಿ ರಿಕ್ವಿಜಿಷನ್ ಆಫ್ ಅಪಾಯಿಂಟ್‌ಮೆಂಟ್ಸ್' ಎಂದು ಹೇಳಿದ್ದಾರೆ. ಹೀಗೆಲ್ಲಾ ಮಾಡಬಾರದು. ಸರ್ಕಾರದವರು ಆಯೋಗದವರಿಗೆ ಸಾಧ್ಯವಾದಷ್ಟು ಬೇಗ ಈ ವಿಷಯ ತಿಳಿಸಬೇಕಾದ್ದು ಅಗತ್ಯ. ಇಲ್ಲವಾದರೆ ಆಯೋಗದವರಿಗೆ ಸಕಾಲಕ್ಕೆ ಜನರನ್ನು ಖಾಲಿ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವುದಕ್ಕೆ ತೊಂದರೆಯಾಗುತ್ತದೆ,

ಆದರೆ ಈ ಸಭೆಯ ಮುಂದೆ ಚರ್ಚೆಗೆ ೧೯೬೭ ಮತ್ತು ೧೯೬೮ನೇ ಸಾಲಿನ ವರದಿಯನ್ನು ಇಟ್ಟಿದ್ದಾರೆ. ಇದನ್ನು ಈ ದಿವಸ ಚರ್ಚೆ ಮಾಡುವುದರಿಂದ ತಕ್ಕ ಪ್ರಯೋಜನವಾದರೂ ಏನು ? ಅನೇಕರು ಈ ದಿವಸ ರಿಟೈರಾಗಿದ್ದಾರೆ. ಆದುದರಿಂದ ಆಯಾಯ ವರ್ಷದ ವರದಿಯನ್ನು ಆಯಾಯ ವರ್ಷವೇ ಚರ್ಚೆಗೆ ಇಡತಕ್ಕದ್ದು ಒಳ್ಳೆಯದು. ಆಗ ಚರ್ಚೆ ಮಾಡುವುದಕ್ಕೂ ಅನುಕೂಲವಾಗುತ್ತದೆ.

(ಶ್ರೀ ಟಿ. ಆರ್. ಶಾಮಣ್ಣ)

"1967-68 : Placing for long period vacancies without filling up posts by promotion has caused lot of inconvenience, particularly in the Education Department. That has to be looked into."

ಹೀಗೆ ಹೇಳಿದ ನಂತರ ಅವರು ಮತ್ತೆ ಏನು ಹೇಳಿದ್ದಾರೆಂದರೆ :—

1969—70

"Paucity of Reserved Candidates. The response from candidates belonging to the Backward Classes, Scheduled Castes and Scheduled Tribes was poor for some of the categories of posts advertised by the Commissioner in the previous year."

ಇಂಥ ರಿಜರ್ವೇಷನ್ ಸ್ಥಾನಗಳಿಗೆ ಆ ಕ್ಲಾಸಿನ ಕ್ಯಾಂಡಿಡೇಟುಗಳು ಇದ್ದರೆ ಕೂಡಲೆ ಆ ಸ್ಥಾನಗಳನ್ನು ಆ ಅಭ್ಯರ್ಥಿಗಳಿಗೆ ಹಂಚುವುದು ಅಗತ್ಯ. ಹಾಗೆ ಅವರಿಗೆ ಆ ಹುದ್ದೆಗಳನ್ನು ಅವರಿಗೆ ತಕ್ಷಣ ಹಂಚದಿದ್ದರೆ ಅವರಿಗೆ ಅನ್ಯಾಯ ಮಾಡಿದಹಾಗೆ ಆಗುತ್ತದೆ.

"Response from the Reserved categories of candidates continued to be poor even with regard to some of the posts like Cinema Operators, Physical Education Instructors, Public Assistants, Research Officers and Library Assistants. ಇಂಥ ಸಂದರ್ಭಗಳಲ್ಲಿ ಸರ್ಕಾರದವರು ಆ ಕ್ಲಾಸಿನ ಅಭ್ಯರ್ಥಿಗಳಿಗೆ ವಿಶೇಷ ಸೌಲಭ್ಯಗಳನ್ನು ಕೊಟ್ಟು ಅವರಿಗೆ ಅಗತ್ಯವಾದ ಟ್ರೈನಿಂಗನ್ನೂ ಕೂಡ ಕೊಟ್ಟು ಅವರನ್ನು ಆ ಹುದ್ದೆಗಳಿಗೆ ತಯಾರು ಮಾಡಬೇಕಾದುದು ಅತ್ಯವಶ್ಯಕ.

"General Remarks.—During the year under report, administrative delays and other irregularities on the part of Government and the Heads of Departments continued as in the previous years. There was delay in issuing statutory Cadre and Recruitment Rules of the several Departmenes even after the concerned draft rules had been approved by the Commission. This has resulted in arbitrary appointments."

ಇತ ; ಪರ ಸರ್ಕಾರದವರು ಇಂಥ ರಿಮಾರ್ಕ್ಸ್‌ಗಳಿಗೆ ಅವಕಾಶ ಕೊಡಬಾರದು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವಲ್ಲಪ್ಪ (ಬಿರೂರು).—

ಸನ್ಮಾನ ಅಧ್ಯಕ್ಷರೇ.—ಸನ್ಮಾನ್ಯ ಮುಖ್ಯ ಮಂತ್ರಿಗಳು ಈಗ ಸಭೆಯ ಮುಂದೆ ಮಂಡಿಸಿರತಕ್ಕ ಮೈಸೂರು ಲೋಕಸೇವಾ ಆಯೋಗದವರ ವರದಿಗಳ ಬಗ್ಗೆ ಪರ್ಯಾಲೋಚಿಸುವುದು–ಎಂಬ ವಿಚಾರದಲ್ಲಿ ನಾನು ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಮ್ಮಲ್ಲಿ ದಕ್ಷವಾದ ಆಡಳಿತ ನ್ಯಾಯವಾದ ಆಡಳಿತ ಇರಬೇಕು ಎಂಬ ಈ ಒಂದು ಮೂಲ ಉದ್ದೇಶದಿಂದಲೇ ರಾಜ್ಯ ಸರ್ಕಾರ ಮತ್ತು ಈ ಲೋಕಸೇವಾ ಆಯೋಗದವರು ಇಬ್ಬರೂ ಒಂದು ಹೊಂದಾವಣಿಕೆಯಿಂದ ಕೆಲಸ ಮಾಡಬೇಕಾದುದು ಅತ್ಯಗತ್ಯ. ಇದರಿಂದ ಹೀವೆಲಾಡಿದರೆ ಒಂದು ಉತ್ತಮ ಫಲಿತಾಂಶ ಉಂಟಾಗುತ್ತದೆಂಬುದು ಈ ವರದಿಗಳಿಂದಲೇ ಗೊತ್ತಾಗುತ್ತದೆ. ಈ ದಿವಸ ಸಭೆಯ ಮುಂದೆ ಮೂರು ವರ್ಷಗಳ ವರದಿಗಳನ್ನು ಇಟ್ಟಿದ್ದಾಗ್ಗೂ ೧೯೬೯–೭೦ನೇ ಸಾಲಿನ ವರದಿಯಲ್ಲಿ ಈ ರೀತಿ ಹೇಳಿದ್ದಾರೆ :—

"During the year under report, administrative delays and other rregularities on the part of Government and the Heads of Departments continued as in the previous years. There was dely in issuing statutory Cadre and Recruitment Rules of the servral Departments even after concerned draft rules had been approved by the Commission. This has resulted in arbitrary appointments.

Government as well as the Heads of Departments consulted the Commission without furnising complete information and/or records in respect of promotions, disciplinary matters etc. Such incomplete reference led to somewhat lengthy and avoidable correspondence and delay in furnishing the advice of the Commisson.

As mentioned, earlier, the Commission feel that Government should consult them before taking decision rather than seeking the stamp of approval only after the event.

In spite of all efforts of the Commission to impress upon the Government the need to reduce delays and lapses of the kind cited, there was no improvement even during this year."

ಲೋಕಸೇವಾ ಆಯೋಗಕ್ಕೂ ಮತ್ತು ಸರಕಾರಕ್ಕೂ ಹೆಚ್ಚು ಹೊಂದಾಣಿಕೆ ಇರುವಂತೆ ಕಾಣುತ್ತಿಲ್ಲ. ಅದಿರಬೇಕಾದ್ದು ಅವಶ್ಯಕ. ಹಾಗಿದ್ದು ರಾಜ್ಯ ಸರಕಾರ ಸಕಾಲದಲ್ಲಿ ಯಾವ ಕೆಲಸಕ್ಕೆ ಎಷ್ಟು ಜನ ಏನು ಅರ್ಹತೆ ಇರುವವರು ಬೇಕು ಎಂದು ತಿಳಿಸಿ ಲೋಕಲ್ ಕ್ಯಾಂಡಿಡೇಟ್ಸ್ ನೇಮಕಮಾಡಲು ಅವಕಾಶ ವಿಲ್ಲದಂತೆ ನೋಡಿಕೊಳ್ಳಬೇಕು. ಹಾಗೆ ಮಾಡಿದರೆ ಅನುಕೂಲ ಹಾಗಿಲ್ಲದೆ ಲೋಕಲ್ ಅಪಾಯಿಂಟ ಮೆಂಟ್ಸ್ ಒಂದೆರಡು ವರ್ಷದವರೆಗೆ ಮಾಡಿ ನಂತರ ಕಮಿಷನ್ನಿಗೆ ತಿಳಿಸಿದರೆ ಅರ್ಹರಾದ ನೌಕರರನ್ನು ನಿಯಮಗಳ ರೀತಿಯಲ್ಲಿ ನೇಮಕಮಾಡಲು ಸಕಾಲದಲ್ಲಿ ಅವಕಾಶವಾಗುವುದಿಲ್ಲ. ಆದುದರಿಂದ ನಿಯಮಾವಳಿಯನ್ನು ಅನುಸರಿಸಿ ದಕ್ಷರೂ ಮತ್ತು ಪ್ರಾಮಾಣಿಕರಾದವರೂ ಯಾರಿರುವರೋ ಅವರನ್ನು ನೇಮಿಸಲು ತೊಂದರೆಯಾಗುವುದು. ಇದಕ್ಕೆ ಅವಕಾಶವಿಲ್ಲದಂತೆ ರಾಜ್ಯ ಸರಕಾರ ಜಾಗ್ರತೆಯಾಗಿ ಯಾವ ಇಲಾಖೆಗೆ ಎಷ್ಟು ಸಂಖ್ಯೆಯಲ್ಲಿ ಯಾವ ಅಧಿಕಾರಿಗಳು ಬೇಕಾಗುವರು ಎಂಬುದನ್ನು ಲೋಕಸೇವಾ ಆಯೋಗಕ್ಕೆ ತಿಳಿಸಿ ಅದು ಸಕಾಲದಲ್ಲಿ ಅರ್ಹರಾದವರನ್ನು ಆರಿಸಿ ಕಳಿಸಲು ಅವಕಾಶಮಾಡಬೇಕು.

ಈಗ ಲೋಕಸೇವಾ ಆಯೋಗದ ನಿಯಮಾವಳಿಗಳಲ್ಲಿ ಕೆಲವು ತಿದ್ದುಪಡಿ ಆಗಬೇಕಾದ್ದು ಅವಶ್ಯಕ ವಾಗಿದೆ. ಏಕೆಂದರೆ ಕನ್ನಡ ರಾಜ್ಯದಲ್ಲಿ ಕನ್ನಡಿಗರಿಗೆ ಹೆಚ್ಚು ಅವಕಾಶವಿರಬೇಕಾದ್ದು ಆವಶ್ಯಕ. ಈಗ ಅದಕ್ಕೆ ಸಾಕಷ್ಟು ಅವಕಾಶವಿಲ್ಲ. ಆದುದರಿಂದ ಬೇರೆ ರಾಜ್ಯಗಳಲ್ಲಿರುವಂತೆ ಇಲ್ಲೂ ಕನ್ನಡಿಗರಿಗೆ ಉದ್ಯೋಗಗಳಲ್ಲಿ ಹೆಚ್ಚು ಅವಕಾಶ ದೊರೆಯುವಂತೆ ನಿಯಮಗಳಲ್ಲಿ ತಿದ್ದುಪಡಿ ಮಾಡಬೇಕು. ಇಲ್ಲದಿದ್ದರೆ ಕಷ್ಟವಾಗುವುದು. ಲೋಕಸೇವಾ ಆಯೋಗದ ಪರೀಕ್ಷೆಗಳಿಗೆ ಇಂಗ್ಲೀಷು ಅಥವ ಕನ್ನಡದಲ್ಲಿ ಉತ್ತರ ಬರೆಯಲು ಅವಕಾಶವಿರಬೇಕು, ಅದಕ್ಕೆ ತಕ್ಕಂತೆ ನಿಯಮಗಳಲ್ಲಿ ಅವಕಾಶಮಾಡಿದರೆ ಆಗ ಹಳ್ಳಿಗಾಡಿನವರಿಗೆ ತುಂಬ ಅನುಕೂಲವಾಗುವುದು. ಇದಕ್ಕೆ ಅವಕಾಶವಾಗುವಂತೆ ನಿಯಮಗಳನ್ನು ತಿದ್ದುಪಡಿ ಮಾಡಬೇಕು.

ಎರಡನೆಯದಾಗಿ ಇಂದು ಹೊರಗಡೆಯವರು ಬಂದು ನಮ್ಮ ದೇಶದ ಲೋಕಸೇವಾ ಆಯೋಗದ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ಅವಕಾಶವಿದೆ, ಹಾಗೆ ಕುಳಿತು ತೇರ್ಗಡೆಯಾಗಿ ಅವರು ನಮ್ಮ ರಾಜ್ಯದಲ್ಲಿ ಕೆಲಸಗಳಿಗೆ ನೇಮಕವಾಗಲು ಅವಕಾಶವಿದೆ. ಅವರು ಕನ್ನಡ ಕಲಿಯಬೇಕು. ಕನ್ನಡ ಹೊರಗಿನವರು ಕಲಿಯುವಂತೆ ಕಡ್ಡಾಯಮಾಡಬೇಕು. ಹಾಗೆ ಮಾಡಿದರೆ ನಮ್ಮವರಿಗೆ ಅನುಕೂಲವಾಗುವುದು. ಒರಿಸ್ಸ, ಮದ್ರಾಸು ಮುಂತಾದ ಕಡೆಗಳಲ್ಲಿ ದೇಶಭಾಷೆಗೆ ಹೆಚ್ಚು ಬೆಲೆ ಕೊಟ್ಟು ಮಹತ್ವ ನೀಡಿ ಆ ದೇಶದವರಿಗೆ ಅನುಕೂಲಮಾಡಿದ್ದಾರೆ. ಅಲ್ಲಿ ಆಯಾ ದೇಶ ಭಾಷೆಗಳ ಒಂದು ಪ್ರಶ್ನೆಪತ್ರಿಕೆಯನ್ನು ಕಡ್ಡಾಯ ಮಾಡಿದ್ದಾರೆ. ಅದರಲ್ಲಿ ತೇರ್ಗಡೆಯಾದರೆ ಉಳಿದ ವಿಷಯಗಳ ಪ್ರಶ್ನೆಪತ್ರಿಕೆಗಳಿಗೆ ಅವರು ಉತ್ತರ

(ಶ್ರೀ ಎಂ. ಮಲ್ಲಪ್ಪ)

ಕೊಡಲು ಅವಕಾಶ ಕೊಡುವರು. ಆ ರೀತಿ ಇಲ್ಲೂ ಮಾಡಿ ಕನ್ನಡ ಭಾಷೆಯ ಒಂದು ಪ್ರಶ್ನೆ ಪತ್ರಿಕೆಯನ್ನು ಕಡ್ಡಾಯಮಾಡಿ ಅದರಲ್ಲಿ ಉತ್ತೀರ್ಣರಾದವರಿಗೆ ಉಳಿದ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಿಗೆ ಉತ್ತರ ಬರೆಯಲು ಅವಕಾಶ ಮಾಡಿದರೆ ಆಗ ಕನ್ನಡಿಗರಿಗೆ ಹೆಚ್ಚು ಅವಕಾಶ ದೊರೆಯುವುದು. ಹಾಗೆ ಮಾಡಬೇಕೆಂದು ಪ್ರಾರ್ಥನೆಮಾಡುತ್ತೇನೆ.

ಈಗ ಇಂಟರವ್ಯೂ ಮಾರ್ಕ್ಸ್ ೩೦ ಎಂದು ನಿಗದಿಮಾಡಲಾಗಿದೆ. ಇದನ್ನು ಹಿಂದೆ ರಾಜ್ಯಪಾಲರ ಆಡಳಿತವಿದ್ದಾಗ ಮಾಡಿದ್ದಾರೆ. ಏಕೆ ಹೀಗೆ ಬದಲಾವಣೆ ಮಾಡಿದರೋ ತಿಳಿಯದು. ಇದರಿಂದ ಯಾರಿಗೆ ಹೆಚ್ಚು ಅನುಭವವಿದೆ, ದಕ್ಷತೆ ಇದೆ ಅವರು ಆಯ್ಕೆಯಾಗಲು ತೊಂದರೆಯಾಗುವುದು. ಆದುದರಿಂದ ಮೊದಲು ಯಾವ ರೀತಿ ನಿಯಮವಿತ್ತೋ ಅದನ್ನೇ ಇಟ್ಟುಕೊಳ್ಳಬೇಕು, ಬೇರೆ ದೇಶಗಳಲ್ಲಿ ಇಂಟರವ್ಯೂ ಮಾರ್ಕ್ಸ್ ಬಗ್ಗೆ ಯಾವ ಕ್ರಮ ಅನುಸರಿಸುವರೋ ಇಲ್ಲೂ ಕೂಡ ಅದನ್ನೇ ಅನುಸರಿಸಬೇಕು, ಹಾಗೆ ಮಾಡಿದರೆ ಸರಿಯಾದವರ ಆಯ್ಕೆಯಾಗಲು ಅವಕಾಶವಾಗುವುದು. ರಾಜ್ಯ ಸರಕಾರ ಇದಕ್ಕೆ ತಕ್ಕಂತೆ ನಿಯಮ ಬದಲಾಯಿಸಿ ಸೂಕ್ತವಾದ ಹುಕುಂ ಹೊರಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಮಹಾರಾಷ್ಟ್ರ, ಮದ್ರಾಸು, ಒರಿಸ್ಸ ಮುಂತಾದ ರಾಜ್ಯಗಳಲ್ಲಿ ಇದೇ ರೀತಿ ಮಾಡುತ್ತಿದ್ದಾರೆ. ಯಾರು ಬೇಕಾದರೂ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಆದರೆ ಕನ್ನಡ ಅವರು ಕಲಿತಿರಬೇಕು ಹೀಗೆ ಒತ್ತಾಯಮಾಡಿದರೆ ಕನ್ನಡ ದೇಶದವರಿಗೆ ಹೆಚ್ಚು ಅವಕಾಶ ದೊರೆಯುವುದು. ಕನ್ನಡಿಗರಿಗೆ ಬೇರೆ ದೇಶಗಳಲ್ಲಿ ಕೆಲಸ ಪಡೆಯಲು ಅವಕಾಶ ಕಡಿಮೆಯಿದೆ. ಹೀಗಿರುವುದರಿಂದ ನಿಯಮಗಳನ್ನು ತಿದ್ದುಪಡಿ ಮಾಡಿ ನಮ್ಮವರಿಗೆ ಹೆಚ್ಚು ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕು, ಈಗ ಆಗುತ್ತಿರುವ ತೊಂದರೆ ತಪ್ಪಿಸಬೇಕು ಎಂದು ಸಲಹೆಮಾಡುತ್ತೇನೆ.

ಈಗ ಮೂರು ವರ್ಷಗಳ ವರದಿ ನಮ್ಮ ಮುಂದಿಡಲಾಗಿದೆ, ಇವುಗಳಲ್ಲಿ ಬೇಕಾದಷ್ಟು ನ್ಯೂನತೆಗಳಿವೆ. ಅದನ್ನು ಸರಿಪಡಿಸಬೇಕು. ಲೋಕಸೇವಾ ಆಯೋಗಕ್ಕೆ ಹೆಚ್ಚು ಅವಕಾಶ ಕೊಡಬೇಕು, ಹೆಚ್ಚು ಪ್ರಾತಿನಿಧ್ಯ ಕೊಡಬೇಕು. ರಾಜ್ಯ ಸರಕಾರ ಇದಕ್ಕೆ ಸಾಕಷ್ಟು ಗಮನ ಕೊಡಬೇಕು ಎಂದು ಒತ್ತಾಯಮಾಡುತ್ತೇನೆ.

ಈಗ ಡಿಸ್ಟ್ರಿಕ್ಟ್ ರೆಕ್ರೂಟ್‌ಮೆಂಟ್ ಕಮಿಟಿಎಂದು ಮಾಡಿದ್ದಾರೆ, ಲೋಕಸೇವಾ ಆಯೋಗದ ಹಿಡಿತಕ್ಕೆ ಆ ಕಮಿಟಿಗಳು ಮಾಡುವ ನೇಮಕಗಳು ಸಿಕ್ಕುತ್ತಿಲ್ಲ. ಹೀಗೆ ಬೇಕಾದಷ್ಟು ಇಲಾಖೆಗಳಲ್ಲಿ ನಡೆಯುತ್ತಿದೆ. ಇಂಥ ಸುಮಾರು ೩೫ ಸಮಿತಿಗಳು ನಮ್ಮ ರಾಜ್ಯದಲ್ಲಿವೆ. ಜಿಲ್ಲಾಮಟ್ಟದ ಆಯ್ಕೆಯ ಮಟ್ಟದಲ್ಲಿ ಡಿ.ಪಿ.ಐ. ಭಾಗವಹಿಸುವರು. ಪಿ.ಎಸ್.ಸಿ.ಗೆ ಇವರ ಮೇಲೆ ಹಿಡಿತವಿಲ್ಲ. ಇದು ಸರಿಯಲ್ಲ. ಆ ಕಮಿಟಿಗಳು ಸರಿಯಾಗಿ ಕೆಲಸ ಮಾಡುತ್ತಿವೆಯೋ ಎಂದು ನೋಡಲು ಲೋಕಸೇವಾ ಆಯೋಗಕ್ಕೆ ಅವಕಾಶವಿರಬೇಕು, ಪ್ರತಿ ಜಿಲ್ಲೆಯ ರೆಕ್ರೂಟ್‌ಮೆಂಟ್ ಕಮಿಟಿ ಆಯ್ಕೆಯ ಸಂಬಂಧದಲ್ಲಿ ಲೋಕಸೇವಾ ಆಯೋಗ ಭಾಗವಹಿಸಿ ಉತ್ತಮವಾದ ಸಲಹೆ ನೀಡಲು ಅವಕಾಶ ಮಾಡಬೇಕು ಎಂದು ಸಲಹೆಮಾಡಿ ಮಾತನಾಡಲು ಇಷ್ಟು ಅವಕಾಶ ಕೊಟ್ಟಿದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್) —ಮಾನ್ಯ ಉಪಾಧ್ಯಕ್ಷರೇ, ಇಂದು ಲೋಕಸೇವಾ ಆಯೋಗದ ಮೂರು ವರ್ಷದ ವರದಿಗಳು ನಮ್ಮ ಮುಂದಿದ್ದು ಚರ್ಚೆ ನಡೆಯುತ್ತಿದೆ. ಇದನ್ನು ನೋಡಿದರೆ ಗಾಳಿಗೆ ಗುದ್ದಿ ಮೈ ನೋಯಿಸಿಕೊಂಡಂತಾಗುವುದು. ೧೯೬೭ ರ ವರದಿಗಳು ಈಗ ಬಂದಿವೆ. ಆಗ ಯಾವ ಸರಕಾರ ಅಧಿಕಾರದಲ್ಲಿತ್ತು, ಯಾವ ಧೋರಣೆಯಿತ್ತು ಎಂಬುದನ್ನು ನೋಡಿದರೆ ಈಗ ಇವುಗಳಮೇಲೆ ಚರ್ಚೆಮಾಡಿದರೆ ಅಷ್ಟು ಉಪಯೋಗವಾಗುವುದಿಲ್ಲ ಹೋದ ವರ್ಷದ ವರದಿಯನ್ನು ಈ ವರ್ಷ ಚರ್ಚಿಸಬಹುದು, ಅದು ಬಿಟ್ಟು ಬಹಳ ಹಳೆಯದನ್ನು ಈಗ ಚರ್ಚಿಸುವುದರಿಂದ ಸಾಕಷ್ಟು ಪ್ರಯೋಜನವಾಗುವುದಿಲ್ಲ, ನಾವು ಚರ್ಚಿಸುವಾಗ ಟೀಕೆ ಮಾಡದಿರುವುದಕ್ಕೆ ಸಾಧ್ಯವಿಲ್ಲ ಈ ವರದಿಯಲ್ಲೊಂದು ಕಡೆ ಹತ್ತು ಸಲ ರಿಮೈಂಡರ್ ಕಳಿಸಿದಮೇಲೆ ಸಹ ಸರಕಾರ ಸರಿಯಾದ ಸಮಾಚಾರ ತಿಳಿಸಿರುವುದಿಲ್ಲ ಎಂದು ತಿಳಿಸಿದೆ, ಒಂದು ಸಣ್ಣ ನೇಮಕ ಮಾಡಲು ಬೇಕಾದ ಸಮಾಚಾರ ತಿಳಿಸಲು ಎರಡು ವರ್ಷವಾಗಿದೆ. ಸರಕಾರ ಹೀಗೆ ಮಾಡಿದರೆ ಹೇಗೆ ? ನಂತರ ಸದರಿ ಪೋಸ್ಟ್ ಡ್ರಾಪ್ ಮಾಡಿದೆ ಎಂದು ತಿಳಿಸಿದ್ದಾರೆ. ಹೀಗೆ ಮಾಡಿದರೆ ತೊಂದರೆಯಾಗುವುದು. ಕೆಲವು ಕಡೆ ಸತ್ತುಹೋದವರ ಹೆಸರಿಗೆ ಆರ್ಡರು ಹೋಗಿರುವುದು ಉಂಟು Government deserves condemnation for its lapses and failures. The responsibility of the Government has not been discharged.

ಇಂತಹ ಸಿಚುಯೇಷನ್ ಇದ್ದ ಮೇಲೆ ಪಬ್ಲಿಕ್ ಸರ್ವಿಸ್ ಕಮೀಷನಿಗೆ ಎಷ್ಟು ಇಂಪಾರ್ಟೆನ್ಸ್ ಕೊಡಬೇಕೊ ಅಷ್ಟು ಇಂಪಾರ್ಟೆನ್ಸ್ ಹಿಂದಿನ ಸರ್ಕಾರ ಕೊಡಲಿಲ್ಲ ಆದ್ದರಿಂದ ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿ ಅವರದೇ ಆದ ಒಂದು ಧೋರಣೆ ಇದೆ ಎನ್ನುವ ಮಾತನ್ನು ಜನರು ಆಡುತ್ತಿದ್ದಾರೆ ಪಬ್ಲಿಕ್ ಸರ್ವಿಸ್ ಕಮೀಷನ್ ಮತ್ತು ಸರ್ಕಾರ ಅಣ್ಣತಮ್ಮಂದಿರ ಹಾಗೆ ಇರಬೇಕು. ಹಿರಿಯ ಅಣ್ಣ ಸರಿಯಾಗಿ ನೋಡಿಕೊಳ್ಳದೆ ಅವರಿಂದ ಹಿರಿಯ ಅಣ್ಣನಿಗೆ ಸರಿಯಾಗಿ ರೆಸ್ಪಾನ್ಸ್ ಬರುವುದಿಲ್ಲ. ಅದರಿಂದ ಸಫರ್ ಮಾಡಬೇಕಾಗುವುದು ಮೈಸೂರಿನ ಜನತೆ. ಈಗ ಸಾವಿರಾರು ಲೋಕಲ್ ಕ್ಯಾಂಡಿಡೇಟ್ಸ್ ಏನು ಇದ್ದಾರೆ ಅವರಿಗೆ ಏಜ್‌ಬಾರ್ ಹೋಗುತ್ತ ಇದೆ. ಕ್ಯಾಂಡಿಡೇಟ್ಸ್ ಫಂಡಮೆಂಟಲ್ ರೈಟ್ಸ್‌ಗೆ ಚ್ಯುತಿ ಬರುತ್ತಾ ಇದೆ ಇದಕ್ಕೆ ಕಾರಣರು ಯಾರು ಎಂದರೆ ರಾಜ್ಯ ಸರ್ಕಾರದವರು ಮತ್ತು ಪಬ್ಲಿಕ್ ಸರ್ವಿಸ್ ಸರ್ವಿಸ್ ಕಮಿಷನ್ ನವರು **Fundamental Rights and Directive Principles are therein the Constitution. Right to work is also there. Every one has equal opportunity.** – ಪ್ರತಿಯೊಬ್ಬನಿಗೂ ಕೂಡ ಸಮಾನವಾದ ಹಕ್ಕು ಇದೆ ಅದರಲ್ಲೂ ಕೂಡ ಕಾರ್ಮಿಕ ರಂಗದಲ್ಲಿ ಏನಾದರೂ ಗಲಭೆ ಸಂಭವಿಸಿದರೆ ಪೋಲೀಸರು ದೊಣ್ಣೆ ಉಪಯೋಗಿಸಿಕೊಳ್ಳುತ್ತಿದ್ದಾರೆ ಕೇಳಿದರೆ **The Rule of law is there** ಎಂದು ಹೇಳುತ್ತಾರೆ. **What Rule is there?** ನಿರುದ್ಯೋಗಿಗಳಿಗೆ 22 ವರ್ಷ ಆದಮೇಲೆ ಒಂದು ಸ್ಥಾನವನ್ನು ಕೊಡದೆ ಹೋದರೆ ಅವನು ರಾಜ್ಯ ಸರ್ಕಾರದ ಪಾಲಿಗೆ ಸತ್ತಂತೆ ಎಂದು ತಿಳಿದುಕೊಳ್ಳಬೇಕು ಟೆಕ್ನಿಕಲ್ ಸ್ಟೂಡೆಂಟ್ಸ್‌ಗೆ 30 ವರ್ಷದವರೆಗೂ ಏಜ್ ಲಿಮಿಟ್ ಇದೆ ಅಂತಹ ಲೋಕಲ್ ಕ್ಯಾಂಡಿಡೇಟ್ಸನ್ನು ಟೆಂಪರರಿಯಾಗಿ ಕೆಲಸಕ್ಕೆ ತೆಗೆದುಕೊಂಡರೆ ಪಿ.ಎಸ್.ಸಿ. ಯವರು ಇನ್ನೂ ಕನ್‌ಫರ್‌ಮೇಷನ್ ಮಾಡಿಲ್ಲ. ಅವರಿಗೆ ಟೆಂಪರರಿ ಪೋಸ್ಟ್ ಕೊಟ್ಟಿದ್ದಾರೆ. ಅವರಿಗೆ ಪರ್ಮನೆಂಟ್ ಆಗದೇ ಹೋದರೆ ಅವರಿಗೆ ಈ ರಾಜ್ಯಕ್ಕೆ ದುಡಿಯುವ ಆಸಕ್ತಿ ಇರುವುದಿಲ್ಲ. ಆ ಕರ್ಮಚಾರಿಗಳಲ್ಲಿ ನಾವು ರಾಜ್ಯಕ್ಕೆ ದುಡಿಯಬೇಕು ಎನ್ನುವ ಆಸಕ್ತಿ ಬರಬೇಕಾದರೆ ಅವರನ್ನು ಕನ್‌ಫರ್ಮೇಷನ್ ಮಾಡಬೇಕು. ಇಲ್ಲದೇ ಹೋದರೆ ಅವರು ಏನೋ ಸರ್ಕಾರಿ ನೌಕರಿ ಸಿಕ್ಕಿತು ತಿಂಗಳುಗಳು ತುಂಬಿಸಿ ಬಿಟ್ಟರೆ ಸಿಗ್ನೇಚರ್ ಹಾಕಿಬಿಟ್ಟರೆ ಸಂಬಳ ಸಿಕ್ಕುತ್ತದೆ, ಮನೆಗೆ ತೆಗೆದುಕೊಂಡು ಹೋಗುವ ಎನ್ನುವ ಭಾವನೆ ಬರುತ್ತದೆ. ಆದಕ್ಕೋಸ್ಕರವಾಗಿ ಕಾನ್‌ಸ್ಟಿಟ್ಯೂಷನ್‌ನಲ್ಲಿ ಕರ್ಮಚಾರಿಗಳ ಫಂಡಮೆಂಟಲ್ ರೈಟ್ಸ್ ಏನು ಇದೆಯೋ ಅದನ್ನು ಅವರಿಗೆ ದೊರಕಿಸಿ ಕೊಡಬೇಕು ಅವರು ನಮ್ಮ ದೇಶದ ಸಂಪತ್ತಿಗೆ ಹೆಚ್ಚು ದುಡಿಯಬೇಕಾದರೆ ಅವರಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು ಇದರ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಪಬ್ಲಿಕ್ ಸರ್ವಿಸ್ ಕಮೀಷನ್‌ನವರು ಆಗಲಿ ಅಥವಾ ಸರ್ಕಾರದವರಾಗಲಿ ಅವರು ಒಂದು ಪಾಲಿಸಿಯನ್ನು ಫ್ರೇಮ್ ಮಾಡಬೇಕು. **Beaten track policy must change.** ಅದಕ್ಕಾಗಿ ನಾನು ಹೇಳುವುದು ಏನೆಂದರೆ ಪಬ್ಲಿಕ್ ಸರ್ವಿಸ್ ಕಮೀಷನ್‌ಗೆ ಯಾವರೀತಿಯಾಗಿ ಈಗ ಆಫೀಸರ್ಸ್‌ರನ್ನು ಹಾಕುತ್ತೀರೊ ಅದರಲ್ಲಿ ಒಬ್ಬರ ಜುಡಿಷಿಯಸ್ ಮೈಂಡ್ ಇರತಕ್ಕಂಥವರೊಬ್ಬರು ಇನ್‌ಜಕ್ಟ್ ಮಾಡಬೇಕು. ಒಬ್ಬ ಡಿಸ್ಟ್ರಿಕ್ಟ್ ಜಡ್ಜನ್ನು ಪಬ್ಲಿಕ್ ಸರ್ವಿಸ್ ಕಮೀಷನ್‌ಗೆ ಅಪಾಯಿಂಟ್ ಮಾಡಿ. ಟೂ ಮಚ್ ಟೆಕ್ನಿಕಲಿಟೀಸ್‌ಗೆ ಹೋಗಬಾರದು ಒಬ್ಬ ಜುಡಿಷಿಯಸ್ ಮೈಂಡ್ ಇರತಕ್ಕಂಥವರನ್ನು ಅಲ್ಲಿಗೆ ಹಾಕಿದರೆ ಸರಿಯಾದ ನ್ಯಾಯ ಸಿಕ್ಕುತ್ತದೆ. ಈಗ ಇರತಕ್ಕಂಥ ಕೇಡರ್ ಅಂಡ್ ರೆಕ್ರೂಟ್‌ಮೆಂಟ್‌ನಲ್ಲಿ ಇಲ್ಲ. ಅದನ್ನು ತನ್ನಿ. ಒಬ್ಬ ಹೈಕೋರ್ಟ್ ನ್ಯಾಯಾಧೀಶರಾಗಿರತಕ್ಕಂಥವರನ್ನು ಇನ್ನೂ 10 ವರ್ಷ ಸರ್ವಿಸ್ ಇರತಕ್ಕಂಥವರೊಬ್ಬರನ್ನು ಈ ಪಬ್ಲಿಕ್ ಸರ್ವಿಸ್ ಕಮೀಷನ್‌ಗೆ ನೇಮಿಸಿದರೆ ಅವರ ಜುಡಿಷಿಯಲ್ ಮೈಂಡ್‌ನಿಂದ ಲಾ ಅಂಡ್ ಜಸ್ಟೀಸ್ ದೊರಕುತ್ತದೆ ಎಂದು ಹೇಳಬಯಸುತ್ತೇನೆ. ಈಗ ಟ್ರಿಬ್ಯೂನಲ್‌ನಲ್ಲಿ ನೀವು ಯಾವರೀತಿಯಾಗಿ ಒಬ್ಬ ಡಿಸ್ಟ್ರಿಕ್ಟ್ ಜಡ್ಜನ್ನು ನೇಮಿಸಿದ್ದೀರೋ ಇಲ್ಲೂ ಕೂಡ ಏತಕ್ಕೆ ಅದೇರೀತಿ ಮಾಡಿಲ್ಲಾ ? ಮೈಸೂರು ಸ್ಟೇಟಿನಲ್ಲಿ ಈಗ ರಾಜ್ಯ ಸರ್ಕಾರದ ಮೆಷಿನರಿ ಏನು ಇದೆಯೋ ಅದನ್ನು ಹಾಲೋ ಆಫ್ ಮಾಡಬೇಕಾದರೆ ಒಬ್ಬ ಜುಡಿಷಿಯಸ್ ಮೈಂಡ್ ಇರತಕ್ಕಂಥವರು ಬರಬೇಕು. ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿ ಈಗ ಒಳ್ಳೆಯ ಹೆಸರು ಇಲ್ಲ ಈಗ ಮೈಸೂರು ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿ ಒಬ್ಬ ತಾಸೀಲ್ದಾರ್ ಆಗಬೇಕಾದರೆ ಸಾವಿರಾರು ರೂಪಾಯಿ ಲಂಚ ಕೊಡಬೇಕಾಗುತ್ತದೆ. ಇದು ಆಫೀಸ್‌ ಒಳಗಡೆ ಆಗುತ್ತದೋ ಅಥವಾ ಹೊರಗಡೆ ಆಗುತ್ತದೋ ಗೊತ್ತಾಗುವುದಿಲ್ಲ. ಆದರೆ ಈವೊತ್ತಿನ ದಿವಸ ಪಬ್ಲಿಕ್ ಬಗ್ಗೆ ಹೊರಗಡೆ ಏನು ಇಂಪ್ರೆಷನ್ ಬಂದಿದೆ ಎಂದರೆ ಒಬ್ಬ ತಹಸೀಲ್ದಾರ ಅಪಾಯಿಂಟ್ ಆಗಬೇಕಾದರೆ ಆರು ಸಾವಿರ ರೂಪಾಯಿ ಲಂಚ ಕೊಡಬೇಕು ಎಂದು ಹೇಳುತ್ತಾರೆ. ಅಲ್ಲಿ ಏನಾದರೂ ವಿಜಿಲೆನ್ಸ್ ಇಟ್ಟಿದ್ದಿರಾ ? ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿ ಕೆಲಸ ಮಾಡತಕ್ಕಂಥ ಕರ್ಮಚಾರಿಗಳ ಮೇಲಾಗಲಿ ಅಥವಾ ಹೊರಗಡೆ ಇರತಕ್ಕಂಥ ಕಳ್ಳಾಳಿ ಜನರ ಮೇಲೆ ಆಗಲಿ ಕಣ್ಣು ಇಟ್ಟಿದೀರ ? ಅಲ್ಲಿ ನಿಮ್ಮ ವಿಜಿಲೆನ್ಸ್ ಇದ್ದರೋ ಅಲ್ಲಿ ದೊಡ್ಡ ದೊಡ್ಡ ಹಗ್ಗಣಗಳು ಇವೆ ಎನ್ನುವುದನ್ನು ತಾವು ನೋಡಿಲ್ಲ. ಮುಲ್ಕಂದ ಎಂಬ ಗ್ರಾಮದಲ್ಲಿ ಶಂಕರ ಎಂಬ ಹುಡುಗನಿಗೆ ಎಸ್.ಎಸ್.ಎಲ್.ಸಿ. ಪಾಸಾಗಿ 3 ವರ್ಷ ವಾಯಿತು. ಪೋಸ್ಟ್ ಅಂಡ್ ಟೆಲಿಗ್ರಾಫ್ಸ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ವರ್ಷ ಟ್ರೈನಿಂಗ್ ತೆಗೆದುಕೊಂಡು ಫಸ್ಟ್ ರ್‍ಯಾಂಕ್‌ನಲ್ಲಿ ಪಾಸ್ ಮಾಡಿದ್ದಾನೆ. ಆ ಹುಡುಗನ ವಿರುದ್ಧವಾಗಿ ಸರಪಂಚ್ ಎಂದು ಒಂದು ತಪ್ಪು ಇಂಪ್ರೆಷನ್ ಕ್ರಿಯೇಟ್

(ಶ್ರೀ ವಿ. ಎನ್. ಪಾಟೀಲ್)

ಮಾಡಿದ್ದಾರೆ. ಈ ಹರಿಜನ ಹುಡುಗ ಪೋಸ್ಟ್ ಅಂಡ್ ಟೆಲಿಗ್ರಾಫ್ ಡಿಪಾರ್ಟ್‌ಮೆಂಟಿಗೆ ಬಂದರೆ ಒಬ್ಬ ದೊಡ್ಡ ಅಧಿಕಾರಿಯಾಗುತ್ತಾನೆಂದು ತಿಳಿದು ಯಾವರೀತಿ ಅದರಲ್ಲಿ ರಾಜಕಾರಿಣಿಗಳು ಭಾಗವಹಿಸಿ ಇದರ ಬಗ್ಗೆ ಪೋಲೀಸ್ ರಿಪೋರ್ಟ್ ತರಿಸಿ ಕೊಳ್ಳುವಾಗ ಈ ಹುಡುಗ ಟೆರರಿಸ್ಟ್‌ಗೆ ಆಗಲಿ ನಕ್ಸಲೈಟ್‌ಗಾಗಲಿ ಸೇರಿದವನಲ್ಲನಾದರೂ ಕೂಡ ಇವನು ಆರುಮುಗಂ ಪಾರ್ಟಿ ಆದ ರಿಪಬ್ಲಿಕನ್ ಪಾರ್ಟಿಗೆ ಸೇರಿದವನು ಎಂದು ಇದು ಡೇಂಜರಸ್ ಪಾರ್ಟಿ ಎಂದು ಪೋಲೀಸ್ ರಿಪೋರ್ಟ್ ತರಿಸಿಕೊಂಡರು. ಆದ್ದರಿಂದ ಆತನಿಗೆ ಪೋಸ್ಟ್ ಅಂಡ್ ಟೆಲಿಗ್ರಾಫ್ ಡಿಪಾರ್ಟ್‌ಮೆಂಟಿನವರು ಕೆಲಸ ಕೊಟ್ಟಿಲ್ಲ. ನಮ್ಮ ದೇಶದಲ್ಲಿ ಭಗತ್‌ಸಿಂಗ್ ಅಂತ ರಾಜಕಾರಿಣಿಗಳು ದೇಶಕ್ಕಾಗಿ ಪ್ರಾಣವನ್ನೇ ಕೊಟ್ಟರು. ಅಂಥಾ ಕೆಲವರನ್ನು ಇಂದು ೧೪ರ ಮಧ್ಯರಾತ್ರಿ ನೆನಸಿಕೊಳ್ಳಬೇಕು. ನಮ್ಮ ಸೊಸೈಟಿಯಲ್ಲಿ ಈವೊತ್ತಿನ ದಿವಸ ಯಾವರೀತಿ ನಡೆಯುತ್ತಾ ಇದೆ ಎಂದರೆ ಬುದ್ಧಿವಂತ ಬಂದರೆ ನಮ್ಮ ಮೇಲೆ ಬಂದು ಎಲ್ಲಿ ಕೂತುಕೊಳ್ಳುತ್ತಾನೋ ಎಂದು ಈ ರೀತಿ ಮಾಡುತ್ತಾರೆ. ಈ ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿ ೨೪ ಗಂಟೆಗಳಕಾಲವೂ ಕೂಡ ಬಾಗಿಲು ತೆರದಿರುತ್ತೆ. ಅಲ್ಲಿಗೆ ಬಂದು ಹೋಗುವರು ಎಷ್ಟೋ ಯಾವಾಗ ಯಾರು ಬರುತ್ತಾರೆ ಎಂದು ಒಂದು ನೋಟ್ ಬರೆಯ ಬಹುದು. ಅದಕ್ಕೆ ಆಸ್ಪದ ಕೊಡುವವರು ಯಾರು ? ಆಫೀಸಿನಲ್ಲಿರುವ ಕರ್ಮಚಾರಿಗಳ ಡಿಸ್‌ಇಂಟರೆಸ್ಟ್ ಮತ್ತು ಇನ್‌ಜಸ್ಟೀಸ್‌ನಿಂದ ಈ ರೀತಿ ಆಗುತ್ತದೆ ಎಂದು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿ ಒಳ್ಳೆಯ ಮೆಂಬರ್ಸ್ ಇರಬಹುದು. ಇಲ್ಲ ಎಂದು ಹೇಳುವುದಿಲ್ಲ. ಯಾರೋ ಕೆಲವರು ಕೆಟ್ಟ ಕೆಲಸವನ್ನು ಮಾಡಿದರೆ ಅವರಿಗೂ ಕೆಟ್ಟ ಹೆಸರು ಬರುತ್ತದೆ. ಆದಕ್ಕಾಗಿ ಅದನ್ನು ಪತ್ತೆ ಹಚ್ಚಲು ಒಂದು ವಿಜಲನ್ಸ್ ಇಡಿರಿ ಎಂದು ಹೇಳುತ್ತೇನೆ.

ಇದರ ಬಗ್ಗೆ ಇನ್ನೊಂದು ವಿಷಯ ಹೇಳಬೇಕಾಗಿದೆ. ಪಬ್ಲಿಕ್ ಸರ್ವೀಸ್‌ನವರು ಅಪ್ಲಿಕೇಷನ್ ಕಾಲ್‌ಫಾರ್ ಮಾಡುತ್ತಾರೆ. ಬೆಂಗಳೂರಿನಲ್ಲಿ ಎಕ್ಸಾಮಿನೇಷನ್ ಕಂಡಕ್ಟ್ ಮಾಡುತ್ತಾರೆ. ಆದರೆ ಅದರ ರಿಸಲ್ಟ್ ಬರಬೇಕಾದರೆ ಬಹಳ ಕಾಲ ಹಿಡಿಯುತ್ತದೆ. ಅದುವರೆಗೆ ಅವನ ತಲೆ ಕೂದಲೆಲ್ಲಾ ಉದುರಿ ಹೋಗಿರುತ್ತದೆ. ಎಕ್ಸಾಮಿನೇಷನ್ ಆಗಿ ೮ ತಿಂಗಳು ಕಳೆದರೂ ಕೂಡ ರಿಸಲ್ಟ್ ಅನೌನ್ಸ್ ಆಗಿರುವುದಿಲ್ಲ. ಪಬ್ಲಿಕ್ ಸರ್ವಿಸ್ ಕಮೀಷನ್ ಎಬೋ ಬೋರ್ಡ್ ಇರಬೇಕಾದುದ್ದು ಬೀರೋ ಬೋರ್ಡ್ ಮಟ್ಟಕ್ಕೆ ಬಂದಿದೆ ಎಂದು ಜನರಲ್ಲಿ ಸಂಶಯ ಬಂದಿದೆ. ಇದರಲ್ಲಿ ಬೇರೆ ಬೇರೆ ತರಹ ಕುಂಭಕೋಣವೂ ನಡೆಯುತ್ತಾ ಇದೆ ಎನ್ನುವ ಸಂಶಯವೂ ಕೂಡ ಜನರಲ್ಲಿ ಬಂದಿದೆ. ಆದುದರಿಂದ ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿ ಒಳ್ಳೆಯ ಅಭಿಪ್ರಾಯ ಹುಟ್ಟಿಸಬೇಕು. ಎಂದು ಒಪ್ಪಿಕೊಳ್ಳಿ. ಯಾವ ಮಂತ್ರಿಗಳೇ ಆಗಲಿ ಯಾರೇ ಆಗಲಿ ಹಿಂದೆ ಆರೀತಿಯಾಗಿದೆ, ಈರೀತಿಯಾಗಿದೆ ಎಂದು ಹೇಳದೆ ಹಿಂದಿನಿಂದಲೂ ಬಂದಿರತಕ್ಕಂಥ ಲಾಪ್ಸಸ್ ಫೈಲ್ಯೂರ್ಸ್ ಇನ್ನು ಮುಂದೆ ಬರದಂತೆ ಇದರ ಬಗ್ಗೆ ನೀವು ಸ ಧಾರಿಸಬೇಕು ಎಂದು ಹೇಳುತ್ತೇನೆ ವೈಯುಕ್ತವಾಗಿ ಒಬ್ಬ ಮೆಂಬರ್ ಮೇಲೆ ಟೀಕೆ ಮಾಡುವುದು ಬೇಡ. ಈ ಪಬ್ಲಿಕ್ ಸರ್ವಿಸ್ ಕಮೀಷನ್ ಜನಕ್ಕೆ ಒಂದು ಅನ್ನ ಕೊಡತಕ್ಕಂಥ ಸ್ಥಾನ. ಅದುದರಿಂದ ಈ ಪಬ್ಲಿಕ್ ಸರ್ವಿಸ್ ಕಮೀಷನ್‌ನಲ್ಲಿ ಕಾನ್‌ಫಿಡೆನ್ಸ್ ಬರಬೇಕಾದರೆ ಒಬ್ಬ ಶ್ರೇಷ್ಠ ನ್ಯಾಯಾಧೀಶರನ್ನು ಹಾಕಬೇಕು. ಅವರಿಂದ ಒಳ್ಳೆಯ ತೀರ್ಮಾನ ಬರುತ್ತದೆ. ಆರೀತಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಬೀದರೆ ಡಿಸ್ಟ್ರಿಕ್ಟ್‌ನಲ್ಲಿ ಜನಗಳಿಗೆ ಕೆಲವು ಕಡೆ ಕುಡಿಯುದಕ್ಕೆ ನೀರು ಇಲ್ಲ, ಅಲ್ಲಿ ವ್ಯವಸಾಯ ಫೈಲ್ಯೂರ್ ಆಗಿ ತಿನ್ನುವುದಕ್ಕೆ ಅನ್ನ ಇಲ್ಲ. ಹಸುಗಳಿಗೆ ಮೇವು ಇಲ್ಲ. ಅಲ್ಲದೆ ರೈತರ ಬಳಿ ಇರುವ ೮೦೦ ರೂಪಾಯಿ ಬೆಲೆ ಬಾಳುವ ಎತ್ತನ್ನು ೨೦೦ ರೂಪಾಯಿಗೆ ಮಾರಿಕೊಳುತ್ತಿದ್ದಾರೆ. ಈರೀತಿ ಸನ್ನಿವೇಶ ಇದೆ.

ಕಸ ಗುಡಿಸುವ ಕೆಲಸಕ್ಕೆ ಬೇಕಾದರೆ ಲಕ್ಷಾಂತರ ಅರ್ಜಿಗಳು ಬರುತ್ತವೆ. ಆದರೆ ಯಾರೂ ಇಂಟರ್‌ವ್ಯೂ ಬರಲಿಲ್ಲವೆಂದಕ-ಹೇಳಿದರೆ-ಯಾರನ್ನು ಆರಿಸಬೇಕು ಎಂದು ಇದ್ದರೋ ಅವರು ಬರಲಿಲ್ಲ ಎಂದು ತಿಳಿಯ ಬೇಕಾಗುತ್ತದೆ ಹೆಸರಿಗೆ ಮಾತ್ರ ಅಡ್ವರ್ಟೈಸ್ ಮಾಡಿದ್ದರು ಎಂದು ಹೇಳಬೇಕಾಗುತ್ತದೆ. ನಮ್ಮಂಥ ಎಂ.ಎಲ್.ಎ. ಸುತ್ತ ನೂರಾರು ಜನರು ಒಂದು ಕೆಲಸ ಕೊಡಿ ಎಂದು ಬರುತ್ತಾರೆ. ಅಂಥದ್ದರಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ಅಡ್ವರ್ಟೈಸ್ ಮಾಡಿದರೆ ಯಾರು ಬರಲಿಲ್ಲ ವೆಂದರೆ, ಆದರಲ್ಲಿ ಮೂಲ ಭೂತವಾಗಿ ಏನೋ ತಪ್ಪು ಇದೆ ಎಂದು ತಿಳಿಯಬೇಕು, ಈಸ್ಟ್ ಜರ್ಮನಿಯ ಪ್ರೊಫೆಸರ್ ಹತ್ತಿರ ಮಾತನಾಡಿದಾಗ ಕೆಲವು ವಿಷಯಗಳು ಗೊತ್ತಾದುವು ಫ್ಯಾಸಿಸ್ಟ್ ಮೂವಮೆಂಟಿನಿಂದ ಎಷ್ಟೋ ಜನಗಳಿಗೆ ಅನ್ಯಾಯವಾಗಿದೆ. ಆದರೂ ಕೂಡ ಅಲ್ಲಿನ ಟೀಚರ್ಸ್ ಮತ್ತು ಇತರರು ಅಭ್ಯಾಸ ಬಲದಿಂದ ಹೆರ್ ಹಿಟ್ಲರ್, ಹೆರ್ ಹಿಟ್ಲರ್ ಎಂದು ಹೇಳುತ್ತಾರಂತೆ. ಜರ್ಮನಿಯ ರಕ್ತ ಎಷ್ಟು ಪವಿತ್ರವಾಗಿದೆ, ಜರ್ಮನಿಯ ರಾಷ್ಟ್ರ ಎಷ್ಟು ಪವಿತ್ರವಾಗಿದೆ ಎಂದು ಹುಟ್ಟಿನಿಂದಲೇ ಕಲಿಸಿದ್ದರಿಂದ ಅದು ಅವರಿಗೆ ಅಭ್ಯಾಸವಾಗಿ ಬಂದಿದೆ. ಅಂಥ ಜರ್ಮನಿ ದೇಶ ಇಂದು ಎಲ್ಲರೂ ಸಮಾನರು ಎಂದು ಹೇಳುವಂಥ ಸ್ಥಿತಿ

ಯಲ್ಲಿದೆ. ನಮ್ಮಲ್ಲಿ ಹೆಬ್ಬೆರಳು ಒತ್ತುವ ಜನರೇ ಹೆಚ್ಚಾಗಿದ್ದಾರೆ. ಅವರಿಗೆ ಮಾರ್ಗದರ್ಶನ ಮಾಡು ವಂಥ ಟೀಚರ್ಸ್ ಮುಂತಾದವರು ನಮಗೆ ಬೇಕಾಗಿದ್ದಾರೆ. ನಮಗೆ ಬೇಕಾಗಿರತಕ್ಕ ಕರ್ಮಚಾರಿಗಳು ತಹಸೀಲ್ದಾರರು ಇವರೆಲ್ಲ ಎಂಥವರಿರಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಸಮಾಜ ವಾದವನ್ನು ತರಬೇಕು ಎನ್ನುವ ಹಾದಿಯಲ್ಲಿ ಹೆಜ್ಜೆ ಇಡುತ್ತಿರುವ ಕಾಲದಲ್ಲಿ ಬಂಡವಾಳಶಾಹಿಗಳ ಸೇವೆ ಮಾಡುವ ಪದ್ಧತಿ ಹೋಗಬೇಕು. ಸಮಾಜವಾದದ ಹಾದಿಯಲ್ಲಿ ಹೋಗುವ ಪ್ರಯತ್ನ ಮಾಡುತ್ತಿದ್ದರೂ ಕೂಡ ಹಳೇ ಹಾದಿಯಲ್ಲಿ ಇನ್ನೂ ಸ್ವಲ್ಪ ಮಟ್ಟಿಗೆ ಹೋಗುತ್ತಿದೆ ಎಂದು ಹೇಳಬೇಕಾಗುತ್ತದೆ. ಹೊಸ ಅಪ್ರೋಚ್ ತರಬೇಕಾಗಿದೆ. ಅದಕ್ಕೆ ಮುಂದೆ ಬರತಕ್ಕ ತಹಸೀಲ್ದಾರ ರೈತನ ಮನೆಯಲ್ಲಿ ಹುಟ್ಟಿ, ರೈತನ ಕಷ್ಟಸುಖಗಳನ್ನು ತಿಳಿದು, ರೈತನ ಕಷ್ಟಕ್ಕೆ ಕಣ್ಣೀರು ಹಾಕುವವನು ಬಂದರೆ ಮಾತ್ರ ರೈತರಿಗಾಗಿ 24 ಗಂಟೆಯೂ ದುಡಿಯುವವರು ಬಂದರೆ ಮಾತ್ರ ಆಗ ದೇಶಕ್ಕೆ ಒಳ್ಳೆಯದಾಗುತ್ತದೆ. ಇಂಥವರ ಅಳಿಯ, ಇಂಥವರ ಮಗ ಎನ್ನುವ ಕಾರಣದ ಮೇಲೆ ಯಾರನ್ನು ಆರಿಸಬಾರದು.

ಡಾಕ್ಟರ್ ಟೆಂಡೆನ್ಸಿ ಹೇಗೆ ಇರಬೇಕು ಎಂದರೆ ಸರ್ವಿಸ್ ಡ್ಯೂಟಿ ಇಟ್ಟುಕೊಂಡಿರುವವರು ಇರಬೇಕು ಅಂಥವರನ್ನು ನೇಮಕ ಮಾಡಬೇಕು. ಡೌನಟ್ರಾಡನ್ ಸೆಷನ್ ಏನಿದೆ, ನಮ್ಮ ರಾಜ್ಯದ ಜನತೆ ಏನಿದೆ ಅದರ ಬಗ್ಗೆ ದುಡಿಯುವ ಉತ್ಸಾಹ ಯಾರಲ್ಲಿದೆ ಅಂಥವರನ್ನು ನೇಮಕ ಮಾಡುತ್ತೇವೆ ಎನ್ನುವ ಭಾವನೆ ಪಬ್ಲಿಕ್-ಸರ್ವಿಸ್ ಕಮಿಷನ್‌ನಲ್ಲಿ ಬರಬೇಕು. ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಇಂಟ್ರವ್ಯೂಗೆ ಹೋಗುವ ಅಭ್ಯರ್ಥಿಗಳಿಗೆ, ವಾಟ್ ಈಸ್ ಯುವರ್ ಫಾದರ್, ವೈ ಡಿಡ್ ಯು ಚೂಸ್ ದಿಸ್ ಜಾಬ್ ಇಂಥ ಪ್ರಶ್ನೆ ಗಳನ್ನು ಕೇಳುತ್ತಾರೆ ಎಂದು ಹೈಕೋರ್ಟಿನಲ್ಲಿ ರಿಟ್ ಹಾಕುವಾಗ ಅಫಿಡವಿಟ್ಸ್ ಹಾಕುವುದನ್ನು ನೋಡಿದ್ದೇನೆ ನಮಗೆ ಕೇಳಿದ ಪ್ರಶ್ನೆಗಳು ನಮ್ಮ ಜಾಣ್ಮೆಯನ್ನು ತಿಳಿಯಲು ಕೇಳಿದಂಥ ಪ್ರಶ್ನೆಗಳಲ್ಲ. ಅವರು ಕೇಳುವ ಪ್ರಶ್ನೆಗಳಿಗೆ ನಾವು ಸರಿಯಾದ ಉತ್ತರಗಳನ್ನು ಕೊಟ್ಟರೂ ಅವರು ತಿಳಿದುಕೊಂಡರೋ, ತಿಳಿದುಕೊಳ್ಳು ವುದಕ್ಕೆ ಕಾರಣಗಳಿರಲಿಲ್ಲವೋ ಎನ್ನುವ ಅನುಮಾನ ಬರುತ್ತದೆ. ನಾವು ಹಿಂದಿನ ಹಾದಿಯನ್ನು ಬಿಟ್ಟು ಹೊಸ ಹಾದಿಯಲ್ಲಿ ಬರುತ್ತಿದ್ದೇವೆ. ಸೆಕ್ಯುಲರಿಸಂ, ಸೋಷಿಯಲಿಸಂ, ಡೆಮೋಕ್ರಸಿ, ಎಂದು ಹೇಳುವಂಥ ಕಾಲದಲ್ಲಿ ಈ ಕೋಮಿಗೆ ಇಷ್ಟು ಸೀಟು ಕೊಡಿ, ಆ ಕೋಮಿಗೆ ಇಷ್ಟು ಸೀಟು ಕೊಡಿ ಎಂದು ಹೇಳುವುದಿಲ್ಲ ಬ್ರಾಹ್ಮಣ ಮಠಗಳು, ಲಿಂಗಾಯಿತ ಮಠಗಳು, ಮತ್ತು ಇತರೇ ಮಠಗಳು, ಇಲ್ಲಿ ಎಷ್ಟು ಜನರಿಗೆ ಈ ಅಭಾವದ ಕಾಲದಲ್ಲಿ ಎಷ್ಟು ಜನರಿಗೆ ಅನ್ನ ಕೊಡುತ್ತಿದ್ದಾರೆ ? ಎಷ್ಟು ದೇವಸ್ಥಾನಗಳಲ್ಲಿ ಎಷ್ಟೆಷ್ಟು ಅನ್ನ ಬಿದ್ದಿದೆ, ಅನ್ನ ಕೊಡುತ್ತೇವೆಂದು ಯಾರೂ ಹೇಳುತ್ತಿಲ್ಲ. 025 ರೂಪಾಯಿ ಬೆಲೆ ಇರುವ ಆಹಾರ ಧಾನ್ಯಗಳನ್ನು 100 ರೂಪಾಯಿಗಳಿಗೆ ಮಾರಾಟ ಮಾಡಿ ಹೆಬ್ಬೆರಳ ಗುರುತನ್ನು ಎರಡುಸಲ ಒತ್ತಿಸಿಕೊಳ್ಳು ತ್ತಾರೆ. ಈಗಿನ ಸರ್ಕಾರ ಸಮಾಜವಾದದ ಮಾರ್ಗದಲ್ಲಿ ಹೋಗುತ್ತಿದೆ. ಆದರೆ ಹಳೇ ಹಾದಿಯನ್ನು ಮರೆಯುತ್ತಿಲ್ಲ ಎಂದು ನಾನು ಹೇಳಬಲ್ಲೆ, ಆದ್ದರಿಂದ ರ್‍ಯಾಡಿಕಲ್ ಚೇಂಜಸ್ ಆಗಲೇಬೇಕು.

ಈಗ ಇರುವಂಥ ಪಬ್ಲಿಕ್ ಸರ್ವಿಸ್ ಕಮಿಷನ್ ತೆಗೆದು ಹಾಕಿ ಅವರ ಜಾಗಕ್ಕೆ ಹೊಸಬರನ್ನು, ಯುವಕರನ್ನು ಹಾಕಬೇಕು. ಎಲ್ಲರನ್ನೂ ಖಾಸಗಿಯವರನ್ನೇ ಹಾಕಬೇಕು. ರಾಷ್ಟ್ರದಲ್ಲಿ ನಮ್ಮ ಮೈಸೂರು ಸರ್ಕಾರ ಒಂದು ಹೊಸ ಹೆಜ್ಜೆಯನ್ನು ಇಟ್ಟಿದೆ ಎಂದು ಎಲ್ಲರೂ ತಿಳಿಯಬೇಕು. ಇಡೀ ದೇಶದಲ್ಲಿ ಕ್ರಾಂತಿಯಾದ ಮೇಲೆ ಮೈಸೂರು ದೇಶದಲ್ಲಿ ನಡೆಯುತ್ತಿದೆ ಎನ್ನುವ ಭಾವನೆ ಇದೆ. ಲಂಚ ಕೋರತನ, ಬಂಡವಾಳಶಾಹಿ, ಕೋಮುವಾರು ಮನೋವೃತ್ತಿ ಇವೆಲ್ಲ ಪ್ರತಿಯೊಂದು ಸೆಕ್ಷನ್‌ನಲ್ಲಿ ಏನಿದೆ ಅದನ್ನು ತೆಗೆದು ಹಾಕುವುದಕ್ಕೆ ಮೈಸೂರು ರಾಜ್ಯದಲ್ಲಿ ಇಂಥಿಥ ರ್‍ಯಾಡಿಕಲ್ ಚೇಂಜಸ್ ತಂದಿದ್ದೇವೆ. ಇಂಥಿಂಥ ಸಾಧನೆ ಮಾಡಿದ್ದೇವೆ ಎಂದು ಮುಂದೆ ಬರತಕ್ಕ ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಈ ರೀತಿ ಮಾಡಿ ಎಂದು ಗೈಡ್ ಲೈನ್ಸ್ ಕೊಡಬೇಕು. ಇಂಟ್ರವ್ಯೂಗೆ ಬಂದಿರುವರಿಗೆ ಅರ್ಹತೆ ಇದ್ದರೂ ಕೂಡ ಯಾರಿಗೆ ಏಜ್ ಬಾರ್ ಆಗುತ್ತದೆ ಅಂಥವರಿಗೆ ಆದ್ಯತೆಯನ್ನು ಕೊಡಬೇಕು. ಸ್ಥಳೀಯ ಅಭ್ಯರ್ಥಿಗಳಾಗಲಿ ಅಥವಾ ಬೇರೆಯವರಾಗಲೀ, ಎರಡು ಮೂರು ತಿಂಗಳಲ್ಲಿ ಅವರಿಗೆ ಏಜ್ ಬಾರ್ ಆಗಿ ಚಾನ್ಸ್ ಹೋಗು ತ್ತದೆ ಎನ್ನುವ ಪರಿಸ್ಥಿತಿ ಇದ್ದರೆ ಅವರಿಗೆ ಆದ್ಯತೆಯನ್ನು ಕೊಟ್ಟು, ಅವರಿಗೆ ಪರ್ಸೆಂಟೇಜ್ ಆಫ್ ಮಾರ್ಕ್ಸ್ ಕಡಿಮೆ ಇದ್ದರೂ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು. ಅವರು ಇಂಗ್ಲೀಷಿನಲ್ಲಿ ತಮ್ಮ ವೊಕ್ಯಾಬ್ಯುಲರಿಯನ್ನು ಯಾರಲ್ಲಿಯೂ ಪ್ರದರ್ಶನ ಮಾಡಬೇಕಾಗಿಲ್ಲ. ಯಾರೊಡನೆಯೂ ಚರ್ಚೆ ಮಾಡ ಬೇಕಾಗಿಲ್ಲ. ನಮ್ಮ ದೇಶದಲ್ಲಿ ಹೆಬ್ಬೆರಳು ಗುರುತು ಹಾಕುವವರು 25 ಪರ್ಸೆಂಟ್ ಜನರಿರುವಾಗ ಅವರಿಗಿಂತ ಸ್ವಲ್ಪ ಹೆಚ್ಚಾಗಿ ಓದಿ ಬರೆಯುವರಿದ್ದರೆ ಸಾಕು. ಇವರಿಗೆ ಏಜ್ ಬಾರ್ ಆಗುವ ಹಾಗಿದ್ದರೆ ಅವರಿಗೆ ಆದ್ಯತೆಯನ್ನು ಕೊಡಬೇಕು. ವಲ್ನರಬಲ್ ಸೆಕ್ಷನ್ ಯಾರು ಇದ್ದಾರೆ ಅವರನ್ನು ಉತ್ತಮ ಸ್ಥಿತಿಗೆ ತರು ವುದಕ್ಕೆ ಕೆಲಸ ಮಾಡತಕ್ಕವರಿಗೆ, ನಮ್ಮ ದೇಶದ ಗೌರವವನ್ನು ಎತ್ತಿ ಹಿಡಿದು ದೇಶಕ್ಕಾಗಿ ದುಡಿಯುವ ವರಿಗೆ, ದೇಶದ ಮೇಲೆ ಅಭಿಮಾನ ಇರುವವರಿಗೆ ಕೆಲಸ ಕೊಡಬೇಕು —ಪೋಲೀಸ್ ರಿಪೋರ್ಟ್ ಏನೇ ಇರಬಹುದು, ಅದರ ಮೇಲೆ ಸ್ಕ್ರೀನ್ ಮಾಡುವುದಕ್ಕೆ ಹೋಗಬಾರದು. ಯಾರು ಕೆಲಸ ಸಿಕ್ಕದೆ ಇದ್ದರೆ

(ಶ್ರೀ ವಿ. ಎಲ್. ಪಾಟೀಲ್)

ಆತ್ಮಹತ್ಯೆ ಮಾಡಿಕೊಳ್ಳಬೇಕು ಎನ್ನುವ ಸ್ಥಿತಿಯಲ್ಲಿರುತ್ತಾನೆ ಅಂಥವನಿಗೆ ಆದ್ಯತೆಯನ್ನು ಕೊಡಬೇಕು. ಇಂಥ ಕೆಲವು ಸಲಹೆಗಳನ್ನು ನಾನು ಕೊಟ್ಟಿದ್ದೇನೆ ನನ್ನ ಮಾತುಗಳನ್ನು ಮುಗಿಸುವುದಕ್ಕೆ ಮುಂಚೆ ಈ ರಿಪೋರ್ಟ್‌ಗಳಲ್ಲಿರುವ ಕೆಲವು ಅನಾಮಲಿಗಳನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ ೧೯೬೯-೭೦ ರಿಪೋರ್ಟಿನ ೨೨-೨೩ನೇ ಪುಟದಲ್ಲಿ ೩೦ನೇ ಪ್ಯಾರಾದಲ್ಲಿ ಹೀಗೆ ಹೇಳಿದ್ದಾರೆ.—

"During the year under report, administrative delays and other irregularities on the part af Government and the Heads of Depertment continued as in the previous years. There was delay in issuing statutory cadre and Recrustment Rules of the several Depertments even after the concerned draft rules had been approved by the Commission. This has resulted in arbitary appointments.

ಇದಕ್ಕಿಂತ ಹೆಚ್ಚು ಸಿನ್ಸಿರಿಟಿ ಯಾವ ಮಾತಿನಲ್ಲಿ ಬರುತ್ತದೆ ಎಂದು ಕೇಳುತ್ತೇನೆ. ಕೊನೆಯಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತೇವೆಂದು ಹೇಳಿದ್ದಾರೆ.

"The Commission are grateful to the Government and the Heads of Departments for their continued Co-operation"

ಒಂದು ಕಡೆ ಥ್ಯಾಂಕ್ಸ್ ಹೇಳುತ್ತಾರೆ, ಇನ್ನೊಂದು ಕಡೆ "but for the failure on the part of the Goverment, it has resulted in arbitrary appointments and therby it has resulted injustice" ಎಂದು ಹೇಳಿದ್ದಾರೆ. ಗವರ್ನಮೆಂಟ್ ಪಾಲಿಸಿಯಲ್ಲಿ ಕೂಡ ರ್‍ಯಾಡಿಕಲ್ ಚೇಂಜಸ್ ತರಬೇಕು. ಈ ಅಡ್ಮಿನಿಸ್ಟ್ರೇಷನ್ ಅನ್ನು ಕ್ಲೀನ್ ಮಾಡುವುದಕ್ಕಾಗಿ ಒಂದು ದೊಡ್ಡ ಕಸಬರಿಗೆ ತೆಗೆದುಕೊಳ್ಳಬೇಕು ಎಂದು ಹೇಳಿ ಉಪಾಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ ಸಿರಸಿ:—ಸನ್ಮಾನ್ಯ ಉಪಾಧ್ಯಕ್ಷರೆ, ಈದಿವಸ ಈ ಸಭೆಯ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕ ಲೋಕಸೇವಾ ಆಯೋಗ ರಿಪೋರ್ಟನ್ನು ಪರಿಶೀಲಿಸಲಾಗಿದೆ. ಈ ಪರಿಶೀಲನೆಯಲ್ಲಿ ಸಾಮಾನ್ಯ ಮನುಷ್ಯನ ಮತ್ತು ಬಡವರ ಉದ್ಧಾರಕ್ಕಾಗಿ ರಾಜ್ಯಾಂಗದಲ್ಲಿ ಏನು ನಿಯಮಾಳಿಗಳು ಇದ್ದಾವೋ ಅವುಗಳನ್ನು ಸಮರ್ಪಕವಾಗಿ ಅಳವಡಿಸದೇ ಇರುವ ದೊಡ್ಡ ಲೋಪವನ್ನು ನಾವು ಕಾಣಬಹುದು. ಲೋಕ ಸೇವಾ ಆಯೋಗವು ರಿಟೈರ್ಡ್ ಆಫೀಸರ್‌ನಿಂದ ಕೂಡಿರತಕ್ಕ ಆಯೋಗ ಆಗಿದೆ. ಮುದುಕರುಗಳಿಂದ ಕೂಡಿರತಕ್ಕ, ನಿಶ್ಯಕ್ತಿಯುತವಾದ ಆಯೋಗಕ್ಕೆ ಶಕ್ತಿಯುತವಾದ ಆಯೋಗವನ್ನಾಗಿ ಮಾಡಿ ಅದಕ್ಕೆ ಒಂದು ಚೇತನ ಶಕ್ತಿಯನ್ನು ಬೆಳೆಸಬೇಕು. ಅದು ಒಂದು ಶಕ್ತಿಯುತವಾದ ರಂಗ ಆಗಬೇಕಾದರೆ, ಈ ಸರ್ಕಾರ ಯಾವ ಒಂದು ಸಮಾಜವಾದದ ಒಂದು ನೀತಿಯನ್ನು ಜಾರಿಗೆ ತರಬೇಕು ಎಂದು ಇದೆಯೋ, ಆ ನೀತಿಗೆ ಅನುಗುಣವಾಗಿ ಆ ಆಯೋಗದ ನಿಯಮಾವಳಿಗಳೂ ಸಹ ಬದಲಾವಣೆಯಾಗಬೇಕು. ಮೊದಲನೆಯದಾಗಿ, ಕ್ಲಾಸ್—೪, ಅಪಾಯಿಂಟ್‌ಮೆಂಟ್ಸ್ ಅನ್ನು ಆಯೋಗದಿಂದ ತೆಗೆದು ಬಿಟ್ಟು, ಡಿಸ್ಟ್ರಿಕ್ಟ್ ರಿಕ್ರೂಟ್‌ಮೆಂಟ್ ಕಮಿಟಿ ಅಥವಾ ಯೂನಿಟ್ ಕಮಿಟಿಗಳನ್ನು ಮಾಡಿ ಅಲ್ಲಿ ಯಾವ ಜನಾಂಗದ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಇದ್ದಾರೋ ಆ ಜನಾಂಗವನ್ನು ರಕ್ಷಣೆ ಮಾಡುವ ರೀತಿಯಲ್ಲಿ ಆಗಿರುವುದರಿಂದ ಈ ಕಮಿಟಿಗಳನ್ನು ಮಾಡಿದುದರ ಪರಿಣಾಮ ವಿಶಾಲವಾದ ಮನೋಭಾವದಿಂದ ಹುದ್ದೆಗಳನ್ನು ಭರ್ತಿ ಮಾಡುವ ನೀತಿಗೆ ಧಕ್ಕೆ ಉಂಟು ಮಾಡಿದೆ. ಸರ್ಕಾರ ಕೂಡಲೇ ಈ ಡಿಪಾರ್ಟ್‌ಮೆಂಟ್ ಕಮಿಟಿಗಳನ್ನು ರದ್ದು ಮಾಡಿ, ಕೇರಳದಲ್ಲಿರುವಂತೆ, ಆಯೋಗಕ್ಕೆ ವಹಿಸಿಕೊಡಬೇಕು. ಸ್ವಾತಂತ್ರ್ಯ ಬಂದು ೨೫ ವರ್ಷಗಳಾದ ಮೇಲೆ, ೧೯೫೦ನೇ ಇಸವಿ ೨೬ನೇ ಜನವರಿಯಲ್ಲಿ ರಾಜ್ಯಾಂಗ ಜಾರಿಗೆ ಬಂದರೂ ಸಹ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ಶೇಕಡ ೧೮ ಭಾಗ ಈ ಹುದ್ದೆಗಳನ್ನು ಭರ್ತಿ ಮಾಡುವಾಗ ಕಡ್ಡಾಯವಾಗಿ ಇರಬೇಕು ಎಂದು ಇದ್ದರೂ, ಕ್ಲಾಸ್ ೧—೨—೩—೪ ಅಪಾಯಿಂಟ್‌ಮೆಂಟ್ಸ್‌ಗೆ ನೇಮಕ ಮಾಡುವಾಗ ಇವತ್ತಿನವರೆಗೆ ೧೮ ಪರ್ಸೆಂಟ್ ಯಾವುದರಲ್ಲಿಯೂ ಬರಲಿಲ್ಲ. ಈಗ

ಇರತಕ್ಕ ಕಾರ್ಯಾಚರಣೆಯಲ್ಲಿ ಯೋಚನೆ ಮಾಡಿದರೆ, ೨೦೦—೩೦೦ ವರ್ಷವಾದರೂ ಸಹ ಈ ಜನಾಂಗಕ್ಕೆ ಶೇಕಡ ೧೫ ಭಾಗ ಭರ್ತಿಯಾಗುವುದಿಲ್ಲ. ರಾಜ್ಯಾಂಗಕ್ಕೆ ಧಕ್ಕೆ ತಂದಿರತಕ್ಕ ಈ ನೀತಿಯನ್ನು ಬದಲಾವಣೆ ಮಾಡಬೇಕು. ಬದಲಾವಣೆ ಮಾಡಬೇಕಾದರೆ, ಕೇಂದ್ರ ಸರ್ಕಾರದಲ್ಲಿರುವಂತೆ ಪ್ರತಿ ಯೂನಿಟನಲ್ಲಿ ೧೫ ಪರ್ಸೆಂಟ್ ಬರುವವರೆಗೆ ಅವರಿಗೆ ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಬೇಕು. ಈ ಸ್ಪೆಷಲ್ ರೆಕ್ರೂಟ್‌ಮೆಂಟ್ ಅನ್ನು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಮತ್ತು ಇತರ ಬ್ಯಾಕ್‌ವರ್ಡ್ ಕ್ಲಾಸ್‌ಗಳಿಗೆ ಮಾಡಿ, ೧೮ ಪರ್ಸೆಂಟ್ ಭರ್ತಿ ಮಾಡತಕ್ಕಂಥ ನೀತಿಯನ್ನು ಜಾರಿಗೆ ತರಬೇಕು. ಈಚೆಗೆ ಈ ಸರ್ಕಾರ ಒಂದು ಹೊಸ ಬದಲಾವಣೆ ಮಾಡಿದೆ, ಏನೆಂದರೆ, ಸಬ್ ಇನ್‌ಸ್ಪೆಕ್ಟರ್ ಆಫ್ ಪೋಲೀಸ್ ಅನ್ನು ಪಬ್ಲಿಕ್ ಸರ್ವೀಸ್ ಕಮಿಷನ್ ಭರ್ತಿ ಮಾಡುವುದನ್ನು ತೆಗೆದು, ಒಂದು ಸೂಪರ್ ಕಮಿಟಿಯನ್ನು ಮಾಡಿ, ಭರ್ತಿ ಮಾಡುವುದಕ್ಕೆ, ಪ್ರಯತ್ನ ಮಾಡಿದರು. ಅಲ್ಲಿ ಈಗ ಮೂರು ಸಾರಿ ಸೆಲೆಕ್ಷನ್ ಮಾಡಿದ್ದಾರೆ, ಇದರಲ್ಲಿ ೧೫ ಪರ್ಸೆಂಟ ರಿಸರ್ವೇಷನ್ ಕೊಟ್ಟಿದ್ದಾರೆಯೋ ? ಕೊಡದೆ ಇರುವುದಕ್ಕೆ ಯಾವುದಾದರೂ ಲೋಪವನ್ನು ಜಾರಿಗೆ ತಂದರು, ಹೈಟ್ ಅರ್ಧ ಇಂಚು ಕಡಿಮೆ ಇದೆ, ಎದೆ ಅರ್ಧ ಅಂಗುಲ ಕಡಿಮೆ ಇದೆ ಅಥವಾ ಮಾರ್ಕ್ಸ್ ಹೆಚ್ಚಾಗಿ ಬಂದಿಲ್ಲ ಎಂದು ಯಾವುದಾದರೂ ಒಂದು ಕುಂಟು ನೆಪವನ್ನು ಇಟ್ಟು ಆ ಮನುಷ್ಯನನ್ನು ಡಿಸ್‌ಕ್ವಾಲಿಫೈ ಮಾಡತಕ್ಕಂಥ ನೀತಿ ಹೆಚ್ಚು ಹೆಚ್ಚಾಗಿ ಈ ಕಮಿಟಿಗಳಲ್ಲಿದೆ; ಅದು ಕೂಡಲೇ ಹೋಗಬೇಕು. ಪ್ರತಿ ಅಪಾಯಿಂಟ್‌ಮೆಂಟ್‌ನಲ್ಲಿ ೧೦೦ ಅಭ್ಯರ್ಥಿಗಳನ್ನು ತೆಗೆದುಕೊಳ್ಳುವಾಗ ೧೫ ಪರ್ಸೆಂಟ್ ಅನ್ನು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಗೆ ೩ ಪರ್ಸೆಂಟ್, ೩೦ ಪರ್ಸೆಂಟ್ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಎನ್ನತಕ್ಕಂಥ ಒಂದು ತತ್ವ ಏನು ಇದೆ ಆ ತತ್ವವನ್ನು ಕಡ್ಡಾಯವಾಗಿ ಜಾರಿ ಮಾಡುವುದಕ್ಕೆ ಆಯಾ ವಿಭಾಗದಲ್ಲಿ ಪರಿಶೀಲನೆ ಮಾಡಿ ಅದರಲ್ಲಿ ಮೆರಿಟೆಡ್ ಅಭ್ಯರ್ಥಿಗಳನ್ನು ತೆಗೆದುಕೊಳ್ಳುವ ತತ್ವವನ್ನು ಮಾಡಬೇಕು. ಈ ರೀತಿ ಮಾಡದೆ ಹೋದರೆ, ಈ ಬ್ಯಾಕ್‌ವರ್ಡ್ ಕ್ಲಾಸ್, ಷೆಡ್ಯೂಲ್ ಕ್ಯಾಸ್ಟ್, ಮತ್ತು ಷೆಡ್ಯೂಲ್ ಟ್ರೈಬ್ಸ್ ಅವರಿಗೆ ಪ್ರಾತಿನಿಧ್ಯ ದೊರಕುವುದಿಲ್ಲ. ಆದ್ದರಿಂದ ಸಬ್ ಇನ್‌ಸ್ಪೆಕ್ಟರ್ ಆಫ್ ಪೋಲೀಸ್ ಮಾಡಿರತಕ್ಕದನ್ನು ತೆಗೆದು ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಅದನ್ನು ವಹಿಸಕೊಡಬೇಕು. ಈ ರಕ್ಷಣೆಯನ್ನು ದೊರಕಿಸುವುದಕ್ಕೆ ಸೂಕ್ತವಾದ ರೀತಿಯಲ್ಲಿ ಇರತಕ್ಕ ನಿಯಮಾವಳಿಗಳನ್ನು ಮಾರ್ಪಾಡು ಮಾಡಬೇಕು. ಆ ರೀತಿ ಮಾಡುವುದು ಅಲ್ಲದೆ, ಒಂದು ಹೊಸ ಚೈತನ್ಯವನ್ನು ಉಂಟು ಮಾಡತಕ್ಕ ಸಮಾಜವಾದದ ರಚನೆಯನ್ನು ನಾವು ಮಾಡುತ್ತೇನೆ, ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ಎಲ್ಲಾ ಬಡವರಿಗೆ, ದಲಿತರಿಗೆ, ನಿರ್ಗತಿಕರಿಗೆ, ಒಂದು ಚೈತನ್ಯವನ್ನು ಕೊಡುತ್ತೇವೆ ಎನ್ನುವ ತತ್ವವನ್ನು ದೇಶಾದ್ಯಂತ, ರಾಷ್ಟ್ರದಾದ್ಯಂತ ಹೇಳಿಕೊಳ್ಳುವ ರೀತಿಯಲ್ಲಿ ಒಂದೇ ಫ್ಯಾಮಿಲಿಯಲ್ಲಿ ಅನೇಕರು ಸರ್ಕಾರಿ ಹುದ್ದೆಯಲ್ಲಿ ಇರತಕ್ಕವರು ಇದ್ದಾರೆ. ಸರ್ಕಾರ ಸಮಾಜವಾದವನ್ನು ನಿಜವಾಗಿ ಅನುಸರಿಬೇಕಾದರೆ, ಪ್ರತಿಯೊಂದು ಫ್ಯಾಮಿಲಿಯಲ್ಲೂ ಒಬ್ಬನು ಸರ್ಕಾರಿ ಉದ್ಯೋಗದಲ್ಲಿ ಇರಲೇಬೇಕು. ಅದಕ್ಕೆ ತಕ್ಕ ನಿಯಮಾವಳಿಯನ್ನು ಬದಲಾವಣೆ ಮಾಡಬೇಕು. ಒಂದು ಫ್ಯಾಮಿಲಿಯಲ್ಲಿ ಎಲ್ಲಾರೂ ಗವರ್ನಮೆಂಟ್ ಸರ್ವೆಂಟ್ಸ್ ಆಗಿದ್ದಾರೆ. ಇದರಲ್ಲಿ ಸಮಾಜವಾದದ ನೀತಿ ಹೇಗೆ ಬಂತು ? ಅವರು ಎಲ್ಲರೂ ಮೆರಿಟ್‌ನಲ್ಲಿ ಬಂದಿದ್ದಾರೆ ಎಂದು ಹೇಳುತ್ತಾರೆಯೋ, ೧೦೦ಕ್ಕೆ ೭೦ ಭಾಗ ಮಾರ್ಕ್ಸ್ ಪರಿಶೀಲನೆ ಮಾಡದೇ ೩೦ ಪರ್ಸೆಂಟ್ ಇಂಟರ್‌ವ್ಯೂ ಮಾರ್ಕ್ಸ್ ಎಂದು ಇಡುತ್ತಿದ್ದಾರೆ. ಈ ಮಾರ್ಕ್ಸ್ ಕಾರ್ಡು ತತ್ವವನ್ನು ಕೈಬಿಡಬೇಕು. ಎಲ್ಲಿ ಹಿಂದುಳಿದ ಪ್ರದೇಶಗಳಿಂದ ಬಂದಿದ್ದಾರೋ, ಎ ಬಹಳ ಹಿಂದುಳಿದ ಜನಾಂಗಗಳು ಇವೆಯೋ ಅವುಗಳಿಗೆ ಪ್ರಾತಿನಿಧ್ಯ ಕೊಡುವ ತತ್ವವನ್ನು ನೀವು ಜಾರಿಗೆ ತರಬೇಕಾಗಿದೆಯೋ ಹೊರತು, ಪರೀಕ್ಷೆಯಲ್ಲಿ; ೭೦—೭೦ ಪರ್ಸೆಂಟ್ ಮಾರ್ಕ್ಸ್ ತೆಗೆದ ತಕ್ಷಣ, ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಮಾರ್ಕ್ಸ್‌ನೋಡಿ ಮೆರಿಟ್ ಹೇಳುವ ತತ್ವವನ್ನು ಮೊದಲು ಕೈಬಿಡಬೇಕು. ಇದರಿಂದ ಯಾರು ಹತ್ತಾರುವರ್ಷಗಳಿಂಥ, ನೂರಾರು ವರ್ಷಗಳಿಂದ ನೊಂದು, ಹುದ್ದೆಗಳು ದೊರೆಯದೆ ಇರತಕ್ಕ ಜನಾಂಗಗಳು ಇದ್ದಾವೆಯೋ ಆ ಜನಾಂಗಕ್ಕೆ ಪ್ರಾತಿನಿಧ್ಯ ದೊರೆಯುವುದಿಲ್ಲ. ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕ ಅಭ್ಯರ್ಥಿಗಳಿಗೆ ಹೆಚ್ಚು ಗಮನಕೊಡಬೇಕು. ಅವರಿಗೆ ಹೆಚ್ಚು ಹೆಚ್ಚು ಅಪಾಯಿಂಟ್‌ಮೆಂಟ್ ದೊರಕುವಂತೆ ಮಾಡಬೇಕು ಎನ್ನತಕ್ಕಂಥ ಅಭಿಪ್ರಾಯವನ್ನು ಈ ಮೂಲಕ ಸಲಹೆ ಮಾಡುತ್ತೇನೆ. ಈಗ ಹತ್ತಾರು ವರ್ಷಗಳಿಂದ ಈಚೆಗೆ ೧೯೬೧ನೇ ಇಸವಿಯಿಂದ ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್‌ಗೆ ಒಂದು ಲೋಪ ಪಬ್ಲಿಕ್ ಸರ್ವೀಸ್ ಕಮಿಷನ ನಿಂದ ಉಂಟಾಗಿದೆ. ೧೦೦ ಅಪಾಯಿಂಟ್‌ಮೆಂಟ್ಸ್ ಇದ್ದರೆ, ೧೫ ಪರ್ಸೆಂಟ್ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಕೊಡಬೇಕು, ಮೂರು ಪರ್ಸೆಂಟ್ ಅನ್ನು ಷೆಡ್ಯೂಲ್ ಟ್ರೈಬ್ಸ್‌ನವರಿಗೆ ಕೊಡಬೇಕು, ೩೦ ಪರ್ಸೆಂಟ್ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಕೊಡಬೇಕು ಎನ್ನು ತತ್ವ ಇದ್ದರೂ ಈ ರೀತಿ ಕ್ಲಾಸಿಫೈ ಮಾಡುವುದನ್ನು ರದ್ದು ಮಾಡಿದ್ದಾರೆ. ಏತಕ್ಕೆ ಮಾಡಿದ್ದಾರೆ ಎಂದರೆ, ನಮಗೆ ಸುಪ್ರೀಂ ಕೋರ್ಟಿನಿಂದ ಜಡ್ಜ್‌ಮೆಂಟ್ ಬಂದಿದೆ, ಅದರ ಪ್ರಕಾರ ನಾವು ಮೆರಿಟ್ ಅನ್ನು ಕನ್‌ಸಿಡರ್ ಮಾಡಲೇಬೇಕು ರಿಸರ್ವೇಷನ್‌ಗೂ ೫೦ ಪರ್ಸೆಂಟ್ ಮೆರಿಟ್ ಇರಬೇಕು ಎನ್ನುವ ತತ್ವವನ್ನು ಮುಂದೆ ಇಟ್ಟು ಯಾವ ಜನಾಂಗಕ್ಕೆ ನೂರಾರು ವರ್ಷಗಳಿಂದ ಹುದ್ದೆಗಳಲ್ಲಿ ಪ್ರಾತಿನಿಧ್ಯ ಪಡೆಯದೆ ಇದ್ದವೋ, ಅಂಥ ಜನಾಂಗಗಳಿಗೆ ಇವತ್ತು ಪ್ರಾತಿನಿಧ್ಯ ದೊರಕದಂತೆ ಮಾಡಿದ್ದಾರೆ.

(ಶ್ರೀ ಎಂ. ಎಚ್. ಜಯಪ್ರಕಾಶ್)

4-00 P.M.

ಆದರೆ ಸೂಪ್ರಿಮ್ ಕೋರ್ಟಿನಲ್ಲಿ ಪರ್ಸೆಂಟ್ಸೇಜ್ ಫಿಕ್ಸ್ ಮಾಡಿದರು. ಒಬ್ಬ ಷೆಡ್ಯೂಲ್ ಕ್ಯಾಸ್ಟ್ ಅಭ್ಯರ್ಥಿ ೯೦ ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡು ಮೆರಿಟ್ ಲಿಸ್ಟ್‌ನಲ್ಲಿ ಬರುವುದಕ್ಕೆ ಅವಕಾಶ ಇದೆ. ಅವನನ್ನು ತೆಗೆದುಕೊಂಡು ಬಂದು ರಿಸರ್ವೇಷನ್‌ನಲ್ಲಿ ಸೇರಿಸಿ ಕೆಳದರ್ಜೆಯಲ್ಲಿ ಹಾಕಿದ್ದಾರೆ. ಇದು ಯಾವ ನ್ಯಾಯ? ಸರ್ಕಾರ ಇದನ್ನು ಪರಿಶೀಲನೆ ಮಾಡಬೇಕು. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸೇರಿದವರು ಮೆರಿಟ್‌ನಲ್ಲಿ ಬರತಕ್ಕವರನ್ನು ಮೆರಿಟ್ ಪೂಲ್‌ನಲ್ಲಿ ಹಾಕಬೇಕು. ಅದನ್ನು ಷೆಡ್ಯೂಲ್‌ಕ್ಯಾಸ್ಟ್ ರಿಸರ್ವೇಷನಗೆ ತರಬಾರದು. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರು ಯಾವುದಾದರೂ ಹುದ್ದೆಗೆ ಅಪ್ಲಿಕೇಷನ್ ಹಾಕಿದರೆ ಈಗ ಇರತಕ್ಕ ನೀತಿ ಪ್ರಕಾರ ಒನ್ ಈಸ್ ಟು ನಾಲ್ಕು ಎಂದು ಹೇಳುತ್ತಾರೆ. ಐನೆಯವನಿಗೆ ಅಪೋರ್ಚ್ಯುನಿಟ್ ಇಲ್ಲ. ಅವರು ಹಾಕುವುದೇ ಬಹಳ ಕಡಿಮೆ ಒಂದು ಅಪಾಯಿಂಟ್‌ಮೆಂಟ್‌ಗೆ ೧೦೦ ಜನ ಹಾಕುವುದಿಲ್ಲ ೬—೭ ಜನ ಹಾಕಬಹುದು. ಅಪ್ಲಿಕೇಷನ್ ಹಾಕತಕ್ಕ ಪ್ರತಿಯೊಬ್ಬ ಷೆಡ್ಯೂಲ್ಡ್ ಕ್ಯಾಸ್ಟ್ ಅಭ್ಯರ್ಥಿಯನ್ನು ಇಂಟರ್‌ವ್ಯೂ ಕರೆಯುವ ನೀತಿಯನ್ನು ಜಾರಿಗೆ ತರಬೇಕು. ಮುಖ್ಯವಾಗಿ ಕೇಂದ್ರ ಸರ್ಕಾರದಲ್ಲಿ ಮತ್ತು ಯೂನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್ ಏನು ಇದೆ ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ ಅರ್ಜಿ ಹಾಕಿಕೊಂಡರೆ ಅವರಿಗೆ ಅರ್ಜಿಗೆ ನಿಗದಿ ಮಾಡಿರುವ ಫೀನಲ್ಲಿ ನಾಲ್ಕನೇ ಒಂದು ಭಾಗ, ಅಥವಾ ಐನೇ ಒಂದುಭಾಗ ರಿಯಾಯಿತಿ ಕೊಡತಕ್ಕ ನೀತಿ ಇದೆ ಅದನ್ನು ನೀವು ಕಡ್ಡಾಯವಾಗಿ ಜಾರಿಗೆ ತರಬೇಕು. ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರು ಬ್ಯಾಕ್‌ವರ್ಡ್ ಕ್ಲಾಸ್‌ನವರಿಗಿಂತ ಬಹಳ ಬಡವರು ಆಗಿರುವುದರಿಂದ ಇಂಟರ್‌ವ್ಯೂಗೆ ಬರುವುದಕ್ಕೆ ಖರ್ಚಿಗೆ ಹಣ ಇರುವುದಿಲ್ಲ. ಅವರಿಗೆ ಹೋಗಿಬರುವುದಕ್ಕೆ ಯೂನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ೩ನೇ ಕ್ಲಾಸ್ ರೈಲ್ವೆ ಫೇರನ್ನು ಕೊಡುತ್ತಾರೆ. ಅದೇ ರೀತಿಯಾಗಿ ನೀವು ಸಹ ೩ನೇ ಕ್ಲಾಸ್ ರೈಲ್ವೆ ಫೇರ್‌ನ್ನು ಇಂಟರ್‌ವ್ಯೂಗೆ ಬರುವಾಗ ಅವರಿಗೆ ಕೊಡಬೇಕು. ಈ ವಿಧವಾದಂತಹ ರಿಯಾಯಿತಿ ತೋರಿಸದೆ ಹೋದರೆ ಅವರು ಪ್ರಾತಿನಿಧ್ಯ ಮುಂದೆ ಬರುವುದಿಲ್ಲ ಅಕ್ಸಲರೇಟರಿಗೆ ಆಗುವುದಕ್ಕೆ ಬದಲಾಗಿ ರಿಟ್ರೆಡೇಷನ್ ಆಗುತ್ತದೆ. ಈ ರೀತಿ ಅವರ ಪ್ರಾತಿನಿಧ್ಯ ಕುರಿತವಾಗುವ ನೀತಿ ಬಹಳ ಇದೆ. ಪಬ್ಲಿಕ್ ಸರ್ವೀಸ್ ಕಮಿಷನ್ ಫಾರಂ ಇದೆ ಆ ಫಾರಂನಲ್ಲಿ ಕ್ಯಾಸ್ಟ್ ಸರ್ಟಿಫಿಕೇಟ್ ಇದೆ ಕ್ಯಾಸ್ಟ್ ಸರ್ಟಿಫಿಕೇಟನ್ನು ಕೇಂದ್ರಸರ್ಕಾರದ ನೀತಿಯಲ್ಲಿ ಎಂ.ಪಿ. ಕೊಡತಕ್ಕದ್ದು ಇದ್ದರೂ ಇಲ್ಲಿ ಎಂ.ಎಲ್.ಎ. ಮತ್ತು ಎಂ ಎಲ್.ಸಿ ಸರ್ಟಿಫಿಕೇಟ್ ಕೊಟ್ಟರು ಬೆಲೆಯಿಲ್ಲ. ಅಪ್ಲಿಕೇಷನ್ ರಿಜೆಕ್ಟ್ ಮಾಡುತ್ತಾರೆ. ಆ ತತ್ವವನ್ನು ನೀವು ಪರಿಶೀಲನೆ ಮಾಡಬೇಕು. ಯಾತಕ್ಕೋಸ್ಕರ ಎಂಎಲ್‌ಎ ಮತ್ತು ಎಂಎಲ್‌ಸಿ ಕೊಡುವ ಕ್ಯಾಸ್ಟ್ ಸರ್ಟಿಫಿಕೇಟ್‌ಗೆ ಬೆಲೆಯಿಲ್ಲ; ಯಾತಕ್ಕೆ ಇದನ್ನು ತೆಗೆದುಹಾಕಿದ್ದಾರೆ? ಈ ಬಗ್ಗೆ ರಾಜ್ಯದ ಮುಖ್ಯಕಾರ್ಯದರ್ಶಿಯವರ ಹತ್ತಿರ ಪತ್ರವ್ಯವಹಾರ ಮಾಡಿದ್ದೇನೆ ಎಂ.ಎಲ್.ಎ. ಪರಿಶೀಲನೆ ಮಾಡಿ ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುವುದಕ್ಕೆ ಅವರಿಗೆ ಮಾಹಿತಿ ಇರುವುದಿಲ್ಲ ಆದುದರಿಂದ ತೆಗೆದುಹಾಕಿದ್ದೇವೆಂದು ಹೇಳಿದರು. ಹಾಗಾದರೆ ಸ್ಕೂಲುಗಳಿಗೆ ಕೊಡುವ ಸರ್ಟಿಫಿಕೇಟ್‌ಗಳಿಗೆ ಯಾತಕ್ಕೆ ಅವಕಾಶ ಕೊಟ್ಟಿದ್ದೀರಿ? ಆ ಲೋಪವನ್ನು ರಾಜ್ಯಸರ್ಕಾರ ಸರಿಪಡಿಸಬೇಕು ಎನ್ನುವುದನ್ನು ಸಲಹೆ ಮಾಡುತ್ತೇನೆ ಇರೆಗ್ಯುಲರ್ ಅಪಾಯಿಂಟ್‌ಮೆಂಟ್ಸ್ ರೆಗ್ಯುಲರೈಸ್ ಮಾಡುವ ನೀತಿಯನ್ನು ಪಿ.ಎಸ್.ಸಿ. ಕೊಟ್ಟಿರತಕ್ಕ ವರದಿಯಲ್ಲಿ ಅದನ್ನು ಟೀಕೆಮಾಡಿದ್ದಾರೆ. ಅನೇಕ ಟೀಕೆಟಿಪ್ಪಣಿಗಳಿಗೆ ಸರ್ಕಾರ ಒಳಗಾಗಿದ್ದರೂ ೧೯೭೮ನೇ ಇಸವಿಯಿಂದ ೧೯೮೧ನೇ ಇಸವಿಯವರೆಗೆ ಸುಮಾರು ೭ ಸಾವಿರದಿಂದ ೧೦ ಸಾವಿರದವರೆಗೆ ಲೋಕಲ್ ಅಪಾಯಿಂಟ್‌ಮೆಂಟ್ಸ್ ರೆಗುಲರೈಸ್ ಮಾಡಿದ್ದಾರೆ. ಈ ರೀತಿ ರೆಗುಲರೈಸ್ ಮಾಡುವಾಗ ಷೆಡ್ಯೂಲ್ಡ್ ಕ್ಯಾಸ್ಟ್ ಕೋಟಾ ಬಂದಿದೆ. ಷೆಡ್ಯೂಲ್ಡ್ ಟ್ರೈಬ್ಸ್ ಕೋಟಾ ಬಂದಿದೆ. ಬ್ಯಾಕ್‌ವರ್ಡ್ ಕ್ಲಾಸ್ ಕೋಟ ಬಂದಿದೆ. ಇದನ್ನು ಪರಿಶೀಲನೆ ಮಾಡಿದ್ದೀರಾ? ಪರಿಶೀಲನೆ ಮಾಡದಿದ್ದರೆ ಅವರಿಗೆ ಪ್ರಾತಿನಿಧ್ಯ ಬರದೆ ಹೋದರೆ ಅದನ್ನು ಸರಿಮಾಡತಕ್ಕ ರೀತಿಯಲ್ಲಿ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಿದ್ದಾರೆಯೇ? ೧೦ ಸಾವಿರ ಜನರನ್ನು ಕ್ಲಾಸ್ ಅಥವಾ ೩ ಅಪಾಯಿಂಟ್‌ಮೆಂಟ್ಸನಲ್ಲಿ ರೆಗ್ಯುಲರೈಸ್ ಮಾಡಿ ಇವರಿಗೆ ಇವರಿಗೆ ಅನ್ಯಾಯ ಮಾಡಿದ್ದಾರೆ. ಹೀಗೆ ಮಾಡಿ ನಿಜವಾಗಿ ರಾಜ್ಯಾಂಗದ ನಿಯಮಗಳಿಗೆ ಧಕ್ಕೆ ತಂದಿಲ್ಲವೇ? ಇದನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲವೇ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಬೇಕು. ಮತ್ತೊಂದು ಅಂಶ ಕೇಡರ್ ರಿಕ್ರೂಟ್‌ಮೆಂಟ್ ರೂಲ್ಸ್ ರಾಜ್ಯದಲ್ಲಿ ಇರತಕ್ಕ ಅನೇಕ ಡಿಪಾರ್ಟ್‌ಮೆಂಟ್‌ಗಳಲ್ಲಿ ಅದರಲ್ಲೂ ಹೆಲ್ತ್ ಡಿಪಾರ್ಟ್‌ಮೆಂಟ್ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್, ಪಿಡಬ್ಲ್ಯೂಡಿಯಲ್ಲಿ ಕ್ಯಾಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಜಾರಿಗೆ ತರದೆ ಯಾರು ಯಾರಿಗೆ ಯಾವಯಾವ ರೀತಿ ಪ್ರಾತಿನಿಧ್ಯ ದೊರಕಬೇಕು ಅದು ದೊರಕದಂತೆಮಾಡಿ ಇವತ್ತು ಇಲಾಖೆಯಲ್ಲಿ ಇರತಕ್ಕ ಅಪಾಯಿಂಟ್‌ಮೆಂಟ್ಸ್‌ಗಳನ್ನು ಮಾಡಿಬಿಟ್ಟಿದ್ದಾರೆ. ಇಂತಹ ಅಪಾಯಿಂಟ್‌ಮೆಂಟ್ಸ್ ಸರಿಪಡಿಸುವುದಕ್ಕೆ ಸರ್ಕಾರ ಹೋದರೆ ಅವರು ರಿಟ್ ಹಾಕಿ ರಾಜ್ಯ ಸರ್ಕಾರದ ಮೇಲೆ ಹೈಕೋರ್ಟಿನಲ್ಲಿ

ಸಾವಿರಾರು ಅರ್ಜಿಗಳು ಬಾಕಿ ಇವೆ. ಈ ರೀತಿ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಷೆಡ್ಯೂಲ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಪ್ರಾತಿನಿಧ್ಯ ದೊರಕದಂತೆ ಮಾಡಿರುವುದಕ್ಕೆ ಯಾರು ಯಾರು ಕಾರಣಕರ್ತರು ಇದ್ದಾರೋ ಅವರನ್ನು ಉಗ್ರವಾಗಿ ಶಿಕ್ಷಿಸತಕ್ಕ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಈ ೧೦ ವರ್ಷಗಳಿಂದ ಪಿಡಬ್ಲ್ಯೂಡಿ ಡಿಪಾರ್ಟ್‌ಮೆಂಟಿನಲ್ಲಿ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಿಲ್ಲ. ಸುಮಾರು ೮೦೦ಜನ ಅಸಿಸ್ಟೆಂಟ್ ಇಂಜಿನಿಯರ್‌ನ್ನು ಅಪಾಯಿಂಟ್ ಮಾಡಿದ್ದಾರೆ. ಪ್ರೊಮೋಷನಲ್ ವೇಕೆನ್ಸಿಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ೧೦ ಪರ್ಸೆಂಟ್ ಕೂಡ ಇಲ್ಲ ಯಾತಕ್ಕೆ ಈ ಲೋಪ ಬಂತು? ಇರತಕ್ಕ ಎಲ್ಲಾ ಅಧಿಕಾರವನ್ನು ಲೋಕ ಸೇವಾ ಆಯೋಗಕ್ಕೆ ವಹಿಸಿದ್ದರೆ ಅವರು ರಿಕ್ರೂಟ್‌ಮೆಂಟ್ ಮಾಡುತ್ತಿದ್ದರು. ಅವರಿಗೆ ಆಪರ್‌ಚ್ಯುನಿಟಿ ದೊರಕುತ್ತಿತ್ತು. ಇದನ್ನು ಮೊಟಕು ಮಾಡಬೇಕು ಎಂದು ಡಿಪಾರ್ಟ್‌ಮೆಂಟಲ್ ಹೆಡ್ ಮತ್ತು ಕಾರ್ಯದರ್ಶಿಗಳು ಮಾಡಿರುವ ಲೋಪ ಇದು ಅಲ್ಲವೇ? ಈ ಅನ್ಯಾಯವನ್ನು ಸರಿಪಡಿಸುವುದು ಹೇಗೆ? ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಲೇ ಬೇಕು ಆಗ ಅನ್ಯಾಯ ಸರಿಹೋಗುತ್ತದೆ. ಸೆಲೆಕ್ಷನ್ ಮಾಡುವಾಗ ಆಗಲೇ ಹೇಳಿದ್ದೇನೆ. ಮಾರ್ಕ್ಸ್ ಮೇಲೆ ಮೆರಿಟ್ ಜಡ್ಜ್‌ಮೆಂಟ್ ಮಾಡುವಾಗ ಪ್ರದೇಶಿಕವಾಗಿ ಹಿಂದುಳಿದಿರ ತಕ್ಕವರ ಬಗ್ಗೆ ಒಂದು ತತ್ವವನ್ನು ಜಾರಿಗೆ ತಂದು ಗ್ರಾಮಾಂತರ ಪ್ರದೇಶಗಳಲ್ಲಿ ಇರುವವರಿಗೆ ಹೆಚ್ಚು ಹೆಚ್ಚಿಗೆ ಪ್ರಾತಿಧ್ಯ ದೊರಕುವಂತೆ ಹೊಸ ನಿಯಮಗಳನ್ನು ಇಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ. ಪ್ರೊಮೋಷನಲ್ ವೇಕೆನ್ಸಿ ಬಗ್ಗೆ ಸುಪ್ರೀಮ್ ಕೋರ್ಟ್ ಜಡ್ಜ್‌ಮೆಂಟ್ ಇದೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ರಿಸರ್‌ವೇಷನ್ ಮಾಡತಕ್ಕ ತತ್ವ ಇದೆ ಅದು ಸರಿ ಎಂದು ಆ ಬಗ್ಗೆ ರಾಜ್ಯ ಸರ್ಕಾರಕ್ಕೆ ಹತ್ತಾರು ವರ್ಷಗಳಿಂದ ಒತ್ತಾಯ ಮಾಡಿದರೂ ಸಹ ಇದನ್ನು ಜಾರಿಗೆ ತರಲಿಲ್ಲ ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕು. ಪ್ರೊಮೋಷನಲ್ ವೇಕೆನ್ಸಿ ಸಹ ಇದ್ದರೆ ರಿಸರ್‌ವೇಷನ್ ದೊರಕಬೇಕು ಕ್ಲಾಸ್ (1) ಕ್ಲಾಸ್ (೨) ಕ್ಲಾಸ್ ನಲ್ಲಿ ಸಹ ಹೆಚ್ಚು ಹೆಚ್ಚು ಹುದ್ದೆಗಳನ್ನು ಅವರು ಪಡೆಯಬೇಕು. ಮೈಸೂರು ರಾಜ್ಯದಲ್ಲಿ ಎ.ಎ., ಮತ್ತು ಎಂ.ಎಸ್.ಸಿ., ಓದಿರ ತಕ್ಕ ಷೆಡ್ಯೂಲ್ಡ್ ಕ್ಯಾಸ್ಟ್ ಜನಾಂಗದವರು ಅನ್‌ಯೆಂಪ್ಲಾಯ್ ಆಗಿದ್ದಾರೆ ಎಂದರೆ ೨ ಪರ್ಸೆಂಟ್ ಇರತಕ್ಕ ಕ್ಲಾಸ್ (೧) ೫ ಪರ್ಸೆಂಟ್ ಇರತಕ್ಕ ಕ್ಲಾಸ್ (೨) ೮ ಪರ್ಸೆಂಟ್ ಇರತಕ್ಕ ಕ್ಲಾಸ್ (೩) ಅಪಾಯಿಂಟ್‌ಮೆಂಟ್‌ಗಳನ್ನು ನೀವು ಮಾಡತಕ್ಕ ರೀತಿಯಲ್ಲಿ ಯಾವ ಯೋಚನೆ ಮಾಡುತ್ತಿದ್ದೀರಿ ? ಯಾವ ರೀತಿ ಹಿಂದುಳಿದ ವರ್ಗಕ್ಕೆ ಪ್ರಾತಿನಿಧ್ಯ ದೊರಕುವುದರಲ್ಲಿ ನ್ಯಾಯ ದೊರಕಿಸಿಕೊಡುತ್ತೀರಿ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು ಎಂದು ನಾನು ಈ ಬಗ್ಗೆ ಹೇಳುತ್ತೇನೆ. ಆಮೇಲೆ ಇನ್ನೊಂದು ೧೨ ಜನದ ಒಂದು ಸೈಕಲ್ ಆಫ್ ಅಪಾಯಿಂಟ್‌ಮೆಂಟ್ ಮಾಡಿ ಮೂರು ಅಪಾಯಿಂಟ್‌ಮೆಂಟ್ಸ್ ಇದ್ದರೆ 1-7-13-19-21 ಈ ರೀತಿ ರಿಸರ್‌ವೇಷನ್ ಆಫ್ ಸೀಟ್ಸ್ ಮಾಡಿ ಆ ಸ್ಥಾನಗಳನ್ನು ಕೊಡಲಿಕ್ಕೆ ಸಾಧ್ಯ ಇದೆಯೋ ? ಆ ರೀತಿ ಆದರೆ ಪ್ರೊಮೋಷನಲ್ ವೇಕೆನ್ಸಿಯಲ್ಲೂ ಸಹ ಸೀನಿಯಾರಿಟಿ ಪ್ರಕಾರ ಪ್ರೊಮೋಷನ್ ಸಿಗಲು ಅವರಿಗೆ ಅವಕಾಶ ಆಗುತ್ತಿತ್ತು. ಅದನ್ನು ಈಗ ರದ್ದು ಮಾಡಿದ್ದಾರೆ. ಈ ಲೋಪವನ್ನು ದಯವಿಟ್ಟು ಸರಿಪಡಿಸಬೇಕು ಎಂದು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಈಚೆಗೆ ಏಜ್ ರೆಸ್ಟ್ರಿಕ್ಷನ್ ಬೇರೆ ಮಾಡಿದ್ದೀರಿ. ಜ್ಯುಡಿಷಿಯಲ್ ಆಫೀಸರುಗಳ ವಯಸ್ಸನ್ನು 55 ರಿಂದ 58ರ ವರೆಗೆ ಇರಬೇಕೆಂದು ಹೆಚ್ಚು ಮಾಡಿದ್ದೀರಿ. ಇದರಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಹಾಗೂ ಷೆಡ್ಯೂಲು ಕ್ಯಾಸ್ಟ್ ಮತ್ತು ಟ್ರೈಬ್ಸ್ ವರ್ಗಗಳಿಗೆ ವಿನಾಯಿತಿಯನ್ನು ಕೊಡಬೇಕು. ಇದಕ್ಕಾಗಿ ಡೈರೆಕ್ಟ್ ರಿಕ್ರ್ಯೂಟ್‌ಮೆಂಟ್ ಮಾಡಲು ಅನುಕೂಲ ಮಾಡಿಕೊಡಬೇಕು. ಇಂತಹ ಹಿಂದುಳಿದ ವರ್ಗಗಳ ರಕ್ಷಣೆ ಕಡೆಗೆ ಸರ್ಕಾರ ಹೆಚ್ಚು ಸಹಾಯ ಮಾಡಬೇಕು, ಹತ್ತಾರು ವರ್ಷಗಳಿಂದಲೂ ಹಿಂದುಳಿದಿರುವ ಈ ವರ್ಗದವರನ್ನು ಮುಂದಕ್ಕೆ ತರಲು ರಾಜ್ಯಾಂಗದಲ್ಲಿ ಕೂಡ ಅನುಕೂಲ ಮಾಡಿದ್ದಾರೆ. ಇಂತಹ ಒಂದು ಸಮಾಜವಾದವನ್ನು ಜಾರಿಗೆ ತರುತ್ತೇವೆ ಎನ್ನುವ ತತ್ವವನ್ನು ಒಪ್ಪಿಕೊಂಡಿರುವುದರಿಂದ ಅದರಂತ ಈಗಿರುವ ಹಳೆಯ ನಿಯಮಗಳನ್ನೆಲ್ಲಾ ಕಿತ್ತು ಹಾಕಿ ಹೊಸದಾಗಿ ನಿಯಮಗಳನ್ನು ಮಾಡಿ ಎಲ್ಲರಿಗೂ ಅನುಕೂಲಗಳು ಸಿಗುವಂತೆ ಪ್ರಯತ್ನ ಮಾಡಬೇಕು, ಹಿಂದುಳಿದ ವರ್ಗಕ್ಕೆ ಸರಿಯಾದ ಪ್ರಾತಿನಿಧ್ಯವಿಲ್ಲದೆ ಇರುವುದರಿಂದ ಇನ್ನು ಮುಂದಾದರೂ ಇವರಿಗೆ ಹೆಚ್ಚಿನ ಪ್ರಾತಿನಿಧ್ಯ ದೊರಕುವಂತೆ ಮಾಡಬೇಕಾದರೆ ಈಗಿರುವ ಪಬ್ಲಿಕ್ ಸರ್ವಿಸ್ ನಿಯಮಗಳನ್ನು ಬದಲಾವಣೆ ಮಾಡಬೇಕು ಮತ್ತು ಹೊಸ ನಿಯಮಗಳನು ತಂದು ಹಿಂದುಳಿದ ವರ್ಗಗಳಿಗೆ ಅನುಕೂಲವಾಗುವಂತೆ ಮಾಡಬೇಕು ಮತ್ತು ಇನ್ನು ಮುಂದೆ ಶೇಕಡಾ ೨೦ ರಷ್ಟು ನೇಮಕಗಳನ್ನು ಷೆಡ್ಯೂಲು ಕ್ಯಾಸ್ಟ್ ಹಾಗೂ ಷೆಡ್ಯೂಲು ಟ್ರೈಬ್ಸ್‌ಗಳಿಗೆ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಉಪಾಧ್ಯಕ್ಷರು ಇಷ್ಟು ಮಾತಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನಾನು ಹೇಳಿದ ಸಲಹೆಗಳನು ಸರ್ಕಾರ ಜಾರಿಗೆ ತರಬೇಕೆಂದು ಪ್ರಾರ್ಥನೆ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ : (ತೀರ್ಥಹಳ್ಳಿ)—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಲೋಕಸೇವಾ ಆಯೋಗದ ಹಿಂದಿನ ವರ್ಷಗಳ ವರದಿಯನ್ನು ಇಲ್ಲಿ ಚರ್ಚೆಗಾಗಿ ಮಂಡನೆ ಮಾಡಿರತಕ್ಕ ಕಾಲದಲ್ಲಿ ಇದರ ಬಗ್ಗೆ ನಾಲ್ಕು ಮಾತುಗಳನ್ನಾಡಲು ಅಪೇಕ್ಷೆಪಡುತ್ತೇನೆ. ನಾವು ಸಮಾಜ ವಾದಿಗಳು ಎಂದರೆ ಸೋಷಿಯಲಿಸ್ಟರು ಅದೂ ಡಾಕ್ಟರ ಲೋಹಿಯಾ ಪಾರ್ಟಿಗೆ ಸೇರಿದಂತಹ ಸಮಾಜವಾದಿಗಳು ಎಂದು ನಾವು ಹೇಳಿಕೊಂಡು ಬಹು ಹಿಂದಿನಿಂದಲೂ ಬರುತ್ತಿದ್ದೇವೆ. ಈ ಸಮಾಜವಾದದ ಮೂಲ ಭೂತ ಬದಲಾವಣೆ ಯಾಗಬೇಕಾದರೆ ಈ ರಾಷ್ಟ್ರದಲ್ಲಿರತಕ್ಕ ಜಾತಿಮತ ಭೇದಗಳನ್ನೆಲ್ಲಾ ನಿರ್ಮೂಲ ಮಾಡಬೇಕು. ಹಾಗೆ ಜಾತಿ ಭೇದಗಳನ್ನು ನಿರ್ಮೂಲ ಮಾಡಲು ಕೇವಲ ಭಾಷಣಗಳಿಂದ ಹಾಗೂ ಘೋಷಣೆಗಳಿಂದ ಇದು ಸರಿಯಾಗುವುದಿಲ್ಲ ಎನ್ನುವುದರಲ್ಲಿ ನಮಗೆ ಸಂಪೂರ್ಣ ನಂಬಿಕೆ ಇದೆ, ಇದಕ್ಕಾಗಿಯೇ ಲೋಹಿಯಾ ಸಮಾಜವಾದಿಗಳಾದ ನಾವು ಮೂಲಭೂತದ ಬದಲಾವಣೆಯಾಗಬೇಕೆಂದು ಹೇಳುತ್ತಲೇ ಬರುತ್ತಿದ್ದೇವೆ. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ರಾಜ್ಯಾಂಗದಲ್ಲಿರುವ ಆರ್ಟಿಕಲ್ ೧೬ ರಲ್ಲಿ Equality of opportunity in matters of public employment ಎಂದು ಇದೆ

ಹೀಗೆ ಈಕ್ವಾಲಿಟಿ ಆಫ್ ಆಪರ್ಚೂನಿಟಿ ಎನ್ನುವ ತತ್ವವೇ ಮೂಲಭೂತವಾಗಿ ತಪ್ಪು ಎನ್ನತಕ್ಕವರ. ನಾವು. ಕಾರಣ, ಇದು ಭಾರತದಲ್ಲಿರುವ ಸಮಾಜ ಜಾತಿ, ಮತ ಮತ್ತು ಧರ್ಮಗಳ ಮೇಲೆಯೇ ಇಂದು ನಿಂತಿರುವುದು, ಇದು ಸುಮಾರು ಐದುಸಾವಿರ ವರ್ಷಗಳಿಂದಲೂ ಬಂದಿರುವುದರಿಂದ ಈ ಪದ್ಧತಿಯನ್ನು ಮೂಲಭೂತವಾಗಿ ಬದಲಾವಣೆ ಮಾಡುವುದು ಅವಶ್ಯಕವಾಗಿದೆ. ಇದಕ್ಕೆ ಬೇರೆ ಬೇರೆ ಕಾರ್ಯಕ್ರಮಗಳು ಇವೆ. ಇವುಗಳಲ್ಲಿ ಮುಖ್ಯವಾಗಿ ಜಾತಿಯ ಆಧಾರದ ಮೇಲೆ ನೇಮಕಗಳನ್ನು ಮಾಡುವಾಗ ಒಬ್ಬ ಜವಾನಿಂದ ಹಿಡಿದು ದಿವಾನನವರೆಗೆ ಎಲ್ಲ ಅಧಿಕಾರಿಗಳನ್ನೂ ನೂರಕ್ಕೆ ಅರವತ್ತರಷ್ಟು ಸ್ಥಾನಗಳನ್ನು ಹಿಂದುಳಿದ ಜಾತಿಗಳಿಗೆ ಇದರಲ್ಲಿ ಎಲ್ಲ ಜಾತಿಗಳವರು ಸೇರಿದಂತೆ ಇದಕ್ಕೆ ಒಳಗಾಗಬೇಕು, ಈಗ ಹರಿಜನರಿಗೆ ಹಾಗೂ ಗಿರಿಜನರಿಗೆ ಶೇಕಡಾ ೧೮ರಷ್ಟು ಮೀಸಲಾಗಿಡಬೇಕು ಎಂದು ಹೇಳಿದರು. ಅದಕ್ಕೆ ಬದಲು ಹಿಂದುಳಿದ ವರ್ಗಗಳಿಗೂ ಶೇಕಡಾ ಅರವತ್ತರಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕು ಹಿಂದುಳಿದ ಜಾತಿ ಎಂದರೆ ಎಲ್ಲಾ ವರ್ಗಗಗಳಲ್ಲೂ ಅಲ್ಪ ಸಂಖ್ಯಾತ ಪಂಗಡಗಳಿರುತ್ತವೆ. ಅಲ್ಪ ಸಂಖ್ಯಾತರಾಗಿರುವ ಎಲ್ಲ ವರ್ಗಗಗಳಿಗೂ ಇದು ದೊರಕಬೇಕು, ಇದು ಬರೀ ಘೋಷಣೆಯಲ್ಲಿಯೋ ಇಲ್ಲವೆ ಹೆಸರಿನಲ್ಲಿಯೋ ನಡೆಯುತ್ತಿದೆ. ನಿಜ, ಎಲ್ಲರೂ ಮೈನಾರಿಟೀಸ್‌ಗಳು ಎಂದು ಹೇಳುವಾಗ ಎಲ್ಲ ವರ್ಗದಲ್ಲೂ ಮೈನಾರಿಟಿಗಳು ಇದು ಸಾವಿರಾರು ವರ್ಷಗಳಿಂದಲೂ ಬಂದಿರುವವರ್ಗಗಳು. ಇವೆಲ್ಲಾ ಅಲ್ಪ ಸಂಖ್ಯಾತ ವರ್ಗಗಳೇ ಆಗಿವೆ, ಇಂತಹ ಅಲ್ಪ ಸಂಖ್ಯಾತರು ಇಂದು ದೇಶದ ಜನಸಂಖ್ಯೆಯಲ್ಲಿ ಶೇಕಡಾ ಎರಡರಷ್ಟು ಎಂದು ಇರಬಹುದು. ಇಂತಹವರನ್ನು ನೇಮಕ ಮಾಡುವಾಗ ಇವರಲ್ಲಿ ನೂರಕ್ಕೆ ನೂರರಷ್ಟನ್ನೂ ನೇಮಕಗಳನ್ನು ಮಾಡುವಾಗ ಮಾಡುವಾಗ ತುಂಬಬೇಕು. ಆದುದರಿಂದ ಇಂದು ಇರುವ ಪದ್ಧತಿಯನ್ನು ಬದಲಾವಣೆ ಮಾಡದೇ ಹೋದರೆ ನಿಜವಾಗಿಯೂ ಯಾವ ಜಾತಿ ಹಿಂದುಳಿದಿದೆಯೋ ಅವುಗಳಿಗೆ ಯಾವ ಸಹಾಯವು ದೊರಕುವುದಿಲ್ಲ. ಇದಕ್ಕೋಸ್ಕರವೇ ರಾಜ್ಯಾಂಗದಲ್ಲಿ ಹೇಳಿರುವಂತೆ ಆರ್ಟಿಕಲ್ ೧೬ರಲ್ಲಿ ಈಕ್ವಾಲಿಟಿ ಆಫ್ ಅಪರ್ಚೂನಿಟಿ ಎನ್ನುವುದನ್ನು ಮೂಲ ಭೂತವಾಗಿ ಬದಲಾವಣೆ ಮಾಡಲೇ ಬೇಕು, ಇದನ್ನು ಹಿಂದುಳಿದ ವರ್ಗಗಳಿಗೆ ಸ್ವಲ್ಪಮಟ್ಟಿನ ಪ್ರಾತಿನಿಧ್ಯ ದೊರಕುತ್ತದೆ, ಇಲ್ಲದೇ ಇದ್ದರೆ ಇಂದು ರಾಷ್ಟ್ರದಲ್ಲಿರುವ ಹಿಂದುಳಿದ ವರ್ಗದವರನ್ನು ಮುಂದೆ ತರಲಿಕ್ಕೆ ಮತ್ತು ಇದಕ್ಕೆ ತಕ್ಕ ಕಾರ್ಯಕ್ರಮಗಳನ್ನು ರೂಪಿಸಲಿಕ್ಕೆ ಖಂಡಿತ ಸಾಧ್ಯವಿಲ್ಲ. ತಾವು ಇದನ್ನು ಪರಿಶೀಲನೆ ಮಾಡಬೇಕು. ಪಬ್ಲಿಕ್ ಸರ್ವಿಸ್ ಕಮಿಷನ್ ನೇಮಕ ಮಾಡಿ ನಮ್ಮ ರಾಜ್ಯದ ನೌಕರರುಗಳ ನೇಮಕಗಳನ್ನು ಅವರ ಕೈಯ್ಯಲ್ಲಿ ಕೊಟ್ಟಿರುವುದರಿಂದ ಇಂದು ಎಲ್ಲ ನಿರುದ್ಯೋಗಿಗಳ ಸಮಸ್ಯೆಯೂ ಇವರ ಕೈಯ್ಯಲ್ಲಿದೆ. ಇನ್ನು ಈ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಪರೀಕ್ಷೆಗಳನ್ನು ಯಾವ ರೀತಿ ಮಾಡುತ್ತಿದ್ದಾರೆ ಅದನ್ನು ಇಲ್ಲಿ ಹೇಳಬೇಕಾಗಿದೆ. ಇವರ ಬರವಣಿಗೆ ಯಾವ ಭಾಷೆಯಲ್ಲಿರಬೇಕು ಎನ್ನುವುದನ್ನು ನಾವು ಇಲ್ಲಿ ನೋಡಬಹುದು. ನಮ್ಮ ದೇಶದಲ್ಲಿ ಆಂಗ್ಲ ಭಾಷೆಯಲ್ಲಿ ಇಂದು ಪರೀಕ್ಷೆಗಳು ನಡೆಯುತ್ತಿವೆ. ಇಂತಹ ಪರದೇಶದ ಭಾಷೆಯು ಮೇಲೆ ಇಂದು ಪ್ರಭುತ್ವ ನಡೆಯುತ್ತಿದೆ. ಹಳ್ಳಿಗಾಡಿನಿಂದ ಬರತತಕ್ಕ ಜನಗಳಿಗೆ ಇಂತಹ ಇಂಗ್ಲಿಷು ಭಾಷೆಯಲ್ಲಿ ಉತ್ತರಗಳನ್ನು ಬರೆಯಲು ಸಾಧ್ಯವೇ ಎನ್ನುವುದನ್ನು ತಾವು ವಿಚಾರ ಮಾಡಬೇಕು.

ಇಂಗ್ಲೀಷ್ ಮಾಧ್ಯಮದ ಮೂಲಕ ಪಿ. ಎಸ್. ಸಿ. ಅವರು ಪರೀಕ್ಷೆ ನಡೆಸುವುದರಿಂದ ಹಳ್ಳಿಗಾಡಿನಿಂದ ಬರತಕ್ಕಂಥ ವಿದ್ಯಾರ್ಥಿಗಳು, ಅವರು ಯಾವುದೇ ಗುಂಪಿಗೆ ಸೇರಿರಲಿ, ಹೆಚ್ಚಿನ ಅಂಕಗಳನ್ನು ಪಡೆಯುದಕ್ಕೆ ಸಾಧ್ಯವಾಗುವುದಿಲ್ಲ. ಪಟ್ಟಣದ ಮಕ್ಕಳು ಮೊದಲಿನಿಂದಲೂ ಕಾನ್‌ವೆಂಟ್‌ನಲ್ಲಿ ಓದಿ ಇಂಗ್ಲೀಷ್‌ನಲ್ಲಿ ಹೆಚ್ಚಿನ ಜ್ಞಾನವನ್ನು ಪಡೆದುಕೊಂಡಿರುವುದರಿಂದ ಅವರುಗಳು ಈ ಒಂದು ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದುಕೊಳ್ಳುವುದಕ್ಕೆ ಅವಕಾಶವಾಗಿದೆ. ಈ ಪಟ್ಟಣದ ನಿವಾಸಿಗಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡಲು ಈ ಇಂಗ್ಲೀಷ್ ಭಾಷೆಯನ್ನು ಉಳಿಸಿಕೊಂಡು ಬರುತ್ತಿದ್ದಾರೆಂದು ಕಾಣುತ್ತದೆ. ಈ ರೀತಿ ಉಳಿಸಿಕೊಂಡು ಬರುವುದರ ಮೂಲಕ ಹಳ್ಳಿಗಾಡಿನ ಸಾಮಾನ್ಯರನ್ನು ತುಳಿಯುತ್ತಿದ್ದಾರೆಂದು ಸ್ಪಷ್ಟವಾಗಿ

ಹೇಳುವುದಕ್ಕೆ ಬಯಸುತ್ತೇನೆ. ಪಿ. ಎಸ್. ಸಿ. ಅವರು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಸ್ಥಳೀಯ ಜನರಿಗೆ ಹೆಚ್ಚಿನ ಅವಕಾಶ ಕೊಡಬೇಕು. ಅದರಲ್ಲೂ ಮುಖ್ಯವಾಗಿ ಕರ್ನಾಟಕಸ್ಥರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಕನ್ನಡ ಬಲ್ಲವರಿಗೇ ಹುದ್ದೆಗಳನ್ನು ಕೊಡಬೇಕು. ಇಂದು ಏನು ನಡೆಯುತ್ತದೆ ಎಂದರೆ, ಯಾವುದೋ ನೆರೆ ರಾಜ್ಯದಿಂದ ಬಂದವರು ಕೇರ್-ಆಫ್ ಕೋಣಂದೂರು ಲಿಂಗಪ್ಪ ಎಂದು ವಿಳಾಸ ಕೊಟ್ಟು, ನಾನು ಇಲ್ಲಿಯೇ ಹತ್ತು ವರ್ಷದಿಂದ ವಾಸವಾಗಿದ್ದೇನೆ ಎಂದು ಓರಲ್ ಎಕ್ಸಾಮಿನೇಷನ್‌ನಲ್ಲಿ ಹೇಳಿಕೆ ಕೊಟ್ಟುಬಿಡುತ್ತಾನೆ. ಈ ಕಾರಣದಿಂದ ಪಿ. ಎಸ್. ಸಿ. ಅವರು ಆತನು ಈ ರಾಜ್ಯದವನೇ ಇರಬೇಕೆಂದುಕೊಂಡು ಸೆಲೆಕ್ಟ್ ಮಾಡಿಬಿಡುತ್ತಾರೆ. ಈ ಒಂದು ಅಪಾಯದ ವಿಷಯವನ್ನು ಸರ್ಕಾರದ ಮುಂದಿಡುವುದಕ್ಕೆ ಬಯಸುತ್ತಿದ್ದೇನೆ. ಈ ಕಾರಣದಿಂದ ಲಿಖಿತ ಪರೀಕ್ಷೆಯನ್ನು ಇಂಗ್ಲಿಷ್‌ಗೆ ಬದಲು ಕನ್ನಡದಲ್ಲಿಯೇ ಬರೆಯುವಂತೆ ಏರ್ಪಾಡು ಮಾಡಿದರೆ ನಮ್ಮ ರಾಜ್ಯದವರಿಗೇ ಕೆಲಸ ಸಿಗುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ. ಇದರ ಜೊತೆಗೆ ಮತ್ತೊಂದು ಅಪಾಯದ ಸಂಗತಿ ಎಂದರೆ, ಇಂದು ಕೇರಳಾದಲ್ಲಿರತಕ್ಕಂಥ ಎಲ್ಲ ವಿಶ್ವವಿದ್ಯಾನಿಲಯಗಳು ಉದ್ದೇಶಪೂರ್ವಕವಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಕೊಟ್ಟು, ಆ ಮೂಲಕ ಅವರು ಈ ದೇಶದ ಪ್ರತಿಯೊಂದು ರಾಜ್ಯದಲ್ಲಿಯೂ ಹೆಚ್ಚು ಹೆಚ್ಚು ನೌಕರಿ ಗಳಿಸುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದಾರೆ. ಈ ರೀತಿ ಕೇರಳಾ ವಿಶ್ವವಿದ್ಯಾನಿಲಯದವರು ಎಲ್ಲ ವಿದ್ಯಾರ್ಥಿಗಳು ಪುಕ್ಕಟೆಯಾಗಿ ರ್‍ಯಾಂಕ್ ಕೊಡುತ್ತಿರುವುದರಿಂದ ಅವರು ಬೇರೆ ರಾಜ್ಯದ ವಿದ್ಯಾರ್ಥಿಗಳ ಜೊತೆಗೆ ಸುಲಭವಾಗಿ ಸ್ಪರ್ಧೆ ಮಾಡುವುದಕ್ಕೆ ಅವಕಾಶವಾಗಿದೆ. ಈ ರೀತಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ಜೊತೆಯಲ್ಲಿ ನಮ್ಮ ರಾಜ್ಯದಲ್ಲಿರುವ ನಾಲ್ಕು ವಿಶ್ವವಿದ್ಯಾನಿಲಯಗಳಲ್ಲಿ ಓದಿ ಫಸ್ಟ್ ಕ್ಲಾಸಿನಲ್ಲಿ ಪಾಸ್ ಮಾಡಿದ್ದರೂ ಸಹ ಜ್ಞಾನದಲ್ಲಾಗಲಿ ಯೋಗ್ಯತೆಯಲ್ಲಾಗಲೀ ಕಾಂಪಿಟ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಸರ್ಕಾರದವರು ನೋಡಬೇಕು. ಏಕೆಂದರೆ ಈಗ ಮೆರಿಟ್ ಮೇಲೆ ಸೆಲೆಕ್ಟ್ ಮಾಡಲಾಗುತ್ತಿದೆ. ಈ ಮೆರಿಟ್ ಬೇಕಾಗಿಲ್ಲ. ಆದಷ್ಟು ಕರ್ನಾಟಕಸ್ಥರಿಗೇ ಹೆಚ್ಚಿನ ಉದ್ಯೋಗಗಳನ್ನು ಕೊಡಬೇಕೆಂದು ಸರ್ಕಾರದವರು ಪಿ. ಎಸ್. ಸಿ. ಅವರಿಗೆ ಮುನ್ಸೂಚನೆ ಕೊಡಬೇಕು.

ಶ್ರೀ ಎಂ. ಮಲ್ಲಪ್ಪ : ರಾಜ್ಯಾಂಗದ ಪ್ರಕಾರ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಪರೀಕ್ಷೆಯಲ್ಲಿ ಯಾರು ಹೆಚ್ಚು ಅಂಕಗಳನ್ನು ಪಡೆಯುತ್ತಾರೋ ಅವರಿಗೆ ಕೆಲಸಕೊಡಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ : ಅದಕ್ಕೆ ನಾನು ಹೇಳುತ್ತಿರುವುದು, ಸಣ್ಣ ಪರೀಕ್ಷೆಯೋ ಆಗಲಿ, ದೊಡ್ಡ ಪರೀಕ್ಷೆಯೋ ಆಗಲಿ, ಲಿಖಿತ ಮೂಲಕ ನಡೆಸತಕ್ಕಂಥ ಪರೀಕ್ಷೆಯನ್ನು ಕನ್ನಡದಲ್ಲಿಯೇ ನಡೆಸಬೇಕೆಂದು ಪಿ. ಎಸ್. ಸಿ. ಅವರಿಗೆ ಸರ್ಕಾರದವರು ಆದೇಶ ಕೊಡಬೇಕು. ಆರೀತಿ ಮಾಡಿದರೆ ನಮ್ಮ ಕರ್ನಾಟಕಸ್ಥರಿಗೆ ಹೆಚ್ಚಿನ ಉದ್ಯೋಗಗಳು ಸಿಗುತ್ತದೆ. ಆ ರೀತಿ ಮಾಡದೆ ಇಂಗ್ಲೀಷ್‌ನಲ್ಲಿ ಪರೀಕ್ಷೆಮಾತ್ರ, ಮೆರಿಟ್‌ನಲ್ಲಿ ಯಾರು ಬರುತ್ತಾರೆ ಅವರಿಗೆ ಉದ್ಯೋಗ ಕೊಡುವುದು ಸರಿಯಲ್ಲ. ಈ ರೀತಿಯ ಮೆರಿಟ್‌ನ್ನು ಕನ್ಸಿಡರ್ ಮಾಡುವುದಾದರೆ, ಬೇಲೂರು ಶ್ರೀನಿವಾಸ ಅಯ್ಯಂಗಾರ್ ಅವರನ್ನು ಕೊಲೆ ಮಾಡಿದವರಿಗೆ ಇದ್ದ ಮೆರಿಟ್ ಇಲ್ಲಿ ಯಾರಿಗೆ ಇದೆ ಎಂದು ನಾನು ಕೇಳುತ್ತೇನೆ. ಆದ್ದರಿಂದ ನಮಗೆ ಈಗಿನ ರೀತಿಯ ಮೆರಿಟ್ ಬೇಕಾಗಿಲ್ಲ. ಇಂದು ಮುನಿಸಿಪಾಲಿಟಿಯ ಸದಸ್ಯರು ಕೂಡ ವೈಸ್-ಚಾನ್ಸಲರನ್ನು ಟೀಕೆ ಮಾಡುವುದು ನಡೆಯುತ್ತಿದೆ. ಅದು ಹೋಗಬೇಕು. ಅಪಾಯಿಂಟ್‌ಮೆಂಟ್ ಬಗ್ಗೆ ಸರ್ಕಾರದವರು ಹರಿಜನ ಮತ್ತು ಗಿರಿಜನರಿಗೆ ೧೮ ಪರ್ಸೆಂಟ್ ರಿಜರ್ವೇಷನನ್ನು ಇಟ್ಟಿದ್ದಾರೆ. ಪರವಾಗಿಲ್ಲ. ಆದರೆ ಪ್ರಮೋಷನ್ ಕೊಡುವಾಗ ೧೮ ಪರ್ಸೆಂಟ್ ಮೀಸಲು ಇಡುತ್ತಿಲ್ಲ. ಅಲ್ಲಿ ಮೆರಿಟ್‌ನ್ನು ನೋಡುತ್ತಾರೆ. ಅವರಿಗೂ ಸರ್ವಿಸ್ ಆಗಿರುವುದರಿಂದ ಮೆರಿಟ್ ನೋಡದೆ ೧೮ ಪರಸೆಂಟ್ ಮೀಸಲು ಸ್ಥಾನಗಳನ್ನು ಏತಕ್ಕೆ ಕೊಡಬಾರದು? ಇದನ್ನು ಸರ್ಕಾರದವರು ಗಮನಿಸಬೇಕು.

ಶ್ರೀ ಎಚ್. ಸಿದ್ಧವೀರಪ್ಪ : ಸೀನಿಯಾರಿಟಿ ಇಲ್ಲದಿದ್ದರೂ ಕೊಡಬೇಕೇ?

ಶ್ರೀ ಕೋಣಂದೂರು ಲಿಂಗಪ್ಪ : ಕೆಲವು ಸಂದರ್ಭದಲ್ಲಿ ಸೀನಿಯಾರಿಟಿ ಇದ್ದರೂ ಕೊಡುತ್ತಿಲ್ಲ. ಇನ್ನು ಮುಂದೆ ಪ್ರಮೋಷನ್‌ನಲ್ಲಿಯೂ ಮೀಸಲು ಸ್ಥಾನ ಇಡುವ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕು. ನಮ್ಮ ರಾಜ್ಯದ ಪಿ. ಎಸ್ ಸಿ ಯಲ್ಲಿರುವ ಅಧ್ಯಕ್ಷರ ಮತ್ತು ಸದಸ್ಯರುಗಳು ಬಗ್ಗೆ ನನ್ನ ಸ್ನೇಹಿತರು ಮಾತನಾಡುತ್ತಾ ಅವರೆಲ್ಲರೂ ಬಹಳ ಒಳ್ಳೆಯವರು ಎಂದು ಹೇಳಿರುವುದರಿಂದ ನಾನು ಅವರ ಬಗ್ಗೆ ಈಗ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾನು ಅವರೊಬ್ಬರ ಮುಖವನ್ನು ನೋಡಿಲ್ಲ. ಮತ್ತು ವೈಯುಕ್ತಿಕವಾಗಿ ಅವರುಗಳು ನನಗೆ ಸರಿಯಾಗಿ ಗೊತ್ತಿಲ್ಲದೇ ಇರುವುದರಿಂದ ಅವರ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅಪೇಕ್ಷೆ ಮಾಡುವುದಿಲ್ಲ. ಈಗ ಎಲ್ಲ ನೌಕರಿಗಳಿಗೂ ಆಯ್ಕೆ ಮಾಡತಕ್ಕಂಥ ಅಧಿಕಾರವನ್ನು ಇವರಿಗೆ ಕೊಡುತ್ತಿರುವುದರಿಂದ ಅಧಿಕಾರವೆಲ್ಲ ಕೇಂದ್ರೀಕೃತವಾಗುತ್ತದೆ. ಈಗ ಜಿಲ್ಲಾ ಮಟ್ಟದಲ್ಲಿಯೂ ಸಹ ಕಮಿಟಿಗಳು ಇರುವುದರಿಂದ, ಆಯಾ ಜಿಲ್ಲೆಗೆ ಸಂಬಂಧ

(ಶ್ರೀ ಕೋಣಂದೂರು ಲಿಂಗಪ್ಪ)

ಪಟ್ಟ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಆಯಾ ಜಿಲ್ಲೆಯ ಕಮಿಟಿಯವರಿಗೆ ಕೊಡುವುದು ಸೂಕ್ತವೇ ಎನ್ನುವ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಬೇಕು. ಇಲ್ಲದಿದ್ದರೆ ಎಲ್ಲವೂ ಲೋಕಲೈಜ್ ಆಗಬಹುದು ಎಂಬ ಶಂಕೆ ಬರಬಹುದು. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಆಳವಾಗಿ ಯೋಚನೆ ಮಾಡಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು. ಮುಖ್ಯವಾಗಿ ಆದಷ್ಟು ನಮ್ಮ ಕರ್ನಾಟಕದವರಿಗೇ ಉದ್ಯೋಗ ಸಿಗುವಂತೆ ಪಿ. ಎಸ್.ಸಿ. ಅವರು ನೋಡಿಕೊಳ್ಳಬೇಕಲ್ಲದೆ, ಹಿಂದಿನ ಶಾಸನ ಸಭೆಯ ಸದಸ್ಯರುಗಳು ಈ ಪಿ. ಎಸ್. ಸಿ. ಬಗ್ಗೆ ಏನು ಆರೋಪಗಳನ್ನು ಮಾಡಿದ್ದರೋ, ಅದು ಇನ್ನು ಮುಂದೆ ಆಗದಂತೆ ನೋಡಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ; (ಮೂಡಿಗೆರೆ) ಸನ್ಮಾನ್ಯ ಅಧ್ಯಕ್ಷರೇ, ಇದುವರೆಗೆ ನನ್ನ ಸ್ನೇಹಿತರು ಮೂರು ವರ್ಷಗಳ ಪಿ. ಎಸ್. ಸಿ. ವರದಿಗಳ ಮೇಲೆ ಬಹಳವಾಗಿ ಮಾತನಾಡಿದ್ದಾರೆ. ೧೯೬೭—೬೮, ೧೯೬೮—೬೯, ಮತ್ತು ೧೯೬೯—೭೦ನೇ ಸಾಲುಗಳಿಗೆ ಸಂಬಂಧಪಟ್ಟ ವರದಿಗಳನ್ನು ನಾನು ವಿವರವಾಗಿ ನೋಡಿದ್ದೇನೆ. ೧೯೬೭—೬೮ನೇ ಸಾಲಿನ ವರದಿಯಲ್ಲಿ ಕ್ಲಾಸ್-೩ ಪೋಸ್ಟ್‌ಗಳಲ್ಲಿರುವವರನ್ನು ಕ್ಲಾಸ್-೨ ಗೆ ಪ್ರಮೋಷನ್ ಮಾಡುವ ಬಗ್ಗೆ ಕೆಲವು ವಿವರಗಳನ್ನು ಕೊಟ್ಟಿದ್ದಾರೆ. ಈ ಪ್ರಮೋಷನ್ ಮೇಕಿನ್ನಿಯಲ್ಲಾಗಲೀ, ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ತಯಾರು ಮಾಡುವುದರಲ್ಲೀ ಆಗಲೀ, ಟೆಂಪರರೀ ಪೋಸ್ಟ್‌ಗಳನ್ನು ರೆಗ್ಯುಲರೈಸ್ ಮಾಡುವುದರಲ್ಲೀ ಆಗಲೀ ಡಿಸಿಪಿ ಲಿನರಿ ಆಕ್ಷನ್ ತೆಗೆದು ಕೊಂಡ ಕೇಸುಗಳೇ ಆಗಲಿ ಪಿ. ಎಸ್. ಸಿ. ಗೂ ಮತ್ತು ಸರ್ಕಾರಕ್ಕೂ ಬಹಳ ಬಿಜ್ಞಾಸೆ ಇರುವ ಹಾಗೆ ಈ ರಿಪೋರ್ಟಿನಲ್ಲಿ ಕಾಣುತ್ತದೆ.ಆದಕ್ಕಾಗಿಯೇ ಈಗತಾನೆ ಮಾತಾನಾಡಿದ ಮಾನ್ಯ ಪಾಟೀಲ್‌ಅವರು ಸರ್ಕಾರವನ್ನು ನಿಂದನೆ ಮಾಡಿದ್ದು. ಈ ಮೂರು ರಿಪೋರ್ಟುಗಳನ್ನು ನೋಡಿದರೆ ಬಹಳ ಮಟ್ಟಿಗೆ ಸರ್ಕಾರ ಟೆಂಪರರಿ ಅಪಾಯಿಂಟ್‌ಮೆಂಟ್ ನಲ್ಲಾಗಲಿ, ಪ್ರಮೋಷನ್ ಕೊಡುವುದರಲ್ಲಾಗಲಿ, ರಿಟೈರ್ಡ್ ಆದವರಿಗೆ ರೀಎಂಪ್ಲಾಯ್‌ಮೆಂಟ್ ಕೊಡುವುದರಲ್ಲೇ ಯಾಗಲೀ, ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವುದರಲ್ಲಿ ಆಗಲೀ ಬಹಳ ಇರೆಗ್ಯುಲ್ಯಾರೀಟಿಸ್ ಎಂಬುದು ಗೊತ್ತಾಗುತ್ತದೆ. ಪ್ರತಿಯೊಂದು ಕೇಸ್‌ಗಳ ಬಗ್ಗೆಯೂ ಇಲ್ಲಿ ವಿವರ ಕೊಡಲಾಗಿದೆ. ಅವನ್ನೆಲ್ಲಾ ಹೇಳುವುದಕ್ಕೆ ಸಾಕಷ್ಟು ಸಮಯ ಇಲ್ಲ. ಅನೇಕ ಸಂದರ್ಭಗಳಲ್ಲಿ ಸರ್ಕಾರದಿಂದ ರಿಪೋರ್ಟ್ ಬಂದಿಲ್ಲ ಎಂದು ಪಿ. ಎಸ್.ಸಿ. ಅವರು ತಮ್ಮ ರಿಮಾರ್ಕ್ಸ್‌ನಲ್ಲಿ ಬರೆದಿದ್ದಾರೆ.

ನೂರಾರು ಕೇಸುಗಳಲ್ಲಿ ಗೌರ್ನಮೆಂಟ್ ರಿಪೋರ್ಟ್ ಅವೈಟೆಡ್ ಎಂದು ಹಾಕಿದ್ದಾರೆ ೬೭—೬೮ನೇ ಇಸವಿಯಲ್ಲಿ ಗೌರ್ನಮೆಂಟಿನಿಂದ ರಿಪೋರ್ಟ್ ಬಂದಿಲ್ಲ ಎಂದು ಹೇಳಿದ್ದಾರೆ. ಅದು ಇದುವರೆಗೂ ಕೂಡ ಬಂದಿಲ್ಲವೇ ಹೇಗೆ ಎಂಬುದನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಿಳಿಸಬೇಕು. ಇವೊತ್ತು ಪಬ್ಲಿಕ್ ಸರ್ವೀಸ್ ಕಮಿಷನ್‌ನಲ್ಲಿ ಇಂಡಿವಿಜುಯಲ್ ಕೇಸ್‌ನಲ್ಲಿ ೩ ವರ್ಷಗಳ ವರದಿಯಲ್ಲೂ ಕೂಡ ಗೌರ್ನಮೆಂಟ್ ರಿಪೋರ್ಟ್ ಅವೈಟೆಡ್ ಎಂದು ಯಾವ ಯಾವ ಇನ್‌ಸ್ಟೆನ್ಸ್‌ನಲ್ಲಿ ಹೇಳಿದ್ದಾರೆಯೋ ಅವುಗಳೆಲ್ಲಕ್ಕೂ ಕೂಡ ಈ ಮಾನ್ಯ ಸಭೆಗೆ ಉತ್ತರಕೊಡಬೇಕು ಎಂದು ನಾನು ಹೇಳುತ್ತೇನೆ.

4—30 P.M.

ನಾನು ತಮಗೆ ಒಂದು ನಿದರ್ಶನವನ್ನು ಹೇಳುತ್ತೇನೆ On page 12 of the Public Service Commission Report for 67 68 it is stated. No reply was received from the Government during the year under report. ಎಂದು ಇದೆ ಇದು ಬಹಳ ಸೀರಿಯಸ್ ಇರ್‍ರಿಗ್ಯುಲಾರಿಟೀಸ್. ಇದು ಈ ಮಾನ್ಯ ಸಭೆ ತುಲನೆ ಮಾಡತಕ್ಕ ವಿಚಾರ. ಪಬ್ಲಿಕ್ ಸರ್ವೀಸ್ ಕಮಿಷನ್ ಒಂದು ದೊಡ್ಡ ಜುಡಿಷಿಯಲ್ಲಿ ಸಂಸ್ಥೆ ಇದ್ದಹಾಗೆ ಇಂಥಾ ಒಂದು ಸಂಸ್ಥೆಯಲ್ಲಿ ಸರ್ಕಾರದವರು ತಮಗೆ ಬೇಕಾದ ಸಂದರ್ಭದಲ್ಲಿ ತನಗೆ ಯಾವರೀತಿ ಬೇಕೋ ಆ ರೀತಿ ವರ್ತಿಸಿಕೊಂಡು ಹೋಗಿರತಕ್ಕದ್ದು ಈ ರಿಪೋರ್ಟುಗಳಿಂದ ತಮಗೆ ಕಂಡುಬರುತ್ತಿವೆ. ಅಲ್ಲದೆ ಈ ರಿಪೋರ್ಟಿನಲ್ಲಿ ಅನೇಕ ಸಂದರ್ಭದಲ್ಲಿ ಅವರು ಕೊಟ್ಟಿರತಕ್ಕ ರಿಪೋರ್ಟ್ ಸಮಜಾಯಿಷಿಯಾಗಿಲ್ಲ. ಅಪಾಯಿಂಟ್‌ಮೆಂಟ್ ಮಾಡಿರತಕ್ಕದ್ದು ಸರಿಯಿಲ್ಲ ಎಂದು ಹೇಳಿ ವಿತ್‌ಡ್ರಾ ಮಾಡಿರತಕ್ಕದ್ದು ಕಂಡುಬರುತ್ತದೆ. ಹೀಗೆ ಮಾಡುವಾಗ "Under consultation Relating to Service Rules"—Vide Page 7 of the Report for the year 1968—69, it is stated: The Commsssion dealt with 4 Cases relating to service matter. Government issued Orders in respect of one case and in the remaining 3 cases, final decision of Government was Still waited. These are listed in

Appendix XIII. ಎಂದು ಹೇಳಿದ್ದಾರೆ. ಈ ಕೇಸುಗಳನ್ನೆಲ್ಲಾ ನೋಡಿದರೆ ಬಹಳ ಮಟ್ಟಿಗೆ ಈ ಕೇಸುಗಳು ಡಿಲೇ ಆಗಿವೆ. ಮತ್ತು ಅನ್ಯಾಯವಾಗಿರುವುದು ಕಂಡುಬರುತ್ತಿದೆ. ಇಂಥಾ ಸಂದರ್ಭದಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಅವಶ್ಯಕತೆ ಏತಕ್ಕೆ ಬೇಕಾಗಿತ್ತು ? ಸರ್ಕಾರದವರು ಇಷ್ಟರಮಟ್ಟಿಗೆ ಮಾಡುವಾಗ ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಅವಶ್ಯಕತೆ ಏನು ಬೇಕಾಗಿತ್ತು ಎಂದು ಕೇಳುತ್ತೇನೆ.

ಆ ಮೇಲೆ On page 7, under Response from the condidates for the advertisements made by the Commission', It is stated: 'But there was no response for recruitment to some of these posts of Craft Teacher in Coffee Cultivation and Dramatics Instructors in the Department of Public Instruction" ಇದರಲ್ಲಿ ಕ್ಯಾಂಡಿಡೇಟ್ಸ್ ಬರಲಿಲ್ಲ ಎಂದು ಹೇಳುತ್ತಾರೆ. ಅದಕ್ಕೆ ಕ್ಯಾಂಡಿಡೇಟ್ಸ್ ಬಾರದೆ ಇರುವುದಕ್ಕೆ ಕಾರಣವೇನು ರತಪೇತಿ ಕೊಡದೇ ಇರುವುದಿಲ್ಲ ಕಾರಣ. ಅನೇಕ ಸಂದರ್ಭಗಳಲ್ಲಿ ತರಪೇತಿ ಕೊಟ್ಟು ಆಗಾಗ್ಯೆ ಅಪ್ಲಿಕೇಷನ್‌ಗಳನ್ನು ಕಾಲ್‌ಫಾರ್ ಮಾಡಬೇಕಾಗುತ್ತದೆ. ಸರ್ಕಾರದವರು ಹರಿಜನ ಗಿರಿಜನರಿಗೆ ಮತ್ತು ಹಿಂದುಳಿದ ವರ್ಗಗಳವರಿಗೆ ತರಪೇತಿ ಕೊಡದೆ ಇರುವುದರಿಂದ ಟೆಕ್ನಿಕಲ್ ಅಪಾಯಿಂಟ್‌ಮೆಂಟ್‌ಗಳಿಗೆ ಹರಿಜನಗಿರಿಜನರಿಂದ ಮತ್ತು ಹಿಂದುಳಿದ ವರ್ಗಗಳ ಉಮೇದುವಾರರಿಂದ ಅರ್ಜಿಗಳು ಬಾರದೆ ಅವು ಲ್ಯಾಪ್ಸ್ ಆಗಿರುವುದು ಕಂಡುಬರುತ್ತದೆ. ಆದ್ದರಿಂದ ಅದಕ್ಕೆ ಅವಕಾಶ ಕೊಡದೆ ತರಪೇತಿ ಕೇಂದ್ರಗಳನ್ನು ತೆರೆದು ಹರಿಜನ ಗಿರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ತರಪೇತಿಯನ್ನು ಕೊಟ್ಟು ಅವರಿಗೆ ಹೆಚ್ಚು ಹೆಚ್ಚು ಪ್ರಾತಿನಿಧ್ಯವನ್ನು ಕೊಡಬೇಕು. ಈಗಾಗಲೇ ಹಿಂದುಳಿದ ಜನಾಂಗದ ವಿಚಾರದಲ್ಲಿ ಅನೇಕ ರೀತಿಯಲ್ಲಿ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈಗ ಮೆರಿಟ್ ಮೇಲೆ ಕೆಲಸಗಳನ್ನು ಕೊಡತಕ್ಕಂಥಾ ಪದ್ಧತಿ ಈಗ ಪಬ್ಲಿಕ್‌ಸರ್ವೀಸ್ ಕಮಿಷನ್ನಿನಲ್ಲಿ ಇದೆ. ಮಾರ್ಕ್ಸ್ ನೋಡಿ ಮೆರಿಟ್‌ಮೇಲೆ ಕೆಲಸಗಳನ್ನು ಕೊಡುವುದು ನಾನು ಮಾತ್ರ ಬಹುಮಟ್ಟಿಗೆ ವಿರೋಧಿಸುತ್ತೇನೆ. ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಪ್ರಶ್ನೆ ಪತ್ರಿಕೆಗಳು ಬೀದಿಯಲ್ಲಿ ಕಂಡುಬರುತ್ತವೆ. ಅಂಥಾ ಸಂದರ್ಭಗಳು ಬೇಕಾದಷ್ಟು ಇವೆ. ಪ್ರಶ್ನೆ ಪತ್ರಿಕೆಗಳನ್ನು ಮಾರಾಟ ಮಾಡುವ ವಿಷಯ ಪತ್ರಿಕೆಗಳಲ್ಲಿ ವರದಿಯಾಗಿದೆ. ಮತ್ತು ಉಪಾಧ್ಯಾಯರೂ ಕೂಡ ಟ್ಯೂಷನ್ ಕೊಡುವುದರಲ್ಲಿ ನಿರತರಾಗಿದ್ದಾರೆ. ಟ್ಯೂಷನ್ ಕೊಡುವುದು ಒಳ್ಳೆಯ ಉದ್ಯೋಗ, ಎಂದು ಅದನ್ನು ಎಫಿಸಿಯಂಟ್ ಆಗಿ ನಡೆಸುವುದಕ್ಕೋಸ್ಕರ ಪ್ರಶ್ನೆಪತ್ರಿಕೆಗಳನ್ನು ಅವರು ತರುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಹುಡುಗರು ಈ ಪ್ರಶ್ನೆಪತ್ರಿಕೆಗಳನ್ನು ಅವಲಂಬಿಸಿಕೊಂಡು ಟ್ಯೂಷನ್ನಿಗೆ ಹೆಚ್ಚು ಹೆಚ್ಚಾಗಿ ಹೋಗುತ್ತಾರೆ. ಆ ರೀತಿ ಅವರಿಗೆ ಪಶ್ನೆ ಪತ್ರಿಕೆಗಳು ಸಿಕ್ಕುವುದರಿಂದ ಅವರು ಹೆಚ್ಚು ಹೆಚ್ಚು ಅಂಕಗಳನ್ನು ಪಡೆಯುತ್ತಾರೆ ಎನ್ನತಕ್ಕಂಥಾ ಮಾತು ಕೇಳಿಬರುತ್ತಿದೆ. ಇದು ಸರ್ವೇ ಸಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ ವಿಷಯ. ಈ ರೀತಿ ಪಬ್ಲಿಕ್ ಸರ್ವೀಸ್ ಕಮಿಷನ್ನಿನಲ್ಲಿ ಏತಕ್ಕೆ ಮೆರಿಟ್ ಮೇಲೆ ಹುದ್ದೆಗಳನ್ನು ಕೊಡುತ್ತಾರೆಯೋ ಗೊತ್ತಿಲ್ಲ. ಮೆರಿಟ್ ಮೇಲೆ ಹುದ್ದೆ ಕೊಡುವುದು ಅಂಕಗಳ ಮೇಲೆಯೆ ಅವಲಂಬಿಸಿ ಹುದ್ದೆ ಕೊಡುವುದು ಅಳತೆ ಕೋಲಲ್ಲ. ಮೆಡಿಕಲ್ ಕಾಲೇಜುಗಳಲ್ಲಿ ಮತ್ತು ಅಗ್ರಿಕಲ್ಚರಲ್ ಕಾಲೇಜುಗಳಲ್ಲಿ ಅಪಾಯಿಂಟ್‌ಮೆಂಟ್‌ಗಳನ್ನು ಮತ್ತು ಸೀಟುಗಳನ್ನು ಮೆರಿಟ್ ಮೇಲೆ ಹಂಚುವುದರಿಂದ ಹೆಚ್ಚು ಅಂಕಗಳನ್ನು ಪಡೆಯಲು ಜನಗಳು ಪ್ರಶ್ನೆಪತ್ರಿಕೆಗಳನ್ನು ಹುಡುಕಿಕೊಂಡು ಹೋಗುವುದು ಸಹಜವಾಗಿ ಉದ್ಭವಿಸುತ್ತದೆ. ಆದ್ದರಿಂದ ಮೆರಿಟ್‌ಮೇಲೆ ಸೀಟುಗಳನ್ನು ಮತ್ತು ಅಪಾಯಿಂಟ್‌ಮೆಂಟುಗಳನ್ನು ಕೊಡುವುದು ಸರಿಯಾದ ಮಾರ್ಗವಲ್ಲ. ಈ ಅಳತೆಕೋಲು ಏನಿದೆ ಇದು ಪರೀಕ್ಷೆಗಳ ಮೇಲೆ ಅವಲಂಬಿಸಿ ಮೆರಿಟ್‌ಮೇಲೆ ನೌಕರಿ ಕೊಡುವುದು ಜನಗಳಿಗೆ ಹೆಚ್ಚು ಸಹಾಯಕವಾಗಲಾರದು. ಮತ್ತು ಆ ನೀತಿ ಸರಿಯಾದ್ದಲ್ಲ. ಇದನ್ನು ಪುನರ್‌ವಿಮರ್ಶೆ ಮಾಡಬೇಕು. ರಾಜ್ಯಾಂಗದ ನಿಯಮದ ಪ್ರಕಾರ ಹರಿಜನ ಗಿರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ನೌಕರಿಗಳು ದೊರೆಯುವಂತಾಗಬೇಕು. ಮತ್ತು ಸಮಾಜವಾದ ನೀತಿ ಏನಿದೆ ಅದನ್ನು ಕಾರ್ಯಗತ ಮಾಡುವುದರಲ್ಲಿ ರಾಜ್ಯಾಂಗವನ್ನು ಬೇಕಾದರೆ ಬದಲಾವಣೆ ಮಾಡಿ ಎಲ್ಲರಿಗೂ ಸಮಾನಾವಕಾಶವನ್ನು ದೊರಕಿಸಿಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ಸಮಾಜವಾದ ನೀತಿಯ ಪ್ರಕಾರ ಸಮಾಜದಲ್ಲಿ ಎಲ್ಲರಿಗೂ ಸಮಾನಾವಕಾಶವನ್ನು ಸರಕಾರದವರು ದೊರಕಿಸಬೇಕು. ಈ ದೃಷ್ಟಿಯಿಂದ ಎಲ್ಲರಿಗೂ ನೌಕರಿಯನ್ನು ಒದಗಿಸುವ ಸಲುವಾಗಿ ಕಾನೂನುಗಳನ್ನು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ಬದಲಾವಣೆಮಾಡಿ ಎಲ್ಲರಿಗೂ ನೌಕರಿಯನ್ನು ಒದಗಿಸಬೇಕು. ಆರೀತಿ ಮಾಡುವುದಕ್ಕೆ ಸಮರ್ಪಕವಾದ ಯಾವ ಒಂದು ಕಾನೂನು ಬೇಕೋ ಅಂಥಾ ಒಂದು ಕಾನೂನನ್ನು ರಚನೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಈಗ ಪಬ್ಲಿಕ್ ಸರ್ವೀಸ್ ಕಮೀಷನ್ನಿನಲ್ಲಿ ಶ್ರೀಮಂತರೂ ನೌಕರಿಗೆ ಅರ್ಜಿಯನ್ನು ಹಾಕಿಕೊಳ್ಳುತ್ತಾರೆ. 8 ಲಕ್ಷ ರೂಪಾಯಿಗಳ ವರಮಾನ ಇರುವವರೂ ನೌಕರಿಗೆ ಅರ್ಜಿಯನ್ನು ಹಾಕಿಕೊಳ್ಳುತ್ತಾರೆ. ದೊಡ್ಡ ದೊಡ್ಡ ಜಮೀನ್ದಾರರೂ ನೌಕರಿಗೆ ಅರ್ಜಿಗಳನ್ನು ಹಾಕಿಕೊಳ್ಳುತ್ತಾರೆ. ಇದು ಸಮಾಜವಾದದ

(ಶ್ರೀ ಜಿ. ಪುಟ್ಟಸ್ವಾಮಿ)

ನೀತಿಗೆ ಮತ್ತು ಪ್ರಜಾಪ್ರಭುತ್ವ ನೀತಿಗೆ ಸರಿಯಾದ್ದಲ್ಲ. ಈಗ ಸಮಾಜವಾದವನ್ನು ಜಾರಿಗೆ ತರುವ ದೃಷ್ಟಿಯಲ್ಲಿ ಯಾರಿಗೆ ಉದ್ಯೋಗ ಇಲ್ಲ, ಯಾರಿಗೆ ವರಮಾನವಿಲ್ಲ ಅಂಥವರಿಗೆ ನೌಕರಿ ಕೊಡುವುದರಲ್ಲಿ ಮೊದಲು ಪ್ರಾಶಸ್ತ್ಯ ಕೊಡಬೇಕು. ಅಂಥವರಿಗೆ ನೌಕರಿಯನ್ನು ಕೊಡುವುದಕ್ಕೆ ಕಾನೂನಿನಲ್ಲಿ ಅಳವಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಸಮಾಜವಾದವನ್ನು ಕಾರ್ಯಗತ ಮಾಡಬೇಕಾದರೆ ನಾವು ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದಂತೆ ಒಂದು ಸಂಸಾರಕ್ಕೆ ಒಂದು ನೌಕರಿಯನ್ನು ದೊರಕಿಸಬೇಕಾದರೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಮತ್ತು ರಾಜ್ಯಾಂಗವನ್ನು ಬದಲಾವಣೆ ಮಾಡದ ಹೊರತು ಅದನ್ನು ನಾವು ಕಾರ್ಯಗತ ಮಾಡುವುದಕ್ಕಾಗುವುದಿಲ್ಲ. ಇವೊತ್ತಿನ ದಿವಸ ನಾವು ಆ ಒಂದು ಉದ್ದೇಶವನ್ನು ಸಾಧನೆ ಮಾಡುವುದಕ್ಕಾಗಿ ಪಬ್ಲಿಕ್ ಸರ್ವೀಸ್ ಕಮೀಷನ್ನಿನ ರೂಲ್ಸ್‌ನ್ನು ಬದಲಾವಣೆ ಮಾಡಬೇಕು. ಮತ್ತು ಪಬ್ಲಿಕ್ ಸರ್ವೀಸ್ ಕಮಿಷನ್ ಅನ್ನು ಪುನರ್‌ರಚನೆ ಮಾಡಬೇಕು. ಈಗ ಸರ್ಕಾರದವರು ಯಾವ ಯಾವ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡಿದ್ದಾರೆ ಅವುಗಳು ಒಂದೂ ಸರಿಯಾಗಿಲ್ಲ. ಆ ನೀತಿಯೂ ಸರಿಯಾಗಿಲ್ಲ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಇದೆ, ಸ್ಟೇಟ್‌ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿ ಇದೆ, ಮತ್ತು ಡಿಸ್ಟ್ರಿಕ್ಟ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿ ಇದೆ. ಈ ಮೂರು ಸಂಸ್ಥೆಗಳೂ ಕೂಡ ಕೆಲಸ ಮಾಡಿದರೂ ಕೂಡ ತೃಪ್ತಿಕರವಾದ ಕೆಲಸ ನಡೆಯುತಕ್ಕ ಮಾತು ಇಲ್ಲ. ಈ ನೀತಿ ಸರಿಯಾದದ್ದಲ್ಲ ಇದನ್ನು ಯೋಚನೆ ಮಾಡಿ ಪುನರ್‌ವಿಮರ್ಶೆ ಮಾಡಬೇಕು. ಒಂದೇ ಸಂಸ್ಥೆಯ ಮೂಲಕ ಕೆಲಸಗಳನ್ನು ವಿಲೇವಾರಿ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ.

(MADAM SPEAKERE .N THE CHAIR)

4-40 P.M.

ಎಂ. ಎಸ್. ಇ. ಬಿ. ಮತ್ತು ಎಂ. ಎಸ್. ಆರ್. ಟಿ. ಸಿ. ಸಂಸ್ಥೆಗಳು ಏನಿವೆಯೋ ಅಲ್ಲಿ ನೌಕರಿಗಳನ್ನು ಅವರಿಗೆ ಬೇಕಾದವರಿಗೆ ಕೊಡುತ್ತಿದ್ದಾರೆ. ನೂರಾರು ಹಾಗೂ ಸಾವಿರಾರು ಉಮೇದುವಾರರಿಗೆ ಒಂದಲ್ಲ ಒಂದು ರೂಪದಲ್ಲಿ ತಪ್ಪದೆ ಅನ್ಯಾಯ ಮಾಡುತ್ತಿದ್ದಾರೆಂದು ವದಂತಿ ಇವೆ. ಅದು ಕೂಡಲೇ ಹೋಗಬೇಕು. ಇವರ ಬಗ್ಗೆ ಕಾನೂನು ಏನಿದೆಯೋ ಅದು ಕಡ್ಡಾಯವಾಗಿ ಕಾರ್ಯಗತವಾಗಬೇಕು. ತಮಗೆ ಬೇಕುಬೇಕಾದವರಿಗೆ ಯಾವುದೋ ತರಹದಲ್ಲಿ ಟೆಂಪೊರರಿ ಅಪಾಯಿಂಟ್‌ಮೆಂಟ್ಸ್ ಮಾಡುವುದು ಸರಿಯಲ್ಲ ಹೀಗೆ ಮಾಡುವಾಗ ಪಿ.ಎಸ್.ಸಿ. ಅವರನ್ನು ಕನ್‌ಸಲ್ಟ್ ಮಾಡದೆಯೇ ಇರುವ ವರದಿಯೂ ಇದೆ. ಟೆಂಪೊರರಿ ಅಪಾಯಿಂಟ್‌ಮೆಂಟ್ಸ್ ಮಾಡಬಾರದು. ಆ ರೀತಿ ಮಾಡಿರುವುದರಲ್ಲಿ ಜಿಲ್ಲಾ ಮಟ್ಟದಲ್ಲಿ ಆಗಲೀ, ಸೆಕ್ರೆಟೆರಿಯಟ್ ಲೆವಲ್ಲಿನಲ್ಲಾಗಲೀ, ಅಥವಾ ಜನರಲ್ ಅಡ್ಮಿನಿಸ್ಟ್ರೇಷನ್ ಲೆವಲ್ಲಿನಲ್ಲಾಗಲೀ, ಹಿಂದುಳಿದ ವರ್ಗದವರಿಗೆ, ಷೆಡ್ಯೂಲ್ ಕ್ಯಾಸ್ಟ್ ಹಾಗೂ ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ. ಶೇಕಡ ೮ ರಷ್ಟೂ ಕೂಡ ಕೊಟ್ಟಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ, ಹಿಂದೆ ಅನೇಕ ಸಮಿತಿಗಳನ್ನು ಮಾಡಿದರು. ಅನೇಕ ಕಮಿಷನ್ನುಗಳನ್ನು ಮಾಡಿದರು. ಡಾ॥ ನಾಗನಗೌಡ ಸಮಿತಿ ಮತ್ತು ಇತರೇ ಸಮಿತಿಗಳನ್ನೂ ಸಹ ಮಾಡಿದ್ದಾರೆ. ಆ ವರದಿಯ ಪ್ರಕಾರ ಕಾರ್ಯಗತ ಮಾಡಿಲ್ಲ. ಆ ವರದಿಗಳನ್ನು ಮೂಲೆಗೆ ಇಟ್ಟಿದ್ದಾರೆ. ಸರ್ಕಾರ ಒಂದು ಜವಾಬ್ದಾರಿಯುತವಾದ ಒಂದು ಆ ಕಮಿಟಿಯನ್ನು ರಚಿಸುವುದಕ್ಕೆ ಎಷ್ಟು ಜವಾಬ್ದಾರಿಯನ್ನು ಮತ್ತು ಆಸಕ್ತಿಯನ್ನು ತೆಗೆದುಕೊಳ್ಳುತ್ತದೋ, ಅದೇ ರೀತಿಯಾಗಿ ಆ ಕಮಿಟಿ ರಿಪೋರ್ಟ್ ಕೊಟ್ಟಮೇಲೆ ಅವರ ವರದಿಯನ್ನು ಪರಿಶೀಲಿಸಿ ಕಾರ್ಯಗತಮಾಡುವುದು ಸಹ ಬಹಳ ಮುಖ್ಯವಾದ ಜವಾಬ್ದಾರಿಯೆಂಬುದನ್ನು ಅರಿತುಕೊಂಡು ಆ ವರದಿಯನ್ನು ಕಾರ್ಯಗತಮಾಡಬೇಕು. ಸರ್ಕಾರ ಆ ವರದಿಗಳ ಬಗ್ಗೆ ಇಷ್ಟು ಅಲಕ್ಷ್ಯ ತೋರಿಸುವುದು ಸರಿಯಾದುದಲ್ಲ. ಹಿಂದಿನ ಸರ್ಕಾರಗಳ ವಿಷಯದಲ್ಲಿ ಜನ ಒಂದು ರೀತಿಯಲ್ಲಿ ತಿಳಿದುಕೊಂಡಿದ್ದಾರೆ. ಆದರೆ ಈ ಸರ್ಕಾರ ಹಾಗೂ ಮುಂದಿನ ಸರ್ಕಾರಗಳು ಆ ರೀತಿಯಾಗಿ ಮಾಡುವುದಿಲ್ಲವೆಂಬ ನಂಬಿಕೆ ನಮಗೆ ಇದೆ. ಆ ರೀತಿ ಮಾಡಬಾರದು. ನೌಕರಿಗಳನ್ನು ಕೊಡುವಾಗ ಪಿ ಎಸ್.ಸಿ. ಅವರನ್ನು ವಿಚಾರಮಾಡದೆ ಅಸಿಸ್ಟೆಂಟ್ ಕಮಿಷನರ್ಸ್, ಇನ್‌ಕಮ್‌ಟ್ಯಾಕ್ಸ್ ಆಫೀಸರ್ಸ್ ಇಂಥ ದೊಡ್ಡ ದೊಡ್ಡ ಹುದ್ದೆಗಳಿಗೆ ಪ್ರೊಬೆಷನರಿಯಾಗಿ ನೇಮಕ ಮಾಡಿರುವುದು ನಿಜವಾಗಿ ತೃಪ್ತಿಕರವಾಗಿ ಇಲ್ಲವೆನ್ನುವ ಅಪಾದನೆ ಹಿಂದಿನ ಪಿ.ಎಸ್.ಸಿ. ಮೇಲೆ ಇವೆ. ಅಂತಹ ಒಂದು ಅಪಾದನೆ ಪಿ.ಎಸ್.ಸಿ. ಮತ್ತು ಈ ಸರ್ಕಾರದಲ್ಲಿ ದೂರ ದೂರ ಇರಬೇಕು. ಯಾವ ಸರ್ಕಾರವೇ ಆಗಲೀ ಇಂತಹ ಹುದ್ದೆಗಳಿಗೆ ಅಧಿಕಾರಿಗಳನ್ನು ನೇಮಿಸುವಾಗ ಈ ವಿಚಾರಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡಿರಬೇಕು. ಮಾನ್ಯ ಶ್ರೀ ಜಯಪ್ರಕಾಶ್‌ನಾರಾಯಣ್ ಅವರು

ಹೇಳಿದ ಸಲಹೆಗಳನ್ನು ನಾನು ಒಪ್ಪುತ್ತೇನೆ. ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹಾಗೂ ಹಿಂದುಳಿದ ಜನಾಂಗಗಳವರ ಬಗ್ಗೆ ಬಹಳ ಚೆನ್ನಾಗಿ ಅವರು ಹೇಳಿದ್ದಾರೆ ನಾನು ಅವರು ಹೇಳಿದ ಸಲಹೆಗಳನ್ನೆಲ್ಲಾ ಪುನಃ ಹೇಳಬೇಕೆಂದಿದ್ದೆ ಆದರೆ ಅವರು ನಾನು ಹೇಳತಕ್ಕಂಥ ವಿಚಾರಗಳನ್ನು ಬಹಳ ಚೆನ್ನಾಗಿ ಹೇಳಿರುವುದರಿಂದ, ನಾನು ಮತ್ತೆ ಅವರು ಹೇಳಿದಂಥ ವಿಚಾರಗಳನ್ನೇ ಪ್ರಸ್ತಾಪ ಮಾಡು ವುದಿಲ್ಲ. ಇನ್ನೊಂದು ವಿಚಾರ. ಕೇಂದ್ರ ಸರಕಾರದ ಸಂಸ್ಥೆಗಳಲ್ಲಿ ಮೈಸೂರಿಗೆ ಪ್ರಾತಿನಿಧ್ಯವಿಲ್ಲವೆಂಬ ವಿಚಾರವೂ ಇದೆ. ಅವುಗಳಲ್ಲಿ ಸೂಪ್ಲಿ ರೈಲ್ವೆ ಇಲಾಖೆ, ಪೋಸ್ಟ್ ಆಫೀಸ್, ಟೆಲಿಫೋನ್ ಹಾಗೂ ಇನ್‌ಕಂಟ್ಯಾಕ್ಸ್ ಇಲಾಖೆಗಳ ಬಗ್ಗೆ ಮೈಸೂರಿನವರಿಗೆ ಪ್ರಾತಿನಿಧ್ಯವಿಲ್ಲ. ಇದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗುತ್ತದೆ. ಈಗ ಕೇಂದ್ರಕ್ಕೊಳಪಟ್ಟ ಅನೇಕ ಸಂಸ್ಥೆಗಳಿವೆ. ಈಗ ಮೈಸೂರಿಗೆ ಸಾಕಷ್ಟು ಪ್ರಾತಿನಿಧ್ಯ ಇಲ್ಲವೆಂದು ಅನೇಕ ಮಾನ್ಯ ಸ್ನೇಹಿತರೂ ಸಹ ಮಾತನಾಡಿದ್ದಾರೆ. ಈಗ ಅದು ಬೀದಿ ಮಾತೂ ಸಹ ಆಗಿದೆ. ನೆರೆ ದೇಶಗಳಿಗೆ ಹೆಚ್ಚಿಗೆ ಪ್ರಾತಿನಿಧ್ಯ ಕೊಟ್ಟಿದ್ದಾರೆ. ಇವತ್ತು ಸಿಂಧಿಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಿದ್ದಾರೆ. ಇಲ್ಲಿ ಹುಟ್ಟಿ ಅನೇಕ ವರ್ಷಗಳ ಕಾಲ ನೆಲಸಿರುವರಿಗೇ ಇಲ್ಲಿ ಉದ್ಯೋಗ ಸಿಗುತ್ತಾ ಇಲ್ಲ. ಇಲ್ಲಿ ಹುಟ್ಟಿ ನೆರೆ ರಾಜ್ಯಗಳಲ್ಲಿ ಹೋಗಿ ನೆಲಸಿರುವವರಿಗೂ ಒಂದು ಉದ್ಯೋಗ ಸಿಗುತ್ತಾ ಇಲ್ಲ. ಆದರೆ ನೆರೆ ರಾಜ್ಯಗಳಲ್ಲಿ ಹುಟ್ಟಿ ಇಲ್ಲಿ ಬಂದು ನೆಲಸಿರುವವರಿಗೆ ಬೇಕಾದಷ್ಟು ಉದ್ಯೋಗದ ಸವಲತ್ತುಗಳನ್ನು ಅತ್ಯಲ್ಪಕಾಲದಲ್ಲಿ ಕೊಡುತ್ತಿದ್ದಾರೆ. ಆ ಕಡೆಗಳಿಗೆ ಹೋಗಿರುವಂಥ ಒಬ್ಬ ನಿರುದ್ಯೋಗಿಗೂ ಕೆಲಸ ಸಿಗುತ್ತಾ ಇಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಅವರನ್ನು ನೋಡಬಹುದು. ಅವರು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಇದ್ದಾರೆ. ಬೇರೆ ಬೇರೆ ದೇಶದವರು ನಮ್ಮಲ್ಲಿ ನೌಕರಿ ಪಡೆಯುತ್ತಿರುವಂತೆ ನಮ್ಮವರು ಪರದೇಶಗಳಲ್ಲಿ ನೌಕರಿಗಳನ್ನು ಪಡೆಯುತ್ತಾ ಇಲ್ಲ ನಮ್ಮ ದೇಶದಲ್ಲಿ ಅಂಥವರಿಗೆ ನೌಕರಿಗಳನ್ನು ಎಷ್ಟು ಪರ್ಸೆಂಟ್ ಕೊಟ್ಟಿದ್ದಾರೆಂದು ನಾನು ಸರ್ಕಾರದವರನ್ನು ಕೇಳುತ್ತೇನೆ ನಮ್ಮವರಿಗೆ ಪರದೇಶಗಳಲ್ಲಿ ಎಷ್ಟು ನೌಕರಿಗಳನ್ನು ಎಷ್ಟು ಪರ್ಸೆಂಟ್ ಕೊಟ್ಟಿದ್ದಾರೆಂದು ನಾನು ಪ್ರಶ್ನೆಮಾಡುತ್ತೇನೆ.

ಇನ್ನು ಕ್ಯಾರಕ್ಟರ್ ಸರ್ಟಿಫಿಕೇಟುಗಳನ್ನು ಕೊಡುವ ವಿಷಯ. ಇದರ ಬಗ್ಗೆ ಬಹಳ ಅದ್ವಾನ ನಡೆಯುತ್ತಿದೆ. ಅನೇಕ ಕಡೆಗಳಲ್ಲಿ ಏನಾಗಿದೆಯೆಂದರೆ, ಮಕ್ಕಳನ್ನು ಶಾಲೆಗಳಿಗೆ ಸೇರಿಸುವಾಗ ಸುಳ್ಳು ಸರ್ಟಿಫಿಕೇಟ್ ಕೊಟ್ಟು ದಾಖಲೆ ಮಾಡಿರುತ್ತಾರೆ. ಇದಕ್ಕೊಂದು ನಿದರ್ಶನ ಕೊಡಬೇಕೆಂದರೆ ಶೃಂಗೇರಿ ಗ್ರಾಮದಲ್ಲಿ ಮಾಲೇರು ಎಂಬ ಜಾತಿ ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸೇರಿದ ಜಾತಿ ಎಂದು ಪರಿಗಣಿಸಲಾಗಿಲ್ಲ. ಮಾಲೇರು ಎಂಬ ಜಾತಿ ಒಂದು ಜಾತಿ, ಅದು ಹಿಂದುಳಿದ ಜಾತಿಯಲ್ಲ ಮುಂದುವರಿದ ಜಾತಿ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸೇರಿದ್ದಲ್ಲ. ಆ ಜಾತಿಗೆ ಮತೀರು ಎಂಬ ಹೆಸರನ್ನಿಟ್ಟುಕೊಂಡು ಸ್ಕೂಲುಗಳಲ್ಲಿ ಕ್ಯಾರಕ್ಟರ್ ಸರ್ಟಿಫಿಕೇಟ್ ಕೊಡುವಾಗ ಸ್ಕೂಲುಗಳಲ್ಲಿ ಆ ರೀತಿ ಯಾಗಿ ದಾಖಲೆ ಮಾಡಿರುತ್ತಾರೆ ಇದರ ಬಗ್ಗೆ ಯಾರೇ ಅಧಿಕಾರವರ್ಗದವರಾಗಲೀ, ಪಬ್ಲಿಕ್ ಸರ್ವಿಸ್ ಕಮಿಷನ್ನಿನವರಾಗಲೀ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದವರಾಗಲೀ ಏನೊಂದು ಪ್ರಶ್ನೆ ಮಾಡುತ್ತಾ ಇಲ್ಲ. ಸ್ಕೂಲ್ ಸರ್ಟಿಫಿಕೇಟಿನಲ್ಲಿ ಮಲೇರು ಎಂದು ಇದೆ ಮಾಲೇರು ಎಂಬ ಜಾತಿಯನ್ನು ಆ ರೀತಿ ಕೊಟ್ಟಿದ್ದು ಸರಿಯಲ್ಲ. ಇದರ ಬಗ್ಗೆ ವಿಚಾರಣೆ ನಡೆಸಿದರೆ ಒಳ್ಳೆಯದು. ಮಾಲೇರು ಎಂಬ ಹಿಂದುಳಿದ ಜಾತಿಗೆ ಈಗ ಯಾವ ಉದ್ಯೋಗ ಸಿಗದ ಹಾಗೆ ಅನ್ಯಾಯವಾಗುತ್ತದೆ. ಇಂತಹ ಒಂದು ಪದ್ಧತಿಯನ್ನು ತಡೆಹಿಡಿಯಬೇಕು. ಎಕ್ಸಿಕ್ಯುಟಿವ್ ಅಪಾಯಿಂಟ್‌ಮೆಂಟಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಷೆಡ್ಯೂಲ್ಡ್ ಟ್ರೈಬ್ಸ್‌ಗಳಿಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲ. ಇವತ್ತಿನ ದಿವಸ ಗೆಜೆಟೆಡ್ ನೌಕರಿಗಳನ್ನು ಶೇಕಡ 18ರಷ್ಟು ಈ ವರ್ಗದವರಿಗೆ ಕೊಡಬೇಕೆಂಬುದು ಬರೀ ಪುಸ್ತಕದಲ್ಲಿದೆ, ಕಾರ್ಯಗತವಾಗಿಲ್ಲ. ನಮ್ಮ ಪಂಗಡದವರಿಗೆ ಪ್ರೊಮೋಷನ್ಸ್ ಹಾಗೂ ಹೆಚ್ಚಿಗೆ ಹುದ್ದೆಗಳನ್ನು ಕೊಟ್ಟಿಲ್ಲ. ಕೆಲವು ಸಂದರ್ಭಗಳಲ್ಲಿ ಶೇ 18% ಭಾಗ ನೌಕರಿ ಕೊಡಬೇಕೆಂದು ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾದರೂ ಕೊಟ್ಟಿಲ್ಲ. ಎಕ್ಸಿಕ್ಯುಟಿವ್ ಅಧಿಕಾರಿ ಗಳಲ್ಲಿ ಅಸಿಸ್ಟೆಂಟ್ ಕಮಿಷನರ್, ತಹಸೀಲ್ದಾರ್ ಮತ್ತು ಡೆಪ್ಯುಟಿ ಕಮಿಷನರುಗಳಾಗಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಜನರು ಇದ್ದಾರೆ ಎನ್ನುವ ಪ್ರಶ್ನೆಯನ್ನು ನಾನು ಹಾಕುತ್ತಿದ್ದೇನೆ. ಆದ್ದರಿಂದ ನಿಜವಾದ ಸಮಾಜವಾದದ ತತ್ವ ಕಾರ್ಯಗತವಾಗಬೇಕಾದರೆ ಅನೇಕ ದಕ್ಷ ಆಡಳಿತಗಾರರು ಹಾಗೂ ನಿಷ್ಠಾ ವಂತ ಅಧಿಕಾರಿಗಳು ಆಡಳಿತದಲ್ಲಿ ಇರಬೇಕು. ಇಂತಹವರು ಷೆಡ್ಯೂಲ್ಡ್ ಕ್ಯಾಸ್ಟ್ ಪಂಗಡದಲ್ಲಿಯೂ ಇದ್ದಾರೆ. ನಮ್ಮ ಜನಾಂಗದಲ್ಲಿಯೂ ಇದ್ದಾರೆ ಅವರಿಗೂ ಐ.ಎ.ಎಸ್. ಹಾಗೂ ಐ.ಎ.ಎಸ್. ಹುದ್ದೆ ಗಳನ್ನು ಕೊಟ್ಟರೆ ಸಮಾಜದ ಕಷ್ಟಗಳನ್ನು ಯಾವ ರೀತಿ ಪರಿಹಾರಮಾಡಬೇಕೆಂಬ ಅರಿವು ಉಂಟಾಗುತ್ತದೆ. ಅನೇಕ ಸಮಸ್ಯೆಗಳೂ ಸಹ ನಮ್ಮ ಜನಾಂಗದಿಂದಲೇ ಬಗೆಹರಿಯುತ್ತವೆ. ಏಕೆಂದರೆ ಈಗಿರತಕ್ಕ ಅನೇಕ ಐ.ಎ.ಎಸ್. ಅಧಿಕಾರಿಗಳು ದಕ್ಷತೆಯಿಂದ ಕೆಲಸಮಾಡುವುದೇ ಇಲ್ಲ. ಆದ್ದರಿಂದ ಐ.ಎ.ಎಸ್. ಅಧಿಕಾರಿ ಗಳನ್ನು ಇನ್ನುಮುಂದೆ ಜಿಲ್ಲಾಮಟ್ಟದಲ್ಲಿ ನೇಮಕ ಮಾಡಬೇಕು. ಡೆಪ್ಯುಟಿ ಕಮಿಷನರ ಹುದ್ದೆಗಳನ್ನೂ ಸಹ ಇನ್ನು ಮುಂದೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹಾಗೂ ಹಿಂದುಳಿದ ಜನಾಂಗದವರಿಗೂ ಕೊಡಬೇಕೆಂದು ನಾನು ಸರ್ಕಾರದವರನ್ನು ಒತ್ತಾಯಪಡಿಸುತ್ತೇನೆ.

(Madam Speaker)

ಇನ್ನು ಸ್ಥಳೀಯ ಅಭ್ಯರ್ಥಿಗಳ ವಿಚಾರ. ಇವರನ್ನು ನೇಮಕಮಾಡುವ ಸಮಿತಿಯಲ್ಲಿ ಹಿಂದುಳಿದ ಜನಾಂಗದವರ ಪ್ರತಿನಿಧಿಗಳೇ ಇಲ್ಲ. ಅಲ್ಲಿ ಯಾರು ಆಫೀಸರು ಇರುತ್ತಾರೆಯೋ ಅವರು ಅವರ ಜಾತಿಯವರನ್ನೇ, ಅವರ ನೆಂಟರನ್ನೇ, ಅವರ ಸಂಬಂಧಿಕರನ್ನೇ ಸ್ಥಳೀಯ ಅಭ್ಯರ್ಥಿಗಳಾಗಿ ನೇಮಕಮಾಡಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನಿಂದ ಅದಕ್ಕೆ ಅನುಮತಿಪಡೆದು ಅವರನ್ನು ಅಲ್ಲಿಯೇ ಖಾಯಂ ಮಾಡುವ ಪದ್ಧತಿ ಇದೆ. ಇದಕ್ಕಿಂತ ಮಹಾಪರಾಧ ಯಾವುದೂ ಇಲ್ಲ. ಇದು ಕೂಡಲೇ ಹೋಗಬೇಕು. ಇಂತಹ ಪ್ರತಿಯೊಂದು ಪ್ರಶ್ನೆಯನ್ನು ಅವರು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ರೆಫರ್ ಮಾಡಬೇಕು. ನ್ಯಾಯವಾದ ರೀತಿಯಲ್ಲಿ ಎಲ್ಲರಿಗೂ ಸಮಾನಾವಕಾಶ ಕೊಡಬೇಕು. ಸಮಾಜವಾದ ಹೋಗಿ ಈಗ ಅದು ಸಮಾಧಿಯಾಗುತ್ತಿದೆ. ಈ ವಿಚಾರದಲ್ಲಿ ನನ್ನ ಹಾಸ್ಯ ಸ್ನೇಹಿತರನೇಕರು ಮಾತನಾಡಿದ್ದಾರೆ. ನಾನು ಈ ಸಭೆಯಲ್ಲಿ ಇನ್ನೂ ಹೇಳುವುದಕ್ಕೆ ಇನ್ನೂ ಅನೇಕ ಉತ್ತಮವಾದ ಸಲಹೆಗಳಿದ್ದುವು. ನಾನು ಪಬ್ಲಿಕ್ ಸರ್ವಿಸ್ ಕಮಿಷನ್ ಬಗ್ಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದೇನೆ. ಅವು ಬಹುಮಟ್ಟಿಗೆ ಉತ್ತಮವಾದ ಸಲಹೆಗಳು. ಇನ್ನುಮುಂದೆ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೂ ಮತ್ತು ಸರ್ಕಾರಕ್ಕೂ ಹೊಂದಾಣಿಕೆ ಇರುವ ರೀತಿಯಲ್ಲಿ ಆಡಳಿತ ನಡೆದುಕೊಂಡು ಹೋಗಬೇಕು. ಇದರಲ್ಲಿ ಭಿನ್ನಾಭಿಪ್ರಾಯ ಇರಬಾರದು. ಇಲ್ಲಿ ಬಹಳಮಟ್ಟಿಗೆ ಭಿನ್ನಾಭಿಪ್ರಾಯವಿದ್ದ ಹಾಗೆ ಕಾಣುತ್ತದೆ. ಅದನ್ನು ಸರ್ಕಾರದವರು ಕೂಡಲೇ ಸರಿಪಡಿಸಬೇಕು.

ಇಷ್ಟು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ. ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

† SRI C. M. ARUMUGHAM (K.G.F.) : Madam Speaker, My friend Sri Deve Gowda, Leader of the Opposition, while speaking has highlighted the loopholes in the Reports of the Public Service Commission from the year 1969 and onwards. I only raise this objection, namely, that the Government—the previous Government have not placed the Report from 1969 onwards before the House. The Hon'ble Chief Minister was saying that the Government have not delayed in printing the Reports. It could be seen that the Report for 1968-69 which was submitted on 31st March 1969, was actually printed in 1971. They have taken two long years to print the Report; the Report will not be of any use to this House if the Report of the concerned year is not discussed in that particular year itself.

If we go through the cases referred to the Public Service Commission by the Government for advice, in most of the cases the Commission have accepted the proposals of the Government. In some cases, the Commission have stated that Government orders are awaited. If the Government orders are still awaited, are we in a position to know the latest position regarding such cases? In the year 1968-1969, there are several cases in which the Government orders are awaited or are not received. That is why, I say that it is no good placing such incomplete reports and delayed reports. Action should be taken against Officers who have failed in their duty to advise the Ministry to place these Reports on the floor of the House for discussion in time.

I have got to submit that the Public Service Commission should function as an autonomous body as adumbrated in the Indian Constitution. The Public Service Commission is something comparable to the High Court because the Members of the Commission are appointed under the Constitution and the Constitution says that there shall be a

Public Service Commission in each State. So, a State cannot be without a Public Service Commission. So the P.S.C. should function according to the provisions adumbrated in the Constitution. In the Constitution it is stated how they should function according to the regulations framed by the Governor and what their functions are. But is the Public Service Commission functioning as such an autonomous body ? The Commission have become a departmental undertaking of the Government of Mysore. The P.S.C. has stated 'Yes' to whatever the Government wanted. They have not the courage to say 'No' to any proposal of the Government. In that case, what is the use of heving a Public Service Commission ? Ultimately it has become a Department of the Government of Mysore. The persons who are papointed as Members of the Public Service Commission have political background.

SRI H. SIDDAVEERAPPA (MINISTER FOR HEALTH) : In some cases, why in so many cases, the Commission have differed from the Government.

SRI C. M. ARUMUGHAM : In the 30 cases or so referred to the Commission in 1968-69, except in one or two cases in which they have stated that orders of Government are awaited, in every case they have accepted the proposal of Government or concurred with them. They could have as well stated 'ditto' instead of 'accepted' in the statement of cases referred to the Commission by the Government in the remarks column.

SRI H. SIDDAVEERAPPA : They have got independence to differ.

SRI C. M. ARUMUGHAM : No. I am charging them that they have not exercised their independence. If the Commission had acted independently, I ask why so many writ cases are there ? So many cases have gone to the Supreme Court. What is this Public Service Commission doing ? Just visiting Belgaum, Gulbarga, Dharwar, Raichur, Chitradurga, Mangalore, Hassan, Chikmagalur and Kolar. Are they meant for only moving about and going about here and there and staying in Guest Houses ? Is that the way the Public Service Commission should function ? The Constitution prescribes the fucnctions of the Public Service Commission. When we go through these Reports, we see that our P.S.C. is not following the Constitution at all. The Members of the Commission have become "Yes-men" of the Government to-day. Government have also appointed only their 'Yesmen' on the Commission. During the President's Rule in the State last year, the Governor was all in all. He used maximum power and even exceeded his limits. He pulled all his strength and weight to exercise his authority. The Governor appointed some Members of the Public Service Commission. On what ground were they appointed ? Invariablu the Chief Ministers of Mysore have appointed one or two of their followers on the P.S.C. These persons were appointed because they accepted the Chief

(Sri C. M. Arumugham)

Minister as their leader and not because they had the requisite qualifications to become Members of the P.S.C. Those who were appointed were not efficient, were not able men and were not good administrators. Some of the followers of the Chief Minister were also appointed as Chairman of the Public Service Commission and they held office for six long years. So they reduced themselves to the status of 'Yesmen' of the Government. What is it that the P.S.C. has done? The Public Service Commission should be something like High Court. The Members of the Commission should stand on their own legs; they must be courageous and decide all matters on merits.

Now we have to see whether our Public Service Commission has acted on principles. They have promoted a clerk as a I Class Officer rejecting and overlooking all rules and regulation and even the Constitution. They have flouted the Constitution. The Constitution has not been properly and strictly adhered to. The Commission is functioning as a Department of the Government of Mysore. One person was promoted as Class I Officer and there was a writ against him in the High Court of Mysore. A Government can face the whole world provided it is efficient and honest. However mighty a government may be, it should bow down before justice. The whole world, in fact, must bow down to justice and necessarily the Government also must bow down to justice. Lord Krishna who blessed Arjuna said that the important issue in the war was the upholding of Dharma. Lord Buddha also primarily taught Dharma, justice and righteous action So Government must bow to down justice to the decision of the High Court. If Government does not implement the direction and decision of the High Court, what is the use of having a High Court? The High Court has struck down the promotion of this official to Class I post as illegal, null and void. The High Court has also remarked that this appoinment is bad in principle. The case had gone to the Supreme Court. The Supreme Court, the highest judicial body of the land, also says that it is bad, rules of promotion are not followed and a person taken as local candidate has been promoted. It is nearly six months since this decision has come but till today the Government of Mysore have not implemented it. On the other hand, they have been trying to see how to get over the judicial decision, how to get over from that judgement. Now they have asked the Advocate-General and others as to how to by pass the judgement It is the fault of the Public Service Commission in not looking into this promotion. It is not that this is the only instance of a promotion not being in order. There are several cases of the kind. A candidate was sent to Delhi for library training and the expenditure on his training was about Rs. 5000. On his return, the candidate was not posted to the Library. Instead, a Second Division Clerk, not even a I Division Clerk, was promoted as Librarian in the State Library. What is this Public Service Commission doing?

SRI H. S. SIDDAPPA : He is the candidate of Sri Kanthi.

SRI C. M. ARUMUGAM : It is immaterial whether he is Sri Kanthi's candidate or the candidate of Sri Jatti, Sri Nijalingappa or Sri Veerendra Patil. I am afraid the Public Service Commission is not properly functioning. Influence should not count. The Rajas were in our country for thousand years. Were they not removed? It is a shame to call a road 'Raj Bhavan Road.'

5-00 P. M.

There is a road called Raj Bhavan Road, what is that Raj Bhavan Road? We have abolished the princess and their privy purses. Therefore, if the Public Service Commission is not of any use to the people of the Mysore State, you scrap it if necessary, by amending the Constitution. A Second Division clerk has been promoted as a Librarian and he has become the monarch of Mysore State. Where is the Public Service Commission gone and who have appointed the members of the Public Service Commission? There is a department called the Brahma Department and that is the General Administration Department. There is Joint Secretary in that deparrment—I do not want to mention his name. Whatever he says becomes a Government Order. He decides the fate of all the officials of the Mysore State. He is, as I said, the Brahma for Mysore State. The Chief Minister and others may say that there is no caste system. There is caste system in this country even after 25 years of independence. Some of them are still proud to say that they belong to a particular caste ; it is there is their heart and soul. There was a Chief Secretary who was appointing and promoting people belonging to his own caste. Of course, he was driven out of Mysore State. Therefore, the caste system prevails even now. There is what is called a confidential report on the basis of which promotion is given. As I said before, there is that wonderful Joint Secretary in the General Administration Department. Under his instructions the wonderful Public Service Commission is acting. The P.S.C. is a body which has no talent, which has no legal experience or whose members have no knowledge of the working of the Public Service Commission.

This Brahma who sits in the General Administration issues an order. He is more powerful than even Secretaries in the Secretariat because he is a Brahma. If he want to spoil a certain officer, he writes to the Head of the Department concerned to send his confidential report. Two or three year's confidential reports they write at one time. To deny promotion to an official or officer, the G.A.D. wants to have the confidential report and the officers of other departments must listen to the General Administration Department and that is going on now. One of my friends said that there must be co-ordination between the Government and the Public Service Commission. That need not be so. The P.S.C. must function independently and decide on merit only. I know some of the Ministers are constantly phoning to the members of

(SRI C. M. ARUMUGAM)

the P.S.C. to influence the selection of some person or the other. For hundred posts there are thousands of applications and the P.S.C. is not able to decide. Because of the lapse on the part of the P.S.C. many candidates have not been recruited. Many writs are pending before the High Court and the Supreme Court because of so many irregular promotions, etc. In the Bangalore Dairy all the local candidates have been promoted without going to the Employment Exchange or the P.S.C. This is because somebody sitting in the Secretariat is interested in them. This is happening because members who say 'yes' to the Ministers and the Government are appointed as members of the Public Service Commission. This lot injustice is done to all the communities put together.

Coming to Reservation, the Supreme Court has said that 52 per cent of the posts should be filled on the basis of merit and out of the 48% some should go for backward communities, some for Scheduled Castes, some for Scheduled Tribes and some for Ex-service men. Out of 100 posts, 10 go to Ex-servicemen and the rest are divided among the other people. Now, if a person belonging to the backward community, say a Lingayat or Vokkaliga a Scheduled Caste man or a Kuruba is selected in the general pool on merit, one seat is taken away from the reserved quota. Who gave this wonderful order ? It is the General Administration Department and the Public Service Commission acts on it. They have no thinking capacity. They merely follow what the General Administration Department says.

In the P.S.C. Report for the last four years, several points have been raised to which no reply of the Government is given.

SRI H. SIDDAVEERAPPA : The replies are given in the appendix.

SRI C. M ARUMUGHAM : In the matter of giving extensions or promotions, the Government has done as it thinks fit without consulting the Public Servce Commission. In this connection I may mention the appointment of Sri Hayath. He is an officer with rich experience and he has worked in the United Nations in Bangkok. He has been unceremoniously brought down from Chairmanship to Vice-Chairmanship. I was told that officer has resigned subsequently. Like that there are so many things done by the Government without reference to the Public Service Commission. Therefore the people of the State have lost confidence in the working of the Public Service Commission.

SRI H. SIDDAVEERAPPA : The appointment of Sri Hayath does not go to the Public Service Commission

SRI C. M. ARUMUGAM: What I want to say is that the Public Service Commission must be something like a watchdog of the General Administration. During the time of the President's Rule several promotions have been made without reference to the P.S.C. or against the recommendation of the P.S.C. It is necessary to refer all these promotions to a judicial body to know whether those promotions made were correct or not.

With these few words, I close my speech. Thank you.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ : (ಹೊಸನಗರ) :— ಸನ್ಮಾನ್ಯ ಅಧ್ಯಕ್ಷರೇ, ಲೋಕ ಸೇವಾ ಆಯೋಗದ ವರದಿಯನ್ನು ಸ್ವಾಗತ ಮಾಡುತ್ತಾ ಕೆಲವಾರು ವಿಚಾರಗಳನ್ನು ಈ ಸಭೆಯ ಮುಂದೆ ವ್ಯಕ್ತಪಡಿಸುವುದಕ್ಕೆ ಇಚ್ಛೆಪಡುತ್ತೇನೆ.

ಈಗ್ಗೆ ಎರಡು ವರ್ಷದ ಹಿಂದೆ ಪ್ರೊಬೆಷನರಿ ತಹಸೀಲ್ದಾರರು ಎಂದು ಹೇಳಿ ನೇಮಕ ಮಾಡಿಕೊಂಡಿದ್ದರು. ಪಬ್ಲಿಕ್ ಸರ್ವಿಸ್ ಕಮೀಷನ್‌ನವರು ರಾಜ್ಯಾದ್ಯಂತ ನೇಮಕ ಮಾಡಿದ್ದಂಥ ಸುಮಾರು ೭೦–೫೦ ಜನ ಪ್ರೊಬೆಷನರಿ ತಹಸೀಲ್ದಾರರ ನೇಮಕದ ಬಗ್ಗೆ ಹೈಕೋರ್ಟ್ ಪ್ರಶ್ನಿಸಿ ಅದನ್ನು ತಳ್ಳಿ ಹಾಕಿತು. ಅಂದ ಮೇಲೆ ಈ ಆಯೋಗದ ನೇಮಕ ಮತ್ತು ಬಡ್ತಿ ಬಗ್ಗೆ ಏನೋ ಒಂದು ನ್ಯೂನತೆ ಇರಲೇ ಬೇಕು ಎಂದು ಕಾಣುತ್ತದೆ, ಈ ರೀತಿ ನ್ಯೂನತೆಗಳು ಪದೇ ಪದೇ ಕೋರ್ಟ್‌ನಲ್ಲಿ ಹತ್ತಿದ್ದರೂ ಕೂಡ ಅದನ್ನು ಸರಿಪಡಿಸುವುದಕ್ಕೆ ಈ ಆಯೋಗದವರು ಕೈಕೊಂಡ ಕ್ರಮಗಳು ಏನು ಎಂದು ಕೇಳಲಿಕ್ಕೆ ಇಚ್ಛಿಸುತ್ತೇನೆ.

ಇನ್ನು ಈ ಕೇಡರ್ ಅಂಡ್ ರೆಕ್ರೂಟ್‌ಮೆಂಟ್‌ನಲ್ಲಿ ಅಮೆಂಡ್‌ಮೆಂಟ್ ಏನು ತಂದಿದ್ದಾರೆ ಅದನ್ನು ಕಾರ್ಯಗತ ಮಾಡುವುದಕ್ಕೆ ೨–೩ ವರ್ಷವಾದರೂ ಆಗಿಲ್ಲ ಎಂದರೆ ಇದರಿಂದ ಎಷ್ಟು ಜನ ಬವಣೆ ಪಡುತ್ತಿದ್ದಾರೆ ಎನ್ನುವುದನ್ನು ತಿಳಿಯಬೇಕು. ೨೫ ವರ್ಷಗಳಿಂದ ಕೆಲವಾರು ಸ್ಥಾನಗಳಲ್ಲಿರತಕ್ಕಂಥ ಪ್ರಮೋಷನ್‌ಗಳು ಏನು ಇವೆ ಆ ಪ್ರಮೋಷನ್ ಸಿಕ್ಕದೇ ಎಷ್ಟೋ ಜನ ರಿಟೈರ್ಡ್ ಆಗುವ ಪರಿಸ್ಥಿತಿ ಇದೆ. ಅಂಥಾ ವ್ಯವಸ್ಥೆಯನ್ನು ನಾವು ಕಾಣುತ್ತಾ ಇದ್ದೇವೆ. ನಾನು ಈ ಆಯೋಗಕ್ಕೆ ಒಂದು ಮನವಿ ಸಲ್ಲಿಸಬೇಕಾಗಿದೆ.

ಇನ್ನು ಈ ಆಯೋಗದವರು ಒಂದು ರಿಟನ್ ಟೆಸ್ಟ್ ಮಾಡುತ್ತಾರೆ. ಅವರು ಒಂದ ಕಟಿಬದ್ಧವಾದ ಟೆಸ್ಟನ್ನು ಏನು ಮಾಡುತ್ತಾರೆ ಅದರಲ್ಲಿ ಯಾರಿಗೆ ಮಾರ್ಕ್ ಬರುತ್ತದೆ. ಯಾರು ಟೆಸ್ಟ್‌ನಲ್ಲಿ ಮಾರ್ಕ್ಸ್ ತೆಗೆಯುತ್ತಾರೆ ಮತ್ತು ಅವರನ್ನು ಮಾಡತಕ್ಕಂಥ ಬಗ್ಗೆ ಎಂದು ಭದ್ರ ಬುನಾದಿಯನ್ನು ಇಟ್ಟುಕೊಳ್ಳಿ, ಇಲ್ಲದೆ ಹೋದರೆ ಎಂ. ಎಲ್. ಎ. ಗಳು ಬದುಕುವ ಹಾಗಿಲ್ಲ. ಎಂ. ಎಲ್. ಎ ಹತ್ತಿರ ಬೆಳಿಗ್ಗೆ ಸಾಯಂಕಾಲ ಬಂದು ಪಬ್ಲಿಕ್ ಸರ್ವಿಸ್ ಕಮೀಷನ್‌ನಿಂದ ಬಂದಂಥ ನೋಟೀಸನ್ನು ತೆಗೆದುಕೊಂಡು ಸಾಲು ಸಾಲಾಗಿ ನಿಂತಿರುತ್ತಾರೆ. ಆ ಜನರನ್ನು ನೋಡಿದರೆ ಇದರಲ್ಲಿ ಏನಾದರೂ ಕುಂಭಕೋಣ ನಡೆಯುತ್ತಾ ಇದೆ ಎಂದು ಸಂಶಯ ಬರುತ್ತದೆ. ಆದುದರಿಂದ ಆ ಅಭ್ಯರ್ಥಿಗಳು ನಮ್ಮ ಒಂದು ಸರ್ವಿಸ್‌ನ್ನು ಉಪಯೋಗಿಸಿಕೊಳ್ಳುತ್ತಾರೆ. ಈ ಆಯೋಗದವರು ಮಾಡುವ ಪರೀಕ್ಷೆ ನೋಡಿದರೆ ನಾಮಕಾವಸ್ತೆ ಪರೀಕ್ಷೆ ಮಾಡುತ್ತಾರೆ. ಅದರಲ್ಲಿ ಏನಾದರೂ ಕುಂಭಕೋಣ ನಡೆಯುತ್ತದೆಯೋ ಏನೋ ಸಂಶಯ ಬರುತ್ತದೆ. ಇಷ್ಟೊಂದು ಅಭ್ಯರ್ಥಿಗಳು ನಮ್ಮ ಒಂದು ಉಪಯೋಗ ಮಾಡಿಕೊಳ್ಳುವುದಕ್ಕೆ ನಮ್ಮ ಮನೆ ಬಾಗಲಿಗೆ ಬಂದು ಕಾಯುತ್ತಿದ್ದಾರೆ. ಎಂ. ಎಲ್ ಎ. ಗಳು ಸಿಕ್ಕದೇ ಹೋದರೆ ೩–೪ ದಿವಸಗಳಾದರೂ ನಮ್ಮ ಕಾಯ್ದು ನಮ್ಮನ್ನು ಕರೆದುಕೊಂಡು ಹೋಗುತ್ತಾರೆ. ಹಾಗಾದರೆ ಇದರಲ್ಲಿ ಏನು ಅರ್ಥ ಇರಬಹುದು ಎನ್ನುವುದು ತಿಳಿಯಬೇಕು, ನಾನು ಇದರ ಬಗ್ಗೆ ಕೆಲವು ಸದಸ್ಯರನ್ನು ಭೇಟಿ ಮಾಡಿದೆ ಪರೀಕ್ಷೆಗಳಲ್ಲಿ ಕೂತುಕೊಳ್ಳುವ ಅಭ್ಯರ್ಥಿಗಳ ಪರವಾಗಿ ಕೆಲವೊಂದು ವಿಷಯಗಳನ್ನು ಕೇಳಲು ಅವರಲ್ಲಿಗೆ ಹೋಗಬೇಕಾಗಿ ಬಂತು ಅಲ್ಲಿ ಕೆಲವು ಸದಸ್ಯರನ್ನು ನೋಡಿದೆ. ಅವರು ಹೇಳಿದರು ಪರೀಕ್ಷೆಯಲ್ಲಿ ಮತ್ತು ಬಹಳ ಸ್ಟ್ರಿಕ್ಟ್ ಆಗಿ ಕೆಲಸ ಮಾಡುತ್ತಿದ್ದೇವೆ ಅದರ ಮೇಲೆ ಅಭ್ಯರ್ಥಿಗಳನ್ನು ನೇಮಕ ಮಾಡುತ್ತಿದ್ದೇವೆ ಎಂದು ನಾವು ಯಾರ ಒಂದು ಇನ್‌ಫ್ಲೂಯೆನ್ಸ್‌ಗಾಗಲಿ, ಯಾವ ಒಂದು ಒತ್ತಡಕ್ಕಾಗಲಿ ಮಣಿಯುವುದಿಲ್ಲ. ಎಂದು ಹೇಳಿದರು. ಇದು ಕೇವಲ ಬಾಯಿ ಮಾತೇ ಅಥವಾ ವಾಸ್ತವಿಕವಾಗಿ ನಡೆಯುತ್ತದೆಯೇ ಎಂದು ನಾನು ಪ್ರಶ್ನಿಸಿ ಕೇಳುತ್ತೇನೆ. ವಾಸ್ತವಿಕವಾಗಿ ನಡೆಯುವುದಾದರೆ ಇಷ್ಟೊಂದು ಭಾವನೆ ಜನರಲ್ಲಿ ಏತಕ್ಕೆ ಇರಬೇಕು ? ಬೆಂಗಳೂರಿನಲ್ಲಿ ಪರೀಕ್ಷೆಗೆ ಕರೆಯುತ್ತಾರೆ. ಅಭ್ಯರ್ಥಿಗಳು ಶಿವಮೊಗ್ಗಾದಿಂದ ಬಸ್ಸು ಖರ್ಚು ಹಾಕಿಕೊಂಡು ತೊಂದರೆಪಟ್ಟುಕೊಂಡು ಬರಬೇಕು. ಇಷ್ಟೆಲ್ಲಾ ತೊಂದರೆ ಪಟ್ಟು ಬಂದರೂ ಕೂಡ ಆ ಪರೀಕ್ಷೆಯಲ್ಲಿ ಅವರು ಬಿದ್ದು ಹೋಗುತ್ತಾರೆ ಇದರಲ್ಲಿ ನ್ಯಾಯ ಸರಿಯಾಗಿ ಸಿಕ್ಕುವುದಿಲ್ಲ ಎಂದು ಸಾಮಾನ್ಯವಾದ ಅಭ್ಯರ್ಥಿಗಳೂಕೊಡ ಇದರ ಬಗ್ಗೆ ಪ್ರಶ್ನಿಸುತ್ತಾರೆ ಆದುದರಿಂದ ಇದರ ಬಗ್ಗೆ ಒಂದು ನಿಯಮ ಹಾಕಿಕೊಳ್ಳೋಣ. ಈ ಆಯೋ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಗದವರು ಮಾಡತಕ್ಕ ಇಂಟರ್‌ವ್ಯೂ ಬಗ್ಗೆ ಒಂದು ಸರ್ಕುಲರ್ ಹೊರಡಿಸಲಿ. ಈ ಬಗ್ಗೆ ಯಾವ ಎಂ.ಎಲ್.ಎ ಗಳಾಗಲಿ, ರಾಜಕೀಯ ಧುರೀಣರಾಗಲಿ ಯಾರು ಪ್ರವೇಶ ಆಗ ಕೂಡದು. ಮೆರಿಟ್ ಮೇಲೆ, ಅವನ ಬುದ್ಧಿವಂತಿಕೆ, ಯೋಗ್ಯತೆ ಆಧಾರದ ಮೇಲೆ, ಆಯ್ಕೆ ಮಾಡುತ್ತೇವೆ ಎಂದು ಸರ್ಕ್ಯುಲರ್ ಹೊರಡಿಸಲಿ ಇಲ್ಲದೇ ಹೋದರೆ ಇಟ್ಟುಬಿಟ್ಟ ಎಂ.ಎಲ್.ಎ. ಇಷ್ಟಿಷ್ಟು ಜನ ಅಪಾಯಿಂಟ್ ಮಾಡಿಕೊಳ್ಳಬಹುದು ಎಂದು ಮಾಡಿಬಿಡಿ ಏತಕ್ಕೆಂದರೆ ಅವರ ಗೋಳು ನೋಡುವುದಕ್ಕಾಗುವುದಿಲ್ಲ ಬೆಳಗಾದರೆ ಅವರು ನಮ್ಮನ್ನು ಬಂದು ನಮ್ಮನ್ನು ನೋಡುವುದು ತಪ್ಪುತ್ತದೆ.

ಇನ್ನು ಭಡ್ತಿ ವಿಚಾರ. ಇಲಾಖೆಗಳಲ್ಲಿ ಭಡ್ತಿ ಕೊಡುವಾಗ ಅನ್ಯಾಯವಾಗಿದೆ. ಯೋಗ್ಯತೆ ಮೇಲೆ ಕೆಳಡುತ್ತಾ, ಇಲ್ಲ ಎನ್ನುವ ದೂರು ಇದೆ. ಮೇಲಾಧಿಕಾರಿಗಳಿಗೆ ಅಜಾಜೂವಾರಿ ಮಾಡತಕ್ಕಂಥ ನೌಕರರಿಗೆ ಭಡ್ತಿ ಸಿಕ್ಕುತ್ತದೆ ಎಂದು ಹೇಳುತ್ತಾರೆ. ೨೫ ವರ್ಷಗಳಿಂದಲೂ ಭಡ್ತಿ ಸಿಕ್ಕದೆ ರಿಟೈರ್ಡ್ ಆಗಿರುವ ನೌಕರರು ಮೈಸೂರು ಸಂಸ್ಥಾನದಲ್ಲಿ ಬೇಕಾದಷ್ಟು ಜನ ಇದ್ದಾರೆಂದು ನಾನು ಪರಿಶೀಲಿಸಿ ಹೇಳಬಲ್ಲೆ. ಮರುಭೂಮಿಯಲ್ಲಿ ನವರತ್ನ ಇದ್ದರೆ ಯಾರಿಗೂ ಉಪಯೋಗವಿಲ್ಲ, ಅಂತೆಯೇ ಮರುಭೂಮಿಯಲ್ಲಿ ಅನಾಘ್ರಾಣಿತ ಪುಷ್ಪ ಬೆಳೆದರೆ ಯಾರಿಗೂ ಉಪಯೋಗವಿಲ್ಲದೆ ಯಾವರೀತಿ ಬತ್ತಿ ಹೋಗುತ್ತದೋ ಅದೇರೀತಿ ಎಷ್ಟೋ ಜನಕ್ಕೆ ಯೋಗ್ಯತೆ ಇದ್ದಂಥವರಿಗೆ ಪ್ರಮೋಷನ್ ಇಲ್ಲದೆ ಮೇಲಾಧಿಕಾರಿಗಳಿಗೆ ಜೂಜುವಾರಿ ಮಾಡಿಕೊಂಡ ಂಥವರಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಇಲ್ಲದೇ ಇದ್ದವರಿಗೆ ಎಷ್ಟೋಜನಕ್ಕೆ ಪ್ರಮೋಷನ್ ಕೊಟ್ಟಿಲ್ಲ. ಆದುದರಿಂದ ಇಂತಹ ಅವ್ಯವಸ್ಥೆಯನ್ನು ತಪ್ಪಿಸುವುದಕ್ಕೆ ಈ ಲೋಕಸೇವಾ ಆಯೋಗ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆಂದು ಇಚ್ಛೆಪಡುತ್ತೇನೆ.

ಇನ್ನು ಹಿಂದುಳಿದವರ ಅಭಿವೃದ್ಧಿ ಬಗ್ಗೆ ಸ್ವಲ್ಪ ಮಾತನಾಡಬೇಕಾಗಿದೆ. ಹಿಂದುಳಿದಿರತಕ್ಕಂಥಾವರು ಯಾರು. ಪಬ್ಲಿಕ್ ಸರ್ವಿಸ್ ಕಮೀಷನ್‌ನವರು ಅಭ್ಯರ್ಥಿಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ಅವರುಗಳಿಗೆ ಇಂತಿಷ್ಟು ಕೊಡಬೇಕು ಎಂದು ಇರುವುದನ್ನು ನಾನು ಕೇಳಿದ್ದೇನೆ. ಇದರಲ್ಲಿ ನಾನು ಮುಖ್ಯವಾಗಿ ಕೇಳಬೇಕಾದರೆ ಹಿಂದುಳಿದವರು ಯಾರು ಎಂದು ತಿಳಿದುಕೊಳ್ಳಬೇಕು. ಯಾವುದಾದರೂ ಕಜಾಜು ನಲ್ಲಿ ಹಿಂದುಳಿದ ಮುಖಂಡನಾಗಿದ್ದರೆ ಅವನನ್ನು ಹಿಂದಳಿದವನು ಎಂದು ಕರೆಯೋಣವೇ, ಅಥವಾ ಒಬ್ಬ ಹರಿಜನ ಕೇಂದ್ರ ಸರ್ಕಾರದಲ್ಲಿ ಐ.ಎ.ಎಸ್. ಆಫೀಸರ್ ಆಗಿದ್ದರೆ ಅವನ ಮಗನನ್ನು ಹಿಂದುಳಿದ ವರ್ಗ ಎಂದು ಕರೆಯೋಣವೇ, ಅಥವಾ ಒಂದು ಕೋಮಿನಲ್ಲಿ ದುರದೃಷ್ಟವಶಾತ್ ಹೊಟ್ಟೆಗೆ ಅನ್ನ ಇಲ್ಲದೆ ಉಡುವುದಕ್ಕೆ ಬಟ್ಟೆ ಇಲ್ಲದೆ ಭಿಕ್ಷೆಪಾತ್ರೆ ಹಿಡಿದುಕೊಂಡು ಬೀದಿ ಬೀದಿಯಲ್ಲಿ ಅಲೆದಾಡುವ ಮಕ್ಕಳು ಯಾರು ಇದ್ದಾರೋ ಬ್ರಾಹ್ಮಣನಾಗಲಿ, ಲಿಂಗಾಯಿತನಾಗಲಿ, ಒಕ್ಕಲಿಗನಾಗಲಿ ಅವನ ಮಕ್ಕಳನ್ನು ಮುಂದುವರೆದ ಜನಾಂಗ ಎಂದು ಕರೆಯೋಣವೇ, ಇದನ್ನು ಯಾವ ರೀತಿಯಲ್ಲಿ ನಿರ್ಣಯ ಮಾಡುತ್ತೀರಿ ಸಮಾಜದಲ್ಲಿ ಹುಟ್ಟುವಾಗಲೇ ಬಂದಿರತಕ್ಕಂಥ ಅಜ್ಞಾನವನ್ನು ಎಲ್ಲರಿಗೂ ಸಮಾನವಾಗಿ ಕೊಡಬೇಕೆಂದು ಯಾವುದೋ ಒಂದು ಅಸ್ತ್ರವನ್ನು ಹಿಡಿದುಕೊಂಡು ಒಬ್ಬರಿಗೆ ಮುಟ್ಟುಗೋಲು ಹಾಕುವಂಥಾದ್ದು ನ್ಯಾಯವಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅದಕ್ಕೇನೆ ಸಾಮಾಜಿಕವಾಗಿ, ಮತ್ತು ಆರ್ಥಿಕವಾಗಿ ಯಾರು ಹಿಂದುಳಿದಿದ್ದಾರೋ ಅವರನ್ನು ಹಿಂದುಳಿದವರು ಎಂದು ಗಣನೆಗೆ ತಂದುಕೊಳ್ಳಿ ಎಂದು ನಾನು ಹೇಳುವುದು.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಸಾಮಾಜಿಕವಾಗಿ ಹಿಂದುಳಿದವರು ಎಂದರೆ ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ವರ್ಗ ಎಂದು ನೀವು ಕರೆಯುತ್ತೀರಿ, ಆ ವರ್ಗದಲ್ಲಿ ಮುಂದುವರಿದ ಮನೆತನಗಳು ಕೆಲವು ಇವೆ. ಆ ಮನೆತನಗಳು ಹಿಂದುಳಿದವು ಎಂದಾಗುತ್ತದೆಯೋ ಎಂದು ಕೇಳುತ್ತೇನೆ. ಹಿಂದುಳಿದವರ ಹೆಸರಿನಲ್ಲಿ ಕೆಲವು ಮನೆತನಗಳು ಎಲ್ಲರನ್ನೂ ಶೋಷಣೆ ಮಾಡುತ್ತಿವೆ ಮತ್ತು ಹಿಂದುಳಿದವರಿಗೆ ಸವಲತ್ತು ಸಿಕ್ಕದಹಾಗೆ ಆಗುತ್ತಿದೆ. ಅದಾಗಬಾರದು. ಹಿಂದುಳಿದವರು ಎಂದು ಒಂದು ಕೋಮಿನ ಪಟ್ಟಿಯನ್ನು ಮಾಡಿದಾಗ ಸರ್ವಸಾಮಾನ್ಯವಾಗಿ ಎಲ್ಲರಿಗೂ ಆ ಸವಲತ್ತು ದೊರೆಯುತ್ತಿದೆಯೋ ಎಂದು ಪರಿಶೀಲನೆ ಮಾಡಬೇಕು. ಹಿಂದುಳಿದ ವರ್ಗಗಳಲ್ಲಿ ಸಾಮಾನ್ಯವಾಗಿ ಕೆಲವೊಂದು ವರ್ಗದ ನೆಂಟರಿಷ್ಟರಿಗೆ, ಅವರ ಬಳಗದವರಿಗೆ ಈ ವರ್ಗದ ಸವಲತ್ತುಗಳು ದೊರೆಯುತ್ತಿವೆ. ಸಾಮಾನ್ಯ ಮನುಷ್ಯನಿಗೆ ಅದು ಹೋಗುತ್ತಿಲ್ಲ. ಹಿಂದುಳಿದ ವರ್ಗದವರಿಗೆ ಸವಲತ್ತುಗಳು ದೊರೆಯುತ್ತವೆ ಎಂದು ಎಲ್ಲರೂ ಹಿಂದುಳಿದವರು ಎಂದು ಹೇಳಿಕೊಂಡು, ಇಡೀ ರಾಜ್ಯದಲ್ಲಿ ಯಾರೂ ಮುಂದುವರಿದವರೇ ಇಲ್ಲವೆನ್ನುವಂತಾಗುತ್ತಿದೆ. ಯಾವುದಾದರೂ ಒಂದು ಸವಲತ್ತನ್ನು ದೃಷ್ಟಿಯಲ್ಲಿಟ್ಟುಕೊಂಡು ಅದನ್ನು ಪಡೆಯುವುದಕ್ಕೆ ಹಿಂದುಳಿದವರು ಎನ್ನುವ ಲೇಬಲ್ ಹಚ್ಚಿಕೊಳ್ಳುವುದು ಹೋಗಬೇಕು. ಸ್ವಾತಂತ್ರ್ಯ ಬಂದು ೨೫ ವರ್ಷಗಳಾದರೂ ಇನ್ನೂ ಮುಂದುವರಿದಿಲ್ಲ ಎಂದರೆ ಯಾವಾಗ ಮುಂದುವರಿಯುವುದು ? ನಾನು

ಮೊನ್ನೆ ಗೆಜೆಟ್ಟಿನಲ್ಲಿ ಒಂದು ನೋಟಿಫಿಕೇಷನ್ ನೋಡಿದೆ. ಅದರಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ನೇಮಕದ ಪಟ್ಟಿ ಇತ್ತು, ಅದರಲ್ಲಿ ಇಷ್ಟು ಜನ ಲಿಂಗಾಯಿತರು, ಇಷ್ಟು ಜನ ಒಕ್ಕಲಿಗರು, ಇಷ್ಟು ಜನ ಬ್ರಾಹ್ಮಣರು ಇವರನ್ನು ನೇಮಕ ಮಾಡಿದ್ದೇವೆ ಎಂದು ಬಂದಿತ್ತು. ಎಂಥ ಜಾತ್ಯಾತೀತ ರಾಷ್ಟ್ರವನ್ನು ಕಟ್ಟುವುದಕ್ಕೆ ಹೊರಟಿದ್ದೇವೆ ಎನ್ನುವುದು ಅರ್ಥವಾಗುವುದಿಲ್ಲ. ಜಾತಿ ಬೇಡ ಎಂದರೂ ಕೂಡ ಅದನ್ನು ನೆನಪು ಮಾಡತಕ್ಕ ರೀತಿಯನ್ನು ನೋಡಿದರೆ ನಾವು ಭಾರತೀಯರಾಗಿ ಯಾವುದನ್ನು ಬೇಡವೆಂದು ಹೇಳುತ್ತೇವೆಯೊ ಯಾವುದು ಈ ದೇಶಕ್ಕೆ ಕ್ಯಾನ್ಸರ್ ಎಂದು ಹೇಳುತ್ತೇವೆಯೋ ಅದರ ಪುನರಾವರ್ತನೆಯಾಗುತ್ತಿದೆ ಎಂದು ಹೇಳಬಹುದು. ಹುಲಿ ಚರ್ಮ ಹೊದೆದ ಕತ್ತೆ ಎಂದು ಕರೆಯುವ ಹಾಗ ಜಾತ್ಯತೀತ ಮಾಡುವುದಕ್ಕೆ ಹೊರಡುವುದು ಬೇಡ ಹಿಂದುಳಿದ ವರ್ಗ, ಹಿಂದುಳಿದ ಜಾತಿ ಎನ್ನುವ ಹೆಸರಿನಲ್ಲಿ ಮೇಧಾವಿಗಳನ್ನು ಹತ್ತಿಕ್ಕುತ್ತಿದ್ದೀರಿ, ಅದು ಸಂಸ್ಥಾನಕ್ಕಾಗಲೀ, ದೇಶಕ್ಕಾಗಲೀ ಒಳಿತಲ್ಲ ಎನ್ನುವ ಮಾತನ್ನು ಹೇಳಿ, ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಅನನ್ಯ ಭಕ್ತಿಯಿಂದ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಎಸ್. ಸಿದ್ದಪ್ಪ. (ಅರಸೀಕೆರೆ) ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಲೋಕಸೇವಾ ಆಯೋಗ ಬಗ್ಗೆ ನನ್ನ ಅನೇಕ ಗೆಳೆಯರು ಸಾಕಷ್ಟು ಮಾತನಾಡಿದ್ದಾರೆ. ಶ್ರೀ ಅರ್ಮುಗಂ ಅವರು ಮಾತನಾಡುತ್ತಾ ರಾಜ್ಯಾಂಗದ ವಿಧಿ ನಿಯಮಗಳನ್ನು ಬದಿಗೊತ್ತಿ ಈ ಲೋಕಸೇವಾ ಆಯೋಗ ಕೆಲಸ ಮಾಡುತ್ತಿದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ರಾಜ್ಯಾಂಗದಲ್ಲಿ ಲೋಕಸೇವಾ ಆಯೋಗದಲ್ಲಿ ಎಂಥ ಜನರಿರಬೇಕು, ಹೇಗೆ ಇರಬೇಕು, ಅವರ ಅರ್ಹತೆಗಳು ಏನಿರಬೇಕು ಎನ್ನುವುದನ್ನು ಬಹಳ ಸ್ಪಷ್ಟವಾಗಿ ಚಿತ್ರಿಸಿ ಹೇಳಿದ್ದಾರೆ. ಆಯೋಗದ ಬಗ್ಗೆ ರಾಜ್ಯಾಂಗದಲ್ಲಿ ಹೇಳುತ್ತಾರೆ, ಬ್ರಹ್ಮ, ವಿಷ್ಣು ಮಹೇಶ್ವರ ರಂಥ ಜನ, ಜನಗಳನೆಲ್ಲ ಚೆನ್ನಾಗಿ ನೋಡುವವರು ಇರಬೇಕು. ಎಂದು ವಿಧಿ ನಿಯಮ ಹಾಕಿದ್ದಾರೆ. ಆದರೆ ಸರ್ಕಾರ ರಚಿಸತಕ್ಕ ಲೋಕಸೇವಾ ಆಯೋಗದಲ್ಲಿ ಎಂಥವರಿದ್ದಾರೆ. ಎಂದರೆ ರಾಹು, ಕೇತು, ಶನೇಶ್ವರರಂಥವರು ಆ ಪೀಠಗಳನ್ನು ಅಲಂಕರಿಸಿದ್ದಾರೆಂದು ಹೇಳದೇ ವಿಧಿ ಇಲ್ಲ.

ಈಗಾಗಲೇ ಗೆಳೆಯ ಅರ್ಮುಗಂ ಅವರು ಬಿಲೋ ದಿ ಸ್ಟ್ಯಾಂಡರ್ಡ್ ಇರುವಂತ ಸದಸ್ಯರನ್ನು ರಾಜಕೀಯ ಉದ್ದೇಶದಿಂದ ನೇಮಿಸುತ್ತಾರೆನ್ನುವುದನ್ನು ಹೇಳಿದರು. ಆವಾಗ ಸಚಿವರು ಹಾಗೇನೂ ಇಲ್ಲ, ಅವರಲ್ಲಿ ಎಲ್.ಎಲ್.ಬಿ. ಮಾಡಿರುವವರು ಇದ್ದಾರೆ ಎಂದು ಕ್ಲಾರಿಫಿಕೇಷನ್ ಕೊಟ್ಟರು. ಮೊನ್ನೆ ತಾನೇ ಒಂದು ದೊಡ್ಡ ಸಭೆಯಲ್ಲಿ ಒಬ್ಬ ಮಹಾ ಮೇಧಾವಿಗಳು ಒಂದು ಉದಾಹರಣೆಯನ್ನು ಕೊಟ್ಟರು. ಪ್ರಾಥಮಿಕ ಶಾಲೆಯ ಅಧ್ಯಾಪಕರು ಹುಡುಗರನ್ನು ಒಂದು ಶಿಸ್ತಿನಲ್ಲಿ ಇಟ್ಟುಕೊಳ್ಳುವವರು. ನೀತಿ ನಿಯಮಗಳನ್ನು ಕಲಿಸುವವರು ಎನ್ನುವುದನ್ನು ಉದಾಹರಿಸಿ ಹೇಳಿ, ಶಾಲೆಯ ಮುಖ್ಯ ಅಧ್ಯಾಪಕರು ಮೂತ್ರ ಮಾಡಬೇಕಾದರೆ ನಿಂತುಕೊಂಡು ಮಾಡಿದರಂತೆ. ಅವರನ್ನು ನೋಡಿದ ಹುಡುಗರು ಕುಣಿದಾಡಿಕೊಂಡು ಮೂತ್ರ ಮಾಡಿದರಂತೆ. ಈ ಲೋಕಸೇವಾ ಆಯೋಗದಲ್ಲಿ ಎಲ್. ಎಲ್. ಮಾಡಿದವರು ಇರಬಹುದು; ಇಲ್ಲದೆ ಇರುವವರು ಇರಬಹುದು. ಏನಾಗಿದೆ ಎಂದರೆ ಸರ್ಕಾರ ಏನು ಮಾಡುತ್ತಿದೆ ಅದನ್ನು ನೋಡಿ ಲೋಕಸೇವಾ ಆಯೋಗದ ಸದಸ್ಯರು ಯಾರೇ ಆಗಿರಲಿ ಅವರು ಕಾರ್ಯ ನಿರ್ವಹಣೆ ಮಾಡುತ್ತಾರೆ.

ಲೋಕಸೇವಾ ಆಯೋಗವನ್ನು ರದ್ದುಪಡಿಸಿ ಎಂದು ಮಾನ್ಯ ಅರ್ಮುಗಂ ಅವರು ಹೇಳಿದಾಗ ರಾಜ್ಯಾಂಗಬದ್ಧವಾಗಿ ಅದಕ್ಕೆ ಅವಕಾಶವಿಲ್ಲ ಎಂದು ಮಾನ್ಯ ಸಚಿವರು ಹೇಳಿದರು. ರಾಜ್ಯಾಂಗದ ಅನೇಕ ವಿಧಿನಿಯಮಗಳನ್ನು ಸ್ಕ್ರಾಪ್ ಮಾಡುತ್ತಿದ್ದೀರಿ. ಲೋಕಸೇವಾ ಆಯೋಗ ಜನತೆಯ ಅಭ್ಯುನ್ನತ್ತಿ(?)ಯನ್ನು, ರಾಜ್ಯದ ಜನತೆಯ ಹಿತ ದೃಷ್ಟಿಯನ್ನು ಇಟ್ಟುಕೊಂಡು ಕೆಲಸ ಮಾಡುವುದಕ್ಕೆ ಆಗದೆ ಹೋದರೆ ನೇಮಕಕ್ಕೆ ಸಂಬಂಧಪಟ್ಟ ವಿಧಿ ನಿಯಮಗಳನ್ನೂ ಸ್ಕ್ರಾಪ್ ಮಾಡಿ, ಅದರಿಂದ ತಪ್ಪಾಗುವುದಿಲ್ಲವೆಂದು ಹೇಳಬಯಸುತ್ತೇನೆ.

ರಾಜ್ಯಾಂಗದ ಪ್ರಕಾರ ಸರ್ಕಾರ ಎಲ್ಲ ಹಂತಗಳಲ್ಲಿಯೂ ಮಹಿಳೆಯರಿಗೆ ಪ್ರಾತಿನಿಧ್ಯವನ್ನು ಕೊಡಬೇಕೆಂಬ ತತ್ವವನ್ನು ಇಟ್ಟುಕೊಂಡಿದೆ. ಇಡೀ ರಾಷ್ಟ್ರದಲ್ಲಿ ಎಷ್ಟೋಂದು ಜನ ಮಹಿಳೆಯರಿಗೆ ಪ್ರಾತಿನಿಧ್ಯವನ್ನು ಎಲ್ಲ ಹಂತಗಳಲ್ಲಿಯೂ ಕೊಡುತ್ತಾ ಇದ್ದೀರಿ. ಆದರೆ ಲೋಕಸೇವಾ ಆಯೋಗದಲ್ಲಿ ಮಹಿಳೆಯರಿಗೆ ಏಕೆ ಪ್ರಾತಿನಿಧ್ಯವನ್ನು ಕೊಟ್ಟಿಲ್ಲವೆಂದು ಕೇಳಬಯಸುತ್ತೇನೆ. ಮಹಿಳೆಯರಿಗೆ ಲೋಕಸೇವಾ ಆಯೋಗದಲ್ಲಿ ಪ್ರಾತಿನಿಧ್ಯವನ್ನು ಕೊಟ್ಟರೆ ಅವರಿಗೆ ಫೋನ್ ಮಾಡಿ ಇಲ್ಲವೇ ಹೇಳಿ ಕೆಲಸ ಮಾಡಿಸುವುದಕ್ಕೆ ಆಗುವುದಿಲ್ಲ. ಅವರ ಹತ್ತಿರ ಹೋಗಿ ತಕ್ಷಣ ಕೆಲಸ ಮಾಡಿಸುವುದು ಕಷ್ಟವಾಗಬಹುದುಎಂದು ಮಹಿಳೆಯರಿಗೆ ಪ್ರಾತಿನಿಧ್ಯವನ್ನು ಕೊಟ್ಟಿಲ್ಲವೆಂದು ಹೇಳಬಯಸುತ್ತೇನೆ. ನಮ್ಮ ಮಾನ್ಯ ಅಧ್ಯಕ್ಷಿಣಿಯವರು, ಮಹಿಳೆಯರು. ಅವರು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಲೋಕಸೇವಾ ಆಯೋಗದಲ್ಲಿ ಕೂಡ ಮಹಿಳೆಯರಿಗೆ ಪ್ರಾತಿನಿಧ್ಯವನ್ನು ಕೊಡಬೇಕು ಎಂದು ಹೇಳಬಯಸುತ್ತೇನೆ.

(ಶ್ರೀ ಹೆಚ್. ಎಸ್. ಸಿದ್ದಪ್ಪ)

ಖಾಸಗಿ ಕಾರ್ಖಾನೆಗಳಿಗೆ ಸರ್ಕಾರ ಲೈಸೆನ್ಸ್ ಕೊಡುತ್ತದೆ. ಲೈಸೆನ್ಸ್ ಕೊಡತಕ್ಕ ಸಂದರ್ಭದಲ್ಲಿ, ಲೈಸೆನ್ಸಿಂಗ್ ಕಂಡೀಷನ್‌ಗಳಲ್ಲಿ, ನೌಕರಿಗೆ ನೇಮಕ ಮಾಡಿಕೊಳ್ಳತಕ್ಕ ಕಾಲದಲ್ಲಿ ಕೆಲವು ಹುದ್ದೆಗಳಿಗಾದರೂ ಪಬ್ಲಿಕ್ ಸರ್ವಿಸ್ ಕಮಿಷನ್ ಮುಖಾಂತರ ಅಥವಾ ಅವರ ಅಭಿಪ್ರಾಯವನ್ನು ಪಡೆದು ನೇಮಕ ಮಾಡಿಕೊಳ್ಳುವ ಹಾಗೆ ಏಕೆ ನಿಯಮಗಳನ್ನು ಹಾಕಬಾರದು ? ನಮ್ಮ ರಾಜ್ಯದಲ್ಲಿರುವ ಕಾರ್ಖಾನೆಗಳಲ್ಲಿ, ನಮ್ಮ ಸಂಸ್ಥಾನದ ಬಂಡವಾಳವಿರುವ ಕಾರ್ಖಾನೆಗಳಲ್ಲಿ ಮೈಸೂರಿನವರಿಗೆ ಹೆಚ್ಚು ಪ್ರಾತಿನಿಧ್ಯ ಕೊಡುವ ರೀತಿ ವ್ಯವಸ್ಥೆ ಮಾಡಬೇಕು. ಯಾವುದೇ ಫ್ಯಾಕ್ಟರಿಯನ್ನು ತೆಗೆದುಕೊಂಡರೂ ೩೦ – ೪೦ ಪರ್ಸೆಂಟ್ ಮಲೆಯಾಳಿಗಳಿದ್ದಾರೆ. ಅವರು ಇರಬಾರದು ಎಂದು ನಾನು ಹೇಳುತ್ತಿಲ್ಲ. ಆದರೆ ಚಾರಿಟಿ ಬಿಗಿನ್ಸ್ ಅಟ್ ಹೋಂ ಎನ್ನುವಂತೆ ನಮ್ಮ ಜನಗಳಿಗೆ ಕೆಲಸವಿಲ್ಲದೆ ಇರುವಾಗ ಅವರಿಗೆ ಸಿಕ್ಕುವ ವ್ಯವಸ್ಥೆ ಮಾಡಬೇಕು. ಪಬ್ಲಿಕ್ ಸರ್ವಿಸ್ ಕಮೀಷನ್‌ನಿಂದ ಕೇರಳದವರಿಗೆ, ಮದ್ರಾಸಿನವರಿಗೆ ಮತ್ತು ಆಂಧ್ರದವರಿಗೆ ಹೆಚ್ಚು ಕೆಲಸಗಳನ್ನು ಕೊಡುತ್ತ ಇದ್ದಾರೆ ಸರ್ಕಾರ ಇಷ್ಟು ನಿರ್ವೀರ್ಯವಾಗಬಾರದು. ಅದು ಶಕ್ತಿಯುತವಾಗಿರಬೇಕು ಪಬ್ಲಿಕ್ ಸರ್ವಿಸ್ ಕಮಿಷನ್‌ನವರಿಗೆ ಕ್ರಮಬದ್ಧವಾದ, ಶಾಸನಬದ್ಧವಾದ, ನಿಯಮಬದ್ಧವಾದ, ನೀತಿಬದ್ಧವಾದ ನಿಬಂಧನಗಳನ್ನು ಹಾಕಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಪಬ್ಲಿಕ್ ಸರ್ವಿಸ್ ಕಮಿಷನ್ ವ್ಯವಸ್ಥೆಯ ಬಗ್ಗೆ ನನ್ನ ಗೆಳೆಯರು ಸಾಕಷ್ಟು ಹೇಳಿದ್ದಾರೆ. ನನಗೆ ಕಾಲಾವಕಾಶವಿಲ್ಲದೆ ಇರುವುದರಿಂದ ಒಂದು ವಿಷಯವನ್ನು ಮಾತ್ರ ಹೇಳುತ್ತೇನೆ. ಕೆಲವು ತಿಂಗಳ ಹಿಂದೆ ಮಿಲಿಟರಿಯಲ್ಲಿ ನಿವೃತ್ತರಾಗಿರುವವರಿಗೆ ಯಾವುದೋ ಒಂದು ಹುದ್ದೆಗೆ ಅಪ್ಲಿಕೇಷನ್ ಕರೆದರು. ಇದಾಗಿ ಎಂಟು ತಿಂಗಳಾಗಿದೆ. ಇಂಟರವ್ಯೂಗೆ ಕರೆಯಲಿಲ್ಲ. ಅವರಲ್ಲಿ ಇದ್ದ ದುಡ್ಡನ್ನು ಸರಿಮಾಡಿಕೊಂಡು ಅಪ್ಲಿಕೇಷನ್ ಹಾಕಿದರು, ಅವರನ್ನು ಇಲ್ಲಿಯವರೆಗೂ ಇಂಟರ್‌ವ್ಯೂಗೆ ಕರೆಯಲಿಲ್ಲ. ಏಕೆ ಎಂದು ಗೊತ್ತಾಗಲಿಲ್ಲ. ಇಂಥ ವ್ಯವಸ್ಥೆಗಳು ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಆಗುತ್ತಿವೆ. ಇಂಥದ್ದು ಆಗಬಾರದಂತೆ ಸರ್ಕಾರ ನೋಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ,

ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೫—೩೦ ಪಿ. ಎಂ.

† ಶ್ರೀ ಎಚ್. ಸಿದ್ಧವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೇ, ಇದುವರೆಗೂ ಮಾನ್ಯ ಸದಸ್ಯರುಗಳು ಪಬ್ಲಿಕ್ ಸರ್ವೀಸ್ ಕಮಿಷನ್ ವರದಿಯ ವಿಚಾರದಲ್ಲಿ ಮಾಡಿದಂಥ ಸಲಹೆಗಳನ್ನು ಮತ್ತು ಟೀಕೆಗಳನ್ನು ಕಾತುರದಿಂದ ಆಲಿಸುತ್ತಿದ್ದೇನೆ, ಅವರು ಹೇಳಿರತಕ್ಕ ಅಂಶಗಳಲ್ಲಿ ಯಾವ ಯಾವುವು ಗಾಢವಾದ ಮತ್ತು ಸ್ಥೂಲವಾದ ಅಭಿಪ್ರಾಯಗಳು ಇವೆ ಎನ್ನತಕ್ಕಂಥಾದ್ದನ್ನು ಮನನ ಮಾಡಿಕೊಂಡಿದ್ದೇನೆ. ಅದರ ವಿಚಾರದಲ್ಲಿ ವಿವರವಾಗಿ ಹೇಳುವುದಕ್ಕಿಂತ ಮುಂದೆ ಸೂಕ್ಷ್ಮವಾಗಿ ಕೆಲವು ಅಂಶಗಳನ್ನು ತಿಳಿಸಿದರೆ ಸಾಕು ಎಂದು ಭಾವಿಸುತ್ತೇನೆ. ಮೊದಲನೆಯದಾಗಿ ಈ ರಿಪೋರ್ಟ ಏತಕ್ಕೋಸ್ಕರ ತಡವಾಗಿ ಇಲ್ಲಿಗೆ ಬಂತು ಎನ್ನತಕ್ಕ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ೧೯೬೭–೬೮ನೇ ಸಾಲಿನ ರಿಪೋರ್ಟು ೨೦ನೆಯ ಫೆಬ್ರುವರಿ ೧೯೬೯ರಲ್ಲಿ ಸರ್ಕಾರಕ್ಕೆ ಬಂತು. ೩೦ನೆಯ ಡಿಸೆಂಬರ್ ೧೯೬೯ರಲ್ಲಿ ಡಿಪಾರ್ಟಮೆಂಟಿನವರು ಕಳುಹಿಸಿರತಕ್ಕಂಥ ಮಾಹಿತಿ ೯ನೆಯ ಫೆಬ್ರುವರಿ ೧೯೭೦ ರಂದು ಸರ್ಕಾರದಲ್ಲಿ ಅಪ್ರೂವ್ ಆಗಿದೆ. ಈಗ ಈ ಸಭೆಯ ಮುಂದೆ ಇರತಕ್ಕಂಥ ರಿಪೋರ್ಟು ೧೯೬೮–೬೯ನೇ ಸಾಲಿನ ರಿಪೋರ್ಟು ಸಹ ೧೮ನೆಯ ಫೆಬ್ರುವರಿ ೧೯೭೦ರಲ್ಲಿ ಸರ್ಕಾರಕ್ಕೆ ಬಂತು, ಮತ್ತು ಅನೇಕ ಇಲಾಖೆಗಳು ಕಳುಹಿಸಿರತಕ್ಕಂಥ ವರದಿಗಳು ೯ನೆಯ ಡಿಸೆಂಬರ್ ೧೯೭೦ ರಂದು ಬಂದಿವೆ. ಅದನ್ನು ಸಹ ಸರ್ಕಾರದವರು ೯ನೆಯ ಫೆಬ್ರುವರಿ ೧೯೭೧ರಲ್ಲಿ ಈ ಸಭೆಯ ಮುಂದೆ ಇಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ೧೯೬೯–೭೦ನೇ ಸಾಲಿನ ರಿಪೋರ್ಟು ೧೬ನೆಯ ಡಿಸೆಂಬರ್ ೧೯೭೦ರಲ್ಲಿ ಬಂತು. ೧೫ನೆಯ ಜುಲೈ ೧೯೭೧ರಲ್ಲಿ ಡಿಪಾರ್ಟಮೆಂಟಿನವರು ಮಾಹಿತಿಗಳನ್ನು ಕಳುಹಿಸಿದ ಮೇಲೆ ೬ನೆಯ ಅಕ್ಟೋಬರ್ ೧೯೭೧ರಲ್ಲಿ ಇದು ಅಪ್ರೂವ್ ಆಗಿದೆ. ಆದರೆ ಆ ಕಾಲದಲ್ಲಿ ಗವರ್ನರ್ ರೂಲ್ ಇದ್ದುದರಿಂದ ರಾಜ್ಯಾಂಗದ ಪ್ರಕಾರವಾಗಿ, ಇದನ್ನು ಪಾರ್ಲಿಮೆಂಟ್ ಮುಂದೆ ಇಡುವ ಹಾಗಿರಲಿಲ್ಲ. ಗವರ್ನರ್ ಆಡಳಿತ ಪೂರೈಸಿದ ಮೇಲೆ, ಹೊಸದಾಗಿ ಈ ಸರ್ಕಾರ ಬಂದಮೇಲೆ ಈಗ ಇಟ್ಟಿರತಕ್ಕದ್ದು Earlivers in paint of time, ಇದು ತಡವಾಗಿ ಬಂತು ಎನ್ನುವ ವಿಚಾರದಲ್ಲಿ ಯೋಚನೆ ಮಾಡಬೇಕಾಗಿಲ್ಲ. ೧೯೭೦–೭೧ನೇ ಸಾಲಿನ ರಿಪೋರ್ಟು ೧೬ನೆಯ ಫೆಬ್ರುವರಿ ೧೯೭೨ರಲ್ಲಿ ಸರ್ಕಾರಕ್ಕೆ ಬಂದಿದೆ. ಡಿಪಾರ್ಟಮೆಂಟಿನಿಂದ ಇನ್‌ಫಾರ್ಮೇಷನ್ ೧೫ನೆಯ ಮೇ ೧೯೭೨ ರಂದು ಕಳುಹಿಸಿದ್ದು, ಸರ್ಕಾರ ಅದನ್ನು ಒಪ್ಪಿ ೧೬ನೆಯ ಜುಲೈ

೧೯೭೨ರಲ್ಲಿ ಪ್ರಿಂಟಿಂಗ್‌ಗೆ ಕಳುಹಿಸಿದ್ದೇವೆ ಅದು ಬಂದ ಮೇಲೆ ಅದನ್ನು ಇಡುತ್ತೇನೆ. ಆದ್ದರಿಂದ ಏನೋ ಕಾಲಾವಕಾಶ ಬಂದಿದೆ. ಎನ್ನುವುದು ನೋಡಲಿಕ್ಕೆ ಹಾಗೆ ಕಾಣುತ್ತದೆ; ಬಂದಿದ್ದು ನಿಜ. ಆಯಾ ವರ್ಷವೇ ಈ ಒಂದು ರಿಪೋರ್ಟು ಬರಬೇಕಾಗಿತ್ತು. ಕಾರಣಾಂತರದಿಂದ ಬಾರದೆ ಈ ರೀತಿಯಾಗಿದೆ. ಈಗ ಇಟ್ಟಿರತಕ್ಕುದನ್ನು ದೊಡ್ಡ ತಪ್ಪಾಗಿ ಗಣನೆ ಮಾಡಬಾರದು ಎಂದು ತಮ್ಮಲ್ಲಿ ಪ್ರಾರ್ಥನೆ. ಮಾನ್ಯ ಸದಸ್ಯರು ಮಾತನಾಡಿದ್ದರಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಆವೇಶ ಪೂರಿತವಾಗಿ ಮಾತನಾಡಿದರು. ಅವರು ಆ ರೀತಿ ಮಾತನಾಡಿರತಕ್ಕದ್ದೇ ವಿರಳ. ಇವತ್ತು ಅವರು ಬಹಳ ಭಾವ ಪೂರಿತವಾಗಿ ಮಾತನಾಡಿದರು. ಹಿಂದುಳಿದ, ಹಳ್ಳಿಗಾಡಿನ ಜನಗಳಿಗೆ ಈಗ ಸರಿಯಾದ ರೀತಿಯಿಂದ ನೌಕರಿ ಸಿಗುತ್ತಾ ಇಲ್ಲ, ಅವರಿಗೆ ತೊಂದರೆಯಾಗಿದೆ ಎನ್ನುವುದನ್ನು ಮೂಲವಾಗಿ ಅವರು ಮನಸಿನಲ್ಲಿಟ್ಟು ಕೊಂಡು ಮಾತನಾಡಿದರು ಎಂದು ನಾನು ಭಾವಿಸುತ್ತೇನೆ ಈಗ ಇರತಕ್ಕ ಮುಖ್ಯವಾದ ಒಂದು ಅಂಶವನ್ನು ಅವರು ಒತ್ತಿ ಒತ್ತಿ ಹೇಳಿದರು. ಅಂಕಗಳನ್ನು ಹಾಕಬೇಕಾದರೆ, ೧೦೦ಕ್ಕೆ ೩೦ನ್ನು ಇಂಟರ್‌ವ್ಯೂನಲ್ಲಿ ಕೊಟ್ಟು ಅದರಲ್ಲಿ ಬಹಳ ತೊಂದರೆ ಮಾಡಿದ್ದಾರೆ, ಆದ್ದರಿಂದ ಅನೇಕರಿಗೆ ನೌಕರಿ ದೊರೆಯುತಕ್ಕಂಥಾದ್ದು ಬಹಳ ಕಷ್ಟವಾಗಿದೆ ಎನ್ನತಕ್ಕಂಥ ಅಂಶವನ್ನು ಅವರು ಒತ್ತಿ ಹೇಳಿದರು. ಅದಕ್ಕೆ ಕಾರಣ್ಕ ನಾನು ಕೇಳಿದ್ದೇನೆ. ಬಹುಶಃ ಹಿಂದೆ ಕೆಲವು ಸಂದರ್ಭಗಳಲ್ಲಿ ಫಸ್ಟ್‌ಕ್ಲಾಸ್‌ನಲ್ಲಿ ಪಾಸ್ ಆದವರು, ಇಂಟರವ್ಯೂ ಆದ ಮೇಲೆ ಬಾದಂಥ_ಮಾರ್ಕ್ಸ್ ಸೆಕೆಂಡ್ ಕ್ಲಾಸ್, ಥರ್ಡ್ ಕ್ಲಾಸ್, ಆದಂಥ ಸಂದರ್ಭಗಳೂ ಇದ್ದುವು ಎಂದು ಹೇಳಿದ್ದೇನೆ ಅದು ಒಂದು ನಮೂನೆ ಇನ್‌ಫ್ಲೇಷನ್. ಇದು ಒಂದು ನಮೂನೆ ಇನ್‌ಫ್ಲೇಷನ್ ಈ ರೀತಿ ಆದರೆ ಎಲ್ಲಿ ತಪ್ಪು ಇದೆ ಕಂಡು ಹಿಡಿಯುವುದು ಕಷ್ಟ, ಎಂದು ಆಗ ಇದ್ದವರು ಯೋಚನೆ ಮಾಡಿ ಎಸ್.ಸಿ.ಎಸ್.ಟಿ. ಗಳಿಗೆ ರಿಸರ್ವೇಷನ್ ಏನು ಇದೆ ಅದಕ್ಕೆ ಅಡ್ಡಿ ಬಾರದ ರೀತಿಯಲ್ಲಿ ೧೦೦ ಪರೀಕ್ಷೆ ಮಾರ್ಕ್ಸ್, ೩೦ ಇಂಟರ್‌ವ್ಯೂ ಮಾರ್ಕ್ಸ್ ಎಂದು ಇಟ್ಟಿದ್ದಾರೆ. ಆದರೆ ಅದರಲ್ಲಿ ಅನ್ಯಾಯ ಆಗಲಿಕ್ಕೆ ದಾರಿ ಇದೆ ಎನ್ನತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ

ಶ್ರೀ ಎಚ್. ಡಿ. ದೇವೇಗೌಡ.— ಈ ಇನ್‌ಫ್ಲೇಷನ್‌ನಿಂದ ಬಡವರಿಗೆ ಒಳ್ಳೆಯದು ಆಗುವುದಾದರೆ ತಿದ್ದುಪಡಿ ಮಾಡಿ.

ಶ್ರೀ ಎಚ್. ಸಿದ್ದವೀರಪ್ಪ.— ತಾವು ಹೇಳಿದ ಹಾಗೆ ಇದನ್ನು ಪುನಃ ಪರಿಶೀಲನೆ ಮಾಡುತ್ತೇವೆ ಕ್ಯಾಬಿನೆಟ್ ಮುಂದೆ ಈ ವಿಷಯ ಇದೆ; ಪರಿಶೀಲನೆ ಮಾಡಲಿಕ್ಕೆ ಸರಿಯಾದ ಅಂಶವನ್ನು ಎತ್ತಿ ತೋರಿಸಿದ್ದೀರಿ ಎಂದು ಅಷ್ಟು ಮಾತ್ರ ಹೇಳುತ್ತೇನೆ. ಸರ್ಕಾರದವರು ಯೋಚನೆ ಮಾಡಿ, ಈ ವಿಚಾರದಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆ. ನನ್ನ ಮಟ್ಟಿಗೆ ಹೇಳುವುದಾದರೆ, ಪರೀಕ್ಷೆಯಲ್ಲಿ ನಂಬರ್ ಆಗಲೀ ಇಂಟರವ್ಯೂ ನಂಬರ್ ಆಗಲೀ ಏನು ಬರುತ್ತವೆ ಇವುಗಳ ವಿಚಾರದಲ್ಲಿ ಬಹಳ ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ಆದರೆ ಇವತ್ತಿನ ದಿವಸ ನಮ್ಮ ಮುಂದೆ ಇರತಕ್ಕಂತ ಯಾರ್ಡ್ ಸ್ಟಿಕ್ ಇದು ಒಂದೇ. ಅಂಕಗಳ ಯಾರ್ಡ್‌ಸ್ಟಿಕ್ ಅಲ್ಲದೆ ಇನ್ನೊಂದು ಯಾರ್ಡ್‌ಸ್ಟಿಕ್ ಸರ್ಕಾರದ ಮುಂದೆ ಕಾಣುತ್ತಾ ಇಲ್ಲ ಎಂದು ನಾನು ಕೇಳಿದ್ದೇನೆ ನಾನು ಯೂನಿವರ್ಸಿಟಿಯ ಸಿಂಡಿಕೇಟ್ ಮೆಂಬರ್ ಆಗಿದ್ದಾಗ ಟ್ಯಾಬ್ಯುಲೇಷನ್‌ನಲ್ಲಿ ಮಾರ್ಕ್ಸ್ ಅವಾಂತರವನ್ನು ನೋಡಿದ್ದೇನೆ. ಫೇಲ್ ಆದವರು ಎಷ್ಟೋ ಜನ ಪಾಸ್ ಆಗಿ ಪಾಸ್ ಆಗುವವರು, ಫೇಲ್ ಆಗಿದ್ದಂಥ ದಾರುಣ ಸ್ಥಿತಿಯನ್ನು ಕಣ್ಣಾರೆ ಕಂಡಿದ್ದೇನೆ. ಮೊನ್ನೆ ಯಾರೋ ಒಬ್ಬ ಸದಸ್ಯರು ಮೇಲ್ಮನೆಯಲ್ಲಿ ಇದರ ಬಗ್ಗೆ ಹೇಳಿದರು. ೬-೭-೮ ನಂಬರ್ ಬಂದಿದ್ದರೆ, ಈ ಟ್ಯಾಬ್ಯುಲೇಷನ್‌ಲ್ಲಿ ೬೦-೭೦-೮೦ ಎಂದು ಮಾಡಿ ಎಂ.ಬಿ.ಬಿ.ಎಸ್. ಸೀಟನ್ನು ಗಿಟ್ಟಿಸಿಕೊಂಡು ಓದತಕ್ಕ ಜನ ಇದ್ದಾರೆ ಎಂದು ಹೇಳಿದರು. ಇದು ನಮ್ಮ ಮಾರಲ್ ಸ್ಟ್ಯಾಂಡರ್ಡ್ ಎಲ್ಲಿ ಇದೆ ; ನಮ್ಮ ನೈತಿಕ ಮಟ್ಟ ಎಲ್ಲಿ ಇದೆ ಎಂದು ತೋರಿಸುತ್ತದೆ. ನಮ್ಮ ನೀತಿ ಎಲ್ಲಿಗೆ ಹೋಗಿದೆ, ಇದನ್ನು ಸರಿಪಡಿಸತಕ್ಕಂಥಾದ್ದು ಈ ಕಡೆ, ಕೂತುಕೊಂಡಂಥ ೧೦-೧೨ ಜನರಿಂದ ಆಗುವುದಿಲ್ಲ, ನಾವು ನೀವು ಎಲ್ಲರೂ ಕೂಡಿ ಸರಿಪಡಿಸಬೇಕು. ಹೇಗೆ ಸರಿಪಡಿಸಬೇಕು ಎಂದು ಒಂದು ಬಾಗಿಲನ್ನು ಮುಚ್ಚಿದ್ದರೆ. ೧೦ ಬಾಗಿಲುಗಳು ತೆಗೆಯುತ್ತವೆ, ೧೦ ಬಾಗಿಲು ಮುಚ್ಚಲಿಕ್ಕೆ ಹೋದರೆ ಎಲ್ಲಾ ಬಾಗಿಲು ತೆರೆದುಕೊಳ್ಳುತ್ತವೆ. ಹಿಂದೆ ನಾವು ಇದ್ದಾಗ. ಮಿಲ್ಲರ್ ಕಮಿಟಿ ರಿಪೋರ್ಟಿನಲ್ಲಿ ಯಾವ-ಭಾಷಣ ಕೇಳುತ್ತಿದ್ದೆವೋ ಅದೇ ಧಾಟಿಯಲ್ಲಿ ಇನ್ನೂ ನಾವು ಭಾಷಣ ಮಾಡತಕ್ಕ ಪರಿಸ್ಥಿತಿ ಇದ್ದರೆ, ನಮ್ಮ ರಾಜ್ಯ ಯಾವ ರೀತಿ ಹೋಗಬೇಕು; ಯಾವ ಪರಿಸ್ಥಿತಿಗೆ ಹೋಗಬೇಕು ಎನ್ನುವುದನ್ನು ಸಹ ದೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ ಬಹುಶಃ ಅದಕ್ಕೆ ಕಾರಣ ಸರ್ಕಾರಿ ನೌಕರಿ ಒಂದು ಬಿಟ್ಟರೆ ಜೀವನಕ್ಕೆ ಬೇರೆ ದಾರಿ ಇಲ್ಲವೋ ಏನೋ ಎನ್ನತಕ್ಕ ಪರಿಸ್ಥಿತಿಯನ್ನು ಈ ದೇಶದಲ್ಲಿ ನಾವು ಕಾಣುತ್ತಾ ಇರುವುದರಿಂದ ಇಷ್ಟು ಹಾಹಾಕಾರ ಎದ್ದಿದೆ ಎಂದು ನಾನಾದರೂ ಭಾವಿಸುತ್ತೇನೆ ಅಮೆರಿಕಾ ದೇಶದಲ್ಲಿ, ದಡ್ಡ ಮಗ ಇದ್ದರೆ, ಅವನನ್ನು ಸರ್ಕಾರಿ ನೌಕರಿಗೆ ಕಳುಹಿಸುತ್ತಾರೆ. ಯಾರು ಯಾವುದಕ್ಕೂ ಹೊಂದಿಕೊಳ್ಳುವುದಿಲ್ಲವೋ ಅಂಥವರನ್ನು ನೌಕರಿಗೆ ಕಳುಹಿಸುತ್ತಾರೆ. ನಮ್ಮ ದೇಶದಲ್ಲಿ ಆ ಪರಿಸ್ಥಿತಿ ಬರಬೇಕು. ನಮ್ಮಲ್ಲಿ ಯಾರಿಗೆ ವಿದ್ವತ್ ಇದೆಯೋ, ಯಾರಿಗೆ ಮೆದುಳು ಶಕ್ತಿ ಇದೆ, ಅದನೆಲ್ಲಾ ಯೋಚನೆ ಮಾಡಿಕೊಂಡು ಮುಂದುವರಿಯತಕ್ಕ ಕಾಲ ಬರಬೇಕು. ಸೋಷಿಯಲ್ ಜಸ್ಟೀಸ್ ಎನ್ನುವದರಲ್ಲಿ ಇವೆಲ್ಲಾ

(ಶ್ರೀ ಎಚ್. ಸಿದ್ದವೀರಪ್ಪ)

ಪ್ರವೋಕಿಂಗ್ ಐಡಿಯಾಸ್. ಸೋಷಿಯಲಿಸ್ಟಿಕ್ ಪ್ಯಾಟರ್ನ್ ಎಂದು ಹೇಳುತ್ತೇವೆ. ನನ್ನ ಮಗನಿಗೆ ಅಧಿಕಾರ ನನ್ನ ಮೊಮ್ಮಗನಿಗೆ ಅಧಿಕಾರ ಬೇಕು. ಫ್ಯಾಮಿಲಿಯಲ್ಲಿ ಒಬ್ಬರಾದರೂ ನೌಕರಿಯಲ್ಲಿ ಇದ್ದೇ ಇರಬೇಕು ಎಂದು ಅವರಿಗೆ ಮೊದಲು ನೌಕರಿ ಕೊಡಬೇಕು ಎನ್ನುವ ಪರಿಸ್ಥಿತಿ ನಮ್ಮ ದೇಶದಲ್ಲಿ ಬರಬೇಕು. ಒಂದು ಫ್ಯಾಮಿಲಿಯಲ್ಲಿ ೧೫೦ ರೂಪಾಯಿ ಕನಿಷ್ಠ ದುಡಿಯತಕ್ಕ ಒಬ್ಬನು ಇರಬೇಕು ಎನ್ನುವ ಪರಿಸ್ಥಿತಿ ಬರುವವರೆಗೂ ಸೋಷಯಲ್ ಐಡಿಯಾಸ್ ಸಹ ಮುಂದಕ್ಕೆ ಹೋಗಬೇಕು. ಹಿಂದುಳಿದವರು ಯಾರು ಎಂದು ಶ್ರೀ ಶೀರನಾಳಿ ಚಂದ್ರಶೇಕರ್‌ರವರು ಹೇಳಿದ ಮಾತಿನಲ್ಲಿ ಅರ್ಥವಿದೆ. ರೆಕ್ರೂಟ್‌ಮೆಂಟ್ ಕಮಿಟಿಯಿಂದ ತೊಂದರೆಯಾಗಿದೆ ಎನ್ನತಕ್ಕಂಥ ವಿಚಾರವನ್ನು ತಾವು ಹೇಳಿದ್ದೀರಿ. ಆದರೆ ಯಾವ ರೀತಿ ಡಿಪಾರ್ಟ್‌ಮೆಂಟಲ್ ರೆಕ್ರೂಟ್‌ಮೆಂಟ್ ಕಮಿಟಿ ಅನ್ಯಾಯ ಮಾಡುತ್ತಾ ಇದೆ ಎನ್ನುವುದನ್ನು ಯಾರೂ ಎತ್ತಿ ತೋರಿಸಿಲ್ಲ. ಅದರಲ್ಲಿ ಏನಾದರೂ ಅನ್ಯಾಯವಾಗಿದ್ದರೆ, ತೊಂದರೆಯಾಗುತ್ತಾ ಇದ್ದರೆ, There is nothing Sacrosangt. ಸರ್ಕಾರ ಇದನ್ನು ಯೋಚನೆ ಮಾಡೋಣ.

ಶ್ರೀ ಎಚ್. ಡಿ. ದೇವೇಗೌಡ :— ಡಿಸ್ಟ್ರಿಕ್ಟ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಯನ್ನು ಪಿ.ಎಸ್.ಸಿ. ಯವರ ಗೈಡೆನ್ಸ್ ಮೇಲೆ ಮಾಡುವುದರಲ್ಲಿ ಏನು ತೊಂದರೆ ಇದೆ ?

ಶ್ರೀ ಎಚ್. ಸಿದ್ದವೀರಪ್ಪ :– ವರ್ಷಕ್ಕೆ ಸುಮಾರು ಎಷ್ಟೋ ಸಹಸ್ರ ಅರ್ಜಿಗಳು ಬರುತ್ತವೆ. ಅವನ್ನು ಪಿ.ಎಸ್.ಸಿ. ಯವರು ಕಣ್ಣಿನಲ್ಲಿ ಕಣ್ಣಿಟ್ಟು ನೋಡಲಿಕ್ಕೆ ಆಗುವುದಿಲ್ಲ. ಅನೇಕ ಸಾರಿ ಬಹಳ ಜಾಗರೂಕತೆಯಿಂದ ನೋಡಬೇಕಾಗುತ್ತದೆ. ನಿಜವಾಗಿ ಹೇಳಬೇಕಾದರೆ, ಅನೇಕ ವೇಳೆ ಟೆಂಪೊರರಿ ಹುದ್ದೆಗಳಿದ್ದರೆ ಅವುಗಳನ್ನು ಪಬ್ಲಿಕ್ ಸರ್ವೀಸ್ ಕಮಿಷನ್‌ನವರ ಗಮನಕ್ಕೆ ಕಳುಹಿಸದೆ ನೇಮಕ ಮಾಡುತ್ತಾರೆ. ಯಾವ ಯಾವ ಡಿಪಾರ್ಟ್‌ಮೆಂಟ್‌ಗಳಲ್ಲಿ ಎಷ್ಟೆಷ್ಟು ವೆಕೆನ್ಸಿಗಳು ಇರುತ್ತವೆ. ಅವನ್ನು ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಕಳುಹಿಸಿದೆ ಎಕ್ಸಿಜೆನ್ಸೀಸ್ ಆಫ್ ಸರ್ವೀಸ್ ಎಂದು ಟೆಂಪರರಿ ಅಪಾಯಿಂಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಪಬ್ಲಿಕ್ ಸರ್ವೀಸ್ ಕಮಿಷನ್‌ಗೆ ಕೈತುಂಬ ಕೆಲಸವಿದೆ.

ಶ್ರೀ ಎಚ್. ಡಿ. ದೇವೇಗೌಡ :— ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಕ್ಲಾಸ್ ೩ ಅಪಾಯಿಂಟ್‌ಮೆಂಟ್ ಮಾಡುವ ಬಗ್ಗೆ ಅವರಿಂದ ವಿಳಂಬವಿಲ್ಲ. ಆದರೆ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ಸ್‌ಗಳು ಎಷ್ಟು ವೇಕೆನ್ಸೀಸ್ ಇವೆ ಎಂಬುದನ್ನು ಪ್ರತಿವರ್ಷ ಬರೆದು ತಿಳಿಸುವುದಿಲ್ಲ. ಅವರಿಗೆ ಮನಸ್ಸು ಬಂದಾಗ ೭೦೦ ವೇಕನ್ಸಿ ಇದೆಯೆಂದು ತಿಳಿಸುತ್ತಾರೆ. ಈ ವಿಷಯದಲ್ಲಿ ಜವಾಬ್ದಾರಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರದು ಅಲ್ಲ. ಡಿಪಾರ್ಟ್‌ಮೆಂಟ್‌ನವರು ಲೋಕಲ್ ಕ್ಯಾಂಡಿಡೇಟ್ಸ್ ಎಂಪ್ಲಾಯಮೆಂಟ್ ಮಾಡುತ್ತಾರೆ. ಎಕ್ಸಿಜೆನ್ಸೀಸ್ ಆಫ್ ಸರ್ವೀಸ್ ಎಂದು ತೆಗೆದುಕೊಂಡು ಇಲಾಖೆಯವರೇ ನೇಮಕ ಮಾಡಿದ್ದಾರೆ, ಆದ್ದರಿಂದ ಪಿ.ಎಸ್.ಸಿ. ಅವರ ಮೇಲೆ ಹೊಣೆ ಹಾಕುವುದು ಸರಿಯಲ್ಲ. ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಡಿಸ್ಟ್ರಿಕ್ಟ್ ಲೆವೆಲ್ ಕಮಿಟಿಯವರು ಸರಿಯಾದ ರೀತಿಯಲ್ಲಿ ನೇಮಕ ಮಾಡುತ್ತಾ ಇದ್ದಾರೆಯೋ ಇಲ್ಲವೋ ಎಂದು ಓವರ್ ಆಲ್ ಸೂಪರಿವಿಷನ್ ಮಾಡಲು ಅವಕಾಶ ಇರಬೇಕೆಂದು ನಾನು ಸಲಹೆ ಮಾಡಲು ಇಚ್ಛಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ :— ತಾವು ಹೇಳಿದಂಥ ಸಲಹೆ ವಿಚಾರ ಮಾಡಿ ನೋಡೋಣ. ಇನ್ನೊಂದು ವಿಷಯ ಕೆಲವು ಸ್ನೇಹಿತರು ಹೇಳಿದರು ನಾನು ಬ್ಯಾಕ್‌ವರ್ಡ್ ಕ್ಲಾಸ್ ರಿಸರ್ವೇಷನ್ ಮುಂತಾದ ವಿಚಾರದಲ್ಲಿ ಹೆಚ್ಚು ಪ್ರಸ್ತಾಪನೆ ಮಾಡಲಿಕ್ಕೆ ಹೋಗುವುದಿಲ್ಲ. ಮೊನ್ನೆ ತಾನೆ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಒಂದು ಕಮಿಷನ್ ನೇಮಿಸಿದ್ದೇವೆ ಅವರ ರಿಪೋರ್ಟು ಬರಲಿ. ಆ ರಿಪೋರ್ಟನ್ನು ನಾವು ಕಾದು ನೋಡೋಣ. ಅವರ ರಿಪೋರ್ಟು ಬಂದಮೇಲೆ ಇದರ ವಿಚಾರ ಈ ಸಭೆಯ ಗಮನಕ್ಕೆ ಬಂದೇ ಬರುತ್ತದೆ. ಯಾವ ರೀತಿ ಇದನ್ನು ಸರಿಪಡಿಸಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ.

ಇನ್ನು ಸಬ್ ಇನ್ಸ್‌ಪೆಕ್ಟರ್ಸ್ ಅಪಾಯಿಂಟ್‌ಮೆಂಟ್ ವಿಚಾರ ಸಾಕಷ್ಟು ಟೀಕೆಗೆ ಗುರಿಯಾಗಿದೆ. ಇದು ಎಕ್ಸಿಜೆನ್ಸೀಸ್ ಆಫ್ ಸರ್ವೀಸ್ ಆಗಿ ಇರಬೇಕು ಎಂದು ಸರ್ಕಾರದ ನೀತಿಯಾಗಿದೆ ಎಂಬುದು ತಮಗೆ ಗೊತ್ತಿದೆ. ಇದು ಒಂದು ತರಹ ಕ್ವಾಸಿ ಮಿಲಿಟರಿ ಟೈಪ್ ಇರುವುದು ಆಗಿದೆ. ಸರಿಯಾದ ರೀತಿಯಿಂದ ಎಲ್ಲಿ ಅನ್ಯಾಯವಾಗಿದೆ ಎನ್ನುವುದನ್ನು ಸುತ್ತಲೂ ನೋಡಿ, ಅನ್ಯಾಯವಾಗಿದ್ದರೆ ಅವನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡಬೇಕೇ ಹೊರತು ಬಹುಶಃ ಇದರಲ್ಲಿ ಏನು ತಪ್ಪು ಇದೆ ಎನ್ನತಕ್ಕದ್ದನ್ನು ಯೋಚನೆ ಮಾಡದೆ ಆಲ್ ರೌಂಡ್ ಕ್ರಿಟಿಸಿಸಮ್ ಮಾಡುವುದು ಸೂಕ್ತವಲ್ಲ.

ಶ್ರೀ ಎಚ್. ಡಿ. ದೇವೇಗೌಡ .— ಈ ಬಗ್ಗೆ ಪುಕಾರು ದೊಡ್ಡ ಪ್ರಮಾಣದಲ್ಲಿ ಇದೆ. ಎಕ್ಸಿಜೆನ್ಸೀಸ್ ಆಫ್ ಸರ್ವೀಸ್ ಎಂದು ಈ ಸಬ್ ಇನ್ಸ್‌ಪೆಕ್ಟರ್ಸ್ ವಿಚಾರದಲ್ಲಿ ಆಗಿರತಕ್ಕ ೧೫ ಸಾವಿರ ರೂಪಾಯಿನ ವ್ಯಾಪಾರ ನಿಮ್ಮ ಕಾಲದ್ದು ಅಲ್ಲ.

ಶ್ರೀ ಎಚ್. ಸಿದ್ದವೀರಪ್ಪ :— ಅದು ನನಗೆ ಗೊತ್ತಿಲ್ಲ. ನಿಮಗೆ ಅನುಭವವಿದ್ದರೆ ಹೇಳಿ.

ಶ್ರೀ ಎಚ್. ಡಿ. ದೇವೇಗೌಡ :— ತೆಗೆದುಕೊಳ್ಳುತಕ್ಕ ಅನುಭವದ ಜಾಗಕ್ಕೆ ತಾವು ಇನ್ನೂ ಬಂದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ :— ಗುಮಾಸ್ತರ ವಿಚಾರದಲ್ಲಿ ಟೆಸ್ಟಿಗೆ ಕುಳಿತುಕೊಂಡಾಗ ಇಂಗ್ಲೀಷ್‌ನಲ್ಲಿ ಬರೆಯುತಕ್ಕದ್ದು ಸರಿಯಲ್ಲ ಎಂದು ಹೇಳಿದರು ಆ ವಾದವನ್ನು ನಿಜವಾಗಿ ಯೋಚನೆ ಮಾಡತಕ್ಕುದು ಆಗಿದೆ ಹಲವಾರು ಬೇರೆ ರಾಜ್ಯಗಳಲ್ಲಿ ಅವರವರ ರಾಜ್ಯ ಭಾಷಯಲ್ಲೇ ಪ್ರಶ್ನೆ ಪತ್ರಿಕೆಗೆ ಉತ್ತರ ಬರೆಯಲು ಅವಕಾಶ ಇದೆ ಎಂದು ಕೆಲವು ಸ್ನೇಹಿತರು ಹೇಳಿದರು. ಮೈಸೂರು ರಾಜ್ಯದಲ್ಲಿ ಏತಕ್ಕೆ ಅದನ್ನು ಆಚರಣೆಗೆ ತರಬಾರದು ಎನ್ನುವ ಒಂದು ವಾದ ಇದೆ. ಅದು ಅಷ್ಟು ಸುಲಭವಾಗಿ ತಳ್ಳಿ ಹಾಕತಕ್ಕಂಥ ವಾದವಲ್ಲ. ಇದನ್ನು ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಇದನ್ನು ಕೂಲಕುಂಷವಾಗಿ ಯೋಚನೆ ಮಾಡಿ ಇದರ ವಿಚಾರದಲ್ಲಿ ಯಾವ ಕಾರ್ಯಕ್ರಮ ತೆಗೆದುಕೊಳ್ಳಬಹುದು ಎನ್ನತಕ್ಕುದ್ದನ್ನೂ ಯೋಚನೆ ಮಾಡುತ್ತೇನೆ.

ಇನ್ನು ಸೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಸೆಡ್ಯೂಲ್ಡ್ ಟ್ರೈಬ್ಸ್ ರಿಸರ್ವೇಷನ್ ವಿಚಾರದಲ್ಲಿ ಮಾನ ಸ್ನೇಹಿತರಾದ ಜಯಪ್ರಕಾಶ್ ನಾರಾಯಣ್ ಅವರು ಸಾಕಷ್ಟು ಟೀಕೆ ಮಾಡಿದರು. ಆದರೆ ಅವರು ಈಗ ಇಲ್ಲಿ ಇಲ್ಲ. ಈ ರಿಸರ್ವೇಷನ್ ಹೇಗೆ ಇರಬೇಕು ಎನ್ನುವ ವಿಚಾರದಲ್ಲಿ ಹೈಕೋರ್ಟಿನವರು Bhrathi Vs State of Mysore. ತೀರ್ಪಿನಲ್ಲಿ ಒಂದು ನೀತಿಯನ್ನು ಹಾಕಿದ್ದಾರೆ. ಸರ್ಕಾರದವರು ಹೈಕೋರ್ಟು ತೀರ್ಪು ಬಂದಮೇಲೆ ಆ ತೀರ್ಪಿನಲ್ಲಿ ಯಾವರೀತಿ ಹೇಳಿದ್ದಾರೆ ಆ ಪ್ರಕಾರ ನಡೆಯುತ್ತಿದ್ದಾರೆ ಎನ್ನತಕ್ಕಂಥದ್ದು ಹೇಳಿದರೆ ಸಾಕು. ಅನೇಕ ವಿಷಯಗಳನ್ನು ಹೇಳಿದರು.

ಶ್ರೀ ಮಾನ್ ಆರ್ಮುಗಂ ಅವರು ಮಾತನಾಡಲು ನಿಂತರೆ ಗುಡುಗು ಮಿಂಚು ಒಂದೇ ಸಾರಿ ಬಂದು ಬಿಡುವಂತೆ ಮಾತನಾಡುತ್ತಾರೆ. ಕೇಳುವುದಕ್ಕೆ ಕಿವಿಗೆ ಇಂಪಾಗುತ್ತದೆ. ನಾನು ಏತಕ್ಕಾಗಿ ಹೇಳುತ್ತೇನೆಂದರೆ ಅವರು ಬೇಕಾದಷ್ಟು ಹೇಳಲಿ ಆದರೆ ಅಲ್ಲಿ ಕುಳಿತಿರತಕ್ಕಂಥ, ನಿರಪರಾಧಿಗಳು ಆಗಿರತಕ್ಕ ಪಬ್ಲಿಕ್ ಸರ್ವೀಸ್ ಕಮೀಷನ್ ಸದಸ್ಯರನ್ನು ಅಷ್ಟೊಂದು ಟೀಕೆ ಮಾಡುವುದು ಸೂಕ್ತವಲ್ಲವೆಂದು ನಾನು ತಿಳಿದಿದ್ದೇನೆ. ಅವರು ಹೇಳಿದರು ಬರೀ ಎಲ್.ಟಿ. ಮಾರ್ಕ್ ಹಾಕುವವರು, ಬರೀ ತಂಬ್ ಇಂಪ್ರೆಷನ್ ಹಾಕುವವರು ಇದ್ದಾರೆ ಎಂದು ಹೇಳಿದರು ಅದನ್ನು ನಾನು ಒಪ್ಪುವುದಿಲ್ಲ. ಅವರು ಯಾವಯಾವುದರಲ್ಲಿ ನಿರ್ದಾಕ್ಷಿಣ್ಯವಾಗಿ ಸರ್ಕಾರ ಈ ರೀತಿ ಅನ್ಯಾಯ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ೬೯-೭೦ರ ರಿಪೋರ್ಟಿನಲ್ಲಿ ೨೨ ೨೩ ಇರುವುದನ್ನು ಪ್ಲಾನ್‌ನಲ್ಲಿ ಪ್ರಸ್ತಾಪ ಮಾಡಿರುವ ಪ್ರಕಾರ ನೇಮಿಸಿದ್ದೀರಿ, ಸರ್ಕಾರ ಈ ರೀತಿ ಲೋಪದೋಷ ಮಾಡುತ್ತಿದೆ. ಸರಿಯಾಗಿ ಮಾಡುತ್ತಾ ಇಲ್ಲ ; ಸರ್ಕಾರ ಇನ್ನೊಂದು ತಪ್ಪುಮಾಡಿದೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಇಲ್ಲ, ಡ್ರಾಫ್ಟ್ ರೂಲ್ಸ್ ಇಲ್ಲ, ಸರಿಯಾಗಿ ಅಪಾಯಿಂಟ್‌ಮೆಂಟ್ಸ್ ಮಾಡುತ್ತಿಲ್ಲಾ ನಿಮ್ಮ ಆಡಳಿತ ಸರಿಯಾಗಿಲ್ಲ ಎನ್ನುವ ರೀತಿಯಲ್ಲಿ ಬಹಿರಂಗವಾಗಿ ಮಾನ್ಯ ಸ್ನೇಹಿತರು ಟೀಕೆಮಾಡಿದ್ದಾರೆ. ಎಡಗೈ ಹೆಬ್ಬೆಟ್ಟು ಹಾಕೇವರು ಎಂದು ಹೇಳುವುದು ಸರಿಯಲ್ಲ. ಆದುದರಿಂದ ಪಬ್ಲಿಕ್ ಸರ್ವೀಸ್ ಕಮೀಷನ್‌ನವರು, ಅಲ್ಲಿ ಇರತಕ್ಕವರು ಯೋಗ್ಯರು ಇದ್ದಾರೆ, ಘನತೆಯುಳ್ಳವರು ಇದ್ದಾರೆ, ಅವರನ್ನು ನೇಮಿಸ ಬೇಕಾದರೆ ಸರ್ಕಾರ ಪೂರ್ವಾಪರ ಯೋಚನೆಮಾಡಿ ಯಾವ ರೀತಿ ಯಾರಿಗೆ ನಾವು ಸರಿಯಾದ ಸ್ಥಳವನ್ನು ಕೊಡಬೇಕು ಎಂಬುದನ್ನು ಯೋಚನೆಮಾಡಿ ಮಾಡುತ್ತೇವೆ ಎಂದು ಹೇಳುತ್ತೇನೆ. ಯಾವುದು ಮಾಡಿದರೂ ಬಂಗಾರ ತಕ್ಕಡಿಯೊಳಗೆ ಹಾಕಿ ತೂಗಿದ ಹಾಗೆ ಯಾವುದನ್ನು ತೂಗುವುದಕ್ಕೆ ಆಗುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ ಯಾರು ಅಲ್ಲಿಗೆ ಹೋಗಿ ಕೆಲಸಮಾಡಿದ್ದಾರೆ ಅವರ ಕರ್ತವ್ಯ ಸರಿಯಾಗಿ ಮಾಡಿದಾರೆ ಎಂದು ಹೇಳಿದರೆ ಅಷ್ಟು ಸಾಕು ಎಂದು ಭಾವಿಸುತ್ತೇನೆ. ಮತ್ತು ಫಾರೆಸ್ಟ್ ರೇಂಜರ್ಸ್ ಪೋಸ್ಟ್ ವಿಷಯದಲ್ಲಿ ವ್ಯಾಪಾರವಾಗಿದೆ. ಎಂದು ಎಲ್ಲಾ ಹೇಳಿದ್ದಾರೆ. ಅದಕ್ಕೆ ಯಾರು ಕಾರಣರು, ಆ ವ್ಯಾಪಾರದಲ್ಲಿ ಯಾರು ಯಾರು ಪಾತ್ರರು ಎನ್ನತಕ್ಕದ್ದು ಈಗ ಹೇಳುವುದಕ್ಕೆ ಹೋಗುವುದಿಲ್ಲ. ರೂಲ್ಸ್ ಇದೆ ಅದರ ಪ್ರಕಾರ ನೇಮಕ ಮಾಡಬೇಕು. ಅಪಾಯಿಂಟ್‌ಮೆಂಟ್ ಕೊಡುವಾಗ ಅದಕ್ಕೆ ವಿರುದ್ಧವಾಗಿ ರೆಕ್‌ಮಂಡೇಷನ್ ಹೋದರೆ ಡಿಸ್‌ಕ್ವಾಲಿಫಿಕೇಷನ್ ಇರುತ್ತದೆ. ಅವರು ಏನು ಹೇಳುತಾರೆ ಅದು It has been the legacy of the past. W/e the members of this House, we are the sovereign body who are running the adminisiration in this country. on both sides of the House, we must have a self-imposedvow. ಎಂ.ಎಲ್.ಎಗಳು ಮಂತ್ರಿಗಳು ಅದವರಿಗೆ ಈ ಎಲ್ಲಾ ಕಷ್ಟಗಳು ಇವೆ. ಇದು ಪಬ್ಲಿಕ್ ಸರ್ವೀಸ್ ಕಮಿಷನ್, ತಪ್ಪು ಅಲ್ಲ. ಟ್ರಾನ್ಸ್

(ಶ್ರೀ ಎಚ್. ಸಿದ್ದವೀರಪ್ಪ)

ಫರ್ ಕ್ಯಾನ್ಸಲ್‌ಮಾಡಿ, ಟ್ರಾನ್ಸ್‌ಫರ್ ಮಾಡಿರಿ ಎಂದೆಲ್ಲಾ ನಮ್ಮಿಂದ ಬರುತ್ತದೆ. ಇದರಿಂದಲೇ ಆಡಳಿತ ಕುಂಠಿತವಾಗುತ್ತದೆ ಇದನ್ನು ನಾವು ಮಾಡತಕ್ಕಂಥಾದ್ದು ಅಲ್ಲ ಇದನ್ನು ನಾವು ಬದಲಾವಣೆ ಮಾಡಿಕೊಳ್ಳದ ಹೊರತು ಇನ್ನೊಬ್ಬರಿಗೆ ಅನ್ನುವುದರಲ್ಲಿ ಅರ್ಥವಿಲ್ಲ ಮತ್ತು ಇನ್ನೊಬ್ಬರನ್ನು ಹಳಿಯುವುದರಲ್ಲಿ ಅರ್ಥವಿಲ್ಲ. ಸರ್ಕಾರದ ಆಡಳಿತವೆಲ್ಲಾ ಸರಿಯಾಗೇ ನಡೆಯುತ್ತಿದೆ ಎಂದು ವಾದ ಮಾಡತಕ್ಕ ಮನಸ್ಸೂ ಕೂಡ ನನಗಿಲ್ಲ. ಆಡಳಿತದಲ್ಲಿ ಅನೇಕ ಲೋಪದೋಷಗಳಿವೆ, ಆಡಳಿತದಲ್ಲಿ ಒಂದು ಸರಿಯಾದ ಬದಲಾವಣೆ ಅಥವಾ ಮಾರ್ಪಾಡಾಗಬೇಕಾದರೆ ಅದಕ್ಕೆ ನೀವೂ ನಾವೂ ಇಬ್ಬರೂ ಸೇರಿ ಪ್ರಯತ್ನ ಮಾಡಬೇಕು. ಕೆಲವು ವಿಚಾರ ಗಳಲ್ಲಿ ತೊಂದರೆಗಳಿವೆ. ಎಂದು ತಾವುಗಳು ಹೇಳುತ್ತಿರುವ ಮಾತಿನಲ್ಲೂ ಸತ್ಯಾಂಶವಿಲ್ಲದೆ ಇಲ್ಲ. ಆದರೆ ತಾವು ಕೇಳುತ್ತಿರುವರೂರಲ್ ರಿಜರ್‌ವೇಷನ್ ಪ್ರಶ್ನೆ ಬಹಳ ದೊಡ್ಡದು. ಮೊನ್ನೆ ಕಾಲೇಜುಗಳಿಗೆ ವಿದ್ಯಾರ್ಥಿ ಗಳನ್ನು ಅಡ್ಮಿಷನ್ ಮಾಡಿಕೊಳ್ಳತಕ್ಕ ಸಂದರ್ಭದಲ್ಲಿ ಈ ಪ್ರಶ್ನೆ ಉದ್ಭವವಾಗಿತ್ತು. ಆದರೆ ಇಂಥಾ ಸಂದರ್ಭ ದಲ್ಲಿ ತಾವು ಒಂದಂಶವನ್ನು ಮರೆಯಬಾರದು ; ಅದೇನೆಂದರೆ ನಾವು ಆಡಳಿತವನ್ನು ರಾಜ್ಯಾಂಗದ ತಳಹದಿ ಮೇಲೆ ರಚಿತವಾದ ಒಂದು ಚೌಕಟ್ಟಿನಲ್ಲಿ ಕೆಲಸಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಆದರೆ ಆಗಲೆ ಯಾರೋ ಹೇಳಿದರು ಸರ್ಕಾರದ ಮೇಲೆ ಸಾವಿರಾರು ರಿಟ್ ಅರ್ಜಿಗಳು ಕೋರ್ಟಿನಲ್ಲಿ ಪೆಂಡಿಂಗ್ ಇರುತ್ತವೆ ಎಂದು ಈ ದಿವಸ ಯಾರಿಗಾದರೂ ತಮಗೆ ಸರ್ಕಾರದಿಂದ ಅನ್ಯಾಯ ಆಗಿದೆ ಎಂದು ಅನಿಸಿದಾಗ ಅವರು ಅದರ ಪರಿಹಾರದ ಬಗ್ಗೆ ಕೋರ್ಟಿಗೆ ಹೋಗುವುದಕ್ಕೆ ಎಲ್ಲರಿಗೂ ರಾಜ್ಯಾಂಗದತ್ತವಾದ ಒಂದು ಹಕ್ಕಿದೆ. ಅದನ್ನು ತಡೆಯುವುದಕ್ಕಾಗುವುದಿಲ್ಲ. ಈ ಅಂಶವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ರೂರಲ್ ರಿಜರ್ವೇಷನ್ನನ್ನು ಯಾವ ಪ್ರಮಾಣದಲ್ಲಿ ಹೇಗೆ ಮಾಡಬೇಕೆಂಬುದನ್ನು ಸರ್ಕಾರದವರು ಪರಿಶೀಲನೆ ಮಾಡ ಬೇಕಾಗಿದೆ. ಆದರೆ ನನ್ನ ಅಭಿಪ್ರಾಯದಲ್ಲಿ ಈ ರೂರಲ್, ಅರ್ಬನ್ ಮತ್ತು ರೀಜನಲ್, ಸ್ಟೇಟ್ ರಿಜರ್ವೇಷ ನ್‌ಗಳೆಲ್ಲಾ ಹೋಗಬೇಕು. ಈ ದಿವಸ ನಮ್ಮಲ್ಲಿ ೨೩೦ ಸೆಕೆಂಡರಿ ಗ್ರೇಡ್ ಕಾಲೇಜುಗಳನ್ನು ತೆರೆಯಲಾಗಿದೆ. ಅವುಗಳಿಗೆ ಸುರಕ್ಷಿತರಾದ, ದಕ್ಷರಾದ ಉಪಾಧ್ಯಾಯರುಗಳು ಬೇಕು. ಆದರೆ ಅಂಥ ಜನರು ಸಿಕ್ಕುತ್ತಿಲ್ಲ. ನಾನು ಹೇಳುತ್ತೇನೆ ನಾವು ಈ ದಿವಸ ಎಷ್ಟೇ ರಿಜರ್ವೇಷನ್ ಮಾಡಲಿ ಆ ರೂರಲ್ ಕಾಲೇಜುಗಳಲ್ಲಿ ಓದಿ ಪಾಸಾಗಿ ಬಂದವರು ಇಲ್ಲಿ ನ್ಯಾಷನಲ್ ಕಾಲೇಜ್ ಇತ್ಯಾದಿ ಸಂಸ್ಥೆಗಳಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಅವರು ಸಮಬರ ಲಾರರು ಇವರ ಸ್ಟಾಂಡರ್ಡ್ ಬೇರೆ. ಆದರೆ ಅದು ಅಲ್ಲಿ ಪಾಸ್ ಮಾಡಿದವರ ತಪ್ಪಲ್ಲ.

SRI H. D. DEVE GOWDA.—It is a folly of the Government for having allowed such institutions to run.

SRI H. SIDDAVEERAPPA — We cannot prevent it. Colleges are to be sanctioned for rural areas also. There is demand. ತಮ್ಮಂಥ ಸದಸ್ಯರುಗಳು ನಮ್ಮೂರಿಗೊಂದು ಜ್ಯೂನಿಯರ್ ಕಾಲೇಜನ್ನು ಕೊಡಿ ಎಂದು ಬಲವಂತ ಮಾಡುತ್ತಿದ್ದಾರಲ್ಲಾ. There is public cry saying we want College, we want High Schools. We cannot say on This is a transition period.

SRI H. D. DEVEGOWDA.— You have to reserve some quota for rural areas.

ಶ್ರೀ ಎಚ್. ಸಿದ್ದವೀರಪ್ಪ :— ಆದರೆ ಈ ಟ್ರಾನ್ಸಿಷನಲ್ ಪೀರಿಯೆಡ್ಡಿನಲ್ಲಿ ತೊಂದರೆ ಆಗುತ್ತದೆ. ರೂರಲ್ ಪ್ರದೇಶಕ್ಕೆ ಯಾವ ಪ್ರಮಾಣದಲ್ಲಿ ರಿಜರ್ವೇಷನ್ ಮಾಡಬೇಕು, ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಾರೆಂದು ಹೇಳುತ್ತೇನೆ. ಅದನ್ನು ಹೇಗೆ ಮಾಡಿದರೆ ರಾಜ್ಯಾಂಗಕ್ಕೆ ಅದು ವಿರುದ್ಧವಾ ಗುವುದಿಲ್ಲ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ.

SRI H. D. DEVE GOWDA.— I can understand the underlying idea.

SRI H. SIDDAVEERAPPA.— We want to make changes without affecting the principles of Constitution. As long as we are bound by the Constitution, we are bound by every word and letter of it. The point is how to get over the difficulties. ಜಾತೀ ಆಧಾರದ ಮೇಲೆ ಮಾಡುವುದಕ್ಕೆ ಹೋದರೆ ಅದಕ್ಕೆ ನಾನಾ ತೊಂದರೆಗಳಿರುತ್ತವೆ. ನಮಗೆಲ್ಲರಿಗೂ ಬುದ್ಧಿ ಬೇಕೇ ಬೇಕು. ಇಂದಲ್ಲಾ ನಾಳೆ ಆಗಲಿ ಬುದ್ಧಿವಂತರಿಗೇ ಸ್ಥಾನಗಳು ಲಭಿಸುತ್ತವೆ. ಎಂಬುದರಲ್ಲಿ ಸಂದೇಹವಿಲ್ಲ. ಆದ್ದರಿಂದ ನಾವು ಬುದ್ಧಿ

ವಂತರಾಗುವುದಕ್ಕೆ ಹೆಚ್ಚು ಗಮನ ಕೊಡಬೇಕು. ಬುದ್ಧಿವಂತರಾದ ಜನರು ಅವರು ಯಾವ ಕೋಮಿಗೆ ಸೇರಿರಲಿ ಅವರು ಮುಂದಕ್ಕೆ ಬಂದೇ ಬರುತ್ತಾರೆ ಅಂದರೆ ನಾನು ಹೀಗೆ ಹೇಳುವುದರಿಂದ ತಾವು ಹೇಳತಕ್ಕದ್ದರಲ್ಲಿ ಹುರುಳಿಲ್ಲ. ತಿರುಳಿಲ್ಲ. ಎಂದು ನಾನು ಹೇಳತಕ್ಕವನಲ್ಲ. ಆದ್ದರಿಂದ ತಾವು ಸೂಚಿಸಿದಂಥ ರಿಜರ್ವೇಷನ್ ಹೇಗೆ ಮಾಡಬೇಕು ಎಂಬುದನ್ನು ಪರಿಶೀಲನೆ ಮಾಡಲಾಗುತ್ತದೆ. ಆದರೆ ತಾವು ಹೇಳತಕ್ಕ ರೀತಿಯಲ್ಲಿ ಬದಲಾವಣೆ ಮಾಡುವುದಕ್ಕಾಗುವುದಿಲ್ಲ, ಆದರೆ ಈಗ ಬಾಕ್‌ವರ್ಡ್ ಕ್ಲಾಸ್ ರಿಜರ್ವೇಷನ್ ಕಮಿಷನನ್ನು ನೇಮಕ ಮಾಡಿದೆ. ಅವರೇನು ಶಿಫಾರ್ಸುಮಾಡುತ್ತಾರೆಂಬುದನ್ನೂ ನೋಡೋಣ.

ಶ್ರೀ ಎಚ್. ಡಿ. ದೇವೇಗೌಡ.— ನಾವು ಅಧಿಕಾರ ಕಳೆದುಕೊಂಡಿದ್ದೇವೆ. ತಾವು ಅಧಿಕಾರದಲ್ಲಿ ಇದ್ದೀರ, ಮಾಡಿ.

ಶ್ರೀ ಎಚ್. ಸಿದ್ದವೀರಪ್ಪ .— ಆಡಳಿತವನ್ನು ೧೫ ವರ್ಷ ತಮ್ಮ ಕೈಲಿಟ್ಟುಕೊಂಡಿದ್ದು ಈಗ ಅದಕ್ಕೆ ಮಿಸ್ ಬಂದ ನಂತರ ನಮ್ಮ ಕೈಗೆ ಕೊಟ್ಟರೆ ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಎಚ್ ಡಿ. ದೇವೇಗೌಡ, — ಆ ೧೫ ವರ್ಷಗಳ ಅವಧಿಯಲ್ಲಿ ಹಿಂದೆ ತಾವು ಕೂಡ ಅದೇ ಸರ್ಕಾರದಲ್ಲಿ ಮಂತ್ರಿಗಳಾಗಿರಲಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.— ಇರಬಹುದು ನನ್ನ ಮೆಡಿಕಲ್ ಇಲಾಖೆ ಕಳೆದ ೧೫ ವರ್ಷಗಳಿಂದ ಸರಿಯಾದ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇಲ್ಲದೆ ಆಡಳಿತವನ್ನು ನಡೆಸಿಕೊಂಡು ಬಂದಿದ್ದಾರೆ. ಒಂದೊಂದು ಘಟದಲ್ಲಿ ಒಂದೊಂದು ವಿಷಯ ಕಂಡು ಬರುತ್ತದೆ ಕೆಲವಕ್ಕೆ ಸುಪ್ರಿಂ ಕೋರ್ಟ್ ತೀರ್ಪನ್ನು ಹಾಕಿದ್ದರೆ, ಇನ್ನು ಕೆಲವಕ್ಕೆ ಹೈಕೋರ್ಟಿನ ತೀರ್ಪನ್ನು ಹಾಕಲಾಗಿದೆ. ಹೀಗಿದ್ದರೆ ಏನು ಮಾಡುವುದು ?

ಇನ್ನು ಕಾನ್‌ಫಿಡೆನ್‌ಷಿಯಲ್ ರಿಕಾರ್ಡುಗಳ ವಿಚಾರಕ್ಕೆ ಬಂದರೆ ಅದೂ ಒಂದು ದೊಡ್ಡ ಕಥೆಯೇ ಆಗಿದೆ. ಆದರೆ ಈಗ ಮಾನ್ಯ ಸದಸ್ಯರುಗಳೇನೇನು ಸಲಹೆಗಳನ್ನು ಕೊಟ್ಟಿದ್ದೀರೋ ಇವುಗಳನ್ನೆಲ್ಲಾ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತಾರೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ ಇನ್ನು ಒಬ್ಬ ಮಾನ್ಯ ಸದಸ್ಯರು ಆಯೋಗದಲ್ಲಿ ಒಬ್ಬ ಮಹಿಳಾ ಸದಸ್ಯರನ್ನು ಏಕೆ ನೇಮಕ ಮಾಡಲಿಲ್ಲ ಎಂದು ಕೇಳಿದ್ದಾರೆ. ಅದಕ್ಕೆ ಉತ್ತರವಿಟ್ಟ ; ರಾಜ್ಯಾಂಗದಲ್ಲಿ ಈ ಸ್ಥಾನಮಾನಗಳ ಬಗ್ಗೆ ಸ್ತ್ರೀಪುರುಷರಿಗೆ ಏನೂ ವ್ಯತ್ಯಾಸವಿರುವುದಿಲ್ಲ. ಡಿಫೇನ್ಸ್ ಒಂದು ಬಿಟ್ಟರೆ ಬಾಕಿ ಕೋರ್ಟುಗಳು ಮತ್ತು ಇನ್ನು ಎಲ್ಲಾ ಆಫೀಸುಗಳಲ್ಲೂ ಅವರ ನೇಮಕಕ್ಕೆ ಅಡ್ಡಿ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ .— ನಿಮ್ಮ ವರ್ಗದವರು ಮತ್ತು ಪಂಗಡದವರು ಅವರು ಮೆರಿಟ್‌ನಲ್ಲಿ ಪಾಸಾಗಿದ್ದಾಗ ಅವರಿಗೆ ಇರತಕ್ಕ ಕೋಟಾದಲ್ಲಿ ಆ ಸ್ಥಾನಗಳನ್ನು ಕಟ್ ಮಾಡುತ್ತಿದ್ದಾರೆಂದು ಹೇಳುತ್ತಿರುತ್ತಾರೆ. ಅದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ .— ಅದನ್ನು ಪರಿಶೀಲನೆ ಮಾಡಿಸುತ್ತೇನೆ.

MADAM SPEAKER .— The House stands adjourned to meet agai at 1 P.M. on 16th August 1972.

The house adjourned at Six of the Clock to meet again at one of the Clock on wednesday the 16th August 1972,

---

WDP 18341—GPB—550—21-8-1973

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

(Wednesday, 16th August 1972/Shravana 25, 1894 S. E.)

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

Non-availability of time of Leader to opposition in the L. C. to Speek durnig 25th Incependence Jayanthi

†ಶ್ರೀ ಎಚ್. ಡಿ. ದೇವೇಗೌಡ .— (ಹೊಳೆನರಸೀಪುರ)

ಮಾನ್ಯ ಅಧ್ಯಕ್ಷರೇ, ಇವೊತ್ತು ಪ್ರಶ್ನೆಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ. ಈ ವಿಚಾರದಲ್ಲಿ ನನ್ನನ್ನು ಕ್ಷಮಿಸಬೇಕು. ಯಾರ ಮನಸ್ಸಿನಮೇಲೂ ನೋವಾಗಬಾರದು. ಅದಕ್ಕಾಗಿ ನಾನು ತಮ್ಮ ಕ್ಷಮೆ ಕೇಳುತ್ತೇನೆ. ಮೊನ್ನೆ ರಾತ್ರಿ, ಎಂದರೆ ೧೪ನೇ ತಾರೀಖು ತಾವು ರಾಷ್ಟ್ರದ ಸ್ವಾತಂತ್ರ್ಯೋತ್ಸವದ ಬೆಳ್ಳಿ ಹಬ್ಬವನು ಆಚರಿಸಬೇಕು ಎಂದು ಈ ಸಭೆಯನ್ನು ಕರೆದಿದ್ದಿರಿ. ಆ ಕಾರ್ಯಕ್ರಮವನ್ನು ಅಸೆಂಬ್ಲಿ ಹಾಲಿನಲ್ಲಿ ಏರ್ಪಾಡು ಮಾಡಿದ್ದೀರಿ. ಆ ಆ ಕಾರ್ಯಕ್ರಮದ ಪಟ್ಟಿಯ ಪ್ರಕಾರ ಮೇಲ್ಮನೆ ಮತ್ತು ಕೆಳಮನೆಯ ನಾಯಕರಿಬ್ಬರೂ ಮಾತನಾಡಬೇಕು ಎಂದು ಕಾರ್ಯಕ್ರಮದಲ್ಲಿ ಇತ್ತು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳೇ ಸಲಹೆ ಮಾಡಿದ್ದಾರೆ. ಪಾರ್ಲಿಮೆಂಟ್‌ನಲ್ಲಿ ಈ ರೀತಿ ೨೫ನೇ ವರ್ಷದ ಬೆಳ್ಳಿ ಹಬ್ಬದ ಆಚರಣೆ ನಡೆಯುತ್ತದೆ. ಅದೇ ರೀತಿ ನಮ್ಮಲ್ಲಿಯೂ ಕಾರ್ಯಕ್ರಮ ವ್ಯವಸ್ಥೆಯಾಗಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆದರೆ ಅವೊತ್ತು ನಿಜವಾದ ಪರಿಸ್ಥಿತಿ ಏನು ಉದ್ಭವಿಸಿತು ಎಂದರೆ ಕಾರ್ಯಕ್ರಮದ ಪ್ರಕಾರ ವಿರೋಧಪಕ್ಷದ ನಾಯಕರು ಇಬ್ಬರೂ ಮಾತನಾಡಬೇಕಾಗಿತ್ತು. ನಾನು ಮಾತನಾಡಿದೆ, ಶ್ರೀಮಾನ್ ರಾಮಕೃಷ್ಣ ಹೆಗ್ಗಡೆ ಯವರಿಗೆ ಅವಕಾಶ ಸಿಗಲಿಲ್ಲ. ಕಾಲದ ಒತ್ತಡದಿಂದ ೧೨ ಗಂಟೆಗೆ ಸರಿಯಾಗಿ ಸೈಲೆನ್ಸ್ ಅಬ್ಸರ್ವ್ ಮಾಡಿದರು. ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರಿಗೆ ಆಗ ಮಾತನಾಡುವುದಕ್ಕೆ ಅವಕಾಶ ದೊರಕದೆ ಇರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಅವರಿಗೆ ಪತ್ರವನ್ನು ಬರೆದಿದ್ದಾರೆ. ಅದರಲ್ಲಿ ಅವರಿಗೆ ಅಗೌರವ ತೋರಿಸಬೇಕು ಎನ್ನುವ ಉದ್ದೇಶ ಇಲ್ಲ ಎಂದು ಹೇಳಿ ಬರೆದಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಸಮಾರಂಭದಲ್ಲಿ ಮಾತನಾಡುತ್ತಿದ್ದಾಗ ಅಧ್ಯಕ್ಷರು ಶ್ರೀ ಹೆಗ್ಗಡೆಯವರು ಮಾತನಾಡಿಲ್ಲ ಎಂದು ಒಂದು ಚೀಟಿಯನ್ನು ಬರೆದು ಮುಖ್ಯ ಮಂತ್ರಿಗಳಿಗೆ ಕಳುಹಿಸಿದ್ದರು. ಈಗ ಇದರಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ವಿರೋಧ ಪಕ್ಷದ ಇನ್ನೊಬ್ಬರು ನಾಯಕರು ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ ಎನ್ನುವ ಭಾವನೆ ಬಂದಿದೆ. ಮುಖ್ಯ ಮಂತ್ರಿಗಳು ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರಿಗೆ ಪತ್ರವನ್ನು ಬರೆದು ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಮತ್ತು ಆ ರೀತಿ ಆಗಬಾರದಾಗಿತ್ತು ಎಂದು ಹೇಳಿದ್ದಾರೆ. ಮೊನ್ನೆ ಈ ಸಭೆಯಲ್ಲಿ ಏನು ನಡೆಯಿತು ಎಂಬುದು ದೇಶದ ಜನತೆಗೆ ಗೊತ್ತಾಗಬೇಕು ಇದು ಮನೆಯ ವ್ಯವಹಾರವಾಗಬಾರದು ಆದ್ದರಿಂದ ಮೊನ್ನೆ ನಡೆದಂತಹ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಗೆ ಸ್ಪಷ್ಟೀಕರಣ ಮಾಡಬೇಕು. ವಿರೋಧಪಕ್ಷದ ಸದಸ್ಯರಾದ ನಮಗೆ ಮಾತನಾಡಬೇಕೆಂಬ ಮನಸ್ಸು ಇರಲಿಲ್ಲ. ಇದರೆ ಆ ವಿಷಯ ಬಂದಾಗ ವಿರೋಧ ಪಕ್ಷದಲ್ಲಿ ಯಾರು ಯಾರು ಮಾತನಾಡಬೇಕು. ಎಲ್ಲಾ ಪಕ್ಷದವರು ಮಾತನಾಡಬೇಕೇ ಹೇಗೆ ಎನ್ನುವ ವಿಷಯ ಪ್ರಸ್ತಾಪಕ್ಕೆ ಬಂತು. ಆದರೆ ಪಾರ್ಲಿಮೆಂಟಿನಲ್ಲಿ

ಶ್ರೀ † ಎಚ್. ಡಿ. ದೇವೇಗೌಡ .— (ಹೊಳೇನರಸೀಪುರ)

ವಿರೋಧಪಕ್ಷದವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಅಲ್ಲಿ ಪ್ರೈಮಿನಿಸ್ಟರು, ರಾಷ್ಟ್ರಾಧ್ಯಕ್ಷರು ಮತ್ತು ಸ್ಪೀಕರ್ ಅವರು ಮಾತನಾಡುತ್ತಾರೆ ಎಂದು ತಿಳಿಸಿದರು. ನಾನು ಮಾತನಾಡಲೇ ಬೇಕು ಎಂದು ಹೇಳಲಿಲ್ಲ. ಮಾತನಾಡಬೇಕಾದರೆ ಎಲ್ಲಾ ವಿರೋಧಪಕ್ಷದ ಗುಂಪಿನ ಮುಖಂಡರೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ, ಇಲ್ಲದಿದ್ದರೆ ನಮ್ಮನ್ನು ಕೈಬಿಡಿ ಎಂದು ಹೇಳಿದೆ. ಅದು ಆ ರೀತಿ ಆಗದೆ ಈಗ ವಿರೋಧ ಪಕ್ಷದಲ್ಲಿ ಅತೃಪ್ತಿ ಪ್ರಾರಂಭವಾಗಿದೆ. ಅಸಮಾಧಾನ ಪ್ರಾರಂಭವಾಗಿದೆ. ಇದರಿಂದ ನಮ್ಮ ಪಕ್ಷದವರು ಅಧಿಕೃತ ಸಮಾರಂಭಗಳಲ್ಲಿ ಭಾಗವಹಿಸಲಿಲ್ಲ. ಅದು ಆಗಬಾರದಾಗಿತ್ತು. ಆದ್ದರಿಂದ ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ವಿವರಣೆ ಕೊಡುವುದು ಸೂಕ್ತ. ಅದಕ್ಕಾಗಿ ಗವರ್ನರ್ ಅವರು ಏರ್ಪಡಿಸಿದ ಟೀಗೆ ಬರಲಿಲ್ಲ ಅವರೇನು ಅಪರಾಧ ಮಾಡಿದ್ದಾರೆ? ಅವರೇನೂ ಅಪರಾಧ ಮಾಡಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ . "ಕೊಶ್ಚನ್ ಅವರನ್ನು" ಎಕ್ಸ್‌ಟೆಂಡ್ ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ .— ಈ ಘಟನೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ವಿವರಣೆ ಕೊಡುವುದು ಸೂಕ್ತ. ಈ ಒಂದು ಕಹಿ ವಾತಾವರಣ ಮುಂದುವರಿಯಬಾರದು. ಎಲ್ಲಾ ಪಕ್ಷದವರ ಸಹಕಾರದಿಂದ ಚೆನ್ನಾಗಿರತಕ್ಕ ವಾತಾವರಣದಲ್ಲಿ ಈ ರಾಜ್ಯದಲ್ಲಿ ಕಾರ್ಯಕ್ರಮಗಳು ನಡೆಯಬೇಕೆಂಬ ಸದುದ್ದೇಶದಿಂದ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ವಿವರಣೆಯನ್ನು ಕೊಟ್ಟು ಇದರ ಬಗೆ ಅವರು ತಮ್ಮ ವಿಷಾದವನ್ನು ವ್ಯಕ್ತಪಡಿಸುವಂಥಾದ್ದು ಸೂಕ್ತ ಎಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ಪೇಟೆ) :— ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಈಗ ವಿರೋಧ ಪಕ್ಷದಲ್ಲಿ ಅನೇಕ ಪಾರ್ಟಿಗಳು ಇವೆ. ನಮಗೆ ಸ್ವಾತಂತ್ರ್ಯ ಬಂದ 25ನೇ ವರ್ಷದ ಸಮಾರಂಭದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರೂ ಪ್ರತಿಯೊಬ್ಬರೂ 5 ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕಾಗಿತ್ತು. ಆದರೆ ತಾವು ಆ ರೀತಿ ಮಾಡದೆ ಕೆಲವರಿಗೆ ಮಾತ್ರ ಭಾಷಣ ಮಾಡುವುದಕೆ ಅವಕಾಶ ಕೊಟ್ಟು ಅವರಿಗೆ ಅವರಿಗೇ ಸೀಮಿತ ಮಾಡಿ ಮಡಿವಂತಿಕೆ ಮಾಡಿ ಅವರಿಗೆ ಮಾತ್ರ ಆಹ್ವಾನವನ್ನು ಕಳುಹಿಸಿದ್ದಾರೆ.

ಅಧ್ಯಕ್ಷರು .— ಈ ಬಗೆ ಎಲ್ಲರನ್ನೂ ಕರೆಸಿಕೇಳಿದ್ದೇವೆ. ಅದಕ್ಕೆ ಎಲ್ಲರೂ ಒಪ್ಪಿಕೊಂಡಿದ್ದಾರೆ. ಕೆಲವರಿಗೆ ಮಾತ್ರ ಏನೂ ಅದು ಸೀಮಿತ ಮಾಡಿಲ್ಲ. ಅದರಲ್ಲಿ ಯಾವ ಮಡಿವಂತಿಕೆಯನ್ನೂ ಮಾಡಿಲ್ಲ. ಎಲ್ಲರನ್ನೂ ಸೇರಿಸಿಕೊಂಡು ಮಾಡಿರುವ ಕೆಲಸ. ಇದು ಎಲ್ಲರೂ ಆಚರಿಸುವ ಹಬ್ಬ ಅದರಲ್ಲಿ ಮಡಿವಂತಿಕೆಯ ಪ್ರಶ್ನೆ ಏನೂ ಇಲ್ಲ,

ಶ್ರೀ ವಾಟಾಳ್ ನಾಗರಾಜ್ .— ಆ ಹಬ್ಬವನ್ನು ಆಚರಣೆ ಮಾಡುವ ಬಗ್ಗೆ ನನ್ನ ವಿರೋಧವೇನೂ ಇಲ್ಲ. ನಾನು ಆ ದಿವಸ ಈ ಸಭೆಗೆ ಬಂದು ಸುಮ್ಮನೆ ಗಂಭೀರವಾಗಿ ಕುಳಿತುಕೊಂಡಿದ್ದು ತಮ್ಮ ಭಾಷಣವನ್ನು ಕೇಳಿ 12 ಗಂಟೆಗೆ ಎದ್ದು ಹೊರಟು ಹೋದೆ. ಈ ಸಭೆಯಲ್ಲಿರತಕ್ಕ ವಿರೋಧಪಕ್ಷದಲ್ಲಿ ಅನೇಕ ರಾಜಕೀಯ ಪಕ್ಷಗಳು ಇವೆಯೆಂದು ತಿಳಿದುಕೊಂಡು ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರಿಗೂ ಈ ಸಮಾರಂಭದಲ್ಲಿ ಭಾಗವಹಿಸಲು ಅವಕಾಶವನ್ನು ಕೊಡಬೇಕಾಗಿತ್ತು. ಆದರೆ ಕೆಲವರನ್ನು ಮಾತ್ರ ಇದರಲ್ಲಿ ಸೇರಿಸಿಕೊಂಡು ಮಡಿವಂತಿಕೆ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಬೇರೆ ಪೊಲಿಟಿಕಲ್ ಪಾರ್ಟಿಯವರನ್ನು ಕನ್‌ಸಲ್ಟ್ ಮಾಡಿದಹಾಗೆ ಕಾಣಲಿಲ್ಲ. ನಾನು ಅದರ ಬಗ್ಗೆ ಆಕ್ಷೇಪಣೆ ಮಾಡುವ ಪ್ರಶ್ನೆಯೇನೂ ಇಲ್ಲ. ಆದ್ದರಿಂದ ಈ ತಪ್ಪನ್ನು ಸರ್ಕಾರದ ಮೇಲೆ ಹೊರಿಸಬೇಕೇ ಬಿಡಬೇಕೇ ಎಂಬ ಒಂದು ದೊಡ್ಡ ಪ್ರಶ್ನೆ ನಮ್ಮ ಮುಂದೆ ಬಂದಿದೆ.

ಶ್ರೀ ಡಿ. ದೇವರಾಜ್ ಅರಸ್ .— ನಿಮ್ಮ ಮನಸ್ಸು ಏನು ಹೇಳುತ್ತದೆ ಎಂಬುದನ್ನು ಹೇಳಿ.

ಶ್ರೀ ವಾಟಾಳ್ ನಾಗರಾಜ್ .— ಇನ್ನೊಂದು ವಿಚಾರವೇನೆಂದರೆ ಆವತ್ತು ನಡೆದದ್ದು ಸಾರ್ವಜನಿಕ ಸಮಾರಂಭವೇ ಅಥವಾ ಜಾಯಿಂಟ್ ಸೆಶನ್ನೇ ?

ಅಧ್ಯಕ್ಷರು .— ತಮಗೆ ಇನ್ನೂ ಅರ್ಥವಾಗಲಿಲ್ಲವೇ ?

ಶ್ರೀ ವಾಟಾಳ್ ನಾಗರಾಜ್ .— ಏಕೆಂದರೆ ಪತ್ರಿಕೆಯಲ್ಲಿ ಜಾಯಿಂಟ್ ಅಧಿವೇಶನ ನಡೆಯಿತು, ಎಂದು ಹಾಕಿದ್ದಾರೆ. ಆದ್ದರಿಂದ ಅದು ಬಹಿರಂಗ ಸಭೆಯೋ ಅಥವಾ ಶಾಸನ ಸಭೆಗೆ ಸಂಬಂಧಪಟ್ಟದ್ದೋ ಎಂದು ನನಗೆ ಗೊತ್ತಾಗಲಿಲ್ಲ. ಆವತ್ತಿನ ದಿವಸ ನಾನು ಆ ಒಂದು ಒಳ್ಳೆಯ ಸಮಾರಂಭದಲ್ಲಿ ಏನಾದರೂ, ಮಾತನಾಡಿದರೆ, ಅದರಿಂದ ಅಪಾರ್ಥವಾಗಬಹುದೆಂದು ಬಾಯಿ ಮುಚ್ಚಿಕೊಂಡು ಕೂತಿದ್ದೆ. ಆದ್ದರಿಂದ ತಾವು ಆ ದಿನ ಮಾಡಿರತಕ್ಕಂತಹ ನೀತಿ ಸರಿಯಲ್ಲ ಮತ್ತು ಬಾಕಿ ಉಳಿದ ವಿರೋಧ ಪಕ್ಷಗಳನ್ನು ತುಳಿದಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ವಿವರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ .— ಮಾನ್ಯ ಅಧ್ಯಕ್ಷರೇ, ಈಗ ವಿರೋಧ ಪಕ್ಷದ ಇತರ ಪಕ್ಷಗಳಿಗೆ ಅವಕಾಶ ಕೊಟ್ಟಿಲ್ಲವೆನ್ನುವುದರ ಬಗ್ಗೆ ನಮ್ಮ ಮಿತ್ರರು ಈಗಾಗಲೇ ಹೇಳಿದ್ದಾರೆ. ಅದರ ಬಗ್ಗೆ ಮುಖ್ಯ ಮಂತ್ರಿಯವರು ಉತ್ತರ ಹೇಳಬಹುದು. ಆದರೆ ನಾನು ಹೇಳುವುದಾದರೂ ಇಷ್ಟೆ. ಮೊನ್ನೆಯ ಸಮಾರಂಭಕ್ಕೆ ನಮ್ಮ ನಗರದ ಮೇಯರ್‌ರವರು ಸಹ ಬಂದಿದ್ದರು. ಆದರೆ ಅವರನ್ನು ತೆಗೆದುಕೊಂಡು ಹೋಗಿ ಒಂದು ಮೂಲೆಯಲ್ಲಿ ಕೂರಿಸಿದ್ದೀರಿ. ಆದಲ್ಲದೆ ಅವರು ತಮ್ಮ ಯೂನಿಫಾರ್ಮನ್ನು ಹಾಕಿಕೊಂಡು ಬಂದಿದ್ದರು. ಇದರಿಂದ ಮೇಯರಿಗೆ ಅವಮಾನ ಮಾಡಿದ ಹಾಗೆ ಆಗಿದೆ. ಇವತ್ತು ಮೇಯರಿಗೆ ಅವಮಾನ ಮಾಡಿದರೆ ಇಡೀ ಬೆಂಗಳೂರಿನ ನಾಗರೀಕರಿಗೆ ಅವಮಾನ ಮಾಡಿದ ಹಾಗೆ ಆಗುತ್ತದೆ. ಅವರು ಡ್ರೆಸ್ ಹಾಕಿಕೊಳ್ಳದೆ ನನ್ನ ಹಾಗೆ ಡ್ರೆಸ್ ಹಾಕಿಕೊಂಡು ಬಂದಿದ್ದರೆ ಎಲ್ಲಿ ಬೇಕಾದರೂ ಕೂತುಕೊಳ್ಳಬಹುದಿತ್ತು. ಆದರೆ ಡ್ರೆಸ್ ಬೇರೆ ಹಾಕಿಕೊಂಡು ಬಂದಿದ್ದರು ನಾನು ಸಹ ಅವರನ್ನು ಇದರ ಬಗ್ಗೆ ಟೀಕೆ ಮಾಡಿದ್ದೇನೆ. ನೀವು ಇಡೀ ಬೆಂಗಳೂರಿನ ನಾಗರೀಕರಿಗೆ ಅವಮಾನ ಮಾಡಿದ್ದೀರಿ ಎಂದು ಅದೇ ದಿವಸ ಟೀಕೆ ಮಾಡಿದ್ದೇನೆ. ಆದ್ದರಿಂದ ಇನ್ನು ಮೇಲಾದರೂ ಯಾವುದೇ ಸಮಾರಂಭವಾದಾಗೂ ಮೇಯರನ್ನು ಕರೆಸಿದರೆ ಅವರಿಗೆ ಸರಿಯಾದ ಸ್ಥಾನವನ್ನು ಒದಗಿಸಿರಿ, ಇಲ್ಲದಿದ್ದರೆ ಅವರನ್ನು ಅಂಥ ಸಮಾರಂಭಗಳಿಗೆ ಕರೆಯಲೇಬೇಡಿ. ನಾನು ಸಹ ಹಿಂದೆ ಮೇಯರ್ ಆಗಿದ್ದಾಗ ಏರೋಡ್ರೋಮಿನಲ್ಲಿ ಒಂದು ಸಂದರ್ಭದಲ್ಲಿ ಹಿಂದೆ ಬೀಳುವ ಮೊದಲು ಹೋಗಿ ಅತಿಥಿಗಳಿಗೆ ಹಾರಾರ್ಪಣೆಯನ್ನು ಮಾಡಬೇಕಾಗಿ ಬಂತು. ಆದ್ದರಿಂದ ತಮ್ಮ ಮೂಲಕ ಹೇಳಿಕೊಳ್ಳುವುದೇನೆಂದರೆ ಇನ್ನು ಮೇಲೆಯಾದರೂ ಯಾವುದಾದರೂ ಸಮಾರಂಭ ಬಂದಾಗ ಆದಕ್ಕೆ ಮೇಯರನ್ನು ಕರೆದರೆ ಅವರಿಗೆ ಸೂಕ್ತ ಸ್ಥಾನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ, ಎಸ್. ಕೃಷ್ಣನ್ .— ನಾನಾದರೂ ಕೇಳಿಕೊಳ್ಳುವುದು ಇಷ್ಟೆ. ಮಾನ್ಯ ದೇವೇಗೌಡರವರಿಗೆ ಆಗಿರುವಂತಹ ಮನೋವೇದನೆಯನ್ನು ಈಗ ಹೇಳಿದರು. ಇದರ ಬಗ್ಗೆ ಇತ್ಯರ್ಥ ಮಾಡುವಾಗ ನಾನು ಸಹ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದ್ದೆ. ಆಗ ಎಲ್ಲಾ ವಿರೋಧ ಪಕ್ಷದಲ್ಲಿರುವ ರಾಜಕೀಯ ಪಕ್ಷಗಳಿಗೂ ಅವಕಾಶ ಕೊಡಬೇಕೆಂದು ಹೇಳಿರುವವರಲ್ಲಿ ನಾನೊಬ್ಬ. ಆದರೆ ಪಾರ್ಲಿಮೆಂಟಿನಲ್ಲಿ ಆ ರೀತಿ ಇಲ್ಲ; ಅಲ್ಲಿ ಯಾವ ರೀತಿ ನಡೆಯುತ್ತದೆಯೋ, ಅದೇ ರೀತಿ ನಾವು ಸಹ ಇಲ್ಲಿ ಅನುಸರಿಸಬೇಕಾಗುತ್ತದೆಂದು ಇವರು ಹೇಳಿರುವುದರಿಂದ ನಾನು ಅದನ್ನು ಪುನಃ ಒತ್ತಾಯ ಮಾಡಿದರೆ ಏನೂ ಬೆಲೆ ಸಿಗಲಾರದು ಎಂದು ಅದರ ಬಗ್ಗೆ ಹೆಚ್ಚು ಒತ್ತಾಯ ಮತ್ತೆ ಮಾಡಲಿಲ್ಲ. ನಾವು ಆ ರೀತಿಯ ಒಂದು ಸತ್_ಸಂಪ್ರದಾಯವನ್ನು ಹಾಕಿಕೊಂಡಿದ್ದರೆ ಚೆನ್ನಾಗಿತ್ತು. ಪಾರ್ಲಿಮೆಂಟಿನಲ್ಲಿ ನಡೆದ ರೀತಿಯಲ್ಲಿಯೇ ಇಲ್ಲಿಯೂ ನಡೆಯಬೇಕೆಂದೇನೂ ಇಲ್ಲ. ಅಂತೂ ನಡೆದದ್ದು ನಡೆದು ಹೋಯಿತು. ಆದರೆ ಹೆಗ್ಗಡೆಯವರ ಬಗ್ಗೆ ಹೇಳುವುದಾದರೆ ಅವರು ಭಾಷಣ ಮಾಡಲು ತಯಾರು ಮಾಡಿಕೊಂಡು ಬಂದಿದ್ದರು. ಆದರೆ ಅವರ ಬಗ್ಗೆ ಏಕೆ ಹಾಗೆ ಆಯಿತು ಎಂದು ನನಗೆ ಗೊತ್ತಾಗಲಿಲ್ಲ. ಆಗ ಕೆಲವರು ೫ ನಿಮಿಷ ತೆಗೆದುಕೊಂಡು ಮಾತನಾಡಿದರು, ಕೆಲವರು ೬ ನಿಮಿಷ ತೆಗೆದುಕೊಂಡರು. ಆದರೆ ಒಂದು ಸಲ ಲಿಸ್ಟಿನಲ್ಲಿ ಹೆಸರು ಹಾಕಿ ಅವರಿಗೆ ಅವಕಾಶ ಕೊಡದಿದ್ದುದು ಅದು ಅಷ್ಟು ಗೌರವ ತರುವಂಥದಲ್ಲ ಮತ್ತು ಸರಿಯಾದುದೂ ಅಲ್ಲ. ಆ ರೀತಿಯಲ್ಲಿ ಮಾಡಬಾರದಾಗಿತ್ತು ಎಂದು ಮಾತ್ರ ಹೇಳುತ್ತೇನೆ.

† SRI C. M. ARUMUGAM .— (K G F) Madam Speaker, the function on the 14th Angust 1972 was held in the Assembly Chamber. The invitation for this function was sent out in the name of the Secretary, Mysore Legislatnre. When the invitat on has gone in the name of the Secretary, Mysore Legislature, naturally one will construe it as a Joint Session of both the Houses of Legislature and that the Governor

SRI C. M. ARUMUGAM.—

would address the Joint sittings of the House. The agenda drawn up for this function was something novel. If the business of the fnnction had been drawn up on the lines of Parliament, then the Governor and the Chief Minister could have addressed the gatheaing. In the Parliament, we have seen the President and the Vice-President addressing the Parliament. At least that pattern should have been followed in our House. Instead of giving a chance to all the leaders of the various political parties in the House, the Leader of the Opposition *viz.*, Sri H. D. Devegowda, should have been given a chance to speak on that occasion. When the Chief Ministar spoke the other day in the function, he should have made a reference to Dr. Ambedkar who is the father of the Indian Constitution. His Photo should have been hung in the Assembly on that particular day. I know that a photo of Dr. Ambedkar is kept is the Parliament. I wish the Chief Minister should have made a reference to Dr. Ambedkar on that auspicious occasion. I would have felt happy if Sri Ramakrishna Hegde and Sri. Vatal Nagaraj were also given a chance to speak on that occasion.

A group photo of both the Houses to Legislatur shouid hava been taken in order to mark the SilverJubiles Celebration of our Country indedendence. This would have served as a mounment for the future generation. Some of us who are above 45 years of age will not be present when the Golden Jubliee of our country's Independence would be celebrated. the people would have remembered the young Ministers of Sri D. Devarnj Urs Cabinet

But not others. That is way they should have been given a chance to speak. In all fairness, some of us who represent big or small farifies for the time being could have been given a chance to speak. This chance was not given. There is no good in representing that lapse now. Sri Ramakrishna Hegde was made to sit next to me He had a writtan speech ready in his hand. He came in this Ceremonial dress to make a speech. I asked him in what language he would like to speak. He replied that he would speak in Kannada.

There is another point worth mentioning (in this connection). As we all know, the Speaker's Chair is meant for the Speaker alone. But on that day the Governor was sitting on it. Supposing the Governos was given some other Chair that the Speeaker's then the Ch f Minister should have spoken and afterwards Sri H. D. Devegowda. It war about 11-58 or 12 'O' Clock. At that time, the Private Secretary to the Speaker came and told Sri Ramakrishna Hegde that he could speak after the observation fo two minutes silence. I over-heard this. I was with Sri Ramakrishna Hegde only. It was past 12. We made a request that we too could bs allowed to speak. But we were told that

timings will be adhered to strictly. What happened afterwards ? Istead of 2 minutes silence something about 3 minutes were spent. You stood in silence and immediately the national anthem started. Although I wished to say sometaing, I did not want to intervenue in the middle. All of us stood and went away. Some of us protested for the omission that the hon. member included in the agenda was not given a chance to speak. Some of us could have raised objeetion then only and stopped the singing of National Anthem. Two members of the Congress 'O' were in the list of Speakers. This is not fair. Two members of the same party should not have been given chance to speak. It is a differ nt matter whether both of them spoke or not. Before adding two members of the same Party you could have thought over and included some age man- 70 or 72 years' old. You could have included some old man in the list. The senior-most man who had gone to Jill or a political sufferer could have been thought of. He could have been garlanded. The where function went on in a mechanical way. Sri Devegowda could garlanded the Speaker and the Chief Minister, and I could have garlanded Sri Deve Gowda. Sri Naganna was telling that our Mayor has beeh ignored. There is one more Mayor and that is Dharwar-Hubli Maynr. He too should have been invited according to Sri Naganna.

Sri K. M. NAGANNA .— The Mayor is the first citizen of the city of Bangalore. The Chief Minister is not the first citizen of Bangalore.

SRI C. M. ARUMUGAM .— He is raising this point because you made it neither a joint session nor a common function. If you had made it a common fnnction inviting all other to speak, probably my submission would have been to shift the venue. This is all what I felt. The fiast point is the Opposition parties were not included in the agenda to make speeches and the second point is a member was included in the agenda to speak but was deprived from making his speech. This is what we felt.

ಶ್ರೀ ಎಚ್ ಎನ್ ಸಿದ್ದಪ .— ನಾನು ಬೇರೆ ವಿಷಯವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷಿಣಿಯವರಿಗೆ ನನ್ನ ಒಂದು ಮನವಿ. ಮೊನ್ನೆ ನಡೆದ ಕಾರ್ಯಕ್ರಮವೇ ಒಟ್ಟಿನಲ್ಲಿ ಕಲಸು ಮೇಲೋಗರದಂತೆ ನಡದಿದೆ. ಆಹ್ವಾನಿತರೆಲ್ಲರೂ ಮತ್ತು ಸದಸ್ಯರು ಒಂದೇ ಗೇಟಿನಲಿ ಬರುವಂತೆ ವ್ಯವಸ್ಥೆ ಮಾಡಿದ್ದಾರೆ. ಇದು ಜಲಿಯನ್ ವಾಲಾಬಾಗ್‌ನಂತೆ ಆಯಿತೆಂದು ಹೇಳಬಹುದು.

ಅಧ್ಯಕ್ಷರು .— ಜಲಿಯನ್ ವಾಲಾಬಾಗ್ ಇವೆಲ್ಲಾ ಇಲ್ಲಿ ಏಕೆ ಬರಬೇಕು ? ಆ ರೀತಿ ಇಲ್ಲಿ ಮಾತನಾಡುವುದು ಸರಿಯಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ — ಏಕೆಂದರೆ, ಆಹ್ವಾನಿತರಲ್ಲಿ ಅನೇಕರಿಗೆ ಸ್ಥಳಾವಕಾಶ ಸಾಕಷ್ಟು ಇರಲಿಲ್ಲ. ಈ ಫಂಕ್ಷನ್ನಿಗೆ ಸುಮಾರು ೨-೩ ಸಾವಿರ ಜನರಿಗೆ ಇನ್‌ವಿಟೇಷನ್ ಕೊಟ್ಟಿದ್ದಾರೆಂದು ಕಾಣುತ್ತದೆ. ಸೀಟಿಂಗ್ ಅಕಾಮಡೇಷನ್ ವ್ಯವಸ್ಥೆಯೂ ಸರಿಯಾಗಿ ಇರಲಿಲ್ಲ. ಎಲ್ಲಾ ಕಲಸುಮೇಲೋ

† Azteriuls indicete that remerks or specehes leane not been recevided by the member concerned.

ಶ್ರೀ ಎಚ್. ಎಸ್. ಸಿದ್ದಪ್ಪ .—

ಗರವಾಗಿತ್ತು. ಯಾರ್ಯಾರು ಎಲ್ಲೆಲ್ಲಿ ಕುಳಿತುಕೊಳ್ಳಬೇಕೆಂಬುದೇ ಸರಿಯಾಗಿ ಗೊತ್ತಾಗಲಿಲ್ಲ. ಎಷ್ಟೋ ಜನ ಹೆಂಗಸರು ಮತ್ತು ಮಕ್ಕಳು ಅಳುತ್ತಾ ಹೋದರು. ಅವರಿಗೆ ಈ ಸಮಾರಂಭವನ್ನು ನೋಡಲಿಕ್ಕೆ ಅವಕಾಶವಾಗದೆ ನಿರಾಶರಾದರು. ಇನ್ನು ಮುಂದೆ ಇಂಥ ಸಮಾರಂಭಗಳಲ್ಲಿ ಈ ರೀತಿ ಆಗಬಾರದೆಂದು ನಾನು ಸಲಹೆ ಮಾಡುತ್ತೇನೆ

† ವಿಶ್ವನಾಥರೆಡ್ಡಿ .— (ಯಾದ್‌ಗೀರ್) ಸನ್ಮಾನ್ಯ ಅಧ್ಯಕ್ಷಣಿಯವರೇ, ಮೊನ್ನೆ ಆದಂಥ ಘಟನೆ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದು ನನಗನ್ನಿಸುತ್ತದೆ. ಇಂತಹ ಸಿಲ್ವರ್ ಜೂಬಿಲಿ ಫಂಕ್ಷನ್ ೨೫ ವರ್ಷಗಳಿಗೊಂದುಸಾರಿ ಬರುತ್ತದೆ. ಇಂತಹ ಸಮಾರಂಭಗಳನ್ನು ನಾವು ಮಾಡುವಾಗ ಯಾವಾಗಲೂ ಪ್ರಜಾಪ್ರಭುತ್ವದ ಸತ್ಸಂಪ್ರದಾಯಗಳನ್ನು ನಾವು ಸಾಕಷ್ಟು ಗಮನದಲ್ಲಿಟ್ಟುಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಜಾಯಿಂಟ್ ಸೆಷನ್ ದೃಷ್ಟಿಯಿಂದ ಎರಡು ಸದನಗಳ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಆಸ್ಪದ ಕೊಡಬೇಕಾಗಿತ್ತೊ, ಇಲ್ಲವೋ ಎಂಬ ಮಾತು ಬೇರೆ ಒಂದು ದೃಷ್ಟಿಯಿಂದ ನಾವು ವಿಚಾರ ಮಾಡಿ ಹೇಳುವುದಾದರೆ, ಇಂತಹ ವಿಶೇಷವಾದಂಥ ಸಮಾರಂಭಗಳಲ್ಲಿ ವಿರೋಧ ಪಕ್ಷದ ಗುಂಪುಗಳೆಷ್ಟಿವೆಯೋ ಅವರೆಲ್ಲರಿಗೂ ಈ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗಿತ್ತು. ಆದರೆ ಈ ರೀತಿ ಮಾಡುವುದಕ್ಕಾಗಲಿಲ್ಲ. ಅದರ ಬಗ್ಗೆ ನಾನು ಏನು ಹೇಳುವುದಕ್ಕೂ ಬಯಸುವುದಿಲ್ಲ. ಇಂತಹ ಸಮಾರಂಭದಲ್ಲಿ ವಿರೋಧ ಪಕ್ಷದ ಅಸೆಂಬ್ಲಿ ನಾಯಕರಿಗೂ, ಕೌನ್ಸಿಲ್ ನಾಯಕರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದು ತಪ್ಪೋ, ಒಪ್ಪೋ ಒಟ್ಟಿನಲ್ಲಿ ಅದನ್ನು ಅಜೆಂಡಾದಲ್ಲಿ ಇಡಲಾಗಿತ್ತು. ಅಜೆಂಡಾದಲ್ಲಿ ಇಟ್ಟಮೇಲೂ ಕೂಡ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡದೇ ಇರುವುದು ಒಂದು ದೊಡ್ಡ ಅಪಮಾನಕರವಾದ ಮಾತು. ಏನೋ ಅವಸರವಾಯಿತು, ತೊಂದರೆ ಯಾಯಿತು ಯಾರು ಕೂಡ ಇವರನ್ನು ಮಾತನಾಡಬಾರದೆಂದು ಬಯಸಿರಲಿಲ್ಲ. ಇದರಲ್ಲಿ ಏನೋ ಒಂದು ಅಚಾತುರ್ಯವಾಯಿತೆಂದು ನಾನು ಹೇಳಬಹುದು. ಇಂತಹ ಸಮಾರಂಭಗಳು ಎಷ್ಟೋ ವರ್ಷಗಳಿಗೊಂದು ಸಾರಿ ಬರುತ್ತದೆ. ಇದು ನಮ್ಮ ದೇಶದ, ನಾಡಿನ ಒಂದು ಇತಿಹಾಸದಲ್ಲಿ ಅಮರವಾಗಿ ಉಳಿಯುತ್ತದೆ.

೧-೩೦ ಪಿ.ಎಂ.

ಇಂಥಾದ್ದನ್ನೆಲ್ಲಾ ಮುಂದಿನ ನಮ್ಮ ಪೀಳಿಗೆಯವರು ನೆನೆಸುವಂತಾಯಿತು. ಆದರೆ ಈ ಸಂದರ್ಭದಲ್ಲಿ ನಾನು ಎಂದು ಮಾತನ್ನಾಡಿದರೆ ಅದನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕ್ಷಮಿಸಬೇಕು-ಅದೇನೆಂದರೆ ಸಾಮಾನ್ಯವಾಗಿ ಇಂಥ ದೊಡ್ಡ ದೊಡ್ಡ ಸಂದರ್ಭಗಳಲ್ಲಿ—ಸಮಾರಂಭಗಳಲ್ಲಿ ಪ್ರತಿಯೊಬ್ಬರೂ ತಮತಮಗೆ ನಿಗದಿ ಮಾಡಿರತಕ್ಕ ವೇಳೆಯನ್ನು ಅನುಸರಿಸಿ ಮಾತನಾಡಬೇಕಾಗಿರುವುದರಿಂದ ಅವರು ಎಷ್ಟೇ ದೊಡ್ಡವರಿದ್ದರೂ ತಮ್ಮ ಭಾಷಣವನ್ನು ಬರೆದುಕೊಂಡು ಬಂದು ಅದನ್ನು ಸಭೆಯಲ್ಲಿ ಓದುತ್ತಾರೆ. ಆದರೆ ನೆನ್ನೆಯ ದಿವಸ ನಮ್ಮ ಮುಖ್ಯಮಂತ್ರಿಗಳು ಹಾಗೆ ಬರೆದುಕೊಂಡುಬಾರದೆ ಅವರು ಭಾಷಣ ಮಾಡುವುದಕ್ಕೆ ಪ್ರಾರಂಭ ಮಾಡಿದ್ದರಿಂದ ಆಗ ಅಲ್ಲಿ ಟೈಂ ಕೀಪಪ್ ಆಗಲಿಲ್ಲ. ಆದರೆ ಆಫೀಸಿನಿಂದ ಹೊರಡಿಸಿರತಕ್ಕ ನೋಟೀಸಿನಲ್ಲಿ ಇಂತಿಂಥವರೇ ಭಾಷಣ ಮಾಡಬೇಕೆಂದು ನಿರ್ಧಾರವಾಗಿದ್ದಾಗ ಮೇಲು ಮನೆಯ ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಡದೆ ಇದ್ದದ್ದು ಸರಿಯಾದುದಲ್ಲ. ಆದರೆ ಆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದ ಕಡೆಯಲ್ಲಿ ಒಂದು ಮಾತನ್ನು ಹೇಳಿದರು-ಏನೆಂದರೆ ನಮ್ಮಲ್ಲಿ ಪ್ರಜಾಪ್ರಭುತ್ವ ಸುಸೂತ್ರವಾಗಿ ಮುಂದುವರಿಯಬೇಕಾದರೆ ನಮ್ಮ ಎಲ್ಲರಲ್ಲೂ ಒಂದು ಶಿಸ್ತು, ಸಂಯಮ ಮತ್ತು ತ್ಯಾಗ ಬುದ್ಧಿಯಿಂದ ವರ್ತಿಸಬೇಕಾದ್ದು ಅತ್ಯಗತ್ಯ ಎಂಬುದಾಗಿ ಹೇಳಿದ ಮುಖ್ಯ ಮಂತ್ರಿಗಳೇ ತಮ್ಮ ಮೇಲೆ ಆ ದಿವಸ ಒಂದು ಶಿಸ್ತು ಅಥವಾ ಬಂಧನವನ್ನು ಹಾಕಿಕೊಳ್ಳದೆ ಅವರು ಬೇರೆ ಜನಕ್ಕೆ ಅದನ್ನು ಬೋಧೆ ಮಾಡಿದ್ದು ಅಷ್ಟು ಸರಿಕಾಣುವುದಿಲ್ಲ. ಅವರಿಗೆ ಆ ದಿವಸ ಕೊಟ್ಟಿದ್ದ ವೇಳೆಯನ್ನು ಅವರು ಉಲ್ಲಂಘನೆ ಮಾಡಿ ಸುಮಾರು ಅವರ ಭಾಷಣ ೧೪ ನಿಮಿಷಗಳಕಾಲ ನಡೆಯಿತ್ತೆಂದು ತಿಳಿದು ಬರುತ್ತದೆ. ಹೀಗೆ ಇವರು ವೇಳೆಯನ್ನು ಕೀಪಪ್ ಮಾಡದೆ ಇದ್ದ ಕಾರಣ ಮಾನ್ಯ ರಾಮಕೃಷ್ಣ ಹೆಗ್ಗಡೆಯವರಿಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಲಿಲ್ಲ. ಅವರು "ಓ" ಕಾಂಗ್ರೆಸ್ಸಿನಲ್ಲೇ ಇರಬಹುದು. ಆದರೆ ಅಜೆಂಡಾದಲ್ಲಿ ಸೇರಿದ ನಂತರ ಅವರಿಗೆ ಅವಕಾಶ ತಪ್ಪಿಸಿದ್ದು ದೊಡ್ಡ ಅಪರಾಧ ಹಿಂದೆ ಆ "ಓ" ಪಕ್ಷದವರೂ ಕೆಲವು ಅನ್ಯಾಯಗಳನ್ನು ಹೀಗೆ ಮಾಡಿರಬಹುದು. ಆದರೆ ಅದೇ ತಪ್ಪನ್ನು ಈ ದಿವಸ ಈ ಪಕ್ಷದವರೂ ಮಾಡಿದಹಾಗೇ ಆಗಿದೆ. ಆದರೆ ಇಂಥ ತಪ್ಪನ್ನು ನಮ್ಮ ಇತಿಹಾಸದಿಂದ ಅಳಿಸಿ ಹಾಕಬೇಕೆಂದು ಈ ದಿವಸ ಇವರು ತಮ್ಮ ಕ್ಷಮಾಪಣೆ ಕೇಳಬಹುದು. ಆದರೆ ಇಲ್ಲಿ ನಡೆದಿರತಕ್ಕಂಥ ಘಟನೆ ಅಷ್ಟು ಹಗುರವಾಗಿ ಕ್ಷಮಿಸುವಂಥಾದ್ದಲ್ಲ. ಇದರ ಬಗ್ಗೆ ಒಂದು ಸೂಕ್ತ ನಿರ್ಣಯವನ್ನು ಈ ಸಭೆ ತೆಗೆದುಕೊಳ್ಳಬೇಕಾಗಿದೆ. ಇಲ್ಲಿ ಈ ದಿವಸ ನಡೆದಿರುವುದು ಪ್ರಜಾ

ಪ್ರಭುತ್ವದ ಕೊಲೆ. ಆದರೆ ಆ ದಿವಸ ಮಾತನಾಡಿದ ಮಹನೀಯರಲ್ಲಿ ಯಾರೋ ಒಬ್ಬರು ಮಾತ್ರ ಆ ಸುಭಾಷ್ ಚಂದ್ರಬೋಸರು ಹೆಸರನ್ನು ಹೇಳಿದರು. ಬಾಕಿಯುವರು ಯಾರೂ ಹೇಳಲಿಲ್ಲ. ಮಹಾತ್ಮಾ ಗಾಂಧಿಜಿಯವರೆಷ್ಟು ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದರೋ ಅಷ್ಟೇ ಸುಭಾಷ್ ಚಂದ್ರಬೋಸರೂ ದುಡಿದಿದ್ದಾರೆ. ಆದುದರಿಂದ ನಾವು ಇಂಥ ಪ್ರತಿಯೊಂದು ಸಂದರ್ಭದಲ್ಲೂ ಗಾಂಧೀಜಿಯವರ ಹೆಸರನ್ನು ಹೇಳಿದ ನಂತರ ಸುಭಾಷ್ ಚಂದ್ರಬೋಸರ ಹೆಸರನ್ನು ಹೇಳತಕ್ಕದ್ದು ಅತ್ಯಗತ್ಯ ಎಂದು ಹೇಳುವುದರ ಜೊತೆಗೆ ಈ ಶಾಸನ ಸಭಾ ಮಂದಿರದಲ್ಲಿ ಸುಭಾಷ್ ಚಂದ್ರಬೋಸರ ಒಂದು ಫೋಟೋ ಕೂಡ ಇಡಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ದೇವರಾಜೇ ಅರಸ್ (ಮುಖ್ಯ ಮಂತ್ರಿಗಳು):—

ಮಾನ್ಯ ಅಧ್ಯಕ್ಷರೇ; ಮೊನ್ನೆ ನಡೆದಂಥ ಸಮಾರಂಭ ಮತ್ತು ಅದಕ್ಕೆ ಕೊಟ್ಟಿದ್ದಂಥ ಆಹ್ವಾನ ಇವುಗಳ ಬಗ್ಗೆ ಇಲ್ಲಿಯವರೆಗೂ ಪ್ರಸ್ತಾಪ ನಡೆದುದನ್ನು ಕೇಳಿದೆ. ಆದರೆ ಪ್ರಿಂಟಾಗಿರತಕ್ಕ ಆಹ್ವಾನ ಪತ್ರಿಕೆಯಲ್ಲಿ ಹೀಗಿದೆ.—

"The Speaker, Legislative Assembly, the Chirman Legislative Council and the Chief Minister of Mysore cordially invite you to Celebrate the 25th Anniversary of Independence of India at 23-20 Hr, on Monday 14th August 197 at the Legislataive Assembly Ceamberss Vidhana Souda, Bangalore.-1 V.B. Deshmukh, Deputy Secretary."

It is not in the name of the Secretary of the Legislature.
ಸಭೆಯ ಅವಗಾಹನೆಗೆ ಈ ವಿಚಾರವನ್ನು ತರಲು ನಾನು ಇದನ್ನು ಓದಿದೆನು. ಆದರೆ ಇದರಲ್ಲಿ ಯಾರ್ಯಾರ ಜವಾಬ್ದಾರಿ ಎಷ್ಟೆಷ್ಟು ಎಂಬುದನ್ನು ನಾನೀಗ ಚರ್ಚೆಮಾಡಿ ಆ ಪ್ರಾಮುಖ್ಯತೆಗೆ ಹೆಚ್ಚಿನ ಗಮನ ಕೊಡುವುದಕ್ಕೆ ನಾನೀಗ ಹೋಗುವುದಿಲ್ಲ. ಇದು ಮೂರು ಜನರ ಹೆಸರಿನಲ್ಲಿ ಅಚ್ಚಾಗಿದೆ. ಸಭೆ ನಡೆಯುವುದಕ್ಕೆ ಮುಂಚೆ ಮಾನ್ಯ ಅಧ್ಯಕ್ಷರಿಗೇ ಗೊತ್ತಿರುವ ಹಾಗೆ, ತಾವು ನಮ್ಮನ್ನು ಕರೆಸಿ ಈ ಸಮಾರಂಭವನ್ನು ಹೇಗೆ ನಡೆಸಬೇಕು ಅನ್ನುವುದನ್ನೆಲ್ಲಾ ಆ ದಿವಸ ಅಲ್ಲಿ ಚರ್ಚೆ ಮಾಡಿ ಆ ವೇಳೆಯಲ್ಲಿ ಇಂತಿಂಥವರೇ ಮಾತನಾಡಬೇಕು ಎಂಬುದು ಆಗ ಅಲ್ಲಿ ತೀರ್ಮಾನವಾಯಿತು. ಆದರೆ ಆ ಸಂದರ್ಭದಲ್ಲಿ ಮಾನ್ಯ ಕೃಷ್ಣನ್‌ರವರು ಹೇಳಿದ್ದೂ ಸರಿಯೇ. ಅವರು ಹೇಳುವಂತೆ ವಿರೋಧ ಪಕ್ಷಗಳಿಗೆಲ್ಲಾ ಅವಕಾಶ ಕೊಟ್ಟರೆ ವೇಳೆ ಜಾಸ್ತಿಯಾಗುತ್ತದೆ, ಆದರೆ ವಿರೋಧ ಪಕ್ಷದ ನಾಯಕರೇ ಮಾತನಾಡುವುದರಿಂದ ಬೇರೆ ಪಕ್ಷದವರಿಗೇನೂ ಬೇಡ ಎಂಬುದಾಗಿ ತೀರ್ಮಾನವಾಯಿತು. ಇನ್ನು ಕೌನ್ಸಿಲ್ ಪರವಾಗಿ ಮಾತನಾಡುವುದಕ್ಕೆ ಅಲ್ಲಿನ ವಿರೋಧ ಪಕ್ಷದ ನಾಯಕರಿಗೂ, ಅದು ಸರಿಯೋ ತಪ್ಪೋ ಅಂತೂ ಅವಕಾಶವಿತ್ತು. ಆದರೆ ಇಲ್ಲಿ ಈಗ ನಡೆದ ಚರ್ಚೆಯಲ್ಲಿ ಬೇರೇ ಪಕ್ಷಗಳವರಿಗೂ ಮಾತನಾಡುವುದಕ್ಕೆ ಆಗ ಅವಕಾಶ ಕೊಟ್ಟಿದ್ದರೆ ಚೆನ್ನಾಗಿತೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ; ಅದರ ವ್ಯಾಖ್ಯೆ ಮಾಡಿದ್ದಾರೆ. ಆದರೆ ನಾನು ಅದನ್ನು ತಪ್ಪೆಂದು ಹೇಳುವುದಿಲ್ಲ. ಆ ಹಬ್ಬವನ್ನು ಹೇಗೆ ಆಚರಿಸಬೇಕು ಅನ್ನುವುದು ಎಂದು ತಿಳಿದುಕೊಳ್ಳುವುದಕ್ಕೆ ನಮಗೆ ಇದೇ ಮೊದಲನೆಯದು; ಪ್ರಥಮತಃ ಈ ಮಿಡ್ ನೈಟ್ ಸೆಷನ್ನು ಹಿಂದೆ ಕೇಂದ್ರ ಮಟ್ಟದಲ್ಲಿ ಮಾತ್ರ ನಡೆಯುತ್ತೆಂದು ತಿಳಿದು ಬರುತ್ತದೆ. ಅಷ್ಟೇ ಅಲ್ಲದೆ ಈ ಹಬ್ಬದಾಚರಣೆ ಇನ್ನು ಮೊನ್ನೆ ಎಲ್ಲಾ ರಾಜ್ಯಗಳಲ್ಲೂ ನಡೆಯಿತೋ ಇಲ್ಲವೋ ಅದು ಗೊತ್ತಾಗುತ್ತಿಲ್ಲ. ಆದರೆ ನಮಗಿದು ಪ್ರಥಮ; ಹೇಗೆ ಮಾಡಬೇಕೆಂಬುದು ನಮಗೆ ಇದು ಹೊಸದು. ಆದುದರಿಂದ ಈಗ ಇದನ್ನು ಇನ್ನೂ ಬೇರೆ ರೀತಿಯಲ್ಲಿ ಮಾಡಬಹುದಾಗಿತ್ತು ಎಂಬುದಕ್ಕೆ ಕಾಲ ಅವಕಾಶವಿರವಿಲ್ಲ. ನಿಮಗೂ ನಮಗೂ ಇದು ಒಂದು ಹೊಸ ವಿಷಯ. ಆದರೆ ಇನ್ನು ಬೇರೆ ಈ ಸಂದರ್ಭ ಇಂಥದೇ ಒದಗಿದಾಗ ಹೇಗೆ ಇದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂಬುದನ್ನು ಮುಂದಕ್ಕೆ ನಿರ್ಧಾರ ಮಾಡುವುದು ಸುಲಭ. ಈಗ ತಾವೆಲ್ಲರೂ ಕೊಟ್ಟ ಸಲಹೆಗಳನ್ನು ಗಮನದಲ್ಲಿ ಇಟ್ಟುಕೊಳ್ಳಲಾಗುತ್ತದೆ. ಇದರಂತೆ ಮುಂದೆ ಆಚರಣೆಗೆ ತರಬಹುದು. ಆದರೆ ನಮಗೆ ಎಲ್ಲಾ ಇಂಥ ಸತ್ಸಂಪ್ರದಾಯಗಳೂ ಗೊತ್ತಿತ್ತೆಂದು ಯಾರೂ ಹೇಳಲಾರರು. ಇನ್ನು ಮುಂದಕ್ಕೆ ಇಂಥ ಅವಕಾಶಗಳು ಬಿದ್ದಾಗ ತಾವೆಲ್ಲರೂ ಈ ದಿವಸ ಇಲ್ಲ ಒಂದು ತೀರ್ಮಾನಕ್ಕೆ ಬಂದ ಪ್ರಕಾರ ಒಬ್ಬ ತೀರಾ ಹೆಚ್ಚು ವಯಸ್ಸಾದ ಪೊಲಿಟಿಕಲ್ ಸಫರರ್ ಜೊತೆಗೆ ಒಬ್ಬ ಪೂರಾ ಕಿರಿಯನನ್ನು ಅಂದರೆ ಒಬ್ಬರೂ ಪೂರಾ ಹಿರಿಯರಾದರೆ ಇನ್ನೊಬ್ಬರೂ ಪೂರಾ ಕಿರಿಯರಿಗೂ ಅವಕಾಶ ಕೊಡುವುದಕ್ಕೆ ಪ್ರಯತ್ನ ಮಾಡೋಣ:

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು) :—

Whover is the youngest should also speak. Then there are these who do not belong either to the younger generation or the present generation. As you know, you and I already belong to the previous generation. In that way, we can go on adding endlessly.
ಅದೂ ಸರಿಯೆನ್ನೋ. ಅಂತೂ ಒಟ್ಟಿನಲ್ಲಿ ಅಂಥ ಸಂದರ್ಭದಲ್ಲಿ ನಮ್ಮ ಶ್ರೀ ವಾಟಾಳ್‌ರವರು ಅಥವಾ ಇತರೇ ಪಕ್ಷದ ಮುಖಂಡರುಗಳು ಮಾತನಾಡುವುದಕ್ಕೆ ಅವಕಾಶ ಕೊಡದೆ ಅವರಿಗೆ ಒಂದು ಬಂಧನ ಇಟ್ಟರೆ ಅದರಿಂದ ನಮಗೊಂದು ಕಿರೀಟ ಬರುತ್ತೆ ಅನ್ನುವುದಾಗಿ ನಾವೇನೂ ಮಾಡಲಿಲ್ಲ. ಆದರೆ ಆ ದಿವಸ ಅಲ್ಲಿ ಆ ಟೈಂ ಫ್ಯಾಕ್ಟರಿಗೆ ಒಂದು ಮೆರುಗು, ಸೊಬಗು ಮತ್ತು ಗಾಂಭೀರ್ಯ ಉಳಿಯಲಿ ಎಂದು ಹೇಳಿ ಹಾಗೆ ಮಾಡಿದ್ದಾಯಿತು. ಆದರೆ ಅದೇಕೋ ಈ ಸಂದರ್ಭದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಗಾಂಭೀರ್ಯವಾಗಿ ಸುಮ್ಮನೆ ಮೌನದಿಂದ ಕುಳಿತಿದ್ದಾರೆ. ಸೋಷಿಯಲಿಸ್ಟ್ ಪಕ್ಷದವರು ಹೇಳಬೇಕಾದ ಅಗತ್ಯವಿಲ್ಲ ಎಂದು ಸುಮ್ಮನಿದ್ದರು ಎಂಬುದು ನನ್ನ ಭಾವನೆ.

ಶ್ರೀ ಎಂ. ಎಸ್. ಕೃಷ್ಣನ್: ನಾವೆಲ್ಲಾ ಅವರ ಪರವಾಗಿ ಹೇಳಿದ್ದೇವೆ.

ಶ್ರೀ ಡಿ. ದೇವರಾಜ ಅರಸ್:—ಇದರ ಬಗ್ಗೆ ಇನ್ನು ಮೇಲೆ ನಮಗೆ ಹೆಚ್ಚು ತಿಳಿವಳಿಕೆ ಬಂದ ಹಾಗಾಗುತ್ತದೆ. ತಾವುಗಳೆಲ್ಲಾ ಮಾತನಾಡಿರುವುದರಿಂದ ತಮ್ಮ ಅಭಿಪ್ರಾಯ ತಿಳಿದು ಕೊಂಡಹಾಗಾಯಿತು. ಇಂಥ ಸಮಾರಂಭ ಮುಂದೆ ನಡೆಯುವಾಗ ಈಗೇನು ಲೋಪವಾಗಿದೆಯೆಂದು ತಿಳಿಸಿದ್ದಾರೆ ಅದಕ್ಕೆ ಅವಕಾಶ ವಿಲ್ಲದಂತೆ ನಡೆದುಕೊಳ್ಳಲು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ತಿಳಿಸಿರುವುದದರಿಂದ ಸಹಾಯಕವಾಗಿದೆ ಎಂದು ನಾನು ತಿಳಿಯುತ್ತೇನೆ.

ಇನ್ನು ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರಿಗೆ ಮಾತನಾಡಲು ಅವಕಾಶ ಸಿಕ್ಕದೇಹೋದ ವಿಚಾರ ದಲ್ಲಿ ಅದರ ಬಗ್ಗೆ ವಿಷಾದ ವ್ಯಕ್ತಪಡಿಸಿ ಅವರಿಗೆ ಕಾಗದ ಸಹ ಬರೆದಿದ್ದೇನೆ. ಅದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದು ಸೂಕ್ತವಲ್ಲ ಎಂಬುದು ನನ್ನ ಭಾವನೆ. ಈ ವಿಚಾರ ಪತ್ರಿಕೆಯಲ್ಲಿ ಬಂದಮೇಲೆ ನಾನು ಅವರಿಗೆ ನೇರವಾಗಿ ಕಾಗದ ಬರೆದೆ, ಹಾಗೆ ಮಾಡಬೇಕಾದ್ದು ಯೋಗ್ಯವೆಂದು ತಿಳಿದು ಅವರಿಗೆ ಕಾಗದ ಬರೆದು ಅವರ ಕಾಪಿಯನ್ನು ಶ್ರೀ ಮಾನ್ ದೇವೇಗೌಡರಿಗೆ ಕೂಡ ಕಳಿಸಿದೆ. ೧೨ ಗಂಟೆಯಾದಮೇಲೆ ಎರಡು ನಿಮಿಷಗಳ ಮೌನವನ್ನು ಆಚರಿಸಿದರು. ಅವರಿಗೆ ಮಾತನಾಡಲು ಹೇಳಿದ್ದಾರೆಂಬುದೇ ನನಗೆ ಗೊತ್ತಿಲ್ಲ. ಸನ್ನಿವೇಶಗಳ ಒತ್ತಡದಿಂದಲೋ ಏನೋ ಅವರಿಗೆ ಅವಕಾಶ ದೊರೆಯಲಿಲ್ಲ. ಅವತ್ತಿನ ಸಂದರ್ಭದಲ್ಲಿ ಸನ್ನಿವೇಶಗಳ ಒತ್ತಡ ದಿಂದಲೋ ಅಥವಾ ಕಾನ್ಸ್ಪಿರೆಸಿ ಆಫ್ ಸರಕಂಸ್ಟೆನ್ಸಸ್ ಅಥವಾ ಸನ್ನಿವೇಶಗಳ ಪಿತೂರಿ ಎಂದು ಹೇಳ ಬಹುದೋ ಏನೋ-ಆ ರೀತಿ ಆಗಿರಬಹುದು ಎಂದು ಹೇಳಬಹುದೋ ಏನೋ.

ಶ್ರೀ ಕಾಗೋಡು ತಿಮ್ಮಪ್ಪ:—ಆಕ್ಸಿಡೆಂಟಲ್ ಎನ್ನಬಹುದು.

ಶ್ರೀ ಡಿ. ದೇವರಾಜ ಅರಸ್:—ಅಧ್ಯಕ್ಷರನ್ನು ಕೇಳಿದೆ, ವಿರೋಧ ಪಕ್ಷದ ನಾಯಕರು ಮಾತನಾಡು ವರೇ ಎಂದು. ಒಂದು ವಿಷಯದಲ್ಲಿ ನಾನು ಕ್ಷಮೆ ಕೇಳಬೇಕು, ಕೇಳುತ್ತೇನೆ. ನಾನು ನನಗೆ ನಿಗದಿ ಮಾಡಿದ್ದ ಕಾಲಕ್ಕಿಂತ ೪ ನಿಮಿಷ ಹೆಚ್ಚಾಗಿ ತೆಗೆದುಕೊಂಡೆ ಅದಕ್ಕಾಗಿ ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ ಭಾಷಣ ವನ್ನು ಬರೆದುಕೊಂಡು ಬಂದು ಓದಬೇಕೇ ಅಥವಾ ಹಾಗೆಯೇ ಮಾಡಬೇಕೇ ಎಂಬುದು ನನಗೆ ಸೇರಿರುವುದು. ನಾನು ೪ ನಿಮಿಷ ಹೆಚ್ಚಿಗೆ ತೆಗೆದುಕೊಂಡುದರಿಂದ ಅವರಿಗೆ ಮಾತನಾಡಲು ಅವಕಾಶವಾಗಲಿಲ್ಲ, ಅದು ನಿಜ. ಹಾಗಿಟ್ಟುಕೊಳ್ಳೋಣ. ೪ ನಿಮಿಷ ಹೆಚ್ಚಿಗೆ ನಾನು ತೆಗೆದುಕೊಂಡುದರಿಂದ ಅವರಿಗೆ ಮಾತನಾಡಲು ಅವಕಾಶ ವಾಗಲಿಲ್ಲ ಎಂಬ ಭಾವನೆ ಇರುವುದು ಸರಿಯೇ?

SRI C.M ARUMUGAM:—Apart from that, the function should have started at 23.20 hrs. Insted of that, it started at 23.30 hrs.

ಶ್ರೀ ದೇವರಾಜ ಅರಸ್:—ರಿಯಲ್ ಇಷ್ಯು ಏನೆಂದರೆ ೪ ನಿಮಿಷ ನಾನು ಹೆಚ್ಚಾಗಿ ತೆಗೆದುಕೊಂಡ ಕಾರಣ ನಾನು ಉದ್ದೇಶ ಪೂರ್ವಕವಾಗಿ ಹಾಗೆ ಮಾಡಿದ್ದೇನೆ ಎಂದು ತಿಳಿದುಕೊಂಡಿರುವುದು. ಅದರ ಬಗ್ಗೆ ನಾನು ಹೆಚ್ಚು ಹೇಳಲು ಇಷ್ಟ ಪಡುವುದಿಲ್ಲ. ಹಾಗೆ ತಿಳಿದುಕೊಳ್ಳುವುದು ಸಾಧ್ಯವಾದುದಲ್ಲ. ಮತ್ತು ಅವರು ಮಾತನಾಡಬಹುದು ಎಂದು ಹೇಳಿದ್ದಾರೆ ಎಂಬುದೇ ನನಗೆ ಗೊತ್ತಿಲ್ಲ. ಅವರು ಮಾತನಾಡ ಬಾರದು ಎಂದು ನಾನು ಆಬಜೆಕ್ಟ್ ಮಾಡಿಲ್ಲ. ಅವರು ಮಾತನಾಡುವುದಿಲ್ಲವೇ ಎಂದು ಕೇಳಿದಾಗ ಅವರು ಈಗ ಮಾತನಾಡುವುದಿಲ್ಲ ಎಂದು ಹೇಳಿದಹಾಗಾಯಿತು. ಇರಬಹುದು ಎಂದು ಸರಿಯಾಗಿ ಅದರ ವಿಚಾರ ನನಗೆ ಗೊತ್ತಾಗದೆ ನಾನು ಸುಮ್ಮನಾದೆ. ಅದಾದಮೇಲೆ ಬ್ಯಾಂಡು ಪ್ರಾರಂಭವಾಯ್ತು. ನ್ಯಾಷನಲ್ ಅಂಥಂ ಪ್ರಾರಂಭವಾಯ್ತು. ಬಹುಶಃ ಆಗ ಹೇಳಿ ಕಳಿಸಬೇಕಾಗಿತ್ತೆಂದು ಕಾಣುತ್ತದೆ. ಬ್ಯಾಂಡಿನವರಿಗೆ ಒಂದು ಷೆಡ್ಯೂಲ್ ಟೈಂ ಗೊತ್ತಿತ್ತು ಎಂದು ಕಾಣುತ್ತದೆ, ಅವರಿಗೆ ಸರಿಯಾಗಿ ವಿಚಾರ ತಿಳಿಸಲಿಲ್ಲ. ಬ್ಯಾಂಡ್ ಪ್ರಾರಂಭವಾದಾಗ ನ್ಯಾಷನಲ್ ಅಂಥಂ ಶುರುವಾದಾಗ ಎಲ್ಲರೂ ಎದ್ದು ನಿಂತರು.
ನಾನು ಇಂಟೆನ್ಷನಲ್ಲಾಗಿ ಏನೂ ಮಾಡಿಲ್ಲ. ಇದನ್ನು ನಾನು ಹೇಳಬೇಕಾಗಿದೆ. ನಾಲ್ಕು ನಿಮಿಷ ಹೆಚ್ಚಾಗಿ ನಾನು ತೆಗೆದುಕೊಂಡಿರುವುದು ನಿಜ.
I regret–I am saying–I regret for that. But to say that I took 4 minuts more with a view to prevent Mr. Hegde from speaking, is not correct. It is not based on facts.
ಉದ್ದೇಶ ಪೂರ್ವಕವಾಗಿ ನಾನು ಅವರಿಗೆ ಅವಕಾಶವಿಲ್ಲದಂತೆ ಮಾಡಿದೆ ಎಂದು ಊಹಿಸಿದ್ದರೆ ದಯೆಯಿಟ್ಟು ಆ ರೀತಿ ಮಾಡಬಾರದು.

ಶ್ರೀ ಎಚ್. ಡಿ. ದೇವೇಗೌಡ:—ಕಾಗದದಲ್ಲಿ ನೀವು ಇರುವ ವಿಷಯ ಬರೆದಿದ್ದೀರಿ. ಕೊನೆಯ ವಾಕ್ದಲ್ಲಿ ಅದು ಕ್ಲಿಯರ್ ಆಗಿದೆ.

ಶ್ರೀ ಡಿ. ದೇವರಾಜ ಅರಸ್:—ಬೇಕಾದರೆ ನಾನು ಬರೆದಿರುವ ಕಾಗದದಲ್ಲಿ ರೆಲಿವೆಂಟ್ ಪೋರ್ಷನ್ ಓದುತ್ತೇನೆ.

ತಮ್ಮನ್ನು ಬಿಟ್ಟು ನಾವು ಸಮಾರಂಭ ಮಾಡಬೇಕೆಂಬ ಉದ್ದೇಷ ನನಗಿಲ್ಲ. ಎಲ್ಲರೂ ಸೇರಿ ಈ ಸಮಾರಂಭ ನಡೆಸುವುದು. ಅದನ್ನು ನಾನು ಶ್ರೀರಾಮಕೃಷ್ಣ ಹೆಗ್ಡೆಯವರಿಗೆ ವ್ಯಕ್ತ ಪಡಿಸಿದ್ದೇನೆ.

> "However, I feel sorry that by the conspiracy of events, you have been the victim of it. I hope that this need not be given mor, importance than necessory on an occasion like this by making a public controversy of it. I do believe it is the desire of us all to conduct this national event of the Silver Jubilee Celebrations of India's Independenee".

'All of Us', I have said.

I have said also :

Believe me when I say that it is absolutely not my intention to disregard or disrespect the Leaders of the Opposition Parties, much less you, who happen to be my good friend in spite of our political affiliations."

That is what I have stated.

ಆಮೇಲೆ ಇನ್ನೊಂದು ಮಾತು ಮೇಯರ್‌ರವರ ವಿಚಾರವಾಗಿ ಶ್ರೀಮಾನ್ ನಾಗಣ್ಣನವರು ಮಾತನಾಡಿದರು. ಅದಕ್ಕೆ ನನ್ನ ಬದಲಾಗಿ ಶ್ರೀಮಾನ್ ಆರ್ಮುಗಂರವರು ರಿಪ್ಲೈ ಕೊಟ್ಟಿದ್ದಾರೆ. So I don't wish to speak further on that point ಒಂದೊಂದು ಸಂದರ್ಭ ಹೀಗಾಗುತ್ತದೆ ಅನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಒಂದು ಸನ್ನಿವೇಶದಲ್ಲಿ ಲಾರ್ಡ್ ಮೌಂಟ ಬೇಟನ್ ರವರು ಗೌರ್ನರ್ ಜನರಲ್ ಆಗಿದ್ದಾಗ ಈ ರೀತಿ ನಡೆಯಿತು. ಇದು ಆಗಸ್ಟ್ ೧೯೪೭ರಲ್ಲಿ ನಡೆದಿದ್ದು-

(ಶ್ರೀ ಡಿ. ದೇವರಾಜ ಅರಸ್)

ಅವರು ಫ್ಲಾಗ್ ಹಾಯಿಸ್ಟಿಂಗ್ ಸೆರಮನಿಗೆ ಬರಬೇಕಾಗಿತ್ತು. ಅವರೇ ಫ್ಲಾಗ್ ಹಾಯಿಸ್ಟಿಂಗ್ ಮಾಡಬೇಕಾಗಿತ್ತು. ಕಾರಣಾಂತರದಿಂದ ಅವರು ಬರುವುದು ಸ್ವಲ್ಪ ಲೇಟ್ ಆಯಿತು. ಆ ಒಂದು ಫ್ಲಾಗ್ ಹಾಯಿಸ್ಟಿಂಗನ್ನು ನಿಗದಿಯಾದ ಟೈಂಗೆ ಮಾಡಬೇಕಾಗಿತ್ತು. ಆದುದರಿಂದ ಏನು ಮಾಡಿದರು ಎಂದರೆ ಅಲ್ಲಿದ್ದಂಥ ಆರ್ಡಿನರಿ ಸರ್ವಿಸ್‌ಮನ್ ಫ್ಲಾಗನ್ನು ಅನ್‌ಫರ್ಲ್ ಮಾಡಿದರು. ಇದು ಹಿಂದೆ ಇದ್ದಂಥ ಒಂದು ಘಟನೆ. ಈ ರೀತಿ ಒಂದು ನಿಗದಿಯಾದ ಟೈಂಗೆ ಮಾಡತಕ್ಕಂಥ ಸಂದರ್ಭದಲ್ಲಿ wait for the Governor General ಎಂದು ಹೇಳುವುದಕ್ಕಾಗುತ್ತದೆಯೇ ? ಆಗ ಗವರ್ನರ್ ಜನರಲ್‌ರವರು ನನಗೆ ಛಾನ್ಸ್ ಕೊಡಲಿಲ್ಲ ಎಂದು ಹೇಳುವುದಕ್ಕಾಗುತ್ತದೆಯೇ ? ಆ ಟೈಂಗೆ ಆಗಬೇಕಾಗಿತ್ತು, ಆಯಿತು. ಆ ರೀತಿ ಹೇಳುವುದಕ್ಕಾಗುವುದಿಲ್ಲ ; ಇದರಲ್ಲಿ ಯಾವ ಒಂದು ಉದಾಸೀನತೆಯೂ ಇಲ್ಲ, ಒಂದೊಂದು ಸಾರಿ ಸನ್ನಿವೇಶ ಹೀಗಾಗುತ್ತದೆ. ಆದುದರಿಂದ ನನ್ನ ಪ್ರಾರ್ಥನೆ ಏನೆಂದರೆ It need not become a public contraversy. ಇದನ್ನು ಪಬ್ಲಿಕ್ ಕಾಂಟ್ರವರ್ಸಿ ಮಾಡುವುದು ಬೇಡ. ಇದನ್ನು ಹೆಚ್ಚು ಬೆಳೆಸುವುದು ಬೇಡ. ಇಷ್ಟು ಮಾತ್ರ ಹೇಳಿ ಈ ವಿಷಯವನ್ನು ಇಲ್ಲೇ ಮುಕ್ತಾಯ ಮಾಡುವುದು ಸೂಕ್ತ ಎಂದು ಹೇಳುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ ;—ತಾವು ಬೆಂಗಳೂರು ಮೇಯರ್‌ರವರನ್ನು ಏನೋ ಆಹ್ವಾನಿಸಿದಿರಿ. ಅವರಿಗೆ ಯಾವ ಸ್ಥಾನ ಕೊಡಬೇಕೋ ಆದನ್ನು ಕೊಡಬೇಕಾಗಿತ್ತು. ಸರ್ಕಾರ ಇದರ ಬಗ್ಗೆ ನೇರವಾದ ವಿಚಾರ ಹೇಳಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್ .—ತಾವು ಹಿರಿಯರು, ತಮ್ಮ ಮಾತನ್ನು ಕೇಳುತ್ತೇನೆ. ಏಕಾಏಕಿ ಒಪ್ಪುವುದಕ್ಕೆ ಕಷ್ಟ. ಇದರ ಬಗ್ಗೆ ಸ್ವಲ್ಪ ಬೇರೆಯವರಿಂದಲೂ ತಿಳಿದು ಆ ಬಗ್ಗೆ ಒಂದು ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು :—ಈಗ ತಾವು ಎತ್ತಿದ ಕಾರಣಕ್ಕಾಗಿ ಮುಖ್ಯ ಮಂತ್ರಿಗಳು ವಿಷಾದದಿಂದ ಜವಾಬು ಹೇಳಿದ್ದಾರೆ. ಇದರಲ್ಲಿ ಏನೋ ಒಂದು ನಡೆದಿದೆ ಅದರ ಬಗ್ಗೆ ನಮ್ಮ ತಪ್ಪನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿದ್ದಾರೆ. ಇನ್ನೊಂದು ವಿಷಯ ಏನೆಂದರೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಾತನಾಡುವುದು ಆಮೇಲೆ ಎಂದು ತಿಳಿಸಿದಾಗ, ಮುಖ್ಯ ಮಂತ್ರಿಗಳು ಕೇಳಿದಾಗ ಈಗ ಮಾತನಾಡುವುದಿಲ್ಲ ಎಂದು ಹೇಳಿದೆ. ಆದರೆ ಅವರಿಗೆ ಆಮೇಲೆ ಮಾತನಾಡುತ್ತಾರೆ ಎಂದು ಹೇಳುವುದಕ್ಕೆ ಟೈಂ ಇರಲಿಲ್ಲ. ಏಕೆಂದರೆ ೧೨ ಗಂಟೆಗೆ ಭಾಷಣಗಳು ಮುಗಿದು ಮೌನವನ್ನು ಆಚರಿಸಬೇಕಾದ ಸಂದರ್ಭ ಬಂತು ಆವಾಗ ಕೂಡಲೇ ಬ್ಯಾಂಡ್‌ನವರಿಗೆ ನೇರವಾಗಿ ಸೂಚನೆ ಕೊಡುವುದಕ್ಕೆ ಅವಕಾಶ ಒದಗಲಿಲ್ಲ. ಅವರಿಗೆ ಮೊದಲೇ ಸೂಚನೆಗಳನ್ನು ಕೊಟ್ಟಿದ್ದರು. ಆದುದರಿಂದ ಅವರು ಏಕ್‌ದಮ್ 'ಜನಗಣಮನ' ಬಾರಿಸಿ ಬಿಟ್ಟರೇ ವಿನಃ ಯಾರ ಮನಸ್ಸನ್ನೂ ನೋಯಿಸಬೇಕೆನ್ನುವುದು ಯಾರ ಮನಸ್ಸಿನಲ್ಲಿಯೂ ಇರಲಿಲ್ಲ, ಮುಖ್ಯ ಮಂತ್ರಿಗಳಿಗೂ ಇರಲಿಲ್ಲ, ಛೇರ್ಮನ್‌ರವರಿಗೂ ಇರಲಿಲ್ಲ, ನನಗೂ ಇರಲಿಲ್ಲ. ನಾವು ಮೂರು ಜನ ಸೇರಿಕೊಂಡೇ ಇನ್‌ವಿಟೇಷನ್ ಕೊಟ್ಟಿದ್ದೆವು. ಆದುದರಿಂದ ಕರೆದು ಯಾರಿಗೂ ಅವಮಾನ ಮಾಡಬೇಕು ಎನ್ನುವುದು ಯಾರಿಗೂ ಇರಲಿಲ್ಲ. ಹಿಂದೂ ಧರ್ಮದ ಪ್ರಕಾರ ಕರೆದ ಅತಿಥಿಗಳಿಗೆ ಅವಮಾನ ಮಾಡಬೇಕೆಂದು ಯಾರ ಮನಸ್ಸಿನಲ್ಲಿಯೂ ಇರುವುದಿಲ್ಲ. ಏನಾದರೂ ಅವಮಾನ ಮಾಡಬೇಕು ಎಂದು ಮಾಡಿದ್ದಾರೆ ಎಂಬ ಭಾವನೆ ಇದ್ದದ್ದೇ ಆದರೆ ತಮ್ಮ ಮನಸ್ಸಿನ ಆ ಭಾವನೆಯನ್ನು ತೆಗೆಯಬೇಕು. ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಮಂಡಿವಂತಿಕೆ ಮಾಡಿದರು ಎಂದು ಹೇಳಿದರು. ಆ ಭಾವನೆ ಇಟ್ಟುಕೊಳ್ಳದೆ ಎಲ್ಲರೂ ಜೊತೆಗೂಡಿ ಈ ಉತ್ಸವವನ್ನು, ಈ ಬೆಳ್ಳಿ ಹಬ್ಬವನ್ನು ಆಚರಿಸಬೇಕೆಂದು ಮಾಡಿದೆವು. ಅರ್ಧ ಗಂಟೆ ಮಾಡಿದ ಸ್ಪೀಚ್ ಮತ್ತು ಸೊಲಮ್ನಿಟಿ ಬರುತ್ತೆ ಅಂತ ಹೇಳಿ ಒಂದು ಟೈಂ ನಿಗದಿ ಮಾಡಿದೆವೇ ಹೊರತು ಯಾರಿಗೂ ಅವಕಾಶ ಕೊಡಬಾರದು ಎನ್ನುವ ಉದ್ದೇಶ ಇರಲಿಲ್ಲ. ಇದನ್ನೆ ದೊಡ್ಡದನ್ನಾಗಿ ಮಾಡುವುದು ಯಾರಿಗೂ ಉದ್ದೇಶ ಅಲ್ಲ. ಆದುದರಿಂದ ಈ ಹೇಳಿಕೆಗಳಿಂದ ತಮ್ಮ ಮನಸ್ಸಿಗೆ ಸಮಾಧಾನವಾಗುತ್ತದೆ ಎಂದು ತಿಳಿದುಕೊಂಡು ಈ ವಿಷಯವನ್ನು ಇಲ್ಲಿಗೆ ಮುಗಿಸಿಬಿಡೋಣ.

STARRED QUESTIONS

(*To which oral answess were given.*)

MAJOR AND MINOR TANKS IN KALLAMBELLA CONSTITUENCY

62. SRI T. TARE GOWDA (Kallambella) .—Will the Minister for Public Works and Electricity be pleased to state :—

(*a*) the No. of tanks both major and minor under which summer paddy crop cultivation was undertaken and their names in Kallambella Constituency ;

(*b*) wherher they have found that paddy crop in those tanks in Tumkur district be successfully harvested ;

(*c*) if not the number of tanks and names where paddy crops have failed ;

(*d*) the reason for failure of this crop ?

SRI H. M. CHANNABASAPPA (Minister for Public Works and Electricity) :—1

(*a*) Kalambella Constituency comprises of the followings hoblies :—

Kallambella and Bokkapatna hoblies (Sira taluk); Hagalavadi and Chelur hoblis (Gubbi taluk) and Kandikere hobli in Chikkanayakanahalli taluk. Summer paddy crops were cultivated under the following tanks :—

1 Major tanks

Kallambella hobli :

1. Haldodderi
2. Brambasandra-Kadavikere
3. Bramhasandra-Urumundinakere
4. Doddachikkanahalli
5. Yelladabagi
6. Ajjenahalli
7. Bhupasandra
8. Mayasandra
9. Kallambella
10. Tharur, Laxmisagara
11. Seebi Agrahara
12. Tharur Urumundinakere

Bukkapatna hobli :

13. Ranganahalli
14. Ramalingapura
15. Bukkapatna
16. Ganadahunse
17. Dodda Agrahara

Kandikere hobli ;

18. Kandikere Hirekere
19. Singadahalli Dalvai tank

Hagalavadi hobli

20. Gandikere tank
21. Matadahalli new tank

II Minor tanks

Kallambella hobli

1. Jogihalli
2. Jodidevarahalli
3. Gangammanakere
4. Hunjanalkere
5. Siradadu
6. Navaneborannahalli
7. Thippanahalli
8. Doddaseebi
9. Carpehalli
10. Chikkasandrahalli Sannakere
11. Kalapura
12. Chinnappanahalli
13. Thoriyappanahalli
14. Kagelinganahalli

Bukkapatna hobli

15. Handimulku
16. Yaradakatte old tank
17. Ramanahalli
18. Lingasettihalli Voddu
19. Voddanahalli
20. Kunighatanahalli tank
21. Pura

Hagalavadi hobli :

22. Manehaladore Hulikatte
23. Mathikere.

(b) Summer paddy crops can successfully be harvested under the following tanks :

1. Bukkapatna major tank
2. Ramalingapura major tank
3. Gandikere tank
4. Matadahalli new tank
5. Mauchaladore Hulikatte
6. Mathikere tank
7. Kandikere Hirekere
8. Singanahalli Dalvai tank

Paddy cannot be successfully harvested under the remaining tanks.

(c) *Kallambella hobli* :

1. Haldodderi
2. Bramhasandra-Kalvigere
3. Bramhasandra Urumundinakere
4. Doddachikkanahalli
5. Yelladabagi-Bakahikere
6. Kallambella
7. Ajjenahalli
8. Mayasandra
9. Thayuru Laxmisagar
10. Seebi Agrahara
11. Tarur Urumundinakere
12. Jogihalli
13. Jodidevarahalli
14. Gangammanakere
15. Husinakanakere
16. Siradadu
17. Navaneboranahalli
18. Thippanahalli
19. Doddaseebi
20. Carpehalli
21. Chikkadasarahalli-Sannakere
22. Kalapura
23. Chinnappanahalli
24. Thoreyappanahalli
25. Kanchiganahalli
26. Bhupasandra

Bukkapatna hobli :

1. Ranganahalli
2. Handimulku
3. Ramanahalli
4. Lingasettihalli-Voddu
5. Voddanahalli
6. Kunighatanahalli
7. Pura
8. Doddagrahara
9. Ganadahunse
10. Yaradakatte old tank

(*d*) Failure of rains in March 1972.

ಶ್ರೀ ಟಿ. ತಾರೇಗೌಡ .—ಸ್ವಾಮಿ ಮೇಜರ್ ಟ್ಯಾಂಕ್ಸ್ ಮತ್ತು ಮೈನರ್ ಟ್ಯಾಂಕ್ಸ್ ಎನ್ನುವುದಕ್ಕೆ ಎಷ್ಟೆಷ್ಟು ಅಚ್ಚುಕಟ್ಟಿನ ಪ್ರದೇಶ ಒಳಗಡೆ ಇರಬೇಕು ಎಂದು ನಿಗದಿ ಮಾಡಿದ್ದೀರಾ ?

† ಶ್ರೀ ಹೆಚ್. ಎಂ ಚನ್ನಬಸಪ್ಪ .—೫೦೦ ಎಕರೆ ಆಯಕಟ್ಟು ಇರತಕ್ಕಂಥ ಪ್ರದೇಶಕ್ಕೆ ಮೇಜರ್ ಟ್ಯಾಂಕ್ ಎಂತಲೂ ಅದರ ಒಳಪಟ್ಟು ಇರತಕ್ಕಂಥಾದ್ದಕ್ಕೆ ಮೈನರ್ ಟ್ಯಾಂಕ್ಸ್ ಎಂದು ಕರೆಯುತ್ತೇವೆ.

ಶ್ರೀ ಟಿ. ತಾರೇಗೌಡ .—ಸ್ವಾಮಿ, ಕಳ್ಳಂಬೆಳ್ಳ ಕ್ಷೇತ್ರದಲ್ಲಿ ೨೨ ಮೇಜರ್ ಟ್ಯಾಂಕ್ಸ್ ಇದ್ದಿದ್ದರೂ ಕೂಡ ೮ ಕೆರೆಗಳಲ್ಲಿ ಮಾತ್ರ ಭತ್ತದ ಫಸಲು ಆಗುತ್ತದೆ ಎಂದು ತಿಳಿಸಿದ್ದೀರಾ ? ಬಾಕಿಯದು ಆಗದೇ ಇರುವುದಕ್ಕೆ ಕಾರಣ ಏನು :

ಶ್ರೀ ಹೆಚ್. ಎಂ. ಚನ್ನಬಸಪ್ಪ .—ನೀರು ಇಲ್ಲದೇ ಇದ್ದುದಕ್ಕೆ ಆಗಿಲ್ಲ, ಅದೇ ಕಾರಣ.

ಶ್ರೀ ಟಿ. ತಾವರೇಗೌಡ . ಕೆರೆಗಳಲ್ಲಿ ನೀರು ಇಲ್ಲದೇ ಇರುವುದಕ್ಕೆ ಕಾರಣ, ಅನೇಕ ಕೆರೆಗಳಲ್ಲಿ ತೂಬುಗಳು ಇಲ್ಲ. ಆದ್ದರಿಂದ ಬಂದ ನೀರು ಸೋರಿ ಹೋಗುತ್ತಾ ಇದೆ, ಮತ್ತು ಅದರಲ್ಲಿ ಬಂದ ನೀರು ಸೀಪೇಜ್ ಆಗುತ್ತಾ ಇದೆ. ಇವೆಲ್ಲಾ ಇರುವುದರಿಂದ ಆ ಕೆರೆಗಳಲ್ಲಿ ಬರತಕ್ಕಂಥ ನೀರನ್ನೆಲ್ಲಾ ರೆಸ್ಟೋರ್ ಮಾಡಿ ಫಸಲು ಆಗುವ ರೀತಿಯಲ್ಲಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ —ಅನೇಕ ಕೆರೆಗಳಲ್ಲಿ ತೂಬು ಇಲ್ಲದೆ ನೀರು ಸೋರಿ ಹೋಗುತ್ತದೆ, ಸೀಪೇಜ್ ಆಗುತ್ತದೆ ಅದನ್ನೆಲ್ಲಾ ಸರಿಮಾಡಿಸಿಕೊಡಬೇಕು ಎಂದು ಹೇಳಿದರೆ ಒಪ್ಪುವುದು ಕಷ್ಟ. ಯಾವುದಾದರೂ ನಿರ್ದಿಷ್ಟವಾದ ಕೆರೆ ವಿಷಯ ಹೇಳಿದರೆ ಅದನ್ನು ಸರಿಪಡಿಸುತ್ತೇನೆ.

LOOTING AND RIOTING DURING PARLIAMENT ELECTION AT BUNTWAL AND OTHER PLACES

207. SRI B. V. KAKKILAYA (Buntwal).—Will the Chief Minister be pleased to state :—

(*a*) whether on the polling day in the Mid-term Parliamentry elections (4th March 1971) and on subsequent days there were several incidents of arson, looting and rioting at Kaleadka, Goodinaboli Jodumarg and Buntwal :

(*b*) whether the then Minister for Food the Deputy Commissioner and the Suderintendent of Police and the local Police Officers along with a strong Police Force were present at Jodumarga when the incident took place and they did not intervene at the very begining to put an end to the incidents ;

(*c*) whether the Government has received any representations from the victims of the incidents for relief and have the Government estimated the loss in each case and given any relief, if so the estimated loss and the relief given in each case ;

(*d*) whether the victims have made any complaints to the authorities regarding the incidents and if so the action taken in respect of such complaints ;

(*e*) whether the criminal cases have been filed and if so, the number of cases and the number of accused in each case ;

(*f*) the number of cases for which charge sheets have been filed and not filed and the particulars of cases wherein charge sheets have been filed and not filed and the reason for not filling ;

(*g*) whether the Government have received any complaint against the local police officers from the public in this connection and if so, the action taken ?

SRI D. DEVARAJ URS (Chief Minister) .—

(*a*) A few incidents occurred at these places on 7th and 8th March 1971.

(*b*) Only the Police Personnel posted for election duty were present at the respective polling stations The Deputy Commissioner and the Superintendent of Police were not present at Jodumarg (B. C. Road), where a disturbance took place on 7th March 1971, but as soon as they got information about the disturbance, they rushed to the spot with reinforcements. No information is available as to whether or not the then Food Minister was present at the place.

(*c*) Yes. Representations have been received by Government. Details regarding the estimated loss and the amount of relief granted in each case are furnished in statement 'A' appended. Details of interest-free loan granted to the sufferers are furnished in statement 'B' appended.

(*d*) Yes. On receipt of complaints, prompt action was taken by the Police to register and investigate the cases.

SRI D. DEVARAJ URS (Chief Minister)

(*e*) and (*f*) Fourteen cases were registered, of which four cases have been charge-sheeted and the remaining ten cases have been treated as undetected for want of clue and evidence. Details of these cases are furnished in statement 'C' appended.

(*g*) No.

STATEMENT—A

Details regarding estimated loss and the amount of relief granted in each case.

Sl No.	Name and address of the sufferers to whom gratuitous cash relief was grnted	Estimated loss	Gratuitous cash relief granted	Remarks
1	2	3	4	5
	Sriyuths :			
1	B. Sheikabba s/o Abdul Rabiman Bantwal	5,000-00	1,500-00	...
2	B. Abdulla s/o Chayabba, Murgdalgudde, Bantwal.	20,000-00 to 25,000-00	1,500-00	...
3.	B. Pokai Beary s/o Cheyabba Beary, Buntwal.	250-00	200-00	...
4.	P. Mohammad s/o Seediabba B.C. Road.	250-00	200-00	...
5.	U. Yoosuf s/o Iddinabba, B.C. Road.	1,400-00	700-00	..
6.	T.K. Moosa, Proprieter, Hotel Greenland, B C. Road.	1,076-00	538-00	..
7.	Hussainabba s/o Abdul Rabiman, Hotel Keeper, B C. Road.	438-00	219-00	...
8.	B. Abdulkader s/o Hammad New Royal Beedi Shop, B.C. Road.	1,000-00	500-00	...
9.	G. Abdul Rahiman s/o Usman, Shop Keeper, Goodinabali, Jodumarga, Bantwal.	200-00	200-00	...

1	2	3	4	5
	Sriyuths :			
10.	Mariamma w/o Hammabba, Kalladka.	750-00	375-00	...
11.	P. Hussain Chenndadi s/o Usman, B. C. Road.	150-00	150-00	...
12.	Abboobaker s/o Abhas, Hotel Keeper, Kailadka.	325-00	200-00	...
13.	K. M. Ismail s/o Iddinabba, Kalladka.	800-00	250-00	...
14.	K. Ummarabba s/o Arabi Beary, Kalladka.	300-00	200-00	...
15.	Veerakamba Ibrahim s/o V.K. Bapakunhi, Shop Keeper, Veerakamba.	300-00	200-00	...
16.	B. Abbas s/o Monappa Beary, Cutlery Shop Keeper, Bantwal	1,000-00	500-00	...
17.	P. K. Abbu Beary s/o Moidi Beary, Kalladka.	600-00	250-00	...
18.	K. M. Ismail s/o Modinabba Kalladka	500-00	250-00	...
19.	K. Venkatraya Shenoy s/o Laxmana Shenoy, Hotel Keeper, Farangipet.	300-03	200-00	...
20.	K. Kanthappa Punja s/o A. Subbaia Punja, Farangipete	1,000-C0	500-00	...
21.	S. Shekar Shetty s/o Muthayya Shetty, Farangipet.	1,000-00	500-00	...
22.	K. Achabba s/o Hamad Beary B. C. Road, Bantwal.	1,000-00	500-09	...
23.	G. N. Hammed s/o Moidin Beary, Goodinabali, B. Mooda.	200-00	200-00	...
24.	K. Mohammad Beary s/o Savunhi Beary, Goltnamajalu	300-00	200-00	...
25	Isubu Beary s/o Ahmed Beary Kalladka.	100-00	100-00	...
26.	Hasanabba s/o Kunhi Ahmed Kalladka.	50-00	50-00	...

1	2	3	4	5
	Sriyuths :			
27.	Dr. B. R. Somayaji s/o B. Narayana Somayaji, L.I.M. Farangipet.	250-00	200-00	...
28.	U. Abdulkhader s/o Iddinabba Merchant, Hampanakatta, Mangalore.	300-00	200-00	...
29.	M. Ismail s/o Mammu Beary, Merchant, Hampanakatta, Mangalore.	300-00	200-00	...
30.	Abu Hussain s/o Sheikali Pandit Chikkamudnur village, Puttur Taluk.	400-00	200-00	...
31.	K. Mohammad s/o Ismail, Taxi Owner, Buntwal.	1,853-16	926-50	...
32.	G. Abdulkhader Haji, Secretary, Mohiyuddin Jumma Mosque, Kalladka.	1,000-00	1,000-00	Out of this amount, Rs. 500 paid to the institution for repairs.
33.	Yedava Suvarna s/o N. C. Suvarna, Old Kent Road, Mangalore.	1,500-00	750-00	...
	Total	48,892-16 (49,000-00 in round figure)	13,658-50	

STATEMENT—B

Details of interest-free loan sanctioned to sufferers

Sl. No.	Name and address of the applicant		Amount of interest free loan sanctioned
1	2		3
	Sriyuths :		Rs.
1.	B. Shekabba , Buntwal	...	3,000
2.	B. Abdulla, Buntwal	...	5,000
3.	K. Mohammad, Buntwalmuda	...	2,350
4.	K. Yusuf, Kalladka	...	1,000
5.	B. Abbas, Bantwal	...	1,000
6.	A. Venkatraya Shenoy, Pudu	...	300
7.	K. Kanthappa Punja, Pudu	...	1,000
8.	B. Abdulkhader, Bantwalmuda	...	1,000
9.	Shekara Shetty, Pudu	...	1,000
10.	P. Mohammad, Bantwalmuda	...	250
		Total	15,900

STATEMENT—C

Details of cases registered.

Sl. No.	Station	Crime No. and Section of law	No. of accused persons	Remarks
1	2	3	4	5
1	Buntwal	35/71 u/s. 279-337 and 149 IPC (Incident at Kalladka)	1	Pending trial
2	do	36/71 u/s. 143-148-427 r/w. 149 IPC (Incident at Panemangalore bridge) (Goodi aboli)	40	Undetected
3	do	37/71 u/s. 147-148-336 IPC (Incident at Kalladka)	100	Undetected
4	do	38/71 u/s. 143-435 r/w. 149 IPC (Incident at Kalladka)	15	Undetected

1	2	3	4	5
5	do	39/71 u/s. 145-336-323 IPC (Incident at Panemangalore) (Goodinaboli)	150	Undetected
6	do	40/71 u/s. 143-147-448-380-427 IPC (Incident at B.C. Road) (Jodumarg)	40	Pending tria
7	do	41/71 u/s. 147-325 r/w. 149 IPC (Incident at B. C. Road) (Jodumarg)	30	Undetected
8	do	42/71 u/s. 143-147-448-38)-427 IPC (Incident at Bantwal Casba)	40	Pending trial
9	do	43/71 u/s. 148-325.427 r/w. 25 149 IPC (Incident at B. C. Road) (Jodumarg)	25	Undetected
10	do	44/71 u/s. 148-3!5 IPC (Incident at Kalladka)	50	Undetected
11	do	45/71 u/s. 143-148-425 IPC (Incident at Kallige)	100	Undetected
12	do	48/71 u/s 147-148-426 r/w. 34 IPC (Incident at Ferangipet)	12	Pending trial
13	do	49/71 u/s. 147-324-323 IPC (Incident at Ferangipet)	10	Undetected
14	do	55/71 u/s. 436 IPC (Incident at Panemangalore)	Not known	Undetected

ಶ್ರೀ ಎಚ್. ಡಿ. ದೇವೇಗೌಡ.— ನೀವು ಪಕ್ಕದ ರಾಜ್ಯಗಳಲ್ಲಿ ಕೊಡುವಂತೆ ಕೊಡಿ.

ಶ್ರೀ ಎನ್. ಚಿಕ್ಕೇಗೌಡ.—ಪಕ್ಕದ ರಾಜ್ಯಗಳಲ್ಲಿ ಇದೇ ಕೆಟಗರಿಯಲ್ಲಿರುವವರಿಗೆ ಹೆಚ್ಚು ಇರಬಹುದು ಅಥವಾ ಕಡಿಮೇ ಇರಬಹದು ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಇದನ್ನು ಐಸೋಲೇಟೆಡ್ ಕೇಸ್ ಆಗಿ ಕನ್ಸಿಡರ್ ಮಾಡುತ್ತಾ ಹೋದರೆ ಬೇರೆ ಇಲಾಖೆಯಲ್ಲಿರುವ ಇದೇ ದರ್ಜೆಯ ಜನರೂ ಬೇಡಿಕೆಗಳನ್ನು ಇಡುತ್ತಾರೆ. ಅದ್ದರಿಂದ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸೂಕ್ತ ಸಮಯದಲ್ಲಿ ಸರ್ಕಾರ ಇದರ ಬಗ್ಗೆ ಪರಿಶೀಲನೆ ಮಾಡುತ್ತದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಾಪು ಗೌಡ ರಾಮಪ್ಪ (ಶಹಪುರ).—ಸ್ವಾಮಿ, ಗುಲ್ಬರ್ಗ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿ ಬಹಳ ಹೆಚ್ಚು ಪ್ರಮಾಣದಲ್ಲಿ ಆಗಿದೆ. ಸಗರ ಎಂಬ ಗ್ರಾಮದಲ್ಲಿ ಜನರು ಯಾವುದೋ ಒಂದು ಗೆಡ್ಡೆಯ ರೊಟ್ಟಿ ತಿಂದು ಸತ್ತಿದ್ದಾರೆ. ೫ನೇ ತಾರೀಕಿಗೆ ಮಾನ್ಯ ರೆವೆನ್ಯೂ ಮಂತ್ರಿಯವರ ಮತ್ತು ಹಣಕಾಸಿನ ಮಂತ್ರಿಯವರು ಅಲ್ಲಿ ಪ್ರವಾಸ ಮಾಡಿದ್ದಾರೆ. ಅದೇ ರೀತಿ ಸುರಪುರದಲಿ ಒಬ್ಬ ಮುಸಲ್ಮಾನ ವ್ಯಕ್ತಿಯು ಅನ್ನವಿಲ್ಲದೆ ಸತ್ತಿದ್ದಾನೆ. ಹಾಗೆಯೇ ವೀವರ್ಸ್ ಜನರಲ್ಲಿ ಸಹ ಒಬ್ಬರು ಸತ್ತಿದ್ದಾರೆ. ಅಲ್ಲಿ ೧೧-೧೨ನೇ ತಾರೀಕಿನ ವರೆಗೂ ಯಾವ ಕೆಲಸಕಾರ್ಯಗಳು ಆಗಿಲ್ಲ. ಆದ್ದರಿಂದ ಆಲ್ಲಿ ಮಂತ್ರಿಯವರು ಪ್ರವಾಸಮಾಡಿ ಯಾವ ರೀತಿಯ ವ್ಯವಸ್ಥೆ ಮಾಡಿದ್ದಾರೆಂಬುದನ್ನು ಈ ಮನೆಗೆ ತಿಳಿಸಿದರೆ ಸ್ವಲ್ಪ ಸಮಾಧಾನ ವಾಗುತ್ತದೆ. ಅದರ ಬಗ್ಗೆ ಮಾನ್ಯ ಮಂತ್ರಿಯವರು ಒಂದು ಹೇಳಿಕೆ ಕೊಡಬೇಕೆಂದು ಹೇಳುತ್ತೇನೆ.

Notice of Adjounment motion Re: Scarcitry condition in the State

ಶ್ರೀ ಎಚ್. ಡಿ. ದೇವೇಗೌಡ.—ಮೊನ್ನೆ ಮಂತ್ರಿಯವರು ಒಂದು ಲಕ್ಷ ಜನರಿಗೆ ಕೆಲಸ ತಯಾರಾಗಿದೆ ಎಂದು ಹೇಳುತ್ತಿದ್ದರು. ನಾನು ಸಹ ಬಿಜಾಪುರ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಬಂದಿದ್ದೇನೆ ಮೊನ್ನೆ ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಹೇಳಿದ ಹೇಳಿಕೆ ಒಂದು ಆಜ್ಞೆ ಎಂದು ತಿಳಿದುಕೊಂಡು ಅಧಿಕಾರಿ ಗಳು ಕಾರ್ಯಗತ ಮಾಡಬೇಕೆಂದು ಹೇಳಿದರು. ಇವತ್ತು ಅನೇಕ ಕಡೆಗಳಲ್ಲಿ ಹೆಚ್ಚಿನ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಕಾತುರತೆ ಇದ್ದರೂ, ಅಲ್ಲಿ ಕೇವಲ ೬, ೭, ಅಥವಾ ೮ ಕೆಲಸಗಳು ನಡೆಯುತ್ತಿವೆ. ತಾಲೂಕಿನಲ್ಲಿ ಸಮಗ್ರವಾದ ಕೆಲಸವನ್ನು ಮಾಡುವುದಕ್ಕೆ ಹಣದ ಅಭಾವಾ ಒಂದು ಮುಖ್ಯ ಕಾರಣ. ತಾಲ್ಲೂಕು ರಿಲೀಫ್ ಕಮಿಟಿಯವರು ೫೦-೬೦ ಕೆಲಸಗಳನ್ನು ಅಪ್ರೂವ ಮಾಡಿದ್ದಾರೆ. ಆದರೆ ಕೆಲಸ ಕೇವಲ ೬-೭-೮ ಮಾತ್ರ ತೆಗೆದುಕೊಂಡಿದ್ದಾರೆ. ಕೆಲವು ಪ್ರಭಾವಯುತ ಜನರ ಹೇಳಿಕೆಯ ಪ್ರಕಾರ ಕೆಲಸ ಗಳನ್ನು ತೆಗೆದು ಕೊಂಡಿದ್ದಾರೆ ಮತ್ತು ಕೆಲವು ಜನರ ಒತ್ತಾಯದ ಮೇಲೆ ತೆಗೆದುಕೊಂಡಿದ್ದಾರೆ. ಇವತ್ತು ಅಧಿಕಾರಿಗಳು ಏನು ಹೇಳುತ್ತಾರೆಂದರೆ, ಎಲ್ಲಾ ಕೆಲಸಗಳನ್ನು ತೆಗೆದುಕೊಂಡರೂ ತಾಲ್ಲೂಕಿನಲ್ಲಿ ಮೂರು ಮೈಲಿಗಳ ರೇಡಿಯಸ್‌ನಲ್ಲಿ ಇರತಕ್ಕ ಕೆಲಸಗಳನ್ನು ಆದಷ್ಟು ಮಟ್ಟಿಗೆ ಸಮಗ್ರವಾಗಿ ಮಾಡುವುದಕ್ಕೆ ಆಗುತ್ತದೆ ಎಂದು ಹೇಳುತ್ತಾರೆ. ಎಷ್ಟೋ ಕ್ಷೇತ್ರಗಳಲ್ಲಿ ಬಿಲ್‌ಗಳನ್ನು ಕಳುಹಿಸಿದರೆ ವಾಪಸ್ಸು ಕಳುಹಿಸಿರುತ್ತಾರೆ. ಇನ್ನೂ ಹಣ ರಿಲೀಜ್ ಆಗಬೇಕೆಂದು ಮುಖ್ಯ ಮಂತ್ರಿಗಳು ಈಗ ಹೇಳಿಕೆ ಕೊಡುತ್ತಾರೆ ಮಂತ್ರಿಗಳು ದಯಮಾಡಿ ಆಲ್ಲಿರತಕ್ಕ ಪರಿಸ್ಥಿತಿಯನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ನಿಜಕ್ಕೂ ಕೆಲವು ಕಡೆಗಳಲ್ಲಿ ಕಟ್ಟಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆ. ಮಾನ್ಯ ಶ್ರೀ ಫೋರ್ಡೆಯವರು ಇದರ ಬಗ್ಗೆ ಒಂದು ದಿಢೀರ್ ನಿರ್ಣಯ ತೆಗೆದುಕೊಂಡಿದ್ದಾರೆ. ಅವರಿಗೆ ಈಗ ಎಷ್ಟು ಹಣದ ಅವಶ್ಯಕತೆ ಇದೆಯೆಂಬುದು ಮನವರಿಕೆಯಾಗಿದೆ. ಸರ್ಕಾರದವರು ಇದರ ಬಗ್ಗೆ ಏನೇನು ಕ್ರಮಗಳನ್ನು ತೆಗೆದು ಕೊಂಡಿದ್ದಾರೆಂದು ತಿಳಿಸಿದರೆ ಸಾಕು. ಪಶ್ನೋತ್ತರ ವೇಳೆಯಲ್ಲಿ ಒಂದು ಲಕ್ಷ ಜನಗಳಿಗೆ ಕೆಲಸ ಕೊಡು ತ್ತೇವೆ, ಒಂದೊಂದು ತಾಲ್ಲೂಕಿನಲ್ಲಿ ಆರೇಳು ಸಾವಿರ ಜನ ಕೆಲಸಮಾಡುತ್ತಿದ್ದಾರೆ ಎಂದು ಹೇಳಿದಿರಿ. ಬಿಜಾಪುರ ಜಿಲ್ಲೆಯೊಳಗೆ ೯೪ ಸಾವಿರ ಜನರು ಕೆಲಸಮಾಡುತ್ತಿದ್ದಾರೆ. ಆದರೆ ನಾನು ಇನ್ನೂ ಗುಲ್ಬರ್ಗ ಜಿಲ್ಲೆಗೆ ಹೋಗಿಲ್ಲ. ಇವತ್ತು ಸರ್ಕಾರದ ಉಗ್ರಾಣಗಳ ಬಗ್ಗೆ ಉದಾಹರಣೆ ಹೇಳುವುದಾದರೆ ಒಂದೊಂದು ಟೌನಿಗೆ ಒಂದು ತಿಂಗಳಿಗೆ ಐದಾರು ಕಿಲೊ ಮಾತ್ರ ಕೊಟ್ಟಿದ್ದಾರೆ. ಅಲ್ಲಿ ೩೦ರಿಂದ ೩೬ ಸಾವಿರದವರೆಗೂ ಜನಸಂಖ್ಯೆ ಇರುತ್ತದೆ. ಗೋಧಿ ಬೇಕಾದಷ್ಟು ಇದೆಯೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ ಜವರ್ ಇಲ್ಲವೆಂದು ಹೇಳಿದರು. ಒಂದು ಕಾರ್ಡಿಗೆ ಒಬ್ಬನಿಗೆ ಎಷ್ಟು ಕೊಡುತ್ತಿದ್ದಾರೆಂದರೆ

ಶ್ರೀ ಹೆಚ್. ಡಿ. ದೇವೇಗೌಡ .—

ಅದನ್ನು ಇಲ್ಲಿ ಹೇಳಬೇಕೆಂದರೆ ಹೇಳುತ್ತೇನೆ. ಒಂದು ತಿಂಗಳಿಗೆ ಕೇವಲ ಒಂದು ಕಿಲೊ, ಇನ್ನು ಯಾರೋ ಒಬ್ಬ ಮಂತ್ರಿಗಳು ಹೇಳಿದರಂತೆ, ಆ ರೀತಿ ಬರೀ ಹರಿಜನರಿಗೆ ಮಾತ್ರ ಕೊಡಿ ಎಂದು. ಆಗ ನಾನು ಅಧಿಕಾರಿಗಳನ್ನು ಕರೆಸಿ ಅದರ ಬಗ್ಗೆ ಕೇಳಿದೆ. ಆ ರೀತಿ ಒಬ್ಬ ಮಂತ್ರಿಗಳು ಹೇಳಿದ್ದಾರೆಂದು ಕೇಳಿದಗು. ಬೆರೆಯುವರು ಅಂದರೆ ಕಾರ್ಮಿಕರು, ಕೂಲಿಗಾರರು ಊಟ ಮಾಡುವುದಿಲ್ಲವೇ? ಹರಿಜನರಿಗೆ ಇದೇನು ಮೀಸಲಿಲ್ಲ.

ಶ್ರೀ ವಿಶ್ವನಾಥರೆಡ್ಡಿ :—ಯಾರು ಆ ರೀತಿ ಹೇಳಿದರು ?

ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ರಥೋಡ್ ಅವರು. ಇಂತಹ ಸಮಸ್ಯೆ ನಿಜವಾಗಿ ಉದ್ಭವವಾಗಬಾರದು. ಸಫಿಷಿಯಂಟ್ ಕ್ವಾಂಟಿಟಿ ಗೋಧಿ ಎಷ್ಟು ಬೇಕು. ಮತ್ತು ಮಿನಿಮಂ ರಿಕ್ವೈರ್ ಮೆಂಟ್ಸ್ ಎಷ್ಟೆಷ್ಟು ಬೇಕು ಎಂಬುದನ್ನು ನಿರ್ಧಾರಮಾಡಬೇಕು. ಆ ಒಂದು ದೃಷ್ಟಿಯಿಂದ ನಾನು ಹೇಳು ತ್ತಿದ್ದೇನೆ. ಇವತ್ತು ಹಳ್ಳಿಗಳ ಕಡೆ ಫೇರ್‌ಪ್ರೈಸ್ ಡಿಪೋಗಳನ್ನು ಓಪನ್ ಮಾಡಿ ಆಹಾರ ಡಿಸ್ಟ್ರಿಬ್ಯೂಟ್ ಮಾಡಿರುವ ಕ್ರಮ ಏನೇನು ಸರಿಯಾಗಿಲ್ಲ ಅದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಒಂದು ರೀತಿಯಲ್ಲಿ ಬರೀ ಡಿಸ್ಟ್ರಿಬ್ಯೂಷನ್ ಸೆಂಟರ್‌ಗಳನ್ನು ಮಾತ್ರ ಮಾಡಿದ್ದಾರೆ. ಪರಿಸ್ಥಿತಿ ಬಹಳ ಉಗ್ರವಾಗಿರುತ್ತದೆ. ಕೆಲವು ಹೋಬಳಿಗಳಿಗೆ ಹೋದರೆ, ಅಲ್ಲಿನ ಸ್ಥಿತಿ ಮರುಭೂಮಿ ಯಂತೆ ಇರುವು ದನ್ನು ನೋಡಿ ನನಗೆ ಬಹಳ ಸಂಕಟವಾಗಿದೆ. ತಾವೆ ಇದನ್ನು ಖುದ್ದಾಗಿ ಹೋಗಿ ನೋಡಿ ಕೊಂಡು ಬಂದು ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಸಾಲ ಕೊಡುತ್ತೀರಿ ಆದರೆ ಅದರ ಮೇಲೆ ಜಾಮೀನು, ಆಧಾರ, ಭೋಗ್ಯ, ಮಾಡಿ ಕೊಂಡುಕೊಡಿ ಎಂದು ಹೇಳುತ್ತೀರಿ ೫೦-೧೦೦ ರೂಪಾಯಿಗಳನ್ನು ಕೊಡುವುದಕ್ಕೆ ಸರಿಯಾದ ಒಂದು ಆದೇಶ ಕೊಡಬೇಕು ಎಲ್ಲೆಲ್ಲಿ ನೀರಿನ ತೊಂದರೆ ಇದೆಯೋ ಅಲ್ಲಿ ಸುಮಾರು ಐದಾರು ಮೈಲಿಗಳಿಂದ ನೀರನ್ನು ಟ್ರಕ್ಸ್‌ನಿಂದ ತರಬೇಕು, ಅದನ್ನು ಪಿ.ಡಬ್ಲ್ಯು.ಡಿ ಓಳ ವರ್ಕ್ಸ್‌ಗೆ ಚಾರ್ಜ್‌ಮಾಡಿ ಆ ಪ್ರದೇಶಗಳಲ್ಲಿ ನೀರನ್ನು ಒದಗಿಸುವುದಕ್ಕೆ ಹುಕುಂ ಕೊಡಬೇಕು. ನೀವು ಇನ್ನೂ ರಿಗ್ಸ್ ಅಲಾಟ್ ಮಾಡುವುದಕ್ಕೆ ಹೋಗಿಲ್ಲ ಎಲ್ಲೆಲ್ಲಿ ಇಂತಹ ಪರಿಸ್ಥಿತಿ ಇದೆಯೋ ಅಂತಹ ಕಡೆಗಳಲ್ಲಿ ರಿಗ್ ಯಂತ್ರಗಳನ್ನು ಕಳುಹಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳಲ್ಲಿರತಕ್ಕ ರೈತರು ಯಾವರೀತಿಯಲ್ಲಿ ಕೆಲಸಮಾಡಬೇಕೆಂಬುದನ್ನು ನೋಡಿ ಅದರ ಬಗ್ಗೆ ಒಂದು ಹುಕುಂ ಕೊಡಬೇಕು. ಬಿಜಾಪುರ ಜಿಲ್ಲೆಯೊಳಗೆ ಲ್ಯಾಂಡ್ ಡೆವಲಪ್ ಮೆಂಟ್ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಬಂದಿದ್ದಾಗ, ಅಲ್ಲಿನ ಸ್ಥಿತಿಗಳನ್ನು ನೋಡಿದರು. ಇಂಡಿ ತಾಲ್ಲೂಕಿಗೆ ಬಂದು ಅಲ್ಲಿನ ಪರಿಸ್ಥಿತಿಯನ್ನೂ ಸಹ ನೋಡಿದರು. ಪ್ರತಿಯೊಂದು ತಾಲ್ಲೂಕಿಗೂ ೧೦೦ ಬಾವಿಗಳನ್ನು ತೆಗೆದುವುದಕ್ಕೆ ಆರ್ಡರ್ ಮಾಡಿದ್ದಾರೆ. ಎಲ್ಲೆಲ್ಲಿ ನೀರಿನ ಅಭಾವ ಇದೆಯೋ ಅಲ್ಲಲ್ಲಿ ಭಾವಿ ಗಳನ್ನು ತೋಡಿಸಲಿ ಎಂದು ಹೇಳುತ್ತೇನೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಸಾಲ ಇನ್ನೂ ತೆಗೆದುಕೊಂಡಿಲ್ಲವೆಂದು ಹೇಳುತ್ತಾರೆ. ಅವರು ಹೇಳಿದ ರೀತಿಯಲಿ ಈ ಸಾಲದ ಅರ್ಜಿಗಳನ್ನು ಬಿಲ್ಡ್ ಅಫ್ ಮಾಡುವ ಬಗ್ಗೆ ಪರ್ಮನೆಂಟಾಗಿ ಒಂದು ಕ್ರಮ ತೆಗೆದುಕೊಳ್ಳಬೇಕು ಸುಮ್ಮನೆ ತರಾತುರಿಯಿಂದ ತೆಗೆದುಕೊಳ್ಳಿ ಎಂದು ಹೇಳಿದರೆ ಅದು ಆಗುವುದಿಲ್ಲ. ಲೋನ್ ಬಿಲ್ಡಪ್ ಮಾಡಬೇಕು. ಅದಕ್ಕೆ ೩ ತಿಂಗಳು ಬೇಕು ಅದರ ಬಗ್ಗೆ ತಹಸೀಲ್ದಾರರ ಸರ್ಟಿಫಿಕೇಟನ್ನು ಒದಗಿಸಬೇಕು. ಅಧಿಕಾರಿಗಳಾದವರು ಅದನ್ನು ಒದಗಿಸಬೇಕೆಂದು ಹೇಳುತ್ತೇನೆ ಜಾಗ್ರತೆಯಾಗಿ ಲೋನ್ ಅಪ್ಲಿಕೇಷನ್‌ಗಳನ್ನು ಬಿಲ್ಡಪ್ ಮಾಡಿ. ಇಲ್ಲದಿದ್ದರೆ ಬಾವಿಗೋಸ್ಕರ ಹಣಕ್ಕಾಗಿ ರೈತರು ಕಾಯಬೇಕಾಗುತ್ತದೆ. ಈ ಬಗ್ಗೆ ಕಂದಾಯ ಮಂತ್ರಿಗಳಿಗೆ ಈಗಾಗಲೇ ಅನೇಕ ವಿಷಯಗಳನ್ನು ಹೇಳಿದ್ದೇನೆ ಬಾವಿಗಳಿಗಾಗಿ ಹನಿದ ಸ್ಕೇರ್ಸಿಟಿ ಬಹಳ ವಾಗಿದೆ. ಕಂದಾಯ ಖಾತೆಯನ್ನು ಅಭಿವೃದ್ಧಿ ಮಾಡಿ ರೈತರಿಗೆ ಸಾಲ ಕೊಟ್ಟರೆ ತ್ವರಿತವಾಗಿ ಕೆಲಸ ಕಾರ್ಯಗಳು ಆಗುತ್ತವೆ. ದಯವಿಟ್ಟು ಅದನ್ನು ಮಾಡಬೇಕೆಂದು ಹೇಳುತ್ತೇನೆ ಈ ಪ್ರಕಾರ ಸೂಚನೆಯನ್ನು ತಾವು ಅಧಿಕಾರಿಗಳಿಗೆ ಕೊಟ್ಟಿಲ್ಲ. ದಯವಿಟ್ಟು ಮಾನ್ಯ ಮಂತ್ರಿಗಳು ಅದರ ಸಲುವಾಗಿ ಸೂಕ್ತ ಸೂಚನೆ ಯನ್ನು ಅಧಿಕಾರಿಗಳಿಗೆ ಕೊಟ್ಟರೆ ಅನುಕೂಲವೆಂದು ಅಧ್ಯಕ್ಷಣಿಯವರ ಮುಖಾಂತರ ಕಳಕಳಿಯಿಂದ ನಾನು ವಿನಂತಿಮಾಡಿಕೊಳ್ಳುತ್ತೇನೆ.

† ಶ್ರೀ ಎನ್. ಹುಚ್ಚುಮಾಸ್ತಿಗೌಡ (ಕಂದಾಯ ಸಚಿವರು) ಮಾನ್ಯ ಅಧ್ಯಕ್ಷರೇ ಈ ಸಮಯದಲ್ಲಿ ಈ ವಿಷಯ ಪ್ರಸ್ತಾಪವಾಗುತ್ತದೆಂದು ನಾನು ತಿಳಿದಿರಲಿಲ್ಲ. ನಾನು ಸಂಚಾರಮಾಡಿಕೊಂಡು ಬಂದಿದ್ದರಲ್ಲಿ ಬೆಳಗಾಂ ಭಾಗದಲ್ಲಿ ನೋಡಿದರೆ ಅದು ಬಹಳ ತೊಂದರೆಗೆ ಈಡಾಗಿರತಕ್ಕ ಪ್ರದೇಶವಾಗಿದೆ. ಬಿಜಾಪುರ ಜಿಲ್ಲೆಯ ಮಂಕ್ಕಾಲುಭಾಗ ಪ್ರದೇಶ, ಗುಲ್ಬರ್ಗಾದ ಕೆಲವು ಪ್ರದೇಶಗಳು, ಬೆಳಗಾಂ ಜಿಲ್ಲೆಯ ರಾಮದುರ್ಗ

ಆತಣಿ, ಹಾಗೂ ಗೋಕಾಕ್ ತಾಲ್ಲೂಕುಗಳಲ್ಲಿ ಸುಮಾರು ಅರ್ಧಭಾಗದಷ್ಟು ಪ್ರದೇಶಗಳು ಬಹಳ ಕಷ್ಟ ಪರಿಸ್ಥಿತಿಯಲ್ಲಿವೆ. ಇನ್ನು ಇಂಡಿ, ಸಿಂಧಗಿ, ಬಾಗೇವಾಡಿ, ಹಾಗೂ ಮುದ್ದೇಬಿಹಾಳ ಈ ಪ್ರದೇಶಗಳನ್ನು ನೋಡಿದಾಗ ಅಲ್ಲಿ ವ್ಯವಸಾಯ ಪ್ರದೇಶಗಳು ಇರುವ ಕಡೆಗಳಲ್ಲಿ ಕೇವಲ ೧೦ ಕುಂಟೆ ಪ್ರದೇಶ ಬಿಟ್ಟರೆ ಇನ್ನೆಲ್ಲೂ ಹಸೂರು ಕಾಣುವುದಿಲ್ಲವೆಂದು ನನಗೆ ಸ್ಪಷ್ಟವಾಗಿ ಕಾಣುತ್ತಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ಅಫ್ ಜಲ್‌ಪುರ್, ಆಲಂದ ಜೇವರ್ಗಿ, ಸೇಡಂ ಮತ್ತು ಚಿತಾಪುರ, ಶಹರಾಬಾದ್ ಭಾಗಗಳನ್ನೂ ಸಹ ನಾನು ನೋಡಿಕೊಂಡು ಬಂದಿದ್ದೇನೆ ಅಲ್ಲಿಗೆ ನಾನು ಹೋಗಿದ್ದ ಹಿಂದಿನ ದಿವಸ ಎದುರುಪಕ್ಷದ ನಾಯಕರಾದಂಥ ಮಾನ್ಯ ಶ್ರೀ ದೇವೇಗೌಡರೂ ಸಹ ಸಂಚಾರ ಮಾಡಿದ್ದಾರೆಂದು ಗೊತ್ತಾಗಿದೆ. ನಾನು ಸಂಚಾರ ಮಾಡಿದಾಗ ಅಲ್ಲಲ್ಲಿ ಸಂಬಂಧಪಟ್ಟ ಶಾಸಕರನ್ನು ಸಹ ನಾನೂ ನೋಡಿದ್ದೇನೆ. ನಿಜವಾಗಿ ಅಲ್ಲಿ ಕಷ್ಟ ಪರಿಸ್ಥಿತಿ ಇಯೆಂಬುದು ಸ್ಪಷ್ಟವಾಗಿ ಕಾಣುತ್ತದೆ. ಈಗ ಆ ಊರುಗಳಲ್ಲಿ ಇರತಕ್ಕ ಜನಗಳಿಗೆ ಮೂರು ಮೈಲಿಗಳ ರೇಡಿಯಸ್‌ನೊಳಗೆ ಯಾದಾದರೂ ಕೆಲಸಗಳನ್ನು ಒದಗಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದೇನೆ. ಅವರಂತೆ ಕೆಲಸಗಳು ಆರಂಭವಾಗಿ ನಡೆಯುತ್ತಿವೆ. ಬಿಜಾಪುರ ಜಿಲ್ಲೆಯನ್ನು ನಾನು ೧೧ನೇ ತಾರೀಖು ಸಾಯಂಕಾಲ ಬಿಟ್ಟಾಗ, ೫೦ ೩೦೦ ಜನರು ಕೆಲಸಮಾಡುತ್ತಿದ್ದರೆಂಬುದಾಗಿ ಪೂರಾ ವರದಿ ಕೊಟ್ಟರು ಒಂದು ವರ್ಷಕ್ಕೆ ಅದಕ್ಕಾಗಿ ೮೦ ಸಾವಿರ ರೂಪಾಯಿಗಳು ಖರ್ಚಾಗುತ್ತದೆಂದು ಅಲ್ಲಿನ ಜಿಲ್ಲಾಧಿಕಾರಿಗಳು ನನಗೆ ತಿಳಿಸಿದರು. ಇನ್ನು ಅಲ್ಲಿನ ಧಾನ್ಯಗಳ ಹಂಚಿಕೆ ವಿಷಯ ಹೇಳಿದರೆ ಒಂದೊಂದು ಊರಿನಲ್ಲಿ ಅಲ್ಲಿ ನಮ್ಮ ಭಾಗದಲ್ಲಿರುವ ಹಾಗೆ ಸಣ್ಣ ಸಣ್ಣ ಊರುಗಳು ಇಲ್ಲ. ಅಲ್ಲಿ ಸುಮಾರು ೧೧ ಊರುಗಳಿವೆ ಪ್ರತಿಯೊಂದು ಊರಿನಲ್ಲಿ ಧಾನ್ಯ ಹಂಚಿಕೆ ಈಗಾಗಲೇ ಮಾಡಿದ್ದಾರೆ. ಎಲ್ಲಿ ಕಡಿಮೆ ಆಹಾರ ಹಂಚಿಕೆಯಾಗಿ, ಇನ್ನೂ ಜಾಸ್ತಿ ಬೇಕೆಂದು ಹೇಳುತ್ತಾರೊ ಅಲ್ಲಿಗೆ ಅಷ್ಟೂ ಧಾನ್ಯ ಕೊಡಬೇಕೆಂದು ಹೇಳಿದ್ದೇನೆ. ಅದರಲ್ಲಿ ಇಷ್ಟೇ ಎಂದು ನಿಗದಿ ಇಲ್ಲ. ಇಲಾಖಾಧಿಕಾರಿಗಳು ನನ್ನ ಜೊತೆಯಲ್ಲಿಯೇ ಇದ್ದರು. ಅವರಿಗೆ ಕೂಡಲೇ ಮಾರನೆಯ ದಿವಸ ಎಷ್ಟು ಧಾನ್ಯ ಕೊಡಬೇಕೋ ಅಷ್ಟನ್ನು ಕೊಡಬೇಕೆಂದು ತಿಳಿಸಬೇಕೆಂದಿದ್ದೇನೆ. ಆ ಕೆಲಸವನ್ನು ಕೂಡಲೇ ಮಾಡುತ್ತೇನೆ.

ಇನ್ನು ಕುಡಿಯುವ ನೀರಿನ ವ್ಯವಸ್ಥೆಯ ವಿಚಾರದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಸುಮಾರು ೪೬ ಗ್ರಾಮಗಳಲ್ಲಿ ಈ ತೊಂದರೆಯಿದೆ ಅಲ್ಲಿಗೆ ಕೂಡಲೆ ಜಿಲ್ಲಾಧಿಕಾರಿಗಳು ಜನರಿಗೆ ಕುಡಿಯುವ ನೀರನ್ನು ಒದಗಿಸತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಖುದ್ದಾಗಿ ತಿಳಿಸಿದ್ದೇನೆ. ಅಲ್ಲಿ ಕೂಡಲೆ ಬೋರ್ ವೆಲ್ಲಿಗಳನ್ನು ಹಾಕಿಸಿ ನೀರನ್ನು ಸಪ್ಲೆ ಮಾಡಬೇಕೆಂದು ಹೇಳಿದ್ದೇನೆ ಹಾಗೇ ಇಂಡಿ ತಾಲ್ಲೂಕಿನಲ್ಲೂ ಕುಡಿಯುವ ನೀರಿನ ತೊಂದರೆ ಇದೆ. ನಾನು ಕಳೆದ ಅಧಿವೇಶನದಲ್ಲೇ ಇಲ್ಲಿ ತಿಳಿಸಿದ್ದ ಪ್ರಕಾರ ಪಿ ಡಬ್ಲ್ಯು. ಡಿ. ಟ್ಯಾಂಕರುಗಳ ಮೂಲಕ ನೀರನು ಜನರಿಗೆ ಒದಗಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಆ ಪ್ರದೇಶದಲ್ಲಿ ಬೋರ್ ವೆಲ್ಲುಗಳ ಕೆಲಸ ಮುಗಿದು ನೀರು ಜನರಿಗೆ ಅಲ್ಲಿ ಒದಗುವವರೆಗೂ ಈ ಟ್ಯಾಂಕರ್ ಮೂಲಕ ನೀರನ್ನು ಒದಗಿಸಬೇಕೆಂದು ತಿಳಿಸಿದ್ದೇನೆ. ಎಲ್ಲೆಲ್ಲಿ ಹೀಗೆ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಇದೆಯೋ ಅಲ್ಲೆಲ್ಲಾ ಬೋರ್ ವೆಲ್ಲುಗಳನ್ನು ಹಾಕುವ ತನಕ ಬೇರೆ ವ್ಯವಸ್ಥೆ ಮಾಡಿ ಜನರಿಗೆ ನೀರನ್ನು ಒದಗಿಸಬೇಕೆಂದು ಆಜ್ಞೆ ಮಾಡಿದ್ದೇನೆ.

ಆದರೆ ಆಗಲೆ ಒಬ್ಬ ಮನ್ಯ ಸದಸ್ಯರು ಇಲ್ಲಿ ಹೇಳಿದಂತೆ ಆ ಧಾನ್ಯವನ್ನು ಮಾನ್ಯ ಸಚಿವರು ಕೇವಲ ಹರಿಜನರಿಗೆ ಮಾತ್ರ ಹಂಚಿ ಎಂಬುದಾಗಿ ಅಲ್ಲಿ ತಿಳಿಸಿದ್ದಾರೆಂಬ ಮಾತನ್ನು ನಾನಂತೂ ನಂಬಲಾರೆ. ಆದರೆ ಇಂಥ ಒಂದು ದೂರು ಆಕಸ್ಮಿಕವಾಗಿ ಅವರ ಮೇಲೆ ಬರಲು ಬೇರೆ ಕಾರಣ ಇರಬೇಕೆಂದು ನಾನು ಭಾವಿಸುತ್ತೇನೆ. ಆ ಕಾಲದಲ್ಲಿ ನಾನೂ ಕೂಡ ಆ ಸ್ಥಳದಲ್ಲೇ ಇದೆ

ಶ್ರೀ ಎಚ್. ಡಿ. ದೇವೇಗೌಡ;—ನಾನು ಹಾಗೆ ಹೇಳಲಿಲ್ಲ ಅವರು ಬೇರೆಯವರಿಗೆ ಕೊಡಬಾರದು ಎಂದು ಹೇಳಲಿಲ್ಲ. ಅಲ್ಲಿಗೆ ಸರ್ಕಾರದವರು ಒದಗಿಸಿದ್ದ ಧಾನ್ಯದ ಪ್ರಮಾಣವೇ ಬಹಳ ಕಡಮೆ ಇತ್ತು ಆದ್ದರಿಂದ ಅವರು ಇರತಕ್ಕ ಅಲ್ಪಸ್ವಲ್ಪವನ್ನು ಆ ಹರಿಜನರಿಗಾದರೂ ಕೊಡುವುದಕ್ಕೆ ಒಂದು ಸೀಮಿತ ಮಾಡಿ ಎಂದು ಹೇಳಿದ್ದಾರೆಂದು ನನಗೆ ತಿಳಿದು ಬಂದಿದೆ. ಅಷ್ಟೇ ವಿನಾ ಅದನ್ನು ಯಾವ ವೈಮನಸ್ಸಿನಿಂದಲೂ ಹೇಳಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಒಂದುವೇಳೆ ಹಾಗೆ ಧಾನ್ಯ ಹಂಚತಕ್ಕದ್ದು ಬಹಳ ಕಡಮೆ ಇದ್ದಾಗ್ಯೂ ಕೂಡ ಅವರು ಹಾಗೆ ಹರಿಜನರಿಗೇ ಕೊಡಿ ಎಂದು ಹೇಳಿರಲಾರರು ಆ ಮಾತನ್ನು ನಾನು ನಂಬಲಾರೆ. ನಾನು ಈ ಸಭೆಗೆ ಅಲ್ಲಿ ನಾವು ಬರುತ್ತಿರುವಾಗ ನಡೆದ ಒಂದು ವಿಷಯವನ್ನು ಸಭೆಗೆ ತಿಳಿಸುವುದಾದರೆ ದಾರಿಯಲ್ಲಿ ಬರುತ್ತಿದ್ದಾಗ ಅದು ಬಹುಶಃ ಇಂಡಿ ಅಥವಾ ಬಿಜಾಪುರ ತಾಲ್ಲೂಕಿರಬೇಕು—ಅಲ್ಲಿ ಕೆಲಸಮಾಡುತ್ತಿದ್ದ ಒಬ್ಬ ಕೂಲಿಯೊಳು ಓಡುತ್ತಾ ನಮ್ಮ ಕಾರಿನ ಹತ್ತಿರ ಬಂದು: ನಮ್ಮ ಕಡೆಗೆ ಅತನು ಕೈ ಬೆರಳನ್ನೇ ತೋರಿಸುತ್ತಾ 'ನೀವು ಊಟ ಮಾಡಿ ಬಂದಿರುವ ಹಾಗೆ ಕಾಣುತ್ತದೆ' ಆದರೆ ಈ ದಿವಸ ನನ್ನ ಮನೆಯಲ್ಲಿ ನಾನು ನನ್ನ ಹೆಂಡತಿ ಮತ್ತು ಮಕ್ಕಳು ತಿನ್ನುವುದಕ್ಕೇನೂ ಇಲ್ಲದೆ ಉಪವಾಸ ಇದ್ದೇವೆ, ಕೆಲಸಮಾಡುವುದಕ್ಕೆ ಬಹಳ ಸುಸ್ತಾಗುತ್ತಿದೆ. ಧಾನ್ಯ ಇದ್ದವರ ಬಳಿ ಹೋಗಿ ಕೇಳಿದ್ದಕ್ಕೆ ಇಂದಿರಾಗಾಂಧಿ

ಶ್ರೀ ಎನ್. ಹುಚ್ಚಮಾಸ್ತಿಗೌಡ .—

ಯನ್ನು ಹೋಗಿ ಕೇಳು ಅವರು ಕೊಡುತ್ತಾರೆಂದು ಹೇಳಿದರು ಎಂದು ಹೇಳಿ ಕಣ್ಣಲ್ಲಿ ನೀರನ್ನು ಹಾಕಿದ. ಆ ಸನ್ನಿವೇಶವನ್ನು ನೋಡಿದರೆ ಎಂಥವರಿಗಾಗಲಿ ಕಣ್ಣಲ್ಲಿ ನೀರು ಬರುತ್ತದೆ. ಆಗ ನನ್ನ ಜೊತೆಯಲ್ಲೇ ಇದ್ದ ತಹಶೀಲ್ದಾರರಿಗೆ ಹೇಳಿ ಆತನಿಗೆ ೪–೫ ದಿನಗಳ ಕೂಲಿಯನ್ನೂ ಕೊಟ್ಟು ಆದಿವಸ ಸಾಯಂಕಾಲ ಆತನ ಸಂಸಾರಕ್ಕೆ ಸಾಕಷ್ಟು ಧಾನ್ಯವನ್ನು ಕೊಡಿಸಬೇಕು ಮತ್ತು ಆ ವಿಚಾರದಲ್ಲಿ ನನಗೆ ಕೂಡಲೆ ಒಂದು ರಿಪೋರ್ಟನ್ನು ಕಳುಹಿಸಬೇಕೆಂದು ತಿಳಿಸಿ ಬಂದಿದ್ದೆ ಆದರಂತೆ ನನಗೆ ಈಗ ಅಲ್ಲಿ ಅಲ್ಲಿಂದ ವರದಿ ಬಂದಿದೆ, ಆತನಿಗೆ ಹಣವನ್ನು ಕೊಟ್ಟು ಧಾನ್ಯವನ್ನು ಕೊಡಿಸಲಾಗಿದೆ ಎಂದು ಆದರೆ ಆ ಭಾಗದಲ್ಲಿ ಅಂಥ ಒಂದು ತೊಂದರೆಯ ಪರಿಸ್ಥಿತಿ ಇದೆ. ಆದರೆ ಅಲ್ಲಿ ಈಗಾಗಲೆ ಎಲ್ಲಾ ಕಡೆಗಳಲ್ಲೂ ಕೆಲಸ ಪ್ರಾರಂಭವಾಗಿದೆ. ಆದರೆ ಆ ಕೆಲಸಗಾರರಿಗೆ ಕೂಲಿ ಕೊಡುವುದಕ್ಕೆ ಅಧಿಕಾರಿಗಳಲ್ಲಿ ಹಣವಿಲ್ಲ ಎಂಬ ಮಾತು ಸರಿಯಾದ್ದಲ್ಲ. ಮೊನ್ನೆತಾನೆ ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಒಂದೊಂದಕ್ಕೂ ೫೦ ಲಕ್ಷ ರೂಪಾಯಿಗಳನ್ನು ರಿಲೀಜ್ ಮಾಡಲಾಗಿದೆ. ಅದೇ ರೀತಿ ಇನ್ನು ಧಾರ್ವಾಡ, ಬಳ್ಳಾರಿ, ರಾಯಚೂರು, ಬೀದಾರ್ ಮತ್ತು ಚಿತ್ರದುರ್ಗ ಈ ಜಿಲ್ಲೆಗಳಿಗೆ ಒಂದೊಂದಕ್ಕೆ ಒಂದು ಲಕ್ಷ ರೂಪಾಯಿ ಗಳಂತೆ ೨೫ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ ಹೀಗೆ ಹಣವನ್ನು ಕಳುಹಿಸಿ ಇವನ್ನು ಹೆಚ್ಚು ಹೆಚ್ಚು ಕೆಲಸಗಳನ್ನು ಅಲ್ಲಿ ಮೂರು ಮೈಲಿ ಪ್ರದೇಶದೊಳಗೆ ಊರಿಗೆ ಸಮೀಪದಲ್ಲಿ ಕೆಲಸಗಳನ್ನು ತೆಗೆದುಕೊಂಡು ಜನರಿಗೆ ಧಾನ್ಯವನ್ನು ಒದಗಿಸವಂತೆ ವ್ಯವಸ್ಥೆಮಾಡಲಾಗಿದೆ. ನಾನು ಹೋಗಿದ್ದ ಕಡೆಗಳಲ್ಲೂ ಮತ್ತು ಮಾನ್ಯ ಅರ್ಥ ಮಂತ್ರಿಗಳು ಎಲ್ಲೆಲ್ಲಿ ಹೋಗಿದ್ದೆವೋ ಅಲ್ಲಲ್ಲಿ ಜನರು ವಾಸಮಾಡತಕ್ಕ ಊರಿಗೆ ಸಮೀಪದಲ್ಲಿ ಅಂದರೆ ಮೂರು ಮೈಲಿ ಫಾಸಲೆ ಒಳಗೆ ಜನರಿಗೆ ಕೆಲಸಗಳನ್ನು ಒದಗಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ

ಇನ್ನು ಈ ‘ಕಣಿಕೆ’ ವಿಚಾರದಲ್ಲಿ ಅಂದರೆ ದನಗಳು ತಿನ್ನತಕ್ಕ ಜೋಳದ ಕಡ್ಡಿಗೆ ಅಲ್ಲಿ ಕಣಿಕೆ ಎನ್ನುತ್ತಾರೆ. ಅದನ್ನು ಕೊಳ್ಳಲು ಜನರು ತಕಾವಿ ಸಾಲ ಕೊಡಬೇಕೆಂದು ಒತ್ತಾಯ ಮಾಡುತ್ತಿರುವುದಾಗಿಯೂ, ಅದರ ವಿಚಾರದಲ್ಲಿ ೧೦೦ ರೂಪಾಯಿಗಳ ಸಾಲಕ್ಕೆ ತಾಲ್ಲೂಕ್ ಕಚೇರಿಯಲ್ಲಿ ಖರ್ಚು ಬಹಳ ಬರುತ್ತಿದೆ ಎಂದು ಹೇಳಿದ್ದರಿಂದ ನಾನು ಆ ಜಿಲ್ಲಾಧಿಕಾರಿಗಳಿಗೂ ಮತ್ತು ತಹಶೀಲ್ದಾರರಿಗೂ ಆಯಾಯ ಗ್ರಾಮಗಳಿಗೆ ಹೋಗಿ ಎಲ್ಲಿ ಜನರು ಈ ಸಾಲ ಬೇಕೆಂದು ಕೇಳುತ್ತಾರೋ ಅಂಥವರಿಂದ ಆ ಸ್ಥಳದಲ್ಲೇ ಅರ್ಜಿ ತೆಗೆದುಕೊಂಡು ಅಲ್ಲೇ ಅವರಿಗೆ ಹಣವನ್ನು ಮುಂಜೂರು ಮಾಡಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದೇನೆ. ಹಾಗೆ ಸಾಲವನ್ನು ಮಂಜೂರು ಮಾಡತಕ್ಕ ಕಾಲದಲ್ಲಿ ಸಾಧ್ಯವಾದಮಟ್ಟಿಗೂ ಸ್ಥಳೀಯ ಮುಖಂಡರನ್ನು ಅಂದರೆ ಶಾಸನಸಭಾ ಸದಸ್ಯರನ್ನು ಅಥವಾ ತಾಲ್ಲೂಕ್ ಬೋರ್ಡ್ ಸದಸ್ಯರನ್ನೋ ಅಥವಾ ಅಧ್ಯಕ್ಷರನ್ನೋ ಇಟ್ಟು ಕೊಂಡು ಕೆಲಸಮಾಡುವಂತೆ ತಿಳಿಸಿದ್ದೇನೆ. ನಾನು ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಪ್ರವಾಸ ಮಾಡಿಕೊಂಡು ಬರತಕ್ಕ ಕಾಲದಲ್ಲಿ ಜಿಲ್ಲಾಧಿಕಾರಿಗಳಿಗೆ ಮತ್ತು ಡಿವಿಜನಲ್ ಕಮಿಷನರಿಗೆ ಸ್ಪಷ್ಟವಾದ ತಿಳುವಳಿಕೆಯನ್ನು ಕೊಟ್ಟು ಬಂದಿದ್ದೇನೆ

ಇನ್ನು ಅಫ್ಜಲ್‌ಪುರ ಮತ್ತು ಆಲಂದ್ ಈ ಪ್ರದೇಶಗಳಲ್ಲಿ ಅಲ್ಪಸ್ವಲ್ಪ ತ್ತನೆಯಾಗಿದ್ದರೂ ಅದು ಹುಟ್ಟಿಲ್ಲ ಕೆಲವು ಕಡೆ ಮೊಳಕೆಯಾಗಿದ್ದರೂ ಸಾಕಷ್ಟು ಆಗಿಲ್ಲ. ಇನ್ನು ಕೆಲವು ಕಡೆ ಬೆಳೆ ಪೂರಾ ಒಣಗಿ ಹೋಗಿದೆ. ಅಂತೂ ಎಲ್ಲಾ ಕಡೆಗಳಲ್ಲೂ ಅಲ್ಲಿ ಪರಿಸ್ಥಿತಿ ಪೂರಾ ಭೀಕರವಾಗಿದೆ. ನಾನೂ ಮತ್ತು ಮಾನ್ಯ ಅರ್ಥ ಮಂತ್ರಿಗಳೂ ನಮ್ಮ ಪ್ರವಾಸ ಮುಗಿಸಿಕೊಂಡು ವಾಪಸ್ಸು ಬಂದ ನಂತರ ಅಲ್ಲಿನ ಎಲ್ಲಾ ವಿದ್ಯಮಾನಗಳನ್ನೂ ಅವರಿಗೆ ಸಂಪೂರ್ಣವಾಗಿ ವಿವರಿಸಿದೆವು.

ಇನ್ನು ಕಾಳಸಂತೆ ವ್ಯಾಪಾರ ಮತ್ತು ಧಾನ್ಯಗಳನ್ನು ಬಚ್ಚಿಟ್ಟಿರತಕ್ಕವರ ಬಗ್ಗೆ ಕಾನೂನು ಪ್ರಕಾರ ಪೋಲೀಸಿನವರು ಏನೇನು ಕ್ರಮಗಳನ್ನು ಕೈಗೊಳ್ಳಬಹುದೋ ಅವುಗಳನ್ನೆಲ್ಲ ಕೈಗೊಳ್ಳಲು ಖಚಿತವಾದ ತಿಳುವಳಿಕೆಯನ್ನು ಕೊಡಲಾಗಿದೆ ಆ ಬಗ್ಗೆ ಈಗಾಗಲೆ ಪೋಲಿಸಿನವರಿಂದ ಕೆಲವು ಕಡೆ ಧಾನ್ಯಗಳನ್ನು ಪತ್ತೆ ಮಾಡಿರುವುದಾಗಿ ನನಗೆ ವರದಿಗಳು ಬಂದಿವೆ. ಆ ಕಷ್ಟಪರಿಸ್ಥಿತಿಯಲ್ಲಿ ಇರತಕ್ಕ ಪ್ರದೇಶದ ಜನರ ವಿಚಾರದಲ್ಲಿ ಮಾನ್ಯ ಸದಸ್ಯರುಗಳಿಗೆಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೂ ಇದೆ ಎನ್ನುವುದರಲ್ಲಿ ಯಾರಿಗೂ ಸಂಶಯಬೇಡ.

ಇನ್ನು ಬಾವಿಗಳನ್ನು ತೆಗೆಸುವುದಕ್ಕೂ ಮತ್ತು ತೆಗೆದಿದ್ದು ನೀರು ಇಲ್ಲದೆ ಇರತಕ್ಕ ಬಾವಿಗಳನ್ನು ಆಳಮಾಡುವುದಕ್ಕೆ ಸಾಲ ಕೇಳುತ್ತಿದ್ದಾರೆ ಅದಕ್ಕೆ ಭೂ ಅಭಿವೃದ್ಧಿ ಬ್ಯಾಂಕಿನವರು ಸಾಲ ಕೊಡಲು ಅವರು ರೆಕಾರ್ಡು ಮಾಡತಕ್ಕ ಪ್ರೊಸೀಜರೇನಿದೆ ಅದು ಸ್ವಲ್ಪ ದೊಡ್ಡದು. ಅದನ್ನು ಆದಷ್ಟು ಕಡಿಮೆ ಮಾಡುವುದಕ್ಕೆ ಅವರೊಂದಿಗೆ ಚರ್ಚೆಮಾಡಬೇಕೆಂದಿದ್ದೇನೆ. ಈ ಬಾಬಿಗೆ ಹಿಂದೆ ಆ ‘೩೪’ ಬಾಬಿನಲ್ಲಿ ಕೊಟ್ಟಿರತಕ್ಕ ಹಣದಲ್ಲೂ ಬಾವಿಗೆ ಬಳಸಿದ್ದಾರೆ. ಕಳೆದ ವರ್ಷ ಬಿಜಾಪುರದಲ್ಲಿ ಈ ಬಾಬಿಗೆ ೧೪ ಲಕ್ಷ ರೂಪಾಯಿ ಖರ್ಚಾಗಿದೆ.

ಒಬ್ಬ ಮಾನ್ಯ ಸದಸ್ಯರು :—ಜಮೀನಿಲ್ಲದವರಿಗೆ ಕಣಿಗೆ ಸಾಲ ಕೊಡುತ್ತಿದ್ದಾರೆ. ಇದನ್ನು ಸರಿಪಡಿಸು ವುದಕ್ಕೇನು ಮಾಡಿದ್ದೀರಾ? ಜಮೀನಿದ್ದವರಿಗೇ ಸಾಲ ಸಿಕ್ಕುತ್ತಿಲ್ಲ. ಕೆಲಸ ಮಾಡತಕ್ಕ ವಿಚಾರದಲ್ಲಿ ಪಿಡಬ್ಲ್ಯೂಡಿ. ಮತ್ತು ಟಿ. ಡಿ. ಬಿ. ಅವರೂ ಕೂಡುವುದಕ್ಕೆ ಅವಕಾಶವಿಲ್ಲವೇ ?

೩.೩೦ PM

ಶ್ರೀ ಬಾಪುಗೌಡ ರಾಯಪ್ಪ ತಕಾವಿ ಸಾಲ ಹಳ್ಳಿಗಳಲ್ಲಿ ಹಂಚಿದ್ದಾರೆ. ಆದರೆ ಕಾಯಿದೆ ಅಡ್ಡ ಬರುವುದು. ರೆವೆನ್ಯೂ ಸೆಕ್ರೆಟರಿಗಳಿಗೆ ಹೇಳಿ ಕಾಯಿದೆ ತಿದ್ದುಪಡಿ ಮಾಡಿದರೆ ಅಧಿಕಾರ ಬರುವುದು. ಅಲ್ಲಿಯವರೆಗೆ ಕೆಲಸವಾಗುವುದಿಲ್ಲ. ಎಷ್ಟು ಕೆಲಸ ಪ್ರಾರಂಭವಾಗಿದೆ ಎಂಬುದನ್ನು ಪ್ರತಿ ದಿವಸ ತಿಳಿದುಕೊ ಳ್ಳಬೇಕು. ಕಂಟ್ರೋಲ್ ಇದ್ದ ಕಾಲದಲ್ಲಿ ಮಾಡಿದಂತೆ ಇಲಾಖೆ ಕೆಲಸಮಾಡಬೇಕು. ಪ್ರತಿಯೊಂದು ಹಳ್ಳಿಯಲ್ಲೂ ಎಷ್ಟು ಕೆಲಸವಾಗಿದೆ ಎಂದು ತಿಳಿದು ನಾಳೆ ನಾಡಿದ್ದರಲ್ಲ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಕೆಲಸವಾಗಿದೆ ಎಂಬುದನ್ನು ತಿಳಿದು ಒಂದು ತಪಶೀಲಾದ ಸ್ಟೇಟಮೆಂಟ್ ಮಾಡಿದರೆ ಅನುಕೂಲವಾಗುವುದು.

ಶ್ರೀ ಎಸ್ ವೈ ಪಾಟೀಲ್ (ಸಿಂದಗಿ) ಅಲ್ಲಿರುವ ಸ್ಥಿತಿಯೇ ಬೇರೆ, ಹೇಳುವುದೇ ಬೇರೆ ಆಗಿದೆ. ಕೆಲಸ ಕೇಳಿದರೆ ಇಂದಿರಾ ಗಾಂಧಿಯವರ ಹತ್ತಿರಕ್ಕೆ ಹೋಗಿ ಎಂದು ಹೇಳುತ್ತಿದ್ದಾರೆ. ಇದನ್ನು ಪ್ರಾಮಾಣ ಕವಾಗಿ ಹೇಳುತ್ತಿದ್ದೇನೆ. ಇದು ನನ್ನ ಅನುಭವ. ತಮ್ಮ ಕನಿಕರ, ಔದಾರ್ಯ ವ್ಯಕ್ತವಾಗುವುದು ಕೃತಿಯಲ್ಲಿ. ಸಿಂದಗಿ ತಾಲ್ಲೂಕಿನ ಪರಿಸ್ಥಿತಿ ಬೇರೆ ಇದೆ. ಕೆಲವು ತಾಲ್ಲೂಕುಗಳಲ್ಲಿ ಎರಡು ವರ್ಷದಿಂದ ಮಳೆಯಿಲ್ಲ, ಕೆಲವು ಕಡೆ ಒಂದು ವರ್ಷದಿಂದ ಮಳೆಯಿಲ್ಲ, ಮತ್ತೆ ಕೆಲವು ಕಡೆ ೬ ತಿಂಗಳಿಂದ ಮಳೆಯಿಲ್ಲ. ಸಿಂದಗಿ ತಾಲ್ಲೂಕಿನಲ್ಲಿ ೨ ವರ್ಷ ೯ ತಿಂಗಳಿಂದ ಮಳೆಯಾಗಿಲ್ಲ. ಎಲ್ಲೆಲ್ಲಿ ಏನೇನು ಕೆಲಸಮಾಡಲು ಅವಕಾಶಮಾಡಿದೆ, ಕಟ್ಟಡದ ಕೆಲಸ, ರಸ್ತೆ ಕೆಲಸ ವಗೈರೆ ಏನೇನು ಮಾಡಲು ವ್ಯವಸ್ಥೆಮಾಡಿದೆ ಎಂಬ ಪಟ್ಟಿಯನ್ನು ನನಗೆ ಕೊಡಿ. ಸೊಸೈಟಿ ಮತ್ತು ಪಂಚಾಯಿತಿಗಳಿಗೆ ಧಾನ್ಯ ತರಲು ಹೋದರೆ ಪ್ರತಿಯೊಂದು ಊರಿನಲ್ಲೂ ಎರಡು ಪಕ್ಷಗಳಿವೆ. ಇದರಿಂದ ಅರ್ಧ ಜನರಿಗೆ ಸರಿಯಾಗಿ ಧಾನ್ಯ ಸಿಗದೆ ಉಪವಾಸವಿದ್ದಾರೆ. ದುಡಿಯುವವರಿಗೆ ರೊಕ್ಕ ತೆಗೆದುಕೊಂಡು ಧಾನ್ಯ ಕೊಡಿ, ದುಡಿಯಲು ಶಕ್ತಿಯಿಲ್ಲದಿರುವವರಿಗೆ ೬೫ ವರ್ಷವಾಗಿ ಕೆಲಸ ಮಾಡಲು ಕೈಲಾಗದೆ ಇರುವವರಿಗೆ ಅನ್ನದ ವ್ಯವಸ್ಥೆ ಮಾಡಿ. ಹಿಂದೆ ಹಾಗೆ ಮಾಡುತ್ತಿದ್ದರು. ಕೊಳ್ಳಲು ಸಾಮಗ್ರಿ ಇಲ್ಲ, ವಿಲೇಜ್ ಲೆವಲ್ ವರ್ಕರ್ಸ್ ಇಲ್ಲ ಅಭಾವವಿರುವ ಕಡೆ ನೋಡಿ ಬಂಡಿಗ್ ಮುಂತಾದ ಕೆಲಸ ತೆಗೆದುಕೊಳ್ಳಲು ಆರ್ಡರು ಮಾಡಿ. ನಾವು ಊರಿಗೆ ಹೋಗುವುದರೊಳಗೆ ಎಲ್ಲೆಲ್ಲಿ ಏನೇನು ವ್ಯವಸ್ಥೆ ಮಾಡಿದೆ ಎಂಬ ಬಗ್ಗೆ ಒಂದು ಪಟ್ಟಿ ಕೊಡಿ, ಅದನ್ನು ಜನರಿಗೆ ತೋರಿಸುತ್ತೇವೆ ಧಾನ್ಯವನ್ನು ಹಂಚಬೇಕು.

ಶ್ರೀ ಎನ್ ಹುಚ್ಚಮಾಸ್ತಿಗೌಡ :—ಮಾನ್ಯ ಸದಸ್ಯರು ನಾನು ಪ್ರವಾಸ ಹೋದಾಗ ನನ್ನ ಜೊತೆಯಲ್ಲಿ ಬಂದಿದ್ದರು. ಅವರು ಹೇಳಿದ ಕಡೆ ಕೆಲಸ ಪ್ರಾರಂಭವಾಗಿರುವುದನ್ನು ಅವರು ಕಣ್ಣಾರೆ ನೋಡಿ ಬಂದಿದ್ದಾರೆ.

ಶ್ರೀ ಎಸ್ ವೈ ಪಾಟೀಲ್ ;—ಕೆಲಸ ಪ್ರಾರಂಭವಾಗಿಲ್ಲ, ಎಲ್ಲಿ ಆಗಿದೆ ಎಂಬ ಬಗ್ಗೆ ಸ್ಥಳದ ಹೆಸರು ಹೇಳಿ.

ಶ್ರೀ ಎನ್ ಹುಚ್ಚಮಾಸ್ತಿಗೌಡ :—ಆ ವಿವರ ಬೇಕಾದರೆ ಕೊಡುತ್ತೇನೆ ಅದು ಈಗ ನನ್ನಲ್ಲಿಲ್ಲ. ಅವರು ತಾವು ನೋಡಿಲ್ಲವೆಂದು ಹೇಳಿದರೆ ಅದಕ್ಕೇನು ಹೇಳಬೇಕೋ ತಿಳಿಯದು. ಕೇಳಿದರೆ ಇಂದಿರಾ ಗಾಂಧಿಯವರನ್ನು ಕೇಳಿ, ಕೊಡುವರು ಎಂದು ತಿಳಿಸಿದರೆಂದು ಹೇಳುವರು. ನನಗೆ ಅದನ್ನು ಕೂಲಗಾರರು ಹೇಳಿದರು. ಅವರೂ ನಮ್ಮವರೇ. ನಿಮ್ಮವರು ಕೆಲಸದ ಹತ್ತಿರ ಬರಲಿಲ್ಲ, ಅಲ್ಲಿ ನಮ್ಮವರು ಮಾತ್ರ ಇದ್ದರು. ಅವರು ತಿಳಿಸಿದ ಪ್ರಕಾರ ಕೆಲಸಕಾರ್ಯ ಕೈಕೊಂಡಿದ್ದೇವೆ. ಕೆಲವು ಊರುಗಳಲ್ಲಿ ಪಾರ್ಟಿಗಳಿವೆ, ಪಂಚಾಯಿತಿ ಮತ್ತು ಸೊಸೈಟಿಗಳಲ್ಲಿ ಪಾರ್ಟಿಗಳಿವೆ, ಒಂದು ಪಕ್ಷದ ಕೈಲಿ ಕೆಲವು ಸೊಸೈಟಿಗಳಿವೆ, ಆದರಲ್ಲಿ ರುವವರು ಸರಿಯಾಗಿ ಎಲ್ಲರಿಗೂ ಧಾನ್ಯ ಹಂಚದೇಹೋದುದರಿಂದ ನಮ್ಮ ಅಧಿಕಾರಿಗಳಿಗೆ ಅಂಗಡಿ ತೆಗೆದು ಧಾನ್ಯ ಕೊಡಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದೇವೆ.

ಸಾಯಿಲ್ ಕನಸರ್ವೇಷನ್ ಸಿಬ್ಬಂದಿಯಿಲ್ಲವೆಂದು ಹೇಳಿದ್ದಾರೆ :—ನಿಜ. ನಾನು ಇಲ್ಲಿಂದ ಹೊರಡು ವುದಕ್ಕೆ ಮುಂಚೆ ೧೫೦ ಜೂನಿಯರ್ ಎಂಜಿನಿಯರುಗಳನ್ನು ನೇಮಿಸಿ ಕೆಲಸ ಪ್ರಾರಂಭಿಸಬೇಕು ಎಂದು ಹೇಳಿರುವುದೂ ಅಲ್ಲದೆ ಅಭಾವ ಹೆಚ್ಚಾಗಿಲ್ಲದಿರುವ ಕಡೆ ಸಾಯಿಲ್ ಕನಸರ್ವೇಷನ್ ಕೆಲಸಕ್ಕೆ ನೇಮಿಸಿರುವ ಸಿಬ್ಬಂದಿಯನ್ನು ಕರೆಸಿ ಅಭಾವ ಹೆಚ್ಚಾಗಿರುವ ಕಡೆ ಅವರಿಂದ ಕೆಲಸ ಮಾಡಿಸಿ ಎಂದು ತಿಳಿಸಿದ್ದೇವೆ. ೧೫ ದಿವಸಗಳಲ್ಲಿ ಹೊಸದಾಗಿ ನೇಮಕ ಮಾಡಿರುವವರಿಗೆ ತಾತ್ಕಾಲಿಕವಾಗಿ ಶಿಕ್ಷಣ ಕೊಟ್ಟು ಅವರಿಂದ ಕೆಲಸ ತೆಗೆದುಕೊಳ್ಳಬೇಕು ಎಂದು ತಿಳಿಸಿದೆ. ಇಷ್ಟು ವ್ಯವಸ್ಥೆಮಾಡಿದೆ.

ಶ್ರೀ ಎಚ್ ಡಿ ದೇವೇಗೌಡ :—ನಮ್ಮ ಪಕ್ಷದವರು ಸೊಸೈಟಿಗಳಲ್ಲಿ ಹೆಚ್ಚಾಗಿರುವ ಕಡೆ ಆಹಾರ ಧಾನ್ಯ ಸರಿಯಾಗಿ ಹಂಚುತ್ತಿಲ್ಲವೆಂದು ಹೇಳಿದರು. ಪೂರ್ಣವಾಗಿ ವಿಚಾರ ತಿಳಿದುಕೊಂಡು ಹೇಳಿದರೆ ಒಳ್ಳೆಯದು. ಇಂದು ಆಹಾರ ಧಾನ್ಯಗಳನ್ನು ಕೊಳ್ಳಲು ಸೊಸೈಟಿಗಳಲ್ಲಿ ಹಣವೇ ಇಲ್ಲ, ಸೊಸೈಟಿಗಳವರು ಡಿಫಾಲ್ಟರ್ಸ್ ಆಗಿದ್ದಾರೆ.

ಶ್ರೀ ಎಸ್ ಹುಚ್ಚಮಾಸ್ತಿಗೌಡ :—ನಾನು ಸೊಸೈಟಿಗಳಿಗೆ ಹೋದಾಗ ಪ್ರತಿಯೊಂದು ಸೊಸೈಟಿಯಲ್ಲೂ ಹಣವೆಷ್ಟಿದೆ, ಕೊಳ್ಳಲು ಸಾಧ್ಯವೇ ಎಂದು ಕೇಳಿದ್ದೇನೆ. ಪಂಚಾಯಿತಿಯವರನ್ನೂ ವಿಚಾರಿಸಿದ್ದೇವೆ ಕೊಳ್ಳಲು ಹಣವಿಲ್ಲದಿರುವ ಕಡೆಗಳಿಗೆ ಹಣ ಒದಗಿಸಲು ವ್ಯವಸ್ಥೆಮಾಡಿದೆ. ಡಿಫಾಲ್ಟರ್ಸ್ ಆಗಿರುವ ಸೊಸೈಟಿಗಳವರು ಕೆಲವರು ಮುಂದೆ ಬಂದಿಲ್ಲ, ಈ ನ್ಯೂನತೆಯಿದೆ. ಇದು ರಿಕವರಿ ನಿಲ್ಲಿಸಬೇಕು, ಸಾಲ ವಸೂಲುಮಾಡಲು ಸಾಧ್ಯವಿಲ್ಲ.

ಶ್ರೀ ಎಚ್ ಡಿ ದೇವೇಗೌಡ :—ವಸೂಲುಮಾಡಬಾರದೆಂದು ತಿಳಿಸಿದ್ದಾರೆ. ಆದರೆ ವಸೂಲಿ ನಿಲ್ಲಿಸಬೇಕೆಂದು ಇಂದು ತಿಳಿಸಿಲ್ಲ.

(*MR Deputy Speaker in the Chair*)

ಶ್ರೀ ಸಿ. ಬೈರೇಗೌಡ :—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರುವುದನ್ನು ನೋಡಿದರೆ ಮೈಸೂರು ರಾಜ್ಯದಲ್ಲಿ ಬಿಜಾಪುರ ಮತ್ತು ಗುಲ್ಬರ್ಗಾ ಬಿಟ್ಟು ಬೇರೆ ಕಡೆ ಬರಗಾಲ ಇಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಕಾಣುತ್ತದೆ ಏತಕ್ಕೆಂದರೆ ಆ ಜಿಲ್ಲೆಯ ವಿಚಾರವಾಗಿ ಪತ್ರಿಕೆಯಲ್ಲೂ ಬಂದಿದೆ ಮತ್ತು ಈ ಸಭೆಯಲ್ಲೂ ಕೂಡ ಆ ಜಿಲ್ಲೆಯ ಪ್ರಸ್ತಾಪವನ್ನೇ ಎತ್ತಿರುವುದರಿಂದ ನಾವು ತಿಳಿದುಕೊಳ್ಳಬಹುದು. ನಾನು ನನ್ನ ಕ್ಷೇತ್ರದ ವಿಚಾರವಾಗಿ ಹೇಳುವುದಾದರೆ ಕೋಲಾರ ಜಿಲ್ಲೆಯಲ್ಲಿ ಬರಗಾಲ ಗುಲ್ಬರ್ಗಾ ಮತ್ತು ಬಿಜಾಪುರದಷ್ಟು ಉತ್ತಮ ಮಟ್ಟದಲ್ಲಿಲ್ಲ ಎಂದು ಹೇಳುತ್ತೇನೆ. ಇದನ್ನು ತಾವು ಗಮನಿಸಬೇಕು. ಆದರೆ ನಮ್ಮ ಜಿಲ್ಲೆಗೆ ಕೇವಲ ಇದಕ್ಕಾಗಿ ೩೮ ಸಾವಿರ ರೂಪಾಯಿ ಹಣವನ್ನು ಮಾತ್ರ ಒದಗಿಸಿದ್ದೀರಿ. ಅದರ ಬಗ್ಗೆ ಈಗಾಗಲೇ ಕೆಲಸ ತೆಗೆದುಕೊಳ್ಳಲಾಗಿದೆ. ನಮ್ಮ ಜಿಲ್ಲೆಯ ಜನಸಂಖ್ಯೆ ನೋಡಿದರೆ ಆ ಜಿಲ್ಲೆಯ ೧ ೧/೨ ಪಟ್ಟು ಅಷ್ಟು ಜನ ಜಾಸ್ತಿ ಇದ್ದಾರೆ. ಆದುದರಿಂದ ಇದಕ್ಕೆ ಸರ್ಕಾರ ಒದಗಿಸಿರುವ ಹಣ ಬಹಳ ಕಡಿಮೆ. ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲೆಯಷ್ಟು ಉತ್ತಮ ಮಟ್ಟದಲ್ಲಿ ನಮ್ಮ ಜಿಲ್ಲೆ ಇಲ್ಲ. ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲೆಗೆ ಮಾನ್ಯ ಹಣಕಾಸಿನ ಮಂತ್ರಿಗಳು ಮತ್ತು ರೆವಿನ್ಯೂ ಮಂತ್ರಿಗಳು ಹೋಗಿ ಬಂದಿದ್ದಾರೆ, ನಮ್ಮ ಜಿಲ್ಲೆಗೆ ಯಾವ ಮಂತ್ರಿಗಳೂ ಬಂದಿಲ್ಲ. ನಮ್ಮ ಜಿಲ್ಲೆಯ ಪರಿಸ್ಥಿತಿ ಏನು ಎನ್ನುವುದನ್ನೂ ಕೂಡ ಸರ್ಕಾರ ತೀವ್ರವಾಗಿ ಗಮನಿಸಬೇಕು ಎಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ಎಂ. ಬಾಂಗಿ (ಜಮಖಂಡಿ) :—ಮಾನ್ಯ ಅಧ್ಯಕ್ಷಿಣಿಯವರೇ ಶ್ರೀಯುತರುಗಳಾದ ಎಸ್. ವೈ. ಪಾಟೀಲ್, ಆರ್. ಎಸ್. ಪಾಟೀಲ್, ಜೆ. ಎಲ್. ಕಬಾಡಿಯವರು ಅವರ ಕ್ಷೇತ್ರದ, ತಾಲ್ಲೂಕಿನ ಕ್ಷಾಮ ಪರಿಸ್ಥಿತಿ ಬಗ್ಗೆ ಹೇಳಿದರೇ ವಿನಃ ನನ್ನ ಕ್ಷೇತ್ರವಾದ ಜಮಖಂಡಿ ಕ್ಷೇತ್ರದ ೩ ತಾಲ್ಲೂಕಿನಲ್ಲಿ ಕ್ಷಾಮ ಪರಿಸ್ಥಿತಿ ಏನು ಇದೆ ಎಂದು ಅವರು ಗಮನಿಸಿಲ್ಲ ಎಂದು ಕಾಣುತ್ತದೆ. ನಮ್ಮ ತಾಲ್ಲೂಕಿನಲ್ಲಿ ಜನಗಳಿಗೆ ಸರಿಯಾದ ಕಾಳು ಕಡ್ಡಿ ದೊರೆಯುತ್ತಾ ಇಲ್ಲ. ಅಲ್ಲಿ ಸೊಸೈಟಿಗಳೆಲ್ಲಾ ಅವ್ಯವಸ್ಥೆಯಾಗಿ ನಿರ್ನಾಮವಾಗಿವೆ. ಆದುದರಿಂದ ಸರ್ಕಾರದ ಅಧಿಕಾರಿಗಳನ್ನು ನೇಮಿಸಿ ಸರ್ಕಾರದ ವತಿಯಿಂದ ಜನರಿಗೆ ಕಾಳುಕಡ್ಡಿ ಸರಿಯಾಗಿ ಸಿಕ್ಕುವಂತೆ ಫೇರ್‌ಪ್ರೈಸ್ ಷಾಪ್ಸ್‌ನ್ನು ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಕಡೆ ಬರಗಾಲ ಪರಿಸ್ಥಿತಿ ಇದೆ ಎಂದು ಅಲ್ಲಿ ಡಿಸ್ಟ್ರೆಸ್ ರಿಲೀಫ್ ಫಂಡಿನಲ್ಲಿ ಕೂಲಿ ಕೆಲಸ ಮಾಡಿಸುತ್ತಿದ್ದಾರೆ. ಅಲ್ಲಿ ಮಣ್ಣು ಕೆಲಸ ಮಾಡಿಸಬೇಕಾದರೆ ೧೦ ಅಡಿ ಉದ್ದ, ೧೦ ಅಡಿ ಅಗಲ, ೧ ಅಡಿ ಮಟ್ಟ ತೆಗೆದರೆ ೨ ೧/೨ ರೂಪಾಯಿ ಕೂಲಿ ಕೊಡುತ್ತಾರೆ ಇದು ಬಹಳ ಕಡಿಮೆ. ಏತಕ್ಕೆಂದರೆ ಈ ಕೆಲಸ ಎಲ್ಲರಿಂದ ಕೈಯಲ್ಲೂ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ನೇಕಾರರು ತಮ್ಮ ಮನೆಯ ಕೆಲಸ ಮಾಡಿಕೊಂಡು ಅದರ ಜೊತೆಗೆ ಈ ಕೆಲಸವನ್ನೂ ಮಾಡಿಕೊಂಡು ಹೋಗುವುದು ಕಷ್ಟ. ಆದುದರಿಂದ ಈ ಕೂಲಿ ಬಹಳ ಕಡಿಮೆ ಇರುವುದರಿಂದ ಇದನ್ನು ೨ ೧/೨ ರೂಪಾಯಿಯಿಂದ ೩ ರೂಪಾಯಿಗೆ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ನೀವು ಬಿಜಾಪುರ ಮತ್ತು ಗುಲ್ಬರ್ಗಾಕ್ಕೆ ಯಾವರೀತಿ ಗಮನ ಕೊಟ್ಟಿರೋ ಅದೇರೀತಿ ನಮ್ಮ ಕ್ಷೇತ್ರಕ್ಕೂ ಬಂದು ಅಲ್ಲಿನ ಜನಗಳ ಪರಿಸ್ಥಿತಿಯನ್ನು ನೋಡಿಕೊಂಡು ತಕ್ಕ ಪರಿಹಾರ ಕೊಡುವಂತೆ ಮಾಡಬೇಕು ಎಂದು ನಾನು ತಮ್ಮನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈಗ ಕೋಲಾರ ಜಿಲ್ಲೆಯಲ್ಲೂ ಅಭಾವ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ, ಅಲ್ಲದೆ ಹಾಸನ ಮತ್ತು ಇನ್ನೂ ಕೆಲವು ಜಿಲ್ಲೆಗಳಲ್ಲಿ ತೊಂದರೆ ಇದೆ ಎನ್ನುವುದೂ ಗೊತ್ತಿದೆ ಆ ಜಿಲ್ಲೆಗಳಿಗೂ ಕೂಡ ಸ್ವಲ್ಪಸ್ವಲ್ಪ ಹಣ ಕೊಟ್ಟಿದೆ ಇದಕ್ಕಾಗಿ ಇನ್ನೂ ಹೆಚ್ಚು ಹಣ ಬೇಕೆಂದು ಮಾನ್ಯ ಅರ್ಥಸಚಿವರನ್ನು ಕೇಳಿದ್ದೇವೆ. ಮಾನ್ಯ ಸದಸ್ಯರಾದ ಭಂಗಿಯವರು ೧೦ ಅಡಿ ಉದ್ದ, ೧೦ ಅಡಿ ಅಗಲ, ೧ ಅಡಿ ಮಟ್ಟ ಮಣ್ಣು ಕೆಲಸ ಮಾಡಬೇಕಾದರೆ ಈಗ ಕೊಡುತ್ತಾ ಇರುವ ಕೂಲಿ ೨ ೧/೨ ರೂಪಾಯಿ ಬಹಳ ಕಡಿಮೆ ಇದನ್ನು ೩ ರೂಪಾಯಿ ಮಾಡಬೇಕು ಎಂದು ಹೇಳಿದ್ದಾರೆ. ಹಿಂದೆ ಆದಂಥ ಅನುಭವದಿಂದ ರಸ್ತೆ ಕೆಲಸವನ್ನು ಪೀಸ್ ವರ್ಕ್‌ಗೆ ಕೊಡುತ್ತಾ ಇದ್ದೇವೆ. ಏತಕ್ಕೆಂದರೆ ಹಿಂದೆ ಕೂಲಿ ಕೊಟ್ಟು ಕೆಲಸ ನಡೆಯುವಾಗ ೧೦ ಜನ ಕೂಲಿಗಾರರು ಬೇಕಾದರೆ ೨೫ ಜನ ಹೆಸರು ಬರೆದು ಕೊಂಡು ಕೆಲಸ ಮಾಡಿಸುತ್ತಿದ್ದು ಸರ್ಕಾರದ ಗಮನಕ್ಕೆ ಬಂದ ಮೇಲೆ ಈ ತರಹ ಪೀಸ್‌ವರ್ಕ್ ಕೊಡುವುದು ಸರಿ ಎಂದು ಮಾಡಿದೆವು.

ಶ್ರೀ ಹೆಚ್. ಡಿ. ದೇವೇಗೌಡ :—ನೀವು ಪೀಸ್ ವರ್ಕ್ ಕೊಟ್ಟರೂಕೂಡ ಕಂಟ್ರಾಕ್ಟರ್ ೩ ರೂಪಾಯಿನಲ್ಲಿ ಮಾಡಿಸುವ ಕೆಲಸವನ್ನೇ ಷೆಡ್ಯೂಲ್ ರೇಟ್ ಪ್ರಕಾರ ೪ ರೂಪಾಯಿ ತೆಗೆದುಕೊಳ್ಳುತ್ತಾನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಪ್ರತಿಯೊಂದು ಕಡೆಯೂ ಕೂಲಿ ಕೊಟ್ಟು ಕೆಲಸ ಮಾಡಿಸಬೇಕು ಎಂದು ಹೇಳುವುದಾದರೆ ಕಷ್ಟ. ಆದುದರಿಂದ ಕಾಂಟ್ರಾಕ್ಟ್ ಕೊಟ್ಟಿದ್ದೇವೆ. ಅಲ್ಲಿ ಅವನು ಒಂದೊಂದು ಮಟ್ಟಕ್ಕೆ ೨೫ ಪೈಸೇ, ೫೦ ಪೈಸೇ ಇಟ್ಟುಕೊಳ್ಳಬಹುದು ಕಾಂಟ್ರಾಕ್ಟ್ ಕೊಡುವುದನ್ನು ತಪ್ಪಿಸಿ ಇಲಾಖೆಯವರಿಂದಲೇ ಕೆಲಸ ಮಾಡಿಸಿ ಎಂದು ಹೇಳಿದರು ಅದಕ್ಕಾಗಿ ಹೆಚ್ಚು ಸಿಬ್ಬಂದಿಯನ್ನು ಒದಗಿಸುವುದು ಕಷ್ಟ. ನೂರಾರು ಸ್ಥಳಗಳಲ್ಲಿ ಈ ಕೆಲಸ ನಡೆಯುವಾಗ, ಒಂದೊಂದು ತಾಲ್ಲೂಕಿನಲ್ಲಿ ಹತ್ತಾರು ಕೆಲಸ ಪ್ರಾರಂಭವಾದರೆ ಎಲ್ಲಾ ಕಡೆಯೂ ಇಲಾಖಾ ಸಿಬ್ಬಂದಿಯನ್ನೇ ಇಟ್ಟುಕೊಂಡು ಕೆಲಸ ಮಾಡಿಸಬೇಕು ಎಂದರೆ ಬಹಳ ಕಷ್ಟ. ಅದು ಯೋಜನೆ ಮಾಡಬೇಕಾದಂಥ ವಿಷಯ ಆದುದರಿಂದ ಹಿಂದೆ ೬೪ ಫ್ಯಾಮಿನ್‌ನಲ್ಲಿ ಏನು ಹಣ ಕೊಟ್ಟಿದ್ದಾರೋ ಆದರಲ್ಲೂ ಸ್ವಲ್ಪ ಹಣ ತೆಗೆದುಕೊಂಡು ಈಗ ಕೊಡುತ್ತಾ ಇರುವ ೨/೧/೨ ರೂಪಾಯಿ ಜೊತೆಗೆ ಇನ್ನೂ ೫೦ ಪೈಸೇ ಸೇರಿಸಿ ೩ ರೂಪಾಯಿ ಕೊಡುವುದಕ್ಕೆ ಸಾಧ್ಯವೇ ಎಂದು ಯೋಜನೆ ಮಾಡುತ್ತಾ ಇದ್ದೇವೆ.

ಇಷ್ಟೇ ಅಲ್ಲದೆ ಈ ಹೊತ್ತು ಬೆಳಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇಂತಿಂಥ ಜಿಲ್ಲೆಗಳಿಗೆ ಇಂತಿಂಥ ಮಂತ್ರಿಗಳು ಹೋಗಿ ಅಲ್ಲಿ ಪ್ರತಿಯೊಂದು ಕೆಲಸವು ಹೇಗೆ ನಡೆಯುತ್ತದೆ, ಜನಗಳಿಗೆ ಕೆಲಸ ಸಿಕ್ಕುತ್ತಾ ಇದೆಯೇ, ಅಲ್ಲಿ ನೀರಿನ ಅನುಕೂಲತೆ ಇದೆಯೇ, ಇಲ್ಲವೇ ಎಂಬುದನ್ನು ವಿಚಾರಿಸಿ ಈ ಜವಾಬ್ದಾರಿಯನ್ನು ವಹಿಸಿಕೊಂಡು ನೀವು ಈ ಕೆಲಸ ಮಾಡಬೇಕು ಎಂದು ತಿಳಿಸಿದ್ದಾರೆ. ಅದರಂತೆ ನನಗೆ ಗುಲ್ಬರ್ಗಾ ಮತ್ತು ಬೀದರೆ ಜಿಲ್ಲೆ; ; ಬಿಜಾಪುರ ಜಿಲ್ಲೆಗೆ ಹೆಚ್.ಎಂ. ಚೆನ್ನಬಸಪ್ಪನವರು; ಬೆಳಗಾಂ ಜಿಲ್ಲೆಗೆ ಕೆ. ಹೆಚ್. ಪಾಟೀಲರು; ಧಾರವಾಡ ಜಿಲ್ಲೆಗೆ ಡಿ. ಕೆ. ನಾಯಕರ್‌ರವರು; ಕೋಲಾರ, ತುಮಕೂರು ಮತ್ತು ಮಂಡ್ಯದ ಸ್ವಲ್ಪ ಭಾಗ ಪ್ರದೇಶಕ್ಕೆ ಶ್ರೀ ಎಸ್. ಎಂ. ಕೃಷ್ಣ ಅವರು; ಬೆಂಗಳೂರಿಗೆ ಒಬ್ಬರು; ಹಾಸನಕ್ಕೆ ಒಬ್ಬರು, ಈ ರೀತಿ ಒಬ್ಬೊಬ್ಬ ಮಂತ್ರಿಗಳು ಈ ಜವಾಬ್ದಾರಿ ವಹಿಸಿಕೊಂಡು ಅಭಾವ ಪ್ರದೇಶಕ್ಕೆ ಹೋಗಿ ಉದಾಸೀನ ಮಾಡದೆ ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಾರೆಂದು ಹೇಳಿ ಇಷ್ಟು ಮಾತ್ರ ಭರವಸೆ ಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ :—ಬಿಜಾಪುರದಲ್ಲಿ ಹರಿಜನ ಸೊಸೈಟಿಯಲ್ಲಿ ಕೆಲಸ ಮಾಡುತ್ತಾ ಇರುವವರು ಸತ್ಯಾಗ್ರಹ ಮಾಡುತ್ತಿದ್ದಾರೆ ಎನ್ನುವ ವಿಷಯದ ಬಗ್ಗೆ ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ಈ ಹೊತ್ತು ಆಗದಿದ್ದರೆ ನಾಳೆ ಬೆಳಗ್ಗೆ ಅದರೂ ಅದನ್ನು ತೆಗೆದುಕೊಳ್ಳಿ.

ಶ್ರೀ ಆರ್. ಎಸ್. ಪಾಟೀಲ್ ;— ಈಗ ಎಲ್ಲೆಲ್ಲಿ ಪರಿಹಾರ ಕಾರ್ಯಕ್ರಮಗಳ ಕೆಲಸ ನಡೆಯುತ್ತಾ ಇದೆಯೋ ಅಲ್ಲಿ ಪಿ ಡಬ್ಲು. ಡಿ. ಏಜೆನ್ಸಿಯಿಂದ ನಡೆಯುತ್ತಾ ಇದೆ. ಅವರಿಗೆ ತಮ್ಮ ರೊಟೀನ್ ವರ್ಕ್‌ನ್ನು ನೋಡಿಕೊಂಡು ಈ ಕೆಲಸವನ್ನೂ ಮಾಡಿಸಬೇಕಾದರೆ ಕಷ್ಟ. ಆದುದರಿಂದ ಟಿ. ಡಿ. ಬಿ. ಬೋರ್ಡ್‌ನಲ್ಲೂ ಕೂಡ ಅದೇರೀತಿ ಸೂಪರವೈಸರ್ಸ್, ಟೆಕ್ನಿಕಲ್ ಸ್ಟಾಫ್ ಇರುವುದರಿಂದ ಅವರಿಗೆ ಈ ಕೆಲಸವನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ವೆಂಕಟಪ್ಪ:—ಅಭಾವ ಪರಿಸ್ಥಿತಿಯಿಂದ ರೈತರಿಗೆ ಸಾಲವನ್ನು ಮರು ಪಾವತಿ ಮಾಡುವುದಕ್ಕೆ ಶಕ್ತಿ ಇಲ್ಲ ಎನ್ನುವ ಕಾರಣದಿಂದ ಸಾಲವನ್ನು ವಸೂಲು ಮಾಡತಕ್ಕ ಕಂತುಗಳನ್ನು ಮುಂದುವರಿಸುತ್ತಿದ್ದೇವೆ, ಆದಕ್ಕಾಗಿ ಸರ್ಕಾರದ ಆರ್ಡರ್, ಹೊರಡಿಸಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಹಾಗೆ

ಶ್ರೀ ಜಿ. ವೆಂಕಟಪ್ಪ .—

ಮುಂದುವರಿಸುವುದರಿಂದ ಈ ವರ್ಷದಲ್ಲಿ ಮರು ಪಾವತಿ ಆಗಬೇಕಾದ ಸಾಲವನ್ನು ಪರಿಸ್ಥಿತಿ ಅನುಕೂಲ ವಾದ ಮೇಲೆ ವಾಪಸು ಪಡೆಯುವಾಗ, ಮುಂದುವರಿಸಿದ ಕಂತುಗಳಿಗೆ ಬಡ್ಡಿಯ ಜೊತೆಗೆ ಸುಸ್ತಿ ಬಡ್ಡಿ ಹಾಕುವುದನ್ನು ಸರ್ಕಾರ ಕೈ ಬಿಡುತ್ತದೆಯೇ ಮತ್ತು ಆ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಸರ್ಕಾರದಿಂದ ಕೊಟ್ಟಿರುವ ಸಾಲಗಳಿಗೆ ಸುಸ್ತಿ ಬಡ್ಡಿಯನ್ನು ವಸೂಲು ಮಾಡುತ್ತಿಲ್ಲ. ಒಂದು ವೇಳೆ ಸೊಸೈಟಿಗಳು ಮತ್ತು ಬ್ಯಾಂಕುಗಳ ಮೂಲಕ ಕೊಟ್ಟಿದರೆ ಅವರು ಕೊಟ್ಟಿರುವ ಸಾಲಕ್ಕೆ ಯಾವ ರೀತಿ ಮಾಡುತ್ತಿದ್ದಾರೆನ್ನುವ ವಿಷಯವನ್ನು ತಿಳಿದುಕೊಂಡು ಸಭೆಗೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:—ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ. ಸುಮಾರು ೮ ದಿನಗಳ ಹಿಂದೆ ಮಾನ್ಯ ಉಪಾಧ್ಯಕ್ಷರು ಮುಂದಿನ ಸಭೆಯಲ್ಲಿ ತೆಗೆದುಕೊಳ್ಳುತ್ತಾರೆಂದು ಹೇಳಿದರು. ಶ್ರೀ ಕೆ.ಕೆ. ಮೂರ್ತಿನಿ, ಅವರಿಗೆ ಸಂಬಂಧಪಟ್ಟ ವಿಷಯ. ಇದರಿಂದ ಇಡೀ ಸರ್ಕಾರವೇ ಇನವಾಲ್ವ್ ಆಗತಕ್ಕ ಗುರುತರವಾದ ಅಪಾದನೆಗಳಿವೆ. ಸರ್ಕಾರ ಅದನ್ನು ಬಹಳ ಲಘುವಾಗಿ ತೆಗೆದುಕೊಂಡಿದೆ. ನಾನು ಕಳುಹಿಸಿರುವ ನಿಲುವಳಿ ಸೂಚನೆಯನ್ನು ಪರಿಶೀಲಿಸಿ ನಾಳೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಾದರೆ ಒಳ್ಳೆಯದು.

ಅಧ್ಯಕ್ಷರು:—ನಿಮ್ಮ ಸೂಚನೆ ಬಂದಿದೆಯೇ ಎನ್ನುವುದನ್ನು ನೋಡುತ್ತೇನೆ.

SRI N. HUTCHMASTHY GOWDA.—(Minister for Revenue):—I beg to move.

"That the Mysore Land Reforms (Amendment) Bill, 1972 be taken into consideration."

MADAM SPEAKER:—Motion moved.

'That the Mysore Land Reforms (Amendment) Bill, 1972 be taken into consideration.'

SRI T.R. SHAMANNA.—(Fort):—I beg to move.

'That the Mysore Land Reforms (Amendment) Bill, 1972 be circulated for eliciting public opinion.'

MADAM SPEAKER:—Amendment moved.

'That the Mysore Land Reforms (Amendment) Bill, 1972 be circulated for eliciting public opinion.'

ಶ್ರೀ ವಾಟಾಳ್ ನಾಗರಾಜ್;—(ಚಾಮರಾಜಪೇಟೆ):—ಈ ದಿನದ ಹಿಂದೂ ಪತ್ರಿಕೆಯಲ್ಲಿ ಈ ಮಸೂದೆ ಪರ್ಫೆಕ್ಟಾಗಿಲ್ಲ, ಸೀಲಿಂಗ್ ಬಗ್ಗೆ ದೊಡ್ಡ ಕಾಂಟ್ರೊವರ್ಸಿ ಇದೆ, ನಮನ್ನು ಕೇಳದೆ ಮಸೂದೆ ಯನ್ನು ತಂದಿದ್ದಾರೆ ಎಂದು ರಾಜ್ಯದ ಎಂ.ಪಿ. ಗಳು ಮುಖ್ಯ ಮಂತ್ರಿಗಳ ಮೇಲೆ ಅಪಾದನೆ ಮಾಡಿದ್ದಾರೆ. ಸೀಲಿಂಗ್ ೧೦ ಎಕರೆ ಇರುತ್ತದೆಯೇ ಅಥವಾ ಮುಂದಕ್ಕೆ ಹೋಗುತ್ತದೆಯೇ ಎನ್ನುವುದರ ಬಗ್ಗೆ ಯಾವ ಭರವಸೆಯೂ ಇಲ್ಲ.

ಅಧ್ಯಕ್ಷರು.—ನನ್ನ ಗಮನಕ್ಕೆ ತಂದಿದ್ದೀರಿ, ಈಗ ತಾವು ಕುಳಿತುಕೊಳ್ಳಿ.

(i) MOTION TO CONSIDER (ii) MOTION TO CIRCULATE FOR ELICITING PUBLIC OPINION–MYSORE LAND REFORMS (AMENDMENT) BILL, 1972.

SRI C.M. ARMUGHUM:—(K.G.F.):—I would like the Hon. Minister to declare that this is a perfet Bill and there would be no change in the ceilling proposed in it, because, there is a talk or a feeling that on account of this Bill there is going to be some reshuffle of cabinet etc.

ಶ್ರೀ ವಾಟಾಳ್ ನಾಗರಾಜ್.—ಸೀಲಿಂಗ್ ಎಷ್ಟು ಇರುತ್ತದೆ, ೧೦ ಎಕರೆಯೋ, ೧೫ ಎಕರೆಯೋ ಎಂದು ತಿಳಿಯಂದೆ ಏನು ಮಾತನಾಡುವುದಕ್ಕಾಗುತ್ತದೆ? ತೆರೆಮರೆಯಲ್ಲಿ ಏನೇನೋ ನಡೆಯುತ್ತಿದೆ.

ಅಧ್ಯಕ್ಷರು.—ಅದು ತಮ್ಮ ಊಹೆ, ಅಷ್ಟೆ.

SRI C.M. ARUMUGHUM.—I would just want the hon. Minister to say whether on account of this Bill there is going to be any change in the Cabinet; and whether the ceiling fixed in this Bill is final and whether it would certainly become a law?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಆರ್ಮುಗಂ ಅವರ ಬುದ್ಧಿ ಶಕ್ತಿ, ಊಹಾ ಶಕ್ತಿ ಬಹಳ ಫಲವತ್ತಾಗಿದೆ. ಅವರ ಕಲ್ಪನೆ, ಊಹೆ ಬಹಳ ಮಿತಿಮೀರಿರುವುದ ರಿಂದ ಇಲ್ಲದೆ ಇರತಕ್ಕುದನ್ನೆಲ್ಲ ಊಹೆ ಮಾಡಿ ತಿಳಿಸುತ್ತಿದ್ದಾರೆ. ಈ ಮಸೂದಾ ಕಾನೂನಿನಿಂದ ಸರ್ಕಾರ ಬದಲಾವಣೆಯಾಗಬಹುದು, ಮಂತ್ರಿ ಮಂಡಲ ರೀಷಫಲ್ ಆಗಬಹುದು ಎಂದು ಅವರು ಯೋಚನೆ ಮಾಡುತ್ತಿದ್ದಾರೆ. ಅದಕ್ಕೆ ಅವಕಾಶವಿಲ್ಲ ಎಂದು ನಾನು ಮೊಟ್ಟ ಮೊದಲು ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ ಮಸೂದಾ ಕಾನೂನಿಗೆ ಸಂಬಂಧ ಪಟ್ಟಂಥ ವಿಷಯ ಭೂಸುಧಾರಣೆ. ಈ ವಿಷಯ ನಿನ್ನೆಮೊನ್ನೆ ಬಂದಂಥ ವಿಷಯವಲ್ಲ. ಇದರ ಹಿನ್ನಲೆಯನ್ನು ನೋಡಿದರೆ, ಸ್ವಾತಂತ್ರ್ಯ ಪೂರ್ವದಲ್ಲಿ ಸಾಮಾನ್ಯ ಜನಗಳ ಸ್ಥಿತಿಯನ್ನು ಕಣ್ಣಾರೆ ಕಂಡಿದ್ದ ನಮ್ಮ ನಾಯಕರು ಮುಂದೆ ಉಳುವವನಿಗೇ ಭೂಮಿ ಇರಬೇಕು. ಭೂಮಿಯ ಮೇಲಿನ ಹಕ್ಕನ್ನು ಅವರಿಗೆ ಕೊಡಿಸಬೇಕು ಎಂದು ಅನೇಕ ವೇಳೆ ಘೋಷಣೆ ಮಾಡಿ ಜನ ಸಾಮಾನ್ಯರಿಗೆ ತಿಳಿಸಿದ್ದರು. ಅದಾದಮೇಲೆ ಆಗ ಇದಂಥ ಯೋಜನಾ ಆಯೋಗ ಈ ವಿಷಯಗಳಲ್ಲಿ ಸ್ಪಷ್ಟವಾದ ಕೆಲವು ಮುಖ್ಯವಾದ ಅಂಶಗಳು ಯಾವುವು ಎನ್ನುವುದನ್ನು ಆಗಲೇ ಚರ್ಚೆ ಮಾಡಿದ್ದಾರೆ. ಹಾಗೆ ಚರ್ಚೆ ಮಾಡಿರುವುದರಲ್ಲಿ ಗೇಣಿದಾರರಿಗೆ ಕೊಡಬೇಕಾದ ಮಾಲಿಕತ್ವದ ವಿಷಯ ದಲ್ಲಿ, ಹಿಡುವಳಿಯ ಸ್ವಾಧೀನದ ಹಕ್ಕಿನ ರಕ್ಷಣೆ, ನ್ಯಾಯ ಗೇಣಿ, ಗರಿಷ್ಟ ಮಿತಿ ಈ ಮುಖ್ಯವಾದ ನಾಲ್ಕು ಅಂಶಗಳ ಬಗ್ಗೆ ಆಗ ಯೋಜನಾ ಆಯೋಗ ಒಪ್ಪಿ ಆ ಅಭಿಪ್ರಾಯವನ್ನು ಸಂಪತ್ತಿನಲ್ಲಿ ಮತ್ತು ಆಡಳಿತ ಪಕ್ಷದಲ್ಲಿ ಕೂಡ ಒಪ್ಪಿಗೆ ಕೊಟ್ಟಿರುವ ಮುಖ್ಯವಾದ ವಿಷಯಗಳು. ಇದಕ್ಕೆ ಅನುಗುಣವಾಗಿ, ಕೆಲವು ರಾಜ್ಯ ಗಳಲ್ಲಿ ಈ ಪ್ರಯತ್ನ ನಡೆದಿದೆ. ಮೈಸೂರು ರಾಜ್ಯದಲ್ಲಿಯೂ ಕೂಡ ೧೦ನೇ ಮೇ ೧೯೫೭ ರಲ್ಲಿ ಶ್ರೀ ಜತ್ತಿ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದರು. ಈ ವಿಷಯದಲ್ಲಿ ಸರ್ಕಾರಕ್ಕೆ ಒಂದು ವರದಿ ಬಂತು. ಈ ವರದಿಯ ಆಧಾರದ ಮೇಲೆ ಮಸೂದಾ ಕಾನೂನು ಕೂಡ ಸಿದ್ಧವಾಗಿ ಅದು ಈ ಸಭೆಯಲ್ಲಿ ಚರ್ಚೆಯಾಗಿ, ಅದನ್ನು ಸೆಲೆಕ್ಟ್ ಕಮಿಟಿಗೆ ಕೂಡ ರೆಫರ್ ಮಾಡಿ, ಆ ಸೆಲೆಕ್ಟ್ ಕಮಿಟಿಯಿಂದ ಬಂದಂಥ ವರದಿಯ ಮೇಲೆ ಕಾನೂನಾಗಿ ನಮ್ಮ ಮುಂದೆ ಇದೆ.

೪–೦೦ ಪಿ.ಎಂ.

ಈ ಕಾನೂನಿನಲ್ಲಿ ಕೆಲವಾರು ದೋಷಗಳು ಇವೆ ಎನ್ನುವುದು ನಿಸ್ಸಂದೇಹವಾಗಿದೆ. ದೋಷಗಳು ಇದ್ದುದರಿಂದಲೇ ಇದು ಜಾರಿಗೆ ಬರುವುದಕ್ಕೆ ಅವಕಾಶವಾಗದೆ ಇರತಕ್ಕ ಸಂದರ್ಭಗಳು ನಮ್ಮ ಕಣ್ಣು ಎದುರಿಗೆ ಇದೆ. ಈ ಕಾನೂನಿಗೆ ೧೯೬೫-೬೬-೭೦ರಲ್ಲಿ ತಿದ್ದುಪಡಿಗಳನ್ನು ತಂದರು. ಈ ಕಾನೂನಿನ ಮೂಲ ಉದ್ದೇಶವಾದರೂ ಇಷ್ಟೆ ಒಂದನೆಯದು, ಹಕ್ಕು, ಅನುಭೋಗ ಮತ್ತು ಭೂಮಿಗೆ ರಕ್ಷಣೆ ಕೊಡುವುದು, ಎಂದರೆ ಸೆಕ್ಯೂರಿಟಿ ಅಫ್ ಟೆನ್ಯೂರ್. ಎರಡನೆಯದು ವಕ್ಕಲೆಬ್ಬಿಸುವುದನ್ನು ತಪ್ಪಿಸುವುದು ಮೂರನೆಯದು, ಗೇಣಿ ನಿಗದಿಗೊಳ್ಳುವುದು. ಭೂಮಾಲಿಕರಿಂದ ಗೇಣಿದಾರರಿಗೆ ಇರತಕ್ಕ ಸಂಬಂಧವನ್ನು

ಶ್ರೀ ಎನ್. ಹುಚ್ಚಮಾಸ್ತಿಗೌಡ .—

ತಪ್ಪಿಸುವಂಥಾದ್ದು, ವ್ಯವಸಾಯ ಮಾಡತಕ್ಕವನಿಗೆ ಮಾಲೀಕತ್ವವನ್ನು ಕೊಡವಂಥಾದ್ದು; ಗರಿಷ್ಟ ಮಿತಿಯನ್ನು ಗೊತ್ತು ಮಾಡುವಂಥಾದ್ದು; ಭೂಮಿ ಇಲ್ಲದಿರತಕ್ಕ ರೈತನಿಗೆ, ಕೂಲಿಗಾರರಿಗೆ ಭೂಮಿಯನ್ನು ಒದಗಿಸುವುದು ಇದು ಕಾನೂನಿನ ಮುಖ್ಯ ಉದ್ದೇಶವಾಗಿತ್ತು. ಈಗ ಇರತಕ್ಕ ಕಾನೂನನ್ನು ಜಾರಿಗೆ ತಂದಾಗ ಮೇಲೆ ಹೇಳಿದಂಥ ಮುಖ್ಯ ವಿಷಯಗಳಲ್ಲಿ ಯಾವ ಯಾವುದು ಎಷ್ಟು ಮಟ್ಟಿಗೆ ಜಾರಿಗೆ ಬಂದಿದೆ ಎಂದು ಸಿಂಹಾವ ಲೋಕನ ಮಾಡಿ ನೋಡಿದರೆ ಬಹಳ ನಿರಾಸೆಯಾಗುತ್ತದೆ. ಈ ವಿಷಯವನ್ನು ಪ್ರಸ್ತಾಪ ಮಾಡುವಾಗ ಮಾನ್ಯ ಸ್ನೇಹಿತರಾದ ತಿಮ್ಮಪ್ಪನವರು ಮತ್ತು ಕೆಲವು ಸ್ನೇಹಿತರು ಹೇಳಿದ ಹಾಗೆ ಬಹಳ ಜಾಸ್ತಿ ಗೇಣಿ ಇರತಕ್ಕ ಸ್ಥಳಗಳಲ್ಲಿ ಅವರಿಗೆ ಬಹಳ ನಿರಾಸೆಯಾಗಿದೆ ಎನ್ನುವುದು ನನಗೆ ಗೊತ್ತು. ಈ ಶಾಸನ ೧೯೬..ನೇ ಇಸವಿಯಲ್ಲಿ ಆಯಿತು. ಅದು ಅಧ್ಯಕ್ಷರ ಅನುಮತಿ ಪಡೆದುದ್ದು ೫ನೇ ಮಾರ್ಚಿ ೧೯೬೨ ರಲ್ಲಿ ಜಾರಿಗೆ ಕೊಟ್ಟಿದ್ದು ೨ನೇ ಅಕ್ಟೋಬರ್ ೧೯೬೫ರಲ್ಲಿ ಹೀಗೆ ನಾಲ್ಕು ವರ್ಷಗಳ ಕಾಲ ಅಲ್ಲಿ ವ್ಯರ್ಥವಾಯಿತು. ಆದಾದಮೇಲೆ ಹಲವು ಕಾರಣಗಳಿಂದ ಮುಖ್ಯವಾದಂಥ ಕಲಮುಗಳನ್ನು ಜಾರಿಗೆ ಕೊಡುವುದಕ್ಕೆ ತೊಂದರೆಯಾಯಿತು. ಗೇಣಿಯನ್ನು ಗೊತ್ತು ಮಾಡುವಂಥಾದ್ದು ಆಯಾ ಪ್ರದೇಶದ ಮುಖ್ಯ ಬೆಳೆಯ ಉತ್ಪತ್ತಿ ಎಷ್ಟು ಎನ್ನುವುದನ್ನು ನಿರ್ಧಾರ ಮಾಡಿ ಅವನಿಗೆ ತಿಳಿಸಬೇಕಾಗಿತ್ತು. ತಿಳಿಸಿದ ಮೇಲೆ ಅದರ ಮೇಲೂ ವ್ಯಾಜ್ಯ ವ್ಯವಹಾರಗಳು ಹುಟ್ಟಿ ಅದು ತೀರ್ಮಾನವಾಗಲಿಲ್ಲ. ಈ ತೀರ್ಮಾನ ಯಾವಾಗಲೂ ಭೂಮಿಯ ಬೆಳೆಯ ವರಮಾನದ ಮೇಲೆ ಗೊತ್ತು ಮಾಡುವುದು ಒಂದೊಂದು ತಾಲ್ಲೂಕಿನಲ್ಲಿ, ಒಂದೊಂದು ಭಾಗದಲ್ಲಿ ವ್ಯತ್ಯಾಸವಾಗಬಹುದು ಸಹಜ ವರಮಾನದಲ್ಲಿ ¼ ಭಾಗ ನೀರಾವರಿ ಪ್ರದೇಶ ಇರುವ ಕಡೆ, ಖುಷ್ಕಿ ಬೆಳೆ ಇರತಕ್ಕ ಕಡೆ ೧/೫ ಭಾಗ ಗೇಣಿಯನ್ನು ಕೊಡಬೇಕು. ಈಗ ಇರತಕ್ಕ ಕಾನೂನಿನಲ್ಲಿ ವಾರ್ಷಿಕ ವರಮಾನ ಎಷ್ಟು ಎನ್ನುವುದನ್ನು ಮುಖ್ಯ ಬೆಳೆಯ ಮೇಲೆ ಗೊತ್ತು ಮಾಡುವುದು ಕಷ್ಟವಾದ್ದರಿಂದ ಜಾರಿಗೆ ಕೊಡುವುದಕ್ಕೆ ಆಗಲಿಲ್ಲ. ಅನೇಕ ಕಲಮ್‌ನಲ್ಲಿ Non-Resumable and ಗೇಣಿದಾರ ಬಿಡತಕ್ಕ ಜಮೀನನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದಿರತಕ್ಕಂಥ ಜಮೀನು ಎಷ್ಟು ಎನ್ನುವುದು ಗೊತ್ತು ಆಗಬೇಕಾಗಿತ್ತು. ಪ್ರತಿಯೊಂದು ಕೋರ್ಟಿನಲ್ಲೂ ಕೂಡ ಈ ರೀತಿ ಗೊತ್ತು ಮಾಡುವ ಬಗ್ಗೆ ಟ್ರಿಬ್ಯುನಲ್‌ನಲ್ಲಿ ಅನೇಕ ವ್ಯಾಜ್ಯಗಳು ಇದ್ದವು. ಈ ವ್ಯಾಜ್ಯಗಳೆಲ್ಲಾ ಬಗೆಹರಿಯುವವರಿಗೆ, ಎಷ್ಟು ಭೂಮಿ ಉಳಿದಿರುವುದು ಎಂದು ನೋಟಿಫೈ ಮಾಡುವುದಕ್ಕೆ ಅವಕಾಶವಿಲ್ಲದಂತಾಗಿದೆ ಎಲ್ಲಾ ವ್ಯಾಜ್ಯಗಳು ಫೈನಲ್ ಆಗುವವರೆಗೆ ಗೊತ್ತು ಮಾಡಬಾರದು ಎಂದು ಆ ಕಾನೂನಿನಲ್ಲಿ ವ್ಯತ್ಯಾಸ ಬಂದುದ್ದರಿಂದ ಅದ ಕೂಡ ಮಾಡುವುದಕ್ಕಾಗಲಿಲ್ಲ. ಇನ್ನೊಂದು ಹೆಚ್ಚು ಜಮೀನಿನ ಗರಿಷ್ಟ ಮಿತಿ ಎಷ್ಟು ಇದೆ, ಅದರ ಮೇಲೆ ಎಷ್ಟು ಭೂಮಿ ಇದೆ ಎನ್ನುವುದನ್ನು ಪ್ರತಿಯೊಬ್ಬರೂ ಡಿಕ್ಲೇರ್ ಮಾಡಿಕೊಳ್ಳಬೇಕು ಎಂದು ಕಾನೂನು ಇದೆ. ಡಿಕ್ಲೇರ್ ಮಾಡಿಕೊಳ್ಳತಕ್ಕ ವಾಯಿದೆಯನ್ನು ಯಾವಾಗ ಹಾಕಿದರು ಎಂದರೆ ೨ನೇ ಅಕ್ಟೋಬರ್ ೧೯೬೫ ರಲ್ಲಿ. ಅದು ಜಾರಿಗೆ ಬಂದದ್ದು ೨೧ನೇ ಆಗಸ್ಟ್ ೧೯..ರಲ್ಲಿ. ರೈತರಿಗೆ ಈ ರೀತಿ ಡಿಕ್ಲೇರ್ ಮಾಡಿಕೊಳ್ಳಬೇಕು ಎಂದು ಕೂಡ ತಿಳಿಸಲಿಲ್ಲ. ಇದರಿಂದ ಏನಾಯಿತು ಎಂದರೆ, ಗರಿಷ್ಟ ಮಿತಿಯ ಮೇಲೆ ಎಷ್ಟು ಭೂಮಿ ಇದೆ ಎಂದು ತಿಳಿಸುವುದಕ್ಕೆ ರೈತರಿಗೆ ಅವಕಾಶವಾಗಲಿಲ್ಲ. ಮೊದಲು ಡಿಕ್ಲೇರ್ ಮಾಡಿಕೊಳ್ಳುತ್ತೇವೆ, ಆಮೇಲೆ ತಹಸೀಲ್ದಾರ್ ಅವರಾಗಲೀ, ಕೋರ್ಟಿನವರಾಗಲೀ, ಭೂಮಿ ಎಷ್ಟು ಇದೆ ಎಂದು ಗೊತ್ತಾದಮೇಲೆ ನೋಟಿಫೈ ಮಾಡಬೇಕು ಎಂದು ೧೯೭೦ನೆಯ ಇಸವಿಯಲ್ಲಿ ತಿದ್ದುಪಡಿ ತಂದಾಗ, ಏನು ಮಾಡಿದರು ಎಂದು ಹೇಳಿದರೆ, ಮೊದಲನೆಯ ಎರಡು ಅಧಿಕಾರಗಳನ್ನು ತಹಸೀಲ್ದಾರ್ ಅವರಿಗೆ ಕೊಟ್ಟರು. ನೋಟಿಫೈ ಮಾಡುವ ಅಧಿಕಾರ ಕೋರ್ಟಿಗೆ ಉಳಿದುಕೊಂಡಿತ್ತು. ಆದ್ದರಿಂದ ಅವರು ನೋಟಿಫೈ ಮಾಡಲಿಲ್ಲ ಎಷ್ಟು ಭೂಮಿ ಹೆಚ್ಚಾಗಿದೆ ಎನ್ನುವುದು ಗೊತ್ತಾಗುವುದಕ್ಕೆ ಅವಕಾಶವಾಗಲಿಲ್ಲ. ಈ ಮೂರು ನಾಲ್ಕು ಕಾರಣಗಳಿಂದ, ಈ ಶಾಸನ ಅಗತ್ಯವಾಗಿ ಎಷ್ಟು ಭಾಗ ಜಾರಿಗೆ ಬರಬೇಕಾಗಿತ್ತೋ, ಅಷ್ಟು ಪೂರ್ಣವಾಗಿ ಜಾರಿಗೆ ಬರುವುದಕ್ಕೆ ಅವಕಾಶವಾಗಲಿಲ್ಲ. ಇದರಿಂದ ಏನು ಗೊತ್ತಾಗುತ್ತದೆ ಎಂದರೆ, ಕಾನೂನು ಜಾರಿಗೆ ಬರುವುದಕ್ಕೆ ಆತುರತೆ ಸಾಮಾನ್ಯ ಜನತೆಗೆ, ಗೇಣಿದಾರರಿಗೆ ಎಷ್ಟು ಇತ್ತೋ ಅಷ್ಟು ಜಾರಿಗೆ ಬರಬೇಕು ಎಂದು ಜವಾಬ್ದಾರಿ ವಹಿಸಿಕೊಂಡಿರತಕ್ಕವರಿಗೆ ಇರಲಿಲ್ಲ ಎಂದು ಸ್ಪಷ್ಟವಾಗುತ್ತದೆ. ಇದು ನಾನು ಆಕ್ಷೇಪಣೆ ಮಾಡುವುದಕ್ಕೆ ಹೇಳತಕ್ಕ ಮಾತು ಅಲ್ಲ, ಆಕ್ಷೇಪಣೆ ಎಂದು ತಿಳಿದುಕೊಳ್ಳುವುದಕ್ಕೂ ಸಾಧ್ಯವಿಲ್ಲ. ಕಾನೂನಿನಲ್ಲಿ ಕೆಲವು ಭಾಗದಲ್ಲಿ ದೋಷವಿರುವುದರಿಂದ ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗದೆ ಇರುವುದರಿಂದ ತೊಂದರೆಯಾಗಿ ಇಲ್ಲಿಯವರೆಗೂ ಜಾರಿಗೆ ಬರುವುದಕ್ಕೆ ಅವಕಾಶವಾಗಲಿಲ್ಲ. ಇದರಿಂದ ಒಂದು ಮಾತ್ರ ಸಾಧನೆಯಾಯಿತು, ಏನೆಂದರೆ, ರಾಜ್ಯ ಪುನರ್ವಿಂಗಡಣೆಯಾಗುವುದಕ್ಕೆ ಮುಂಚಿತವಾಗಿ ಒಂದೊಂದು ಭಾಗದಲ್ಲಿ ಒಂದೊಂದು ಕಾನೂನು ಇತ್ತು; ಒಮ್ಮತವಾದ ಕಾನೂನು ಈಗ ಆಯಿತು. ಇದರ ಜೊತೆಗೆ ಮಾಲೀಕರು ತಮ್ಮ ಸ್ವಂತ ಸಾಗುವಳಿಗೋಸ್ಕರ ಭೂಮಿ ಎಷ್ಟು ತೆಗೆದುಕೊಳ್ಳುವುದಕ್ಕೆ ಸಾಧ್ಯವೋ ಅಷ್ಟನ್ನು ಆದರಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಯಿತು. ಎರಡನೆಯದು ಗೇಣಿ ವಸೂಲಿಗೋಸ್ಕರ ಒಕ್ಕಲೆಬ್ಬಿಸುವುದಕ್ಕೆ

ಅವಕಾಶವಾಯಿತ್ತು. ಈ ತರಹ ಅವಕಾಶ ಅವನಿಗೆ ಸಿಕ್ಕಿತು. ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಿದರೂ ಈ ಶಾಸನ ಇದ್ದರೂ ಕೂಡ ಇದರಿಂದ ಏನು ಉಪಯೋಗ ಆಗಲಿಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ ಕೆಲವಾರು ಮಾನ್ಯ ಸ್ನೇಹಿತರುಗಳು ಸಲಹೆ ಮಾಡುತ್ತಾ ಹೇಳಿದರು, ಇದನ್ನು ಪೂರಾಗಿ ರದ್ದು ಮಾಡಿ ಹೊಸದು ತರುವುದು ಒಳ್ಳೆಯದು ಎಂದು. ಅಕ್ಷರಶಃ ನೋಡಿದರೆ, ಇದು ಹೊಸದಾ ಕಾನೂನನ್ನು ತಂದ ಹಾಗೆ ಆಗುತ್ತದೆ ಎಂದು ನನ್ನ ಭಾವನೆ.

ಇಪ್ಪತ್ತೈದು ವರ್ಷಗಳಾದ ಮೇಲೆ, ಸಮಗ್ರವಾದ ಭೂ ಶಾಸನ ಫಲದಾಯಕವಾಗಿ ಆಗುವ ಹಾಗೆ ತಂದಿರತಕ್ಕ ಪ್ರಯತ್ನ ಇವತ್ತು ನಡೆದಿದೆ ಎನ್ನುವುದನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಒಂದು ದೃಷ್ಟಿಯಿಂದ ನಾನು ಈ ಶಾಸನ ಸಭೆಯಲ್ಲಿ ಬಹಳ ಕಾಲದಿಂದ ಕೆಲಸ ಮಾಡಿದವನು. ಆದ್ದರಿಂದ ಒಂದು ವ್ಯಥೆ ಇದ್ದರೂ, ಇವತ್ತು ಈ ಕೆಲಸ ಪ್ರಥಮತಃ ನಡೆಯುತ್ತದೆ ಎಂದು ಹೇಳುವುದಕ್ಕೆ ಸಂತೋಷಪಡುತ್ತೇನೆ ಇನ್ನು ಈ ಕಾನೂನಿನಲ್ಲಿ ಮುಖ್ಯವಾದಂಥ ಉದ್ದೇಶ ಏನು ಇದೆಯೆಂದರೆ, ತಿಳಿಸುತ್ತೇನೆ. ಇದು ಇವತ್ತು ನಾವು ತೆಗೆದುಕೊಳ್ಳುತ್ತಾ ಇರತಕ್ಕ ಹೆಜ್ಜೆ ಬಹಳ ಗಮನಾರ್ಹವಾದ, ಮಹತ್ವ ಪೂರ್ಣವಾದ ಹೆಜ್ಜೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಅಥವಾ ರಾಷ್ಟ್ರದಲ್ಲಿ ಈ ದಿವಸ ಸಮಾಜವಾದದ ಸಿದ್ಧಾಂತದ ದಾರಿಯಲ್ಲಿ ಹೋಗತಕ್ಕ ಗುರಿ ನಿರ್ದಿಷ್ಟವಾಗಿರುವುದರಿಂದ, ಈ ಸಿದ್ಧಾಂತಕ್ಕೆ ಅನುಗುಣವಾಗಿ, ಭೂ ಶಾಸನ ತರುವುದಕ್ಕೆ ಪ್ರಯತ್ನ ನಡೆದಿದೆ ಎಂದು ಹೇಳುವುದಕ್ಕೆ ಎಂದು ಇಷ್ಟಪಡುತ್ತೇನೆ. ಇದರಲ್ಲಿ ಮುಖ್ಯವಾದಂಥ ವಿಷಯಗಳು ಈಗ ಇರತಕ್ಕ ಕಾನೂನಿನಲ್ಲಿ ಗೇಣಿಯನ್ನು, ಒಂದು ಪ್ರದೇಶದ ಮುಖ್ಯವಾದಂಥ ಬೆಳೆಯ ಹಣದಲ್ಲಿ ಮೌಲ್ಯ ರೂಪದಲ್ಲಿ ಎಷ್ಟು ಬರತಕ್ಕದ್ದು ಎನ್ನುವುದನ್ನು ಗೊತ್ತು ಮಾಡಿ, ಅದರ ಮೇಲೆ ಗೇಣಿಯನ್ನು ಅದಕ್ಕೆ ಲಗತ್ತು ಮಾಡಿದೆ ಅದಕ್ಕೆ ಬದಲಾಗಿ ಈ ಸಭೆಯ ಮುಂದಿಟ್ಟಿರತಕ್ಕ ಮಸೂದಾ ಕಾನೂನಿನಲ್ಲಿ ಕಂದಾಯದ ೧೦ರಷ್ಟು ಗೇಣಿ ಎಂದು ಹೇಳಿ ನಿರ್ದಿಷ್ಟವಾಗಿ ಗೊತ್ತುಮಾಡಿದ್ದೇವೆ.

ಇದರಿಂದ ಏನಾಗುತ್ತದೆ ಎಂದರೆ ಗೇಣಿ ಕೊಡತಕ್ಕಂಥ ಸಂದರ್ಭದಲ್ಲಿ ನಾನು ಕೊಡಬೇಕಾದುದು ಇಷ್ಟೆ ಎಂದು ನಿರ್ದಿಷ್ಟವಾಗಿ ಗೇಣಿದಾರರಿಗೆ ಗೊತ್ತಾಗುತ್ತದೆ. ಹಿಂದೆ ಇದ್ದ ತೊಡಕುಗಳು ಈ ಮೂಲಕ ಹೋಗಿವೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಭೂಮಿಯನ್ನು ಗೇಣಿದಾರರಿಂದ ವಾಪಸ್ ಪಡೆಯುವ ವಿಷಯ ಕೂಡ ನಾನು ಹೇಳುತ್ತೇನೆ. ಹಿಂದೆ ೧೯೬೭ರಲ್ಲಿ ಇರತಕ್ಕ ಕಾನೂನನ್ನು ತಿದ್ದುಪಡಿ ಮಾಡತಕ್ಕ ಕಾಲದಲ್ಲಿ ಚಿಕ್ಕಮಗಳೂರು ಧಾರವಾಡ, ಗುಲ್ಬರ್ಗ, ಹಾಸನ, ಮೈಸೂರು, ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ತುಮಕೂರು ಜಿಲ್ಲೆಗಳಲ್ಲಿ ಮೊದಲು ತಯಾರಾದಂತಹ ಕಾನೂನು ಪ್ರಕಾರ ಒಂದು ವರ್ಷದೊಳಗೆ ಜಮೀನನ್ನು ಸ್ವಂತ ಸಾಗುವಳಿಗೆ ವಾಪಸ್ ತೆಗೆದುಕೊಳ್ಳತಕ್ಕ ಕೆಲಸ ಮುಗಿಯಬೇಕಿತ್ತು. ಅದಕ್ಕೆ ಬದಲಾಗಿ ಕೆಲವು ಕಡೆ ೧೫ ತಿಂಗಳು ಕೆಲವು ಕಡೆ ೧೮ ಜಮೀನು ವಾಪಸ್ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದರಿಂದ ಜಮೀನುದಾರರಿಗೆ ಬಹಳ ಪ್ರೋತ್ಸಾಹ ಸಿಕ್ಕಿದ ಹಾಗಾಯಿತು ಎಂದು ಭಾವಿಸುತ್ತೇನೆ. ಈಗ ಆ ಪ್ರೋತ್ಸಾಹವೆಲ್ಲಾ ನಿಂತುಹೋಗಿದೆ. ನಾವು ಆ ವಿಷಯದಲ್ಲಿ ಇನ್ನು ಹೆಚ್ಚು ಮಾಡಬೇಕಾದುದು ಇದೆ ಎಂದು ಅನೇಕ ಸದಸ್ಯರು ಸಲಹೆ ಕೊಟ್ಟಿದ್ದಾರೆ. ನಾವು ಮಾಡಿರತಕ್ಕ ತಿದ್ದುಪಡಿ ಏನು ಎಂದರೆ ತಾನು ತೆಗೆದುಕೊಂಡಂತಹ ಜಮೀನನ್ನು ೬ ವರ್ಷಗಳವರೆಗೆ ಅವನ್ನು ಮಾರುವುದಕ್ಕೆ ಅವಕಾಶ ಇರಲಿಲ್ಲ. ಈಗ ಜಮೀನುದಾರ ಅವನ್ನು ಮಾರಲೇ ಕೂಡದು ಎಂದು ನಿರ್ಬಂಧ ಹಾಕಿದ್ದೇವೆ. ಹೊಸ ಕಾನೂನಿನಲ್ಲಿ ಮತ್ತು ವ್ಯವಸಾಯ ಮಾಡದೇ ಜಮೀನನ್ನು ಹಾಗೇ ಇಟ್ಟುಕೊಳ್ಳುವುದಕ್ಕೂ ಸಾಧ್ಯವಿಲ್ಲ. ವ್ಯವಸಾಯ ಮಾಡಲೇಬೇಕು. ಆ ರೀತಿ ವ್ಯವಸಾಯ ಮಾಡುವುದಕ್ಕೆ ಸಾಧ್ಯವಿಲ್ಲದೆ ಹೋದರೆ ಸರ್ಕಾರದವರು ಆ ಜಮೀನನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಅವಕಾಶ ಇದರಿಂದ ಕಲ್ಪನೆ ಆಗಿದೆ. ಇನ್ನು ಕೆಲವರು ಜಮೀನ್‌ದಾರರ ಭೂಮಿಯಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಮನೆಗಳನ್ನು ಕಟ್ಟಿಕೊಂಡಿರತಕ್ಕವರನ್ನು ಒಕ್ಕಲು ಎಬ್ಬಿಸತಕ್ಕ ಕೆಲಸ ಬಹಳವಾಗಿ ನಡೆಯುತ್ತದೆ ಅದನ್ನು ತಪ್ಪಿಸುವ ಉದ್ದೇಶದಿಂದ ಅವನು ತಾನು ಕೊಡತಕ್ಕ ಕಂದಾಯದ ೨೦ ರಷ್ಟನ್ನು ಕೊಟ್ಟು ಸ್ವಂತ ಭಾಗದ ಮನೆ ನಿವೇಶನವನ್ನು ತೆಗೆದುಕೊಳ್ಳಬೇಕಿತ್ತು ಅದಕ್ಕೆ ಬದಲಾಗಿ, ಬೇಕಾದರೆ ಆ ಭಾಗಕ್ಕೆ ಎಷ್ಟು ಕಂದಾಯ ಇತ್ತೋ ಅದರ ೧೦ರಷ್ಟನ್ನು ಕೊಟ್ಟು ತೆಗೆದುಕೊಳ್ಳಬಹುದು ಎಂದು ಇದರಲ್ಲಿ ಒಂದು ತಿದ್ದುಪಡಿ ಮಾಡಿದ್ದೇವೆ.

ಇನ್ನು ಒಂದು ವಿಷಯ ನಾನು ಹೇಳಬೇಕಿತ್ತು. ಗೇಣಿ ವಿಷಯದಲ್ಲಿ ಈಗ ಕಂದಾಯದ ೧೦ ರಷ್ಟು ಕೊಡತಕ್ಕದ್ದು ಖುಷ್ಕಿ ಜಮೀನಿಗೆ ಮಾತ್ರ, ತರಿ ಇರತಕ್ಕ ಕಡೆ, ನೀರಾವರಿ ಸೌಕರ್ಯ ಇರುವ ಕಡೆ ಭೂ ಕಂದಾಯದ ೧೦ ರಷ್ಟು ಗೇಣಿ ಕೊಡುವುದರ ಜೊತೆಗೆ ಮೊದಲನೆ ವರ್ಗದ ಭೂಮಿಗೆ ೬೭ ರೂಪಾಯಿ ಕೊಡಬೇಕು. ಒಂದು ಬೆಳೆ ಬೆಳೆಯತಕ್ಕ ಮತ್ತು ವರ್ಷವೆಲ್ಲಾ ನೀರಿನ ಸೌಕರ್ಯ ಕಾಯಂ ಆಗಿ ಸಿಗತಕ್ಕ ಪ್ರದೇಶದಲ್ಲಿ ೪೪ ರೂಪಾಯಿ ಕೊಡಬೇಕು. ಇನ್ನು ಸೆಮಿಕ್ರೈ ....

ಶ್ರೀ ಎನ್. ಹುಚ್ಚಮಾಸ್ತಿಗೌಡ .—

ಇನ್ನು ಜಮೀನನ್ನು ಡಿಕ್ಲೇರು ಮಾಡಿಕೊಳ್ಳುವ ವಿಚಾರದಲ್ಲಿ ಸೀಲಿಂಗುಲಿಮಿಟ್ಟು ಏನಿದೆಯೋ ಅದನ್ನು ಇಟ್ಟುಕೊಂಡು ಇದರ ವಿವರದ ಡಿಕ್ಲರೇಷನ್‌ನ್ನು ತಹಶೀಲುದಾರರಿಗೇ ಕೊಡಲೇ ಬೇಕು, ಇದನ್ನು ಅವರು ತಿಳಿಸಿದನಂತರ ಅವರೂ ಕೂಡ ನೋಟಿಫೈ ಮಾಡಬೇಕಾಗುತ್ತದೆ. ಇಷ್ಟೆಲ್ಲಾ ನೋಟಿಫೈ ಮಾಡಿದ ಮೇಲೆ ಜಮೀನುದಾರ ತನ್ನ ಡಿಕ್ಲರೇಷನ್‌ನ್ನು ನಿಯಮದ ಪ್ರಕಾರ ಕೊಡದೇ ಇದ್ದರೆ ಅಂತಹವರಿಗೆ ಶಿಕ್ಷೆ ಕೊಡಬೇಕಾಗುತ್ತದೆ ಎಂದು ಇದರಲ್ಲಿ ಅವಕಾಶ ಮಾಡಿಕೊಡಲಾಗಿದೆ. ಇದರಿಂದ ಎಲ್ಲರೂ ಅವರವರ ಜಮೀನನ್ನು ಡಿಕ್ಲೇರು ಮಾಡಿಕೊಳ್ಳಲೇ ಬೇಕು ಎಂದು ಇದರಲ್ಲಿ ಒತ್ತಾಯ ತರಲಾಗಿದೆ. ಹಿಂದೆ ಇದ್ದ ಕಾನೂನಿನಲ್ಲಿ ಇಂತಹ ಒತ್ತಾಯ ಇರಲಿಲ್ಲ ಮತ್ತು ಡಿಕ್ಲರೇಷನ್ ಕೊಡದೇ ಇದ್ದರೆ ಶಿಕ್ಷೆಯೂ ಆಗುತ್ತಿರಲಿಲ್ಲ. ಈಗ ಜಮೀನುದಾರರು ಅವರ ಹೇಳಿಕೆಯನ್ನು ಕೊಡಲೇ ಬೇಕಾಗಿದೆ, ಇಲ್ಲದೇ ಇದ್ದರೆ ಅವರಿಗೆ ಶಿಕ್ಷೆ ಕೊಡಲು ಅವಕಾಶ ಇದೆ. ಈ ರೀತಿ ಎಷ್ಟು ಜಮೀನಿದೆ ಎಂದು ಗೊತ್ತಾದ ಮೇಲೆ ಇಂತಹ ಸರ್‌ಪ್ಲಸ್ ಲ್ಯಾಂಡ್‌ನ್ನು ಯಾವ ರೀತಿ ಹಂಚಬೇಕು ಎನ್ನುವುದನ್ನೂ ಇದೇ ಕಾನೂನಿನಲ್ಲಿ ಸೇರಿಸಲಾಗಿದೆ. ಹೀಗೆ ಸರಕಾರ ಪಡೆದುಕೊಂಡ ಭೂಮಿಯಲ್ಲಿ ಶೇಕಡಾ ಐವತ್ತು ಭಾಗದಷ್ಟನ್ನು ನಿಮ್ನವರ್ಗದವರಿಗೆ ಎಂದರೆ ಷೆಡ್ಯೂಲು ಕ್ಯಾಸ್ಟ್ ಹಾಗೂ ಷೆಡ್ಯೂಲು ಟ್ರೈಬ್ಸ್ ವರ್ಗದವರಿಗೆ ಕೊಡಬೇಕು ಎಂದು ಮಾಡಲಾಗಿದೆ. ಉಳಿದ ಭೂಮಿಯನ್ನು ಗೇಣಿದಾರ ಅವನು ಭೂಮಿ ಇಲ್ಲದವನಾಗಿದ್ದರೆ ಅವನಿಗೇ ಕೊಡಬೇಕು, ಇದನ್ನು ಭೂಮಿ ಇಲ್ಲದವರಿಗೇ ಕೊಡಬೇಕು ಎಂದು ಮಸೂದೆಯಲ್ಲಿ ತಿಳಿಸಲಾಗಿದೆ.

ಇನ್ನು ಈಗಿರತಕ್ಕ ಕಾನೂನಿನಲ್ಲಿ ಗರಿಷ್ಟಮಿತಿ ಎಷ್ಟು ಎಂದರೆ, ೨೭ ಎಕರೆಯಷ್ಟು ಇರಬಹುದು ಎಂದು ಇದರ ಕನ್‌ವರ್ಷನ್ ರೇಷ್ಯೋ ಕೂಡ ಇದರಲ್ಲಿ ಕೊಡಲಾಗಿದೆ ಎರಡನೇ ವರ್ಗದ ಭೂಮಿ ಅದ್ರೆ ೩೬ ಎಕರೆ, ಮೂರನೆ ವರ್ಗದ್ದಾದರೆ ೪೫ ಎಕರೆ, ನಾಲ್ಕನೆ ವರ್ಗದ್ದಾದರೆ ೫೪ ಎಕರೆ ಹೀಗೆ ಐದನೇ ವರ್ಗದಾದ್ದರೆ ೧೦೮ ಎಕರೆ, ಆರನೆ ವರ್ಗದ್ದಾದರೆ ೧೬೨ ಎಕರೆ ಮತ್ತು ಏಳನೇ ವರ್ಗದ್ದಾದರೆ ೨೧೬ ಎಕರೆ ಇಟ್ಟುಕೊಳ್ಳಲು ಸಾಧ್ಯವಿದೆ. ಇನ್ನು ಈಗ ತಂದಿರುವ ಕಾನೂನು ಜಾರಿಗೆ ಬಂದ ಮೇಲೆ ೧೮ ಎಕರೆ ಯಷ್ಟು ಮಾತ್ರ ಇಟ್ಟುಕೊಳ್ಳಲು ಅವಕಾಶ ಇದೆ. ಎಂದರೆ ೧೮, ೨೪, ೩೦, ೩೬, ೭೨, ೧೦೮, ೧೪೪ ಎಕರೆಗಳಷ್ಟು ಭೂಮಿಯನ್ನು ಇಟ್ಟುಕೊಳ್ಳುವ ಒಂದು ಅವಕಾಶವಾಯಿತು, ಇದರಲ್ಲಿ ಅವಿಭಕ್ತ ಕುಟುಂಬದವರೂ ಇರಲು ಅವಕಾಶವಿದೆ. ಒಂದು ಕುಟುಂಬದಲ್ಲಿರುವವರು ವಯಸ್ಕರೂ ಇತರರೂ ಎಲ್ಲರೂ ಸೇರಲು ಹಿಂದೆ ಅವಕಾಶ ಇತ್ತು ಇದನ್ನು ಈಗ ವಿವರಣೆ ಮಾಡಿ ತಿಳಿಸಲಾಗಿದೆ. ಒಟ್ಟು ಐದು ಜನರಿರುವ ಒಂದು ಕುಟುಂಬದಲ್ಲಿ ತಂದೆ, ತಾಯಿ ಮತ್ತು ಅವರ ಅಪ್ರಾಪ್ತ ವಯಸ್ಸಿನ ಮೂರು ಜನ ಮಕ್ಕಳು ಎಂದರೆ ಆರನೇ ಒಂದು ಭಾಗದಷ್ಟು ಹಿಡುವಳಿ ಇಟ್ಟುಕೊಳ್ಳಲು ಅವಕಾಶವಿದೆ, ಈ ಕಾನೂನು ಜಾರಿಗೆ ಬಂದ ಮೇಲೆ ಮೊದಲನೇ ವರ್ಗದಲ್ಲಿ ಇಪ್ಪತ್ತು ಎಕರೆಯವರಿಗೆ ಮತ್ತು ಕಡೇ ವರ್ಗದಲ್ಲಿ ೨೮೮ ಎಕರೆಗಳಷ್ಟು ಭೂಮಿ ಇಟ್ಟುಕೊಳ್ಳಬಹುದು.

ಈಗಿನ ತಿದ್ದುಪಡಿಯ ಪ್ರಕಾರ ಒಂದು ಕುಟುಂಬದ ವಿವರಣೆಯನ್ನು ಗಂಡ, ಹೆಂಡತಿ ಮತ್ತು ಮೂರು ಜನ ಅಪ್ರಾಪ್ತ ವಯಸ್ಸಿನ ಮಕ್ಕಳು ಎಂದು ಹೇಳಲಾಗಿದೆ ಸಾಮಾನ್ಯವಾಗಿ ಒಂದು ಕುಟುಂಬದಲ್ಲಿ ಇದಕ್ಕಿಂತ ಹೆಚ್ಚು ಜನ ಇರುವುದಿಲ್ಲ. ಏನಾದರೂ ಅವಳಿಜವಳಿ ಮಕ್ಕಳಾಗಿದ್ದರೆ ಅಂತಹವರ ಕುಟುಂಬದಲ್ಲಿ ಮೂರಕ್ಕಿಂತ ಜಾಸ್ತಿ ಮಕ್ಕಳು ಇರಬಹುದು. ಆದರೆ ಇದು ಅಪರೂಪ.

4–30 P.M.

ಒಬ್ಬರು ಸದಸ್ಯರು : ಕೆಲವರಿಗೆ ೧೨ ಜನ ಮಕ್ಕಳು ಸಹ ಇರುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಅಂತಹ ಕೇಸ್‌ಗಳು ಅಪರೂಪ. ಜಮೀನು ಇಲ್ಲದವರಿಗೇ ಮಕ್ಕಳು ಜಾಸ್ತಿಯೇ ಹೊರತು, ಜಮೀನು ಹೆಚ್ಚು ಇರುವ ಜಮೀನುದಾರರಿಗೆ ಯಾವಾಗಲು ಮಕ್ಕಳು ಕಡಿಮೆ. ಇದನ್ನು ನಾವು ಎಲ್ಲ ಕಡೆ ನೋಡುತ್ತಿದ್ದೇವೆ ಈಗಿನ ತಿದ್ದುಪಡಿಯ ಪ್ರಕಾರ ೫ ಜನರ ಒಂದು ಕುಟುಂಬದವರು ಮೊದಲನೆಯ ದರ್ಜೆಯ ಜಮೀನನ್ನು ೧೦ ಎಕರೆ ಇಟ್ಟುಕೊಳ್ಳಬಹುದಾಗಿದೆ. ೫ ಜನಕ್ಕಿಂತ ಜಾಸ್ತಿ ಇದ್ದರೆ, ಪ್ರತಿಯೊಬ್ಬರೂ ಎರಡು ಎಕರೆಯಂತೆ ಹೆಚ್ಚು ಇಟ್ಟುಕೊಳ್ಳಬಹುದಾಗಿದೆ. ಅಂದರೆ ಗರಿಷ್ಠ ಮಿತಿಗಿಂತ ಎರಡರಷ್ಟು ಭೂಮಿಯನ್ನು ಪಡೆದುಕೊಳ್ಳುವುದಕ್ಕೆ ಅವಕಾಶ ಇದೆ. ಅದಕ್ಕಿಂತ ಜಾಸ್ತಿ ದೊರೆಕಲಾರದು. ಆದರೆ ಆ ಕುಟುಂಬದಲ್ಲಿರುವ ಪ್ರಾಪ್ತ ವಯಸ್ಸಿನವರು ಏನಾದರು ಇಂಡಿಪೆಂಡೆಂಟ್ ಆಗಿ ಇರುವುದಾದರೆ ಅಂತಹವರು ಗರಿಷ್ಠ ಮಿತಿಯ ಜಮೀನನ್ನು ಪಡೆದುಕೊಳ್ಳುವುದಕ್ಕೆ

ಅವಕಾಶವಿದೆ. ಆ ರೀತಿ ಗರಿಷ್ಠ ಮಿತಿಯನ್ನು ವಯಸ್ಕರಾಗಿರುವವರು ಪಡೆದುಕೊಂಡರೂ ಸಹ ಮೊದಲಿನ ಗರಿಷ್ಠ ಮಿತಿಗಿಂತ ಕಡಿಮೆ ಇರುತ್ತದೆ. ಮೊದಲಿನ ಮಸೂದೆಯ ಪ್ರಕಾರ ಒಂದು ಕುಟುಂಬದವರು ಮೊದಲನೇ ದರ್ಜೆಯ ೧೮ ಎಕರೆ ಜಮೀನನ್ನು ಪಡೆದುಕೊಳ್ಳುವುದಕ್ಕೆ ಅವಕಾಶ ಇತ್ತು. ಆದರೆ ಈಗಿನ ತಿದ್ದುಪಡಿಯ ಪ್ರಕಾರ ಒಂದು ಕುಟುಂಬದವರು ಮೊದಲನೆಯ ದರ್ಜೆಯ ಭೂಮಿಯನ್ನು ಗರಿಷ್ಠ ೧೦ ಎಕರೆಯವರೆಗೆ ಮಾತ್ರ ಇಟ್ಟುಕೊಳ್ಳಬಹುದಾಗಿದೆ. ನಮ್ಮ ಲೆಕ್ಕದ ಪ್ರಕಾರ ಒಂದು ಕುಟುಂಬದಲ್ಲಿ ೫ ಜನಕ್ಕಿಂತ ಹೆಚ್ಚು ಇರುವುದು ಅಪರೂಪವಾದ್ದರಿಂದ ಈ ಒಂದು ತಿದ್ದುಪಡಿಯಿಂದ ಸರ್ಕಾರಕ್ಕೆ ಹೆಚ್ಚು ಜಮೀನು ಭೂಮಾಲೀಕರಿಂದ ದೊರೆಯುತ್ತದೆ ಎಂದು ಹೇಳಬಹುದು. ಕುಟುಂಬದ ಬಗ್ಗೆ ಇಷ್ಟು ವಿವರಣೆ ಕೊಟ್ಟರೆ ಸಾಕು ಎಂದು ಕಾಣುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ನಮಗೆ ಮನವರಿಕೆಯಾಗುವಂತೆ ವಿವರಣೆ ಕೊಟ್ಟರೆ ನಂತರ ನಾವು ಮಾತನಾಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಚ್. ಎನ್. ಸಿದ್ದಪ್ಪ.—ಒಬ್ಬನಿಗೆ ೮ ಜನ ಹೆಂಡತಿಯರು ಇದ್ದು, ೪೮ ಜನ ಮಕ್ಕಳು ಇದ್ದರೆ, ಅವರಿಗೆ ಯಾವ ರೀತಿ ಭೂಮಿಯನ್ನು ಹಂಚುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಮ್ಮ ಮಾನ್ಯ ಸದಸ್ಯರಿಗೆ ಸೂಕ್ಷ್ಮವಾಗಿ ಹೇಳಿದರೆ ತಿಳಿದುಕೊಳ್ಳುವುದಕ್ಕೆ ಅವಕಾಶವಿದೆ. ಆದ್ದರಿಂದ ಹೆಚ್ಚಿನ ವಿವರಣೆ ಬೇಕಾಗಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಮೊದಲಿದ್ದ ಕುಟುಂಬದ ವಿವರಣೆಯನ್ನು ನೋಡಿದರೂ ಕೂಡ ನಾನು ಅರ್ಥಮಾಡಿಕೊಳ್ಳುವುದು ಹೀಗೆ ಅದರ ಪ್ರಕಾರ ಪ್ರತಿ ವಯಸ್ಕನೂ ತಮ್ಮ ಭಾಗ ತೆಗೆದುಕೊಳ್ಳುವುದಕ್ಕೆ ಅವಕಾಶ ಇತ್ತು. ಆದರೆ ಈ ವಿಷಯ ಕೋರ್ಟಿಗೆ ಹೋಗಿ ಎಷ್ಟು ಪಡೆದುಕೊಳ್ಳಬಹುದು ಎಂಬ ಬಗ್ಗೆ ನಿರ್ಧಾರವಾಗಿರಲಿಲ್ಲ. ಆದರೂ ಹಿಂದೆ ಇದ್ದ ಕುಟುಂಬದ ವಿವರಣೆಯನ್ನು ನೋಡುವುದಾದರೆ, ಅದು ಈ ರೀತಿ ಇದೆ :

> "Family" in relation to a person means such person and if married, the wife or husband as the case may be and the dependent children."

ಈ ರೀತಿ ಇರುವಾಗ ಪ್ರಾಪ್ತ ವಯಸ್ಕರಾಗಿರುವವರು ಇಂಡಿಪೆಂಡೆಂಟ್ ಆಗಿ ಬೇಕಾದರೆ ಇರಬಹುದು. ಅದರಂತೆ ಈಗ ತಂದಿರುವ ತಿದ್ದುಪಡಿಯ ಪ್ರಕಾರವೂ ಪ್ರತಿ ವಯಸ್ಕನಾಗಿರುವವನೂ ಬೇಕಾದರೆ ಪ್ರತ್ಯೇಕವಾಗಿ ಇದ್ದುಕೊಂಡು ಗರಿಷ್ಠ ಮಿತಿಯ ಜಮೀನನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಈ ರೀತಿ ಪಡೆದುಕೊಂಡರೂ ಸಹ ಹೆಚ್ಚುವರಿ ಜಮೀನು ಅವರ ಕೈತಪ್ಪಿ ಸರ್ಕಾರಕ್ಕೆ ಸಿಗುತ್ತದೆ. ನಂತರ ಅದನ್ನು ಸಾಮಾನ್ಯ ಜನರಿಗೆ ಹಂಚುವುದಕ್ಕೆ ಅವಕಾಶ ಮಾಡಿಕೊಡುವುದೇ ಈ ತಿದ್ದುಪಡಿಯ ಉದ್ದೇಶ. ಈಗ ಕೊಟ್ಟಿರುವ ಕುಟುಂಬದ ವಿವರಣೆಯ ಪ್ರಕಾರ ಭೂಮಾಲೀಕರಿಗೆ ಹೆಚ್ಚು ಪ್ರಯೋಜನಕಾರಿಯಾಗಿಲ್ಲ. ಇದು ಜಮೀನು ಇಲ್ಲದವರಿಗೆ ಹೆಚ್ಚು ಸಹಾಯಕವಾಗಿದೆ ಎಂದು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಪ್ರತಿ ವಯಸ್ಕನೂ ಒಟ್ಟು ಕುಟುಂಬದಲ್ಲಿ ಇಲ್ಲದೆ ಸ್ವತಂತ್ರವಾಗಿದ್ದರೆ, ಆತನಿಗೆ ಗರಿಷ್ಠ ಮಿತಿಯಷ್ಟು ಭೂಮಿ ಸಿಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ತಿದ್ದುಪಡಿಯನ್ನು ಕನ್ನಡದಲ್ಲಿಯೇ ಅಚ್ಚು ಹಾಕಿಸಿದ್ದರೆ ಚೆನ್ನಾಗಿರುತ್ತಿತ್ತು. ಇಂಗ್ಲೀಷಿನಲ್ಲಿ ಇರುವುದರಿಂದ ರೈತರಿಗೆ ಅರ್ಥವಾಗುವುದಿಲ್ಲ. ಇದರಲ್ಲಿ ಉಪಯೋಗಿಸಿರುವ ಕೆಲವು ಪದಗಳು ನಮಗೇ ಅರ್ಥವಾಗುವುದಿಲ್ಲ. ಇನ್ನು ಸಾಮಾನ್ಯ ಜನರಿಗೆ ಯಾವ ರೀತಿ ಅರ್ಥವಾಗಬೇಕು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕಾಗಿಯೇ ನಾನು ಆದಷ್ಟು ಎಲ್ಲ ವಿವರಗಳನ್ನು ಕನ್ನಡದಲ್ಲಿಯೇ ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಏನಾದರೂ ಕೆಲವು ಪದಗಳು ಸುಲಭವಾಗಿ ಲಾಯರ್‌ಗಳಿಗೂ ಸಹ ಅರ್ಥವಾಗದವು ಇದ್ದರೆ, ಸುಲಭವಾಗಿ ಅರ್ಥವಾಗುವ ಪದಗಳು ಏನಾದರೂ ಇದ್ದರೆ, ತಾವು ಸಲಹೆ ಕೊಡಿ. ಅದಕ್ಕೆ ಅಡ್ಡಿಯೇನೂ ಇಲ್ಲ. ನಮ್ಮ ಇಲಾಖೆಯವರು ಸಾಮಾನ್ಯವಾಗಿ ಉಪಯೋಗ ಮಾಡತಕ್ಕಂಥ ಪದಗಳನ್ನೇ ಆದಷ್ಟೂ ಉಪಯೋಗ ಮಾಡಿದ್ದಾರೆ. ಅದಕ್ಕೂ ಸುಲಭವಾದ ಪದಗಳು ಏನಾದರೂ ಇದ್ದರೆ ಅದನ್ನು ನಮಗೆ ತಿಳಿಸಿ. ಅವುಗಳನ್ನು ನಿಜವಾಗಿಯೂ ಒಪ್ಪಿಕೊಳ್ಳುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ. ಅಂದರೆ ಪದಗಳನ್ನು ಮಾತ್ರ ತಿಳಿಸಬೇಕು.

ಶ್ರೀ ಎನ್, ಹುಚ್ಚಮಾಸ್ತಿಗೌಡ .—

ಹಿಂದೆ ಇದ್ದ ಮಸೂದೆಯಲ್ಲಿ ಏನೇನು ವಿನಾಯಿತಿಗಳು ಇದ್ದವೋ ಅವುಗಳನ್ನೆಲ್ಲಾ ತಪ್ಪಿಸುವುದಕ್ಕೆ ಆದಷ್ಟು ಪ್ರಯತ್ನ ಮಾಡಿದ್ದೇವೆ. ಸಕ್ಕರೆ ಕಾರ್ಖಾನೆಯವರು ಹಿಂದಿನ ಮಸೂದೆಯ ಪ್ರಕಾರ ಎಷ್ಟು ಜಮೀನು ಬೇಕಾದರೂ ಇಟ್ಟುಕೊಳ್ಳಬಹುದಾಗಿತ್ತು. ಆದರೆ ಈಗಿನ ತಿದ್ದುಪಡಿಯ ಪ್ರಕಾರ ೧೦೦ ಎಕರೆಗಳನ್ನು ಮಾತ್ರ ಇಟ್ಟುಕೊಳ್ಳಬಹುದು.

ಕಬ್ಬಿನ ಮೇಲೆ ಪರಿಶೋಧನೆ ನಡೆಸುವುದಕ್ಕೆ ಮತ್ತು ಕಬ್ಬಿನಿಂದ ಉತ್ಪಾದನೆಯನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಕಬ್ಬು ಬೆಳೆಯುವ ಭೂಮಿಯನು ೧೦೦ ಎಕರೆ ಇಟ್ಟುಕೊಳ್ಳಬಹುದು ಎಂದು ಗೊತ್ತು ಮಾಡಿದ್ದೇವೆ.

ಹಿಂದೆ ರಿಲಿಜಿಯಸ್ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ವಿನಾಯ್ತಿಯನ್ನು ಕೊಟ್ಟಿತ್ತು ಈಗ ಆ ವಿನಾಯ್ತಿಯನ್ನು ತೆಗೆದು ಹಾಕಿದ್ದೇವೆ. ಹುಣಿಸೆ ಮತ್ತು ಮಾವಿನ ತೋಟಗಳಿಗೆ ವಿನಾಯ್ತಿ ಇಲ್ಲ. ಹಿಂದೆ ಇದ ವಿನಾಯಿತ್ತಿಯನ್ನು ಈಗ ತೆಗೆದು ಹಾಕಿದ್ದೇವೆ. ಕೋಆಪರೇಟಿವ್ ಇನ್‌ಸ್ಟಿಟ್ಯೂಷನ್‌ಗಳಿಗೆ ಹಿಂದೆ ವಿನಾಯ್ತಿ ಇತ್ತು ಈಗಲೂ ಅವುಗಳಿಗೆ ವಿನಾಯ್ತಿ ಇದೆ ಈಗ ಒಬ್ಬ ವ್ಯಕ್ತಿ ಎಷ್ಟು ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿದೆ ಎಂದರೆ ತನ್ನ ಹತ್ತಿರ ಇರುವ ಜಮೀನು ಮತ್ತು ಕೋಆಪರೇಟೀವ್ ಸೊಸೈಟಿಯಲ್ಲಿ ತನ್ನ ಭಾಗದ ಷೇರು ಎಷ್ಟಿದೆಯೋ ಈ ಎರಡನ್ನು ಸೇರಿಸಿ ಗರಿಷ್ಟಮಿತಿಗಿಂತ ಹೆಚ್ಚು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ ಸಹಕಾರ ಸಂಘಗಳ ಮುಖಾಂತರ ವ್ಯವಸಾಯ ಅಭಿವೃದ್ಧಿ ಮಾಡಿಕೊಳ್ಳವುಕ್ಕೆ ಸಹಾಯವಾಗುವ ದೃಷ್ಟಿಯಿಂದ ಈ ಒಂದು ಮಿತಿಯನ್ನು ಹಾಕಿ ಸಹಕಾರ ಸಂಘಗಳಿಗೆ ವಿನಾಯ್ತಿಯನ್ನು ಕೊಟ್ಟಿದ್ದೇವೆ. ಸಹಕಾರಿ ಸಂಘಗಳ ಮುಖಾಂತರ ದೊಡ್ಡ ದೊಡ್ಡ ಯಂತ್ರವನ್ನು ಉಪಯೋಗಿಸಿಕೊಂಡು ವವ್ಯಸಾಯ ಅಭಿವೃದ್ಧಿ ಮಾಡುವುದಕ್ಕೆ ಅಡ್ಡಿ ಆಗಬಾರದು ಎಂದು ಈ ಒಂದು ಮಿತಿಯನ್ನು ಗೊತ್ತು ಮಾಡಿ ಸಹಕಾರಿ ಸಂಘಗಳಿಗೆ ವಿನಾಯ್ತಿಯನ್ನು ಕೊಟ್ಟಿದ್ದೇವೆ. ಇನ್ನಿನ್ನು ಕೆಲವು ವಿನಾಯ್ತಿಗಳು ಇದ್ದುವು ಆ ವಿನಾಯ್ತಿಗಳನ್ನು ಈಗ ತೆಗೆದುಹಾಕಿದ್ದೇವೆ. ಕೆಲವಕ್ಕೆ ವಿನಾಯ್ತಿಯನ್ನು ಕೊಟ್ಟಿದ್ದೇವೆ. ಸರ್ಕಾರದ ಮುಖಾಂತರ ನಡೆಸತಕ್ಕ ಫಾರಂಗಳಿಗೆ, ಕೋ ಆಪರೇಟೀವ್ ಫಾರಂಗಳಿಗೆ ಮತ್ತು ಪ್ಲಾಟೇಷನ್‌ಗಳಿಗೆ ಸೀಲಿಂಗ್ ವಿನಾಯ್ತಿ ಕೊಟ್ಟಿದ್ದೇವೆ. ಪ್ಲಾನ್‌ಟೇಷನ್‌ಗಳಿಗೆ ಕೈಗಾರಿಕಾ ಕಾನೂನು ಅನ್ವಯವಾಗುತ್ತದೆ ಇದಕ್ಕೆ ಲೇಬರ್ ಲಾಸ್ ಅನ್ವಯವಾಗುತ್ತವೆ. ಮಿನಿಮಮ್ ವೇಜಸ್ ಅಪ್ಲೈ ಆಗುತ್ತದೆ ಪ್ರಾವಿಡೆಂಟ್ ಫಂಡ್ ಅಪ್ಲೈ ಆಗುತ್ತದೆ. ಕಾರ್ಮಿಕರಿಗೆ ಮನೆಗಳನ್ನು ಕಟ್ಟಿ ಕೊಡಬೇಕಾಗುತ್ತದೆ. ಹೀಗೆ ಕೈಗಾರಿಕೆಗಳಿಗೆ ಸಂಬಂಧಪಟ್ಟ ಕಾನೂನುಗಳು ಇದಕ್ಕೆ ಅನ್ವಯವಾಗುವುದರಿಂದ ಇದನ್ನು ಪ್ರತ್ಯೇಕವಾಗಿ ಯೋಚನೆ ಮಾಡುವುದು ಒಳ್ಳೆಯದು ಎಂದು ನಮ್ಮ ಅಭಿಪ್ರಾಯ.

ಶ್ರೀ ಎಚ್.ಎಸ್. ಸಿದ್ದಪ್ಪ.—ಸ್ವಾಮಿ ಈಭೂಸುಧಾರಣೆಗೆ ಸಂಬಂಧಪಟ್ಟಹಾಗೆ ನಮಗೆ ಸ್ವಲ್ಪ ಡೀಟೈಲಾಗಿ ಹೇಳಿದರೆ ಒಳ್ಳೆಯದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದಪ್ಪನವರು ಈ ಸಭೆಗೆ ಹೊಸಬರಾದರೂ ಕೂಡ ಅವರಿಗೆ ಈ ಭೂಸುಧಾರಣಾ ಕಾನೂನನ್ನು ಓದಿ ಅರ್ಥ ಮಾಡಿಕೊಳ್ಳತಕ್ಕ ಶಕ್ತಿ ಇದೆ. ಅವರು ಕೇಳಿದಹಾಗೆ ನಾವು ವಿವರಣೆ ಹೇಳಬೇಕಾದ ಅವಶ್ಯಕತೆ ಇಲ್ಲ. ಮಾನ್ಯ ಸದಸ್ಯರು ಈ ಬಗ್ಗೆ ಹೆಚ್ಚು ತಿಳಿದುಕೊಳ್ಳವುದಕ್ಕೆ ಕೇಳಿದರೂ ಕೂಡ ಸಂದರ್ಭ ಬಂದಾಗ ಹೆಚ್ಚು ವಿವರಣೆ ಅಗತ್ಯ ಇದ್ದರೆ ಅದನ್ನು ಕೊಡುವುದಕ್ಕೆ ನಾನು ಸಿದ್ಧನಾಗಿದ್ದೇನೆ.

ಪ್ಲಾನಟೇಷನ್ ಸಾಮಾನ್ಯವಾಗಿ ಬೆಟ್ಟದ ಇಳಿಜಾರಿನಲ್ಲಿ ಇದೆ. ಕಾಫಿ ಮತ್ತು ಟೀ ಪ್ಲಾನ್ ಟೇಷನ್ ಗಳು ಸಾಮಾನ್ಯವಾಗಿ ಬೆಟ್ಟದ ಇಳಿಜಾರಿನಲ್ಲಿ ಇರುತ್ತವೆ. ಅಂಥಾ ಪ್ರದೇಶವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಪರಿಸ್ಥಿತಿ ಇಲ್ಲ. ಪ್ಲಾಂಟೇಷನ್ ಕ್ರಾಪ್ಸ್‌ಗಳಾದ ಕಾಫೀ ಟೀ ಇವುಗಳನ್ನು ಬೆಳೆಯುವ ಜಮೀನಿಗೆ ವಿನಾಯ್ತಿ ಕೊಟ್ಟಿದೆ. ಪ್ಲಾಂಟೇಷನ್ ಕ್ರಾಪ್ಸ್ ಅಲ್ಲದ ಬೇರೆ ಬೆಳೆ ಬೆಳೆಯುತ್ತಿರುವ ಜಮೀನನ್ನು ತೆಗೆದುಕೊಳ್ಳಬೇಕೆಂದು ಅದನ್ನು ಸೇರಿಸಿದ್ದೇವೆ. ಅದಕ್ಕೆ ಗರಿಷ್ಟಮಿತಿಯನ್ನು ಹಾಕಿದ್ದೇವೆ.

ಶ್ರೀ ಬಾಪುಗೌಡ ರಾಯಪ್ಪ.—ಪ್ಲಾನ್‌ಟೇಷನ್‌ನಲ್ಲಿ ಯಾವು ಯಾವುದು ಬರುತ್ತದೆ.? ತೆಂಗಿನ ಮರಗಳು ಪ್ಲಾನ್‌ಟೇಷನ್‌ನಲ್ಲಿ ಸೇರಿರುತ್ತವೆಯೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ಲಾಂಟೇಷನ್ ಕ್ರಾಪ್ಸ್‌ನಲ್ಲಿ ಕಾಫಿ, ಟೀ, ರಬ್ಬರ್, ಏಲಕ್ಕಿ ಇವುಗಳೆಲ್ಲವೂ ಬರುತ್ತವೆ.

ಭೂಮಿಯನ್ನು ಸರ್ಕಾರದ ಮುಖಾಂತರ ಲೀಜಿಗೆ ತೆಗೆದುಕೊಂಡಿದ್ದರೆ ಅಂಥಾ ಭೂಮಿಗೆ ವಿನಾಯ್ತಿ ಉಂಟು. ಆದರೆ ಅದು ೨೦ ವರ್ಷಗಳಿಗಿಂತ ಹೆಚ್ಚು ಲೀಜ್ ಇರಬಾರದು ಎನ್ನುವ ಒಂದು ಶರತ್ತನ್ನು ಹಾಕಿದೆ. ಭೂದಾನ ಯಜ್ಞಕ್ಕೆ ಕೊಟ್ಟಿರತಕ್ಕ ಜಮೀನಿಗೆ ಗರಿಷ್ಟ ಮಿತಿಯನ್ನು ಹಾಕಿಲ್ಲ ಇದನ್ನು ಮಸೂದಾ ಕಾನೂನಿನಲ್ಲಿ ಸೇರಿಸಬೇಕು ತೆಂಗಿನ ಗಿಡಗಳ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ೫೪ ಎಕರೆ ಇರತಕ್ಕ ತೆಂಗಿನ ತೋಟವನ್ನು ಇಟ್ಟುಕೊಳ್ಳಬಹುದು. ನನಗೆ ಗೊತ್ತಿರುವ ಹಾಗೆ ಎರಡೂವರೆ ಸಾವಿರ ತೆಂಗಿನ ಗಿಡಗಳನ್ನು ಇಟ್ಟುಕೊಳ್ಳಬಹುದು.

ಹೀಗೆ ತಮ್ಮ ಸಲಹೆಗಳನ್ನು ಕೇಳಿ ೫೪ ಎಕರೆಯಿಂದ ೨೭ ಎಕರೆಗೆ ತಂದು ಮೊದಲನೆಯ ವರ್ಗದ ಖುಷ್ಕಿಭೂಮಿಗೆ ಇಳಿಸುವುದಕ್ಕೆ ಅವಕಾಶ ಇದೆ. ತಮ್ಮ ಸಲಹೆಗಳನ್ನು ನೋಡಿಕೊಂಡು ಯಾವುದಕ್ಕೆ ಮಹತ್ವ ಕೊಡಬೇಕು ಮತ್ತು ಯಾವುದು ಯೋಗ್ಯವೆಂಬುದನ್ನು ಯೋಚನೆ ಮಾಡಿ ಮಾಡಿಕೊಳ್ಳಬಹುದು.

ಇನ್ನು ಸೀಲಿಂಗನ್ನು ಲೆಕ್ಕಕ್ಕೆ ತೆಗೆದು ಕೊಳ್ಳುವಾಗ, ಗರಿಷ್ಠ ಮಿತಿಯನ್ನು ಹಾಕುವಾಗ ೧೮ನೇ ನವೆಂಬರ್ ೧೯೬೧ ರಲ್ಲಿರತಕ್ಕಂತಹ ಪರಿಸ್ಥಿತಿಯನ್ನು ಗಣನೆಗೆ ತೆಗೆದು ಕೊಂಡು ಹಾಕಬೇಕೆಂದು ಇತ್ತು. ಈಗ ಹಾಲಿ ಇರತಕ್ಕಂತಹ ಕಾನೂನು ರಚನೆಯಾದಂತಹ ದಿವಸ ಅವನಿಗೆ ಭೂಮಿ ಎಷ್ಟು ಇತ್ತೆಂಬುದನ್ನು ಲೆಕ್ಕಕ್ಕೆ ತೆಗೆದುಕೊಂಡು ಈ ಗರಿಷ್ಠ ಮಿತಿಯನ್ನು ಗೊತ್ತು ಮಾಡಬೇಕೆಂದು ಇದೆ ಇದರ ಬಗ್ಗೆ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಇರುವುದನ್ನು ತಾವು ನೋಡ ಬಹುದು. ಅದರಲ್ಲಿ ಈ ರೀತಿ ಹೇಳಿದ್ದೇವೆ.—

"For computation of revised ceiling, transferes of lands made from 18th November 1961 will be taken into account." ಹಾಗಾದರೆ ೧೦೦ ಎಕರೆ ಭೂಮಿ ಆ ದಿವಸ ಇದ್ದರೆ ಅದರಲ್ಲಿ ೫೦ ಎಕರೆ ಅವನು ಮಾರಿಬಿಟ್ಟಿರುತ್ತಾನೆ. ಇವತ್ತು ನಾವು ೫೪ ಎಕರೆ ಇದರ ಪ್ರಕಾರ ನಾವು ಕೊಡುತ್ತೇವೆ. ಏಕೆಂದರೆ ಈಗಿನ ಗರಿಷ್ಠ ಮಿತಿ ಕಡೆಯ ದರ್ಜೆಯ ಭೂಮಿಗೆ ೫೪ ಎಕರೆ ಇರುವುದು. ಹಿಂದೆ ೧೦೦ ಅವನಲ್ಲಿ ಇತ್ತು. ೧೮ನೇ ನವೆಂಬರ್ ೧೯೬೧ ರಿಂದೀಚೆಗೆ ಏನಾದರೂ ಭೂಮಿ ಅವನ್ನು ಮಾರಿದ್ದರೆ, ಅವನು ಡಿಕ್ಲೇರ್ ಮಾಡಿ ಕೊಳ್ಳುವಾಗ ಇದ್ದಂತಹ ೫೦ ಎಕರೆಯನ್ನು ಡಿಕ್ಲೇರ್ ಮಾಡಿಕೊಳ್ಳುತ್ತಾನೆ, ಉಳಿದ ೫೦ ಎಕರೆಯನ್ನು ಮಾರಿರುವುದರಿಂದ ಡಿಕ್ಲೇರ್ ಮಾಡಿಕೊಳ್ಳುವುದಿಲ್ಲ. ಆದರೆ ಅವನ ಹತ್ತಿರ ಇರುವ ಭೂಮಿ ಸೀಲಿಂಗ್ ಲಿಮಿಟ್ ಒಳಗೆ ಇದ್ದರೂ ಕೂಡ ಅದು

ಸರ್ಕಾರದ ವಶಕ್ಕೆ ಬರುತ್ತದೆ ಎಂದು ಅರ್ಥವಾಗುತ್ತದೆ.

ಶ್ರೀ ಎಚ್.ಡಿ. ದೇವೇಗೌಡ :—ಅವನು ೧೦೦ ಎಕರೆಯನ್ನೂ ಮಾರಿದ್ದರೆ?

ಅದೇ ರೀತಿ ಕೆಲವು ಮಂತ್ರಿಯವರು ಸಹ ಮಾರಿದ್ದಾರೆಂದು ನಾನು ಕೇಳಿದ್ದೇನೆ. ಆವಾಗ ಏನು ಮಾಡುತ್ತೀರಿ?

ಶ್ರೀ ಎನ್ ಹುಚ್ಚಮಾಸ್ತಿಗೌಡ,—೧೦೦ ಎಕರೆಯನ್ನೂ ಮಾರಿದ್ದರೆ ಅಂಥವರಿಗೆ ಬೇರೆ ರೀತಿಯ ಶಿಕ್ಷೆಯನ್ನು ಕೊಡುವಂತೆ ಮಾಡಬೇಕಾಗುತ್ತದೆ. ಆ ಶಿಕ್ಷೆ ಇದರಲ್ಲಿ ಬರುವುದಿಲ್ಲ. ಹೀಗೆ ಈ ದಿವಸದ ಭೂಮಿಯನ್ನು ಲೆಕ್ಕಕ್ಕೆ ತೆಗೆದುಕೊಂಡು ಇರತಕ್ಕಂತಹ ಭೂಮಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಅದು ಈ ಕಾನೂನಿನಲ್ಲಿರತಕ್ಕಂತಹ ವಿಶೇಷವಾದಂತಹ ಗುಣ. ಇದು ಹೊಸದೇನೂ ಸೇರಿಸುವುದಿಲ್ಲ. ಹಾಲಿರತಕ್ಕಂತಹ ಕಾನೂನಿನಲ್ಲಿ ಅದು ಇದೆ. ಅದು ಹೀಗೆ ಇದೆ : "63 (6)-A. Notwithstaning anything contained in the preceding sub-section, if any person has, after the 18th November 1961 and before the appointed day transferred any land otherwise than by partition or by sale to the tenant of such land in conformity with any law in force at the time, then in calculating the ceiling area which that person is entitled to hold, the area so transferred shall be taken into consideration and land exceeding the ceiling area so calculated shall be deemed to be in excess of the ceiling area, notwithstanding that the land remaining with him may not in fact be in excess of the ceiling area" ಅದರಲ್ಲಿ ಒಂದು ವಿನಾಯಿತಿ ಇದೆ. ಟೆನೆಂಟಿಗೆ ಭೂಮಿಯನ್ನು ಮಾರಿದ್ದರೆ ಸೀಲಿಂಗ್ ಹಾಕುವಾಗ ಲೆಕ್ಕಕ್ಕೆ ತೆಗೆದು

ಶ್ರೀ ಎನ್. ಹುಚ್ಚಮಾಸ್ತಿಗೌಡ .—

ಕೊಳ್ಳುವುದಿಲ್ಲ. ಅಣ್ಣ ತಮ್ಮಂದಿರಿಗೆ ವಿಭಾಗವಾಗಿದ್ದರೆ ಲೆಕ್ಕಕ್ಕೆ ತೆಗೆದು ಕೊಳುವುದಿಲ್ಲ. ಆದರೆ ಉಳಿದ ಸಂದರ್ಭಗಳಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಇನ್ನು ಗೇಣಿದಾರರ ಹತ್ತಿರ ಉಳಿದು ಕೊಳ್ಳತಕ್ಕ ಭೂಮಿಗೆ ಅವರಿಂದ ತೆಗೆದುಕೊಳ್ಳಬೇಕಾದ ಆಕ್ಯೂಪೆನ್ಸಿ ಪ್ರೈಸ್ ಗೇಣಿಯ ೧೫೦ರಷ್ಟು ಎಂದು ಹೇಳಿ ಇದೆ. ಅದೇ ರೀತಿ ಜಮೀನ್ದಾರರಿಗೆ ಕೂಡ ಕೊಡುವಾಗ ೧೫೦ರಷ್ಟು ಕಂಪೆನ್ಸೇಶನ್ ಎನ್ನುವ ಪದದ ಬದಲು 'ಅಮೌಂಟ್'' ಎಂದು ಸೇರಿಸಿದೆ. ಅವನಿಗೆ ಕೊಡುವಾಗ ೫ ಸಾವಿರ ರೂಪಾಯಿ ನೆಟ್ ಇನ್‌ಕಂ ಬರುವ ಜಮೀನು ಇದ್ದರೆ ಗೇಣಿಯ ೧೫೦ರಷ್ಟು ಅವನಿಗೆ ಕೊಡುತ್ತೇವೆ. ಇನ್‌ಕಂ ಸುಮಾರು ೧೦ ಬರುತ್ತದೆ ಅಂದರೆ ಅವನಿಗೆ ಗೇಣಿಯ ೧೨೦ಷ್ಟು ಕೊಡುತ್ತೇವೆ. ಇನ್‌ಕಂ ೧೦ ಸಾವಿರಕ್ಕಿಂತ ಮೇಲ್ಪಟ್ಟು ಇದ್ದರೆ ಅವನಿಗೆ ಗೇಣಿಯ ೧೦೦ರಷ್ಟು ಮಾತ್ರ ಕೊಡಬೇಕೆಂದು ಇದೆ. ಹೀಗೆ ಕೊಡುವಾಗ ಎರಡು ಸಾವಿರದ ಮೊತ್ತ ಕೊಟ್ಟು ಉಳಿದುದನ್ನು ಬಾಂಡ್ ರೂಪದಲ್ಲಿ ೨೦ ಕಂತುಗಳಲ್ಲಿ ಕೊಡಬೇಂಕೆಂದು ಇದೆ. ಗೇಣಿದಾರರು ಕೂಡ ಆಕ್ಯುಪೆನ್ಸಿ ಪ್ರೈಸನ್ನು ೨೦ ಕಂತುಗಳಲ್ಲಿ ಕೊಡಬೇಕೆಂದು ಇದೆ. ಇದರಿಂದ ಸರ್ಕಾರಕ್ಕೆ ಗೇಣಿದಾರರಿಂದ ತೆಗೆದುಕೊಳ್ಳುವ ಮತ್ತು ಜಮೀನ್ದಾರರಿಗೆ ಕೊಡುವ ಹಣ ಹೆಚ್ಚು ಕಮ್ಮಿ ಸರಿಸಮನಾಗಿ ಬರುವುದರಿಂದ ಹೆಚ್ಚು ಖರ್ಚು ಬೀಳುವುದಿಲ್ಲವೆಂದು ಸಾಮಾನ್ಯವಾದ ಲೆಕ್ಕದಿಂದ ಗೊತ್ತಾಗುತ್ತದೆ. ಇದನ್ನು ಕ್ಲಾಸ್ ೨೮ರಲ್ಲಿ ಕೊಟ್ಟಿದೆ. ಅದೇ ರೀತಿಯಾಗಿ ಭೂಮಿಯ ವರ್ಗೀಕರಣವನ್ನು ಸಹ ಪಾರ್ಟ್ 'ಎ' ಯಲ್ಲಿ ಮಾಡಿ ಕೊಟ್ಟಿದೆ. ಯಾವ ಜಮೀನಿನಲ್ಲಿ ಅಶ್ಯೂರ್ಡ್ ಇರಿಗೇಶನ್ ಸೌಕರ್ಯ ಇದ್ದು ಎರಡು ಬೆಳೆ ಬೆಳೆಯುವುದಕ್ಕೆ ಆಗುತ್ತದೆಯೋ, ಅದನ್ನು ಒಂದನೇ ವರ್ಗವನ್ನಾಗಿ ಮಾಡಿದೆ. ಎಲ್ಲಿ ಒಂದು ಬೆಳೆ ಬರುತ್ತದೆಯೋ ಅದನ್ನು ಎರಡನೆಯ ವರ್ಗವನ್ನಾಗಿ ಮಾಡಿದ್ದೇವೆ. ಸ್ವಲ್ಪ ಹೆಚ್ಚು ಕಮ್ಮಿ ಇದರಲ್ಲಿ ಇಬರಹುದು. ಸರಿಯಾಗಿ ಒಂದೇ ಸಮ ಎರಡು ಬೆಳೆ ಆಗುತ್ತಾ ಇದ್ದರೆ ಅದನ್ನು ಮೊದಲನೆಯ ಪಂಗಡಕ್ಕೆ ಸೇರಿಸಿದ್ದೇವೆ. ಉದಾಹರಣೆಗೆ ಕೆಲವು ವೇಳೆ ಮೊದಲನೆಯ ಬೆಳೆಯಲ್ಲಿ ೨೦ ಪಲ್ಲ ಬರಹುದು. ನಂತರದ ಬೆಳೆಯಲ್ಲಿ ಇನ್ನೂ ಕಮ್ಮಿ ಬರಬಹುದು.

ಶ್ರೀ ಎನ್ ಹುಚ್ಚಮಾಸ್ತಿಗೌಡ : ಆ ಜನ ಲಕ್ಷಗಟ್ಟಲೆ, ಇದ್ದಾರೆ. ನಮ್ಮಲ್ಲಿ ಇನ್ನು ಯಾವತ್ತೂ ಸಿಕ್ಕಿದಕ್ಕೆಲ್ಲಾ ಮಿತಿ ಇದ್ದರೂ ಪ್ರಜಾ ಉತ್ಪತ್ತಿಗೇನೋ ಮಿತಿ ಇಲ್ಲ. ವರ್ಷೇ ವರ್ಷೇ ಜನಸಂಖ್ಯೆ ಬೆಳೆದಂತೆಲ್ಲಾ ಭೂ ರೈತರ ಸಂಖ್ಯೆಯೂ ಕೂಡ ಬೆಳೆಯುತ್ತಿದೆ. ಇಲ್ಲಿ ಆ ರೀತಿಯಾಗಿ ನಡೆದಿದ್ದರೂ ಅದು ಇನ್ನೂ ಯಶಸ್ವಿಯಾಗಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನೀನು ಒಂದು ಸಾರಿ ಒಂದು ಕಡೆ ಸೌತ್ ಕೆನರಾದಲ್ಲಿ ಹೋದಾಗ ಅಲ್ಲಿ ಯಾರೋ ಒಬ್ಬರು ಒಂದು ಪ್ರಾಸ ಹೇಳಿದ್ದರು. ಯಾವುದೂ ಉತ್ಪತ್ತಿ ಮಾಡದೇ ಇರುವವರಿಗಪ್ರಜಾ ಉತ್ಪತ್ತಿ ಕೆಲಸವಾದರೂ ಆಗುತ್ತಿದಯೊಂದು. ಅದು ಜ್ಞಾಪಕಕ್ಕೆ ಬಂದು ಈಗ ಈ ಸಭೆಯಲ್ಲಿ ನಾನು ಹೇಳಬೇಕಾಗಿ ಬಂತು.

ಈ ನಾಲ್ಕು ಲಕ್ಷ ಎಕರೆ ಭೂಮಿಯನ್ನು ಯಾವ ರೀತಿ ಹಂಚಬೇಕು ಎಂಬುದನ್ನು ನಾನು ಮಾನ್ಯ ಸಭೆಗೆ ತಿಳಿಸಿದ್ದೇನೆ.

ಇನ್ನು ನಾನು ಈ ಭೂಮಿಯ ಬಗ್ಗೆ ಕೆಲವು ವಿವರಣೆಗಳನ್ನು ಕೊಡಬೇಕಾಗಿದೆ :— ಈ ದಿವಸ ಹಾಕಿರತಕ್ಕ ಮಿತಿಯಲ್ಲಿ ಭೂ ಮಾಲೀಕರೇನಿದ್ದಾರೆ ಅವರು ಅಷ್ಟು ಭೂಮಿ ಇಂದ ಬರತಕ್ಕ ವರಮಾನದಲ್ಲಿ ಅವರ ಮಕ್ಕಳು ಮರಿಗೆ ವಿದ್ಯಾಭ್ಯಾಸ ಕೊಡುವುದಕ್ಕೆ ಮತ್ತು ಅವರ ಸಂಸಾರದ ಸಾಮಾನ್ಯ ಸೌಲಭ್ಯಗಳಿಗೆ ಸಾಲವೆಂದು ಹೇಳಿ ಅವರು ಚಳುವಳಿ ಮಾಡುವುದಕ್ಕೂ ಕೂಡ ಹೊರಟ್ಟಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ :— ತಮಗೆ ಆ ಮಾಕೋನಹಳ್ಳಿ ಕೆರೆಯ ಕೆಳಗೆ ಇದ್ದ ಜಮೀನು ಎಷ್ಟು ? ಅದನ್ನೆಲ್ಲಾ ತಾವು ಏನು ಮಾಡಿದಿರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಹಾಗೆ ಈ ಸೀಲಿಂಗ್ ಮಿತಿಯನ್ನು ನುಣಚಿಕೊಂಡು ಹೋಗತಕ್ಕ ಜನರು ಆ ಕಡೆ ಪಕ್ಷದಲ್ಲೂ ಇದ್ದಾರೆ; ಈ ಕಡೆಯ ಪಕ್ಷದಲ್ಲೂ ಇದ್ದಾರೆ. ಸದ್ಯಕ್ಕೆ ನನ್ನಲ್ಲಿ ೧೯೫೪ ರಲ್ಲಿ ಸಂಗ್ರಹಣೆ ಮಾಡಿದ ಅಂಕೀ ಅಂಶಗಳು ಇವೆ. ಆ ವಿವರಗಳನ್ನು ನಾನು ತಮ್ಮ ಮುಂದಿಡಲಿಕ್ಕೆ ಇಚ್ಛಿಸುತ್ತೇನೆ. ೧೯೫೪ ರಲ್ಲಿ ಇದ್ದ ಒಟ್ಟು ಹಿಡುವಳಿದಾರರ ಸಂಖ್ಯೆ ೨೪, ೬೬, ೮೭೭. ಅವರ ವಶದಲ್ಲಿದ್ದ ಭೂಮಿ ಅಂದರೆ ಒಟ್ಟು ವ್ಯವಸಾಯಕ್ಕೆ ಅಳವಡತಕ್ಕ ಭೂಮಿ — ೨, ೬೭, ೭೬, ೭೯೭ ಎಕರೆಗಳು. ಆದರೆ ೧೯೫೪ ರಲ್ಲಿ ಇದ್ದ ಹಿಡುವಳಿದಾರರ ಸಂಖ್ಯೆ ೨೪ ಲಕ್ಷ ಚಿಲ್ಲರೆ. ಈಗ ಅದು ೩೪ ಲಕ್ಷ ಚಿಲ್ಲರ ಪಟ್ಟಾದಾರರಾಗಿದ್ದಾರೆ. ಭೂಮಿಯನ್ನು ಕೊಳ್ಳುವುದರ ಮೂಲಕವೋ ಅಥವಾ ಹಂಚಿಕೆ ಮಾಡಿ- ಕೊಳ್ಳುವುದರ ಮೂಲಕವೋ ಅವರ ಸಂಖ್ಯೆ ಈ ದಿವಸ ೪೪ ಲಕ್ಷ ಚಿಲ್ಲರೆಗೇರಿದೆ. ನಮ್ಮ ರಾಜ್ಯದಲ್ಲಿ ೫ ಎಕರೆ ಒಳಗಡೆ ಭೂಮಿಯನ್ನು ಇಟ್ಟುಕೊಂಡಿದ್ದವರ ಸಂಖ್ಯೆ ಒಟ್ಟು ಹಿಡುವಳೀದಾರರ ಸಂಖ್ಯೆಲಿ ಇವರು

ಶೇಕಡಾ: ೪೫.೧೬ ಇದ್ದಾರೆ. ಇವರ ವಶದಲ್ಲಿರತಕ್ಕ ಭೂಮಿ ವಿಸ್ತೀರ್ಣ ಒಟ್ಟು ಭೂಮಿಯಲ್ಲಿ ಶೇಕಡಾ: ೧೦.೩೨ ಇದೆ. ೫ ಎಕರೆಗಳಿಂದ ೧೦ ಎಕರೆಗಳ ಒಳಗೆ ಭೂಮಿ ಇಟ್ಟುಕೊಂಡಿರತಕ್ಕ ಜನರ ಸಂಖ್ಯೆ ಶೇಕಡಾ: ೨೧.೮೯ ಇದೆ. ಇವರ ವಶದಲ್ಲಿರತಕ್ಕ ಭೂ ವಿಸ್ತೀರ್ಣ — ಶೇಕಡಾ: ೧೪.೬೨ ಇದೆ. ಹೀಗೇ ೧೦ ಎಕರೆಗಳಿಂದ ೧೫ ಎಕರೆಗಳೊಳಗೆ ಭೂಮಿ ಇಟ್ಟುಕೊಂಡಿರತಕ್ಕ ಜನರ ಸಂಖ್ಯೆ ಶೇಕಡಾ: ೧೦ ೬೭ ಇದೆ. ಇವರ ವಶದಲ್ಲಿರತಕ್ಕ ಭೂಮಿಯ ವಿಸ್ತೀರ್ಣ: ೧೨.೧೧ ಇದೆ ೧೫ ಎಕರೆಗಳಿಂದ ೩೦ ಎಕರೆಗಳೊಳಗೆ ಭೂಮಿಯನ್ನು ಇಟ್ಟುಕೊಂಡಿರತಕ್ಕವರ ಸಂಖ್ಯೆ ೧೨.೯೧ ಇವರ ವಶದಲ್ಲಿರತಕ್ಕ ಭೂಮಿಯ ವಿಸ್ತೀರ್ಣ: ೨೪.೬೬ ಇದೆ. ಇನ್ನು ೩೫ ರಿಂದ ೪೫ ಎಕರೆ ಒಳಗೆ ಭೂಮಿ ಇರತಕ್ಕವರ ಸಂಖ್ಯೆ — ಶೇಕಡಾ ೪.೧೧ ಜನರಿದ್ದಾರೆ. ಇವರ ವಶದಲ್ಲಿರತಕ್ಕ ಭೂಮಿ ಶೇಕಡ ೧೩.೮೫ ಎಕರೆಗಳು ಇದೆ. ಹೀಗೆ ೫ ಎಕರೆಗಳಿಂದ ಹಿಡಿದು ೧೦ ಎಕರೆಗಳನ್ನು ಮತ್ತು ೧೦ ರಿಂದ ೧೫, ೧೫ ರಿಂದ ೩೦ ಮತ್ತು ೩೫ ರಿಂದ ೪೫ ಎಕರೆ ಒಳಗಡೆ ಭೂಮಿಯನ್ನು ಇಟ್ಟುಕೊಂಡಿದ್ದಂಥವರೆಲ್ಲರ ಒಟ್ಟು ಸಂಖ್ಯೆ ಶೇಕಡ ೯೬.೭೪ ಆಗುತ್ತೆ. ಇನ್ನು ಭೂಮಿ ಇಲ್ಲದೆ ಉಳಿಯತಕ್ಕ ನಿರ್ಗತಿಕರ ಸಂಖ್ಯೆ ಶೇಕಡ ೩. ಶೇಕಡ ೯೬.೭೪ ರಷ್ಟು ಜನರಲ್ಲಿ ಇರತಕ್ಕ ಭೂಮಿ ೪೫ ಎಕರೆಯ ಕೆಳಗೆ ಇರುತ್ತದೆ ಇನ್ನು ೪೫ ಎಕರೆಗಳಿಂದ ೬೦ ಎಕರೆ ಒಳಗಿರತಕ್ಕ ಜನರು ಬಹಳ ಕಡಿಮೆ. ಇವರ ವಶದಲ್ಲಿರತಕ್ಕ ಭೂಮಿ ಶೇಕಡ ೧.೫೧ ಎಕರೆಗಳು ಇದೆ. ಈ ಮಸೂದೆಯನ್ನು ಶೇಕಡ ೯೬.೭೪ ಜನರನ್ನು ಅಥವಾ ೪೫ ಎಕರೆ ಒಳಗಡೆ ಇರತಕ್ಕ ಜನರನ್ನು ಗಮನದಲ್ಲಿಟ್ಟು ಈ ಮಸೂದೆಯನ್ನು ರಚಿಸಲಾಯಿತೆ ವಿನಾ ಯಾರಿಗೆ ಶೇಕಡ ೩ ರಷ್ಟು ಜನಕ್ಕೆ ಉಳುವುದಕ್ಕೆ ಭೂಮಿ ಇಲ್ಲವೋ ಅಂಥವರನ್ನು ಸರ್ಕಾರ ಗಮನದಲ್ಲಿಟ್ಟು ಕೂಡ ಇದನ್ನು ಮಾಡಲಿಲ್ಲ. ಭೂಮಿ ಇಲ್ಲದೇ ಇರತಕ್ಕವರ ಸಂಖ್ಯೆ ಬಹಳ ಗರಿಷ್ಟ ಮಿತಿಯಲ್ಲೇ ಇದೆ. ಆದರೆ ಭೂಮಿಯನ್ನು ಕೇಳತಕ್ಕ ಜನರು ಜಾಸ್ತಿ ಇದ್ದರೆ, ಭೂಮಿ ಬಹಳ ಕಡಿಮೆ ಇದೆ. ನೂರಕ್ಕೆ ೯೭ ಜನರಲ್ಲಿ ಏನು ಭೂಮಿ ಇದೆಯೋ ಅದರಲ್ಲಿ ಸ್ವಲ್ಪ ಸ್ವಲ್ಪ ಭೂಮಿಯನ್ನು ತೆಗೆದುಕೊಂಡು ಭೂ ಹೀನರಾದ ಜನರಿಗೆ ಅವರ ಸಂಸಾರವನ್ನು ನಡೆಸಲು ಅವರಿಗೆ ಒಂದು ಉದ್ಯೋಗವನ್ನು ಒದಗಿಸಲು ಇದನ್ನು ತಯಾರಿಸಲಾಗಿದೆ. ಇದಕ್ಕೆ ಎಲ್ಲರೂ ಬೆಂಬಲ ಕೊಡುತ್ತಾರೆಂದು ನಂಬಿದ್ದೇನೆ. ಸಮಾಜವಾದ ಸಿದ್ಧಾಂತದಲ್ಲಿ ಯಾರಿಗೆ ನಂಬಿಕೆ ಇದೆ ಯಾರು ಅದನ್ನು ಒಪ್ಪಿಕೊಂಡಿದ್ದಾರೆ ಅವರೆಲ್ಲರೂ 'ಬಿ' ಪಕ್ಷದಲ್ಲೇ ಇರಲಿ 'ಆರ್' ಪಕ್ಷದಲ್ಲೇ ಇರಲಿ ಎಲ್ಲರೂ ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ೧೯೫೮ ರಲ್ಲಿ ಇದ್ದ ೨೪ ಲಕ್ಷ ಹಿಡುವಳಿದಾರರ ಸಂಖ್ಯೆ ಈ ದಿವಸ ಅವರಲ್ಲಿ ಅನೇಕರು ಪಟ್ಟಾದಾರರಾಗಿದ್ದಾರೆ. ಆದ್ದರಿಂದ ಭೂ ಮಾಲಿಕರ ಸಂಖ್ಯೆ ೨೪ ಲಕ್ಷ ಇದ್ದದ್ದು ೪೪ ಲಕ್ಷಕ್ಕೇರಿದೆ. ಇದರಿಂದ ೪೫ ಎಕರೆಗಳ ಮೇಲೆ ಜಮೀನಿದ್ದವರ ಸಂಖ್ಯೆ ಕಡಿಮೆಯಾಗಿದೆ. ಇವರ ಸಂಖ್ಯೆ ಕಡಿಮೆಯಾಗಿದ್ದರು ಇವರ ಕೈಲಿ ಪತ್ರಿಕೆಯವರಿದ್ದಾರೆ, ಸಂಘಟನೆ ಇದೆ, ಪ್ರಚಾರ ನಡೆಸುತ್ತಾರೆ, ಹಣವಂತರು ಮೇಲಾಗಿ ಆಸ್ತಿವಂತರು. ಆದಾಗ್ಯೂ ಈ ಸಭೆಯ ಮಾನ್ಯ ಸದಸ್ಯರು ಯಾರೂ ಅವರ ಮಾತಿಗೆ ಕಿವಿ ಕೊಡಲಾರರೆಂದು ನಾನು ನಂಬಿದ್ದೇನೆ. ಈ ಮಸೂದೆಯಲ್ಲಿ ಏನಾದರೂ ಅಂಥ ಲೋಪದೋಷಗಳಿದ್ದರೆ ಅವುಗಳನ್ನು ತಿದ್ದಿ ಸರಿಪಡಿಸತಕ್ಕ ಹಕ್ಕು ಈ ಮಾನ್ಯ ಸದಸ್ಯರ ಸಭೆಗೆ ಇದೆ. ಮಾನ್ಯ ಸದಸ್ಯರು ಇದರ ಬಗ್ಗೆ ಕೊಡತಕ್ಕ ಸಲಹೆಗಳನ್ನು ಸರ್ಕಾರದವರು ಬಹಳ ತೀವ್ರಾಸಕ್ತಿಯಿಂದ ಪರಿಶೀಲನೆ ಮಾಡುತ್ತಾರೆಂದು ತಮಗೆ ಭರವಸೆ ಕೊಡುತ್ತೇನೆ. ರಾಜ್ಯದಲ್ಲಿರತಕ್ಕ ಕೇವಲ ನಿರ್ಗತಿಕರಿಗಾಗಿ ಅನುಕೂಲ ಮಾಡಲು ತಂದಿರತಕ್ಕ ಈ ಮಸೂದೆಗೆ ತಾವೆಲ್ಲರೂ ಒಮ್ಮತದಿಂದ ಒಪ್ಪಿಗೆಯನ್ನು ಕೊಟ್ಟು ಇದನ್ನು ಕಾರ್ಯ ರೂಪಕ್ಕೆ ತರತಕ್ಕ ವಿಚಾರದಲ್ಲೂ ತಾವೆಲ್ಲರೂ ಸಹಕಾರ ನೀಡಬೇಕೆಂದು ಕೇಳಿ ಈ ಒಂದು ಚರಿತ್ರಾರ್ಹವಾದ ಮಸೂದೆಗೆ ತಾವೆಲ್ಲರೂ ಬೆಂಬಲ ನೀಡಬೇಕೆಂದು ಕೇಳಿಕೊಂಡು ತಮ್ಮೆಲ್ಲರಲ್ಲೂ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ಈ ಮಸೂದೆಯನ್ನು ಸಭೆಯ ಅನುಮತಿಗಾಗಿ ಮಂಡಿಸುತ್ತೇನೆ.

ಸಾಮಾನ್ಯವಾಗಿ ಉತ್ಪಾದನೆ ಪೂರಾ ಆಧಾರವಾಗಿ ಇಟ್ಟುಕೊಂಡಿಲ್ಲ. ಸ್ವಲ್ಪ ಹೆಚ್ಚು ಕಡಿಮೆ ಅದನ್ನೇ ಆಧಾರವಾಗಿ ಇಟ್ಟುಕೊಂಡಿರುತ್ತೇವೆ. ಎರಡನೆಯ ವರ್ಗಕ್ಕೆ ಇನ್ನೊಂದು ಸೇರಿಸಿದೆ. ಕೆರೆ, ಹೊಳೆಯಿಂದ ನೀರನ್ನು ಎತ್ತಿಕೊಂಡು ಮಾಡತಕ್ಕ ವ್ಯವಸಾಯ ಎರಡನೆಯ ವರ್ಗಕ್ಕೆ ಸೇರಿರುತ್ತದೆ. ಮೂರನೆಯ ವರ್ಗ ಅಂದರೆ ೧೮ ಎಕರೆ, ೪ನೇ ವರ್ಗ ಅಂದರೆ ಮಲೆನಾಡಿನಲ್ಲಿ ಮಳೆಯ ವಿಚಾರವಾಗಿ ಪರಿಗಣಿಸಿದರೆ, ಅಲ್ಲಿನ ಜಮೀನಿಗೆ ೨೫ ಎಕರೆಯಷ್ಟು ಬರುತ್ತದೆ. ಖಾಸಗೀ ಜಮೀನುಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿದ್ದಾರೆ. ಸಾಮಾನ್ಯವಾಗಿ ಐದು ವರ್ಷಗಳ ಸರಾಸರಿ ಎಷ್ಟು ಬರಬಹುದು ಎಂಬುದನ್ನು ನೋಡಬೇಕು. ಮಳೆಯ ಆಧಾರ ಹಾಗೂ ಕ್ಲಾಸಿಫಿಕೇಷನ್ ಆಫ್ ಸಾಯಿಲ್ — ಈ ದೃಷ್ಟಿಗಳನ್ನು ಇಟ್ಟುಕೊಂಡು ನೋಡಿದರೆ ೩೫ ಇಂಚುಗಳಿಗಿಂತ ಹೆಚ್ಚು ಮಳೆ ಬೀಳುವ ಕಡೆಗಳಲ್ಲಿ ಸಾಮಾನ್ಯವಾಗಿ ಮಳೆ ಎಷ್ಟು ಬರುತ್ತದೆ ಎಂಬುದಕ್ಕೆ ರೇಯಿನಾಗೇಜ್ ಏನಿದೆ, ಅದಿಲ್ಲದೇ ಇರುವ ಕಡೆ ಆ ಭಾಗದಲ್ಲಿ ಇಷ್ಟೇ ಮಳೆ ಬೀಳುತ್ತದೆ, ಪ್ರತಿಯೊಂದಕ್ಕೂ ಇಷ್ಟೆ ಎಂದು ಕಾನೂನು ಮಾಡುವಾಗ ನಿರ್ದಿಷ್ಟವಾಗಿ ಹೇಳಿದ್ದರೂ ವ್ಯತ್ಯಾಸ ಇಲ್ಲದ ಹಾಗೆ ಮಾಡುವುದಕ್ಕಾಗುವುದಿಲ್ಲ. ಭೂಮಿಯ ವರ್ಗೀಕರಣದಲ್ಲಿ ಖಾಸಗೀ ಜಮೀನುಗಳಲ್ಲಿ

ಶ್ರೀ ಎನ್. ಹುಚ್ಚಮಾಸ್ತಿಗೌಡ .—

ವ್ಯತ್ಯಾಸ ಆಗಬಹುದು. ನಾನು ಈಗ ಉತ್ತರ ಭಾಗದಲ್ಲಿ ಸಂಚಾರ ಮಾಡಿಕೊಂಡು ಬಂದಿದ್ದೇನೆ. ಅಲ್ಲಿ ಭೂಮಿ ಬಹಳ ಚೆನ್ನಾಗಿದೆ, ಕಪ್ಪು ಭೂಮಿ. ಅದರ ಪಕ್ಕದಲ್ಲಿ ಮಸರಿ ಭೂಮಿ ಇರುತ್ತದೆ. ಭೂಮಿ-ಯನ್ನು ಅಳೆದು ವರ್ಗೀಕರಣ ಮಾಡುವುದಕ್ಕೆ ಸಾಧ್ಯವಿಲ್ಲ. ೧೦ ತರಹ ಭೂಮಿ ಇರುತ್ತದೆ. ತಾಲ್ಲೂಕು ಯೂನಿಟ್ಟಾಗಿ ಇಟ್ಟುಕೊಂಡು ಮಾಡುವ ಪರಿಸ್ಥಿತಿ ಇರುವುದರಿಂದ ಈ ವ್ಯತ್ಯಾಸಗಳು ಸಲ್ಪ ಆಗುತ್ತವೆ.

೫-೦೦ ಪಿ.ಎಂ.

ಇನ್ನು ೪ನೇ ವರ್ಗ ಖಾಸಗೀ ಜಮೀನಿನ ವ್ಯವಸಾಯ. ೩೫ ಇಂಚು ಮಳೆಗಿಂತ ಜಾಸ್ತಿ ಇರತಕ್ಕದು. ೩೬ ಎಕರೆ. ೨೫ ರಿಂದ ೩೫ ಇಂಚು ಮಳೆಗಿಂತ ಜಾಸ್ತಿ ಇರತಕ್ಕದ್ದು ೪೮ ಎಕರೆ ೩೫ ಇಂಚು ಎಕರೆಗಿಂತ ಕಡಿಮೆ ಇರತಕ್ಕದು ೫೪ ಎಕರೆ ಇದು ೭ನೇ ವರ್ಗದ ಭೂಮಿ ಎಂದು ವರ್ಗೀಗರಣ ಮಾಡಿರತಕ್ಕದು. ಇದರಲ್ಲಿ ಬೆಟ್ಟ ಗುಡ್ಡಗಳು ಬಾದಿರುವುದಾಗಿದೆ. ಹೀಗೆ ೭ ವರ್ಗಗಳಿಗೆ ಭೂ ಪರಿಮಿತಿಯನ್ನು ತೆಗೆದು-ಕೊಂಡು ಬರಬೇಕು ಇದಲ್ಲದೆ ೮ನೇ, ೯ನೇ ವರ್ಗ ಮಾಡುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರದಿಂದ ಒಂದು ವಿವರಣೆ ರಾಜಾಸ್ಥಾನದಲ್ಲಿರತಕ್ಕ ಮರಳು ಗಾಡಿನ ಹಾಗೆ ಅಥವಾ ಬೆಟ್ಟಗುಡ್ಡಗಳ ಪ್ರದೇಶದ ಹಾಗೆ ಆಗಿಂದಾಗ್ಗೆ ಅಲ್ಲಿ ಕ್ಷಾಮ ಬರುವ ಪ್ರದೇಶಗಳು ಇದ್ದರೆ ೫೪ ಎಕರೆಗಳಿಗಿಂತ ಹೆಚ್ಚು ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಳ್ಳಬಹುದು. ಅದು ಹೇಗೆ ಸಾಧ್ಯವೆಂಬುದನ್ನು ಪರಿಶೀಲನೆ ಮಾಡಬಹುದು

ಶ್ರೀ ವಿಶ್ವನಾಥರೆಡ್ಡಿ :— ಆ ರೀತಿ ಆದೇಶ ಈ ಸರ್ಕಾರಕ್ಕೆ ಬಂದಿದೆಯೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಈ ಸರ್ಕಾರ ಈ ಒಂದು ವಿಷಯದಲ್ಲಿ ಪರಿಶೀಲನೆ ಮಾಡುವು-ದಕ್ಕೆ ಅವಕಾಶವಿದೆಯೆಂದು ನಾನು ತಿಳಿಸುತ್ತೇನೆ. ಕೇಂದ್ರ ಸರ್ಕಾರದ ಮಟ್ಟದಲ್ಲಿ ಇದನ್ನು ಆಲೋಚನೆ ಮಾಡಿ ಇಡೀ ಭರತಖಂಡದಲ್ಲೆಲ್ಲಾ ಈ ಒಂದು ಪರಿಮಿತಿ ಯಾವರೀತಿಯಲಿ ಇರಬೇಕೆಂಬುದನ್ನು ಅವರು ತಜ್ಞರನ್ನು ಇಟ್ಟುಕೊಂಡು ಮಾಡಿದ್ದಾರೆ. ರಾಜಾಸ್ಥಾನದಲ್ಲಿ ಮರಳುಗಾಡಿನ ಪ್ರದೇಶದಲ್ಲಿ, ಬೆಟ್ಟಗುಡ್ಡ-ಗಳಲ್ಲಿ, ತೀರಾ ಬೆಂಗಾಡು ಆಗಿರುವ ಪ್ರದೇಶಗಳಲ್ಲಿ ನಮ್ಮಲ್ಲಿ ಕ್ಷಾಮ ಪರಿಸ್ಥಿತಿ ಇರುವ ಪ್ರದೇಶಗಳಲ್ಲಿ ೫೪ ಎಕರೆಗಳಷ್ಟು ಮಿತಿ ಮಾಡಿರುವುದನ್ನು ಹೆಚ್ಚು ಮಾಡುವುದಕ್ಕೆ ಅವಕಾಶವಿದೆಯೆಂದು ನಾನು ಈ ಸಭೆಯಲ್ಲಿ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಈ ಮಾನ್ಯ ಸಭೆಯಲ್ಲಿ ಸದಸ್ಯರು ಯಾವ್ಯಾವ ಪ್ರದೇಶದಲ್ಲಿ ಇದೇ ರೀತಿಯ ಅಭಿಪ್ರಾಯ ಇದೆಯೆಂದು ತಿಳಿಸಿದಾಗಲೂ ಅದನ್ನು ಮುಂದೆ ವ್ಯತ್ಯಾಸ ಮಾಡುವುದಕ್ಕೆ ಸ್ವಲ್ಪ ಮಟ್ಟಿಗೆ ಅವಕಾಶವಿದೆಯೆಂದು ಈ ಕಾನೂನಿನಲ್ಲಿ ಹೇಳಿದೆ. ಅದಕ್ಕಾಗಿಯೇ ಮೊದಲು ಮುನ್ಸೀಫ್ ಕೋರ್ಟಿನಲ್ಲಿಯೂ ಕೂಡ ಇದರ ಬಗ್ಗೆ ಒಂದು ಬದಲಾವಣೆಯಾಗಿದೆ. ಇದರ ಬಗ್ಗೆ ಇರತಕ್ಕ ಕ್ಲಾಜು ೧೧, ೪೮, ೬೦, ೫೩, ೫೪, ೫೫, ೫೯ ೯೦ ಮತ್ತು ೭೩ — ಈ ಕಲಂಗಳನ್ನು ಮುನ್ಸಿಫ್ ಕೋರ್ಟಿನಿಂದ ತೆಗೆದು ತಹಸಿಲ್ದಾರರಿಗೆ ಕೊಡಲಾಗಿದೆ. ಇದರ ಉದ್ದೇಶವೇನೆಂದರೆ, ಮುನ್ಸೀಫ್ ಕೋರ್ಟಿನಲ್ಲಿ ಬಹಳ ನಿಧಾನವಾಗುತ್ತಿದೆ. ಆದ್ದರಿಂದ ಅಲ್ಲಿನ ಕೆಲಸಗಳನ್ನು ಡಿಲೇ ಮಾಡದೇ ಇರಲು ತಹಶೀಲ್ದಾರರಿಗೆ ಈ ಅಧಿಕಾರಗಳನ್ನು ಕೊಟ್ಟು ಭೂ ಸುಧಾರಣೆಯನ್ನು ತ್ವರಿತವಾಗಿ ಕಾರ್ಯಗತ ಮಾಡುವ ಉದ್ದೇಶದಿಂದ ಇದನ್ನು ಮಾಡಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ :— ತಹಸೀಲ್ದಾರರನ್ನು ಭೂಪತಿಗಳೆಂದು ಮಾಡುವುದಕ್ಕಾಗುವುದಿಲ್ಲವೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :— ವ್ಯವಸಾಯ ಕ್ಷೇತ್ರದಲ್ಲಲ್ಲದೇ ಬೇರೆ ಕ್ಷೇತ್ರದಲ್ಲಿ ೧೨ ಸಾವಿರ ರೂಪಾಯಿಗಳ ಅಷ್ಟೂರ್ಡ್ ಇನ್‌ಕಂ ಬರುವವರು ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಈ ಮುಸೂದೆಯಲ್ಲಿದೆ. ಅವನ ಬೇರೆ ವರಮಾನವೆಷ್ಟೆಂಬುದನ್ನು ಅವರು ಡಿಕ್ಲೇರ್ ಮಾಡಬೇಕಾಗುತ್ತದೆ. ಮತ್ತು ಭೂಮಿ ಪಡೆಯಬೇಕಾದರೆ ತಾನೇ ವ್ಯವಸಾಯ ಮಾಡುತ್ತಿದ್ದೇನೆಂದು ರುಜುವಾತು ಮಾಡಬೇಕು. ಇದನ್ನು ತಿಳಿಸದೆ ಭೂಮಿ ತೆಗೆದುಕೊಂಡರೆ, ಅವನಿಗೂ ಕೂಡ ಆದಕ್ಕೆ ಅವಕಾಶವಿಲ್ಲದಹಾಗೆ ಶಿಕ್ಷೆ ಮಾಡುವ ರೀತಿಯಲ್ಲಿ ಈ ಮಸೂದಾ ಕಾನೂನಿನಲ್ಲಿ ನಿಯಮಗಳನ್ನು ಅಳವಡಿಸಲಾಗಿದೆ. ನಾನು ಇದರ ಬಗ್ಗೆ ಹೆಚ್ಚು ವಿವರಗಳನ್ನು ಕೊಡಬಹುದು. ಈಗಿರತಕ್ಕ ವಿವರಗಳನ್ನು ಈಗಾಗಲೇ ಸಭೆಯ ಮುಂದೆ ಇಟ್ಟಿದ್ದೇನೆ. ಈ ದೃಷ್ಟಿಯಿಂದ ನಮಗೆ ಮುಖ್ಯವಾಗಿ ಹೆಚ್ಚು ಭೂಮಿ ಇರತಕ್ಕ ಭೂ ಮಾಲೀಕರಿಂದ ಭೂಮಿಯನ್ನು ತೆಗೆದುಕೊಂಡು ಭೂಮಿ ಇಲ್ಲದೇ ಇರತಕ್ಕ ನತದೃಷ್ಟ ಜನಗಳಿಗೆ ಹಂಚಬೇಕೆಂಬುದೇ ನಮ್ಮ ಮುಖ್ಯ

ಉದ್ದೇಶ. ಅಂತಹವರು ಸುಮಾರು ೧೦ ಮೈಲಿ ಘಗಲೆಯೊಳಗೆ ವಾಸಮಾಡಬೇಕು. ಈಗ ಇರತಕ್ಕ ಭೂಮಿ ಸ್ವಲ್ಪ ಹೆಚ್ಚು ಕಡಿಮೆ ಅಂದಾಜು ಮಾಡಿರುವ ಪ್ರಕಾರ ೪ ಲಕ್ಷ ಎಕರೆ ಭೂಮಿ ಸಿಗಬಹುದು ಎಂಬುದಾಗಿ ಅಂದಾಜು ಮಾಡಿದೆ. ಇದರಲ್ಲಿ ಇತ್ತೀಚೆಗೆ ಸ್ವಲ್ಪ ಭಾಗ ಹಂಚಿಕೆಯಾಗಿದೆ ೧೯೬೧ರಲ್ಲಿ ಹಿಂದೆ ಈ ಭೂಸುಧಾರಣೆಯ ಬಗ್ಗೆ ಒಂದು ಕಾನೂನು ಬಂದ ಮೇಲೆ ಯಾರ್ಯಾರು ಈ ಭೂ ಪರಿಮಿತಿಗೆ ಒಳಗಾಗುತ್ತಾರೆಂದು ತಿಳಿದಿದ್ದರೂ ಅವರೆಲ್ಲರೂ ಸಾಕಾದಷ್ಟು ಮಟ್ಟಿಗೆ ಅಂದರೆ ಬಹಳ ಜನ ಇದನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಂಡಿದ್ದಾರೆಂದು ಹೇಳುವುದರಲ್ಲಿ ಯಾವ ಸಂಶಯವೂ ಇಲ್ಲ ಆದ್ದರಿಂದ ಇದರಲ್ಲಿ ಇಷ್ಟೇ ನಿರ್ಧಾರವೆಂದು ಹೇಳುವುದು ಕಷ್ಟವಾಗಬಹುದು. ಆದರೂ ಕೂಡ ೨೭ ಎಕರೆಗಳ ಗರಿಷ್ಠ ಮಿತಿಯನ್ನು ಈಗ ೧೦ ಎಕರೆಗಳಿಗೆ ಇಳಿಸಿರುವುದರಿಂದ, ಇವತ್ತು ನಾವು ಅಂದಾಜು ಮಾಡಿರುವಂತೆ ಭೂಹೀನರಿಗೆ ಎಲ್ಲರಿಗೂ ಭೂಮಿ ಸಿಗಬಹುದೆಂದು ಅಂದಾಜು ಮಾಡಿದ್ದೇವೆ. ಅಷ್ಟು ಸಿಕ್ಕಿದರೆ ಅನೇಕ ಜನಗಳಿಗೆ ಉಪಯೋಗವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ :— ಆ ಜನ ಇದ್ದಾರೆಯೇ ?

SRI M. S. KRISHNAN :— Sir, if the Hon. Minister can give some information it would facilitate discussion on this Bill. I want namber of agricultural workers

ಶ್ರೀ ಎನ್ ಹುಚ್ಚಮಾಸ್ತಿಗೌಡ :— ಮಾನ್ಯ ಸದಸ್ಯರು ಕೇಳತಕ್ಕ ವಿವರಗಳನ್ನು ಸಾಧ್ಯವಾದಷ್ಟು ಒದಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಅಲ್ಲಿಯವರೆಗೆ ಇರತಕ್ಕ ಅಂಕೀ ಅಂಶಗಳ ಆಧಾರದ ಮೇಲೆ ಮಸೂದೆಯ ಚರ್ಚೆ ಮುಂದುವರಿಯಲೆಂದು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಪ್ರಭಾಕರ್ (ವರ್ತೂರು) —: ಅಂಕೀ ಅಂಶಗಳ ಒಂದು ಹ್ಯಾಂಡ್ ಬುಕ್ಕನ್ನು ಪ್ರಿಂಟ್ ಮಾಡಿಸಿ ಇದನ್ನು ಎಲ್ಲಾ ಸದಸ್ಯರಿಗೂ ಹಂಚಿಸಿದ್ದರೆ ಚರ್ಚೆಗೆ ಅನುಕೂಲವಾಗುತ್ತ ಇತ್ತಲ್ಲವೇ ?

MR. DEPUTY SPEAKER :— I may tell the hon. Minister respectfully that it is risky to sadject himself for cross-examination at this stage. Now. I call upon hon. Leader of Opposition Sri Deve Gowda to initiate the discussion.

SRI T. R. SHAMANNA :— I have moved an amendment. I want to say something on that.

MR. DEPUTY SPEAKER :— The Hon. member may speak after Sri Devegowda.

† ಶ್ರೀ ಎಚ್. ಡಿ. ದೇವೇಗೌಡ :— ಮಾನ್ಯ ಉಪಸಭಾಧ್ಯಕ್ಷರೇ, ಈಗ ರೆವೆನ್ಯೂ ಮಂತ್ರಿಗಳು ಭೂಸುಧಾರಣಾ ತಿದ್ದುಪಡಿ ಮಸೂದೆ ೧೯೭೨ — ಇದರ ಬಗ್ಗೆ ಮಾತನಾಡುತ್ತಾ ಇದು ಚರಿತ್ರಾರ್ಹವಾದ ಮಸೂದೆ ಎಂದು ಹೇಳಿದರು. ಈ ಮಾತನ್ನು ಕೊನೆಯಲ್ಲಿ ಅವರು ತಮ್ಮ ಭಾಷಣವನ್ನು ಮುಗಿಸುವಾಗ ಹೇಳಿದರು ಆಮೇಲೆ ಅವರು ಮೊದಲು ಭಾಷಣ ಪ್ರಾರಂಭಿಸಿದಾಗ ಹಿಂದೆ ಈ ಒಂದು ಮಸೂದೆಯೇನಿತ್ತು ನಮ್ಮ ರಾಜ್ಯದಲ್ಲಿ ಅದನ್ನು ಕಾರ್ಯಗತ ಮಾಡುವ ಬಗ್ಗೆ ಸರಕಾರಕ್ಕೆ ಆಸಕ್ತಿಯಿರಲಿಲ್ಲ. ಆ ಒಂದು ಆಕ್ಷೇಪ ಮಾಡಬೇಕೆಂದಿಲ್ಲ ಆದರೆ ಆ ಭಾವನೆ ಬರುತ್ತದೆ ಎನ್ನುವ ರೀತಿಯಲ್ಲಿ ಹೇಳಿದರು. ನಾನು ಅರ್ಥ ಮಾಡಿಕೊಂಡ ರೀತಿಯಲ್ಲಿ ಬಹುಶಃ ಹಿಂದಿದ್ದ ಮಸೂದೆಗಿಂತ ಇದು ಹೆಚ್ಚು ಅನುಕೂಲಕರವಾಗಿದೆ ಎಂದು ಹೇಳಲು ತಯಾರಾಗಿಲ್ಲ. ಈಗ ಸೀಲಿಂಗ್ ಲಿಮಿಟ್ ರೆಡ್ಯೂಸ್ ಮಾಡಿದ್ದಾರೆ ಅಷ್ಟೆ. ೧೯೬೧ರಲ್ಲಿ ಎನ್ನೊಂದು ಮಸೂದೆ ನಾವು ಮಾಡಿದ್ದೆವು ಆ ಮಸೂದೆಯನ್ನು ಜಾರಿಗೆ ತರುವ ವಿಚಾರದಲ್ಲಿ ಹಿಂದಿದ್ದವರು ಆಸಕ್ತಿ ವಹಿಸಲಿಲ್ಲ ಎಂಬ ಭಾವನೆಯಿದೆ ಎಂದೇನು ಹೇಳಿದ್ದಾರೆ ಆದರ ಬಗ್ಗೆ ಕೆಲವು ವಿಷಯಗಳನ್ನು ಹೇಳಿ ನಾನು ಮುಂದಕ್ಕೆ ಹೋಗುತ್ತೇನೆ. ೧೯೭೨ ರಲ್ಲಿ ಪ್ರಗತಿದಾಯಕವಾದ ಮಸೂದೆ ತಂದಿದ್ದೇವೆ. ಇದು ಪ್ರಗತಿಪರವಾಗಿದೆ, ಚರಿತ್ರಾರ್ಹವಾದ ಮಸೂದೆ ತರಲು ನಾವು ಪ್ರಯತ್ನ ಮಾಡಿದ್ದೇವೆ ಎಂದು ಕಂದಾಯ ಮಂತ್ರಿಗಳು ಹೇಳಿದರು. ೧೯೬೯ ಕ್ಕಿಂತ ಮುಂಚೆ ಶ್ರೀಮಾನ್ ಹುಚ್ಚಮಾಸ್ತಿಗೌಡರು ಈ ಕಡೆ ಕುಳಿತ್ತಿದ್ದರು. ಶ್ರೀ ದೇವರಾಜ ಅರಸ್‌ರವರು ಸುಮಾರು ಒಂದು — ಒಂದೂವರೆ ವರ್ಷದ ಹಿಂದೆ ಈ ಕಡೆ ಇದ್ದರು. ಅವರು ಇಂದು ಆಕ್ಷೇಪಣೆ ಮಾಡಬೇಕಾದ ಅಗತ್ಯವಿರಲಿಲ್ಲ ಅವರೇಕೆ ಆಕ್ಷೇಪಣೆ

(ಶ್ರೀ ಎಚ್. ಡಿ. ದೇವೇಗೌಡ)

ಮಾತುಗಳನ್ನು ಹೇಳಬೇಕಾಗಿತ್ತು ? ಯಾರ ಮೇಲೂ ಗೂಬೆ ಕೂಡಿಸಲು ಈ ರೀತಿ ಅವರು ಹೇಳ ಬಾರದು. ಮೈಸೂರಿನಲ್ಲಿ ಅವಿಭಾಜ್ಯ ಕಾಂಗ್ರೆಸ್ ಇದ್ದಾಗ ತಂದಂಥ ಮಸೂದೆ ಪ್ರಗತಿದಾಯಕವಾಗಿತ್ತು ಎಂದು ಹೇಳಬಹುದು. ೧೯೬೧ರಲ್ಲಿ ತಂದ ಭೂ ಸುಧಾರಣಾ ಕಾನೂನನ್ನು ಪಕ್ಕದ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಮಹಾರಾಷ್ಟ್ರದಲ್ಲಿ ಸೀಲಿಂಗ್ ಲಿಮಿಟ್ ೭ನೇ ಮತ್ತು ೮ನೇ ಕ್ಲಾಸ್ ಲ್ಯಾಂಡ್‌ಗೆ ಏನಿತ್ತೋ ಅದಕ್ಕಿಂತ ನಮ್ಮಲ್ಲಿ ಕಡಿಮೆ ಇತ್ತು ಎಂದು ನನಗೆ ತಿಳಿದ ಮಟ್ಟಿಗೆ ಹೇಳಬಹುದು. ಮಹಾರಾಷ್ಟ್ರದ ಕಾನೂನಿಗಿಂತ ನಮ್ಮದು ಪ್ರಗತಿದಾಯಕವಾಗಿತ್ತು.

5–30 P.M.

ಆಂಧ್ರದಲ್ಲಿ ನಾನು ಕೇಳಿದ್ದೇನೆ. ಅವರು ಇಟ್ಟಂಥ ನೀತಿ ಏನು ಇದೆ ಅದು ನಮ್ಮಲ್ಲಿ ೧೯೬೧ರಲ್ಲಿ ಇದ್ದುದಕ್ಕಿಂತ ಹೆಚ್ಚಾಯಿತು ಎಂದು ಕಾಣುತ್ತದೆ. ಇದರ ಬಗ್ಗೆ ಕೆಲವು ಅಂಕಿಅಂಶ ಹೇಳಬಹುದು. ಈವೊತ್ತು ಅದರ ಬಗ್ಗೆ ಒಂದೇ ಮಾತಿನಲ್ಲಿ ಹೇಳುವುದಾದರೆ ೧೯೬೧ರ ಶಾಸನದಲ್ಲಿ ಏನು ಒಂದು ರೆಂಟ್ ಫಿಕ್ಸ್ ಮಾಡಿದ್ದಾರೋ ಅವುಗಳ ಬಗ್ಗೆ ಅಮೆಂಡ್‌ಮೆಂಟ್ಸ್ ತಂದಿದ್ದೇವೆ ಎಂದು ಹೇಳಿದರು. ತಮಗೂ ನಮಗೂ ಗೊತ್ತಿರುವ ರೀತ್ಯ ಇದರ ಬಗ್ಗೆ ಒಂದು ದೊಡ್ಡ ಪೆಡಂಭೂತ ಅಡಚಣೆ ಬಂದಿದೆ ಎಂದು ಹೇಳಿ ದರೆ ತಪ್ಪಿಲ್ಲ. ಈ ಮಸೂದೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿಗೂ ಹೋದವು. ಕೇರಳದ ಲ್ಯಾಂಡ್ ರೀಫಾರಂಸ್ ಬಿಲ್ ಮೇಲೆ ಸುಪ್ರೀಂ ಕೋರ್ಟ್ ಡಿಸಿಷನ್ ಆಗಿದೆ. ಹೀಗಿರುವುದಕ್ಕೆ ಕಾರಣ ಆಡಳಿತ ಸೂತ್ರವನ್ನು ಹಿಡಿದಿರತಕ್ಕಂಥಾವರೇ ಕಾರಣರು ಎಂದು ಹೇಳಬಹುದು. ಹೇಗೆಂದರೆ ೧೯೭೧ನೇ ಇಸವಿಯಲ್ಲಿ ಲೋಕಸಭಾ ಚುನಾವಣೆ ಆಯಿತು. ೧೯೭೨ ರಲ್ಲಿ ವಿಧಾನ ಸಭಾ ಚುನಾವಣೆ ಆಯಿತು. ಆ ಚುನಾವಣಾ ಸಂದರ್ಭದಲ್ಲಿ ಇದರ ಬಗ್ಗೆ ಹೆಚ್ಚು ಹೆಚ್ಚು ಮಾತು ನಡೆಯಿತು, ಇದು ಎಲ್ಲಿಯವರೆಗೆ ಹೋಯಿತು ಎಂದರೆ ಈ ಸರ್ಕಾರ ಬಿಟ್ಟರೆ ಬೇರೆಯವರು ಯಾರು ಈ ಭೂಸುಧಾರಣೆಯನ್ನು ಜಾರಿಗೆ ತರತಕ್ಕಂಥವರ ಬಗ್ಗೆ ಇಚ್ಛೆ ಇರಲಿಲ್ಲ ಅನ್ನುವ ಮಟ್ಟಕ್ಕೆ ಹೋಯಿತು. ಈ ಕಡೆಯವರೂ, ಆ ಕಡೆ ಯವರೂ ಈರೀತಿ ಹೇಳತಕ್ಕಂಥಾದ್ದು ಸ್ವಾಭಾವಿಕ. ಇದರಲ್ಲಿ ನಿಜ ಹೇಳುವುದಾದರೆ ಇಂದಿರಾಗಾಂಧಿ ಯವರ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಅವರು ತಮ್ಮ ಪಕ್ಷದ ಪಾರ್ಲಿಮೆಂಟ್ ಸದಸ್ಯರಿಗೇನೇ ಛೀಮಾರಿ ಹಾಕಿದರು. ಕೇವಲ ಒಂದು ಪಕ್ಷದ ಎಲ್ಲಾ ಸದಸ್ಯರುಗಳೂ ಪ್ರತಿಗಾಮಿಗಳು, ಪ್ರಗತಿಗಾಮಿಗಳು ಎಂದು ಹೇಳುವ ಪದಗಳು ಏನು ಇವೆಯೋ ಅದಕ್ಕೆ ಹೊಂದಿಕೊಂಡು ಹೋಗುವ ರೀತಿಯಲ್ಲಿಲ್ಲ. ಪ್ರಗತಿ ಗಾಮಿ ಎನ್ನುವ ಪದ ಬಳಸತಕ್ಕದು ಇದು ರಾಜಕೀಯ ಭಾಷಣ ಆಗಬೇಕೇ ವಿನಃ ಇದರಲ್ಲಿ ಸತ್ಯಾಂಶ ಇಲ್ಲ ವೆಂದು ಹೇಳುತ್ತೇನೆ. ಆದುದರಿಂದ ಪ್ರಗತಿಗಾಮಿಗಳು, ಪ್ರತಿಗಾಮಿಗಳು ಎಂದು ಹೇಳತಕ್ಕದ್ದು ಸಂ ಯಲ್ಲ. ಇದರಲ್ಲಿ ನೈಜವಾದ ಪರಿಸ್ಥಿತಿ ಏನು ಎನ್ನುವುದನ್ನು ವಿಚಾರಣೆ ಮಾಡಬೇಕು. ಈವೊತ್ತು ನಿಮಗೆ ಜಮೀನು ಎಷ್ಟು ದೊರೆಯುತ್ತದೆ ಎಂದು ಲೆಕ್ಕಹಾಕಿದರೆ ೩ ಪರ್ಸೆಂಟ್ ಕೂಡ ಜಮೀನು ಸಿಕ್ಕುವು ದಿಲ್ಲ ಎಂದು ಹೇಳುತ್ತೇನೆ. ಒಂದುವೇಳೆ ನಾನು ೨೦ ಎಕರೆ ಸೀಲಿಂಗ್ ಲಿಮಿಟ್ ಇರಬೇಕು ಎಂದು ವಾದಿ ಸುವುದಾದರೆ ಶ್ರೀಮಂತರ ಪರವಾಗಿ ವಕಾಲತ್ತು ವಹಿಸಿದ್ದಾನೆ ಎಂದು ಹೇಳುತ್ತೀರಿ. ನಾನು ಬಡವರ ಪರ ವಾಗಿಯೇ ಓಟು ತೆಗೆದುಕೊಂಡುಬಂದಿದ್ದೇನೆ ಎಂದು ಹೇಳುತ್ತೇನೆ. ನನ್ನ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ೧೦ ಎಕರೆ ಅಲ್ಲ, ೫ ಎಕರೆ ಅಂತ ಸೀಲಿಂಗ್ ಲಿಮಿಟ್ ತಂದರೂ ಕೂಡ ನಿಮಗೆ ಅಷ್ಟು ಜಮೀನು ಸಿಕ್ಕುವುದಿಲ್ಲ ಈ ಮಾತನ್ನು ಹೇಳಿದರೆ ನನ್ನನ್ನು ಅವರ ಪರವಾಗಿ ವಾದಿಸಿದರು ಎನ್ನುವ ಮಾತನ್ನು ಹೇಳಬಹುದು. ಆದರೆ ನಾನು ಕೆಲಸ ಮಾಡಬೇಕಾದರೆ ನನ್ನ ಕ್ಷೇತ್ರದ ಒಂದು ಹಿಂಬದಿಯಲ್ಲೇ ಅವರ ಹಿತದ ಷ್ಟಿಯನ್ನು ಮನಸಿ ನಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಅದರೂ ನಾನು ವಿರೋಧಪಕ್ಷದಲ್ಲೂ ನಾಯಕನಾಗಿ ಕೆಲಸ ಮಾಡ ಬೇಕಾದರೆ ನನ್ನ ಕ್ಷೇತ್ರದ ಜನರ ಮಮತೆಯನ್ನು ನನ್ನ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಆದುದ ರಿಂದ ನೀವು ಒಂದುವೇಳೆ ೨೦ ಎಕರೆ ಸೀಲಿಂಗ್ ಲಿಮಿಟ್ ಮಾಡುವುದಾದರೆ ಅದು ಸರಿಯಲ್ಲ ಎಂದು ಹೇಳುತ್ತೇನೆ. ಇದನ್ನು ಹೇಳಿದರೆ ನನ್ನನ್ನು ಶ್ರೀಮಂತರ ಪರ ವಾದ ಮಾಡುತ್ತೀರಾ ಎಂದು ಅವರ ಪರ ವಾದ ಮಾಡುತ್ತೇನೆ ಅಂತಲ್ಲ. ಪ್ರತಿಗಾಮಿಗಳು, ಪ್ರಗತಿಗಾಮಿಗಳು ಅಂತ ಹೇಳುವ ಪದಗಳನ್ನು ತಮ್ಮ ಡಿಕ್ಷನರಿಯಿಂದ ಕಿತ್ತುಹಾಕಬೇಕು ಎಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರಗತಿಗಾಮಿಗಳು ಇಲ್ಲೂ ಇದ್ದಾರೆ, ಅಲ್ಲೂ ಇದ್ದಾರೆ. ಪ್ರತಿ ಗಾಮಿಗಳು ಕೆಲವರು ನುಸುಳಿಕೊಂಡಿದ್ದಾರೆ ಎಂದು ಹೇಳಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ನನಗೆ ಪ್ರಪ್ರಥಮವಾಗಿ ಫ್ಯಾಮಿಲಿ ಅನ್ನತಕ್ಕಂಥಾದ್ದರ ಬಗ್ಗೆ ಒಂದು ವಿವರಣೆ ಬೇಕು. ಈವೊತ್ತು ಒಂದು ಕುಟುಂಬ ಎನ್ನುವುದಕ್ಕೆ ವಿವರಣೆ ಏನು ಎಂದು ತಮ್ಮ ಒಂದು ತಿದ್ದುಪಡಿ ಮಸೂದೆಯಲ್ಲಿ ವ್ಯಕ್ತಪಡಿಸಿದ್ದೀರಿ. ಏನೆಂದರೆ ಗಂಡ, ಹೆಂಡತಿ ಮತ್ತು ೩ ಮೈನರ್ ಮಕ್ಕಳು

ಇದ್ದರೆ ಅವರಿಗೆ ಒಂದು ಕುಟುಂಬ ಅಂತ ಹೇಳುತ್ತೀರಿ. ಈವೊತ್ತು ನಾನು ತಮ್ಮನ್ನು ಪ್ರಶ್ನೆಮಾಡಬೇಕಾಗುತ್ತದೆ. ಹಿಂದಿನ ಆಕ್ಟ್‌ನಲ್ಲಿ ಗ್ರಾಂಡ್ ಚಿಲ್ಡ್ರನ್ ಅಂತ ಇತ್ತು. ಈಗ ಅದನ್ನು ಕಿತ್ತು ಹಾಕಿದ್ದೀರಿ. ಜಾಯಿಂಟ್ ಫ್ಯಾಮಿಲಿಯಲ್ಲಿ ಇದರ ಅವಶ್ಯಕತೆ ಇಲ್ಲವೇ ಎಂದು ನಾನು ಕೇಳುತ್ತೇನೆ ಏತಕ್ಕೆಂದರೆ ಈವೊತ್ತು ಒಬ್ಬ ತಂದೆಗೆ ಒಬ್ಬ ಮಗ ಇರುತ್ತಾನೆ. ಅವನು ಮದುವೆ ಆಗಿ ೪-೫ ಜನ ಮಕ್ಕಳು ಆದಮೇಲೆ ಗಂಡ ಹೆಂಡತಿ ಇಬ್ಬರೂ ಸತ್ತು ಹೋಗುತ್ತಾರೆ. ಆ ೪-೫ ಮೊಮ್ಮಕ್ಕಳನ್ನು ಅಜ್ಜ ಸಾಕುತ್ತಾ ಇರುತ್ತಾನೆ ಅಂಥಾವರು ಫ್ಯಾಮಿಲಿ ಯೂನಿಟ್‌ಗೆ ಬರುತ್ತಾರೆಯೋ? ಇದರ ಬಗ್ಗೆ ತಾವು ವಿವರಣೆ ಕೊಡಬೇಕು ಎಂದು ಕೇಳುತ್ತೇನೆ. ಎರಡನೆಯ ಇನ್ನೊಂದು ಉದಾಹರಣೆ ಒಂದುವೇಳೆ ಮಗ ಸತ್ತುಹೋಗಿರುತ್ತಾನೆ ಸೊಸೆಗೆ ಮಕ್ಕಳು ಇರುವುದಿಲ್ಲ, ಆಗ ಅವಳಿಗೆ ಆಸ್ತಿ ಹಕ್ಕು ಬರುತ್ತದೆಯೋ. ಅದರ ಬಗ್ಗೆ ವಿವರಣೆಬೇಕು. ಮೂರನೆಯದಾಗಿ ಗಂಡ, ಹೆಂಡತಿ ೩ ಮೈನರ್ ಮಕ್ಕಳಿಗಿಂತ ಹೆಚ್ಚಿಗೆ ಇದ್ದರೆ ಅವರಿಗೆಲ್ಲಾ ಒಂದೊಂದು ಯೂನಿಟ್ ಹೆಚ್ಚಿಗೆ ಕೊಡುವುದಕ್ಕೆ, ಒಟ್ಟಿನಲ್ಲಿ ೨೦ ಎಕರೆಯವರೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದರಲ್ಲಿ ಮೈನರ್ ಮಕ್ಕಳಿಗೆ ಎಷ್ಟು ಇಡಬೇಕು ಎನ್ನತಕ್ಕದ್ದು ಇಲ್ಲ. ಒಂದು ಕುಟುಂಬದಲ್ಲಿ ಹೆಣ್ಣು ಮಕ್ಕಳು ಮೆಜಾರಿಟಿ ಬಂದಿರುವವರು ಇದ್ದಾರೆ. ಅನ್‌ಡಿವೈಡೆಡ್ ಫ್ಯಾಮಿಲಿಯಲ್ಲಿ ಇರುತ್ತಾರೆ. ಮೆಜಾರಿಟಿಗೆ ಬಂದಿರತಕ್ಕಂಥ ಗಂಡುಮಗ ಇದ್ದರೆ ಒಂದು ಯೂನಿಟ್ ಜಾಸ್ತಿ ಬರುತ್ತದೆ. ಅನ್‌ಮ್ಯಾರೀಡ್ ಗರ್ಲ್ ಇದ್ದರೆ ಆವಾಗ ಆಸ್ತಿ ಹಕ್ಕಿಗೆ ಅವಕಾಶ ಇದೆಯೇ? ಒಂದು ಫ್ಯಾಮಿಲಿಯಲ್ಲಿ ೫ ಜನಕ್ಕಿಂತ ಹೆಚ್ಚು ಇದ್ದರೆ ಒಂದೊಂದು ಯೂನಿಟ್ ಕೊಡತಕ್ಕದ್ದು, ಅದು ೨೦ ಎಕರೆಗಿಂತ ಜಾಸ್ತಿ ಹೋಗಬಾರದು ಎಂದು ಹೇಳಿದ್ದೀರಿ. ಒಂದು ಕುಟುಂಬದಲ್ಲಿ ಮೆಜಾರಿಟಿಗೆ ಬಂದಿರತಕ್ಕಂಥ ಹೆಣ್ಣುಮಕ್ಕಳು ಇದ್ದರೆ ಈವೊತ್ತು ಆ ಆಸ್ತಿಯಲ್ಲಿ ಹಕ್ಕು ಇದೆಯೇ? ಹಿಂದೂ ಆಕ್ಟ್ ಪ್ರಕಾರ ತಂದೆ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ಹಕ್ಕು ಬರುತ್ತದೆ. ಆದರೆ ಈ ಕಾನೂನಿನಲ್ಲಿ ಅದಕ್ಕೆ ಅವಕಾಶ ಇದೆಯೇ? ಏತಕ್ಕೆಂದರೆ ಫ್ಯಾಮಿಲಿ ಅನ್ನುವುದಕ್ಕೆ ಡೆಫನಿಷನ್ ಬದಲಾವಣೆ ಮಾಡಿರುವುದರಿಂದ ಈ ಸಮಸ್ಯೆ ಉದ್ಭವವಾಗುತ್ತದೆ. ಅವಳು ಮದುವೆ ಆಗುವುದಿಲ್ಲ ಬೇಡ ಎಂದು ಹೇಳುತ್ತಾಳೆ ಆರೀತಿ ಇದ್ದರೆ ಅವಳು ಯಾವ ಆಧಾರದ ಮೇಲೆ ಜೀವನ ಮಾಡಬೇಕು ಎಂದು ಕೇಳುತ್ತೇನೆ. ಇದರ ಬಗ್ಗೆ ಈ ಕಾನೂನಿನಲ್ಲಿ ಸ್ಪಷ್ಟೀಕರಣವಾಗಿಲ್ಲ. ಒಂದುವೇಳೆ ಸ್ಪಷ್ಟೀಕರಣವಾಗಿದ್ದರೆ ಅದರ ವಿವರಣೆ ಕೊಟ್ಟುಬಿಟ್ಟರೆ ಬಹಳ ಸಂತೋಷ ಎನ್ನತಕ್ಕಂಥಾದ್ದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಕಾನೂನಿನಲ್ಲಿ ಈವೊತ್ತು ಸಾಕಷ್ಟು ಜಿಜ್ಞಾಸೆ ಇರುವುದರಿಂದ ಇದರ ಬಗ್ಗೆ ವಿವರಣೆಯನ್ನು ಕೇಳಬೇಕಾಗಿದೆ. ಈವೊತ್ತು ತಮ್ಮ ಟೀಕೆಯಲ್ಲಿ ಹೇಳಿದ್ದೀರಾ. ಹಿಂದಿನ ಒಂದು ಕಾನೂನಿನಲ್ಲಿ ಜಾಯಿಂಟ್ ಫ್ಯಾಮಿಲಿ ಸೇರಿಕೊಂಡು ಮೊದಲನೇ ದರ್ಜೆ ಭೂಮಿ ೨೭ ಸ್ಟ್ಯಾಂಡರ್ಡ್ ಎಕರೆ ಎಂದು ಏನು ಇಟ್ಟುಕೊಂಡಿದ್ದೀರೋ ಅದನ್ನೇ ಇಟ್ಟುಕೊಳ್ಳಬಹುದಾಗಿತ್ತು. ಈವೊತ್ತು ಈ ಡೆಫನೇಷನ್‌ನ್ನು ಮಾರ್ಪಾಡು ಮಾಡಿರುವುದರಿಂದ ಬಹು ಹೆಚ್ಚು ಎಂದರೆ ಒಂದು ಕುಟುಂಬದಲ್ಲಿ ೩೦ ಎಕರೆ ಜಾಸ್ತಿ ಇಟ್ಟುಕೊಳ್ಳಬಹುದು ಎಂದು ಹೇಳಿದ್ದೀರಾ. ಇದು ಎಂಥಾ ಕಾನೂನು ಎಂದು ನಾನು ಕೇಳುತ್ತೇನೆ.

ಉದಾಹರಣೆಗೆ ನನಗೆ ಆ ಪ್ರಶ್ನೆಯನ್ನು ಹಾಕಿಕೊಳ್ಳುತ್ತೇನೆ. ನನಗೆ ಮೂರು ಜನ ಗಂಡು ಮಕ್ಕಳಿದ್ದಾರೆ, ಮೂವರೂ ಮೆಜಾರಿಟಿಗೆ ಬಂದಿದ್ದಾರೆ. ನಮ್ಮ ಪಾಟೀಲರಿಗೆ ೧೫,೧೬,೧೭ ವರ್ಷ ವಯಸ್ಸಿನ ಮೂರು ಜನ ಮಕ್ಕಳಿದ್ದಾರೆ. ಈ ಕಾನೂನಿನ ಪ್ರಕಾರ ನಾನು ೯೦ ಎಕರೆ ಜಮೀನು ಇಟ್ಟುಕೊಳ್ಳಬಹುದು ಆದರೆ ಶ್ರೀ ಪಾಟೀಲರು ೧೦ ಎಕರೆ ಮಾತ್ರ ಇಟ್ಟುಕೊಳ್ಳಬೇಕು. ಯಾವ ಒಂದು ಶಾಸ್ತ್ರೀಯವಾದ ಆಧಾರದ ಮೇಲೆ ಈ ಅಭಿಪ್ರಾಯಕ್ಕೆ ಬಂದಿದ್ದೀರೆಂದು ನಾನು ಕೇಳಬೇಕಾಗಿದೆ. ೧೮ ವರ್ಷಕ್ಕೆ ಒಂದೆರಡು ವರ್ಷ ಕಡಮೆ ಇದ್ದರೂ ಕೂಡ ಕಾನೂನಿನ ಪರಿಮಿತಿಯೊಳಗೆ ಬೆನಿಫಿಟ್ ಸಿಕ್ಕುವುದಿಲ್ಲ. ಎರಡು ವರ್ಷ ಕಳೆದಮೇಲೆ ಅವರ ಮಕ್ಕಳು ಎರಡೆರಡು ಅಥವಾ ಮೂರು ಮೂರು ಎಕರೆ ಹಂಚಿಕೊಳ್ಳಬೇಕು. ನಾನು ಮತ್ತು ನನ್ನ ಮಕ್ಕಳು ಸೇರಿ ೪೦ ಎಕರೆ ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ಈರೀತಿಯಾಗಿ ಮಾಡಿರುವುದು ಆಧಾರ ರಹಿತವಾದದ್ದು ಎಂದು ಹೇಳಬೇಕಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕಾಗುತ್ತದೆ.

(MADAM SPEAKER IN THE CHAIR)

ಮಾನ್ಯ ಮಂತ್ರಿಗಳಾದ ಹುಚ್ಚಮಾಸ್ತಿಗೌಡರಿಗೆ ಎಷ್ಟು ಜಮೀನಿದೆ ಅವರು ಎಷ್ಟು ಹಣ ಇಟ್ಟಿದ್ದಾರೆ, ಎಷ್ಟು ಚಿನ್ನವನ್ನು ಇಟ್ಟಿದ್ದಾರೆ, ದಯಮಾಡಿ ತಿಳಿಸಬೇಕು. ನಿಮ್ಮ ಒಟ್ಟು ಕುಟುಂಬದಲ್ಲಿ ೫೦-೬೦ ಎಕರೆ, ೭೦-೮೦ ಎಕರೆ ಎಷ್ಟು ಇದೆಯೋ ಗೊತ್ತಿಲ್ಲ. ನನ್ನ ಹಾಗೆ ನೀವೂ ಬಸ್ಸಿನಲ್ಲಿ ಹೋಗುತ್ತಿದ್ದಿರಿ, ಕಾರು ಇಟ್ಟುಕೊಳ್ಳುವ ಯೋಗ್ಯತೆ ಇರಲಿಲ್ಲ. ನೀವೂ ವ್ಯವಸಾಯಗಾರರು. ೧೦ ಎಕರೆ ಭೂಮಿ ಇಟ್ಟುಕೊಂಡಿರುವವರು ಸುಖವಾಗಿ ಎಂದರೆ ಬೆಂಗಳೂರಿನಲ್ಲಿದ್ದು ಫ್ಯಾನ್ ಹಾಕಿಕೊಂಡು ಇರುವ ಹಾಗೆ ಜೀವನ ಮಾಡುವುದು ಬೇಡ, ಬೇಸಿಕ್ ರಿಕ್ವೈರ್‌ಮೆಂಟ್, ಮಿನಿಮಮ್ ರಿಕ್ವೈರ್‌ಮೆಂಟ್ ಫಾರ್ ಎ ಫ್ಯಾಮಿಲಿ, ಏನಿದೆ

(MADAM SPEAKER IN THE CHAIR)

ಅದನ್ನು ಪೂರೈಸುವುಕ್ಕೆ ಬೇಕಾದಷ್ಟು ಉತ್ಪನ್ನವನ್ನು ೧೦ ಎಕರೆ ಭೂಮಿಯಿಂದ ತೆಗೆಯುವುದಕ್ಕೆ ಸಾಧ್ಯವೇ ವೋಟು ಕೇಳತಕ್ಕ ಒಂದೇ ಒಂದು ದೃಷ್ಟಿಕೋನದಿಂದ ಎಲ್ಲರೂ ಮಾತನಾಡುತ್ತಿದ್ದೇವೆ. ಈಗ ಯಾವ ಒಂದು ರಾಜಕೀಯ ಪಕ್ಷ ಕ್ಯಾಪಿಟಲಿಸ್ಟಿಕ್ ಐಡಿಯಾಸ್ ಇಟ್ಟುಕೊಂಡಿದೆ ಎಂದು ಹೇಳುತ್ತಿದ್ದೆವು ಅಂಥ ಸ್ವತಂತ್ರ ಪಕ್ಷ ಕೂಡ ಸೀಲಿಂಗ್ ಲಿಮಿಟ್ ಇರಬೇಕು ಎಂದು ಪ್ರತಿಗಾಮಿಯ ಹೆಸರಿನಲ್ಲಿ ಒಂದು ಅಟ್ಮಾಸ್ಫಿಯರ್ ಕ್ರಿಯೇಟ್ ಮಾಡಿದ್ದಾರೆ. ರಾಜಕೀಯದಲ್ಲಿ ಇದನ್ನು ನಾವು ಹೇಳಿದರೆ ಮಾತ್ರ ಉಳಿಯುತ್ತವೆ ಎಂದು ಎಲ್ಲರೂ ಸೀಲಿಂಗ್ ವಿಚಾರ ಹೇಳುವುದಕ್ಕೆ ಹೋದರು. ಶಾಸ್ತ್ರೀಯವಾದ ಆಧಾರವನ್ನು ಇಟ್ಟುಕೊಂಡು ಯಾರಾದರೂ ಮಾತನಾಡುತ್ತಾರೆಯೋ ಎಂದರೆ ಯಾರು ಮಾತನಾಡುತ್ತಿಲ್ಲ. ಸರ್ಕಾರದವರು ೧೦ ಎಕರೆ ಎಂದು ಹೇಳಿದ್ದಾರೆ. ಸಂಸ್ಥಾ ಕಾಂಗ್ರೆಸ್ಸಿನವರು ೧೫ ಎಕರೆ ಎಂದು ಹೇಳಿದ್ದಾರೆ, ಕೇಂದ್ರದ ನಾಯಕರು ೧೮ ಎಕರೆ ವರೆಗೂ ಇರಬಹುದು ಎಂದು ಹೇಳಿದರು. ನಮ್ಮ ಮುಖ್ಯಮಂತ್ರಿಗಳು ಬಹಳ ಪ್ರಗತಿಗಾಮಿಗಳು ಅವರು ಒಬ್ಬನಿಗೆ ಒಂದು ಉದ್ಯೋಗ ಎಂದು ಬಹಳ ಮುಂದೆ ಹೋಗಿದ್ದಾರೆ. ಸಂಸ್ಥಾ ಕಾಂಗ್ರೆಸ್ಸಿನವರು ೧೫ ಎಕರೆ ಮಿತಿ ಇರಬೇಕು ಎಂದು ಯಾವ ಶಾಸ್ತ್ರೀಯವಾದ ಆಧಾರದ ಮೇಲೆ ಹೇಳಿದ್ದಾರೆಂದು ಕೇಳಿದರೆ ಜನರಿಂದ ವೋಟು ಪಡೆಯುವುದಕ್ಕೆ ಹೇಳಿದ್ದಾರೆ ಇದನ್ನು ವಿರೋಧ ಮಾಡಿದರೆ ವೋಟು ಸಿಗುವುದಿಲ್ಲ ಎನ್ನುವ ಭಾವನೆ ಎಲ್ಲರಲ್ಲಿಯೂ ಇದೆ. ಒಂದಲ್ಲ ಒಂದು ರೀತಿ ಬಡವರ ಕಡೆ ಇದ್ದೇವೆ ಎನ್ನುವುದನ್ನು ತೋರಿಸಿಕೊಳ್ಳಬೇಕು ಎನ್ನುವ ದೃಷ್ಟಿಕೋನದಿಂದ ಇಂಥ ಮಾತನ್ನು ಆಡುತ್ತಿದ್ದೇವೆಂದರೆ ತಪ್ಪಾಗುವುದಿಲ್ಲ ಯಾವ ಆಧಾರದ ಮೇಲೆ ೧೦ ಎಕರೆ ಎನ್ನುವ ಸೀಲಿಂಗಿಗೆ ಬಂದೀರಿ ಎಂದು ಕೇಳುತ್ತೇನೆ. ನಿಮ್ಮ ಆತ್ಮ ವಂಚನೆ ಮಾಡಿಕೊಳ್ಳಬೇಡಿ, ೧೦ ಎಕರೆಯಿಂದ ಸಾಕಷ್ಟು ಜೀವನ ಮಾಡುವುದಕ್ಕೆ ಬೇಕಾದಷ್ಟು ಉತ್ಪನ್ನ ಬರುತ್ತದೆಯೋ ಎನ್ನುವುದನ್ನು ನಿಮ್ಮ ಹೃದಯ ಬಿಚ್ಚಿ ಹೇಳಿ. ಈ ಹೊತ್ತು ಕೇವಲ ಯಾವುದಾದರೂ ಒಂದು ಕಟ್ಟುಪಾಡಿಗೆ ಬಿದ್ದು ಈ ಮಾತು ಆಡುವುದು ಬೇಡ.

ಈ ದೇಶದಲ್ಲಿ ಅಲ್ಪಸ್ವಲ್ಪ ಜಮೀನು ಇಟ್ಟುಕೊಂಡಿರುವವರು, ಇನ್‌ಫಿಷಿಯೆಂಟ್ ಹೋಲ್ಡರ್ಸ್ ಇವರೆನ್ನೆಲ್ಲ ಸೇರಿಸಿದರೆ ೮೦ ಲಕ್ಷ ಆಗುತ್ತಾರೆ ಎಂದು ಹೇಳಿದ್ದೀರಿ. ಈ ಸಮಾಜದಲ್ಲಿ ಹೊಟ್ಟೆಗೆ ಇಲ್ಲದೆ ಸಾಯಬೇಕು, ನೀವೆಲ್ಲ ಸುಖವಾಗಿ ಇರಬೇಕು ಅಥವಾ ಬಹಳ ವರ್ಷಗಳಿಂದ ಸುಖವಾದ ಜೀವನ ಮಾಡಿಕೊಂಡು ಬಂದಿರುವವರು ಇರಬೇಕು ಎನ್ನುವ ದೃಷ್ಟಿಯಿಂದ ವಾದ ಮಾಡುವುದಿಲ್ಲ. ಆದರೆ ಯಾವಾಗ ಒಂದು ಕಾನೂನನ್ನು ತರುತ್ತೀರಿ, ಅದಕ್ಕೆ ಏನಾದರೂ ಆಧಾರ ಇರಬೇಕು. ಈ ದೇಶದಲ್ಲಿ ಏನಾಗಿದೆ ಎಂದರೆ ಕಳೆದ ೨೫ ಆಳ್ವಿಕೆಯಲ್ಲಿ ಭೂಮಿಯ ಮೇಲೆ ಇರತಕ್ಕ ಜನಸಂಖ್ಯೆಯ ಒತ್ತಡವನ್ನು ಕಡಮೆ ಮಾಡುವುದಕ್ಕೆ ನಾವು ಯಾರೂ ಪ್ರಯತ್ನ ಮಾಡಿಲ್ಲ ಎಂದು ಹೇಳಬೇಕಾಗುತ್ತದೆ ಹಣಕಾಸಿನ ಮಂತ್ರಿಗಳು ನಗರೀಕರಣ ಆಗಬೇಕು ಎನ್ನುವ ಮಾತನ್ನು ಅವರ ಭಾಷಣದಲ್ಲಿ ಬಹುಶಃ ಕೈಗಾರಿಕೀಕರವಾಗಿದ್ದರೆ ಇಷ್ಟೊಂದು ಸಮಸ್ಯೆ ನಮ್ಮನ್ನು ಕಾಡುತ್ತಿದ್ದಿಲ್ಲ ಎಂದು ಹೇಳಬೇಕಾಗುತ್ತದೆ. ಸಾಕಾದಷ್ಟು ಕೈಗಾರಿಕೆಗಳ ಬೆಳವಣಿಗೆಯಾಗದಿದ್ದರೆ ಯಾವ ಜನ ಈಹೊತ್ತು ಜೀವನಕ್ಕೆ ಮಾರ್ಗವಿಲ್ಲದೆ ಮಿನಿಮಂ ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ಏನಿದೆಅದಕ್ಕೂ ಅವಕಾಶವಿಲ್ಲದೆ ನರಳುತ್ತಿದ್ದಾರೆ. ಅಂಥವರ ಪರಿಸ್ಥಿತಿ ಈ ಒಂದು ಮಟ್ಟಕ್ಕೆ ಬರುತ್ತಿದ್ದಿಲ್ಲ. ಕೈಗಾರಿಕೆಗಳ ಬೆಳವಣಿಗೆ ಹೆಚ್ಚಾಗಿದ್ದರೆ ಅಥವಾ ಬೇರೆ ಅವೊಕೇಷನ್ ಎಂದರೆ ಊರಿನಲ್ಲಿಯೇ ಇದ್ದು ಜೀವನ ನಡೆಸುವುದಕ್ಕೆ ಅವಕಾಶವಾಗುವ ರೀತಿಯಲ್ಲಿ ನಮ್ಮ ಯೋಜನೆಗಳಿಂದ ನಮ್ಮ ಆರ್ಥಿಕ ಧೋರಣೆ ಸರಿಯಾದ ರೀತಿ ನಿರೂಪಣೆಯಾಗಿ ಕಾರ್ಯಗತ ವಾಗಿದ್ದರೆ ಈ ೨೫ ವರ್ಷಗಳಲ್ಲಿ ಈ ಪರಿಸ್ಥಿತಿ ಬರುತ್ತಿದ್ದಿಲ್ಲ ಎಂದು ನೊಂದು ಹೇಳಬೇಕಾಗಿದೆ. ಯಾರ ಮೇಲೊ ಅಪಾದನೆ ಮಾಡಬೇಕೆಂದು ನಾನು ಹೇಳುತ್ತಿಲ್ಲ ಅಪಾದನೆ ಮಾಡಬೇಕಾದರೆ ಎಲ್ಲರ ಮೇಲೆಯೂ ಮಾಡಬೇಕಾಗುತ್ತದೆ. ಕಳೆದ ೨೫ ವರ್ಷಗಳಲ್ಲಿ ಆರ್ಥಿಕ ನೀತಿಗಳು ವಿಫಲಗೊಂಡಿವೆ. ಅದಕ್ಕೆ ನಾವೆಲ್ಲರೂ ಕಾರಣಕರ್ತರು ಎನ್ನುವುದನ್ನು ತಿಳಿಯಬೇಕು, ಅದರಲ್ಲಿಯೂ ಅವಿಭಾಜ್ಯ ಕಾಂಗ್ರೆಸಿನಲ್ಲಿದ್ದ ಎಲ್ಲರೂ ಕಾರಣಕರ್ತರಾಗಬೇಕಾಗುತ್ತದೆ ಎಂದು ಹೇಳುತ್ತೇನೆ.

ಆದ್ದರಿಂದ ಅಂಥ ಮಾತುಗಳನ್ನು ಆಡತಕ್ಕದ್ದು ಬಿಟ್ಟರೆ ಒಳಿತು ಎಂದು ಹೇಳುತ್ತೇನೆ. ಈ ಸಮಸ್ಯೆಯನ್ನು ಎದುರಿಸತಕ್ಕ ಬಗ್ಗೆ ನಾವು ಚರಿತ್ರಾರ್ಹವಾಗಿರತಕ್ಕ ಮಸೂದೆಯನ್ನು ತಂದಿದ್ದೇವೆ ಎಂದು ಮಾನ್ಯ ಹುಚ್ಚಮಾಸ್ತಿ ಗೌಡರು ಹೇಳಿದರು. ಅದಕ್ಕೆ ಮುಂಚೆಯೇ ಈ ವಿಷಯ ಪ್ರಸ್ತಾಪವಾಗಿ ಬೇಸಿಕ್ ಹೋಲ್ಡಿಂಗ್ಸ್ ೧೦—೧೫ —೨೦ ಎಕರೆ ಇರಬೇಕು, ಇದೇ ಬಡವರಿಗೆ ಏನು ಇಲ್ಲವೇ ಇಲ್ಲ ಎನ್ನುವ ದೃಷ್ಟಿಕೋನದಿಂದ ವಾದ ಮಾಡಿ ಜಮೀನು ಹಂಚುವುದರಿಂದ ಬಡತನ ನಿರ್ಮೂಲವಾಗುತ್ತದೆ ಎಂದು ಹೇಳುವುದಾದರೆ, ನಾನು ಹೇಳುತ್ತೇನೆ, ಬೇಕಾದರೆ ಎಲ್ಲಾ ಜಮೀನನ್ನ ಇಕ್ವೇಟೆಡ್ ರೇಷಿಯೋ ಮೇಲೆ ಹಂಚಿಬಿಡೋಣ. ಈರೀತಿ ಪರ್ ಕ್ಯಾಪಿಟಾ ಲೆಕ್ಕ ಹಾಕುವುದಾದರೆ, ಮುಕ್ಕಾಲು ಎಕರೆ ಬರಬೇಕು ಎನ್ನುವ ಭಾವನೆ ಇದ್ದರೆ, ಬಡತನ ನಿವಾರಣೆಯಾಗುತ್ತದೆಯೇ? ಶ್ರೀಮಾನ್ ಜತ್ತಿಯವರು ೧೯೫೮ ರಲ್ಲಿ ಮಾಡಿದಂಥ ಒಂದು ಕಮಿಟಿ ರಿಪೋರ್ಟ್ ಆಧಾರದ ಮೇಲೆ ಸುಮಾರು ೬೭ ಪರ್ಸೆಂಟ್ ಜನ ೪—೫ ಎಕರೆ ಒಳಗೆ

ಬರುತ್ತಾರೆ. ಕೇವಲ ಮೂರು ಪರ್ಸೆಂಟ್ ಲ್ಯಾಂಡ್ ಎಕ್ಸೆಸ್ ಇರುವುದು. ನಾಲ್ಕು ಲಕ್ಷ ಎಕರೆ ಏನು ಸಿಕ್ಕುತ್ತದೆ, ಅದನ್ನು ೮೦ ಲಕ್ಷ ಜನ ಬಡವರಿಗೆ ಕೊಟ್ಟರೆ ಒಂದು ತೃಣ ಐಯೋಟಾ ಆಫ್ ದಿ ಪ್ರಾಬ್ಲಮ್ ಇದರಿಂದ ಸಾಲ್ವ್ ಆಗುತ್ತದೆ ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಇದರಿಂದ ಸಮಸ್ಯೆ ಬಗೆಹರಿಯು ತ್ತದೆ ಎನ್ನುವುದನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ಇದು ಒಂದು ಕ್ರಮವೆಂದು ಅವರ ಭಾಷಣದಲ್ಲಿದೆ ಹತ್ತು ಎಕರೆ, ಸ್ಟಾಂಡರ್ಡ್ ಎಕರೆ, ಒಂದು ಯೂನಿಟ್‌ಗೆ ಏನು ಇದೆ, ಅದು ಬಹುಶಃ ಒಂದು ಸಾಮಾನ್ಯ ವಾದಂಥ ಕುಟುಂಬಕ್ಕೆ ಕೇವಲ ಅತ್ಯಾವಶ್ಯಕವಾಗಿರತಕ್ಕ ಅವಕಾಶಗಳನ್ನು ಪೂರೈಸುವುದಕ್ಕೆ ಇದರಿಂದ ಬರುವ ಉತ್ಪತ್ತಿ ಸಾಕಾಗುವುದಿಲ್ಲ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಹತ್ತು ಎಕರೆ ಸೀಲಿಂಗ್ ಮಾಡುತ್ತೇವೆ ಎಂದರೆ, ಮೈನರ್ ಮಕ್ಕಳು ಒಂದೆರಡು ವರ್ಷ ಹೋದಮೇಲೆ ಮೇಜರ್ ಆದ ಮೇಲೆ, ಅವರಿಗೆ ಎರಡು ಎಕರೆ, ಒಂದು ಎಕರೆ ಕೊಡುತ್ತಾರೆ. ಒಂದು ವೇಳೆ ಅವರ ತಂದೆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸತಕ್ಕದ್ದರ ಬಗ್ಗೆ ಗ್ಯಾರಂಟಿ ಇದೆಯೋ ? ಅವರಿಗೆ ವಿದ್ಯಾಭ್ಯಾಸ ಮಾಡಿ ಸುವುದಕ್ಕೆ ಆಗತಕ್ಕ ಖರ್ಚು ೧೦ ಎಕರೆಯಿಂದ ರೂಪಿಸಿಕೊಳ್ಳುವುದಕ್ಕೆ ಸಾಧ್ಯವೇ* ಈಗ ನಾನು ವರ್ಗೀ ಕರಣದ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ, ಹತ್ತು ಎಕರೆಯಿಂದ ಬರತಕ್ಕ ಉತ್ಪತ್ತಿ ಏನು ? ಖನಿಷ್ಟ ನೂರು ಪಲ್ಲ ಬತ್ತ ಎಂದರೆ ಆರು ಸಾವಿರ ರೂಪಾಯಿ ಬರುತ್ತದೆ. ಕೂಲಿ ತೆಗೆದು, ಗೊಬ್ಬರ ವೆಚ ತೆಗೆದು ಬರತಕ್ಕ ಆದಾಯ ಏನು ಎನ್ನುವ ಬಗ್ಗೆ ದಯಮಾಡಿ ತಿಳಿಸಬೇಕು. ಒಂದು ಕಡೆ ೧೨ ಸಾವಿರ ರೂ. ಉತ್ಪತ್ತಿ ಬರತಕ್ಕವನಿಗೆ ಜಮೀನು ಇರಬಾರದು ಎಂದು ಹೇಳುತ್ತೀರಿ. ಇನ್ನೊಂದು ಕಡೆ ೧೦ ಎಕರೆ ಜಮೀನಿನಲ್ಲಿ ೧೨ ಸಾವಿರ ರೂಪಾಯಿ ಉತ್ಪತ್ತಿ ಬರುತ್ತದೆಯೋ, ಬರುವ ಸಾಧ್ಯತೆ ಇದೆಯೋ ? ದಯ ಮಾಡಿ ಅಂಕಿ ಅಂಶಗಳನ್ನು ಸಭೆಯ ಮುಂದೆ ಒದಗಿಸದರೆ ಒಳ್ಳೆಯದು. ಇವತ್ತಿನ ದಿವಸ ಗೊಬ್ಬರದ ಬೆಲೆ ಒಂದಕ್ಕೆ ಮೂರರಷ್ಟು ಜಾಸ್ತಿಯಾಗಿದೆ. ಕೂಲಿಯನ್ನು ಐದು ರೂಪಾಯಿಯ ಮೇಲೆ ಕೊಟ್ಟರೂ ಬರು ವುದಿಲ್ಲ. ಕೂಲಿ ಕೊಡದೆ ಹೈರ್ಡ್ ಲೇಬರರ್ಸ್ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಫ್ಯಾಮಿಲಿ ಡೆಫಿನೇಷನ್ ಪ್ರಕಾರ, ಐದು ಜನ ಬರುತ್ತಾರೆ ಗಂಡ ಹೆಂಡತಿ ಮಕ್ಕಳು ಮೂರು ಮಕ್ಕಳು. ಹೈರ್ಡ್ ಲೇಬರರ್ಸ್ ಇಟ್ಟು ಕೊಳ್ಳದೆ ೧೦–೧೫ ಎಕರೆ ಉಳುಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಇಟ್ಟುಕೊಳ್ಳಲೇಬೇಕಾಗುತ್ತದೆ. ಆದ್ದರಿಂದ ಅವನು ಆಳು ಇಟ್ಟುಕೊಂಡು, ಹೈರ್ಡ್ ಲೇಬರರ್ಸ್‌ಗೆ ಆಗತಕ್ಕ ವೆಚ್ಚ ಎಲ್ಲವನ್ನೂ ಸ್ಪಷ್ಟೀಕರಣ ಮಾಡಿದರೆ ಒಳ್ಳೆಯದು, ಹತ್ತು ಎಕರೆಗೆ ೧೨ ಸಾವಿರ ರೂಪಾಯಿ ಉತ್ಪತ್ತಿ ಬರುತ್ತದೆಯೋ ? ೧೬ ಕಿಲೋಮೀಟರ್ ೧೨ ಸಾವಿರ ರೂಪಾಯಿ ವಿಷಯ ಹೇಳಿದಿರಿ, ನಾನು ಬಹುಶಃ ಕಾಂಗ್ರೆಸ್ ಪಕ್ಷದ ಹಿರಿಯ ಧುರೀಣರು ಕೂಡ ಇದನ್ನು ಹೇಳಿರಲಾರರು. ನಿಮ್ಮ ಸೆಂಟ್ರಲ್ ಲ್ಯಾಂಡ್ ರಿಫಾರಮ್ಸ್ ಕಮಿಟಿ ಕೊಟ್ಟಂಥ ವರದಿ ಆಧಾರದ ಮೇಲೆ ತೆಗೆದುಕೊಂಡು ಮುಖ್ಯಮಂತ್ರಿಗಳು ಕಾನ್‌ಫರೆನ್ಸ್‌ನಲ್ಲಿ ಆಗಿರತಕ್ಕದ್ದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ನಾನು ಓದಿದ್ದೇನೆ. ಇದನ್ನು ಅಲ್ಲಿಯೂ ಹೇಳಿರಲಾರರು. ಇವತ್ತು ಮೈಸೂರಿನಲ್ಲಿ ತಾವು ಒಂದು ಹೊಸ ಭಾವನೆ ಮಾಡಿಸುತ್ತೀರಿ. ಒಬ್ಬ ಮನುಷ್ಯ ಒಂದು ಕೆಲಸ ಎಂದು ಹೇಳಿದ್ದಿರಿ ಈ ಥಿಯರಿಯನ್ನು ಶ್ರೀಮಾನ್ ಅರಸ್ ಅವರು ಡೆಲ್ಲಿಗೆ ಹೋಗಿ ಬಂದ ಮೇಲೆ ಹೇಳಿದರು. ಇದನ್ನು ಎಲ್ಲಾ ಮುಖ್ಯ ಮಂತ್ರಿಗಳು ಕಾಂಗ್ರೆಸ್ ವರಿಷ್ಟರು, ಪ್ರಧಾನಮಂತ್ರಿಗಳು ಸ್ವಾಗತ ಮಾಡಿದರು, ಎಂದು ಹೇಳಿದ್ದು ಪತ್ರಿಕೆಯಲ್ಲಿ ಓದಿದ್ದೇನೆ.

ಶ್ರೀ ಕೆ. ಬಿ. ಶಿವಯ್ಯ.- ತಾವು ಒಪ್ಪಿಕೊಳ್ಳದಿದ್ದರೆ ದೇಶದಲ್ಲಿ ಅನ್ ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಹೇಗೆ ಸಾಲ್ವ್ ಆಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ —ಇನ್ನು ಕ್ಯಾಬಿನೆಟ್ ಎಕ್ಸ್‌ಪಾನ್‌ಷನ್ ವಿಷಯ ಬಂದಿಲ್ಲ. ಅದ ನೆಲ್ಲಾ ಏತಕ್ಕೆ ಯೋಜನೆ ಮಾಡಿಕೊಳ್ಳುತೀರಿ ? ಆದ್ದರಿಂದ ಇವತ್ತು ನಿಮ್ಮ ದೃಷ್ಟಿ ಕೋನದಲ್ಲಿ ಒಬ್ಬ ಮನುಷ್ಯ ಒಂದು ಕೆಲಸದ ಥಿಯರಿಯನ್ನು ಅಪ್ರತ್ಯಕ್ಷವಾಗಿ ಈ ಮಸೂದೆಯ ಮುಖೇನ ತರಬೇಕು, ಎನ್ನುವ ಭಾವನೆ ನಿಮ್ಮಲ್ಲಿ ಇಗೆ: ಎರಡು ಅಮೆಂಡ್‌ಮೆಂಟ್‌ಗಳನ್ನು ಸೂಚನೆ ಮಾಡಿದರು ಎನ್ನುವುದನ್ನು ಹೇಳ ಬೇಕಾಗುತ್ತದೆ. ಉದಾಹರಣೆಗಾಗಿ, ಹೈಪಾತಿಟಿಕಲ್ ಆರ್‌ಗ್ಯುಮೆಂಟ್ಸ್ ಹೇಳುತ್ತೇನೆ, ನನಗೆ ಎರಡು ತಾಲ್ಲೂಕಿನಲ್ಲಿ ಜಮೀನು ಇದೆ, ಒಂದುಕಡೆ ಐದು ಎಕರೆ, ಇನ್ನೊಂದು ಕಡೆ ಐದು ಎಕರೆ ಇದೆಯೆಂದು ಇಟ್ಟುಕೊಳ್ಳೋಣ. ಹೊಳೇನರಸಿಪುರ ಮತ್ತು ಅರಕಲಗೋಡಿನಲ್ಲಿ ಜಮೀನು ಇದೆಯೆಂದು ಇಟ್ಟು ಕೊಳ್ಳೋಣ, ಹತ್ತು ಎಕರೆ ಇಟ್ಟು ಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ಒಂದುಕಡೆ ಹೇಳುತ್ತೀರಿ, ಅದು ೧೬ ಕಿಲೋಮೀಟರ್‌ಗೆ ಒಳಗಡೆ ವಾಸ ಇಲ್ಲದಿದ್ದರೆ ಜಮೀನು ಹೊಂದುವುದಕ್ಕೆ ಸಾಧ್ಯವಿಲ್ಲವೆಂದು ಇನ್ನೊಂದುಕಡೆ ಹೇಳುತ್ತೀರಿ. ನನಗೆ ಇರುವುದೇ ೧೦ ಎಕರೆ, ಐದು ಎಕರೆ ೧೭ನೇ ಕಿಲೋ ಮೀಟರ್ಸ್ ನಲ್ಲಿದ್ದ, ಅದನ್ನು ನಮ್ಮ ೧೬ ಕಿಲೋಮೀಟರ್ಸ್ ಕ್ಲಾಸ್ ಪ್ರಕಾರ ಇಟ್ಟುಕೊಳ್ಳುವುದಕ್ಕೆ ಪ್ರಿವೆಂಟ್ ಮಾಡುತ ಇದೀರಿ ಇದರ ಹಿನ್ನಲೆ ಏನು ? ಹಾಗಿದ್ದಮೇಲೆ ಹೈರ್ಡ್ ಲೇಬರರ್ಸ್ ಅನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯ

ಶ್ರೀ ಹೆಚ್. ಡಿ. ದೇವೇಗೌಡ .—

ವಿದೆಯೆ ? ತಾವು ಯಾವ ಆಧಾರದ ಮೇಲೆ ಈ ನಿರ್ಧಾರಕ್ಕೆ ಬಂದಿದ್ದೀರಿ, ಎಂದು ದಯಮಾಡಿ ತಿಳಿಸಬೇಕು ೧೬ ಕಿಲೋ ಮೀಟರ್ಸ್‌ನಲ್ಲಿ ಇರತಕ್ಕವನಿಗೆ ಸೀಲಿಂಗ್ ಲಿಮಿಟ್ ಒಳಗಡೆ ಬಂದರೆ ಹೈರ್ಡ್ ಲೇಬರರ್ಸ್ ಇಟ್ಟು ಕೊಂಡು ಕೆಲಸ ಮಾಡುತ್ತಾನೆ, ಲೇಬರರ್ಸ್ ಸಿಕ್ಕದೆ ಇರುವ ಸನ್ನಿವೇಶದಲ್ಲಿ ಸಾಧ್ಯವಿಲ್ಲ ಎನ್ನತಕ್ಕಂಥಾ ವನ್ನು ತಾವು ತಿದ್ದುಪಡಿ ಮಸೂದೆಯಲ್ಲಿ ಸೂಚಿಸಿದ್ದೀರಿ. ಇದು ಸರಿಯೆ ಎನ್ನುವ ಮಾತನ್ನು ಕೇಳಬೇಕಾ ಗುತ್ತದೆ.

ಶ್ರೀ ಎನ್. ಹಂಚ್ಚಮಾಸ್ತಿ ಗೌಡ.—ಮಾನ್ಯ ಸದಸ್ಯರಿಗೆ ಗೊತ್ತಿರಬಹುದು ೧೯೬೯-೬೦ ರಲ್ಲಿ ಇದನ್ನು ತಂದಾಗ, ಆ ಕಾನೂನಿನಲ್ಲೂ ೧೦ ಮೈಲಿ ಮಿತಿ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ಅಂಥ ತಪ್ಪನ್ನು ಏನಾದರೂ ಅವರು ಮಾಡಿದರೆ ಅದನ್ನು ತಿದ್ದು ಪಡಿ ಮಾಡುವುದಕ್ಕೆ ಈ ಸಭೆಗೆ ಅವಕಾಶವಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದು ಬಿಲ್‌ನಲ್ಲಿ ಇನ್‌ಕ್ಲೂಡ್ ಆಗಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಅದು ಡ್ರಾಪ್ ಆಗಿರಬೇಕು.

ಅಧ್ಯಕ್ಷರು.—ಈಗ ಸಭೆ ಎದ್ದು, ನಾಳೆ ಒಂದು ಗಂಟೆಗೆ ಸೇರುತ್ತದೆ.

The House adjourned at Six of the clock to meet again at one of the clock on Thursday the 17th August 1972.

WD 18350—GPB-550—14-12-73

ಮೈಸೂರು ವಿಧಾನಸಭಾ

MYSORE LEGISLATIVE ASSEMBLY

Thurs lay, 17th August 1972/Shravana 26, 1894 S.E.

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(To which oral Answers were given)

MADAM SPEAKER.—Question Number 264 and No. 333 will be takenup afterwards as the Hon. Ministers are not present.

REVENUE DERIVED FROM INLALD FISHERIES

446. SRI S. KARIYAPPA (Kanakapura).—

Will the Minister of State for Fisheries be pleased to state.—

(*a*) whether the Government have any effective arrangements to improve the inland fishery ;

(*b*) the names of the various schemes they have prepared in this regard ;

(*c*) the cost each of these schemes ;

(*d*) the revenue they have been obtaining from inland fishery?

SRI K. T. RATHOD (Minister of State for Fisheries).—

(*a*) Yes.

(*b*) The various schemes implemented in this regard are as follows :—

1. Fish seed production, rearing and distribution.
2. Establishment of Regional fish seed production farms.
3. Applied Nutrition Programme.
4. Intensive development of Fisheries in Community Development Blocks.

5. Development and Exploitation of Reservoir and Lake Fisheries.

6. Construction of fish nurseries.

7. Fisheries education and training.

8. Organisation of Fisheries Co-operatives and Marketing and grant of Financial assistance, *i. e.* share capital contribution, managerial cost.

9. Supply of fishery requisities.

10. Fishermen's Welfare Programme.

(c) The amount provided under each of these schemes in the current year is as follows :—

	Name of the Schemes.	*Amount Rs.*
1.	Fish seed production, rearing and distribution.	4,00,000
2.	Establishment of Regional Fish seed production farms.	2,00,000
3.	Applied Nutrition Programme, and	
4.	Intensive Development of Fisheries in Community Development Blocks. Grant-in-aid.	8,00,000 3,00,000
5.	Development and exploitation of reservoir and lake fisheries.	2,00,000
6.	Construction of fish nurseries.	7,00,000
7.	Firheries education and training.	2,50,000
8.	Organisation of Fisheries Co-operatives and grant of financial assistance.	2,00 000
9.	Supply of fishery requisites.	1,00,000
10.	Fishermen's Welfare Programme.	1,00,000

(d) The revenue obtained from inland fisheries during the past 3 years was as follows :—

1969—70	...	Rs.	6,59,214—00
1970—71	...	Rs.	12,12,140—00
1971—72	...	Rs.	14,96,876—00

ಶ್ರೀ ಎಸ್. ಕರಿಯಪ್ಪ.—(ಡಿ)ಗೆ ಉತ್ತರವಾಗಿ ಪ್ರಾದೇಶಿಕ ಮೀನು ಉತ್ಪಾದನಾ ಕೇಂದ್ರಗಳ ಸ್ಥಾಪನೆ ಮಾಡಿದ್ದೀರೆಂದು ಹೇಳಿದ್ದೀರಿ. ಅವುಗಳನ್ನು ಎಲ್ಲೆಲ್ಲಿ ಮಾಡಿದ್ದೀರಿ ?

† ಶ್ರೀ ಕೆ. ಟಿ. ರಾಥೋಡ್.—ಒಂದು ಭದ್ರಾ ಪ್ರಾಜೆಕ್ಟಿನಲ್ಲಿ, ಇನ್ನೊಂದು ವಾಣಿ ವಿಲಾಸ ಸಾಗರದಲ್ಲಿ.

ಶ್ರೀ ಎಸ್. ಕರಿಯಪ್ಪ —ಆ ಮೇಲೆ ಫಿಶರೀಸ್ ಕೋಪರೇಟಿವ್ ಸೊಸೈಟಿಗಳ ಬಗ್ಗೆ ಹೇಳಿದ್ದೀರಿ. ಅವುಗಳು ಸರಿಯಾಗಿ ನಡೆಯುತ್ತಿವೆಯೋ ಇಲ್ಲವೇ ಎಂದು ನೋಡಿಕೊಳ್ಳುತ್ತಿದ್ದೀರಾ ?

ಶ್ರೀ ಕೆ. ಟಿ ರಾಥೋಡ್.—ಅವುಗಳು ಸರಿಯಾಗಿ ನಡೆಯುತ್ತಿಲ್ಲವೆಂದು ಸರ್ಕಾರದ ಗಮನಕ್ಕೆ ಯಾವ ದೂರುಗಳೂ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪ.—೬೯-೭೦ರಲ್ಲಿ ೬ ಲಕ್ಷ ಚಿಲ್ಲರೆ ಉತ್ಪನ್ನ ಬಂದಿದೆ, ೭೦-೭೧ರಲ್ಲಿ ೧೨ ಲಕ್ಷ ಚಿಲ್ಲರೆ ಇದೆ, ಮತ್ತು ೭೧-೭೨ರಲ್ಲಿ ೧೪ ಲಕ್ಷ ಚಿಲ್ಲರೆ ಉತ್ಪನ್ನ ಬಂದಿದೆ ಎಂದು ಹೇಳಿದ್ದೀರಿ. ಇದಕ್ಕೆ ಕರೆಸ್ಪಾಂಡಿಂಗ್ ಆಗಿ ಆ ವರ್ಷಗಳಲ್ಲಿ ಎಷ್ಟು ಖರ್ಚಾಗಿದೆ ಎಂದು ತಿಳಿಸುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.—ಅದರ ಡಿಟೈಲ್ಸ್ ಬಗ್ಗೆ ಮಾಹಿತಿ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಉತ್ತರದಲ್ಲಿ ಮೀನುಗಾರಿಕೆಗೆ ಅವಶ್ಯಕವಾದ ಸಾಮಾನುಗಳನ್ನು ಒದಗಿಸಲು ಒಂದು ಲಕ್ಷ ಚಿಲ್ಲರೆ ಹಣ ಮತ್ತು ಬೆಸ್ತರ ಕಲ್ಯಾಣಕ್ಕಾಗಿ ಒಂದು ಲಕ್ಷ ಹಣ ಒದಗಿಸಲಾಗಿದೆ ಎಂದು ಹೇಳಿದ್ದೀರಿ. ಇವೆರಡು ಕಾರ್ಯಕ್ರಮಗಳಲ್ಲಿ ಏನೇನು ಕಾರ್ಯಕ್ರಮಗಳು ಒಳಗೊಂಡಿವೆ ಎಂದು ಹೇಳುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.—ಈಗಾಗಲೇ ಬೆಸ್ತರ ಕುಟುಂಬಗಳಿಗೆ ಸಹಾಯಧನವೆಂದು ಹೇಳಿ ಕೊಡುತ್ತಿದ್ದೇವೆ. ಸರ್ಕಾರದವರು ಮಂಜೂರು ಕೊಟ್ಟ ಪ್ರಕಾರ ಎರಡು ಸಾಲುಗಳಲ್ಲಿ ೨೦—೨೦ ಕುಟುಂಬಗಳಿಗೆ ಸಹಾಯಧನವನ್ನು ಕೊಟ್ಟಿದ್ದೇವೆ. ಇದಲ್ಲದೆ ರಸ್ತೆ ಸೌಕರ್ಯ ಮತ್ತು ಮೀನುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದಕ್ಕೆ ಬೇಕಾದ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈ ಫಿಶರೀಸ್ ನರ್ಸರೀಸ್ ಬಗ್ಗೆ ತಾಲೂಕು ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ಎಲ್ಲೆಲ್ಲಿ ಪಾಂಡ್ಸ್‌ಗಳನ್ನು ತಯಾರು ಮಾಡಿದ್ದೀರಿ ? ಅವುಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿದೆಯೋ ; ಮತ್ತು ಅವುಗಳ ಬಗ್ಗೆ ಏನಾದರೂ ದೂರುಗಳು ಬಂದಿವೆಯೋ ?

ಶ್ರೀ ಕೆ. ಟಿ. ರಾಥೋಡ್.—ಫಿಶರೀಸ್ ನರ್ಸರಿ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಎಲ್ಲೆಲ್ಲಿ ಹೇಗೆ ನಡೆಯುತ್ತಿದೆ ಎಂದು ವಿವರವಾಗಿ ಹೇಳಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ —ತಮ್ಮ ಉತ್ತರದಲ್ಲಿ ಒಳನಾಡು ಮೀನುಗಾರಿಕೆಯನ್ನು ಉತ್ತಮ ಪಡಿಸಲು ಪರಿಣಾಮಕಾರಿಯಾದ ವ್ಯವಸ್ಥೆಯನ್ನು ಮಾಡಿದ್ದೀರಾ ಎಂದು ಕೇಳಿದ್ದಕ್ಕೆ ಒಂದು ಪಟ್ಟಿಯನ್ನೇ ಒದಗಿಸಿದ್ದೀರಿ. ಇಂತಹ ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕುಗಳಲ್ಲಿ ಎಷ್ಟು ಕಡೆ ಇಂಟೆನ್ಸಿವ್ ಸ್ಕೀಮು ಗಳನ್ನು ಮಾಡಿದ್ದೀರಿ ಮತ್ತು ಅವುಗಳು ಎಷ್ಟು ಮಟ್ಟಿಗೆ ಸಕ್ಸೆಸ್‌ಫುಲ್ ಆಗಿದೆ ?

ಶ್ರೀ ಕೆ. ಟಿ. ರಾಥೋಡ್.—ಎಲ್ಲವೂ ಸಕ್ಸೆಸ್‌ಫುಲ್ ಆಗಿ ನಡೆಯುತ್ತದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ ಈ ಕಾರ್ಯಕ್ರಮ ೭೮ ಬ್ಲಾಕುಗಳಲ್ಲಿ ನಡೆಯುತ್ತಿವೆ. ಜೊತೆಗೆ ೪೭೫ ವಿಲೇಜ್ ಪಂಚಾಯಿತಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾ ಇವೆ.

ಶ್ರೀ ಅಂದಾನಯ್ಯ.—ಬೆಸ್ತರ ಕಲ್ಯಾಣಕ್ಕಾಗಿ ಏನೇನು ಸೌಲಭ್ಯಗಳನು ಒದಗಿಸಿಕೊಟ್ಟಿದ್ದೀರಿ ?

ಶ್ರೀ ಕೆ. ಟಿ. ರಾಥೋಡ್.—ನಾನಾಗಲೇ ಹೇಳಿದ ಹಾಗೆ ನಾವು ಬನ್ನೂರು ಎನ್ನುವಲ್ಲಿ ಒಂದು ನೂರು ಕುಟುಂಬಗಳಿಗೆ ಸೌಲಭ್ಯವನ್ನು ಕೊಡುವ ಯೋಜನೆ ಹಾಕಿಕೊಂಡಿದ್ದೇವೆ. ಅವರಿಗೆ ಕೊಡುವ ಸೌಕರ್ಯಗಳು ಈ ರೀತಿ ಇವೆ: ೧. ಪುಕ್ಕಟೆಯಾಗಿ ಮನೆಕಟ್ಟುವುದಕ್ಕೆ ಜಾಗ ಕೊಡುವುದು ; ೨. ಆ ಮೇಲೆ ೪೨೦ ರೂಪಾಯಿ ಮನೆ ಕಟ್ಟಿಕೊಳ್ಳುವುದಕ್ಕೆ ಕೊಡುವುದು ; ೩. ೪೦೦ ರೂಪಾಯಿ ಮೀನಿನ ಬಲೆಗಳನ್ನು ಮತ್ತು ಇತರ ಉಪಕರಣಗಳನ್ನು ತೆಗೆದು ಕೊಳ್ಳುವುದಕ್ಕೆ ಕೊಡುವ ಅವಕಾಶ ಇದೆ. ಅದಲ್ಲದೆ ಅವರಿಗೆ ಕಮ್ಯೂನಿಟಿ ಹಾಲ್ ಮತ್ತಿತರ ಸೌಕರ್ಯಗಳನ್ನು ಕೊಡುವುದಕ್ಕೆ ಸಹ ಯೋಜನೆಯಲ್ಲಿ ಅವಕಾಶ ಇದೆ.

---

† Astricks indicate that remarks or speeches have not been revised by the member concerned.

ಶ್ರೀ ಸಿ. ಬೈರೇಗೌಡ.—(ಸಿ)ಗೆ ಉತ್ತರ ಕೊಟ್ಟಿರುವ ಪ್ರಕಾರ ಜಿಲ್ಲಾವಾರು ಕೇವಲ ಒಂದೆರಡು ಕಡೆಗಳಲ್ಲಿ ಮಾತ್ರ ಈ ಸೌಕರ್ಯ ಕೊಟ್ಟಿದ್ದೀರೆಂದು ಕಾಣುತ್ತದೆ. ಇದು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಆಗಬೇಕಾದುದು ಅವಶ್ಯಕತೆ ಇದೆ. ಎಲ್ಲಾ ತಲ್ಲೂಕುಗಳಿಗೂ ಈ ಯೋಜನೆಯನ್ನು ಅಳವಡಿಸಿ ಕಾರ್ಯಗತ ಮಾಡುವುದು ಯೋಗ್ಯವಲ್ಲವೇ ? ಮತ್ತು ಈಗ ಮೀನಿನ ಮರಿ ಬೆಲೆಯು ಕೆಲವು ಕಡೆಗಳಲ್ಲಿ ಕೇವಲ ೫ ಪೈಸೆ ಅಂದರೆ ಒಂದು ಸಾವಿರಕ್ಕೆ ೫೦ ರೂಪಾಯಿಗಳಾಗುತ್ತದೆ. ಇನ್ನು ಕೆಲವು ಕಡೆಗಳಲ್ಲಿ ೧೦೦ ರೂಪಾಯಿಗಳು ಇದೆ. ಹೀಗೆ ಎರಡಕ್ಕೂ ವ್ಯತ್ಯಾಸವಿದೆ ಆದ್ದರಿಂದ ಎಲ್ಲಾ ಕಡೆಗಳಲ್ಲಿಯೂ ಸಾವಿರಕ್ಕೆ ೫೦ ರೂಪಾಯಿಗಳಂತೆ ಅವನ್ನು ಮಾರಲು ತಕ್ಕ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.—ಮೊದಲನೆಯ ಪ್ರಶ್ನೆಗೆ ಉತ್ತರ ಹೇಳುವುದಾದರೆ, ಸರ್ಕಾರದ ಈಗಿನ ಯೋಜನೆಯ ಪ್ರಕಾರ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ ಈ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದಿದೆ. ಆದರೆ ನಮಗೆ ಈಗ ಹಣದ ಅಭಾವವಿರುವುದರಿಂದ ನಾವು ಈ ಯೋಜನೆಯನ್ನು ಹಂತಹಂತವಾಗಿ ತೆಗೆದುಕೊಳ್ಳುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಅದೂ ಅಲ್ಲದೆ ನಮಗೆ ಈಗ ಪ್ರಮುಖವಾಗಿ ಕೊರತೆ ಇರುವುದು ಮೀನಿನ ಮರಿಗಳು ಸಾಕಷ್ಟು ಲಭ್ಯವಾಗುತ್ತಿಲ್ಲ. ನಮಗೆ ಈಗ ೨೦ ಕೋಟಿ ಮೀನುಗಳು ಬೇಕಾಗಿವೆ ನಮ್ಮ ಈಗಿನ ಪ್ರಯತ್ನದಿಂದ ಕೇವಲ ೪ ಕೋಟಿ ಮೀನಂಗಳು ಮಾತ್ರ ಲಭ್ಯವಾಗುತ್ತಿವೆ. ಆದ್ದರಿಂದ ಈ ಯೋಜನೆಯನ್ನು ವ್ಯಾಪಕವಾಗಿ ಎಲ್ಲಾ ಕಡೆಗೂ ತರಬೇಕಾದರೆ ಇನ್ನೂ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಬಹುಶ: ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲಾ ಕಡೆಗಳಲ್ಲಿಯೂ ಈ ಕಾರ್ಯಕ್ಷೇತ್ರವನ್ನು ಬೆಳೆಸಬಹುದೆಂದು ನಾನು ಹೇಳಬಯಸುತ್ತೇನೆ.

JUNIOR COLLEGES IN THE STATE

513. SRI B. BHASKAR SHETTY (Kaup).—

Will the Minister for Education be pleased to state.—

(*a*) the number of newly started Junior Colleges in the State this year (Districtwise figures may kindly be furnished);

(*b*) the additional expenditure likely to be incurred by the Education Department in this behalf;

(*c*) the number of Higher Secondary Schools previously existing in the State (Districtwise information may kindly be furnished) ?

SRI A. R. BADARINARAYANA (Minister for Education).—

(*a*) 243. High Schools have been converted into Junior Colleges during 1972-73 wherein 2nd year P. U. C. course was introduced;

20 Junior colleges have been permitted to be newly started during 1972-73 wherein it was allowed to introduce 1st Year P. U. C. only (Districtwise information is furnished in the Statement appended).

(*b*) The net expenditure for converting 243 High Schools into Junior Colleges.	About Rs. 52 54,200
The grant required to be given to 21 Junior Colleges started in 1971-72 and 20 Junior Colleges started in 1972-73 (Total—11)	About Rs. 25,50,000
	Rs. 78,04,200

(c) The total number of Higher Secondary Schools already existing *viz.*, 1971-72 in Mysore State .. 312.

(Districtwise information is given in the Statement appended).

Districtwise list showing the newly started Junior Colleges in the Mysore State during the current year.

Districts	The No. of Higher Secondary Schools Converted into Junior Colleges.	In 1972-73 the Junior Colleges started with only P.U.C.
1	3	4
1. Bangalore (City)	6	6
2. Bangalore (Rural area)	8	Nil
3. Belgaum	16	2
4. Bellary	6	Nil
5. Bidar	5	Nil
6. Bijapur	22	1
7. Chickmagalur	8	1
8. Chitradurga	10	Nil
9. Coorg	10	Nil
10. Dharwar	20	4
11. Gulbarga	11	Nil
12 Hassan	6	Nil
13. Kolar	6	Nil
14. Mandya	7	Nil
15. Mysore	15	2
16 North Kanara	14	2
17. Raichur	11	Nil
18. Shimoga	13	Nil
19. South Kanara	38	2
20. Tumkur	11	Nil
	243	20

The Number of Higher Secondary Schools that existed in the Mysore State :—Total 312.

Districtwise List.

1.	Bangalore (City)	...	15
2.	Bangalore (Rural)	...	9
3.	Bellary	...	8
4.	Belgaum	...	25
5.	Bijapur	...	26
6.	Bidar	...	5
7.	Chitradurga	...	10
8.	Chickmagalur	...	8
9	Coorg	...	13
10.	Dharwar	...	31
11.	Gulbarga	...	10
12.	Hassan	...	6
13.	Kolar	...	7
14.	Mysore	...	17
15.	Mandya	...	8
16.	North Kanara	...	20
17.	Raichur	...	10
18.	South Kanara	...	55
19.	Shimoga	...	17
20.	Tumkur	...	12
			412

ಶ್ರೀ ಬಿ. ಭಾಸ್ಕರಶೆಟ್ಟಿ.—(ಅ) ಕೊಟ್ಟಿರುವ ಉತ್ತರದ ಪ್ರಕಾರ ಖಾಸಗೀ ಕಾಲೇಜುಗಳೆಷ್ಟು ಮತ್ತು ಸರ್ಕಾರೀ ಕಾಲೇಜುಗಳೆಷ್ಟು ? ಖಾಸಗಿ ಕಾಲೇಜುಗಳಿಗೆ, ಸರ್ಕಾರದ ಕಾಲೇಜುಗಳಿಗೆ ಕೊಡುವ ಗ್ರಾಂಟ್ ಏನು ?

† ಶ್ರೀ ಎ. ಆರ್. ಬದರಿನಾರಾಯಣ್.—ಖಾಸಗೀ ಕಾಲೇಜುಗಳಿಗೆ ಅಂದರೆ ಒಂದೊಂದು ಜೂನಿಯರ್ ಕಾಲೇಜಿಗೆ ೪೩ ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಖಾಸಗಿ ಕಾಲೇಜಿಗೆ ಸೇಕಡ ೮೦ರಷ್ಟು ಗ್ರಾಂಟ್ ಕೊಡುತ್ತೇವೆ, ಅಂದರೆ ೩೪,೪೦೦ ರೂಪಾಯಿಗಳು ಆಗುತ್ತದೆ. ಇದರಲ್ಲಿ ಖಾಸಗೀ ಕಾಲೇಜುಗಳು—೧೧೬, ಸರ್ಕಾರದ ಕಾಲೇಜುಗಳು—೧೮೯, ಮತ್ತು ಮುನಿಸಿಪಾಲಿಟಿ ಹಾಗೂ ತಾಲ್ಲೂಕು ಬೋರ್ಡ್‌ಗಳದು—೧೭—ಈ ರೀತಿ ಇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಈಗ ಎರಡು ವರ್ಷಗಳ ಪಿ. ಯು. ಸಿ. ಕೋರ್ಸ್ ಆಗಿರುವುದರಿಂದ, ಪಿ.ಯು.ಸಿ. ಕೋರ್ಸಿಗೆ ಸೆಂಟ್ ಪರ್ಸೆಂಟ್ ಗ್ರಾಂಟ್ ಕೊಟ್ಟಿರುವುದರಿಂದ ಖಾಸಗೀ ಕಾಲೇಜುಗಳಿಗೂ ನೂರಕ್ಕೆ ನೂರರಷ್ಟು ಗ್ರಾಂಟ್ ಕೊಡುವುದಕ್ಕೆ ಆಲೋಚನೆ ಮಾಡುತ್ತಿದ್ದೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಆ ರೀತಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಸರ್ಕಾರ ಪ್ರತಿ ವರ್ಷವೂ ಜೂನಿಯರ್ ಕಾಲೇಜಾಗಿ ಕನ್‌ವರ್ಟ್ ಮಾಡುವಂಥ ಶಾಲೆಗಳನ್ನೂ ಮತ್ತು ತಾಲ್ಲೂಕು ಬೋರ್ಡ್ ನಡೆಸುವಂಥ ಕಾಲೇಜುಗಳನ್ನೂ ಸರ್ಕಾರವೇ ತೆಗೆದುಕೊಂಡು ನಡೆಸುವ ಯೋಚನೆ ಸರ್ಕಾರಕ್ಕೇನಾದರೂ ಇದೆಯೇ ?

ಶ್ರೀ ಎ. ಆರ್. ಬದರಿನಾರಾಯಣ್:—ಯಾವ್ಯಾವ ತಾಲ್ಲೂಕು ಬೋರ್ಡ್‌ಗಳು ಅಥವಾ ಮುನಿಸಿಪಾಲಿಟಿಗಳಿಂದ ಸರ್ಕಾರವೇ ತೆಗೆದುಕೊಳ್ಳಬೇಕೆಂದು ಕೇಳಿಕೆ ಬಂದರೆ ಅಂತವುಗಳನ್ನು ತೆಗೆದುಕೊಂಡಿದ್ದೇವೆ. ಆ ರೀತಿ ಬಾರದೇ ಇರುವಂತಹುಗಳನ್ನು ತೆಗೆದುಕೊಂಡಿಲ್ಲ. ವಾಲಂಟರಿಯಾಗಿ ಸರ್ಕಾರ ಆ ರೀತಿಯಾಗಿ ತೆಗೆದುಕೊಳ್ಳುವುದಿಲ್ಲ.

ಶ್ರೀಮತಿ ದಮಯಂತಿ ಬೋರೇಗೌಡ.—ಅನೇಕ ಜೂನಿಯರ್ ಕಾಲೇಜುಗಳಲ್ಲಿ ಲ್ಯಾಬೊರೇಟರಿ ಎಕ್ವಿಪ್‌ಮೆಂಟ್ಸ್ ಸಾಲದಾಗಿದೆ. ವಿದ್ಯಾ ಇಲಾಖೆಯಲ್ಲಿ ಕೇಳಿದರೆ, ಹಣವಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಅವನ್ನು ಒದಗಿಸಲು ತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ಮಾನ್ಯ ಸದಸ್ಯೆಯವರಿಗೇ ಗೊತ್ತಿದೆ. ಇದೆಲ್ಲಾ ಎಷ್ಟು ಕಷ್ಟವಿದೆಯೆಂಬುದು. ಅವರೂ ಸ್ವಲ್ಪ ಸುಧಾರಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಪರಿಶಿಷ್ಟದಲ್ಲಿ ಹೇಳಿರುವ ಪ್ರಕಾರ ಬೆಂಗಳೂರು ರೂರಲ್ ಏರಿಯಾದಲ್ಲಿ ಯಾವ ಒಂದು ಜೂನಿಯರ್ ಕಾಲೇಜನ್ನೂ ಪ್ರಾರಂಭಿಸಿಲ್ಲ. ರೂರಲ್ ಏರಿಯಾದಲ್ಲಿ ಕೆಲವು ಸಿಟಿ ಭಾಗಗಳೂ ಸಹ ಸೇರಿವೆ. ಆದ್ದರಿಂದ ಯಾವ ಒಂದು ಜೂನಿಯರ್ ಕಾಲೇಜನ್ನು ಈ ವರ್ಷ ಪ್ರಾರಂಭ ಮಾಡದೇ ಇರುವುದಕ್ಕೆ ಕಾರಣವೇನೆಂಬುದನ್ನು ತಿಳಿಸಿ ಈಗಲಾದರೂ ಪ್ರಾರಂಭ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್.—ಬೆಂಗಳೂರು ರೂರಲ್‌ನಲ್ಲಿ ಈಗಾಗಲೇ ೮ ಕಾಲೇಜುಗಳು ಇವೆ.

SRI D. B. KALMANKAR.— Out of 312 Higher Secondary Schools, 243 have been converted. I want to know whether the Government is going to convert all other Secondary Schools in the near future ?

SRI A. R. BADRINARAYAN.—When the request comes from those Schools, we will consider.

ಶ್ರೀ ಬಿ. ಭಾಸ್ಕರಶೆಟ್ಟಿ.—ಕಳೆದ ವರ್ಷ ಪಿ. ಯು. ಸಿ.ಗೆ ತಾವು ಸಂಪೂರ್ಣ ಗ್ರಾಂಟ್ ಕೊಟ್ಟಿದ್ದೀರಿ. ಜೂನಿಯರ್ ಕಾಲೇಜಿಗೆ ಸೆಂಟ್‌ಪರ್ಸೆಂಟ್ ಗ್ರಾಂಟ್ ಕೊಡದಿದ್ದರೆ ಅದನ್ನು ನಡೆಸಲು ಸಾಧ್ಯವಿಲ್ಲವೆಂದು ಖಾಸಗಿ ಕಾಲೇಜಿನವರಿಂದ ಏನಾದರೂ ಮನವಿ ಬಂದಿದೆಯೇ ?

ಶ್ರೀ ಎ. ಆರ್. ಬದರೀನಾರಾಯಣ್.—ಆ ರೀತಿ ಅದನ್ನು ಕೊಡುವುದಕ್ಕಾಗುವುದಿಲ್ಲವೆಂದು ನಾನು ಮೊದಲೇ ಹೇಳಿದ್ದೇನೆ. ಅವರಿಗೆ ನಡೆಸುವುದಕ್ಕೆ ಆಗದಿದ್ದರೆ, ಅದನ್ನು ಮುಚ್ಚಬೇಕಾಗುತ್ತದೆ.

UNAUTHORISED OCCUPATIONS OF SHIVAJAMA LANDS

521 SRI R. RACHE GOWDA (Hanur).—Will the Minister for Revenue be pleased to state.—

(a) the number of patta holders who have unauthorisedly occupied Shivajama lands in Kollegal Taluk ;

(b) the extent of land subjected to such occupation ;

(c) whether the Government intends to evict them and arrange to distribute the said lands to the landless ?

SRI N. HUTCHAMASTHY GOWDA (Minister for Revenue).—

(a) 5,108.

(b) 10,111 acres 37 cents.

(c) If the unauthorisedly occupied land is in excess of land holdings permissible under the Government Order such people will be evicted and lands alloted to others.

ಶ್ರೀ ಆರ್. ರಾಚೇಗೌಡ.—(೩) ಪ್ರಶ್ನೆಗೆ ಉತ್ತರವಾಗಿ ಸರ್ಕಾರದ ಹುಕುಂ ಪ್ರಕಾರ ಹಿಡುವಳಿ ಜಮೀನು ಎಷ್ಟು ?

† ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಸರ್ಕಾರದ ಹುಕುಂ ಪ್ರಕಾರ ೧೦ ಎಕರೆ ಖುಷ್ಕಿ, ೨ ಎಕರೆ ಹೆಚ್ಚು ನೀರು ಬರತಕ್ಕ ತರೀ, ಮತ್ತು ಸಾಮಾನ್ಯವಾಗಿ ನೀರು ಒದಗಿಸುವಂಥ ೪ ಎಕರೆ. ಆದರೆ ಇದಕ್ಕಿಂತ ಹೆಚ್ಚಿಗೆ ಭೂಮಿ ಇದ್ದರೆ, ಅದನ್ನು ಬಿಡುಗಡೆ ಮಾಡಿಸಬೇಕೆಂದು ಸರ್ಕಾರದ ಆಜ್ಞೆ ಇದೆ.

ಶ್ರೀ ಆರ್. ರಾಚೇಗೌಡ.—ಹಿಡುವಳಿಯ ಜಮೀನಿಗಿಂತ ಅಂದರೆ ೧೦ ಎಕರೆಗಳಿಗಿಂತ ಜಾಸ್ತಿ ಆಕ್ರಮಿಸಿಕೊಂಡಿರುವವರು ಇದ್ದಾರೆಯೇ ?

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಆ ವಿವರಣೆ ನನ್ನಲ್ಲಿಲ್ಲ. ೧೦ ಎಕರೆಗಿಂತ ಹಿಡುವಳಿ ಹೆಚ್ಚಾಗಿ ಇರುವುದೆಲ್ಲಾ ಮೊಟ್ಟಮೊದಲು ಇತ್ತು. ೧೯೫೯ನೇ ಏಪ್ರಿಲ್ ೧ನೇ ತಾರೀಖಿನವರೆಗೆ ೨೫೦೦ ಜನರು ೫೦೦೯ ಎಕರೆಗಳಷ್ಟು ಆಕ್ರಮಿಸಿಕೊಂಡಿದ್ದರು. ೧ನೇ ಏಪ್ರಿಲ್ ೧೯೫೯ರಿಂದ ೧ನೇ ಜುಲೈ ೧೯೬೪ರವರೆಗೆ ೧೬೭೭ ಜನರು ೩೧೮೪ ಎಕರೆಗಳನ್ನು ಆಕ್ರಮಿಸಿಕೊಂಡಿದ್ದರು. ೧ನೇ ಜುಲೈ ೧೯೬೪ರ ಮೇಲೆ ೬೧೯ ಜನಗಳು ೧೨೭೦ ಎಕರೆ ೧೭ ಸೆಂಟ್ಸ್ ಜಮೀನನ್ನು ಆಕ್ರಮಿಸಿಕೊಂಡಿದ್ದರು.

ಶ್ರೀ ಆರ್. ರಾಚೇಗೌಡ.—ಮಾನ್ಯ ಮಂತ್ರಿಗಳು ವಿವರವಾಗಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಆದರೆ ಅದರಲ್ಲಿ ಹರಿಜನರು ಮತ್ತು ಗಿರಿಜನರು ಎಷ್ಟು ಜನರು ಈ ಜಮೀನುಗಳನ್ನು ಆಕ್ರಮಿಸಿ ಕೊಂಡಿದ್ದಾರೆ. ಅವರಿಗೆ ಸರ್ಕಾರ ಏನು ಪರ್ಸಂಟೇಜ್ ಕೊಡಬೇಕೆಂದು ನಿಗದಿಮಾಡಿದೆಯೋ ಅದರಂತೆ ತೀರ್ಮಾನಮಾಡಿ ಕೊಡುತ್ತೀರಾ ?

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಆ ವಿವರಣೆಯನ್ನು ಇನ್ನೂ ಸಂಗ್ರಹಿಸಿಲ್ಲ.

FACILITIES AVAILABLE FOR STARTING INDUSTRIES IN THIRTHAHALLY AREA

515. SRI KONANDUR LINGAPPA (Thirthahalli).—Will the Minister for Industries be pleased to state.—

whether it has come to the notice of Government that various facilities are available in Thirthahally area for starting industries ?

SRI S. M. KRISHNA (Minister for Industries).—Yes. There is scope for starting wood-based industries, bamboo-based industries, cane furniture industries and Ceramic production.

ಶ್ರೀ ಕೋಣಂದೂರು ಲಿಂಗಪ್ಪ.—ತೀರ್ಥಹಳ್ಳಿ ಕ್ಷೇತ್ರದಲ್ಲಿ ಅಲ್ಲಿಗೆ ಸಂಬಂಧಪಟ್ಟ ಹಾಗೆ ಒಂದು ಕಾರ್ಖಾನೆಯನ್ನು ಆರಂಭಿಸುವುದಾದರೆ, ಸರ್ಕಾರದಿಂದ ಏನೇನು ಸವಲತ್ತುಗಳನ್ನು ಕೊಡುತ್ತಾರೆ ?

† ಶ್ರೀ ಕೆ.ಎಚ್. ಪಾಟೀಲ್.—ಈಗಾಗಲೇ ಸರ್ವೇ ರಿಪೋರ್ಟ್ ಮಾಡಿ, ಯಾರ್ಯಾರು ಸರ್ವೆ ಕೆಲಸ ಮಾಡಿಕೊಂಡಿದ್ದಾರೋ ಅವರು ಯಾವ್ಯಾವ ಉದ್ಯೋಗಗಳ ಸಲುವಾಗಿ ಅಲ್ಲಿ ಫೀಸಿಬಿಲಿಟಿ ಆಗುತ್ತದೆಂಬುದನ್ನು ಕಂಡುಹಿಡಿದಿದ್ದಾರೆ. ಅವರ ಒಂದು ವರದಿ ಪ್ರಕಾರ ಉತ್ತರದಲ್ಲಿ ಹೇಳಿರುವ ಕಾರ್ಖಾನೆಗಳ ಜೊತೆಗೆ ವುಡನ್ ಡೋರ್ಸ್, ಪ್ಯಾಕಿಂಗ್ ಕೇಸಸ್, ಎಲೆಕ್ಟ್ರಿಕಲ್ ಕೇಸಸ್, ಫೋಟೋ ಫ್ರೇಂ, ಡ್ರಾಯಿಂಗ್ ಕಾರ್ಡ್ಸ್, ಟೀ ಸ್ಕ್ವೇರ್—ಇತ್ಯಾದಿ ಕೈಗಾರಿಕೆಗಳನ್ನು ಅಲ್ಲಿ ಪ್ರಾರಂಭಮಾಡುವುದಕ್ಕೆ ಸಾಧ್ಯತೆ ಇದೆಯೆಂದು ಕಂಡುಬಂದಿದೆ. ಅವನ್ನು ಅಲ್ಲಿ ಷುರು ಮಾಡುವುದಾದರೆ ಅವರಿಗೆ ಬೇಕಾದಂಥ ರಾ-ಮೆಟೀರಿಯಲ್ಸ್ ಬಗ್ಗೆ ವಿಚಾರಮಾಡಿ ಕೊಡಲಾಗುತ್ತದೆ. ಅವರಿಗೆ ಬೇಕಾದಂಥ ಸಾಲವನ್ನು ಕೊಡುವುದಕ್ಕೂ ಪ್ರಯತ್ನ ಮಾಡುತ್ತೇವೆ. ಅಲ್ಲಿ ಸದ್ಯಕ್ಕೆ ಇವೆಲ್ಲಕ್ಕಿಂತ ಹೆಚ್ಚಿಗೆ ಪ್ರೋತ್ಸಾಹ ಕೊಡುವ ಅವಶ್ಯಕತೆ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿ ತೀರ್ಥಹಳ್ಳಿಯಲ್ಲಿ ಏನೊಂದು ಪರಿಸ್ಥಿತಿ ಇದೆಯೋ ಅದೇ ಪರಿಸ್ಥಿತಿ ಇರತಕ್ಕಂಥ ಅಕ್ಕಪಕ್ಕದ ತಾಲ್ಲೂಕುಗಳಿಗೂ ಈಗ ತಾವು ಹೇಳಿದ ರಿಯಾಯಿತಿಗಳು ಲಭಿಸುತ್ತವೆಯೋ ?

ಶ್ರೀ ಕೆ. ಎಚ್. ಪಾಟೀಲ್.—ಇದು ಇಡೀ ರಾಜ್ಯಕ್ಕೆ ಅನ್ವಯಿಸತಕ್ಕ ಅರ್ಜಿ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಬ್ಯಾಂಬೂ ಪಲ್ಪ್ ಇಂಡಸ್ಟ್ರಿಯನ್ನು ಪ್ರಾರಂಭಮಾಡಲು ತಾತಾ ಕಂಪೆನಿಯವರು ಅಪ್ಲಿಕೇಷನ್ ಹಾಕಿಕೊಂಡಿದ್ದಾರೆಂದೂ ಅದು ಸರ್ಕಾರದವರ ಪರಿಶೀಲನೆಯಲ್ಲಿದೆಯೆಂದೂ ವರ್ತಮಾನ ಇದೆ ಇದರ ನಿಜಾಂಶವೇನು ?

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದವರಲ್ಲಿ ಇದರ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಮಾನ್ಯ ಸದಸ್ಯರೇನಾದರೂ ಮಾಹಿತಿ ಕೊಟ್ಟರೆ ಪರಿಶೀಲನೆ ಮಾಡುತ್ತಾರೆಂದು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ ; ಇದರ ಬಗ್ಗೆ ಸೂಕ್ತ ಕ್ರಮ ಕೂಡ ಕೈಗೊಳ್ಳಲಾಗುತ್ತದೆ.

ಶ್ರೀ ಅಬ್ದುಲ್ ಖುದ್ದೂಸ್ ಅನ್ವಾರ್.—ತಾವು ಇಲ್ಲಿ ಬೊಂಬನ್ನು ಉಪಯೋಗಿಸುವುದಕ್ಕೆ ಅಜ್ಞೆ ಮಾಡಿದೆ ಎಂದು ಹೇಳಿದರೂ ಅಲ್ಲಿ ಸ್ಥಳೀಯ ಅಧಿಕಾರಿಗಳು ಬೊಂಬನ್ನು ಕಡಿಯಲಿಕ್ಕೆ ಅವಕಾಶ ಕೊಡುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದವರು ಯಾವಾಗಲೂ ಕೊಡುವುದಿಲ್ಲವೆಂದು ಹೇಳುತ್ತಿಲ್ಲ. ಆದರೆ ಅಲ್ಲಿ ಜನರು ತಾವೇ ಬಿದಿರನ್ನು ಕಡಿಯುವುದಕ್ಕೆ ಪರವಾನಿಗೆ ಕೇಳಿದ್ದರಿಂದ ಅಲ್ಲಿ ಬಿದಿರು ಈಗ ತಾನೆ ಚಿಗರೊಡೆಯುತ್ತಿರುವುದರಿಂದ ಅವರಿಗೆ ಪರವಾನಿಗೆ ಕೊಟ್ಟಿಲ್ಲ. ಅದಕ್ಕೆ ಸರ್ಕಾರದವರೇ ತಂದು ಜನಕ್ಕೆ ಒದಗಿಸುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಯಾವ ಮರಗಳನ್ನು ಯಾವ ರೂಪದಲ್ಲಿ ಯಾವ ಕೈಗಾರಿಕೆಗಳಿಗೆ ಸರ್ಕಾರದವರು ಹೇಗೆ ಒದಗಿಸುತ್ತಾರೆ ?

ಶ್ರೀ ಕೆ. ಎಚ್. ಪಾಟೀಲ್.—ಅದಕ್ಕೆ ಉತ್ತರ ಕೊಡಬೇಕಾದರೆ ಒಟ್ಟು ೩ ಸಾವಿರ ಮರಗಳಿವೆ. ಯಾವ ಮರ, ಯಾವ ಕೈಗಾರಿಕೆಗೆ ಬರುತ್ತದೆಂಬುದನ್ನು ತಿಳಿಸುವುದಕ್ಕೆ ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಇಂಥ ನಿರ್ದಿಷ್ಟ ಕೈಗಾರಿಕೆಗೆ ಯಾವ ಮರ ಒದಗಿಸುತ್ತೀರಾ ಎಂದರೆ ಅದಕ್ಕೆ ಉತ್ತರ ಹೇಳಬಹುದು.

MAHAJAN COMMISSION'S REPORT

604. SRI D. B. KALMANKAR (Afzalpur).—Will the Chief Minister be pleased to state:—

(a) whether Government has received any communication from the Government of India regarding implementation of the Mahajan Commission's Report ;

(b) whether status-quo is proposed to be maintained in the respective States ?

SRI K. H. PATIL (Minister for Agriculture and Forests) (On behalf of Sri D. Devaraj Urs (Chief Minister).—

(a) No.

(b) This Government has not made any proposal.

SRI D. B. KALMANKAR.—May I know whether the Central Government has made any proposal to this Government for maintaining the status quo, Sir ?

† SRI K. H. PATIL.—I have already stated that there is no proposal received from the Centre.

SRI D. B. KALMANKAR.—May I know whether this Government has urged the Central Government for the implementation of the Mahajan Commission Report recently, Sir ?

SRI K. H. PATIL.—Definitely. In view of the resolution of this House, it is the duty of the State Government to request the Central Government to implement it.

SRI B. B. SAYANAK.—May I know whether it is a fact that the Chief Minister of Maharashtra and the Chief Minister of Mysore have entrusted the Maharashtra-Mysore border dispute to the Prime Minister ? This has been stated by the Union Deputy Minister for Home, in the Lok Sabha, last week.

SRI K. H. PATIL.—As I know, the matter has been entrusted to the Parliament and the Parliament is seized of the matter.

ಶ್ರೀ ಎಂ. ಎಸ್. ಕೃಷ್ಣನ್.—ತಾವೇನೋ ಇಲ್ಲಿ ಹೀಗೆ ಇಲ್ಲಿ ಉತ್ತರವನ್ನು ಕೊಡುತ್ತೀದ್ದೀರಾ. ಆದರೆ ಪತ್ರಿಕೆಗಳಲ್ಲಿ ರೈಲ್ವೆ ಲೈನ್, ಇಲ್ಲವೇ ಬಸ್ ರೋಡನ್ನು ಅನುಸರಿಸಿ ಏನೋ ಒಂದು ಗಡಿ ನಿರ್ಧಾರ ಮಾಡಬೇಕೆಂಬುದಾಗಿ ವಿಚಾರ ನಡೆಯುತ್ತಿದೆ ಎಂದು ವರದಿಗಳು ಬರುತ್ತಿವೆ. ಅವರ ಬಗ್ಗೆ ಏನು ಏನು ಹೇಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಈ ಮಾನ್ಯ ಸಭೆಯ ಸದಸ್ಯರು ಪಾಸ್ ಮಾಡಿದ ಠರಾವಕ್ಕಿಂತ ನಾನು ಪತ್ರಿಕೆಗಳ ವರದಿಗೆ ಅಷ್ಟು ಮಹತ್ವ ಕೊಡಲಾರೆ.

SRI D. B. KALMANKAR.—May I know whether it is a fact that the Chief Minister of Maharashtra is pleading with the Prime Minister that she should arbitrate in this matter ?

SRI K. H. PATIL.—I have no information about it.

OFFICIALS IN THE OFFICE OF THE REGISTRAR OF CO-OPERATIVE SOCIETIES, BANGALORE.

657. SRI M. B. RAMASWAMY (Anekal).—Will the Minister for Co-operation be pleased to state.—

(a) the number of officials working in the Office of the Registrar of Co-operative Societies (Head office) Bangalore since 10 years;

(b) of them, how many are continuing in the same office after promotion;

(c) the reasons for keeping such officers in the same office for more than ten years;

(d) whether there are any allegations against such officers ?

SRI A. SHANKARA ALVA (Minister for Co-operation).—

(a) 30.

(b) All except one.

(c) In the interest of office work.

(d) No.

ಶ್ರೀ ಎಂ. ಬಿ. ರಾಮಸ್ವಾಮಿ —ಇಲ್ಲಿ (ಎ) ಪ್ರಶ್ನೆಗೆ ಉತ್ತರವಾಗಿ ೩೦ ಜನರು ಎಂದು ತಿಳಿಸಲಾಗಿದೆ. ಇಷ್ಟು ಜನರನ್ನು ಇಲ್ಲಿ ೧೦ ವರ್ಷಗಳ ಕಾಲ ಒಂದೇ ಜಾಗದಲ್ಲಿ ಇಡತಕ್ಕಂಥ ಪ್ರಮೇಯ ವೇನಿತ್ತು ?

ಶ್ರೀ ಎ. ಶಂಕರ ಆಳ್ವ.—೪ ವರ್ಷಕ್ಕೆ ಮೇಲ್ಪಟ್ಟು ಯಾರೂ ಒಂದು ಸ್ಥಳದಲ್ಲಿ ಇರಬಾರದೆಂಬ ಒಂದು ಸರ್ಕಾರಿ ಆಜ್ಞೆ ಇದೆ. ಆದರೆ ಹೆಡ್ಡಾಫೀಸಿನಲ್ಲಿ ಒಂದು ವಿಶೇಷವಾದ ಡೆವಲಪ್‌ಮೆಂಟಲ್ ವರ್ಕ್ ಇದ್ದುದರಿಂದ ಅದರ ಬಗ್ಗೆ ವಿಶೇಷ ಮಾಹಿತಿಯುಳ್ಳ ಜನರು ಬೇರಾರೂ ಇಲ್ಲದಿದ್ದ ಕಾರಣ ಅವರನ್ನು ಅನಿವಾರ್ಯವಾಗಿ ಇಟ್ಟುಕೊಳ್ಳಲಾಗಿತ್ತು. ಇತ್ತೀಚೆಗೆ ಕೆಲವರು ಹೊಸಬರನ್ನು ಇಲ್ಲಿಗೆ ತೆಗೆದುಕೊಂಡು ಅವರಿಗೆ ತರಬೇತಿ ಕೊಟ್ಟು ಇವರನ್ನು ವರ್ಗ ಮಾಡುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಅಂಥ ವಿಶೇಷ ಕಾರಣಗಳೇನು ಇದ್ದವು ?

ಶ್ರೀ ಎ ಶಂಕರ ಆಳ್ವ —ಕೆಲವು ಡೆವಲಪ್‌ಮೆಂಟಲ್ ಮಾಹಿತಿಯುಳ್ಳ ಅಂದರೆ ಅದು ವಿಶೇಷ ಮಾಹಿತಿಯುಳ್ಳ ಜನರು ಬೇಕಾಗಿದ್ದರು. ಅದಕ್ಕಾಗಿ ಅವರನ್ನು ಅನಿವಾರ್ಯವಾಗಿ ಇಟ್ಟುಕೊಳ್ಳಲಾಗಿತ್ತು.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ೩೦ ಜನರಲ್ಲಿ ಗೆಜೆಟೆಡ್ ಎಷ್ಟು ; ನಾನ್ ಗೆಜೆಟೆಡ್ ಎಷ್ಟು ?

ಶ್ರೀ ಎ. ಶಂಕರ ಆಳ್ವ.—ಕ್ಲಾಸ್ (೨) ೯ ಜನರು ; ಕ್ಲಾಸ್ (೩) ೨೧ ಜನರು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ತಾವು ಹೇಳಿದ ವಿಶೇಷ ತರಬೇತಿ ಪಡೆದ ಜನ ಇನ್ನೆಲ್ಲಿಯೂ ಸಿಕ್ಕುವುದಿಲ್ಲವೋ ?

ಶ್ರೀ ಎ. ಶಂಕರ ಆಳ್ವ.—ಆ ಜನರಲ್ಲಿ ಕೆಲವರು ಪೆನ್‌ಷನ್ ಆಗತಕ್ಕವರಿದ್ದರು, ಇನ್ನು ಕೆಲವರು ಸೀಕಾಗಿದ್ದರು. ಮತ್ತು ಅಲ್ಲಿ ಸ್ಪೆಷಲ್ ಡೆವಲಪ್‌ಮೆಂಟಲ್ ವರ್ಕಿಗೆ ವಿಶೇಷ ಮಾಹಿತಿಯುಳ್ಳ ಜನ ಬೇಕಾಗಿತ್ತು. ಈ ಅನೇಕ ಕಾರಣಗಳಿಂದ ಅವರನ್ನು ಇಟ್ಟು ಕೊಳ್ಳಲಾಗಿತ್ತು. ಈಗ ಇವರಲ್ಲು ಕೆಲವರನ್ನು ವರ್ಗ ಮಾಡುತ್ತಿದೆ.

ಒಬ್ಬ ಮಾನ್ಯ ಸದಸ್ಯರು.—ವರ್ಗದ ವಿಚಾರದಲ್ಲಿ ಕೆಲವರಿಗೆ ರಿಯಾಯಿತಿಗಳನ್ನು ತೋರಿಸುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಶಂಕರ ಆಳ್ವ.—ಕೆಲವು ಮಟ್ಟಿನ ರಿಯಾಯಿತಿಗಳನ್ನು ಕೊಡಲಿಕ್ಕೆ ಸಾಧ್ಯ ಇದೆ.

ಶ್ರೀ ಎಂ. ಬಿ. ರಾಮಸ್ವಾಮಿ —ಹೀಗೆ ಒಂದೇ ಕಡೆಯಲ್ಲಿ ಕೆಲವರನ್ನು ೧೦—೧೨ ವರ್ಷ ಇಟ್ಟರೆ ಅವರಿಂದ ಜನರಿಗೆ ಹೆಚ್ಚಿನ ತೊಂದರೆಯಾಗುವುದಿಲ್ಲವೇ ? ಅದನ್ನು ತಪ್ಪಿಸಲು ಸರ್ಕಾರ ಕೈಗೊಳ್ಳತಕ್ಕ ಮಾರ್ಗ ಬೇರೆ ಇವೆಯೋ ?

ಶ್ರೀ ಎ. ಶಂಕರ ಆಳ್ವ —ಹೆಚ್ಚು ಸಮಯ ಹಾಗೆ ಯಾರನ್ನೂ ಇಡಲಿಕ್ಕಿಲ್ಲ. ವಿಶೇಷ ಕಾರಣಕ್ಕಾಗಿ ಇವರನ್ನು ಅಲ್ಲಿ ಇಡಲಾಗಿತ್ತು.

NON-PAYMENT OF SALARIES TO WORKERS OF MANGALORE CITY MUNICIPALITY

685. SRI B. V. KAKKILAYA (Buntwal).—

Will the Minister for Municipal Administration be pleased to state.—

(*a*) whether since March, 1972 payment of salary and allowances to the substitute sanitary and gang workers of Mangalore City Municipality was discontinued and instead a system of the payment of daily wages of Rs. 3-75 was introduced;

(*b*) whether it has come to the notice of Government that a substitute worker who put in full attendance for a month loses to the extent of Rs. 65 per month as a result of this change over;

(*c*) whether Government has authorised this change;

(*d*) if not, whether there is any proposal to restore the original system of payments?

SRI B. BASAVALINGAPPA (Minister for Municipal Administration.)

(*a*) Yes, from 1st July 1972.

(*b*) Yes.

(*c*) No.

(*d*) Under consideration.

ಶ್ರೀ ಬಿ. ವಿ. ಕಕ್ಕಿಲಾಯ.—(ಈ) ಪ್ರಶ್ನೆಗೆ ಉತ್ತರವಾಗಿ ಪರಿಶೀಲನೆಯಲ್ಲಿದೆ ಎಂದು ತಿಳಿಸಿದೆ. ಪರಿಶೀಲನೆಯಾಗಿ ತೆಗೆದುಕೊಂಡ ಕ್ರಮದ ಬಗ್ಗೆ ವಿವರ ತಿಳಿಸುವಿರಾ ?

‡ ಶ್ರೀ ಬಿ. ಬಸವಲಿಂಗಪ್ಪ.—ಡಿವಿಜನಲ್ ಕಮೀಷನರಿಗೆ ಕಾಗದ ಬರೆದಿದೆ. ಮಂಗಳೂರು ಮುನಿಸಿಪಾಲಿಟಿಯಲ್ಲಿ ಮಾತ್ರ ಹೀಗೆ ಮಾಡುತ್ತಿದ್ದಾರೆ, ಅಲ್ಲಿ ಕೆಲಸಗಾರರಿಗೆ ಹಂಗಾಮಿಯಾಗಿ ತೆಗೆದುಕೊಂಡು ಅನ್ಯಾಯ ಮಾಡುತ್ತಿದ್ದಾರೆ, ಹಾಗೆ ಮಾಡಬಾರದು, ಅವರನ್ನು ಖಾಯಮಾಗಿ ನೇಮಿಸಿಕೊಂಡು ಅವರಿಗೆ ಎಲ್ಲ ಸೌಲಭ್ಯ ಕೊಡಬೇಕೆಂದು ನಿರ್ದೇಶ ಕೊಡಲಾಗಿದೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸಬೇಕು ಬದಲಿ ಪದ್ಧತಿ ಮಂಗಳೂರಿನಲ್ಲಿ ಮಾತ್ರ ಇದೆ, ಮೈಸೂರಿನಲ್ಲಿ ಇನ್ನೆಲ್ಲೂ ಇಲ್ಲ. ಈ ಪದ್ಧತಿಯನ್ನು ಆದಷ್ಟು ಜಾಗ್ರತೆ ಕೊನೆಗಾಣಿಸಬೇಕು ಎಂಬುದು ನಮ್ಮ ಉದ್ದೇಶವಾಗಿದೆ.

1-30 P.M.

ಶ್ರೀ ಬಿ. ವಿ. ಕಕ್ಕಿಲಾಯ.—ಕೆಲಸಗಾರರಿಗೆ ಕೂಲಿ ಕಡಿತವಾಗಿರುವುದನ್ನು ಭರ್ತಿ ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಬಿ. ಬಸವಲಿಂಗಪ್ಪ.—ಸರಕಾರದ ನಿಲುವನ್ನು ನಾನು ಸ್ಪಷ್ಟಪಡಿಸಿದ್ದೇನೆ. ಈ ರೀತಿಯಾಗಿ ಹಂಗಾಮಿಯಾಗಿ ಕೆಲಸಕ್ಕೆ ತೆಗೆದುಕೊಳ್ಳುವುದು ಸರಿಯಲ್ಲ, ಖಾಯಮಾಗಿ ತೆಗೆದುಕೊಳ್ಳಬೇಕು, ಜಾಗಗಳು ಖಾಲಿ ಬಿದ್ದಾಗ ಹಂಗಾಮಿಯಾಗಿ ತೆಗೆದುಕೊಂಡಿರುವವರನ್ನು ಆ ಜಾಗದಲ್ಲಿ ಖಾಯಂ ಮಾಡಬೇಕು ಎಂದು ನಿರ್ದೇಶನ ಕೊಡಲಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಮಂಗಳೂರು ನಗರಸಭೆ ನಿರ್ಮೂಲೀಕರಣದ ತಂಡದವರಿಗೆ ಯಾವ ರಕ್ಷಣೆಯೂ ಇಲ್ಲ. ಈ ವಿಚಾರದಲ್ಲಿ ಅನೇಕ ಸಾರಿ ಹೇಳಿದೆ. ಒಂದು ಯೂನಿಫಾರಂ ರೂಲ್ಸ್ ಮಾಡಿ ನಾಲ್ಕನೆ ದರ್ಜೆಯವರಿಗೆ ಸರಿಯಾದ ರಕ್ಷಣೆ ಕೊಡುವಿರಾ ?

ಅಧ್ಯಕ್ಷರು.—ಅದಕ್ಕೆ ಆಗಲೇ ಉತ್ತರ ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್—ಕೆಲಸಗಾರರಿಗೆ ಹೊಸ ಪದ್ಧತಿಯಿಂದ ತಿಂಗಳಿಗೆ ೬೫ ರೂಪಾಯಿ ಖೊತಾ ಬೀಳುವುದನ್ನು ತಪ್ಪಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಬಿ. ಬಸವಲಿಂಗಪ್ಪ.—ಸರಕಾರದ ನಿಲುವನ್ನು ನಾನು ಸ್ಪಷ್ಟಪಡಿಸಿದ್ದೇನೆ. ಮುಂದೆ ಹೀಗಾಗದಂತೆ ನಾವು ನೋಡಿಕೊಳ್ಳುತ್ತೇವೆ.

LOSS OF PROPERTIES DUE TO FIRE IN BIJAPUR DISTRICT

695. SRI J. L. KABADE.—(Ballolli).—

Will the Minister for Revenue be pleased to state.—

(a) the number of houses and shops burnt in Managoli village of Basavana Bagewadi taluk, Bijapur District in 1971-72 (Up to end of March);

(b) the names of the owners of burnt houses and shops;

(c) whether the houses, shops and articles therein were insured prior to their burning and if so, when;

(d) whether the statements made by the affected people before the police included in F.I.R. and the Tahsildar of Basavanabagewadi in this behalf, would be placed on the Table of the House (Details may be furnished);

(e) the details of amount mentioned by Sri B. V. Kaladgi and others in respect of each of the burnt properties;

(f) the amount of sales tax paid by the merchants in the articles kept for sales during the last 3 years prior to the burning of houses and shops;

(g) whether they have assessed the value of the burnt articles on the basis of the sales tax paid and the value of the burnt properties and granted financial aid together with its percentages (figures may kindly be furnished)?

SRI N. HUTCHAMASTHY GOWDA. — (Minister for Revenue)

(a) 4 houses and 3 huts.

(b) 1 Basavantappa Bheemappa Malagar (house)
2 Umalu Madu Lambani (hut)
3 Eashwarappa Devappa Mannkar (hut)
4 Duddeppa Tejappa Bidri (house)
5 Siddappa Rayappa Kudgi (house)
6 Dyamanna Hiregappa Karjol (house)
7 Veerabhadrappa Dundappa Kaladgi (house)

(SRI N. HUTCHAMASTAY GOWDA)

(c) Out of 7 persons mentioned in reply to clause (b) of the question only Sri Veerabhadrappa Dundappa at Sl. No. 7 had insured his house and shop on 26th November 1971. None of the remaining persons have insured their houses.

(d) Statements made by 7 persons in the presence of Tahsildar are placed on the Table of the House.

Copy placed in the Mysore Legislature Library *Vide* No. 11 and 17th August 1972.

(e) The details are given in the statem entaid Tablno lfoohee the House.

Copy placed in the Mysore Legislative Library *Vide* No. 11, dated 17th August 1972).

(f) Out of 7 persons mentioned above none of them at Sl Nos. from 1 to 6 are doing business. Therefore payment of sales tax does not arise. Sri Veerabhadrappa Dundappa Kaladgi is doing business and according to his statement he has paid Rs. 409 as sales tax during last three years.

(g) The Government have granted financial aid to the 7 persons as follows. The above aid is given on the basis of the value of the burnt properties.

STATEMENT

Sl. No.	Name	S.T. paid	Value of burnt properties	Financial aid granted
	Sriyuths :			
1.	Basavantappa Bhimappa Malagar	...	413	200
2.	Umalu Madu Lambani	...	200	200
3.	Eashwarappa Devappa Mannkar	...	250	200
4-	Duddeppa Tejappa Bidri	...	900	Financially sound. No grant required.
5.	Siddappa Rayappa Kudgi	...	924	do
6.	Dyamanna Hiregappa Karjol		810	200 —Assistant Commissioner, Bijapur has been requested to granted additional relief of Rs. 200.
7.	Veerabhadrappa Dundappa Kaladgi.	409	30,000	800

A total of Rs. 800, *i.e.*, Rs. 500 as financial aid and Rs. 300 towards wooden articles has been sanctioned. The Revenue Department has sanctioned additional relief of Rs. 1,200. An additional relief of Rs. 10,000 has been sanctioned from the State Relief Fund. A total amount of Rs. 12,000 has been sanctioned.

ಶ್ರೀ ಜೆ. ಎಲ್. ಕಬಾಡಿ.—ಈಗ ತಹಸೀಲ್ದಾರರ ಮುಂದೆ ಕೊಟ್ಟಿರುವ ಹೇಳಿಕೆಯನ್ನು ಸಭೆ ಮುಂದೆ ಇಡಲಾಗಿದೆ ಎಂದು ಉತ್ತರ ಕೊಡಲಾಗಿದೆ. ನಾನು ಪೋಲೀಸರ ಮುಂದೆ ಕೊಟ್ಟ ಹೇಳಿಕೆಯನ್ನು ಸಹ ಕೇಳಿದೆ. ಪೋಲೀಸರ ಮುಂದೆ ಏನು ಹೇಳಿಕೆ ಕೊಟ್ಟಿದ್ದಾರೆ ?

‡ ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪೋಲೀಸರ ಮುಂದೆ ಕೊಟ್ಟಿರುವ ಹೇಳಿಕೆ ಬಂದಿಲ್ಲ, ತಹಸಿಲ್ದಾರರ ಮುಂದೆ ಕೊಟ್ಟಿರುವ ಹೇಳಿಕೆಯನ್ನು ಟೇಬಲ್ ಮೇಲಿಡಲಾಗಿದೆ.

ಶ್ರೀ ಜೆ. ಎಲ್. ಕಬಾಡಿ.—ಪೋಲೀಸರ ಮುಂದೆ ಮತ್ತು ಪೋಲೀಸ್ ಪಟೇಲರ ಮುಂದೆ ಹೇಳಿಕೆ ನೀಡಿ ನಂತರ ತಹಸಿಲ್ದಾರರ ಮುಂದೆ ಹೇಳಿಕೆ ಕೊಡುವರು. ಎಫ್‌ಐಆರ್‌ನಲ್ಲಿ ಪೋಲೀಸರ ಮುಂದೆ ನೀಡಿದ ಹೇಳಿಕೆಯನ್ನು ಸಭೆಯ ಮುಂದಿಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಅದಿಲ್ಲ, ಮುಂದೆ ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಪ್ರಶ್ನೆ ಖಚಿತವಾಗಿದೆ, ಸಪ್ಲಿಮೆಂಟರಿ ಪ್ರಶ್ನೆಯಲ್ಲ. (ಈ) ಪ್ರಶ್ನೆಯಲ್ಲಿ 'ಎಫ್‌ಐಆರ್‌ನಲ್ಲಿ ಪೋಲೀಸರ ಮುಂದೆ ಹಾನಿಗೊಳಗಾದವರು ಹೇಳಿಕೆ ಕೊಟ್ಟಿದ್ದನ್ನು ಸದನದ ಮುಂದೆ ಇಡಲಾಗುವುದೇ ಎಂದು ಕೇಳಿದ್ದಾರೆ. ಆದಕ್ಕೆ ಉತ್ತರ ಕೊಡದಿರುವುದರಿಂದ ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಪೋಲೀಸರ ಮುಂದೆ ಕೊಟ್ಟ ಹೇಳಿಕೆ ಇಲ್ಲದಿದ್ದರೂ ಕೂಡ ಸಾಕಷ್ಟು ವಿವರ ಇದೆ. ಅದರ ಬಗ್ಗೆ ಉಪಪ್ರಶ್ನೆ ಕೇಳಬಹುದು. ಪೋಲೀಸರ ಮುಂದೆ ಕೊಟ್ಟಿರುವ ಹೇಳಿಕೆ ತರಿಸಿ ಕೊಡಲು ಸಿದ್ಧವಾಗಿದ್ದೇನೆ.

ಶ್ರೀ ಜೆ. ಎಲ್. ಕಬಾಡಿ.—ಪೋಲೀಸರ ಮುಂದೆ ಕೊಟ್ಟಿರುವ ಹೇಳಿಕೆಗೂ ಮತ್ತು ತಹಸೀಲ್ದಾರರ ಮುಂದೆ ಕೊಟ್ಟಿರುವ ಹೇಳಿಕೆಗೂ ವ್ಯತ್ಯಾಸವಿದೆ. ಆದುದರಿಂದ ವಿವರ ಕೇಳಿರುವುದು. ಆದುದರಿಂದ ಪೋಲೀಸರ ಮುಂದೆ ಕೊಟ್ಟಿರುವ ಹೇಳಿಕೆ ತರಿಸಿದ ನಂತರ ಈ ಪ್ರಶ್ನೆ ತೆಗೆದುಕೊಳ್ಳಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಈ ಆಲೂಗಡ್ಡೆಯ ವಿಚಾರದಲ್ಲಿ ನಾನು ಒಂದು ವಿಷಯವನ್ನು ಹೇಳುತ್ತೇನೆ. ದೋಷರಹಿತ ಬೀಜವನು ಒದಗಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಕಾರಣವೇನೆಂದರೆ ಕೇಂದ್ರದ ವ್ಯವಸಾಯ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ಕೂಡ ಸಿಲೋನ್‌ನಿಂದ ದೋಷರಹಿತ ಬಿತ್ತನೆ ಬೀಜವನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ ಎನ್ನುವ ಆರೋಪಣೆಯನ್ನು ನಾನು ಮಾಡಿದರೆ ಮಾನ್ಯ ಮಂತ್ರಿಗಳು ಅನ್ಯಥಾ ಭಾವನೆ ಮಾಡಬಾರದು. ಇದರ ಹಿಂದೆ ಹಿತಾಸಕ್ತಿಗಳ ಕೈವಾಡ ಇದೆ. ಆದ್ದರಿಂದ ಈಗ ಸುಮಾರು ೨೦ ವರ್ಷಗಳಿಂದ ನಮ್ಮ ರಾಜ್ಯಕ್ಕೆ ದೋಷರಹಿತ ಆಲೂಗಡ್ಡೆ ಬಿತ್ತನೆ ಬೀಜವನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಈ ರೀತಿ ಆಲೂಗಡ್ಡೆ ಬೆಳೆ ನಷ್ಟವಾಗುವುದಕ್ಕೆ ಮೂಲ ಕಾರಣ ದೋಷರಹಿತ ಬಿತ್ತನೆ ಬೀಜ ದೊರಕದೆ ಇರುವುದು. ಇದನ್ನು ಸರಿಪಡಿಸುವ ಪರಿಸ್ಥಿತಿದೆಯೋ ಹೇಗೆ ? ಇಲ್ಲದೇ ಹೋದರೆ ಆಲೂಗಡ್ಡೆಯನ್ನು ಹಾಕುವುದನ್ನು ಕೈಬಿಡಬೇಕು ಎಂದು ರೈತರಿಗೆ ಹೇಳುವುದು ಒಳ್ಳೆಯದು.

ಶ್ರೀ ಎಸ್. ಎಂ. ಕೃಷ್ಣ.—ಈಗ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತಹ ವಿಚಾರವನ್ನು ಸರ್ಕಾರದವರು ಗಮನಿಸುತ್ತಾರೆ. ದೋಷರಹಿತ ಬೀಜವನ್ನು ಸರಬರಾಜು ಮಾಡುವುದಕ್ಕೆ ಸಂಬಂಧಪಟ್ಟವರೊಡನೆ ವ್ಯವಹಾರ ಮಾಡುತ್ತೇವೆ ವ್ಯವಸಾಯ ಇಲಾಖೆಯ ಮಾನ ಮಂತ್ರಿಗಳಾದ ಶ್ರೀ ಕೆ. ಎಚ್. ಪಾಟೀಲರು ಈಗ ಆಲೂಗಡ್ಡೆ ಬೆಳೆ ನಷ್ಟವಾಗಿರತಕ್ಕ ಭಾಗದಿಂದ ಬಂದಿರತಕ್ಕ ಸದಸ್ಯರೊಡನೆ ಸಮಾಲೋಚನೆ ಮಾಡಿ ಆ ಬಗ್ಗೆ ಏನು ಸುಧಾರಣೆ ಮಾಡಬೇಕು ಎಂಬುದನ್ನು ಕುಳಿತುಕೊಂಡು ಚರ್ಚೆ ಮಾಡಿ ನಂತರ ಕ್ರಮ ತೆಗೆದುಕೊಳ್ಳುತ್ತಾರೆ.

Arrest and Release of a Member.—Announcement

MADAM SPEAKER.—I have received a communication dated 17th August 1972 from the Superintendent of Police, Bangalore District. stating that Sri Konandur Lingappa, Hon'ble Member of this House who was arrested on 15th August 1972 was convicted and sentenced to imprisonment by the I Class Magistrate, Ramanagaram, till the raising of the Court on 16th August 1972 and the that he was released on 16th August 1972 at 5-30 P.M.

Relase of a forest lands for Agricutural purposes

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ ಈಗ ತಾವು ಏನು ಹೇಳಿದಿರಿ ಈ ಸಂಬಂಧದಲ್ಲಿ ನಾನು ಎರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈಗ ಅರಣ್ಯ ಮಂತ್ರಿಗಳು ಇನು ಹೇಳುತ್ತಾರೆ ಎಂದರೆ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡುವದಿಲ್ಲ ಎಂದು ಹೇಳುತ್ತಾರೆ.

ಅಧ್ಯಕ್ಷರು.—ಇವೊತ್ತು ಇಲ್ಲಿ ಈಗ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ :

ಶ್ರೀ ಕೋಣಂದೂರು ಲಿಂಗಪ್ಪ —ಕಂದಾಯ ಮಂತ್ರಿಗಳು ಇದ್ದಾರೆ ಅವರೇ ಸಾಕು. ಈಗ ಅರಣ್ಯ ಶಾಖೆಯ ಮಂತ್ರಿಗಳು ಏನು ಹೇಳುತ್ತಾರೆ ಎಂದರೆ ಬೇಸಾಯಕ್ಕೆ ಯೋಗ್ಯವಾದ ಅರಣ್ಯ ಭೂಮಿಯನ್ನು

ಬಿಡುಗಡೆ ಮಾಡುವುದಿಲ್ಲ ಎಂದು ಹೇಳುತ್ತಾರೆ. ಮಲೆನಾಡಿನಲ್ಲಿ ಅರಣ್ಯ ಭೂಮಿಯನ್ನು ಕೇಳುವವರೇ ಇಲ್ಲ. ಮಲೆನಾಡಿನಲ್ಲಾಗಲೀ ಅಥವಾ ಬೇರೆ ಕಡೆಯಲ್ಲಾಗಲೀ ಬೇಸಾಯಕ್ಕೆ ಯೋಗ್ಯವಾದ ಕಾಡು ಇಲ್ಲದೆ ಇರುವ ಜಮೀನನ್ನು ವ್ಯವಸಾಯಕ್ಕೆ ಭೂಮಿ ಇಲ್ಲದೇ ಇರುವವರಿಗೆ ಕೊಡಿ ಎಂದು ನಮ್ಮ ಸೋಷಲಿಸ್ಟ್ ಪಾರ್ಟಿ ಹುಟ್ಟಿದ ಲಾಗಾಯಿತು ಅರ್ಜಿ ಕೊಡುತ್ತಾ ಬಂದಿದೆ. ಭೂ ರಹಿತ ಗೇಣಿದಾರರಿಗೆ ಭೂಮಿಯನ್ನು ಕೊಡಿ ಎಂದು ನಾವು ಹೇಳುತ್ತಾ ಬಂದಿದ್ದೇವೆ. ರಾಮನಗರ ತಾಲ್ಲೂಕು ಹಂದಿಗುಂಡಿ ಅರಣ್ಯ ಪ್ರದೇಶದಲ್ಲಿ ಸುಮಾರು ೫ ಸಾವಿರ ಎಕರೆ ಜಮೀನು ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಇದೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೆಲವು ಕಡೆ ಅರಣ್ಯ ಭೂಮಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಇದೆ. ಈ ಪ್ರದೇಶವನ್ನು ಭೂಹೀನ ರೈತರಿಗೆ ಹಂಚಬೇಕು ಎಂದು ನಾವು ಮೊನ್ನೆ ದಿವಸ ಚಳುವಳಿ ಮಾಡಿದಾಗ.........

ಅಧ್ಯಕ್ಷರು.—ಇದನ್ನೆಲ್ಲಾ ಹೇಳಬೇಕಾದರೆ ನೋಟೀಸ್ ಕೊಟ್ಟು ಹೇಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಇವೊತ್ತು ನೋಟೀಸು ಕೊಡುತ್ತೇವೆ. ಭೂಹೀನ ರೈತರಿಗೆ, ಗೇಣಿದಾರರಿಗೆ ಬೇಸಾಯಕ್ಕೆ ಯೋಗ್ಯವಾದ ಅರಣ್ಯ ಭೂಮಿಯನ್ನು ಕೊಡಬೇಕು ಎಂದು ನಮ್ಮ ಸೋಷಲಿಸ್ಟ್ ಪಾರ್ಟಿಯವರು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇವೆ. ಮಾನ್ಯ ಮಂತ್ರಿಗಳು ಆ ಅರಣ್ಯ ಪ್ರದೇಶಕ್ಕೆ ಯಾವಾಗ ಬೇಕಾದರೂ ಬಂದು ನೋಡಿ. ಅಲ್ಲಿ ಕಾಡು ಇಲ್ಲ. ಅದು ಬೇಸಾಯಕ್ಕೆ ಯೋಗ್ಯವಾಗಿದೆ. ಅಂಥಾ ಜಮೀನನ್ನು ಭೂಹೀನ ರೈತರಿಗೆ ಕೊಡಿ. ನಮ್ಮ ಮಲೆನಾಡಿನಲ್ಲಿಯೂ ಕೂಡ ಬೇಸಾಯಕ್ಕೆ ಯೋಗ್ಯವಾದ ಅರಣ್ಯ ಭೂಮಿ ಇದೆ. ಅದನ್ನೂ ಸಹ ಸರ್ಕಾರದವರು ಪರಿಶೀಲನೆ ಮಾಡಿ ಭೂಹೀನ ರೈತರಿಗೆ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

Hunger strike by the Students of the Veterinary College in Bangalore

ಶ್ರೀ ವಾಟಾಳ್ ನಾಗರಾಜ್.—ವಿಧಾನ ಸೌಧದ ಮುಂಭಾಗದಲ್ಲಿ ವೆಟರ್‌ನರಿ ಕಾಲೇಜಿನ ವಿದ್ಯಾರ್ಥಿಗಳು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಈಗ ಇಲ್ಲಿ ಪಶುಸಂಗೋಪನಾ ಶಾಖೆಯ ಮಂತ್ರಿಗಳು ಇದ್ದಾರೆ. ಆ ಬಗ್ಗೆ ಅವರು ಒಂದು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಅದು ನಿನ್ನೆಯೇ ಮುಗಿದಿದೆ.

ಶ್ರೀ ವಾಟಾಳ್ ನಾಗರಾಜ್.—ಅದು ಇನ್ನೂ ಇತ್ಯರ್ಥವಾಗಿಲ್ಲ. ಅವರು ೪ ದಿವಸಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅದನ್ನು ಬಗೆಹರಿಸದಿದ್ದರೆ ತೀವ್ರವಾದ ಕೆಟ್ಟ ಪರಿಣಾಮ ಉಂಟಾಗುತ್ತದೆ. ಪರಿಸ್ಥಿತಿ ಇನ್ನೂ ಉಲ್ಬಣವಾಗುತ್ತದೆ. ಈಗಾಗಲೇ ೪-೫ ಜನ ವಿದ್ಯಾರ್ಥಿಗಳ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿದೆ. ಆದ್ದರಿಂದ ಇದನ್ನು ಬಗೆಹರಿಸದಿದ್ದರೆ ಇದರಿಂದ ಕೆಟ್ಟ ಪರಿಣಾಮವಾಗುತ್ತದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಸ್ಪಷ್ಟವಾದ ನಿಲುವನ್ನು ಹೇಳಬೇಕು.

ಅಧ್ಯಕ್ಷರು.—ಅದನ್ನು ನಿನ್ನೆಯ ದಿವಸವೇ ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಮಾನ್ಯ ಮಂತ್ರಿಗಳು ಏನು ಈ ವಿಚಾರದಲ್ಲಿ ಹೇಳಿಕೆ ಕೊಟ್ಟಿದ್ದಾರೆ ಅದರಿಂದ ನಮಗಿಂತ ಆ ವೆಟರ್‌ನರಿ ಕಾಲೇಜ್ ವಿದ್ಯಾರ್ಥಿಗಳಿಗೆ ಸಮಜಾಯಿಷಿಯಾಗಿಲ್ಲ. ಆ ವಿದ್ಯಾರ್ಥಿಗಳು ಇನ್ನೂ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಹೋರಾಟ ಮಾಡುತ್ತಿದ್ದಾರೆ. ಈ ರೀತಿ ಆದರೆ ಇದು ಯಾವ ರೀತಿ ಮುಕ್ತಾಯವಾಗಬೇಕು. ಅವರು ಏತಕ್ಕೆ ಉಪವಾಸ ಮಾಡುತ್ತಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಈ ಬಗ್ಗೆ ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು. ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಈಗಾಗಲೇ ಕೆಲವರ ಪರಿಸ್ಥಿತಿ ಚಿಂತಾಜನಕವಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಅಲ್ಲಿ ಉಪವಾಸ ಮಾಡುತ್ತಿರುವ ವೆಟರ್‌ನರಿ ವಿದ್ಯಾರ್ಥಿಗಳನ್ನು ಕರೆಸಿ ಮಾತನಾಡಿ ಅದನ್ನು ಇತ್ಯರ್ಥ ಮಾಡಿದರೆ ಒಳ್ಳೆಯದು. ಅಥವಾ ಮಾನ್ಯ ಮಂತ್ರಿಗಳೇ ಆ ವಿದ್ಯಾರ್ಥಿಗಳು ಉಪವಾಸ ಸತ್ಯಾಗ್ರಹ ಮಾಡುವ ಸ್ಥಳಕ್ಕೆ ಹೋಗಿ ನೋಡಿಕೊಂಡು ವಿದ್ಯಾರ್ಥಿಗಳನ್ನು ಮಾತನಾಡಿಸಿಕೊಂಡು ಬಂದರೆ ಒಳ್ಳೆಯದು.

Statement of the Minister of state Animal Husabandry *Re* six Veterinary College Students

Matter expnge as ordered by the Chair.

ಶ್ರೀ ಎನ್. ಚಿಕ್ಕೇಗೌಡ (ಪಶುಸಂಗೋಪನಾ ಶಾಖೆಯ ರಾಜ್ಯ ಮಂತ್ರಿಗಳು).—ಸ್ವಾಮಿ, ನಿನ್ನೆಯ ದಿವಸ ಈ ಸಭೆಯಲ್ಲಿ ವೆಟರಿನರಿ ವಿದ್ಯಾರ್ಥಿಗಳು ಉಪವಾಸ ಮಾಡಿದ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಹಾಗೆ ಪ್ರಸ್ತಾಪ ಮಾಡಿದಾಗ ಅದು ಆಗುವುದಿಲ್ಲವೆಂದು ಹೇಳಿಲ್ಲ. ೬ನೇ ಆಯೋಗದವರ ಮುಂದೆ ಸಂಬಂಧಪಟ್ಟ ಕೆಟಗರಿಯವರ ಈ ವಿಚಾರವನ್ನು ಇಡುವುದರ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿದೆ ಅಂದ ಮೇಲೆ ಇದನ್ನು ಕೂಲಂಕಷವಾಗಿ ವಿಚಾರ ಮಾಡಬೇಕಾಗುತ್ತದೆ. ಅಲ್ಲದೆ ಒಮ್ಮೆಲೇ ಅದರಲ್ಲಿ ಏನಾದರೂ ಇತ್ಯರ್ಥ ಮಾಡುವುದಕ್ಕಾಗುವುದಿಲ್ಲ. ಈ ಕೆಟಗರಿಯಲ್ಲಿ ೫ ಸಾವಿರ ಚಿಲ್ಲರೆ ಜನರು ಇದ್ದಾರೆ ಅದರಿಂದ ಎಷ್ಟು ಖರ್ಚು ಬೀಳುತ್ತದೆ ಎಂಬುದನ್ನೆಲ್ಲಾ ಲೆಕ್ಕ ಹಾಕಿ ೬ನೇ ಹಣಕಾಸಿನ ಆಯೋಗದವರ ಮುಂದೆ ಇಟ್ಟು ಮಾಡಬೇಕಲ್ಲದೆ, ಪೀಸ್ ಮೀಲಾಗಿ ಒಬ್ಬೊಬ್ಬರಿಗೆ ಮಾಡುವುದಕ್ಕಾಗುವುದಿಲ್ಲ. ಆದರೂ ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುತ್ತದೆ ಎಂದು ಹೇಳಿದ್ದೇನೆ. ಅದಲ್ಲದೆ ಇವತ್ತು ಸಾಯಂಕಾಲ ವಿದ್ಯಾರ್ಥಿಗಳ ಪರವಾಗಿ ಒಬ್ಬರನ್ನು ಭೇಟಿ ಮಾಡಬೇಕೆಂದು ಕೇಳಿಕೊಂಡ ಪ್ರಕಾರ ಅವರಿಗೆ ಭೇಟಿಗೆ ಅವಕಾಶ ಕೊಟ್ಟಿದ್ದೇವೆ. ಆಗ ಅವರು ಏನು ಹೇಳುತ್ತಾರೆಂಬುದನ್ನು ಕೇಳಿಕೊಂಡು, ಸರ್ಕಾರದ ಅಭಿಪ್ರಾಯವನ್ನು ಸಹ ತಿಳಿಸಲು ಸಾಧ್ಯವಾಗುತ್ತದೆ ಮತ್ತು ಅವರು ಉಪವಾಸವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಸಭೆಯ ಮೂಲಕ ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಆದ್ದರಿಂದ ವಿದ್ಯಾರ್ಥಿಗಳ ಬಗ್ಗೆ ತಮಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ಸರ್ಕಾರಕ್ಕೂ ಇದೆ ಎಂಬುದನ್ನು ಇಲ್ಲಿ ಹೇಳುತ್ತೇನೆ. ಆದರೆ ಹಣಕಾಸಿನ ಪರಿಸ್ಥಿತಿಯ ಬಗ್ಗೆ ತಮಗೆಲ್ಲರಿಗೂ ಗೊತ್ತಿದೆ. ಸರ್ಕಾರವು ಹಣಕಾಸಿನ ಬಗ್ಗೆ ಓವರ್‌ಡ್ರಾಫ್ಟ್ ಮತ್ತು ಅಭಾವ ಪರಿಸ್ಥಿತಿ, ಇತ್ಯಾದಿ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಆದ್ದರಿಂದ ಸ್ವಲ್ಪ ತೊಂದರೆಯಾಗಿದೆ.

ಶ್ರೀ ಕೊಣಂದೂರು ಲಿಂಗಪ್ಪ.—ನಿಮಗೆ ಅವರನ್ನು ಡಾಕ್ಟರು ಎಂದು ಡಿಗ್ರಿ ಹಾಕಿಕೊಂಡು ಕರೆಯುವುದಕ್ಕೆ ಏನು ಹಣಕಾಸಿನ ತೊಂದರೆ ಇದೆ ?

ಶ್ರೀ ಎನ್. ಚಿಕ್ಕೇಗೌಡ.—ಅದರ ಬಗ್ಗೆ ಏನೂ ತೊಂದರೆಯಿಲ್ಲ. ಅವುಗಳೆಲ್ಲದರ ಬಗ್ಗೆ ಇವತ್ತು ಅವರನ್ನು ಕರೆದು ಮಾತನಾಡುತ್ತೇನೆ. ಅದೇ ರೀತಿ ಅವರಿಗೆ ಕೊಡುವ ಪ್ರೊಮೋಶನ್ಸ್ ಇತ್ಯಾದಿ ಬಗ್ಗೆ ಬಜೆಟ್ ಸೆಷನ್ನಿನಲ್ಲಿಯೂ ಹೇಳಿದ್ದೇನೆ. ಆದ್ದರಿಂದ ಅವರ ಕೇಳಿಕೆಗಳನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿಲ್ಲ. ಸಕಾಲದಲ್ಲಿ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇನೆ. ಅದೇ ರೀತಿ ಸಾಯಂಕಾಲ ಆ ವಿಚಾರದಲ್ಲಿ ಮಾತನಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರಕ್ಕೆ ಹಣಕಾಸಿನ ತೊಂದರೆ ಯಾವಾಗಲೂ ಇದ್ದೇ ಇದೆ.

Road Accidents by the B. T. S. in Bangalore

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೆ, ಹಿಂದೆ ಅನೇಕ ಸಾರಿ ಈ ರಸ್ತೆ ಅಪಘಾತಗಳ ಬಗ್ಗೆ ಪ್ರಶ್ನೆಗಳನ್ನು ಕಳಿಸಿದ್ದೆ. ಅದಕ್ಕೆ ಮಾನ್ಯ ಅಜೀಜ್‌ಸೇಠರು ಉತ್ತರ ಕೊಟ್ಟಿದ್ದರು ಮತ್ತು ಮಾನ್ಯ ಮುಖ್ಯಮಂತ್ರಿಯವರು ಸಹ ಉತ್ತರ ಹೇಳಿದ್ದರು. ನಿನ್ನೆಯ ದಿವಸ ಮಾರ್ಥ ಆಸ್ಪತ್ರೆಯ ಮುಂದೆ ಒಂದು ಅಪಘಾತವಾಗಿದೆ. ಅದರಲ್ಲಿ ಒಬ್ಬ ಶ್ರೀಧರ್ ಎನ್ನುವ ೨೧ ವರ್ಷದ ಫೈನಲ್ ಬಿಎಸ್‌ಸಿಯಲ್ಲಿ ಓದುತ್ತಿರುವ ಯುವಕ ಸತ್ತಿದ್ದಾನೆ. ಇನ್ನೊಬ್ಬ ಗಾಯವಾಗಿ ಆಸ್ಪತ್ರೆಗೆ ಸೇರಿಕೊಂಡಿದ್ದಾನೆ. ಒಂದು ಎಂಎಸ್‌ಆರ್‌ಟಿಸಿ ಬಸ್ ಇಬ್ಬರು ಹುಡುಗರಿಗೆ ಡ್ಯಾಶ್ ಹೊಡೆದು ಒಂದು ಆಟೋ ರಿಕ್ಷದ ವಿಂಡ್ ಸ್ಕ್ರೀನ್ ಮೇಲೆ ಬಿದ್ದು ಆ ಹುಡುಗ ಸತ್ತು ಹೋಗಿದ್ದಾನೆ. ಇಂತಹ ಅಪಘಾತಗಳನ್ನು ತಪ್ಪಿಸುವುದರಲ್ಲಿ ಪೋಲೀಸರು ಸಹ ವಿಫಲರಾಗಿದ್ದಾರೆ. ಪೋಲೀಸ್ ಇಲಾಖೆಯವರು ದಕ್ಷತೆಯಿಂದ ಕೆಲಸ ಮಾಡುತ್ತಾ ಇಲ್ಲ. ಹೋದ ಸಾರಿಯೂ ಕೆಲವು ದಿವಸಗಳ ಹಿಂದ ಇದೇ ಸ್ಥಳದಲ್ಲಿ ಒಂದು ಬಿಟಿಎಸ್ ಬಸ್ ಮರಕ್ಕೆ ಡಿಕ್ಕಿ ಹೊಡೆದು ಬಿಟ್ಟು ಎಷ್ಟೋ ಜನರಿಗೆ ಗಾಯವಾಗಿದೆ. ಒಂದು ಕಡೆ ಫ್ಯಾಮಿಲಿ ಪ್ಲಾನಿಂಗ್ ಮಾಡಿ ಎಂದು ಹೇಳುತ್ತಿದ್ದೀರಿ ಇನ್ನೊಂದು ಕಡೆ ದೊಡ್ಡ ದೊಡ್ಡ ಮನುಷ್ಯರನ್ನು ಮತ್ತು ಯುವಕರನ್ನು ಸಾಯಿಸುತ್ತಿದ್ದೀರಿ. ಆದ್ದರಿಂದ ಇಂತಹ ಘಟನೆಗಳನ್ನು ನಿಲ್ಲಿಸದೆ ಹೋದರೆ ಬೆಂಗಳೂರಿನ ನಾಗರೀಕರು ಈ ಬಿಟಿಎಸ್ ಬಸ್ ಮತ್ತು ಎಂಎಸ್‌ಆರ್‌ಟಿಸಿ ಬಸ್ಸುಗಳು ಸಿಟಿಯಲ್ಲಿ ಓಡಾಡದಂತೆ ಎಂದು ಚಳವಳಿ

ಮಾಡಬೇಕಾಗಿ ಬರುತ್ತದೆ. ಅಲ್ಲದೆ ಬಿಟಿಎಸ್ ಬಸ್ಸುಗಳು ಸಿಟಿಯಲ್ಲಿ ಓಡದಂತೆ ಮಾಡುವ ಕಾಲ ಬರುತ್ತದೆ. ಆದ್ದರಿಂದ ಸರ್ಕಾರದವರು ಜನರಿಗೆ ರಕ್ಷಣೆ ಕೊಟ್ಟು ಇಂತಹ ಅಪಘಾತಗಳು ನಡೆಯದಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಜೀರೋ ಅವರಿನಲ್ಲಿ ಪ್ರಸ್ತಾಪ ಮಾಡಿದರೂ, ಅದಕ್ಕೆ ಸಂಬಂಧಪಟ್ಟ ಯಾವ ಮಂತ್ರಿಯೂ ಇಲ್ಲಿ ಇಲ್ಲ.

ಅಧ್ಯಕ್ಷರು.—ಜೀರೋ ಅವರ್ ಎಂದು ಪ್ರತ್ಯೇಕವಾಗಿ ಏನೂ ಇಲ್ಲ. ಏನಾದರೂ ಅತ್ಯಂತ ಮುಖ್ಯ ಮತ್ತು ಪ್ರಾಣ ಹೋಗುವಂತಹ ಪರಿಸ್ಥಿತಿ ಇದ್ದರೆ ಅದನ್ನು ಹೇಳಬೇಕಾಗುತ್ತದೆಂದು ಅದಕ್ಕೆ ಜೀರೋ ಅವರ್ ಎಂದು ಕರೆಯುವುದು. ಅದೂ ಅಲ್ಲದೆ ಮೇಲ್ಮನೆ ಸಹ ನಡೆಯುತ್ತಿರುವುದರಿಂದ ಮಂತ್ರಿಗಳು ಅಲ್ಲಿಯೂ ಇರಬೇಕಾಗುತ್ತದೆ. ಇದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಅದು.

ಶ್ರೀ ಎಚ್. ಡಿ. ದೇವೇಗೌಡ.—ಅಲ್ಲಿಯೂ ಇಲ್ಲದಿದ್ದರೆ ಏನು ಮಾಡುತ್ತೀರಿ ?

ಶ್ರೀ ಕೆ. ಎಂ. ನಾಗಣ್ಣ.—ಅದಕ್ಕೋಸ್ಕರವೇ ಇದನ್ನು ಒಂದು ಗಂಟೆಗೆ ಪ್ರಾರಂಭ ಮಾಡಿ ಎರಡೂ ಕಾಲು ಗಂಟೆಗೆ ಅದನ್ನು ಪ್ರಾರಂಭ ಮಾಡುತ್ತಿರುವುದು. ಇವತ್ತು ಸಹ ಒಂದು ಗಂಟೆಗೆ ಇಲ್ಲಿ ಸಂಬಂಧ ಪಟ್ಟ ಯಾವ ಮಂತ್ರಿಯೂ ಇರಲಿಲ್ಲ. ಈಗ ಒಂದು ಕಷ್ಟದ ಪರಿಸ್ಥಿತಿ ಬಂದಿರುವಾಗ ಇದನ್ನು ಜೀರೋ ಅವರಿನಲ್ಲಿ ಹೇಳಬೇಕಾಯಿತು. ಯಾರಿಗೇ ಆಗಲಿ ಒಬ್ಬ 20 ವಯಸ್ಸಿನ ಬಿಎಸ್‌ಸಿ ಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿ ಸತ್ತರೆ ಅವರ ತಂದೆ ತಾಯಿಗಳಿಗೆ ಎಷ್ಟು ವ್ಯಥೆ ಮತ್ತು ಸಂಕಟವಾಗಬಾರದು. ನಮಗಿಂತ ತಮಗೆ ಇದರಲ್ಲಿ ಹೆಚ್ಚು ಅನುಕಂಪ ಬರಬೇಕು. ಏಕೆಂದರೆ ತಮ್ಮ ಹೃದಯ ನಮ್ಮ ಹೃದಯಕ್ಕಿಂತ ಮೆದುವಾದುದು. ಈ ರೀತಿ ಬಸ್ಸುಗಳು ಕಲಿಯುತ್ತಿರುವ ಯುವಕ ವಿದ್ಯಾರ್ಥಿಗಳನ್ನು ಕೊಂದು ಹಾಕಿದರೆ ಯಾರಿಗೆ ತಾನೆ ದುಃಖವಾಗಲಾರದು ? ಆದ್ದರಿಂದ ತಕ್ಷಣ ಇಂತಹ ಅಪಘಾತಗಳನ್ನು ತಪ್ಪಿಸದೆ ಹೋದರೆ ಮತ್ತು ಸರ್ಕಾರದವರು ಇದರ ಬಗ್ಗೆ ಏನೂ ಹೇಳದಿದ್ದರೆ ವಾಸ್ತವಿಕವಾಗಿ ಬೆಂಗಳೂರಿನ ನಾಗರೀಕರು ಒಂದು ಚಳವಳಿಯನ್ನೇ ಮಾಡಿ ಈ ಬಿ.ಟಿ.ಎಸ್. ಬಸ್ಸುಗಳು ನಗರದಲ್ಲಿ ಓಡಾಡದಂತೆ ಮಾಡುವ ಪರಿಸ್ಥಿತಿ ಬರುತ್ತದೆ, ಮತ್ತು ಅದನ್ನು ತಾವು ಎದುರಿಸಬೇಕಾಗುತ್ತದೆ.

3-00 P. M.

ಶ್ರೀ ಎಸ್. ಎಂ. ಕೃಷ್ಣ:—ಮಾನ್ಯ ಶ್ರೀ ನಾಗಣ್ಣನವರು ನಮ್ಮ ಹಿರಿಯ ಸದಸ್ಯರು. ಅವರು ಏನು ಹೇಳಿದರೂ ಕೂಡ ಸರ್ಕಾರದವರು ಬಹಳ ತೀವ್ರವಾಗಿ ಅವರು ಹೇಳತಕ್ಕ ಮಾತುಗಳನ್ನು ಕೇಳುತ್ತಾರೆ. ಅಪಘಾತಗಳು ಆಗುತ್ತಾ ಇರತಕ್ಕದ್ದು ನಮಗೂ ಸಮಾಧಾನ ತರತಕ್ಕ ವಿಚಾರವಲ್ಲ. ಅದರಲ್ಲಿಯೂ ಬೆಂಗಳೂರು ಅಭಿವೃದ್ಧಿಯಾಗಿ ದಿನೇ ದಿನೇ ಬೆಳೆಯುತ್ತಾ ಇರತಕ್ಕ ಪಟ್ಟಣ. ಆದ್ದರಿಂದ ಈ ಪಟ್ಟಣದಲ್ಲಿ ಅಪಘಾತಗಳ ಸಂಖ್ಯೆಯನ್ನು ಕಡಿಮೆಮಾಡುವುದಕ್ಕೆ ಕಳೆದ ಕೆಲವಾರು ವರ್ಷಗಳಿಂದ ಸರ್ಕಾರ ಕೆಲವು ಕ್ರಮಗಳನ್ನು ತೆಗೆದುಕೊಂಡಿರುವುದನ್ನು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೆ ತಿಳಿಸಿದ್ದಾರೆ.

ಶ್ರೀ ಕೆ. ಎಂ. ನಾಗಣ್ಣ;—ನಾನು ಹಿಂದೆಯೇ ಈ ಸ್ಥಳದಲ್ಲಿ ಎರಡು ದಿವಸಗಳಿಗೊಂದು ಸಾರಿ ಅಪಘಾತಗಳು ಸಂಭವಿಸುತ್ತಾ ಇವೆ. ಟ್ರಾಫಿಕ್ ಬಹಳಜಾಸ್ತಿ. ನೂರಾರು ಜನರು ಓಡಾಡುವ ಸ್ಥಳ. ಅಲ್ಲಿಗೆ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಹಾಕಿ ಎಂದು ಸುಮಾರು ಮೂರು ತಿಂಗಳ ಹಿಂದೆಯೇ ಬರೆದಿದ್ದೆ. ಆದರೆ ಇದುವರೆಗೆ ಪೋಲೀಸ್ ಇಲಾಖೆ ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ನನ್ನ ಹೇಳಿಕೆಯ ಮೇಲೆ ಆ ಸ್ಥಳದಲ್ಲಿ ಒಬ್ಬ ಕಾನ್‌ಸ್ಟೇಬಲ್‌ನನ್ನು ಹಾಕಿ ಟ್ರಾಫಿಕ್ ಕಂಟ್ರೋಲ್ ಮಾಡಿದರೆ ಅಪಘಾತಗಳು ಕಡಿಮೆಯಾಗುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ:—ಮಾನ್ಯ ಸದಸ್ಯರ ಸೂಚನೆಯನ್ನು ಗಮನಿಸಲಾಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ನಮ್ಮ ಸಂಸ್ಥಾನದಲ್ಲಿರತಕ್ಕ ಬಸ್ಸುಗಳ ಪೈಕಿ ಅನೇಕ ಬಸ್ಸುಗಳಿಗೆ ಬ್ರೇಕ್ ಇಲ್ಲ, ಹಾರನ್ ಇಲ್ಲ. ಡ್ರೈವರುಗಳು ಹಾಗೆಯೇ ನಡೆಸುತ್ತಾರೆ. ಅವುಗಳನ್ನು ಬ್ರೇಕ್, ಹಾರನ್ನು ಇಲ್ಲದೆ ನಡೆಸಿದರೆ ಹೇಗೆ? ಒಟ್ಟಿನಲ್ಲಿ ಎಲ್ಲೂ ಅಪಘಾತಗಳು ಆಗದೇ ಇರುವಹಾಗೆ ಸರ್ಕಾರ ನೋಡಿಕೊಳ್ಳಬೇಕು.

ಶ್ರೀ ಎಸ್. ಎಂ. ಕೃಷ್ಣ.—ಅದನ್ನು ಗಮನಿಸುತ್ತೇವೆ.

FAMINE CONDITIONS IN HASSAN DUE TO FAILURE OF RAINS

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಕಳೆದ ೨ ತಿಂಗಳುಗಳಿಂದಲೂ ಹಾಸನ ಜಿಲ್ಲೆಯಲ್ಲಿ ಮಳೆ ಬೀಳದೆ ಲಕ್ಷಾಂತರ ಎಕರೆ ಬೆಳೆ ಹಾಳಾಗಿ ಹೋಗಿದೆ. ಸುಮಾರು ಆರೇಳು ವರ್ಷಗಳಿಂದಲೂ ಮಳೆ, ಬೆಳೆ ಹೋಗಿ ಲಕ್ಷಾಂತರ ರೂಪಾಯಿಗಳಷ್ಟು ದುಡ್ಡನ್ನು ಕ್ಷಾಮ ಪರಿಹಾರ ಫಂಡಿನಿಂದ ಸರ್ಕಾರದವರು ಕೊಡುತ್ತಿದ್ದಾರೆ. ಒಂದು ಕಷ್ಟವೇನೆಂದರೆ, ಈ ರೀತಿ ದುಡ್ಡು ಕೊಡುತ್ತಾ ಇರುವುದು ನನ್ನ ಗಮನಕ್ಕೆ ಬಂದಿಲ್ಲ. ಸುಮಾರು ೪ ಕೋಟಿ ರೂಪಾಯಿಗಳಷ್ಟು ಆಲೂಗಡ್ಡೆ ಬೆಳೆ ಈಗ ಹಾಳಾಗಿ ಹೋಗಿದೆ, ಲಕ್ಷಾಂತರ ಎಕರೆಗಳಲ್ಲಿ ರಾಗಿ, ಜೋಳ ಬೆಳೆಯೂ ಸಹ ಪೂರ್ಣವಾಗಿ ಹಾಳಾಗಿ ಹೋಗಿದೆ. ಇನ್ನು ಕೇವಲ ನಾಲ್ಕೈದು ದಿವಸಗಳು ಮಾತ್ರ ಅಸೆಂಬ್ಲಿ ಇರುತ್ತದೆ. ನಾಳೆಯಿಂದ ಕೆಲಸಗಳು ಆರಂಭಮಾಡಬೇಕಾಗಿರುವುದರಿಂದ ಹಾಸನ ಜಿಲ್ಲೆಯಲ್ಲಿರತಕ್ಕ ಪರಿಸ್ಥಿತಿಯನ್ನು ನೋಡಲು ಅಲ್ಲಿಗೆ ಹೋಗಿ ಅಲ್ಲಿ ನೊಂದಿರತಕ್ಕ ರೈತರಿಗೆ ಜೀವನಕ್ಕೆ ಆಧಾರವಾಗಿ ಯಾವುದಾದರೂ ಕೆಲಸಕಾರ್ಯಗಳನ್ನು ಷುರು ಮಾಡಿಸಬೇಕು. ಕ್ಷಾಮ ಪರಿಹಾರ ನಿಧಿಯಿಂದ ಅಲ್ಲಿಗೆ ಸಾಕಾದಷ್ಟು ಹಣವನ್ನು ಕೊಡಬೇಕು.

ಇನ್ನೊಂದು ವಿಚಾರ. ರೈತರು ಈಗಾಗಲೇ ಸಾಲಸೋಲ ಮಾಡಿ ತಮ್ಮ ವಿಶಿಷ್ಟವನ್ನು ಜಮೀನಿಗೆ ಹಾಕಿ ಎಲ್ಲವನ್ನೂ ಕಳೆದುಕೊಂಡು ನಿರುದ್ಯೋಗಿಗಳಾಗಿದ್ದಾರೆ. ಬೇರೆಕಡೆಗಳಲ್ಲಿ ಮಳೆಬೆಳೆ ಇಲ್ಲದೆ ಇದ್ದುದನ್ನು ಕಳೆದುಕೊಂಡು ಕೇವಲ ಗೊಬ್ಬರ ಹಾಕಿದ್ದಾರೆ, ಬೀಜವನ್ನು ಬಿತ್ತಿದ್ದಾರೆ. ಮಳೆ ಇಲ್ಲದೆ ವ್ಯವಸಾಯಮಾಡುವುದು ಕಷ್ಟವಾಗಿದೆ. ಇವತ್ತಿನದಿವಸ ಬರೀ ಹಳ್ಳಿಗೆ ಹೋಗಿ ವ್ಯವಸಾಯಮಾಡಿದರೆ ಕೇವಲ ೨ ಆಣೆ ಬೆಳೆಗೂ ಅವಕಾಶವಿಲ್ಲದೆ ಬಡ ಜನರು ಕಂಗಾಲು ಆಗಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ಹಾಸನ ಜಿಲ್ಲೆಗೆ ಭೇಟಿ ಕೊಟ್ಟು ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಈಗ ರಾಜ್ಯದ ನಾಲ್ಕೈದು ಜಿಲ್ಲೆಗಳನ್ನು ಬಿಟ್ಟರೆ ಉಳಿದ ಎಲ್ಲಾ ಭಾಗಗಲ್ಲಿಯೂ ತೊಂದರೆ ಒಂದು ಕಡೆ ಹೆಚ್ಚಾಗಿರಬಹುದು ಅಥವಾ ಕಡಿಮೆ ಯಾಗಿರಬಹುದು.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮೈಸೂರು ಜಿಲ್ಲೆಯಲ್ಲಿ ವಿಶೇಷ ಪರಿಸ್ಥಿತಿ ಇದೆ ಅಲ್ಲಿಯೂ ಬಹಳ ಅಭಾವ ಪರಿಸ್ಥಿತಿ ಉಂಟಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾಲ್ಕು ಜಿಲ್ಲೆಗಳು ಅಂದರೆ, ಅದರಲ್ಲಿ ತಮ್ಮ ಜಿಲ್ಲೆಯ ಕೆಲವು ಪ್ರದೇಶಗಳೂ ಸೇರಿವೆ. ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಮತ್ತು ಕೊಡಗು ಈ ನಾಲ್ಕನ್ನು ಬಿಟ್ಟರೆ ಉಳಿದ ಜಿಲ್ಲೆಗಳಲ್ಲಿ ಬಹಳವಾಗಿ ತೊಂದರೆಯಾಗಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. ಬಹಳ ತೀವ್ರತೆಯಿಂದ ಅಭಾವವಿರುವ ಪ್ರದೇಶಗಳಿಗೆ ಹೋಗಿ ನನ್ನ ಮಾನ್ಯ ಸಹೋದ್ಯೋಗಿ ಸಚಿವರು ಕೆಲವು ಭಾಗಗಳು ನೋಡಿಕೊಂಡು ಬಂದಿದ್ದಾರೆ. ಈಗಾಗಲೇ ಅಲ್ಲಲ್ಲಿ ಹಣವನ್ನು ಸಾಕಾದಷ್ಟು ಒದಗಿಸಿ ಕೆಲಸಕಾರ್ಯಗಳನ್ನು ಚೆನ್ನಾಗಿ ನಡೆಯುವ ಹಾಗೇ ಏರ್ಪಾಡು ಮಾಡಿದ್ದಾರೆ. ಉಳಿದ ಜಿಲ್ಲೆಗಳ ಪರಿಸ್ಥಿತಿಯನ್ನು ನೋಡಿ ರೂಪಾಯಿನಲ್ಲಿ ೧೪ ಆಣೆಯಷ್ಟು ಕೆಲಸವಾಗಲು ಕೆಲವು ಜಿಲ್ಲೆಗಳಿಗೆ ಸಾಕಾದಷ್ಟು ಹಣವನ್ನು ಒದಗಿಸಿದೆ. ಅಂತಹ ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಬೇಕೆಂಬುದನ್ನೂ ಸಹ ತಿಳಿಸಿದ್ದಾರೆ. ಈ ಸಭೆಯ ಅವಧಿ ಮುಗಿದ ಕೂಡಲೇ ಭಾಗಗಳಿಗೆ ನಾನಾಗಲೀ ಅಥವಾ ಇತರೇ ಸಚಿವರಾಗಲೀ ಹೋಗಿ ನೋಡಿ ಸೂಕ್ತ ಪರಿಹಾರವನ್ನು ಒದಗಿಸಲಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಮಂತ್ರಿಗಳು ಹೇಳಿದರು, ಸರ್ಕಾರದವರು ಹಣ ಒದಗಿಸುತ್ತಾರೆಂದು. ಆದರೆ ಅಧಿಕಾರಿಗಳು ಅದನ್ನು ಬಡ ಜನರಿಗೆ ಹಂಚುವಾಗ ಅವರಿಗೆ ಸರಿಯಾಗಿ ತಲುಪಿಸುತ್ತಾ ಇಲ್ಲ. ತಾವು ಪ್ರವಾಸಮಾಡಿದಮೇಲೆ ಪ್ರಜಾವಾಣಿಯಿಂದ ಎಲ್ಲೋವರದಿಯಾಗಿದೆ. ಆದ್ದರಿಂದ ಅದರ ಬಗ್ಗೆ ತಾವು ಆಸಕ್ತಿ ವಹಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾರೋ ಒಬ್ಬರು ಅವರ ಪಕ್ಷದವರು ಆ ರೀತಿಯಾಗಿ ಹೇಳಿರಬಹುದು. ಅದರ ಜೊತೆಗೆ ನಾವೇ ಅಲ್ಲಿಗೆ ಖುದ್ದು ಹೋಗಿ ಹಣ ಕೊಟ್ಟು ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆಂದು ಹೇಳಿದರೆ, ತಾವು ಅದನ್ನು ನಂಬದೇ ಇದ್ದರೆ, ನಾನೇನು ಮಾಡುವುದು?

SCARCITY CONDITIONS IN SOME DISTRICT OF THE STATE

ಶ್ರೀ ಬಾಪೂಗೌಡ ರಾಯಪ್ಪ (ಶಹಾಬಾದ್).—ಮಾನ್ಯ ಅಧ್ಯಕ್ಷರೇ, ಹುಮ್ನಾಬಾದಿನಲ್ಲಿ ಹುಲಸ ನಾಡಿನ ಹತ್ತಿರ ಶ್ರೀ ಪಾರ್ವತಿರಾವ್ ಅವರ ಮಗ ಸೂರ್ಯಭಾನು ಎಂಬುವರು ಸೊಸೈಟಿ ಮಾಡಿಕೊಂಡು ಬಡ್ಡಿ ಇಲ್ಲದೆ ಸಾಲವನ್ನು ಕೊಟ್ಟು ಅಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಸಾವಿರಾರು ಜನರು ಅಲ್ಲಿಗೆ ಬಂದು ಕೆಲಸಕೊಡಿ ಎಂದು ಕೇಳುತ್ತಿದ್ದಾರೆ ಬಸ್ಸುಗಳಲ್ಲಾದರ ಕೆಲಸಕೊಡಿಸಿ ಎಂದು ಕೇಳುತ್ತಿದ್ದಾರೆ. ಅನೇಕ ಜನರಂತಲ್ಲಿ ಕೆಲಸವಿಲ್ಲದೆ ಕಂಗಾಲಾಗಿ ತಹಶೀಲ್ದಾರರಬಂದು ಘೇರಾವೋ ಮಾಡುತ್ತಿದ್ದಾರೆ. ಆ ಪ್ರದೇಶದಲ್ಲಿ ಸುಮಾರು ೮ ಸಾವಿರ ಜನರು ಕೆಲಸಕೊಡಿ ಎಂದು ಕೇಳುತ್ತಿದ್ದಾರೆ.

ಇದರಲ್ಲಿ ಎಷ್ಟರಮಟ್ಟಿಗೆ ಸತ್ಯವಿದೆಯೆಂಬುದನ್ನು ತಿಳಿದುಕೊಂಡು ತೀವ್ರ ಪರ್ಯಾಲೋಚನೆ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾಡುತ್ತೇನೆ.

ಶ್ರೀ ಕೆ ಬಿ. ಶಿವಯ್ಯ (ನಂಜನಗೂಡು).—ಮೈಸೂರಿನಲ್ಲಿ ನಂಜನಗೂಡು ಸಬ್ ಡಿವಿಷನ್‌ನಲ್ಲಿ ಜೋಳದ ಬೆಳೆ ಹಾಳಾಗಿ ಹೋಗಿದೆ. ಕುಡಿಯುವುದಕ್ಕೂ ನೀರು ಸಿಗುತ್ತಾ ಇಲ್ಲ. ಇದರಬಗ್ಗೆ ಹೆಚ್ಚಿನ ತೀವ್ರ ಗಮನಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಅದರ ಬಗ್ಗೆ ಗಮನಕೊಡಲಾಗುತ್ತದೆ.

ಶ್ರೀ ಬಿ. ಪುಟ್ಟಸಾಮಯ್ಯ (ಸಿರಾ).—ಬೆಂಗಳೂರು ಜಿಲ್ಲೆಯ ರಾಮನಗರ ತಾಲ್ಲೂಕಿನ ಪರಿಸ್ಥಿತಿ ಅದರಲ್ಲಿಯೂ ಕೆಲವು ಪ್ರದೇಶಗಳು ಹೋಪ್‌ಲೆಸ್ ಆಗಿದೆ. ಇನ್ನೂ ಸರಿಯಾಗಿ ಬಿತ್ತನೆ ಆಗಲಿಲ್ಲ. ಆದ್ದರಿಂದ ಅಲ್ಲಿಗೂ ಕೂಡ ಸ್ವಲ್ಪ ಹಣ ಒದಗಿಸಿ ಕೊಡಬೇಕು. ಕೂಲಿ ಹಣ ಹೆಚ್ಚಿಗೆಸಿಗುವ ಹಾಗೇ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದೇ ಸಂದರ್ಭದಲ್ಲಿ ಕೆಲವು ಪ್ರದೇಶಗಳಲ್ಲಿ ರಾಗಿ ಬೆಳೆಗೆ, ಕಡಲೇಕಾಯಿ ಬೆಳೆಗೆ ಹುಳುಗಳು ಬಿದ್ದಿವೆ. ರೈತನಾದವನು ಅದಕ್ಕೆ ಔಷದಿ ಹಾಕಿ ತಡೆಗಟ್ಟಿದರೂ ಆಗುತ್ತಾ ಇಲ್ಲ ಆದ್ದರಿಂದ ಸರ್ಕಾರದವರು ಒಂದು ಮಾಸ್ ಪ್ರೋಗ್ರಾಂ ಹಾಕಿಕೊಂಡು ಔಷಧಿಯನ್ನು ಸಿಂಪಡಿಸುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕು ನಮ್ಮ ಪ್ರದೇಶದ ಅಭಾವ ಸ್ಥಿತಿಯ ಕಡೆಗೂ ಸಂಬಂಧಪಟ್ಟ ಮಂತ್ರಿಗಳು ಗಮನಕೊಟ್ಟು ಅದನ್ನು ತಡೆಗಟ್ಟಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ. ನಾನು ಮೊದಲೇ ಹೇಳಿದ ಹಾಗೆ ಆ ನಾಲ್ಕು ಜಿಲ್ಲೆಗಳನ್ನು ಬಿಟ್ಟು ಉಳಿದ ಎಲ್ಲಾ ಕಡೆಗಳಲ್ಲಿಯೂ ಅದರ ಬಗ್ಗೆ ಗಮನಕೊಟ್ಟಿದ್ದಾರೆ. ಸರ್ಕಾರದವರು ಅದಕ್ಕೆ ಸಾಕಷ್ಟು ಹಣವನ್ನು ಒದಗಿಸಿಕೊಟ್ಟು ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಸ್ನೇಹಿತರೊಬ್ಬರು ಒಬ್ಬ ಮನುಷ್ಯ ಬಾಲ್ಕಿ ಹುಮನಾಬಾದಿನಲ್ಲಿ ಆತ್ಮಹತ್ಯ ಮಾಡಿಕೊಂಡಿದ್ದಾನೆ ಎಂದು ಹೇಳಿದರು ಅದಕ್ಕೆ ಏನೂ ಸಾಕ್ಷಿ ಸಿಗುವುದಿಲ್ಲ. ಅದು ಕಷ್ಟ.

ಮಾನ್ಯ ಶ್ರೀ ಬಾಪುಗೌಡ ಅವರು ಹೇಳಿದ ವಿಷಯವನ್ನು ಚೆನ್ನಾಗಿ ತಿಳಿದು ಅದಕ್ಕೇನು ಮಾಡಬೇಕೆಂಬುದನ್ನು ಈ ಸಭೆಗೆ ತಿಳಿಸಬೇಕಾಗಿದೆ. ಅಲ್ಲಿಯೂ ಕೂಡ ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆ. ಸಾಕಾದಷ್ಟು ಹಣವನ್ನು ಒದಗಿಸಿದ್ದೇವೆ. ಅಲ್ಲಿ ೭-೮ ಸಾವಿರ ಜನರು ಅಲ್ಲಿನ ತಹಸೀಲ್ದಾರರನ್ನು ಘೇರಾವೋ ಮಾಡಿದ್ದಾರೆ. ಅವರ ಆಫೀಸಿಗೆ ಮುತ್ತಿಗೆ ಹಾಕಿದ್ದಾರೆಂದು ಹೇಳಿದರು. ಈ ವಿಷಯ ತಿಳಿದು ಸಭೆಗೆ ತಿಳಿಸುತ್ತೇನೆ. ನನಗೆ ತಿಳಿದಿರುವ ಪ್ರಕಾರ, ಅಲ್ಲಿನ ಕೆಲಸಕಾರ್ಯಗಳ ಬಗ್ಗೆ ಅನೇಕ ಕೆಲಗಳನ್ನು ಈಗ ಪ್ರಾರಂಭಮಾಡಿದ್ದಾರೆ. ಇನ್ನೂ ಹೆಚ್ಚುಮಾಡುವುದಕ್ಕೆ ಸಾಕಷ್ಟು ಹಣವನ್ನು ಒದಗಿಸಿದ್ದೇವೆ, ಎಷ್ಟರಮಟ್ಟಿಗೆ ಅಲ್ಲಿ ಕೆಲಸಕಾರ್ಯಗಳನ್ನು ಮಾಡಿದ್ದಾರೆಂಬುದನ್ನು ನಾನು ತಿಳಿದು ಈ ಸಭೆಗೆ ಬೇಕಾದರೆ ತಿಳಿಸುತ್ತೇನೆ. ಮೈಸೂರಿನ ಕೆಲವು ಭಾಗ ಅವರಲ್ಲಿಯ ೩ ರಾಮನಗರದಲ್ಲಿ ಅಭಾವ ಪರಿಸ್ಥಿತಿ ಇದೆಯೆಂದು ಹೇಳಿದ್ದಾರೆ. ಅಲ್ಲಿಗೂ ಹಣವನ್ನು ಒದಗಿಸಿದ್ದೇವೆ. ಅಲ್ಲಿ ಕೆಲಸಗಳನ್ನು ಎಷ್ಟು ತೆಗೆದುಕೊಂಡಿದ್ದಾರೆಂಬುದನ್ನು ತಿಳಿದು ನಾನು ಹೇಳಬೇಕಾಗಿದೆ. ಒಟ್ಟಿನಲ್ಲಿ ಈ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ಆಸ್ಥೆ ವಹಿಸಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎಂಬುದಾಗಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

NOMINATIONS OF ONE SRI K.K. MURTHY TO SEVERAL COMMITTEE OF GOVERNMENT.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಅಧ್ಯಕ್ಷರೇ, ಸರ್ಕಾರದವರು ಒಂದು ವಿಚಾರದಲ್ಲಿ ಬಹಳ ತಪ್ಪು ನಡೆಯುತ್ತಿದ್ದಾರೆ. ಒಬ್ಬ ವ್ಯಕ್ತಿಯನ್ನು ಉದ್ದೇಶವಾಗಿ ಫೀಲ್ಡ್ ಮಾಡುತ್ತಿದ್ದಾರೆ, ಈ ವಿಚಾರ............

ಅಧ್ಯಕ್ಷರು.—ತಾವು ಈ ವಿಷಯದಲ್ಲಿ ಒಂದು ಆಡ್ಜೋರ್ನಮೆಂಟ್ ಮೋಷನ್ ತಂದು ಇಲ್ಲಿ ಚರ್ಚೆಗೆ ಅವಕಾಶ ಕೇಳಿದ್ದಿರಿ. ಅದಕ್ಕೆ ಸಾಧ್ಯವಿಲ್ಲ ಎಂದು ತಮಗೆ ಉತ್ತರ ಕಳುಹಿಸಿದ್ದೇನೆ...... ....

ಶ್ರೀ ವಾಟಾಳ್ ನಾಗರಾಜ್.—ನಾನು ಹೇಳುತ್ತಿರುವುದು ಆ ಕೆ. ಕೆ. ಮೂರ್ತಿ ವಿಚಾರ ಆತ ಒಬ್ಬ ದೊಡ್ಡ ಬ್ಲಾಕ್ ಮಾರ್ಕೆಟಿಯರ್ ಮಾನ್ಯ ಮುಖ್ಯ ಮಂತ್ರಿಗಳು ಮತ್ತೆ ನೆನ್ನೆಯ ದಿವಸ ಅದೇ ವ್ಯಕ್ತಿಯನ್ನು ದಸರಾ ಸಮಿತಿಗೆ ನಾಮಿನೇಟ್ ಮಾಡಿದ್ದಾರೆ...............

ಅಧ್ಯಕ್ಷರು.—ತಾವು ಈ ವಿಚಾರದಲ್ಲಿ ಚರ್ಚೆಗೆ ಅವಕಾಶ ಕೇಳುತಿರುವುದು ಯಾವ ಇಲ್ಲಿ ಈ ಗಾಗಲೆ ಇಪ್ಪತಾವರ್ತಿ ಚರ್ಚೆ ಆಗಿದೆಯೋ ಅದನ್ನೆ ಮತ್ತೆ ಕೇಳುತ್ತಿದ್ದೀರಿ. ಅದು ಹೇಗೆ ಸಾಧ್ಯ? ತಾವು ಸಭೆಯಲ್ಲಿ ಮಾತನಾಡಿ ಉತ್ತರ ಕೊಡತಕ್ಕ ವೇಳೆಯಲ್ಲಿ ಸಭೆಯಲ್ಲೇ ತಾವು ಇರುವುದಿಲ್ಲ. ಅಂದಾಗ ಇಲ್ಲಿ ಸರ್ಕಾರದವರು ಕೊಟ್ಟ ಉತ್ತರ ತಮ್ಮ ಗಮನಕ್ಕೆ ಬರಲು ಎಲ್ಲಿ ಸಾಧ್ಯವಿದೆ?.

ಶ್ರೀ ವಾಟಳ್ ನಾಗರಾಜ್.—ನಾನು ತಮ್ಮ ರೂಲಿಂಗಿಗೆ, ತಮ್ಮ ಪತ್ರಕ್ಕೆ ಬೆಲೆ ಕೊಡುತ್ತೇನೆ.

ಅಧ್ಯಕ್ಷರು.—ತಾವು ಇನ್ನೂ ಮುಂದುವರಿದರೆ ತಮ್ಮ ಭಾಷಣವನ್ನು ಬರೆದುಕೊಳ್ಳಬೇಡಿ ಎಂದು ನಾನು ಆಜ್ಞೆ ಮಾಡಬೇಕಾಗುವುದು. ದಯವಿಟ್ಟು ಅಷ್ಟಕ್ಕೆ ಅವಕಾಶ ಕೊಡಬೇಡಿ............

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಶ್ರೀ ಮಾನ್ ನಾಗರಾಜ್ ಅವರ ಮನಸ್ಸಿನಲ್ಲಿ ಏನೊಂದು ವೇದನೆ ಇದೆಯೋ ಅದೇ ವೇದನೆ ನಮಗೂ ಇದೆ. ಇವರ ವಿಚಾರದಲ್ಲಿ ಸರ್ಕಾರದವರ ಧೋರಣೇ ಏನೆಂಬುದೇ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ಅವರು ಅಡ್ಜೋರ್ನ್‌ಮೆಂಟ್ ಮೋಷನ್ ಕಳುಹಿಸಿದರೆ, ಅದನ್ನು ಇಲ್ಲಿ ಹೇಗೆ ಚರ್ಚೆಗೆ ಅವಕಾಶ ಮಾಡಿಕೊಡುವುದು? ಈ ವಿಚಾರ ತಮಗೇನು ಗೊತ್ತಿಲ್ಲದ್ದಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅವರ ಮೇಲೆ ಇಷ್ಟು ಪುಕಾರುಗಳೂ ಮತ್ತು ಕೇಸುಗಳು ಇದ್ದಾಗ್ಯೂ ಮುಖ್ಯಮಂತ್ರಿಗಳು ಅದೇ ವ್ಯಕ್ತಿಯನ್ನು ಸಮಿತಿ ಮೇಲೆ ಸಮಿತಿಗಳಿಗೆ ಅವರನ್ನ ಹಾಕುತ್ತಿದ್ದಾರೆ. ಇಂಥ ಅಕ್ರಮ ವ್ಯವಹಾರಗಳಲ್ಲಿ ತೊಡಗಿರತಕ್ಕ ವ್ಯಕ್ತಿಗೆ ಸರ್ಕಾರದವರು ಇಷ್ಟೊಂದು ಪ್ರೋತ್ಸಾಹ ಕೊಡುವುದರ ಉದ್ದೇಶವಾದರೂ ಏನು? ಈ ವಿಚಾರದಲ್ಲಿ ಸರ್ಕಾರದವರ ನಿಲುವೇನು ಎಂಬುದನ್ನು ಏಕೆ ಖಚಿತವಾಗಿ ತಿಳಿಸಬಾರದು ? ಮತ್ತೆ ಈ ವಿಷಯವನ್ನು ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಎತ್ತಬೇಕೆಂಬ ಉದ್ದೇಶ ಕೂಡ ನನಗಿದೆ.

ಅಧ್ಯಕ್ಷರು.—ಇದನು ಅಡ್ಜೋರ್ನಮೆಂಟ್ ಮೋಷನ್ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಇದನ್ನು ಬೇರೆ ಇನ್ನಾವ ರೂಪದಲ್ಲಾದರೂ ಚರ್ಚೆ ಮಾಡುವುದಕ್ಕೆ ಪ್ರಯತ್ನಮಾಡಿ. ಒಂದು ನೋಟಿಸನ್ನು ಕೊಡಿ, ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಾಟಳ್ ನಾಗರಾಜ್.—ಸರ್ಕಾರದವರು ಈ ವಿಚಾರದಲ್ಲಿ ಬಹಳ ಪಾಪದ ಕೆಲಸ ಮಾಡಿದ್ದಾರೆ. ನಾನು ಇಲ್ಲಿ ಜನರಲ್ ಡಿಸ್ಕಷನ್ ಆನ್ ಬಡ್ಜೆಟ್ ನಡೆದ ಕಾಲದಿಂದಲೂ ಒಂದಲ್ಲಾ ಒಂದು ವಿಧದಲ್ಲಿ ಕೆ. ಕೆ. ಮೂರ್ತಿ ಅವರ ಹೆಸರನ್ನು ಎತ್ತದೆ ಇದ್ದ ದಿನವಿಲ್ಲ. ಅಷ್ಟಾದರೂ ಸರ್ಕಾರ ಏಕೆ ಒಂದು ಖಚಿತವಾದ ಉತ್ತರವನ್ನು ಕೊಡಲಿಲ್ಲ?

ಅಧ್ಯಕ್ಷರು.—ನಾನು ಇನ್ನು ತಮಗೆ ಮಾತನಾಡುವುದಕ್ಕೆ ಪರ್ಮಿಷನ್ ಕೊಟ್ಟಿಲ್ಲ ಎಂಬುದನ್ನು ತಿಳಿದು ತಿಳಿದೂ ತಾವು ಇಲ್ಲಿಯವರೆಗೂ ಮಾತನಾಡಿದ್ದೀರಿ... . ...

ಶ್ರೀ ವಾಟಾಳ್ ನಾಗರಾಜ್.—ತಾವು ನಾಳೆ ಪರ್ಮಿಷನ್ ಕೊಡುತ್ತೇನೆಂದು ಹೇಳಿದರೆ ಸಾಕು ನಾನು ಕುಳಿತುಬಿಡುತ್ತೇನೆ.

ಅಧ್ಯಕ್ಷರು.—ಅಷ್ಟು ಸುಲಭವಾಗಿ ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಅಧ್ಯಕ್ಷರು ಇದನ್ನು ಬೇರೆ ರೂಪದಲ್ಲಿ ತಂದರೆ ನೋಡೋಣ ಎಂದು ಹೇಳುತ್ತಿದ್ದರೂ ತಮ್ಮಲ್ಲಿ ನನ್ನ ಒಂದು ಪ್ರಾರ್ಥನೆ, ಏನೆಂದರೆ ತಾವು ನಮ್ಮ ಹಕ್ಕು ಬಾಧ್ಯತೆಗಳನ್ನು ರಕ್ಷಣೆ ಮಾಡತಕ್ಕವರು ಕಾಪಾಡತಕ್ಕವರು ನಮ್ಮ ಮನಸ್ಸಿನಲ್ಲಿರತಕ್ಕ ವೇಧನೆಯನ್ನು ನಾವು ತಮ್ಮ ಮುಂದೆ ತೋಡಿಕೊಳ ದೆ, ಬೇರೆ ನಮಗೆಲ್ಲಿ ಮಾರ್ಗವಿದೆ? ಕೆ. ಕೆ. ಮೂರ್ತಿಯವರ ವಿಚಾರದಲ್ಲಿ ಸದಸ್ಯರು ಇಲ್ಲಿ ಕಟುವಾಗಿ ಹೇಳುತ್ತಿದ್ದರೂ ಸರ್ಕಾರದವರ ಕಡೆಯಿಂದ ಏಕೆ ಉತ್ತರ ಬರುತ್ತಿಲ್ಲ? ಇದನ್ನು ಮಾನ್ಯ ಅಧ್ಯಕ್ಷರು ಆಲೋಚನೆ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ — ಇಲ್ಲಿ ಕೈಗಾರಿಕಾ ಮಂತ್ರಿಗಳಿದ್ದಾರೆ ಫಿಲಂ ಇಂಡಸ್ಟ್ರಿಯಲ್ಲಿ ಕೆ. ಕೆ. ಮೂರ್ತಿಯವರನ್ನು ಅವಾರ್ಡ್ ಕೊಡತಕ್ಕ ಕಮಿಟಿಗೆ ಮೆಂಬರಾಗಿ ಹಾಕಿದ್ದಾರೆ ಈ ವ್ಯಕ್ತಿಗೆ ಏನು ಗೊತ್ತಿದೆ ಈ ಫಿಲಂ ಇಂಡಸ್ಟ್ರಿ ವಿಷಯ? ಬೇಕಾದರೆ ಕೆಂಪರಾಜ್ ಅವರನ್ನು ಹಾಕಲಿ ನಾನು ಬೇಡವೆನ್ನುವುದಿಲ್ಲ. ಸರ್ಕಾರಕ್ಕೆ ಮೋಸಮಾಡತಕ್ಕ ವ್ಯಕ್ತಿಗೆ, ಇವರಿಗೆ, ಮತ್ತೆ ೫ ಕೋಟಿ ರೂಪಾಯಿನ ಒಂದು ಪ್ರಾಜೆಕ್ಟನ್ನು ಕೊಡುವುದಕ್ಕೆ ಪ್ರಯತ್ನ ನಡೆಸುತ್ತಿದ್ದಾರೆ... ......

ಶ್ರೀ ಎನ್. ಹುಚ್ಚಮಾಸ್ತಿಗೌಡ — ಅಧ್ಯಕ್ಷರೆ ಸಭೆಯಲ್ಲಿ ಮಾತನಾಡುವುದಕ್ಕೆ ಒಂದು ರೂಲ್ಸಾ ಅಥವಾ ರೆಗ್ಯುಲೇಷನ್ ಇದ್ದಾಗ್ಯೂ ಕೂಡ ಅವುಗಳನ್ನು ಮನ್ನಣೆ ಮಾಡದೆ ಹೀಗೆ ಮಾತನಾಡುವುದು ಅಂದರೆ ಎಲ್ಲಾ ಕ್ರಮಗಳನ್ನೂ ಮೀರಿ ಮಾತನಾಡುವುದು ಸಭೆಯ ಘನತೆ ಗೌರವಗಳಿಗೆ ಉಚಿತ ವಾದುದಲ್ಲ ಅನ್ನುವುದನ್ನು ನಾನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಎಮ್. ಎಸ್. ಕೃಷ್ಣನ್ — ಅವರು ಅಂಥ ಮೇಧಾವಿಗಳು, ಅವರಿಗೆ ಎಲ್ಲಾ ವಿಷಯಗಳಲ್ಲೂ ಅಪರಿಮಿತವಾದ ಜ್ಞಾನವಿದೆ ಎಂದು ಹೇಳಿ ಸರ್ಕಾರದವರು ಅವರನ್ನು ಡಿಫೆಂಡ್ ಮಾಡಿಕೊಳ್ಳಲಿ ಇಲ್ಲವೇ ಅವರನ್ನು ಅಫೆಂಡ್ ಮಾಡಿಕೊಳ್ಳಲಿ ಯಾವುದಕ್ಕೂ ಒಂದು ನಿರ್ದಿಷ್ಟವಾದ ಉತ್ತರ ಸರ್ಕಾರದವರಿಂದ ಬರಬೇಕು. ಈ ವಿಷಯಕ್ಕೆ ಒಂದು ಕೊಮಿಟಿಸ್ ಕೊಡೋ ರೀತಿಯಲ್ಲಿ ಒಂದು ಸರ್ಕಾರದ ಹೇಳಿಕೆ ಕೊಡುವುದಕ್ಕೆ ಅಧ್ಯಕ್ಷರು ಅವಕಾಶ ಮಾಡಿಕೊಟ್ಟರೆ ಅಷ್ಟು ಸಾಕು

ಶ್ರೀ ಕೆ. ಎಂ. ನಾಗಣ್ಣ : ಒಂದು ವಿನಂತಿಮಾಡಿಕೊಳ್ಳುತ್ತೇನೆ. ಶ್ರೀಮಾನ್ ಎಸ್. ಎಂ. ಕೃಷ್ಣರವರು ದಕ್ಷರು, ಪ್ರಾಮಾಣಿಕರು ಎಂದು ಹೆಸರು ಪಡೆದಿದ್ದಾರೆ. ಅವರ ವಿಚಾರ ಚೆನ್ನಾಗಿ ನನಗೆ ಗೊತ್ತಿದೆ. ಕೆ. ಕೆ. ಮೂರ್ತಿಯವರ ವಿಚಾರದಲ್ಲಿ ಅವರು ಹುಷಾರಾಗಿಲ್ಲದಿದ್ದರೆ ಅವರ ಒಳ್ಳೆಯ ಹೆಸರು ಮಣ್ಣು ಪಾಲಾಗುವುದು. ಇದರಲ್ಲಿ ಸಂದೇಹವಿಲ್ಲ. ಮಾನ್ಯ ಮಂತ್ರಿಗಳ ಹೆಸರಿಗೆ ಕಳಂಕ ಬರಬಾರದು, ಕಳಂಕ ಬರದಂತೆ ಅವರು ನೋಡಿಕೊಳ್ಳುವುದು ಅವಶ್ಯಕ.

ಶ್ರೀ ಸಿ. ಬೈರೇಗೌಡ. ಕ್ಷಾಮದ ಪರಿಸ್ಥಿತಿಯ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಸರಕಾರದವರು ಟೆಲಿಫೋನ್ ಮಾಡಿ ಹಣ ಖರ್ಚುಮಾಡಬಾರದೆಂದು ಎಲ್ಲಾ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೂ ತಿಳಿಸಿದ್ದಾರೆ. ಈಗ ಕುಡಿಯುವುದಕ್ಕೆ ನೀರಿಲ್ಲ, ದನಗಳಿಗೆ ಮೇವಿಲ್ಲ. ಹಾಗಿರುವಾಗ ಏಕೆ ಹೀಗೆ ಮಾಡಿರುವುದು ? ದಯೆಯಿಟ್ಟು ಮಂತ್ರಿಗಳು ಈ ವಿಚಾರದಲ್ಲೇನು ಮಾಡಿದ್ದಾರೆಂಬುದನ್ನು ತಿಳಿಸಬೇಕು. ಸರಕಾರ ಆ ರೀತಿ ಆರ್ಡರು ಮಾಡಿದೆಯೋ ಇಲ್ಲವೇ ಎಂಬುದನ್ನು ತಿಳಿಸಬೇಕು.

ಅಧ್ಯಕ್ಷರು : ನಿಮಗೆ ಏನು ಸುದ್ದಿ ಬಂದಿದೆ ಅದನ್ನು ಈಗ ಹೇಳಿದ್ದೀರಿ ಅವರು ವಿಚಾರಿಸಿ ತಿಳಿಸಬೇಕು.

MYSORE LAND REFORCES (Amendment) BILL 1972
MOTIO TO CONSIDER [*Debate Continued*]

† ಶ್ರೀ ಎಚ್. ಡಿ. ದೇವೇಗೌಡ : ಮಾನ್ಯ ಸಭಾಧ್ಯಕ್ಷಣೀಯರೇ, ನಿನ್ನೆ ದಿವಸ ೧೯೭೨ನೇ ಇಸವಿಯ ಭೂ ಸುಧಾರಣೆ ಕಾಯಿದೆ ಬಗ್ಗೆ ಮಾತನಾಡುವಾಗ ೧೬ ಕಿಲೋಮೀಟರ್ ನಿಬಂಧನೆ ಬಗ್ಗೆ ಪ್ರಸ್ತಾಪಮಾಡುತ್ತಿದೆ. ನಾನಾಗಲೇ ಹೇಳಿದಹಾಗೆ ಒಬ್ಬ ರೈತ ಈ ಸಿಲಿಂಗ್ ಲಿಮಿಟ್ಟಿನೊಳಗೆ ೧೬ ಕಿಲೋಮೀಟರಿನೊಳಗೆ ಮಾತ್ರ ಜಮೀನಿಟ್ಟುಕೊಳ್ಳಲು ಸಾಧ್ಯವಾಗುತ್ತದೆ. ಸಿಲಿಂಗಿನೊಳಗೆ ಜಮೀನಿದ್ದರೂ ಎರಡು ತಾಲ್ಲೂಕಿನೊಳಗೆ ಜಮೀನಿದ್ದರೆ ಅದನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇಂಥ ಒಂದು ಅಡ್ಡಿ ಬರುವುದು. ಇದರ ಜೊತೆಗೆ ಇಂದು ನಮ್ಮ ಮಂತ್ರಿಗಳಿಗೆ ಗೊತ್ತಿರುವಹಾಗೆ ನೆಲಮಂಗಲದ ಬಹು ಜನರು ಸೆಕ್ರಟೇರಿಯಟ್ಟಿನಲ್ಲಿ ಜವಾನರಾಗಿದ್ದಾರೆ. ಫ್ಯಾಮಿಲಿ ಎಂಬುದಕ್ಕೆ ಈಗ ಹೊಸ ಡೆಫೆನಿಷನ್ ಇದೆ. ಗಂಡ-ಹೆಂಡತಿ ಮತ್ತು ೩ ಮೈನರ್ ಮಕ್ಕಳು ಇರುವುದಕ್ಕೆ ಒಂದು ಫ್ಯಾಮಿಲಿ ಎಂದು ಪರಿಗಣಿಸುವರು. ೧೬

ಹೆಚ್. ಡಿ. ದೇವೇಗೌಡ

ಕಿಲೋಮೀಟರಿನ ನಿರ್ಬಂಧ ಇರುವುದಾದರೆ ಜವಾನರು ಜಮೀನಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಅವರಿಗೆ ಬರುವುದು ನೂರು ರೂಪಾಯಿ ಸಂಬಳ ಇರಬಹುದು. ಅವರು ಜಮೀನಿಟ್ಟುಕೊಂಡು ವಾರಕ್ಕೆ ಒಂದು ದಿವಸ ಹೋಗಿ ನೋಡಿಕೊಂಡು ಬರುವರು. ಹೈರ್ಡ್ ಲೇಬರ್ ಇಟ್ಟು ಅವರು ಸಾಗು ಮಾಡಿಸಬಹುದು. ಜಮೀನಿನಿಂದ ಅವರಿಗೆ ಎರಡುಮೂರು ಹಂಡಗ ಬತ್ತ ಅಥವ ರಾಗಿ ಬರಬಹುದು. ಅಂಥವರು ಜೀವನ ಮಾಡಲು ಒಂದು ಕುಠಾರಪ್ರಾಯವಾಗುವ ಷರತ್ತಿದೆ. ಬಹುಶಃ ಹೇಳುವುದಾದರೆ ಇದರ ಬ್ರೈನ್ ಯಾರದು ಎಂದು ಕೇಳಬೇಕಾಗುತ್ತದೆ. ಇಡೀ ಇಂಡಿಯಾದೇಶದಲ್ಲಿ ಬಹುಶಃ ಮದ್ರಾಸು ಮತ್ತು ಕೇರಳ ಬಿಟ್ಟರೆ ಎಲ್ಲಾ ರಾಜ್ಯಗಳಲ್ಲೂ ನಿಮ್ಮ ಹಿಡಿತವಿದೆ; ನಿಮ್ಮ ಆಡಳಿತವಿದೆ. ೧೬ ಕಿಲೊಮೀಟರಿನ ಸಲಹೆ ಯಾರು ಕೊಟ್ಟರು ಎಂದು ಕೇಳಬೇಕಾಗಿದೆ. ಈಗ ಒಬ್ಬ ಮನುಷ್ಯನಿಗೆ ಒಂದೇ ವೃತ್ತಿ ಎಂಬ ಥಿಯರಿ ಬೇರೆ ಇದೆ. ಹೊಸ ಸಮಾಜವಾದ ಇದು. ಈ ಥಿಯರಿಗನುಗುಣವಾಗಿ ಜಮೀನು ೧೬ ಕಿಲೊಮೀಟರಿನೊಳಗಿರಬೇಕು ಮತ್ತು ಅದಾಯ ೧೨ ಸಾವಿರ ರೂಪಾಯಿಗೆ ಮೀರಬಾರದು. ಒಬ್ಬನಿಗೆ ಒಂದೇ ವೃತ್ತಿ ಇರಬೇಕೆಂದು ಧೃಡೀಕರಿಸುವುದಕ್ಕೆ ಸಾಧಿಸುವುದಕ್ಕೆ ಹೊರಟಿದ್ದೀರಿ. ಇಂದು ಒಬ್ಬ ನಾಲ್ಕನೆಯ ದರ್ಜೆಯ ನೌಕರ ೧೬ ಕಿಲೋಮೀಟರಿನೊಳಗೆ ಜಮೀನಿಟ್ಟುಕೊಳ್ಳದಿದ್ದರೆ ಅವನಿಗೆ ಅದನ್ನು ತಾನು ಇಟ್ಟುಕೊಳ್ಳಲು ಅವಕಾಶವಿಲ್ಲ. ಒಬ್ಬ ಲಾಯರು ಆಗಿ ಬಹುದು, ಅವನು ೧೭ ಕಿಲೊಮೀಟರು ದೂರದಲ್ಲಿ ಎರಡುಮೂರು ಎಕರೆ ಜಮೀನಿಟ್ಟುಕೊಂಡು ತನಗೆ ಕಾಲಾವಕಾಶವಿದ್ದಾಗ ಅಲ್ಲಿಗೆ ಹೊರಗ್ಗಿನೋಡಿಕೊಂಡುಬರಲು ಸಾಧ್ಯವಿದೆ. ಅವನು ಕೂಡ ಜಮೀನನ್ನು ಇಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಇದರಿಂದ ಬಹಳ ಅನಾಹುತವಾಗುತ್ತದೆ. ಇದರ ಜೊತೆಗೆ ೧೨ ಸಾವಿರ ರೂಪಾಯಿ ವರಮಾನದ ವಿಷಯ ಬೇರೆ ಇದೆ. ೫ ವರ್ಷ ವರಮಾನ ತೆರಿಗೆ ಕೊಟ್ಟಿದ್ದರೆ ಅದಕ್ಕೆ ಸಂಬಂಧಪಟ್ಟ ಅಸೆಸ್‌ಮೆಂಟ್ ಆಧಾರದಮೇಲೆ ಒಂದುನಿರ್ಧಾರಕ್ಕೆ ಬರಬಹುದು. ೫ ವರ್ಷ ಮಂತ್ರಿಗಳಾಗಿದ್ದವರು ಆ ಕಾಲದಲ್ಲಿ ವರಮಾನ ತೆರಿಗೆ ಕೊಡಬಹುದು. ಮಧ್ಯ ಗಂಡಾಂತರ ಬಂದರೆ ಕಷ್ಟವಾಗುವುದು. ೫ ವರ್ಷದ ವರಮಾನ ಲೆಕ್ಕ ಹಾಕಿದರೆ ಮಂತ್ರಿಗಳೂ ಕೂಡ ಇಟ್ಟುಕೊಳ್ಳಲು ಸಾಧ್ಯವಿಲ್ಲ ಎಂಬುದು ನನ್ನ ಭಾವನೆ. ಮಂತ್ರಿಗಳು ಇದನ್ನು ಸ್ಪಷ್ಟವಾಗಿ ಹೇಳಿಲ್ಲ. ಇಂದೇನು ನಿರ್ಬಂಧ ಹಾಕುತ್ತಿದ್ದೀರಿ ಅದರ ಉದ್ದೇಶವಾದರೂ ಏನು ? ಇದು ಒಂದು ಅಂಗಡಿ ಇಟ್ಟು ಒಬ್ಬರು ವ್ಯಾಪಾರ ಮಾಡಬಹುದು ; ಒಬ್ಬರು ಕೈಗಾರಿಕೆ ನಡೆಸಬಹುದು, ಅದಕ್ಕೆ ಅಡ್ಡಿ ಆತಂಕವಿಲ್ಲ. ಆದರೆ ವ್ಯವಸಾಯದ ಭೂಮಿ ಇಟ್ಟುಕೊಳ್ಳಬೇಕಾದರೆ ಅವನ ಆದಾಯ ೧೨ ಸಾವಿರರೂಪಾಯಿನೊಳಗಿರಬೇಕು. ಇದನ್ನು ತಿರುಗಮುರುಗ ಆಲೋಚನೆ ಮಾಡೋಣ. ವ್ಯವಸಾಯದ ಭೂಮಿ ಇಟ್ಟುಕೊಳ್ಳುವವರು ೧೨ ಸಾವಿರದ ಪರಿಮಿತಿಯೊಳಗೆ ಬರುವುದಾದರೆ ಅವರು ಬೇರೆ ಉದ್ಯಮ ಮಾಡಬಾರದು ಎಂದು ಷರತ್ತಿದೆಯೇ ? ಇದಕ್ಕೆ ಹಿನ್ನಲೆಯೇನು ? ಒಬ್ಬ ಸರಕಾರಿ ಹುದ್ದೆಯಲ್ಲಿರಬಹುದು, ಅಸಿಸ್ಟೆಂಟ್ ಎಂಜಿನಿಯರಾಗಿರಬಹುದು ಅಥವ ತಹಸಿಲ್ದಾರನಾಗಿರಬಹುದು ; ರಿಟೈರ್ ಆದಾಗ ಆತನಿಗೆ ೧೨ ಸಾವಿರ ರೂಪಾಯಿ ಬರಬಹುದು. ಇಂದು ಅವನು ಕಾನೂನು ಪ್ರಕಾರ ಜಮೀನಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇದಕ್ಕೆ ವಿವರಣೆಬೇಕು. ಒಂದು ವರ್ಷದೊಳಗೆ ಒಬ್ಬ ರಿಟೈರ್ ಆಗಬಹುದು. ಪೆನ್‌ಷನ್ ಬರಬಹುದು. ರಿಟೈರ್ ಆದಮೇಲೆ ಮುಂದೆ ವರ್ಷಕ್ಕೆ ೧೨ ಸಾವಿರ ಆಧಾಯವಿರುವುದೇ? ಅಧಿಕಾರಿ ಸತ್ತರೆ ಫ್ಯಾಮಿಲಿ ಪೆನ್‌ಷನ್ ಕೊಡಬಹುದು, ಅದು ಬೇರೆ ವಿಚಾರ. ಆದರೆ ಯಾವಾಗಲೂ ೧೨ ಸಾವಿರ ವರಮಾನ ಬರುವುದೇ? ಇದಕ್ಕೆ ಆಧಾರವೇನಿದೆ? ಸರಕಾರ ಇಷ್ಟು ಆದಾಯಕ್ಕೆ ಗ್ಯಾರಂಟಿ ಕೊಡುವುದೇ ? ಇಂದು ವರಮಾನ ತೆರಿಗೆ ಲೆಕ್ಕದ ಪ್ರಕಾರ ೧೨ ಸಾವಿರ ಆದಾಯವಿರಬಹುದು. ಮುಂದೆ ಉದ್ಯಮದಲ್ಲಿ ಅಥವ ವ್ಯಾಪಾರದಲ್ಲಿ ನಷ್ಟವಾದರೆ ೧೨ ಸಾವಿರ ತುಂಬಿಸಿಕೊಡುವುದಾಗಿ ಆಶ್ವಾಸನೆ ಕೊಡುತ್ತೀರಾ ?

(MR. DEPUTY SPEAKER IN THE CHAIR)

3-30 P.M

ಇದರ ಬಗ್ಗೆ ತಾವು ವಿವರಣೆ ಕೊಡಬೇಕು. ಒಬ್ಬ ಅಧಿಕಾರಿಗೆ ೨ ಸಾವಿರ ರೂಪಾಯಿ ಸಂಬಳ ಇದ್ದರೆ ಅವನ ಮಗನೂ ಕೂಡ ಅದೇ ರೀತಿ ದುಡಿಯುತ್ತಾನೆ ಎಂದು ಹೇಳುವುದಕ್ಕಾಗುವುದಿಲ್ಲ. ಒಬ್ಬ ಡಾಕ್ಟರ್ ಆದರೆ ಒಬ್ಬ ಇಂಜಿನಿಯರ್ ಆದರೆ, ಒಬ್ಬ ಕೈಗಾರಿಕೋದ್ಯಮಿ ಆದರೆ ಅವರ ಮಕ್ಕಳೂ ಕೂಡ ಅದೇರೀತಿ ಪರಿಣತರಾಗಿ, ತಜ್ಞರಾಗಿ ಆಗುತ್ತಾರೆ ಎಂದು ಹೇಳುವುದಕ್ಕಾಗುವುಲ್ಲ. ಅವರ ಮಕ್ಕಳು ತಮ್ಮ ಜೀವನವನ್ನು ಮುಂದೆ ಸಾಗಿಸುವುದು ಹೇಗೆ ? ಈವೊತ್ತು ತಾವು ಈ ಒಂದು ಐದು ವರ್ಷದಲ್ಲಿ ಈ ರೀತಿ

ಒಂದು ಆದಾಯದ ಮಿತಿಯನ್ನು ಹೇರಿ ನಮ್ಮ ಗುರಿ ಮುಟ್ಟಬೇಕು ಎನ್ನುವ ಅಭಿಪ್ರಾಯಕ್ಕೆ ನೀವು ಬರುವುದಾದರೆ ಅದರಿಂದ ಅಪಘಾತವೇ ಹೊರತು ನ್ಯಾಯವಾಗಿ ನಿಮ್ಮ ಉದ್ದೇಶವನ್ನು ಸಾಧನೆ ಮಾಡು ವುದಕ್ಕಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಏತಕೆಂದರೆ ಈವೊತ್ತು ಬೇರೆ ರಂಗ ದಲ್ಲಿ ಒಬ್ಬ ವ್ಯಕ್ತಿಗೆ ಈ ನಿರ್ಬಂಧವನ್ನು ಹಾಕುತ್ತಾ ಇಲ್ಲ. ಕೇವಲ ಭೂಮಿಯನ್ನು ಅವಲಂಬಿಸಿರತಕ್ಕಂಥ ವ್ಯವಸಾಯಗಾರನ ಮೇಲೆ ರೇಡ್ ಮಾಡಿದ್ದೀರಿ. ವಾರ್ಷಿಕ ವರಮಾನ ೧೨ ಸಾವಿರ ರೂಪಾಯಿ ಇರಬೇಕು ಮತ್ತು ಜಮೀನು ೧೬ ಕಿಲೋಮೀಟರ್ ಒಳಪಟ್ಟು ಇರಬೇಕು ಎಂದು ಹೇಳಿದ್ದೀರಿ. ಒಂದು ಉದಾಹರಣೆ ಹೇಳುವುದಾದರೆ ಒಬ್ಬ ಉಪಾಧ್ಯಾಯನನ್ನೇ ತೆಗೆದುಕೊಳ್ಳಿ, ಅಥವಾ ನಿಮ್ಮ ಕಾರಿನ ಡ್ರೈವರನ್ನೇ ತೆಗೆದು ಕೊಳ್ಳಿ ಅವನಿಗೆ ೨-೩ ಎಕರೆ ಜಮೀನು ಇದ್ದರೆ ಈ ಕಾನೂನಿನ ಪ್ರಕಾರ ಅವನು ಜಮೀನನ್ನು ಬಿಟ್ಟುಬಿಡ ಬೇಕು. ಆದರೆ ನೀವು ಕೊಡುವ ೩೫೦ ರೂಪಾಯಿಯಿಂದ ಅವನು ಜೀವನ ಮಾಡುವುದಕ್ಕೆ ಸಾಧ್ಯವೇ ? ತಾವು ಈ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದನ್ನು ನೋಡಿದರೆ ಇಂಡಿಯಾ ದೇಶದಲ್ಲಿ ಮೈಸೂರು ದೇಶದ ಮುಖ್ಯಮಂತ್ರಿಗಳು ಪ್ರಗತಿ ಗಾಮಿಗಳು ಎಂದು ತೋರಿಸಿಕೊಳ್ಳುವುದಕ್ಕೋಸ್ಕರ ಹೊರಟಿದ್ದಾರೆ ಎಂದು ಹೇಳಬಹುದು. ನಾನು ಇದರ ಬಗ್ಗೆ ಸ್ಪಷ್ಟವಾಗಿ ಹೇಳುತ್ತೇನೆ. ಇದರಲ್ಲಿ ತೊಡಕು ಏನು ಇದೆ ಎನ್ನುವುದನ್ನು ನೋಡಬೇಕು. ಈ ಮನೆಯಲ್ಲಿರತಕ್ಕ ೨೬ ಜನ ಸದಸ್ಯರ ಪೈಕಿ ಈ ಬಿಲ್ಲಿನಿಂದ ೨-೩ ಜನಕ್ಕೆ ಅಫೆಕ್ಟ್ ಆಗಬಹುದು. ಇದರಲ್ಲಿ ಒಂದು ತಾತ್ವಿಕವಾದ ಪ್ರಶ್ನೆಯನ್ನು ಯೋಚನೆ ಮಾಡಬೇಕು. ಅವನಿಗೆ ಈ ಒಂದು ನಿರ್ಬಂಧವನ್ನು ಹಾಕಿದರೆ ಮುಂದಿನ ಒಂದು ಪೀಳಿಗೆ ಹೇಗೆ ಜೀವನ ಮಾಡಬೇಕು ? ಅವನ ಪರಿಸ್ಥಿತಿ ಏನು ಎನ್ನುವುದನ್ನು ಯೋಚನೆ ಮಾಡಬೇಕು. ಈಗ ತಾವು ಒಬ್ಬ ಮನುಷ್ಯನಿಗೆ ೧೦ ಎಕರೆಯೇ ಇರಲಿ ಎನ್ನುವುದಾದರೆ ಅವನಿಗೆ ಈಗ ೪ ಜನ ಮೈನರ್ ಮಕ್ಕಳು ಇದ್ದು ಅನಂತರ ಮೆಜಾರಿಟಿಗೆ ಬಂದ ಮೇಲೆ ತಲಾ ೨-೨ ಎಕರೆಯನ್ನು ಹಂಚಿಕೊಳ್ಳಬೇಕಾಗುತ್ತದೆ. ಇದರಿಂದ ಅವನು ಉತ್ತಮವಾದ ಜೀವನ ವನ್ನು ನಡೆಸುವುದಕ್ಕಾಗುತ್ತದೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ನೀವು ಅವನಿಗೆ ಉತ್ತಮ ಜೀವನ ನಡೆಸುವಂತೆ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಲ್ಲಿ, ಆ ಜವಾಬ್ದಾರಿಯನ್ನು ನೀವು ಹೊತ್ತುಕೊಂಡರೆ ನಿರ್ಬಂಧವನ್ನು ಮಾಡಿರಿ ನಾನು ಒಪ್ಪಿಕೊಳ್ಳುತ್ತೇನೆ. ಇದು ಒಬ್ಬ ಮನುಷ್ಯನಿಗೆ ೧೦ ಎಕರೆಯೇ ಇರಬೇಕು ಎನ್ನುವ ಪ್ರಶ್ನೆ ಅಲ್ಲ. ಒಬ್ಬ ಸಾಮಾನ್ಯವಾದ ಮನುಷ್ಯನಿಗೆ ಒಂದು ಸರಳವಾದ ರೀತಿಯಲ್ಲಿ ಜೀವನ ನಡೆಸತಕ್ಕ ಬಗ್ಗೆ ಏನು ಒಂದು ಕುಟುಂಬದ ನೀತಿ ಇರಬೇಕೋ ಆ ಒಂದು ಕುಟುಂಬದಲ್ಲಿ ಅವಶ್ಯಕವಾಗಿರತಕ್ಕಂಥ ಆದರ್ಶ ಜೀವನವನ್ನು ನಡೆಸುವುದಕ್ಕೆ ಮಿತಿ ಇರಬೇಕು. ಅದರ ಬಗ್ಗೆ ಗಮನ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇಲ್ಲದೇ ಹೋದರೆ ನಾವು ಹೇಳಬೇಕಾಗುತ್ತದೆ ಪ್ರಗತಿಪರರು ಮತ್ತು ಪ್ರಗತಿ ಗಾಮಿಗಳು ಎನ್ನುವ ಹೆಸರಿನಲ್ಲಿ ತಾವು ವಂಚನೆ ಮಾಡುವುದು ಬೇಡ, ಮುಂದಿನ ಪೀಳಿಗೆಗೆ ಕುಠಾರಪ್ರಾಯರಾಗಿರಬೇಕು ಇಲ್ಲದೇ ಹೋದರೆ ಆ ಜನ ನಿಮ್ಮನ್ನು ಶಪಿಸುತ್ತಾರೆ ಎಂದು. ಒಬ್ಬ ಮನುಷ್ಯನ ಜೀವನಕ್ಕೆ ೪ ಎಕರೆ ಕೂಡ ಸಾಕಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ತಾವು ಹೇಳುತ್ತೀರಿ ಒಂದು ಕುಟುಂಬದಲ್ಲಿ ಅಡಿಷನಲ್ ಮೆಂಬರ್ ಇದ್ದರೆ ಒಂದು ಯೂನಿಟ್ ಇಟ್ಟುಕೊಳ್ಳಬಹುದು ಎಂದು. ೧೯೬೧ರ ಭೂಸುಧಾರಣಾ ಕಾನೂನು ಪ್ರಕಾರ ೨೭ ಸ್ಟಾಂಡರ್ಡ್ ಎಕರೆ ಇತ್ತು. ಈಗ ಇರುವ ಕಾನೂನಿನ ಪ್ರಕಾರ ಮೆಜಾರಿಟಿಗೆ ಬಂದ ಮಕ್ಕಳು ೪ ಜನ ಇದ್ದರೆ ೪೦ ಎಕರೆ ಇಟ್ಟುಕೊಳ್ಳುವುದಕ್ಕೆ ಸಾಧ್ಯ. ಒಂದೊಂದು ಕುಟುಂಬದಲ್ಲಿ ಮೈನಾರಿಟಿಯಲ್ಲಿರುವವರು ಎಷ್ಟು ಜನ ಇದ್ದಾರೆ, ಮೆಜಾರಿಟಿಯಲ್ಲಿರುವವರು ಎಷ್ಟು ಜನ ಇದ್ದಾರೆ. ಇದರ ವಿವರಣೆ ಪೂರ್ಣವಾಗಿ ಪಡೆದ ಮೇಲೆ ಈ ಒಂದು ಪ್ರಗತಿಗಾಮಿ ಕಾನೂನನ್ನು ತನ್ನಿ. ಹಿಂದಿನ ಒಂದು ಕಾನೂನಿಗಿಂತಲೂ ಈ ಒಂದು ಕಾನೂನು ಪ್ರಗತಿಗಾಮಿಯಾಗಿ ಬರುವುದಕ್ಕೆ ಸಾಧ್ಯವೇ ಎಂದು ಈ ಸಭೆಯಲ್ಲಿ ವ್ಯಕ್ತಪಡಿಸಬೇಕಾಗಿದೆ. ಈವೊತ್ತು ನಾವು ಇದನ್ನು ಕಠೋರವಾಗಿ ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಈಗ ತಾವು ಏನೊಂದು ಈ ವ್ಯವಸಾಯಗಾರನ ಆದಾಯದ ಮಿತಿ ೧೨ ಸಾವಿರ ರೂಪಾಯಿಗೆ ಮೀರಿರಕೂಡದು ಮತ್ತು ಆ ಜಮೀನು ೧೬ ಕಿಲೋಮೀಟರ್‌ಗೆ ಒಳಪಟ್ಟು ಇರಬೇಕು ಎಂದು ಏನು ಹೇಳಿದ್ದೀರಿ ಇದನ್ನು ಯಾವ ಸಮಾಜವಾದದ ಮೇಲೆ ಸೂಚಿಸಿದ್ದೀರಿ ಎಂದು ಪ್ರಶ್ನೆ ಮಾಡಬೇಕಾಗಿದೆ ದೇಶದಲ್ಲಿ ಎಷ್ಟೋ ತರಹ ಸೋಷಿಯಾಲಿಸಮ್ ಆಯಿತು, ಈಗ ಅರಸುರವರ ಸೋಷಿಯಾಲಿಸಮ್ ಶುರು ವಾಗಿದೆ. ಆದುದರಿಂದ ಈ ವ್ಯವಸಾಯದಲ್ಲಿ ನೊಂದಿರತಕ್ಕಂಥ ಜನಕ್ಕೆ ಈ ಒಂದು ನಿರ್ಬಂಧ ಮಾಡಬೇಡಿ ಇದನ್ನು ಕೈ ಬಿಡಬೇಕು ಎಂದು ಹೇಳುತ್ತೇನೆ. ಆದುದರಿಂದ ಈಗ ತಂದಿರುವ ಬಿಲ್ಲು ಯೋಗ್ಯವಾದುದಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ರಿಸಂಪಷನ್ ಪರಿಮಿತಿಯೊಳಗೆ, ಚಿಕ್ಕ ಹಿಡುವಳಿದಾರರಿಗೆ ಅಲ್ಪಸ್ವಲ್ಪ ಜಮೀನು ಬಂದರೆ, ಹಿಂದಿನ ಆಕ್ಟ್ ಪ್ರಕಾರ ಸೆಕ್ಷನ್ ೧೯ರಲ್ಲಿ ಆರು ವರ್ಷದವರೆಗೆ ಮಾರಾಟ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಇತ್ತು. ನಮ್ಮ ಮಂತ್ರಿಗಳು ಈಗ ಹೇಳುತ್ತಿದ್ದಾರೆ, ವಂಶ ಪಾರಂಪರ್ಯವಾಗಿ ಮಾರುವ ಹಾಗೆಯೇ ಇಲ್ಲ. ಯಾವತ್ತಿಗೂ ಮಾರುವ ಹಾಗೆಯೇ ಇಲ್ಲ ಎಂದು ಇದರಲ್ಲಿ ಏನು ಅರ್ಥ ಎಂದು ನನಗೆ ಗೊತ್ತಾಗುವುದಿಲ್ಲ. ಅವನೇ ಸ್ವತಃ ಜಮೀನು ಮಾಡಬೇಕು ಇಲ್ಲದೆ ಇದ್ದರೆ ಸರ್ಕಾರಕ್ಕೆ ಜಮೀನು ವಾಪಸು ಕೊಡಬೇಕು,

MR. DEPUTY SPEAKER

ಜಮೀನು ಬಿಡುವುದಕ್ಕೆ ಅವಕಾಶ ಮಾಡಿಕೊಟ್ಟ ಮೇಲೆ ಈ ಷರತ್ತು ಏಕೆ ? ಇದರ ಹಿನ್ನೆಲೆ ಏನು ; ಸ್ವತಃ ವ್ಯವಸಾಯ ಮಾಡದೆ ಹೋದರೆ ಸರ್ಕಾರಕ್ಕೆ ಕೊಡುವುದಾದರೆ ೩೦ ರೂಪಾಯಿ ಕೊಡುತ್ತಾರೆ. ಅದನ್ನು ತೆಗೆದುಕೊಂಡು ಬೀಡಿ ಕುಡಿದು, ಮಾರನೆ ದಿನ ಫಾಲಿಡಾಲ್ . ತೆಗೆದುಕೊಳ್ಳಬೇಕು. ಜಮೀನು ಮಾರಬಾರದು, ಸರ್ಕಾರಕ್ಕೆ ವಾಪಸು ಕೊಡಬೇಕು ಎನ್ನುವ ಷರತ್ತು ಹಾಕುವುದರಿಂದ, ಜಮೀನನ್ನು ಸರ್ಕಾರದವರು ತೆಗೆದುಕೊಂಡು ಅದಕ್ಕೆ ಅಲ್ಪ ಸ್ವಲ್ಪ ಹಣವನ್ನು ಕೊಟ್ಟರೆ ಸಣ್ಣ ಭೂಮಾಲೀಕ ಅದನ್ನು ತೆಗೆದುಕೊಂಡು ಏನು ಮಾಡುತ್ತಾರೆ ? ರಿಸಂಪ್ಷನ್ ಬಗ್ಗೆ ಈ ಷರತ್ತನ್ನು ಹಾಕಿರುವುದರಿಂದ ಅವನ ಮೇಲೆ ಚಪ್ಪಡಿ ಎಳೆದ ಹಾಗೆ ಆಗಿವೆ. ಭೂ ಸುಧಾರಣೆಯನ್ನು ತಂದು ಭೂಮಿ ಇಲ್ಲದೆ ಇರುವವರಿಗೆ, ವ್ಯವಸಾಯ ಕಾರ್ಮಿಕರಿಗೆ ಭೂಮಿಯನ್ನು ಕೊಡುತ್ತೇವೆಂದು ಹೇಳುವಾಗ, ಅನೇಕ ವರ್ಷಗಳಿಂದ ಭೂಮಿಯನ್ನು ಹೊಂದಿದ್ದ ಜನರಿಗೆ, ಸಣ್ಣ ಹಿಡುವಳಿದಾರರಿಗೆ ನೀವೆಲ್ಲ ಭೂಮಿಯನ್ನು ಬಿಟ್ಟು ಬಿಡಿ, ನೀವು ಕೂಲಿ ಮಾಡಿರಿ ಎನ್ನುವ ರೀತಿಯಲ್ಲಿ ಶಾಸನ ಮಾಡೋಣ. ನಿಮ್ಮ ಅಪ್ಪ ಅಜ್ಜನ ಕಾಲದಿಂದ ಕೂಲಿ ಮಾಡಿಕೊಂಡು ಬಂದವರಿದ್ದಾರೆ ಅವರಿಗೆ ಭೂಮಿಯನ್ನು ಬಿಟ್ಟು ಕೊಟ್ಟು ನೀವು ನಾವು ಕೂಲಿ ಮಾಡೋಣ. ನಮ್ಮ ತಾಯಿ ಇಂದು ಕೂಡ ಭೂಮಿಯಲ್ಲಿ ನಿಂತು ಕೆಲಸ ಮಾಡುತ್ತಾರೆ. ಈಗ ನಾವು ಏನು ಭೂಮಾಲೀಕರಿದ್ದೇವೆ ಬೇರೆಯವರು ಬೆವರು ಸುರಿಸಿ ಕಷ್ಟಪಡುವುದರಿಂದ ಅವರ ರಕ್ತ ಶೋಷಣೆ ಮಾಡಿ ಈ ಸುಖ ಜೀವನವನ್ನು ನಡೆಸುತ್ತಿದ್ದೇವೆನ್ನುವ ಭಾವನೆ ಕೆಲವರಲ್ಲಿದೆ. ನಾನು ಆಗಲೇ ಹೇಳಿದ ಹಾಗೆ ಭೂಮಾಲೀಕರೆಲ್ಲ ಕಾರ್ಮಿಕರಿಗೆ ಮತ್ತು ಕೂಲಿಕಾರರಿಗೆ ಅವರವರ ಭೂಮಿಯನ್ನು ವಹಿಸಿಕೊಟ್ಟು, ಭೂಮಾಲೀಕರೆಲ್ಲ ಕೂಲಿಕಾರರಾಗಬೇಕು ಎಂದು ಒಂದು ರೆಸಲ್ಯೂಷನ್ ಮಾಡೋಣ ರಾಜ್ಯಾಂಗವನ್ನು ಬೇಕಾದರೂ ತಿದ್ದುಪಡಿ ನಾನು ಈ ತಿದ್ದುಪಡಿ ಮಸೂದೆಗೆ ವಿರೋಧವಾಗಿದೇನೆಂದಲ್ಲ ನಾನು ಹೇಳುವುದೇನೆಂದರೆ ಒಂದು ಆರ್ಥಿಕ ಭದ್ರತೆಯ ಆಧಾರದ ಮೇಲೆ—ಈ ದೇಶದಲ್ಲಿರುವ ಆರ್ಥಿಕ ವ್ಯವಸ್ಥೆ ಅವ್ಯವಸ್ಥೆ ಆಗಬಾರದು—ಈ ದೇಶ ಭದ್ರವಾಗಿ ಬೆಳೆಯಬೇಕು ಯಾವುದೇ ಕುಟುಂಬಕ್ಕೆ ನೋವಾಗತಕ್ಕದು ಸಮಾಜದ ಏಳಿಗೆಗೆ ಕಂಟಕವಾಗಬಾರದು ಹಾಗೆಂದ ಮಾತ್ರಕ್ಕೆ ಈಗಿರುವವರು ಸ್ವಲ್ಪ ತ್ಯಾಗ ಮನೋಭಾವನೆಯನ್ನು ಹೊಂದದೆ ಇದ್ದರೆ ಹ್ಯಾವ್ ನಾಟ್ಸ್ ಪರಿಸ್ಥಿತಿ ಏನಾಗುತ್ತದೆ ಎನ್ನುವ ಸಮಸ್ಯೆ ಇದೆ. ಒಂದು ಅಂದಾಜಿನಂತೆ ೭೦ ಲಕ್ಷ ಜನ ಬಡವರು ಬಹಳ ಕಡಿಮೆ ಭೂಮಿ ಇಟ್ಟುಕೊಂಡಿರುವವರೂ ಇದ್ದಾರೆ ಎಂದು ಹೇಳುತ್ತಿದ್ದಾರೆ ಭೂಸುಧಾರಣೆಯೊಂದರಿಂದಲೇ ಈ ಸಮಸ್ಯೆ ಬಗೆಹರಿಯುತ್ತದೆ ಎನ್ನುವುದು ಅಸಾಧ್ಯ ಇದೊಂದು ಸಾಧನೆ, ನಡೆಸುತ್ತಿದ್ದೇವೆ ಎನ್ನುವುದನ್ನು ನೀವು ಹೇಳುವುದಾದರೂ ಕೂಡ ಇದರಿಂದಲೇ ಸಮಸ್ಯೆ ಬಗೆಹರಿಯುವುದಿಲ್ಲ. ಹಿಡುವಳಿ ಮಿತಿ ಏನಿದೆ ಅದನ್ನು ನಾವು ಹೆಚ್ಚು ಶಾಸ್ತ್ರೀಯವಾಗಿ ಆಲೋಚನೆ ಮಾಡಬೇಕು ಮತ್ತು ಸಣ್ಣ ಹಿಡುವಳಿದಾರರಿಗೆ ಭೂಮಿಯನ್ನು ಸ್ವಂತ ಸಾಗುವಳಿಗೆ ತೆಗೆದುಕೊಂಡಾಗ ಅದನ್ನು ಆರು ವರ್ಷ ಪರಭಾರೆ ಮಾಡಬಾರದು ಎನ್ನುವ ಒಂದು ಷರತ್ತನ್ನು ಹಾಕಿದರು. ಆದರೆ ಈ ಮಸೂದೆಯಲ್ಲಿ ಅದನ್ನು ಕಿತ್ತು ಹಾಕಿ ಯಾವ ಕಾಲಕ್ಕೂ ಮಾರಬಾರದು. ವ್ಯವಸಾಯ ಮಾಡದೆ ಹೋದರೆ ಸರ್ಕಾರಕ್ಕೇ ಬಿಟ್ಟುಬಿಡಬೇಕು ಎನ್ನುವುದು ಸಾಧ್ಯವೇ ಮದಲ್ಲ ರಿಸಂಪ್ಷನ್‌ನಲ್ಲಿ ಬರುವ ಭೂಮಿಯನ್ನು ಏನು ಬೇಕಾದರೂ ಮಾಡಿಕೊಳ್ಳಲಿ ಅದರ ಬಗ್ಗೆ ಈಗ ಹಾಕಿರುವ ನಿರ್ಬಂಧ ಸಾಧುವಾದುದಲ್ಲ ವ್ಯವಸಾಯ ಮಾಡದೆ ಭೂಮಿಯನ್ನು ಬಿಟ್ಟು ಎಲ್ಲಿಗೆ ಹೋಗುತ್ತಾನೆ ? ಎಂ. ಎ. ಆಗಿರುವವನಿಗೆ ಏನೂ ಕೆಲಸವಿಲ್ಲದೆ ಹೋದರೆ ಬಸ್ ಕಂಡಕ್ಟರನಾಗಿ ಇರುವುದಕ್ಕೂ ಸಾಧ್ಯವಿಲ್ಲ ಭೂಮಿ ಇದ್ದರೆ ಅದನ್ನು ಮಾಡಿಕೊಂಡು ಗಂಜಿಯನ್ನಾದರೂ ಕುಡಿಯುತ್ತಾನೆ -ಏನಾದರೂ ಅವಶ್ಯಕತೆ ಬಂದಾಗ ಆ ಜಮೀನನ್ನು ಮಾರಬೇಕಾದ ಪರಿಸ್ಥಿತಿ. ಬರಬಹುದು. ಸಣ್ಣ ಹಿಡುವಳಿದಾರ ಇಂದು ಬಹಳ ನೊಂದಿದ್ದಾನೆ ಅವರ ಪರಿಸ್ಥಿತಿ ಹೇಯವಾದ ಪರಿಸ್ಥಿತಿ ಅವರಿಗೆ ಬಹಳ ಅನ್ಯಾಯವಾಗಿದೆ ಆದರು ಎಷ್ಟು ಜನ ಗೇಣಿದಾರರನ್ನು ಒಕ್ಕಲೆಬ್ಬಿಸಿದ್ದಾರೆ ಎಂದು ಕೇಳುತ್ತೇನೆ ಯಾರೂ ಗೇಣಿದಾರರನ್ನು ಒಕ್ಕಲೆಬ್ಬಿಸಿಲ್ಲ ೧೫ ವರ್ಷಗಳ ಗೇಣಿ ಬಾಕಿ ಇದ್ದರೂ ಕೂಡ ಎರಡು ವರ್ಷದ ಗೇಣಿಕೆ ಕೊಟ್ಟರೆ ಸಾಕು ಅವರನ್ನು ಒಕ್ಕಲೆಬ್ಬಿಸುವ ಹಾಗೆ ಇಲ್ಲ. ವಿಧವೆಯರಿಗೆ ವಿನಾಯಿತಿ ಕೊಟ್ಟಿದ್ದರು ಎರಡು ವರ್ಷದ ಗೇಣಿಯನ್ನು ಕೊಟ್ಟರೆ ಸಾಕು ಗೇಣಿದಾರರನ್ನು ಹೊರಗೆ ಹಾಕುವುದಕ್ಕೆ ಸಾಧ್ಯವಿಲ್ಲ ಎಷ್ಟೋ ಜನ ಸಾಲ ಮಾಡಿ ಹೆಣ್ಣು ಮಕ್ಕಳ ಮದುವೆಯನ್ನು ಮಾಡಿ ಈಗ ಭಿಕಾರಿಗಳಂತಾಗಿದ್ದಾರೆ ಈ ಪಾಪಕ್ಕೆಲ್ಲ ನಾವು ಹೊಣೆಗಾರರಾಗಬೇಕಾಗುತ್ತದೆ. ಇಂಥದನ್ನು ಕಣ್ಣಾರೆ ಕಂಡಿರುವುದು ಇದೆ ದೇಸಾಯಿಗಳು ದೊಡ್ಡ ದೊಡ್ಡ ಜಮೀನ್ದಾರರು ಇಂಥವರ ಭೂಮಿಯನ್ನು ಕಿತ್ತುಕೊಳ್ಳಿ ಬೇಡವೆನ್ನುವುದಿಲ್ಲ ಸಣ್ಣ ಭೂಮಾಲೀಕರಿಗೆ ಎಷ್ಟು ಜನರಿಗೆ ಗೇಣಿಯನ್ನು ಕೊಡುತ್ತಿದ್ದಾರೆ ? ದೊಡ್ಡ ಭೂಮಾಲೀಕರಾದರೆ ಕೋರ್ಟಿನಲ್ಲಿ ವ್ಯವಹಾರ ಮಾಡುವುದಕ್ಕೆ ಶಕ್ತಿ ಇರುತ್ತದೆ ಸಣ್ಣ ಭೂಮಾಲೀಕರಿಗೆ ಏನು ರಕ್ಷಣೆಯನ್ನು ಕೊಟ್ಟಿದ್ದೀರಿ ? ವಿಧವೆಯರಿಗೆ ಅಂಗಹೀನರಾಗಿರುವವರಿಗೆ, ಅಶಕ್ತರಾಗಿರುವವರಿಗೆ, ಮಿಲಿಟರಿಯಲ್ಲಿ ಕೆಲಸ ಮಾಡುವವರಿಗೆ ರಿಯಾಯಿತಿಯನ್ನು ತೋರಿಸಿದ್ದೇವೆಂದು ಹೇಳುತ್ತಾರೆ. ಆದರ ಗೇಣಿ ವಸೂಲು

ಮಾಡತಕ್ಕ ಪ್ರಶ್ನೆ ಬಂದಾಗ ಎರಡು ವರ್ಷದ ಗೇಣಿ ಕೊಟ್ಟರೆ ಸಾಕು ಬಿಡು ಪರವಾ ಇಲ್ಲ ಎಂದು ಕಾನೂನು ಮಾಡಿದಾರೆ. ಈ ಅನುಕೂಲವನ್ನು ಮಾಡಿ ಕೊಡುತ್ತೇವೆ ಎಂದು ಹೇಳುವಾಗ ಮತ್ತೊಂದು ಕಡೆ ಇನ್ನೊಂದು ಕುಟುಂಬವನ್ನು ನಿರ್ನಾಮ ಮಾಡುತ್ತಿದೀರಿ ಅವರ ಪರಿಸ್ಥಿತಿ ಅಷ್ಟು ಕೀಳಾಗಿದೆ ನಮ್ಮ ಮಕ್ಕಳಿಗೆ ಆ ಸ್ಥಿತಿ ಬಂದಾಗ ಹೇಗಿರುತ್ತದೆ ಎಂದು ತಿಳಿದುಕೊಂಡು ಮಾನವೀಯತೆಯ ದೃಷ್ಟಿಯಿಂದ ಯೋಜನೆ ಮಾಡಬೇಕಾಗುತ್ತದೆ. ಎಷ್ಟೋ ಕುಟುಂಬಗಳು ಇಂಥ ಚಿಂತಾಜನಕ ಪರಿಸ್ಥಿತಿಯಲ್ಲಿರುವುದನ್ನು ನಾವು ನೋಡಿದ್ದೇವೆ, ಕಣ್ಣಿನಿಂದ ನೋಡುತ್ತಿದ್ದೇವೆ ಆದರೆ ನಾವು ಕಾಯಿದೆಯ ಹೆಸರಿನಲ್ಲಿ ವೋಟು ಸಿಕ್ಕಬೇಕು ಎಂದು ಆಲೋಚನೆ ಮಾಡುತ್ತಿದ್ದೇವೆ. ಏನು ಸುಧಾರಣೆ ಬಂದರೂ ೫೦ ವರ್ಷ ಕಾಲ ಅಧಿಕಾರದಲ್ಲಿ ಇರುವುದಕ್ಕೆ ಸಾಧ್ಯವಿಲ್ಲ ಜನರು ಒದ್ದು ಓಡಿಸುತ್ತಾರೆ ಏನು ಒಳ್ಳೆಯ ಕೆಲಸವನ್ನು ಮಾಡಿದರೂ ಚುನಾವಣೆಯಲ್ಲಿ ಫುಟ್ ಬಾಲಿನಂತೆ ಕಿಕ್ ಮಾಡುತ್ತಾರೆ ಇಂಥ ಕಾನೂನು ಮಾಡುವುದರಿಂದ ಜನರ ವೋಟನ್ನು ಗಳಿಸುತ್ತೇವೆಂಬ ವ್ಯಾಮೋಹಬೇಡ ಇಂಥ ಚರಿತ್ರಾರ್ಹವಾಗಿರತಕ್ಕ ಕಾನೂನು ತರತಕ್ಕ ಕಾಲದಲ್ಲಿ ಮುಂದಿನ ಪೀಳಿಗೆಯ ಮೇಲೆ ಎಂಥ ಪರಿಣಾಮವಾಗುತ್ತದೆ ಎಂದು ಯೋಜನೆ ಮಾಡಿ ಹ್ಯಾವ್ ನಾಟ್ಸ್ ಪರಿಸ್ಥಿತಿಯನ್ನೂ ಗಮನದಲ್ಲಿಟ್ಟುಕೊಂಡು ಅವರ ಪರಿಸ್ಥಿತಿಯೂ ಒಳ್ಳೆಯದಾಗಬೇಕು; ಆ ಬಗೆ ಯೋಜನೆ ಮಾಡಬೇಕು ಅದಕ್ಕೆ ಇದೊಂದೇ ಮಾರ್ಗವಲ್ಲ ಹಲವಾರು ಮಾರ್ಗಗಳಿವೆ ಈಗ ಇರುವಂಥ ಪರಿಸ್ಥಿತಿಯನ್ನು ಸುಧಾರಣೆ ಮಾಡತಕ್ಕದ್ದರ ಬಗ್ಗೆ ಏನೇನು ಹೊಸ ಆರ್ಥಿಕ ಯೋಜನೆಗಳನ್ನು ನಿರೂಪಣೆ ಮಾಡಬೇಕು ಎಂದು ಆಲೋಚನೆ ಮಾಡತಕ್ಕ ಕಾಲ ಬಂದಿದೆ. ಎರಡು ಸಾವಿರ ಎಕರೆ ಭೂಮಿ ಇರುವವರು ಇರಬಹುದು ಎನ್ನುವುದು ಬೇಡ ಅದನ್ನು ಕಿತ್ತು ಹಾಕೋಣ. ಯಾವ ಮಿತಿ ಇಡಬೇಕು ಎನ್ನುವ ಬಗ್ಗೆ ಆಲೋಚನೆ ಮಾಡಬೇಕು. ಆರು ವರ್ಷದ ಶರತ್ತನ್ನು ತೆಗೆಯುವುದು ಏನು ಇದೆ ಅದನ್ನು ಕೈಬಿಡುವುದು ಸೂಕ್ತ ಎಂದು ಸಣ್ಣ ಹಿಡುವಳಿ ದೃಷ್ಟಿಯಿಂದ ಇಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಸೆಕ್ಷನ್ ೧ ರ ಪ್ರಕಾರ ಕೋರ್ಟಿನ ವ್ಯಾಪ್ತಿಯನ್ನು ತೆಗೆದು ತಹಶೀಲ್ದಾರ್ ಅವರಿಗೆ ಕೊಡುತ್ತೀರಿ. ಇವರಿಂದ ದೇಶದಲ್ಲಿ ನಾವಾಗಿಯೇ ಕರಪ್ಷನ್‌ಗೆ ಅವಕಾಶ ಮಾಡಿದಂತಾಗುತ್ತದೆ ತಹಶೀಲ್ದಾರರ ಮಾತಲ್ಲ, ಈ ಮನೆಯಲ್ಲಿ ಕೂತಿರುವ ನಮ್ಮಲ್ಲಿ ಹೃದಯ ಬಿಚ್ಚಿ ನೋಡಿಕೊಳ್ಳುವುದಾದರೆ ಎಷ್ಟು ಜನ ಪ್ರಾಮಾಣಿಕತೆಯಿಂದ ಇದ್ದೇವೆ ಎಂದು ನಮಗೆ ಅರ್ಥವಾಗುತ್ತದೆ. ಆದ್ದರಿಂದ ತಹಶೀಲ್ದಾರರ ಕೈಯಲ್ಲಿ ಇಂಥ ಅಧಿಕಾರ ಕೊಟ್ಟರೆ ಒಳ್ಳೆಯದಲ್ಲ ಎಂದು ಹೇಳುತ್ತೇನೆ ಇದನ್ನು ತ್ವರಿತವಾದ ರೀತಿಯಲ್ಲಿ ಜಾರಿಗೆ ತರಬೇಕು, ತಹಶೀಲ್ದಾರರ ಕೈಯಲ್ಲಿ ಇದನ್ನು ಕೊಡುವುದು ಯೋಗ್ಯವಾದದು ಅಲ್ಲ. ಕೋರ್ಟಿನ ಪರಮಾವಧಿಯೊಳಗೆ ಹೊರಗಡೆ ಕಾಯಿದೆ ಇಂಪ್ಲಿಮೆಂಟ್ ಮಾಡುವುದಕ್ಕೆ ಅಭಿಪ್ರಾಯವಿದ್ದರೆ ಸ್ವಲ್ಪ ಸುಪೀರಿಯರ್ ಆಫೀಸರ್ ಡೆಪ್ಯೂಟಿ ಕಮಿಷನರ್ ಮಾಡಿ ಆದರೆ ತಹಶೀಲ್ದಾರ್ ಅವರ ಕೈಗೆ ಕೊಡುವುದು ಬೇಡ. ಇದು ಸಾಧುವಾದುದು ಅಲ್ಲ ಇದರಿಂದ ಅನಾಹುತವಾದೀತು. ಇದರಿಂದ ರಾಜಕೀಯ ಪ್ರವೇಶವಾಗುತ್ತದೆ ಎಂದು ಹೇಳಬೇಕಾಗುತ್ತದೆ. ಡಿಕ್ಲರೇಷನ್ ಮಾಡದಿದ್ದರೆ, ಐನೂರು ರೂಪಾಯಿ ಜುಲಾನೆ ಹಾಕುತ್ತಾರೆ, ಅದು ಸರ್ಕಾರಕ್ಕೆ ಹೋಗುತ್ತದೆ ಎಂದು ಇದೆ. ನಾಳೆ ಡಿಕ್ಲರೇಷನ್ ಮಾಡದೆ ಹೋದರೆ ಪರಿಸ್ಥಿತಿ ಏನಾಗುತ್ತದೆ ? ಇದರಿಂದ ರಾಜಕೀಯ ಪ್ರಭಾವಕ್ಕೆ ಒಳಗಾಗುವ ಸನ್ನಿವೇಶ ಬರುತ್ತದೆ ಇಂಥ ಒಂದು ಕಾನೂನನ್ನು ಜಾರಿಗೆ ತರತಕ್ಕ ಕಾಲದಲ್ಲಿ ತಹಶೀಲ್ದಾರರಿಗೆ ಇದನ್ನು ಬಿಡತಕ್ಕದ್ದು ಬೇಡ ಇದು ಕೋರ್ಟಿನಲ್ಲಿಯೇ ಇರಲೀ ಸ್ಪೆಷಲ್ ಕೋರ್ಟು ಮಾಡಬೇಕು ಎಂದು ನಿರ್ಧಾರ ತೆಗೆದುಕೊಂಡರೆ ಒಳ್ಳೆಯದು. ಇವತ್ತು ಈ ತಿದ್ದುಪಡಿಯಿಂದ ತ್ವರಿತವಾದ ರೀತಿಯಲ್ಲಿ ಕೆಲಸವಾಗುವುದಕ್ಕೆ ಕೋರ್ಟಿನ ವ್ಯಾಪ್ತಿಯನ್ನು ಹೆಚ್ಚು ಮಾಡುವುದಕ್ಕೆ ನನ್ನ ಅಡ್ಡಿ ಇಲ್ಲ. ಆದರೆ ಈ ತಹಶೀಲ್ದಾರರ ಕೈಗೆ ಅಧಿಕಾರ ಕೊಡುವುದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ತಿದ್ದುಪಡಿ ಆಕ್ಟನ್ನು ೧೯೬೧ ರಿಂದ ರಿಟ್ರಾಸ್ಪೆಕ್ಟೀವ್ ಆಗಿ ಬರಬೇಕು ಎಂದು ಹೇಳಿದ್ದೀರಿ ಇವತ್ತು ಒಬ್ಬ ರೈತ ಕೆಲವು ಜಮೀನುಗಳನ್ನು ಮಾರಿಕೊಂಡು ಬಿಟ್ಟಿದ್ದರೆ ಅವನಿಗೆ ಸೀಲಿಂಗ್ ಲಿಮಿಟ್ ಫಿಕ್ಸ್ ಮಾಡಬೇಕಾಗಿದ್ದರೆ, ಮಾರಿರುವ ಜಮೀನು ಲೆಕ್ಕ ಹಿಡಿದು ಸೀಲಿಂಗ್ ಫಿಕ್ಸ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಪೂರ್ತಿ ಜಮೀನನ್ನು ಮಾಡಿರುವವನ ಹತ್ತಿರ ಏನು ಹಿಡಿದುಕೊಳ್ಳುವುದು ? ಮಾನ್ಯ ಗೋಪಾಲಗೌಡರ ಭಾಷೆಯಲ್ಲಿ ಹೇಳುವುದಾದರೆ ಗಂಟೆ ಹಿಡಿದುಕೊಳ್ಳಬೇಕು. ೨-೧೦ ಎಕರೆ ಇಟ್ಟುಕೊಂಡಿದ್ದರೆ ಅವನಿಗೆ ಪೀನಲೈಸ್ ಮಾಡುತ್ತೀರಿ ಅವನು ನಾಳೆ ಬೆಳಿಗ್ಗೆ ಪೂರ್ತಿ ಜಮೀನು ಮಾರುತ್ತಾನೆ ಆಗ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋದಾಗ ಗುದ್ದಾಡುತ್ತಾರೆ ಪೂರ್ತಿ ಜಮೀನು ಮಾರಿದವನಿಗೆ ಪೀನಲೈಸ್ ಮಾಡುವುದಕ್ಕೆ ಸಾಧ್ಯವಿಲ್ಲ ಸೀಲಿಂಗ್ ಲಿಮಿಟ್ ಒಳಗೆ ಇರುವವರಿಗೆ ಪೀನಲೈಸ್ ಮಾಡುತ್ತೀರಿ. ಪೀನಲೈಸ್ ಮಾಡುವುದಾದರೆ ಎಲ್ಲರಿಗೂ ಮಾಡಿ. ಆದ್ದರಿಂದ ಈ ಪೀನಲೈಸ್ ಮಾಡತಕ್ಕ ಪರಿಸ್ಥಿತಿ ಬೇಡ. ಪೂರ್ಣ ಜಮೀನು ಮಾರಿರತಕ್ಕವನನ್ನು ಈ ಒಂದು ಕಲಮಿನಲ್ಲಿ ನೀವು ಪೀನಲೈಸ್ ಮಾಡುವುದಕ್ಕೆ ಸಾಧ್ಯವೇ ? ಇದರಿಂದ ಅಲ್ಪಸ್ವಲ್ಪ ಜಮೀನು ಇಟ್ಟುಕೊಂಡಿರತಕ್ಕವನಿಗೂ ೧೯೬೧ ರಿಂದ ಜಮೀನು ಮಾರಾಟ ಮಾಡಿರತಕ್ಕವನಿಗೂ ಸೀಲಿಂಗ್ ಫಿಕ್ಸ್ ಮಾಡತಕ್ಕ ಕಾಲದಲ್ಲಿ ಮಾರಿದಂಥ ಜಮೀನು ಲೆಕ್ಕ ಹಿಡಿದು ಸೀಲಿಂಗ್ ಫಿಕ್ಸು ಮಾಡುತ್ತೇವೆ ಎಂದು ಹೊರಟಿರತಕ್ಕದ್ದು ಏನು ಇದೆ ಅದು ಸಾಧುವಾದುದು ಅಲ್ಲ. ಈ ದೃಷ್ಟಿಯಿಂದ ಈ ಒಂದು

MR. DEPUTY SPEAKER

ಮಾತನ್ನು ಹೇಳುತ್ತಿದ್ದೇನೆ. ಇವತ್ತು ಅನೇಕ ಜನ ಮಾರಾಟ ಮಾಡಿದ್ದಾರೆ, ಭೂಮಾಲಿಕರು, ಶಾಸನ ಸಭೆಯಲ್ಲಿ ಸದಸ್ಯರಾಗಿರುವವರು, ಮಂತ್ರಿಗಳು, ಮಾಜಿ ಮಂತ್ರಿಗಳು ಎಂ. ಎಲ್. ಎ. ಗಳು, ಮಾರಿದ್ದಾರೆ ಈ ಒಂದು ಕಾನೂನು ಬರುತ್ತದೆ ಎಂದು ತಿಳಿದುಕೊಂಡಿರುವವರು ಎಲ್ಲರೂ ಮಾರಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ — ಪಾಟೀಲ್ ನಾಗರಾಜ್, ಅವರು, ಅವರಿಗೆ ಮನೆಯಿಲ್ಲ ಎಂದು ಹೇಳಿದ್ದಾರೆ, ನಮಗೆ ಏನೂ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ .—ಇವತ್ತು, ಆದಕ್ಕೋಸ್ಕರ ಪ್ರೂರ್ತಿ ಜಮೀನು ಮಾರಿರತಕ್ಕವನನ್ನು ಪೀನಲೈಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಈ ತಿದ್ದುಪಡಿ ಸರಿಯಾದುದು ಅಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕೆ ಇಚ್ಛೆಪಡುತ್ತೇನೆ. ಕಾಂಪನ್ಸೇಷನ್ ಅನ್ನು ಭೂಮಾಲಿಕನಿಗೆ ಕೊಡುವುದಕ್ಕೆ ಸ್ಲೈಡಿಂಗ್ ಸ್ಕೇಲ್ ಹಾಕಿದ್ದಾರೆ. ಟೆನೇಟ್‌ಗೆ ಕೊಡತಕ್ಕದ್ದು ಹನ್ನೆರಡರಷ್ಟು ಅಥವಾ ಐದು ಸಾವಿರ ರೂಪಾಯಿ ಹಾಕಿದ್ದಾರೆ. ಅವನಿಂದ ವಸೂಲು ಮಾಡುವುದು ೧೫ ರಷ್ಟು. ಈ ಮಾರ್ವಾಡಿ ವ್ಯಾಪಾರ ಏತಕ್ಕೆ ? ಭೂಮಾಲಿಕನಿಗೆ ೨೫ ರಷ್ಟು, ಟೆನೇಟಿಗೆ ೧೦-೧೨ ರಷ್ಟು, ಎಂದು ಹಾಕಿಕೊಂಡಿದ್ದಾರೆ ಆದರ ಉದ್ದೇಶವಾದರೂ ಏನು ? ಇದರಲ್ಲೂ ಸರ್ಕಾರ ಸ್ವಲ್ಪ ರಿಸೋರ್ಸಸ್ ಹೆಚ್ಚು ಮಾಡಿಕೊಳ್ಳತಕ್ಕ ಭಾವನೆ ಇದೆಯೋ ಏನೋ ಗೊತ್ತಾಗಲಿಲ್ಲ. ಬಡವರು ಎಂದು ಹೇಳುವ ಸನ್ನಿವೇಶದಲ್ಲಿ ವ್ಯಾಪಾರ ಏತಕ್ಕೆ ? ಒಂದು ವೇಳೆ ಇದರಿಂದ ಹಣ ಮಾಡಬೇಕು ಎನ್ನುವ ಉದ್ದೇಶದಿಂದ ಹೇಳುವುದಾದರೆ ನನ್ನ ಅಡ್ಡಿ ಇಲ್ಲ. ಹಾಗೆ ಮಾಡುವುದಾದರೆ ೨೫ ರಷ್ಟನ್ನು ಮಾಡಬಹುದು, ಆದರೆ ಇದು ಸಾಧುವಾದುದು ಅಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಇನ್ನು ಕ್ಲಾರಿಫಿಕೇಷನ್‌ಗೆ ಬಂದರೆ, ಇಲ್ಲಿ ಫಸ್ಟ್ ಕ್ಲಾಸ್ ಅಷೂರ್ಡ್ ಇರಿಗೆಷನ್ ಇದೆ. ಅಷ್ಯೂರ್ಡ್ ಇರಿಗೇಷನ್‌ಗೆ ಡೆಫಿನಿಷನ್ ಏನು ಎಂಬುದನ್ನು ಹೇಳಲಿಲ್ಲ

"Land posse sii g facilities for assure l irrigation where two crop of paddy can be raised in a year or one crop of sugarcane can bes raised." ಎಂದು ಇದೆ. ಅಷ್ಯೂರ್ಡ್ ಇರಿಗೇಷನ್ ಯಾವುದು ? ಸ್ವಂತ ಭಾವಿ ತೆಗೆಸಿಕೊಂಡಿರುತ್ತಾರೆ, ಅಂಥವರಿಗೆ ೧೨ ತಿಂಗಳೂ ನೀರಾವರಿಯಾಗುತ್ತದೆ. ಈ ತಿದ್ದುಪಡಿಯಲ್ಲಿ ಇದರ ಬಗ್ಗೆ ಕ್ಲಾರಿಫಿಕೇಷನ್ ಮಾಡಿಲ್ಲ. ಸರ್ಕಾರದ ಸೋರ್ಸಸ್‌ನಿಂದ ನೀರು ಬರತಕ್ಕದು ಎಂದು ಇದ್ದರೆ ಅನುಮಾನಕ್ಕೆ ಎಡೆ ಕೊಡತಕ್ಕ ಬೇಕಾದ ಅವಕಾಶ ಇದ್ದಿಲ್ಲ. ಡೆಫಿನಿಷನ್‌ನಲ್ಲಿ ಅಷ್ಯೂರ್ಡ್ ವಾಟರ್ ಸಪ್ಲೈ ಯಾವುದು ಎಂದು ಹೇಳಿದ್ದಾರೆ ಈ ಒಂದು ಅನುಮಾನಕ್ಕೆ ಸಾಧ್ಯವಿರಲಿಲ್ಲ. ೧೯೬೧ರ ಆಕ್ಟ್‌ನಲ್ಲೂ ಕೂಡ ಅಷ್ಯೂರ್ಡ್ ವಾಟರ್ ಸೋರ್ಸಸ್ ಬಗ್ಗೆ ಡೆಫಿನಿಷನ್ ಇಲ್ಲ. ಇದನ್ನು ಸ್ಪಷ್ಟೀಕರಣ ಮಾಡುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯ ಮಂತ್ರಿಗಳು) :—ಅದು ಹೇಗೆ ಮಾಡಬೇಕು ?

ಶ್ರೀ ಎಚ್. ಡಿ. ದೇವೇಗೌಡ .—ಗವರ್ನಮೆಂಟ್ ಸೋರ್ಸಸ್ ಎಂದು ಮಾಡಿ. ಸೆಕೆಂಡ್‌ಕ್ಲಾಸ್‌ನಲ್ಲಿ possessing facilites for assured irriga'ion where one crop of paddy can be raised in a year ; or irr gated by lifing water from a river, tank or channel ; land irrigated from miner tanks where one crop of paddy can be raised in a year. ಎಂದರೆ ಚಾನಲ್ ನೀರು ಸಿಕ್ಕತಕ್ಕವನಿಗೆ ಆಗತಕ್ಕ ವೆಚ್ಚಕ್ಕೂ ಸ್ವಂತಪಂಪ್ ಸೆಟ್ ಇಟ್ಟುಕೊಂಡು ನೀರು ಲಿಫ್ಟ್ ಮಾಡಿ ಸರ್ಕಾರದ ಪರ್ಮಿಷನ್ ತೆಗೆದುಕೊಂಡು ಏನು ಭತ್ತ ಬೆಳೆಯುತ್ತಾನೆ. ಅವನಿಗೆ ಆಗತಕ್ಕ ವೆಚ್ಚಕ್ಕೂ ಬಹಳ ವ್ಯತ್ಯಾಸ ಇದೆ.

ನೀವು ಇವೊತ್ತು ಅದನ್ನು ಒಂದಕ್ಕೊಂದಕ್ಕೆ ಹೋಲಿಸತಕ್ಕದು ಸರಿಯಾದುದು ಅಲ್ಲ. ಅವನೇ ಸ್ವತಃ ಭೂಮಿ ಇಟ್ಟುಕೊಂಡು ಕೆಲಸ ಲಿಫ್ಟ್ ಇರಿಗೇಷನ್ ಮಾಡುವುದರಲ್ಲಿ ವೆಚ್ಚ ಜಾಸ್ತಿಯಾಗುತ್ತದೆ. ಎಲ್ಲರಿಗೂ ಇದು ಗೊತ್ತಿರುವ ವಿಷಯ. ನೀವು ಹೇಗೆ ಈ ಕೆಟಗರಿ ಹಾಕುತ್ತೀರಿ? ಅನೇಕ ಕಡೆ ಲಿಫ್ಟ್ ಇರಿಗೇಷನ್ ಇದೆ ಅವರೇ ಸ್ವತಃ ಮಾಡಿಕೊಂಡಿದ್ದಾರೆ. ಗೌರ್ನಮೆಂಟ್ ಲಿಫ್ಟ್ ಇರಿಗೇಷನ್ ಇದ್ದರೆ ಒಪ್ಪಿಕೊಳ್ಳುತ್ತೇನೆ ಗೌರ್ನಮೆಂಟ್‌ನವರು ಲಿಫ್ಟ್ ಇರಿಗೇಷನ್ ಫೆಸಿಲಿಟಿ ಮಾಡಿಕೊಟ್ಟರೆ ವಾಟರ್ ರೇಟ್ ಫಿಕ್ಸ್ ಮಾಡುತ್ತೀರಿ. ಹಾಗಲ್ಲದೆ ಸ್ವತಃ ರೈತನೇ ಮಾಡಿಕೊಂಡಿರುವುದು ಇದ್ದರೆ ಅವನನ್ನು ಆ ಕೆಟಗರಿಯಲ್ಲಿ ಸೇರಿಸತಕ್ಕದು ಸಾಧುವಾದುದು ಅಲ್ಲ. ಅದನ್ನು ಕೈ ಬಿಡುವುದು ಒಳ್ಳೆಯದು.

4-00 P.M.

ಶ್ರೀ ಡಿ. ದೇವರಾಜ್ ಅರಸ್ :—ಇನ್ನು ಎಲ್ಲಿಗೆ ಸೇರಿಸಬೇಕು.

ಶ್ರೀ ಎಚ್. ಡಿ. ದೇವೇಗೌಡ :—೬೦ ರಿಂದ ೭೦ ರೂಪಾಯಿ ಕರೆಂಟ್ ಚಾರ್ಜ್ ಕೊಡುತ್ತಾನೆ. ೨೦ ರೂಪಾಯಿ ಪ್ಯಾಡಿಯಿಂದ ಹೋಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್ :—ಪುಕ್ಕಸಾಟೆಯಲ್ಲಿ ನೀರು ಸಿಕ್ಕುತ್ತದೆ ಮರೆಯಬೇಡಿ. ಒಂದೇ ಬೆಳೆ.

ಶ್ರೀ ಎಚ್. ಡಿ. ದೇವೇಗೌಡ :—ಪುಕ್ಕಸಾಟೆಯಲ್ಲಿ ನೀರು ಸಿಕ್ಕಿದರೆ? ಕೊಯ್ನಾ ನೀರು ಬಿಡಿಸುವುದಕ್ಕೆ ಹೋಗಿದ್ದಿರಿ. ಅದು ಕಷ್ಟವಾಗುತ್ತದೆ. ೧೦ ಎಕರೆಗೆ ವಿರೋಧ ಮಾಡತಕ್ಕ ಎಲ್ಲಾ ಲೀಡರ್ಸ್ ಸಮಾಜದಲ್ಲಿ ಪ್ರತಿಗಾಮಿಗಳು ಎಂಬ ಭಾವನೆ ಇದ್ದರೆ ಅದನ್ನು ಕೈಬಿಡಬೇಕಾಗುತ್ತದೆ.

ಶ್ರೀ ಆರ್. ಗುಂಡೂರಾವ್ :—ಮತ್ತೆ ಏತಕ್ಕೆ ವಿರೋಧ ಮಾಡುತ್ತೀರಿ? ಒಪ್ಪಿಕೊಳ್ಳಿ.

ಶ್ರೀ ಎಚ್. ಡಿ. ದೇವೇಗೌಡ ;—ಒಪ್ಪಿಕೊಳ್ಳುತ್ತೇನೆ. ಇನ್ನೂ ಸ್ವಲ್ಪ ದುಡ್ಡು ಮಾಡಿಲ್ಲ. ಭೂಮಿ ಆಧಾರದ ಮೇಲೆ ಇದ್ದೇನೆ ಈಕ್ವೇಷನ್-೧ ; ೧.೫ ಮಾಡಿದ್ದೀರಿ. ೧.೫ ಪ್ರಶ್ನೆ ಬಂದಾಗ ಇದು ಹೇಗೆ? ಇದಕ್ಕೆ ಆಧಾರ ಏನು? ಒಂದು ಎಕರೆಯೊಳಗೆ ಕಬ್ಬು ಬೆಳೆಯುತ್ತಾರೆ. ಒಂದು ಎಕರೆಯಲ್ಲಿ ಕಬ್ಬು ಬೆಳೆದರೆ ಒಂದೂವರೆ ಸಾವಿರ ರೂಪಾಯಿ ಕನಿಷ್ಟ ಉತ್ಪನ್ನ ಬರುತ್ತದೆ ಎಂದು ಭಾವನೆ. ಶುಗರ್ ಫ್ಯಾಕ್ಟರಿಗೆ ಕಬ್ಬು ಕೊಡುತ್ತಾರೆ ಎನ್ನುವ ಆಧಾರ ಇಟ್ಟುಕೊಂಡು ಮಾತನಾಡುವುದಾದರೆ, ಒಂದುವರೆ ಸಾವಿರ ರೂಪಾಯಿ ಬರುತ್ತದೆ. ಕೆಲವು ಸಂದರ್ಭದಲ್ಲಿ ಎರಡೂವರೆ ಸಾವಿರ ರೂಪಾಯಿ ಆಗುತ್ತದೆ. ಬೆಲ್ಲ ಜಾಸ್ತಿ ಆದಾಗ ಕ್ಲಾಸ್ (೨) ಎಂದು ಕ್ಲಾಸಿಫೈ ಮಾಡಿದ್ದೀರಿ. ಬತ್ತ ಎಷ್ಟೋ ಕಷ್ಟಪಟ್ಟು ಬೆಳೆಯುತ್ತಾನೆ ೧೦ ಖಂಡುಗದ ಮೇಲೆ ಬೆಳೆಯುವುದಕ್ಕಾಗುವುದಿಲ್ಲ ಬಹಳ ಟಾಪ ಕ್ಲಾಸ್ ಎಂದು ಹೇಳಿದರೂ ಒಂದೂವರೆ ಎಕರೆಗೆ ೧೫ ಖಂಡುಗ ಬೆಳೆಯುತ್ತಾನೆ ಎಂದರೆ ಗೊಬ್ಬರ, ಕೂಲಿ, ನಾಲಿ ಕಳೆದುಕೊಂಡು ಕುಟುಂಬದವರ ಕೂಲಿ ಹಾಕಿಕೊಂಡು ಅದನ್ನು ಕಳೆದರೆ ಯಾವರೀತಿ ಇವೆರಡನ್ನೂ ಈಕ್ವೇಷನ ಮಾಡಿದ್ದೀರಿ ಎಂಬುದನ್ನು ಸಮರ್ಥನೆ ಮಾಡಿ. ನನಗೆ ಗೊತ್ತಿರುವ ರೀತಿಯಲ್ಲಿ ೩ ನೂರು ೪ ನೂರು ರೂಪಾಯಿ ಮೇಲೆ ಉಳಿಯುವುದಿಲ್ಲ. ಮತ್ತೆ ಕೂಲಿ ನಾಲಿ ಪಾರ ತೆಗೆದರೆ ಹೆಚ್ಚು ಉಳಿಯುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್ .—ಎಷ್ಟು ಹಾಕಬೇಕು ?

ಶ್ರೀ ಎಚ್. ಡಿ. ದೇವೇಗೌಡ .—೧:೨ ಮಾಡಿ. ಆ ಮೇಲೆ ಕ್ಲಾಸ್ ೩ಯಲ್ಲಿ ಇವೊತ್ತು ಹೇಳಿದಿರಿ ೬೦ ಎಕರೆ ಕಮ್ಮಿ ಇರತಕ್ಕ ಅಚ್ಚುಕಟ್ಟಿನಲ್ಲಿ ಇರತಕ್ಕ ತರಿ ಜಮೀನು ಏನು ಇದೆ ಅದನ್ನು ಕ್ಲಾಸ್ (೩) ಕೆಟಗರಿ ತರಬೇಕು ಎಂದು ಹೇಳಿದ್ದೀರಿ. ಬಹುಶಃ ೧೦ ವರ್ಷದ ಮಳೆ ಆಧಾರ ಹಿಡಿಯುವುದಾದರೆ ೫೦ ಎಕರೆ ಒಳಗಿರುವ ಮೈನರ್ ಟ್ಯಾಂಕ್‌ನಲ್ಲಿ ಎಷ್ಟು ತುಂಬಿ ಬೆಳೆಗೆ ಅನುಕೂಲವಾಗಿವೆಯೋ ಎಂಬ ಅಂಕಿಅಂಶ ಸಂಗ್ರಹಣೆ ಮಾಡಿ ಹೇಳಿ. ೬೨ ರಿಂದ ಈಚೆಗೆ ಎಷ್ಟು ಕೆರೆಗಳ ಹಿಂಬಾಗದಲ್ಲಿ ಗದ್ದೆ ಫಸಲು ತೆಗೆದಿದ್ದಾರೆ ನೋಡೋಣ. ಬಹುಶಃ ಮಲೆನಾಡಿನಲ್ಲಿ ಇರಬೇಕು, ಈ ಮಲೆನಾಡಿನಲ್ಲಿ ಕೆರೆಗಳು ಇಲ್ಲದಿದ್ದರೂ ಮಳೆ ಬೀಳತಕ್ಕ ಸನ್ನಿವೇಶ ಇದೆ. ಮೈದಾನ ಪ್ರದೇಶದಲ್ಲಿ ಕ್ಷಾಮ ಪ್ರದೇಶದಲ್ಲಿ ರೈನ್‌ಫಾಲ್ ತಗೆದು ನೋಡಿದರೆ ವರ್ಷವರ್ಷ ರೈನ್‌ಫಾಲ್ ಕಮ್ಮಿಯಾಗುತ್ತಿದೆ. ಸೆಕ್ರೆಟೇರಿಯೆಟ್‌ನವರು ಒಂದು ಕಾಗದ ಕಳುಹಿಸಿದ್ದಾರೆ. ರೈನ್‌ಗೇಜ್ ಅನೇಕ ಕಡೆ ಫಂಕ್ಷನ್ ಮಾಡದೆ ಇರುವುದರಿಂದ ಕರಾರುವಾಕ್ಕಾಗಿ ಎಷ್ಟು ಮಳೆ ಎಲ್ಲೆಲ್ಲಿ ಬಿದ್ದಿದೆಯೆಂದು ಹೇಳುವುದಕ್ಕೆ ಸಾಧ್ಯವಿಲ್ಲ ಎಂದು. ನೀರಿನ ಆಶ್ರಯ ಇದ್ದರೆ ಅಡ್ಡಿ ಮಾಡುವುದಿಲ್ಲ ಬಹುತೇಕ ನಮ್ಮ ಕಡೆ ಅನುಭವ ಇರುವ ರೀತಿ ಬೆಂಗಳೂರು ಜಿಲ್ಲೆ ಅಂತಹ ಹೆಚ್ಚು ಮಳೆ ಕಂಡಿಲ್ಲ ಭಾರಿ ಮಳೆ ಶಿವಮೊಗ್ಗ ಭಾಗದಲ್ಲಿ ಇರಬಹುದು. ಅಲ್ಲೂ ಕೂಡ ಈಸಾರಿ ಏಟು ಬಿದ್ದಿದೆಯೆಂದು ನಮ್ಮ ಮಿತ್ರರು ಒಬ್ಬರು ಹೇಳಿದ್ದಾರೆ. ಮೈದಾನ ಪ್ರದೇಶದಲ್ಲಿ ಇದು ಉತ್ಪ್ರೇಕ್ಷೆಯಿಂದ ಹೇಳುವ ಮಾತಲ್ಲ. ಕಳೆದ ೧೦ ವರ್ಷಗಳಿಂದ ನೋಡಿದ್ದೇನೆ. ಅನೇಕ ಸಾರಿ ಮೈನರ್ ಟ್ಯಾಂಕ್ ಈಕ್ವೇಷನ್ ಏನು ಮಾಡಿದ್ದೀರಿ, ಇದು ಸರಿಯಾದುದಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಕ್ಲಾಸ್ (೪)ರಲ್ಲೂ ಅಷ್ಟೇ.

ಶ್ರೀ ಡಿ. ದೇವರಾಜ್ ಅರಸ್ .—ನಿಮ್ಮ ಅಭಿಪ್ರಾಯ ಎಷ್ಟು ಮಾಡಬೇಕು ಹೇಳಿ.

ಶ್ರೀ ಎಚ್. ಡಿ. ದೇವೇಗೌಡ .—ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಇದನ್ನು ಡ್ರೈಲ್ಯಾಂಡ್‌ಗೆ ಈಕ್ವೇಟ್ ಮಾಡಬಹುದು! ಲಾಸ್ಟ್ ಕೆಟಗರಿ ೫೪ ಎಕರೆಗಳು ಹಾಕಿದ್ದೀರಿ. ಅದಕ್ಕೆ ಬರುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ .—ನಿಮ್ಮ ಸಲಹೆ ಏನು ?

ಶ್ರೀ ಎಚ್. ಡಿ. ದೇವೇಗೌಡ :—ಇದನ್ನು ಹೆಚ್ಚು ಮಾಡಬೇಕು. ಇವೊತ್ತು ಕ್ಲಾಸ್ (೪)ರಲ್ಲಿ ರೈನ್‌ಫೆಡ್ ವೆಟ್ ಇದೆ. ಮೇಲೆ ಹೇಳಿದ ಹಾಗೆ ಕೆರೆ ಹಿಂಬಾಗದ ಜಮೀನಿನಲ್ಲಿ ಬೆಳೆ ಬರತಕ್ಕ ನಂಬಿಕೆ ಇಲ್ಲ. ರೈನ್ ಫೆಡ್ ವೆಟ್‌ಗೂ ಕೂಡ ಅದೇ ಪರಿಸ್ಥಿತಿ. ಮಳೆ ಆದರೆ ಬಹುಶಃ ಇದು ಎರಡು ಜಿಲ್ಲೆಗಳಿಗೆ ಅಪ್ಲೈ ಆಗಬಹುದು. ಅಲ್ಲೂ ಕೂಡ ಬೆಳೆ ಬಂದರೆ ನನ್ನ ಅಡ್ಡಿ ಇಲ್ಲ. ಈ ಬೆಳೆ ಬರತಕ್ಕದ್ದು ಕಳೆದ ೧೦ ವರ್ಷದ ರೆವಿನ್ಯೂ ರೆಕಾರ್ಡ್ ತರಸಿ ಅದರ ಆಧಾರ ಇಟ್ಟುಕೊಂಡು ಕ್ಲೈಫಿಕೇಷನ್ ಮಾಡಿದೀರಿ. ಕಳೆದ ಹತ್ತು ವರ್ಷಗಳ ಆಧಾರದಿಂದ ಇಟ್ಟುಕೊಂಡು ಇಲ್ಲಿ ಹೇಳುತ್ತಿದ್ದೀರಿ. ಆದರೆ ವರ್ಷೇ ವರ್ಷೇ ಮಳೆ ಕೂಡ ಕಡಿಮೆಯಾಗುತ್ತ ಬರುತ್ತಿದೆ. ಹಿಂದೆ ೬೧ರಲ್ಲಿ ಇದ್ದ ಕಾನೂನಿನಲ್ಲಿ ಎಲ್ಲ ತಾಲ್ಲೂಕುಗಳಲ್ಲಿ ಏನಿತ್ತೋ ಅದನ್ನೇ ಇಲ್ಲಿ ಹೇಳಿದ್ದಾರೆ. ಆ ಒಂದು ಆಧಾರವನ್ನು ಈಗ ಇಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕಳೆದ ಹತ್ತು ವರ್ಷಗಳಲ್ಲೇ ಆಗಿರುವ ಅನುಭವ ನಮ್ಮ ಮುಂದೆ ಈಗ ಇದೆ. ಹೀಗಿರುವಾಗ ಏಳನೆ ವರ್ಗದಲ್ಲಿ ೫೪ ಎಕರೆ ಎಂದು ಹೇಗೆ ನಿಗದಿ ಮಾಡುತ್ತೀರಿ? ನಾನು ಈಚೆಗೆ ಬಿಜಾಪುರ ಜಿಲ್ಲೆ ಕಡೆ ಪ್ರವಾಸ ಹೋಗಿದ್ದಾಗ ಅಲ್ಲಿನ ಕೆಲವು ತಾಲ್ಲೂಕುಗಳನ್ನು ಎಂದರೆ ಇಂಡಿ, ಸಿಂದಗಿ ಹಾಗೂ ಇನ್ನಿತರ ಕಡೆಗಳಲ್ಲಿ ಭೂಮಿ ಯಾವ ರೀತಿ ಇದೆ ಅದರ ಲೆಕ್ಕ ನೋಡಿದ್ದೇನೆ. ನಮ್ಮಲ್ಲಿ ಹತ್ತು ಎಕರೆಗಳಲ್ಲಿ ಎರಡು ಬೆಳೆಯುವ ಭಾಗಕ್ಕೆ ಅಲ್ಲಿನ ಭೂಮಿ ಹೋಲಿಸಿ ಅಲ್ಲಿಗೆ ೫೪ ಎಕರೆಗಳೆಂದು ಹೇಗೆ ಲೆಕ್ಕ ಹಾಕಲು ಸಾಧ್ಯವಾಗುತ್ತದೆ? ಹೋಗಲಿ ಇಲ್ಲಿ ನೂರು ಎಕರೆ ಭೂಮಿ ಇರುವ ಮಾಲೀಕ ಅವನ ಆರ್ಥಿಕ ಪರಿಸ್ಥಿತಿ ಏನು ಮತ್ತು ಎಷ್ಟು ಹಣ ಇಟ್ಟಿದ್ದಾನೆ ಮತ್ತು ಅವನು ಎಷ್ಟು ಮಟ್ಟಿಗೆ ಉದ್ಧಾರವಾಗುತ್ತಾನೆ ಇದನ್ನೆಲ್ಲಾ ನಾವು ಗಮನಕ್ಕೆ ತೆಗೆದುಕೊಳ್ಳಬೇಕು ಉತ್ತರದ ಕೆಲವು ಪ್ರಾಂತಗಳಲ್ಲಿ ಅದರಲ್ಲೂ ಗೆಂಜಟೀಸ್ ಬೆಲ್ಟ್ ಇರುವ ಕಡೆಗಳಲ್ಲಿ ಹತ್ತು ಎಕರೆ ಎಂದು ಅವರು ಇಟ್ಟುಕೊಂಡಿದ್ದರೆ ಅದೇ ಶ್ರೇಷ್ಟ ಭೂಮಿ ಎಂದು ಅವರು ಮಾಡಿರಬಹುದು. ಅದನ್ನೇ ಒಂದು ಪ್ರಮಾಣವಾಗಿ ಇಲ್ಲೂ ಕೂಡ ಮಾಡೋಣ ಎಂದರೆ ಅದನ್ನು ಮೈಸೂರು ದೇಶದಲ್ಲಿರುವ ಭೂಮಿಗೆ ಹೋಲಿಸುವುದು ಸರಿಯಾದುದು ಅಲ್ಲ. ಉದಾಹರಣೆಗೆ ನಮ್ಮ ತಾಲ್ಲೂಕನ್ನೇ ತಾವು ನೋಡಬಹುದು. ನಮ್ಮಲ್ಲಿ ಭೂಮಿಯಿಂದ ಹೆಚ್ಚು ಆದಾಯ ಪಡೆಯುವವರು ಬಹಳ ಕಡಿಮೆ. ಇದರಲ್ಲಿ ಇರುವ ಐದನೇ ಕ್ಯಾಟಗರಿಗೇ ಎಲ್ಲರೂ ಬರಬಹುದು ಎಂದರೆ ಇಲ್ಲಿ ೫೪ ಎಕರೆಗಳಷ್ಟು ಬರಬಹುದು. ಅದೂ ಡ್ರೈಲ್ಯಾಂಡು. ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀ ಹುಚ್ಚಮಾಸ್ತಿಗೌಡರು ಬಹಳ ಜಾಣತನದಿಂದ ಇಲ್ಲಿನ ಕ್ಯಾಟಗರಿಗಳನು ಮಾಡಿದ್ದಾರೆ ಮತ್ತು ಇಲ್ಲಿ ಹೇಳುವಾಗ ಇದರ ವಿವರಗಳನ್ನು ಹೇಳಲು ಹೋಗಲಿಲ್ಲ ಮತ್ತು ಇದರಲ್ಲಿ ಏನಾದರೂ ಬದಲಾವಣೆಗಳನ್ನು ಮಾಡಬೇಕಾದರೆ ಇದಕ್ಕೆ ಏನಾದರೂ ಒಂದು ಮಯಾರಿಟಿ ಮೆಂಬರ್ಸ್ ಸದಸ್ಯರು ಸಲಹೆ ಮಾಡಿದರೆ ಆಗ ಅದನ್ನು ಅಡ್‌ಜಸ್ಟ್ ಮಾಡಬಹುದು ಎಂತಲೂ ಇಲ್ಲಿ ಹೇಳಿದರು. ಒಟ್ಟಿನಲ್ಲಿ ನಿಮ್ಮ ಧ್ಯೇಯ ಹತ್ತು ಎಕರೆ ಇರಬೇಕೆಂದು ೧೮ ಎಕರೆ ಇದ್ದರೆ ಸರಿಯಲ್ಲ ಹತ್ತು ಎಕರೆ ಎಂದು ಇದ್ದರೆ ಪ್ರಗತಿಗಾಮಿಯಾಗಿರುತ್ತದೆ ಎಂದು ನಮ್ಮ ಮಾನ್ಯ ಅರಸುರವರು ಪ್ರಗತಿಗಾಮಿ ಎನ್ನುವ ಒಂದು ಹೆಸರು ಪಡೆಯಬೇಕೆಂದು ಇಲ್ಲಿ ತಂದಿದ್ದಾರೆ. ಬಡವರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತಾ ಇಲ್ಲಿ ನೀವು ವರ್ಗೀಕರಣ ಮಾಡಿರುವುದು ಸರಿಯಾಗಿಲ್ಲ ಎಂದು ವಿರೋಧಿಸಬೇಕಾಗಿದೆ, ಈ ರಾಜ್ಯದಲ್ಲಿರತಕ್ಕ ಭೂಮಿಯ ಉತ್ಕೃಷ್ಟತೆ ಏನಿದೆ ಅದನ್ನು ತಮ್ಮ ಗಮನದಲ್ಲಿಟ್ಟುಕೊಂಡು ಇಲ್ಲಿ ಸೀಲಿಂಗನ್ನು ನಿಗದಿ ಮಾಡುವಾಗ ಸರಿಯಾಗಿ ಮಾಡಬೇಕು. ಹುಬ್ಬಳ್ಳಿ ಅಥವಾ ಧಾರವಾಡ ಇಂತಹ ಜಿಲ್ಲೆಗಳಲ್ಲಿರುವ ಅಕ್ಕಪಕ್ಕದಲ್ಲಿ ಡ್ರೈ ಲ್ಯಾಂಡೇ ಹೆಚ್ಚಾಗಿರುವುದು.

ಶ್ರೀ ಡಿ. ದೇವರಾಜ ಅರಸ್ :—ನಿಮ್ಮ ತಾಲ್ಲೂಕಿನಲ್ಲಿ ಎಷ್ಟು ಇರಬೇಕು ಅದನ್ನು ಹೇಳಬಹುದು.

ಶ್ರೀ ಹೆಚ್. ಡಿ. ದೇವೇಗೌಡ :—ನಮ್ಮ ತಾಲ್ಲೂಕಿನಲ್ಲೆಲ್ಲಾ ಹುಡುಕಿದರೆ ನಿಮಗೆ ಒಬ್ಬರು ಬರಬಹುದು. ಇವೊತ್ತೇನೂ ನಾನು ನನ್ನ ಆರ್ಥಿಕ ದೃಷ್ಟಿಯಿಂದ ಹೇಳುವುದಾದರೆ ನನಗೆ ಹತ್ತು ಎಕರೆ ಎಂದು ನಿಗದಿ ಮಾಡಿರುವಂತೆ ನನಗೆ ಮೂರು ಮಕ್ಕಳು ಇರುತ್ತಾರೆ. ಮುಂದೆ ಇವರು ದೊಡ್ಡವರಾದಾಗ ಇವರು ಎರಡು ಎರಡು ಎಕರೆಗಳಷ್ಟು ಹಂಚಿಕೊಳ್ಳಬಹುದು.

ಶ್ರೀ ಡಿ. ದೇವರಾಜ ಅರಸ್ :—ಇವೆಲ್ಲಾ ನಾಳಿನ ಪ್ರಶ್ನೆ.

ಶ್ರೀ ಹೆಚ್. ಡಿ. ದೇವೇಗೌಡ :—ಈಗ ಇರುವ ಮಕ್ಕಳ ಬಗ್ಗೆ ಹೇಳುತ್ತಿರುವುದು. ನಾಳಿನ ಪ್ರಶ್ನೆ ಬೇರೆ, ನಮಗೆ ಇವರಲ್ಲಿ ಎರಡು ಮಾರ್ಗ ಇರಬೇಕು. ಹಣದ ಬಲ ಇರಬೇಕು ಮತ್ತು ಗೇಣಿದಾರರು ಉಳುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಬಹಳ ಪ್ರಗತಿಗಾಮಿಯಾದವರು ಎಂದು ಅವರು ಇಲ್ಲಿ ಹೆಸರು ತೆಗೆದುಕೊಳ್ಳಬೇಕು ಎಂದು ಇಂತಹ ಒಂದು ನೀತಿ ಅನುಸರಿಸಿಕೊಂಡು ಬರುತ್ತಿದ್ದಾರೆ. ಆದರೆ ಇಲ್ಲಿ ಕ್ರೈಟೀರಿಯಾವನ್ನು ಕ್ಲಾರಿಫೈ ಮಾಡುತ್ತಿರುವುದು ಸರಿಯಾದುದಲ್ಲ. ಗ್ಯಾಂಜಟಿಕ್ ಬೆಲ್ಟ್ ಏರಿಯಾದಲ್ಲಿ ಹತ್ತು ಎಕರೆ ಇರಬಹುದು. ಅದರ ಆಧಾರದಂತೆ ಇಲ್ಲಿ ಕೂಡ ೧೦ ಎಕರೆಯಿಂದ ೧೫ ಎಕರೆವರೆಗೆ ಅಥವಾ ಮೂವತ್ತು ಎಕರೆಗಳವರೆಗೆ ಇರಬಹುದು ಎಂದು ಹೇಳುತ್ತಾ ಕಾನೂನಿನಲ್ಲಿ ಹತ್ತು ಎಕರೆ ಮಾತ್ರ ಮಿತಿ ಎಂದು ಹೇಳಿ ಒಂದು ರೀತಿಯಾಗಿ ಗದಾ ಪ್ರಹಾರ ಮಾಡುತ್ತಿರುವುದು ಸರಿಯಾದ ಮಾರ್ಗವಲ್ಲ ಎಂದು ತಿಳಿಸಲು ಇಚ್ಛೆಪಡುತ್ತೇನೆ.

ಇನ್ನು ಪುಟ ೩೮ರಲ್ಲಿ ಏಳನೇ ವರ್ಗದಲ್ಲಿ ಹೀಗೆ ಇದೆ :—

(ii) Land anywhere in the State on which coconut trees and fruit bearing trees other than areca are raised without irrigation.

ಇದರಲ್ಲಿ ಏಳನೆ ವರ್ಗಕ್ಕೆ ಇದನ್ನು ಸೇರಿಸಿದ್ದಾರೆ. ಮಾನ್ಯ ರವಿನೂ ಮಂತ್ರಿಗಳು ತುಮಕೂರು ಜಿಲ್ಲೆಗೆ ಸೇರಿದವರು ಅವರ ಜನರು ಅವರಿಗೆ ವೋಟು ಕೊಟ್ಟಿದ್ದಾರೆಂದು ಅವರಿಗೆ ದ್ರೋಹ ಮಾಡಬಾರದು ಎಂದು ಇದರಲ್ಲಿ ಅಡಿಕೆ ತೋಟಕ್ಕೆ ವಿನಾಯಿತಿ ಇದೆ. ಶಿವಮೊಗ್ಗಾ ಜಿಲ್ಲೆಗೆ ಇಂದು ತಾವು ಬನ್ನಿ. ಅಲ್ಲಿ ನಿಮಗೆ ಅಡಿಕೆ ತೋಟ ಯಾವ ರೀತಿ ಮಾಡುತ್ತಾರೆನ್ನುವುದನ್ನು ತೋರಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್ :—ಅಡಿಕೆ ಎಲ್ಲಿ ಬೆಳೆಯುತ್ತಾರೆ ಎಂದರೆ, ಎಲ್ಲಿ ವ್ಯಾಲೀಸ್ ಇವೆ ಮತ್ತು ಎಲ್ಲಿ ನೀರಿದೆ ಅಲ್ಲಿ ಬೆಳೆಸುತ್ತಾರೆ. ನಿಮ್ಮಲ್ಲೂ ಕೂಡ ಹೊಲ ಇರುವ ಕಡೆಗಳಲ್ಲಿ ಕೆಲವು ಜಾಗದಲ್ಲಿ ಈ ರೀತಿ ಅಡಿಕೆ ಬೆಳೆ ಮಾಡುತ್ತಾರೆ. ಇದನ್ನೆಲ್ಲಾ ಸ್ವಲ್ಪ ತಾವು ವಿಚಾರ ಮಾಡಬೇಕು

ಶ್ರೀ ಎಚ್. ಡಿ. ದೇವೇಗೌಡ:—ನನಗೆ ತೆಂಗಿನ ಗಿಡ ಬೆಳೆಯುವ ಅನುಭವ ಇಲ್ಲ ಎಂದು ಅಲ್ಲ. ಅಡಿಕೆ ಗಿಡ ಬೆಳೆಯುವುದಕ್ಕೂ ಇದಕ್ಕೂ ವ್ಯತ್ಯಾಸ ಇದೆಯೇ ಎಂದು ಕೇಳಬೇಕಾಗುತ್ತದೆ?

ಶ್ರೀ ಬಿ. ವಿ. ಕಕ್ಕಿಲಾಯ:—ಅಡಿಕೆ ತೋಟಕ್ಕೆ ಸಂಬಧಪಟ್ಟ ಹಾಗೆ ಕೇರಳಾ ಆಕ್ಟ್‌ನಲ್ಲಿ ೫೦ ಸೆಂಟ್ಸ್ ಭೂಮಿಗೆ ಒಂದು ಎಕರೆ ಸಮ ಎಂದು ನಿಗದಿ ಮಾಡಿದ್ದಾರೇ

ಶ್ರೀ ಎಚ್. ಡಿ. ದೇವೇಗೌಡ:—ಕೇರಳದಲ್ಲಿರತಕ್ಕ ವಿಚಾರವನ್ನು ಮಾನ್ಯ ಮಿತ್ರರು ಹೇಳಿದರು. ಅಡಿಕೆ ತೋಟಕ್ಕೆ ಸೀಲಿಂಗ್ ತರುವಾದರೆ ತೆಂಗಿನ ತೋಟಕ್ಕೂ ಸೀಲಿಂಗ್ ತರಬೇಕಾಗುತ್ತದೆ. ಏಕೆಂದರೆ ಇವೊತ್ತು ಒಂದು ಸಾವಿರ ತೆಂಗಿನ ಮರಗಳು ಇರುವ ತೋಟ ಇದ್ದರೆ ಅದರಿಂದ ಎಷ್ಟು ಉತ್ಪತ್ತಿ ಬರುತ್ತದೆ ಎಂಬುದನ್ನು ನೋಡಬೇಕಾಗಿದೆ. ಇವೊತ್ತು ವರ್ಷಕ್ಕೆ ಒಂದು ತೋಟದಿಂದ ೨೫ ಸಾವಿರ ರೂಪಾಯಿಗಳ ವರೆಗೆ ಉತ್ಪತ್ತಿ ಬರುವುದು ಇದೆ. ಈ ರೀತಿ ಇರುವಾಗ ತೆಂಗಿನ ತೋಟ ಇರುವ ಜಮೀನನ್ನು ೫೪ ಎಕರೆಯ ವರೆಗೆ ಇಟ್ಟುಕೊಳ್ಳಬಹುದು ಎಂದು ಹೇಳುವುದಾದರೆ ಅದಕ್ಕೆ ಏನಾದರೂ ಆಧಾರ ಇದೆಯೇ ಎಂದು ಕೇಳ ಬೇಕಾಗುತ್ತದ ?

ಶ್ರೀ ಕೆ. ಪುಟ್ಟಸ್ವಾಮಿ:—ವಿಸ್ಡೋರ್ನ್ ಬೇಸಿಸ್ ಇರಬಹುದು;

ಶ್ರೀ ಡಿ. ದೇವರಾಜ ಅರಸ್:—ಒಂದು ಸಾವಿರ ತೆಂಗಿನ ಮರಗಳು ಇದ್ದರೆ ವರ್ಷಕ್ಕೆ ೨೫ ಸಾವಿರ ರೂಪಾಯಿ ಆದಾಯ ಬರುತ್ತದೆಂದು ತಾವು ಹೇಳಿದರು. ಅಂದರೆ ಒಂದು ತೆಂಗಿನ ಗಿಡದಲ್ಲಿ ವರ್ಷಕ್ಕೆ ೫೦೦ ರಿಂದ ೬೦೦ ಕಾಯಿ ಬಿಡಬೇಕಾಗುತ್ತದೆ. ಇಲ್ಲದಿದ್ದರೆ ೨೫ ಸಾವಿರ ರೂಪಾಯಿಗಳ ಆದಾಯ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ನನಗೆ ಗೊತ್ತಿರುವ ಹಾಗೆ ವ್ಯಾಲಿ ಇರುವ ಕಡೆ ತಂಪು ಭೂಮಿ ಇರುವ ಕಡೆ, ಅಡಿಕೆ ತೋಟ ಇರುವ ಕಡೆ ಇರತಕ್ಕಂಥ ತೆಂಗಿನ ಗಿಡಗಳಲ್ಲಿ ಅದೂ ಚೆನ್ನಾಗಿ ಗೊಬ್ಬರ ಕೊಟ್ಟರೆ ೩೦೦ ರಿಂದ ೫೦೦ ಕಾಯಿ ಬಿಡಬಹುದು. ಆದರೆ ಈ ಅನುಕೂಲಗಳು ಇಲ್ಲದಿರುವ ಕಡೆಗಳಲ್ಲಿರುವ ತೆಂಗಿನ ಮರಗಳಲ್ಲಿ ವರ್ಷಕ್ಕೆ ೨೫-೩೦ ಕಾಯಿ ಬಿಡಬಹುದು. ತೆಂಗಿನ ತೋಟ ಇರುವ ಕಡೆಗಳಲ್ಲಿ ಏನಾದರು ಬಂಡ್ಸ್ ಹಾಕಿ ಕೊಂಡಿದ್ದರೆ ೫೦ ಕಾಯಿ ಬಿಡಬಹುದು. ಇದು ನನ್ನ ಲೆಕ್ಕ. ಅದು ಏನಾದರು ವ್ಯತ್ಯಾಸ ಇದ್ದರೆ ತಾವು ಹೇಳಬಹುದು.

ಶ್ರೀ ಬಿ. ಎಂ. ಮಂಜುನಾಥ್.—ಕಳೆದ ೩-೪ ವರ್ಷಗಳಿಂದ ಮಳೆ ಹೋಗಿ ನಮ್ಮ ಕಡೆ ತೆಂಗಿನ ಕಾಯಿಗಳೇ ಸರಿಯಾಗಿ ಬಿಡುತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈಗ ತಾವು ತಂದಿರುವ ತಿದ್ದುಪಡಿಯಲ್ಲಿ ಹೇಳಿರುವುದನ್ನು ನೋಡುವುದಾದರೆ......

MR. DEPUTY SPEAKER.—Sri Deve Gowda, at this rate, you cannot expect any reply.

SRI D DEVARAJA URS.—This is a matter on which everybody may have to say some thing or the other. I just clarified what Governments thinking is and why we have brought these things. Over and above this, if the hon Member has anything to say, that will be considered. So far as the time is concerned, we do appreciate your difficulty. It may have to go to the next Session. It is not as if everybody has to speak to the end of it. If some people have no chance now, we will

SRI D. DEVARAJ URS

carry it over to another Session and discuss it. The Leader of the Opposition may take some time because he leads the debate from the other side.

MR. DEPUTY SPEAKER.—I never want to preclude any clarification but my difficulty is that slips are in speedy circulation and a good number of Hon. Members want to participate in the debate before we adjourn. That has been made clear.

SRI D. DEVARAJ URS —I am thinking of taking this Bill to another Session because I am not in a mood to shut out the hon. Members from speaking. Let them discuss it for five days or even for another day more. But it is not necessary that such of the hon. Members, whose names are given to-day, should speak only in this Session, in case it has to be postponed. I think the other Members of the Opposition also agree with me in this. I particularly do not mind the hon. Leader of the Opposition taking more time, because, I am also anxious to know from him what his views are in the matter. I would like to know his views, but of course, I cannot force him. I would like to know from him what his suggestions are. What we have fixed may not be alright and I want to know, what, according to him, should be the ceiling at various levels. That is why I have just intervened and to facilitate them, I thought that I should also tell this House, at this moment, what Government's thinking is on some of these points.

ಶ್ರೀ ಕಾಗೋಡು ತಿಮ್ಮಪ್ಪ.—ಈ ತಿದ್ದುಪಡಿ ಮಸೂದೆಯ ಮೇಲೆ ಇಂದು ನನಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕದಿದ್ದರೂ ಸಹ ಇನ್ನೊಂದು ದಿನ ಮಾತನಾಡುತ್ತೇನೆ. ಮುಖ್ಯವಾಗಿ ಇದರ ಬಗೆ ಧೀರ್ಘವಾಗಿ ಚರ್ಚೆ ಮಾಡಬೇಕಾಗಿದೆ. ಈ ಕಾರಣದಿಂದ ತಾವು ಮಾತನಾಡುವವರಿಗೆ ಟೈಮ್ ಲಿಮಿಟ್ ಹಾಕುವುದು ಸರಿಯಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಾನು ತೆಂಗಿನಕಾಯಿ ತೋಟದ ವಿಷಯ ಪ್ರಸ್ತಾಪ ಮಾಡುತ್ತಿದೆ. ಒಂದು ಮರದಲ್ಲಿ ವರ್ಷಕ್ಕೆ ಕೇವಲ ೨೫ ತೆಂಗಿನಕಾಯಿ ಬಿಡುವುದನ್ನು ಆಧಾರವಾಗಿ ಇಟ್ಟುಕೊಂಡು ಇದನು ಮಾಡಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು.

ಶ್ರೀ ಡಿ. ದೇವರಾಜ ಅರಸ್ —ನೀರಿನ ಅನುಕೂಲ ಇಲ್ಲದಿರುವ ಕಡೆಗಳಲ್ಲಿ ತೆಂಗಿನ ತೋಟಗಳು ಇದ್ದರೆ ಆ ರೀತಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ.

SRI H. D. DEVE GOWDA—ಇಲ್ಲಿ 'land anywhere in the State on which coconut trees and fruit bearing trees other than are raised without irrigation' ಎಂದು ಇದೆ. ಇಷ್ಟೊತ್ತು ತಮಗೆ ಹೇಳುವುದಾದರೆ, ತೆಂಗಿನ ತೋಟಕ್ಕೆ ನೀರನ್ನು ಹಾಯಿಸಿ ಬೆಳೆಯುವ ಪದ್ಧತಿ ಈ ರಾಜ್ಯದಲ್ಲಿ ಏನಾದರು ಇದ್ದರೆ ಅದು ಎರಡು ಪರ್ಸೆಂಟ್ ಕೂಡ ಸಿಕ್ಕುವುದಿಲ್ಲ. ಕೆಲವರು ನೀರಿನ ಆಶ್ರಯ ಇದ್ದರೆ ತೆಂಗಿನ ಗಿಡಗಳನ್ನು ಬೆಳೆಯಬಹುದು. ಕೆರೆಯ ಒಳಭಾಗದಲ್ಲಿ ಬೆಳೆ ಸರಿಯಾಗಿ ಬರುವುದಿಲ್ಲ ಎಂಬ ಕಾರಣದಿಂದ ತೆಂಗಿನ ಗಿಡಗಳನ್ನು ಯಾರೂ ಹೆಚ್ಚಾಗಿ ಬೆಳೆಸುವುದಿಲ್ಲ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಬೇಸಿಗೆಯಲ್ಲಿ ತೆಂಗಿನ ಗಿಡಗಳಿಗೆ ಎರಡು ಮೂರು ಹದ ನೀರನ್ನು ಕೊಟ್ಟರೆ ಒಂದಕ್ಕೆ ಎರಡರಷ್ಟು ಫಸಲನ್ನು ಪಡೆಯುವುದಕ್ಕೆ ಸಾಧ್ಯ ಎಂದು ಅನುಭವ ಇರುವ ರೈತರು ಹೇಳುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಎಂತಹ ಕನಿಷ್ಟ ತೆಂಗಿನ ತೋಟ ಇದ್ದರೂ ಸಹ ಅದನ್ನು ಡ್ರೈಲ್ಯಾಂಡ್ ಜೊತೆಗೆ ಸಮ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಎಷ್ಟು ಕಡಿಮೆ ಮಾಡೋಣ ಎಂಬುದನ್ನು ಹೇಳಿ.

ಶ್ರೀ ಎಚ್. ಡಿ ದೇವೇಗೌಡ.—ಏನೋ ಲೆಕ್ಕಾಚಾರ ಮಾಡುವುದಕ್ಕೆ ಬದಲು, ಈ ತೆಂಗಿನ ತೋಟದಿಂದ ಬರತಕ್ಕಂಥ ಉತ್ಪನ್ನವನ್ನು ಸರಿಯಾಗಿ ಆಲೋಚನೆ ಮಾಡಿ ನಂತರ ಡ್ರೈಲ್ಯಾಂಡ್ ಜೊತೆಗೆ ಈಕ್ವೇಟ್ ಮಾಡಬೇಕು.

4–30 P.M.

ಡೆಫನಿಷನ್‌ನಲ್ಲಿ ಪರ್ಸನ್ ಎನ್ನುವುದಕ್ಕೆ "Person means a natural person or a family consisting of natural persons but shall not include a joint Hindu family, an Aliyasanathana family, an institution capable of holding property, a company, association or other body of indviduals whether incorporated or not" ಅಂತ ಹೇಳಿದ್ದಾರೆ. ಹಿಂದಿನ ಆಕ್ಟಿನಲ್ಲಿ ಇದ್ದುದನ್ನು ನಾನು ನೋಡಿದ್ದೇನೆ. ಇದನ್ನು ಮಾನ್ಯ ಮಂತ್ರಿಗಳು ಸ್ವಲ್ಪ ಕ್ಲಾರಿಫೈ ಮಾಡಬೇಕು. ಕಂಪೆನಿ ಮತ್ತು ಅಸೋಸಿಯೇಷನ್ ಇವುಗಳನ್ನು ಡಿಲೀಟ್ ಮಾಡುತ್ತಿದ್ದೀರಿ ಈ ಪರ್‌ಸನ್ ಡೆಫಿನಿಷನ್ ಪ್ರಕಾರ ಕಂಪೆನಿಗಳು ಎಷ್ಟು ಬೇಕಾದರೂ ಭೂಮಿಯನ್ನು ಇಟ್ಟುಕೊಳ್ಳಬಹುದೇ ? ಏತಕ್ಕೆಂದರೆ ಈಗ ಪರ್ಸನ್ ಎನ್ನುವುದನ್ನು ಇಲ್ಲಿ ತಿದ್ದುಪಡಿ ಮಾಡಿದ್ದಾರೆ. ಇದರಿಂದ ಕಂಪನಿಯವರಿಗೂ ಎಗ್ಜೆಮ್‌ಷನ್ ಸಿಕ್ಕುತ್ತದೆಯೋ ಎನ್ನುವ ಸಂಶಯ ಬಂದಿದೆ. ಇದನ್ನು ಮಾನ್ಯ ಮಂತ್ರಿಗಳು ಈ ಚರ್ಚೆಗೆ ಉತ್ತರ ಕೊಡುವಾಗ ತಿಳಿಸಬೇಕು. ಕೋ ಆಪರೇಟೀವ್ ಇನ್‌ಸ್ಟಿಟ್ಯೂಷನ್‌ನಲ್ಲಿ ಮೆಂಬರಾಗಿರತಕ್ಕವನು ಸ್ವಂತ ಜಮೀನನ್ನು ಇಟ್ಟುಕೊಳ್ಳಬಹುದು ಎಂದು ಹೇಳಿದ್ದಾರೆ. ಈ ಪರ್‌ಸನ್ ಎನ್ನುವ ಡೆಫಿನಿಷನ್‌ನಲ್ಲಿ ಕಂಪೆನಿಗಳು ಮತ್ತು ಅಸೋಸಿಯೇಷನ್‌ಗಳು ಇರುವುದರಿಂದ ಅವುಗಳಿಗೂ ಎಗ್ಜೆಮ್‌ಷನ್ ಸಿಕ್ಕುತ್ತದೆಯೆ ಹೇಗೆ ? ಈ ಡೆಫಿನಿಷನ್‌ನಲ್ಲಿ ಮಠಗಳಿಗೆ ಮತ್ತು ಕೆಲವು ಬೇರೆ ಬೇರೆ ಸಂಸ್ಥೆಗಳಿಗೆ ಹೋಲ್ಡಿಂಗ್ ಆಫ್ ದಿ ಪ್ರಾಪರ್ಟಿ ಬಗ್ಗೆ ಸರಿಯಾಗಿ ಡಿಫೈನ್ ಮಾಡಿಲ್ಲ. ಇದು ಬಹಳ ಪ್ರಗತಿಗಾಮಿಯಾದ ಮತ್ತು ಜರೂರಾದ ಬಿಲ್ಲು ಎಂದು ಹೇಳಿದರು. ಆದರೆ ಈ ಪರ್ಸನ್‌ಸ್ ಎನ್ನುವ ಡೆಫಿನಿಷನ್ ಅನ್ನು ಸರಿಯಾಗಿ ಡಿಫೈನ್ ಮಾಡಿಲ್ಲ. ಇದನ್ನು ವಿವರವಾಗಿ ತಿಳಿಸಬೇಕು ಎಂದು ನಾನು ಹೇಳುತ್ತೇನೆ.

ಸಕ್ಕರೆ ಕಾರ್ಖಾನೆಗೆ ೧೦೦ ಎಕರೆಯವರೆಗೂ ಜಮೀನನ್ನು ಇಟ್ಟುಕೊಳ್ಳಬಹುದು ಎಂದು ರಿಯಾಯಿತಿಯನ್ನು ತೋರಿಸಿದ್ದಾರೆ. ಇವೊತ್ತು ಈ ಕಾನೂನು ಬರುತ್ತದೆಯೋ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಏತಕ್ಕೆಂದರೆ ಈ ಬಗ್ಗೆ ಒಬ್ಬೊಬ್ಬರು ಮಂತ್ರಿಗಳು ಒಂದೊಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಸಕ್ಕರೆ ಕಾರ್ಖಾನೆಗಳಿಗೆ ಎರಡು ಸಾವಿರ ಎಕರೆಗಳನ್ನು ಬಿಡಬೇಕು ಎಂದು ಶ್ರೀ ಎಸ್. ಎಂ. ಕೃಷ್ಣ ಅವರು ಹೇಳಿದ್ದಾರೆ. ಈ ಹೇಳಿಕೆ ಪತ್ರಿಕೆಯಲ್ಲಿ ಬಂದಿದೆ. ಆದರೆ ಈಗ ಈ ಮಸೂದೆಯಲ್ಲಿ ಸಕ್ಕರೆ ಕಾರ್ಖಾನೆಗಳು ೧೦೦ ಎಕರೆ ಜಮೀನನ್ನು ಇಟ್ಟುಕೊಳ್ಳಬಹುದು ಎಂದು ಹೇಳಿದ್ದಾರೆ. ಸಂತೋಷ. ಕಾಫಿ ಪ್ಲಾನ್‌ಟೇಷನ್ನಿಗೆ ರಿಯಾಯಿತಿಯನ್ನು ತೋರಿಸಿದ್ದಾರೆ. ವರ್ಷಕ್ಕೆ ೧೨ ಸಾವಿರ ರೂಪಾಯಿಗಳ ಒಳಗೆ ಅನ್ಯ ಆದಾಯ ಇರುವವರು ಜಮೀನನ್ನು ಇಟ್ಟುಕೊಳ್ಳಬಹುದು ಎಂದು ಹೇಳಿದ್ದಾರೆ. ಇದರಲ್ಲಿ ತಾರತಮ್ಯ ಎಷ್ಟು ಇದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಕಾಫಿ ಪ್ಲಾನ್‌ಟೇಷನ್‌ಗಳಿಗೆ ರಿಯಾಯಿತಿಯನ್ನು ತೋರಿಸಿದ್ದಾರೆ. ಇವರು ಚುನಾವಣೆಯಲ್ಲಿ ಗೆದ್ದು ಬರುವವರೆಗೂ ನಾವು ದೇಶದಲ್ಲಿ ಶ್ರೀಮಂತರನ್ನು ನಿರ್ಮೂಲ ಮಾಡಿ ಬಡವರಿಗೆ ಕೈಲಾಸ ತೋರಿಸುತ್ತೇವೆ ಎಂದು ಭಾಷಣ ಮಾಡಿದ್ದಾರೆ. ಬೆಳಗಿನಿಂದ ಸಾಯಂಕಾಲದವರೆಗೆ ಇವರು ಹೇಳಿದ್ದನ್ನೆಲ್ಲಾ ಪತ್ರಿಕೆಗಳವರು ಹೆದರಿ ಬರೆದಿದ್ದಾರೆ. ಬಡವರ ಸುಧಾರಣೆಗಾಗಿ ನಾವು ಪತ್ರಿಕೆಗಳವರ ಸಹಕಾರ ಕೋರುತ್ತೇವೆ ಎಂದು ಹೇಳಿದ್ದಾರೆ. ಪ್ಲಾನ್‌ಟೇಷನ್‌ಗಳಿಗೆ ರಿಯಾಯಿತಿಯನ್ನು ಕೊಡುವುದನ್ನು ಇನ್ನೂ ನಾವು ಪರಿಶೀಲನೆ ಮಾಡುತ್ತಿದ್ದೇವೆ ಎಂದು ಮುಖ್ಯ ಮಂತ್ರಿಗಳು ಹಿಂದೆ ದೆಹಲಿಯಲ್ಲಿ ಹೇಳಿದ್ದರು. ಇವೊತ್ತು ಪ್ಲಾನ್‌ಟೇಷನ್‌ಗಳಿಗೆ ರಿಯಾಯಿತಿ ಕೊಡುವ ಅರಿವು ಅವರಿಗೆ ಆಗಿದೆ. ಇದಕ್ಕೆ ರಿಯಾಯಿತಿಯನ್ನು ಕೊಡದಿದ್ದರೆ ವಿದೇಶ ವಿನಿಮಯ ಹಾಳಾಗುತ್ತದೆ ಎಂದು ಈಗ ಅವರಿಗೆ ಜ್ಞಾನೋದಯವಾಗಿದೆ. ಈ ಕಾಫಿ ಪ್ಲಾನ್‌ಟೇಷನ್ನಿಗೆ ರಿಯಾಯಿತಿಯನ್ನು ಕೊಡದಿದ್ದರೆ ಈ ಒಂದು ಕೈಗಾರಿಕೆ ಬಿದ್ದು ಹೋಗುತ್ತದೆ ಫಾರಿನ್ ಎಕ್ಸ್‌ಚೇಂಜ್ ಅರ್ನ್ ಮಾಡುವುದಕ್ಕೆ ತೊಂದರೆಯಾಗುತ್ತದೆ ಎಂದು ಈಗ ಅವರಿಗೆ ರಿಯಾಯಿತಿ ತೋರಿಸಿದ್ದಾರೆ.

(ಶ್ರೀ ಹೆಚ್. ಡಿ. ದೇವೇಗೌಡ)

ಈಗ ೧೨ ಸಾವಿರ ರೂಪಾಯಿ ಒಳಗಡೆ ಆದಾಯ ಬರುವವರು ಜಮೀನನ್ನು ಇಟ್ಟುಕೊಳ್ಳಬಹುದು ಎಂದು ಏನು ಈ ಮಸೂದೆಯಲ್ಲಿ ಕ್ಲಾಜ್ ಹಾಕಿದಾರೆ ಇದರಲ್ಲಿ ಹಿನ್ನಲೆ ಬೇರೆ ಇದೆ. ನಾವೇನೋ ಈ ಜನತಂತ್ರ ಸರ್ಕಾರದಲ್ಲಿ ಅದೃಷ್ಟವಶಾತ್ ಈ ಸಭೆಯ ಸದಸ್ಯರಾಗಿ ಇಲ್ಲಿ ಬಂದು ಕುಳಿತುಕೊಂಡಿದ್ದೇವೆ. ಈ ಬಗ್ಗೆ ಮಾನ್ಯ ಹಿರಿಯರಾದ ಶ್ರೀ ಎಚ್. ಕೆ. ವೀರಣ್ಣಗೌಡರು ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ ಆ ವಿಚಾರವನ್ನು ನಾನು ಈಗ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಈಗ ಈ ಮಸೂದೆಯಲ್ಲಿ ಹತ್ತು ಎಕರೆಗಳ ಜಮೀನು ಪರಿಮಿತಿ, ಹದಿನಾರು ಕಿಲೋಮೀಟರುಗಳೊಳಗೆ ಮಾತ್ರ ವ್ಯವಸಾಯದ ಹಕ್ಕು ಹಾಗೂ ನಾನ್ ಅಗ್ರಿಕಲ್ಚರಲ್ ಸೋರ್ಸ್‌ನಿಂದ ೧೨,೦೦೦ ರೂಪಾಯಿಗಳ ವಾರ್ಷಿಕ ಆದಾಯವುಳ್ಳವರಿಗೆ ವ್ಯವಸಾಯ ನಿಷೇಧ ಎಂದೇನು ಹೇಳಿದ್ದಾರೆ ಇದು ಸರಿಯಿಲ್ಲ. ಇದರಿಂದ ಇನ್ನು ಮುಂದೆ ಸೆಕ್ರೆಟೇರಿಯಟ್‌ನಲ್ಲಿ ಜವಾನರ ಕೆಲಸಕ್ಕೂ ಜನ ಸಿಕ್ಕುವುದಿಲ್ಲ. ಆ ಕೆಲಸವೂ ನಿಮಗೇ ಉಳಿಯುತ್ತದೆ. ಆದ್ದರಿಂದ ಈ ರೀತಿಯಾಗಿ ತಾರತಮ್ಯ ಮಾಡುವುದು ಬೇಡ. ಇದರ ಹಿನ್ನೆಲೆಯಲ್ಲಿ ಏನು ಅಡಗಿದೆ ಎಂಬುದನ್ನು ನೀವು ಅರ್ಥಮಾಡಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಈಗ ಇದರಿಂದ ಬರತಕ್ಕ ಸರ್‌ಪ್ಲಸ್ ಲ್ಯಾಂಡ್ ಏನಿದೆ ಇದನ್ನು ೮೦ ಲಕ್ಷ ಜನಗಳಿಗೆ ಹಂಚುವುದಕ್ಕೆ ಸಾಧ್ಯವಾಗುವುದಿಲ್ಲ. ಭೂಮಿ ಇಲ್ಲದೇ ಇರುವವರು ಬಹಳ ಜನ ಇದ್ದಾರೆ. ನೀವು ಭೂಮಿಯನ್ನು ಹಂಚುವುದನ್ನು ಬಹಳ ತಡಮಾಡಿದಿರಿ ಎಂದು ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹೇಳಿದರು. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ೧೦ ಲಕ್ಷ ಎಕರೆ ಜಮೀನನ್ನು ಹಂಚಿದ್ದರು. ಇವತ್ತು ಒಬ್ಬೊಬ್ಬರಿಗೆ ಒಂದೊಂದು ಕ್ಷೇತ್ರವಾಗಿದೆ ಒಬ್ಬರು ಕಾರ್ಮಿಕರ ಪರವಾಗಿ ವಾದ ಮಾಡಬೇಕಾಗುತ್ತದೆ; ಇನ್ನೊಬ್ಬರು ಇನ್ನೊಬ್ಬರ ಪರವಾಗಿ ವಾದ ಮಾಡಬೇಕಾಗುತ್ತದೆ. ಇವತ್ತು, ರೈತನಿಗೆ ಉಳುವುದಕ್ಕೆ ಮಂತ್ರಿತರ ಕೆಲಸಗಳನ್ನು ಮಾಡುವುದಕ್ಕೆ ಸಲಕರಣೆಗಳು ಇರುವುದಿಲ್ಲ. ಹೀಗೆ ಇಲ್ಲದಿದ್ದಾಗ ಅವನು ೨೦೦–೩೦೦ ಸಾಲ ತೆಗೆದುಕೊಳ್ಳುತ್ತಾನೆ ಇವತ್ತು ಜನರಲ್ಲಿ ಏನೊಂದು ಟೆಂಡೆನ್ಸಿ ಇದೆಯೆಂದರೆ ಜನರು ಓಟು ಕೊಟ್ಟರೆ, ಇವರು ಮನೆ ಬಾಗಿಲಿಗೆ ಬರುತ್ತಾರೆ ಎಂಬ ಅಭಿಪ್ರಾಯ ಬಂದಿದೆ. ಹೀಗೆ ಕೆಲವರು ಬಡವರ ಹೆಸರು ಹೇಳಿಕೊಂಡು ಅನುಕೂಲಗಳನ್ನು ಪಡೆಯುತ್ತಿದ್ದಾರೆ ಹೀಗೆ ಜನರಲ್ಲಿ ಒಂದು ದುಡಿದು ಜೀವನ ಮಾಡತಕ್ಕ ವಾತಾವರಣವನ್ನು ಉಂಟು ಮಾಡಿಲ್ಲ. ನೀವು ಇವತ್ತು ಇದನ್ನು ಹಂಚಿ ಬಡತನ ನಿವಾರಣೆ ಮಾಡುತ್ತೀರಾ? ಎಂದು ಕೇಳುತ್ತೇನೆ. ಇವತ್ತು ನಿಮಗೆ ಸಿಕ್ಕಿದ ನಾಲ್ಕು ಎಕರೆಯನ್ನು ಒಂದೊಂದು ಎಕರೆಯಂತೆ ಕೊಟ್ಟರೆ ಅವನು ಏನು ಮಾಡುತ್ತಾನೆ? ಇದರಿಂದ ಅವನ ಜೀವನವಂತೂ ಸುಖಮಯ ವಾಗುವುದಿಲ್ಲ. ನಾನು ಇದನ್ನು ಏಕೆ ಹೇಳುತ್ತೇನೆಂದರೆ, ಮಂತ್ರಿಗಳಿಗೆ ಇದರಲ್ಲಿ ಆಸಕ್ತಿ ಇಲ್ಲವೆಂದಲ್ಲ. ಆದರೆ ಇವತ್ತು ಸಮಸ್ಯೆಗಳನ್ನು ಬಗೆ ಹರಿಸುವುದಕ್ಕೆ ಕಷ್ಟ ಇದೆ. ತಾವು ಇವತ್ತು ಏನೊಂದು ಯುನಿಟ್ ಎಂದು ಹೇಳುತ್ತಿದ್ದೀರಿ ಅದು ನಿಮ್ಮ ಪ್ರಿವೆನ್‌ಶನ್ ಆಫ್ ಫ್ರಾಗ್‌ಮೆಂಟೇಶನ್ ಅಂಡ್ ಕನ್‌ಸೋಲಿಡೇಶನ್ ಆಕ್ಟಿಗೆ ವಿರುದ್ಧವಾಗುತ್ತದೆ ಇವೊತ್ತಿನ ದಿವಸ ನೀವು ಎಕಾನಾಮಿಕ್ ಹೋಲ್ಡಿಂಗ್ ಕೂಡದಿದ್ದರೆ ಹೇಗೆ? ಇವತು ಇದನ್ನು ಎಷ್ಟು ಜನರಿಗೆ ಬೇಕೋ ಅಷ್ಟು ಹಂಚಿ. ಬೇಕಾದರೆ ಹರಿಜನರಿಗೇನೇ ಕೊಡಿ. ಆದರೆ ಒಂದು ಎಕಾನಾಮಿಕ್ ಯುನಿಟ್ ಎಂದು ಮಾಡಿ. ಹೀಗೆ ಭೂಮಿ ಕೊಟ್ಟಮೇಲೆ ಅವನಿಗೆ ಏನೇನು ಅವಶ್ಯಕತೆ ಇದೆ; ಅದನ್ನು ಒದಗಿಸಿಕೊಡಬೇಕು. ಇದರಿಂದ ಅವನ ಕುಟುಂಬವಾದರೂ ಉದ್ಧಾರವಾಗುತ್ತದೆ. ಆದ್ದರಿಂದ ನೀವು ಇದರಲ್ಲಿ ಏನು ಮಾಡಿದರೂ ಎಕನಾಮಿಕ್ ಹೋಲ್ಡಿಂಗ್ಸ್ ಮಾಡದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ ಉದಾಹರಣೆಗೆ ಈಗ ಕಾರು ತೆಗೆದುಕೊಂಡ ಶಾಸಕರು ಎರಡು ವರ್ಷಗಳ ಮುಂಚೆ ಮಾರಕೂಡದು ಎಂದು ಇದೆ. ಆದರೆ ಕೆಲವರು ಅದರಲ್ಲಿ ವ್ಯವಹಾರ ಮಾಡಿರುತ್ತಾರೆ; ಮತ್ತು ಕಾರನ್ನು ಮಾರಿರುತ್ತಾರೆ. ಕಾನೂನು ಇದ್ದ ಹಾಗೆಯೇ ಇವೆ. ಅದ್ದರಿಂದ ನೀವು ಒಂದು ಸಾಮಾನ್ಯವಾದ ಎಕನಾಮಿಕ್ ಹೋಲ್ಡಿಂಗ್ಸ್ ಮಾಡುವುದು ಒಳ್ಳೆಯದು.

ಇನ್ನೊಂದು ಏನೆಂದರೆ, ಎಲ್ಲ ಗೌಡರುಗಳು ಭೂಮಿಯನ್ನು ಬರೆಸಿಕೊಂಡಿದ್ದಾರೆ ಎಂದು ಹೇಳುತ್ತಿದಾರೆ. ಇದರ ಬಗ್ಗೆ ಅಂಕಿ ಅಂಶ ತಯಾರು ಮಾಡಿ ಎಂದು ನಾನು ಹೇಳಿದ್ದೇನೆ. ಇವೊತ್ತಿನ ದಿವಸ ಕೆಲವು ಮಹನೀಯರು ತೋಟಿ ತಳವಾರಿಗಳಿಂದ ಭೂಮಿಯನ್ನು ಬರೆಸಿಕೊಂಡಿದ್ದಾರೆ ಎನ್ನುವ ಮಾತನ್ನು ಇದೇ ಸಭೆಯಲ್ಲಿ ಕೇಳಿದೇವೆ; ಕೊಟ್ಟ ಜಮೀನನ್ನು ಇವರೇ ಬರೆಸಿಕೊಳ್ಳುತ್ತಿದ್ದಾರೆಂಬ ಮಾತನ್ನೂ ಕೇಳಿದ್ದೇವೆ. ಹಾಗೆಯೇ ರೈತಾಪಿ ವರ್ಗದವರ ಜಮೀನನ್ನು ಶ್ರೀಮಂತರೇ ಬರಸಿಕೊಂಡಿದಾರೆ ಎಂದು ಸಹ ಕೇಳುತ್ತಿದ್ದೇವೆ. ಆದ್ದರಿಂದ ಈ ರೀತಿ ಎಷ್ಟೆಷ್ಟು ಮುಖಂಡರು ಈ ರೀತಿ ಬರೆಸಿಕೊಂಡಿದ್ದಾರೆಂಬ ಸತ್ಯಾಂಶವನ್ನು ಹೊರಗೆ ತರಬೇಕು ಇವೊತ್ತಿನ ದಿವಸ ಯಾರು ಒಬ್ಬ ಲೀಡರ್ ಎಂದು ನಾವು ಹೇಳುತ್ತಿದ್ದೇವೋ, ಅವರೇ ಹೆಚ್ಚಾಗಿ ಭೂಮಿಯನ್ನು ಬರೆಸಿಕೊಂಡಿರುತ್ತಾರೆ. ಆದ್ದರಿಂದ ಈ

ವಿತರಣೆಯ ಬಗ್ಗೆ ತಾವು ಹೆಚ್ಚಿನ ಎಚ್ಚರಿಕೆಯನ್ನು ವಹಿಸಬೇಕೆಂದು ಹೇಳುತ್ತೇನೆ. ಬಹುಶಃ ಕೊನೆಯದಾಗಿ ಹೇಳುವುದಾದರೆ ಈ ಮಸೂದೆಯನ್ನು ತಾವು ಬಹಳವಾಗಿ ಕಣ್ಣಲ್ಲಿ ಕಣ್ಣಿಟ್ಟು ಪರಿಶೀಲನೆ ಮಾಡಬೇಕು. ಏಕೆಂದರೆ ಈ ಮಸೂದೆಯಿಂದ ಭಾರೀ ಜನರಿಗೆ ಹೊಡೆತ ಬೀಳುತ್ತದೆಂದು ಪುನಃ ನಾನು ಹೇಳಬೇಕಾದ ಅವಶ್ಯಕತೆ ಇಲ್ಲ. ಆದರೆ ಮುಂದಿನ ಪೀಳಿಗೆ ನಿಮ್ಮನ್ನು ಶಪಿಸಬಾರದು. ನೀವು ಇಂತಹ ಸೀಲಿಂಗ್ ತಂದರೆ ನಿಮ್ಮನ್ನು ಜನರು ದೇಶದಲ್ಲಿ ಇಡುವುದಿಲ್ಲ. ಇದರಿಂದ ಮುಂದಿನ ಪೀಳಿಗೆ ಏಟು ಬೀಳಬಾರದು. ನೀವು ಆ ಶಾಪಕ್ಕೆ ಗುರಿಯಾಗಬೇಡಿ ಎಂದು ಹೇಳುತ್ತೇನೆ. ಆದ್ದರಿಂದ ಈ ರೀತಿ ಮಾಡಿದರೆ ದೇಶದ ಆರ್ಥಿಕ ಭದ್ರತೆಗೆ ಏಟು ಬೀಳುತ್ತದೆ. ಮತ್ತು ಇದರಲ್ಲಿ ಯಾರಿಗೂ ಆಸಕ್ತಿ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಎಲ್ಲರಿಗೂ ಆಸಕ್ತಿ ಇದೆ. ಉದಾಹರಣೆಗೆ ಮಾನ್ಯ ಹುಚ್ಚಮಾಸ್ತಿಗೌಡರ ಜ್ವಾಂಟ್ ಕುಟುಂಬದಲ್ಲಿ ೬೦-೭೦ ಎಕ್ರೆ ಇದ್ದಿರಬಹುದು. ಆದರೆ ನೀವು ಜೀವನದಲ್ಲಿ ಅಷ್ಟು ಇಟ್ಟುಕೊಂಡರೂ ಶ್ರೀಮಂತರಾಗಲಿಲ್ಲ. ಇವತ್ತು ಟೋಪಿ ಹಾಕಿರುವ ಹಣ ಇದ್ದರೆ ೫ ಎಕರೆ ಮಾತ್ರ ಇದ್ದರೆ ಸಾಕು ಎಂದು ಹೇಳುವ ಜನರು ಸಹ ಇದ್ದಾರೆ. ನಿಮ್ಮ ಜಾಗದಲ್ಲಿ ಬೇರೆಯವರು ಇದ್ದರೆ ಆ ಮಾತನ್ನು ಹೇಳುತ್ತಿದ್ದರು. ಅದಕ್ಕೆ ನೀವು ಇಲ್ಲದಿದ್ದರೆ ಇನ್ನು ಯಾರು ಇದ್ದರೂ ಹೇಳುತ್ತಿದ್ದರು. ಪವರ್ ಹೋಗಿರುವ ಜನಗಳು ಇದ್ದಾರೆ. ಅಂತಹವರು ಮೊದಲು ೫ ಎಕರೆ ಸೀಲಿಂಗ್ ಸಾಕು ಎಂಬುದಾಗಿ ಹೇಳುತ್ತಿದ್ದರು. ನನಗೆ ಸರಿಯಾದ ಆಧಾರಗಳು ಸಿಕ್ಕಿದ್ದರೆ ಹೇಳುತ್ತಿದ್ದೆ. ನನಗೆ ಅದಕ್ಕಾಗಿ ಏನೂ ಭಯವಿಲ್ಲ. ಇದು ಟೀಕೆಯ ಪ್ರಶ್ನೆಯಲ್ಲ. ನಿಮ್ಮ ವ್ಯಕ್ತಿತ್ವದ ಬಗ್ಗೆ ಸಮಯ ಬಂದರೆ ಧೈರ್ಯ ಮಾಡೋಣವೆಂದು ಹೇಳುತ್ತಾರೆ. ೫ ಕೋಟಿ ರೂಪಾಯಿಗಳಷ್ಟು ಕಪ್ಪು ಹಣ ಇಟ್ಟುಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಬೇಕಾದರೆ ೫ ಸಾವಿರ ರೂಪಾಯಿ ನೋಟುಗಳನ್ನು ಇಟ್ಟುಕೊಳ್ಳುವುದಕ್ಕಾಗುತ್ತದೆಂದು ಹೇಳುತ್ತಾರೆ. ಅದರ ಬಗ್ಗೆ ವಾಂಛೂ ಸಮಿತಿ ವರದಿ ಇದೆ. ಮನೆಯೊಳಗೆ ೫೦ ಲಕ್ಷ ರೂಪಾಯಿ ಇಟ್ಟುಕೊಂಡರೆ ಕೇಳುವವರು ಯಾರು ? ಚುನಾವಣೆಯಲ್ಲಿ ನನಗೆ ದುಡ್ಡು ಹಂಚುವ ಮನೋಭಾವ ಇರುತ್ತದೆ. ಎರಡು ಸಾರಿ ಇಂಡಿಪೆಂಡೆಂಟ್ ಮೆಂಬರಾಗಿ ಗೆದ್ದು ಬಂದಿದ್ದೇನೆ. ಈಗಿನ ಹೊಸ ಅನುಭವದಿಂದ ಹೇಳಬೇಕಾದರೆ ನಮಗೆ ಕಷ್ಟ ಕೊಡುವವರು ಯಾರು ಇಲ್ಲ. ನಾವೂ ಬಹುಶಃ ಅಧಿಕಾರದಲ್ಲಿದ್ದಿದ್ದರೆ ಚುನಾವಣೆಗೆ ಖರ್ಚು ಕೊಟ್ಟಿರುವವರಲ್ಲಿ ನಾವೂ ಸಹ ಒಳಗೆ ಇಟ್ಟುಕೊಂಡಿದ್ದೆವು ಎಂದು ಹೊರಗೆ ಹೇಳುತ್ತೇವೆ. ಆದ್ದರಿಂದ ಕಪ್ಪು ಹಣವನ್ನು ಪತ್ತೆ ಹಚ್ಚುವುದು ಬಹಳ ಕಷ್ಟದ ಕೆಲಸ. ಅಂತಹವರಿಗೆ ೫ ಎಕರೆ, ೧೦ ಎಕರೆ ಭೂಮಿ ಏಕೆ ಬೇಕು ? ದೇಶದಲ್ಲಿ ನನ್ನನ್ನು ಪ್ರಗತಿಗಾಮಿ ಎಂದು ಹೇಳಬೇಕಾದರೆ ಕಪ್ಪುಹಣ, ಹಾಗೂ ಮೂರು ತೊಲ ಚಿನ್ನವನ್ನು ಮನೆಯೊಳಗೆ ಇಟ್ಟರೆ ಅಂತಹವರಿಗೆ ಭೂಮಿ ಏಕೆ ಬೇಕು ? ಆರಾಮವಾಗಿ ಇರಬಹುದು. ಮೈಮೇಲೆ ವಜ್ರದ ಆಭರಣಗಳು. ಮೊನ್ನೆ ಕೇಳಿವೆ, ನನ ಹೆಂಡತಿಗೆ ೧೫೦ ರೂಪಾಯಿಗಳ ಓಲೆಗೆ ೧೮-೧೯ ಸಾವಿರ ರೂಪಾಯಿಗಳಾಯಿತು ಎಂದು ಒಬ್ಬರು ಹೇಳಿದರು. ಹೀಗೆ ಇಂತಹ ಹಣ ದಕ್ಕ ಬೇಕಾದರೆ ಅದಕ್ಕೂ ಅದೃಷ್ಟ ಬೇಕು. ಅವರು ಇದನ್ನು ಪ್ರತಿಪಾದನೆ ಮಾಡಬಹುದು. ಆದರೆ ಇವತ್ತು ಇದು ಕೇವಲ ಯಾವುದೋ ಒಂದು ವರ್ಗವನ್ನು ಡಿಫೆಂಡ್ ಮಾಡಬೇಕೆಂಬುದು ಆಗಿದೆ. ಇದರಿಂದ ರೈತಾಪಿ ವರ್ಗದವರಿಗೆ ಏಟು ಬೀಳುತ್ತದೆ ಎಂಬ ದೃಷ್ಟಿಯಿಂದ ನಾನು ಹೇಳುತ್ತಾ ಇಲ್ಲ. ತಮ್ಮ ಸ್ವಂತ ಅನುಭವದಲ್ಲಿ ಆಲೋಚನೆ ಮಾಡಿ ಬಡವರಿಗೆ ಇವತ್ತು ಏನಾದರೂ ಅಲ್ಪಸ್ವಲ್ಪ ಬರತಕ್ಕ ಭೂಮಿ ಕೊಡುವ ಬಗ್ಗೆ ವಿರೋಧ ಇದ್ದೇನೆಂದಲ್ಲ. ಇದು ಪಾರ್ಟಿಯ ಪ್ರಶ್ನೆಯೂ ಅಲ್ಲ. ಒಂದೊಂದು ರೀತಿ ಒಬ್ಬೊಬ್ಬರು ಮಾತನಾಡುವುದಕ್ಕೆ ಈಗ ಹೊರಟಿದ್ದಾರೆ. ನೀವು ೧೦ ಎಕರೆಗಳೆಂದು ಹೇಳುತ್ತೀರಿ ಕೇಂದ್ರದ ಮಿಷ್ಟರು ೧೫ ಎಕರೆ ಎಂದು ಹೇಳುತ್ತಾರೆ. ನಿಮ್ಮ ಪಾರ್ಟಿಯೊಳಗೆ ಬೇರೆ ಹೀಗೆ ಹೇಳುತ್ತಾರೆ. ಎಲ್ಲೆಲ್ಲಿ ಕಳಪೆ ಇರುವ ಜಮೀನು ಇದೆಯೋ ಅಲ್ಲಿ ರಿಯಾಯಿತಿ ಕೊಡಿ. ನಾವು ಎಂ.ಪಿ.ಸಿ.ಸಿ (ಒ) ನಮ್ಮ ಪಕ್ಷದವರ ಹೊಡೆತ ತಡೆಯುವುದಕ್ಕೆ ೫ ಎಕರೆ ಎಂದು ನಾವು ಮಾಡಿದ್ದು. ನಿಮಗೇನಾಗಿದೆ ಅಂದರೆ ೧೦ ಎಕರೆ ಮಾನ್ಯ ಶ್ರೀ ಅರಸ್ ಅವರು ಹಾಕಿರುವುದನ್ನು ಪ್ರತಿಪಾದನೆ ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. ನನಗೇನೂ ಇಲ್ಲ. ನಾನು ಶ್ರೀಮಂತರ ಪಾರ್ಟಿಯಿಂದ ಇಂದು ಗೆದ್ದುಕೊಂಡು ಬಂದ ಎಂಬುದಾಗಿ ಹೇಳಬಹುದು. ಇದು ಜನಸಂಘವಲ್ಲ. ನಿಮ್ಮ ಕೈಲಿ ಹೊಡೆತ ತಿಂದು ಬಂದಿದ್ದೇನೆ. ನೀವು ೧೦ ಎಕರೆ ಹಾಕುವುದೇ ಅಲ್ಲ. ಅರ್ಬನ್ ಸೀಲಿಂಗ್ ೩ ಲಕ್ಷ, ೫ ಲಕ್ಷ ಇರಲಿ ಎಂದು ಮಾತನಾಡುವಾಗ ೧೦ ಎಕರೆ ಭೂಮಿ ಪ್ರಶ್ನೆಯಲ್ಲಿ ನೀವು ತಾರತಮ್ಯ ಮಾಡುತ್ತೀರಿ ? ಪ್ರಾಮಾಣಿಕವಾಗಿ ಹೇಳಿ. ನೀವು ವರ್ಗರಹಿತವಾದ ಸಮಾಜವನ್ನು ನಿರ್ಮಾಣ ಮಾಡುತ್ತೇವೆಂದು ಹೇಳುವಾಗ ಇವತ್ತು ೫ ಲಕ್ಷ ಸೀಲಿಂಗ್ ಲಿಮಿಟ್, ರೈತರಿಗೆ ೧೦ ಎಕರೆ ಭೂಮಿ ಅಂದರೇನು ? ಇದರಿಂದ ದಯಮಾಡಿ ತಾವು ಆಲೋಚನೆ ಮಾಡಿ. ಇದರ ಬಗ್ಗೆ ಯಾವುದೂ ಹಿಜ್ಜತ್ ಬೇಡ. ಹೇಸ್ಟಿ ಡಿಸಿಷನ್ ಬೇಡ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ. ಅಲ್ಲಿ ಇದು ಒಂದು ವಾರದವರೆಗೂ ಚರ್ಚೆಯಾಗುತ್ತದೆ. ಪತ್ರಿಕೆಗಳಲ್ಲಿ ಯಾರೋ ಮಿನಿಸ್ಟರ್ ಇದರಲ್ಲಿ ಬದಲಾವಣೆ ಬೇಡ, ಇದನ್ನು ಮೊಟಕು ಮಾಡಿ ಮುಂದೆ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಯಾವಾಗಲಾದರೂ ತೆಗೆದುಕೊಳ್ಳಿ. ಇದರ ಬಗ್ಗೆ ಪುನಃ ಸಾಕಷ್ಟು ಪರ್ಯಾಲೋಚನೆ ಮಾಡಿ. ಹಿಜ್ಜತ್ ಬೇಡ. ಹಿಜ್ಜತ್‌ನಿಂದ

(ಶ್ರೀ ಹೆಚ್. ಡಿ. ದೇವೇಗೌಡ)

ಕೆಲಸಕಾರ್ಯಗಳನ್ನು ಮಾಡಬೇಡಿ. ಮಾನ್ಯ ಶ್ರೀ ಅರಸ್ ಅವರು ಇದರಿಂದ ನನ್ನ ಪ್ರತಿಷ್ಠೆ ಬೆಳೆಯುತ್ತದೆ, ೧೦ ಎಕರೆ ಸೀಲಿಂಗ್ ಎಂದು ಮಾಡಿದ್ದೇವೆ. ಅದು ಒಂದು ಪ್ರಾವಿಷನ್ ಮಾಡಿ ಇಟ್ಟುಕೊಂಡಿದ್ದೇವೆಂದು ಇದ್ದರೆ ಅದು ಒಂದು ಕನಸು. ಅದು ನಿಲ್ಲುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ. ಅರ್ಬನ್ ಸೀಲಿಂಗ್ ಮತ್ತು ಲ್ಯಾಂಡ್ ರಿಫಾರಮ್ಸ್ ಎರಡನ್ನೂ ಒಟ್ಟಿಗೆ ತರುತ್ತೇವೆಂದು ಹೇಳಿದ್ದರೂ ಅದಿನ್ನೂ ಮಾಡಿಲ್ಲ. ನಿಮ್ಮ ಎ.ಐ.ಸಿ.ಸಿ. ಅಧ್ಯಕ್ಷರು ಮೊನ್ನೆ ಎರಡನ್ನೂ ಒಟ್ಟಿಗೆ ಜಾರಿಗೆ ತರುತ್ತೇವೆಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಲಾ ಮಿನಿಸ್ಟರ್ ಹೇಳಿದರು, ಬಿಲ್ ರೆಡಿಯಾಗಿದೆ, ಅದು ಇಷ್ಟರಲ್ಲೇ ಇಷ್ಟು ಆಗುತ್ತದೆ, ಮಂತ್ರಿಮಂಡಲ ಅದನ್ನು ಪರ್ಯಾಲೋಚಿಸುತ್ತಿದೆಯೆಂದು.

ಶ್ರೀ ಡಿ. ಕೆ. ನಾಯ್ಕರ್.—ಅದಕ್ಕೂ, ಇದಕ್ಕೂ ಭೇದಭಾವ ಮಾಡುವುದಕ್ಕಾಗುವುದಿಲ್ಲ. ಒಂದೊಂದಾಗಿ ಅದನ್ನು ಮಾಡುವಾಗ ಅದರ ಪ್ರೋಗ್ರೆಸ್ಸನ್ನು ತೋರಿಸುತ್ತೇವೆ.

MR. DEPUTY SPEAKER.—One thing at a time and that done well.

ಶ್ರೀ ಡಿ. ಕೆ. ನಾಯ್ಕರ್.—ಆ ರೀತಿ ಮಾಡದಿದ್ದರೆ ಫಲಕಾರಿಯಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನೇಚರ್‌ಗೆ ವಿರೋಧವಾಗಿ ಹೋಗಬಾರದು. ಆದರೆ ನಿಮ್ಮಲ್ಲಿ ಎರಡು ಲಕ್ಷ ರೂಪಾಯಿ ಅರ್ಬನ್ ಸೀಲಿಂಗ್ ಇರಬೇಕು ಎಂದು ಹೇಳಿದರು. ಕ್ಯಾಬಿನೆಟ್‌ನಿಂದ ಹೊರಗೆ ಬಂದಮೇಲೆ ದಾಮೂಷಾ ಪ್ರಕಾರ ೩ ಲಕ್ಷ ಎಂದು ಹೇಳುತ್ತಾರೆ. ನಿಮ್ಮನ್ನು ಕೇಳಿದರೆ ಎರಡು ಲಕ್ಷ ಎಂದು ಹೇಳುತ್ತೀರಿ. ಇದು ಒಂದು ವೈಖರಿಯಾಗಿದೆ. ಎಂ.ಪಿ.ಸಿ.ಸಿ (ಆರ್)ನಲ್ಲಿ ಮಂತ್ರಿಗಳ ರೆಜಲ್ಯೂಷನ್ ಮೂವ್ ಮಾಡಿರುವವರು ಕ್ಯಾಬಿನೆಟ್‌ನಿಂದ ಹೊರಗೆ ಬಂದಮೇಲೆ ದಾಮೂಷಾ ಪ್ರಕಾರ ಲೆಕ್ಕಾಚಾರ ಮಾಡಿ ೩ ಲಕ್ಷ ಎಂದು ಹೇಳಿದರು. ಆದರೆ ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರು ಮಾತ್ರ ೧೦ ಎಕರೆಗೆ ಪಟ್ಟು ಹಿಡಿಯಬೇಕೆಂದು ಹೇಳುತ್ತಾರೆ. ತಾವು ಹೇಳಿರತಕ್ಕದ್ದನ್ನೇ ಬೇಕೆಂದರೆ ನಾನು ಓದುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರಾದ ಚಂದ್ರಶೇಖರ್ ಅವರು ಹಿಂದೆ ಒಂದು ಸರ್ತಿ ಜುಟ್ಟು ಜನಿವಾರಗಳನ್ನೆಲ್ಲಾ ಜಾತಿಗೆ ಗಂಟುಹಾಕಿಕೊಂಡು ಎಂದು ಹೇಳಿದ್ದರು ಈಗ ಶ್ರೀ ದೇವೇಗೌಡರು ಹೇಳತಕ್ಕದ್ದು ಅಷ್ಟೇನೂ ಅದಕ್ಕಿಂತಲೂ ಅಸಂಬದ್ಧವಾದದ್ದಲ್ಲ.

SRI S. M. SHERNALLY CHANDRASEKHAR.—It was on a private member's resolution that I have talked and not on any other subject.

SRI H. S. SIDDAPPA.—That resolution was only for removal of name boards.

MR. DEPUTY SPEAKER.—The hon. member has raised a point of order. When there is a thorough discussion of the subject some allegations are bound to be there. The hon. member's point of order has force but so far as deci ion on it is concerned, it is not in his favour.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಚಂದ್ರಶೇಖರ್ ಅವರಿಗೆ ಎಷ್ಟು ಕಾಲ ಬೇಕಾದರೂ ಕೊಡಲಿ ಅದರ ಬಗ್ಗೆ ನನ್ನ ಭಿನ್ನಾಭಿಪ್ರಾಯವಿಲ್ಲ. ಆದರೆ ಇಲ್ಲಿ ಮಸೂದೆಯ ಬಗ್ಗೆ 'ಎಸ್.' ಅಂಡ್ 'ನೋಸ್' ಎನ್ನುವುದು ಬೇಡ ಎಂದು ಹೇಳುತ್ತಿದ್ದೇನೆ. ಅವರೇ ಹೇಳಿದ್ದರು ಅರ್ಬನ್ ಸೀಲಿಂಗ್ ಮತ್ತು ಈ ಭೂ ಸೀಲಿಂಗ್ ಎರಡನ್ನೂ ಒಟ್ಟಿಗೇ ತರುತ್ತೇವೆಂದು ಹೇಳಿದ್ದರು. ಅದೇಕೋ ಅದನ್ನು ಈಗ ಹಿಂದಕ್ಕೆ ಇಟ್ಟಿದ್ದಾರೆ. ಅರ್ಬನ್ ಸೀಲಿಂಗ್ ಬಗ್ಗೆ ಕೇಂದ್ರದ ವರಿಷ್ಠರಿಂದ ಬಂದಿರತಕ್ಕ ಅಭಿಪ್ರಾಯದ ಪ್ರಕಾರ ೫ ಲಕ್ಷ ಇರಬೇಕೆಂದು ಹೇಳಿದ್ದಾರೆಂದು ವರ್ತಮಾನ ಕೇಳುತ್ತಿದ್ದೇನೆ. ಆದರೆ ನಮ್ಮ ರಾಜ್ಯದಲ್ಲಿ ಅಲ್ಲಿಗಿಂತ ಇನ್ನೂ ಹೆಚ್ಚಿನ ಪ್ರಗತಿಗಾಮಿಗಳು ನಾವು ಅನ್ನಿಸಿಕೊಳ್ಳಬೇಕೆಂದು ಇಲ್ಲಿ ಕೆಲವು ಮಂತ್ರಿಗಳು ಆ ಅರ್ಬನ್ ಪ್ರಾಪರ್ಟಿ ಮಿತಿಯನ್ನು ೩ ಲಕ್ಷಕ್ಕೆ ಇಳಿಸಬೇಕೆಂದು ಉದ್ದೇಶವಿದೆಯೆಂದು ನಾನು ಬಾತ್ಮಿ ಕೇಳುತ್ತಿದ್ದೇನೆ ಹಾಗೇ ಭೂಮಿ ಮಿತಿಯಲ್ಲೂ ಕೂಡ ಹತ್ತು ಎಕರೆ ಇರಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದಾರೆಂದು ಕೇಳುತ್ತಿದ್ದೇನೆ ಅವರ ಕೊನೆಯ ತೀರ್ಮಾನ ಏನೇ ಇರಲಿ ೩ ಲಕ್ಷ ಅರ್ಬನ್ ಪ್ರಾಪರ್ಟಿಗೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ೧೦ ಎಕರೆ ಭೂಮಿ ಒಂದು ಸರಿಸಮಾನವಾದ ಆಸ್ತಿಯಾಗುತ್ತದೆಯೋ ಎಂದು ಕೇಳುತ್ತೇನೆ ?

ನಗರಗಳಲ್ಲಿ ೩ ಲಕ್ಷ ರೂಪಾಯಿಗಳಿದ್ದರೆ ೩-೪ ಮನೆಗಳು ಬರುತ್ತವೆ. ಅವುಗಳಿಂದ ತಿಂಗಳಿಗೆ ೫೦೦ ರೂಪಾಯಿ ಬಾಡಿಗೆ ದುಡಿಯಬಹುದು. ತಿಂಗಳಿಗೆ ೫೦೦ ರೂಪಾಯಿ ಬಾಡಿಗೆ ಬಂದರೆ ವರ್ಷಕ್ಕೆ ೬ ಸಾವಿರ ರೂಪಾಯಿಗಳಾಯಿತು. ಅಂದರೆ ಮೂರು ಮನೆಗಳಿಗೆ ಒಟ್ಟು ೧೮ ಸಾವಿರ ರೂಪಾಯಿ ಬಾಡಿಗೆ ಯಿಂದ ವರಮಾನ ಪಡೆದುಕೊಂಡ ಹಾಗೆ ಆಯಿತು. ಆದರೆ ಇಲ್ಲಿ ಸಭೆಯಲ್ಲಿ 'ಆರ್' ಪಕ್ಷದ ಸದಸ್ಯರುಗಳೇ ಇರುವುದಿಲ್ಲ. ಬಹಳ ಜನರು ಹೊರಗಡೆ ಹೋಗಿದ್ದಾರೆ ಬಹುಶಃ ಅವರು ಇದಕ್ಕಿಂತ ಹೆಚ್ಚು ಆಸಕ್ತಿಯುಳ್ಳ ವಿಚಾರದಲ್ಲಿ ತಲ್ಲೀನರಾಗಿರಬಹುದು. ಇರಲಿ ಆದರೆ ನಗರದಲ್ಲಿ ೩ ಲಕ್ಷ ತರತಕ್ಕ ಸರಿಸಮಾನವಾದ ವರಮಾನವನ್ನು ಹಳ್ಳಿಯಲ್ಲಿ ಆ ೧೦ ಎಕರೆ ಜಮೀನು ತರಬಲ್ಲದೇ ಎಂಬುದನ್ನು ಪರಿಶೀಲನೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಆದರೆ ನನಗೆ ಅನ್ನಿಸುತ್ತಿದೆ ಈ ಸರ್ಕಾರಕ್ಕೆ ಈ ನಗರ ಆಸ್ತಿಯ ಮೇಲೆ ಮಿತಿಯನ್ನು ತರುವುದಕ್ಕೆ ಖಂಡಿತಾ ಅಸಾಧ್ಯ ಎಂದು. ಆದರೆ ಮೊದಲು ಎರಡನ್ನೂ ಒಟ್ಟಿಗೆ ತರುವ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಅರ್ಬನ್ ಆಸ್ತಿ ಸೀಲಿಂಗೇ ಬರುವುದಿಲ್ಲ ಎಂಬುದು ನನ್ನ ಭಾವನೆ ಒಂದು ವೇಳೆ ಬಂದರೂ ಅಷ್ಟೇನೂ ಅದರಿಂದ ಉತ್ತಮ ಫಲವನ್ನು ನಾವು ನಿರೀಕ್ಷಿಸುವುದಕ್ಕಾಗುವುದಿಲ್ಲ. ಈಗಾಗಲೇ ಇದೇ 'ಆರ್' ಪಾರ್ಟಿಯ ಸರ್ಕಾರ ಅಧಿಕಾರದಲ್ಲಿರತಕ್ಕ ಕೆಲವು ರಾಜ್ಯಗಳಲ್ಲಿ ಬಂದಿರತಕ್ಕ ಅರ್ಬನ್ ಸೀಲಿಂಗನ್ನು ನೋಡಿದರೆ ಅಲ್ಲಿ ಸಿನೇಮಾ ಹೋಟಲು ಮತ್ತು ಇಂಡಸ್ಟ್ರಿಯಲ್ ಹೌಸಸ್ ಇವುಗಳಿಗೆಲ್ಲಾ ವಿನಾಯಿತಿಯನ್ನು ಕೊಟ್ಟಿದ್ದಾರೆ. ಆದರೆ ಅವರ ಆಡಳಿತದಲ್ಲಿ ಯಾವುದಕ್ಕೆ ವಿನಾಯಿತಿ ಇಲ್ಲ ಎಂದರೆ ಗಂಡ ಹೆಂಡತಿ ಮಲಗತಕ್ಕ ಕೋಣೆಗೆ ಮಾತ್ರ ವಿನಾಯಿತಿ ಇಲ್ಲ ಇನ್ನೆಲ್ಲದಕ್ಕೂ ವಿನಾಯಿತಿಯುಂಟು ಆ ಲಾ ಮಂತ್ರಿಗಳು ಈಗ ಸಭೆಯಲ್ಲಿ ಇಲ್ಲ ಆಗಲೇ ಎಲ್ಲೋ ಹೋಗಿದ್ದಾರೆ. ಅವರ ಬಿಲ್ಲಿನ ಮಾದರಿಯನ್ನು ನೋಡಬೇಕಾಗಿದೆ ಆದರೆ ಆ ದಿವಸ ಶ್ರೀ ಘೋರ್ಪಡೆಯವರು ಗ್ರಾಮಗಳನ್ನೆಲ್ಲಾ ನಗರೀಕರಣ ಮಾಡುತ್ತೇವೆ ಎಂಬುದಾಗಿ ಹೇಳಿದ್ದರು ಈ ೧೦ ಎಕರೆ ಭೂಮಿತಿಯನ್ನು ಮಾಡಿ ಗ್ರಾಮಗಳನ್ನು ಇವರು ನಗರೀಕರಣ ಮಾಡುವುದಾಗಿ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿ ನಾವೇಕೆ ಇಷ್ಟು ಇದರ ಬಗ್ಗೆ ಕಂಠಶೋಷಣೆ ಮಾಡಿಕೊಳ್ಳಬೇಕು? ಹೊರಗಡೇ ಆಡಳಿತ ಪಕ್ಷದವರೇ ೧೦ ಎಕರೆ ಸೀಲಿಂಗ್ ಬೇಕೆ ಬೇಡವೆ ಎಂದು ಸಿಗ್ನೇಚರನ್ನು ಕಲೆಕ್ಟ ಮಾಡುತ್ತಿದ್ದಾರೆ. ಅದಕ್ಕಾಗಿ ಈ ಚರ್ಚೆ ಅಗತ್ಯವೇ ?

ಉಪಾಧ್ಯಕ್ಷರು.—ತಮ್ಮ ಸಿಗ್ನೇಚರನ್ನು ಕಲೆಕ್ಟ್ ಮಾಡಿಕೊಂಡರೊ ?

ಶ್ರೀ ವಾಟಾಳ್ ನಾಗರಾಜ್.—ಇಲ್ಲ. ಅಲ್ಲಿ ಇದರ ಬಿರುಸು ಬಹಳ ಉಲ್ಬಣವಾಗುತ್ತಿದೆ ಇದು ಬೇಕೇ ಬೇಡವೇ ಎಂಬುದು ಹೊರಗೆ ಬಹಳ ಕಾವಿನಿಂದ ಚರ್ಚೆಯಾಗುತ್ತಿದೆ. ಸರ್ಕಾರದವರೇ ಇದನ್ನು ಕೈಬಿಡುವ ಹಾಗೆ ಕಾಣುತ್ತಿದೆ.

SRI C. M. ARUMUGHAM (K. G. F.).—Sir, it is said that the House will adjourn tomorrow. Though we are not concerned with what happens outside, but sometimes we have to be concerned with what happens outside especially on certain important issues. From 14th instant onwards we dont have any regular agenda and the agenda was not supplied to us one week in advance. We thought that the House will go upto Saturday, But I dont know why this sudden change to adjourn the House tomorrow. Moreover, we see the treasury benches almost empty and that shows that they seem to have no interest over this vital land reforms issue. You have stated in this Bill that if a man has 12,000 rupees he cannot own any land and at the same time you have enhanced the Salary of two officers. I want to know, why should they adjourn the House tomorrow abruptly; why agenda should not have been given one week before? There is press report that some body has come from Delhi and all that. We want to know whether this bill would certainly become a law or whether it would be like saying that my child was born without cradle and died without a coffin? Whether this Bill would be referred to a Joint Select Committee or it would be discussed in this House itself thread bare? Where is the Chief Minister and other Ministers? Are they all in Upper House?

ಶ್ರೀ ವಾಟಾಳ್ ನಾಗರಾಜ್.—ಆಡಳಿತ ಪಕ್ಷದ ಕಡೆ ಯಾರೂ ಇಲ್ಲ. ಅಪ್ಪರ್ ಹೌಸಿಗೂ ಮಂತ್ರಿಗಳು ಹೋಗಿಲ್ಲ, ಅವರು ಎಲ್ಲಿಗೆ ಹೋಗಿದ್ದಾರೆಂಬುದನ್ನು ತಿಳಿಸಬೇಕು.

MR. DEPUTY SPEAKER.—With regard to the signature campaign I would like to state that it is a matter which is completely extraneous.

ಶ್ರೀ ವಾಟಾಳ್ ನಾಗರಾಜ.—ಸರಕಾರ ಉಳಿಯುತ್ತದೆಯೋ, ಇಲ್ಲವೋ ಎಂಬ ಪ್ರಶ್ನೆ ಇದೆ ಹೊರಗಡೆ ನಡೆಯುತ್ತಿರುವ ವಿಚಾರ ಗಮನಕ್ಕೆ ತಂದಿದ್ದೇನೆ. ಸರಕಾರದ ಧೋರಣೆ ಈ ಬಿಲ್ಲಿನ ಬಗ್ಗೆ ಸರಿಯಾಗಿಲ್ಲ.

SRI C. M. ARUMUGHAM :—Since the Government seem to be not serious about this Land Reforms, as a mark of protest, I stage a walk out along with my friends.

ಶ್ರೀ ಎಚ್. ಡಿ. ದೇವೇಗೌಡ.—ಬಹಳ ಅಸಡ್ಡೆಯಿಂದ ಇದ್ದಾರೆ, ಸರಿಯಾದ ವರ್ತನೆ ಸರಕಾರದಲ್ಲಿಲ್ಲ. ಆದುದರಿಂದ ಇದನ್ನು ಪ್ರತಿಭಟಿಸಲು ನಾವು ಹೊರಗೆ ಹೋಗುತ್ತೇವೆ. As a mark of protest we stage a walk-out.

(Some hon. Members from Opposition withdrew)

ಶ್ರೀ ಎಸ್. ಬಂಗಾರಪ್ಪ (ಸೊರಬ).—ನಾನೂ ಸಭಾತ್ಯಾಗ ಮಾಡಬೇಕಾಗುತ್ತದೆ. ಶ್ರೀ ಹುಚ್ಚ ಮಾಸ್ತಿಗೌಡರ ಬಗ್ಗೆ ಗೌರವವಿದೆ ಅವರೊಬ್ಬರೇ ಟ್ರಜರಿ ಬೆಂಚಿನಲ್ಲಿದ್ದಾರೆ ಇದು ಈ ಸದನಕ್ಕೆ ಗೌರವ ತರುವ ವಿಚಾರವಲ್ಲ. ಇದರಿಂದ ಭೂಸುಧಾರಣೆ ವಿಚಾರದಲ್ಲಿ ಸರಕಾರಕ್ಕೆ ಎಷ್ಟು ಆಸಕ್ತಿ ಇದೆಯೆಂದು ಗೊತ್ತಾಗುವುದು. ಬಡವರಿಗೆ ಸಹಾಯ ಮಾಡುವುದರಲ್ಲಿ ಎಷ್ಟು ಆಸಕ್ತಿ ಸರಕಾರಕ್ಕಿದೆ ಎಂಬುದು ಎದ್ದುಕಾಣುತ್ತಿದೆ.

ಮಾನ್ಯ ವಾಟಾಳ್ ನಾಗರಾಜ್‌ರವರು ೮೦-೯೦ ಸಿಗ್ನೇಚರ್ ನಡೆಯುತ್ತಾ ಇದೆ ಎನ್ನುವ ಮಾತು ಹೇಳಿದರು. ಆ ವಿಚಾರ ನನಗೆ ಬೇಕಾಗಿಲ್ಲ. ಒಟ್ಟಿನಲ್ಲಿ ಈ ಸದನದ ನಡೆವಳಿಕೆ ಏನು ಇದೆ ಅದರ ವಿರುದ್ಧವಾಗಿ ಸರ್ಕಾರ ನಡೆದುಕೊಂಡಿರುವುದರಿಂದ ನಾನೂ ಕೂಡ ಅವರೊಡಗೂಡಿ ಸಭಾತ್ಯಾಗ ಮಾಡುತ್ತೇನೆ.

(The hon. Member withdrew)

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಧ್ಯಕ್ಷರೇ, ಮೊದಲು ನಾನು ಈ ಮೈಸೂರು ಲ್ಯಾಂಡ್ ರೀಫಾರಂಸ್ ಬಿಲ್ ೧೯೭೨ ಏನಿದೆ ಇದಕ್ಕೆ ಒಂದು ತಿದ್ದುಪಡಿಯನ್ನು ಕಳುಹಿಸಿ ಕೊಟ್ಟಿದ್ದೇನೆ. ಇದಕ್ಕೆ ಸಾರ್ವಜನಿಕರ ಗಮನವನ್ನು ಸೆಳೆದು ಅವರ ಅಭಿಪ್ರಾಯವನ್ನು ಕ್ರೋಢೀಕರಿಸುವುದಕ್ಕೋಸ್ಕರ ಈ ಮಸೂದೆಯನ್ನು ಸಾರ್ವಜನಿಕರ ಗಮನವನ್ನು ಸೆಳೆಯುವುದಕ್ಕೆ ಕಳುಹಿಸಿಕೊಡಬೇಕು ಎನ್ನತಕ್ಕಂಥಾದ್ದೇ ನಾನು ಸೂಚಿಸಿರತಕ್ಕ ಒಂದು ತಿದ್ದುಪಡಿ ಅದನ್ನು ಸಮರ್ಥಿಸಿ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಈ ಮಸೂದೆ ನಮ್ಮ ರಾಜ್ಯದ ಲಕ್ಷಾಂತರ ಜನಗಳ ಹಿತಚಿಂತನೆ ಮಾಡತಕ್ಕಂಥ ಅತಿ ಮುಖ್ಯವಾದಂಥ ಮಸೂದೆ. ಇದರ ಬಗ್ಗೆ ನಾನಾದರೂ ಹೇಳುವುದಾದರೆ ಯಾವುದೋ ಒಂದು ಉದ್ರೇಕದಿಂದ ಆವಶ್ಯಬೇಗ ತರಬೇಕು ಎನ್ನುವ ಉದ್ದೇಶದಿಂದ ಅವಸರವಸರವಾಗಿ ಈ ಮಸೂದೆಯನ್ನು ತಯಾರು ಮಾಡಿ ನಮ್ಮ ಮುಂದೆ ಇಟ್ಟಿದ್ದಾರೆ. ಈ ಮಸೂದೆಯನ್ನು ತಯಾರು ಮಾಡುವಾಗ ಇದರ ಪ್ರಾಮುಖ್ಯತೆ ಎಷ್ಟು ಇದೆಯೋ ಅದಕ್ಕೆ ಸಾಕಾದಷ್ಟು ಗಮನ ಕೊಟ್ಟಿಲ್ಲ ಎಂದು ನನ್ನ ಸಲಹೆ. ಕಳೆದ ಚುನಾವಣೆಯಲ್ಲಿ ಈ ಆಡಳಿತ ಪಕ್ಷಕ್ಕೆ ಸಾಕಾದಷ್ಟು ಬಹುಮತ ಬಂದಿದೆ ಎಂದು ನಾವು ಏನೋ ಒಪ್ಪಿಕೊಳ್ಳಬೇಕಾಗಿದೆ. ಆದರೆ ಇದರ ಲೆಕ್ಕಾಚಾರಗಳನ್ನು ನೋಡಿದರೆ ಆಡಳಿತ ಪಕ್ಷಕ್ಕೆ ಓಟು ಕೊಟ್ಟಿರುವವರಿಗಿಂತ ಆಡಳಿತ ಪಕ್ಷಕ್ಕೆ ವಿರುದ್ಧವಾಗಿ ಕೊಟ್ಟಿರುವವರ ಓಟು ಜಾಸ್ತಿಯಾಗಿದೆ ಎಂದು ಹೇಳುತ್ತೇನೆ. ಆದುದರಿಂದ ಈಗ ಇದರ ಬಗ್ಗೆ ತೀರ್ಮಾನ ಮಾಡುವುದಕ್ಕಿಂತ ಮುಂಚೆ ಸಾರ್ವಜನಿಕರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಅತಿ ಮುಖ್ಯವಾದುದು. ಏತಕ್ಕೆಂದರೆ ಸುಮಾರು ೫೨-೫೩ ಪರ್ಸೆಂಟ್ ಅಷ್ಟು ಓಟು ಆಡಳಿತ ಪಕ್ಷಕ್ಕೆ ವಿರುದ್ಧವಾಗಿ ಕೊಟ್ಟಿದ್ದಾರೆ. ಇದರ ಜೊತೆಗೆ ಈ ಮಸೂದೆಯಲ್ಲಿರತಕ್ಕಂಥ ಕೆಲವು ನಿಬಂಧನೆಗಳು ಫಂಡಮೆಂಟಲ್ ರೈಟ್ಸ್‌ಗೆ ವಿರುದ್ಧವಾಗಿ ಎಂದು ನನ್ನ ಅಭಿಪ್ರಾಯ ಇದರಲ್ಲಿ ಹೆಚ್ಚು ಡಿಸ್ಕ್ರಿಮಿನೇಷನ್ ಇದೆ ಎನ್ನುವುದು ನನ್ನ ಅಭಿಪ್ರಾಯ. ಇದರ ಜೊತೆಗೆ ಯಾವ ಜನರ ಹಿತದೃಷ್ಟಿಯಿಂದ ಈ ಮಸೂದೆಯನ್ನು ತಂದಿ

ದ್ದಾರೋ ಇದರಿಂದ ಸಾಕಾದಷ್ಟು ಅನುಕೂಲವಾಗುವುದಿಲ್ಲ ಎನ್ನುವುದೂ ಕೂಡ ನನಗೆ ವ್ಯಕ್ತವಾಗಿದೆ. ಆದುದರಿಂದ ಇದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕಾಗಿದೆ. ಅಲ್ಲದೆ ಈ ಮಸೂದೆ ಅಷ್ಟು ಬೇಗ ಜಾರಿಗೆ ಬಂದರೆ ಒಂದು ಆರ್ಥಿಕ ಪರಿಸ್ಥಿತಿಯಲ್ಲಾಗಲಿ ಬೇರೆ ಎಲ್ಲಾ ವಿಚಾರಗಳಲ್ಲೂ ಕೂಡ ಆಹಾರದ ವಿಚಾರದಲ್ಲೂ ಕೂಡ ಬಹಳ ತೊಂದರೆಯಾಗುತ್ತದೆ. ಆಹಾರೋತ್ಪನ್ನದ ಬಗ್ಗೆ ಈ ಮಸೂದೆಯಿಂದ ಸಾಕಾದಷ್ಟು ಅನುಕೂಲವಾಗುತ್ತದೆಯೋ ಎನ್ನುವುದರ ಬಗ್ಗೆ ಸಾರ್ವಜನಿಕರ ಗಮನವನ್ನು ಸೆಳೆಯಬೇಕಾಗಿದೆ ಎಂದು ಅನೇಕರ ಅಭಿಪ್ರಾಯವಾಗಿದೆ. ಈಗ ಇರತಕ್ಕಂಥ ಮಸೂದೆಯಿಂದ ಆಹಾರೋತ್ಪತ್ತಿಗೆ ಸಾಕಾದಷ್ಟು ಧಕ್ಕೆ ಆಗುತ್ತದೆ ಎಂದು ಅನೇಕ ಜನ ವ್ಯಕ್ತಪಡಿಸುತ್ತಿದ್ದಾರೆ. ಇದರ ಜೊತೆಗೆ ರಾಜ್ಯದ ಆರ್ಥಿಕ ಪರಿಸ್ಥಿತಿಯೂ ಕೂಡ ಕಳವಳಕ್ಕೆ ಕಾರಣವಾಗುತ್ತದೆ. ಈಗ ಇರತಕ್ಕಂಥ ನಿಯಮಾವಳಿಗಳ ಪ್ರಕಾರ ೧೯೬೧ ರಿಂದ ಈ ಭೂಮಿಯ ಒಂದು ಅಳತೆಯನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ ಅದರಿಂದ ಒಂದು ತೊಡಕಿನ ಸಮಸ್ಯೆ ಉದ್ಭವವಾಗುತ್ತದೆ ಅವರ ನ್ಯಾಯ ಭದ್ರತೆಯನ್ನು ಪ್ರಶ್ನಿಸಬೇಕಾಗಿದೆ. ಇದರ ಜೊತೆಗೆ ಮುಖ್ಯವಾಗಿ ಆಡಳಿತ ಪಕ್ಷದಲ್ಲಿ ಇರತಕ್ಕಂಥ ಕೆಲವರಿಗೆ ಈ ವಿಷಯದಲ್ಲಿ ಬಾಯಿ ಕಟ್ಟಿದ ಹಾಗೆ ಆಗಿದೆ. ತಮ್ಮ ಒಂದು ಪಕ್ಷದಲ್ಲೇ ಇದರ ಬಗ್ಗೆ ಒಮ್ಮತ ಇದೆಯೋ ಎಂದು ಅವರು ಯೋಚನೆ ಮಾಡಿಲ್ಲ. ನನ್ನ ಮಿತ್ರರು ಆಗಲೇ ಹೇಳಿದ ಹಾಗೆ ಯಾವುದೋ ಒಂದು ಇಕ್ಕಟ್ಟಿಗೆ ಸಿಕ್ಕಿಬಿದ್ದು ಬಾಯಿ ಕಟ್ಟಿದ ಹಾಗೆ ಇದೆ. ಇದಕ್ಕೆ ತಮ್ಮ ಮನಸ್ಸು ಇಲ್ಲದೇ ಹೋದರೂ ಕೂಡ ಅವರ ಮನಸ್ಸಿಗೆ ವಿರುದ್ಧವಾಗಿ ಮತ ಕೊಡಬೇಕಾಗಿದೆಯೇ ಹೊರತು ಅವರ ಸ್ವೇಚ್ಛೆಯಿಂದ ಇದರಲ್ಲಿ ನಂಬಿಕೆ ಇಟ್ಟುಕೊಂಡು ಮತ ಕೊಡುವುದಿಲ್ಲ ಆದುದರಿಂದ ಅವರಿಗೆ ಮನಸ್ಸು ಇಲ್ಲದಿದ್ದರೂ ಬಲವಂತವಾಗಿ ಕೈ ಎತ್ತಿಸಿಕೊಂಡು ಈ ಬಿಲ್ಲನ್ನು ಪಾಸ್ ಮಾಡಬೇಕೆಂದು ಹೋದರೆ ಅದು ಸರಿಯಲ್ಲ. ಇದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಸೆಳೆಯಬೇಕಾದುದು ಅತಿ ಮುಖ್ಯವಾದದ್ದು. ಮಾನ್ಯ ರೆವಿನ್ಯೂ ಸಚಿವರು ಹೇಳಿರುವ ಹಾಗೆ ರಾಜ್ಯದಲ್ಲಿ ಎಷ್ಟು ಜನಗಳಿಗೆ ಅನುಕೂಲವಾಗುತ್ತದೆ ಇದರ ಬಗ್ಗೆ ಸಾಕಾದಷ್ಟು ಅಂಕಿಅಂಶಗಳು ದೊರೆಯುತ್ತದೆಯೋ ಎನ್ನುವುದನ್ನು ಗಮನಿಸಿಲ್ಲ. ಅವರು ಕೊಟ್ಟಿರತಕ್ಕಂಥ ಅಂಕಿಅಂಶಗಳು ೧೯೫೮ ರದ್ದು ಹೇಳುತ್ತಿದ್ದಾರೆ. ೧೦ ೧೮ ವರ್ಷಗಳಿಂದ ಬೇಕಾದಷ್ಟು ಮಾರ್ಪಾಡಾಗಿದೆ ಎಂದು ಹೇಳುತ್ತೇನೆ. ಇದರಿಂದ ಮೊದಲು ಎಷ್ಟು ಜಮೀನು ಸಿಕ್ಕುತ್ತದೆ ಎನ್ನುವುದನ್ನು ತಿಳಿಯಬೇಕು. ಇಲ್ಲದೇ ಹೋದರೆ ಈಗ ನೀವು ಮಾಡುತ್ತಾ ಇರುವ ನೀತಿ ಹೇಗಾಗಿದೆ ಎಂದರೆ ಮಗು ಗರ್ಭದಲ್ಲಿ ಇದ್ದಾಗಲೇ ಕುಲಾವಿ ಹೊಲಿಸಿದರು ಎಂಬಂತೆ ಆ ಮಗು ಗರ್ಭದಲ್ಲೇ ಸತ್ತು ಹೋಗಬಹುದು ಅಥವಾ ಹುಟ್ಟಿದ ಮೇಲೆ ಸತ್ತು ಹೋಗಬಹುದು ಆದುದರಿಂದ ಹಿಂದಿನ ಒಂದು ಅಂಕಿಅಂಶಗಳನ್ನು ತೆಗೆದುಕೊಂಡು ಆ ಭೂಮಿಯನ್ನು ಹಂಚುತ್ತೇವೆ ಎಂದು ಹೇಳುವುದು ಸರಿಯಲ್ಲ ಈವಾಗ ಎಷ್ಟು ಜಮೀನು ಇದೆ, ಹೇಗೆ ಹಂಚಬೇಕು, ಇದರ ಬಗ್ಗೆ ಸಾಕಾದಷ್ಟು ಗಮನ ಸೆಳೆಯಬೇಕು. ಆದುದರಿಂದ ಇದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ತೆಗೆದುಕೊಂಡು ಇದರ ಜೊತೆಗೆ ಈಗ ಇರತಕ್ಕ ಅಂಕಿಅಂಶಗಳನ್ನೂ ಕೂಡ ತೆಗೆದುಕೊಂಡು ಸಿದ್ಧತೆ ಮಾಡಿಕೊಂಡರೆ ಇದರ ಬಗ್ಗೆ ಯಾವರೀತಿ ತೀರ್ಮಾನ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳಬಹುದು.

ಇನ್ನು ಈ ಬಿಲ್ಲು ವಿಚಾರ ಹೇಳುವುದಾದರೆ ಬೇರೆ ರಾಜ್ಯಗಳ ಬಿಲ್ಲಿಗೂ ಈ ಬಿಲ್‌ಗೂ ವ್ಯತ್ಯಾಸ ಇದೆ. ಹೇಗೆಂದರೆ ಕೆಲವರಿಗೆ ಬೇರೆ ಬೇರೆ ರಾಜ್ಯಗಳಲ್ಲಿ ಜಮೀನುಗಳು ಇರುತ್ತದೆ. ಆದುದರಿಂದ ದೇಶದಲ್ಲಿ ಯಾವ ರಾಜ್ಯದಲ್ಲಿ ಜಮೀನು ಇದ್ದರೂ ಅವರಿಗೆಲ್ಲಾ ಅನ್ವಯಿಸುವಂತೆ ಎಲ್ಲಾ ಕಡೆಯೂ ಒಂದೇ ತರಹವಾದ ಸೀಲಿಂಗ್ ಲಿಮಿಟ್ ತಂದರೆ ಆಗ ಇದು ಸರಿಹೋಗಬಹುದು ಇದನ್ನು ಯೋಚನೆ ಮಾಡಬೇಕು. ಈಗ ಒಂದು ಉದಾಹರಣೆ ಹೇಳುವುದಾದರೆ ನನ್ನ ಸ್ನೇಹಿತರೊಬ್ಬರಿಗೆ ಮದ್ರಾಸ್‌ನಲ್ಲಿ ೧೦ ಎಕರೆ ಜಮೀನು ಇದೆ, ಅವನಿಗೆ ಮೈಸೂರು ರಾಜ್ಯದಲ್ಲೂ ಕೂಡ ೧೦ ಎಕರೆ ಜಮೀನು ಇದೆ ಈ ರೀತಿ ೨-೩ ರಾಜ್ಯದಲ್ಲಿ ಜಮೀನು ಇಟ್ಟುಕೊಂಡಿರತಕ್ಕಂಥಾವರು ಅನೇಕರು ಇದ್ದಾರೆ. ಬಿರ್ಲಾ ಇನ್ನೂ ಮುಂತಾದವರು ಇದ್ದಾರೆ. ಇದನ್ನೆಲ್ಲಾ ಯೋಚನೆ ಮಾಡಬೇಕು. ಆದುದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರದ ಒಂದು ಕಾಯಿದೆ ತಂದುಕೊಂಡು ಇಡೀ ದೇಶದಲ್ಲಿ ಒಬ್ಬರಿಗೆ ಜಮೀನು ಮಿತಿ ಎಷ್ಟು ಇರಬೇಕು ಎನ್ನುವ ಒಂದು ಕಾಯಿದೆ ತರದೇ ನಮ್ಮ ರಾಜ್ಯಕ್ಕೇ ಈ ರೀತಿಯಾದ ಒಂದು ಕಾಯಿದೆ ತರುವುದು ನ್ಯಾಯವೇ ಎಂದು ಯೋಚನೆ ಮಾಡಬೇಕು.

5-30 P. M.

ಇದು ಅತಿ ಮುಖ್ಯವಾದ ಮಸೂದೆ, ನನಗೆ ವ್ಯವಸಾಯದ ಜಮೀನಿಲ್ಲ, ನಾನು ರೈತನಲ್ಲ. ಭೂಮಾಲೀಕನೂ ಅಲ್ಲ. ಕೆಲವು ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಒಬ್ಬ ಲೇಮನ್ಯಾನ್ ಯಾವರೀತಿ ಮಾತನಾಡುತ್ತಾನೆಯೋ ಆ ರೀತಿ ಮಾತನಾಡುತ್ತಿದ್ದೇನೆ. ಇದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ನಾನು ಪ್ರಗತಿ ವಿರೋಧಿಯಲ್ಲ. ಜನಗಳಿಗೆ ಅನುಕೂಲ ಮಾಡಬೇಕೆಂಬುದರ ಬಗ್ಗೆ ನಾನು ಅದ್ದಿ

(ಶ್ರೀ ಟಿ ಆರ್. ಶಾಮಣ್ಣ)

ಮಾಡುತ್ತಿಲ್ಲ ಇದರ ಬಗ್ಗೆ ಸಾಕಾದಷ್ಟು ಯೋಜನೆ ಮಾಡಿ, ಕಾಲಾವಕಾಶಕೊಟ್ಟು ಜನರ ಅಭಿಪ್ರಾಯವನ್ನು ತೆಗೆದುಕೊಂಡು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ನಾನು ಈ ಸೂಚನೆಯನ್ನು ಮಂಡಿಸಿದ್ದೇನೆ. ಈ ಮಸೂದೆ ಬಗ್ಗೆ ತಕ್ಷಣ ತೀರ್ಮಾನವಾಗುವುದಿಲ್ಲ. ಸಾರ್ವಜನಿಕರ ಅಭಿಪ್ರಾಯವನ್ನು ಕ್ರೋಢೀಕರಿಸಿ, ಇದರ ಬಗ್ಗೆ ನ್ಯಾಯವಾದ ತೀರ್ಮಾನವನ್ನು ತೆಗೆದುಕೊಳ್ಳತಕ್ಕುದು ಉತ್ತಮವಾದುದು. ಈ ಮಸೂದೆಯನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ಬಿಟ್ಟು ಕೊಡಬೇಕೆಂದು ಹೇಳುತ್ತೇನೆ. ಈ ಮಧ್ಯೆ, ಸಾರ್ವಜನಿಕ ಅಭಿಪ್ರಾಯ ಬರುವುದರೊಳಗೆ, ಎಷ್ಟು ಸೀಲಿಂಗ್ ಮಾಡಿದರೆ ಎಷ್ಟು ಜಮೀನು ಸಿಕ್ಕುತ್ತದೆ, ಎಷ್ಟು ಜಮೀನು ಉಳಿಯುತ್ತದೆ, ಅದನ್ನು ಯಾವರೀತಿ ಹಂಚಬೇಕು ಎನ್ನುವುದನ್ನು ಯೋಚನೆ ಮಾಡ ಬಹುದು.

ಭೂಸುಧಾರಣೆಗೆ ಸಂಬಂಧಪಟ್ಟಂತೆ ಒಂದು ಸಮಗ್ರವಾದ ತಿದ್ದುಪಡಿ ಕಾಯದೆ ಬರುತ್ತದೆ ಎಂದು ನಾನು ಯೋಚನೆ ಮಾಡುತ್ತಿದ್ದೆ. ಆದರೆ ಕೋಳಿ ಕೆದಕಿದ ಹಾಗೆ ಅಲ್ಲೊಂದು ಇಲ್ಲೊಂದು ಬದಲಾವಣೆಯನ್ನು ಮಾಡಿದ್ದಾರೆ. ಕಾಂಪೆನ್‌ಸೇಷನ್ ಎನ್ನುವುದಕ್ಕೆ ಅಮೌಂಟ್ ಎಂದೂ, ಕೋರ್ಟ್ ಎನ್ನುವುದಕ್ಕೆ ತಹಸೀಲ್ದಾರ್ ಎಂದೂ, ೨,೦೦೦ ರೂಪಾಯಿಗಳ ವರಮಾನದ ಮಿತಿ, ಸ್ವಂತ ಸಾಗುವಳಿ ಮಾಡುವವರು ಜಮೀನಿನಿಂದ ೧೬ ಕಿಲೋಮೀಟರ್‌ದೂರದೊಳಗೆ ವಾಸಮಾಡಬೇಕು ಇವುಗಳನ್ನು ಬಿಟ್ಟರೆ ಬೇರೆ ಯಾವುದೂ ಮಸೂದೆ ಯಲ್ಲಿ ಹೊಸದಾಗಿ ಅಡಕವಾಗಿಲ್ಲ.

ಶ್ರೀ. ಎನ್. ಹುಚ್ಚಮಾಸ್ತಿಗೌಡ.—ಇದರೊಳಗೆ ಇನ್ನೇನು ಅಳವಡಿಸಬೇಕಾಗಿತ್ತು ಎಂದು ಮಾನ್ಯ ಸದಸ್ಯರ ಸಲಹೆ ಕೊಡುತ್ತಾರೆಯೋ ?

ಶ್ರೀ ಟಿ. ಆರ್. ಶಾಮಣ್ಣ :—196! ರಲ್ಲಿ ಭೂಸುಧಾರಣಾ ಕಾಯದೆ ಆಯಿತು ಆಗಿನಿಂದ ಈಗ್ಗೆ ಅನೇಕ ಬದಲಾವಣೆಗಳಾಗಿವೆ ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಹೊಸದಾದ ಒಂದು ಕಾಯದೆಯನ್ನು, ಎಲ್ಲ ವಿಚಾರಗಳನ್ನೂ ಯೋಚನೆ ಮಾಡಿ ತೆಗೆದುಕೊಂಡು ಬಂದಿದ್ದರೆ ಚೆನ್ನಾಗಿತ್ತು.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈ ಮಸೂದ ಕಾನೂನಿನಲ್ಲಿ ಹೊಸದಾಗಿ ತಂದಿರತಕ್ಕ ತಿದ್ದುಪಡಿ ಇರತಕ್ಕ ಕಾನೂನು, ಇವೆರಡನ್ನೂ ಒಟ್ಟಿಗೆ ಸೇರಿಸಿ, ಇದರ ಜೊತೆಗೆ ಇನ್ನೇನಾದರೂ ಹೊಸ ವಿಷಯ ಅಳವಡಿಸಬೇಕಾದ್ದು ಇದ್ದರೆ ದಯವಿಟ್ಟು ತಿಳಿಸುತ್ತಾರೆಯೋ ?

ಶ್ರೀ ಟಿ. ಆರ್. ಶಾಮಣ್ಣ :—ನಮ್ಮ ರಾಜ್ಯದಲ್ಲಿ ೨೫ ಲಕ್ಷ ಎಕರೆ ವ್ಯವಸಾಯ ಮಾಡದೆ ಇರತಕ್ಕ ಜಮೀನಿದೆ ಎಂದು ಹೇಳುತ್ತಾರೆ. ಅದನ್ನು ಕಳೆದ ೧೫ ವರ್ಷಗಳಿಂದ ಹಂಚುವುದಕ್ಕೆ ಪ್ರಯತ್ನ ಮಾಡಿಲ್ಲ. ಬೇರೆ ಯಾವರಿಂದ ಕಿತ್ತು ಕೊಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಸರ್ಕಾರದ ಸ್ವಾಧೀನದಲ್ಲಿರುವ ಜಮಿ ನನ್ನು ಹಂಚದ ಮೇಲೆ, ಬೇರೆಯವರ ಜಮೀನನ್ನು ತೆಗೆದುಕೊಂಡು ಹಂಚತಕ್ಕ ಪ್ರಯತ್ನ ಮಾಡಿದ್ದರೆ ಚೆನ್ನಾಗಿ ಇರುತ್ತಿತ್ತು. ಕಳೆದ ೩೦ ವರ್ಷಗಳಿಂದ ದರಖಾಸ್ತು ಜಮೀನು ಕೊಟ್ಟಿದ್ದೇ ಕೊಟ್ಟಿದ್ದು.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಸರ್ಕಾರದ ವಶದಲ್ಲಿರುವ ಜಮೀನನ್ನು ಹಂಚುವುದಕ್ಕೆ ಪ್ರತ್ಯೇಕ ವಾದ ಕಾನೂನಿದೆ. ಅದನ್ನು ಭೂಸುಧಾರಣಾ ಕಾನೂನಿನಲ್ಲಿ ತರಬೇಕಾದ್ದಿಲ್ಲ ಜಮೀನು ಹಂಚುವ ವ್ಯವಸ್ಥೆ ಯನ್ನು ಸ್ಥಳದ ಅಧಿಕಾರಿಗಳಿಗೆ ಕೊಟ್ಟಿದ್ದೇವೆ, ಅವರಿಂದ ಜಮೀನು ಹಂಚಿಕೆಯಾಗುತ್ತದೆ. ಉಳಿದ ಜಮೀ ನನ್ನು ಮುಂದಿನ ವರ್ಷ ಮಾರ್ಚಿ ಅಖೈರಿನೊಳಗಾಗ ಹಂಚುವ ವ್ಯವಸ್ಥೆ ಮಾಡಿಕೊಂಡು ಹಂಚುತ್ತಿದ್ದಾರೆ. ಕಾನೂನಿನಲ್ಲಿ ಸೇರಿಸಬೇಕಾದ ವಿಷಯ ಯಾವುದಾದರೂ ಬಿಟ್ಟು ಹೋಗಿದ್ದರೆ, ಸೇರಿಸುವುದಕ್ಕೆ ಸಲಹೆ ಮಾಡಿದರೆ ಒಳ್ಳೆಯದು.

ಶ್ರೀ ಟಿ. ಆರ್. ಶಾಮಣ್ಣ.—ನನ್ನ ಸಲಹೆ ಇಷ್ಟೆ. ನಾನಾಗಲೇ ಹೇಳಿದ ಹಾಗೆ, ಇದರಲ್ಲಿ ಯಾರಿಗೆ ನೋವಾಗುತ್ತದೆ. ಯಾರಿಗ ಇದರಿಂದ ಪ್ರಯೋಜನವಾಗುತ್ತದೆ, ಇಬ್ಬರ ವಿಚಾರವನ್ನೂ ಕೂಡ ಚನ್ನಾಗಿ ತಿಳಿದುಕೊಳ್ಳಬೇಕಾದ್ದು ಅತಿ ಅಗತ್ಯವಾಗಿದೆ ಎರಡು ಸಾವಿರ ಎಕರೆ ಹೀಗಲ್ಲ ಜಮೀನು ಇಟ್ಟುಕೊಂಡಿರು ವವರನ್ನು ಉಳಿಸಿ ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ ಆದರೆ ಒಂದು ಎಕನಾಮಿಕ್ ಹೋಲ್ಡಿಂಗ್ ಏನು ಇರಬೇಕು ಎಂದು ಹೇಳುತ್ತೀರಿ ಅದರಿಂದ ಬೆಳೆ ಬೆಳೆಯುವವನು ಮರ್ಯಾದೆಯಿಂದ ಜೀವನ ಮಾಡ ತಕ್ಕ ಪರಿಸ್ಥಿತಿ ಇರಬೇಕು. ರೈತನಿಗೆ ಜಮೀನು ಕೊಡಬೇಕು ಎಂದು ಹೇಳುತ್ತೀರಿ, ಜಮೀನು ಕೊಡೋಣ. ಜಮೀನು ಕೊಟ್ಟ ತಕ್ಷಣವೇ ಸಾಲಗಾರನಾಗಿ ಜಮೀನು ವ್ಯವಸಾಯ ಮಾಡಬೇಕಾಗುತ್ತದೆ ತಕ್ಷಣ ಜಮೀನು ವ್ಯವಸಾಯ ಮಾಡುವುದಕ್ಕೆ ಎತ್ತುಗಳು ಬೇಡವೇ, ನೇಗಿಲು ಬೇಡವೇ, ಗೊಬ್ಬರ ಬೆಡವೆ, ಇದನ್ನೆಲ್ಲ ಕೊಟ್ಟು ಅವನು ಉತ್ತು, ಬಿತ್ತು ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡದೇ ಹೋದರೆ ೨೦ ಕಂತುಗಳಲ್ಲಿ ಹಣವನ್ನು ಕೊಡಬೇಕು. ಕಂದಾಯವನ್ನು ಕೊಡಬೇಕು ಎಂದು ಹೇಳುವಾಗ ಬಡವನನ್ನು

ಉದ್ಧಾರ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು ಜಮೀನನ್ನು ಕೊಟ್ಟ ತಕ್ಷಣ ಅವನು ಉದ್ಧಾರವಾಗುವುದಿಲ್ಲ. ತನ್ನ ಕಾಲಮೇಲೆ ತಾನು ನಿಂತುಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಡದೆ ಇದ್ದರೆ, ಭೂಸುಧಾರಣೆಯಿಂದ ಖಂಡಿತವಾಗಿ ಪ್ರಯೋಜನವಾಗುವುದಿಲ್ಲ. ಭೂಮಿಯನ್ನು ಅವನಿಗೆ ಉಳಿಸಿ ಕೊಡುವುದಕ್ಕಾಗುವುದಿಲ್ಲ. ರೈತನಿಗೆ ಉದ್ಧಾರ ಮಾಡಬೇಕಾದರೆ ವ್ಯವಸಾಗಾರನಾಗುವುದಕ್ಕೆ ಏನೇನು ಸಲಕರಣೆಗಳು ಬೇಕೋ ಅದನ್ನೆಲ್ಲ ಕೊಡದೆ ಹೋದರೆ ಖಂಡಿತವಾಗಿ ಇದರಿಂದ ಪ್ರಯೋಜನವಾಗುವುದಿಲ್ಲ ಎಂದು ಒತ್ತಿ ಒತ್ತಿ ಹೇಳುತ್ತಿದ್ದೇನೆ. ಇದನ್ನೂ ಜೊತೆಗೇ ಪರಿಶೀಲಿಸಬೇಕಾಗುತ್ತದೆ. ಅನೇಕ ಇಂಥ ಮುಖ್ಯವಾದ ವಿಚಾರಗಳನ್ನು ಯೋಚನೇ ಮಾಡಬೇಕಾಗಿತ್ತು. ಹೇಗಿದ್ದರೂ ತಡವಾಗತಕ್ಕ ಪರಿಸ್ಥಿತಿ ಇದೆ ಆದುದರಿಂದ ನಾನು ಹೇಳಿರುವಂತೆ ೨೦ನೇ ಸೆಪ್ಟೆಂಬರ್ ೧೯೭೨ರ ಒಳಗೆ ಸಾರ್ವಜನಿಕ ಅಭಿಪ್ರಾಯವನ್ನು ಕ್ರೋಢೀಕರಿಸುವುದಕ್ಕೆ ಮಾನ್ಯಮಂತ್ರಿಗಳು ಒಪ್ಪಿ ಈಮಸೂದೆಯನ್ನು ಸಾರ್ವಜನಿಕಾಭಿಪ್ರಾಯಸಂಗ್ರಹಣೆಗೆ ಕಳುಹಿಸಿ ಕೊಡಬೇಕು, ಎಂದು ಹೇಳುತ್ತೇನೆ.

ಮಾನ್ಯ ಸಭಾಪತಿಗಳೇ, ನಾನು ಈ ಮಸೂದೆಯ ಬಗ್ಗೆ ನನ್ನ ಅಭಿಪ್ರಾಯಗಳನ್ನು ಹೇಳುವುದಕ್ಕೆ ಮೊದಲು ಈ ಮಸೂದೆಯಲ್ಲಿರತಕ್ಕ ಕೆಲವು ಲೋಪಗಳನ್ನು ತಮ್ಮ ಮುಂದೆ ಇಡುವುದಕ್ಕೆ ಪ್ರಯತ್ನ ಪಡುತ್ತೇನೆ. ಮೊದಲನೆಯದಾಗಿ ಈ ಮಸೂದೆಯಲ್ಲಿ ಲಂಚರುಷುವತ್ತುಗಳಿಗೆ ಸಾಕಾದಷ್ಟು ಅವಕಾಶವಿದೆ ಎನ್ನುವುದನ್ನು ಹೇಳಬೇಕಾಗಿದೆ. ಭೂಮಿಯನ್ನು ಏಳು ಭಾಗಗಳಾಗಿ ವಿಂಗಡಿಸಿದ್ದಾರೆ ಆ ರೀತಿ ವಿಂಗಡನೆ ಮಾಡುವಾಗ ದುಡ್ಡು ಕೊಟ್ಟರೆ ಒಂದನೇ ಕ್ಲಾಸನ್ನು ಎರಡನೇ ಕ್ಲಾಸ್, ಎರಡನೇ ಕ್ಲಾಸ್‌ನ್ನು ಮೂರನೆ ಕ್ಲಾಸ್ ಎಂದು ಮಾಡುವುದಕ್ಕೆ ಅವಕಾಶವಿದೆ. ಈ ಅಧಿಕಾರವನ್ನು ತಹಸೀಲ್ದಾರರಿಗೆ ಕೊಟ್ಟಿರುವುದರಿಂದ ತಹಸಿಲ್ದಾರರು ಎಷ್ಟುಮಟ್ಟಿಗೆ ಹಸ್ತಶುದ್ಧರಾಗಿ, ದೇಶಭಕ್ತರಾಗಿರುತ್ತಾರೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಅತಿ ಮುಖ್ಯವಾಗಿ ತಹಸೀಲ್ದಾರರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿರುವುದರಿಂದ ಅವರು ನ್ಯಾಯವಾಗಿ, ಧರ್ಮವಾಗಿ ನಡೆದುಕೊಳ್ಳುತ್ತಾರೆನ್ನುವುದಕ್ಕೆ ಸಾಕಾದಷ್ಟು ಎಚ್ಚರಿಕೆ ವಹಿಸಬೇಕಾದ್ದು ಮೊದಲನೆಯದು.

ಎರಡನೆಯದಾಗಿ ಎಷ್ಟೇ ಸುಧಾರಣೆ ಮಾಡಲಿ ನಿಜವಾಗಿಯೂ ತಮ್ಮ ಮನೆ ಆಳಿನ ಹೆಸರಿನಲ್ಲಿ, ತಮಗೆ ಬೇಕಾದವರ ಹೆಸರಿನಲ್ಲಿ ಜಮೀನು ಮಾಡಿ ಯಾರಿಗೆ ಜಮೀನು ಇದೆಯೋ ಅವರೇ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಯಾರಿಗೆ ಜಮೀನಿದೆಯೋ ಅಂಥವರಿಗೆ ಇನ್ನೂ ಹೆಚ್ಚಿನ ಪ್ರಯೋಜನವಾಗದ ಹಾಗೆ, ಯಾರಿಗೆ ಪ್ರಯೋಜನ ದೊರೆಯಬೇಕೋ ಅವರಿಗೆ ಆಗುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಭೂದಾನದ ಅನುಭವ ನಮಗೆ ಇದೆ. ಅದರಲ್ಲಿ ಸಾಧಾರಣವಾಗಿ ಬೇಡದೆ ಇರುವ ಜಮೀನನ್ನು ಬಿಟ್ಟು ಕೊಡುತ್ತಾರೆ, ಭೂ ಪರಿಮಿತಿಯನ್ನು ೧೯ ಎಕರೆ ಎಂದು ಮಾಡಿದರೂ, ಯಾವ ಜಮೀನು ಅವರಿಗೆ ಬೇಡವೋ ಅಂಥ ಜಮೀನು ಮಾತ್ರ ಸಿಕ್ಕುತ್ತದೆ. ಇದರ ಬಗ್ಗೆ ಯಾವ ತರಹ ಜಮೀನು, ಹೇಗೆ ಬಿಟ್ಟು ಕೊಡಬೇಕು ಎಂದು ಯೋಚನೆ ಮಾಡಬೇಕಾಗಿದೆ.

ಭೂಮಿ ಇನ್ನು ಮೇಲೆ ಮಾರತಕ್ಕ ಮತ್ತು ಕೊಳ್ಳತಕ್ಕ ವಸ್ತುವಾಗುವುದಿಲ್ಲ ಎನ್ನುವುದು ಖಚಿತವಾದುದು, ಸಾಲ ತೆಗೆದುಕೊಳ್ಳುವುದಕ್ಕೆ ಅಥವಾ ಆಧಾರ ಮಾಡುವುದಕ್ಕೆ ಆಗುವುದಿಲ್ಲ. ಸ್ವಂತ ಜಮೀನು ಅಭಿವೃದ್ಧಿ ಮಾಡುವುದಕ್ಕೆ ಜಮೀನು ಆಧಾರ ಭೋಗ್ಯ ಮಾಡಬಹುದೇ ಹೊರತು ಮದುವೆ, ಮುಂಜಿಮಾಡಲು ಸಾಲ ತೆಗೆದುಕೊಳ್ಳಬೇಕು ಅಥವಾ ಮಾರಬೇಕು ಎಂದರೆ ಸಾಧ್ಯವಾಗುವುದಿಲ್ಲ. ರೈತನಿಗೆ ಬೇರೆ ಕೆಲಸಗಳಿಗೂ ಸಾಲ ದೊರೆಯುವ ಹಾಗೆ ಮಾಡದೆ ಇದ್ದರೆ ಖಂಡಿತವಾಗಿ ರೈತ ಉದ್ಧಾರವಾಗುವುದಿಲ್ಲವೆಂದು ಒತ್ತಾಯವಾಗಿ ಹೇಳಬೇಕಾಗುತ್ತದೆ. ಕೋಆಪರೇಟೀವ್ ಫಾರ್ಮಿಂಗ್ ಎಂದು ಹೇಳಿದ್ದೀರಿ, ಇದರಲ್ಲಿ ಫ್ಯಾಮಿಲಿ ಕೋಆಪರೇಟೀವ್ ಸೊಸೈಟಿಗಳು ಬರುತ್ತವೆ, ಕಮ್ಯೂನಿಟಿ ಸೊಸೈಟಿಗಳು ಬರುವುದಿಲ್ಲ. ಕೋಆಪರೇಟೀವ್ ಸೊಸೈಟೀಸ್ ಎಂದು ಏನು ಹೇಳುತ್ತೇವೋ ಅವರಿಗೆ ಇದರಲ್ಲಿ ಸಾಕಾದಷ್ಟು ರಿಯಾಯಿತಿ ಕೊಟ್ಟಿದ್ದಾರೆ. ಫ್ಯಾಮಿಲಿ ಕೋಆಪರೇಟೀವ್ ಸೊಸೈಟಿಗಳ ಮೆಂಬರ್ಸ್ ಮಾತ್ರ ಇದರ ಅನುಕೂಲವನ್ನು ಒದಗಿಸಿಕೊಳ್ಳುತ್ತಾರೆ ಎಂದು ಹೇಳಬೇಕಾಗಿದೆ. ಇದರಲ್ಲಿ ಗಂಡ, ಹೆಂಡತಿ ಮಗ ಸೇರಿಕೊಂಡ ಪಕ್ಷದಲ್ಲಿ ಖಂಡಿತವಾಗಿಯೂ ಇದರಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲ. It will be a guard to hide evils. ಆದರೆ ನನಗೂ ಇದರ ಬಗ್ಗೆ ಅನುಭವ ಇದೆ, ಯಾರುಯಾರು ಏನು ಮಾಡಿದ್ದಾರೆ ಎನ್ನುವುದು ಗೊತ್ತಿದೆ. ಆದ್ದರಿಂದ ಕಮ್ಯೂನಿಟಿ ಕೋಆಪರೇಟೀವ್ ಸೊಸೈಟಿಗಳಿಗೆ ಮಾತ್ರ ಅವಕಾಶ ಮಾಡಿಕೊಡಬೇಕು, ಫ್ಯಾಮಿಲಿ ಕೋಆಪರೇಟೀವ್ ಸೊಸೈಟಿಗಳಿಗೆ ಅವಕಾಶ ಕೊಡಕೂಡದು ಎಂದು ಹೇಳುತ್ತೇನೆ. ಆಮೇಲೆ ೧೦-೧೨ ವರ್ಷಗಳಿಂದ ಇದ್ದ ಲ್ಯಾಂಡ್ ರಿಫಾರಮ್ಸ್ ಅನ್ನು ಇವತ್ತು ನಾಳೆ ಎಂದು ಮುಂದೆ ಮುಂದೆ ಹೋಗುತ್ತಿದೆಯೋ

(ಶ್ರೀ ಟಿ. ಆರ್ ಶಾಮಣ್ಣ)

ಹೊರತು ಸರಿಯಾದಂಥ ರೀತಿಯಲ್ಲಿ ಕಾರ್ಯಗತ ಮಾಡುವುದಕ್ಕೆ ಎಷ್ಟು ವರ್ಷಗಳು ಆಗುತ್ತದೆಯೋ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಅದರ ಜೊತೆಗೆ ಒಂದು ಮುಖ್ಯವಾದ ಅಂಶವನ್ನು ಮಾನ್ಯ ಮಂತ್ರಿಗಳು ಮರೆತ ಹಾಗೆ ಕಾಣುತ್ತದೆ ಅದು ಏನೆಂದರೆ, ತಾವು ಹತ್ತು ಎಕರೆ ಜಮೀನು ಎಂದು ಸೀಲಿಂಗ್ ಇಟ್ಟಿರುತ್ತೀರಿ. ಮೈನರ್ ಮಕ್ಕಳು ಮೂರು ಜನ, ಮೇಜರ್ ಆದನಂತರ ಒಬ್ಬೊಬ್ಬರಿಗೆ ಮೂರು ಎಕರೆ ಲ್ಯಾಂಡ್ ಬರುತ್ತದೆ. ಅವರ ಸಂತತಿಗೆ ಮುಂದೆ ಏನೂ ಇಲ್ಲದಂತಾಗುತ್ತದೆ. ಆದ್ದರಿಂದ ಇಂಗ್ಲೇಡಿನಲ್ಲಿರುವ ಹಾಗೆ ಸ್ಥಿರ ಆಸ್ತಿ ಒಬ್ಬ ಮಗನಿಗೆ ಹೋಗಬೇಕೋ ಅಥವಾ ಇದರ ಬಗ್ಗೆ ತಾವು ಯೋಚನೆ ಮಾಡಬೇಕು ಇಲ್ಲದಿದ್ದರೆ ಕಾಲ ಕ್ರಮೇಣ ಸೀಲಿಂಗ್ ಜಮೀನು ಇಟ್ಟುಕೊಂಡು, ಗುದ್ದಾಡು ತ್ತಾರೆ ಮತ್ತು ಹೊಟ್ಟೆಗೆ ಇಲ್ಲದೆ ಸಾಯಬೇಕಾಗುತ್ತದೆ. ಆದ್ದರಿಂದ ಇಂಗ್ಲೆಂಡಿನಲ್ಲಿರುವ ಹಾಗೆ Landed property shoul be given to the eldest son. ಎನ್ನುವ ಹಾಗೆ ಮಾಡುತ್ತೀರೋ, ಇದರ ಬಗ್ಗೆಯೂ ತಾವು ಯೋಚನೆ ಮಾಡಬೇಕು. ಬಡವರಿಗೆ ಅನುಕೂಲವಾಗುವ ಬಗ್ಗೆ ಈ ತಿದ್ದುಪಡಿ ತಂದಿದ್ದರೂ ವಾಸ್ತವವಾಗಿ ಇದರಲ್ಲಿ ಸಫರ್ ಆಗುವವರು ಬಡವರು, ಸತ್ಯ ಧರ್ಮದ ಕಡೆ ಗಮನ ಇಟ್ಟಿರು ವವರು. ಕದೀಮರು ಯಾವ ರೀತಿ ಮಾಡಿದರು, ನೀವು ಚಪ್ಪಡಿ ಕೆಳಗೆ ತೂರಿದರೆ, ಅವರು ರಂಗೋಲಿ ಕೆಳಗೆ ತೂರಿ ಸಾಕಷ್ಟು ಅನುಕೂಲಮಾಡಿಕೊಳ್ಳಲು ಪ್ರಯತ್ನ ಪಡುತ್ತಾರೆ. ಇದರ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸಬೇಕು ಎಂದು ಹೇಳುತ್ತೇನೆ. ನಾನು ಆಗಲೇ ಹೇಳಿದ ಹಾಗೆ ನನಗೆ ಗೊತ್ತಿರುವ ಹಾಗೆ ಕೆಲವರಿಗೆ ಎರಡು ಮೂರು ರಾಜ್ಯಗಳಲ್ಲಿ ಜಮೀನು ಇದೆ. ಅವರಿಗೆ ಡಿಸ್ಕ್ರಿಮಿನೇಷನ್ ಆಗಿ, ನಮ್ಮ ರಾಜ್ಯದಲ್ಲಿ ಅವರಿಗೆ ೧೦ ಎಕರೆ, ಬೇರೆ ರಾಜ್ಯದಲ್ಲಿ ಜಮೀನು ಇಟ್ಟುಕೊಂಡರೆ ಡಿಸ್ಕ್ರಿಮಿನೇಷನ್ ಆಗುವುದಿಲ್ಲ. ತಾವು ಇದರ ಬಗ್ಗೆ ಯೋಚನೆ ಮಾಡಿ ಕೇಂದ್ರದಿಂದ ಒಂದು ಕಾಯಿದೆ ಹೊರಡಿಸುವ ಹಾಗೆ ಮಾಡಬೇಕು ಇಲ್ಲದಿದ್ದರೆ ಇದು ನ್ಯಾಯವಾಗಿ ಆಗುವುದಿಲ್ಲ. ಎಲ್ಲದಕ್ಕಿಂತ ಮುಖ್ಯವಾಗಿ, ಭೂಮಿಯನ್ನು ಅನೇಕ ಭಾಗಗಳಾಗಿ ಏನು ಮಾಡುತ್ತೀರೋ, ಡ್ರೈ, ವೆಟ್ ಎಂದು, ಇದರಲ್ಲಿ ವೆಟ್ ಲ್ಯಾಂಡ್ ಅನ್ನು ಡ್ರೈ ಲ್ಯಾಂಡ್ ಎಂದು ಮಾಡುತ್ತಿದ್ದಾರೆ ಎನ್ನುವ ಕೆಲವು ದೂರುಗಳನ್ನು ಕೇಳಿದ್ದೇನೆ. ಏಕೆಂದರೆ, ಸ್ಟೇಜುಗಳನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೋಸ್ಕರ ವೆಟ್ ಲ್ಯಾಂಡಿನಲಿದ್ದ ಬಾವಿಗಳನ್ನು ಮುಚ್ಚುತ್ತಿದ್ದಾರೆ ಮತ್ತು ಯಾವ ರೀತಿ ಸರ್ಕಾರದ ಕಣ್ಣಿಗೆ ಮಣ್ಣು ಎರಚುತ್ತಾರೆ ಎನ್ನುವುದರ ಬಗ್ಗೆ ಗಮನಕೊಡಬೇಕಾಗುತ್ತದೆ. ಮಾನ್ಯ ದೇವೇಗೌಡರು ಹೇಳಿದ ಹಾಗೆ ತೆಂಗಿನತೋಪುಗಳಿಗೆ ಎಕ್ಸೆಂಪ್‌ಷನ್ ಕೊಟ್ಟಿರುವುದನ್ನು ದಯವಿಟ್ಟು ಪರಿಶೀಲನೆ ಮಾಡಿ; ಏಕೆಂದರೆ, ಒಂದು ಎಕರೆ ತೆಂಗಿನ ತೋಪಿನಿಂದ ಬರತಕ್ಕ ಉತ್ಪನ್ನಕ್ಕೂ ಮತ್ತು ಒಂದು ಎಕರೆ ಡ್ರೈ ಲ್ಯಾಂಡಿನಿಂದ ಬರತಕ್ಕೂ ಉತ್ಪನ್ನವನ್ನೂ ಪರಿಶೀಲನೆ ಮಾಡಿ, ಸರಿಹೋಗುತ್ತದೆಯೋ ನೋಡಿ. ಆದ್ದರಿಂದ ತಾವು ಎಕ್ಸೆಂಪ್‌ಷನ್ ಕೊಡಬೇಕಾದರೆ ಬೇರೆ ಯಾವ ರೂಪದಲ್ಲಾದರೂ ಕೊಡಿ, ೧೦-೧೫ ಎಕರೆ ಯಲ್ಲಿ ೨೦-೩೦ ತೆಂಗಿನ ಮರ ಇಟ್ಟು, ತೆಂಗಿನ ತೋಪು ಎಂದು ಹೇಳುತ್ತಾರೆ, ಮತ್ತು ಎಕ್ಸೆಂಪ್‌ಷನ್ ಕೊಡಬೇಕೆಂದು ಕೇಳುತ್ತಾರೆ. ಆದ್ದರಿಂದ ತಾವು ಈಗ ಕೊಟ್ಟಿರತಕ್ಕ ಎಕ್ಸೆಂಪ್‌ಷನ್ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ಇದರಲ್ಲಿ ಸ್ವಲ್ಪ ಅನಾನುಕೂಲ ಆಗತಕ್ಕ ಸಂದರ್ಭ ಇದೆ, ದುರುಪಯೋಗ ಪಡಿಸಿಕೊಳ್ಳತಕ್ಕ ಸಂದರ್ಭ ಇದೆ; ಮತ್ತು ಇದರಲ್ಲಿ ಬರತಕ್ಕ ವರಮಾನದಲ್ಲಿ ವ್ಯತ್ಯಾಸ ಆಗತಕ್ಕ ಸಂದರ್ಭ ಇದೆ; ಆದ್ದರಿಂದ ತಾವು ಇದರ ಬಗ್ಗೆ ಆಳವಾಗಿ ಯೋಚನೆ ಮಾಡಬೇಕು.

ಸರ್ಕಾರದವರು ಕೊಟ್ಟಂಥ ೨೦ವರ್ಷಗಳ ಲೀಸ್ ಲ್ಯಾಂಡಿಗೆ ಸೀಲಿಂಗ್ ಅಪ್ಲೈ ಆಗುವುದಿಲ್ಲ ಎಂದು ಹೇಳಿದ್ದೀರಿ. ಸರ್ಕಾರ ಎಲ್ಲಿಯವರೆಗೆ ನೀತಿ ಬದ್ಧವಾಗಿರುತ್ತದೆಯೋ ಅಲ್ಲಿಯವರೆಗೆ ಪರವಾಗಿಲ್ಲ. ಒಬ್ಬೊಬ್ಬ ಮಂತ್ರಿಗಳು ಬಂದಾಗ ೩೦-೪೦ ಎಕರೆ ಜಮೀನು ೨೦ ವರ್ಷ ಲೀಸ್ ಕೊಟ್ಟುಬಿಡುತ್ತಾರೆ. ಆದ್ದರಿಂದ ಲೀಸ್ ಕೊಡತಕ್ಕ ಜಮೀನು, ಎಲ್ಲಿಯವರೆಗೆ ನ್ಯಾಯವಾದ, ಧರ್ಮವಾದ ಸರ್ಕಾರ ಇರುತ್ತದೋ ಅಲ್ಲಿಯ ವರೆಗೆ ಸರಿ ಹೋಗುತ್ತದೆ, ಆದರೆ ಜಮೀನು ಹಂಚತಕ್ಕ ಸರ್ಕಾರ ಬಂದರೆ,ಖಂಡಿತ ಇದರಿಂದ ಪ್ರಯೋಜನ ವಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ರೈತನಿಗೆ, ಸರ್ಕಾರ ಕೊಡತಕ್ಕ ಭೂಮಿಗೆ ಹಣವನ್ನು ೨೦ ವರ್ಷಗಳಾದ ಮೇಲೆ ಕೊಡಬೇಕು ಎಂದು ಹೇಳಿದ್ದೀರಿ. ೨೦ ವರ್ಷಗಳಲ್ಲಿ ಕೊಡುವುದಕ್ಕಾಗುವುದಿಲ್ಲ ಬಹಳ ಕಷ್ಟವಾಗುತ್ತದೆ. ಒಂದು ಕಡೆ ಅವನು ಕಂದಾಯ ಕೊಡಬೇಕು ಮತ್ತು ಬಂಡವಾಳ ಇಲ್ಲದೆ ಜಮೀನು ಸಾಗುವಳಿ ಮಾಡಬೇಕಾದ ಸಂದರ್ಭ ಇದೆ. ಆದ್ದರಿಂದ ಮುಫತ್ತಾಗಿ ಜಮೀನನ್ನು ಅವರಿಗೆ ಕೊಡಬೇಕು, ಇಲ್ಲದಿದ್ದರೆ ಇಂಟರೆಸ್ಟ್ ಫ್ರೀ ಲೋನ್ ಕೊಟ್ಟು, ಇನ್‌ಸ್ಟಾಲ್‌ಮೆಂಟಿನಲ್ಲಿ ಕೊಡುವಂತೆ ಮಾಡ ಬೇಕು. ಇಲ್ಲದಿದ್ದರೆ ಅವನು ಜಮೀನನ್ನು ಖಂಡಿತವಾಗಿಯೂ ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ಕ್ಲಾಸಿಫಿ ಕೇಷನ್ ಆಫ್ ಗ್ರೇಡ್ಸ್, ಇದರ ಬಗ್ಗೆ ಕೂಡ ಸ್ವಲ್ಪ ಯೋಚನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರಲ್ಲಿ ಮುಖ್ಯವಾಗಿ ಯೋಚನೆ ಮಾಡಬೇಕಾದದ್ದು, ದೇಶದ ಆಹಾರ ಉತ್ಪನ್ನದ ಬಗ್ಗೆ

ಈ ರಿಫಾರ್ಮ್ ಬಿಲ್ಲಿನಿಂದ ಏನಾಗುತ್ತದೆ ಎಂದು. ಮೊದಲನೆಯದಾಗಿ, ತಮಗೆ ಗೊತ್ತಿರುವ ಹಾಗೆ ಪ್ರತಿಯೊಂದು ದೇಶದಲ್ಲೂ ಕೂಡ ವ್ಯವಸಾಯವನ್ನು ಚೆನ್ನಾಗಿ ಮಾಡಿದರೆ ಮಾತ್ರ ಉತ್ಪನ್ನ ಹೆಚ್ಚಾಗಿ ಲಾಭದಾಯಕವಾಗುತ್ತದೆ. ಅಮೆರಿಕಾ ದೇಶದಲ್ಲಿ ಇಂಡಿವಿಜ್ಯುಯಲ್ ಓನರ್‌ಷಿಪ್ ಇರುವುದರಿಂದ ಬೇಕಾದಷ್ಟು ದೊಡ್ಡ ದೊಡ್ಡ ಲ್ಯಾಂಡ್ಸ್ ಕಲ್ಟಿವೇಟ್ ಮಾಡುತ್ತಿದ್ದಾರೆ, ಮೆಷಿನರಿ ಉಪಯೋಗಿಸುತ್ತಾರೆ ಗೊಬ್ಬರ ಹಾಕುತ್ತಾರೆ, ರೀಸರ್ಚ್ ಕೆಲಸ ಮಾಡುತ್ತಾರೆ. ರಷ್ಯಾ ದೇಶದಲ್ಲಿ ಜಮೀನು ಕಮ್ಯೂನಿಟಿಗೆ ಸೇರಿರುವುದರಿಂದ ಸಾಕಷ್ಟು ದೊಡ್ಡ ಅಳತೆಯಲ್ಲಿ ವ್ಯವಸಾಯ ಮಾಡುತ್ತಾರೆ. ಜಪಾನ್‌ನಲ್ಲಿ, ದೇಶ ಚಿಕ್ಕದಾಗಿರುವುದರಿಂದ ಇಂಟೆನ್ಸೀವ್ ಕಲ್ಟಿವೇಷನ್ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಹಿಡುವಳಿ ಚಿಕ್ಕದು ಇದ್ದಾಗ ಸಾಕಾದಷ್ಟು ಇಂಟೆನ್‌ಸೀವ್ ಕಲ್ಟಿವೇಷನ್ ಮಾಡದೇ ಹೋದಪಕ್ಷದಲ್ಲಿ ಪ್ರಯೋಜನವಾಗುವುದಿಲ್ಲ. ಜಮೀನು ಸಣ್ಣ ಹಿಡುವಳಿ ಆಗುವಾಗ ಇಂಟೆನ್‌ಸೀವ್ ಆಗಿ ಆಹಾರ ಪದಾರ್ಥಗಳನ್ನು ಪ್ರಡ್ಯೂಸ್ ಮಾಡಲಿಕ್ಕೆ ಏನು ಏನು ಸಲಕರಣೆಗಳು ಬೇಕೋ ಅವುಗಳನ್ನು ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ, ವ್ಯವಸಾಯದಿಂದ ಉತ್ಪನ್ನ ಹೆಚ್ಚಾಗಿ ಬರುವುದಿಲ್ಲ, ಆದ್ದರಿಂದ ಇದನ್ನು ಯೋಚನೆ ಮಾಡಬೇಕು. ಅಮೇರಿಕಾ, ರಷ್ಯಾ ಮತ್ತು ಜಪಾನ್ ದೇಶಗಳಲ್ಲಿರುವ ಪರಸ್ಥಿತಿಯನ್ನು ನೋಡಿ, ಅದು ನಮ್ಮ ರಾಜ್ಯಕ್ಕೆ ಯಾವರೀತಿ ಅನುಗುಣವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಈಗ ಭೂಮಿಯ ಮಿತಿ ಕಡಿಮೆಯಾಗಿರುವುದರಿಂದ ಮೆಷಿನರಿಗಳನ್ನು ಆಗಲಿ, ಟ್ರ್ಯಾಕ್ಟರುಗಳನ್ನಾಗಲೀ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಸಲಕರಣೆಗಳನ್ನು ಇಟ್ಟುಕೊಂಡರೂ ವ್ಯವಸಾಯ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ವ್ಯಾಪ್ತಿ ಕಡಿಮೆ ಇದ್ದರೆ ಯಂತ್ರಗಳನ್ನು ಉಪಯೋಗಿಸುವುದಕ್ಕೆ ತೊಂದರೆಯಾಗುವುದಿಲ್ಲ. ಜಪಾನ್‌ನಲ್ಲಿ ಆ ರೀತಿ ಮಾಡುತ್ತಾರೆ.

ಶ್ರೀ ಟಿ. ಆರ್. ಶಾಮಣ್ಣ.—ಆದ್ದರಿಂದ ಆಧುನಿಕ ಯಂತ್ರಗಳನ್ನು ಉಪಯೋಗಿಸುವುದಕ್ಕೆ ಒಂದು ಲಿಮಿಟ್‌ಗೆ ಅನುಕೂಲವಾಗುವ ಹಾಗೆ ಕೋ-ಆಪರೇಟೀವ್ ಬೇಸಿಸ್ ಮೇಲೆ ಅನುಕೂಲಮಾಡದೆ ಹೋದ ಪಕ್ಷದಲ್ಲಿ ಇದರಿಂದ 'ನಾವು ಮಾಡರ್ನ್ ಮೆಥಡ್ಸ್‌ಗೆ ಅಡ್ವಸ್ಟ್ ಆಗುವುದು ಕಷ್ಟವಾಗುತ್ತದೆ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರ ಜೊತೆಗೆ ಒಂದು ಅಂಶ ಗಮನದಲ್ಲಿಟ್ಟುಕೊಳ್ಳಬೇಕು. ಇನ್ನೊಂದು ಮುಖ್ಯವಾದ ವಿಚಾರಕ್ಕೆ ತಮ್ಮ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನಪಡುತ್ತೇನೆ. ಈಗ ಅದೃಷ್ಟವೋ, ದುರಾದೃಷ್ಟವೋ ಅನೇಕ ಜನರು ಜಮೀನುಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಅದರಲ್ಲೂ ಕೂಡ ಬೇರೆಯವರಿಗೆ ಗೇಣಿ ಕೊಟ್ಟು ಜಮೀನು ಕಳೆದುಕೊಳ್ಳುತ್ತಿದ್ದಾರೆ. ನಾನು ಜಮೀನು ಮಾಡತಕ್ಕವನಿಗೆ ಕೊಡುವುದು ಬೇಡ ಎಂದು ವಿರೋಧ ಮಾಡುತ್ತಿಲ್ಲ. ನನ್ನ ಉದ್ದಿಶ್ಯವಾದರೂ ಇಷ್ಟೇ ಹಾವು ಹೊಡೆದು ಹದ್ದಿಗೆ ಹಾಕುವಾಗ ಸ್ವಲ್ಪ ಯೋಚನೆ ಮಾಡಿ ಕೊಡಿ. ಸಣ್ಣ ಹಿಡುವಳಿದಾರರ ಮೇಲೆ ಅನುಕಂಪ ಇರಲಿ. ಅವರಿಗೆ ತಾವು ಕೊಡತಕ್ಕ ಕಾಂಪನ್‌ಸೇಷನ್ ಸಾಕಷ್ಟು ಮೊದಲು ಕೊಟ್ಟು, ಕೊಡುವುದನ್ನು ಕ್ಯಾಷ್ ರೂಪದಲ್ಲಿ ಕೊಟ್ಟು ಜೀವನ ಮಾಡಿಕೊಳ್ಳುವುದಕ್ಕೆ ಅವಕಾಶಮಾಡಿಕೊಡಿ, ಒಂದು ಜನ ಉದ್ಧಾರ ಮಾಡುವುದಕ್ಕೆ ಹೋಗಿ ಇನ್ನೊಂದು ಜನ ತುಳಿಯುವುದಕ್ಕೆ ಹೋದ ಪಕ್ಷದಲ್ಲಿ ಸೋಷಲಿಷಮ್ ಸರಿಯಾಗಿ ಆಗುತ್ತದೆಯೋ ಎಂದು ಯೋಚನೆ ಮಾಡಿ. Compensation should be given to the small holders and it should be adequate. I am not pleading for big land lords, ಸಣ್ಣ ಲ್ಯಾಂಡ್ ಹೋಲ್ಡರ್ಸ್ ಅವರು ಜೀವನ ಮಾಡುವುದಕ್ಕೆ ಅದರ ಬಗ್ಗೆ ಸಾಕಷ್ಟು ಸಹಾನುಭೂತಿ ತೋರಿಸಿ ಎಂದು ಸಲಹೆ ಮಾಡುತ್ತೇನೆ. ಮಾನ್ಯ ಮಂತ್ರಿಗಳಿಗೆ ಇದರಲ್ಲಿ ಇರತಕ್ಕ ಮಾರಲ್ ಹೇಳಬೇಕಾಗಿದೆ. ಒಂದನೆಯದಾಗಿ ೧೨ ಸಾವಿರ ರೂಪಾಯಿ ವರಮಾನ ಜಾಸ್ತಿ ಇರತಕ್ಕವರು ಜಮೀನು ಇಟ್ಟುಕೊಳ್ಳುವುದಕ್ಕೆ ಅರ್ಹತೆಯಿಲ್ಲ ಎಂದು ಹೇಳುತ್ತಾರೆ. ಮಂತ್ರಿಗಳಿಗೆ ಕಾಯಿದೆ ಪ್ರಕಾರ ಈಗ ಸ್ವಲ್ಪ ರಿಯಾಯಿತಿ ಸಿಕ್ಕಬಹುದು. ತಮ್ಮ ಸಂಬಳ ೧೨೦೦ ಗಿಂಬಳ ೧೦೦೦ ರೂಪಾಯಿ ಒಟ್ಟು ೨,೨೦೦ ಆಗುತ್ತದೆ. ಅದರ ಜೊತೆಗೆ ಫ್ರೀ ಹೌಸ್, ಫ್ರೀ ಕಾರ್, ಫ್ರೀ ವಾಟರ್ ಮತ್ತು ಫ್ರೀ ಎಲೆಕ್ಟ್ರಿಸಿಟಿ, ಮೆಡಿಕಲ್ ಫೆಸಿಲಿಟೀಸ್ ಎಲ್ಲಾ ಸೇರಿಸಿದರೆ ೨ ಸಾವಿರವಾಗುತ್ತದೆ. ತಮ್ಮ ವರಮಾನ ವರ್ಷಕ್ಕೆ ೨೪ ಸಾವಿರ ರೂಪಾಯಿ ಇದ್ದಾಗ ಬೇರೆಯವರಿಗೆ ಯಾವ ಬಾಯಿಯಲ್ಲಿ ನಿಮ್ಮ ವರಮಾನ ೧೨ ಸಾವಿರಕ್ಕೆ ಇರಬೇಕು ಎಂದು ಹೇಳುತ್ತೀರಿ ಎಂಬುದನ್ನು ಯೋಚನೆಮಾಡಿ. ಎಲ್ಲಿಯವರೆಗೆ ಮಂತ್ರಿಗಳಾಗಿರುತ್ತೀರಿ ಅಲ್ಲಿಯವರೆಗೆ, ನಿಮಗೆ ೨೪ ಸಾವಿರ ರೂಪಾಯಿ ವರಮಾನ ಇರುತ್ತದೆ. ಆದ್ದರಿಂದ ನೀವು ಬರೀ ೧೨ ಸಾವಿರ ತೆಗೆದುಕೊಳ್ಳುತ್ತೇವೆ ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ ಎಂದು ನಿರ್ಣಯಮಾಡಿ ಹಾಗೆ ಮಾಡಿದರೆ ಅನುಕೂಲವಾಗುತ್ತದೆ. ತಮಗೆ ಮಾತ್ರ ಒಂದು ರೂಲ್, ಬೇರೆಯವರಿಗೆ ಒಂದು ರೂಲ್ ಹೇಗೆ ಮಾಡುತ್ತೀರಿ ಎಂಬುದನ್ನು ಯೋಚನೆ ಮಾಡಿ.

MR. DEPUTY SPEAKER.—I hear some disturbance here and there. Hon. Members who wish to discuss among them selves will please do so in a very quiet manner and not disturb the House.

Mr. Shamanna, you have to finish within five minutes.

SRI T R. SHAMANNA.—I am being disturbed. What is to be done? When the Hon. Leader of the Opposition took two hours, kindly allow me to speak at least for half an hour.

MR. DEPUTY SPEAKER.—The hon. member has already taken more than half an hour.

SRI C. M. ARUMUGAM.—I am pleading that hon. Member Mr. Shamanna be given more time. Mr. Deputy Speaker, Mr. T. R. Shamanna is a very interesting person. He says interesting things and we want to hear him. Therefore, I submit that he should be given more time. If he cannot finish to-day, he should be allowed to continue to-morrow also.

MR. DEPUTY SPEAKER.—He has taken 39 minutes so far. Does he agree with me? How much more time should I give him? Mr. Arumugam is so generous. Let us be reasonable.

SRI T. R. SHAMANNA.—I have got only a few more points to say. Please allow me another seven minutes at least.

MR. DEPUTY SPEAKER.—It is impossible. If he wants to complete he must complete in two minutes. Otherwise, I will take up other subjects.

SRI T. R. SHAMANNA.—I will complete within seven minutes. ೧೬ ಕಿಲೋ ಮೀಟರ್ ಮಿತಿ ಇಟ್ಟಿರುವುದು ಖಂಡಿತ ನ್ಯಾಯವಾದುದು ಅಲ್ಲ ಏತಕ್ಕೆ ೧೦ ಮೈಲಿ ಮಿತಿ ಹಾಕಿದ್ದೀರಿ. ಬೆಂಗಳೂರಿನಲ್ಲಿ ಇರತಕ್ಕ ಮಂತ್ರಿ ೪೦೦ ಮೈಲಿ ದೂರದಲ್ಲಿರುವ ಬೆಳಗಾಂನಲ್ಲಿ ಇರತಕ್ಕ ಜಮೀನನ್ನು ನೋಡಬಹುದು ಅವರಿಗೆ ಅಪ್ಲೈ ಆಗುವುದಿಲ್ಲ ೧೦ ಮೈಲಿಯಲ್ಲಿ ಇರತಕ್ಕವನಿಗೆ ಅಪ್ಲೈ ಆಗುತ್ತದೆ. ಯೋಚನೆ ಮಾಡಿ. ಹಳ್ಳಿಯಲ್ಲಿ ಜಮೀನು ಇರತಕ್ಕವನು ಹಳ್ಳಿಯಲ್ಲೇ ಇರಬೇಕು. ಖಂಡಿತವಾಗಿ ೧೬ ಮೈಲಿಗೆ ಮಿತಿ ಇರತಕ್ಕದ್ದು ನ್ಯಾಯವಾದುದು ಅಲ್ಲ. ಇದು ಬೇರೆ ರಾಜ್ಯದಲ್ಲಿ ಇಟ್ಟುಕೊಂಡಿರುವ ರೀತಿ ಸೂಕ್ತವಾಗಿ ಇರಬೇಕು. ನಮ್ಮ ರಾಜ್ಯದಲ್ಲಿ ೧೬ ಮೈಲಿ ಇಟ್ಟುಕೊಂಡರೆ ಅದು ಸರಿಯಲ್ಲ ಅದನ್ನು ಬದಲಾವಣೆ ಮಾಡಬೇಕು ಎಂದರೆ ಆಗುವುದಿಲ್ಲ ಎಂದರೆ ಅದು ನ್ಯಾಯವಾದುದು ಅಲ್ಲ. ಬಡವರು ಹುದ್ದೆಗೆ ಸೇರುತ್ತಾರೆ ತಂದೆ ಜಮೀನು ಮಾಡುತ್ತಿರುತ್ತಾನೆ ತಂದೆ ಸತ್ತಮೇಲೆ ಮಗನಿಗೆ ಜಮೀನು ಇಲ್ಲದ ಹಾಗಾಗುತ್ತದೆ. ತಂದೆ ಜಮೀನು ಮಾಡುವ ಕಡೆ ಮಗನಿಗೆ ಜಮೀನು ಇರುವಹಾಗೆ ಮಾಡದಿದ್ದರೆ ಬಡ ರೈತರ ಮಕ್ಕಳು ಹಳ್ಳಿಯಲ್ಲೇ ಉಳಿಯಬೇಕಾಗುತ್ತದೆ. ವಿದ್ಯೆಗೆ ಹೋಗಬೇಡಿ ಜಮೀನು ನೋಡಿಕೊಂಡು ಹಳ್ಳಿಯಲ್ಲೇ ಇರು ಎಂದು ತಂದೆ ಹೇಳುತ್ತಾನೆ. ಬಡ ರೈತರ ಹಿತದೃಷ್ಟಿಯಿಂದ ಏನಾಗುತ್ತದೆ ಹಳ್ಳಿಯವನು ಹಳ್ಳಿಯಲ್ಲೇ ಉಳಿಯಬೇಕಾಗುತ್ತದೆ. ಆ ಪರಿಸ್ಥಿತಿ ಬರುತ್ತದೆ. ಆದ್ದರಿಂದ ೧೬ ಮೈಲಿ ಮಿತಿಯನ್ನು ತಪ್ಪಿಸಬೇಕು. ರಿಲಿಜಿಯಸ್ ಮತ್ತು ಚ್ಯಾರಿಟೆಬಲ್ ಇನ್‌ಸ್ಟಿಟ್ಯೂಷನ್ಸ್ ಮತ್ತು ಎಜ್ಯುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ಗೆ ಇರತಕ್ಕ ಅನುಕೂಲವನ್ನು ತೆಗೆದು ಹಾಕಿರತಕ್ಕದ್ದು ಶೋಚನೀಯವಾದುದು ಅದೇ ಕ್ರಿಶ್ಚಿಯನ್ ಇನ್ಸ್‌ಟಿಟ್ಯೂಷನ್‌ಗೆ ಏನಾದರೂ ಅನುಕೂಲಗಳು ಇದ್ದರೆ ಅವನ್ನು ತೆಗೆಯುವುದಕ್ಕೆ ಹಿಂದೆ ಮುಂದೆ ನೋಡುತ್ತೀರಿ, ಮುಸ್ಲಿಮ್ ಇನ್ಸ್‌ಟಿಟ್ಯೂಷನ್ಸ್‌ಗೆ ಕೈಹಾಕುವುದಕ್ಕೆ ಹೆದರುತ್ತೀರಿ. ಅದೇ ಹಿಂದೂ ಇನ್ಸ್‌ಟಿಟೂಷನ್ಸ್‌ಗೆ ಕೈಹಾಕುತ್ತೀರಿ. ಎಜ್ಯುಕೇಷನಲ್ ಇನ್ಸ್‌ಟಿಟ್ಯೂಷನ್ಸ್ ರಿಲಿಜಿಯಸ್ ಮತ್ತು ಚ್ಯಾರಿಟಬಲ್ ಇನ್ ಟಿಟೂ ಷನ್ಸ್ ಜನರಿಗೆ ಅವಕಾಶ ಕೊಡಿ ಎಂದು ಹೇಳುತ್ತಾ ಇಲ್ಲ. ಆದರೆ ಅನೇಕ

ಸಂದರ್ಭದಲ್ಲಿ ಅವರಿಗೆ ಕಾಂಪನ್ಸೇಷನ್ ಕೊಡದೆ ಹೋದ ಪಕ್ಷದಲ್ಲಿ ಹಣವಿಲ್ಲದೆ ಪೂಜೆ ಪುನಸ್ಕಾರ ನಡೆಯುವುದಕ್ಕೆ ಆಗುವುದಿಲ್ಲ. ಅನೇಕ ಮಠಾಧಿಪತಿಗಳು ಸ್ಕೂಲ್‌ಗಳನ್ನು ನಡೆಸುತ್ತಾರೆ. ಆದ್ದರಿಂದ ಅವರಿಗೆ ಹಣದ ಅನುಕೂಲ ಬೇಕಾಗುತ್ತದೆ. ಇನ್‌ಸ್ಟಿಟ್ಯೂಷನ್ ಸರಿಯಾಗಿ, ಸಾರೋದ್ಧಾರವಾಗಿ ನಡೆದುಕೊಂಡು ಹೋಗುವುದಕ್ಕೆ ತೊಂದರೆ ಮಾಡಿದರೆ ಅದರ ಪಾಪ ಕಟ್ಟಿಕೊಳ್ಳಬೇಕಾಗುತ್ತದೆ. ಹಿಂದೂ ಸಂಸ್ಕೃತಿ ಉಳಿದಿರುವುದು ಹಿಂದು ಧರ್ಮದಿಂದ. ಇದರ ಬಗ್ಗೆ ಸಾಕಷ್ಟು ಯೋಚನೆಮಾಡಿ ಧರ್ಮಸಂಸ್ಥೆಗಳು ಸರೋದ್ಧಾರವಾಗಿ ನಡೆದುಕೊಂಡು ಹೋಗುವುದಕ್ಕೆ ಸಾಕಷ್ಟು ಜಮೀನು ಹೊಂದಿರುವಂತಹ ಒಂದು ಅನುಕೂಲ ಮಾಡಿಕೊಡಿ.

ಕೊನೆಯದಾಗಿ ನಾನು ಮಾಡಿರುವ ಬೇಡಿಕೆಗಳು ಎಂದರೆ :-ಒಂದನೆಯದು ಇದರಲ್ಲಿ ಹತ್ತು ಮೈಲಿ ಫಾಸಲೆ ದೂರದಲ್ಲಿ ವಾಸವಿರಬೇಕು ಎನ್ನುವ ಕಲಂನ್ನು ತೆಗೆಯುವುದು.

6-00 P. M.

ಎರಡನೆಯದು ಹನ್ನೆರಡು ಸಾವಿರ ಮಿತಿ ಇರಬೇಕು ಎನುವುದನ್ನು ತೆಗೆಯಬೇಕು. ಹಾಗೆ ಆಗದಿದ್ದರೆ ಅದರ ಮಿತಿಯನ್ನು ೨೫ ಸಾವಿರದವರೆಗಾದರೂ ಏರಿಸಬೇಕು. ಮೂರನೆಯದು ಚಿಕ್ಕ ಹಿಡುವಳಿದಾರರುಗಳ ಸಂಪತ್ತಿಯನ್ನು ಸರಕಾರ ಪಡೆದು ಅವರಿಗೆ ಸಂತೋಷವಾಗುವ ಹಾಗೆ ಕಾನೂನನ್ನು ತಿದ್ದುಪಡಿಮಾಡಬೇಕು ಮತ್ತು ಮಠಗಳಿಗೆ ಸೇರಿದ ಸ್ವತ್ತುಗಳನ್ನು ಇಲ್ಲಿಯವರೆಗೆ ಹೇಗೆ ಇತ್ತೊ ಹಾಗೆ ಉಳಿಸುವುದು ಮತ್ತು ಅವರೆಲ್ಲರ ಸಹಕಾರವನ್ನೂ ಸರಕಾರ ಪಡೆದು ಸೂಕ್ತ ರೀತಿಯಲ್ಲಿ ಅವರನ್ನು ರಕ್ಷಣೆ ಮಾಡಬೇಕು ಮತ್ತು ಒಂದು ಯೂನಿಟ್ ಎಂದು ಇರವುದು ಸರಿಯಲ್ಲ. ಇದರಿಂದ ಯಾರೂ ಅವರ ಜೀವನ ನಡೆಸುವುದು ಸಾಧ್ಯವಿಲ್ಲ, ಇದನ್ನು ಕೊನೆಯ ಪಕ್ಷ ಎರಡು ಯೂನಿಟ್ಟಾದರೂ ಇಗುವಂತೆ ಮಾಡಬೇಕು ಮತ್ತು ನಾನು ಈ ಮೊದಲೇ ತಿಳಿಸಿರುವ ಎಲ್ಲ ಸಲಹೆಗಳ ಕಡೆಗೂ ಸರಕಾರ ಗಮನ ಕೊಡಬೇಕು ಇದರ ಬಗ್ಗೆ ಕೆಲವು ಅಮೆಂಡ್‌ಮೆಂಟುಗಳನ್ನೂ ಕಳುಹಿಸಿದ್ದೇನೆ. ಅವು ಬಂದಾಗ ಅದರ ಬಗ್ಗೆ ಹೇಳುತ್ತೇನೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

HALF AN HOUR DISCUSSION ARISING OUT OF REPLIES TO QUESTION No. 336

Re : Lease of area in Sandur Taluk to a mining Company

†ಶ್ರೀ ಹೆಚ್. ಡಿ. ದೇವೇಗೌಡ ,—ಮಾನ್ಯ ಅಧ್ಯಕ್ಷರೇ. ೩೩೬ನೇ ಪ್ರಶ್ನೆ ಬಗ್ಗೆ ಮಾನ್ಯ ಕೈಗಾರಿಕೆ ಸಚಿವರು ಇಲ್ಲಿ ಉತ್ತರವನ್ನು ಕೊಡತಕ್ಕ ಸಂದರ್ಭದಲ್ಲಿ ಸರಿಯಾದ ಅವಕಾಶ ಸಿಗಲಿಲ್ಲ ಎಂದು ಇಲ್ಲಿ ನಾನು ಈಗ ಅರ್ಧಗಂಟೆಯ ಕಾಲದ ಚರ್ಚೆಗಾಗಿ ತಮ್ಮ ಅಪ್ಪಣೆ ಪಡೆದೆ ಮತ್ತು ಇದಕ್ಕೆ ತಾವು ಅವಕಾಶವನ್ನು ಕೂಡ ಕೊಟ್ಟಿದ್ದೀರಿ ನಾನು ಈ ಸಭೆಯಲ್ಲಿ ಅರ್ಥ ಸಚಿವರಾಗಿರುವ ಶ್ರೀ ಮಾನ್ ಘೋರ್ಪಡೆಯವರ ಮೇಲೆ ಯಾವುದೇ ದ್ವೇಷಾಸೂಯೆಯ ಮೇಲೆ ವೈಯ್ಯಕ್ತಿಕವಾಗಿ ಇಲ್ಲಿ ಮಾತನಾಡಬೇಕಾದ ಪ್ರಮೆಯವು ಇರಲಿಲ್ಲ. ಆದರೆ ಯಾವ ಒಂದು ಪರತ್ತಿನಿಂದ ಇಲ್ಲಿ ೨೫ ಚದುರ ಮೈಲಿಗಳಷ್ಟು ಭೂಮಿಯನ್ನು ಲೀಸ್ ಮೇಲೆ ಪಡೆದರೋ ಆ ಪರತ್ತನ್ನು ಇದರಲ್ಲಿ ಅವಲಂಬನೆ ಮಾಡಲಿಲ್ಲ, ಇದು ನಮ್ಮ ಮುಂದಿರತಕ್ಕ ವಿಷಯ. ಅವರು ಮಂತ್ರಿಗಳಾಗಿರುವವರು, ಒಂದು ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರು ಆಗುವುದಕ್ಕೆ ಸಾಧ್ಯವಿಲ್ಲ. ನಾವು ಕೇಳತಕ್ಕ ಕಾಲದಲ್ಲಿ ಮತ್ತು ನಾವು ಕೇಳಿದ ಸನ್ನಿವೇಶದಲ್ಲಿ ಮಂತ್ರಿಗಳು ಸಾಕಷ್ಟು ಸಮರ್ಪಕವಾದ ರೀತಿಯಲ್ಲಿ ಉತ್ತರ ಕೊಡಲಿಲ್ಲ, ಇದು ಅವರ ಪ್ರಿಂಟೆಡ್ ಉತ್ತರದಲ್ಲೇ ಇದೆ. ಇದು ಫೆರೋ ಮ್ಯಾಂಗನೀಸು ಪ್ಲಾಂಟೇ. ಇಲ್ಲವೇ ಪಿಗ್ ಐರನ್ ಪ್ಲಾಂಟೇ ಎನ್ನುವುದಕ್ಕೆ ಅವರು ಇದು ಪಿಗ್ ಐರನ್ ಪ್ಲಾಂಟು ಎಂದು ಉತ್ತರ ಕೊಟ್ಟಿದ್ದಾರೆ. ಉತ್ತರದಲ್ಲಿ ಹೌದು ಎಂತಲೇ. ಇದೆ. ಅವರ ಉತ್ತರವನ್ನು ಮಾರ್ಪಾಡು ಮಾಡಬೇಕೆಂದು ನಾನು ಇಲ್ಲಿ ಕೇಳಲು ಇಚ್ಛೆ ಪಡುವುದಿಲ್ಲ. ಮತ್ತು ಉತ್ತರ ಕೊಡುವಾಗ ಮಂತ್ರಿಗಳು ನಾನು ಆ ಕಾಲದಲ್ಲಿರಲಿಲ್ಲ ಎಂದೂ ಇಲ್ಲಿ ಹೇಳಬಹುದು. ಇದು ಹಿಂದೆ ಆಗಿರುವುದು. ಇದಕ್ಕೆ ನಾನೇನು ಮಾಡಲಿ ನನ್ನ ಮೇಲೆ ನೀವುಗಳು ಆಪಾದನೆ ಮಾಡಿದರೆ ಎಂದು ಹೇಳಬಹುದು. ಮಾನ್ಯ ಕೈಗಾರಿಕಾ ಮಂತ್ರಿಗಳ ಪ್ರಮಾಣಿಕತೆ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಏಕೆಂದರೆ ಯಾವ ವ್ಯಕ್ತಿಗೆ ಮೈನಿಂಗ್‌ಲೀಸ್ ಕೊಟ್ಟಿದ್ದಾರೆ, ಆ ವ್ಯಕ್ತಿಗೆ ಆ ವ್ಯಕ್ತಿಯು ತನ್ನ ಒಂದು ಪ್ರಭಾವದಿಂದ ಮೈನಿಂಗು ಲೀಸನ್ನು ಆಗಿನ ಸರಕಾರ ಕೊಟ್ಟಿದ್ದರ

(ಹೆಚ್. ಡಿ. ದೇವೇಗೌಡ)

ಬಹುದು. ರಾಜ್ಯ ಸರಕಾರ ೨೯ ಚದುರ ಮೈಲಿಗಳಷ್ಟು ಭೂಮಿಯನ್ನು ಲೀಸ್ ಮೇಲೆ ಕೊಟ್ಟರು. ನಿಜ ಯಾವ ತಾರೀಖು ಕೊಟ್ಟರು ಎನ್ನುವ ವಿವರ ನನ್ನಲ್ಲಿಲ್ಲ, ಬಹುಶಃ ಕಾಂಗ್ರೆಸ್ ಸಂಸ್ಥೆ ಹಿಂದೆ ಒಡೆಯುದೇ ಇದ್ದ ಕಾಲದಲ್ಲಿ ಇದನ್ನು ಲೀಸ್‌ಗಾಗಿ ಕೊಟ್ಟಿರಬಹುದು. ಆದರೆ ಯಾವ ಉದ್ದೇಶದಿಂದ ಅವರು ಲೀಸು ಪಡೆದರು ಆ ಷರತ್ತುಗಳನ್ನು ಅವರು ಪೂರ್ಣವಾಗಿ ಕಾರ್ಯಗತ ಮಾಡಲಿಲ್ಲ. ಫೆರೋ ಮ್ಯಾಂಗನೀಸು ಪ್ಲಾಂಟು ಹಾಕುತ್ತೇವೆಂದು ಹೇಳಿ ಭೂಮಿ ಪಡೆದು ಇಂದು ಇಲ್ಲಿ ಫೆರೋ ಮ್ಯಾಂಗನೀಸು ಪ್ಲಾಂಟು ಮಾಡಿಲ್ಲ, ಇದು ಪಿಗ್ ಐರನ್ ಪ್ಲಾಂಟು ಎಂದು ಹೇಳುತ್ತಾರೆ. ಸಮಾಜವಾದ ತರುತ್ತೇವೆಂದು ಸಾರಿ ಸಾರಿ ಹೇಳುತ್ತಿರುವ ಸರಕಾರ ಇದಕ್ಕೆ ಪೂರ್ವ ಪೀಠಿಕೆಯಾಗಿ ಹಿಂದೆ ಇದ್ದ ಸರಕಾರ ಇರಲಿಲ್ಲ ಮತ್ತು ಈಗ್ಗೆ ೮-೯ ತಿಂಗಳಿಗೆ ಮುಂಚೆ ಇವರೆಲ್ಲಾ ಬಹಳ ಪ್ರಗತಿಪರರು ಎನ್ನುವುದನ್ನು ತೋರಿಸುವುದಕ್ಕಾಗಿ ಇಂದು ಇಂತಹ ಒಂದು ಹೊಸ ರೀತಿಯಿಂದ ಸಮಾಜವಾದವನ್ನು ಸಮರ್ಥನೆ ಮಾಡುತ್ತಿದ್ದಾರೆ. ಇದು ಹೊಸ ಸಮಾಜವಾದ ಪಕ್ಷದ ನೀತಿಯೇ ಎಂದು ಇಲ್ಲಿ ಕೇಳಬೇಕಾದ ಪ್ರಸಂಗ ಬಂದಿದೆ. ಇಲ್ಲಿರುವ ೨೯ ಚದುರ ಮೈಲಿಯಲ್ಲಿ ಎಷ್ಟು ಭಾಗದಲ್ಲಿ ಅದಿರನ್ನು ತೆಗೆಯುತ್ತಿದ್ದಾರೆ ಎನ್ನುವುದೇ ಇದರಲ್ಲಿರುವ ಪ್ರಶ್ನೆ. ಇನ್ನೊಬ್ಬರ ಅಲ್ಲಿ ಕೆಲಸ ಮಾಡುತ್ತಿರಬಹುದು ಮತ್ತು ಇದಕ್ಕೆ ಡೆಡ್ ರೆಂಟು ಕೊಡುತ್ತಿದ್ದಾರೆನ್ನಬಹುದು. ಇದು ಬೇರೆ ಮಾತು, ಇಲ್ಲಿಯವರೆಗೆ ಎಷ್ಟು ಚದುರ ಮೈಲಿಯೊಳಗೆ ಇಲ್ಲಿ ಅದಿರನ್ನು ತೆಗೆಯಲು ಪ್ರಯತ್ನ ಮಾಡಿದ್ದಾರೆ ಅದನ್ನು ತಿಳಿಸಬೇಕು ಎಂದು ಕೇಳುತ್ತೇನೆ. ನನಗೆ ಗೊತ್ತಿರುವ ಹಾಗೆ ಬೇರೆಯವರಿಂದ ಇಲ್ಲಿ ಅದಿರನ್ನು ಕೊಂಡುಕೊಂಡಿರುವುದಕ್ಕೆ ಆಧಾರಗಳಿವೆ. ಬಹುಶಃ ಇಲ್ಲ ಎಂದರೆ ಇದಕ್ಕೆ ತಕ್ಕ ಸಾಕ್ಷಿಗಳು ಹಾಗೂ ಇದರ ಪುರಾವೆಗಳು ನನ್ನಲ್ಲಿವೆ. ಅದನ್ನು ಒದಗಿಸಲು ತಯಾರಿದ್ದೇನೆ. ಕೆಲವು ಭಾಗಗಳಲ್ಲಿ ಇಲ್ಲಿ ಎಕ್ಸ್‌ಪ್ಲೋರ್ ಮಾಡಿರಲೇಬೇಕು. ಲೀಸ್ ಕೊಡಬೇಕಾದರೆ ಸರಕಾರದಲ್ಲಿರುವ ಆಕ್ಟ್ ಪ್ರಕಾರ ಯಾರಿಗೂ ಹತ್ತು ಚದುರ ಮೈಲಿಗಳಿಗೆ ಮೇಲ್ಪಟ್ಟು ಲೀಸ್ ಪಡೆಯಲು ಅವಕಾಶವೇ ಇಲ್ಲ. ಇಲ್ಲಿ ಫೆರೋ ಮ್ಯಾಂಗನೀಸ್ ಪ್ಲಾಂಟು ಹಾಕುತ್ತೇವೆಂದು ಹೇಳಿ ತೆಗೆದುಕೊಂಡರೆ ನಿಬಂಧನೆ ಪ್ರಕಾರ ನಡೆದುಕೊಂಡಿದ್ದಾರೆಯೋ? ಇದರಲ್ಲಿ ಸ್ವಲ್ಪ ಹೆಚ್ಚು ಪರಿಣತರಾದವರು ಇದನ್ನು ಮಾಡಲು ತಯಾರಿರಬೇಕು. ಇಂತಹ ಪ್ರಶ್ನೆ ಬಂದಾಗ ಇದರ ಷರತ್ತುಗಳನ್ನು ಎಷ್ಟು ಮಟ್ಟಿಗೆ ಅನುಸರಿಸಿದ್ದಾರೆ ಎನ್ನುವುದು ಇದರಲ್ಲಿರುವ ವಿಚಾರ. ಇದು ಅಲ್ಲದೆ ಈ ಲೀಸನ್ನು ಮತ್ತೆ ರಿನ್ಯೂ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ ಮತ್ತು ಇದಕ್ಕೆ ವೈಯಕ್ತಿಕ ಪ್ರಭಾವವನ್ನೂ ಬೀರುತ್ತಿದ್ದಾರೆಂದೂ ಕೇಳಿದ್ದೇನೆ. ಒಂದು ವೇಳೆ ಇಲ್ಲ ಎಂದರೆ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಯವರೆಗೆ ಲೀಸು ಮೇಲೆ ೨೯ ಚದುರ ಮೈಲಿಗಳನ್ನು ಪಡೆದು ಷರತ್ತುಗಳನ್ನು ಪಾಲಿಸೆ ಮಾಡದವರಿಗೆ ಮತ್ತೆ ಕನ್‌ಸೆಷನ್‌ಗಳನ್ನು ಕೊಟ್ಟು ರಿನ್ಯೂ ಮಾಡುವುದಕ್ಕೆ ಸಾಧ್ಯವೇ ಇಲ್ಲ, ಮತ್ತು ತಾವು ಹಾಗೆ ಲೀಸು ಕೊಡಬೇಕಾದರೆ ನಿಯಮದ ಪ್ರಕಾರ ಹತ್ತು ಚದುರಮೈಲಿಗಳಿಗೆ ಮಾತ್ರ ಕೊಡಬೇಕಾಗುತ್ತದೆ ಮತ್ತು ಇದರ ಬಗ್ಗೆ ಸರಕಾರ ಕೂಡ ಸರಿಯಾದ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರೊಳಗೆ ಇರುವ ಡೈರೆಕ್ಟರುಗಳು ಯಾರು ಎಂದು ಶ್ರೀ ಆರುಮೊಗಂರವರು ಇಲ್ಲಿ ಪ್ರಶ್ನೆ ಕೇಳಿದಾಗ ಅದು ನನಗೆ ಗೊತ್ತಿಲ್ಲ ಎಂದು ಎಂದು ಹೇಳಿದ್ದಾರೆ. ಇದು ಪ್ರೊಸೀಡಿಂಗ್ಸ್‌ನಲ್ಲೇ ಇದೆ. ಇದರಲ್ಲಿ ಕೇಳುವ ಪ್ರಶ್ನೆ ಹಾಗೂ ಉತ್ತರಗಳೂ ಹೀಗಿವೆ :

"SRI C. M. ARUMUGAM : How many members of Mr. Ghorpade's family are there as directors?

SRI S. M. KRISHNA : There are a few."

ಇದರ ಜೊತೆಗೆ ಇದನ್ನು ಒಂದು ಪಬ್ಲಿಕ್ ಲಿಮಿಟೆಡ್ ಕಂಪನಿಯಾಗಿ ಪರಿವರ್ತನೆ ಮಾಡಿದ್ದಾರೆಂದು ಸಹ ಹೇಳಿದರು. ಕೇವಲ ತಮ್ಮ ಸ್ವಂತ ವ್ಯವಹಾರವಿದ್ದರೆ ಕೆಲವು ಆತಂಕಗಳು ಬರಬಹುದು ಎಂಬ ಕಾರಣ ದಿಂದ ಮತ್ತು ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಸ್ವಲ್ಪ ದಿವಸಗಳ ಹಿಂದೆ ಈ ರೀತಿ ಪಬ್ಲಿಕ್ ಲಿಮಿಟೆಡ್ ಕಂಪನಿಯಾಗಿ ಮಾಡಿ ಅದು ತಮ್ಮ ಸ್ವಂತದ್ದು ಅಲ್ಲ ಎಂದು ಹೇಳಿಕೊಳ್ಳುವುದಕ್ಕೆ ಪ್ರಯತ್ನ ಮಾಡಿರ ಬಹುದು. ಇವೊತ್ತು ಆ ಕಂಪನಿಯಲ್ಲಿ ಸೊಂಡೂರು ಮಹಾರಾಜರ ಷೇರ್ ಎಷ್ಟಿದೆ ಅವರ ಸಂಬಂಧಿ ಕರದ್ದು ಎಷ್ಟಿದೆ, ಗ್ವಾಲಿಯರ್ ಮತ್ತು ಬರೋಡ ಮಹಾರಾಜರುಗಳದ್ದು ಎಷ್ಟು ಇದೆ, ಇತರೆಯವರದ್ದು ಎಷ್ಟಿದೆ ಎಂಬ ವಿವರಗಳನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕು. ಈ ೨೯ ಚದರ ಮೈಲಿಗಳಷ್ಟು ಪ್ರದೇಶವನ್ನು ತಾವೊಬ್ಬರೇ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಿರತಕ್ಕ ವ್ಯವಹಾರ ಯಾವ ರೀತಿ ಇದೆ ಎಂದರೆ, ಮಾನ್ಯ ಘೋರ್ಪಡೆಯವರು ತಮ್ಮ ಒಂದು ಅಧಿಕಾರವನ್ನು ಅಥವಾ ತಮ್ಮ

ರಾಜಕೀಯದಲ್ಲಿ ಇರತಕ್ಕಂಥ ಒಂದು ಇನ್‌ಫ್ಲೂಯನ್ಸ್‌ನ್ನು ಕೇಂದ್ರದಲ್ಲಿ ಪ್ರಭಾವಯುತವಾಗಿ ಉಪಯೋಗಿಸಿ ಆ ಮೂಲಕ ತಮ್ಮ ಕಾರ್ಯಸಾಧನೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆಂದರೆ ಅದು ಸತ್ಯಕ್ಕೆ ದೂರವಾಗಲಾರದು. ಈಗ ಪಡೆದುಕೊಂಡಿರುವ ೨೯ ಚದರ ಮೈಲಿಗಳಷ್ಟು ಪ್ರದೇಶದಲ್ಲಿ ಪೂರ್ತಿಯಾಗಿ ಅದುರನ್ನು ತೆಗೆಯದೆ ಅಲ್ಲಲ್ಲೆ ಸ್ವಲ್ಪ ಸ್ವಲ್ಪ ತೆಗೆದಿದ್ದಾರೆಂದು ಸಹ ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ.

SRI S. M. KRISHNA.—This is Half-a-hour Discussion. The Leader of the Opposition has been making certain allegations against the Finance Minister. It is already 13 Minutes past. I certainly would need 15 minutes at least equal time to refute whatever allegations he has made and clarify the doubts, if there are any. If he has raised fresh questions, I owe a duty to the House to clarify them.

MR. DEPUTY SPEAKER.—The procedure is only half-an-hour time will be allotted. If Sri Devegowda takes 15 minutes for his statement, Sri Armugham will be out. I think he is already out.

SRI C. M. ARUMUGHAM.—It is an important matter

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಹೇಳಿದಂಥ ವಿಚಾರವನ್ನು ನಾನು ಒಪ್ಪುತ್ತೇನೆ. ಆದರೆ ತಾವು ರೆಫ್ಯೂಟ್ ಮಾಡುವುದರಲ್ಲಿಯೇ ತಮ್ಮ ಸಾಮರ್ಥ್ಯವನ್ನು ತೋರಿಸಬೇಡಿ. ತಮ್ಮ ಕೋಲೀಗ್ ಅನ್ನು ನಾವು ಅಪಾದನೆ ಮಾಡುತ್ತಿದ್ದೇವೆಂದು ತಾವು ತಿಳಿದುಕೊಳ್ಳುತ್ತಿರಬಹುದು. ಮಂತ್ರಿಗಳೇ ಆಗಲೀ, ಶಾಸಕರುಗಳೇ ಆಗಲೀ ಅಧಿಕಾರವನ್ನು ದುರುಪಯೋಗ ಮಾಡಿಕೊಂಡರೆ ಅದು ತಪ್ಪಾಗುತ್ತದೆ. ಈ ವಿಚಾರದಲ್ಲಿ ಅವರು ತಮ್ಮ ಪ್ರಭಾವವನ್ನು ಕೇಂದ್ರ ಸರ್ಕಾರದಲ್ಲಿ ಬೀರಿ ಮತ್ತು ಹಿಂದಿನ ಸರ್ಕಾರದಲ್ಲಿ ಬೀರಿ ಈ ಒಂದು ಅನುಕೂಲತೆಗಳನ್ನು ಪಡೆದುಕೊಂಡಿದ್ದಾರೆ. ಈ ಕಾರಣದಿಂದ ತಾವು ತಮ್ಮ ಸಹೋದ್ಯೋಗಿಯನ್ನು ಡಿಫೆಂಡ್ ಮಾಡುವುದಕ್ಕೆ ಹೋಗಬೇಡಿ. ಈ ರೀತಿ ಇನ್ನು ಮುಂದೆ ಆಗುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ತಾವು ಹೇಳಬೇಕು. ಆ ರೀತಿ ಹೇಳುತ್ತೀರಾ ಎಂದು ನಾವು ಅಪೇಕ್ಷೆ ಮಾಡುತ್ತೇನೆ. ಮಾನ್ಯ ಆರ್ಮುಗಂ ಅವರು ಇದರ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದರಿಂದ ನಾನು ಇಷ್ಟಕ್ಕೆ ನಿಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—Sri Devegowda cannot call upon Sri Arumugham to speak. It is left to the chair. He should not arrogate to himself my powers. I wish to tell Sri Armugham that I am not going to sit even one moment after 6-30 P. M. I have got my own other arrangements. So he should take only two to three minutes.

† SRI C. M. ARUMUGHAM (K. G. F.).—Mr. Deputy Speaker, Under the Mines and Mineral Development Act, 1957, it is the entral Government that has to fix this lease. This is a scheduled mine. Without the consent of the Centre, it is not possible for the State Government to lease or to issue a license for the mining operations. The lease that has been given to the Sandur Manganese Company is over 29 square miles. I submit that in 1948 the then Sandur Government issued a statement that the lease is over 37 square miles. But it has become 29 square miles when the lease period was renewed subsequently and this is against law. According to the Mining Lease Act, the maximum extent of lease should be only 10 square miles. According to the Act and Rules there under, one could be given 50 square miles in the initial stage up to the prospecting stage. But the moment you strike the mineral, you must confine yourself to the 10 square mile limit. But this Sandur Manganese and Iron Ore Company

(Sri C. M. Arumugh___,

is having all the 29 square miles. In fact, the then Government stated that the lease over 37 square miles was against rules. Even though rich ore is available in the entire 29 square miles, this Company is extracting ore from outside the lease area. There is an industry built by the Ex-Maharaja of Sandur, For that industry they have taken on lease 500 acrse. The Sandur Manganese Co., is showing losses although it is making profits. The Company is showing losses to evade income-tax. The Company is maintaining a Public Relations Development Board.

MR. DEPUTY SPEAKER.—Does it come under the Half-an Discussion today ?

SRI S. M. KRISHNA.—Does the alleged evasion of income-tax come within the purview of today's Half-an-hour Discussion ?

SRI C. M. ARUMUGHAM.—For this Board evey year they are paying Rs. 4 lakhs. The Board is indulging in politics. For politics they are paying Rs. 4 lakhs.

MR. DEPUTY SPEAKER.—I am concerned with the scope of the discussion.

SRI C. M. ARUMUGHAM.—The main purpose of this payment is to create supporters for the Maharaja.

SRI S. M. KRISHNA.—Where is the Maharaja ?

SRI C. M. ARUMUGHAM.—Once in 20 years the Company has to renew the lease. From 1904 they have renewed the lease period several times. But every time they have exceeded the limit of area fixed under the Act and Rules for exploitation. There are a few individuals in Mysore State who have violated the rule that the maximum extent of lease should be 10 square miles after the mineral deposit is explored. and they have got this lense in different names. When in the entire country only 10 sq. miles is given for lease, how is it that for this wonderful company you have given 28 sq. miles.

MR. DEPUTY SPEAKER.—The hon. Member's time is over.

SRI C. M. ARUMUGHAM.—With these words I conclude my speech.

†SRI S. M. KRISHNA (Minister for Industries) —Mr. Deputy Speaker, Sir, the Leader of the Opposition, my distinguished friend Sri Deve Gowda, has thought it proper to rise anhalf-an-hour discussion. My own impression was that Sri Deve Gowda wanted some more clarification on this particular lease granted in favour of a company and the condition which is attached to the lease agreement. In the course of his speech he has made certain wild allegations against Sri

Ghorpade, our Finance Minister. All these allegations have been made elsewhere also and they have been effectively replied to by the Finance Minister.

Let me make it very clear that this particular mining lease has a history and the history dates back to the year 1901 when the Belgian Company under the name of John Sandur Mining Company was established in 1901 and they had obtained a lease for 50 years over an area of 29 sq. miles. I am sure the present Finance Minister was not born in the year 1901. At that point of time the technical experts came to the conclusion that the lease area cannot be broken up and has to be given in its entirety to one party in view of the scattered nature of ore deposits It is common knowledge that anyone who is familiar with mining operations will certainly not fail to see the logic that ore deposits would be found only in pockets and in the interest of systematic and organised mining in this particular case it was found proper to confine themselves to these 29 sq. miles. The lease itself could be renewed after 50 years. In the meanwhile it was converted into Sandur Manganese and Iron Ore Private Ltd in 1956 They became the successors of the Belgian company. Sri Deve Gowda wanted to know when the lease period is going to expire. It is going to expire on 31st of December 1973 and is renewable at their option for a further period of 20 years.

One big question that has emerged in this debate is the condition that has been attached to the lease that has been granted to this company. I shall read the agreement.

> "The lessee shall take steps to establish an electro-metallurgical industry 'including a ferro-mangance industry' within a period that may be specified by the State Government. For this purpose the lessee shall prepare a scheme with a time table for its implementation and forward to the Government for approval."

845. SRI A. M. BELLIAPPA (Mercara).—Will the Minister for Public Works and Electricity be pleased to state :—

(a) the number of K. Ws. of power released to Coorg District ; the number of applications pending for supply of electricity ;

(b) whether it has come to the notice of Government that power supply fails frequently during peak hours ;

(c) if so, the reasons for the same and the number of interruptions in the month of May 1972 at Virajpet, Somwarpet, Mercara and Gonicoppal ;

(d) if so, the reasons for not increasing the capacity of the load to District ?

SRI H. M. CHANNABASAPPA (Minister for Public Works and Electricity).—

(a) (i) 4690 KVA against the installed capacity of 10,000 KVA.
(ii) 30 as on 30-6-1972.

(b) Occasionally.

(Sri H. M. Channbasappa)

(*c*) The interruptions are mainly due to falling of trees on the lines which pass through thick Jungles due to heavy velocity winds during the period.

8 times totalling to 29 minutes in Virajpet area.

36 times totalling to 38 hours 26 minutes in Somwarpet area.

17 times totalling to 7 hours 38 minutes in Mercara area.
22 times totalling to 15 hours 3 minutes in Gonikoppal area.

(*d*) Sub-stations in the area have got sufficient capacity to cater to the growing demands and the question of increasing the capacity does not arise.

SRI A. M. BELLIAPPA.—How many installations are there in Coorg District and how many stations and sub-stations are proposed to be constructed ?

† SRI H. M. CHANNABASAPPA.—There are already sub-stations at Kushalnagar, Virajpet and Gonicoppal and some others are proposed to be constructed.

SRI A. M. BELLIAPPA.—How many power installations are there in Coorg District ?

SRI H. M. CHANNABASAPPA.—I cannot answer the question as it is not clear.

SRI A. M. BELLIAPPA.—On account of difficult terrain there are so many interruptions. Will Government therefore think of having a separate division ?

SRI H. M. CHANNABASAPPA.—Formation of a separate Division is not going to solve the difficulties. The terrain of the country is such that some of these difficulties are inevitable and a separate Division is not going to help in removing these difficulties.

ಶ್ರೀ ಆರ್. ಗುಂಡೂರಾವ್.—ಕೊಡಗಿನಲ್ಲಿ ಬಹಳ ಜಾಸ್ತಿ ಕಾಡು ಇರುವ ದೆಸೆಯಿಂದ ಆಗಾಗ್ಗೆ ಎಲೆಕ್ಟ್ರಿಸಿಟಿ ಕೆಟ್ಟು ಹೋಗುವ ದೆಸೆಯಿಂದ, ವಿಶೇಷವಾದ ಕಾರ್ಯಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಷ್ಟೆಷ್ಟು ಗಂಟೆ ಯಾವ ಯಾವ ಕಾಲದಲ್ಲಿ ಆಗಿದೆ ಎನ್ನುವುದನ್ನು ಉತ್ತರದಲ್ಲೇ ಕೊಟ್ಟಿದ್ದೇನೆ. ಸ್ವಾಭಾವಿಕವಾಗಿ ಗಾಳಿ ಮಳೆ ಹೆಚ್ಚು ಎದ್ದಾಗ ಕಾಡು ಮೇಡುನಲ್ಲಿ ಇರತಕ್ಕ ಲೈನ್‌ಗೆ ತೊಂದರೆಗಳು ಉಂಟಾಗತಕ್ಕದ್ದು ಸ್ವಾಭಾವಿಕ. ಅದನ್ನು ಎಷ್ಟು ಕಡಿಮೆ ಮಾಡುವುದಕ್ಕೆ ಸಾಧ್ಯವೋ ಅಷ್ಟು ಕಡಿಮೆ ಮಾಡಲಿಕ್ಕೆ ಎಲ್ಲಾ ವಿಚಾರಣೆ ನಡೆಸಿ ತೊಂದರೆಯಾಗದಂತೆ ನೋಡಿಕೊಳ್ಳುವ ವ್ಯವಸ್ಥೆ ಮಾಡುತ್ತೇನೆ.

RESERVATION OF POSTS FOR PHYSICALLY HANDICAPPED PERSONS

857. SMT. DAMAYANTHI BOREGOWDA (Srirangapatna).—Will the Chief Minister be pleased to state.—

(a) Whether any percentage of post are reserved by Government for the physically handicapped person.

(b) if so, the percentage of the posts reserved,

(c) if not, the reasons for the same and whether there is any proposal before Government to reserve some posts for them,

(d) the number of handicapped persons employed during the year 1971—72?

SRI D. DEVARAJ URS (Chief Minister).—

(a) No.
(b) Does not arise
(c) Reservation in Services in favour of physically handicapped persons is legally not permissible.

(d) Information is not available.

SMT. DAMAYANTHI BOREGOWDA.—When jobs could be reserved in respect of backward classes, scheduled castes and scheduled tribes, may I know why is it not legally permissible to reserve a certain percentages of posts in the services to the physically handicapped persons?

SRI D. DEVARAJ URS.—The laws as they exist do n't permit for reservation to these people. In the case of scheduled castes, reservation is legally permissible. Now the Government is thinking of bringing in social legislation to help these disabled people and also blind people.

SMT. DAMAYANTHI BOREGOWDA.—There is an employment cell in the Social Welfare Department for the physically handicapped. May I know how many have secured jobs through that cell?

SRI D DEVARAJ URS.—That is not readily available. Here and there by circular instructions and by pursuation some departments have been asked to employ. Their number may not be commensurate with the problem on hand. I do not have figures but even the functioning of the Employment Exchange in the absence of legal authority is not to my satisfaction. So I am thinking of social legislation on this subject.

FOOD AND WATER ANALYSIS LABORATORIES

861. SMT. B. MADIMAN (Dharwar Rural).—Will the Minister for Health be pleased to state.—

(a) Whether there are any Food and Water Analysis Laboratories in the Public Health Institutes in the State,

(b) if not, the steps taken to establish such laboratories in the State?

SRI H. SIDDAVEERAPPA (Minister for Health).—

(a) Yes. There is already one Food and Water Analysis Laboratory attached to the Public Health Institute, Bangalore.

(b) Does not arise in view of reply to (a)

SMT. B. MADIMAN.—May I know whether the Government will take steps to establish Food and Water Analysis Laboratory in District places or at least in Division Headquarters ?

† SRI H. SIDDAVEERAPPA.—The matter is under consideration. We propose to have in three or four places. It is being examined.

SMT. B. MADIMAN.—May I know how much the Food and Water Analysis Laboratory charges to analyse the foodstuffs brought by a common man ?

SRI H. SIDDAVEERAPPA.—That answer is not readily available. Mostly it is done under the requisition of the corporation, municipalities and other Government staff.

SMT. B. MADIMAN.—I understand that they charge Rs. 10 to analyse foodstuffs brought in by a common man. So I would like to know whether the Government will take steps to reduce the rate and give more publicity so as to help prevent food adulteration and contamination of water, which will benefit the common man.

SRI H. SIDDAVEERAPPA.—The matter has to be examined. It is a necessary service the Government can grant to the people. I will see how far the rate can be reduced.

SRI B. B. SAYANAK.—May I know which are the other places where these laboratories will be started ?

SRI H. SIDDAVEERAPPA.—Belgaum is one.

SRI B. B. SAYANAK.—Which are the other two places ?

SRI H. SIDDAVEERAPPA.—They are Shimoga and Mysore.

COMPLAINTS FROM PAISARY VILLAGE REGARDING LOSS OF TIMBER

579. SRI V. MASIYAPPA (Challakere).—

Will the Minister for Agriculture and Forests be pleased to state :—

(a) whether there was any complaint from Paisary village in Coorg District about the loss of timber of the value of Rs. 1,00,000 ;

(b) if so the action taken in the matter ?

SRI K. H. PATIL (Minister for Agriculture and Forests) —

(a) There were some complaints about the illicit fellings in Paisari land of Somwarpet Taluk.

The total loss involved is estimated at Rs. 90,000 to Rs. 95,000.

(b) The matter is presently under investigation by the Police.

ಶ್ರೀ ವಿ. ಮಸಿಯಪ್ಪ.—ಸ್ವಾಮಿ, ಅಕ್ರಮವಾಗಿ ಮರಗಳನ್ನು ಕಡಿಯಲಾಗಿದೆ ಎಂದು ಅಪ್ಪಣೆ ಕೊಡಿಸಿದ್ದೀರಿ. ಅಕ್ರಮವಾಗಿ ಕಡಿದಿರತಕ್ಕ ಮರಗಳು ರಾಜ್ಯದಲ್ಲಿ ಇವೆಯೋ, ಅಥವಾ ಕೇರಳಕ್ಕೆ ಅಕ್ರಮವಾಗಿ ಸಾಗಣಿಕೆಯಾಗಿದೆ ಎಂದು ತಮ್ಮ ಗಮನಕ್ಕೆ ಬಂದಿದೆಯೋ ?

† ಶ್ರೀ ಕೆ. ಎಚ್. ಪಾಟೀಲ್.—ಸರ್ಕಾರದ ಗಮನಕ್ಕೆ ಬಂದಿದೆ, ಸರ್ಕಾರ ಬಹಳ ತೀವ್ರಗತಿಯಿಂದ ತಕ್ಕ ಕ್ರಮ ತೆಗೆದುಕೊಂಡಿದೆ.

ಶ್ರೀ ವಿ. ಮಸಿಯಪ್ಪ.—ಮಾಲನ್ನು ಕಳ್ಳ ಸಾಗಾಣಿಕೆ ಮಾಡುವ ಸಂದರ್ಭದಲ್ಲಿ ಅಪರಾಧಿಗಳನ್ನು ಮಾಲಿನ ಸಮೇತ ಹಿಡಿದರೂ ಪೋಲೀಸರು ಕ್ರಮ ತೆಗೆದುಕೊಳ್ಳದೆ ಕೈ ಬಿಟ್ಟಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಕೋರ್ಟಿನಲ್ಲಿ ಖಟ್ಲೆ ಹಾಕಿದ್ದರೂ ಕೆಲವು ಸಂದರ್ಭಗಳಲ್ಲಿ ಬಿಡುಗಡೆ ಯಾಗಿದೆ. ಇದರಲ್ಲಿ ಕಾನೂನಿನ ದೋಷವಿರುವುದರಿಂದ, ದೋಷ ನಿವಾರಣೆಗೋಸ್ಕರ ಕಾನೂನಿನ ತಿದ್ದುಪಡಿಯನ್ನು ಸದನದ ಎದುರಿಗೆ ತರಲಾಗುತ್ತದೆ.

MADAM SPEAKER.—Question Hour is over.

CALLING ATTENTION TO MATTERS OF URGENT PUBLIC IMPORTANCE :

(i) Re : death at Gangavathi Civil Hospital

SRI M. MALLAPPA (Berur).—I call the attention of the Minister for Health to the death of a mother and child in Gangavathi Civil Hospital.

SRI H. SIDDAVEERAPPA (Minister for Health).—I State as follows.

(Sri H. Siddaveerappa)

It has been reported by the Director of Health & F. P. Services that on 25th July 1972 at about 3-00 P.M., Smt. Kamalamma, aged about 30 years, wife of Sri Shanmukhappa, was admitted into the Civil Hospital, Gangawathi. Smt. Kamalamma was in labour and the hand of the foetus was presenting. It is reported that the hand of the foetus showed burn marks, which were caused by the Dai, who was attending on the case, in order to make the foetus to withdraw the hand.

Dr. P. R. Bedi, Lady Medical Officer, who first saw the case, advised the relatives of Smt. Kamalamma to take her to Bellary since she felt that she would not be able to handle this case. Besides, the Medical Officer in charge of the Institution had gone to Kanakagiri to attend to a Tubectomy camp, but the patient and her relatives being poor decided to wait till the male Medical Officer returned. In the meantime, since ether required for anaesthesia was not available in this Institution nor in the Local Market, the Lady Medical Officer obtained some other from a Private Practitioner.

At 8-00 P.M., the Medical Officer returned from Kanakagiri and, having seen the case, attended on the patient immediately and extracted a dead foetus. Both he and the Lady Medical Officer tried to resuscitate the patient.

In the meantime, the Local M.L A. and certain press representatives had come to the Hospital to find out the details of the case. The Medical Officer explained to them what had happened and thereafter they left the place.

At about 11-00 P.M., the patient's condition went into shock and inspite of treatment being given, she died at about 11-30 P.M.

It was improper on the part of the Lady Medical Officer not to have promptly attended to the case and to have made the patient wait till the male Medical Officer arrived. No doubt, it is difficult to handle a case of hand presentation but if the Lady Medical Officer felt that she would not be able to attend to the case by herself and if it was not possible for her to summon the Male Doctor immediately, she ought to have taken the assistance of a local doctor in this emergency which she failed to do. The matter will be enquired into in detail and further action as deemed fit will be taken.

SRI M MALLAPPA.—What action you propose to take against the Doctor who failed in her duty to give timely treatment ?

SRI H. SIDDAVEERAPPA.—It depends upon the report.

2-00 P.M.

ಶ್ರೀ ವಿಶ್ವನಾಥರೆಡ್ಡಿ.—ಮಾನ್ಯ ಮಂತ್ರಿಗಳ ದಕ್ಷತೆ ಬಗ್ಗೆ ನಮಗೆ ಅನುಮಾನವಿಲ್ಲ. ಆದರೆ ಪರ್ಟಿಕುಲರ್ ಆಗಿ ತಮ್ಮ ಡಿಪಾರ್ಟ್‌ಮೆಂಟ್ ಬಗ್ಗೆ ೨-೩ ವರ್ಷಗಳಿಂದ ಸಾಕಷ್ಟು ದೂರುಗಳು ಬರುತ್ತಿರು ವುದು ವಿಶೇಷವಾಗಿ ಲೇಡಿ ಮೆಡಿಕಲ್ ಆಫೀಸರ ಬಗ್ಗೆ. ಇದಕ್ಕಿಂತ ಮೊದಲು ಅವರು ಯಾದಗಿರಿಯಲ್ಲಿ ಇದ್ದರು. ಕಂಪ್ಲೇಂಟ್ ನಾನು ಓದಿದ್ದೇನೆ; ಆಕೆ ದುಡ್ಡು ಕೇಳಿದರು ದುಡ್ಡು ತರುವುದರೊಳಗಾಗಿ ಟೈಮ್ ಆಯಿತು ಅದಕ್ಕೋಸ್ಕರ ಈ ರೀತಿಯಾಯಿತು ಎಂದು ಪೇಪರ್ ವರದಿ ಆಗಿದೆ. ಇದೇ ಪ್ರಕಾರ ಯಾದಗಿರಿಯಲ್ಲಿ ಕೂಡ ದುಡ್ಡಿನ ಬಗ್ಗೆ ಆಕೆಯ ಬಗ್ಗೆ ಸಾಕಷ್ಟು ವಿಕೋಪಕ್ಕೆ ಹೋಗಿತ್ತು, ಸಾಕಷ್ಟು ರೆಪ್ರಸೆಂಟೇಷನ್ ಆಗಿತ್ತು. ೧೯೭೧ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಯಾದಗಿರಿಯಲ್ಲಿ ದೂರು ಗಳು ಬಂದಿದ್ದವು. ಆ ಬಗ್ಗೆ ಡಿಪಾರ್ಟ್‌ಮೆಂಟ್‌ಗೆ ಹೇಳಿದ್ದೆ. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಅವರು ದೆರೀಸ್ ಎ ಪ್ರೈಮಾಫೇಸಿ ಕೇಸ್ ಎಂದು ಸೆಪ್ಟೆಂಬರ್ ಮತ್ತು ಅಕ್ಟೋಬರ್ ೧೯೭೧ರಲ್ಲಿ ವರದಿ ಮಾಡಿದರೂ ಡಿಪಾರ್ಟ್‌ಮೆಂಟ್‌ನವರು ಏನು ಕ್ರಮ ತೆಗೆದುಕೊಂಡಿಲ್ಲ. ಏತಕ್ಕಾಗಿ ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಪರ್ಟಿಕುಲರ್ ಆಗಿ ಈ ಲೇಡಿ ಮೆಡಿಕಲ್ ಆಫೀಸರ್ ವಿಚಾರದಲ್ಲಿ ಹಿಂದಿನ ವರದಿ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡರೆ ಡಿಪಾರ್ಟ್‌ಮೆಂಟಿಗೆ ಎಚ್ಚರಿಕೆಯಾಗುತ್ತದೆ. ಡಿಪಾರ್ಟ್‌ಮೆಂಟಿನಲ್ಲಿ ಪ್ರೈಮಾಫೇಸಿ ಕೇಸ್ ಇದ್ದರೂ ಇಷ್ಟು ದಿವಸ ಆಕೆ ಮೇಲೆ ಯಾತಕ್ಕೆ ಕ್ರಮ ತೆಗೆದುಕೊಂಡಿಲ್ಲ ?

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಈ ವಿಷಯವನ್ನು ನನ್ನ ಗಮನಕ್ಕೆ ಈಗ ತಂದಿದ್ದಾರೆ, ಕೂಡಲೇ ಸಂಬಂಧಪಟ್ಟ ಫೈಲನ್ನು ತರಿಸಿ ರೆಕಾರ್ಡಿನಲ್ಲಿ ಆ ರೀತಿ ಪ್ರೈಮಾಫೇಸಿ ಕೇಸ್ ಇದೆ ಎಂದು ರಿಪೋರ್ಟ್ ಬಂದಲ್ಲಿ ಕೂಡಲೇ ಪನಿಷ್‌ಮೆಂಟರಿ ಆಕ್ಷನ್ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುವುದಕ್ಕೆ ಯೋಚನೆ ಮಾಡುತ್ತೇನೆ.

(ii) re : Cholera epidemic of Afzalpur taluk

SRI D. B. KALMANKER (Afzalpur).—I call the attention of the Hon. Minister for Health to the spread of epidemic of cholera in Afzalpur Taluk, Gulbarga District.

SRI H. SIDDAVEERAPPA (Minister for Health).—I State as follows :

It has been reported by the Director of Health and Family Planning Services, Bangalore that Gastro-Enteritis is prevalent in the Gulbarga District since about to months. In Afzalpur Taluk, 22 villages have been affected during the above period, the total population at risk being 38,393. There have been so far 102 attacks and 12 deaths. So far, 15251 Anti-Cholera Inoculations have been performed as precautionary measures. This work is under progress.

As far as Chincholi Taluk is concerned, 32 Villages are affected. 166 attacks and 49 deaths have been reported so far. The population at risk is 41,006, 23,097 Anti-cholera inoculations have so far been performed to date (*i.e.* 3-8-72). The District Health and Family Planning Officer, Gulbarga District has reported that there is no cause for alarm and that all necessary preventive measures are being taken to prevent further attacks. There is also adequate supply of drugs and vaccine for combeting the situation.

Instruction have already been issued to the District Health Officers to be vigilant in respect of the Gastro-Enteritis attacks and to take preventive action. They have also been instructed that sufficient quantity of vaccine should be stocked in each District. The Deputy

(Sri H. Siddaveerappa).—

Commissioners have also been instructed to see that whenever they get any information of any attacks of Gastro-Enteritis they should immediately ask the District Health Officers to take up preventive measures.

In addition to this, the latest report upto 18th August 1972 I have received is to the effect that during the year 1972 excepting Coorg, North Kanara and South Kanara Districts, the other 16 districts have reported cholera and gastro Enteritis cases. Prompt action has been taken to check the infection. Now as on the date of this report the infection is still working due to the non availability of drinking water and the work to check the infection is in progress.

SRI D. B. KALMANKER.—It is admitted by the Hon. Minister that this disease has spread due to non availability of drinking water. What positive steps the Government has taken in draught affected areas of Gulbarga District to make available good drinking water ?

SRI H. SIDDAVEERAPPA.—I learn, so far as Gulbarga District is concerned, steps have been taken to supply water in trucks to areas where water is not readily available. On the health side sufficient preventive steps have been taken to keep the staff ready and necessary vaccines ready to rush to the spot wherever it is necessary and immunisation programme has also been very effective.

SRI D. B. KALMANKER.—In view of the fact that draught conditions are very intensive in Afzalpur taluk and other taluks of Gulbarga District, will the Government take necessary steps to see that water is provided to every village where scarcity of drinking water exists ?

SRI H. SIDDAVEERAPPA.—I agree with the hon. member. It is the duty of the Government to supply drinking water as much as it is our duty to supply foodgrains. I assure the hon. member that all steps would be taken and all endeavours would be made to supply water from whatever place it is available and by whatever mode it is possible.

ಶ್ರೀ ಜಿ. ಎಲ್. ಕಬಾಡಿ.—ಕುಡಿಯುವ ನೀರಿನ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗಿರುವುದರಿಂದ ಬಿಜಾಪುರ ಜಿಲ್ಲೆಯ ಇಂಡಿ ಮತ್ತು ಸಿಂಧಗಿ ಭಾಗಗಳಲ್ಲಿ ಟ್ರಕ್‌ನಿಂದ ನೀರನ್ನು ಸಪ್ಲೈ ಮಾಡುತ್ತೇವೆಂದು ಹೇಳಿದಿರಿ ಅದಕ್ಕೆ ನಿಜವಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಬೇಕಾಗುತ್ತದೆ. ಇಲ್ಲಿಯವರೆಗೆ ಎಷ್ಟೋ ರೀತಿ ಕೇಳಿಕೊಂಡು ಮನವಿ ಮಾಡಿದರೂ ಏನೂ ವ್ಯವಸ್ಥೆ ಮಾಡಲಿಲ್ಲ ಅದಕ್ಕೋಸ್ಕರ ತೀವ್ರ ಕಾರ್ಯಕ್ರಮ ಏನು ತೆಗೆದುಕೊಳ್ಳುತ್ತೀರಿ, ಇದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ ಎಂಬುದನ್ನು ಸರ್ಕಾರದವರು ದಯಮಾಡಿ ಹೇಳಬೇಕು.

SRI H. SIDDAVEERAPPA.—I may assure the hon. House that the Government are also equally anxious about this matter, along with the foodstuffs. Right yesterday we were discussing this subject as to

how best we should tackle the problem of the supply of water also wherever it is absolutely essential atleast for drinking purpose. In this direction, Government is thinking as to how it should be solved—either by carrying it in trucks or by other modes-unmindful of the cost that might be necessary. Government will leave certainly no stone unturned to meet the situation.

ಅಧ್ಯಕ್ಷರು.—ದುಷ್ಕಾಳ ಪರಿಸ್ಥಿತಿ ಬಗ್ಗೆ ಮುಖ್ಯಮಂತ್ರಿಯವರು ಇವೊತ್ತಿನದಿವಸ ಒಂದು ಸ್ಟೇಟ್ ಮೆಂಟ್ ಮಾಡುತ್ತಾರೆ, ತಾವು ಕೇಳಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಬಹಳ ಸಂತೋಷ, ನಾಳೆ ಸಭೆ ಅಡ್ಜರ್ನ್ ಆಗುತ್ತದೆ ಆದ್ದರಿಂದ ಹೇಳಿಕೆ ಕೊಡಲಿ.

ಶ್ರೀ ಎಚ್. ಸಿದ್ದವೀರಪ್ಪ.—ಮತ್ತೆ ಸೇರುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಸೇರುವಾಗ ಸೇರೋಣ ?

Discusion on Matters under Rule 312.

(1) re: Statement purported to have been made by Sri Yeshpal Kapoor.

†ಶ್ರೀ ಹೆಚ್.ಡಿ. ದೇವೇಗೌಡ: —(ಹೊಳೆನರಸೀಪುರ)

ಮಾನ್ಯ ಅಧ್ಯಕ್ಷರೇ,

ತಮ್ಮ ಅಪ್ಪಣೆ ಪಡೆದು ಸಭೆಯ ಗಮನಕ್ಕೆ ಒಂದು ವಿಚಾರ ತರಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಸದ್ಯದಲ್ಲಿ ಇಲ್ಲ. ನಿನ್ನೆ ದಿನ ಬೆಂಗಳೂರಿಗೆ ಬಂದಿದ್ದ ರಾಜ್ಯಸಭೆಯ ಸದಸ್ಯರಾದ ಶ್ರೀ ಯಶಪಾಲ ಕಪೂರ್‌ರವರು ಹೇಳಿಕೆ ಕೊಟ್ಟಿರುವುದು ಇಂದು ಪತ್ರಿಕೆಗಳಲ್ಲಿ ಬಂದಿದೆ. ಅವರು ಬಹಳ ಗುರುತರವಾದ ಆಪಾದನೆಗಳನ್ನು ಮಾಡಿದ್ದಾರೆ. ಅವರು ಶಾಸಕರನ್ನು ಪ್ರಧಾನಿಯ ಕಾರ್ಯಕ್ರಮವನ್ನು ಕೃತಿಗಿಳಿಸುವ ಏಜಂಟರುಗಳೆಂದು ಪರಿಗಣಿಸುತ್ತೇನೆಂದು ಹೇಳಿರುವ ಪತ್ರಿಕೆಗಳಲ್ಲಿ ಬಂದಿದೆ. ಇದನ್ನು ನೋಡಿದರೆ ಇಂದು ಮೈಸೂರು ದೇಶದಲ್ಲಿ ಜನರಿಂದ ಚುನಾವಣೆಯಾದ ಸರಕಾರ ಇದೆಯೋ, ಇಲ್ಲವೇ ಪ್ರಧಾನಿಯವರು ನಾಮಕರಣ ಮಾಡಿರುವ ಸದಸ್ಯರುಗಳ ಸರಕಾರ ಇದೆಯೋ ಎನ್ನುವ ಅರ್ಥ ಇದರಲ್ಲಿ ಬರುತ್ತದೆ. ಇಂದು ಶ್ರೀಮತಿ ಇಂದಿರಾಗಾಂಧಿಯವರೇ ನೇಮಕಮಾಡಿದಂತಹ ಸರಕಾರ ಈ ರಾಜ್ಯದಲ್ಲಿ ಇದೆಯೋ ಎನ್ನುವುದು ಒಂದು ದೊಡ್ಡ ಪ್ರಶ್ನೆಯಾಗಿದೆ.

SRI S. M. KRISHNA (Minister of Industries) :— I rise to a Point of Order. The Hon'ble the Leader of the Opposition is bringing in the name of Sri Yeshpal Kapoor, who is not a member of this House. I do not know whether it is the intention of the Leader of the Opposition to raise a matter of privilege. That should be the only way because he has been referring to the statement which is purported to have been made by Sri Yeshpal Kapoor.

ಅವರು ಈ ಸಭೆಯ ಸದಸ್ಯರು ಅಲ್ಲ.

ಶ್ರೀ ಹೆಚ್.ಡಿ. ದೇವೇಗೌಡ:—ನಾನು ಏನು ಹೇಳಬೇಕೊ ಅದನ್ನು ಹೇಳಿ ಮುಗಿಸುತ್ತೇನೆ, ಅಷ್ಟರಲ್ಲಿ ಇಲ್ಲದ ಅಡ್ಡಿ ಆತಂಕಗಳನ್ನು ತಾವೇ ಇಲ್ಲಿ ತರುತ್ತಿದ್ದೀರಿ. ಅವರು ಕೊಟ್ಟಿರುವ ಪತ್ರಿಕಾ ಹೇಳಿಕೆಯಲ್ಲಿ ಶಾಸಕರನ್ನು ಪ್ರಧಾನಿಗಳ ಏಜಂಟರು ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ಇಂದು ರಾಜ್ಯದಲ್ಲಿ ಜನರಿಂದ ಚುನಾಯಿತರಾದ ಸರಕಾರವಿದೆಯೋ, ಇಲ್ಲವೇ ಒಂದು ಕೇಂದ್ರ ಸರಕಾರದವರೇ ನಾಮಕರಣ ಮಾಡಿರುವ ಸದಸ್ಯರುಗಳೇ ಈ ಸಭೆಯಲ್ಲಿ ಸದಸ್ಯರಾಗಿದ್ದಾರೋ, ಇಲ್ಲವೇ ಮೈಸೂರು ದೇಶದಲ್ಲಿ ಪ್ರಜಾಪ್ರಭುತ್ವ ಇದೆಯೋ ಇಲ್ಲವೋ ಎನ್ನುವ ಒಂದು ಸಂಶಯವುಂಟಾಗಿದೆ. ನಿಮ್ಮನು ಇಲ್ಲಿ ಅವರ ಏಜೆಂಟರಾಗಿ ನೇಮಕ ಮಾಡಿದ್ದಾರೇನು ?

ಶ್ರೀ ಎಚ್. ಸಿದ್ದವೀರಪ್ಪ:—ನೀವು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಇದು ನಮ್ಮ ಪಾರ್ಟಿ ವಿಚಾರಗಳು. ಇದರ ಬಗ್ಗೆ ಇಲ್ಲೇಕೆ ಹೇಳುತ್ತಿದ್ದೀರಿ.

ಶ್ರೀ ಎಚ್.ಡಿ. ದೇವೇಗೌಡ:—ನನಗೆ ಇದನ್ನು ಅರ್ಥಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಜನ ನಿಮ್ಮನ್ನು ಇಲ್ಲಿಗೆ ವೋಟು ಮಾಡಿ ಕಳಿಸಿದ ಮೇಲೆ ಪ್ರತಿಯೊಂದಕ್ಕೂ ನಿಮಗೆ ದೆಹಲಿಯಿಂದಲೇ ಆದೇಶ ಬರಬೇಕೇನು ? ಇದರಿಂದ ನೀವು ಯಾವ ಮಟ್ಟದಲ್ಲಿದ್ದೀರಿ ಎನ್ನುವುದು ಜನತೆಗೆ ಚೆನ್ನಾಗಿ ಗೊತ್ತಾಯಿತು. ನಾವಂತೂ ಅವರ ಏಜಂಟರುಗಳಾಗಿರುವುದಕ್ಕೆ ತಯಾರಾಗಿಲ್ಲ. ಶ್ರೀಮಾನ್ ಎಸ್. ಎಂ. ಕೃಷ್ಣರವರು ಬಹಳ ಹುರುಪಿನಿಂದ ಇಲ್ಲಿ ಹೇಳಿಬಿಟ್ಟರು. ಇದು ಪಾರ್ಟಿ ವಿಚಾರಗಳು ಎಂದು, ನಾನು ನಿಮ್ಮ ಎಂ.ಪಿ.ಗಳ ಹಾಗೂ ನಿಮ್ಮ ಪಾರ್ಟಿ ಬಗ್ಗೆ ಹೇಳುತ್ತಿಲ್ಲ. ಅದಕ್ಕೂ ನನಗೂ ಯಾವ ಸಂಬಂಧವೂ ಇಲ್ಲ ಅವರು ಇನ್ನೂ ಮುಂದೆ ಹೋಗಿ ಇಬ್ಬರು ಸಚಿವರುಗಳ ದೂರಿನ ಬಗ್ಗೆ ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ ಇದು ಬಹಳ ಗುರುತರವಾದ ಆಪಾದನೆಗಳು, ಇದನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ಅವರು ತಂದಿದ್ದಕ್ಕೆ, ಮುಖ್ಯ ಮಂತ್ರಿಗಳು ಅದನ್ನು ತನಿಖೆ ಮಾಡಿ, ಇದು ತೀರಾ ಆಧಾರ ರಹಿತವಾದ ದೂರುಗಳು ಆದಕ್ಕೋಸ್ಕರ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲು ಆಗಲಿಲ್ಲ. ಅದಕ್ಕೋಸ್ಕರ ಇನ್ನು ಮುಂದೆ ಅವರು ಸರಿಯಾಗಿ ತಮ್ಮ ನಡವಳಿಕೆ ಸರಿಮಾಡಿಕೊಳ್ಳಬೇಕು, to behave properly ಎಂದು ಸೂಚನೆ ಕೊಡಲಾಗಿದೆ ಎಂದು ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ. ಆ ಮೇಲೆ ಮುಖ್ಯ ಮಂತ್ರಿಗಳು ಯಾವ ರೀತಿ ತನಿಖೆ ಮಾಡಿಸಿದರು ಎಂದರೆ, ಪೋಲೀಸಿನವರ ಮೂಲಕ ತನಿಖೆ ಮಾಡಿಸಿದರು ಎಂದು ಪತ್ರಿಕೆಯಲ್ಲಿ ಹೇಳಿಕೆ ಬಂದಿರುವುದು ನೋಡಿ ನನಗೆ ಇದು ಒಂದು ಸಮಸ್ಯೆಯಾಗಿದೆ. ರಾಜ್ಯ ಸರಕಾರದ ಮಂತ್ರಿಗಳ ನಡತೆ ಬಗ್ಗೆ ಮುಖ್ಯ ಮಂತ್ರಿಗಳು ಯಾವ ರೀತಿ ವಿಚಾರಿಸಬೇಕು ಎನ್ನುವುದಕ್ಕೆ ಪೋಲೀಸಿನವರ ಕೈಯಲ್ಲಿ ವಿಚಾರಣೆ ಮಾಡಿಸಿದರು ಎಂದರೆ ಇದರ ಬಗ್ಗೆ ಸ್ವಲ್ಪ ಆಲೋಚನೆ ಮಾಡಬೇಕಾಗುತ್ತದೆ.

SRI D. DEVARAJ URS (Chief Minister):—I would like to know under what rules of Pr cedure the Hon'ble the Leader of the Opposition is bringing all these things here ? I should like to be enlightened.

ಶ್ರೀ ಎಚ್.ಡಿ. ದೇವೇಗೌಡ :—ಇದು ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆ.

ಶ್ರೀ ಡಿ. ದೇವರಾಜಅರಸ್ :—ಹಾಗಿದ್ದರೆ ಇದರ ಬಗ್ಗೆ ಮೋಷನ್ ಕಳುಹಿಸಿ ಕೊಡಿ. ಸಭೆಯಲ್ಲಿ ಕೆಲವು ನಿಯಮಗಳಿವೆ, ಅದರಂತೆ ತಾವು ಕಳುಹಿಸಬಹುದು.

ಶ್ರೀ ಎಚ್ ಡಿ. ದೇವೇಗೌಡ :—ಇದರ ಬಗ್ಗೆ ಮೋಷನ್ ಕಳುಹಿಸಿಯೇ ಎತ್ತಬೇಕು ಎಂದು ಹೇಳಿದರೆ ಅದನ್ನು ಮಾಡೋಣ.

SRI D, DEVARAJ URS :—I may have to raise a Point of Order. This is not the way to spend the time of the House. I thought the Opposition Leader, who is a responsible member of this House would do things in the manner prescribed.

ಶ್ರೀ ಎಚ್. ಡಿ. ದೇವೇಗೌಡ :—ಹಾಗೆ ಮೋಷನ್ ಕಳುಹಿಸಿ ಕೊಡಬೇಕು ಎಂದರೆ ಮೋಷನ್ ಕಳುಹಿಸಬಹುದು. ಆ ರೀತಿ ಅಧ್ಯಕ್ಷರು ರೂಲಿಂಗು ಕೊಟ್ಟರೆ ಆಗ ಮಾಡೋಣ.

SRI D. DEVARAJ URS:—I have raised a Point of Order. Under what rules of procedure this matter is being discussed ? We have to to be guided by the Rules of Procedure. I want a Ruling on this.

ಅಧ್ಯಕ್ಷರು :—ಅವರು ಯಾವ ರೂಲ್ಸ್ ಪ್ರಕಾರ ಈ ಸಭೆಯಲ್ಲಿ ಹೇಳುತ್ತಿದ್ದಾರೆ ಎನ್ನುವುದನ್ನು ನಾನು ಅವರು ಹೇಳುವ ಮಾತಿನಿಂದ ಅರ್ಥ ಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿಯೇ ನಾನು ಅವರು ಹೇಳುವುದನ್ನು ಕೇಳುತ್ತಿದ್ದೆ ಬಹುಶಃ ಪ್ರಿವಿಲೇಜ್ ಮೋಷನ್ ಇದೆ ಎನ್ನುವಂತಿದ್ದರೆ ಅದನ್ನು ರೂಲ್ಸ್ ಪ್ರಕಾರ ಇಲ್ಲಿ ತರಬಹುದು.

SRI C.M. ARUMUGAM:—Madam Speaker, this is a matter pertaining to our Ministers. The point would be that we will have to give a motion. Tomorrow is the last day. The Ministers are responsible to this House. Of course, we are not concerned with Sri Yeshpalkappor's visit. He moved in the Governor's Car. How can he use the Governor's Car as a Party man ?

SRI H. SIDDAVEERAPPA (Minister for Health) :—He used the Car as a V.I.P.

SRI C. M. ARUMUGAM :—If he has come from Delhi as a V.I.P. and has used the Governor's Car it is all right. But, if he is a Party man, he should use the Party Car.

SRI H. SIDDAVEERAPPA :—If tomorrow my friend Sri Arumugam goes to Delhi and if he is treated as a V.I.P., he will use a Rashtrapathi Car !

ಅಧ್ಯಕ್ಷರು:-ಮಾನ್ಯ ಶ್ರೀ ದೇವೇಗೌಡರು ಪತ್ರಿಕೆ ಹಿಡಿದು ಕೊಂಡುಪತ್ರಿಕೆಯಲ್ಲಿರುವ ಕೆಲವು ವಿಚಾರಗಳನ್ನು ಹೇಳುತ್ತಿದ್ದರು. ಅದು ಯಾವುದು ಎನ್ನುವುದೇ ಇನ್ನೂ ನನಗೆ ಗೊತ್ತಾಗಲಿಲ್ಲ. ಈಗ ಇದರಲ್ಲಿ ಬ್ರೀಚ್ ಆಫ್ ಪ್ರಿವಿಲೇಜು ಆಗುತ್ತದೆ ಎಂದು ಹೇಳುತ್ತಾರೆ, ಇದಕ್ಕಾಗಿ ಅವರೇನು ಹೇಳುತ್ತಾರೆ ಎನ್ನುವುದನ್ನು ಕೇಳಬೇಕೆಂದು ನಿರೀಕ್ಷೆ ಮಾಡುತ್ತಿದೆ. ತಾವು ಪ್ರಿವಿಲೇಜು ಮೋಷನ್ ಕಳುಹಿಸಬೇಕಾದರೆ ರೂಲ್ಸ್ ಪ್ರಕಾರ ತಾವು ನಮಗೆ ಕಳುಹಿಸಿಕೊಡಬಹುದು.

SRI C. M. ARUMUGAM.—We do not want to touch the party issue, But when it becomes a public matter, then it becomes a House affair Mr, Kapoor, M. P, when he came to Bangalore he came as a party-man I want to know why he was treated as a VIP ?

SRI D. DEVARAJ URS.—If the Hon, Member feels that something definitely has gone wrong, he can raise that issue at an appropriate time and in an appropriate manner, I never thought that a seasoned member like Sri C. M, Armugam would argue the matter in this way, He has raised this issue as if he has come to this House for the first time.

SRI C. M, ARMUGAM —The matter concerns about the two Minister of the Cabinet, hence I am making a submission . The Chief Minister has made a statement in which he has mentioned about two Ministers and he has also mentioned abont the Police enquiry He has made this statement outside the House, Therefore we are entitled to know what that matter is.

MADAM SPEAKER.—I request the Hon. Member to send a notice so that we may deal with it suitably.

SRI H. S. SIDDAPPA.—I have given a notice yesterday under Rule 69

MADAM SPEAKER,—The notice given by him dose not apply to this matter.

ಶ್ರೀ ಎಚ್. ಎಸ್, ಸಿದ್ದಪ್ಪ.—ಈ ವಿಷಯಕ್ಕೆ ನಾನು ಕೊಟ್ಟಿರುವ ನೋಟೀಸ್ ಅನ್ವಯವಾಗುತ್ತದೆ ಇವೊತ್ತು ಅದು ಪೇಪರಿನಲ್ಲಿ ಬರುತ್ತದೆಂದು ತಿಳಿದುಕೊಂಡು ನಾನು ನಿನ್ನೆಯೇ ತಮಗೆ ನೋಟೀಸ್ ಕಳಿಸಿಕೊಟ್ಟಿದ್ದೇನೆ.

ಶ್ರೀ ಎಚ್ ಸಿದ್ಧವೀರಪ್ಪ.— ಇಂದು ಪತ್ರಿಕೆಗಳಲ್ಲಿ ತ ವಿಷಯ ಬರುತ್ತದೆಂದು ತಮಗೆ ಹೇಗೆ ಗೊತ್ತಿತ್ತು ?

ಶ್ರೀ ಎಚ್. ಡಿ. ದೇವೇಗೌಡ.—ನಾನು ಎತ್ತಿದ ವಿಷಯದ ಬಗ್ಗೆ ನೋಟೀಸ್ ಕೊಟ್ಟ ನಂತರ ಪ್ರಸ್ತಾಪ ಮಾಡಬೇಕೇ ಎಂಬುದರ ಬಗ್ಗೆ ತಾವು ರೂಲಿಂಗ್ ಕೊಡಬೇಕು:

ಅಧ್ಯಕ್ಷರು.—ತಾವು ನೋಟೀಸ್ ಕಳಿಸಿಕೊಟ್ಟರೆ ಒಳ್ಳೆಯದು

ಶ್ರೀ ಎಚ್. ಡಿ. ದೇವೇಗೌಡ.—ಆ ರೀತಿ ಇದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನೋಟೀಸ್ ಕೊಡದೆ ಆ ಗಹನವಾದ ವಿಷಯವನ್ನು ಪ್ರಸ್ತಾಪ ಮಾಡಬಾರದು ಎಂದು ಮಾನ್ಯ ಮುಖ್ಯಮಂತ್ರಿಗಳು ಏತಕ್ಕೆ ಹೇಳಿದರು ಎನ್ನುವ ಧಾಟಿ ನನಗೆ ಗೊತ್ತಾಗಿದೆ.

ಶ್ರೀ ಡಿ. ದೇವರಾಜ ಅರಸ್.—ನೀವು ಏತಕ್ಕೆ ಆ ವಿಷಯವನ್ನು ಪ್ರಸ್ತಾಪ ಮಾಡಿದಿರಿ ಎಂಬ ಮಾತಿನ ಧಾಟಿಯೂ ಸಹ ನನಗೆ ಗೊತ್ತಾಯಿತು.

ಶ್ರೀ ಎಚ್. ಡಿ. ದೇವೇಗೌಡ.—ನನಗೂ ಸಹ ಗೊತ್ತಿದೆ.

ಶ್ರೀ ಡಿ. ದೇವರಾಜ ಅರಸ್.—ನನಗೂ ಸಹ ಗೊತ್ತಿದೆ.

ಅಧ್ಯಕ್ಷರು.—ದಯವಿಟ್ಟು ತಾವಿಬ್ಬರೂ ನನಗೆ ಅಡ್ರಸ್ ಮಾಡಿ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಇಂದು ಪತ್ರಿಕೆಯಲ್ಲಿ ಬಂದಿರುವ ವಿಷಯವನ್ನು ಹೇಳುತ್ತಿದ್ದೇನೆ.

SRI D. DEVARAJ URS.—I would request the Hon. Leader of the Opposition to confine himself to rules, Whatever he wants to say, let him put it in the form of notice and send it to the Hon. Speaker. He need not insinuate us in this manner.

SRI H.D. DEVE GOWDA.— You have insinuated your own colleagues, which is not fair.

SRI D. DEVARAJ URS.—I know my collegue better than the Leader of the Opposition. Let him not teach me about it.

MADAM SPEAKER—I request both the leaders to addresses the chair

SRI D. DEVARAJ URS.—The Hon. Leader of the Opposition seems to be more concerned about my collegues than myself. If he is so much bothered let him raise it in a proper manner. I only appeal to the Hon. Speaker to permit the Hon. Member to raise matter in a proper manner.

MADAM SPEAKER.—Please send us notice according to the Rules of Procedure

ಶ್ರೀ ಜಿ. ಎನ್. ಪಾಟೀಲ್.—ಮಾನ್ಯ ಸಭಾನಾಯಕರೆ ಈ ರೀತಿ ನಮ್ಮನ್ನು ಥ್ರೆಟನ್ ಮಾಡಿದರೆ ಈ ಸಭೆ ನಡೆಯುವುದಾದರೂ ಸಹ ಹೇಗೆ † ಅವರಿಗೆ ಸ್ವಲ್ಪ ಸಹನೆ ಇರಬೇಕು.

ಅಧ್ಯಕ್ಷರು.—ನೀವು ನೆನ್ನೆಯದಿನ ಇರಲಿಲ್ಲ ಎಂದು ಕಾಣುತ್ತದೆ. ಮಾನ್ಯ ಸದಸ್ಯರು ಇದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ನನ್ನನ್ನು ಥ್ರೆಟನ್ ಮಾಡಿದರು.

ಶ್ರೀ ಎಚ್. ಎಸ್. ಸಿದ್ದಪ್ಪ.— ಮಾನ್ಯ ಅಧ್ಯಕ್ಷಣಿಯವರೇ, ನಾನು ಇದೇ ವಿಷಯದ ಬಗ್ಗೆ ರೂಲ್ ೬೯ರ ಪ್ರಕಾರ ನೋಟೀಸ್ ಕಳಿಸಿಕೊಟ್ಟಿದ್ದೇನೆ. ನಿನ್ನೆಯೇ ಯಾವ ರೀತಿ ಕಳಿಸಿಕೊಟ್ಟಿರಿ ಎಂದು ಮಾನ್ಯ ಆರೋಗ್ಯ ಮಂತ್ರಿಗಳು ಕೇಳಿದರು. ಆದ್ದರಿಂದ ನಾನು ನೋಟೀಸ್ ಕಳಿಸಿರುವುದು ನಿಜವೇ ಅಥವಾ ಇಲ್ಲವೇ ಎಂಬುದನ್ನು ತಾವು ತಿಳಿಸಬೇಕು.

ಅಧ್ಯಕ್ಷರು.—ತಾವು ಕಳಿಸಿರುವುದು ಬಂದಿದೆ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಹೇಳಿದ್ದನ್ನು ಮಾನ್ಯ ಸದಸ್ಯರು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಇಂದು ಪತ್ರಿಕೆಯಲ್ಲಿ ಬರುತ್ತದೆಂದು ತಿಳಿದುಕೊಂಡು ಅದು ಹೇಗೆ ನೀವು ನೆನ್ನೆಯೇ ಕಳಿಸಿದ್ದೀರಿ ಎಂದು ನಾನು ಕೇಳಿದ್ದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಅದನ್ನು ಅಧ್ಯಕ್ಷರು ಹೇಳಬೇಕು.

ಅಧ್ಯಕ್ಷರು.—ತಾವು ಕಳಿಸಿಕೊಟ್ಟ ನೋಟೀಸಿಗೆ ರೂಲ್ ೬೯ರ ಪ್ರಕಾರ ಕಾರಣಗಳನ್ನು ಕೊಟ್ಟಿಲ್ಲ ಎಂದು ನಮ್ಮ ಕಛೇರಿಯಿಂದ ತಮಗೆ ಜವಾಬನ್ನು ಕಳುಹಿಸಿಕೊಡಲಾಗಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ಅದು ನನಗೆ ತಲುಪಿಲ್ಲ.

ಅಧ್ಯಕ್ಷರು.—ತಮ್ಮ ರೂಮಿಗೆ ಆ ಕಾಗದ ಹೋಗಿರಬಹುದು.

(ii) Re. *Arrest of persons who came to seek employment in Gulbarga.*

ಶ್ರೀ ಎಂ. ಎಸ್. ಕೃಷ್ಣನ್.—ನಾನು ೩೦೨ನೇ ರೂಲ್ ಪ್ರಕಾರ ತಮಗೆ ಒಂದು ನೋಟೀಸನ್ನು ಗುಲ್ಬರ್ಗದಲ್ಲಿ ನಡೆದಿರುವ ಘಟನೆಯ ಬಗ್ಗೆ ಕಳಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ತಾವು ಕಳಿಹಿಸಿರುವುದು ನನಗೆ ಗೊತ್ತು. ಅದನ್ನು ಮುಖ್ಯಮಂತ್ರಿಗಳಿಗೆ ಕಳಿಸಿಕೊಟ್ಟಿದ್ದೇನೆ. ಅವರು ಅದರ ಬಗ್ಗೆ ಒಂದು ಕಾಂಪ್ರಹೆನ್ಸಿವ್ ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯಮಂತ್ರಿಗಳು ದುಷ್ಕಾಳ ಪರಿಸ್ಥಿತಿಯ ಬಗ್ಗೆ ಸ್ಟೇಟ್‌ಮೆಂಟ್ ಮಾಡಬಹುದು. ಆದರೆ ನಾನು ಕಳಿಸಿರುವ ನೋಟೀಸ್ ಬೇರೆ ಗುಲ್ಬಗದಲ್ಲಿ ೫-೬ ಸಾವಿರ ಜನರು ಕೆಲಸ ಕೊಡಿ ಎಂದು ಕೇಳುವುದಕ್ಕೆ ಬಂದಾಗ ಅಧಿಕಾರಿಗಳು ಅವರ ಬಗ್ಗೆ ಯಾವ ರೀತಿ ವರ್ತನೆ ಮಾಡಿದ್ದಾರೆಂಬುವರ ಬಗ್ಗೆ ನಾನು ನೋಟೀಸ್ ಕಳಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ಅದನ್ನು ಮುಖ್ಯಮಂತ್ರಿಗಳಿಗೆ ಕಳಿಸಿಕೊಟ್ಟಿದ್ದೇನೆ. ಅದಕ್ಕೂ ಅವರು ಉತ್ತರ ಕೊಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಹಸಿದು ಬಂದಂಥ ರೈತರು ಕೆಲಸ ಕೇಳಿದರೆ ಅವರಿಗೆ ಅಧಿಕಾರಿಗಳ ಸರಿಯಾದಂಥ ಉತ್ತರ ಕೊಡದೆ ಸುಮಾರು ೩೦೦ ಜನರನ್ನು ಅರೆಸ್ಟ್ ಮಾಡಿದ್ದಾರೆ. ಪತ್ರಿಕೆಯಲ್ಲಿ ಬಂದಿರುವ ವಿಚಾರವನ್ನು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಅದರ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮುಖ್ಯಮಂತ್ರಿಗಳು ಉತ್ತರ ಕೊಡುಹಾಗಿದ್ದರೆ. ಸಂತೋಷ.

(iii) Re *Affair of Vanitasevasamaj, Hubli*

ಶ್ರೀ ಬಿ. ವಿ. ಕಕ್ಕಿಲ್ಲಾಯ.—ನಾನು ಸಹ ಒಂದು ನೋಟೀಸನ್ನು ಹುಬ್ಬಳ್ಳಿಯ ವನಿತಾ ಸೇವಾ ಸಮಾಜದ ಬಗ್ಗೆ ಕಳಿಸಿಕೊಟ್ಟಿದ್ದೇನೆ. ಅಲ್ಲಿ ಕೆಲಸ ಮಾಡುತ್ತಿರುವ ಹೆಣ್ಣುಮಕ್ಕಳಿಗೆ ತುಂಬಾ ಅನ್ಯಾಯವಾಗುತ್ತಿದೆಯೆಂದು ಆ ಸಮಾಜದ ಆಜೀವ ಸದಸ್ಯರೊಬ್ಬರು ನನಗೆ ಪತ್ರ ಬರೆದು ತಿಳಿಸಿದ್ದಾರೆ. ಅದೇ ಪತ್ರಿಕೆಗಳಲ್ಲಿಯೂ ಸಹ ಬಂದಿದೆ. ಸರ್ಕಾರದವರು ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಅನ್ನ ಸತ್ಯಾಗ್ರಹ ಮಾಡುತ್ತೇವೆಂದು ಬಹಿರಂಗ ಹೇಳಿಕೆ ಕೊಟ್ಟಿದ್ದಾರೆ. ಪತ್ರಿಕೆಯಲ್ಲಿ ಬಂದಿರುವುದನ್ನೆಲ್ಲಾ ನಾನು ಓದುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ಸರ್ಕಾರದವರು ಅಲ್ಲಿ ಯಾವ ಅವಾಂತರವೂ ಆಗದ ಹಾಗೆ ಮತ್ತು ಸಮಾಜ ಚೆನ್ನಾಗಿ ನಡೆಯುವ ಹಾಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರದ ಗಮನವನ್ನು ನಾನು ಸೆಳೆಯುತ್ತೇನೆ.

2-30 P. M.

ಅಧ್ಯಕ್ಷರು.—ಹುಬ್ಬಳ್ಳಿಯ ವನಿತಾಸೇವಾ ಸಮಾಜದ ನಡೆದ ವಿಚಾರ ಇಲ್ಲಿ ಏತಕ್ಕೆ ಬರಬೇಕು ಎಂಬುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಎಲ್ಲರಿಗೂ ಗೊತ್ತಿದೆ, ನನಗೂ ಈ ಬಗ್ಗೆ ಪತ್ರ ಬಂದಿದೆ.

ಅಧ್ಯಕ್ಷರು.—ತಾವುಗಳೆಲ್ಲರೂ ಈ ಬಗ್ಗೆ ಇಷ್ಟೊಂದು ಆಸಕ್ತಿ ವಹಿಸಿದರೆ ಬಹಳ ಸಂತೋಷ.

ಶ್ರೀ ಡಿ. ಕೆ. ನಾಯ್ಕರ್.—ಈ ಬಗ್ಗೆ ಯೋಗ್ಯವಾದ ಮಾಹಿತಿಯನ್ನು ಸಂಗ್ರಹಣೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಾಪುಗೌಡ.—ಸ್ವಾಮಿ ಹುಮ್ನಾಬಾದಿನ ತಾಲ್ಲೂಕಿನಲ್ಲಿ ಸೂರ್ಯಭಾನು ಪ್ರತಾಪ್‌ರಾವ್ ಎನ್ನುವವರು ಸೂಯಿಸೈಡ್ ಮಾಡಿಕೊಂಡಿರುವ ಬಗ್ಗೆ ಪೋಲೀಸ್ ಎನ್‌ಕ್ವೈರಿ ನಡೆಯುತ್ತಿದೆ, ಅದನ್ನು ತಿಳಿದು ಹೇಳುತ್ತೇವೆ ಎಂದು ಸರ್ಕಾರದವರು ಹೇಳಿದ್ದರು.

ಅಧ್ಯಕ್ಷರು.—ಆ ಬಗ್ಗೆ ಆಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ.

(iv) re: Land Grant Committee.

ಶ್ರೀ ಎಚ್. ಎಸ್. ಸಿದ್ದಪ್ಪ.—ಸ್ವಾಮಿ, ಮಾನ್ಯ ರೆವಿನ್ಯೂ ಮಂತ್ರಿಗಳು ಲ್ಯಾಂಡ್ ರೆವಿನ್ಯೂ ಕಮಿಟಿಯನ್ನು ಮಾಡಿ ಯಾರು ಯಾರಿಗೆ ಜಮೀನು ಇಲ್ಲವೋ ಅವರೆಲ್ಲರಿಗೂ ಮತ್ತು ಇತರ ಬಡಬಗ್ಗರಿಗೂ ಜಮೀನು ಕೊಡುತ್ತೇವೆ ಎಂದು ಹೇಳಿದ್ದರು. ಅದು ಎಲ್ಲಿಯವರೆಗೆ ಬಂದಿದೆ. ಏತಕ್ಕೆಂದರೆ ಈಗ ಅಧಿಕಾರಿಗಳು ಏನು ಜಮೀನು ವಿಲೇವಾರಿ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸಿ, ಈಗ ದರಖಾಸ್ತು ಜಮೀನಿಗಾಗಿ ಬಂದಿರುವ ಸಾವಿರಾರು ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕು. ರಾಜ್ಯಪಾಲರ ಕಾಲದಲ್ಲಿ ಅಧಿಕಾರಿಗಳಿಂದ ಕೂಡಿದ ಲ್ಯಾಂಡ್‌ಗ್ರ್ಯಾಂಟ್ ಕಮಿಟಿಯನ್ನು ಏನು ಮಾಡಿದ್ದರು, ಅದನ್ನು ಅಬಾಲಿಷ್ ಮಾಡಿ, ಅವರು ಈಗ ಏನು ಅನ್ಯಾಯ ಮಾಡುತ್ತಿದ್ದಾರೆ ಅದನ್ನು ತಡೆಗಟ್ಟಬೇಕೆಂದು ಮಾನ್ಯ ರೆವಿನ್ಯೂ ಮಂತ್ರಿಗಳು ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ನಾನು ಮೊದಲೇ ಹೇಳಿದ ಹಾಗೆ ಅದು ಗೆಜೆಟ್‌ನಲ್ಲಿ ಪಬ್ಲಿಷ್ ಆಗಬೇಕಾಗಿದ್ದರಿಂದ ಜಮೀನು ಹಂಚಿಕೆ ಸಮಿತಿಗಳ ರಚನೆ ಒಂದು ತಿಂಗಳು ತಡವಾಯಿತು. ಈಗ ಆ ಕಮಿಟಿಯಲ್ಲಿ ಯಾರು ಯಾರು ಇರಬೇಕು ಎಂಬುದನ್ನು ತೀರ್ಮಾನ ಮಾಡಿದ್ದೇವೆ ಸೋಮವಾರ ಅಥವಾ ಮಂಗಳವಾರ ಅವುಗಳನ್ನು ಅನೌನ್ಸ್ ಮಾಡುತ್ತೇನೆ.

ಶ್ರೀ ಕೋಣಂದೂರ್‌ಲಿಂಗಪ್ಪ.—ಲ್ಯಾಂಡ್ ಗ್ರ್ಯಾಂಟ್ ಕಮಿಟಿಯನ್ನು ರಚನೆ ಮಾಡುವಾಗ ಖಾಸಗಿಯವರು ಮತ್ತು ಶಾಸನ ಸಭಾ ಸದಸ್ಯರ ಸಲಹೆಗಳನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಲ್ಲರೂ ಸಲಹೆ ಕೊಟ್ಟಿದ್ದಾರೆ. ಯಾರಾದರೂ ಸಲಹೆ ಕೊಡದೇ ಇರುವವರು ಇದ್ದರೆ ಅವರು ಸಲಹೆಯನ್ನು ಕೊಡಬಹುದು.

SRI D. DEVRAJ URS.—The members of the legislature are bound to be there. I think the Taluk Board Presidents are going to be there. The Scheduled Castes members will be there. The Hon. Members are free to offer their suggestions. The Government will consider the suggestions given by the Hon. Members belonging to any party. The Government will certainly consider their suggestions.

SRI H. S. SIDDAPPA.—It is a mistake that the Tahsildar is the Chairman of the Committee.

SRI D. DEVRAJURS.—It is not a mistake.

(v) re: Affairs of the Ideal Co-operative Society

ಶ್ರೀ ಕಾಗೋಡುತಿಮ್ಮಪ್ಪ.—ನಾನು ಒಂದು ಕಾಲ್‌ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಐಡಿಯಲ್ ಕೋ ಆಪರೇಟಿವ್ ಸೊಸೈಟಿಯಲ್ಲಿ ಸುಮಾರು ೫೦ ಲಕ್ಷ ರೂಪಾಯಿ ದುರುಪಯೋಗವಾಗಿದೆ.

ಅಧ್ಯಕ್ಷರು.—ನಮ್ಮ ಹತ್ತಿರ ಒಂದು ಸಾವಿರ ಕಾಲ್‌ಅಟೆನ್‌ಷನ್ ನೋಟೀಸ್‌ಗಳು ಇವೆ. ಹಿಂದೆ ಒಂದು ದಿವಸಕ್ಕೆ ಒಂದು ಕಾಲ್‌ಅಟೆನ್‌ಷನ್ ನೋಟೀಸ್ ಮಾತ್ರ ತೆಗೆದುಕೊಳ್ಳಲಾಗುತ್ತಿತ್ತು. ಈಗ ಒಂದು ದಿವಸಕ್ಕೆ ೩–೪ ಕಾಲ್‌ಅಟೆನ್‌ಷನ್ ನೋಟೀಸ್ ತೆಗೆದುಕೊಳ್ಳುತ್ತಿದ್ದೇವೆ. ಈ ಬಗ್ಗೆ ಅನೇಕ ಸಾರಿ ಶ್ರೀ ಸೈನಕ್ ಅವರು ಅಬ್ಜಕ್ಷನ್ ರೈಜ್ ಮಾಡಿದ್ದಾರೆ.

SRI B. B. SAYANAK.—I have pointed out the rules of procedure. Why do you drag my name ?

MADAM SPEAKER.—From next time onwards I assure the hon. member that only one calling attention will be taken.

ಶ್ರೀ ಕಾಗೋಡು ತಿಮ್ಮಪ್ಪ.—೪೦೦ ಜನ ಸದಸ್ಯರಿರುವ ಒಂದು ಸೊಸೈಟಿಯಲ್ಲಿ ಸುಮಾರು ೫೦ ಲಕ್ಷ ರೂಪಾಯಿ ದುರುಪಯೋಗವಾಗಿದೆ.

SRI D. DEVRAJ URS —The matter is under enquiry. There appears to be a *prima facie* ase in regard to its mismanagement of funds and other things. An enquiry is going on.

ಶ್ರೀ ಜಿ. ಪುಟ್ಟಸ್ವಾಮಿ.—ಚಿಕ್ಕಮಗಳೂರಿನಲ್ಲಿರುವ ಫಸ್ಟ್‌ಗ್ರೇಡ್ ಕಾಲೇಜಿನಲ್ಲಿ ಲೆಕ್ಚರರ್ಸ್ ಇಲ್ಲ. ಬಹಳ ತೊಂದರೆಯಾಗಿದೆ. ಈ ಬಗ್ಗೆ ನಾನು ಒಂದು ಕಾಲ್‌ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ಕಾಲ್ ಅಟೆನ್‌ಷನ್ ನೋಟೀಸ್‌ಗಳ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ.

(vi) re: Elections of Taluk Development Boards.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆ. ಈ ಸಾಲಿನ ಅಕ್ಟೋಬರ್ ನವಂಬರ್ ತಿಂಗಳಿನಲ್ಲಿ ನಡೆಯುತ್ತದೆ ಎಂದು ಮೊದಲು ಸರ್ಕಾರದವರು ತಿಳಿಸಿದ್ದರು. ಇತ್ತೀಚೆಗೆ ಆ ಚುನಾವಣೆಗಳನ್ನು ಮುಂದೂಡುತ್ತಾರೆ ಎಂಬುದು ಎಲ್ಲರ ಗಮನಕ್ಕೆ ಬಂದಿದೆ. ಈ ರೀತಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆಯನ್ನು ಮುಂದೂಡಿ ಈಗ ಇರತಕ್ಕ ತಾಲ್ಲೂಕು ಅಭಿವೃದ್ಧಿ ಮಂಡಲಿಗಳನ್ನು ರದ್ದು ಮಾಡಿ ಅವುಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುತ್ತಾರೆ ಎಂದು ವರ್ತಮಾನ ಬಂದಿದೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿದ್ದಾರೆ. ಅವರು ಈ ಬಗ್ಗೆ ಸ್ಪಷ್ಟೀಕರಣ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ !—ಮಾನ್ಯ ಅಧ್ಯಕ್ಷರೇ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದಕ್ಕೆ ಯಾವ ಆಧಾರವೂ ಇಲ್ಲ. ಅದು ಎಲ್ಲಾ ಊಹಾಪೋಹದ ಮಾತು ಯಾವರೀತಿಯಿಂದಲೂ ಆ ಚುನಾವಣೆಗಳನ್ನು ಮುಂದೂಡುವುದಾಗಲೀ, ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡುವುದಾಗಲೀ, ಸರ್ಕಾರದ ಯೋಚನೆಯಲ್ಲಿಲ್ಲ. ಒಂದು ತಿಂಗಳು ಹೆಚ್ಚು ಕಡಿಮೆ ಆಗಬಹುದು. ಆದರೆ ಚುನಾವಣೆಗಳನ್ನು ಮುಂದೂಡುವ ಉದ್ದೇಶ ನಮಗೆ ಇಲ್ಲ.

VII. Hunger Strike by Chairman and Members of that Housing Society at Bijapur.

ಶ್ರೀ ಎಚ್. ಡಿ. ದೇವೇಗೌಡ :—ಬಿಜಾಪುರ ಸಿಟಿಯೊಳಗೆ ಮುನಿಸಿಪಲ್ ಎಂಪ್ಲಾಯೀಸ್ ಹರಿಜನ ಕೋಆಪರೇಟಿವ್ ಹೌಸಿಂಗ್ ಸೊಸೈಟಿ–ಇವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಜಮೀನನ್ನು ಕೊಟ್ಟಿರುತ್ತಾರೆ ಅದರ ಬಗ್ಗೆ ಸುಮಾರು ೭೩೦೦ ರೂಪಾಯಿಗಳನ್ನು ಲ್ಯಾಂಡ್ ಅಕ್ವಿಸಿಷನ್ ಚಾರ್ಜಸ್‌ಗೋಸ್ಕರ ಅವರು ತುಂಬಿದ್ದಾರೆ. ಹಿಂದಿನ ಸರ್ಕಾರದವರು ಇವರಿಗೆ ನಿವೇಶನಗಳನ್ನು ಕೊಟ್ಟು ಅದಕ್ಕೆ ತುಂಬಿಸಬೇಕಾದ ಹಣವನ್ನು ತುಂಬಿಸಿದ್ದಾರೆ. ಈ ಮಧ್ಯೆ ಎರಡು ಕಾಂಗ್ರೆಸ್ ಆದ ನಂತರ ಅಲ್ಲಿ ತಕರಾರು ಬಂದಿದೆ. ಅವರು ಜಿಲ್ಲಾಧಿಕಾರಿಗಳ ಮುಂದೆ ಅಪೀಲ್ ಹೋಗಿದ್ದಾರೆ. ಅಪೀಲ್ ಹೋದಾಗ ಜಮೀನು ಅವರಿಗೆ ಕೊಟ್ಟದ್ದು

ಶ್ರೀ ಹೆಚ್. ಡಿ. ದೇವೇಗೌಡ .—

ಸರಿ, ಪೊಸೆಶನ್ ಕೊಟ್ಟಿದ್ದು ಸರಿ ಎಂದು ಹೇಳಿದ್ದಾರೆ. ಆಮೇಲೆ ಡಿವಿಜನಲ್ ಕಮೀಷನರ್, ಬೆಳಗಾಂ ಇವರಲ್ಲಿ ಸಹ ಅಪೀಲ್ ಹೋದಾಗ ಡೆಪ್ಯೂಟಿ ಕಮೀಷನರ್ ಹೇಳಿದ್ದು ಸರಿಯೆಂದು ಹೇಳಿದ್ದಾರೆ. ಆದರೆ ಆ ಜಾಗದಲ್ಲಿ ಬೇರೆ ಯಾರೋ ಹೋಗಿ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಹಾಗೆ ಗುಡಿಸಲುಗಳನ್ನು ಹಾಕಿಕೊಂಡಂತಹ ಜನರಿಗೆ ಪ್ರೊಟೆಕ್ಷನ್ ಕೊಡುವ ರೀತಿಯಲ್ಲಿ ಅವರನ್ನು ಅಲ್ಲಿಂದ ಬಿಡಿಸಿಲ್ಲ. ಮತ್ತು ಹರಿಜನ ಕೋಪರೇಟಿವ್ ಸೊಸೈಟಿಯವರಿಗೆ ಮನೆ ಕಟ್ಟಿಸಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿಲ್ಲ. ಇದರ ಪರಿಣಾಮವಾಗಿ ಸೊಸೈಟಿ ಸದಸ್ಯರು ಜಿಲ್ಲಾಧಿಕಾರಿ ಆಫೀಸಿಗೆ ಹೋಗಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅದರ ಬಗ್ಗೆ ತಮಗೂ ಟೆಲಿಗ್ರಾಂ ಬಂದಿರಬಹುದು, ನನಗೂ ಬಂದಿದೆ ಆದ್ದರಿಂದ ದಯವಿಟ್ಟು ಆ ಪರಿಸ್ಥಿತಿಯನ್ನು ಶಮನ ಮಾಡುವುದಕ್ಕೋಸ್ಕರ ಇದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಂಡು ಆ ಸೊಸೈಟಿ ಜನರಿಗೆ ಮನೆ ಕಟ್ಟಿಸುವುದಕ್ಕೆ ಜಾಗವನ್ನು ಬಿಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್ ಹುಚ್ಚಮಾಸ್ತಿಗೌಡ :—ಮಾನ್ಯ ಅಧ್ಯಕ್ಷರೆ, ಬಿಜಾಪುರದಲ್ಲಿ ಅಡ್ವರ್ಟ್ ಪಾರ್ಕ್ ಎಂಬ ಒಂದು ಸ್ಥಳ ಇದೆ. ಆ ಸ್ಥಳ ಮುನಿಸಿಪಲ್ ಕೌನ್ಸಿಲ್‌ಗೆ ಸೇರಿದ್ದು. ಆ ಜಾಗವನ್ನು ಹರಿಜನ ಮುನಿಸಿಪಲ್ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಯವರಿಗೆ ಕೊಟ್ಟಿದ್ದರು. ಅಲ್ಲಿ ಮಾನಗರಡಿ ಜನರು ಎಂಬ ಒಂದು ಪಂಗಡ ಇದೆ. ಆ ಜನರು ಅದನ್ನು ನಮಗೆ ಕೊಡಬೇಕೆಂದು ಅಪೀಲ್ ಮಾಡಿದರು. ಆಮೇಲೆ ಮಾನಗರಡಿ ಜನರು ಡಿಪ್ಯೂಟಿ ಕಮಿಶನರಿಗೆ ಅಪೀಲು ಮಾಡಿದರು. ಅವರು ಅದನ್ನು ತಿರಸ್ಕಾರ ಮಾಡಿದರು. ಆಮೇಲೆ ಅವರು ಡಿವಿಜನಲ್ ಕಮೀಶನರಿಗೆ ಅಪೀಲ್ ಮಾಡಿದರು. ಅವರು ಸಹ ಅದನ್ನು ತಿರಸ್ಕಾರ ಮಾಡಿದರು. ಇದೆಲ್ಲಾ ಆದ ಮೇಲೆ ಡಿಪ್ಯೂಟಿ ಕಮಿಶನರ್ ಅವರಿಗೆ ಬೆರೆಯೇ ಜಾಗವನ್ನು ಕೊಡುತ್ತೇವೆಂದು ತಿಳಿಸಿದ್ದಾರೆ. ಈ ಮಾನಗರಡಿ ಜನರು ಎಕ್ಸ್-ಕ್ರಿಮಿನಲ್ ಟ್ರೈಬ್ಸ್‌ಗೆ ಸೇರಿದಂತಹ ಜನರು. ಈಗ ಮೊದಲು ಕೊಟ್ಟಂತಹ ಹರಿಜನ ಕೋಪರೇಟಿವ್ ಸೊಸೈಟಿಗೆ ಸೈಟುಗಳನ್ನು ವಿಂಗಡಿಸಿ ಕೊಡಬೇಕಾಗಿತ್ತು. ಅದನ್ನು ಡಿಪ್ಯೂಟಿ ಕಮಿಶನರ್ ಮತ್ತು ಡಿವಿಜನಲ್ ಕಮಿಶನರ್ ಒಪ್ಪಿದ್ದಾರೆ. ಇದರ ಮೇಲೆ ಆ ಮಾನಗರಡಿ ಜನರು ಅಲ್ಲಿ ಸುಮಾರು ೯೨ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಅವರಿಗೆ ಬೇರೆ ಜಾಗಗಳನ್ನು ಕೊಡುತ್ತೇವೆ, ಇದನ್ನು ಬಿಡಿ ಎಂದು ಹೇಳಿದರೂ ಕೂಡ ಅವರು ಬಿಡದೆ ಇದ್ದಾರೆ. ಈ ಮಧ್ಯೆ ಇವರು ಸಹ ಷೆಡ್ಯೂಲ್ ಕ್ಯಾಸ್ಟಿಗೆ ಸೇರಿದವರಾಗಿರುವುದರಿಂದ ಲ್ಯಾಂಡ್ ಗ್ರಾಂಟ್ ರೂಲ್ಸ್ ೧೦ನೇ ವಿಧಿಯ ಪ್ರಕಾರ ಪಿನಾಯಿಂತಿ ಮಾಡಿ ಅವರಿಗೂ ಉಚಿತವಾಗಿ ಸೈಟುಗಳನ್ನು ವಿಂಗಡಣೆ ಮಾಡಿಕೊಡಬೇಕೆಂದು ನಂ. ೯೪೭–೨, ಮತ್ತು ೭೪೭-ಎ ಈ ಜಾಗಗಳನ್ನು ಗೊತ್ತು ಮಾಡಲಾಗಿದೆ. ಈ ಸೈಟ್ ಸೋಶಿಯಲ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಸೇರಿದ್ದು. ಈ ಮಧ್ಯೆ ಜಿಲ್ಲಾಧಿಕಾರಿಯ ಆಫೀಸ್ ಮುಂದೆ ಏನು ಈ ಹರಿಜನ ಕೋಆಪರೇಟಿವ್ ಸೊಸೈಟಿ ಸದಸ್ಯರು ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರಿಗೆ ಅದೇ ಜಾಗವನ್ನು ಖಾಯಂ ಮಾಡಿ ಕೊಡುತ್ತೇವೆಂದು ಹೇಳಿದ್ದೇವೆ. ಆದ್ದರಿಂದ ಕೂಡಲೇ ಸೋಷಿಯಲ್ ವೆಲ್‌ಫೇರ್ ಇಲಾಖೆಯಿಂದ ಸೈಟ್ ತೆಗೆದುಕೊಂಡು ಆ ಮಾನಗರಡಿ ಜನರಿಗೆ ಕೊಟ್ಟು, ಈ ಹರಿಜನರಿಗೆ ಅದೇ ಜಾಗವನ್ನು ಕೊಡುವುದಕ್ಕೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಎಲ್. ಕಬಾಡಿ :— ಅಲ್ಲಿ ಮೊದಲು ಸ್ಟೇಡಿಯಂ ಕಟ್ಟಬೇಕೆಂದು ಜಾಗವನ್ನು ಅಕ್ವಯರ್ ಮಾಡಿಕೊಂಡಿದ್ದರು. ಆಗ ಹರಿಜನರು ಅಲ್ಲಿ ಹಾಕಿದ ಮನೆಗಳನ್ನು ಕಿತ್ತುಹಾಕಿದ್ದರು ಅದನ್ನು ಕಿತ್ತುಹಾಕಬೇಡಿ ಎಂದು ನಾವು ಸ್ಟೇ ತಂದಿದ್ದೇವೆ. ಪುನಃ ಕಿತ್ತುಹಾಕುವಾಗ ಎಸ್ ಪಿ, ಯವರಿಗೆ ದೂರು ಕೊಟ್ಟಿದ್ದಾರೆ ಅದರ ಮೇಲೆ ಜಿಲ್ಲಾಧಿಕಾರಿಗಳು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು ಆದರೆ ಇಲ್ಲಿಯವರೆಗೂ ಏನೂ ಮಾಡಿಲ್ಲ. ಈಗ ಸರ್ಕಾರದಿಂದ ಆದೇಶ ಬರದೆ ಆ ಜಾಗವನ್ನು ಬಿಟ್ಟುಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ, ಇದನ್ನು ತಾವು ಬಂದಾಗ ತಮ್ಮ ಸಮ್ಮುಖದಲ್ಲಿಯೇ ಮಾತನಾಡಿದ್ದೇನೆ ಆದ್ದರಿಂದ ಅವರು ತಮ್ಮಿಂದ ಆದೇಶ ಬರುವವರೆಗೆ ಕಾಯಬೇಕಾಗಿದೆ. ಆದ್ದರಿಂದ ಅದನ್ನು ತಾವು ಆದಷ್ಟು ಬೇಗ ಅವರಿಗೆ ತಿಳಿಸಿ ಅವರಿಗೆ ಆ ಜಾಗವನ್ನು ಕೊಡುವ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತೀಗೌಡ :—ನನಗೆ ಗೊತ್ತಿರುವ ವಿಚಾರದ ಪ್ರಕಾರ ಮುನಿಸಿಪಲ್ ಮಾಸ್ಟರ್ ಪ್ಲಾನಿನಲ್ಲಿ ಮುನಿಸಿಪಲ್ ಎಂಪ್ಲಾಯೀಸ್‌ಗೆ ಕೊಡಬೇಕೆಂದು ಇದನ್ನು ಇಟ್ಟು ಕೊಂಡಿದ್ದಾರೆ. ಸ್ಟೇಡಿಯಂಗೆ ಕೊಡುವ ಉದ್ದೇಶವಲ್ಲ. ಡಿಪ್ಯೂಟಿ ಕಮೀಷನರ್ ಮತ್ತು ಡಿವಿಜನಲ್ ಕಮೀಷನರ್ ಇದರ ಬಗ್ಗೆ ನಿರ್ದಿಷ್ಟವಾದ ತೀರ್ಮಾನ ಮಾಡಿದ್ದಾರೆ ಇನ್ನೊಂದು ಪಂಗಡದ ಜನರಿಗೂ ಬೇರೆ ಸೈಟ್ ಕೊಡಬೇಕೆಂದು ತೀರ್ಮಾನವಾಗಿದೆ. ಅದನ್ನು ಸೋಷಿಯಲ್ ವೆಲಫೇರ್ ಇಲಾಖೆಯಿಂದ ಕೂಡಲೇ ತೆಗೆದುಕೊಂಡು ಅವರಿಗೆ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ :— ತಾವು ಆದೇಶ ಕೊಟ್ಟರೆ, ಅವರು ಕೂಡಲೇ ಬಿಡಿಸಿ ಕೊಡುತ್ತಾರೆ

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಅದರ ಬಗ್ಗೆ ಕೂಡಲೇ ಈ ದಿವಸವೇ ಡಿಪ್ಯೂಟಿ ಕಮಿಶನರಿಗೆ ತಿಳಿಸಿ ಆ ಸೈಟನ್ನು ಹಂಚಿ ಕೊಡುವ ವ್ಯವಸ್ಥೆ ಮಾಡುತ್ತೇವೆ ಮತ್ತು ಅಲ್ಲಿರತಕ್ಕಂತ ಜನರಿಗೆ ಬೇರೆ ಸೈಟ್ ಕೊಡುವುದಕ್ಕೆ ತಿಳಿಸುತ್ತೇವೆ.

(viii) re: assualt of people in Bhadravati.

‡ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಭದ್ರಾವತಿಯಲ್ಲಿ ನಡೆದ ಪೋಲೀಸ್ ಎಕ್ಸೆಸ್ ಬಗ್ಗೆ ನಾನು ಒಂದು ನೋಟೀಸ್ ಕಳಿಸಿದ್ದೆ. ಅಲ್ಲಿ ಇರತಕ್ಕಂತಹ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಅವರು ೧೨ನೇ ತಾರೀಕಿನ ದಿವಸ ಪಾಲಿಟೆಕ್ನಿಕ್ ವಿದ್ಯಾರ್ಥಿಗಳ ಸಂಬಂಧದಲ್ಲಿ ಜನರನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಇವೊತ್ತಿನ ದಿವಸ ಇಲ್ಲಿ ಸೆಕ್ಷನ್ ೧೪೪ ಜಾರಿ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ೧೨ನೇ ತಾರೀಖು ರಾತ್ರಿ ನಿಮ್ಮ ಫ್ಯಾಕ್ಟರಿ ವರ್ಕರ್ಸ್ ಒಬ್ಬೊಬ್ಬರನ್ನು ಮನೆಯಿಂದ ಹಿಡಿದುಕೊಂಡು ಬಂದು ಸಿಕ್ಕಾಬಟ್ಟೆ ಒದ್ದಿದ್ದಾರೆ. ಆ ಭೀತಿ ಹೊತ್ತಿಕೊಂಡ ಪಾರ್ಟಿಯವರು ಇಲ್ಲಿಗೆ ಬಂದಿದ್ದರು. ರಕ್ತದ ಗುರುತು, ಹಾಗೂ ಮೈಮೇಲೆ ಗಾಯಗಳು ಇದ್ದುವು. ಮುಖ್ಯಮಂತ್ರಿಗಳನ್ನು ಸಾಧ್ಯವಾದರೆ ನೋಡಿ ಎಂದು ಹೇಳಿದೆ. ಇದರಲ್ಲಿ ಯಾವ ರಾಜಕೀಯ ಬಣ್ಣ ಬೇಡ. ನೀವೇ ಖುದ್ದು ಹೋಗಿ ನೋಡಿ; ನನಗೆ ಗೊತ್ತಿರುವ ಪ್ರಕಾರ ರಾಜಕೀಯ ಕೈವಾಡ ಇದೆಯೆಂದು ಕೇಳಿದ್ದೇನೆ. ಅಲ್ಲಿ ಸ್ಥಳೀಯ ರಾಜಕಾರಣಿಗಳ ಗುಂಪು ಒಂದು ಕಡೆ. ಮುನಿಸಿಪಲ್ ಪ್ರೆಸಿಡೆಂಟರ ಕಡೆಯ ಗುಂಪು ಒಂದು ಕಡೆ. ಆ ಘಟ್ಟಕ್ಕೆ ಕಾಂಗ್ರೆಸ್ (ಆರ್) ಮತ್ತು ಕಾಂಗ್ರೆಸ್ (ಓ) ಬಂದಿದ್ದಾರೆಂದು ಹೇಳಿದರು. ಅದರ ಪರಿಸ್ಥಿತಿ ನನಗೂ ಗೊತ್ತಿಲ್ಲ. ನನ್ನ ಹತ್ತಿರ ಮಾಹಿತಿ ಇಲ್ಲ. ಆದರೆ ನಿರಪರಾಧಿಗಳಾದ ವರ್ಕರ್ಸ್‌ಗೆ ರಾಜಕೀಯ ಮುಖಂಡರ ಪ್ರಭಾವದಿಂದ ರಾತ್ರಿ ೧೧-೩೦ಕ್ಕೆ ಈ ಕಷ್ಟ ಬಂದಿದೆ. ಅವರು ನಿರಪರಾಧಿಗಳು. ಇದರಲ್ಲಿ ಸತ್ಯಾಂಶ ವಿದೆಯೆಂದು ಕೇಳಿದ್ದೇನೆ. ನನ್ನ ಕಣ್ಣಿನಿಂದ ನೋಡಿದ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ಯಾವ ಕಾರಣದಿಂದ ಆಗಿದೆಯೆಂಬುದನ್ನು ತಿಳಿದು ಪೋಲೀಸ್ ಅಧಿಕಾರಿಗಳಿಂದ ಅಲ್ಲಿ ಅಸಭ್ಯವರ್ತನೆ ನಡೆದಿದ್ದರೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ನನ್ನದೊಂದು ವಾಕ್ಯವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಈ ಸಂಭಂಧದಲ್ಲಿ ಮಾನ್ಯ ಸದಸ್ಯರ ಹತ್ತಿರ ಯಾರ್ಯಾರು ಬಂದಿದ್ದರೋ ಅವರೆಲ್ಲರೂ ನನ್ನ ಹತ್ತಿರವೂ ಸಹ ಬಂದಿದ್ದರು.

ಅಧ್ಯಕ್ಷರು.—ನಿಮ್ಮ ಹತ್ತಿರ ಬಂದಿದ್ದವರ ವಿಷಯವನ್ನು ಇಲ್ಲಿ ಹೇಳಬೇಕೇ ? ಅದಕ್ಕೆ ಸಮಾಧಾನ ಕರವಾದ ಜವಾಬು ಬಂದರೆ ಸರಿಯಿಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ಈಗ ಉತ್ತರ ಹೇಳುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಬೇರೆ ತರಹದಲ್ಲಿ ಕೆಲವರು ತಪ್ಪು ಮಾಡಿದರೆ, ಆ ಬಗ್ಗೆ ಪೋಲೀಸಿನವರು ಆಕ್ಷನ್ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ನಾನೇನೂ ಹೇಳುವುದಿಲ್ಲ. ನಿಜವಾಗಿ ತಪ್ಪು ಇಲ್ಲದಿದ್ದವರ ಬಗ್ಗೆ ಪೋಲೀಸಿನವರು ಅಸಭ್ಯ ವರ್ತನೆ ತೋರಿಸಿದ್ದರೆ, ಆ ಬಗ್ಗೆ ಪೋಲೀಸಿನವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ತಾವು ಈಗ ಈ ವಿಷಯ ಹೇಳಿದ್ದೀರಿ. ಬರೆದು ಕೊಟ್ಟಿದ್ದೀರಿ. ಇದರ ಬಗ್ಗೆ ನನಗೇನೂ ಮಾಹಿತಿ ಬಂದಿಲ್ಲ. ನನ್ನಲ್ಲಿ ಇದರ ಬಗ್ಗೆ ಯಾವ ದೂರೂ ಸಹ ನೇರವಾಗಿ ಬಂದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಈ ವಿಚಾರವಾಗಿ ಡೆಪ್ಯುಟಿ ಹೋಂ ಮಿನಿಸ್ಟರ್ ಅವರಿಗೂ, ಒಂದು ಕಂಪ್ಲೇಂಟ್ ಕೊಟ್ಟಿದೆ.

‡SRI D. DEVARAJ URS.—I have repeatedly stated on the floor of the house. I assure the hon. Leader of the Opposition and the House that I am not interested in this kind of low hitting politics. Simply because one person belongs to one group or political party, it is highly unfair on any body's part to take advantage because one is in power. If any such thing comes to my knowledge, I may tell you, I am not going to tolerate. Nor am I interested in doing such kind of things. I can assure the hon'ble Members about that. But at the same time

SRI D. DEVARAJ URS (Chief Minister)

I appeal to hon. Members: many a time the culprits want to give colour in order to escape. In this particular case, I do not know what the truth is. But just as you are relying on what has been told to you, you have been saying so and so is the cause. At the same time, I would like you Hon'ble Members to consider for a while that those who may be in fault may also come and tell you these things.—'we belong to a different party—so they want to take vengence. This way also people may give a twist. I would appeal to Hon'ble Members: let us not straight away believe these things. It has been brought to my notice. Without any kind of bias, whoever is in fault, I will try to take action

ಶ್ರೀ ಬಿ. ಪುಟ್ಟಸ್ವಾಮಯ್ಯ:—ಮಾನ್ಯ ಅಧ್ಯಕ್ಷರೇ, ಇದೇ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯದ ಕೆಲವು ಪೋಲೀಸ್ ಸ್ಟೇಷನ್ನುಗಳಲ್ಲಿ ಆಗಾಗ್ಗೆ ಈ ರೀತಿ ನಡೆಯುತ್ತಿರುತ್ತದೆ. ಪೂರ್ತಿ ವೇಳೆ ಸಬ್ ಇನ್‌ಸ್ಪೆಕ್ಟರುಗಳು ಅನೇಕ ಸ್ಟೇಷನ್ನುಗಳಲ್ಲಿ ಇಲ್ಲದೇ ಇರುವುದರಿಂದ ಕೆಲವುಅಕ್ರಮಗಳು ನಡೆಯುವುದಕ್ಕೆ ಕಾರಣವಾಗುತ್ತದೆ ಇದಕ್ಕೆಅವರ ದೌರ್ಬಲ್ಯವೇ ಕಾರಣ. ಎಲ್ಲಾ ಸ್ಟೇಷನ್ನುಗಳಲ್ಲಿಪೂರ್ತಿವೇಳೆ ಸಬ್ ಇನ ಸ್ಪೆಕ್ಟರ್ಸ್ ಇರಬೇಕು. ಅಲ್ಲಿ ಕೆಲಸ ಮಾಡುವ ಜನರು ಇರಬೇಕು. ಎಷ್ಟೋ ಕಡೆಗಳಲ್ಲಿ ಹೆಡ್ ಕಾನ್‌ಸ್ಟೇಬಲ್ಸ್ ಅವರ ಚಾರ್ಜಿನಲ್ಲಿರುತ್ತಾರೆ. ಕೆಲವು ಸಾರಿ ದೊಡ್ಡವರೇ ಅವರಿಂದ ಏಟು ತಿಂದು, ಅವರೇ ಫಿರ್ಯಾದು ಕೊಟ್ಟವರ ಹತ್ತಿರ ದುಡ್ಡು ತೆಗೆದು ಕೊಳ್ಳುತ್ತಾರೆ. ಹಿಡಿಯುವವರ ಹತ್ತಿರವೇ ದುಡ್ಡು ತೆಗೆದುಕೊಳ್ಳುತಾರೆ. ಇಂತಹ ಸಮಯದಲ್ಲಿ ಗೌರವ ತರತಕ್ಕ ಕಾರ್ಯ ಆಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಇಂತಹ ಸರ್ಕಾರ ದೂಷಣೆಗೆ ಒಳಗಾಗುತ್ತದೆ. ಆದ್ದರಿಂದ ಆಡಳಿತ ಸುವ್ಯವಸ್ಥೆಯಿಂದ ನಡೆಯಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಹೆಚ್, ಡಿ. ದೇವೇಗೌಡ.—ಅವರು ಹೇಳಿದ್ದು ಕೆಲವು ಸ್ಟೇಷನ್ನುಗಳಲ್ಲಿ ಸಬ್ ಇನ್‌ಸ್ಪೆಕ್ಟರ್ ತಾತ್ಕಾಲಿಕವಾಗಿ ಇರುವುದಿಲ್ಲವೆಂದು. ಆದರೆ ಚಾರ್ಜ್‌ನಲ್ಲಿರುವವರು ಅವರ ಕೆಲಸವನ್ನು ಚೆನ್ನಾಗಿ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿ ಫಿರ್ಯಾದು ಕೊಡುವುದಕ್ಕೆ ಹೋಗುವವರನ್ನೇ ಹಿಡಿದು ಕೊಂಡು ಹೊಡೆಯುತ್ತಾರೆ.

ಶ್ರೀ ಡಿ ದೇವರಾಜ್ ಅರಸ್.—ಮಾನ್ಯ ಶ್ರೀ ಲಿಂಗಪ್ಪನವರೇ, ಇದು ಹಳೆಯ ಚಾಳಿ. ಇದನ್ನು ಮೊದಲಿನಿಂದಲೂ ಕಲಿತುಕೊಂಡು ಬಂದಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನಿಲ್ಲಿಸುವುದಕ್ಕೆ ಏನಾದರೂ ಪ್ರಯತ್ನಮಾಡಿ.

ಶ್ರೀ ಡಿ. ದೇವರಾಜ್ ಅರಸ್.—ಅದಕ್ಕೆ ಪ್ರಯತ್ನ ಮಾಡೋಣ. ಬಹಳ ದಿವಸಗಳಿಂದಲೂ ಕಲಿತಿರುವ ಚಾಳಿ ಏಕ್‌ದಂ ಹೋಗುತ್ತದೆಯೋ ದೇವರು.

ಶ್ರೀ ಹೆಚ್. ಡಿ. ದೇವೇಗೌಡ.—ನಾಳೆಯ ದಿನ ಅಸೆಂಬ್ಲಿ ಮುಗಿಯುತ್ತದೆ. ಆದ್ದರಿಂದ ಸಭೆಯ ಕಾಲವನ್ನು ವ್ಯರ್ಥಾ ತೆಗೆದುಕೊಳ್ಳುವ ಉದ್ದೇಶ ನನಗೆ ಇಲ್ಲ. ನಾನು ಬಳ್ಳಾರಿ ಬ್ಯಾಂಕಿನ ವಿಷಯವಾಗಿ ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಅದೇನಾಯಿತೋ ಗೊತ್ತಿಲ್ಲ. ನಾವು ಒಂದು ನಿಯಮಾವಳಿಯ ಪರಿಮಿತಿಯೊಳಗೆ ನಡೆಯಬೇಕೆಂದು ತೀರ್ಮಾನ ಮಾಡಿ ಅದರಂತೆ ನಡೆಯುವ ಕಾಲದಲ್ಲಿ ಬಹಳ ಸಂಕಟ ಪರಿಸ್ಥಿತಿ ಇದೆ. ರೂಲ್ಸ್ ಪ್ರಕಾರ ಹೋದರೂ ಅದು ಚರ್ಚೆಗೆ ಬರುವುದಿಲ್ಲ. ಆದ್ದರಿಂದ ಈ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಆದಷ್ಟು ಜಾಗ್ರತೆಯಾಗಿ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು.—ಈಗ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಆ ಎರಡು ವಿಷಯಗಳ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಕಳುಹಿಸಿ. ಅವರು ಬಂದ ನಂತರ ಅದನ್ನು ಚರ್ಚೆಮಾಡಲು ಅವಕಾಶ ಮಾಡಿಕೊಡಬೇಕು.

MYSORE LAND REFORMS (AMENDMENT) BILL 1972 MOTION TO CONSIDER

Debate—Contd.

‡ಶ್ರೀ ಪಿ. ಎಂ. ಭಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷಿಣಿಯವರೇ, ಈ ಸದನದ ಮುಂದೆ ಕಂದಾಯ ಮಂತ್ರಿಗಳು ಇಟ್ಟಿರತಕ್ಕ ಈ ಕ್ರಾಂತಿಕರವಾದ ಬಿಲ್ಲಿನ ಬಗ್ಗೆ ಹಲಕೆಲವು ದೋಷಗಳಿವೆ. ಅವುಗಳನ್ನು ತಿದ್ದಿ, ಸರಿಪಡಿಸಿ ಪುನರಪಿ ಈ ಸದನದ ಮುಂದೆ ಈ ಬಿಲ್ಲನ್ನು ಇಟ್ಟರೆ ಒಳಿತಾಗಬಹುದು. ಬಡ ಜನರಿಗೂ ಸಹ ಕಲ್ಯಾಣವಾಗಬಹುದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

3-00 P. M.

ಇಲ್ಲಿ (೨)ನೇ ಕಲಂಗೆ ಸೂಚಿಸಿರತಕ್ಕ ತಿದ್ದುಪಡಿಯಲ್ಲಿ ೧೦ನೇ ಕಲಂ ಬಗ್ಗೆ ಹೇಳಿರತಕ್ಕ ವಿಷಯ ಅಂದರೆ ರೈತನು ವ್ಯವಸಾಯ ಮಾಡತಕ್ಕ ಭೂಮಿ ಆತನು ವಾಸಮಾಡತಕ್ಕ ಊರಿಗೆ ೧೬ ಕಿಲೋಮೀಟರು ಅಥವಾ ೧೦ ಮೈಲಿಗಳ ಫಾಸಲೆಯೊಳಗೇ ಇರಬೇಕು ಎಂದು ಏನು ಹೇಳಿದ್ದಾರೆ, ಈ ವಿವರಣೆ ಹಿಂದೆ ೧೯೬೧ರಲ್ಲಿ ಖಾಯಂ ಮಾಡಿದ ಶಾಸನದಲ್ಲಿ ಇರಲಿಲ್ಲ. ಹಾಗೇ ಆ ಮುಂಬೈ ಅಗ್ರಿಕಲಚ್ಚರ್ ಅಂಡ್ ಟೆನನ್ಸಿ ಆಕ್ಟ್-೧೯೪೮ರಲ್ಲಿ ಮಾಡಿದ್ದ ಖಾಯಿದೆಯಲ್ಲೂ ಇಂಥ ನಿರ್ಬಂಧವಿರಲಿಲ್ಲ. ಆದ್ದರಿಂದ ಈ ಖಾಯಿದೆ ಇಂದ ಈ ನಿರ್ಬಂಧವನ್ನು ತೆಗೆದು ಹಾಕಬೇಕೆಂದು ನಾನು ಸೂಚಿಸಬಯಸುತ್ತೇನೆ. ಈ ನಿರ್ಬಂಧ ಹಾಕಿದರೆ ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀ ಎಚ್. ಎಂ. ಚನ್ನಬಸಪ್ಪನವರು ಗ್ರಾಮಾಂತರ ಪ್ರದೇಶಗಳಿಗೆ ಒದಗಿಸಿರತಕ್ಕ ರೂರಲ್ ಕಮ್ಯುನಿಕೇಷನ್ ವ್ಯವಸ್ಥೆ ನಿರುಪಯುಕ್ತವಾಗುತ್ತದೆ. ಆದ್ದರಿಂದ ಈ ಮಸೂದೆಯಿಂದ ಈ ನಿರ್ಬಂಧವನ್ನು ತೆಗೆದು ಹಾಕಬೇಕು ಎಂದು ಸೂಚಿಸಬಯಸುತ್ತೇನೆ. ಪ್ರತಿಯೊಂದು ತಾಲ್ಲೂಕಿನಲ್ಲೂ ದೂರವನ್ನು ಗಮನಕ್ಕೆ ತೆಗೆದುಕೊಳ್ಳದೆ ಆ ಭೂಮಿ ಎಲ್ಲೇ ಇರಲಿ ಅದು ಮನೆಗೆ ಎಷ್ಟೇ ದೂರದಲ್ಲಿರಲಿ ಆ ವ್ಯವಸಾಯವನ್ನು ಪರ್ಸನಲ್ ಕಲ್ಟಿವೇಷನ್ ಎಂತಲೇ ಭಾವಿಸತಕ್ಕುದು ಎಂದು ಇದರಲ್ಲಿ ಅಡಕ ಮಾಡಬೇಕು.

ಇನ್ನು ಇದೇ (೨)ನೇ ಕಲಂಗೆ ಮಾಡಿರತಕ್ಕ ತಿದ್ದುಪಡಿಯಲ್ಲಿ ಕ್ಲಾಜ್ ೧೨ರಲ್ಲಿ "ಫ್ಯಾಮಿಲಿ" ಎಂದರೇನು ಎಂಬುದರ ವ್ಯಾಖ್ಯಾನ ಮಾಡಿದ್ದಾರೆ. ಅದರಲ್ಲಿ ಒಂದು ಕುಟುಂಬ ಎಂದರೆ-ಗಂಡ ಹೆಂಡತಿ ಮತ್ತು ಮೂರು ಜನ ಮೈನರ್ ಮಕ್ಕಳು ಅಂದರೆ ಅಪ್ರಾಪ್ತ ವಯಸ್ಕರು ಇಲ್ಲವೇ ಅಜ್ಞಾನ ವಯಸ್ಸಿನವರು ಇದ್ದರೆ ಇಂಥ ಕುಟುಂಬಕ್ಕೆ ಇರತಕ್ಕ ಪರಮಾವಧಿ ಭೂಮಿ ವಿಸ್ತೀರ್ಣ ೧೦ ಎಕರೆಗಳೆಂದು ನಿರ್ಧಾರಮಾಡಲಾಗಿದೆ ಆದರೆ ಕಲಂ ೬೩ರಲ್ಲಿ ಸೀಲಿಂಗಿನ ಪರಮಾವಧಿ ವಿಸ್ತೀರ್ಣವನ್ನು ಹೇಳುತ್ತಾ ಒಂದು ಕುಟುಂಬದಲ್ಲಿ ೫ಕ್ಕಿಂತ ಹೆಚ್ಚು ಜನರಿದ್ದರೆ ಪ್ರತಿಯೊಬ್ಬನಿಗೂ ಎರಡು ಯೂನಿಟ್ಟುಗಳ ಭೂಮಿಯನ್ನು ಅಂದರೆ ಎರಡು ಎಕರೆಗಳನ್ನು ಇಟ್ಟುಕೊಳ್ಳಬಹುದೆಂದು ಹಾಗೆ ಅದರ ಪರಮಾವಧಿ ೧೦ ಎಕರೆಗಳಿಗಿಂತ ಇಮ್ಮಡಿಯಾಗಿರಬೇಕೇ ವಿನಾ ಅದಕ್ಕೆ ಜಾಸ್ತಿ ಇರಕೂಡದೆಂದು ಹೇಳಿದೆ. ಆದರೆ ಇಲ್ಲಿ ಫ್ಯಾಮಿಲಿ ಎಂಬ ವ್ಯಾಖ್ಯೆಯಲ್ಲಿ ಇದೇ ವಿಚಾರವನ್ನು ವಿವರವಾಗಿ ತಿಳಿಸಿಲ್ಲ. ಇಲ್ಲಿ ಐದು ಜನರಿಗಿಂತ ಹೆಚ್ಚಾಗಿದ್ದಲ್ಲಿ ಪ್ರತಿಯೊಬ್ಬರಿಗೂ ಎರಡು ಯೂನಿಟ್ ಭೂಮಿಯನ್ನು ಇಟ್ಟುಕೊಳ್ಳಬಹುದು ಎಂಬುದನ್ನು ಸಪರೇಟಾಗಿ ತಿಳಿಸಿಲ್ಲ. ಆದ್ದರಿಂದ ಇಲ್ಲಿ ಒಂದೊಂದು ಕಲಂನಲ್ಲಿ ಒಂದೊಂದು ರೀತಿ ಅರ್ಥವಾಗುತ್ತದೆ. ಆದ್ದರಿಂದ ಈ ಕಲಂನಲ್ಲಿ ಒಂದು ಕುಟುಂಬದಲ್ಲಿ ಐದು ಜನಕ್ಕಿಂತ ಹೆಚ್ಚು ಅಪ್ರಾಪ್ತ ವಯಸ್ಕರಿದ್ದರೆ ಇಲ್ಲವೆ ಅಜ್ಞಾನ ವಯಸ್ಸಿನವರಿದ್ದರೆ ಅವರಿಗೂ ಕೂಡ ಒಬ್ಬೊಬ್ಬರಿಗೂ ಎರಡೆರಡು ಯೂನಿಟ್ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ ಎಂಬುದನ್ನು ಖುಲ್ಲಾ ತಿಳಿಸಬೇಕು ಈ ಖಾಯಿದೇಲಿ ಅದನ್ನು ಸೇರಿಸಬೇಕು. ಇಲ್ಲವಾದರೆ ಮುಂದೆ ಇದರಿಂದ ಅನೇಕ ತೊಂದರೆಗಳಾಗುತ್ತವೆ.

ಇನ್ನು ಭೂಮಾಲೀಕರಿಗೂ ಮತ್ತು ಕುಳಗಳಿಗೂ ಇನ್ನು ಮುಂದಕ್ಕೆ ಏನು ಸಂಬಂಧ ಇರಬೇಕು ಅನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ತಿಳಿಸಿ ಉಳುವವನೇ ಭೂಮಾಲಿಕನಾಗಬೇಕು ಎಂದು ಹೇಳಿದ್ದರೂ, ಈ ಉಳುವವನೇ ಮುಂದೆ ಭೂಮಾಲಿಕ ಆಗುತ್ತಾನೆ ಎಂಬುದರ ಬಗ್ಗೆ ೪೪ ಕಲಂನಲ್ಲಿ ಸ್ವಲ್ಪ ದುರಸ್ತಿಯಾಗಬೇಕು. ಹಾಗೆ ದುರಸ್ತಿ ಮಾಡದಿದ್ದರೆ ಇದರಿಂದೇನೇನೂ ಸಫಲವಾಗುವುದಿಲ್ಲ. ಇಲ್ಲಿ ೪೪ನೇ ಕಲಂಗೆ ಮಾಡಿರತಕ್ಕ ನಂಬರ್ ೨೬ನೇ ತಿದ್ದುಪಡಿಯಲ್ಲಿ ಡೆಪ್ಯುಟಿ ಕಮಿಷನರು ನೋಟಿಫಿಕೇಶನ್ ಹೊರಡಿಸಿದ ನಂತರ ಜಮೀನ್ದಾರನವಶದಲ್ಲಿದ್ದ ಅಥವಾ ಅವನ ಕಬ್ಜಾದಲ್ಲಿದ್ದ ಭೂಮಿಯು ಆ ಭೂಮಾಲಿಕನ ಕಬ್ಜಾದಿಂದ

(ಶ್ರೀ ಪಿ. ಎಂ. ಭಂಗಿ).—

ಅದು ಸರ್ಕಾರದವರ ಕಬ್ಜಾಕ್ಕೆ ಬರುತ್ತದೆಂದು ಆ ನೋಟಿಫಿಕೇಷನ್ನಿನಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಅಂದಾಗ ಭೂಮಾಲಿಕನ ಕಬ್ಜಾದಲ್ಲಿದ್ದ ಜಮೀನಿಗೆ ಗೇಣಿದಾರ ಮಾಲೀಕನಾಗುವುದಿಲ್ಲ. ಆ ಜಮೀನು ಸರ್ಕಾರದವರ ಕಬ್ಜಾಕ್ಕೆ ಬರುತ್ತದೆ. ಆಗ ಗೇಣಿದಾರನು ಖಾಸಗೀ ಭೂಮಾಲೀಕನ ಗೇಣಿದಾರನಾಗಿದ್ದುದು ತಪ್ಪಿ ಸರ್ಕಾರದ ಗೇಣಿದಾರನಾಗುತ್ತಾನೆ. ಗೇಣಿದಾರನು ಭೂಮಾಲಿಕನಾಗಬೇಕಾಗಿದ್ದರೆ ತಾಶೀಲ್ದಾರ ಆತನಿಗೆ ಆಕ್ಯುಪೆನ್ಸಿ ರೈಟ್ ಕೊಡಬೇಕಾಗಿದ್ದರೆ ಅದಕ್ಕ ಒಂದು ಮೊಬಲಗನ್ನು ಫಿಕ್ಸ್ ಮಾಡಬೇಕು, ಗೇಣಿದಾರನು ಆ ಹಣವನ್ನು ಕೊಟ್ಟ ಮೇಲೆ ಇವನು ಭೂಮಾಲಿಕನಾಗುವನು. ಆ ಳಳನೇ ಕಲಂ ಹೀಗೆ ಹೇಳುತ್ತಿದೆ.

''He is entitled to be registered as an occupant'' Entitled to be registered' is quite different from being the owner of the soil.

ಇಲ್ಲಿ ಹೀಗೆ ಹೇಳಿರತಕ್ಕ ತತ್ವವನ್ನು ನಾವು ಮಾನ ಮಾಡಿದರೆ ಯಾವ ಈ ಕಲಮ್‌ನಲ್ಲಿ ಹೇಳಿರತಕ್ಕ ಗೇಣಿದಾರ ಭೂಮಾಲೀಕನಾಗುತ್ತಾನೆ ಎನ್ನತಕ್ಕ ಭರವಸೆ ಇಲ್ಲ. ಮೊದಲು ಆ ಮುಂಬೈನಲ್ಲೂ ಕೂಡ ೧೯೪೮ರಲ್ಲಿ ಭೂಸುಧಾರಣೆಯ ಹೊಸ ಒಂದು ಕಾನೂನನ್ನು ಜಾರಿಗೆ ತಂದ ಕಾಲಕ್ಕೆ ಅದರಲ್ಲೂ ಅನೇಕ ನ್ಯೂನತೆಗಳಿದ್ದವು. ಅವುಗಳನ್ನೆಲ್ಲ ಬರುಬರುತ್ತಾ ತಿದ್ದುಪಡಿ ಮಾಡಿಕೊಂಡು ಬರುತ್ತ ಕಡೆಗೆ ೧೯೫೬ನೇ ಸಾಲಿನಲ್ಲಿ ಇದರ ಬಗ್ಗೆ ಒಂದು ಪ್ರತ್ಯೇಕವಾದ ಕಲಮನ್ನು ಅಂದರೆ ಕಲಂ ೩೨ನ್ನು ಸೇರಿಸಿ ಅದನ್ನು ದುರಸ್ತಿ ಮಾಡಿದ್ದಾರೆ. ಅದರಲ್ಲಿ ಹೀಗೆ ಹೇಳಿದೆ:—

''Every tenant shall.................................. be deemed to have purchased from the land lord,..................the land held by him as a tenant''.

ಈ ಪ್ರಕಾರವಾಗಿ ಮುಂಬೈನಲ್ಲಿ ತಾ : ೧ನೇ ಏಪ್ರಿಲ್ ೧೯೫೭ರಲ್ಲಿ ಟೆನನ್ಸಿ ಅಂಡ್ ಅಗ್ರಿಕಲ್ಚರಲ್ ಆಕ್ಟ್ ಜಾರಿಗೆ ಬಂದ ಮೇಲೆ ಅಂದು ಪ್ರತಿಯೊಬ್ಬ ಗೇಣಿದಾರನೂ ಭೂಮಾಲೀಕನಾದನು. ಅಂದು ರಾಜ್ಯದಾದ್ಯಂತ ಬಹಳ ವಿಜೃಂಭಣೆಯಿಂದ ಟಿಲ್ಲರ್ಸ್-ಡೇ ಆಚರಣೆ ಮಾಡಲಾಯಿತು. ಹಿಂದೆ ೧೯೫೭ರಲ್ಲಿ ಆ ಮುಂಬೈನಲ್ಲಿ ಏನೊಂದು 'ಟಿಲ್ಲರ್ಸ್ ಡೆ' ಆಚರಣೆ ಮಾಡಲಾಯಿತೋ ಆ ಪ್ರತಿಫಲ ನಾವು ಅಲ್ಲಿ ಇದ್ದಿದ್ದರೆ ನಮಗೂ ದೊರೆಯುತ್ತಿತ್ತು, ಆದರೆ ೧೯೫೬ರಲ್ಲಿ ರಾಜ್ಯಗಳ ಪುನರ್ವಿಂಗಡಣೆ ಆದುದರಿಂದ ನಮಗೆ ಆ ಅನುಕೂಲ ದೊರೆಯದೆ ಸ್ಥಗಿತವಾಯಿತು. ಆದರೆ ಆ ಮುಂಬೈ ಆಕ್ಟಿನಲ್ಲಿ ಸೇರಿಸಿದ್ದಂಥ ೩೨ನೇ ಕಲಂ ಅನ್ನು ನಮ್ಮ ರಾಜ್ಯದ ಕಾನೂನಿನಲ್ಲಿ ಸೇರಿಸಬೇಕಾಗಿತ್ತು. ಆದನ್ನು ಸೇರಿಸಲಿಲ್ಲ. ಹೊಸ ಆಕ್ಟ ೧೯೬೫ರಲ್ಲಿ ಜಾರಿಗೆ ಬಂದಾಗಲೂ ಸೇರಿಸಲಿಲ್ಲ. ಮುಂಬೈನಲ್ಲಿ ಗೇಣಿದಾರರಾಗಿದ್ದವರೆಲ್ಲರೂ ಭೂಮಾಲೀಕರಾದರೂ ನಮಗೆ ಇಲ್ಲಿ ಅವಕಾಶ ಸಿಕ್ಕದೆ ನಾವು ಗೇಣಿದಾರರಾಗೇ ಉಳಿಯಬೇಕಾಯಿತು. ಈಗಲಾದರೂ ಆ ಮುಂಬೈ ರಾಜ್ಯದ ಗೇಣಿದಾರರ ಪ್ರತಿಫಲ ನಮಗೆ ದೊರೆಯುವಂತೆ ಮಾಡಲು ಈ ಮಸೂದೆಯನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಬೇಕೆಂದು ಸೂಚನೆ ಮಾಡಬಯಸುತ್ತೇನೆ. ಇಲ್ಲಿ ಕೂಡ ಬೇಗ ಒಂದು 'ಟಿಲ್ಲರ್ಸ್-ಡೇ' ಆಚರಣೆ ಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು ಎಂದು ನಾನು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಸೂಚನೆ ಮಾಡಬಯಸುತ್ತೇನೆ

ಇನ್ನು ಎರಡನೇಯದಾಗಿ-ಗೇಣಿದಾರ ಹೋಗಿ ಮೂಲ ಭೂಮಾಲಿಕ ಆಗತಕ್ಕ ಬಗ್ಗೆ ಅವನು ಏನು ಪರಿಹಾರ ಕೊಡಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಕಲಂ ೪೮ರಲ್ಲಿ ಕಂದಾಯದ ೧೦ರಷ್ಟು ಹಣದನ್ನು ಬೆಲೆಯಾಗಿ ಕೊಡಬೇಕೆಂದು ಹೇಳಿರುತ್ತದೆ. ಮೊದಲು ಇದರ ಬಗ್ಗೆ ಕಂದಾಯದ ೧೦ ಪಟ್ಟು ಕೊಡಬೇಕೆಂದಿದ್ದುದು ಇತ್ತೀಚೆಗೆ ೧೫ ಪಟ್ಟು ಕೊಡಬೇಕೆಂದು ಮಾಡಿರುವುದು ಬಹಳ ಹಾನಿಕರವಾದುದು. ಒಂದು ರೂಪಾಯಿ ಕಂದಾಯ ಇದ್ದರೆ ಇದರ ೧೫ ಪಟ್ಟು ಅಂದರೆ ೧೫೦ ರೂಪಾಯಿ ಕೊಡಬೇಕಾಗುವುದು, ಇದರಿಂದ ಗೇಣಿದಾರನಿಗೆ ಬಹಳ ತೊಂದರೆಯಾಗುತ್ತದೆ. ಇದನ್ನು ಐದು ಪಟ್ಟು ಅಂತ ಮಾಡಿದರೆ ಅನುಕೂಲವಾಗುತ್ತದೆಂದು ನಾನು ಸೂಚಿಸಬಯಸುತ್ತೇನೆ.

ಅನಂತರ ಗೇಣೀದಾರರ ವಿಷಯದಲ್ಲಿ ಮತ್ತು ಪರಮಾವಧಿ ಹಿಡುವಳಿ ವಿಷಯದಲ್ಲಿ ಮುಂಬಯಿ ಸರಕಾರ ಗೇಣಿದಾರರು ಮತ್ತು ಮಾಲೀಕರ ಸಂಬಂಧ ಕಡಿದು ಹೋಗುವಂತೆ ಒಂದು ಸ್ವತಂತ್ರವಾದ ಕಾರ್ಯ ಮಾಡಿ ಸೀಲಿಂಗ್ ಆಕ್ಟ್ ಸ್ವತಂತ್ರವಾಗಿರುವಂತೆ ಮಾಡಿದ್ದಾರೆ. ಆ ಪ್ರಕಾರವಾಗಿ ಮೈಸೂರು ಸರಕಾರ ಕೂಡ ಸೀಲಿಂಗ್ ಆಕ್ಟನ್ನು ಸ್ವತಂತ್ರವಾಗಿ ಮಾಡಿ ಭೂ ಸುಧಾರಣೆ ಕಾರ್ಯವನ್ನು ಬೇರ್ಪಡಿಸಿದರೆ ಹೆಚ್ಚು ಒಳ್ಳೆಯದಾಗುತ್ತದೆ ಎಂಬ ಅಭಿಪ್ರಾಯವಿದೆ.

ಪರಮಾವಧಿ ಹಿಡುವಳಿಗಿಂತಲೂ ಹೆಚ್ಚು ಜಮೀನು ಏನಿದೆ ಅದನ್ನು ಯಾವ ರೀತಿ ಹಂಚಬೇಕೆಂಬ ಬಗ್ಗೆ ಒಂದು ಕಲಂನಲ್ಲಿ ನಿರ್ದಿಷ್ಟವಾಗಿ ಹೇಳಿದೆ. ಅದರ ಪ್ರಕಾರ ಜಮೀನಿಲ್ಲದವರಿಗೆ ಅಥವ ಡಿಸ್‌ಪ್ಲೇಸ್ಡ್ ರೈತರಿಗೆ ಒಂದು ಯೂನಿಟ್ ಒಬ್ಬರಿಗೆ ದೊರೆಯುವುದಕ್ಕೆ ಅವಕಾಶವಿದೆ. ಒಂದು ಯೂನಿಟ್ ಕೊಟ್ಟರೆ ಸರಿಯಾಗಿ ವ್ಯವಸಾಯ ಮಾಡಲು ಶಕ್ಯವೇ ಇಲ್ಲ. ಕನಿಷ್ಟ ಪಕ್ಷ ಪ್ರತಿಯೊಬ್ಬರಿಗೂ ೬ ಎಕರೆ ಅಥವ ೬ ಯೂನಿಟ್ ಈ ಪ್ರಕಾರವಾಗಿ ವಿತರಣೆ ಮಾಡಬೇಕು. ಜಮೀನಿಲ್ಲದವರು ಕೂಡಿಕೊಂಡು ಒಂದು ಫಾರ್ಮಿಂಗ್ ಸೊಸೈಟಿ ಮಾಡಿಕೊಂಡರೆ ೬ ಜನರಿಗೆ ಕೊಡುವುದಾದರೆ ೬ ಯೂನಿಟ್ ಕೊಡಬೇಕು. ಅವರೆ ಪ್ರತಿಯೊಬ್ಬ ಗೇಣೀದಾರನಿಗೂ ಒಂದೊಂದು ಯೂನಿಟ್ ಹಂಚಬಾರದು ಎಂಬ ಅಭಿಪ್ರಾಯವಿದೆ.

ಈ ಕಾಯಿದೆಯಲ್ಲಿ ಟೆನೆನ್ಸಿ, ಈಯರ್ ವ್ಯಾಖ್ಯೆ ಮಾಡಿಲ್ಲ. ಗೇಣಿದಾರರು ಮಾಲೀಕರಿಗೆ ಯಾವ ತಾರೀಖು ಗೇಣಿ ಕೊಡಬೇಕು ಎಂಬ ವಿಚಾರದಲ್ಲಿ ವ್ಯಾಖ್ಯೆ ಮಾಡಿಲ್ಲ. ಇದರಿಂದ ಕೋರ್ಟುಗಳವರು ಬೇರೆ ಬೇರೆ ಅರ್ಥ ಮಾಡಿ ಬೇರೆ ಬೇರೆ ತೀರ್ಮಾನ ಕೊಡಲು ಅವಕಾಶವಿದೆ.

ಆದುದರಿಂದ ಟೆನೆನ್ಸಿ ಈಯರ್ ಬಗ್ಗೆ ಸ್ಪಷ್ಟವಾದ ವ್ಯಾಖ್ಯೆ ಮಾಡಬೇಕು.

ಭೂಮಿ ಇಲ್ಲದಿರುವವರಿಗೆ ಒಂದು ಯೂನಿಟ್ ಕೊಟ್ಟರೆ ಅಥವ ಅದಕ್ಕಿಂತ ಹೆಚ್ಚಿಗೆ ಕೊಟ್ಟರೂ ಕೂಡ ಫ್ರಾಗ್‌ಮೆಂಟೇಷನ್ ಆಕ್ಟ್‌ಗೆ ವಿರುದ್ಧವಾಗುವುದು. ಆದುದರಿಂದ ಫ್ರಾಗ್‌ಮೆಂಟೇಷನ್ ಆಕ್ಟ್ ದುರಸ್ತಿ ಮಾಡಬೇಕು. ಇಲ್ಲದಿದ್ದರೆ ೪ ಎಕರೆಗಳಿಗಿಂತ ಹೆಚ್ಚು ಭೂಮಿ ಕೊಡಬೇಕು.

ಬೇರೆ ರೀತಿಯಲ್ಲಿ ೧೨ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಉತ್ಪತ್ತಿಯಿದ್ದರೆ ಅಂಥವರು ಭೂಮಿ ಪಡೆಯುವಂತಿಲ್ಲ. ಈ ಪ್ರಕಾರವಾಗಿ ೭೯ (ಎ) ಕಲಂನಲ್ಲಿದೆ. ಈ ವಿಚಾರದಲ್ಲಿ ಹೇಳುವುದಾದರೆ ರಾಜ್ಯಾಂಗದ ಪ್ರಕಾರವಾಗಿ ಆಸ್ತಿಯ ಹಕ್ಕು ಪ್ರತಿಯೊಬ್ಬರಿಗೂ ಇರುವುದು. ಇದನ್ನು ಕಸಿದುಕೊಳ್ಳಬೇಕಾದರೆ ಸಕಾರಣ ವಾದ ನಿರ್ಬಂಧವಿರಬೇಕು. ಒಕ್ಕಲತನದ ಉತ್ಪತ್ತಿಯಲ್ಲದ ಇತರ ಉತ್ಪತ್ತಿ ೧೨ ಸಾವಿರ ರೂಪಾಯಿ ಇದ್ದರೆ ಆತನು ಭೂಮಿ ಪಡೆಯುವಂತಿಲ್ಲ, ಮತ್ತು ಇರುವ ಸರ್ಪ್ಲಸ್ ಭೂಮಿಯನ್ನು ವಿತರಣೆ ಮಾಡ ಬೇಕೆಂದಿದೆ. ಇದು ಸರಿಯಲ್ಲ, ಇದನ್ನು ತೆಗದುಹಾಕಬೇಕು. ೧೨ ಸಾವಿರ ರೂಪಾಯಿಗಳ ನಿರ್ಬಂಧ ಇಡುವು ದಾದರೆ ಇನ್ನು ಮುಂದೆ ೧೨ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಉತ್ಪತ್ತಿ, ಒಕ್ಕಲತನದ ಉತ್ಪತ್ತಿ ಬಿಟ್ಟು ಉಳಿದ ಉತ್ಪತ್ತಿ ಯಾರಿಗಾದರೂ ಇದ್ದರೆ ಅವರು ಹೊಸದಾಗಿ ಭೂಮಿ ತೆಗೆದುಕೊಳ್ಳಲು ಸಾಧ್ಯವಾಗ ಬಾರದು ಎಂಬ ಷರತ್ತು ಹಾಕಿದರೆ ಅಭ್ಯಂತರವಿಲ್ಲ. ಈ ಪ್ರಕಾರವಾಗಿ ಮಹಾರಾಷ್ಟ್ರ ಸರಕಾರ ಹೊಸದಾಗಿ ಭೂಮಿ ಸಂಪಾದನೆ ಮಾಡುವ ಸಂಬಂಧದಲ್ಲಿ ಷರತ್ತು ಹಾಕಿದ್ದಾರೆ. ಅದೇ ರೀತಿಯಲ್ಲಿ ಈ ಕಾಯಿದೆ ಯಲ್ಲಿ ಹೊಸತಾಗಿ ಯಾರಿಗಾದರೂ ೧೨ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಉತ್ಪತ್ತಿ ಇದ್ದರೆ ಅವರು ಭೂಮಿ ಸಂಪಾದನೆ ಮಾಡಲು ಬಯಸಿದರೆ ಅವರ ಹಕ್ಕು ಉಳಿಯಬಾರದು.

ಈಗಿದ್ದ ಕಾಯಿದೆಯ ೬೩ನೇ ಕಲಂನಲ್ಲಿ ಫಾರೆಸ್ಟ್ ಲ್ಯಾಂಡ್ ಬಗ್ಗೆ ಕೂಡ ಸೀಲಿಂಗ್ ಹಿಡುವಳಿ ಇರಬೇಕೆಂದು ಮೈಸೂರು ಕಾಯಿದೆಯಲ್ಲಿದೆ. ಆದರೆ ಫಾರೆಸ್ಟ್ ಲ್ಯಾಂಡಿನಲ್ಲಿ ಗುಡ್ಡ-ಕಾಡು ಇದ್ದರೆ, ಅದರಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಇಲ್ಲದಿದ್ದರೆ ಅದನ್ನು ಅರಣ್ಯಕ್ಕೇ ಬಿಡಬೇಕು. ಭೂಸುಧಾರಣಾ ಕಾನೂನಿನಲ್ಲಿ ಫಾರೆಸ್ಟ್ ಲ್ಯಾಂಡ್‌ಗೆ ಮಿತಿ ಹೇರಿರುವುದು ಹೋಗಬೇಕು.

ಈ ಕಾಯಿದೆ ಕೊನೆಯಲ್ಲಿ ಒಂದು ಟೇಬಲ್ ಇದೆ, ಕೋಷ್ಟಕವಿದೆ. ಅದನ್ನು ಹಾಕುವುದಕ್ಕೆ ಪೂರ್ವ ದಲ್ಲಿ ಸಾಕಷ್ಟು ಗಮನಕೊಟ್ಟಿಲ್ಲ. ಉದಾಹರಣಾರ್ಥವಾಗಿ ಹೇಳುವುದಾದರೆ ಈ ಟೇಬಲ್‌ನ ೧೬ನೆಯ ಐಟಂನಲ್ಲಿ ವಿಜಾಪುರ ಜಿಲ್ಲೆಯ ಬಗ್ಗೆ ವಿವರಣೆ ಇದೆ. ಈ ಜಿಲ್ಲೆಯಲ್ಲಿ ಬಿಳಿಗಿ ತಾಲ್ಲೂಕು ಬಗ್ಗೆ ಯಾವ ರೀತಿ ಯಲ್ಲೂ ೪ ಅಥವ ೫ನೇ ಕಲಮುಗಳಲ್ಲಿ ಉಲ್ಲೇಖವಿಲ್ಲ. ಇಂಡಿ ಮತ್ತು ಬಾಗೇವಾಡಿ ಈ ಎರಡು ತಾಲ್ಲೂಕು ಗಳೂ ಕ್ಷಾಮ ಪೀಡಿತ ಪ್ರದೇಶಗಳು. ಇವು ದುಷ್ಕಾಲ ಪ್ರದೇಶಗಳಾಗಿವೆ. ಈ ತಾಲ್ಲೂಕುಗಳನ್ನು ೪ನೇ ಕಾಲಮ್ಮಿನಲ್ಲಿ ಹಾಕಿ ಮುಧೋಳ್, ಬಾಗಲಕೋಟೆ, ಬಾದಾಮಿ ಮುಂತಾದ ಕ್ಷಾಮವಿಲ್ಲದಿರುವ ತಾಲ್ಲೂಕು ಗಳನ್ನು ೫ನೇ ಕಾಲಮಿನಲ್ಲಿ ಹಾಕಿ ಅವರಿಗೆ ಹೆಚ್ಚು ಭೂಮಿಯನ್ನಿಟ್ಟುಕೊಳ್ಳಲು ಅವಕಾಶವನ್ನು ಈ ಟೇಬಲ್ಲಿನಲ್ಲಿ ಕೊಡಲಾಗಿದೆ. ಆದುದರಿಂದ ಈ ಟೇಬಲ್ ಬಗ್ಗೆ ಪೂರ್ಣವಾಗಿ ವಿಚಾರ ಮಾಡಿ ಸೂಕ್ತ ದುರಸ್ತಿ ಮಾಡಬೇಕು ಎಂದು ಸೂಚಿಸಬಯಸುತ್ತೇನೆ.

ಮುಂಬಯಿ ರಾಜ್ಯದಲ್ಲಿ ಟಿಲರ್ಸ್‌ನ್ನು ಭೂ ಮಾಲೀಕರಿಗೆ ಕಂತಿನ ಪ್ರಕಾರ ಪರಿಹಾರ ಕೊಡಬೇಕೆಂದು ವ್ಯವಸ್ಥೆ ಮಾಡಿದೆ. ಆದರೆ ಮೈಸೂರು ರಾಜ್ಯದಲ್ಲಿ ಸರಕಾರದವರೇ ಮಾಲೀಕರು ಆಗುವ ಮೂಲಕ, ನಗದು ಎರಡು ಸಾವಿರ ರೂಪಾಯಿಗಳವರೆಗೆ ಹಣ ಕೊಡಬೇಕು, ಇಲ್ಲದಿದ್ದರೆ ಬಾಂಡ್ ಕೊಡಬೇಕು. ಈ ಪ್ರಕಾರ ಈ ಕಾಯಿದೆಯಲ್ಲಿದೆ. ಆದುದರಿಂದ ಸರಕಾರದ ಮೇಲೆ ಭೂಮಾಲೀಕರಿಗೆ ಪರಿಹಾರ ಕೊಡುವ

(SRI D. DEVARAJ URS)

ಹೊಣೆ ಇದೆ. ಸರಕಾರ ಮುಂಬಯಿ ಟೆನೆನ್ಸಿ ಕಾಯಿದೆ ಪ್ರಕಾರ ವ್ಯವಸ್ಥೆ ಮಾಡಿದರೆ ಅನುಕೂಲ. ಸರಕಾರದ ಮೇಲೆ ಯಾವ ರೀತಿಯಿಂದಲೂ ಲಯಬಲಿಟಿ ಭಾರ ಬೀಳದೆ ಉಳುವವರಿಂದ ಕಂತಿನ ಪ್ರಕಾರ ಹಣ ವಸೂಲು ಮಾಡಿ ಮಾಲೀಕರಿಗೆ ಕೊಟ್ಟರೆ ಸರಕಾರದ ಮೇಲೆ ಹೊಣೆ ಇರುವುದಿಲ್ಲ. ಮಾಲೀಕರಿಗೆ ಹಣವೂ ಸಿಕ್ಕುತ್ತದೆ. ಕಾಯಿದೆ ಸರಿಯಾಗಿಲ್ಲವೆಂದು ಮುಂಬಯಿ ಹೈಕೋರ್ಟಿನಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಿ ರಿಟ್ ಹಾಕಿ.

ಶ್ರೀ ಕೋಣಂದೂರು ಲಿಂಗಪ್ಪ.—ಗೇಣಿದಾರ ಹಿಂದಿನಿಂದ ಸಾಗುವಳಿ ಮಾಡಿ ಗುತ್ತಿಗೆ ಕೊಡುತ್ತಿರುವಾಗ ಅವನಿಗೆ ಹಕ್ಕು ಕೊಡುವಾಗ ಅವನು ಪರಿಹಾರ ಕೊಡಬೇಕೇ ?

ಶ್ರೀ ಪಿ. ಎಂ. ಭಂಗಿ.—ಹಿಂದೂಸ್ಥಾನದಲ್ಲಿರುವ ಯಾವುದೆ ಕಾಯಿದೆ ನೋಡಿದರೂ ಗೇಣಿದಾರ ಮಾಲೀಕರಿಗೆ ಪರಿಹಾರ ಕೊಡಲೇಬೇಕು. ಆದರೆ ಸರ್ಕಾರದವರು ಎಕ್ಸೆಸ್ ಲ್ಯಾಂಡನ್ನು ಸರ್ಪ್ಲಸ್ ಲ್ಯಾಂಡನ್ನು ಬಡವರಿಗೆ, ಭೂಮಿ ಇಲ್ಲದವರಿಗೆ, ಕಡು ಬಡವರಿಗೆ ಪುಕ್ಕಟ್ಟೆಯಾಗಿ ಹಂಚಬೇಕು. ಅಂಥ ಸಂದರ್ಭಗಳಲ್ಲಿ ಸರಕಾರ ಜಮೀನಿಲ್ಲದ ಬಡವರಿಂದ ಅದಕ್ಕೆ ಬೆಲೆ ಪಡೆಯಬಾರದು, ಅದನ್ನು ಸರಕಾರವೇ ವಹಿಸಿಕೊಂಡು ಮಾಲೀಕರಿಗೆ ಬೆಲೆ ಕೊಡಬೇಕು.

ಈವೊತ್ತು ಗೇಣಿದಾರರಿಂದ ತೆಗೆದುಕೊಳ್ಳತಕ್ಕಂಥ ಜಮೀನುಗಳಿಗೆ ಮಾರ್ಕೆಟ್ ಪ್ರೈಸ್ ಬಹಳ ಕಡಿಮೆ ಇದೆ. ಆದರೆ ಭೂಮಾಲಿಕನಿಂದ ತೆಗೆದುಕೊಳ್ಳತಕ್ಕಂಥ ಜಮೀನುಗಳಿಗೆ ಕಿಮ್ಮತ್ತು ಜಾಸ್ತಿ ಇದೆ. ಗೇಣಿದಾರರದ್ದೇ ಆಗಲಿ, ಭೂಮಾಲೀಕರದ್ದೇ ಆಗಲಿ, ಹೆಚ್ಚುವರಿ ಭೂಮಿಯನ್ನು ತೆಗೆದುಕೊಂಡಾಗ ಒಂದೇ ರೀತಿ ಪರಿಹಾರ ಧನ ಕೊಡಬೇಕು. ಈ ಕಾಯಿದೆಯಲ್ಲಿ ಅದು ಕಾಣುತ್ತಾ ಇಲ್ಲ. ಗೇಣಿದಾರರಾಗಲಿ ಭೂಮಾಲೀಕರಾಗಲಿ ಸ್ವಂತ ಸಾಗುವಳಿ ಮಾಡಿದ್ದೇ ಆದ ಪಕ್ಷದಲ್ಲಿ ಒಂದೇ ರೀತಿಯ ಪರಿಹಾರ ಧನ ಇರಬೇಕು ಎಂದು ಹೇಳುತ್ತೇನೆ. ೭೨ನೇ ಕಾಲಂ ಆಗಲಿ, ೫೬ನೇ ಕಾಲಂ ಆಗಲಿ ಸೂಚಿಸಿರುವುದು ಸರಿಯಾಗಿಲ್ಲ. ಗೇಣಿದಾರರಿಂದ ತೆಗೆದುಕೊಂಡ ಭೂಮಿಗೆ ಬೆಲೆ ಕಡಿಮೆ, ಭೂಮಾಲೀಕನಿಂದ ತೆಗೆದುಕೊಂಡ ಭೂಮಿಗೆ ಜಾಸ್ತಿ ಬೆಲೆ ಇರುವುದು ಸರಿಯಲ್ಲ. ಒಂದೇ ರೀತಿ ಪರಿಹಾರವನ್ನು ಗೇಣಿದಾರರಿಗೂ ಕೊಡಬೇಕು ಎಂದು ನಾನು ಸೂಚಿಸುತ್ತೇನೆ.

ಇನ್ನು ಕಂದಾಯ ಮಂತ್ರಿಗಳಲ್ಲಿ ಒಂದು ವಿನಂತಿ. ಮುಂಬಯಿಯಲ್ಲಿ ಗೇಣಿದಾರರೆಲ್ಲಾ ಸೇರಿ ಟಿಲ್ಲರ್ಸ್ ಡೇ ಆಚರಿಸಿದರು. ಅದೇ ರೀತಿ ನಮ್ಮ ಮೈಸೂರು ರಾಜ್ಯದಲ್ಲೂ ಕೂಡ ಈ ವರ್ಷದ ಡಿಸೆಂಬರ್ ಒಳಗೆ ಟಿಲ್ಲರ್ಸ್ ಡೇ ಯನ್ನು ಬಹಳ ವಿಜೃಂಭಣೆಯಿಂದ ಆಚರಿಸಬೇಕು, ಅನಂತರ ಈ ಕಾಯಿದೆಯನ್ನು ಕ್ರಾಂತಿ ಕಾರಕ ಕಾಯಿದೆ ಎಂದು ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಇಷ್ಟು ಹೇಳಿ, ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ —(ಬಂಟವಾಳ) ಸನ್ಮಾನ್ಯ ಅಧ್ಯಕ್ಷರೇ, ಈ ಮಸುದಾ ಕಾನೂನನ್ನು ಬಹಳ ದಿವಸದಿಂದಲೂ ಕುತೂಹಲದಿಂದ ನಾವು ನಿರೀಕ್ಷೆ ಮಾಡಿಕೊಂಡಿದ್ದೆವು. ಈಗ ಅದು ಬಂದಿದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳ ಭಾಷಣವನ್ನೂ ಅದಕ್ಕಿಂತಲೂ ಹೆಚ್ಚಾಗಿ ನಮ್ಮ ವಿರೋಧ ಪಕ್ಷದ ನಾಯಕರೂ ಮಾಡಿದ ಎರಡು ಘಂಟೆಗಳ ಭಾಷಣವನ್ನು ಕೇಳಿದ ಮೇಲೆ ನಾನು ಮಾನ್ಯ ಸಚಿವರಲ್ಲಿ ಒಂದು ವಿಷಯವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ ಈ ಮಸೂದ ಕಾನೂನನ್ನು ತಂದಾಗಲೇ ನಾವು ಕೆಲವರು ಆ ಕಡೆ ಕುಳಿತಿದ್ದವರಿಗೆ ಹೇಳಿದೆವು. ಇಷ್ಟು ದಿವಸ ಹೇಗಾದರೂ ಕೂತಿದ್ದು ಆಯಿತು, ಇಷ್ಟು ಅವಸರದಲ್ಲಿ ಇದನ್ನು ತರಬೇಡಿ ಇನ್ನೂ ಕೆಲವು ದಿವಸ ತಡೆದು, ಇದರ ಬಗ್ಗೆ ವಿಚಾರ ವಿನಿಮಯ ನಡೆಸಿ ಎಂದು, ತಮ್ಮ ಪಕ್ಷದೊಳಗೂ ಹಾಗೂ ವಿರೋಧ ಪಕ್ಷದೊಳಗೂ, ಆಕಡೆಯವರಿಗೂ ಈ ಕಡೆಯವರಿಗೂ ಬಡ ರೈತರ ಪರವಾಗಿ ಯಾರಿಗೆ ಆಸಕ್ತಿ ಇದೆಯೋ ಅವರಿಗೂ ಈ ಒಂದು ಭೂಸುಧಾರಣೆಯ ಮೂಲಕ ಸಮಾಜವಾದದ ಕಡೆಗೆ ನಮ್ಮ ದೇಶವನ್ನು ಒಯ್ಯಬೇಕೆಂದು ಮನಸಿದ್ದರೆ ವಿಚಾರವಿನಿಮಯ ನಡೆಸಿ, ಇನ್ನೂ ಕೆಲವು ದಿವಸ ಇದು ವಿಳಂಬವಾದರೂ ಪರವಾಯಿಲ್ಲ. ಇದರ ಬಗ್ಗೆ ಸಮರ್ಪಕವಾಗಿರುವ ರೀತಿಯಲ್ಲಿ ಈ ಮಸೂದೆಯನ್ನು ತರುವುದು ಒಳ್ಳೆಯದು ಎಂದು ಹೇಳಿದೆವು. ಆದರೂ ಕೂಡ ಸರ್ಕಾರ ಈವೊತ್ತಿನ ದಿವಸ ವಿರೋಧ ಪಕ್ಷದ ನಾಯಕರು ಮತ್ತು ಈ ಕಡೆ ಕುಳಿತಿದ್ದವರಿಗಿಂತಲೂ ತಾವು ಹೆಚ್ಚು ಪುರೋಗಾಮಿಗಳು ಎಂದು ತೋರಿಸುವುದಕ್ಕಾಗಿ ಮತ್ತು ತಮ್ಮ ವೀರಾವೇಶವನ್ನು ಪ್ರಕಟಣೆ ಮಾಡುವುದಕ್ಕಾಗಿ ಇಲ್ಲದೆಲ್ಲಾ ಒಂದು ಅಂದಾಜು ಮಾಡಿ ಈ ಮಸೂದೆಯನ್ನು ತಂದಿದ್ದೀರಿ. ಈ ಬಿಲ್ಲನ್ನು ಸಭೆಯ ಮುಂದೆ ಮಂಡಿಸಿದಾಗ ನಾವು ನೋಡಿದ್ದು ಏನೆಂದರೆ ಇದು ನಿರಾಶಾದಾಯಕವಾದದ್ದಾಗಿದೆ. ಮತ್ತು ಇದರಲ್ಲಿ ಇನ್ನೂ

ಹೆಚ್ಚಾಗಿ ಕುಂದು ಬರುತ್ತಾ ಇರುವ ಹಾಗೆ ಕಾಣುತ್ತಾ ಇದೆಯೋ ವಿನಃ ಪ್ರಯೋಜನ ಆದ ಹಾಗೆ ಕಾಣಿಸ ಲಿಲ್ಲ. ಈ ವಿಚಾರದ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಈಗಾಗಲೇ ಹೇಳಿದ್ದಾರೆ. ಈ ಮಸೂದೆ ಈ ಸದನದ ಮುಂದೆ ಇನ್ನೂ ಚರ್ಚೆಯಾಗುತ್ತಿರುವಾಗಲೇ ಇದು ಇನ್ನೂ ಸರ್ಕಾರದ ಮಟ್ಟದಲ್ಲೇ ಉಳಿದಿದೆ ಎಂದು ಹೇಳಿದರು. ನಾನು ಎರಡು ದಿವಸದ ಹಿಂದೆ ಹಿಂದೂ ಪತ್ರಿಕೆಯಲ್ಲಿ ಬಂದಂಥ ವರದಿಯನ್ನು ತಮ್ಮ ಅವಗಾಹನೆಗೆ ತರಬೇಕೆಂದು ಇದ್ದೇನೆ. ಈ ಮಸೂದೆಯನ್ನು ಬಹಳ ಕ್ರಾಂತಿಕಾರಕವಾಗಿ ಬದಲಾವಣೆ ಮಾಡಿಬಿಟ್ಟಿದ್ದಾರೆ ? ಕೇಂದ್ರದವರು ಇದರ ಬಗ್ಗೆ ೧೦ ರಿಂದ ೧೮ ಎಕರೆವರೆಗೂ ಸೀಲಿಂಗ್ ಲಿಮಿಟ್ ನಿಗದಿ ಮಾಡಬಹುದು ಎಂದು ಹೇಳಿದ್ದರೂ ಕೂಡ ೧೮ ಎಕರೆ ಮಿತಿ ಯನ್ನು ಒಪ್ಪಿಕೊಳ್ಳದೆ ಮೈಸೂರು ರಾಜ್ಯದ ಮುಖ್ಯಮಂತ್ರಿಗಳು ೧೦ ಎಕರೆಗಳ ಮಿತಿ ಇರುವ ಹಾಗೆ ಈ ಬಿಲ್‌ನಲ್ಲಿ ಸೇರಿಸಿಬಿಟ್ಟಿದ್ದಾರೆ. ಆದುದರಿಂದ ಅವರ ವಿರುದ್ಧ ಆಂದೋಳನ ನಡೆಸಬೇಕು ಎಂದು ಪಾರ್ಲಿಮೆಂಟ್ ಸದಸ್ಯರೂ ಸೇರಿಕೊಂಡು ತೀರ್ಮಾನ ಮಾಡಿಕೊಂಡಿದ್ದಾರೆ ಎಂದು ಪತ್ರಿಕೆಯಲ್ಲಿ ಪ್ರಕಟಣೆ ಆಗಿದೆ. ಆದಕ್ಕೆ ಈ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿದಾಗ ಅವರು ನಾವು ಯಾವಾಗಲೂ ಓಪನ್ ಮೈಂಡ್ ಆಗಿದ್ದೇವೆ ಓಪನ್ ಮೈಂಡ್ ಇರುವುದು ಒಳ್ಳೆಯದು. ಆದರೆ ಇಂತಹ ವಿಚಾರಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಲಿ, ಈ ಮಸೂದೆಗೆ ಸಂಬಂಧಪಟ್ಟ ಕಂದಾಯ ಸಚಿವರಾಗಲಿ ಅವರ ಮನಸನ್ನು ಕೂಡ ತೆರೆದು ಇಟ್ಟುಬಿಟ್ಟರೆ ಸ್ವಲ್ಪ ಕಷ್ಟವಾಗುತ್ತದೆ. ಏತಕೆಂದರೆ ಈ ಭೂಸುಧಾರಣೆ ಬಗ್ಗೆ ಯಾವಾಗ ಮಾತನಾಡಲಿಕ್ಕೆ ಪ್ರಾರಂಭವಾಯಿತೋ ಆವೊತ್ತಿನಿಂದಲೂ ಕೂಡ ಆಡಳಿತದಲ್ಲಿರುವವರ ಮನಸ್ಸನ್ನು ತಿರುಗಿಸುವುದಕ್ಕೆ ಪ್ರತಿಗಾಮಿಗಳು ಪ್ರಯತ್ನ ಮಾಡಿದ್ದರಿಂದ ಅವರ ಒತ್ತಡಕ್ಕೆ ಬಲಿಬಿದ್ದು ಅಲ್ಪ ಸ್ವಲ್ಪ ಸುಧಾರಣೆಗಳನ್ನು ಮಾಡುತ್ತಿದ್ದಾರೆ. ಭೂಸುಧಾರಣೆ ತರಬೇಕು ಎಂದು ಮನಸ್ಸು ಮಾಡಿದರೂ ಅದಕ್ಕೆ ಅಡ್ಡಗಾಲು ಹಾಕುವುದಕ್ಕೆ ಕೆಲವು ಪ್ರತಿಗಾಮಿಗಳು ಸಾಕಾದಷ್ಟು ಅವರ ಓಪನ್ ಮೈಂಡ್‌ನ್ನು ಉಪಯೋಗ ಮಾಡಿಕೊಂಡು ನಿಮ್ಮ ಮೇಲೇನೆ ಒತ್ತಡ ಹೇರುತ್ತಿದ್ದಾರೆ ಆದರೆ ನಿಮ್ಮಲ್ಲಿ ಓಪನ್ ಮೈಂಡ್ ಇರುವುದಕ್ಕೆ ನನ್ನ ಆಕ್ಷೇಪ ಇಲ್ಲಾ ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲೂ ಮತ್ತು ಕಂದಾಯ ಮಂತ್ರಿ ಗಳಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ ಏನೇ ಒತ್ತಡ ಬರಲಿ, ಅವರ ಪಕ್ಷದಿಂದ ಯಾವುದೇ ಒತ್ತಡ ತರಲಿ, ಅದರ ಮೇಲೇ ಏನೇ ಅಡ್ಡಿ ಆತಂಕಗಳು ಬರಲಿ ರಾಜ್ಯದ ಜನತಾ ಪ್ರತಿನಿಧಿಗಳು ಆ ಕಡೆಯೇ ಇರಲಿ, ಈ ಕಡೆಯೇ ಇರಲಿ ಈ ರಾಜ್ಯದಲ್ಲಿ ಉಳಿದ ಜನರು ಮತ್ತು ರಾಜ್ಯದ ಸಾಮಾನ್ಯ ರೈತರು ಈವೊತ್ತು ನಿಮ್ಮನು ಯಾವರೀತಿಯಾಗಿ ಈ ಶಾಸನವನ್ನು ಸುಧಾರಣೆ ಮಾಡಿ ತರುತ್ತಾರೆ ಎಂದು ನೋಡುತ್ತಿದ್ದಾರೆ. ಅಲ್ಲದೆ ಕಳೆದ ಚುನಾವಣೆಯಲ್ಲಿ ಕೊಟ್ಟಂಥ ಭರವಸೆಗಳನ್ನು ಈ ಸಂದರ್ಭದಲ್ಲಿ ಯಾವ ರೀತಿಯಾಗಿ ಜಾರಿಗೆ ತರುತ್ತಾರೆ ಅನ್ನುವುದನ್ನೂ ಕೂಡ ಕಣ್ಣು ಬಿಟ್ಟು ನೋಡುತ್ತಿದ್ದಾರೆ. ಅದು ಯಾವ ರೀತಿಯಾಗಿಯೇ ನೆರಲಿ, ಇದರಿಂದ ಜನತೆಗೆ ನಿರಾಶಾದಾಯಕವಾದರೆ ಆಗ ಅದರಿಂದಾಗುವ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ ಎನ್ನುವ ಎಚ್ಚರಿಕೆಯನ್ನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಬಯಸುತ್ತೇನೆ. ೧೯೬೧ರಲ್ಲಿ ಭೂಸುಧಾರಣಾ ಶಾಸನಗಳನ್ನು ಮಾಡಿ ಚರ್ಚೆ ಮಾಡಿದರು ಅದು ಸಮರ್ಪಕವಾಗಲಿಲ್ಲ, ೧೯೬೫ರಲ್ಲಿ ಪುನಃ ಇದನ್ನು ಪರಿಶೀಲನೆ ಮಾಡಿದರು ಆದರೂ ಅವರು ಆಸೆಪಟ್ಟುಕೊಂಡ ಹಾಗೆ ಆಗಲಿಲ್ಲ. ಭೂಸುಧಾರಣೆಯನ್ನು ಜಾರಿಗೆ ಕೊಡುವುದರಲ್ಲಿ ಇದರಲ್ಲಿರುವ ಉದ್ದೇಶವನ್ನು ೨೨ ವರ್ಷಗಳ ಕಾಲವಾದರೂ ಕೂಡಿ ಆಚರಿಸಲಿಕ್ಕೆ ಆಗಲಿಲ್ಲ. ಇದನ್ನು ಮುಂದುವರೆಸಿಕೊಂಡೇ ಬಂದರು. ಆದಕ್ಕಾಗಿ ೧೯೭೨ರಲ್ಲಿ ಇದನ್ನು ಪರಿಶೀಲನೆ ಮಾಡಿ ಇದನ್ನು ಮುಂದು ವರೆಸಲಿಕ್ಕೆ ಯಾವ ಹೆಜ್ಜೆ ಇಡಬೇಕು ಎಂದು ಯೋಚನೆ ಮಾಡುವುದಕ್ಕೆ ದೇಶದ ಎಲ್ಲಾ ಮುಖ್ಯ ಮಂತ್ರಿ ಗಳ ಒಂದು ಸಭೆಯನ್ನು ಕರೆದದ್ದು ತಮಗೆ ಗೊತ್ತಿರಬೇಕು.

3–30 P.M.

ಆ ಸಭೆಯಲ್ಲಿ ಪ್ರಧಾನ ಮಂತ್ರಿಗಳಾದ ಇಂದಿರಾ ಗಾಂಧಿಯವರು ಮಾತನಾಡುತ್ತ ಬಹಳ ಸ್ಪಷ್ಟವಾಗಿ ಹೇಳಿದರು, ಏನೆಂದರೆ:—

"The cracks which have appeared in the agrarian structure can be papered over."

I had here: "as our hon. Revenue Minister is trying to do." "We must act now when there is still time and hope. We dare not fail because the consequences of failure will be beyond our control." ಎಂದು. ಈ ರೀತಿ ಶ್ರೀಮತಿ ಗಾಂಧಿಯವರು ಮೂರು ವರ್ಷಗಳ ಹಿಂದೆ ತಮಗೆ ಎಚ್ಚರಿಕೆ ಕೊಟ್ಟಿದಾರೆ. ಆದರೆ ತಾವು ಬರಿ ಮಾತಿನಲ್ಲಿ ಮುಗಿಸುವಂಥ ದಾರಿ ಹಿಡಿದಿದ್ದೀರಿ ಎಂದು ಹೇಳಬೇಕಾಗಿದೆ.

SRI D. DEVARAJ URS.—(Chief Minister)

But, you dare not act · you dare not act according to your promise. ಎಂದು ನಾನು ಈ ಹೊತ್ತು ಹೇಳಬೇಕಾಗಿದೆ ಇದರ ಪರಿಣಾಮ ನಿಮಗೆ ಏನಾಗುತ್ತದೆ ಎಂದು ಹೇಳುವುದರಲ್ಲಿ ನಮಗೆ ಕಾಳಜಿ ಇಲ್ಲ ಅದನ್ನು ಜನತೆ ನೋಡಿಕೊಳ್ಳುತ್ತದೆ. ಜನತೆ ತನಗೆ ಬೇಕಾದ ಸರ್ಕಾರವನ್ನು ಚುನಾವಣೆ ಮಾಡಿಕೊಳ್ಳುತ್ತಾರೆ. ಆದರೆ ನೀವು ಇದರಲ್ಲಿ ವಿಫಲರಾದರೆ ನಮ್ಮ ದೇಶಕ್ಕೆ ಇದರಿಂದ ತುಂಬ ಹಾನಿ ಇದೆ ಕ್ರಾಂತಿಕಾರಕವಾದ ಬದಲಾವಣೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಮಾರ್ಗಗಳಲ್ಲಿ ತರಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ನಂಬಿಕೆ ನನ್ನ ಪಕ್ಷದವರು ಇಷ್ಟರತನಕ ಇಟ್ಟುಕೊಂಡಿದ್ದಾರೆ. ನಮ್ಮ ಪಕ್ಷದ ಕಾರ್ಯಕ್ರಮದಲ್ಲಿ ಇದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಕ್ರಾಂತಿಕಾರಿ ಸುಧಾರಣೆಗಳನ್ನು ನಮ್ಮ ದೇಶದಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಮೂಲಕ ತರಲು ಪ್ರಯತ್ನ ಮಾಡುತ್ತೇವೆ. ಮಾಡಬೇಕು ಎನ್ನುವುದೇ ನಮ್ಮ ಉದ್ದೇಶ ಈ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಮೂಲಕ ಜನತೆಗೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸಲಿಕ್ಕೆ ಸಾಕಷ್ಟು ಬಹುಮತ ತಮಗೆ ಇದ್ದರೂ ಕೂಡ, ಮೇಲಿನಿಂದ ನಿಮ್ಮ ನಾಯಕರು ನಿಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದರೂ ಕೂಡ ಅದನ್ನು ಮಾಡಲಿಕ್ಕೆ ನೀವು ತಪ್ಪಿದರೆ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಮೂಲಕ ಕ್ರಾಂತಿಕಾರಿ ಬದಲಾವಣೆಗಳನ್ನು ತರಲಿಕ್ಕೆ ಸಾಧ್ಯವಿದೆ, ಜನರ ಆಸೆ ಆಕಾಂಕ್ಷೆಗಳನ್ನು ಈಡೇರಿಸು ವುದಕ್ಕೆ ಸಾಧ್ಯವಿದೆ ಎನ್ನುವ ನಂಬಿಕೆ ಕಾರ್ಮಿಕರಿಗೆ ಮತ್ತು ಸಾಮಾನ್ಯ ಜನತೆಗೆ ಕಳೆದು ಹೋದರೆ ಮುಂದಿನ ಪರಿಣಾಮ ಏನಾಗುತ್ತದೆ ಎನ್ನುವುದಕ್ಕೆ ನಮ್ಮನ್ನು ನೀವು ದೂರಿ ಉಪಯೋಗವಿಲ್ಲ ಅದಕ್ಕೆ ನೀವೇ ಹೊಣೆ ಗಾರರಾಗಬೇಕಾಗುತ್ತದೆ ಎಂದು ತಮಗೆ ಹೇಳಬೇಕಾಗುತ್ತದೆ.

ನಮ್ಮ ದೇಶದ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಅಲ್ಲಿಂದ ಈವರೆಗಿನವರೆಗೆ ನಾವು ಭೂಸುಧಾರ ಣೆಗಳ ಬಗ್ಗೆ ಮಾತನಾಡಿದ್ದನ್ನು ಕೇಳಿದರೆ ಪರ್ವತದಷ್ಟು ಆಗಬಹುದು. ಹಿಮಾಲಯ ಪರ್ವತದಷ್ಟು ಮಾತನಾಡಿದ್ದೇವೆ. ಪ್ರತಿ ಚುನಾವಣೆಗೆ ಒಂದು ವರ್ಷ ಮೊದಲು ಜನರಿಗೆ ಅನುಕೂಲ ಮಾಡಿದ್ದೇವೆಂದು ತೋರಿಸುವಂಥ ಒಂದು ಕಾನೂನು ಮಾಡುವುದು ಆಗಿನ ಸರ್ಕಾರಗಳ ಧೋರಣೆಯಾಗಿತ್ತು. ಚುನಾವಣೆ ಕಾಲದಲ್ಲಿ ಜನರನ್ನು ಎದುರಿಸಬೇಕಾದರೆ, ಅವರ ಬಳಿಗೆ ಹೋಗಬೇಕಾಗಿದ್ದರೆ, ಒಂದು ಶಾಸನ ಬೇಕಾಯಿತು ಸುಧಾರಣೆ ಮಾಡಿದ್ದೇವೆ ಎಂದು ಹೇಳಿ ಹಣದ ತೂಕದಷ್ಟು ಭೂಸುಧಾರಣೆ ಬಡಿದು, ಹೊಡೆದು, ಹೊರಗೆ ಹಾಕುತ್ತಿದ್ದೀರಿ. ಆದರೆ ಹಣದ ತೂಕದಷ್ಟು ಕೂಡ ಜನರಿಗೆ ಉಪಯೋಗವಾಗಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೇಮಕ ಮಾಡಿದಂಥ ಕಮಿಟಿಗಳು ಅದರ ಬಗ್ಗೆ ವರದಿಗಳನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ಹೋಂ ಡಿಪಾರ್ಟ್‌ಮೆಂಟ್ 1968ರಲ್ಲಿ ತಯಾರು ಮಾಡಿದ ವರದಿಯಲ್ಲಿ ಯಾವ ಯಾವ ರಾಜ್ಯದಲ್ಲಿ ಭೂಸುಧಾರಣೆ ಶಾಸನ ಯಾವ ಯಾವ ರೀತಿಯಲ್ಲಿ ಜಾರಿಗೆ ಬಂದಿದೆ, ಅದರಿಂದ ರೈತರಿಗೆ ಎಷ್ಟು ಪ್ರಯೋಜನವಾಗಿದೆ ಎನ್ನುವುದನ್ನು ಕೊಟ್ಟಿದ್ದಾರೆ. ಯಾವುದೇ ರೀತಿಯಿಂದ ರೈತನಿಗೆ ಪ್ರಯೋಜನವಾಗಿಲ್ಲ ಎನ್ನುವುದನ್ನು ಕೇಂದ್ರ ಸರ್ಕಾರದವರೇ ಒಪ್ಪಿಕೊಂಡಿದ್ದಾರೆ, ರಾಜ್ಯ ಸರ್ಕಾರಗಳ ಗಮನಕ್ಕೆ ಅದನ್ನು ತಂದಿದ್ದಾರೆ. ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಮಾನ್ಯ ವೀರೇಂದ್ರ ಪಾಟೀಲರು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾಗಿ ಭಾಗವಹಿಸಿ ಅದರಲ್ಲಿ ಮಾಡಿದ ಭಾಷಣದ ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ನಾನು ತರಬೇಕೆಂದಿದ್ದೇವೆ. ಮಾನ್ಯ ದೇವೇಗೌಡರು ಮಾತನಾಡುವಾಗ ಅದಕ್ಕಿಂತ ಭಿನ್ನವಾದ ಅಭಿಪ್ರಾಯವನ್ನು ಹೇಳಲಿಲ್ಲ. ಅದನ್ನೇ ಅವರೂ ಹೇಳಿದರು.

ಈ ಹೊತ್ತು ನಮ್ಮಲ್ಲಿರುವ ಭೂಸುಧಾರಣೆ ಶಾಸನದಲ್ಲಿ ಈ ಅಂಶಗಳೆಲ್ಲ ಇವೆ.

(1) Fixation of fair rent ;

(2) Termination of landlord-tenant relationship ;

(3) Conferment of ownership on actual cultivators ;

(4) Limitation on size of individual holdings ;

(5) Abolition of Privileged tenures ;

(6) Rehabilitation of agricultural labourers and landless tenants by grant of Government land ;

(7) Assistance to small farmers to develop their holdings and increasing productivity by (1) assisting the flow of agricultural finance both for production and for improvement of lands, (2) by provision of inducement to the small farmers to join together for co-operative farming :

Prevention of fragmentation and promotion of Consolidation of holdings.

ಇಡೀ ಮೈಸೂರು ರಾಜ್ಯದಲ್ಲಿ ಬಹಳ ತೃಪ್ತಿಕರವಾಗಿ ಈಡೇರಿಸಿಕೊಟ್ಟಿದ್ದೇವೆ, ಇನ್ನು ನಮ್ಮ ರಾಜ್ಯದಲ್ಲಿ ಏನೂ ಆಗಬೇಕಾಗಿಲ್ಲ ಎಂದು ಅವರ ಭಾಷಣದಲ್ಲಿ ಹೇಳಿದ್ದಾರೆ, ಯಾವ ರೀತಿ ಜಾರಿಯಲ್ಲಿ ತಂದಿದ್ದಾರೆಂದರೆ, ಫಿಕ್ಸೇಷನ್ ಆಫ್ ಫೇರ್ ರೆಂಟ್, ಟರ್ಮಿನೇಷನ್ ಆಫ್ ಲ್ಯಾಂಡ್ ಲಾರ್ಡ್ ಟೆನೆಂಟ್ ರಿಲೇಷನ್‌ಷಿಪ್, ಕನ್‌ಫರ್ಮೆಂಟ್ ಆಫ್ ಓನರಶಿಪ್ ಆನ್ ಆಕ್ಚುಯಲ್ ಕಲ್ಟಿವೇಟರ್, ಇದನ್ನೆಲ್ಲ ಮಾಡುವುದಕ್ಕೆ ಅಡ್ಮಿನಿಸ್ಟ್ರೇಟಿವ್ ಮೆಷರ್ ತೆಗೆದುಕೊಳ್ಳುತ್ತ ಇದ್ದೇವೆ, ಕಾನೂನಿನಲ್ಲಿ ಅಲ್ಲಿ ಇಲ್ಲಿ ಸ್ವಲ್ಪ ಬದಲಾವಣೆಗಳು ಆಗಬೇಕು. ಆ ಬದಲಾವಣೆಗಳು ಆಗದೆ ಇರುವುದರಿಂದ ಸ್ವಲ್ಪ ತೊಡಕಾಗಿದೆ, ಯಾರೂ ಕಾಳಜಿ ಮಾಡಬೇಕಾಗಿಲ್ಲ, ಆದಷ್ಟು ಬೇಗ ತರುತ್ತೇವೆ ಎಂದು ಹೇಳಿದರು. ೧೯೬೧ರಲ್ಲಿ ಭೂಸುಧಾರಣೆ ಶಾಸನ ಜಾರಿಗೆ ಬಂದ ಮೇಲೆ, ಈ ೨೦ ವರ್ಷಗಳಲ್ಲಿ ಕೇವಲ ರೈತರನ್ನು ಹೊಲದಿಂದ ಹೊರಗೆ ಹಾಕತಕ್ಕುದು, ಭೂಮಾಲೀಕರು ಜಮೀನು ಸ್ವಾಧೀನ ಪಡಿಸಿಕೊಳ್ಳತಕ್ಕಂತಹದ್ದು ಆಯಿತು. Ejection of tenants has been frozen for nearly 20 years and eviction has become next to impossible ಎನ್ನುವ ರೀತಿಯಲ್ಲಿ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿ ಆ ಸಭೆಯಲ್ಲಿ ಹೇಳಿದರು. ಶ್ರೀ ವೀರೇಂದ್ರ ಪಾಟೀಲರು ಈ ಸದನದಲ್ಲಿಲ್ಲ, ಅವರು ಕೇಂದ್ರದಲ್ಲಿದ್ದಾರೆ ಅವರ ಪ್ರತಿನಿಧಿಗಳು ಇಲ್ಲಿ ಇದ್ದಾರೆ. ಅವರು ಈ ಹೊತ್ತಿನ ದಿವಸ ಅದೇ ಮಾತನ್ನು ಅವರವರ ಕ್ಷೇತ್ರದಲ್ಲಿ ಹೋಗಿ ಹೇಳಿದರೆ ಎಷ್ಟು ಜನ ಅವರ ಹಿಂದೆ ಇರುತ್ತಾರೆ ಎನ್ನುವುದನ್ನು ನಾನು ಅವರನ್ನು ಕೇಳಬೇಕಾಗಿದೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಈ ಹೊತ್ತು ಇರುವಂಥ ಬಹಳ ಮುಖ್ಯವಾದ ಪ್ರಶ್ನೆ ಏನೆಂದರೆ, ಹಳ್ಳಿಯಲ್ಲಿರುವಂಥ ರೈತರಿಗೆ ಅವರ ಜಮೀನಿನಲ್ಲಿ ಯಾವರೀತಿಯ ಭದ್ರತೆಯೂ ಇಲ್ಲದೆ ಇರುವುದು. ದಾಖಲೆಗಳಿಲ್ಲ ಎನ್ನುವ ಕಾರಣದಿಂದ ಎಷ್ಟೋ ಜನರು ಈ ಹೊತ್ತು ರೈತರನ್ನು ಹೊರಗೆ ಹಾಕುತ್ತಿದ್ದಾರೆ. ಅದನ್ನು ತಡೆಯುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಏನೂ ಕ್ರಮ ಇನ್ನೂ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ನಮ್ಮ ಆಡಳಿತ ಯಂತ್ರದ ಬದಲಾವಣೆಯಾದರೆ, ನಮ್ಮ ಮಂತ್ರಿಗಳ ಮನಸ್ಸು ಬದಲಾವಣೆಯಾದರೆ, ಕೆಲಸ ಮಾಡುವ ರೀತಿ ಬದಲಾವಣೆಯಾದರೆ, ಸ್ವಲ್ಪಮಟ್ಟಿಗಾದರೂ ರಕ್ಷಣೆ ಕೊಡಬಹುದು. ಆದರೆ ಯಾವದೇ ಕ್ರಮ ತೆಗೆದುಕೊಳ್ಳದೆ ಶ್ರೀ ವೀರೇಂದ್ರ ಪಾಟೀಲರು ಕಣ್ಣು ಮುಚ್ಚಿ ಕುಳಿತುಕೊಂಡರು, ಈ ಸರ್ಕಾರ ಬಂದು ಆರು ತಿಂಗಳಿನಿಂದ ನೋಡುತ್ತಿದ್ದೇವೆ ಏನೂ ಕ್ರಮ ತೆಗೆದುಕೊಂಡಿಲ್ಲ ಬಿಹಾರದಲ್ಲಿ ನಡೆದ ರೀತಿಯಲ್ಲಿ ಇಲ್ಲಿಯೂ ನಡೆಯಬೇಕೋ ಏನೋ ಗೊತ್ತಿಲ್ಲ. ಕೆಲವು ಸಮಯದ ಹಿಂದೆ ಒಬ್ಬ ಜಮೀನ್ದಾರ ಗೋಲಿಬಾರ್ ಮಾಡಿದಾಗ ೧೧ ಜನ ರೈತರು ಸತ್ತು ಹೋದರು ಎಂದು ಪತ್ರಿಕೆಗಳಲ್ಲಿ ಬಂದದ್ದು ತಮಗೆಲ್ಲ ಗೊತ್ತಿರಬೇಕು. ಈ ಕಾರಣದಿಂದ ಬಂಗಾಳದಲ್ಲಿ ನಕ್ಸಲಬಾರಿ ಚಳುವಳಿ ಪ್ರಾರಂಭವಾಗಿ ಶಸ್ತ್ರಗಳನ್ನು ಹಿಡಿದು ಹೋರಾಟ ಮಾಡಬೇಕಾಗಿ ಬಂತು. ಅದರ ನ್ಯಾಯಾನ್ಯಾಯದ ಬಗ್ಗೆ ನಾನು ಹೇಳುತ್ತಿಲ್ಲ. ಅದರ ಹಿಂದೆ ಇರುವಂಥ, ಅದಕ್ಕೆ ಪ್ರಚೋದನೆ ಕೊಟ್ಟ ಕಾರಣವೇನೆಂದರೆ, ಅಲ್ಲಿಯ ಭೂ ಮಾಲೀಕರು ತಮ್ಮ ಕೈಯೊಳಗಿನ ಕಾಯಿದೆ ಉಪಯೋಗ ಮಾಡಿ ರೈತರನ್ನು ಬೇಟೆಯಾಡುವುದಕ್ಕೆ ಹೋದರು. ರೈತರ ಪ್ರತಿಭಟನೆ ಹೆಚ್ಚಾಗಿ ಬೆಳೆಯಿತು. ಈಗ ನಮ್ಮ ರಾಜ್ಯದಲ್ಲಿ ಕೆಲವು ಕಡೆಗಳಲ್ಲಿ ಅನೇಕ ಗ್ರಾಮಗಳಲ್ಲಿ ಒಂದು ವಾತಾವರಣ ಉಂಟಾಗಿದೆ. ಅದನ್ನು ತಮ್ಮ ಗಮನಕ್ಕೆ ನಾವು ತರುತ್ತಿದ್ದೇವೆ. ಈ ರೀತಿಯ ಶಾಸನ ಮಾಡುತ್ತೇವೆ ಎಂದು ಬರೀ ಮಾತುಗಳನ್ನು ಹೇಳಿಕೊಂಡು ಹೋದರೆ ರೈತರಿಗೆ ರಕ್ಷಣೆ ಸಿಕ್ಕುತ್ತದೆ, ಅವರು ಸಂತೃಪ್ತರಾಗುತ್ತಾರೆ ಎನ್ನುವ ಮನೋಭಾವನೆಯನ್ನು ತಾವು ದಯುವಿಟ್ಟು ಬಿಡತಕ್ಕುದು, ಒಳ್ಳೆಯದು ಎಂದು ನಾನು ಕೇಳಿಕೊಳ್ಳುತ್ತೇನೆ.

ಬಾಗೇಪಲ್ಲಿ ತಾಲ್ಲೂಕಿನಲ್ಲಿ ಜಮೀನ್ದಾರರು ರೈತರನ್ನು ಹೊಲದಿಂದ ಓಡಿಸಲಿಕ್ಕೆ, ದಬ್ಬಾಳಿಕೆ ಮಾಡುತ್ತಿದ್ದಾರೆಂದು ಸರ್ಕಾರದ ಗಮನಕ್ಕೆ ಈಗಾಗಲೇ ತಂದಿದ್ದೇನೆ. ಬೆಂಗಳೂರು ತಾಲ್ಲೂಕಿನ ಕೊನೆ ದಾಸಪುರದಲ್ಲಿಯೂ ರೈತರನ್ನು ಹೊಡೆದು ಓಡಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಮೊನ್ನೆ ತಾನೆ ಪತ್ರಿಕೆಯಲ್ಲಿ ಬಂದಿದೆ, ಉಡುಪಿಯಲ್ಲಿ ಸೊಪ್ಪು ಕೊಯ್ಯಲಿಕ್ಕೆ ಹೋದ ರೈತರನ್ನು ಅಲ್ಲಿನ ಜಮೀನ್ದಾರರು ಹೊಡೆದು ನಂತರ ಆಸ್ಪತ್ರೆಗೆ ಸೇರಿಸಿದ್ದಾರೆಂದು ತಿಳಿದು ಬಂದಿದೆ. ನಮ್ಮ ಭಾಗದ ಮಾಜಿ ಎಂ. ಎಲ್. ಎ. ಅವರ ಗ್ರಾಮದಲ್ಲಿ ಯಾವ ರೀತಿ

(ಶ್ರೀ ಡಿ. ದೇವರಾಜ್ ಅರಸ್).—

ರೆ ತರನ್ನು ದಬ್ಬಾಳಿಕೆ ಮಾಡಿ ಹೊಲದಿಂದ ಹೊರಗೆ ಹಾಕಲಿಕ್ಕೆ ಪ್ರಯತ್ನ ಮಾಡಿದರು ಎಂಬುದನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಈ ರೀತಿ ಸಾವಿರಾರು ಉದಾಹರಣೆಗಳನ್ನು ಕೊಡಬಹುದು. ಶ್ರೀಮಾನ್ ವೀರೆಂದ್ರಪಾಟೀಲರು ಹೇಳಿದಂಥ ಮಾತನ್ನು ಅದೇ ದಾಟಿಯಲ್ಲಿ, ಅದೇ ಧೋರಣೆಯಲ್ಲಿ ತಮ್ಮ ಸರ್ಕಾರ ನಡೆಸುತ್ತಾ ಹೋಗುವುದನ್ನು ನೋಡಿದರೆ ವ್ಯಸನ ವಾಗುತ್ತದೆ. ಈ ಭೂ ಸುಧಾರಣೆಯನ್ನು ಜಾರಿಗೆ ತರಲಿಕ್ಕೆ ತಮಗೆ ಆಗುವುದಿಲ್ಲ ಎಂದು ಮಾತ್ರ ಹೇಳಬೇಕಾಗಿದೆ. ಈ ಭೂ ಸುಧಾರಣೆಯ ಕೆಲವು ಅಂಶಗಳನ್ನು ತೆಗೆದುಕೊಂಡು ನೋಡಿದರೆ, ಮೊದಲನೆಯದಾಗಿ, ಸೆಕ್ಷನ್–೮, ಗೇಣಿಗೆ ಸಂಬಂಧಪಟ್ಟ ವಿಚಾರದಲ್ಲಿ :

"8. RENT.—Subject to the provisions of this Act and notwithstanding anything contained in any law, custom, usage, agreement or decree or order of a court to the contrary,—

(*a*) the rent payb'e in respect of any land by the tenant shall be paid annually ; and

(*b*) such rent shall with effect from the date of commencement of the Mysore Land Reforms (Amendmenl) Act, 1972, be ten times the land revenue payable in respect of such land :" ಎಂದು ಹೇಳಿದ್ದೀರಿ. ಬಹಳ ಕ್ರಾಂತಿಕಾರಕವಾದ ಸುಧಾರಣೆ ಎಂದು ಹೇಳಿದ್ದಾರೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಅವರ ನಾಯಕರಾದಂಥ ವೀರೇಂದ್ರ ಪಾಟೀಲರು ಎಲ್ಲರೂ ಕೂಡ ಕಂದಾಯುದ ಹತ್ತುಪಟ್ಟು ಗೇಣಿ ನಿರ್ಣಯ ಮಾಡಿದ್ದರೆ ಆದರಿಂದ ಅನೇಕ ಮಂದಿ ಭೂ ಮಾಲೀಕರಿಗೆ ಕಷ್ಟವಾಗುತ್ತದೆ, ನಷ್ಟವಾಗುತ್ತದೆ ಎನ್ನುವ ರೀತಿಯಲ್ಲಿ ಕಣ್ಣೀರು ಸುರಿಸುತ್ತಿದ್ದರು.

MR. DEPUTY SPEAKER .—It has a proviso !

ಬಿ. ವಿ. ಕಕ್ಕಿಲ್ಲಾಯ .—ಕಂದಾಯದ ಹತ್ತು ಪಟ್ಟು ಗೇಣಿ ಕೊಡಬೇಕು ಎನ್ನುವ ಸೂಚನೆ ಹೊಸದು ಅಲ್ಲ. ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದಾಗ ಈ ಸಭೆಯಲ್ಲಿ ಮಾತನಾಡುತ್ತಾ, ಗೇಣಿಯನ್ನು ನಿರ್ಣಯ ಮಾಡುವಂಥ ಕ್ರಮ ತಹಶೀಲ್ದಾರರು ನೋಟಿಫಿಕೇಷನ್ ಮಾಡಿ ಅದರ ಆಧಾರದ ಮೇರೆ ಗೇಣಿಯನ್ನು ನಿಗದಿ ಮಾಡುವಂತಹ ಕ್ರಮ ಬಹಳ ಜಟಿಲವಾಗಿರುವುದರಿಂದ ಬೇಗ ಬೇಗನೆ ನಿರ್ಣಯ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದರು. ಇದನ್ನು ಸುಲಭ ಮಾಡುವುದಕ್ಕೋಸ್ಕರ ಭೂ ಕಂದಾಯದ ಎಷ್ಟು ಅಂಶ ಗೇಣಿ ಇರಬೇಕು ಎನ್ನುವ ಕ್ರಮವನ್ನು ಜಾರಿಗೆ ತರಬೇಕು ಎಂದು ತಾವು ಯೋಚನೆಮಾಡಿದ್ದೀರಿ. ಈ ನಿಮ್ಮ ಯೋಚನೆ ಹೊಸದು ಅಲ್ಲ. ಅವರು ಹೇಳಿರುವ ಯೋಚನೆ, ನಿಮ್ಮ ಮುಂದಿರುವುದು. ಮಾನ್ಯ ಮಿತ್ರರಾದ ಭಂಗಿಯವರು ಹೇಳಿದ ಹಾಗೆ, .

"maximum rent was five times the land revenue assessment or Rs. 20 per acre whichever is less".

ಅಂದರೆ ಲ್ಯಾಂಡ್ ರೆವಿನ್ಯೂ ಹತ್ತುಪಟ್ಟು ಗೇಣಿ ಕೊಡಬೇಕೆಂದು ಮಾಡಿದ್ದಾರೆ. ಇದು ಬಹಳ ಕಡಿಮೆಯಾಗಿದೆ, ಆದರಿಂದ ನಿಮಗೆ ಉಪಕಾರವಾಗುತ್ತದೆ ಎನ್ನುವ ರೀತಿಯಲ್ಲಿ ರೈತರಿಗೆ ಆಸೆ ಹುಟ್ಟಿಸಲಿಕ್ಕೆ ಅನುಕೂಲವಾಗುತ್ತದೆ, ಮುಂದಕ್ಕೆ ಓದಿದರೆ, ತಾನೆ ತಾನಾಗಿ ಅಪ್ಲೈ ಆಗುವ ಗೇಣಿ ನಿರ್ಣಯ ಮಾಡುವಂಥ ಕ್ರಮ ಸುಲಭಗೊಳಿಸುವುದಕ್ಕೆ ಅನುಕೂಲ ಆಗಬೇಕು ಅಷ್ಟೇ ಅಲ್ಲ, ಇದರ ಜೊತೆಯಲ್ಲಿ ಇವತ್ತು ಕೆಲವು ಪ್ರದೇಶಗಳಲ್ಲಿ ಗೇಣಿ ಬಹಳ ವಿಪರೀತವಾಗಿದೆ. ಅಂತಹ ಕಡೆಗಳಲ್ಲಿ ರೈತರಿಗೆ ಗೇಣಿ ರಿಯಾಯಿತಿ ಕೂಡ ಆಗಬೇಕು. ಹೊಸ ಆಕ್ಟನಲ್ಲಿ ಗೇಣಿ ನಿರ್ಣಯ ಮಾಡುವಾಗ, ಯಾವ ರೀತಿ ಬಾಂಬೆ, ಹೈದರಾಬಾದ್ ಆಕ್ಟನಲ್ಲಿ ಎಷ್ಟೋ ವರ್ಷಗಳಿಂದ ರೈತರಿಗೆ ಗೇಣಿ ಕಡಿಮೇ ಮಾಡಲಿಕ್ಕೆ ನಿರ್ಣಯ ಮಾಡಿದ್ದಾರೋ, ಅದರಂತೆ ರಾಜ್ಯಾದ್ಯಂತ ಎಲ್ಲ ಕಡೆಗಳಲ್ಲೂ ಗೇಣಿ ಕಡಿಮೆ ಯಾಗಬೇಕು ಎಂದು ರೈತರು ನಿರೀಕ್ಷಣೆ ಮಾಡುತ್ತಾರೆ. ಜಮೀನ್ದಾರರಿಗೆ ಭೂಮಿಯ ಹಕ್ಕು ಅಂದರೆ ಅವನ ಹೆಸರಿನಲ್ಲಿ ಖಾತೆ ಇದೆ ಎನ್ನುವ ಒಂದೇ ಒಂದು ಕಾರಣದಿಂದ ಅವರು ವ್ಯವಸಾಯ ಮಾಡುವುದಕ್ಕೆ ಒಂದು ಪೈಸೆಯನ್ನು ಖರ್ಚು ಮಾಡದೆ ಇದ್ದರೂ ಅದರಲ್ಲಿ

ಆಗುವ ಕಷ್ಟ ನಷ್ಟಗಳಿಗೆ, ಮಳೆ ಬೀಳದೆ ಇರಲಿ, ಬೆಳೆ ಕೆಟ್ಟು ಹೋಗಲಿ ರೈತ ಒಬ್ಬನೇ ವರ್ಷಾಂಗಟ್ಟಲೆ ದುಡಿದು, ಬೆಳೆ ಬೆಳೆಸಿ, ಭೂಮಾಲಿಕನಿಗೆ ಬೆಳೆಯ ಒಂದು ಅಂಶ ಕೊಟ್ಟುಕೊಂಡು ಏನು ಬಂದಿದ್ದಾನೆ, ಅದನ್ನು ಕೊನೆಗಾಣಿಸಬೇಕು : ಭೂ ಮಾಲೀಕರಿಗೆ ಪರಿಹಾರ ಕೊಡುವ ಪ್ರಶ್ನೆಯೇ ಬರುವುದಿಲ್ಲ, ಏತಕ್ಕೋಸ್ಕರ ಪರಿಹಾರ ಕೊಡಬೇಕು ? ಭೂಮಿಯನ್ನು ಅಭಿವೃದ್ಧಿ ಪಡಿಸುವಲ್ಲಿ, ಅದನ್ನು ಸಾಗುವಳಿ ಮಾಡುವುದರಲ್ಲಿ ಬೆಳೆ ಬೆಳೆಸುವುದರಲ್ಲಿ ದೇಶಕ್ಕೆ ಆಹಾರವನ್ನು ಒದಗಿಸುವುದರಲ್ಲಿ ಭೂ ಮಾಲೀಕನಿಂದ ಎಳ್ಳಷ್ಟು ಕೂಡ ಕಂಟ್ರಿಬ್ಯೂಷನ್ ಇಲ್ಲ. ಅಂತ ಭೂಮಾಲಿಕನಿಗೆ ರೈತ ದುಡಿದು ಬೆಳೆಸಿದ್ದರಲ್ಲಿ ಒಂದು ಅಂಶವನ್ನು ಕೊಡುತ್ತಾ ಇರಬೇಕು, ಎಂಬುವುದು ಸರಿಯೇ ? ನಮ್ಮ ರಾಜ್ಯದಲ್ಲಿ ಒಕ್ಕಲುತನ ಹೆಚ್ಚು ಇರುವ ಪ್ರದೇಶ ಎಂದರೆ, ದಕ್ಷಿಣ ಕನ್ನಡ ಜಿಲ್ಲೆ, ಅಲ್ಲಿ ೫೬ ಪರ್ಸೆಂಟ್ ವ್ಯವಸಾಯಗಾರರು ಒಕ್ಕಲು ಆಗಿದ್ದಾರೆ. ಅಲ್ಲಿ ಉತ್ಪತ್ತಿಯ ೬೦ ಪರ್ಸೆಂಟ್ ಗೇಣಿ ಕೊಡಬೇಕು ಎನ್ನುವುದನ್ನು ಮೈಸೂರು ರಾಜ್ಯಕ್ಕೆ ವಿಲೀನವಾಗುವುದಕ್ಕೆ ಕೆಲವೇ ತಿಂಗಳು ಮುಂಚೆ ತಾತ್ಕಾಲಿಕ ಮಸೂದೆ ತಂದಿದ್ದರಲ್ಲಿ ನಿಗದಿ ಮಾಡಿದ್ದು. ಅದಕ್ಕೆ ಮೊದಲು ೫೦—೬೦ ಪರ್ಸೆಂಟ್ ಗೇಣಿಯನ್ನು ಕೆಲವು ರೈತರು ಭೂಮಾಲೀಕರಿಗೆ ಕೊಡುತ್ತಿದ್ದರು. ೪೦ ಪರ್ಸೆಂಟ್ ಗೇಣಿಕೊಡಬೇಕು ಎನ್ನುವುದನ್ನು ಮದ್ರಾಸ್ ಸರ್ಕಾರ ತೀರ್ಮಾನ ಮಾಡಿತು. ಇವತ್ತು ಇದಕ್ಕಿಂತ ಸುಲಭವಾಗಿ ತಹಸೀಲ್ದಾರರ ನೋಟಿಫಿಕೇಷನ್ ಪ್ರಕಾರ, ೧೯೬೧ ಆಕ್ಟ್ ಪ್ರಕಾರ ಉತ್ಪತ್ತಿಯ ನಾಲ್ಕನೆ ಒಂದು ಭಾಗ, ಐದನೇಯ ಒಂದು ಭಾಗ ಗೇಣಿ ಎಂದು ನಿಗದಿ ಮಾಡಿದ್ದಾರೆ. ತಹಸೀಲ್ದಾರರ ನೋಟಿಫಿಕೇಷನ್ ಅನ್ನು ಪರಿಶೀಲನೆ ಮಾಡಿನೋಡಿದರೆ, ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ತರಹ ನೋಟಿಫಿಕೇಷನ್ ಹೊರಡಿಸಿದ್ದಾರೆ. ಮಂಗಳೂರು ತಾಲ್ಲೂಕಿನಲ್ಲಿ ಮೂಲ ಉತ್ಪತ್ತಿಯ ೩೦ ಪರ್ಸೆಂಟ್ ಕೊಡಬೇಕು ; ಉಡಿಪಿ, ಬಂಟವಾಳ, ಕಾರ್ಕಳ, ಪುತ್ತೂರು ತಾಲ್ಲೂಕಿನಲ್ಲಿ ನೋಡಿದರೆ, ತಹಸೀಲ್ದಾರರ ನೋಟಿಫಿಕೇಷನ್ ಆಧಾರದಲ್ಲಿ ರೈತ ಕೊಡಬೇಕು. ಈ ಗೇಣಿ ಕಂದಾಯದ ೪೦ ಪರ್ಸೆಂಟಿಗಿಂತ ಕಡಿಮೆಯಾಗುವುದಿಲ್ಲ. ಕೆಲವು ಸಂದರ್ಭಗಳಲ್ಲ ೫೦ ಪರ್ಸೆಂಟ್ ಇದೆ. ಯಾವುದೇ ಉತ್ಪತ್ತಿಗೂ ೫೦ ಪರ್ಸೆಂಟ್ ಗೇಣಿಯನ್ನು ಭೂ ಮಾಲೀಕರಿಗೆ ಕೊಡಬೇಕು ಎಂದರೆ, ಗೇಣಿದಾರ ಮುಂದಿನ ವರ್ಷ ಯಾವ ರೀತಿ ಸಾಗುವಳಿ ಮಾಡಬೇಕು ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಹಿಂದೆ ಒಂದು ಮೂಟೆ ಅಕ್ಕಿಗೆ ಅಥವಾ ಅರ್ಧ ಚೀಲ ಭತ್ತಕ್ಕೆ ಮೂರು ರೂಪಾಯಿ ಬೆಲೆ ಇತ್ತು. ಆಗ ಭತ್ತ ಯಾರಿಗೂ ಬೇಕಾಗಿರಲಿಲ್ಲ ಇವತ್ತು ಏನಾಗಿದೆ ಎಂದರೆ, ಒಂದು ಮೂಟೆ ಭತ್ತಕ್ಕೆ ೨೫ ರೂಪಾಯಿ ಆಗಿದೆ.

ಗೇಣಿ ಕೊಟ್ಟ ಮೇಲೆ ರೈತನಿಗೆ ಉಳಿಯುವುದು ಎಷ್ಟು ? ಬೆಳೆದುದರಲ್ಲಿ ಮಾಲೀಕನಿಗೆ ಕೊಡುವುದನ್ನು ಕೊಟ್ಟು ಅವನಿಗೆ ಮಳೆಗಾಲದಲ್ಲಿ ಊಟ ಮಾಡುವುದಕ್ಕೆ ಉಳಿಯುವುದಿಲ್ಲ. ನಂತರ ಆಹಾರ ಮಂತ್ರಿಗಳ ಹತ್ತಿರ ಬಂದು ರೇಷನ್ ಕಾರ್ಡ್ ಪಡೆದುಕೊಂಡು ರೇಷನ್ ತೆಗೆದುಕೊಳ್ಳಬೇಕು. ಗೇಣಿ ಕೊಟ್ಟರೆ ಊಟಕ್ಕೆ ಉಳಿಯುವುದಿಲ್ಲ. ಅದೇ ಭೂಮಾಲೀಕ ಮನೆಯಲ್ಲಿ ಕುಳಿತುಕೊಂಡು ೫೦ ಪರ್ಸೆಂಟ್ ಗೇಣಿ ಪಡೆಯುತ್ತಾನೆ. ಒಂದು ಮೂಟೆ ಬತ್ತಕ್ಕೆ ೨೫ ರೂಪಾಯಿ, ಒಂದು ಮೂಟೆ ಅಕ್ಕಿಗೆ ೫೦—೫೫ ರೂಪಾಯಿ ಬೆಲೆಯಿದೆ. ಬೆಲೆ ವಿಚಾರದಲ್ಲಿ ಹಿಂದೆ ಇದ್ದುದ್ದಕ್ಕಿಂತ ಈಗ ಇರುವ ಪರಿಸ್ಥಿತಿ ಎಷ್ಟು ಉತ್ತಮಗೊಂಡಿದೆ ಎಂಬುದನ್ನು ಯೋಚನೆಮಾಡಿ. ಇಂಥ ಪರಿಸ್ಥಿತಿಯಲ್ಲಿ ಗೇಣಿಯನ್ನು ಕಡಿಮೆ ಮಾಡುವುದಕ್ಕೆ ಯಾವುದೇ ಪ್ರಯತ್ನವನ್ನು ಮೈಸೂರು ಸರ್ಕಾರದಲ್ಲಿ ಮಾಡಲಿಲ್ಲ ಎನ್ನುವುದು ತೀವ್ರವಾದ ಆಕ್ಷೇಪ. ಈಗ ಭೂಕಂದಾಯದ ೧೨ ಪಟ್ಟು ಗೇಣಿ ಕೊಡಬೇಕೆಂದು ಹೇಳಿದ್ದಾರೆ. ಸರ್ಕಾರದ ಸೋರ್ಸ್‌ನಿಂದ ನೀರು ಬರುತ್ತಿದ್ದರೆ, ಎರಡು ಬೆಳೆಗೆ ನೀರು ಸಿಕ್ಕುವ ಹಾಗಿದ್ದರೆ ಎಕರೆ ಒಂದಕ್ಕೆ ೬೬ ರೂಪಾಯಿ ಒಂದು ಬೆಳೆಗೆ ನೀರು ಸಿಕ್ಕುವ ಹಾಗಿದ್ದರೆ ೪೪ ರೂಪಾಯಿ, ಸೆಮಿಡ್ರೈ ಕ್ರಾಪ್ಸ್‌ಬೆಳೆಯುವ ಪ್ರದೇಶಕ್ಕೆ ೨೨ ರೂಪಾಯಿ ಕೊಡಬೇಕು ಎಂದು ಸರ್ಕಾರದವರು ಹೇಳಿದ್ದಾರೆ. ಇದರಲ್ಲಿ ಯಾವ ನ್ಯಾಯ ಇದೆ ಎಂದು ತಮ್ಮನ್ನು ಕೇಳುವುದು. ಗೌರ್ನಮೆಂಟ್ ಸೋರ್ಸ್‌ನಿಂದ ನೀರು ತೆಗೆದು ರೈತ ಇರಿಗೇಷನ್ ಮಾಡಿ ಅವ ಬೆಳೆ ಬೆಳೆಸಿದರೆ, ಜಮೀನ್‌ದಾರನಿಗೆ ಏತಕ್ಕೆ ರೆಂಟ್ ಕೊಡಬೇಕು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಅನೇಕ ಕಡೆ ಸಾರ್ವಜನಿಕರ ಹಣ ಖರ್ಚುಮಾಡಿ ಕಟ್ಟಿದ ನಾಲಾಗಳು ಇವೆ. ಆ ನೀರು ರೈತನ ಉಪಯೋಗಕ್ಕಾಗಿ ಇದೆ. ರೈತನು ಭೂಮಾಲೀಕನಿಗೆ ದುಡ್ಡು ಏತಕ್ಕೆ ಕೊಡಬೇಕು. ನಮ್ಮಲ್ಲಿ ಸರ್ಕಾರದವರು ಕಟ್ಟಿದಂತ ಅಣೆಕಟ್ಟುಗಳು ಇಲ್ಲ. ನಮ್ಮ ಜಿಲ್ಲೆ ಶಿವಪ್ಪನಾಯಕನ ರಾಜ್ಯಕ್ಕೆ ಸೇರಿರಲಿಲ್ಲ. ಶಿವಪ್ಪನಾಯಕರು ಕಟ್ಟಿದಂತ ಕಟ್ಟೆಗಳಾಗಲಿ ಕೆರೆಗಳಾಗಲಿ ನಮ್ಮಲ್ಲಿ ಇಲ್ಲ. ನಮ್ಮದು ಸುಂದರವಾದ ಮತ್ತು ಫಲವತ್ತಾದ ನಾಡು ಎಂದು ಹೇಳಿದ್ದಾರೆ. ಬರೀ ಕೊಳಗಳು ಸಣ್ಣಸಣ್ಣ ತೋಡುಗಳು ಹರಿದು ಹೋಗುವುದಷ್ಟೇ ನಮ್ಮಲ್ಲಿ ಇರುವುದು. ಮಳೆಗಾಲದಲ್ಲಿ ನೀರು ಬರುತ್ತದೆ. ಬೇಸಿಗೆಯಲ್ಲಿ ನೀರು ಇರುವುದಿಲ್ಲ. ಅಲ್ಲಿ ಹೊಂಡ ಮಾಡಿ ನೀರು ಎತ್ತಿ, ಎರಡು ಬೆಳೆ ಬೆಳೆಯುತ್ತಾರೆ, ಕೆಲವರು ಕಷ್ಟಪಟ್ಟು ನೇತ್ರಾವತಿ ಗುರುಪುರ ನದಿಗಳಿಂದ ನೀರು ಎತ್ತಿ ಸಾಗುಮಾಡುತ್ತಾರೆ. ಇಂತಹ ಕಡೆ ರೈತ ತನ್ನ ಕಡೆಯಿಂದ ಖರ್ಚುಮಾಡಿ ತನ್ನ ಶಕ್ತಿಯನ್ನೆಲ್ಲಾ ಉಪಯೋಗಮಾಡಿ ನೀರು ಎತ್ತಿ ಬೇಸಾಯಮಾಡಿ ಭೂಮಾಲಿಕನಿಗೆ ಗೇಣಿ ಕೊಡಬೇಕು. ಇದು ಯಾವ ನ್ಯಾಯ ? ಇಲ್ಲಿ ಗೇಣಿ ಕಡಿಮೆ

(ಶ್ರೀ ಡಿ. ದೇವರಾಜ್ ಅರಸ್).—

ಯಾಗುವ ಅಂಶ ಇದರಲ್ಲಿ ಕಾಣುತ್ತಾ ಇಲ್ಲ. ಇಷ್ಟು ಕೂಡ ಅನುಷ್ಠಾನಕ್ಕೆ ಬರುವುದು ಯಾವಾಗ ಎಂದರೆ ಫ್ರಮ್ ದಿ ಡೇಟ್ ಆಫ್ ದಿ ನೋಟಿಫಿಕೇಷನ್ ಎಂದರೆ ಇದು ೧೯೭೩ನೇ ಜನವರಿ ಒಂದನೇ ತಾರೀಖು ಬರಬಹುದು ಎಂದು ಕಾಣುತ್ತದೆ. ಇದಕ್ಕೆ ರಾಷ್ಟ್ರಪತಿಗಳ ಅನುಮತಿ ಸಿಕ್ಕಿ ಬರಬೇಕಾಗಿದೆ. ಅಷ್ಟು ಆಗುತ್ತದೆ ಎಂದು ಇಟ್ಟುಕೊಳ್ಳೋಣ. ಇದು ಜಾರಿಗೆ ಬಂದಮೇಲೆ ಸ್ವಲ್ಪ ಸವಲತ್ತು ಅವತ್ತಿನಿಂದ ಬರುತ್ತದೆ. ೧೯೬೧ರ ಮಸೂದಾ ಶಾಸನ ಬಂದಮೇಲೆ, ನಾವು ೭೨ರಲ್ಲಿ ಇದ್ದೇವೆ. ೧೧ ವರ್ಷ ಆಯಿತು. ೧೧ ವರ್ಷಗಳ ಕಾಲದಲ್ಲಿ ರೈತರು ನೋಟಿಫಿಕೇಷನ್ ಪ್ರಕಾರ ಗೇಣಿ ಕೊಡಬೇಕು ಎಂದು ಡಿಕ್ರಿ ಆಗಿದೆ. ಆ ನೋಟಿಫಿಕೇಷನ್ ಫೈನಲ್ ಆಗದೆ ಇರುವಲ್ಲಿ, ಮೊನ್ನೆ ತಾವು ಮಾಡಿದಂತ ಶಾಸನದ ಪ್ರಕಾರ ೨ ವರ್ಷಗಳ ಗೇಣಿ ಕೊಟ್ಟರೆ ಆ ಕಾರಣಕ್ಕಾಗಿ ಒಕ್ಕಲು ಎಬ್ಬಿಸಬಾರದು ಎಂದು ರಕ್ಷಣೆ ಸಿಕ್ಕಿದೆ. ಇಲ್ಲಿ ತೊಂದರೆ ಬರುವುದು ಏನು ಎಂದರೆ, ಯಾವನೇ ಒಬ್ಬ ನಿಜವಾಗಿ ಅನುಭವ ಇರುವಂತಹ ಭೂಮಾಲಿಕ ಎವಿಕ್ಷನ್ ಕೇಳಿ ಕೋರ್ಟಿಗೆ ಹೋಗುವುದಿಲ್ಲ. ಕೇಳಬೇಕಾದರ ಅಗತ್ಯ ಇರುವುದಿಲ್ಲ. ಎರಡು ವರ್ಷ ಕೊಡಬೇಕಾದ ಗೇಣಿ ಕೊಡುವುದಕ್ಕೆ ರೈತನಿಗೆ ಆಗದೆ ಹೋದರೆ ೩ನೇ ವರ್ಷ ಜಮೀನುದಾರ ನೋಟೀಸ್ ಕೊಡುತ್ತಾನೆ. ಅಂಥ ಸಂದರ್ಭದಲ್ಲಿ ೨ ವರ್ಷದ್ದು ಗೇಣಿ ಕೊಟ್ಟರೆ ಎವಿಕ್ಷನ್ ನಿಲ್ಲುತ್ತದೆಂದು ಹೇಳಿದ್ದಾರೆ. ಈಗ ಆಯಾಯ ವರ್ಷ ಆಗುತ್ತಾ ಬಂದು ಪ್ರತಿವರ್ಷ ನೋಟೀಸ್ ಕೊಡುತ್ತಾ ಬರುತ್ತಿರುತ್ತಾನೆ. ವರ್ಷ ವರ್ಷೇ ಅವರ ಮೇಲೆ ಸೂಟ್ ದಾಖಲೆ ಮಾಡುತ್ತಾ ಬರುತ್ತಾನೆ. ಕೆಲವು ಡಿಕ್ರಿ ಆಗಿದೆ ಕೆಲವು ಡಿಕ್ರಿ ಆಗಲಿಲ್ಲ. ಕೊಡಬೇಕಾಗಿರುವುದನ್ನು ಕೊಟ್ಟರೆ ಎವಿಕ್ಷನ್ ಆಗುವುದಿಲ್ಲ ಎಂದು ಹೇಳಿದ್ದಾರೆ. ಬಹಳ ಸಂತೋಷ ಎವಿಕ್ಷನ್ ಆಗದೆ ಇದ್ದರೂ ಈ ಗೇಣಿ ವಸೂಲು ಮಾಡಲಿಕ್ಕೆ ಇವೊತ್ತು ಕೋರ್ಟುಗಳಲ್ಲಿ ಡಿಕ್ರಿ ಆಗಿರುವುದನ್ನು ಅಮಲ್‌ಜಾರಿ ತೆಗೆದು ವಸೂಲು ಮಾಡುವುದಕ್ಕೆ ಹೊರಟರೆ ಯಾರಿಗೆ ಭೂಮಿ ಬಿಟ್ಟು ಹೋಗುತ್ತಾರೆ. ಅವನನ್ನು ಜಪ್ತಿಮಾಡುತ್ತಾನೆ, ಗೇಣಿದಾರನ ಹತ್ತಿರ ಎತ್ತುಗಳು ಇದ್ದರೆ ತೆಗೆದುಕೊಂಡು ಹೋಗುತ್ತಾನೆ, ಪಾತ್ರೆ ಇದ್ದರೆ ತೆಗೆದುಕೊಂಡು ಹೋಗುತ್ತಾನೆ. ಇದನ್ನು ಪ್ರಿವೆಂಟ್ ಮಾಡುವುದಕ್ಕೆ ಯಾವ ಶಾಸನವೂ ಇಲ್ಲ. ದುಬಾರಿ ಗೇಣಿ ೩೦ ಪರ್ಸೆಂಟು ಕೊಡಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಕೊಡಬೇಕಾದ್ದನ್ನು ವಸೂಲು ಮಾಡುವುದಕ್ಕೆ ಜಮೀನುದಾರನಿಗೆ ಅವಕಾಶ ಸಿಕ್ಕಿದರೆ ಪ್ರತ್ಯೇಕವಾಗಿ ಎವಿಕ್ಷನ್‌ಗೆ ಅವಕಾಶ ಮಾಡಿಕೊಡಬೇಕಾಗಿಲ್ಲ. ಇನ್ನೊಂದು ವಿಚಾರದಲ್ಲಿ ತಮ್ಮ ಗಮನಕ್ಕೆ ತರುವುದು ಏನೆಂದರೆ ತಹಸಿಲ್ದಾರ್ ನೋಟಿಫಿಕೇಷನ್ ಇದೆ. ನೋಟಿಫಿಕೇಷನ್ ಬಗ್ಗೆ ಕೆಲವು ಕಡೆಗಳಲ್ಲಿ ಡಿಸಿಗೆ ಅಪೀಲ್‌ಗಳು ಬಂದಿಲ್ಲ, ಅಲ್ಲಿ ಎಷ್ಟು ಜನ ಅಪೀಲು ಕೊಟ್ಟಿದ್ದಾರೆ ? ತಾಲ್ಲೋಕುವೈಸ್ ನೋಟಿಫಿಕೇಷನ್ ಬರುತ್ತದೆ ೧೦ ರೈತರಿಂದ ಅಪೀಲ್ ಬಂದರೆ ಅಪೀಲ್ ಮಾಡಿದ ಕಡೆಯಲ್ಲಿ ಜನರಲ್ ಸ್ಟೇ ಕೊಡುತ್ತಾರೆ. ಕೋರ್ಟಿನಲ್ಲಿ ಯಾವ ಕೇಸುಗಳು ಇವೆ ಎಷ್ಟು ಗೇಣಿ ಬಾಕಿ ಇವೆ ; ವಿಚಾರಣೆಗೆ ತೆಗೆದುಕೊಳ್ಳಬಾರದು ಎಂದು ಏನು ಹೇಳುತ್ತಾರೆ ಅಂತಹ ಎಷ್ಟು ಕೇಸುಗಳು ಬಾಕಿ ಉಳಿದಿವೆ ? ಕೆಲವು ಕಡೆಗಳಲ್ಲಿ ಜನರಲ್ ಸ್ಟೇ ಕೊಟ್ಟರು ಯಾರು ಅಪೀಲ್ ಮಾಡುತ್ತಾರೆ ಅವರಗೆ ಸ್ಟೇ ಕೊಡುತ್ತಾರೆ. ಬಾಕಿ ಉಳಿದದ್ದು ಡಿಕ್ರಿ ಆಗುತ್ತಾ ಇವೆ ನಾಳೆ ಅಪೀಲ್ ಮಾಡಿದಂತ ರೈತರಿಗೆ ಏನಾದರೂ ಡೆಪ್ಯುಟಿ ಕಮೀಷನರ್‌ರವರು ಮಾಡಿಷ್ಟೆ ಮಾಡಿದರು ಎಂದು ಇಟ್ಟುಕೊಳ್ಳೋಣ. ಮಾಡಿದಾಗ ಪರಿಣಾಮ ಏನಾಗುತ್ತದೆ ? ಸ್ಟೇ ಆರ್ಡರ್ಸ್ ಆಗದೆ ಇರುವಂತ ಕಡೆಗಳಲ್ಲಿ ಇದ್ದಂಥ ಕೇಸುಗಳು ಯಾವರೀತಿ ಡಿಕ್ರಿಯಾಗುತ್ತವೆ ? ಮಾಡಿಷ್ಟೆ ಮಾಡಿರುವಂತಹ ಕೇಸುಗಳಲ್ಲಿ ಯಾವರೀತಿ ಡಿಕ್ರಿಯಾಗುತ್ತದೆ ; ಇದರಿಂದ ಅನೇಕ ಗೊಂದಲಗಳು ಉಂಟಾಗುವುದಕ್ಕೆ ಅವಕಾಶವಿದೆ. ಆದುದರಿಂದ... ..ಈ ಕ್ಲಾಸ್ ೮ರ ಬಗ್ಗೆ ಇದರಲ್ಲಿ ಹೇಳಿರುವುದು ೧೯೭೫ರಲ್ಲಿ

.. .. 400—P ·M.

ಶ್ರೀ ಡಿ. ಕೆ. ನಾಯ್ಕರ್.—ಅರಿಯರ್ಸ್ ಆಫ್ ರೆಂಟ್ ನಿರ್ಧಾರ ಮಾಡುವುದು ಸೆಕ್ಷನ್ ೪೨ರ ಪ್ರಕಾರ ಒಂದು ವರ್ಷದ ಗೇಣಿಯನ್ನು ಪಡೆಯಲು ಮಾತ್ರ ಅರ್ಹನಾಗುತ್ತಾನೆ. ಸೆಕ್ಷನ್ ೨೨ರ ಪ್ರಕಾರ ಡಿಫಾಲ್ಟ್ ಆದರೆ ಇವನ್ನು ಮೂರು ವರ್ಷಗಳವರಗೆ ನೋಡಿ ಅನಂತರ ಅವರ ಮೇಲೆ ಎವಿಕ್ಷನ್ ಪಡೆಯಲು ಅರ್ಹತೆ ಅವರಿಗೆ ಬರುತ್ತದೆ. ಆದುದರಿಂದ ಇಷ್ಟೇ ವರ್ಷಗಳಲ್ಲಿ ಡಿಕ್ರಿ ತರಲು ಪ್ರಿಯಾರಿಟಿ ಕೊಡುವುದಾಗಲಿ ಯಾವುದೂ ಇದರಲ್ಲಿಲ್ಲ.

ಶ್ರೀ ಬಿ. ಎ. ಕಕ್ಕಿಲಾಯ.—ನಾನು ಇಲ್ಲಿ ಎವಿಕ್ಷನ್ ಬಗ್ಗೆ ಹೇಳುವುದಿಲ್ಲ. ಅರಿಯರ್ಸ್ ಏನು ಇರುತ್ತದೆ ಅದನ್ನು ವಸೂಲು ಮಾಡಲಿಕ್ಕೆ ಬೇರೆ ಕಾರ್ಯಕ್ರಮಗಳಿರುತ್ತವೆ. ಅದರಂತೆ ತೆಗೆದುಕೊಳ್ಳಬಹುದು. ಆದರೆ ರೈತರಿಗೆ ತೊಂದರೆಯಾಗದಂತೆ ಇದನ್ನು ಮಾಡಬೇಕು ಎಂದು ನಾನು ವಿನಂತಿ ಮಾಡುವುದು. ಇದಕ್ಕಾಗಿ ನಾನು ಈ ಶಾಸನವನ್ನು ೧೯೬೧ ರಿಂದಲೇ ಬಂದಂತೆ ಮಾಡಬಹುದಾಗಿತ್ತು.

ಈಗಾಗಲೇ ಹತ್ತು ವರ್ಷಗಳಾಗುತ್ತ ಬಂತು. ಇದಕ್ಕಾಗಿ ನಾನು ಸಲಹೆ ಮಾಡುವುದು ಬೊಂಬಾಯಿಯಲ್ಲಿ ಇದೇ ತರಹದ ಕಾನೂನು ಇದೆ. ಅದರಲ್ಲಿ ಐದು ಪಟ್ಟು ಮತ್ತು ಇಪ್ಪತ್ತು ರೂಪಾಯಿಗಳು ಎಂದು ಸ್ಲಾಬ್ಸ್‌ಗಳಿವೆ. ಅದೇ ತರಹ ಇದರಲ್ಲೂ ಯೋಚನೆ ಮಾಡಿ ನಮ್ಮ ಕಾನೂನು ಮಾಡಿದರೆ ಅದರಿಂದ ಸ್ವಲ್ಪಮಟ್ಟಿಗೆ ರೈತರಿಗೆ ಅನುಕೂಲವಾಗುತ್ತದೆ, ಬಾಂಬೆ ಟೆನನ್ಸಿ ಆಕ್ಟ್‌ನಲ್ಲಿ ಏಕರೆಗೆ ಕಂದಾಯದ ಐದು ಪಟ್ಟು ಮತ್ತು ಏಕರೆಗೆ ೨೫ ರೂಪಾಯಿಗಳು ಎಂದು ಮಾಡಿ ಇದನ್ನು ೬೦ರಿಂದ ಜಾರಿಗೆ ತರಲಾಗಿದೆ. ಒಂದು ವೇಳೆ ತಮ್ಮ ಪಕ್ಷಕ್ಕೇ ಇದು ಸರಿಯಾಗದೇ ಹೋದರೆ ಇದನ್ನು ೧೯೭೨ನೇ ಅಕ್ಟೋಬರ್ ೨ನೇ ತಾರೀಖಿನಿಂದ ಎಂದರೆ ಮಹಾತ್ಮಗಾಂಧಿಯವರ ಜಯಂತಿಯ ದಿನದಿಂದಲಾದರೂ ಜಾರಿಗೆ ತರುವುದು ಸರಿಯಾಗಿರುತ್ತದೆ. ಮಹಾತ್ಮ ಗಾಂಧಿಯವರ ಹೆಸರಿಗೆ ನೀವು ಬಹು ಗೌರವ ಕೊಡುವವರಾಗಿರುವುದರಿಂದ ಇದನ್ನು ೭೨ ರಿಂದಲೇ ಜಾರಿಗೆ ತರುವಂತೆ ಮಾಡಬೇಕೆಂದು ನನ್ನ ಪ್ರಾರ್ಥನೆ. ಇಂದು ಇಂತಹ ಒಂದು ಒಳ್ಳೆಯ ಭೂಸುಧಾರಣೆ ಬಿಲ್ಲಿನ ಚರ್ಚೆಯಾಗುತ್ತಿರುವಾಗ ಈ ಸಭೆಯ ಎರಡೂ ಕಡೆಗಳಲ್ಲಿರುವ ಕಾಂಗ್ರೆಸ್ ಪಕ್ಷದ ಸದಸ್ಯರು ಯಾರೂ ಇಲ್ಲ. ಇದು ನೋಡಿದರೆ ಅವರಿಗೆ ಇದರಲ್ಲಿ ಎಷ್ಟು ಆಸಕ್ತಿ ಇದೆ ಎನ್ನುವುದು ಇದರಿಂದಲೇ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಹೇಗಾದರೂ ಇರಲಿ. ನಾವು ರೈತರ ಪರವಾಗಿದ್ದೇವೆ ಎನ್ನುವುದು ತಮಗೇ ಗೊತ್ತಾಗುತ್ತದೆ. ಇದರಲ್ಲಿ ಆಡಳಿತ ಪಕ್ಷದ ಜವಾಬುದಾರಿಯೂ ಇಲ್ಲ, ಈ ಕಡೆಯವರಲ್ಲೂ ಇಲ್ಲ ಎನ್ನುವುದು ಇಲ್ಲೀ ನಮಗೆ ಕಾಣುತ್ತದೆ. ಇಂತಹ ಒಂದು ನಿರಾಶೆ ಈ ಬಿಲ್ಲಿನಲ್ಲಿದೆ ಎನ್ನುವುದು ಇದರಿಂದ ಅರ್ಥವಾಗುತ್ತದೆ.

MR. DEPUTY SPEAKER.—Sri Lingappa's your colleague is not here. People living in glass House should not pelt stones.

SRI D. DEVARAJ URS.—This is a news to me. shall we take it that Sri Konandur Lingappa is the Leader of the Opposition ?

SRI M S KRISHNAN.—You may take it for his party only.

SRI D. DEVARAJ URS.—They were trying to say so may things. But the very same people are missing here.

ಶ್ರೀ ಎಂ. ಎಸ್. ಕೃಷ್ಣನ್.—ನಾವೇನೂ ತಮಗೆ ಆ ರೀತಿ ಹೇಳುತ್ತಿಲ್ಲ ?

SRI D. DEVARAJ URS.—Sri Krishnan is a different man. He won unnecessarily walk out like others. I am happy he is totally different from other people, though they are having radical programme.

SRI M. S. KRISHNAN.—We are not sparing anybody. We were criticising Sri Veerendra Patil and others.

SRI D. DEVARAJ URS.—The real secret is they are not willing to hear the criticisms of others.

SRI G. MADE GOWDA.—We are fundamentally different from other parties. There is no need to raise any objection.

MR. DEPUTY SPEAKER.—It the hon. member does not understand, how can I held him ? Almost all the Congress '0' members are absent enblock. They want to avenge for yesterday's happening ; for that you agree.

SRI MADE GOWDA.—I feel sorry I do not accept it.

SRI D. DEVARAJ URS.—It is clearly indicative of the fact that they are likely to let you down at any time.

ಶ್ರೀ ಬಿ.ವಿ. ಕಕ್ಕಿಲಾಯ.—ಇದರಲ್ಲಿ ಸೆಕ್ಷನ್ ೧೧ನ್ನು ತಿದ್ದುಪಡಿ ಮಾಡಿದ್ದೀರಿ. ಈ ಸೆಕ್ಷನ್‌ಗೆ ಒಂದು ಹೊಸ ಕ್ಲಾಸನ್ನು ಸೇರಿಸಿದ್ದೀರಿ, ಇದರ ಪ್ರಕಾರ ಇನ್ನು ಮುಂದೆ ರೈತನೇ ಭೂಕಂದಾಯ, ವಾಟರ್ ರೇಟ್ ಮತ್ತು ಇತರೇ ಸೆಸ್‌ಗಳನ್ನು ಕಟ್ಟಬೇಕಾಗುತ್ತದೆ. ಈ ತಿದ್ದುಪಡಿ ಮಸೂದೆ ಜಾರಿಗೆ ಬರುವ ದಿವಸದಿಂದ ಇದೆಲ್ಲವನ್ನೂ ರೈತರೇ ಕೊಡಬೇಕೆಂದು ಹೇಳಿದ್ದೀರಿ. ಇದರಿಂದ ರೈತರು ಭೂಮಾಲೀಕರಿಗೆ ಹನ್ನೊಂದು ಪಟ್ಟು ಗೇಣಿ ಕೊಟ್ಟಂತೆ ಆಯಿತು. ಭೂಕಂದಾಯ ವಗೈರೆಯನ್ನು ಭೂಮಾಲೀಕರ ಮೇಲಿಂದ ರೈತರ ಮೇಲೆ ಹೊರಿಸುತ್ತಿರುವುದು ಏತಕ್ಕೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಭೂಮಾಲೀಕರಿಗೆ ಗೇಣಿ ಕಡಿಮೆಯಾಗುತ್ತದೆಂದು ಆ ರೀತಿ ಮಾಡಿದ್ದಾರೆಯೋ ಏನೋ ಗೊತ್ತಿಲ್ಲ. ಇದರ ಬಗ್ಗೆ ನನ್ನ ಸೂಚನೆಯಾದರೂ ಇಷ್ಟೆ, ಭೂಕಂದಾಯ ಮತ್ತು ಇತರೇ ಸೆಸ್‌ಗಳ ಹೊರೆಯನ್ನು ರೈತರ ಮೇಲೆ ಹಾಕಬಾರದು. ಯಾವ ದಿವಸ ರೈತರು ಭೂಮಾಲೀಕರಾಗುತ್ತಾರೋ ಆ ದಿವಸದಿಂದ ಅವರೇ ಕೊಡಬೇಕಾಗುತ್ತದೆ. ಏಕೆಂದರೆ ಆಗ ಗೇಣಿ ಕೊಡುವುದು ಇರುವುದಿಲ್ಲ. ಹಿಂದಿನ ಕಾನೂನಿನಲ್ಲಿ ಭೂಮಾಲೀಕರೇ ಕಂದಾಯ ವಗೈರೆ ಎಲ್ಲವನ್ನು ಕೊಡಬೇಕೆಂದು ನಿಯಮವಿದೆ. ಈ ತಿದ್ದುಪಡಿ ಜಾರಿಗೆ ಬಂದರೆ ಗೇಣಿದಾರರೇ ಕೊಡಬೇಕಾಗುತ್ತದೆ. ಈ ರೀತಿ ಗೇಣಿದಾರರ ಮೇಲೆ ಭಾರ ಹೊರಿಸುವುದು ಸರಿಯಲ್ಲ, ಅದು ನ್ಯಾಯವಲ್ಲ ಎಂದು ಹೇಳುತ್ತೇನೆ.

೧೪ನೇ ಸೆಕ್ಷನನ್ನು ತಿದ್ದುಪಡಿ ಮಾಡಿದ್ದೀರಿ. ಇದರ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಇದರಲ್ಲಿ ಕೇವಲ ಪದಗಳ ಬದಲಾವಣೆ ಎಂದು ಕಾಣುತ್ತದೆ. ಇವೊತ್ತು ರೈತರ ಕೈಯಲ್ಲಿರುವ ಜಮೀನನ್ನು ಸೆಕ್ಷನ್ ೧೪ರ ಪ್ರಕಾರ ಬಿಡಿಸಿಕೊಳ್ಳುವುದಕ್ಕೆ ಏನು ಒಂದು ಅವಕಾಶ ಇತ್ತೋ ಆ ಒಂದು ಅವಕಾಶ ಈಗಿನ ತಿದ್ದುಪಡಿಯಿಂದ ಯಾವ ರೀತಿಯಲ್ಲೂ ಮೊಟಕು ಆಗುವುದಿಲ್ಲ. ಅದಕ್ಕೆ ಮಾರ್ಜಿನ್ ಇದೆ ಎಂದು ಹೇಳಬಹುದು. ಆದರೆ ಇದಕ್ಕೆ ಎರಡು ತಿದ್ದುಪಡಿಗಳನ್ನು ಸೇರಿಸಿದ್ದೀರಿ. ಇದರ ಪ್ರಕಾರ ವರ್ಷಕ್ಕೆ ೧೨ ಸಾವಿರ ರೂಪಾಯಿಗಳ ವರಮಾನ ಇದ್ದರೆ ಮತ್ತು ಅದರ ಜಮೀನಿನಿಂದ ೧೬ ಕಿಲೋ ಮೀಟರ್ ದೂರದಲ್ಲಿ ಇದ್ದರೆ ಅಂತಹವರು ತಮ್ಮ ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇಲ್ಲ ಎಂದು ಮಾಡಿದ್ದೀರಿ ಇದರಿಂದ ಅನೇಕ ಜನ ರೈತರಿಗೆ ತೊಂದರೆಯಾಗುತ್ತದೆ. ಈ ರಿಜಂಪಷನ್ ಅಪ್ಲಿಕೇಷನ್ಸ್ ಹೆಸರಿನಲ್ಲಿ ಬಹಳ ಜನ ರೈತರಿಗೆ ಅಭದ್ರತೆ ಬಂದಿದೆ. ಶ್ರೀಮಾನ್ ವೀರೇಂದ್ರಪಾಟೀಲ್ ಅವರ ಸರ್ಕಾರ ಇದ್ದಾಗ ರಿಜಂಪಷನ್ ಅಪ್ಲಿಕೇಷನ್ಸ್ ಎಷ್ಟಿವೆ ಎಂಬ ಬಗ್ಗೆ ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅದನ್ನೆಲ್ಲಾ ಈಗ ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ೧,೭೬,೨೭೫ ಅಪ್ಲಿಕೇಷನ್ಸ್ ಇವೆ ಎಂದು ಅವರು ಹೇಳಿದ್ದರು.

ಶ್ರೀ ಕೋಣಂದೂರು ಲಿಂಗಪ್ಪ.—ವೀರೇಂದ್ರಪಾಟೀಲರ ಸರ್ಕಾರದವರು ಕೊಟ್ಟಿರುವ ಅಂಕಿಗಳ ಸರಿಯೋ ಅಥವಾ ಈಗಿನ ಸರ್ಕಾರದವರು ಕೊಟ್ಟಿರುವ ಅಂಕಿಗಳು ಸರಿಯೋ? ನಾವು ಯಾವುದನ್ನು ಆಧಾರವಾಗಿ ಇಟ್ಟುಕೊಳ್ಳಬೇಕು?

ಉಪಾಧ್ಯಕ್ಷರು.—ಮಾನ್ಯ ಕಕ್ಕಿಲಾಯ ಅವರು ಹೇಳುವುದು ಸರಿ.

ಶ್ರೀ ಬಿ. ಕಕ್ಕಿಲಾಯ.—ಈ ರಿಜಂಪಷನ್ ಕಾಟ ಎಂಬುದು ಈಗಿನ ತಿದ್ದುಪಡಿಯಿಂದಲೂ ಸಹ ತಪ್ಪುವುದಿಲ್ಲ. ಅದಕ್ಕೆ ಒಂದು ರೀತಿಯಿಂದ ಅವಕಾಶ ಇದ್ದೇ ಇದೆ. ಕೇರಳಾ ಲ್ಯಾಂಡ್ ರಿಫಾರಮ್ಸ್ ಆಕ್ಟ್‌ನಲ್ಲಿ ರಿಜಂಪಷನ್‌ಗೆ ಕೆಲವು ಮಟ್ಟಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ರಿಜೆಂಪಷನ್ ಮಾಡುವುದಕ್ಕೆ ಅವರು ಯಾವ ರೀತಿ ಅನುಕೂಲ ಮಾಡಿಕೊಟ್ಟಿದ್ದಾರೆಂಬ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ.—

> under "Resumption for personal cultivation from tenants holding more than ceiling area", it is stated "Provided that no small holder shall be entitled to resume under this section any land in possession of a tenant who is a Member of the Scheduled Castes or Scheduled Tribes. Even small holders cannot resume land if the tenant is a man belonging to the Scheduled Castes/Scheduled Tribes".

ಇದು ಕೇರಳಾ ಆಕ್ಟ್‌ನಲ್ಲಿ ರಿಜಂಪ್ಷನ್‌ಗೆ ಇರುವ ಅಂಶ. ಮಿಲಿಟರಿ ಸರ್ವಿಸಸ್‌ನಲ್ಲಿರುವವರಿಗೂ ಸಹ ಕೆಲವೊಂದು ಅವಕಾಶಗಳನ್ನು ಕೇರಳಾ ಸರ್ಕಾರದವರು ಮಾಡಿಕೊಟ್ಟಿದ್ದಾರೆ. ಆದರೆ ಬಹಳ ರಿಸ್ಟ್ರಿಕ್ಟೆಡ್. ಮಿಲಿಟರಿಗೆ ಆಫೀಸರ್ ಆಗಿ ಕೆಲಸಕ್ಕೆ ಸೇರುವುದಕ್ಕೆ ೩ ತಿಂಗಳ ಮೊದಲು ತನ್ನ ಜಮೀನನ್ನು ಗೇಣಿ ಕೊಟ್ಟುಬಿಟ್ಟು ಹೋಗಿ, ನಂತರ ಒಂದು ವರ್ಷದೊಳಗೆ ವಾಪಸ್ ಬಂದರೆ ರೆಸ್ಯೂಮ್ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಈ ಆರಮ್ಡ್ ಫೋರ್ಸಸ್‌ನಲ್ಲಿರುವವರಿಗೆ ಜಮೀನು ಕೊಡುವ ವಿಚಾರದಲ್ಲಿ ನನ್ನದೊಂದು ಸಲಹೆ ಇದೆ. ಇವರ ಬಗ್ಗೆ ನಾನೇನಾದರು ಹೇಳಿದರೆ ಮಾನ್ಯ ಸದಸ್ಯರು ತಪ್ಪು ತಿಳಿದುಕೊಳ್ಳಬಾರದು. ಮೊನ್ನಿನ ಯುದ್ಧವಾದ ಮೇಲೆ ಇವರುಗಳ ವಿಚಾರದಲ್ಲಿ ಹೆಚ್ಚಿನ ಗೌರವ ಜನರಲ್ಲಿ ಬಂದಿದೆ. ನನಗೂ ಸಹ ಇವರ ಬಗ್ಗೆ ಹೆಚ್ಚಿನ ಗೌರವ ಇದೆ. ನನ್ನ ದೃಷ್ಟಿಯಲ್ಲಿ ಆರಮ್ಡ್ ಫೋರ್ಸಸ್‌ನಲ್ಲಿರತಕ್ಕ ಜವಾನರುಗಳಿಗೆ ಭೂಮಿಯನ್ನು ಮೀಸಲಾಗಿಟ್ಟು ಎಷ್ಟು ಬೇಕಾದರೂ ಕೊಡಬಹುದು. ಆದರೆ ಅಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಅದೇ ಲೆಕ್ಕದಲ್ಲಿ ಜಮೀನು ಕೊಡುವುದು ಸರಿಯಲ್ಲ. ಅದನ್ನು ತಪ್ಪಿಸಬೇಕು. "ಪ್ರಾಬ್ಲಮ್ಸ್ ಆಫ್ ಇಂಡಿಯಾ - ಅಗ್ರೇರಿಯನ್ ಸೆಕ್ಟಾರ್" ಎಂಬ ಪುಸ್ತಕದಿಂದ ಕೆಲವು ಆಫೀಸರ್‌ಗಳಿಗೆ ಯಾವ ರೀತಿ ಜಮೀನು ಕೊಡಲಾಗಿದೆ ಎಂಬ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ.—

> "Birla, a top monopolist owns in Lakkipur District—4,200 acres". Coming to these armed forces, it has been stated that Maj. Gen. Simne owns in Nainital District—5,000 acres and Air Marshal Arjun Singh owns in Nainital District, 2,500 acres I am giving two examples.

ಈ ರೀತಿ ಆರಮ್ಡ್ ಫೋರ್ಸಸ್‌ನಲ್ಲಿದ್ದ ಅಧಿಕಾರಿಗಳಿಗೆ ಸಾವಿರಾರು ಎಕರೆಗಳಷ್ಟು ಜಮೀನನು ಇಟ್ಟುಕೊಳ್ಳುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬಾರದೆಂದು ಹೇಳುತ್ತೇನೆ.

SRI D. DEVRAJ URS —If he has 4000 acres, then it is subject to ceiling. To the extent it is below the ceiling he will keep with him The only concession we propose to give is when he is in service, he will be allowed to give land for cultivation to the tenants. Then he can resume the land up to a point only. We cannot allow him to resume 4000 acres.

ಶ್ರೀ ಬಿ. ವಿ ಕಕ್ಕಿಲಾಯ.—ನಾನು ಹೇಳುವುದೇನೆಂದರೆ ರೈತರ ಕೈಯಲ್ಲಿರುವ ಜಮೀನನ್ನು ಕಿತ್ತುಕೊಂಡು ಅದನ್ನು ದೊಡ್ಡ ಮನುಷ್ಯರಿಗೆ ಕೊಡಬೇಕಾದ ಅವಶ್ಯಕತೆ ಇಲ್ಲ. ಜವಾನರು ಏನಿದ್ದಾರೆ ಅವರಿಗೆ ಯಾವರೀತಿ ಅನುಕೂಲ ಮಾಡಬೇಕೆಂಬುದನ್ನು ಯೋಚನೆ ಮಾಡಿ ಅವರಿಗೆ ಒಂದು ವ್ಯವಸ್ಥೆ ಮಾಡಬೇಕು. ಈಗ ಯಾವ ರೈತರ ಕೈಯಲ್ಲಿ ಜಮೀನು ಇದೆಯೋ ಅದನ್ನು ಮಾತ್ರ ಕಿತ್ತುಕೊಳ್ಳುವುದಕ್ಕೆ ಅವಕಾಶ ಮಾಡಬೇಡಿ. ಸೆಕ್ಷನ್ ೧೪ರಲ್ಲಿ ತುಂಬಾ ಬದಲಾವಣೆ ಆಗಬೇಕಾಗಿದೆ.

SRI M S. KRISHNAN —Round about Bangalore, lands have been given to some officers of the Army to the extent of 300—400 acres and just because this Bill is talked of, I learn that some of them are trying to bifurcate and trying to form societies including some Ministers.

ಶ್ರೀ ಬಿ. ವಿ ಕಕ್ಕಿಲಾಯ.—ಸೆಕ್ಷನ್ ೧೪ರಲ್ಲಿ ಇನ್ನೊಂದು ಮಾತು ಹೇಳಬೇಕೆಂದರೆ ಇದರಲ್ಲಿ ವಿಧವೆಯರು, ಅವಿವಾಹಿತ ಸ್ತ್ರೀಯರು, ಅಪ್ರಾಪ್ತವಯಸ್ಕರು ಇವರುಗಳಿಗೆ ವಿನಾಯ್ತಿಯನ್ನು ಕೊಟ್ಟಿದ್ದಾರೆ. ಅವರ ಬಗ್ಗೆ ನನಗೂ ಅನುಕಂಪ ಇದೆ ಅವರಿಗೆ ೫ ವರ್ಷಗಳವರೆಗೂ ಲ್ಯಾಂಡ್ ರೆಸ್ಯೂಮ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಮೈನರ್ ಆದವರು ೧೮ ವರ್ಷ ಪ್ರಾಯ ಪೂರ್ತಿ ಆದಮೇಲೆ ಮತ್ತೆ ೫ ವರ್ಷಗಳ ತನಕ ಭೂಮಿಯನ್ನು ರೆಸ್ಯೂಮ್ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಟೆನೆನ್ಸಿ ಎನ್ನುವುದನ್ನು ಅನ್ನೊಂದು ದೀರ್ಘಕಾಲದವರೆಗೆ ಚಾಲ್ತಿ ಇಟ್ಟಿದ್ದಾರೆ. ಇದು

(ಶ್ರೀ ಬಿ. ವಿ ಕಕ್ಕಿಲಾಯ).—

ಅಷ್ಟು ಸರಿಯಾಗಿ ಕಾಣುವುದಿಲ್ಲ ಟೆನೆನ್ಸಿ ಕಂಟಿನ್ಯೂ ಮಾಡುವುದಕ್ಕೆ ಎಷ್ಟು ಕಡಿಮೆ ಅವಕಾಶವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟು ಕಡಿಮೆ ಕೊಡುವುದು ಒಳ್ಳೆಯದು. ಮೈನರ್ ಮಕ್ಕಳು ಪ್ರಾಯಕ್ಕೆ ಬಂದಮೇಲೆ ಅವರು ಗೇಣಿದಾರ ಕೊಟ್ಟ ಗೇಣಿಯಿಂದಲೇ ಜೀವನ ಮಾಡಿದ್ದರಿಂದ ಅವರು ಗೇಣಿದಾರನಿಂದ ಜಮೀನನ್ನು ವಾಪಸ್ಸು ಕೇಳದೇ ಇರುವುದು ರೈತನಿಗೆ ಕೃತಜ್ಞತೆಯನ್ನು ತೋರಿಸಿ ದಂತಾಗುತ್ತದೆ.

ಈ ದೃಷ್ಟಿಯಿಂದ ಮೈನರ್ ಮಕ್ಕಳು ಪ್ರಾಯಕ್ಕೆ ಬಂದಮೇಲೆ ಅವರು ರೈತರಿಂದ ಜಮೀನು ಬಿಡಿಸಿಕೊಳ್ಳುವುದಕ್ಕೆ ಅವಕಾಶ ಮಾಡಬಾರದು ಸಾಧ್ಯವಾದರೆ ಸರ್ಕಾರದವರು ಭೂಮಾಲೀಕರಿಗೆ ಕೊಡುವ ಪರಿಹಾರವನ್ನು ಕಡಿಮೆ ಮಾಡಿ ಇಂಥಾ ಮೈನರ್ ಮಕ್ಕಳು ಆಗಿದ್ದು ಪ್ರಾಯಕ್ಕೆ ಬಂದಂಥವರಿಗೆ ಜೀವನಕ್ಕೆ ಬೇರೆ ಯಾವುದಾದರೂ ರೀತಿಯಲ್ಲಿ ಅವರಿಗೆ ಪರಿಹಾರವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡು ವುದು ಒಳ್ಳೆಯದು ಈಗ ೬೦—೬೫ ವರ್ಷ ವಯಸ್ಸಾದವರಿಗೆ ಸಮಾಜದಲ್ಲಿ ದುರ್ಬಲರಾದವರಿಗೆ ಯಾವರೀತಿ ಪರಿಹಾರವನ್ನು ಕೊಡುತ್ತಾರೆಯೋ ಅದೇ ರೀತಿಯಲ್ಲಿ ಇವರಿಗೂ ಸಹಾಯ ಮಾಡಬೇಕು ಎಂದು ನಾನು ಹೇಳುತ್ತೇನೆ. ಇಲ್ಲದೇ ಹೋದರೆ ಈ ಕಾನೂನಿನ ಉದ್ದೇಶ ಈಡೇರುವುದಿಲ್ಲ. ಜೆ. ಸಿ. ಕುಮಾರಪ್ಪನವರು ಮಹಾತ್ಮ ಗಾಂಧಿಯವರ ಶಿಷ್ಯರು. ೧೯೪೯ನೇ ಇಸವಿಯಲ್ಲಿ ಅವರು ಕೊಟ್ಟಂತಹ ವರದಿಯಲ್ಲಿ ಭೂಸುಧಾರಣೆಯ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದರಲ್ಲಿ "The end should be to eliminate exploitation of one section of people by another section. ಎಂದು ಹೇಳಿದ್ದಾರೆ. ಆದ್ದರಿಂದ ಆ ಪ್ರಕಾರ ಇದನ್ನು ಮಾಡಬೇಕು. ಕೋ ಆಪರೇಟೀವ್ ಫಾರ್ಮಿಂಗ್ ಮತ್ತು ಕಲೆಕ್ಟೀವ್ ಫಾರಂ ಮಾಡಿಕೊಳ್ಳುವುದಕ್ಕೆ ಈ ಕಾನೂನಿನಲ್ಲಿ ಅವಕಾಶ ಇದೆ. ಆ ರೀತಿ ಮಾಡಿಕೊಳ್ಳಬಹುದು. ಅದೇನು ತೊಂದರೆ ಇಲ್ಲ. ಸಮಾಜದಲ್ಲಿ ದೊಡ್ಡ ಗಂಡಾಂತರ ಏನೆಂದರೆ ಎಲ್ಲವೂ ಎಂದೇ ಕಡೆ ಕ್ರೋಢೀಕರಣ ಆಗುವುದಕ್ಕೆ ಅವಕಾಶವಾಗಬಾರದು. ಸಮಾಜದಲ್ಲಿರುವಂತರ ವ್ಯತ್ಯಾಸವನ್ನು ತೊಡೆದು ಹಾಕುವ ದೃಷ್ಟಿಯಿಂದ ಕಾನೂನು ಮಾಡಬೇಕು.

ಶ್ರೀ ಡಿ. ದೇವರಾಜಅರಸ್.—ಈಗ ರಷ್ಯಾದೇಶದವರು ಎಷ್ಟು ಟನ್ ಆಹಾರಧಾನ್ಯವನ್ನು ಕೊಂಡು ಕೊಳ್ಳುತ್ತಿದ್ದಾರೆಂಬುದನ್ನು ಮಾನ್ಯ ಸದಸ್ಯರು ಪತ್ರಿಕೆಯಲ್ಲಿ ಓದಿರಬಹುದು.

ಶ್ರೀ ಬಿ ವಿ. ಕಕ್ಕಿಲಾಯ.—ಹಿಂದೆ ಇದ್ದಂತಹ ಪರಿಸ್ಥಿತಿ ಈಗ ಇಲ್ಲ. ಕೆಲವು ಸಲ ಕೊಂಡುಕೊಳ್ಳು ತ್ತಾರೆ ಕೆಲವು ಸಲ ಎಕ್ಸ್‌ಪೋರ್ಟ್ ಮಾಡುತ್ತಾರೆ.

SRI D. DEVARAJ URS.—11 billion dollars worth of wheat they are importing from America

SRI M. S. KRISHNAN.—But still there is not a single man who is starving. There is no person without shelter. Let us not speak about other countries.

SRI D. DEVARAJ URS.—Do not try to sell things you have borrowed from another country.

SRI M. S. KRISHNAN.—You should not try to bellittle another country. You must try to learn. You are not prepared to learn.

ಶ್ರೀ ಬಿ. ವಿ. ಕಕ್ಕಿಲಾಯ.—ಭೂಸುಧಾರಣೆ ವಿಷಯದಲ್ಲಿ ಜೆ. ಸಿ. ಕುಮಾರಪ್ಪನವರು ನಮ್ಮ ದೇಶದ ಪರಿಸ್ಥಿತಿಯನ್ನು ಆಳವಾಗಿ ಅಭ್ಯಾಸ ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿರ ತಕ್ಕ ವಿಷಯಗಳನ್ನು ಅಳವಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಸೋವಿಯಟ್ ಯೂನಿಯನ್‌ರವರು ವ್ಯವಸಾಯದಲ್ಲಿ ಎಷ್ಟು ಮುಂದುವರಿದಿದ್ದಾರೆಯೋ ಅಷ್ಟು ಮಟ್ಟಕ್ಕೆ ಇನ್ನೂ ನಾವು ಮುಟ್ಟಿಲ್ಲ. ಆಹಾರದಲ್ಲಿ ಸ್ವಾವಲಂಬಿಗಳಾಗುವ ವಿಚಾರಕ್ಕೂ ಭೂಸುಧಾರಣೆಯ ವಿಚಾರಕ್ಕೂ ಸಂಬಂಧಕಲ್ಪಿಸಬೇಕಾದ ಪ್ರಸಂಗ ವಿಲ್ಲ. ಈಗ ಇರುವ ಪ್ರಶ್ನೆ ಏನೆಂದರೆ ಈಗ ರೈತರ ವಶದಲ್ಲಿರತಕ್ಕ ಜಮೀನನ್ನು ಅವರಿಂದ ಬಿಡಿಸಿಕೊಳ್ಳು ವುದಕ್ಕೆ ಈ ಶಾಸನದಲ್ಲಿ ಕೊಟ್ಟಿರುವ ರೀತ್ಯಾ ೧,೬೬,೦೦೦ ಅರ್ಜಿಗಳು ಈಗಾಗಲೇ ಇವೆ. ರೈತರಿಂದ ಜಮೀನನ್ನು ಬಿಡಿಸಿಕೊಂಡು ಸಮಾಜದಲ್ಲಿ ಸಮಾನತೆಯನ್ನು ತರುವುದರ ದಾರಿಯನ್ನು ಬಿಟ್ಟು ಉಳುವ ವನೆ ಭೂಮಿಯ ಒಡೆಯನಾಗಬೇಕು ಎನ್ನುವ ತತ್ವವನ್ನು ಅನುಷ್ಠಾನಕ್ಕೆ ತರುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇನ್ನು ಸೆಕ್ಷನ್ ೨೨ ಮತ್ತು ೨೩ಕ್ಕೆ ಮಾಡಿರುವಂತಹ ಅಮೆಂಡ್ ಮೆಂಟ್‌ಗಳ ಮೇಲೆ ಒಂದೆರಡು ಮಾತು ಹೇಳುತ್ತೇನೆ.

4-30 P. M.

ಈಗಾಗಲೆ ರಿಸ್ಯೂಮ್ ಮಾಡಿರುವ ಜಮೀನನ್ನು ಯಾವ ಉದ್ದೇಶಕ್ಕೋಸ್ಕರ ರೈತನಿಂದ ಬಿಡಿಸಿಕೊಂಡರೋ ಆ ಉದ್ದೇಶಕ್ಕೆ ಉಪಯೋಗಿಸದೆ ಇದ್ದರೆ ಅದನ್ನು ರೈತನಿಗೆ ವಾಪಸ್ಸು ಮಾಡಬೇಕೆಂದು ಹಿಂದೆಯೂ ಇತ್ತು. ಅದಕ್ಕೆ ಸಹ ತಿದ್ದುಪಡಿ ಮಾಡಿ ವಾಪಸ್ಸು ಮಾಡುವುದನ್ನು ಸುಲಭವಾಗುವ ರೀತಿಯಲ್ಲಿ ಮಾಡುವಂತೆ ಈಗ ಮಾಡಿದ್ದಾರೆ. ಇದು ಸ್ವಾಗತಾರ್ಹವಾದ ವಿಚಾರ. ಆದರೆ ನಾನ್ ಅಗ್ರಿಕಲ್ಚರಲ್ ಪರ್ಪಸಸ್‌ಗೆ ಜಮೀನನ್ನು ಬಿಡಿಸುವುದಕ್ಕೆ ಹಿಂದಿನ ಶಾಸನದಲ್ಲಿ ಅವಕಾಶ ಇತ್ತು. ಅದರ ಪ್ರಕಾರ ಎಷ್ಟೋ ಮಂದಿ ಜಮೀನನ್ನು ಬಿಡಿಸಿಕೊಂಡಿದ್ದಾರೆ. ಈಗ ನಾನ್ ಅಗ್ರಿಕಲ್ಚರಲ್ ಪರ್ಪಸ್‌ಗೋಸ್ಕರ ಅದನ್ನು ಬಿಡಿಸುವುದಕ್ಕೆ ಆಗುವುದಿಲ್ಲ. ನಾನು ಕೇಳಿಕೊಳ್ಳುವುದೇನೆಂದರೆ, ಆ ಜಮೀನನ್ನು ನೀವು ಸರ್ಪ್ಲಸ್ ಪೂಲಿಗೆ ಹಾಕುತ್ತೀರಿ. ಹೀಗೆ ಅದು ಸರ್ಪ್ಲಸ್ ಪೂಲಿಗೆ ಹೋದ ಮೇಲೆ, ಪುನಃ ಹಂಚುವಾಗ ಅದೇ ರೈತನಿಗೆ ಆ ಭೂಮಿ ಬರುತ್ತದೆಯೋ, ಅಥವಾ ಸಿಗುತ್ತದೆಯೋ ಎಂದು ಹೇಳುವುದಕ್ಕಾಗುವುದಿಲ್ಲ. ಪ್ರಿಯಾರಿಟ್ ಮೇಲೆ ಯಾರಿಗಾದರೂ ಹೋಗಬಹುದು. ನನ್ನ ಕೇಳಿಕೆ ಏನೆಂದರೆ ಇಂತಹ ಜಮೀನನ್ನು ಬೇರೆ ಜಮೀನು ಜೊತೆಗೆ ಸರ್ಪ್ಲಸ್ ಪೂಲಿನಲ್ಲಿ ಸೇರಿಸಬಾರದು. ಇದನ್ನು ಪ್ರತ್ಯೇಕವಾಗಿಟ್ಟು ಹಿಂದೆ ಯಾರಿಂದಪಡೆದು ಕೊಂಡಿದ್ದರೋ, ಅವರಿಗೆ ಸಿಗುವಂತೆ ವ್ಯವಸ್ಥೆ ಮಾಡಬೇಕು. ಜಮೀನು ಸರ್ಪ್ಲಸ್ ಪೂಲಿಗೆ ಬರುವಾಗ ಅದಕ್ಕೆ ಸಹ ಪರಿಹಾರ ಕೊಡುತ್ತೀರಿ. ಬೇರೆ ಸರ್ಪ್ಲಸ್ ಜಮೀನಿಗೆ ಕೂಡ ಸೆಕ್ಷನ್ ೭೨ರ ಪ್ರಕಾರ ಕೊಡುತ್ತೀರಿ. ಆದರೆ ಈ ಜಮೀನನ್ನು ಇಂತಹ ಉದ್ದೇಶಕ್ಕೆ ಬೇಕೆಂದು ಪಡೆದುಕೊಂಡು, ಆ ಉದ್ದೇಶಕ್ಕೆ ಉಪಯೋಗಿಸಿಲ್ಲ. ಕೋರ್ಟಿನಲ್ಲಿಯೂ ನ್ಯಾಯವಲ್ಲದ ರೀತಿಯಲ್ಲಿ ಬೇಕೆಂದು ಪಡಕೊಂಡು, ಆ ಉದ್ದೇಶಕ್ಕೆ ಉಪಯೋಗಿಸಿಲ್ಲ. ಮತ್ತೆ ಅದನ್ನು ಸರ್ಕಾರ ವಾಪಸ್ಸು ತೆಗೆದುಕೊಳ್ಳುತ್ತದೆ. ಆದರೆ ಅವನು ಹಾಗೆ ಮಾಡಿದ ತಪ್ಪಿಗೆ ಅವನಿಗೆ ಕೊಡುವ ಪರಿಹಾರದಲ್ಲಿ ಕಡಿತ ಮಾಡಬೇಕು. ಬೇರೆಯವರಿಗೆ ಯಾವ ರೀತಿ ಪರಿಹಾರ ಕೊಡುತ್ತೀರಿ, ಆ ಪರಿಹಾರದಲ್ಲಿ ಅರ್ಧ ಅಂಶದಷ್ಟು ಕಡಿತ ಮಾಡಿ, ಅದೇ ರೈತನಿಗೆ ಆ ಜಮೀನನ್ನು ವಾಪಸ್ ಮಾಡುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸೀಲಿಂಗ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಸೀಲಿಂಗ್ ಬಗ್ಗೆ ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರು ತಮ್ಮ ಭಾಷಣದಲ್ಲಿ ಒಂದು ಅನೆಕ್ಸರ್ ಕೊಟ್ಟು ಎಲ್ಲಾ ರಾಜ್ಯಗಳಲ್ಲಿ ಯಾವ ರೀತಿ ಸೀಲಿಂಗ್ ಇದೆಯೆಂಬುದನ್ನು ವಿವರಿಸಿದ್ದಾರೆ. ನಮ್ಮ ರಾಜ್ಯದ ಸೀಲಿಂಗ್ ಪಟ್ಟಿಯನ್ನು ನೋಡಿದರೆ, ಆಂಧ್ರಪ್ರದೇಶ ಒಂದನ್ನು ಬಿಟ್ಟರೆ, ಬೇರೆ ಯಾವ ರಾಜ್ಯದಲ್ಲಿಯೂ ಇಷ್ಟು ದೊಡ್ಡ ಸೀಲಿಂಗ್ ಇಲ್ಲವೆಂದು ಹೇಳಬಹುದು. ಆದ್ದರಿಂದ ಇಡೀ ದೇಶದಲ್ಲಿ ಬಹಳ ದೊಡ್ಡ ಸೀಲಿಂಗ್ ಲಿಮಿಟ್ ಇರುವಂತಹ ದೇಶ, ನಮ್ಮ ರಾಜ್ಯವೆಂದು ಈ ಪಟ್ಟಿಯಿಂದ ಗೊತ್ತಾಗುತ್ತದೆ. ಇಲ್ಲಿ ಒಂದು ಕುಟುಂಬಕ್ಕೆ ಮ್ಯಾಕ್ಸಿಮಮ್ ೨೦ ಫಸ್ಟ್ ಕ್ಲಾಸ್ ಭೂಮಿ ಇಟ್ಟುಕೊಳ್ಳಬಹುದೆಂದು ಮಾಡಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರು ಈ ಸೀಲಿಂಗ್ ಬಗ್ಗೆ ಮಾಡಿರುವ ಬದಲಾವಣೆಗಳನ್ನು ಬಲವಾಗಿ ಟೀಕೆ ಮಾಡಿದ್ದಾರೆ, ಮತ್ತು ಬಹಳ ಅನ್ಯಾಯವಾಗಿದೆ ಎಂದು ಹೇಳಿ ಕಣ್ಣೀರು ಸುರಿಸಿದರು. ನಾನು ಹೇಳುವುದಾದರೆ ಇದರಲ್ಲಿ ಕಣ್ಣೀರು ಸುರಿಸುವಂತದ್ದು ಏನೂ ಇಲ್ಲ. ನಿಜವಾಗಿ ನೋಡಿದರೆ ಇನ್ನೂ ಕಡಿಮೆ ಮಾಡಿದ್ದರೆ ಚೆನ್ನಾಗಿತ್ತೆಂದು ಕಾಣುತ್ತದೆ. ಇದರಲ್ಲಿ ಕಣ್ಣೀರು ಸುರಿಸುವಂತಹ ಪ್ರಶ್ನೆಯೇ ಇಲ್ಲ. ಅವರು ಹೇಳುವುದೇನೆಂದರೆ, ನೀವು ಅರ್ಬನ್ ಪ್ರಾಪರ್ಟೀಸ್ ಮೇಲೆ ಸೀಲಿಂಗ್ ಹಾಕುವವರೆಗೆ ಭೂ ಹಿಡುವಳಿಯ ಮೇಲೆ ಸೀಲಿಂಗ್ ಹಾಕುವುದಕ್ಕೆ ಹಕ್ಕು ಇಲ್ಲ ಮತ್ತು ಮಂತ್ರಿಗಳು ಜಾಸ್ತಿ ಸಂಬಳ ತೆಗೆದುಕೊಳ್ಳುವ ಕಾಲದಲ್ಲಿ ಈ ರೀತಿ ಕಾನೂನು ಮಾಡುವುದಕ್ಕೆ ನಿಮಗೆ ಹಕ್ಕು ಇಲ್ಲವೆಂದು ಹೇಳಿದರು. ಈ ರೀತಿಯ ವಾದ ನಮ್ಮಲ್ಲಿ ಮೊದಲಿನಿಂದಲೂ ಬಂದಿದೆ, ಭೂಸುಧಾರಣೆಯ ಯಾವುದೇ ಶಾಸನ ಬರುವಾಗ ಕೂಡ ಬಂಡವಾಳಗಾರರನ್ನು ಅಥವಾ ಬೇರೆ ವರ್ಗದ ಶ್ರೀಮಂತರನ್ನು ತೋರಿಸಿ ಕೊಟ್ಟು, ಇಂಥ ಜನರು ಇರುವಾಗ ಏಕೆ ಈ ಭೂಮಾಲಿಕರ ಬಗ್ಗೆ ಕತ್ತರಿ ಪ್ರಯೋಗ ಮಾಡುತ್ತೀರೆಂದು ಹೇಳಿಕೊಂಡು ಮೊದಲಿನಿಂದಲೂ ಬಂದಿದ್ದಾರೆ. ನಾನು ಇವತ್ತು ಅರ್ಬನ್ ಸೀಲಿಂಗ್ ಹಾಕುವುದು ಬೇಡ ಎಂದು ಹೇಳುವುದಿಲ್ಲ. ಆದರೆ ಈ ರೀತಿಯ ವಾದ ಸರಿಯಲ್ಲ. ಈಗ ಬ್ಯಾಂಕುಗಳ ರಾಷ್ಟ್ರೀಕರಣವಾಯಿತು. ಅದು ಆದಮೇಲೂ ಅದನ್ನು ವಿರೋಧ ಮಾಡುವವರೇ ಇವತ್ತು ಪರವಾಗಿ ಹೇಳುವವರಾಗಿದ್ದಾರೆ. ಅರ್ಬನ್ ಸೀಲಿಂಗ್ ಹಾಕಿ ಎಂದು ಹೇಳಿ ಬ್ಯಾಂಕು ರಾಷ್ಟ್ರೀಕರಣ ಮಾಡುವಾಗ ಅದಕ್ಕೆ ವಿರೋಧಮಾಡುತ್ತಾರೆ. ಸುಪ್ರೀಂ ಕೋರ್ಟಿನವರೆಗೆ ಹೋಗಿ ಅದನ್ನು ತಡೆಹಿಡಿಯುತ್ತಾರೆ. ಬ್ಯಾಂಕ್ ರಾಷ್ಟ್ರೀಕರಣ ಆಗುವವರೆಗೆ ಏನೂ ಮಾಡಬೇಡಿ ಎಂದು ಈಗ ಅರ್ಬನ್ ಸೀಲಿಂಗ್ ತಂದು ಎತ್ತಿಕಟ್ಟುತ್ತಿದ್ದಾರೆ. ಅದನ್ನು ಮಾಡಬೇಕು. ವಿದೇಶೀ ವ್ಯಾಪಾರಗಾರರ ಹಾಗೂ ದೊಡ್ಡ ದೊಡ್ಡ ಬಂಡವಾಳಗಾರರ ಕಂಪೆನಿಗಳಿವೆ. ಅವನ್ನು ತೆಗೆದುಕೊಳ್ಳುವುದಕ್ಕೆ ಏನೇನು ವ್ಯವಹಾರ ಬೇಕೋ ಅದನ್ನು ಕೇಂದ್ರ ಸರ್ಕಾರದವರು ಮಾಡಲಿ. ಅದನ್ನು ಮಾಡುವುದಕ್ಕೆ ನಮ್ಮ ಪೂರ್ಣ ಸಹಕಾರವಿದೆ. ಅದರ ಜೊತೆಗೆ ಅರ್ಬನ್ ಸೀಲಿಂಗ್ ಮಾಡಿದರೆ ಅದಕ್ಕೆ ಪೂರ್ಣ ಬೆಂಬಲ ಕೊಡುತ್ತೇವೆ.

(ಶ್ರೀ ಬಿ. ವಿ. ಕಕ್ಕಿಲಾಯ).—

ಕೆಲವರು ಇದಕ್ಕೆ ತಡೆಯಾಜ್ಞೆ ತರುವ ಒಂದುವಾದ ಹೂಡಬಹುದು ಭೂಮಿ ಬಹಳ ಮುಖ್ಯವಾದಂಥ ಒಂದು ಸಾಧನ. ಅರ್ಬನ್ ಸೀಲಿಂಗ್ ಆದಾಯಕ್ಕೂ ಇದಕ್ಕೂ ಬಹಳ ವ್ಯತ್ಯಾಸವಿದೆ ಬರೀ ಆದಾಯದಲ್ಲಿ ಒಂದು ಅಂಶ ಹೋಗಬಹುದು. ಇದೇ ಹಣ ಬಂಡವಾಳವಾಗಿ ಅವನ ಸ್ವಂತ ಖರ್ಚಿಗೆ ಹೋಗಬೇಕು. ಒಂದು ಭಾಗ ಉತ್ಪಾದನೆಗೆ ಉಪಕರಣವಾಗಿ ಮಾರ್ಪಾಟಾಗಬೇಕು ಆದರೆ ಭೂಮಿ ಹಾಗಲ್ಲ. ಭೂಮಿ ಮೂಲಭೂತವಾಗಿ ಒಂದು ಉತ್ಪಾದನೆಗೆ ಸಾಧನವಾಗಿದೆ. ಈ ಉತ್ಪಾದನೆ ಸಾಧನ ಕೆಲವೇ ಮಂದಿಯ ಕೈಯಲ್ಲಿ ಕೇಂದ್ರೀಕರಿಸಿದ್ದರೆ, ಕೇಂದ್ರೀಕರಿಸಿದ್ದರೆ, ನಮ್ಮ ಸಮಾಜದಲ್ಲಿ ನ್ಯಾಯ ಒದಗಿಸುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ದಿವಸ ಇಂಥ ಒಂದು ದೊಡ್ಡ ಅಂತರವನ್ನು ತೊಡೆದು ಹಾಕುವುದಕ್ಕಾಗುವುದಿಲ್ಲ. ಇಲ್ಲದಿದ್ದರೆ ಈ ಕಾನೂನು ಬರೀ ಕಾಗದಲ್ಲಿಯೇ ಉಳಿಯುತ್ತದೆ. ಅದನ್ನು ಜಾರಿಗೆ ತರಬೇಕಾದರೆ ಇಲ್ಲಿರುವ ಅಂತರ ತೊಡೆದು ಹಾಕಿದರೆ ಮಾತ್ರ ಯಶಸ್ವಿಯಾಗಿ ಕಾನೂನನ್ನು ಜಾರಿಗೆ ತರಬಹುದು. ಭೂಮಿಯ ಮೇಲೆ ಪರಿಮಿತಿಯನ್ನು ಹಾಕುವ ಎಲ್ಲಾ ದೃಷ್ಟಿಯಿಂದಲೂ ಬಹಳ ಅಗತ್ಯ. ಮೊದಲಿದ್ದುದಕ್ಕಿಂತ ಕಡಿಮೆ ಮಾಡುವುದಕ್ಕೆ ಪ್ರಯತ್ನ ಪಟ್ಟಿರುವುದು ಬಹಳ ಸ್ವಾಗತಾರ್ಹವಾದದು. ಇದರಿಂದ ನನಗೆ ಸಮಾಧಾನ ವಾಗಿಲ್ಲವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಈಗ ೧೦ ರಿಂದ ೧೮ ಎಕರೆವರೆಗೆ ಮಿತಿಸಲಾಗಿ ಸೀಲಿಂಗ್ ಫಿಕ್ಸ್ ಮಾಡಿ ಎಂದು ಕೇಂದ್ರ ಸರ್ಕಾರದವರು ರಾಜ್ಯಗಳಿಗೆ ಅವಕಾಶ ಕೊಡೋಣವೆಂದು ಮಾಡಿದರೆ ಮಾನ್ಯ ಮುಖ್ಯ ಮಂತ್ರಿಗಳು ಬರುವ ಮೊದಲು ಹೇಳಿದ್ದೆ, ಪಾರ್ಲಿಮೆಂಟ್ ಸದಸ್ಯರು, ಮೈಸೂರಿನವರು ಚಳುವಳಿ ಮಾಡುವುದಕ್ಕೆ ವಾದ ಹೂಡಿದ್ದಾರೆಂದು. ಮಾನ್ಯ ಮುಖ್ಯ ಮಂತ್ರಿಗಳು ೧೦ ಎಕರೆ ಮಾಡಿದರು. ೧೮ ಎಕರೆವರೆಗೆ ಹೋಗಿಲ್ಲವೆಂದು ಚಳುವಳಿ ನಡೆಸುತ್ತೇವೆಂದು ತೀರ್ಮಾನ ಮಾಡಿದ್ದೇವೆಂದು ಕೆಲವರು ಹೇಳಿದರು. ಇದನ್ನು ಪತ್ರಿಕೆಯಲ್ಲಿ ನೋಡಿ ದ್ದೇನೆ. ೧೦ ಎಕರೆ ಸೀಲಿಂಗ್ ತಾವು ಹಾಕಿದರೆ ಇದರಿಂದ ಎಷ್ಟು ಜನಗಳಿಗೆ ಬಾಧಕವಾಗುತ್ತದೆ ಎಂಬು ದನ್ನು ಮೊದಲು ನೋಡೋಣ. ಮಾನ್ಯ ಕಂದಾಯ ಸಚಿವರು ಹೇಳಿದ ಹಾಗೆ ಇಡೀ ರಾಜ್ಯದ ೩ ಕೋಟಿ ಕನ್ನಡಿಗರಲ್ಲಿ ಬರೀ ಶೇಕಡ ೩ ರಷ್ಟು ಜನರು ಈ ೧೦ ಎಕರೆ ಸೀಲಿಂಗ್ ನಿಗದಿ ಮಾಡಿದರೆ ಸ್ವಲ್ಪ ಜಮೀನು ಕಳೆದುಕೊಳ್ಳುತ್ತಾರೆ. ೪ ಲಕ್ಷ ಎಕರೆ ಉತ್ಪನ್ನ ಬರುವುದು ಬೇರೆ ಆದರೆ ಇದರಿಂದ ಶೇಕಡ ೩ ರಷ್ಟು ಜನಗಳಿಗೆ ಮಾತ್ರ ತೊಂದರೆ ಇದ್ದರೆ ಯಾರೂ ಕಂಬನಿ ಸುರಿಸಬೇಕಿಲ್ಲ. ಭಾರತ ದೇಶದಲ್ಲಿ ಸರಿಯಾದ ರೀತಿಯಲ್ಲಿ ಈಗಿರುವ ಸೀಲಿಂಗ್ ಪ್ರಾವಿಷನ್ನುಗಳನ್ನು ಎಗ್ಜೆಂಪ್‌ಷನ್ನುಗಳನ್ನು ಹಾಗೂ ಲೂಪ್‌ಹೋಲ್ಸನ್ನು ತೆಗದು ಹಾಕಿದರೆ ೯ ಕೋಟಿ ಎಕರೆ ಜಮೀನು ವಿತರಣೆಗೆ ಅವಕಾಶ ಸಿಗುತ್ತದೆ ಇವತ್ತು ನಮ್ಮ ರಾಜ್ಯದಲ್ಲಿ ೪ ಲಕ್ಷ ಎಕರೆ ಜಮೀನು ಹಂಚಿಕೆಗಾಗಿ ಇದೆಯೆಂದು ಕಂದಾಯ ಸಚಿವರು ಹೇಳಿದರು. ಇದನ್ನು ನೋಡಿದರೆ ನನಗೆ ಬಹಳ ವ್ಯಸನವಾಗುತ್ತದೆ. ಇದರಿಂದ ಎಷ್ಟರ ಮಟ್ಟಿಗೆ ಪ್ರಯೋಜನವಾಗುತ್ತದೆ ಎಂಬುದನ್ನು ನೋಡಬೇಕು. ಸೀಲಿಂಗ್ ಹಾಕುವಾಗ ಇನ್ನೂ ಸ್ವಲ್ಪ ಕಡಿಮೆ ಮಾಡಬೇಕು. ಇದಕ್ಕೆ ಜಮೀನುದಾರರು ಕೋಪಮಾಡಬಾರದು. ನಮ್ಮಲ್ಲಿ ಸಾಮಾನ್ಯ ಜನರು ಶತಮಾನಗಳಿಂದ ವ್ಯವಸಾಯ ಮಾಡುತ್ತಿರುವವರು ಒಂದು ಎಕರೆ ಜಮೀನು ಮಾಡಿಕೊಂಡು ಅದರಿಂದ ಬರತಕ್ಕ ಉತ್ಪಾದನೆಯಲ್ಲಿ ಅರ್ಧದಷ್ಟು ಜಮೀನು ದಾರರಿಗೆ ಗೇಣಿ ಕೊಡುತ್ತಿದ್ದಾರೆ. ಅಂತಹ ರೈತರಲ್ಲಿ ೧೦೦ಕ್ಕೆ ೭೯ರಷ್ಟು ಭಾಗ ರೈತರಿಗೆ ಜಮೀನಿಲ್ಲ. ಕೇವಲ ೧/೪ ಎಕರೆಯಿಂದ ೨ ಎಕರೆಗೆ ಜಮೀನು ಇದ್ದರೆ ಅದರಿಂದ ದುಡಿದು ತಮ್ಮ ಕುಟುಂಬ ಪೋಷಣೆ ಮಾಡಿ, ಜಮೀನುದಾರರಿಗೆ ಉಳಿದುದನ್ನು ಕೊಡುತ್ತಾರೆ. ನ್ಯಾಯ ನೋಡಿದರೆ ಇವತ್ತು ಸೀಲಿಂಗ್ ಇರಬೇಕಾದ ಅವಶ್ಯಕತೆ ಇಲ್ಲ. ಜಮೀನನ್ನು ರ್‍ಯಾಷನಲೈಜ್ ಮಾಡಬೇಕು. ಇರುವ ಜಮೀನಿನಲ್ಲಿ ಹೆಚ್ಚಿನ ಅಂಶ ಅಂದರೆ, ಶೇಕಡ ೩ರಷ್ಟು ನಮ್ಮ ದೇಶದ ಉಳುಮೆಗಾರರ ಭಾಗೆ ಅದರಕ್ಕೆಲಿದೆ. ಈಗ ಒಟ್ಟು ಶೇಕಡ ೭೯ ರಷ್ಟು ಮಾತ್ರ ಅವರ ಕೈಯ್ಯಲ್ಲಿರುವುದರಲ್ಲಿ ಶೇಕಡ ೯-೧೦ ರಷ್ಟು ಮಾತ್ರ ಜಮೀನಾದರೂ ಇದೆಯೇ ಎಂದು ಲೆಕ್ಕ ಹುಡುಕಿ ಹೇಳೋಣವೆಂದರೆ ಸಮಯವಿಲ್ಲ. ಈ ಅಂತರವನ್ನು ಬದಲಾವಣೆ ಮಾಡಬೇಕಾದರೆ ೨ ಎಕರೆ ಫಿಕ್ಸ್ ಮಾಡಿದರು. ಈ ಬಗ್ಗೆ ಇವತ್ತಿನ ಪರಿಸ್ಥಿತಿಯಲ್ಲಿ ಅನ್ಯಾಯವಾಗಬಾರದು. ಸಮಾಜಕ್ಕೆ ದ್ರೋಹ ಮಾಡಬಾರದು. ಜಪಾನಿನಲ್ಲಿ ೭ ಎಕರೆ ಫಿಕ್ಸ್ ಮಾಡಿದ್ದಾರೆ. ಯು. ಎ. ಆರ್. ನಲ್ಲಿ, ೫೨ರಲ್ಲಿ ಮೊದಲು ಫಿಕ್ಸ್ ಮಾಡಿದಂಥ ಸೀಲಿಂಗ್‌ನ್ನು ೬೯ರಲ್ಲಿ ಅರ್ಧಾಂಶಕ್ಕೆ ಕಟ್ ಮಾಡಿದರು. ಮೊದಲು ಕೊಟ್ಟಾಗ್ಯ ಎರಡಾಣೆ ಪರಿಹಾರ ಕೊಟ್ಟಿಲ್ಲ. ಅರ್ಧಾಂಶ ಭೂಮಿ ತೆಗೆದುಕೊಂಡರೆಂದು ಮಾನ್ಯ ಶ್ರೀ ವೀರೇಂದ್ರಪಾಟೀಲ್ ರವರು ಹೇಳಿದರು. ಅದನ್ನು ಯಾರ ಕೈಯಿಂದಲೂ ಕಿತ್ತುಕೊಳ್ಳಿ ಎಂದು ಹೇಳುತ್ತಾ ಇಲ್ಲ, ಈ ಕಾನೂನನ್ನು ನ್ಯಾಯವಾಗಿ ಮಾಡಿ. ನೀವು ೧೦ ಎಕರೆ ಕೊಟ್ಟರೆ ಅವರು ೧೦೦ ಎಕರೆ ಇಟ್ಟುಕೊಳ್ಳುತ್ತಾರೆ. ಅದಕ್ಕೆ ಬೇಕಾದರೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಆ ಷುಗರ್ ಫ್ಯಾಕ್ಟರಿಗೆ ೧೦೦ ಎಕರೆ ಇಟ್ಟುಕೊಳ್ಳಬಹುದು ಎಂದು ಹೇಳಿದ್ದೀರಿ. ಆ ರೀತಿ ಕೊಡುವುದು ಅವಶ್ಯಕತೆ ಇಲ್ಲ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಇದೆ. ಮಾನ್ಯ ಶ್ರೀ ಕೆ. ಎಚ್. ಪಾಟೀಲ್‌ರವರೂ ಇದ್ದಾರೆ.

ಅವರು ತಮ್ಮ ಕೆಲಸಗಳನ್ನು ಮಾಡುತ್ತಿದ್ದಾರೆ. ರೀಸರ್ಚ್ ಸ್ಟೇಷನ್‌ಗಳನ್ನು ಈಗ ಮಾಡಬೇಕಾಗಿರುವಾಗ ಸಮಾಜವಾದ ಕಾರ್ಯಗಳನ್ನು ಸರ್ಕಾರದವರು ಮಾಡಬೇಡವೇ ? ಆ ಜಮೀನು ಇದ್ದುದನ್ನು ಅವರಿಗೆ ಕೊಡದೆ ಸರ್ಕಾರದವರು ಎಲ್ಲೆಲ್ಲಿ ಸಕ್ಕರೆ ಕಾರ್ಖಾನೆಗೆ ಅನುಕೂಲ ಇದೆಯೋ ಅಲ್ಲಿ, ಅದನ್ನು ಮಾಡಲಿ. ಕೋಕೋನಟ್, ಅರಕನಟ್, ಪ್ಯಾಡಿ, ರೀಸರ್ಚ್ ಸ್ಟೇಷನ್, ಕ್ಯಾಷಿಯೋ ರೀಸರ್ಚ್ ಸ್ಟೇಷನ್, ಷುಗರ್ ಕೇನ್ ರೀಸರ್ಚ್ ಸ್ಟೇಷನ್, ಸೀಡ್‌ಫಾರಂ ಇವುಗಳನ್ನು ಮಾಡಿ ಜನರಿಗೆ ಹಾಗೂ ವ್ಯವಸಾಯಗಾರರಿಗೆ ಬೇಕಾದಂಥ ಅನುಕೂಲಗಳನ್ನು ಕೊಡಿ. ಆದರೆ ಷುಗರ್ ಫ್ಯಾಕ್ಟರಿಗಳಿಗೆ ೧೮೦ ಎಕರೆ ಕೊಡಬಾರದು.

ತಾವು ಇನ್ನು ಇಲ್ಲಿ ಕೋಆಪರೇಷನ್ ಬಗ್ಗೆ ಹೇಳಿರುವುದನ್ನು ಸ್ವಲ್ಪಮಟ್ಟಿಗೆ ಬದಲಾವಣೆ ಮಾಡಿದ್ದರೆ ಚೆನ್ನಾಗಿತ್ತು. ಸಮಾಜ ತತ್ವದ ಪ್ರಕಾರ ಇರತಕ್ಕ ಭೂ ವಿಸ್ತೀರ್ಣದಲ್ಲಿ ವ್ಯವಸಾಯಗಾರರಿಗೆಲ್ಲಾ ಸಮ ಪಾಲು ಸಿಕ್ಕಬೇಕು ಎಂಬುದು ನಮ್ಮೆಲ್ಲರ ಆಸೆಯಾಗಿರುವಾಗ ಈ ಒಂದು ಸೋಗಿನಲ್ಲಿ ಭೂಮಿಯನ್ನು ಒಂದು ಕಡೆಯಿಂದ ಕಿತ್ತುಕೊಂಡು ಮತ್ತೆ ಒಂದು ಕಡೆಯಲ್ಲಿ ಅದೇ ಹಳೇ ರಾಗವನ್ನು ಹಾಡುತ್ತಾ ಭೂಮಿ ಇದ್ದವರಿಗೇ ಮತ್ತಷ್ಟು ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಈ ಕೋಆಪರೇಟೀವ್ ಫಾರ್ಮಿಂಗ್ ಹೆಸರಿನಲ್ಲಿ ಉತ್ತೇಜನ ಕೊಡತಕ್ಕದ್ದು ಸರಿಯಲ್ಲ. ಡೆಮಾಕ್ರಸೀಲಿ ಕೋಆಪರೇಟೀವ್ ಫಾರ್ಮಿಂಗುಗಳು ಇರಬೇಕಾದ್ದು ಅಗತ್ಯ. ಆದರೆ ಅದರ ನಮೂನೆ ಬೇರೆ. ಈ ದಿವಸ ಈ ಕೋಆಪರೇಟೀವ್ ಫಾರ್ಮಿಂಗಿನ ಹೆಸರಿನಲ್ಲಿ ಹಳೇ ಪಾಳೇಗಾರರೂ ಮತ್ತು ಬಂಡವಾಳಷಾಹಿಗಳು ಅಳಿಸಿ ಹೋಗಿ ಹೊಸ ಪಾಳೇಗಾರರೂ ಬಂಡವಾಳ ಷಾಹಿಗಳೂ ಬೆಳೆಯುತ್ತಿದ್ದಾರೆ. ಆದುದರಿಂದ ಸಧ್ಯಕ್ಕೆ ಈ ಕೋಆಪರೇಟೀವ್ ಫಾರ್ಮಿಂಗುಗಳಿಗೆ ಅವಕಾಶ ಬೇಡ ಎಂದು ಹೇಳುತ್ತಿದ್ದೇನೆ. ಈ ದಿವಸ ಕೋಆಪರೇಟೀವ್ ಫಾರ್ಮಿಂಗು ಎಂದು ಹೆಸರಿಟ್ಟುಕೊಂಡು ನಡೆಸಲಾಗುತ್ತಿರುವ ಸಂಸ್ಥೆಗಳಲ್ಲಿ ಯಾರು ಸದಸ್ಯರಾಗಿರತಕ್ಕವರು ? ಗಂಡ, ಹೆಂಡತಿ, ಮಗಳು, ಅಳಿಯ, ಸೊಸೆ ಇವರೆಲ್ಲರೂ ಸದಸ್ಯರೋ ? ಇಂಥ ಸನ್ನಿವೇಶಗಳೇ ಹೆಚ್ಚಾಗಿ ಇರುವುದರಿಂದ ಇವುಗಳಿಗೆ ಸಧ್ಯಕ್ಕೆ ಅವಕಾಶ ಕೊಡುವುದು ಬೇಡ ಎಂದು ಹೇಳುತ್ತೇನೆ.

ಇನ್ನು ಇದನ್ನು ಯಾವ ರೀತಿ ಇಂಪ್ಲಿಮೆಂಟ್ ಮಾಡಬೇಕೆಂಬುದರ ಬಗ್ಗೆ ಒಂದೆರಡು ಮಾತನ್ನು ಆಡಬಯಸುತ್ತೇನೆ. ಈ ದಿವಸ ಇರತಕ್ಕ ಆಡಳಿತದಲ್ಲಿ ಮೂಲ ಭೂತ ಬದಲಾವಣೆಗಳಾಗಬೇಕು. ಅಂದರೆ ನಾನೀದಿವಸ ತಮಗೆ ಆ ಚೈನಾ ಅಥವಾ ರಷ್ಯಾ ದೇಶಗಳಲ್ಲಿರುವಂಥ ಪದ್ಧತಿಯನ್ನು ಜಾರಿಗೆ ತನ್ನಿ ಎಂದು ಹೇಳುತ್ತಿಲ್ಲ. ನಮ್ಮಲ್ಲಿರತಕ್ಕ ಪ್ರಜಾಪ್ರಭುತ್ವಕ್ಕೆ ಒಳಪಟ್ಟು ದೇಶದಲ್ಲಿ ಜನರಿಗೆ ಉಂಟಾಗಿರತಕ್ಕ ಕ್ರಾಂತಿಕಾರಿಕ ಮನೋಭಾವನೆಗಳಿಗೆ ಅನುಗುಣವಾಗಿ ಇದನ್ನು ಯಾವರೀತಿ ಜಾರಿಗೆ ತಂದರೆ ಅನುಕೂಲವಾಗಿರುತ್ತೆ ಎಂಬುದನ್ನು ಪರಿಶೀಲನೆ ಮಾಡಿದರೆ, ಪ್ರತಿಯೊಂದು ಗ್ರಾಮ ಪಂಚಾಯಿತಿ ಸರಹದ್ದಿನಲ್ಲೂ ಒಂದು ತ್ರಿಮೂರ್ತಿಗಳನ್ನೊಳಗೊಂಡ ಒಂದು ಟ್ರೈಬ್ಯುನಲ್ಲನ್ನು ಮಾಡಿ ಅದರಲ್ಲಿ ತಾಲ್ಲೂಕ್ ತಾಶೀಲ್ದಾರ ಮತ್ತು ಭೂಹೀನರ ಪರವಾಗಿ ಒಬ್ಬ ಹರಿಜನ ಸದಸ್ಯರು ಮತ್ತು ಒಬ್ಬ ಗಿರಿಜನ ಸದಸ್ಯರು ಹೀಗೆ ಮೂರು ಜನರ ಒಂದು ಸಮಿತಿಯನ್ನು ಮಾಡಿ ಅದು ಈ ಶಾಸನ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ನೋಡಿ ಅದಕ್ಕೆ ಸೂಕ್ತ ಸಲಹೆಗಳನ್ನು ಮಾಡುವುದಕ್ಕೆ ಈ ಸಮಿತಿಗೆ ಅಧಿಕಾರ ಕೊಡಬೇಕೆಂದು ಸಲಹೆ ಮಾಡಿ ನಾನು ಸ್ವಲ್ಪ ವೇಳೆಯನ್ನು ಹೆಚ್ಚಿಗೆ ತೆಗೆದುಕೊಂಡಿದ್ದರೂ, ನನ್ನನ್ನು ಕ್ಷಮಿಸಿದ್ದಕಾಗಿ ಅಧ್ಯಕ್ಷರಿಗೆ ನನ್ನ ಕೃತಜ್ಞತೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

STATEMENT OF THE CHIEF MINISTER

Re :—Scarcity Conditions in the State and measures taken up by Government.

MR. DEPUTY SPEAKER : Hon. Chief Mi ister will make a State ment on the scarcity conditions in the State.

SRI D. DEVARAJ URS : Sir, the statement is a big and long one and I crave the indulgence of the House to read it.

The Statement is Reproduced below.

(Sri D. Devaraj Urs).—

Hon' ble members might remember that before the House adjourned for the short recess on the 5th of this month. I gave them an account of the steps taken by the Government to meet the situation arising from the drought conditions over the major part of the State. The Government of India convened on the 11th of August a conference of Chief Secretaries and other officers of State Governments to Discuss the strategy to deal with the drought conditions. I was also in Delhi at that time and discussed some aspects of the situation with the Central Ministers. Subsequently a Senior Officer of the Central Government visited the State in connection with the special agriultural production programmes to be undertaken on an emergency basis to make good the short-fall in the production of foodgrains. Shri A. P. Shinde, Union Minister for Agriculture is visiting the State tomorrow for a further discussion on this subject and for finalising the State's Programme.

My colleagues, the Hon'ble Minister for Finance and the Hon'ble Minister for Revenue have toured some of the worst affected parts of the State and conveyed to me and to my colleagues their impression of the situation and the adequacy of the arrangements made to meet it. In the light of these developments the State Government have decided on the further programme to meet the situation and I would like to take the House into confidence about what we propose to do.

We were hopeful that in the first half of August we would have some favourable rains and that it might be possible to retrieve the situation at least partially in substantial parts of the affected areas. Except, however, for a few showers in the Southern most Districts there has been no rainfall beneficial to agricultural operations and the situation in the affected areas has worsened. Also conditions akin to scarcity have begun to appear even in the Districts which we had considered to be safe a fortnight back.

After the tours of my colleagues in the affected areas the Government took a decision to release a further sum of Rs. 3. 5. crores for relief works in these areas and this amount has been distributed as follows :—

1. Bijapur	...	Rs.	50 lakhs
2. Gulbarga	...	Rs.	50 do
3. Bidar	...	Rs.	25 do
4. Belgaum	...	Rs.	25 do
5. Dharwar	...	Rs.	25 do
6. Raichur	...	Rs.	25 do
7. Bellary	...	Rs.	25 do
8. Chitradurga	...	Rs.	25 do
9. Kolar	...	Rs.	20 do

10. Tumkur	...	Rs. 15	do
11. Bangalore	...	Rs. 15	do
12. Shimoga	...	Rs. 5	do
13 Hassan & Mysore	...	Rs. 15	lakhs each
14. Mandya and Chikmagalur	...	Rs. 10	lakhs each

These amounts are in addition to the sum of Rs. 1 crore released on the 2nd August for relief works. I had informed the House on the 5th that in addtion to the Rs. 1.5. crores *i. e.,* one crore for relief works and 50 lakhs for loans released upto that date we will be releasing an equivalent amount. In view of the worsening conditions we have decided to release Rs. 3. 5 crores as against Rs. 1.5 crores I had promised.

Government are fully aware that mere release of funds by itself will not result in giving the people x the relief they need. The amounts allotted by Government will have to be re allotted to the lowest administrative units viz., the talukas, the works to be undertaken selected and the agency for its execution decided. Some delay in these process was noticed by my colleagues during their tours and we have taken action to see that these delays are eliminated. We shall see that the responsibility for implementing Government's direction both in the spirit and in the letter is brought home to those charged with executing the relief works programme. In particular, definite instructions have been issued that there should be adequate number of works started to provide employment to every person who offers himself for work. In particular it has been emphasised that no person in need of work should be made to go more than 5 miles from his village to reach his works spot. The Departmental rules have been relaxed wherever necessary to expedite starting of these works.

One of the important measures of protecting the vulnerable areas against the effects of scarcity, would be the provision of irrigation works to the extent it is possible. In some of the areas, the only irrigation works feasible are small irrigation works. Even these are uneconomical on the basis of the prescribed criteria. We have already enhanced the cost per acre in the scarcity areas from Rs. 1250 to Rs. 1,500 Government has now taken a decision to permit irrigation works being taken up in the scarcity areas provided the cost per acre does not exceed Rs. 2000 This relaxation may enable a substantial number of minor irrigation works being undertaken in the scarcity areas. This will serve a double purpese viz., providing employment in the current year and protection during future years.

When I last spoke to you on this subject, I have already told you of our plans to meet the shortage of drinking water in the affected areas. There have been numorous requests to Government to send high speed drilling rigs to these areas to sink wells. We have got only a limited

(Sri D. Devaraj Urs).—

number of these rigs in the State and it will not be possible for effective action to be taken in all these villages utilising these rigs and drinking water provided in all the affected villages within a period of a week or 10 days which is the need of the day. The Deputy Commissioner have again been directed to adipt the conventional methods of dealing with this scarcity situation by (1) deepening of the existing wells, (2) sinking of temporary wells in valleys and tank beds, (3) transporting of water from the nearest place where it is available in places where the deepending of wells or sinking of temporary well is not possible.

As I mentioned earlier, the ceiling limit for deepening of a well is Rs. 3000 and a specific sum out of the amount allotted to each district has been set apart for this purpose.

I had informed the Hon'ble Members that we had moved the Central Government a Central assistance of Rs. 13.00 crores. We have had to reassess our requirements in view of the worsening of the conditions during the last fortnight and we have now drawn up a programme which will cost Rs. 16.50 crores in all. This programme is being discussed with Shri Shinde when he comes here tomorrow and we are going to urge with the Central Government to release atleast Rs. 8.00 crores for immediate needs. The total amount we have released for relief works in scarcity areas so far comes to nearly Rs. 6.00 crores and in the present financial position we cannot bear this burden without running into an over-draft again. I am going to make a special plea to the Government of India and also take up the matter with the Union Finance Minister and the Prime Minister at the appropriate stages. I would, however, like to assure the Hon'ble Members that our implementati on of the programme will not be made dependent on the release of Central assistance. The programme we have indicated will be continued and will be intensified if necessary, so that the situation is fully and adequately met.

5.00 P. M.

ಶ್ರೀ ಎನ್. ಜಿ. ಹಾಲಪ್ಪ.—ಶಾನುಭೋಗರಿಗೆ ಸಂಬಳ ಕೊಡುವ ಹಾಗೆ ಪಟೇಲರಿಗೂ ಕೊಡುವಂತೆ ಹೈಕೋರ್ಟಿನಲ್ಲಿ ತೀರ್ಮಾನವಾಗಿದೆಯೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರಿಗೆ ಜಾಸ್ತಿ ಕೊಡಬೇಕೆಂದು ತೀರ್ಮಾನವಾಗಿದೆ. ಪಟೇಲರ ಹಕ್ಕು ಎಷ್ಟಿದೆ, ಅವರ ಕೆಲಸಕಾರ್ಯವೆಷ್ಟು, ಗ್ರಾಮದಲ್ಲಿ ಅವರ ಕೆಲಸವೆಷ್ಟಿದೆ ಎಂಬುದು ನಿರ್ಧಾರವಾಗಿಲ್ಲ. ಆದುದರಿಂದ ಅದನ್ನೆಲ್ಲಾ ಪರಿಶೀಲಿಸಿ ಸರಕಾರ ತೀರ್ಮಾನ ಮಾಡುವುದು.

ಶ್ರೀ ಬಿ. ಜಿ. ಬಣಕಾರ್.—ಪಟೇಲರು, ತೋಟಿ ತಳವಾರರು ಮುಂತಾದವರ ಬಗ್ಗೆ ಸರಕಾರದ ಧೋರಣೆಯೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗ್ರಾಮ ನೌಕರರ ಬಗ್ಗೆ ಈ ವರ್ಷದ ಆಖೈರಿನೊಳಗೆ ಒಂದು ತೀರ್ಮಾನವಾಗಬೇಕಾಗಿದೆ. ಈ ವರ್ಷದ ಕೊನೆಯುವರೆಗೆ ಅವರನ್ನು ಮುಂದುವರಿಸುತ್ತೇವೆ.

PROMOTION OF DRAUGHTSMEN IN PUBLIC WORKS DEPARTMENT

781 Sri A G KODAGI. (Baindur) Will the Minister of Public Works and Electricity be plased to state.—

(*a*) the total strength of Draughtsmen in Public Works Department.

(*b*) of th m the number of Draughtsmen promoted to the posts of Assistant Engineers in the ratio of 7: 1 vacancies, reserved for Junior Engineers (Non-graduates) and Draughtsmen respectively as per Government Order No. PWD 557 SPG 66 dated 12th June 1969?

*SRI H. M. CHANNABASAPPA.—(Minister for Public Works)

(*a*) 936.

(*b*) Nill. The matter is under consideration.

SRI A. G. KODAGI:—In reply to (b) it is stated that the matter is under consideration may I know the reason for not following the Government Order?

† SRI H. M. CHANNABASAPPA.—The Cadre and Recruitment Rules wil have to be properly changed and the changing of the Rules is under consideration.

SRI A. G. KODAGI.—Is there any disadvantage to the Department if a common designation is givien to the Diploma Engineers working as Junior Engineers (Non-Graduates) and Draughtsmen who are on the same scale of pay as has been done in M. S.E. B.?

SRI H. M. CHANNABASAPPA.—M. S. E. B is functioning on a different footing and the Government is functioning on a different footing. It would not be correct to equate them.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ (ಅ) ಗೆ ಉತ್ತರವಾಗಿ ಡ್ರಾಫ್ಟ್‌ಮನ್‌ಗಳಿಗೆ ೯೩೬ ಜನಕ್ಕೆ ಬಡ್ತಿ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇದರಲ್ಲಿ ಹರಿಜನ ಮತ್ತು ಗಿರಿಜನರು ಎಷ್ಟು ಇದ್ದಾರೆಂದು ತಿಳಿಸುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಇವರಲ್ಲಿ ಡ್ರಾಫ್ಟ್ಸ್‌ಮನ್‌ಗಳ ಒಟ್ಟು ಸಂಖ್ಯೆ ೯೩೬ ಇದೆ ಅಂತ ಹೇಳಿದಿಯೇ ಹೊರತು ಬಡ್ತಿ ಕೊಟ್ಟಿದ್ದೇವೆಂದು ಹೇಳಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.— ಸ್ವಾಮಿ, ಪಿ. ಡಬ್ಲ್ಯು.ಡಿ. ೫೫೭ ಎಸ್.ಜಿ.ಪಿ ೬೬ನೇ ಕ್ರಮಾಂಕದ ೧೨ನೇಜೂನ್ ೧೯೬೯ನೇ ದಿನಾಂಕದ ಆದೇಶದ ಮೇರೆಗೆ ಅವರಿಗೆ ಬಡ್ತಿ ಕೊಡುವುದಕ್ಕೆ ಒಂದು ಸರ್ಕ್ಯುಲರ್ ಹೊರಡಿಸಿರುವುದು ನಿಜವೇ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ತಾವು ಆ ಜಿ. ಒ. ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ. ತಾವು ನೋಡದೇ ಇದ್ದರೆ ನಾವು ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ತಾವು ಈ ಸಭೆಯಲ್ಲಿ ಅಷ್ಟು ಲಘುವಾಗಿ ಹೇಳತಕ್ಕದ್ದು ಸರಿಯಲ್ಲ. ತಮ್ಮ ಸರ್ಕ್ಯುಲರ್ ಪ್ರಕಾರ ಈ ಡ್ರಾಫ್ಟ್ಸ್‌ಮನ್‌ಗಳಿಗೆ ೭:೧೦ರ ಪ್ರಮಾಣದಲ್ಲಿ ಬಡ್ತಿ ಕೊಟ್ಟಿರುವ ನೀತಿ ಸರಿಯಲ್ಲ ಎಂದು ಹೇಳಿದರೆ ಈ ರೀತಿ ನಮ್ಮನ್ನೆ ಜಿ. ಒ. ತೆಗೆದುಕೊಂಡು ನೋಡಿ ಎಂದು ಹೇಳುವುದು ಸರಿಯಲ್ಲ: ನಮಗೆ ಆ ರೀತಿ ಹೇಳುವುದಾದರೆ ನಮಗೆ ಜಿ. ಒ. ಕಾಪಿಯನ್ನು ಒದಗಿಸಿ ಕೊಡಿ ಎಂದು ಕೇಳಬೇಕಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅಧ್ಯಕ್ಷರೆ, ಇದು ಒಂದು ಸಂಪ್ರದಾಯ. ಯಾವುದು ಸರ್ಕಾರದ ಪ್ರಕಟಣೆಯಲ್ಲಿ ದೊರೆಯುತ್ತದೋ ಅದನ್ನು ಈ ಸಭೆಯಲ್ಲಿ ಕೊಡತಕ್ಕಂಥಾದ್ದು ಅನಗತ್ಯ ಎನ್ನುವುದು ಸರ್ಕಾರದ ಅಭಿಪ್ರಾಯ.

SRI A. G. KODAGI—What is the opinion of the Goverment about evolving a common designation to the Diploma Engineers(non-graduates) and Draughtsmen in P. W. D. because there are two categories?

SRI H. M. CHANNABASAPPA —The Hon. Member is not clear. But any way, if I have understood him, I want to tell him that Draughtsmen are different from Engineers. Drughtsmen have to do the duties and functions of Draughtsmen and Engineers have to do the duties and functions of Engineers.

MOSQUITO NUISANCE DUE TO BHADRA PROJECT

805. SRI N. G. HALAPPA (Channagiri).—Will the Minister for Health be placed to state.

(*a*) whether the Government is aware of the Mosquito menace due to Bhadra Project;

(*b*) if so, the action taken or proposed to be taken in the matter?

SRI H. SIDDAVEERAPPA (Minister for Health).—

(*a*) No complaints have been received by Government about any unusual mosquito nuisance due to Bhadra Project.

(*b*) Does not arise.

ಶ್ರೀ ಎನ್. ಜಿ. ಹಾಲಪ್ಪ.—ಸ್ವಾಮಿ ತಾವು (ಅ) ಗೆ ಉತ್ತರವಾಗಿ No complaints have been received by Government about any unusual mosquito nuisance due to Bhadra Project ಎಂದು ಹೇಳಿದ್ದೀರಾ? ಹಾಗಾದರೆ ಯೂಷುಯಲ್ ಮೊಸ್ಕ್ವಟೋ ಯಾವುದು ಎಂದು ಸರ್ಕಾರದ ಗಮನಕ್ಕೆ ಬಂದಿದೆ ?

† ಶ್ರೀ ಎಚ್. ಸಿದ್ದವೀರಪ್ಪ.—ನಾವು ಮಲಗಂವುದಕ್ಕೆ ಹೋದಾಗ ನಮ್ಮನ್ನು ಕಡಿಯುವುದಕ್ಕೆ ಹೋಗುತ್ತದಲ್ಲಾ ಅದು ಯೂಮಾಯಲ್ ಮೊಸ್ಕ್ವಿಟೋಸ್.

ಶ್ರೀ ಎನ್. ಜಿ. ಹಾಲಪ್ಪ.—ಸ್ವಾಮಿ, ಮಾನ್ಯ ಮಂತ್ರಿಗಳು ಇದನ್ನು ಅಷ್ಟು ಲಘುವಾಗಿ ತಿಳಿದು ಕೊಂಡ ಹಾಗೆ ಕಾಣುತ್ತದೆ. ಈ ಭದ್ರಾ ಯೋಜನೆಯಿಂದಾಗಿ ಅಲ್ಲಿರುವ ದನಗಳು ಸೊಳ್ಳೆಯಿಂದ ಕಚ್ಚಿಸಿಕೊಂಡು ಅದರ ರಕ್ತವೆಲ್ಲಾ ಹೀರಿ ಬಿಡುತ್ತದೆ. ಇದರ ಪರಿಣಾಮವಾಗಿ ವರ್ಷ ಒಂದಕ್ಕೆ ಒಂದು ಜೊತೆ ಎತ್ತು ಹೋಗುತ್ತಾ ಇದೆ. ಅದಕ್ಕಾಗಿ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಭದ್ರಾ ಕನ್‌ಸಲ್‌ಟೇಟೀವ್ ಕಮಿಟಿಯವರು ಒಂದು ರೆಸಲ್ಯೂಷನ್ ಪಾಸು ಮಾಡಿ ಕಳುಹಿಸಿರುವುದು ನಮ್ಮ ಗಮನಕ್ಕೆ ಬಂದಿದೆಯೋ? ಬಂದಿದ್ದರೆ ಏನು ಕಾರ್ಯಕ್ರಮ ಕೈಗೊಳ್ಳುತೀರಾ?.

ಶ್ರೀ ಎಚ್. ಸಿದ್ದವೀರಪ್ಪ.—ದನಗಳಿಗೆ ಕಡಿಯುವ ಸೊಳ್ಳೆಯೇ ಬೇರೆ. ಜನಗಳಿಗೆ ಕಡಿಯುವ ಸೊಳ್ಳೆಯೇ ಬೇರೆ. I am aware of the nuisance and terrible havoc done to the animals in that area. ಅದು ಕಡಿದರೆ ಸರ್ ಅಂತ ರಕ್ತವೇ ಕೆಳಗೆ ಬಿದ್ದು ಬಿಡುತ್ತದೆ. ಅದರ ವಿಚಾರದಲ್ಲಿ ಏನು ಮಾಡಬೇಕು ಎಂದರೆ ಭದ್ರಾ ಅಡ್ವೈಸರಿ ಕಮಿಟಿಯವರು., ಹೇಗಾದರೂ ಅದರಲ್ಲಿ ತಾವು ಒಬ್ಬರು ಮೆಂಬರ್ ಆಗಿದ್ದೀರಿ, ಇದರ ಬಗ್ಗೆ ವೆಟರ್ನರಿ ಡಿಪಾರ್ಟ್‌ಮೆಂಟಿನವರು ಸಲಹೆ ತೆಗೆದುಕೊಂಡು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಕಳುಹಿಸಲಿ. ಈ ವಿಷಯ ದನಗಳ ಆರೋಗ್ಯ ಖಾತೆಗೆ ಸಂಬಂಧಪಟ್ಟದ್ದೇ ವಿನಾ ಜನಗಳ ಆರೋಗ್ಯ ಖಾತೆಗೆ ಸಂಬಂಧಪಟ್ಟದ್ದಲ್ಲ.

ಶ್ರೀ ಎನ್. ಜಿ. ಹಾಲಪ್ಪ.—ಹಾಗಾದರೆ ದನಗಳ ಆರೋಗ್ಯಕ್ಕೆನೇ ಬೇರೆ ಮಂತ್ರಿಗಳು ಇದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ವೆಟರ್ನರಿ ಇಲಾಖೆಗೆ ಸಂಬಂಧಪಟ್ಟಂತೆ ಅನಿಮಲ್ ಹಸ್ಬೆಂಡರಿ ಮಿನಿಸ್ಟರ್ ಅಂತ ಇದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, ಇತ್ತೀಚೆಗೆ ಪಟ್ಟಣದಲ್ಲೂ ಕೂಡ ವಿಪರೀತ ಸೊಳ್ಳೆಗಳು ಹೆಚ್ಚಾಗಿದೆ. ಮೊದಲು ಮುನಿಸಿಪಾಲಿಟಿಯವರು ಸೊಳ್ಳೆಗಳನ್ನು ನಾಶಪಡಿಸುವುದಕ್ಕಾಗಿ ತಕ್ಕ ಔಷಧಿಗಳನ್ನು ಸಿಂಪಡಿಸುತ್ತಾ ಇದ್ದರು. ಇತ್ತೀಚೆಗೆ ಅದನ್ನು ನಿಲ್ಲಿಸಿದ್ದಾರೆಂದು ಗೊತ್ತಾಗಿದೆ. ಆದುದರಿಂದ ಹಿಂದೆ ಇದ್ದ ಪದ್ಧತಿಯನ್ನೆ ಮುಂದುವರಿಸಿ ಸೊಳ್ಳೆಗಳನ್ನು ನಾಶಪಡಿಸುವಂತೆ ಸರ್ಕಾರದವರು ಮುನಿಸಿಪಾಲಿಟಿಗಳಿಗೆ ಆದೇಶ ಕೊಡುತ್ತಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆದೇಶ ಕಳುಹಿಸುತ್ತೇನೆ. ಅದರ ಜೊತೆಗೆ ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಮೊಸ್ಕ್ವಿಟೋ ನೂಸೆನ್ಸ್ ಬಹಳ ಜಾಸ್ತಿ ಆಗುತ್ತಾ ಇದೆ. ಇದು ಕೀಟಲೆ ಮಾಡುವ ಸೊಳ್ಳೆ. ಇದರ ಜೊತೆಗೆ ಮಲೇರಿಯಾ ಮೊಸ್ಕ್ವಿಟೋಸ್ ಬೇರೆ ಶುರುವಾಗಿದೆ. ಇದರ ಬಗ್ಗೆ ತೀವ್ರ ಕ್ರಮ ಕೈಗೊಳ್ಳುವುದಕ್ಕಾಗಿ ಒಬ್ಬರು ಸ್ಪೆಷಲ್ ಆಫೀಸರನ್ನು ಜಾಯಿಂಟ್ ಡೈರೆಕ್ಟರ್ ಸ್ಟೇಟಸ್‌ನಲ್ಲಿರತಕ್ಕಂಥ ವರನ್ನು ನೇಮಿಸಿದ್ದೇವೆ. ಆದುದರಿಂದ ನಾವೂ ನೀವೂ ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಿ the nuisance of mosquitos will have to be eradicated. Necessary steps will be taken and instructions will be issued to the local bodies. We have got our own Health staff also there.

ಶ್ರೀ ಎನ್. ಜಿ. ಹಾಲಪ್ಪ.—ಸ್ವಾಮಿ, ಭದ್ರ ಕನ್‌ಸಲ್ಟೇಟೀವ್ ಕಮಿಟಿಯವರು ಈಗಾಗಲೇ ಇದರ ಬಗ್ಗೆ ಏನು ಮಾಡಬೇಕು ಎಂದು ತಿಳಿಸಿದ್ದಾರೆ. ಈಗ ಆ ಏರಿಯಾದಲ್ಲಿ ವರ್ಷಕ್ಕೆ ಒಂದೊಂದು ಜೊತೆಎತ್ತು ಹೋಗುತ್ತಾ ಇದೆ. ಆದುದರಿಂದ ಇದರ ಬಗ್ಗೆ ಸರ್ಕಾರದವರು ತೀವ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ?

SRI H. SIDDAVEERAPPA.—Suitable instructions will be issued to the Department of Animal Husbandary to examine this question and see how best to help the area to be relieved of this nuisance.

MADAM SPEAKER.—I shall take up question No. 834 of Sri Bangarappa later.

YAGACHI RESERVOIR SCHEME

869. SRI K. H. HANUME GOWDA (Hassan).— Will the Minister of State for Major Irrigation be pleased to state.

(*a*) wehether the survey work for the porposed dam across Yagachi river in Belur taluk, Hassan Diestrict is completed;

(*b*) if so, the estimated cost of contruction of the same;

(*c*) when the work of this dam would be started ;

(*d*) the area and the extent of land in Hassan distrsct that would be irrigated from this dam ?

SRI H.N.NANJE GOWDA (Minister of State for Major Irrigation).-

(*a*) The survey work of Yagachi reservoir scheme is completed.

(*b*) The estimated cost Rs. 712.50 lakhs.

(*c*) After receipt of clearnce from Central Government.

(*d*) Belur taluk 3,933 acres. Hassan taluk 28,067 acres.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ಒಂದನೇದಾಗಿ ಈ ಪ್ರಾಜೆಕ್ಟ್‌ನಿಂದ ನೀರು ಒದಗಿಸ ತಕ್ಕಂಥಾ ಪ್ರದೇಶ ಕಳೆದ ೬-೭ ವರ್ಷಗಳಿಂದ ಪದೇ ಪದೇ ಕ್ಷಾಮಕ್ಕೆ ತುತ್ತಾಗುತಾ ಇದೆ.

ಎರಡನೇದಾಗಿ ಈ ಯುಗಚಿ ರಿವರ್ ೧೯೨೪ರ ಅಗ್ರಿಮೆಂಟ್ ಪ್ರಕಾರ ನಾನ್ ಷೆಡ್ಯೂಲ್ ರಿವರ್.

ಮೂರನೇದಾಗಿ ಕೇಂದ್ರದಲ್ಲೂ ರಾಜ್ಯದಲ್ಲೂ ಒಂದೇ ಪಾರ್ಟಿ ಸರ್ಕಾರ ಇರುವಾಗ ಈ ಯೋಜನೆ ಯನ್ನು ಕಳೆದ ೪-೫ ವರ್ಷಗಳಿಂದಲೂ ಕೂಡ ಮುಂದೂಡುತ್ತಾ ಬಂದಿರುವುದಕ್ಕೆ ಕಾರಣ ಏನು? ಈ ಒಂದು ಯೋಜನೆ ಆಗದೆ ಈ ಜಿಲ್ಲೆಯ ಅರ್ಧ ಭಾಗದ ರೈತರುಕ್ಷಾಮದ ದವಡೆಗೆ ಈಡಾಗಿರುವುದರಿಂದ ಇದರ ಬಗ್ಗೆ ತೀವ್ರವಾಗಿ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಯೇ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಎಚ್.ಎನ್. ನಂಜೇಗೌಡ: ಟೆಕ್ನಿಕಲ್ ಕ್ಲಿಯರೆನ್ಸ್ ಬಗ್ಗೆ ಜುಲೈ ೧೯೬೭ರಲ್ಲಿ ಕಳುಹಿಸ ಲಾಯಿತು. ಆಮೇಲೆ ಪ್ರಿಲಿಮಿನರಿ ಕಾಮೆಂಟ್ಸ್ ೧೯೬೮ರಲ್ಲಿ ಬಂತು. ಅದಕ್ಕೆ ಉತ್ತರವನ್ನು ಆಗಸ್ಟ್ ೧೯೬೯ರಲ್ಲಿ ಕಳುಹಿಸಲಾಯಿತು. ಫರ್ದರ್ ಕಾಮೆಂಟ್ಸ್ ಮಾರ್ಚಿ ೧೯೭೦ರಲ್ಲಿ ಬಂತು; ಮತ್ತು ಮೋರ್ ಕಾಮೆಂಟ್ಸ್ ಡಿಸೆಂಬರ್ ೧೯೭೦ರಲ್ಲಿ ಬಂತು. ಸೆಪ್ಟೆಂಬರ್ ೧೯೭೧ರಲ್ಲಿ ಕರೆಂಟ್ ರೇಟುಗಳ ಪ್ರಕಾರ ಎಸ್ಟಿ ಮೇಟನ್ನು ರೀಕ್ಯಾಸ್ಟ್ ಮಾಡಲಾಯಿತು. ಜನವರಿ ೭೨ಕ್ಕೆ ಪುನಃ ಇನ್ನೂ ಕೆಲವು ಅಬಸರ್ವೇಷನ್ಸ್ ಸಿ.ಡಬ್ಲ್ಯು.ಪಿ.ಸಿ. ಯಿಂದ ಬಂತು. ಅದಕ್ಕೆ ಉತ್ತರಗಳನ್ನು ಏಪ್ರಿಲ್ ೧೯೭೨ಕ್ಕೆ ಕಳುಹಿಸಿಕೊಟ್ಟಿದ್ದೇವೆ. ಪುನಃ ಏನೋ ಕಾಮೆಂಟ್ಸ್ ಕೇಳಿದ್ದಾರೆ. ಇದು ಟೆಕ್ನಿಕಲ್ ಕ್ಲಿಯರೆನ್ಸ್‌ಗೆ ಸಂಬಂಧಪಟ್ಟ ಹಾಗೆ ಆಯಿತು. ಕಟ್ಟೆ ತೆಗೆದುಕೊಳ್ಳತಕ್ಕ ವಿಷಯದಲ್ಲಿ, ಹಣಕಾಸಿನ ವಿಚಾರ ಯೋಚನೆ ಮಾಡಿ ಉತ್ತರ ಹೇಳಬೇಕಾಗುತ್ತದೆ.

೯-೩೦ ಎ ಎಂ.

ಶ್ರೀ ಕೆ.ಎಚ್. ಹನುಮೇಗೌಡ:—ಕಳೆದ ಆರೇಳು ವರ್ಷದಿಂದ ಆ ಪ್ರದೇಶದ ಜನರಿಗೆ ಕೂಲಿ ಒದಗಿಸುವ ಸೃಷ್ಟಿಯಿಂದ ಕೋಟ್ಯಾಂತರ ರೂಪಾಯಿ ಸರ್ಕಾರ ಒದಗಿಸುತ್ತ ಬಂದಿದೆ. ಈ ಯೋಜನೆ ಆಗಿದ್ದರೆ ಬಹುಶಃ ಆ ದುಡ್ಡು ಊಳಿತಾಯವಾಗುತ್ತಿತ್ತು ಮತ್ತು ಶಾಶ್ವತವಾಗಿ ಆ ಜನ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಅನುಕೂಲವಾಗುತ್ತ ಇತ್ತು. ಇಂಥ ಕಷ್ಟ ಪರಿಸ್ಥಿತಿಯಲ್ಲಿರುವ ಜನಗಳ ಬಗ್ಗೆ ಸರ್ಕಾರ ಇಷ್ಟು ನಿರಾಶಕ್ತಿ ಹೊಂದಿದರೆ ಹೇಗೆ? ಸರ್ಕಾರ ಈಗಲಾದರೂ ತೀವ್ರವಾಗಿ ಕ್ರಮ ತೆಗೆದು ಕೊಳ್ಳುತ್ತದೆಯೇ?

ಶ್ರೀ ಎಚ್.ಎನ್. ನಂಜೇಗೌಡ:—ಹಿಂದಿನ ಸರ್ಕಾರ ನಿರಾಶಕ್ತಿ ಹೊಂದಿತ್ತೋ ಏನೋ ಗೊತ್ತಿಲ ನಮಗೆ ಅದನ್ನು ತೆಗೆದುಕೊಳ್ಳಬೇಕೆಂಬ ಆಸಕ್ತಿ ತುಂಬ ಇದೆ.

ಶ್ರೀ ಎಚ್.ಡಿ. ದೇವೇಗೌಡ:—ಹಿಂದಿನ ಸರ್ಕಾರ ನಿರಾಶಕ್ತಿ ಹೊಂದಿತ್ತು ಎಂದು ಹೇಳಿದರೇ ಹೊರತು, ಅವರು ಈ ಕಡೆ ಇದ್ದಾಗ ಟೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕಲಿ ಅಥವಾ ಸಿಕ್ಕದೆ ಇರಲಿ ಎಲ್ಲ ಪ್ರಾಜೆಕ್ಟ್‌ಗಳನ್ನೂ ತೆಗೆದುಕೊಳ್ಳಬೇಕು ಎಂದು ಏನು ಪ್ರತಿಪಾದನೆ ಮಾಡುತ್ತಿದ್ದರು ಅದರಂತೆ ಟೆಕ್ನಿಕಲ್ ಕ್ಲಿಯರೆನ್ಸ್ ಬರಲಿ, ಬಿಡಲಿ, ಅವರು ಹೇಳುತ್ತಿದ್ದ ರೀತಿಯಲ್ಲಿ ಕಾರ್ಯತಃ ಮಾಡುತ್ತಾರೆಂದು ಭಾವಿಸೋಣವೇ?

ಶ್ರೀ ಎಚ್.ಎನ್. ನಂಜೇಗೌಡ:—ಕ್ಲಿಯರೆನ್ಸ್ ಬಂದರೂ ಹಣವನ್ನು ಕೊಡುವುದಿಲ್ಲ ಎನ್ನುವುದನ್ನು ಪದೇ ಪದೇ ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಈ ಪ್ರಾಜೆಕ್ಟನ್ನು ತೆಗೆದುಕೊಳ್ಳುವುದಕ್ಕೆ ಕ್ಲಿಯರೆನ್ಸ್ ಸಿಕ್ಕಿದೆಯೋ ಇಲ್ಲವೇ ಎನ್ನುವುದು ಮುಖ್ಯವಲ್ಲ. ಹಣದ ಸೌಲಭ್ಯವನ್ನು ಅನುಸರಿಸಿ ಪ್ರಾರಂಭ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ.

ಶ್ರೀ ಎಚ್.ಡಿ. ದೇವೇಗೌಡ:—ಟೆಕ್ನಿಕಲ್ ಕ್ಲಿಯರೆನ್ಸ್ ಬರುವುದರಿಂದ, ಪ್ಲಾನ್‌ನಲ್ಲಿ ಸೇರಿದ ಮೇಲೆ ಅದಕ್ಕೆ ಹಣ ಬಂದೇ ಬರುತ್ತದೆ, ಬರುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಸಿ.ಡಬ್ಲ್ಯೂ.ಪಿ.ಸಿ.ಯಿಂದ ಕ್ಲಿಯರೆನ್ಸ್ ಸಿಕ್ಕಿದ ಮೇಲೆ ಭಾರತ ಸರ್ಕಾರದಿಂದ ಹಣ ಕಾಸಿನ ಸಹಾಯ ಬಂದೇ ಬರುತ್ತದೆಯಲ್ಲವೇ?

ಶ್ರೀ ಎಚ್. ಎನ್. ನಂಜೇಗೌಡ—ಅವರು ಕೊಡತಕ್ಕ ಅಸಿಸ್ಟೆನ್ಸ್ ಕೆಲವಾರು ರೀತಿನೀತಿಗಳನ್ನು ಅನುಸರಿಸಿರುತ್ತದೆ. ಅವರು ಇಂತಿಷ್ಟು ಎಂದು ಕೊಡುತ್ತಾರೆ. ೧೦೦ ಯೋಜನೆಗಳನ್ನು ಕ್ಲಿಯರ್ ಮಾಡಿದ್ದರೂ ಅಷ್ಟೇ, ೧೦ ಕ್ಲಿಯರ್ ಮಾಡಿದ್ದರೂ ಅಷ್ಟೇ, ಅವರು ಕೊಡುವ ಸಹಾಯ ಅಷ್ಟೇ. ಅದನ್ನು ಪದೇ ಪದೇ ಹೇಳಿದ್ದೇವೆ.

ಶ್ರೀ ಎಚ್.ಎಸ್. ಸಿದ್ದಪ್ಪ:—(ಡಿ) ಗೆ ಉತ್ತರವಾಗಿ ಬೇಲೂರು ಮತ್ತು ಹಾಸನ ತಾಲ್ಲೂಕುಗಳಲ್ಲಿ ನೀರಾವರಿಯಾಗಬಹುದಾದ ವಿಸ್ತೀರ್ಣವನ್ನು ಕೊಟ್ಟಿದ್ದಾರೆ. ಯಗಚಿ ಯೋಜನೆಯಿಂದ ಅರಸೀಕೆರೆಗೆ ಅನುಕೂಲ ಮಾಡಿಕೊಡಬೇಕು ಎಂದು ಸುಮಾರು ವರ್ಷಗಳಿಂದ, ಸ್ವಾತಂತ್ರ್ಯ ಬರುವುದಕ್ಕೆ ಮುಂಚಿನಿಂದ ಹೋರಾಟ ಮಾಡಿದರು. ಬಹುತೇಕ ಅರಸೀಕೆರೆ ತಾಲ್ಲೂಕಿನಿಂದ ಯಾವ ಮಂತ್ರಿಗಳೂ ಇಲ್ಲವೆಂದು ಈ ದುರದೃಷ್ಟ, ಪಾಪಿ ಜನರ ಕೈ ಬಿಟ್ಟಿದ್ದಾರೆ. ಈಗಲಾದರೂ ತಾವು ಆಸಕ್ತಿ ವಹಿಸಿ ಅರಸೀಕೆರೆ ತಾಲ್ಲೂಕಿಗೆ ನೀರನ್ನು ಒದಗಿಸಿಕೊಡುತ್ತೀರಾ?

ಶ್ರೀ ಎಚ್.ಎನ್. ನಂಜೇಗೌಡ:—ನನಗೆ ನೆನಪಿರುವ ಹಾಗೆ ಬೇಲೂರು ಮತ್ತು ಹಾಸನ ತಾಲ್ಲೂಕುಗಳಿಂದಲೂ ಯಾವ ಮಂತ್ರಿಗಳೂ ಇರಲಿಲ್ಲ.

ಶ್ರೀ ಎಚ್.ಡಿ ದೇವೇಗೌಡ:—ನಮ್ಮ ಜಿಲ್ಲೆಯ ಪಾರ್ಲಿಮೆಂಟ್ ಸದಸ್ಯರು ಯಗಚಿ ಯೋಜನೆಗೆ ಕ್ಲಿಯರೆನ್ಸ್ ಕೊಡಿಸಿದ್ದೇನೆ, ೧೫–೨೦ ದಿವಸಗಳಲ್ಲಿ ಕೆಲಸ ಪ್ರಾರಂಭವಾಗುತ್ತದೆ ಎಂದು ಭಾಷಣ ಮಾಡಿರುವುದು ಇದೆ. ಶ್ರೀ ನಂಜೇಗೌಡರು ಮೇಜರ್ ಇರಿಗೇಷನ್ ಮಂತ್ರಿಗಳಾದ ಮೇಲೆ ನಮ್ಮ ಜಿಲ್ಲೆಯಲ್ಲಿ ಹೇಮಾವತಿ ಪ್ರಾಜೆಕ್ಟ್ ಕೆಲಸ ನಿಂತು ಹೋಯಿತು, ಯಗಚಿ ಯೋಜನೆ ಆಗುವುದಿಲ್ಲ ಎಂದು ಅವರ ಪಕ್ಕದವರೇ ಮಾತನಾಡುತ್ತಿದ್ದಾರೆ. ಅದು ಆಧಾರರಹಿತವಾಗಿರಬಹುದು. ಯಗಚಿ ಪ್ರಾಜೆಕ್ಟಿಗೆ ತ್ವರಿತವಾಗಿ ಕ್ಲಿಯರೆನ್ಸ್ ಬಾರದೆ ಇದ್ದರೆ, ರಾಜ್ಯದ ಸಂಪನ್ಮೂಲಗಳಿಂದ ಅದರ ಕೆಲಸವನ್ನು ತೆಗೆದುಕೊಳ್ಳುವುದಲ್ಲದೆ, ಹೇಮಾವತಿ ಕೆಲಸವನ್ನು ತ್ವರಿತಗೊಳಿಸುತ್ತಾರೆಯೋ?

ಶ್ರೀ ಎಚ್. ಎನ್. ನಂಜೇಗೌಡ:—ನಾನು ಮಂತ್ರಿಯಾದ ಮೇಲೆ ಹೇಮಾವತಿ ಕೆಲಸ ನಿಂತು ಹೋಯಿತು ಎಂದು ಹೇಳಿದರು. ಇದ್ದುದನ್ನು ಇದ್ದ ಹಾಗೆಯೇ ಮುಂದುವರಿಸಿಕೊಂಡು ಹೋಗಿದ್ದರೆ, ಇನ್ನು ಒಂದು ವರ್ಷವಾದ ಮೇಲೆ ನಂಜೇಗೌಡರು ಒಂದು ಅಧ್ವಾನವಾಯಿತು ಎಂದು ಹೇಳುತ್ತಿದ್ದರು. ಕೆಲವು ಕಡೆ ಎಕ್ಸೆಸ್ ಪೇಮೆಂಟ್ ಆಗಿದೆ. ಏನು ಅಚಾತುರ್ಯವಾಗಿದೆ, ಅಧ್ವಾನವಾಗಿದೆ, ಅದನ್ನು ಕರಾರುವಾಕ್ಕಾಗಿ ತಿಳಿದುಕೊಳ್ಳುವುದಕ್ಕೆ, ವಿಚಾರ ಮಾಡುವುದಕ್ಕೆ ಸ್ವಲ್ಪ ಸ್ಲೋ ಡೌನ್ ಆಗಿರಬಹುದು ಎಕ್ಸೆಸ್ ಪೇಮೆಂಟ್ ಆಗಿರುವುದನ್ನು ಮತ್ತು ಇತರ ಅಧ್ವಾನಗಳನ್ನು ಸರಿಪಡಿಸಿ, ಲೆಕ್ಕಾಚಾರವಾಗಿ ವ್ಯವಹಾರವನ್ನು ಮುಂದುವರಿಸಬೇಕಾಗುತ್ತದೆ. ಎಕ್ಸೆಸ್ ಪೇಮೆಂಟ್ ಆಗಿದೆ ಎನ್ನುವ ಅನುಮಾನ ಬಂದು ವಿಜಿಲೆನ್ಸ್ ಕಮಿಷನ್‌ನವರು ಎನ್‌ಕ್ವೈರಿ ಮಾಡಿರುವುದು ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಗೊತ್ತಿದೆ.

ಶ್ರೀ ಎಚ್.ಡಿ. ದೇವೇಗೌಡ —ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೂ, ಕಾರ್ಯವನ್ನು ವೇಗವಾಗಿ ನಡೆಸುವುದಕ್ಕೂ ಸಂಬಂಧವಿಲ್ಲ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇಡ ಎಂದು ದೇವೇಗೌಡ ಹೇಳಿದರು ಎನ್ನುವ ಭಾವನೆ ಬೇಡ. ಪ್ರಾಜೆಕ್ಟ್ ಕೆಲಸ ವೇಗವಾಗಿ, ತ್ವರಿತವಾಗಿ ಆಗುವ ರೀತಿಯಲ್ಲಿ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆಯೋ?

ಅಧ್ಯಕ್ಷರು:—ಇದು ತರ್ಕದ ವೇಳೆಯಲ್ಲ, ಪ್ರಶ್ನೋತ್ತರದ ವೇಳೆ ಎನ್ನುವುದನ್ನು ಮಾನ್ಯ ಸದಸ್ಯರೂ ಮತ್ತು ಮಾನ್ಯ ಮಂತ್ರಿಗಳೂ ತಿಳಿದುಕೊಳ್ಳಬೇಕು.

ಶ್ರೀ ಎಚ್.ಎನ್. ನಂಜೇಗೌಡ:— ಮಾನ್ಯ ಅಧ್ಯಕ್ಷರೇ, ಪ್ರಾಸಂಗಿಕವಾಗಿ ಹೇಮಾವತಿ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಯಾವ ಏಜನ್ಸಿಗೆ ಕೆಲಸವನ್ನು ಕೊಟ್ಟಿದ್ದರೋ, ಅವರಿಗೆ ಗೊತ್ತು ಮಾಡಿದ್ದ ಕೆಲಸವನ್ನು ಮುಗಿಸಿದ್ದು ಉಳಿದ ಕೆಲಸವನ್ನು ಕೊಡಬೇಕಾಗಿತ್ತು. ಈ ಮಧ್ಯೆ ಹಿಂದಿನ ಸರ್ಕಾರದವರು ಮೇಸನ್ರಿ ಕೆಲಸ ಜೊತೆಯಲ್ಲಿ ಫೇಸಿಂಗ್ ಸ್ಟೋನ್ಸ್ ಕೆಲಸ ಮಾಡುವುದನ್ನು ಬಿಟ್ಟು ಬಿಟ್ಟಿದ್ದರು. ಎರಡೂ ಜೊತೆ ಜೊತೆಯಲ್ಲಿ ಹೋಗಬೇಕಾಗುತ್ತದೆ. ಬಹಳ ಇಕ್ಕಟ್ಟಿನ ಪರಿಸ್ಥಿತಿ ಇದ್ದು, ಯಾರೇ ಮುಂದೆ ಬಂದರೂ ಸಿಕ್ಕಿಹಾಕಿಕೊಳ್ಳುವ ರೀತಿ ಕಂಟ್ರಾಕ್ಟರುಗಳು ಸರ್ಕಾರದ ಮೇಲೆ ಹಿಡಿತವನ್ನು ಇಟ್ಟುಕೊಳ್ಳುವ ರೀತಿಯಲ್ಲಿ ಟೆಂಡರುಗಳನ್ನು ತೀರ್ಮಾನ ಮಾಡಿದ ಪರಿಸ್ಥಿತಿ ಇತ್ತು. ಕಂಟ್ರೋಲ್ ಬೋರ್ಡಿನ ಮೀಟಿಂಗು ಗಳನ್ನು ಆತುರಾತುರವಾಗಿ ಮಾಡತಕ್ಕ ದಿಸೆಯಲ್ಲಿ ಕ್ರಮ ಕೈಕೊಂಡಿದ್ದೇವೆ. ಎಲ್ಲ ತೀರ್ಮಾನವಾದ ಮೇಲೆ, ಹೊಸದಾಗಿ ಟೆಂಡರುಗಳನ್ನು ಕರೆದು, ವರ್ಕ್ ಎನ್‌ಟ್ರಸ್ಟ್ ಮಾಡಿ, ಕೆಲಸ ಪ್ರಾರಂಭ ಮಾಡಬೇಕಾಗುತ್ತದೆ.

DEFECT IN DRINKING WATER

888 SRI K.H. KURADAGI (Mundargi):—Will the Minister for Health be pleased to state.—

(*a*) Whether it has come to the notice of the Government that due to defect in drinking water the people of Mundargi taluk are suffering from dental defects, rheumatism and various other diseases;

(*b*) if so, whether the Government have investigated as these diseases are due to defect in underground water?

SRI H SIDDAVEERAPPA—Minister for Health:

(*a*) Yes.

(*b*) Yes.

ಶ್ರೀ ಕೆ ಎಚ್. ಕುರಡಗಿ;—ಈ ಬೇನೆ ಎಷ್ಟು ಜನರಿಗೆ ತಗುಲಿದೆ ಎಂದು ಹೇಳುತ್ತಾರೆಯೇ?

†ಶ್ರೀ ಎಚ್. ಸಿದ್ದವೀರಪ್ಪ:—ಜೂನ್ ತಿಂಗಳಿನಲ್ಲಿ ೩೦ ಜನರಿಗೆ, ಜುಲೈ ತಿಂಗಳಿನಲ್ಲಿ ೪೦ ಜನರಿಗೆ ಹಲ್ಲು ನೋವು ಬಂದಿದೆ. ಕೈಕಾಲು ಸಂದು ನೋವು ಜೂನ್ ತಿಂಗಳಿನಲ್ಲಿ ೫೭ ಜನರಿಗೆ, ಜುಲೈ ತಿಂಗಳಿನಲ್ಲಿ ೨೦ ಜನರಿಗೆ ಬಂದಿದೆ. ದೊಂಬಾಳ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮೇ ತಿಂಗಳಲ್ಲಿ ೩೨ ಜನರಿಗೆ, ಜೂನ್ ತಿಂಗಳಿನಲ್ಲಿ ೨೦ ಜನರಿಗೆ ಮತ್ತು ಜುಲೈ ತಿಂಗಳಿನಲ್ಲಿ ೨೭ ಜನರಿಗೆ ಹಲ್ಲು ನೋವು ಬಂದಿದೆ. ಕೈ ಕಾಲು ಸಂದು ನೋವು ಮೇ ತಿಂಗಳಿನಲ್ಲಿ ೬೧ ಜನರಿಗೆ, ಜೂನ್ ತಿಂಗಳಿನಲ್ಲಿ ೭೮ ಜನರಿಗೆ ಮತ್ತು ಜುಲೈ ತಿಂಗಳಿನಲ್ಲಿ ೭೧ ಜನರಿಗೆ ಬಂದಿದೆ.

ಶ್ರೀ ಕೆ.ಎಚ್. ಕುರಡಗಿ:— ಈ ರೋಗದ ನಿವಾರಣೆ ಸಲುವಾಗಿ ಸರ್ಕಾರದವರು ಮುಂದೆ ಯಾವ ಕ್ರಮ ತೆಗೆದುಕೊಳ್ಳುತ್ತಾರೆ?

ಶ್ರೀ ಎಚ್. ಸಿದ್ದವೀರಪ್ಪ:— ಏತಕ್ಕೋಸ್ಕರ ಹೀಗಾಯಿತು ಎನ್ನುವುದನ್ನು ತಿಳಿಯಲು ಧಾರವಾಡದ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ವಿಭಾಗಕ್ಕೆ ತಪಾಸಣೆಗೆ ಕಳುಹಿಸಿ ಕೊಟ್ಟಿದ್ದೇವೆ. ಮತ್ತು ಈ ಬೇನೆ ಬರುವವರು ತಕ್ಷಣ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ತೆಗೆದುಕೊಳ್ಳಿರಿ ಎಂದು ಹೇಳಿದ್ದೇವೆ. ಈ ನೀರು ಕುಡಿಯುವುದರಿಂದ ಹಲ್ಲು ನೋವು ಇವೆಲ್ಲ ಏಕೆ ಬರುತ್ತವೆನ್ನುವುದನ್ನು ವೈಜ್ಞಾನಿಕವಾಗಿ ತಪಾಸಣೆ ಮಾಡು ವುದಕ್ಕೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಎಂ.ಎಚ್. ಜಯ ಪ್ರಕಾಶನಾರಾಯಣ್.—ಈ ಬೇನೆ ಭೂಗರ್ಭದ ನೀರಿನಿಂದ ಬರುತ್ತದೆ ಎನ್ನುವುದನ್ನು ಭೂಗರ್ಭ ತಜ್ಞರು ಬರೆದಿದ್ದಾರೆಯೇ ಅಥವಾ ವೈಜ್ಞಾನಿಕವಾಗಿ ಅನಲೈಸ್ ಮಾಡಿದ್ದೀರಾ? ಬೇನೆ ಅದರಿಂದಲೇ ಬಂತು ಎನ್ನುವ ರೀತಿಯಲ್ಲಿ ಉತ್ತರವಿದೆ. ಹಾಗಾದರೆ ನೀರಿನಲ್ಲಿರತಕ್ಕ ಆಮ್ಲಜನಕ ಮತ್ತು ಜಲಜನಕದ ಜೊತೆಗೆ ಯಾವ ರಾಸಾಯನಿಕ ಶಕ್ತಿಯಿಂದ ಈ ಬೇನೆ ಬರುವುದಕ್ಕೆ ಅವಕಾಶವಾಯಿತು ಎಂದು ತಜ್ಞರ ವರದಿಯನ್ನು ಸೂಕ್ಷ್ಮವಾಗಿ ಹೇಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ವೆರಿಫಿಕೇಷನ್ನಿಗೆ ಕಳುಹಿಸಿದ್ದೇವೆ.

ಶ್ರೀ ಎಂ.ಎಚ್. ಜಯಪ್ರಕಾಶ ನಾರಾಯಣ್.—ಹೌದು ಎಂದು ಹೇಳಿದ ಮೇಲೆ, ನಿಮ್ಮ ಹತ್ತಿರ ರಿಪೋರ್ಟ್ ಇರಲೇ ಬೇಕಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ಸ್ವಲ್ಪ ಕಲ್ಲು ನೋವು ಬರುವ ಹಾಗೆ ಮಾಡಬೇಡಿ. ನಮ್ಮ ಡಾಕ್ಟರುಗಳ ಹತ್ತಿರ ಚಿಕಿತ್ಸೆಗೆ ಹೋದಾಗ ಇದು ವಾಟರ್ ಬೋರನ್ ಡಿಸೀಸ್ ಎಂದು ಹೇಳಿದರು. ಆದ್ದರಿಂದ ಇದು ವಾಟರ್‌ಬೋರನ್ ಡಿಸೀಸ್ ಹೌದೇ ಅಲ್ಲವೇ ಎಂದು ಪರೀಕ್ಷೆ ಮಾಡಲು ತಜ್ಞರಿಗೆ ಕಳಿಸಿಕೊಟ್ಟಿದ್ದೇವೆ. ನೋವು ಬರತಕ್ಕ ಕ್ರಿಮಿಕೀಟಗಳು ಇವೆಯೇ ಎಂದು ವಿಚಾರ ಮಾಡಲಿಕ್ಕೆ ಕಳುಹಿಸಿದ್ದೇವೆ. ತಜ್ಞರ ರಿಪೋರ್ಟು ಏನು ಇಲ್ಲ. ಆಸ್ಪತ್ರೆಗೆ ಹೋದಾಗ ಇನ್‌ವೆಸ್ಟಿಗೇಷನ್ ಮಾಡುತ್ತಾರೆ. ಯಾರಿಗಾದರೂ ಜ್ವರ ಬಂದರೆ, ಅಥವಾ ಕಾಯಿಲೆ ಬಂದರೆ, ನರ ಹಿಡಿದು ಇಂಥಾದ್ದು ಆಗಿರಬಹುದು ಎಂದು ಹೇಳುತ್ತಾರೆ. ಹೌದೋ ಅಲ್ಲವೋ ಎನ್ನುವುದಕ್ಕೆ ಫರ್ದರ್ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಕಳುಹಿಸಿಕೊಡುತ್ತಾರೆ.

TANIGEBYLE SINTERING PLANT OF M.I.S.L.

985. SRI S. M. SHEERANALY CHANDRASEKHAR .— Hosanagar) .—Will the Minister for Industries be pleased to state :—

whether it is a fact that the Tanigebyle Sintering Plant belonging to the Mysore Iron and Steel Ltd., Bhadravathi is to be closed even though it is fetching plenty of Iron Ore ?

SRI S. M. KRISHNA .—(Minister for Industries) .—No.

ಶ್ರೀ ಎಸ್. ಎಂ. ಶ್ರೀರನಾಳಿ ಚಂದ್ರಶೇಖರ್.—ಭದ್ರಾವತಿಯಲ್ಲಿರುವ ಮೈಸೂರು ಕಬ್ಬಿಣ ಉಕ್ಕಿನ ಕಾರ್ಖಾನೆ (ಲಿಮಿ)ಯವರಿಗೆ ಸೇರಿದ ತಣಿಗೇ ಬೈಲ್ ಸಿಂಟರಿಂಗ್ ಯಂತ್ರದಿಂದ ಸಾಕಷ್ಟು ಕಬ್ಬಿಣದ ಅದುರು ಉತ್ಪಾದನೆ ಯಾಗುತ್ತಿದ್ದಾಗ್ಯೂ ಅದನ್ನು ನಿಲ್ಲಿಸಬೇಕಾಗಿರುವುದು ನಿಜವೇ ಎನ್ನುವುದಕ್ಕೆ ನಿಜವಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಈ ಅಭಿಪ್ರಾಯ ಬೆಂಗಳೂರು ಮಟ್ಟದಲ್ಲಿ ಬಂದಿರುವುದೋ ಅಥವಾ ವರದಿ ಬಂದಿರುವುದೋ ಗೊತ್ತಿಲ್ಲ. ಅಲ್ಲಿ ಕೆಲಸ ಮಾಡತಕ್ಕ ಸಾವಿರಾರು ಜನ ಕೆಲಸಗಾರರಿಗೆ ಅಧಿಕಾರಿಗಳು ಈ ಇಂಡಸ್ಟ್ರಿಯನ್ನು ನಿಲ್ಲಿಸುತ್ತೇವೆ ಎಂದು ಪದೇ ಪದೇ ಹೇಳುತ್ತಿದ್ದಾರೆ. ಒಂದು ಪ್ಯಾನಿಕ್ ಕ್ರಿಯೇಟ್ ಆಗಿದೆ. ತಾವು ಈ ಸಿಂಟರಿಂಗ್ ಪ್ಲಾಂಟನ್ನು ನಿಲ್ಲಿಸುವುದಿಲ್ಲ ಎಂದು ಜಿ.ಓ. ಹೊರಡಿಸುತ್ತೀರಾ?

† ಶ್ರೀ ಎಸ್. ಎಂ. ಕೃಷ್ಣ.—ತಣಿಗೆ ಬೈಲ್ ಸಿಂಟರಿಂಗ್ ಪ್ಲಾಂಟ್‌ನಲ್ಲಿ ಸಿಂಟರಿಂಗ್ ಮಾಡುತ್ತಾ ಇದ್ದಂಥ ಅದುರಿನ ಕಾಸ್ಟ್ ಬಹಳ ಹೆಚ್ಚಾಗಿ ಪರಿಣಮಿಸಿದ್ದುದರಿಂದ ಆ ಸಿಂಟರಿಂಗ್ ಪ್ಲಾಂಟನ್ನು ಇಟ್ಟುಕೊಳ್ಳಬೇಕೆ, ಬೇಡವೇ, ಎನ್ನುವ ವಿಚಾರವನ್ನು ತೀರ್ಮಾನ ಮಾಡುವುದಕ್ಕೆ ಭದ್ರಾವತಿ ಉಕ್ಕಿನಕಾರ್ಖಾನೆಯ ಬೋರ್ಡ್ ಆಫ್ ಡೈರೆಕ್ಟರ್ಸ್ ಅವರು ಒಂದು ಸಬ್ ಕಮಿಟಿ ಮಾಡಿದ್ದಾರೆ. ಈ ಸಬ್ ಕಮಿಟಿಯವರು ಸಿಂಟರಿಂಗ್ ಪ್ಲಾಂಟ್‌ನ ಎಕನಾಮಿ ಬಗ್ಗೆ ಕೂಲಂಕುಷವಾಗಿ ತನಿಖೆ ಮಾಡಿ, ಅನಂತರ ಅವರು ತಮ್ಮ ವರದಿ ಕೊಟ್ಟ ಮೇಲೆ ಈ ಸಿಂಟರಿಂಗ್ ಪ್ಲಾಂಟನ್ನು ಶಾಶ್ವತವಾಗಿ ಮುಚ್ಚಬೇಕೇ ಅಥವಾ ಪುನರ್ ಪ್ರಾರಂಭಿಸಬೇಕೇ ಎನ್ನತಕ್ಕಥಾದ್ದನ್ನು ತೀರ್ಮಾನ ಮಾಡುತ್ತೇವೆ.

ಶ್ರೀ ಎಂ. ಶ್ರೀರನಾಳಿ ಚಂದ್ರಶೇಖರ್.—ತಾವು ಈ ಸಿಂಟರಿಂಗ್ ಪ್ಲಾಂಟ ಅನ್ನು ಶಾಶ್ವತವಾಗಿ ನಿಲ್ಲಿಸುವುದಿಲ್ಲ ಎಂದು ಈ ಮುಖಾಂತರ ಭರವಸೆ ಕೊಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.—ಇದನ್ನು ನಿಲ್ಲಿಸುವುದು, ತೆಗೆಯುವುದು ಒಂದು ಸಬ್ ಕಮಿಟಿಯನ್ನು ಏನು ನೇಮಿಸಿದ್ದೇನೆ, ಅದರ ತಜ್ಞರ ವರದಿ ಆಧಾರದ ಮೇಲೆ ಕಂಪನಿಯು ಒಂದು ನಿರ್ಧಾರಕ್ಕೆ ಬರ ಬೇಕಾಗುತ್ತದೆ.

ಶ್ರೀ ಎಸ್. ಎಂ. ಶ್ರೀರಾನಾಳಿ ಚಂದ್ರಶೇಖರ್.—ಒಂದು ವೇಳೆ ಅವರು ನಿಲ್ಲಿಸಬೇಕು ಎಂದು ಅಭಿಪ್ರಾಯ ಕೊಟ್ಟರೆ, ಅಲ್ಲಿ ಕೆಲಸ ಮಾಡುವ ಸಾವಿರಾರು ಜನರಿಗೆ ಬೇರೆ ಸೌಕರ್ಯ ಕಲ್ಪಿಸಿಕೊಡುವುದಕ್ಕೆ ತಾವು ತಯಾರಿದ್ದೀರಾ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ, ಅಲ್ಲಿಯ ಕೆಲಸಗಾರರು ಡಿಸ್‌ಪ್ಲೇಸ್ ಆಗದ ಹಾಗೆ ಕಂಪನಿಯವರು ನೋಡಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ತಣಿಗೆ ಬೈಲ್ ಸಿಂಟರಿಂಗ್ ಯಂತ್ರದಿಂದ ಸಾಕಷ್ಟು ಕಬ್ಬಿಣದ ಅದುರು ಉತ್ಪತ್ತಿ ಆಗುತ್ತಿದ್ದಾಗ್ಯೂ ಇದನ್ನು ನಿಲ್ಲಿಸುವ ಸಂದರ್ಭ ಬರಬಹುದು ಎಂದು ಹೇಳಿದ್ದೀರಿ. ಟಾಟಾ ಐರನ್ ಅಂಡ್ ಸ್ಟೀಲ್ ವರ್ಕ್ಸ್ ಉತ್ಪಾದನೆಗೆ ಮತ್ತು ಅದರ ಮಾರ್ಕೆಟ್ಟಿಗೆ ತೊಂದರೆಯಾಗುತ್ತದೆ. ಎಂದು ಹೇಳಿ ಇದನ್ನು ನಿಲ್ಲಿಸುವುದಕ್ಕೆ ಶಿಫಾರಸ್ ಮಾಡುವ ಪ್ರಯತ್ನ ನಡೆದಿದೆ ಎಂದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಇದು ಶಂದ್ಧಾಂಗ ಸತ್ಯಕ್ಕೆ ದೂರವಾಗಿರತಕ್ಕ ಅಪಾದನೆ. ತಾತಾ ಕಂಪನಿಯವರು ಏನು ಮಾಡುತ್ತಾರೆ, ಭದ್ರಾವತಿ ಕಂಪನಿಯವರು ಏನು ಮಾಡುತ್ತಾರೆ ಎಂದು ಒಂದ ಕ್ಕೊಂದಕ್ಕೆ ಸಂಬಂಧ ಕಲ್ಪಿಸುವುದು ಸರಿಯಲ್ಲ. ನಮ್ಮಲ್ಲಿ, ಭದ್ರಾವತಿ ಕಾರ್ಖಾನೆಯಲ್ಲಿ ಇರತಕ್ಕಂಥ ಎರಡು ಪಿಗ್ ಐರನ್ ಫರ್ನೇಸ್‌ನಲ್ಲಿ, ಒಂದನ್ನು ರೀ ಲೈನಿಂಗ್ ಗೋಸ್ಕರ ನವಂಬರ್ ೧೯೭೧ರಲ್ಲಿ ಕ್ಲೋಸ್ ಮಾಡಲಾಗಿದೆ. ಇನ್ನೊಂದು ಪಿಗ್ ಐರನ್ ಫರ್ನೇಸ್, ಸಿಂಟರಿಂಗ್ ಮಾಡತಕ್ಕಂಥಾದ್ದು ಅನ್‌ಎಕನಾಮಿ ಕಲ್ ಎಂದು ಕೆಲಸ ತಿಳಿದಿರತಕ್ಕಂಥವರು ಅಭಿಪ್ರಾಯ ಕೊಟ್ಟಿದ್ದರಿಂದ ಈ ಪರಿಸ್ಥಿತಿ ಉದ್ಭವವಾಗಿದೆ. ಅದಕ್ಕೆ ಮಿಗಿಲಾಗಿ ಇನ್ನು ಯಾವ ಅರ್ಥವನ್ನೂ ಕಲ್ಪಿಸಬೇಕಾಗಿಲ್ಲ

ELECTRIFICATION OF VILLAGES IN SIRUGUPPA TALUK

911. SRI B. E. RAMAIAH.—(Siruguppa).—Will the Minister for Public Works and Electricity be pleased to state :—

(a) the names of the villages in Siruguppa taluk where there is no supply of electricity :

(b) out of these villages, the names of the villages in respect of which estimates for supply of electricity have been prepared ;

(c) of these estimates, the number of estimates sanctioned :

(d) out of these villages, the names of the villages where the work relating to the supply of electricity has been started ?

SRI H. M. CHANNABASAPPA.—(Minister for Public Works).—

(a) 58 as indicated in the list appended.

(b) Estimates in respect of the following 9 villages have been prepared :

1. Bandrahal
2. Siddrampura
3. Balkundi
4. Mudenur
5. Myalapur
6. Ibrahimpura
7. Kotchal Suguru
8. Byrapura
9. Udegolum

(Sri H. M. Channabasappa).

(c) Estimates in respect of the following six villages have been sanctioned :

1. Siddrampura
2. Mudanur
3. Ibrahimpura
4. Kotechal Suguru
5. Byrapura
6. Udegolum

(d) Works has been taken up in respect of the following three villages :

1. Ibrahimpura
2. Kotchal Suguru
3. Byrapura

ಶ್ರೀ ಬಿ. ಇ. ರಾಮಯ್ಯ —ಮಾನ್ಯ ಮಂತ್ರಿಗಳು ೫೮ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿಲ್ಲ ಎಂದು ಹೇಳಿದ್ದಾರೆ. ಬರೀ ೨೬ ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ಈ ೫೮ ಹಳ್ಳಿಗಳಿಗೆ ವಿದುಚ್ಛಕ್ತಿಯನ್ನು ಒದಗಿಸಲು ಇನ್ನು ಎಷ್ಟು ವರ್ಷಗಳು ಬೇಕು ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಎಷ್ಟು ಬೇಗ ಆಯಾ ಪಂಚಾಯತಿಯವರು ಅವರು ಕೈಗೊಳ್ಳಬೇಕಾದಂಥ ಕಾರ್ಯಕ್ರಮವನ್ನು ಸಮರ್ಪಕವಾಗಿ ಕೈಗೊಂಡು ಅಂದಾಜುಗಳ ಮೇಲೆ ವಿಧಿತವಾದ ಉತ್ಪತ್ತಿ ಸರ್ಕಾರಕ್ಕೆ ಬರುತ್ತದೋ ಅಷ್ಟಷ್ಟು ಬೇಗ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಇ. ರಾಮಯ್ಯ .—೧೦—೧೫ ಪಂಚಾಯತಿಯವರು ಸರ್ಕಾರಕ್ಕೆ ಅರ್ಜಿಯನ್ನು ಬರೆದುಕೊಂಡು ಎಲೆಕ್ಟ್ರಿಸಿಟಿಯನ್ನು ಸಪ್ಲೈ ಮಾಡಿ ಎಂದು ಹೇಳಿದರೂ ಕೂಡ ತಾವು ತಿಳಿಸಿದ ಪಟ್ಟಿಯಲ್ಲಿ ಆ ಹಳ್ಳಿಗಳ ಹೆಸರು ಇಲ್ಲ. ಅದಕ್ಕೆ ಏನು ಕಾರಣ ?

† ಶ್ರೀ ಎಚ್. ಎಂ. ಚನ್ನಬಸಪ್ಪ .—ಅವರು ಅರ್ಜಿ ಕೊಟ್ಟಾಕ್ಷಣ ಅವುಗಳನ್ನು ತೆಗೆದುಕೊಳ್ಳಬೇಕು ಎನ್ನುವ ಪ್ರಶ್ನೆಯಿಲ್ಲ. ಅವರು ಅರ್ಜಿಯನ್ನು ಕೊಡುವುದರ ಜೊತೆಗೆ, ಪಂಚಾಯತಿಯವರು ಲೋಡ್ ಸರ್ವೆ ಫಾರ್ಮ್‌ಗಳನ್ನು ಫಿಲ್‌ಅಪ್ ಮಾಡಿ ಅವರು ಕೈಗೊಳ್ಳಬೇಕಾದಂಥ ಕಾರ್ಯಗಳನ್ನು ಸಮರ್ಪಕವಾಗಿ ಕೈಗೊಂಡು ಅಂದಾಜು ಮಾಡಿದ ಮೇಲೆ, ಆ ಅಂದಾಜಿಗೆ ಏಳುವರೆ ಅಥವಾ ಐದು ಪರ್ಸೆಂಟ್ ಆಯಾ ಸ್ಥಳಕ್ಕೆ ಅನ್ವಯಿಸುವಂತೆ ಉತ್ಪತ್ತಿ ಬಂದರೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ.

ಶ್ರೀ ಬಿ ಇ. ರಾಮಯ್ಯ.—ದೂರ ಇರತಕ್ಕ ಹಳ್ಳಿಗಳನ್ನು ತೆಗೆದುಕೊಳ್ಳಬಾರದು ಎಂದು ಸರ್ಕಾರದ ಅಭಿಪ್ರಾಯವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಅಲ್ಲಿ ಏಳೂವರೆ ಪರ್ಸೆಂಟ್ ಉತ್ಪತ್ತಿ ಬಾರದೆ ಹೋದ ಪಕ್ಷದಲ್ಲಿ ಎಲೆಕ್ಟ್ರಿಫಿಕೇಷನ್ ಮಾಡುವುದಕ್ಕೆ ಸಾಧ್ಯವಿಲ್ಲ.

HEALTH UNITS ESTABLISHED IN KALGI CONSTITUENCY

898. Sri Prabhakar Telkar (Kalgi) .—Will the Minister for Health be pleased to state :—

(a) the No. of Health Units established in Kalagi Constituency together with the names of places ;

(b) whether any representation has been received from a member of this House for establishing a Health Unit at Dandoti Village, Taluk Chitapur, District Gulbarga ;

(c) if so, the action taken in the matter ;

(d whether Government is aware that the population of the Village Dandoti, Taluk Chitapur is more than 5,000 and that no medical facilities exist in the said village ?

SRI H. SIDDAVEERAPPA (Minister for Health):—

(a) Two. At the following places :

(1) Nalwar and

(2) Aranakal

(b) Yes.

(c) The Taluk Development Board, Chitapur, has been requested to communicate its willingness to start and maintain a Health Unit Type Dispensary at Dondoti and grant-in-aid basis. Receipt of its resolution is awaited.

(d) The population of the village Dandoti is 4,046 as per 1961 Census and there are no allopathic medical facilities in the Village.

SRI PRABHAKAR TELKAR.—I submit that Nalwar is not in Kalagi Constituency but in Chitapur Constituency. All along the request is that in the whole constituency there is only one health unit. Will the Government take action to increase the Health Units in Kalagi Constituency as soon as possible ?

†SRI H. SIDDAVEERAPPA .—The mistake pointed out by the hon. member will be rectified in the list. I quite agree the policy of the Government is that for every population of 15,000 there must be one health unit. Not only that; we have gone ahead and said there must be one hospital of whatever type for atleast a population of 2000. I concede that in the area of the hon. member the numbers is less and I shall see that some more health units are taken up provided the response is there from the local bodies and other public bodies.

SRI PRABHAKAR TELKAR .—With reference to answer to (c) May I submit that the Taluk Development Board there is not working properly and already there is a misappropriation of Rs. 1 lakh. Therefore, I do not think the Taluk Develoment Board will come to the help of the people to pass such resolutions to establish Health Units. Will the Government take steps on its own in Dondoti where the population is 2,000 and establish health units ? In the whole of Kalagi Co stituency there is no place where the population is 15000. Therefore, may I request the Govenment to start as many health units as possible in the areas where the population is 5,000 or 4,000 ?

SRI H. SIDDAVEERAPPA :—Sir, in the matter of starting these new health units there is a Government order and I have to proceed according to that. Recently the Government has said the local bodies which were giving recurring expenditure quota need not give it. But there are other matters such as providing sites, buildings and other things for which we have to proceed according to the Government order. The Government can meet the recurring cost on the maintenance of these hospitals and by this alone we have to spend a crore more by taking over the burden of the local bodies.

UPGRADING OF HOSPITAL AT SRIRANGAPATNA TOWN

902.—SMT. DAMAYANTHI BOREGOWDA (Srirangapatna) —

Will the Minister for Health be pleased to state ;—

(*a*) whether there is a proposal before Government to upgrade the Hosp tal at Srirangapatna Town: if so, when:

(*b*) whether it has come to the notice of Government that water facilities are inadequate in that Hospital :

(*c*) if so, the steps taken to improve the same ?

SRI H. SIDDAVEERAPPA (MINISTER FOR HEALTH)—

(*a*) No.

(*b*) No.

(*c*) Does not arise.

ಶ್ರೀಮತಿ ದಮಯಂತಿ ಬೋರೇಗೌಡ :—ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ ಗಳನ್ನು ತೆಗೆದಿದ್ದೀರಿ ನಿಜ. ಆದರಿಂದ ಹಳ್ಳಿಗಾಡಿನ ಜನರಿಗೆ ಉಪಯೋಗವಾಗುತ್ತದೆ. ಆದರೆ ತಾಲ್ಲೋಕು ಕೇಂದ್ರಗಳಲ್ಲಿ ಆಸ್ಪತ್ರೆಗಳನ್ನು ಅಪ್‌ಗ್ರೇಡ್ ಮಾಡದೆ ಇರುವುದರಿಂದ ಶ್ರೀ ರಂಗ ಪಟ್ಟಣ ಕೇಂದ್ರದಲ್ಲಿ ಇರತಕ್ಕ ಹಾಸ್ಪಿಟಲ್ ಚಿಕ್ಕದು ಆಗಿದೆ. ಅದನ್ನು ಅಪ್‌ಗ್ರೇಡ್ ಮಾಡಿದರೆ ಹೆಚ್ಚು ಜನರಿಗೆ ಉಪಯೋಗ ವಾಗುತ್ತದೆ. ಆದ್ದರಿಂದ ಅದನ್ನು ಮಾಡುತ್ತೀರಾ ?

SRI H. SIDDAVEERAPPA :—I don 't think the municipality has come forward to help the Government to upgrade this hospital. As I have already said the local bodies have also their shere of responsibility in getting the hospitals upgraded. As soon as the response comes from the Municipality I will see that it is included in the programme.

ಶ್ರೀಮತಿ ದಮಯಂತಿ ಬೋರೇಗೌಡ : —ಅಲ್ಲಿಯ ಮುನಿಸಿಪಾಲಿಟಿಯವರು ಕಾಂಟ್ರಿಬ್ಯೂಷನ್ ಕೊಡುವ ಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಜನ ಸಫರ್ ಆಗುವುದಕ್ಕೆ ಏತಕ್ಕೆ ಬಿಡಬೇಕು ?

ಶ್ರೀ ಎಚ್. ಸಿದ್ದವೀರಪ್ಪ : —ಶ್ರೀರಂಗಪಟ್ಟಣದಲ್ಲಿ ನಮ್ಮ ದೇಶದಲ್ಲಿ ಬಾಕಿ ಊರಿನಲ್ಲಿರುವ ಜನರಿಗಿಂತ ಅನಾಕೂಲಸ್ಥರು ಇದ್ದಾರೆ ಅವರಿಗೆ ಬತ್ತ ಬೆಳೆಯುವುದಕ್ಕೆ ಬೇಕಾದಷ್ಟು ಗದ್ದೆ ಇದೆ, ಜೊತೆಗೆ ನೀವು ಮುಂದೆ ಬಂದರೆ ಒಂದಲ್ಲ ಎರಡು ಆಸ್ಪತ್ರೆ ಕೊಡಬಹುದು.

ಶ್ರೀಮತಿ ದಮಯಂತಿ ಬೋರೇಗೌಡ :—ಇಲ್ಲಿ ನೀರಿನ ಅನುಕೂಲ ಇಲ್ಲದೆ ಇರುವುದು ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ. ಗಮನಕ್ಕೆ ಈಗಲಾದರೂ ತರುತಿದ್ದೇನೆ. ನಮಗೆ ಕಷ್ಟ ಇದೆಯೆಂದು ಗೌರ್ನಮೆಂಟ್‌ಗೆ ಬೇರೆ ಹೇಳಿದ್ದೇನೆ. ಅಲ್ಲಿ ನೀರಿನ ಅನುಕೂಲ ಇಲ್ಲದೆ ಇರುವುದರಿಂದ ಪೇಷೆಂಟ್ಸ್ ಮತ್ತು ಸ್ಟಾಫ್‌ಗೆ ತೊಂದರೆಯಾಗಿದೆ. ಇಲ್ಲಿಯುವರೆಗೆ ತಮ್ಮ ಗಮನಕ್ಕೆ ಬರದೆ ಹೋದರೆ ಈಗಲಾದರೂ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಅಲ್ಲಿರತಕ್ಕ ಬಾವಿಗೆ ಆದರೂ ಪಂಪ್‌ಸೆಟ್‌ಹಾಕಿಸಿ ನೀರಿನ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ :—ನೀರಿನ ಅನುಕೂಲ ಮಾಡಿಕೊಡಲಿಕ್ಕೆ ಆರ್ಡರ್ ಕೊಡುತ್ತೇನೆ.

ADULTERATED CHEMICAL FERTILISERS

834—SRI. S. BANGARAPPA (Sorab).—

Will the Minister for Agriculture and Forests be pleased to state:-

(*a*) whether it has come to the notice of the Government that there has been heavy adulteration in chemical manure made available to the farmers in the State .

(*b*) if so, the reasons for the same :

(*c*) the action the Government has taken against the persons responsible for the same ?

SRI K. H. PATIL (MINISTER FOR AGRICULTURE AND FORESTS)—

(*a*) Some cases of adulteration of fertilisers have been reported.

(*b*) In view of shortage of Nitrogenous fertilisers such as Ammonium Sulphate and Urea, there is a tendency on the part of some traders to adulterate fertilisers for profiteering.

(*c*) The Fertiliser Inspectors have taken action against the persons responsible for adulteration under the provisions for the Fertiliser Control Order, 1957.

ಶ್ರೀ ಎಸ್. ಬಂಗಾರಪ್ಪ :— ಸ್ವಾಮಿ ಗೊಬ್ಬರದಲ್ಲಿ ಕಲಬೇರಕೆ ಆಗುವುದಕ್ಕೆ ವ್ಯಾಪರಸ್ಥರು ಕಾರಣ ಎಂದು ಉತ್ತರ ಕೊಟ್ಟಿದ್ದಾರೆ. ಪ್ರೈವೇಟ್ ಇಂಡಿವಿಜುಯಲ್ಸಿಗೆ ಕೊಟ್ಟರೆ ಈರೀತಿಯಾಗುತ್ತದೆ. ಈ ದೃಷ್ಟಿಯಿಂದ ಸೊಸೈಟಿಗಳ ಮೂಲಕ ಗೊಬ್ಬರ ವಿತರಣೆ ಮಾಡುವುದಕ್ಕೆ ಪ್ರಯತ್ನಪಟ್ಟರೆ ಇದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲವೆ ?

ಶ್ರೀ ಕೆ. ಎಚ್. ಪಾಟೀಲ್ :— ಮಾನ್ಯ ಸದಸ್ಯರು ಹೇಳಿದಂತೆ ನಾನು ಈಗಾಗಲೇ ಪೂಲ್ ಆಫ್ ಫರ್ಟಿಲೈಸರ್. ನಿಂದ ವಿತರಣೆ ಆಗುವ ಗೊಬ್ಬರವನ್ನು ಆಗ್ರೋ ಸರ್ವೀಸ್ ಮುಖಾಂತರ ಮತ್ತು ಕೋಆಪರೇಟಿವ್ ಸೊಸೈಟಿ ಮುಖಾಂತರ ಮಾಡಬೇಕು, ಒಬ್ಬ ವ್ಯಕ್ತಿಗೆ ಸಹ ಕೊಡಬಾರದು ಎಂದು ಸ್ಟ್ರಿಕ್ಟ್ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇನೆ, ಆ ಪ್ರಕಾರ ನಡೆದುಕೊಂಡು ಬಂದಿದೆ. ಪೂಲ್ ಹೊರಗೆ ಇರತಕ್ಕ ಗೊಬ್ಬರ ಖರೀದಿ ಮಾಡಲಿಕ್ಕೆ ಅವರು ಸ್ವತಂತ್ರರಿದ್ದಾರೆ, ಕಾಯಿದೆಯಿಂದ ನಿಯಂತ್ರಣ ಮಾಡುವುದಕ್ಕೆ ಬರುವುದಿಲ್ಲ. ಯಾರಾದರೂ ಹೆಚ್ಚು ರೇಟಿನಲ್ಲಿ ಮಾರಿದರೆ ಅಥವಾ ಕಲಬೆರಕೆ ಮಾಡಿದರೆ ಅದಕ್ಕೆ ಕ್ರಮ ತೆಗೆದುಕೊಳ್ಳಲಿಕ್ಕೆ ಸ್ಟ್ರಿಕ್ಟ್ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇನೆ. ಮಂಡ್ಯ ಡಿಸ್ಟ್ರಿಕ್ಟನಲ್ಲಿ ೩–೪ ಕೋಆಪರೇಟೀವ್ ಸೊಸೈಟಿಯವರು ಹದ್ದುಮೀರಿ ಮಾರಾಟಮಾಡಿರುವುದು ನನ್ನ ಗಮನಕ್ಕೆ ಬಂದಿದೆ. ಅವರ ಮೇಲೆ ಕ್ರಮ ತೆಗೆದು ಕೊಳ್ಳುವುದಕ್ಕೆ ಈಗಾಗಲೇ ಡಿಪಾರ್ಟ್‌ಮೆಂಟಿಗೆ ತಿಳಿಸಿದ್ದೇವೆ.

ಶ್ರೀ ಎಸ್. ಬಂಗಾರಪ್ಪ :— ಈ ಕಲಬೆರಕೆ ಮಾಡಿರತಕ್ಕ ಪ್ರಕರಣಗಳಲ್ಲಿ ತಮ್ಮ ಗೊಬ್ಬರ ಪರೀಕ್ಷಕರು ಕ್ರಮ ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದೀರಿ. ಯಾವರೀತಿ ಕ್ರಮ ತೆಗೆದುಕೊಂಡಿದ್ದಾರೆ ಅದರ ಮೇಲೆ ಕೇಸು ಹಾಕಿದ್ದಾರೆಯೇ ಅಥವಾ ಅವರಿಗೆ ಶಿಕ್ಷೆ ಆಗಿದೆಯೇ ?

ಶ್ರೀ ಕೆ. ಎಚ್. ಪಾಟೀಲ್ :— ಡೀಲರ್ಸ್‌ಗಳ ಬಗ್ಗೆ ಎಲ್ಲೆಲ್ಲಿ ಸಂಶಯ ಬಂದಿದೆ ಅಲ್ಲಿ ೧೩೦೦ ಸ್ಯಾಂಪಲ್ಸ್ ತೆಗೆದುಕೊಂಡು ಲ್ಯಾಬರೇಟರಿ ಟೆಸ್ಟ್‌ಗೆ ಕಳುಹಿಸಿದ್ದೇವೆ, ಅದರ ಪೈಕಿ ೮೬ ಸ್ಯಾಂಪಲ್ಸ್ ಮಾತ್ರ ಸಬ್ ಸ್ಟಾಂಡರ್ಡ್ ಇದೆ ಮತ್ತು ಮಿಕ್ಸ್‌ಚರ್ ಇದೆ ಎಂದು ನಮ್ಮ ಜನರಿಗೆ ಬಂದಿವೆ. ೮೬ ಕೇಸುಗಳಲ್ಲಿ ಆಗಲೇ ೨ ಕೇಸುಗಳಲ್ಲಿ ಸರ್ಟಿಫಿಕೇಟುಗಳನ್ನು ಸಸ್‌ಪೆಂಡ್ ಮಾಡಿದ್ದೇವೆ, ೫ ಕೇಸುಗಳಲ್ಲಿ ಕೋರ್ಟ್‌ನಲ್ಲಿ ಕಟ್ಟಲೆಗಳನ್ನು ದಾಖಲೆಗಳನ್ನು ಮಾಡಿದ್ದೇವೆ, ೬ ಕೇಸುಗಳು ಇನ್ನೂ ಕೋರ್ಟಿಗೆ ದಾಖಲೆ ಮಾಡುವ ಸ್ಥಿತಿಯಲ್ಲಿವೆ. ಅನೇಕ ಪ್ರಕರಣಗಳಲ್ಲಿ ಲ್ಯಾಬರೇಟರಿ ಟೆಸ್ಟ್ ಕಾದು ನೋಡಲಿಕ್ಕೆ ಹತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ :— ಪ್ರೈವೇಟ್ ಇಂಡಿವಿಜುಲ್ಸ್ ನೇರವಾಗಿ ಖರೀದಿ ಮಾಡಿ ಮಾತ, ಕೇಸ್ ಹಾಕಬಹುದು ಎಂದು ಹೇಳೋಣವಾಗಿದೆ. ನಾನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ, ಸರ್ಕಾರದ ವತಿಯಿಂದ ಫ್ಯಾಕ್ಟರಿಗೆ ಸಂಬಂಧ ಬೆಳೆಸಿ, ಕಾನೂನನ್ನು ತರತಕ್ಕ ಪರಿಸ್ಥಿತಿಗೆ ತಾವು ಬಂದು ನೇರವಾಗಿ ಸರ್ಕಾರದ ವತಿಯಿಂದ ಸೊಸೈಟಿಗಳ ಮುಖಾಂತರ ಮಾತ್ರ ಮಾರಾಟಮಾಡಬೇಕು. ಇಂಡಿವಿಜುಯಲ್‌ಗೆ ಕೊಡಬಾರದು ಎಂದು ಕಾನೂನು ತರುತ್ತೀರಾ ಅಥವಾ ಇದರ ಬಗ್ಗೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ :— ಸರ್ಕಾರದ ನಿಯಂತ್ರಣ, ಸಬ್ ಸ್ಟಾಂಡರ್ಡ್ ಆಗದಂತೆ ನೋಡಿ ಕೊಳ್ಳುವುದು, ಮತ್ತು ಬೆಲೆ ಮಾತ್ರ ಕೇಂದ್ರ ಸರ್ಕಾರ ನಿರ್ಧರಿಸಿದ ರೀತಿಯಲ್ಲಿ ಮಾಡುವುದು ಸರ್ಕಾರದ ಹಿಡಿತದಲ್ಲಿ ಇದೆ. ಮಾನ್ಯ ಸದಸ್ಯರು ಹೇಳುವುದು ವಿವಿಧ ಕಂಪನಿಗಳಿಗೆ ಬರೆದು ನಾವೇ ಖರೀದಿ ಮಾಡಬೇಕು ಮತ್ತು ಬೇರೆಯವರಿಗೆ ಕೊಡದಂತೆ ಮಾಡಬೇಕೆಂದು ಕೇಳಿದ್ದಾರೆ, ತಮಗೆ ಗೊತ್ತಿದಂತೆ ವ್ಯಾಪಾರ ಪ್ರವರ್ತನೆ ವರ್ತಕರಲ್ಲಿ ಹೆಚ್ಚು. ವ್ಯಾಪಾರದ ಕಡೆಗೆ ವರ್ತಕರು ಹೆಚ್ಚು ಗಮನ ಕೊಡುತ್ತಿದ್ದಾರೆ. ಸರ್ಕಾರದ ಮುಖಾಂತರು ಅವರ ವ್ಯಾಪಾರ ಮಾಡುವುದಕ್ಕೆ ಒಪ್ಪುವುದಿಲ್ಲ ಆದ್ದರಿಂದ ಏನಾದರೂ ನಮ್ಮ ನಿಯಂತ್ರಣ ಮಾಡುವುದಕ್ಕೆ, ಕಾಯಿದೆ ಮಾಡಲಿಕ್ಕೆ ಸಾಧ್ಯವೇ ಎಂದು ಸರ್ಕಾರದ ಪರಿಶೀಲನೆ ಮಾಡಲಿಕ್ಕೆ ಹತ್ತಿದೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ESTIMATES FOR PROVIDING WATER TO THE VILLAGES IN HASSAN CONSTITUENCY

873 SRI K. H. HANUME GOWDA (Hassan) :—

Will the Minister for Community Development and Social Welfare be pleased to state :—

(*a*) Whether estimates are prepared for providing water through Bore wells to Desakoppalu, Channangihalli, Huluvase and Kyavihalli Villages of Hassan Constituency ;

(*b*) how many years back the villages have contributed their share amount and represented the Government for implementing the scheme ;

(*c*) whether it has come to the notice of the Government that the people of these villages are put to hardship for want of drinking ;

(*d*) the reasons for delay in implementing these schemes ?

SRI D. K. NAIKAR :— (Minister for Law and Parliamentry Affairs [On Behalf of]

SRI M. MALLIKARJUNA SWAMY :— (Minister for Community Development and Social Welfare).

(a) Yes.

(b) Except in cause of Kyavihalli water Supply Schem the concerned Panchayats have not fully paid their share amoun in respect of other three schemes. Sanction has already been accorded for Kyavihalli water supply scheme.

(c) Yes.

(d) It has not been possible to accord sanction to these schemes as the abovementioned three village panchayats have not paid their contribution fully.

Therefore it has not been possible to implement the schemes for supplying water in these villages. Sanction has been accorded to Kyavihalli water supply scheme and the Geology Department has been requested to investigate the site for digging the borewell. This scheme will be implemented early.

ಶ್ರೀ ಕೆ. ಎಚ್. ಹನುಮೇಗೌಡ :—ಹಾಸನ ಕ್ಷೇತ್ರದ ದಾಸರಕೊಪ್ಪಲು ಚನ್ನಂಗಿಹಳ್ಳಿ, ಹುಳುವಾರೆ ಯವರು ಎಷ್ಟು ದುಡ್ಡು ಕೊಟ್ಟಿದ್ದಾರೆ ಇನ್ನು ಎಷ್ಟು ಕೊಡಬೇಕು ?

ಶ್ರೀ ಡಿ. ಕೆ. ನಾಯ್ಕರ್ :— ದಾಸನಕೊಪ್ಪಲಿಂದ ೧೦,೨೦೦ ಕೊಟ್ಟಿದ್ದಾರೆ ೧,೭೦೦ ಕೊಡುವುದು ಇದೆ. ಚನ್ನಂಗಿಹಳ್ಳಿ ೫,೨೪೦ ರೂಪಾಯಿ ಕೊಟ್ಟಿದ್ದಾರೆ ೨,೪೪೦ ರೂಪಾಯಿ ಕೊಡುವುದು ಇದೆ. ಹುಳುವಾರೆ ೪,೮೦೦ ಕೊಟ್ಟಿದ್ದಾರೆ ೪೮೦ ಬಾಕಿ ಇದೆ.

ಶ್ರೀ ಕೆ. ಎಚ್. ಹನುಮೇಗೌಡ :— ಇದನ್ನು ಕೊಡಬೇಕೆಂದು ಸಂಬಂಧಪಟ್ಟ ಪಂಚಾಯತಿಗಳಿಗೆ ಯಾವ ತಾರೀಖು ಸೂಚನೆ ಕೊಟ್ಟಿದ್ದೀರಿ ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್ :— ಎಸ್ಟಿಮೇಟ್ ನಮಗೆ ೮ನೇ ಜುಲೈ ೧೯೭೨ ಬಂದಿದೆ, ಅದರ ನಂತರ ಅವರಿಗೆ ತಿಳಿಸಿದೆ.

N. R. W. S. SCHEME TO TEKKALAKOTE TOWN

910. SRI B. E. RAMAIAH (Siruguppa).—

Will the Minister for Community Development and Social Welfare be pleased to state.—

(a) whether plans and estimates for the National Rural Water Supply Scheme to Tekkalakote Town in Siruguppa taluk are prepared;

(b) if so, the estimated cost of the scheme ;

(*c*) whether Government is aware that the population of of Tekkalakote town consists of more than 50 per cent Scheduled castes, scheduled tribes, nomadic, seminomadics and notified tribes;

(*d*) if so, whether there is any proposal to take immediate steps to sanction the scheme without public contribution ?

SRI D. K. NAIKER (Minister for Law and Parliamentary Affairs) on behalf of SRI M. MALLIKARJUNA SWAMY.—(Minister for Community Development and Social Welfare)

(*a*) Yes.

(*b*) Rs. 4,34,200.

(*c*) No.

(*d*) No.

ಶ್ರೀ ಬಿ. ಇ. ರಾಮಯ್ಯ.—ಎಸ್ಟಿಮೇಟ್ ೪ ಲಕ್ಷ ೩೪ ಸಾವಿರ ಸುಮಾರು ಆಗಿದೆ ಎಂದು ಇಲ್ಲಿ ಸರ್ಕಾರದ ಉತ್ತರದಲ್ಲಿ ಹೇಳಿದ್ದಾರೆ. ಹಿಂದುಳಿದವರು, ಷೆಡ್ಯೂಲ್ಡ್ ಕ್ಯಾಸ್ಟ್ 'ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಡೀನೋಟಿಫೈಡ್ ಹೆಚ್ಚಿಗೆ ಇಲ್ಲ ಎಂದು ಹೇಳಿದ್ದಾರೆ. ನಿಜವಾಗಿ ೫೦ ಪರ್ಸೆಂಟ್ ಹೆಚ್ಚಿಗೆ ಇದೆ. ಆದುದರಿಂದ ಅವರ ವಂತಿಕೆ ಇಲ್ಲದೆ ತಾವು ಇದನ್ನು ಮಾಡುವುದಕ್ಕೆ ಆಗುತ್ತದೆಯೋ ?

ಶ್ರೀ ಡಿ. ಕೆ. ನಾಯ್ಕರ್.—ನಮ್ಮಲ್ಲಿ ದೊರೆತ ಅಂಕಿ ಸಂಖ್ಯೆಗಳ ಮೇಲೆ ಆ ಊರಿನ ಜನಸಂಖ್ಯೆ ೧೦,೨೫೯ ಇದೆ. ಷೆಡ್ಯೂಲ್ಡ್ ಕ್ಯಾಸ್ಟ್ ಪಾಪ್ಯುಲೇಷನ್ ೮೪೯ ಇದೆ, ೧೦ ಪರ್ಸೆಂಟಿಗಿಂತ ಹೆಚ್ಚಿಗೆ ಇರುವುದಿಲ್ಲ ಎಂದು ಆಧಾರ ಬಂದಿದೆ

ಶ್ರೀ ಬಿ. ಇ. ರಾಮಯ್ಯ.—ಡಿನೋಟಿಫೈಡ್, ನೋಮಾಡಿಕ್ ಟ್ರೈಬ್ಸ್ ಸೇರಿಸಿದರೆ ೫೦ ಪರ್ಸೆಂಟ್ ಗಿಂತ ಹೆಚ್ಚಾಗುತ್ತದೆ ?

ಶ್ರೀ ಡಿ.ಕೆ. ನಾಯ್ಕರ್.—ಇದು ಇನ್ನೂ ಕಂಬೈಂಡ್ ಆಗಿಲ್ಲ. ಅದು ಆದನಂತರ ಮಾಹಿತಿ ಬರುತ್ತದೆ. ಆದರೂ ಕೂಡ ೫೦ ಪರ್ಸೆಂಟ್ ಆಗಿಲ್ಲ ಎಂದು ಇದಕ್ಕೆ ಆಧಾರ ಇದೆ. ಗ್ರಾಮಪಂಚಾಯಿತಿ ಚೇರ್ ಮನ್‌ರು ವಂತಿಕೆ ತುಂಬುವ ಬಗ್ಗೆ ಸರ್ಕಾರದಿಂದ ಲೋನ್ ಕೊಡಬೇಕೆಂದು ಡಿವಿಜನಲ್ ಕಮಿಷನರ್‌ಗೆ ಬರೆದಿದ್ದಾರೆ, ಅವರ ರಿಪೋರ್ಟಿನ ಆಧಾರದ ಮೇಲೆ ಹೇಳುವುದಾದರೆ ಹಿಂದುಳಿದವರ ಜನಸಂಖ್ಯೆ ಹೆಚ್ಚು ಇಲ್ಲ ಹೆಚ್ಚು ಇದ್ದರೆ ಆ ತರಹ ರಿಕ್ವೆಸ್ಟ್ ಮಾಡುತ್ತಾ ಇರಲಿಲ್ಲ.

MADAM SPEAKER.—Question Hour is over.

QUESTIONS FOR ANSWERS ON THE DAY (BUT NOT TAKEN UP)

MINOR IRRIGATION TANKS IN KALLAMBELLA CONSTITUENCY

64. SRI T. TARE GOWDA (Kallambella).—

Will the Minister for Public Works and Electricity be pleased to state.—

(a) the member of Minor Irrigation tanks sanctioned up till now in Kallambella Constituancy (their names may kindly be given hobli-war);

(b) the number and names of Minor Irrigation tanks to be sanctioned in Madhugiri Sub-Division, Tumkur District ?

SRI H. M. CHANNABASAPPA.—(Minister for Public Works and Electricity)—

(a) The names of Minor Irrigation Tanks sanctioned till now in Kallambella Constituency are furnished in the Statement appended.

(b) The work to be taken up will be decided after receipt of proposals from the Chief Engineer (M. I. & P.H.E.) as per G.O. No. FD 78 BUD 72, dated 7th July 1972 and depending upon availability of funds.

APPENDICES

[*Vide* REPLY TO CLAUSE (*a*) OF STARRED QUESTION No. 514. (64)]

STATEMENT

The names of Minor Irrigation Tanks sanctioned till now in Kallambella Constituency in Tumkur District.

Sl. No.	Name of Tq.	Name of Hobli	Name of work
1	2	3	4
1.	Sira	Kallambella	Jogihalli tank
2.	do	do	Navaneboranahalli
3.	do	do	Thippanahalli
4.	do	do	Restoration of Kallambella Narasammana katte.
5.	do	Bukkapatna	Increasing the capacity of Ramalingapura tank.
6.	do	do	New Tank near pura.
7.	do	do	Increasing the capacity of Ganadahunse tank.
8.	do	do	New tank near Halebiljanabella.
9.	do	do	New tank near Janakal.
10.	do	do	New tank near Chikka-agrahara.

1	2	3	4
11.	do	do	New tank near Yaradakatte.
12.	Chicknyakana-hally	Kandikere	New tank near Gantenahalli.
13.	do	do	Sadarahalli Ranganakere.
14.	Gubbi	Hagalavadi	New tank near Gandikere.
15.	do	do	New tank near Mattadahalla.
16.	do	do	Restoring Hosakere Urumundina kere.
17.	do	do	Restoring Settyhalli tank.
18.	do	do	New tank near Shivarampura.
19.	do	do	Pickup near Manchaladore.
20.	do	Chelur	New tank near Huvinakatte.
21.	do	do	Revanalu.
22.	do	do	Restoration of breached Hamadri-katte.

GRANT TO NURSERY SCHOOLS IN HOSADURGA

918. Sri M. V. Rudrappa (Hosadurga).—

Will the Minister for Education be pleased to state.—

(*a*) whether any representation has been made by the Town Municipality for sanction of grants to the Nursery School run by the Hosadurga Town ,

(*b*) if so, whether they have sanctioned any grants to this school ;

(*c*) if not, the reasons for the same ?

Sri A. R. Badarinarayan.—(Minister for Education)

(*a*) Yes.

(*b*) No.

(*c*) The matter is under consideration.

List of villages unelectrified in Siruguppa Taluk.

1. Matur	6. Barahaili
2. Tasllkudlu	7. Akkathangihally
3. Vettunurvani	8. Byragandinne
4. Beerahalli	9. Goeseraal
5. Kallu Kuntaginahalu	10. Ravihal

11. Motradinne
12. Venkatapura
13. Nagarahal
14. Albnur
15. B. M. Sugur
16. Itigihal
17. Nadanga
18. Agasanur
19. Mottesugur
20. Bommalapura
21. Kottalachinta
22. Honnarahalli
23 Chikkaballari
24. Halunuruvani
25. Karchiganur
26. Kesharkori
27. Halekota
28. Nagalapura
29. Kotehal
30 Saliganur
31. Goggur
32. Chankanur
33. Majinahal
34. Popnahal
35. Gundiganur
36. Manoor
37. Manur Sugar
38. Malapur
39. Nadvi
40. Nittur
41. Goeseraal
42. Bandigappa
43. Hirehal
44. Kenchangere Belagal
45. Kurignur
46. Motasugur
47. Uttanur
48. Ulur
49. Sannaspur
50. Bandrahal
51. Siddaramapura
52. Balakundi
53. Mudenur
54. Mylapura
55. Ibrahimpura
56. Kotehal Sugur
57. Byrapura
58. Udegolum

10-00 A. M.

SRI B. B. SAYANAK.—Madam, I request you kindly to take up my call Attention Notice.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಮೇಲಿನ ಮನೆಯಲ್ಲಿರಬಹುದು. ಅವರು ಬಂದ ನಂತರ ಈ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ.

Press Report about the affairs in Hubli-Dharwar Corporation,

† ಶ್ರೀ ಹೆಚ್. ಡಿ. ದೇವೇಗೌಡ.—(ಹೊಳೆನರಸೀಪುರ)—

ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಇಂದು ಆಡಳಿತದಲ್ಲಿರುವ ಒಬ್ಬರು ಸಚಿವರ ವರ್ತನೆ ಹಾಗೂ ವ್ಯವಹಾರದ ಬಗ್ಗೆ ಅವರ ಅಧಿಕಾರದಲ್ಲಿ ರಾಜ್ಯದ ಜನತೆಗೆ ಸಿಗತಕ್ಕ ಗೌರವ ಮತ್ತು ಅದರ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿರತಕ್ಕ ವಿಚಾರವನ್ನೂ, ನನಗೆ ಲಿಖಿತವಾಗಿ ಬಂದಿರತಕ್ಕಂತಹ ವಿಚಾರವನ್ನೂ ಈ ಮಾನ್ಯ ಸಭೆಯ ಗಮನಕ್ಕೆ ತರಬೇಕಾದ್ದು ನನ್ನ ಕರ್ತವ್ಯ. ಇದರ ಜೊತೆಗೆ ಇದೇ ತರಹದ ಆಪಾದನೆಯನ್ನುಳ್ಳ ಒಂದು ಅಭಿಪ್ರಾಯ ಒಳಗೊಂಡಿರತಕ್ಕ ವಿಷಯವನ್ನು ಪತ್ರಿಕೆಯಲ್ಲಿ ಬಂದಿರುವುದನ್ನು ಇಲ್ಲಿ ತಮ್ಮ ಗಮನಕ್ಕೆ ತರುವುದು ನನ್ನ ಕರ್ತವ್ಯ. ಇಂದಿನ ಪ್ರಜಾವಾಣಿ ಪತ್ರಿಕೆಯಲ್ಲಿ ಹುಬ್ಬಳ್ಳಿ-ಧಾರವಾಡ ಕಾರ್ಪೋರೇಷನ್ ಸಭೆಯಲ್ಲಿ ಸಚಿವರ ವರ್ತನೆ ಬಗ್ಗೆ ಟೀಕೆ ಎಂದು ಮುಖ ಪುಟದಲ್ಲಿ ಬಂದಿದೆ. ಇದೇ ಪತ್ರಿಕೆಯಲ್ಲಿ ವರದಿಯಾಗಿರುವುದು ಹೀಗಿದೆ.—

"ಕಾಂಗ್ರೆಸ್ ಸದಸ್ಯ ಶ್ರೀ ಜೆ. ಟಿ. ಮಥಾಯಿಸ್ ಅವರ ವಾರ್ಡ್‌ನಲ್ಲಿ ನಡೆದ ಸಭೆಯಲ್ಲಿ ಸಚಿವರು ಕಾರ್ಪೊರೇಷನ್ ಅಧಿಕಾರಿಗಳ ಸಮ್ಮುಖದಲ್ಲಿ ಶ್ರೀ ಮಥಾಯಿಸ್ ಅವರ ಬಗ್ಗೆ ಅವಮಾನಕರವಾದ ಭಾಷೆ ಬಳಸಿದ್ದಲ್ಲದೆ, ಅವರಿಗೆ 'ಷಟ್ ಅಪ್' ಎಂದು ಹೇಳಿದರೆಂದು ಸಭೆಯಲ್ಲಿ ಆಪಾದಿಸಲಾಯಿತು.

† ಶ್ರೀ ಎಚ್. ಡಿ. ದೇವೇಗೌಡ .— (ಹೊಳೇನರಸೀಪುರ)

ಇಂತಹ ಒಂದು ಘಟನೆ ನಡೆಯಿತೆಂಬುದನ್ನು ಸಭೆಯಲ್ಲಿ ಒಪ್ಪಿದ ಶ್ರೀ ಮೆಥಾಯಿಸ್ ಅವರು, ಈ ಬಗ್ಗೆ ಇಂದಿನ ಸಭೆಯಲ್ಲಿ ಹೇಳಿಕೆ ನೀಡಲು ತಾವು ಸಿದ್ಧರಿಲ್ಲವೆಂದರು'' ಪತ್ರಿಕೆಯಲ್ಲಿ ಇದು ಬಂದಿದೆ.

ನಿನ್ನೆ ಇಲ್ಲಿಗೆ ಸೋಮವಾರ ಪೇಟೆಯ ಮುನಿಸಿಪಲ್ ಪ್ರೆಸಿಡೆಂಟರಾಗಿರುವವರು ಶ್ರೀ ಗುಂಡೂರಾಯ ರವರ ಜೊತೆಯಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ಬಸಲಿಂಗಪ್ಪನವರನ್ನು ನೋಡಲು ಹೋಗಿದ್ದರಂತೆ. ಅವರು ಏಕೆ ಹೋಗಿದ್ದರು ಎನ್ನುವುದನ್ನು ಬರವಣಿಗೆ ಮೂಲಕ ಮುಖ್ಯ ಮಂತ್ರಿಗಳಿಗೂ ಬರೆದು ಕೊಟ್ಟಿದ್ದಾರೆ ಮತ್ತು ಅದರ ಕಾಪಿಯನ್ನು ನಮ್ಮ ಸಭೆಯ ಕೆಲವು ಮಾನ್ಯ ಸದಸ್ಯರಿಗೂ ಕೊಟ್ಟಿದ್ದಾರೆ, ಅದರಂತೆ ನನಗೂ ಒಂದು ಕಾಪಿ ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿ ಅವರೇ ಹೇಳಿರುವಂತೆ ಮಂತ್ರಿಗಳನ್ನು ನೋಡುವ ಉದ್ದೇಶ, ಅಲ್ಲಿದ್ದ ಒಬ್ಬರು ಎಕ್ಸಿಕ್ಯುಟೀವ್ ಆಫೀಸರನ್ನು ವರ್ಗ ಮಾಡಿದ್ದರಂತೆ. ಅವರನ್ನು ಇನ್ನೂ ಮೂರು ತಿಂಗಳ ಕಾಲ ಸೋಮವಾರ ಪೇಟೆಯಲ್ಲೇ ಉಳಿಸಿಕೊಟ್ಟರೆ ಅವರು ಮಾಡಿರುವ ಕೆಲವು ಕೆಲಸಗಳು ಬೇಗನೆ ಆಗುತ್ತವೆ, ಇದಕ್ಕಾಗಿ ಅಲ್ಲಿನ ಪುರಸಭೆಯವರು ಒಂದು ನಿರ್ಣಯ ಮಾಡಿರುವುದನ್ನು ತಂದಿದ್ದರು. ಅದನ್ನು ಮಂತ್ರಿಗಳ ಗಮನಕ್ಕೆ ತರಬೇಕೆಂದು, ಸರ್ವಾನುಮತದ ನಿರ್ಣಯವನ್ನು ಅವರಿಗೆ ಕೊಡಬೇಕೆಂದು ಅವರು ಇಲ್ಲಿಗೆ ಬಂದಿದ್ದರು. ಶ್ರೀಮಾನ್ ಗುಂಡೂರಾಯರು ಕೂಡ ಅವರೊಡನೆ ಮಂತ್ರಿಗಳ ಬಳಿ ಹೋಗಿದ್ದರು. ಅವರು ಮಂತ್ರಿಗಳನ್ನು ನೋಡಿ ಹೇಳಿದಾಗ ಅದಕ್ಕೆ ಮಾನ್ಯ ಮಂತ್ರಿಗಳು ಪೌರ ಸಭೆಗಳಿಗೆ ರೆಸಲ್ಯೂಷನ್ ಮಾಡುವುದಲ್ಲದೆ ಬೇರೆ ಕೆಲಸವಿಲ್ಲ ಎಂದು ಹೇಳುತ್ತಾ ಇನ್ನೂ ಕೆಲವು ಅವಾಚ್ಯ ಶಬ್ದಗಳನ್ನು ಉಪಯೋಗಿಸಿದರು ಎಂದು ಅವರು ಬರೆದಿರುವ ಕಾಗದದಲ್ಲಿ ಇದೆ ಇಂತಹ ಪದಗಳನ್ನು ಪ್ರಯೋಗ ಮಾಡುವುದು ಸರಿಯೇ ಎಂದು ಸಚಿವರ ವರ್ತನೆ ಬಗ್ಗೆ ಈ ಸಂದರ್ಭದಲ್ಲಿ ಹೇಳುತ್ತಾ ಅವರು ಅವರ ಅಭಿಪ್ರಾಯವನ್ನು ವ್ಯಕ್ತ ಪಡಿಸಿದಾಗ ಮಾನ್ಯ ಮಂತ್ರಿಗಳು ಅವರನ್ನು 'ಗೆಟ್ ಔಟು' ಎಂದು ಹೇಳಿದರೆ ಇವೊತ್ತು ರಾಜ್ಯದಲ್ಲಿರುವ ಸಾರ್ವಜನಿಕರು ಮಂತ್ರಿಗಳನ್ನು ನೋಡಲು ಬಂದಾಗ ಅವರು ಏನು ಹೇಳು ತ್ತಾರೆ ಅದನ್ನು ಕೇಳತಕ್ಕ ಸೌಜನ್ಯತೆಯಾದರೂ ಬೇಡವೇ ಮಂತ್ರಿಗಳ ವರ್ತನೆ ಚುನಾಯಿತರಾದ ಸದಸ್ಯರು ಗಳು ಎಂದರೆ ಈ ಸಭೆ ಸದಸ್ಯರಾಗಲೀ, ಇಲ್ಲವೇ ಪಾರ್ಲಿಮೆಂಟಿನ ಸದಸ್ಯರಾಗಲೀ ಬಂದಾಗ ಹೀಗಾಗ ಬಾರದು. ಇವೊತ್ತು ಮಂತ್ರಿಗಳು ಅಧಿಕಾರದಲ್ಲಿರಬಹುದು. ನಾಳೆ ಇಲ್ಲದೆ ಇರಬಹುದು. ಇದು ಹೋಗು ತ್ತದೆ ಎಂದರೆ ಸರ್ವಜ್ಞನೇ ಒಂದು ಕಡೆ ಹೇಳಿರುವಂತೆ.

ಧನಕನಕವುಳ್ಳನಕ ದಿನಕರನವೋಲಕ್ಕು

ಧನಕನಕ ಹೋದ ಮರುದಿನ ಹಾಳೂರ ಶುನಕನಂತಕ್ಕು ಸರ್ವಜ್ಞ' ಎನ್ನುವಂತಾಗಬಹುದು.

ಇಂದು ಅವರು ಅಧಿಕಾರದಲ್ಲಿರಬಹುದು. ನಾಳೆ ಅಧಿಕಾರ ಹೋದ ಮೇಲೆ ಅವರ ಪರಿಸ್ಥಿತಿ ಏನಾಗು ತ್ತದೆ ಅದನ್ನೂ ನೋಡಿಕೊಳ್ಳಬೇಕು ಅಧಿಕಾರ ಹೋದ ಮೇಲೆ ಯಾರೂ ನಿಮ್ಮನ್ನು ಮಾತನಾಡಿಸುವುದೇ ಇಲ್ಲ. ಇದು ಸ್ವಾಭಾವಿಕ. ಇವೊತ್ತು ಮಾನ್ಯ ಸಿದ್ಧವೀರಪ್ಪನವರು ಮಂತ್ರಿಗಳಾಗಿದ್ದರೆಂದು ಅವರಿಗೆ ಜನ ಸಲಾಮು ಹಾಕಲು ಬರುತ್ತಾರೆ. ನಾಳೆ ಅವರು ಅಧಿಕಾರದಿಂದ ಹೊರಗೆ ಹೋದರೆ ಅವರನ್ನು ಯಾರೂ ಕೇಳುವುದಿಲ್ಲ. ಅದೇ ರೀತಿ ನನ್ನ ಸ್ಥಿತಿಯೂ ಇರುತ್ತದೆ. ಆದುದರಿಂದ ಸಚಿವರು ಅಧಿಕಾರದಲ್ಲಿದ್ದೇನೆಂದು ಈ ರೀತಿ ಒಂದು ರೀತಿಯಾಗಿ ದರ್ಪದಿಂದ ಒಬ್ಬ ಚುನಾಯಿತ ಸದಸ್ಯರು ಅದರಲ್ಲೂ ಒಂದು ಸಂಸ್ಥೆಯನ್ನು ಪ್ರತಿನಿಧಿಸತಕ್ಕಂತಹ ಒಬ್ಬ ಗೌರವಾನ್ವಿತ ಸದಸ್ಯರು, (ಅವರೇನೂ ಕಾಂಗ್ರೆಸ್ (ಒ) ಪಾರ್ಟಿಗೆ ಸೇರಿದವರಲ್ಲ) ಶ್ರೀಮಾನ್ ಗುಂಡೂರಾಯರು ಕರೆದುಕೊಂಡು ಹೋಗಬೇಕಾದರೆ ಅವರ ಪಾರ್ಟಿಯವರೇ ಇರಬೇಕು, ಇಂತಹ ಒಬ್ಬರು ಗೌರವಾನ್ವಿತ ಸೋಮವಾರಪೇಟೆಯ ಪ್ರಥಮ ಪ್ರಜೆ ಬಂದು ಮಂತ್ರಿಗಳನ್ನು ನೋಡಲು ಹೋದರೆ ಅವರೊಡನೆ ಸರಿಯಾಗಿ ಮಾತನಾಡದೆ ಇಂತಹ ಪರಿಸ್ಥಿತಿ ಬಂದುದರಿಂದ ನಾವು ಇಲ್ಲಿ ಹೇಳ ಬೇಕಾಗಿ ಬಂದಿದೆ. ತಮಗೆ ಈ ಸಭೆಯ ಕಾರ್ಯಕಲಾಪಗಳಿಂದ ಗೊತ್ತಾಗುತ್ತದೆ. ಕಳೆದ ೧೫–೨೦ ದಿನಗಳ ಹಿಂದೆ ಕಾರ್ಪೋರೇಷನ್ ಸದಸ್ಯರೊಬ್ಬರ ಬಗ್ಗೆ ಯಾವ ರೀತಿ ಇವರು ನಡೆದುಕೊಂಡರು ಎನ್ನುವುದು. ಇದರ ಹೆಸರನ್ನು ಹೇಳುವ ಗೋಜಿಗೆ ಹೋಗುವುದಿಲ್ಲ. ಆದರೆ ಸರಕಾರದಲ್ಲಿರುವ ಮಂತ್ರಿಗಳ ಪರಿಸ್ಥಿತಿ ಈ ರೀತಿ ಇರಕೂಡದು ಈ ರಾಜ್ಯದ ಜನತೆಗೆ ಅಗೌರವವಾಗಿರುವ ಇಂತಹ ಘಟನೆಗಾಗಿ ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಅನ್‌ಕಂಡಿಷನಲ್ ಅಪಾಲಜಿ ಕೇಳಬೇಕು ಎಂದು ಇಲ್ಲಿ ಹೇಳಬೇಕಾಗಿ ಬರುತ್ತದೆ.

ಇಂತಹ ವಿಚಾರದಲ್ಲಿ ತಪ್ಪಾಗಿದೆ ಎಂದರೆ ಅದರ ಬಗ್ಗೆ ನೋಟೀಸು ಕೊಟ್ಟು ಇಲ್ಲಿ ಬೇಕಾದರೆ ಚರ್ಚೆ ಮಾಡೋಣ. ಆದರೆ ಮಂತ್ರಿಗಳು ಜನರ ವಿಶ್ವಾಸದಿಂದ ಬಂದಿರುವವರು ಇಂತಹ ರೀತಿಯಲ್ಲಿ ನಡೆಯ ಬಾರದು. ನಾನು ಇಂದು ಇದನ್ನು ಇಲ್ಲಿ ಪ್ರಸ್ತಾಪ ಮಾಡಬಾರದೆಂದು ಇದೆ . ಇದರ ಬಗ್ಗೆ ಮಾನ್ಯ ಮುಖ್ಯ

ಮಂತ್ರಿಗಳಿಗೆ ಇಂತಹ ಒಂದು ಕಾಗದ ಬಂದಿರುವುದನ್ನು ಅವರ ಗಮನಕ್ಕೆ ತಂದಾಗ ಅವರೂ ಕೂಡ ಇದನ್ನು ನೋಡುತ್ತೇನೆಂದು ಹೇಳಿದ್ದರು. ಆದರೆ ಇಂತಹದೇ ಒಂದು ಹೇಳಿಕೆ ಪತ್ರಿಕೆಗಳಲ್ಲಿ ಇಂದು ಬಂದುದರಿಂದ ನಾನು ಇಲ್ಲಿ ಇದನ್ನು ಎತ್ತಬೇಕಾಗಿ ಬಂತು. ನಾಳೆ ಇದು ಸಾರ್ವಜನಿಕರಲ್ಲಿ ಬೀದಿಯ ಮಾತಾಗಬಾರದು. ಒಂದು ಸಂಸ್ಥೆಯನ್ನು ಪ್ರತಿನಿಧಿಸುವ ಒಬ್ಬ ಗೌರವ ಪ್ರಥಮ ಪ್ರಜೆಗೆ ಇಂತಹ ಅಗೌರವವಾದರೆ ನಿಜವಾಗಿಯೂ ಇದು ತುಂಬಾ ವಿಷಾದನೀಯ. ಇದರ ಬಗ್ಗೆ ಮುಖ್ಯ ಮಂತ್ರಿಗಳಿಗೂ ಆಗಲೇ ತಿಳಿಸಿದ್ದೇನೆ. ಹುಬ್ಬಳ್ಳಿಯಲ್ಲಿ ಕೂಡ ಇಂತಹದೇ ಒಂದು ಘಟನೆ ನಡೆದು ಅಲ್ಲೂ ಕೂಡ ಒಂದು ರೆಸಲ್ಯೂಷನ್ ಬಂದಿರುವ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಇಲ್ಲೂ ಕೂಡ ಒಂದು ನಿರ್ಣಯ ತಂದು ಅದನ್ನು ಮಂತ್ರಿಗಳಿಗೆ ಹೇಳಬೇಕೆಂದು ಬಂದರೆ ಅದರ ಬಗ್ಗೆ ಈ ರೀತಿ ಅಗೌರವ ಮಾಡಬಹುದೇ ? ಮಾನ್ಯ ಮಂತ್ರಿಗಳಾದ ಶ್ರೀ ಬಸವಲಿಂಗಪ್ಪನವರ ಬಗ್ಗೆ ನನಗೆ ಯಾವ ದ್ವೇಷವಾಗಲೀ ಅಸೂಯೆಯಾಗಲೀ ಇಲ್ಲ. ಅವರ ಬಗ್ಗೆ ವೈಯ್ಯಕ್ತಿಕವಾಗಿ ತುಂಬಾ ಗೌರವವಿದೆ. ಆದರೆ ಅವರು ಮಂತ್ರಿಗಳಾದ ಮೇಲೆ ಮಾಡುವ ವ್ಯವಹಾರಗಳು ಹಾಗೂ ಅವರ ಆಡಳಿತದ ವೈಖರಿ ಇದನ್ನು ಜನ ನೋಡುತ್ತಿದ್ದಾರೆ. ಜನತೆಯ ಪ್ರತಿನಿಧಿಗಳಾಗಿ ಇವರು ಬಂದಿರುವಾಗ ಇವರನ್ನು ನೋಡಲು ಅನೇಕ ಜನ ಬರುತ್ತಾರೆ. ವೈಯ್ಯಕ್ತಿಕವಾಗಿ ಇವರನ್ನು ಅವಹೇಳನ ಮಾಡಬೇಕೆಂದು ನಾನು ಇಲ್ಲಿ ಹೇಳುತ್ತಿಲ್ಲ. ಆದರೆ ಜನರು ಇವರನ್ನು ಕಾಣಲು ಬರುವಾಗ ಇವರು ಜನರನ್ನು ನೋಡುವ ವರ್ತನೆ ಸಲ್ಲದು ಎಂದು ಇಲ್ಲಿ ಹೇಳಬೇಕಾಗುತ್ತದೆ. ಬಹುಶಃ ಇವರ ಒಂದು ನಡತೆ ಬಗ್ಗೆ ಹಾಗೂ ಇವರು ಮಾಡುವ ವ್ಯವಹಾರಗಳ ಬಗ್ಗೆ ಸ್ವಲ್ಪ ಪುಲ್ ಅಪ್ ಮಾಡಬೇಕೆಂದು ತೋರುತ್ತದೆ. ಇಂದು ರಾಜ್ಯದಲ್ಲಿರುವುದು ಜನತಾ ಸರಕಾರ. ಜನರ ಕಷ್ಟಸುಖಗಳನ್ನು ಮಂತ್ರಿಗಳ ಬಳಿ ಬಂದು ಹೇಳುವುದು ಹೊಸದೇನಲ್ಲ. ಆದರೆ ಇಂದು ಮಂತ್ರಿಗಳು ಈ ರೀತಿ ಮಾಡುವುದರಿಂದ ಈ ಮಂತ್ರಿ ಮಂಡಲಕ್ಕೆ ಅದು ಭೂಷಣವೂ ಅಲ್ಲ. ಒಟ್ಟಿನಲ್ಲಿ ಮುಖ್ಯ ಮಂತ್ರಿಗಳು ಇಂತಹ ವಿಚಾರಗಳಿಗೆ ಇನ್ನು ಮುಂದೆ ಅವಕಾಶ ಕೊಡಬಾರದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಹುಬ್ಬಳ್ಳಿ ಮತ್ತು ಸೋಮವಾರಪೇಟೆಯಲ್ಲಿ ನಡೆದಂಥ ಘಟನೆಯ ಬಗ್ಗೆ ಯಾವ ಮಂತ್ರಿಗಳು ಕಾರಣರಾಗಿದ್ದಾರೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ಬಸವಲಿಂಗಪ್ಪನವರು.

ಶ್ರೀ ಕೆ. ಎಂ. ನಾಗಣ್ಣ.—ಇದು ಬಹಳ ಗುರುತರವಾದ ಪ್ರಶ್ನೆಯಾದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಇರುವಾಗಲೇ ಅದನ್ನು ಚರ್ಚೆ ಮಾಡುವುದು ಒಳ್ಳೆಯದು ಮತ್ತು ಅವರ ಗೈರು ಹಾಜರಿಯಲ್ಲಿ ಚರ್ಚೆ ಮಾಡುವುದು ಒಳ್ಳೆಯದಲ್ಲ ಎಂದು ನನಗೆ ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅವರು ಸಭೆಗೆ ಬಾರದೇ ಹೋದರೆ ಏನು ಮಾಡುತ್ತೀರಿ ?

ಶ್ರೀ ಕೆ. ಎಂ. ನಾಗಣ್ಣ.—ಅವರು ಸಭೆಗೆ ಬಂದು ಕ್ಷಮಾಪಣೆ ಕೇಳುವವರೆಗೆ ನಾವು ಸಭೆಯಲ್ಲಿಯೇ ಕುಳಿತುಕೊಂಡಿರೋಣ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಸಂಬಂಧಪಟ್ಟ ಮಂತ್ರಿಗಳು ಈಗ ಸಭೆಯಲ್ಲಿ ಇಲ್ಲ. ಆ ಮಂತ್ರಿಗಳು ಸಭೆಯಲ್ಲಿ ಇರುವಾಗ ಮಾನ್ಯ ವಿರೋಧ ಪಕ್ಷದ ನಾಯಕರು ಆ ವಿಷಯವನ್ನು ಎತ್ತುವುದು ಉತ್ತಮವಾಗಿರುತ್ತದೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ನಾಗಣ್ಣನವರು ಹೇಳಿದ ಹಾಗೆ ಮಾನ್ಯ ಮಂತ್ರಿಗಳು ಬರುವವರೆಗೆ ಕಾಯುತ್ತೇವೆ. ಅವರು ಪತ್ರಿಕೆಯಲ್ಲಿ ಬಂದಿರುವ ವಿಷಯದ ಬಗ್ಗೆ ಹೇಳಿಕೆ ಕೊಡಬೇಕು.

SRI C. M. ARUMUGHAM.—Madam Speaker, I entirely agree with Sri K. M. Naganna's view that if you permit us, we will wait till the concerned Minister comes to the House.

ಅಧ್ಯಕ್ಷರು.—ಈಗ ಸಭೆಯಲ್ಲಿರುವ ಯಾರಾದರೂ ಮಂತ್ರಿಗಳು ಆ ವಿಷಯದ ಬಗ್ಗೆ ಹೇಳಿಕೆ ಕೊಡುತ್ತೀರೋ ಅಥವಾ ಸಂಬಂಧಪಟ್ಟ ಮಂತ್ರಿಗಳೇ ಬರಬೇಕೋ ?

ಶ್ರೀ ಎಚ್. ಸಿದ್ದವೀರಪ್ಪ.—(ಆರೋಗ್ಯ ಶಾಖೆಯ ಮಂತ್ರಿಗಳು).—ಅವರಿಗೆ ಹೇಳಿ ಕಳಿಸಿದ್ದೇವೆ. ಅವರು ಬಂದ ಮೇಲೆ ಮಾನ್ಯ ಸದಸ್ಯರು ಕೇಳಲಿ. ನಾವು ತಪ್ಪಿಸಿಕೊಂಡು ಹೋಗುವ ಪ್ರಶ್ನೆಯೇ ಇಲ್ಲ. ಹೋದರೆ ನೀವು ಬಿಡುತ್ತೀರಾ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದು ಇಡೀ ಪ್ರಪಂಚದ ಜನರೆಲ್ಲರೂ ನೋಡುವ ವಿಚಾರವಾಗಿದೆ. ಏಕೆಂದರೆ ನಮ್ಮದು ಮಾದರೀ ಮೈಸೂರು ಎಂದು ಹೆಸರಾಗಿದೆ. ಈಗ ನಡೆದಿರುವ ವಿಷಯ ಮೈಸೂರಿನ ಚಾರಿತ್ರ್ಯಕ್ಕೆ ಸಂಬಂಧಪಟ್ಟಿದೆ. ಎಲ್ಲೂ ಆಗದಿರುವ ಮತ್ತು ಕೇಳದಿರುವ ತನಿಖೆ ಈ ರಾಜ್ಯದಲ್ಲಿ ಮಂತ್ರಿಗಳ ಬಗ್ಗೆ ಆಗುತ್ತಿದೆಯೆಂದು ನಾವು ಕೇಳುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಖಚಿತವಾದ ವಿಷಯಗಳನ್ನು ಈ ಮಾನ್ಯ ಸಭೆಗೆ ಹಾಗೂ ದೇಶಕ್ಕೆ ತಿಳಿಸಬೇಕಾಗಿದೆ. ಈ ಮಾನ್ಯ ಸಭೆಯಲ್ಲಿ ಈಗ ಅನೇಕ ಹಿರಿಯ ಮಂತ್ರಿಗಳಿದ್ದಾರೆ. ಅಧಿಕಾರಿಗಳ ನಡವಳಿಕೆಯಲ್ಲಿ ಏನಾದರೂ ಶಂಕೆ ಬಂದರೆ ಸಸ್ಪೆಂಡ್ ಮಾಡುವ ಹಿರಿಯ ಮಂತ್ರಿಗಳು ಇಲ್ಲಿ ಇದ್ದಾರೆ. ಆದರೆ ಮಂತ್ರಿಗಳ ತಲೆಯಲ್ಲಿ ಏನೋ ಕೂಡಿದೆ ಎಂದು ಹೇಳುವಾಗ, ಅದರ ಬಗ್ಗೆ ಸುಧೀರ್ಘವಾಗಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಮತ್ತು ಸರ್ಕಾರದ ಕಡೆಯಿಂದ ಸ್ಪಷ್ಟವಾದ ಉತ್ತರ ಬರಬೇಕು. ಮಂತ್ರಿಗಳಾದವರಿಗೆ ಒಂದು ಒಳ್ಳೆಯ ನಡವಳಿಕೆ, ಒಳ್ಳೆಯ ನೀತಿ ಇದೆಯೋ ಎಂಬುದು ಈ ಮಾನ್ಯ ಸಭೆಗೆ ಗೊತ್ತಾಗಬೇಕಾಗಿದೆ ಮುಖ್ಯವಾಗಿ ಈ ಮಾನ್ಯ ಸಭೆಯ ಗೌರವ ಉಳಿಯಬೇಕಾಗಿದೆ. ನಾವು ತಮ್ಮನ್ನು ಶ್ರೀಕೃಷ್ಣನ ಸ್ಥಾನದಲ್ಲಿ ಕೂರಿಸಿದ್ದೇವೆ. ಯಾರು ತಪ್ಪು ಮಾಡಿದ್ದಾರೆಯೋ ಅವರ ತಲೆಯನ್ನು ನಿಮ್ಮ ಚಕ್ರ ಬಿಟ್ಟು ತೆಗೆಯಿರಿ ಎಂದು ನಾವು ಕೇಳಿಕೊಳ್ಳುತ್ತಿದ್ದೇವೆ.

ಅಧ್ಯಕ್ಷರು.—ಮಂತ್ರಿಗಳಿಗೆ ಹೇಳಿ ಕಳಿಸಿದ್ದಾರೆ. ಅವರು ಬಂದ ಮೇಲೆ ನೋಡೋಣ.

ಶ್ರೀ ಕೋಣಂದೂರು ಲಿಂಗಪ್ಪ.—ನನ್ನ ೫೬೦ನೇ ಚುಕ್ಕೆ ಗುರುತಿನ ಪ್ರಶ್ನೆಯ ಬಗ್ಗೆ ಕೆಲವು ವಿವರಗಳನ್ನು ಸರ್ಕಾರದವರು ಒದಗಿಸಿದ್ದಾರೆ. ಅದರ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಕನ್ನಡ ಪತ್ರಿಕೆಗಳಿಗೆ ಜಾಹೀರಾತುಗಳನ್ನು ಇಂಗ್ಲೀಷ್ ಪತ್ರಿಕೆಗಳಿಗಿಂತ ಕಡಿಮೆ ಕೊಟ್ಟಿದ್ದಾರೆಂದು ಇದರಿಂದ ಗೊತ್ತಾಗುತ್ತಿದೆ. ಇಂಡಿಯನ್ ಎಕ್ಸ್‌ಪ್ರೆಸ್‌ಗೆ ೧೩ ಸಾವಿರ ಚಿಲ್ಲರೆ ಕೊಟ್ಟಿದ್ದರೆ ಪ್ರಜಾವಾಣಿಗೆ ೭,೮೦೦ ರೂಪಾಯಿಗಳನ್ನು, ಕನ್ನಡಪ್ರಭಾಕ್ಕೆ ೭ ಸಾವಿರ ಚಿಲ್ಲರೆ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಕನ್ನಡದ ಬಗ್ಗೆ ಇವರಿಗೆ ಎಷ್ಟು ಅಭಿಮಾನ ಇದೆ ಎಂಬುದು ಇದರಿಂದಲೇ ಗೊತ್ತಾಗುತ್ತಿದೆ.

ಅಧ್ಯಕ್ಷರು.—ಅದನ್ನೆಲ್ಲಾ ಈಗೇಕೆ ಪ್ರಸ್ತಾಪ ಮಾಡುತ್ತಿದ್ದೀರಿ ?

ಶ್ರೀ ಕೋಣಂದೂರು ಲಿಂಗಪ್ಪ.—ವಿವರಗಳನ್ನು ಸರ್ಕಾರದವರು ಈಗ ಒದಗಿಸಿರುವುದರಿಂದ ಪ್ರಶ್ನೋತ್ತರ ಕಾಲದಲ್ಲಿ ಪ್ರಸ್ತಾಪ ಮಾಡುವುದಕ್ಕಾಗಲಿಲ್ಲ. ಆದ್ದರಿಂದ ಈಗ ಹೇಳಬೇಕಾಯಿತು.

Supersession of the Bellary District Central Co-operative Bank, Hospet.

‡ ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷಣಿಯವರೇ, ಬಳ್ಳಾರಿ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕನ್ನು ಸರ್ಕಾರದವರು ಸೂಪರ್‌ಸೀಡ್ ಮಾಡಿರುವ ಬಗ್ಗೆ ನಾನು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳಿಸಿಕೊಟ್ಟಿದ್ದೇನೆ. ಈಗ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇರುವುದರಿಂದ ಆ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಮಾನ್ಯ ಸಹಕಾರ ಇಲಾಖೆಯ ಸಚಿವರು ಈ ಬ್ಯಾಂಕ್‌ನ್ನು ಸೆಕ್ಷನ್ ೫೪ರ ಪ್ರಕಾರ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಈ ಬಗ್ಗೆ ಸರ್ಕಾರದವರು ಆರ್ಡರ್ ಮಾಡಿರುವುದು ಬಹುಶಃ ತಾ. ೧೧ನೇ ಆಗಸ್ಟ್ ೧೯೭೨ ಎಂದು ಕಾಣುತ್ತದೆ. ಮತ್ತು ಅದೇ ದಿನ ಅಲ್ಲಿಗೆ ಸ್ಪೆಷಲ್ ಮೆಸೆಂಜರ್ ಒಬ್ಬರನ್ನು ಕಳಿಸಿಕೊಟ್ಟು ಮಾರನೇ ದಿನವೇ ಅಂದರೆ ತಾ. ೧೨ನೇ ಆಗಸ್ಟ್ ೧೯೭೨ ರಂದು ಬೆಳಿಗ್ಗೆ ೧೦ ಗಂಟೆಗೆ ಅಲ್ಲಿಯ ಜಿಲ್ಲಾಧಿಕಾರಿಯವರು ಈ ಒಂದು ಬ್ಯಾಂಕಿನ ಆಡಳಿತವನ್ನು ವಹಿಸಿಕೊಳ್ಳುವಂತೆ ತಿಳಿಸಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರಿಂದ ಕೆಲವು ವಿವರಗಳನ್ನು ಕೇಳುವುದಕ್ಕೆ ಅಪೇಕ್ಷಪಡುತ್ತೇನೆ. ಈ ಬ್ಯಾಂಕ್ ವ್ಯವಹಾರದ ಬಗ್ಗೆ ಸಾರ್ವಜನಿಕರಿಂದ ಸರ್ಕಾರಕ್ಕೆ ಏನಾದರೂ ದೂರುಗಳು ಬಂದಿವೆಯೋ ? ಈ ಬ್ಯಾಂಕ್‌ನ ವ್ಯವಹಾರ ಸರಿಯಾಗಿಲ್ಲ ಎಂಬ ಬಗ್ಗೆ ಆಡಿಟ್ ರಿಪೋರ್ಟ್‌ನಿಂದ ಏನಾದರೂ ವ್ಯಕ್ತವಾಗಿದೆಯೋ ? ಆ ರೀತಿ ಸರ್ಕಾರಕ್ಕೆ ಏನಾದರೂ ಸಾರ್ವಜನಿಕ ದೂರುಗಳು ಬಂದಿದ್ದರೆ, ಅದರ ಬಗ್ಗೆ ವಿಚಾರಣೆ ನಡೆಸಿದ್ದೀರಾ ಎಂಬುದನ್ನು ತಿಳಿಸಬೇಕು. ಯಾವ ದೃಷ್ಟಿಕೋನದಿಂದ ಸೆಕ್ಷನ್ ೫೪ರ ಈ ಬ್ಯಾಂಕ್‌ನ್ನು ಸೂಪರ್‌ಸೀಡ್ ಮಾಡುವುದಕ್ಕೆ ಹೊರಟಿದ್ದೀರಿ ಎಂಬುದನ್ನು ಕೇಳಬೇಕಾಗುತ್ತದೆ. ಈ ಒಂದು ಮೇನೇಜ್‌ಮೆಂಟ್‌ನ್ನು ಸರ್ಕಾರದವರು ವಹಿಸಿಕೊಳ್ಳುವ ಕಾಲಕ್ಕೆ ಸೆಕ್ಷನ್ ೨೯ರ ಕೆಳಗೆ ೧೫ ಜನ ಡೈರೆಕ್ಟರನ್ನು ನಾಮಿನೇಟ್ ಮಾಡಿದ್ದಾರೆ. ಸೆಕ್ಷನ್ ೨೯ರ ಪ್ರಕಾರ ಕೇವಲ ೩ ಜನರನ್ನು ನಾಮಿನೇಟ್ ಮಾಡುವುದಕ್ಕೆ ಕಾರಣವೇನು ಎಂಬುದನ್ನು ತಿಳಿಸಬೇಕು. ಈ ಬ್ಯಾಂಕಿನ ವ್ಯವಹಾರ ಸುಮಾರು ೪ ಕೋಟಿ ರೂಪಾಯಿಗಳಷ್ಟಿದೆ. ಈ ಹಣದ ಪೈಕಿ ಸುಮಾರು ೨ ಕೋಟಿ ರೂಪಾಯಿಗಳನ್ನು ರಿಜರ್ವ್ ಬ್ಯಾಂಕ್‌ನವರು ಸಾಲವಾಗಿ ಕೊಟ್ಟಿದ್ದಾರೆ. ಅಪೆಕ್ಸ್ ಇನ್‌ಸ್ಟಿಟ್ಯೂಷನ್ ಅವರು ಸುಮಾರು ಒಂದು ಕೋಟಿ ರೂಪಾಯಿ ಸಾಲ ಕೊಟ್ಟಿದ್ದಾರೆ. ಜನತೆಯ ಷೇರು ಮೊಬಲಗು ಸುಮಾರು ೭೫ ಲಕ್ಷ

ರೂಪಾಯಿಗಳಷ್ಟಿದೆ. ಸರ್ಕಾರದವರು ಕೊಟ್ಟಿರುವುದು ಕೇವಲ ೨೫ ಲಕ್ಷ ರೂಪಾಯಿಗಳು ಮಾತ್ರ. ಸರ್ಕಾರದ ಷೇರು ಮೊಬಲಗು ಬಹಳ ಕಡಿಮೆ ಇದೆ. ಈ ಬ್ಯಾಂಕನ್ನು ಸರ್ಕಾರದವರು ಸೂಪರ್‌ಸೀಡ್ ಮಾಡುವುದಕ್ಕೆ ಬ್ಯಾಂಕ್‌ನ ಡೈರೆಕ್ಟರುಗಳ ಚಾರಿತ್ರ್ಯದಲ್ಲಿ ಏನಾದರೂ ಲೋಪ ಕಂಡುಬಂದಿತೇ, ಏನಾದರೂ ಡಿಫಾಲ್ಟರ್ಸ್ ಆಗಿದ್ದಾರೆಯೇ, ಡಿಲೇಡ್‌ಪೇಮೆಂಟ್ ಮಾಡಿದ್ದಾರೆಯೇ ಮತ್ತು ಇನ್ನ ಯಾವ ತರಹದ ಅಪಾದನೆಗಳನ್ನು ಮಾಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಆ ರೀತಿ ಏನಾದರೂ ಅಪಾದನೆಗಳು ಇದ್ದರೆ ಮೇನೇಜ್‌ಮೆಂಟ್‌ನವರಿಗೆ ನೋಟೀಸ್ ಕೊಟ್ಟು, ಅವರಿಂದ ವಿವರಣೆ ಪಡೆದು, ನಂತರ ಈ ಒಂದು ಮೇನೇಜ್‌ಮೆಂಟನ್ನು ಸೂಪರ್‌ಸೀಡ್ ಮಾಡುವ ಸರ್ಕಾರದ ಆಜ್ಞೆ ಕೂಡ ಆ ಮೇನೇಜ್‌ಮೆಂಟಿನವರಿಗೆ ಹೋಗಿಲ್ಲ. ಈ ಒಂದು ವರ್ತಮಾನವನ್ನು ಬ್ಯಾಂಕಿನ ಕಾರ್ಯದರ್ಶಿಗಳಿಗಾಗಲೀ ಬ್ಯಾಂಕಿನ ಅಧ್ಯಕ್ಷರಿಗಾಗಲೀ ತಿಳಿಸಲಿಲ್ಲ. ಇದೇ ತಿಂಗಳು ೧೧ನೇ ತಾರೀಖು ಸರ್ಕಾರದ ಆಜ್ಞೆ ಆಗಿದೆ, ೧೪ನೇ ತಾರೀಖು ಜಿಲ್ಲಾಧಿಕಾರಿಯವರು ಅಧಿಕಾರವನ್ನು ವಹಿಸಿಕೊಂಡುಬಿಟ್ಟಿದ್ದಾರೆ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ಶಂಕರಆಳ್ವ ಅವರ ಒಂದು ಚಾರಿತ್ರ್ಯದಲ್ಲಿ ನಾನು ನಂಬಿಕೆ ಇಟ್ಟುಕೊಂಡಿದ್ದೆ. ಅವರು ನಿಷ್ಪಕ್ಷಪಾತದಿಂದ ಕೂಡಿದ ಮಂತ್ರಿಗಳು ಎಂದು ನಾನು ತಿಳಿದುಕೊಂಡಿದ್ದೆ.

ಅವರು ಬಹುಶಃ ಯಾವುದೋ ಒಂದು ಒತ್ತಡಕ್ಕೆ ಮಣಿದು ಇದನ್ನು ಮಾಡಿದ್ದಾರೆ. ಈ ಬಗ್ಗೆ ನಾನು ಉತ್ಪ್ರೇಕ್ಷೆಯಿಂದ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ಅವರು ದಯಮಾಡಿ ತಿಳಿಸಬೇಕು. ಆಡಿಟ್ ರಿಪೋರ್ಟಿನಲ್ಲಿ ಯಾವ ಯಾವ ಆರೋಪಣೆಗಳು ಬಂದಿವೆ. ಇದರ ಬಗ್ಗೆ ವಿಚಾರಣೆ ಮಾಡಿದ್ದಾರೆಯೆ ? ಇದರ ಬಗ್ಗೆ ಮಾಹಿತಿಯನ್ನು ಸ್ಥಳೀಯ ಅಧಿಕಾರಿಗಳಿಂದ ತರಿಸಿಕೊಂಡಿದ್ದಾರೆಯೇ ? ಯಾವ ಕಾರಣದಿಂದ ಇದನ್ನು ಸೂಪರ್‌ಸೀಡ್ ಮಾಡಿದ್ದಾರೆ ? ಆಗಸ್ಟ್ ೧೧ನೇ ತಾರೀಖು ಆ ಬ್ಯಾಂಕಿನ ಆಡಳಿತವನ್ನು ಸರ್ಕಾರದವರು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಇದರ ಅವಶ್ಯಕತೆ ಏನಿತ್ತು ಎಂಬುದನ್ನು ದಯಮಾಡಿ ತಿಳಿಸಬೇಕು. ಕೇವಲ ರಾಜಕೀಯ ಉದ್ದೇಶದಿಂದ ಇದನ್ನು ಮಾಡಿದ್ದರೆ ಅದರ ಪಾಪ ಪುಣ್ಯ ಅವರಿಗೆ ಸೇರತಕ್ಕದ್ದು. ಯಾವ ಕಾರಣದಿಂದ ಈ ಕೆಲಸವನ್ನು ಮಾಡಿದ್ದಾರೆ ಎಂಬುದನ್ನು ದಯಮಾಡಿ ತಿಳಿಸಬೇಕು. ನಾನು ಈ ವಿಷಯದಲ್ಲಿ ಬಹಳ ನೊಂದ ಹೃದಯದಿಂದ ಹೇಳುತ್ತಿದ್ದೇನೆ ಮಾನ್ಯಮಂತ್ರಿಗಳು ಈ ಕೆಲಸವನ್ನು ಮಾಡಬಾರದಾಗಿತ್ತು. ನಾನು ಅವರ ವ್ಯಕ್ತಿತ್ವದ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ಅವರು ಒಂದು ಗೊಂದಲಕ್ಕೆ ಸಿಕ್ಕಿ ರಾಜಕೀಯಕ್ಕೆ ಮಣಿದಿದ್ದಾರೆ. ಇದು ಸರಿಯಲ್ಲ. ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕಾಗುತ್ತದೆ. ಇವೊತ್ತಿನ ದಿವಸ ಅಲ್ಲಿರತಕ್ಕ ಆಡಳಿತ ಮಂಡಲಿಯನ್ನು ರದ್ದು ಮಾಡಿ ಹೊಸ ಮಂಡಲಿಯನ್ನು ನೇಮಕ ಮಾಡಿದ್ದಾರೆ ಅದರಲ್ಲಿರತಕ್ಕ ಆಡಳಿತ ಮಂಡಲಿಯು ೧೫ ಜನಗಳ ಬಹುಮತವನ್ನು ಇಟ್ಟುಕೊಂಡು ಅದರ ಆಡಳಿತವನ್ನು ನಡೆಸಬೇಕೆಂದು ಏತಕ್ಕೆ ಮಾಡಿದ್ದಾರೆ ಎಂಬುದನ್ನು ಹೇಳಬೇಕು. ಈಗ ಅದಕ್ಕೆ ನವೆಂಬರ್ ತಿಂಗಳಿನಲ್ಲಿ ಚುನಾವಣೆ ಆಗುತ್ತದೆ. ಜನರಲ್‌ಬಾಡಿ ಮೀಟಿಂಗ್ ಕೇವಲ ಎರಡೂವರೆ ತಿಂಗಳು ಮಾತ್ರ ಇರುವಾಗ ಅದನ್ನು ಸೂಪರ್‌ಸೀಡ್ ಮಾಡಿ ಅದರ ಆಡಳಿತವನ್ನು ಸರ್ಕಾರ ವಹಿಸಿಕೊಳ್ಳತಕ್ಕಂಥಾ ಔಚಿತ್ಯವೇನಿತ್ತು ? ಅವಶ್ಯಕತೆ ಏನಿತ್ತು ಎಂಬುದನ್ನು ತಿಳಿಸಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಶಂಕರ ಆಳ್ವ.—(ಸಹಕಾರ ಶಾಖೆಯ ಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದೇವೇಗೌಡರು ಬಳ್ಳಾರಿ ಜಿಲ್ಲಾ ಸಹಕಾರಿ ಬ್ಯಾಂಕನ್ನು ಸೂಪರ್‌ಸೀಡ್ ಮಾಡಬಾರದಾಗಿತ್ತು ಈ ವಿಚಾರದಲ್ಲಿ ರಾಜಕೀಯ ಒತ್ತಡಕ್ಕೆ ಮಣಿದು ಇದನ್ನು ಸೂಪರ್‌ಸೀಡ್ ಮಾಡಿ ಅದಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿದ್ದೀರಿ ಎಂದು ಹೇಳಿದರು. ರಾಜಕೀಯ ಒತ್ತಡಕ್ಕಾಗಿ ನಾನು ಇದನ್ನು ಸೂಪರ್‌ಸೀಡ್ ಮಾಡಿಲ್ಲ ಈ ವಿಚಾರದಲ್ಲಿ ನಾನು ಬಹಳ ಆಳವಾಗಿ ಹೇಳುವುದಕ್ಕೆ ಬಯಸುವುದಿಲ್ಲ. ಸ್ವಲ್ಪ ವಿಷಯವನ್ನು ಮಾತ್ರ ತಮ್ಮ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಈ ಸಹಕಾರಿ ಬ್ಯಾಂಕಿನ ವ್ಯವಹಾರದ ಬಗ್ಗೆ ಅನೇಕ ವರ್ಷಗಳಿಂದ ತನಿಖೆಯಾಗುತ್ತಿತ್ತು ರಾಷ್ಟ್ರಪತಿಗಳ ಆಡಳಿತ ಇರುವಾಗ ರಾಜ್ಯಪಾಲರ ಆಡಳಿತ ಕಾಲದಲ್ಲಿ ಇದು ತನಿಖೆಯಾಗುತ್ತಿತ್ತು ಹಿಂದೆ ಇವರ ಆಡಳಿತ ಮಂಡಲಿ ರಚನೆಯಾದ ನಂತರ ಈ ಬ್ಯಾಂಕಿನ ವ್ಯವಹಾರಗಳ ಬಗ್ಗೆ ಅನೇಕ ದೂರುಗಳು ಬಂದು ಈ ಬಗ್ಗೆ ಏತಕ್ಕೆ ಆಕ್ಷನ್ ತೆಗೆದುಕೊಳ್ಳಲಿಲ್ಲ ಎಂದು ಅನೇಕ ದೂರುಗಳು ಕೆಲವರಿಂದ ಬಂದ್ದರಿಂದ ಸೆಕ್ಷನ್ ೫೪ರ ಪ್ರಕಾರ ಈ ಸಹಕಾರಿ ಬ್ಯಾಂಕನ್ನು ಸರ್ಕಾರದ ಹತೋಟಿಯಲ್ಲಿ ತೆಗೆದುಕೊಂಡಿದ್ದೇವೆ. ಇದರ ಆಡಳಿತ ಮತ್ತು ವ್ಯವಹಾರ ಸರಿಯಾದಂತ ನಂತರ ಅದರ ಆಡಳಿತವನ್ನು ಮತ್ತೇ ಆ ಬ್ಯಾಂಕಿಗೆ ಬಿಡುತ್ತೇವೆ. ಈ ಚಿತ್ರದುರ್ಗದಲ್ಲಿದ್ದ ಬ್ಯಾಂಕ್ ಮತ್ತು ಗೌರಿಬಿದನೂರಿನಲ್ಲಿದ್ದ ಸಹಕಾರಿ ಸಕ್ಕರೆ ಕಾರ್ಖಾನೆ ವ್ಯವಹಾರ ಸರಿಯಾದನಂತರ ದುರುಪಯೋಗವನ್ನು ಸರಿಪಡಿಸಿದ ನಂತರ ಅವುಗಳನ್ನು ಹೊಸ ಆಡಳಿತ ಮಂಡಳಿಗೆ ಬಿಟ್ಟು ಕೊಟ್ಟಿದ್ದೇವೆ. ಈಗ ಬಳ್ಳಾರಿ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟೀವ್ ಬ್ಯಾಂಕನ್ನು ಸರ್ಕಾರದ ಆಡಳಿತಕ್ಕೆ ತೆಗೆದುಕೊಂಡಿದ್ದೇವೆ ಈ ಬ್ಯಾಂಕಿನ ಅಧ್ಯಕ್ಷರೇ ಬಳ್ಳಾರಿ ಡಿಸ್ಟ್ರಿಕ್ಟ್ ಮೈನ್ ಓನರ್ಸ್ ಕೋಆಪರೇಟೀವ್ ಸೊಸೈಟಿಯ ಅಧ್ಯಕ್ಷರೂ ಆಗಿದ್ದಾರೆ. ಇದರ

(ಶ್ರೀ ಶಂಕರ ಆಳ್ವ). —

ಜೊತೆಗೆ ಇನ್ನೊಂದು ಸೊಸೈಟಿಯು ಅಧ್ಯಕ್ಷರೂ ಆಗಿದ್ದಾರೆ ಆ ಎರಡು ಸೊಸೈಟಿಗಳೂ ಲಿಕ್ವಿಡೇಟ್ ಆಗಿವೆ. ಬಳ್ಳಾರಿ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟೀವ್ ಬ್ಯಾಂಕಿನಿಂದ ಹೆಚ್ಚು ಹಣ ಎರಡು ಸೊಸೈಟಿಗಳಲ್ಲಿ ವಿನಿಯೋಗವಾಗಿದೆ. ಇದಕ್ಕೆ ಯಾರು ಜವಾಬ್ದಾರರು ಯಾರು ಸಾಲಕೊಟ್ಟರು ಎನ್ನುವ ಬಗ್ಗೆ ತನಿಖೆ ನಡೆಯುತ್ತಿದೆ. ಈ ಬ್ಯಾಂಕಿನ ಬಗ್ಗೆ ಹೇಳುವುದಾದರೆ ಸೆಕ್ಷನ್ ೫೪ರಲ್ಲಿ ಈ ರೀತಿ ಹೇಳಿದ್ದಾರೆ.

Section 54 of the M. C. S. Act, says:—

"Where State aid amounting to not less than 2 lakhs of rupees is given to any co-operative society, the State Government, if it is satisfied that is necessary in public interest to do so may be notification in the official gazette take power to exercise such control ovre the conduct of business of such society as shall suffice in the opinion of the State Government to safeguard the interest of the State." ಎಂದು ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಮುಂದಿನ ಕ್ರಮಗಳಿಗಾಗಿ ಈ ಕೆಳಗೆ ಕಂಡ ಅಧಿಕಾರಿಗಳ ಸಮಿತಿಯೊಂದನ್ನು ರಚಿಸಲಾಗಿದೆ. ಆ ಸಮಿತಿಯಲ್ಲಿ.

The Deputy Commissoner, Bellary, Joint Registrar of Co-operative Societies, Gublarga Division, District Deputy Agricultural Officer, Bellary. Assistant Registrar of Co-operative Societies, Bellary, Assistant Registrar. of Co-operative Societies, Hospet, Assistant Commissioner, Bellary Sub Division, Special Deputy Commissioner, Bellary, Assistant Director of Agriculture, Bellary, Deputy Director of Soil Conservation, District Development Assistant, Bellary, Block Development Officer, Hospet. ಇಷ್ಟು ಜನ ಇದ್ದಾರೆ ಇತರ ವಿವರಗಳು ಈ ರೀತಿ ಇದೆ —

Mounting overdues.—The overdues of the bank continued to increase year after year as seen from the following figures.

Overdues	1969-70. (in lakhs)	1970-71	1971-72
Short term	84-80	87-27	8964
Medium term	7-79	1[illegible]-32	11-38
Cash Credit	10-81	13-43	1347
Others	14-88	17-68	21-44

No action has been taken to recover the loans.

Conversion of short term into medium term loans was resorted to contrary to the provisions of the Rules approved by the State Government. In the case of Kottureswara Service Co-operativ Society, the bank converted an amount of Rs 22,400 short term which was overdue into medium term loan.

Loans were given even thought there were heavy overdues.

Renewal of cash credit loans even where there were no operations This has been done.

Subsquent to first drawal no action was noticed in the case of the following societies.

(1) Basarakodu Service Co-operative Society.

(2) Kudithini S.C.S.

(3) Gottur S.C S

The Bank is showing heavy deficiencies in the maintenance of non-voerdues cover particularly during the recovery season and the following are the details :

	Quantum of amount.
April 1971.	57-88 lakhs.
May 1971.	57-77 lakhs.
June 1971.	18-77 lakhs.

The Bank was advised that they should not repeat this irregularity in the sudsequent years. Despite this, deficiency in non-overdue cover is seen in the months of April and May in the year 1971-72 :

April 1972.	Rs. 43 lakhs.
May 1972.	Rs. 31 lakhs

ಕೆಲವರಿಗೆ ಹಿಂದೆ ಕೊಟ್ಟತಂಹ ಲೋನನ್ನು ಪಾವತಿ ಮಾಡದೇ ಇದ್ದಾಗ್ಯೂ ಸಹ ಮತ್ತೆ ಲೋನ್ ಕೊಟ್ಟಿದ್ದಾರೆ. ಆದ್ದರಿಂದ ಈ ಬ್ಯಾಂಕಿನ ಬಗ್ಗೆ ಅನೇಕ ದೂರುಗಳು ಬಂದಿವೆ. ಈ ಬಗ್ಗೆ ಎತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಕೆಲವರಿಂದ ಆಕ್ಷೇಪಣೆಗಳು ಕೂಡ ಬಂದಿವೆ. ಆದಕಾರಣ ಇದನ್ನೆಲ್ಲಾ ಸರಿಪಡಿಸುವವರೆಗೆ ಈ ಬ್ಯಾಂಕಿನ ಆಡಳಿತವನ್ನು ಸರ್ಕಾರದ ಹತೋಟಿಯಲ್ಲಿ ತೆಗೆದುಕೊಂಡಿದ್ದೇವೆ. ಆದರಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಿ ಅಲ್ಲಿನ ವ್ಯವಹಾರಗಳೆಲ್ಲವೂ ಸರಿಹೋದಮೇಲೆ ಪುನಃ ಅದರ ಆಡಳಿತವನ್ನು ಬ್ಯಾಂಕಿನವರಿಗೆ ನಾವು ಬಿಟ್ಟು ಕೊಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ:—ಈ ಬ್ಯಾಂಕಿನ ಬಗ್ಗೆ ಅಪಾದನೆಗಳು ಇವೆಯೆಂದು ಹೇಳಿದ್ದೀರಿ ಈ ಬಗ್ಗೆ ಈ ಬ್ಯಾಂಕಿಗೆ ನೋಟೀಸ್ ಕೊಟ್ಟು ಅವರಿಂದ ವಿವರಣೆ ಪಡೆದುಕೊಂಡಿದ್ದೀರಾ ? ಆಡಿಟ್ ರಿಪೋರ್ಟಿನಲ್ಲಿ ಆ ಅಪಾದನೆಗಳು ಇವೆಯೇ ? ಈ ಬ್ಯಾಂಕಿನ ಬಗ್ಗೆ ಸರ್ವಜನಿಕರಿಂದ ದೂರುಗಳು ಬಂದಿದ್ದರೆ ಯಾವಾಗ ಬಂದಿವೆ ? ಅವುಗಳನ್ನು ನೀವು ವಿಚಾರಣೆ ಮಾಡಲು ಯಾರಾದರೂ ಅಧಿಕಾರಿಗಳನ್ನು ನೇಮಕ ಮಾಡಿದ್ದೀರಾ ? ಅವರು ನಿಮಗೆ ಈ ಬಗ್ಗೆ ರಿಪೋರ್ಟ್ ಕೊಟ್ಟಿದ್ದಾರೆಯೇ ? ನೀವು ಮ್ಯಾನೇಜ್‌ಮೆಂಟಿನವರಿಗೆ ನೋಟೀಸ್ ಕೊಟ್ಟು ಅವರು ನಿಮಗೆ ವಿವರಣೆ ಕೊಟ್ಟಿರುವುದಕ್ಕೆ ದಯಮಾಡಿ ನಮಗೆ ಆಧಾರ ತೋರಿಸಿ.

ಶ್ರೀ ಎ. ಶಂಕರ ಆಳ್ವ:—ನೋಟೀಸ್ ಕೊಟ್ಟಿದ್ದೇವೆ. ತನಿಖೆ ಆಗಬೇಕೆಂದು ಆಡಿಟ್ ರಿಪೋರ್ಟಿನಲ್ಲಿದೆ ರಿಜರ್ವ್ ಬ್ಯಾಂಕಿನವರೂ ಸಹ ಈ ಬ್ಯಾಂಕಿನ ಬಗ್ಗೆ ನಾನ್ ಓವರ್ ಡ್ಯೂಸ್‌ಗಳನ್ನು ಸರಿಯಾಗಿ ರೆಕವರಿ ಸೀಜನ್‌ನಲ್ಲಿ ಆಗಾಗ್ಯೆ ರೆಕವರ್ ಮಾಡುತ್ತಾ ಇಲ್ಲ ಎಂದು ಅಬ್ಜರ್ವ್ ಮಾಡಿದ್ದಾರೆ.

10-30 A. M.

ಏಕೆಂದರೆ ಅದಕ್ಕೆ ಬರತಕ್ಕಂತ ಹಣ ಬಹಳ ಇದೆ. ಎರಡು ಸೊಸೈಟಿಗಳಿಗೆ ಜಾಸ್ತಿ ಹಣ ಕೊಟ್ಟಿದ್ದಾರೆ. ಅದು ಈಗ ಲಿಕ್ವಿಡೇಶನ್ ಆಗಿದೆ ಈಗ ಅದರ ಪ್ರಕಾರ ಎಷ್ಟು ನಷ್ಟವಾಗುತ್ತದೆ ಎಂಬುದನ್ನು ನೋಡಿಕೊಂಡು ಆ ಹಣವನ್ನು ಭರ್ತಿ ಮಾಡಬೇಕು. ಅವುಗಳು ಎಲ್ಲೆಲ್ಲಿಂದ ಬರಬೇಕೆಂಬುದನ್ನು ತನಿಖೆ ಮಾಡುತ್ತಿದ್ದೇವೆ. ೧೧ನೇ ತಾರೀಕಿನಿಂದ ತನಿಖೆ ಆಗುತ್ತಾ ಇದೆ. ಹೀಗೆ ಇದಕ್ಕೆ ಸಂಬಂಧಪಟ್ಟ ಅನೇಕ ವಿಚಾರಗಳು

(ಶ್ರೀ ಎ. ಶಂಕರ ಆಳ್ವ).—

ತನಿಖೆಯಲ್ಲಿವೆ. ಈ ಸಹಕಾರೀ ಸಂಸ್ಥೆಗಳು ಒಂದು ಜನರ ಮೂವ್‌ಮೆಂಟ್ ಆಗಿರುವುದರಿಂದ, ಆದರಲ್ಲಿ ಲೋಪಗಳು ಕಂಡು ಬಂದಾಗ, ಅದನ್ನು ಸರಿಪಡಿಸುವ ದೃಷ್ಟಿಯಿಂದ ಸರ್ಕಾರ ಹತೋಟಿಯಲ್ಲಿ ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದ್ದು ನಾನು ಈ ಇಲಾಖೆಗೆ ಬಂದ ನಂತರ ಇದರ ಬಗ್ಗೆ ತನಿಖೆ ನಡೆಸಿದ್ದೇನೆ ಮತ್ತು ಎಲ್ಲವನ್ನೂ ನೋಡಿಕೊಂಡು ಈ ಕ್ರಮ ತೆಗೆದುಕೊಂಡಿದ್ದೇವೆ. ಹೀಗೆ ಒಂದು ಸಹಕಾರಿ ಸಂಸ್ಥೆಗೆ ಎಷ್ಟೋ ಬರಬೇಕಾದ ಹಣ ಬಾರದೆ ಇರುವಾಗ ಸರ್ಕಾರ ಸುಮ್ಮನೆ ಕೂತುಕೊಳ್ಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ಯಾವಾಗ ಬೇಕಾದರೂ ನಾನು ಸಭೆಗೆ ಸಂಬಂಧಪಟ್ಟ ವಿಚಾರಗಳನ್ನು ತಿಳಿಸುವುದಕ್ಕೆ ತಯಾರಾಗಿದ್ದೇನೆ. ಇಷ್ಟರ ವರೆಗೆ ಇದರ ಮೇಲೆ ಕ್ರಮ ತೆಗೆದುಕೊಳ್ಳದೆ ಸುಮ್ಮನೆ ಕೂತುಕೊಂಡದ್ದು ರಾಜಕೀಯ ಒತ್ತಡದಿಂದ ಎಂದು ಹೇಳಬಹುದು. ಇನ್ನೊಂದು ಏನೆಂದರೆ ಈ ಸೆಂಟ್ರಲ್ ಬ್ಯಾಂಕಿನವರು ಲೋನ್ ರಿಕವರಿಗಳನ್ನು ರಿಕವರಿ ಆದ ತಕ್ಷಣ ಅಪೆಕ್ಸ್ ಬ್ಯಾಂಕಿಗೆ ಕಳಿಸಬೇಕಾಗುತ್ತದೆ. ಆದರೆ ಆ ರೀತಿ ಇವರು ಮಾಡಲಿಲ್ಲ. ಉದಾಹರಣೆಗೆ ೧೯೭೧ ಏಪ್ರಿಲ್‌ನಲ್ಲಿ ೨೦-೦೪ ಲಕ್ಷ ರಿಕವರಿ ಮಾಡಿದ್ದರಲ್ಲಿ ಕೇವಲ ೪ ಲಕ್ಷ ಅಪೆಕ್ಸ್ ಬ್ಯಾಂಕಿಗೆ ರೆಮಿಟ್ ಮಾಡಿದ್ದಾರೆ ೧೯೭೧ನೇ ಮೇ ಯಲ್ಲಿ ೨೨-೪೦ ಲಕ್ಷ ರಿಕವರಿ ಮಾಡಿದ್ದರಲ್ಲಿ ಒಂದು ಪೈಸೆ ಕೂಡ ಕಳಿಸಿಕೊಟ್ಟಿಲ್ಲ. ೧೯೭೧ನೇ ಜೂನಿನಲ್ಲಿ ೩೩-೩೭ ಲಕ್ಷ ರಿಕವರಿ ಮಾಡಿದರೂ ಒಂದು ಪೈಸೆ ಕೂಡ ಕಳಿಸಿಕೊಟ್ಟಿಲ್ಲ, ಮೇ ೧೯೭೨ರಲ್ಲಿ ೧೬-೧೬ ಲಕ್ಷ ರಿಕವರಿ ಮಾಡಿದ್ದಾರೆ, ಆದರೆ ಒಂದು ಪೈಸೆ ಕೂಡ ಕಳಿಸಿ ಕೊಟ್ಟಿಲ್ಲ. ಜೂನ್ ೧೯೭೨ರಲ್ಲಿ ೭೮-೫೩ ಲಕ್ಷ ರಿಕವರಿ ಮಾಡಿದ್ದರಲ್ಲಿ ಒಂದು ಪೈಸೆ ಕೂಡ ಅಪೆಕ್ಸ್ ಬ್ಯಾಂಕಿಗೆ ರೆಮಿಟ್ ಮಾಡಿಲ್ಲ. ಹೀಗಿರುವಾಗ ಸರ್ಕಾರ ಸುಮ್ಮನೆ ಇರುವುದಕ್ಕೆ ಆಗುತ್ತದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಈಗ ಸರ್ಕಾರ ಇದನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ತಾವು ಅಪೆಕ್ಸ್ ಬ್ಯಾಂಕಿನವರ ಡ್ಯೂ ಇದ್ದ ರೀತಿಯಲ್ಲಿ ಹೇಳುತ್ತಿದ್ದೀರಿ. ಅವರು ಅಪೆಕ್ಸ್ ಬ್ಯಾಂಕಿನಿಂದ ಪಡೆದಂತಹ ಹಣ ಯಾವ ಹರತ್ತಿನ ಮೇಲೆ ಪಡೆದಿರುತ್ತಾರೆ ? ಅದನ್ನು ಹೇಳಬೇಕು. ತಮಗೆ ನಾನು ಇನ್ನೊಂದು ವಿಷಯವನ್ನು ಹೇಳುತ್ತೇನೆ. ತಾವು ಇವತ್ತು ಏನು ಅದರ ಹತೋಟಿಯನ್ನು ವಹಿಸಿಕೊಂಡಿದ್ದೀರಿ, ಇದರ ಬಗ್ಗೆ ಒಂದು ನಿಷ್ಪಕ್ಷವಾದ ವಿಚಾರಣೆಯನ್ನು ಮಾಡಿ ಈ ಸಭೆಗೆ ಅದರ ವರದಿಯನ್ನು ಕೊಡುತ್ತೀರಾ ? ನಮಗೆ ಇರತಕ್ಕಂತಹ ಆಕ್ಷೇಪವಾದರೂ ಇಷ್ಟೆ. ೧೧ನೇ ತಾರೀಕಿಗೆ ಅದನ್ನು ಸುಪರ್‌ಸೀಡ್ ೧೨ನೇ ತಾರೀಕಿಗೆ ಪಾರ್ಟಿಗಳಿಗೆ ಇನ್‌ಫಾರ್ಮೇಶನ್ ಕೊಡದೆ ಆಡಳಿತವನ್ನು ವಹಿಸಿಕೊಂಡಿದ್ದಾರೆ. ಇದೇ ರೀತಿ ಬೇರೆ ಎಷ್ಟೆಷ್ಟು ಜಿಲ್ಲಾ ಬ್ಯಾಂಕುಗಳು ಡಿಫಾಲ್ಟರುಗಳು ಆಗಿವೆ ಎಂಬುದರ ಬಗ್ಗೆ ಸಹ ವಿವರಣೆ ಕೊಡುತ್ತೀರಾ ? ಆದ್ದರಿಂದ ಇವತ್ತು ೧೧ನೇ ತಾರೀಕಿಗೆ ಆರ್ಡರ್ ಮಾಡಿ ಮಾರುದಿನವೇ ವಶಕ್ಕೆ ತೆಗೆದುಕೊಳ್ಳಬೇಕಾದಂತಹ ಅವಶ್ಯಕತೆ ಏನಿತ್ತು ? ಆದ್ದರಿಂದ ಈ ಎಲ್ಲ ವಿಚಾರಗಳ ಬಗ್ಗೆ ತಾವು ಒಂದು ನಿಷ್ಪಕ್ಷವಾದ ವಿಚಾರಣೆಯನ್ನು ಮಾಡಿ ಈ ಸಭೆಗೆ ಅದರ ವರದಿಯನ್ನು ಒದಗಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ನಮ್ಮ ಮಾನ್ಯ ಸದಸ್ಯರು ಬೇಕಾದರೆ ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಲಿ. ಬೇಕಾದರೆ ಇದರ ಬಗ್ಗೆ ಒಂದು ಫುಲ್ ಡಿಬೇಟ್ ಇಟ್ಟುಕೊಳ್ಳಲಿ. ನಾನು ಎಲ್ಲವನ್ನೂ ಮುಚ್ಚುಮರೆ ಇಲ್ಲದೆ ಹೇಳುವುದಕ್ಕೆ ತಯಾರಾಗಿದ್ದೇನೆ ಅವರು ರೂಲ್ಸ್ ಪ್ರಕಾರ ಏನೇನು ಪ್ರೈಮರಿ ಸೊಸೈಟಿಗಳಿಂದ ಕಲೆಕ್ಟ್ ಮಾಡುತ್ತಾರೆ, ಅದನ್ನು ಅಪೆಕ್ಸ್ ಬ್ಯಾಂಕಿಗೆ ಕಳುಹಿಸಿಕೊಡಬೇಕಾಗುತ್ತದೆ. ಒಂದೊಂದು ತಿಂಗಳಲ್ಲಿ ೨೦-೩೦ ಲಕ್ಷರೂಪಾಯಿಯಷ್ಟು ಹೀಗೆ ಅವರು ವಸೂಲು ಮಾಡಿದರೂ ಸಹ ಅಪೆಕ್ಸ್ ಬ್ಯಾಂಕಿಗೆ ಒಂದು ಪೈಸೆ ಸಹ ಕಳಿಸಿಕೊಟ್ಟಿಲ್ಲ. ಹೀಗಿರುವಾಗ ಸರ್ಕಾರದವರು ಸುಮ್ಮನೆ ಕೂತುಕೊಳ್ಳುವುದಕ್ಕಾಗುತ್ತದೆಯೇ ? ಈ ರೀತಿ ಪರಿಸ್ಥಿತಿ ಇರುವಾಗ ಸರ್ಕಾರ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಈಗ ಹಾಕಿರತಕ್ಕಂಹ ಡೈರೆಕ್ಟರುಗಳು ಎಲ್ಲರೂ ಸರ್ಕಾರ ಆಫೀಸರುಗಳು ಆಗಿರುವುದರಿಂದ ಅವರು ಸರ್ಕಾರಕ್ಕೆ ಆಗಾಗ್ಗೆ ರಿಪೋರ್ಟ್ ಕೊಡುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರಿಗೆ ಏನು ವಿಚಾರ ಅದರಲ್ಲಿ ಬೇಕು ಅದನ್ನು ಕೊಡುವುದಕ್ಕೆ ನಾನು ತಯಾರಾಗಿದ್ದೇನೆ.

(Elections to the Taluk Boards in the State).—

ಶ್ರೀ ಎಸ್. ಎಂ. ಕೃಷ್ಣನ್.—ಮಲ್ಲೇಶ್ವರಂ. ಸ್ವಾಮಿ, ಇನ್ನೊಂದು ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಿನ್ನೆಯ ದಿವಸ ಮಾನ್ಯ ಮುಖ್ಯ ಮಂತ್ರಿಯವರು ಈ ಮನೆಯಲ್ಲಿ ತಾಲ್ಲೂಕು ಬೋರ್ಡ್ ಚುನಾವಣೆಯ ಬಗ್ಗೆ ಮಾತನಾಡುತ್ತಾ, ತಕ್ಷಣ ನಾವು ಇಲೆಕ್ಷನ್ ಮಾಡುತ್ತೇವೆ ; ಪೋಸ್ಟ್ ಪೋನ್ ಮಾಡುವ ಪ್ರಶ್ನೆ ಇಲ್ಲವೆಂದು ಹೇಳಿದ್ದರು. ಆದರೆ ಮೇಲ್ಮನೆಯಲ್ಲಿ ಮಾನ್ಯ ಕೆ. ಎಚ್. ಪಾಟೀಲರು ಈ ರೀತಿ ಹೇಳಿದ್ದಾರೆ. It has been reported in the Press that Agricullure

Minister Sri K. H. Patil told the House that the taluk board elections due to be held in the month of November might be postponed by a month or two, in view of the severe brought situation in the State.

SRI D. DEVARAJ URS.—I have also said the same thing. There is no difference. According to him, there might be some kind of contradication, I submit to the House that there is no contradiction in the sense that I have also stated here–a month or two this way or that way. But we are not going to postpone the elections.

SRI B. B. SAYANAK.—But the Reporters have reported like that.

SRI D. DEVARAJ URS.—You go and take Cudgels against the Reporters. I think Mr. C. M. Armugam also was here when I said it.

Papers laid on the Talble.—

SRI A. SHANKARA ALVA —(Minister for Co-operation) Sir. I beg to lay on the table of the House Gazette Notification No. DPC 162 CCB 72 (S. O 1445) dated 11th August 1972 issued under the Mysore Co-operative societies Act 1959.

MADAM SPEAKER —The Notification laid on the table of the House.

CALLING ATTENTION TO A MATTER OF URGENT PUBLIC IMPORTANCE

Re :—Deaths due to consumption of French Polish in Shimoga Town.

SRI B. B. SAYANAK (Belgaum) :—Sir, I call the attention of the Chief Minister to the deaths due to consumption of French Polish in Shimoga

SRI D. DEVARAJ URS (Chief Minister).—I state as follows.—

1. On 20th Jully 1972 the Sub-Inspector of Police, Doddapet Polish Station, Shimoga received intimation from the Medical Officer, Mc Gann. Hospital, Shimoga to the effect that on the same day at different times four persons with history of consumption of French Polish had been adimitted in the hospital and that three of them had died and that the condition of the fourth was serious, The Sub-Inspector immediately visited the hospital and found the persons mentioned below had died,—

1. Chinaiah son of Tarappa, 25 years Cobler residing at Milaghatta
2. Vasudevaiah son of Tumkur Ramaiah, 45 years Municipal Sweeper, Tank Mahalla, Shimoga
3. Venkatesh son of Tadasevadiyar, 55 years. Cooly Lashkar Mohalla, Shimoga

2. The Superintendent of Police also visited the hospital and made enquiries. The fourth person, Thirupal son of Guraiah of Milaghatta also died at 3—00 p.m Enquiries made at the hospital did not reveal any clue about the course of the French Polish which was alleged to have been consumed by the deceased persons. Cases in Shimoga Doddapet Police Station Crime Nos. 92 to 95/72 were registered and investigation was taken up.

3. On 21st July 1972 one person by name Rajamanikyam son of Muniswamy Naidu, 48 years, Cooly, Milaghatta also died and the cause of his death was suspected to be due to consumption of French Polish. A case in crime No. 96/72 was registered and investigation was taken up.

4. On the same day (21st July 1973) one Sadai Wadiyar son af Dharmlingam Mudaliar, 40 years, Bailu Kammarkeri, Shimoga was admitted to the hospital with history of consumption of French Polish. His statement was recorded and it disclosed that he had consumed French Polish on 18th July 1972 in the house of one Syed Ahmad of Lashkar Mohalla, Shimoga. On his statement a case in Crime No. 97/72 under section 32- I P.C. was registered and investigation taken up.

5. Raids were conducted in Shimoga Town under the personal supervision of the Superintendent of Police on 20th July 1972 and 21st July 1972 as a result of which 2 tins containing about 32 litres of French Polish mixture were seized from the house of Syed Ahammad and 24 bottles of denatured sprit were seized from the house of one Adam Pasha of Lashkar Mohalla, Shimoga. In this respect 2 cases under the Excise Act in Shimoga Kote Police Station Crime Nos. 110 and 112/72 have been registered. The Superintendent of Police visited the various localities in the town. made enquiries and advsied the people suitably.

6. The viscera, stomach wash and sampls of French Polish are being sent for chemical analysis. 3 persons namely, Syed Ameer, Adam Pasha and his brother have been arrested and investigation of the cases is in progress. Sadai Wadiyar is progressing in the hospital.

7. The enforcemnt wing of the Excise Department has been strengthened by creating an additional post of Joint Commissioner of Excise and an officer of the status of Deputy Inspector General of Police has been posted to conduct raids all over the State. Further the allotment of de-natured sprit for manufacture of French Polish is being scrutinised to prevent misuse.

8. It has come to the notice of Government that tharo has been considerable misuse in the utilization of denatured spirits released to individuals and firms purporting to produce french

Polish, varnishes and brake fluid and there is considerable evidence to indicate that large quantities of such releases are being used for the purpose of preparation o illicit drinks. Instructions have been issued to the Commissisner of Excise to arrange inspections of all the units which are claiming to be running such industries in order to ensure that the releases of denatured spirits are made only to *bona fide* persons. Pending this examination, the Commissioner of Excise has suspended such releases and it is proposed in future to cut dow the releases to the nearest minimum an only to genuine parties. It is hoped that this measure will help to put down this abuse.

SRI B. B. SAYANAK.—Sir, there are so many cases of French Polish consumption. In Belgaum also four people died in the month of May. I want to bring to the notice of the Chief Minister that I have given an application stating that there are cases of adulteration of liquor even in Belgaum. I suggest that you must take very drastic action against these persons.

SRI D. DEVARAJ URS.—Yes

ಶ್ರೀ ಎಸ್, ಎಂ. ಶೀರನಾಳಿ ಚಂದ್ರುಶೇಖರ.—ಈ ಡೀಲರ್ ಬಗ್ಗೆ ನಾವು ಹಿಂದೆ ಅನೇಕ ಸಲ ದೂರು ಕೊಟ್ಟಿದ್ದರೂ ಫ್ರೆಂಚ್ ಪಾಲಿಷ್ ನ್ಯಾಯ ರೀತಿಯಲ್ಲಿ ವಿತರಣೆ ಮಾಡಿಲ್ಲ, ಇನ್ನು ಅನೇಕರಿಗೆ ಕೊಟ್ಟಿರ ತಕ್ಕ ಲೈಸೆನ್ಸ್ ಸಹ ಕ್ಯಾನ್ಸಲ್ ಮಾಡಿಲ್ಲ. ಆದ್ದರಿಂದ ಈಗಲಾದರೂ ಅವನಿಗ ಕೊಟ್ಟಿರತಕ್ಕ ಆ ಲೈಸನ್ಸನ್ನು ಕ್ಯಾನ್ಸಲ್ ಮಾಡುತ್ತೀರಾ.

ಶ್ರೀ ಡಿ. ದೇವರಾಜ್ ಅರಸ್.—ಆ ಮನುಷ್ಯನನ್ನ ಅರೆಸ್ಟ್ ಮಾಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಡೀಲರ್ ಯಾರೇ ಇರಲಿ, ಅವರಿಗೆ ಲೈಸೆನ್ಸ್ ಕೊಡುವಾಗ ಅವರು ಕಾನೂನುಗಳಿಗನುಸಾರವಾಗಿ ನಡೆದುಕೊಳ್ಳಬೇಕು. ಒಂದುವೇಳೆ ನಿಮ್ಮ ಸ್ನೇಹಿತರೇ ಆ ರೀತಿ ಲೈಸೆನ್ಸ್ ತೆಗೆದುಕೊಂಡು ಹೋದರೆ, ಆಗ ನಿವು ಏನು ಮಾಡುತ್ತೀರಿ? ಇದುವರೆಗೆ ಅವರ ಲೈಸೆನ್ಸ್ ರದ್ದು ಮಾಡಲಿಲ್ಲ, ಅವರನ್ನ ಅರೆಸ್ಟ್ ಮಾಡಿಸುತ್ತೇವೆಂದು ಹೇಳಿದರು. ಅವರನ್ನು ಅರೆಸ್ಟ್ ಮಾಡಿಸಿದ್ದರೂ ಅವರಲ್ಲ ಲೈಸೆನ್ಸ್ ಇರುತ್ತದೆ. ಆದ್ದರಿಂದ ಅವರಲ್ಲಿರತಕ್ಕ ಲೈಸೆನ್ಸನ್ನೂ ಸಹ ರದ್ದು ಮಾಡುತ್ತೀರಾ?

SRI D. DEVARAJ URS.—That will be examined. I cannot say now. They will proceed according to rules. The Law will take its course.

Demands day observed by the state N.G.Os.

ಶ್ರೀ ಕೋಣಂದೂರು ಲಿಂಗಪ್ಪ.—ಇವತ್ತು ನಮ್ಮ ರಾಜ್ಯದಲ್ಲಿ ೩ ಲಕ್ಷ ಜನರು ಸರ್ಕಾರೀ ನೌಕರರು ಅದರಲ್ಲಿಯೂ ಎನ್.ಜಿ.ಒ. ಗಳು ಸರ್ಕಾರದ ನೀತಿಯನ್ನು ಪ್ರತಿಭಟಿಸಿ ಪ್ರತಿಭಟನಾ ದಿನಾಚರಣೆಯನ್ನು ಆಚರಿಸುತ್ತಿದ್ದಾರೆ. ಅವರ ಬೇಡಿಕೆಗಳನ್ನೆಲ್ಲಾ ಈ ಸರ್ಕಾರದವರು ಇನ್ನೂ ಪೂರ್ತಿ ಈಡೇರಿಸಿಲ್ಲ. ನಮ್ಮ ರಾಜ್ಯದಲ್ಲಿ ಎನ್.ಜಿ.ಒ. ಗಳು ನಿಜವಾಗಿ ನಿರ್ಜೀವಿಗಳಾಗಿದ್ದಾರೆ. ಇವತ್ತು ದಿನೇದಿನೇ ಏರುತ್ತಿರುವ ಆಹಾರ ಧಾನ್ಯಗಳ ಹಾಗೂ ಅವಶ್ಯಕ ವಸ್ತುಗಳ ಬೆಲೆ ಗಗನಕ್ಕೆ ಮುಟ್ಟುತ್ತಿದೆ. ಇವತ್ತು ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿ ಇರತಕ್ಕ ಸಂಬಳ ಸಾರಿಗೆಗೂ, ಕೇಂದ್ರ ಸರ್ಕಾರದ ನೌಕರರಿಗೂ ಇರತಕ್ಕ ಸಂಬಳ ಸಾರಿಗೆಗೂ ನಮ್ಮ ರಾಜ್ಯದಲ್ಲಿರತಕ್ಕ ನೌಕರರಿಗೂ ಇರತಕ್ಕ ಸಂಬಳ ಸಾರಿಗೆಗಳನ್ನು ಹೋಲಿಸಿ ನೋಡಿದರೆ, ಬಹಳವಾಗಿ ವ್ಯತ್ಯಾಸವಿದೆ. ಇದರಿಂದಾಗಿ ನಮ್ಮ ರಾಜ್ಯದ ನೌಕರರು ಪಡುಬಾರದ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ.

ಜೊತೆಯಲ್ಲಿ ಒಂದು ಕಡೆ ಒಬ್ಬರು ಕೇಂದ್ರ ಸರ್ಕಾರದ ನೌಕರ, ಇನ್ನೊಂದು ಕಡೆ ರಾಜ್ಯ ಸರ್ಕಾರದ ನೌಕರ ಕೆಲಸ ಮಾಡುತ್ತಿರುವಾಗ, ನಮ್ಮ ಮೈಸೂರು ರಾಜ್ಯದ ಎನ್.ಜಿ.ಒ ಗಳನ್ನು ಅಸ್ಪೃಶ್ಯರಂತೆ ಕಾಣುವುದು ಸರಿಯಲ್ಲ ಅವರು ಉತ್ತಮರೆಂದು ಕಾಣುವುದೂ ಸರಿಯಲ್ಲ. ದ್ವಿಮುಖ ನೀತಿ ನಿಮ್ಮದು ಸರಿಯಲ್ಲ. ಇವತ್ತು ಎನ್.ಜಿ.ಒ. ಗಳ ಜೀವನ ದುರ್ಭರವಾಗಿದೆ. ದಿನೇ ದಿನೇ ಏರುತ್ತಿರುವ ಬೆಲೆಗಳ ಕಾರಣದಿಂದ ಬೆಲೆಗಳ ಹತೋಟಿಯಲ್ಲಿ ಇಡದೇ ಇರತಕ್ಕ ಲೋಪ ಒಂದು ಕಡೆ ಇದೆ. ಅದನ್ನು ಹತೋಟಿಯಲ್ಲಿಟ್ಟಿದ್ದರೆ ಒಂದು ಪರಿಸ್ಥಿತಿ ಒಳ್ಳೆಯದಾಗುತ್ತಿತ್ತು. ಆದ್ದರಿಂದ ನಮ್ಮ ಎನ್.ಜಿ.ಒ. ಗಳಿಗೆ ಹೆಚ್ಚಿನ ಭತ್ಯವನ್ನು ಇತರ ಕಡೆಗಳಲ್ಲಿ ಹಾಗೂ ಕೇಂದ್ರ ಸರ್ಕಾರದಲ್ಲಿ ಕೊಡುತ್ತಿರುವ ಹಾಗೆ ಇದುವರೆಗೂ ಕೊಡದೇ ಇರುವುದರಿಂದ ಅವರ ಜೀವನ ದುರ್ಭರವಾಗಿದೆ. ಎನ್.ಜಿ.ಒ. ಗಳು ನಿಜವಾಗಿ ನಿರ್ಜೀವಿಗಳಾಗಿದ್ದಾರೆ. ಆದ್ದರಿಂದ ನಮ್ಮ ರಾಜ್ಯ ಸರ್ಕಾರದ ಎನ್.ಜಿ.ಒ. ಗಳ ಸಂಬಳ ಸಾರಿಗೆಗಳನ್ನು ಕೇಂದ್ರ ಸರ್ಕಾರದ ನೌಕರರ ಮಟ್ಟಕ್ಕೆ ಏರಿಸಬೇಕು.

ಶ್ರೀ ಡಿ. ದೇವರಾಜ್ ಅರಸ್.—ಇದು ಯಾವ ರೂಲಿಗೆ ಸಂಬಂಧಪಟ್ಟದ್ದು, ಯಾವ ಸಬ್ಜೆಕ್ಟ್ ಏನು ಮಾತನಾಡುತ್ತಾರೋ ನನಗೆ ಅರ್ಥವಾಗುತ್ತಾ ಇಲ್ಲ. ಜೀರೋ ಅವರ್ ಕೌನ್ಸಿಲ್‌ನಲ್ಲಿ ೫ ಗಂಟೆಯವರೆಗೂ ನಡೆಯಿತು. ಕೌನ್ಸಿಲ್‌ನ್ನು ಅಬಾಲಿಷ್ ಮಾಡಬೇಕೆಂದು ಬೇರೆ ಹೇಳುತ್ತಿದ್ದಾರೆ. ದಿನವೆಲ್ಲಾ ಒಂದೊಂದು ಸಾರಿ ಜೀರೋ ಅವರ್ ಆಗಿರಬಹುದು. I am not ready to answer this question right now.

SRI M. S. KRISHNAN.—On previous occation. Government had said that there is no money and therefore this question cannot be considered.

SRI D. DEVARAJ URS.—I may have a different answer now. Please do not assume like that.

ATTENDANCE AT THE FIRST GRADE COLLEGE K.G.F.

† SRI C. M. ARMUGHAM (K.G.F.).—I have raised this issue about the Governing Council of the First Grade College, K.G.F., depriving the students of attending the College for the last one month. The student's grievance is that the Principal of the College is there as temporary Principal for the last ten years, in addition to being the Principal of the K.G.F. Mining School. I do not know how the Government permitted a part-time Principal for the last ten years for the College. Further there is quasi-Government management. The Government of India, the Mysore Government and the Mining Board have all a hand in its management. The students' demand is that they need a permanent Principal. The Government should consider the question of taking over the College. The Hon'ble Minister of Education had kindly stated that he would send for the Director of Collegiate Education and the concerned Officers to look into the matter. This being the last day of the present Session, I would request the Education Minister through you, to make a statement on this matter.

SRI A. R. BADARINARAYAN (Minister for Education).—Madam, I have no official notice of this matter. Even then, since this is the last day and the hon. Member is anxious to know the action taken I shall reply.

SRI M. S. KRISHNAN.—I have sent a written notice. He must have got that notice. How does he say that he is not aware of the notice?

SRI A. R. BADARINARAYAN.—Now the College is being managed by a Governing Council. The Governing Council has closed the College because there has been difference of opinion between the Lecturers, students and the Governing Council. Now I have asked the Deputy Commissioner to convene a meeting of the Governing Council immediately to-day and see that the College is re-opened, and if it is not re-opened, suitable action will be taken against the Council. Otherwise Government cannot interfere. Government goes to the extent of providing necessary funds and also giving recongnition and if they do not reopen the College, I think we will have to take action against them. But I believe that the Governing Council, which is presided over by the Deputy Commissioner, is going to decide about the reopening of the College.

SRI C. M. ARUMUGHAM.—Have Government taken action against the concerned official or Secretary who permitted this Principal to work as part-time Principal for these ten years? Apart from the Governing Council, is there any rule in the Education Department to say that the Pricipal and Director of the Mining School can also be a part-time Principal? Have Government enquired into this and taken action against the concerned officer?

SRI M. S. KRISHNAN.—The students have raised the question that this institution must be taken over by the Government. How do the Government alleviate the grievances of the students? What steps have Government taken about the representation of the Government?

SRI A. R BADARINARAYAN.—In the first place, we are anxious to see that College reopens and the Chairman of the Governing Council has been suitably instructed. Now regarding the taking over of the College to the Government, there is a request of the students as well as others. But it is a matter for Government to consider because it involves financial commitment to a very great extent.

ಶ್ರೀ ಸಿ. ಬೈರೇಗೌಡ (ವೇಮಗಲ್).—ಅಧ್ಯಕ್ಷರೇ ಮಾನ್ಯ ವಿದ್ಯಾ ಮಂತ್ರಿಗಳು ನಮ್ಮ ಕೋಲಾರಕ್ಕೆ ಒಂದು ಜೂನಿಯರ್ ಕಾಲೇಜನ್ನು ಕೊಡುವುದಾಗಿ ವಾಗ್ದಾನಮಾಡಿದ್ದರು. ಅವರ ವಾಗ್ದಾನ ಇನ್ನೂ ಕೈಗೂಡಲಿಲ್ಲ. ಅವರು ಅಲ್ಲಿಗೆ ಯಾವಾಗ ಅದನ್ನು ಕೊಡುತ್ತಾರೆ ಎಂಬುದನ್ನು ಅವರು ದಯವಿಟ್ಟು ತಿಳಿಸಬೇಕು. ಅಲ್ಲಿ ಈಗ ಸುಮಾರು ಎರಡುಸಾವಿರ ಹುಡುಗರು ಕುಳಿತುಕೊಳ್ಳುದಕ್ಕೆ ಸ್ಥಳವಿಲ್ಲದೆ, ಬೆಂಚಿ, ಕುರ್ಚಿಗಳಿಲ್ಲದೆ ಕುರಿಗಳನ್ನು ದೊಡ್ಡಿಗೆ ಕೂಡಿದಹಾಗೆ ಅಲ್ಲಿ ಅವರನ್ನು ಇಡಲಾಗಿದೆ. ಇನ್ನು ಒಂದು ವಾರದಲ್ಲಿ ಅಲ್ಲಿಗೆ ಒಂದು ಕಾಲೇಜನ್ನ ತೆರೆಯುವುದಕ್ಕೆ ಮತ್ತು ಒಂದು ಕಟ್ಟಡಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

SRI A. R. BADARINARAYAN.—The hon. Member has taken me altogether by surprise today. If the matter is raised suddenly. I am not prepared for it. I submit, Madam, one cannot expect a reply to be given immediately.

AFFAIRS AT THE BHADRAVATHI IRON AND STEEL LTD.

† ಶ್ರೀ ಎಸ್. ಬಂಗಾರಪ್ಪ (ಸೊರಬ).— ನಮ್ಮ ಅಧಿವೇಶನ ಈ ದಿವಸ ಮುಕ್ತಾಯವಾಗುತ್ತದೆ. ಇನ್ನು ಇದು ಮತ್ತೆ ಸೇರಬೇಕಾಗಿದ್ದರೆ ಸೆಪ್ಟೆಂಬರ್ ಕೊನೆಯಲ್ಲೋ ಅಥವಾ ನವೆಂಬರ್ ಮಧ್ಯದಲ್ಲೋ ಸೇರಬಹುದು. ಆದರೆ ನಮ್ಮ ಕನ್ನಡ ರಾಜ್ಯೋತ್ಸವ ನವೆಂಬರ್ ಒಂದನೆ ತಾರೀಖು ಬೀಳುತ್ತದೆ. ಆ ದಿವಸ ರಿಜರ್ವ್ ಬ್ಯಾಂಕಿಗೂ ಕೂಡ ಜನರಲ್ ಹಾಲಿಡೆ ಇಲ್ಲ. ಅಲ್ಲಿ ಕೆಲಸ ಮಾಡತಕ್ಕ ಸುಮಾರು ೫೦೦ ೬೦೦ ಜನ ಕನ್ನಡಿಗರಿದ್ದಾರೆ. ಅವರು ಕೂಡ ನಮ್ಮ ಕನ್ನಡ ಹಬ್ಬವನ್ನು ಆಚರಿಸಲು ಅನುಕೂಲವಾಗುವಂತೆ ಅವರಿಗೆ ರಜಾ ಕೊಡತಕ್ಕ ಒಂದು ಆಜ್ಞೆಯನ್ನು ಅವರು ಹೊರಡಿಸುವಂತೆ ಮಾನ್ಯ ಮುಖ್ಯ ಮಂತ್ರಿಗಳು ಪ್ರಯತ್ನ ಮಾಡಬೇಕಾಗಿದೆ. ಅಲ್ಲಿ ಕನ್ನಡಿಗರಲ್ಲದೆ ಬೇರೆ ರಾಜ್ಯಗಳ ಜನರೂ ಇದ್ದಾರೆ ಅವರೆಲ್ಲರಿಗೂ ಅವರವರ ರಾಜ್ಯೋತ್ಸವದ ದಿನ ಅವರಿಗೆ ರಜವನ್ನು ಕೊಡುತ್ತಿದ್ದಾರೆ. ಕನ್ನಡಿಗರಿಗೆ ಮಾತ್ರ ಕೊಡುತ್ತಿಲ್ಲ. ಒರಿಸ್ಸಾದವರಿಗೆ ಏಪ್ರಿಲ್ ಒಂದನೇ ತಾರೀಖು ರಜಾ ಕೊಡುತ್ತಿದ್ದಾರೆ ಮಹಾರಾಷ್ಟ್ರದವರಿಗೆ ಮೇ ಒಂದನೇ ತಾರೀಖು ರಜಾ ಕೊಡುತ್ತಿದ್ದಾರೆ ಆಂಧ್ರದವರಿಗೆ ನವೆಂಬರ್ ಒಂದನೇ ತಾರೀಖು ಕೊಡುತ್ತಿದ್ದಾರೆ. ಆದರೆ ಅದೇ ರೀತಿ ಅವರು ನಮ್ಮ ಕನ್ನಡಿಗರಿಗೂ ಏಕೆ ಕನ್ನಡ ರಾಜ್ಯೋತ್ಸವದ ದಿನ ರಜಾ ಕೊಡಬಾರದು? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನ ಕೊಡಬೇಕೆಂದು ನನ್ನ ಪ್ರಾರ್ಥನೆ

ಇನ್ನೊಂದು ಮಾನ್ಯ ಕೈಗಾರಿಕಾ ಮಂತ್ರಿಗಳೂ ಇದ್ದಾರೆ. ಭದ್ರಾವತಿ ಐರನ್ ಅಂಡ್ ಸ್ಟೀಲ್ ವ್ಯವಹಾರದಲ್ಲಿ ಒಂದು ಕಾಲ್ ಅಟೆನ್ಷನ್ ನೋಟೀಸನ್ನು ಕೊಟ್ಟಿದ್ದೆ ಆಗ ಅವರು ಒಂದು ಸಮಗ್ರ ಹೇಳಿಕೆ ಕೊಡುವುದಾಗಿ ತಿಳಿಸಿದ್ದರು. ಅದರಬಗ್ಗೆ ಅಜೆಂಡಾದಲ್ಲಿ ಏನೂ ಇಲ್ಲ ಅದನ್ನು ಅವರು ಯಾವಾಗ ಕೊಡುತ್ತಾರೆ ತಿಳಿಸುವುದು.

೧೧—೦೦ ಎ. ಎಂ.

ಶ್ರೀ ಡಿ. ದೇವರಾಜ ಅರಸ್.—ಎರಡನೆಯ ವಿಷಯ ತಿಳಿಸಲು ಸಂಬಂಧಪಟ್ಟ ಮಂತ್ರಿಗಳು ಹಾಜರಿಲ್ಲ. ಮೊದಲನೆಯ ವಿಷಯ ಯೋಚನೆ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಬೇರೆ ರಾಜ್ಯಗಳಲ್ಲಿ ಅಂದು ರಜ ಘೋಷಿಸಿದ್ದಾರೆ. ಈಗ ರಾಜ್ಯಕ್ಕೆ ಕರ್ನಾಟಕವೆಂದು ಹೆಸರಿಡಲಾಗಿದೆ. ನವೆಂಬರ್ ಒಂದರಂದು ಕನ್ನಡ ರಾಜ್ಯೋತ್ಸವದ ದಿನವನ್ನು ಆಚರಿಸಲಾಗುವುದು. ಬೇರೆ ರಾಜ್ಯಗಳವರು ಅಂಥ ಸಂದರ್ಭದಲ್ಲಿ ರಜ ಕೊಡುವಾಗ ನಮ್ಮವರಿಗೇಕೆ ಅಂದು ಅವರು ರಜಾ ಕೊಡಬಾರದು ?

AFFAIRS AT THE NATIONAL INSTITUTE OF SOCIAL SCIENCE

† ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರ ಅನುಮತಿಯನ್ನು ಪಡೆದು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್ ಬಗ್ಗೆ ಒಂದೆರಡು ವಿಚಾರ ತಿಳಿಸಬೇಕಾಗಿದೆ. ಹಿಂದೆ ಇದರ ವಿಚಾರವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ ಮುಖ್ಯ ಮಂತ್ರಿಗಳು ವಿವರಣೆ ಕೊಟ್ಟರು. ನೀವು ಕೂಡ ಈ ಸಂಬಂಧದಲ್ಲಿರುವ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಮಾಡಿ ಅಡ್ಡಿಯಿಲ್ಲ ಎಂದು ಹೇಳಿದರು. ಇದಾದಮೇಲೆ ನಾನು ಸಂಬಂಧಪಟ್ಟ ಲೇಬರ್ ಮಿನಿಸ್ಟರ್‌ರವರನ್ನು ಭೇಟಿ ಮಾಡಲು ಪ್ರಯತ್ನ ಮಾಡಿದೆ. ಅದಕ್ಕೆ ಮಾದಪ್ಪಗೌಡರು ತೀರಿಹೋದ ದಿನ, ಕಾಲ ನಿಗದಿ ಮಾಡಿತ್ತು, ನಾನೂ ಕಣ್ಣನ್‌ರವರೂ ಹೋಗಿ ನಿರ್ಣಯ ತೆಗೆದುಕೊಳ್ಳಲು ಪ್ರಯತ್ನಮಾಡೋಣ ಎಂದಿದ್ದೆವು. ಅಂದು ಮಾದಪ್ಪಗೌಡರು ಕಾಲವಾದುದರಿಂದ ಅವಕಾಶವಾಗಲಿಲ್ಲ. ಮತ್ತೆ ಎರಡು ಮೂರು ಸಲ ಲೇಬರ್ ಮಿನಿಸ್ಟರ್‌ರವರಿಗೆ ಹೇಳಿದೆ, ಅವರಿಗೆ ಓಡಾಟ ಮತ್ತು ಕೆಲಸದ ಒತ್ತಡ ಜಾಸ್ತಿ ಇರಬೇಕು, ಅವಕಾಶ ದೊರೆಯಲಿಲ್ಲ. ಇದರ ಬಗ್ಗೆ ಮುಖ್ಯ ಮಂತ್ರಿಗಳಿಗೆ ಒಂದು ವಿಚಾರ ತಿಳಿಸಬೇಕಾಗಿದೆ.

ಹಿಂದೆ ಸರಕಾರ ಈ ಸಂಸ್ಥೆಗೆ ೫೦ ಸಾವಿರ, ೨೦ ಸಾವಿರ ಹೀಗೆಲ್ಲಾ ಹಣ ಕೊಟ್ಟಿದೆ. ಅಲ್ಲಿ ಮ್ಯಾನೇಜ್‌ಮೆಂಟ್ ಎಲ್ಲಿಯವರೆಗೆ ಹೋಗಿದೆ ಎಂಬುದನ್ನು ಗಮನಕ್ಕೆ ತರಬೇಕೆಂಬುದು ನನ್ನ ಇಚ್ಛೆಯಾಗಿದೆ. ಮುಖ್ಯಮಂತ್ರಿಗಳು ಅದರ ಅಧ್ಯಕ್ಷರಾಗಿದ್ದು ನಂತರ ರಾಜೀನಾಮೆ ಕೊಟ್ಟಮೇಲೆ ಆಗಿರುವುದು. ಜೂನ್ ಎರಡರಂದು ಒಂದು ನಿರ್ಣಯ ಮಾಡಿದ್ದಾರೆ. ಒಬ್ಬ ಕಾರ್ಯದರ್ಶಿಗಳು ರಾಜೀನಾಮೆ

ಕೊಟ್ಟಿದ್ದಾರೆ. ಡೈರೆಕ್ಟರಿಗೆ ಒಂದು ಸಾವಿರ ರೂಪಾಯಿ ಸಂಬಳ ಕೊಡುವುದಕ್ಕಾಗುವುದಿಲ್ಲ, ಹುಡುಗರನ್ನು ಸೇರಿಸಿಕೊಂಡು ರಾಜಕೀಯ ಮಾಡುವರು ಎಂದು ಹೇಳುತ್ತಿದ್ದರು. ಜೂನ್ ಎರಡರಂದು ನಿರ್ಣಯ ವಾಗಿರುವ ಪ್ರಕಾರ ಸೆಕ್ರೆಟರಿಗಳಿಗೆ ೫೦೦ ರೂಪಾಯಿ ಸಂಬಳ ಕೊಡಬೇಕು.

> "This meeting further resolves that the Secretary S. Prasad who has been holding this office since July 1966 be paid the above remuneration with retrospeetive effect from the date."

೧೯೬೬ ರಿಂದ ಸೆಕ್ರೆಟರಿಗಳಿಗೆ ೫೦೦ ರೂಪಾಯಿ ಪ್ರಕಾರ ಕೊಡಬೇಕು ಎಂದು ನಿರ್ಣಯ ಮಾಡಿದ್ದಾರೆ. ಇಂದು ಜನರಲ್ ಬಾಡಿಯಲ್ಲಿ ತೀರ್ಮಾನವಾಗಿದೆ. ಇಂದು ಆರ್ಟಿಕಲ್ ಪ್ರಕಾರ ಅಥವ ನಿಯಮದ ಪ್ರಕಾರ ತೀರ್ಮಾನಮಾಡಲು ಅಧಿಕಾರವಿದೆ. ಆದರೆ ೬ ವರ್ಷ ಹಿಂದಿನಿಂದ ೫೦೦ ರೂಪಾಯಿಗಳ ಪ್ರಕಾರ ಸೆಕ್ರೆಟರಿಗೆ ಕೊಡಲು ಯಾವ ಇನ್‌ಸ್ಟಿಟ್ಯೂಷನ್ನಿನಲ್ಲಿ ಹಣವಿಲ್ಲ, ಅಲ್ಲಿ ಹಣದ ಕೊರತೆಯಿದೆ. ಹಾಗಿರುವಾಗ ೫೦೦ ರೂಪಾಯಿ ಪ್ರಕಾರ ಪ್ರತಿ ತಿಂಗಳೂ ಕೊಡುವಂತೆ ನಿರ್ಣಯ ಮಾಡಿದ್ದಾರೆ. ಎರಡನೆಯದಾಗಿ ಆಡಿಟರಿಗೆ ೨೫೦ ರೂಪಾಯಿ ರೆಮ್ಯೂನರೇಷನ್ ಕೊಡಬೇಕು ಎಂದು ತೀರ್ಮಾನ ಮಾಡಿದ್ದಾರೆ. ಸಿಟಿಂಗ್ ಫೀಜು ೬ ವರ್ಷದಿಂದ ೧೦ ರೂಪಾಯಿ ಪ್ರಕಾರ ಡ್ರಾ ಮಾಡಬೇಕೆಂದಿದ್ದಾರೆ. ಅವ್ಯವಹಾರ ನಡೆಯುತ್ತಿದೆ. ಅವ್ಯವಹಾರಕ್ಕೆ ಅವಕಾಶವಿರಬಾರದು. ಹಿಂದೆ ಸಂಬಳ ಜಾಸ್ತಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದೆ. ಇದು ಇನ್‌ಸ್ಟಿಟ್ಯೂಷನ್ನಿಗೆ ಸಂಬಂಧಪಟ್ಟ ವಿಷಯ. ಎಜಿಟೇಷನ್ ಮಾಡಿದ್ದರಿಂದ ವಿದ್ಯಾರ್ಥಿಗಳನ್ನು ಡಿಬಾರ್ ಮಾಡಿದ್ದಾರೆ. ಈ ವಿಚಾರದಲ್ಲಿ ಪ್ರವೇಶಮಾಡಿ ಸಮಸ್ಯೆ ಬಗೆಹರಿಸೋಣವೆಂದು ನಾನು ನಾಲ್ಕೈದು ಸಲ ಪ್ರಯತ್ನಪಟ್ಟೆ, ಬೇಕಾದವರು ಸಿಕ್ಕಲಿಲ್ಲ, ಸಾಧ್ಯವಾಗಲಿಲ್ಲ. ಇಂದು ಇನ್‌ಟ್ಯೂಷನ್ನಿಗೆ ಹುಡುಗರು ಹೋಗಬಾರದೆಂದು ನೋಟೀಸ್ ಹಾಕಿದ್ದಾರೆ.

> "Students not to enter into the premises of the institute."

ಇದನ್ನು ತಿಳಿದು ಸರಕಾರದವರು ಈ ಸಂಸ್ಥೆಯನ್ನು ಯೂನಿವರ್ಸಿಟಿಗೆ ಹ್ಯಾಂಡೋವರ್ ಮಾಡ ಬೇಕೆಂದಿರುವರೆಂದು ತಿಳಿದುಬಂದಿದೆ. ಇದರ ಅಸೆಟ್ಸ್ ಮತ್ತು ಲಯಬಲಟೀಸ್ ತಿಳಿಸಬೇಕೆಂದು ಹೇಳಿದ್ದಾರೆ. ಇಂದಿನ ಪರಿಸ್ಥಿತಿ ನೋಡಿದರೆ ಆರೇಳು ವರ್ಷಗಳ ಬಾಕಿ ಕೊಡುವಾಗ ಲಯಬಲಟೀಸ್ ಹೆಚ್ಚಾಗಿ ತೋರಿಸಿ ಸರಕಾರಕ್ಕೆ ಕಷ್ಟವಾಗಬಹುದೆಂದು ಕಂಡುಬರುವುದು. ಇದು ಒಳ್ಳೆಯ ಇನ್‌ಸ್ಟಿಟ್ಯೂಷನ್, ಜನರಿಗೆ ಇದರಿಂದ ಸಹಾಯವಾಗುವುದು. ಕೊಡುವ ಟ್ರೈನಿಂಗ್ ಒಳ್ಳೆಯ ರೀತಿಯಲ್ಲಿದೆ ಎಂದು ಹೇಳುವರು. ಆದರೆ ಲಯಬಲಟೀಸ್ ಹೆಚ್ಚಾಗಿ ತೋರಿಸಿ ಇಂದು ಸರಕಾರ ವಹಿಸಿಕೊಳ್ಳಲು ಅಡಚಣೆ ಯಾಗುವ ರೀತಿ ಮಾಡಿದ್ದಾರೆಂಬ ಭಾವನೆಯಿದೆ. ಇದರ ಬಗ್ಗೆ ಸರಿಯಾಗಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಜೊತೆಗೆ ಹುಡುಗರನ್ನು ಡಿಬಾರ್ ಮಾಡಿದ್ದಾರೆ. ಆದರಿಂದ ಅವರು ಹೋಗಲು ಆತಂಕವಾಗಿದೆ. ಎಜಿಟೇಟ್ ಮಾಡಿದರೆಂಬ ಅಪರಾಧಕ್ಕಾಗಿ ಹೀಗೆ ಮಾಡಿದ್ದಾರೆ. ಇದನ್ನು ದೊಡ್ಡ ಅಪರಾಧವೆಂದು ಪರಿಗಣಿಸಬಾರದು ಡೈರೆಕ್ಟರನ್ನು ಮತ್ತೆ ನೇಮಕಮಾಡುವುದನ್ನು ಆರ್ಥಿಕ ಪರಿಸ್ಥಿತಿ ನೋಡಿ ಸರಕಾರ ಸೂಕ್ತ ಕ್ರಮ ಈ ವಿಚಾರದಲ್ಲಿ ಕೈಕೊಳ್ಳಬಹುದು. ಇದನ್ನು ಪುನರ್ವಿಮರ್ಶೆ ಮಾಡ ಬೇಕು. ಸರಕಾರದ ಹಿತದೃಷ್ಟಿಯಿಂದ ಗ್ರಾಂಟು ಕೊಟ್ಟಿರುವುದರಿಂದ ಈ ವಿಚಾರದಲ್ಲಿ ಹೆಚ್ಚು ಗಮನ ಕೊಟ್ಟು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಸರಕಾರ ವಹಿಸಿಕೊಳ್ಳುವಾಗ ಅನಾವಶ್ಯಕವಾಗಿ ಲಯಬಲ ಟೀಸ್ ಹೆಚ್ಚಾಗಲು ಅವಕಾಶ ಕೊಡಬಾರದು. ಈ ಇನ್‌ಸ್ಟಿಟ್ಯೂಷನ್ನನ್ನು ಸರಕಾರ ತೆಗೆದುಕೊಂಡು ಯೂನಿವರ್ಸಿಟಿಗೆ ಕೊಡುವಾಗ ಮಕ್ಕಳಿಗೆ ರಿಲೀಫ್ ಕೊಡಲು ಏರ್ಪಾಡುಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ದೇವೇಗೌಡರು ಹೇಳಿರುವುದನ್ನು ನಾನು ಪುನರುಚ್ಚಾರ ಮಾಡುವುದಿಲ್ಲ. ಮುಖ್ಯಮಂತ್ರಿಗಳಿಗೆ ಈ ಇನ್‌ಸ್ಟಿಟ್ಯೂಷನ್ ವಿಚಾರ ಹೆಚ್ಚಾಗಿ ಗೊತ್ತಿದೆ. ಇದು ಚೆನ್ನಾಗಿ ಬೆಳೆಯಬೇಕು ಎಂಬುದು ನಮ್ಮ ಉದ್ದೇಶ ಲೇಬರ್ ಆಫೀಸರುಗಳು ಮುಂತಾದವರನ್ನು ಅಲ್ಲಿ ತಯಾರು ಮಾಡುವರು. ಇದರ ಬಗ್ಗೆ ಆಸಕ್ತಿ ಇದೆ. ಡೈರೆಕ್ಟರ ಬಗ್ಗೆ ಹೋದ ಸಲ ಕೆಲವು ವಿಷಯ ಹೇಳಿದ್ದಾರೆ. ಅದನ್ನು ನಾನು ನೋಡಿದೆ. ಹಣಕಾಸಿನ ತೊಂದರೆಯಿತ್ತೆಂದು ತಿಳಿಸಿದ್ದಾರೆ. ಇಂದು ಒಂದು ಸಾವಿರ ರೂಪಾಯಿಗಳ ಸಂಬಳ ಕೇಳಿದ್ದರಿಂದ ಹಣಕಾಸಿನ ತೊಂದರೆಯಿದ್ದುದರಿಂದ ಮನೆಗೆ ಕಳಿಸಿದರು. ಹೀಗೆ ಹೇಳಿದ್ದಾರೆ, ಇದನ್ನು ವಿಚಾರಮಾಡಬಹುದು. ಈಗ ೧೯೬೬ ರಿಂದ ಸಂಬಳ ನಿಗದಿಮಾಡಿ ಆರ್ಡರು ಮಾಡಲಾಗಿದೆ.

ಶ್ರೀ ಡಿ. ದೇವರಾಜ್ ಅರಸ್:—ಪ್ರೂತರ್ಾ ಕೊಟ್ಟಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್ :—ಬೇಕಾದರೆ ಇನ್‌ವೆಸ್ಟಿಗೇಟ್ ಮಾಡಿಸಿ. ಮೂರನೇದು ಈ ಇನ್ಸ್ಟಿಟ್ಯೂಟ್‌ಗೆ ಫೈನಾನ್ಸಿಯಲ್ ಕ್ರೈಸಿಸ್ ಬಂದಾಗ Director himself offered to the Institute that he is prepared to work on a token salary of Re. 1/ That is on record. In the circumstances the impression should not be there that he wanted to grab Rs 1000 and that is why he was terminated. On the other hand he was prepared to work on salary of Re. 1 but you have terminated him. That he was efficient person is borne out by other things he has done.

ಶ್ರೀ ಡಿ. ದೇವರಾಜ್ ಅರಸ್:—ತಮಗೆ ಆ ಹುಡುಗರ ಮೇಲೆ ಎಷ್ಟು ಅಭಿಮಾನ ಇದೆಯೋ ನನಗೂ ಅಷ್ಟೇ ಅಭಿಮಾನ ಇದೆ. ನಾನು ಹೇಳಿದುದನ್ನೇ ಶ್ರೀಮಾನ್ ದೇವೇಗೌಡರು ತಿಳಿಸಿದ್ದಾರೆ. ಇತ್ತೀಚೆಗೆ ನಡೆದಂಥ ಘಟನೆ ಏನೂ ಎಂದರೆ ಉಪವಾಸ ಮುಷ್ಕರ ನಡೆಯುತ್ತಿದ್ದ ಸ್ಥಳಕ್ಕೆ ನಾನೂ ಹೋಗಿ ನೋಡಿಕೊಂಡು ಬಂದಿದ್ದೇನೆ. ನಾನೂ ಕೂಡ ಹೇಳಿದೆ, ನೀವೆಲ್ಲಾ ಮನೆಗೆ ಹೋಗಿ ನಿಮ್ಮನ್ನು ಡಿಬಾರ್ ಮಾಡಿದ್ದರೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ. ಈ ರೀತಿ ಮುಷ್ಕರ ನಡೆಸುವುದು ತರವಲ್ಲ, ಇದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡೋಣ ಎಂದು ಹೀಗೆಲ್ಲಾ ಹೇಳಿದಮೇಲೆ ನನಗೂ ಕೂಡ ಅವರು ಇದನ್ನು ನಿಲ್ಲಿಸಬಹುದು ಎನ್ನುವ ನಂಬಿಕೆ ಬಂತು. ಆದರೆ ಆಮೇಲೆ ನೋಡಿದರೆ ಅವರು ಮುಷ್ಕರ ನಿಲ್ಲಿಸಲೇ ಇಲ್ಲ. ಇದನ್ನೆಲ್ಲಾ ತಾವು ಆಲೋಚನೆ ಮಾಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ :—ತಾವು ಒಂದು ಪೋರ್‌ಷನ್ ಹೇಳಿದಿರಿ, ಇನ್ನೊಂದು ಕಡೆ ಪೋರ್‌ಷನ್ ಹೇಳಲಿಲ್ಲಾ, ಎಲ್ಲವನ್ನು ಹೇಳಿಬಿಟ್ಟರೆ ಅನುಕೂಲವಾಗುತ್ತದೆ.

SRI D. DEVARAJ URS:—If you also begin to narrate everything that happens, then it is easy for the Government ಆ ಮೇಲೆ ಜನರಲ್ ಕಾರಿಯಪ್ಪನವರು ಹೋಗಿದ್ದರು. ಹುಡುಗರಿಗೆ ಹೋಗಿ ಹೇಳಿದರು. ನಿಮಗೆ ಡಿಬಾರ್ ಮಾಡಿದ್ದರೂ ಕೂಡ ಅವರಲ್ಲಿ ನಿಮ್ಮ ಪರವಾಗಿ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ, ನೀವು ಶಾಲೆಗೆ ಹೋಗಿ, ಮುಷ್ಕರ ನಿಲ್ಲಿಸಿ ಮನೆಗೆ ಹೋಗಿ, ನಿಮ್ಮನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ ಎಂದು ಹೇಳಿದರು. ಇಷ್ಟು ಹೇಳಿದರೂ ಅವರು ಕೇಳಲಿಲ್ಲ ಎಂದರೆ ತಾವೇ ಹೇಳಿ ಏನು ಮಾಡಬಹುದು ಎಂದು. ಈ ೫—೬ ಹುಡುಗರು ಏನು ಮಾಡುತ್ತಿದ್ದಾರೆ ಎಂದರೆ ಬಾಕಿ ಹುಡುಗರು ಕಾಲೇಜಿಗೆ ಹೋಗಿ ಬರಬೇಕು ಎಂದರೆ ಅವರನ್ನು ಹೆದರಿಸುತ್ತಾರೆ, ಅಡ್ಡಿ ಮಾಡುತ್ತಾರೆ, ಆ ಹುಡುಗರ ಮೇಲೆ ದಬಾಯಿಸಿ ಗದಾಪ್ರಹಾರ ಮಾಡುತ್ತಾರೆ ಹತ್ತಾರು ಸಾರಿ ಹೇಳಿ ಕಳುಹಿಸಿದರೂ ಕೂಡ ತಮ್ಮ ಮುಷ್ಟಿಯನ್ನೇ ಹಿಡಿದುಕೊಂಡರೆ ಏನು ಮಾಡಬೇಕು ತಾವೇ ಹೇಳಿ ? Please place yourself in my position.

ಇದರಲ್ಲಿ ಇನ್ನೊಂದು ವಿಷಯ ಏನೆಂದರೆ ಜನರಲ್ ಕಾರಿಯಪ್ಪನವರು he volunteered to negotiate, he stayed for three days, he met Mr. Prasad, Mr. Sridharan and President of the Board of Management and Students. ಅವರು ಗೋಡೆ ಮೇಲೆ ಅಶ್ಲೀಲವಾಗಿ ಬರೆದಿದ್ದರು. ಅದನ್ನೆಲ್ಲಾ ಮೊದಲು ತೆಗೆಯಬೇಕು ಎಂದು ಹೇಳಿದರೂ ಕೂಡ ಅವರು ಒಪ್ಪಿಕೊಳ್ಳಲಿಲ್ಲ ಆವಾಗ Sridharan was not there, ಅವರು ಕೀ ಇಟ್ಟುಕೊಂಡು ಮನೆಯಲ್ಲೇ ಕೂತು ಬಿಟ್ಟಿದ್ದಾರೆ. ಇನ್ಸ್ಟಿಟ್ಯೂಟ್ ಬಾಗಿಲು ತೆಗೆಯುವುದಕ್ಕೆ ಕೀ ಕೊಡುತ್ತಾ ಇಲ್ಲ. ಹತ್ತು ಸಾರಿ ಹೇಳಿ ಕಳುಹಿಸಿದರೂ ಕೂಡ ಕೊಡುವುದಿಲ್ಲ ಜನರಲ್ ಕಾರಿಯಪ್ಪನವರೂ ಕೂಡ ಹೇಳಿದ್ದಾರೆ. ನಿಮಗೋಸ್ಕರ ನಾನು ಚೀಫ್ ಮಿನಿಸ್ಟರ್ ಅವರ ಹತ್ತಿರ ಹೋಗಿಬಿಟ್ಟು ಈ ವಿಚಾರದಲ್ಲಿ ಸೆಟಲ್ ಮಾಡಿಸಿಕೊಡುತ್ತೇನೆ, ನೀವು ಈ ರೀತಿ ಮುಷ್ಟಿಹಿಡಿಯಬಾರದು ದುರ್ದೈವದಿಂದ ನಿಮಗೆ ಟರ್ಮಿನೇಟ್ ಆಗಿಹೋಗಿದೆ ಅದನ್ನು ಸರಿಮಾಡೋಣ, I request on your behalf to reconsider ಎಂದು ಎಷ್ಟು ಹೇಳಿದರೂ ಕೂಡ ಕೇಳಲಿಲ್ಲ. ಇಷ್ಟು ವಿನಂತಿ ಮಾಡಿಕೊಂಡರೂ ಕೂಡ ಅವರು ಕೇಳದೆ ಇದ್ದುದಕ್ಕೆ ಜನರಲ್ ಕಾರಿಯಪ್ಪನವರು ಹೇಳಿದರು ಇಂತಹ ಹುಡುಗರನ್ನು ನಾನು ಎಲ್ಲೂ ನೋಡಲಿಲ್ಲ ಎಂದು ಅನಂತರ ಪ್ರೆಸಿಡೆಂಟರೂ ಕೂಡ ಕರೆಸಿ ಮಾತನಾಡಿದರು. ನೀವು ಕೀ ಇಟ್ಟುಕೊಂಡರೆ ತಪ್ಪಾಗುತ್ತದೆ. ನೀವು ಕೀಯನ್ನು ಮನೆಯಲ್ಲಿ ಇಟ್ಟುಕೊಂಡರೆ ಬಾಗಿಲು ತೆಗೆಸುವುದಕ್ಕೆ ಪೋಲೀಸ್‌ಗೆ ಹೋಗಬೇಕಾಗುತ್ತದೆ ಎಂದು ಹೇಳಿದರು. Two days he has gone. ಏನು ಹೇಳಿದರೂ

ಕೇಳಲಿಲ್ಲ. ಆಮೇಲೆ ಪ್ರೆಸಿಡೆಂಟರೂ ಕೂಡ ಹೇಳಿದ್ದಾರೆ I shall certainly look into it ಎಂದು. ಮತ್ತು ಈ ವಿಷಯವನ್ನು ಮತ್ತೆ ಬೋರ್ಡ್ ಮುಂದೆ ಇಡುವುದಕ್ಕೆ ನನ್ನ ಅಭ್ಯಂತರವಿಲ್ಲ ಎಂದು ಹೇಳಿದ್ದಾರೆ. He should not indulge in acts of indiscipline. ಇಷ್ಟು ಹೇಳಿದ ಮೇಲೂ ಕೂಡ ನಾವು ಸ್ಟ್ರೈಕ್ ಮಾಡುತ್ತೇವೆ ಎಂದರೆ ಏನು ಮಾಡಬೇಕು, ತಾವೇ ಹೇಳಿ. ಇದಕ್ಕೋಸ್ಕರವಾಗಿ ಜನರಲ್ ಕಾರಿಯಪ್ಪನವರೂ ಕೂಡ ೩ ದಿವಸ ಕೂತುಕೊಂಡು ಪ್ರಯತ್ನಪಟ್ಟಿದ್ದಾರೆ. ತಾವು ಇದನ್ನು ಒಪ್ಪಿಕೊಂಡರೆ ಹೇಗಾದರೂ ಮಾಡಿ ಅವರಿಗೆ ಕನ್‌ವೇ ಮಾಡುತ್ತೇನೆ, ನಿಮ್ಮ ಹತ್ತಿರವೇ ಈ ರೀತಿ ಕೀ ಇಟ್ಟುಕೊಂಡರೆ ತಪ್ಪಾಗುತ್ತದೆ ಬೀಗದ ಅಸಲನ್ನು ಕಳುಹಿಸಿಕೊಡಿ ಎಂದು ಎಷ್ಟು ಬಗೆಯಾಗಿ ಹೇಳಿದರೂ ಕೊಡುವುದಿಲ್ಲ ಎಂದು ಹೇಳುತ್ತಾರೆ, ಈಗ ಕೆಲವು ದಿವಸದ ಹಿಂದೆ ಇನ್ಸ್ಟಿಟ್ಯೂಟ್ ಬಾಗಿಲು ತೆಗೆಸಬೇಕು ಎಂದು ಕಂಪ್ಲೈಂಟ್ ಕಳುಹಿಸಿದರು. ಈ ೪—೫ ಹುಡುಗರೇ ಅಲ್ಲಿ ಹೋಗಿ ಕೂತಿದ್ದಾರೆ, ಅವರು ಹುಡುಗರನ್ನು ಬೆದರಿಸುವುದು, ಮಾಸ್ಟರನ್ನು ಹೊಡೆಯುವುದಕ್ಕೆ ಹೋದರೆ, ಏನು ಮಾಡಬೇಕು ನೀವೇ ತಿಳಿಸಿ.

ಶ್ರೀ ಎಚ್.ಡಿ. ದೇವೇಗೌಡ:—ಅವರು ಹೇಳುತ್ತಾರೆ ಈವಾಗ ನಿಮ್ಮ ಹತ್ತಿರವೇ ಬಂದು ಸೇರಿ ಕೊಳ್ಳುತ್ತೇನೆ ಎಂದು.

ಶ್ರೀ ಡಿ. ದೇವರಾಜ್ ಅರಸ್.—ಈವಾಗ ಹೀಗೆ ಹೇಳಿದರೆ ಏನು ಮಾಡಬೇಕು ? ಈ ದೂರ್ತ ವರ್ತನೆ ಮೊದಲು ಬಿಡಬೇಕು. ಅದನ್ನು ಒಪ್ಪುತ್ತೇನೆ. ನೀವು ಹೇಳುತ್ತೀರಾ ಈವಾಗ ನಮ್ಮ ಹತ್ತಿರ ಬರುತ್ತಾರೆ ಎಂದು, ಹಾಗಾದರೆ ಶ್ರೀಮಾನ್ ಎಂ.ಎಸ್. ಕೃಷ್ಣನ್‌ರವರು ಸ್ಟ್ರೈಕ್ ಮಾಡಿರಿ ಎಂದು ಹೇಳಿರಬಹುದು.

ಶ್ರೀ ಎಂ.ಎಸ್. ಕೃಷ್ಣನ್:—ನಾನು ಸ್ಟ್ರೈಕ್ ಮಾಡಿರಿ ಎಂದು ಹೇಳಲಿಲ್ಲ. ಅವರೇ ನಾವು ಸ್ಟ್ರೈಕ್ ಮಾಡುತ್ತೇವೆ ಎಂದು ಹೇಳಿದರು.

ಶ್ರೀ ಡಿ. ದೇವರಾಜ್ ಅರಸ್: ಈ ರೀತಿಯಾಗಿ ಈಗ ಹೇಳುತ್ತೀದ್ದೀರಲ್ಲಾ ಮೊದಲೇ ಅವರಿಗೆ ಏತಕ್ಕೆ ಅಡ್ವೈಸ್ ಮಾಡಲಿಲ್ಲ. ಈವೊತ್ತು ಅವರಿಂದ ನೋಟಿಸ್ ಹೋಗಿದೆ, ಆದುದರಿಂದ ನಾವು ಈಗ ಹೋಗುತ್ತೇವೆ ಎಂದು ಹೇಳುತ್ತಾರೆ. ಮೊದಲೇ ಈ ಮಾತು ಏತಕ್ಕೆ ಹೇಳಲಿಲ್ಲ? ಅವರು ಪುರುಷ್ಕರ ಹೂಡಿ ಕ್ಲಾಸ್ ನಡೆಯದೇ ಇರುವ ಹಾಗೆ ಮಾಡಿದ್ದಾರೆ ಎಂದು ಅವರ ಮೇಲೆ ದೂರು ಇದೆ. ಈ ವಿಷಯದಲ್ಲಿ ನಾನು ನೇರವಾಗಿ ಇಂಟರ್‌ಫಿಯರ್ ಮಾಡುವುದಕ್ಕಾಗುವುದಿಲ್ಲ, ಲೇಬರ್ ಮಿನಿಸ್ಟರ್‌ರವರು ಪರಿಶೀಲನೆ ಮಾಡುತ್ತಾರೆ. ಅವರು ಇದೇ ರೀತಿ ಪುರುಷ್ಕರವನ್ನು ಮುಂದುವರಿಸಿಕೊಂಡು ಹೋಗುವು ದಾದರೆ ಪೋಲೀಸರನ್ನು ಕರೆಸಿಕೊಂಡು ಕ್ಲಾಸ್ ಶುರು ಮಾಡಿಸಬೇಕಾಗಿ ಬರುತ್ತೆ. ಆದುದರಿಂದ ಇದರ ಬಗ್ಗೆ ಕ್ರಮವರಿತು ಹೋಗೋಣ. If this kind of indiscipline things go on ನಾವು ಏನು ಮಾಡಬೇಕು ? ಜನರಲ್ ಕಾರಿಯಪ್ಪನವರೂ ಕೂಡ ಇದಕ್ಕೋಸ್ಕರ ೩ ದಿವಸ ಶ್ರಮಪಟ್ಟರು. ನನ್ನ ಹತ್ತಿರ ಅವರು ಹೇಳಿದರು—"I must admit, I am disgusted, I wasted my three precious days" ಎಂದು ಬಹಳ ನೊಂದ ಮನಸ್ಸಿನಿಂದ ಹೇಳಿದರು. ಮತ್ತು I am sorry I troubled you ಎಂದು ನನಗೂ ಹೇಳಿದರು. ಇದು ಅಲ್ಲಿಯವರೆಗೂ ಹೋಯಿತು. ಈ ತರಹ ಹಟಮಾರಿತನ ಆಗಿರುವುದರಿಂದ We have to seriously consider the case of Sridharan.

SRI KAGODU THIMMAPPA:—Probably he is the root cause for all this.

SRI D. DEVARAJ URS:—Yes.

ಕೆಲವರು ಇನ್‌ಸ್ಟಿಟ್ಯೂಟ್ ಹಾಳು ಮಾಡುವುದಕ್ಕೆ ಬಂದಿದ್ದಾರೆ. ಅವರು ಹಠ ಮಾಡಿ ಕುಳಿತು ಕೊಂಡಿರುವುದರಿಂದ ಅಲ್ಲಿ ವ್ಯಾಸಂಗ ಮಾಡುವವರಿಗೇ ತೊಂದರೆಯಾಗಿದೆ. ಪ್ರತಿ ವರ್ಷ ೪೦—೫೦ ಜನ ಪಾಸಾಗುತ್ತಿದ್ದರು. ಈ ಸಲ ಎಲ್ಲ ಮುಂದಕ್ಕೆ ಹೋಗುತ್ತಿದೆ A small group of people hold everything into ransom, even the entire institution itself. ಈ ಸಂಸ್ಥೆಯನ್ನು ಸರ್ಕಾರದವರೇ ತೆಗೆದುಕೊಳ್ಳಬೇಕು ಎಂದು ಹೇಳಿದರು. ಅದಕ್ಕೆ ನಾನು ಸ್ವಲ್ಪ ಕಾದು ನೋಡೋಣ, ಅವರ ಲಯಬಿಲಿಟಿ ನೋಡದೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಲೆಕ್ಕ ನೋಡಿಸಿ, ಆಡಿಟ್ ಮಾಡಿಸಿ ತೆಗೆದುಕೊಳ್ಳೋಣ ಎಂದು ಹೇಳಿದೆ. ನಾವು ಹೇಳಿದ್ದನ್ನು ಅವರು ಕೇಳುತ್ತಿಲ್ಲ, ಅವರು ಏನು

(Sri D. Devaraj Urs).—

ತಿಳಿದುಕೊಂಡಿದ್ದಾರೆಂದರೆ. ಹೇಗಿದ್ದರೂ ಶ್ರೀ ದೇವೇಗೌಡರಿದ್ದಾರೆ, ಶ್ರೀ ಕೃಷ್ಣನ್ ಅವರಿದ್ದಾರೆ, ನಾವು ಹೇಳಿದುದು ನಡೆಯುತ್ತದೆ ಎಂದು ಮನಸ್ಸಿನಲ್ಲಿ ಇಟ್ಟುಕೊಂಡಿದ್ದಾರೆ. If you kindly allow us, the Government will look into it. The auditors have been asked to go into the accounts. All these things will be done before we proceed to take over the instituetion.

ಶ್ರೀ ಎಚ್.ಎಸ್. ಸಿದ್ದಪ್ಪ:—ಈ ಸದನಕ್ಕೆ ಸಂಬಂಧಪಟ್ಟ ಹಾಗೆ ಒಂದು ಮಾತು, ಮರು ದಿವಸದ ಪ್ರಶ್ನೆಗಳ ಪಟ್ಟಿ ಮುಂಚಿನ ದಿನ ರಾತ್ರಿ ೮ ಗಂಟೆಗೆ ನಮ್ಮ ಕೈ ಸೇರುತ್ತದೆ. ಆದರಲ್ಲಿ ಉತ್ತರ ಗಳಿರುವುದಿಲ್ಲ ನಾವು ಸಭೆಗೆ ಬರುವವೇಳೆಗೆ ಇಲ್ಲಿ ಟೇಬಲ ಮೇಲೆ ಇಟ್ಟಿರುತ್ತಾರೆ. ಕೆಲವರಿಗೆ ಪ್ರಶ್ನೆ ಮತ್ತು ಉತ್ತರ ಎರಡೂ ಸಂಜೆಯೇ ಸೇರುತ್ತವೆ. ನಾವು ಇಲ್ಲಿ ಬಂದ ತಕ್ಷಣ ಸಂಪ್ಲಿಮೆಂಟರಿ ಪ್ರಶ್ನೆ ಗಳನ್ನು ಕೇಳುವುದಕ್ಕೆ ತೊಂದರೆಯಾಗುತ್ತದೆ.

ಅಧ್ಯಕ್ಷರು :—ತಮಗೆ ಇಲ್ಲಿ ಸ್ವಲ್ಪ ಅನುಕೂಲ ಮಾಡಿಕೊಡುತ್ತಿದ್ದೇವೆ. ನಮ್ಮ ಪ್ರಶ್ನೆ ಏನಿದೆ ಎಂದು ಮೊದಲೇ ತಿಳಿಸಿರುತ್ತೇವೆ. ಪಾರ್ಲಿಮೆಂಟಿನಲ್ಲಿ ಹೋಗಿ ನೋಡಿದರೆ ಯಾವ ರೀತಿ ನಡೆಯುತ್ತದೆ ಎಂದು ಗೊತ್ತಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ನಗರಾಡಳಿತ ಮಂತ್ರಿಗಳು ಬಂದಿದ್ದಾರೆ. ಅವರ ಸಭೆಯಲ್ಲಿ ಇರಲಿಲ್ಲವೆಂದು ವಿಷಯವನ್ನು ಮುಂದಕ್ಕೆ ಹಾಕಲಾಯಿತು.

ಹುಬ್ಬಳ್ಳಿ ಕಾರ್ಪೊರೇಷನ್‌ನಲ್ಲಿ ಮಾನ್ಯ ಸದಸ್ಯರೊಬ್ಬರಿಗೆ 'ಷಟ್ ಅಪ್' ಎಂದು ಮಂತ್ರಿಗಳು ಹೇಳಿದ ರೆಂದು ಆ ಕಾರ್ಪೊರೇಷನ್ನಿನ ಎಲ್ಲ ಸದಸ್ಯರೂ ಪ್ರತಿಭಟನೆ ಮಾಡಿ ಹೊರಗೆ ಬಂದಿದ್ದಾರೆ ಎನ್ನುವುದು ಒಂದ ನೆಯದು ಎರಡನೆಯದು ನಿನ್ನೆ ದಿವಸ ಮುನಿಸಿಪಲ್ ಪ್ರೆಸಿಡೆಂಟರೊಬ್ಬರು ಅವರ ಹತ್ತಿರ ಹೋದಾಗ "ಗೆಟ್ ಔಟ್" ಎಂದು ಹೇಳಿದರು ಎನ್ನುವುದು ಎರಡನೆಯದು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಎನ್ನುವುದು ನಾವು ಕೇಳಬೇಕಾಗಿದೆ.

† ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಭಾಪತಿಗಳೇ, ನಾನು ಸರಿಯಾದ ವೇಳೆಗೆ ಬರಬೇಕಾಗಿತ್ತು. ಮೈ ಚೆನ್ನಾಗಿರಲಿಲ್ಲವಾದ ಕಾರಣ ಬರಲು ಆಗಲಿಲ್ಲ. ದಯಮಾಡಿ ಕ್ಷಮಿಸಬೇಕು.

ನಾನು ಇಲ್ಲದಾಗ ಮಾನ್ಯ ವಿರೋಧ ಪಕ್ಷದ ನಾಯಕರು ಈ ಹೊತ್ತಿನ ದಿವಸ 'ಪ್ರಜಾವಾಣಿ' ಪತ್ರಿಕೆಯಲ್ಲಿ ಬಂದಿರತಕ್ಕ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇಂಥ ಮಂತ್ರಿಗಳು ಈ ಮಂತ್ರಿ ಮಂಡಲದಲ್ಲಿ ಇರಕೂಡದು ಎಂದು ಕೂಡ ಹೇಳಿದರಂತೆ. ನಾನು ಒಂದು ವಿಷಯವನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. 'ಪ್ರಜಾವಾಣಿ' ಪತ್ರಿಕೆಗೆ ಆ ವಿಷಯ ಹೇಗೆ ಬಂತು ಎನ್ನುವುದು ಗೊತ್ತಿಲ್ಲ. ಎರಡನೆಯದು ಸಭ್ಯ ಗೃಹಸ್ಥ ಯಾರಿದ್ದಾರೆ ಅವರು ಯಾರು ಎನ್ನುವುದು ನನಗೆ ಗೊತ್ತಿಲ್ಲ. ನನಗೆ ಅಲ್ಲಿಗೆ ಹೋಗುವ ಪ್ರೋಗ್ರಾಂ ಇದ್ದಿಲ್ಲ. ನಮ್ಮ ಕಾರ್ಯಕರ್ತರು ಬಂದು ಕೊಳಚೆ ಪ್ರದೇಶವಿದೆ. ದಯಮಾಡಿ ಆ ಸ್ಥಳಕ್ಕೆ ಬಂದು ಅಜಮಾಯಿಷಿ ಮಾಡಬೇಕು ಎಂದು ಕೇಳಿದರು. ನಮ್ಮ ಪಕ್ಷದ ಕಾರ್ಯಕರ್ತರ ಬೇಡಿಕೆಗೆ ಮನ್ನಣೆ ಕೊಟ್ಟು ಹೋದೆ, ಹೋಗಿ ನೋಡಿಕೊಂಡು ಬಂದೆ. ಅದರ ವಿನಾ ನನಗೆ ಸದಸ್ಯರು ಯಾರು, ಸಭಾ ತ್ಯಾಗ ಮಾಡಿದವರು ಯಾರು ಎಂದು ಇದುವರೆಗೂ ನಾನು ನೋಡಿಲ್ಲ. ನನಗೆ ಹಾಗೆ ಅಂದರು, ಹೀಗೆ ಅಂದರು ಎಂದು ಒಂದು ಸನ್ನಿವೇಶವನ್ನು ಮಾಡಿಕೊಂಡು ಈ ರೀತಿಯಾಗಿ ಕಾರ್ಪೊರೇಷನ್ ಸಭೆಗಳಲ್ಲಿ ಮತ್ತು ಬಹಿರಂಗ ಸಭೆಗಳಲ್ಲಿ ಮಾತನಾಡತಕ್ಕುದು ಸಭ್ಯತೆಗೆ ಮೀರಿದ್ದು ಎಂದು ನನಗನ್ನಿ ಸುತ್ತದೆ. ಮಾಡದೆ ಇರುವ ಕೆಲಸವನ್ನು ಮಾಡಿದರು ಎಂದು ಹೇಳುವಂಥ ಜನ, ಆ ರೀತಿ ವರ್ತನೆ ಮಾಡುವಂಥ ಜನ ಎಲ್ಲಿಯವರೆಗೆ ಈ ದೇಶದಲ್ಲಿರುತ್ತಾರೆ ಅಲ್ಲಿಯವರೆಗೂ ನಮ್ಮ ದೇಶ ಉದ್ಧಾರವಾಗುವು ದಿಲ್ಲ. ಯಾವನು ಕೆಲಸ ಮಾಡುತ್ತಾನೆ, ಯಾವನು ಒಂದು ನಿಷ್ಠೆಯಿಂದ ಕೆಲಸ ಮಾಡುತ್ತಾನೆ. ಅವನಿಗೆ ಬೆನ್ನು ತಟ್ಟತಕ್ಕುದನ್ನು ನಾನು ಕೇಳಿದ್ದೇನೆ. ಯಾವನು ಕೆಲಸ ಮಾಡುತ್ತಾನೆ ಅವನ ಕಾಲು ಹಿಡಿದು ಎಳೆಯುವುದನ್ನು ಎಲ್ಲಿಯೂ ನೋಡಿಲ್ಲ. ಈ ದೇಶದಲ್ಲಿ ಅಂಥ ಮಹನೀಯರಿದ್ದಾರೆಂದು ಹೇಳಬಲ್ಲೆ. ಒಂದು ಸನ್ನಿವೇಶವನ್ನು ಕಲ್ಪಿಸಿಕೊಂಡು, ಆಡದೆ ಇರುವ ಮಾತನ್ನು ನನ್ನ ಬಾಯಿಗೆ ಇಟ್ಟು, ಅಲ್ಲಿ ಹೋಗಿ ಪತ್ರಿಕಾ ಹೇಳಿಕೆ ಕೊಟ್ಟು ಸಭಾ ತ್ಯಾಗ ಮಾಡಿರುವುದನ್ನು ನೋಡಿ ಆಶ್ಚರ್ಯವಾಗುತ್ತದೆ.

೧೬ನೇ ತಾರೀಖು ನಾನು ಹುಬ್ಬಳ್ಳಿಗೆ ಹೋಗಿದ್ದೆ. ಈ ಹೊತ್ತು ೧೯ನೇ ತಾರೀಖು. ಎರಡು ಮೂರು ದಿವಸವಾಯಿತು. ಆ ಹೊತ್ತು ಯಾರು ಅನ್ನಿಸಿಕೊಂಡರೋ, ಅನ್ನಿಸಿಕೊಂಡಂಥ ಮನುಷ್ಯ ಸಭ್ಯಸ್ಥನಾಗಿದ್ದರೆ, ಗೌರವಸ್ಥನಾಗಿದ್ದರೆ, ನನಗಾದರೂ ಪ್ರತಿಭಟನೆ ಮಾಡಬಹುದಾಗಿತ್ತು. ಅಂಥದನ್ನು ನಾನು ಮೆಚ್ಚುತ್ತೇನೆ. ಅಂಥವರನ್ನು ಕಂಡರೆ ನನಗೆ ಬಹಳ ಅಭಿಮಾನ.

ಒಬ್ಬ ಮಾನ್ಯ ಸದಸ್ಯರು.—ಹೆದರಿ ಕೊಂಡಿರಬೇಕು?

ಶ್ರೀ ಬಿ. ಬಸವಲಿಂಗಪ್ಪ.—ಅವರು ನನಗೆ ಒಂದು ಕಾಗದವನ್ನಾದರೂ ಬರೆಯ ಬಹುದಾಗಿತ್ತು. ಇಂಥ ದಿವಸ ಬಂದಿರಿ, ನೀವು ಹೀಗೆ ಹೇಳಿಗುವುದು ಸರಿಯೇ? ಹಾಗೆ ಹೇಳಿರುವುದು ಸರಿಯಲ್ಲ ಎಂದು ಬರೆಯಬಹುದಾಗಿತ್ತು. ಅವರು ಕಾಗದವನ್ನು ನನಗೂ ಬರೆದಿಲ್ಲ, ನಮ್ಮ ಪಕ್ಷಕ್ಕೂ ಬರೆದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅವರು ನಿಮ್ಮ ಪಕ್ಷದವರೇ.

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ನಡೆಯಿತು ಎಂದು ಅವರೇ ಸಭೆಯಲ್ಲಿ ಹೇಳಿದ್ದಾರೆ. ಹೇಳಿಕೆ ಕೊಡುವುದಕ್ಕೆ ಇಷ್ಟಪಟ್ಟಿದ್ದೇನೆ, ಆ ಮೇಲೆ ಕೊಡುತ್ತೇನೆಂದು ಕೂಡ ಹೇಳಿದ್ದಾರೆ,

ಶ್ರೀ ಬಿ. ಬಸವಲಿಂಗಪ್ಪ —ನಾನು ಅವರ ಮುಖವನ್ನೇ ನೋಡಿಲ್ಲ. ನಮ್ಮ ಪಕ್ಷದವರಾಗಲೀ ಯಾವ ಪಕ್ಷದವರೇ ಆಗಲೀ ಆ ವಿಚಾರ ಬೇಡ. ಸಭ್ಯರಲ್ಲದೇ ಇರುವವರಿಗೆ ಯಾವ ಪಕ್ಷವಾದರೆ ಏನು ? ಇದೆಲ್ಲ ಸುಳ್ಳು, ಸತ್ಯಕ್ಕೆ ದೂರವಾಗಿರತಕ್ಕದು.

ಈ ಸುದ್ದಿ ಇನ್ನು ಬೇರೆ ಯಾವ ಪತ್ರಿಕೆಗಳಲ್ಲೂ ಬಂದಿಲ್ಲ, ಪ್ರಕಟವಾಗಿಲ್ಲ. 'ಪ್ರಜಾವಾಣಿ' ಪತ್ರಿಕೆ ಯಾವರು ಏಕೆ ಪ್ರಕಟಣೆ ಮಾಡಿದರೋ ಭಗವಂತನೇ ಕಾಪಾಡಬೇಕು. ಕ್ಯಾರೆಕ್ಟರ್ ಅಸಾಸಿನೇಷನ್ ಯಾವ ರೀತಿ ಬಸವಲಿಂಗಪ್ಪನವರಿಗೆ ಮಾಡೋಣ, ಇಂಥ ಕುಚೋದ್ಯತನ ಮಾಡಿದರೆ ಬಸವಲಿಂಗಪ್ಪನವರಿಗೆ ಕೀರ್ತಿಗೆ ಕಳಂಕ ಬರುತ್ತದೆ, ಮಾಡೋಣ ಎಂದು ಪ್ರಯತ್ನ ಮಾಡಿದರೆ, ಯಾರು ಇದಕ್ಕೆ ಕಾರಣಕರ್ತರೋ ಅವರಿಗೆ ಹೇಳುತ್ತೇನೆ, ಇದು ಸಾಧ್ಯವಿಲ್ಲದ ಮಾತು. ನಾನು ಎಲ್ಲಿಯವರೆಗೆ ದೇಶಭಕ್ತಿಯನ್ನು ಹೃದಯದಲ್ಲಿಟ್ಟು ಕೊಂಡು ಕೆಲಸ ಮಾಡುತ್ತೇನೆಯೋ ಅಲ್ಲಿಯವರೆಗೆ ಇಂಥ ಕುಚೋದ್ಯತನಕ್ಕೆ ಹೆದರುವವನಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕುಚೋದ್ಯತನ ಮಾಡಿರುವವರು ಯಾರು? ಸ್ಪಷ್ಟಪಡಿಸಬೇಕು. ಪ್ರಜಾವಾಣಿ ಮಾಡಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಯಾರೇ ಆಗಲಿ, ಆ ವಿಚಾರ ಬೇಡ. ಬೇಸ್‌ಲೆಸ್ ಅಲಿಗೇಷನ್, ನಿರಾಧಾರವಾಗಿರತಕ್ಕ, ಕುಚೋದ್ಯತನದಿಂದ ಕೂಡಿರತಕ್ಕ ಇಂಥ ಪ್ರಸಂಗವನ್ನು ಕಲ್ಪನೆ ಮಾಡಿಕೊಂಡು, ಮಾಡದ ಇರತಕ್ಕ ಕೆಲಸವನ್ನು ಮಾಡಿದೆ ಎನ್ನುವಂಥ ಸಂಭಾವಿತ ಜನ, ಪ್ರಜಾವಾಣಿ ಪತ್ರಿಕೆ ಬಹಳ ನಿಷ್ಠೆಯಿಂದ ಮುಖ ಪುಟದಲ್ಲಿ ಹಾಕಿದ್ದಾರೆ. ಹಾಕಲಿ. ಶ್ರೀಮಾನ್ ದೇವೇಗೌಡರು ಅದನ್ನೇ ಆಧಾರವಾಗಿಟ್ಟು ಕೊಂಡು ಬಸವಲಿಂಗಪ್ಪ ಹಾಗೆ ಮಾಡಿದರು, ಅವರು ಮಂತ್ರಿಗಳಾಗಿರುವುದು ಸರಿಯಲ್ಲ ಎಂದು ಹೇಳಿದ್ದಾರೆಂದು ಕೇಳಿದೆ ಒಂದು ವಿಷಯವನ್ನು ಮಾತ್ರ ನಾನು ಸಭೆಗೆ ಹೇಳುತ್ತೇನೆ; ನನ್ನ ಶಕ್ತಿಯ ಮೇಲೆ ನಾನು ಮಂತ್ರಿಯಾಗಿದ್ದೇನೆ.

11-30 A.M.

ನಾನು ಮಂತ್ರಿಯಾಗಬಾರದು ಎಂದು ಯಾರು ಪ್ರಯತ್ನ ಮಾಡಿದರೂ ಕೂಡ ನಾನು ಮಂತ್ರಿಯಾಗಿದ್ದೇನೆ ನಾನು ನಿಷ್ಠೆಯಿಂದ ಕೆಲಸ ಮಾಡುವುದಕ್ಕೆ ಎಲ್ಲಿಯವರೆಗೆ ದೇಶದ ಜನತೆಯ ಬೆಂಬಲವಿದೆ ಅಲ್ಲಿಯವರೆಗೆ ನಾನು ಮಂತ್ರಿಯಾಗುತ್ತೇನೆ. ಯಾರು ನನ್ನನ್ನು ತೆಗೆದು ಹಾಕುವುದಕ್ಕೆ ಆಗುವುದಿಲ್ಲ. ನಾನು ಮೊದಲೇ ಈ ಅಸೆಂಬ್ಲಿಯಲ್ಲಿ ಹೇಳಿದ್ದೇನೆ, ನನ್ನ ಪಬ್ಲಿಕ್ ಆಕ್ಷನ್ ಏನು ಇದೆ, ಅದರ ಬಗ್ಗೆ ಯಾವತ್ತು ಬೇಕಾದರೂ ನನ್ನನ್ನು ಪ್ರಶ್ನೆ ಮಾಡಬಹುದು. ತಪ್ಪು ಮಾಡಿದರೆ ಶರಣಾಗತನಾಗುತ್ತೇನೆ. ಮಾನ್ಯ ಸದಸ್ಯರಿಗೆ ಗೌರವ ತರುವ ರೀತಿಯಲ್ಲಿ ಕೆಲಸ ಮಾಡುತ್ತೇನೆ ಎಂದು ಹೇಳುತ್ತೇನೆ. ಇಷ್ಟು ಹೇಳಿದರೆ ತಾವು ತೃಪ್ತರಾಗುತ್ತೀರಿ ಎಂದು ನಾನು ನಂಬಿದ್ದೇನೆ. ನಿನ್ನೆಯ ಪ್ರಸಂಗ ಏನಾಯಿತು ಎಂದರೆ, ಮಾನ್ಯ ಸ್ನೇಹಿತರಾದ ಗುಂಡೂರಾಯರು ಸೋಮವಾರ ಪೇಟೆಯ ಮುನಿಸಿಪಾಲಿಟಿಯ ಅಧ್ಯಕ್ಷರನ್ನು ಕರೆದುಕೊಂಡು ಬಂದರು. ಶ್ರೀಮಾನ್ ದೇವೇಗೌಡರು ಬಂದಿರಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನನಗೆ ಬೈಯುತ್ತೀರಿ ಅಂತ ಭಯ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ ಪ್ರೀತಿಯಿಂದ ಕೆಲವು ಮಾತನ್ನು ಬೈಯುತ್ತೇನೆ. ನಾನು ಯಾರನ್ನು ಪ್ರೀತಿಸುತ್ತೇನೆಯೋ ಅವರನ್ನು ಸ್ವಲ್ಪ ಸಿಟ್ಟಿನಿಂದ ಕಾಣುವುದು ವಾಡಿಕೆ. ಯಾರು ನನ್ನ ವಿರೋಧಿಸುತ್ತಾರೋ, ಅವರನ್ನು ಮರ್ಯಾದೆಯಿಂದ ಗೌರವದಿಂದ ಕಾಣುವುದು ನನ ಸ್ವಭಾವ. ಶ್ರೀಮಾನ್ ದೇವೇಗೌಡರು ನನ್ನನ್ನು ಅರ್ಥಮಾಡಿಕೊಳ್ಳಬೇಕು. ಸೋಮವಾರಪೇಟೆಯ ಪ್ರೆಸಿಡೆಂಟರು ನನ್ನ ಛೇಂಬರಿಗೆ ಬಂದಾಗ ಬಹಳ ಜನ ಇದ್ದರು. ಆಗ ನಾನು ಇನ್ನೂ ಊಟ ಮಾಡಿರಲಿಲ್ಲ. ಮೂರು ಗಂಟೆಯ ಸಮಯ. ಶ್ರೀಮಾನ್ ಗುಂಡೂರಾಯರು ಸೋಮವಾರಪೇಟೆಯ ಪ್ರಸಿಡೆಂಟರು ಬಂದಿದ್ದಾರೆ ಎಂದು ಹೇಳಿದರು, ಕೂತುಕೊಳ್ಳಲಿ ಎಂದು ಹೇಳಿದೆ ಅನಂತರ ಗುಂಡೂರಾಯರು ಒಬ್ಬ ಆಫೀಸರ್ ಅನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ ಅದು ಸರಿಯಲ್ಲ, ಮಲೆನಾಡಿನಲ್ಲಿ ವಿಪರೀತ ಕಷ್ಟ, ಆದ್ದರಿಂದ ಅವರ ಟ್ರಾನ್ಸ್‌ಫರ್ ಅನ್ನು ಕ್ಯಾನ್ಸಲ್ ಮಾಡಿಸಿ ಎಂದು ಹೇಳಿದರು. ಈಗ ನಾನು ಗುಂಡೂರಾಯರಿಗೆ ಪದ್ಧತಿ ಪ್ರಕಾರ ಟ್ರಾನ್ಸ್‌ಫರ್ ಆಗಿದೆ, ಅದನ್ನು ಕ್ಯಾನ್ಸಲ್ ಮಾಡುವುದಕ್ಕೆ ಆಗುವುದಿಲ್ಲ ಅನಿವಾರ್ಯವಾಗಿದ್ದರೆ ನೋಡೋಣ ಎಂದು ಹೇಳಿದೆ. ಅದಕ್ಕೆ ಅವರು ಮುನಿಸಿಪಲ್ ರೆಸಲ್ಯೂಷನ್ ಮಾಡಿದ್ದಾರೆ ಎಂದು ಹೇಳಿದರು. ನಾನು ಮುನಿಸಿಪಾಲಿಟಿಯವರು ರೆಸಲ್ಯೂಷನ್ ಮಾಡುವುದು ಸ್ವಾಭಾವಿಕ ಎಂದು ಹೇಳಿದ ನಂತರ, ಪ್ರೆಸಿಡೆಂಟರು ನಾವು ದನ ಕಾಯುವುದಕ್ಕೆ ರೆಸಲ್ಯೂಷನ್ ಮಾಡುತ್ತೇವೆಯೇ ಎಂದು ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—ಅವರಿಗೆ ನಿಮ್ಮ ಕೋಪ ಗೊತ್ತಿಲ್ಲ.

ಶ್ರೀ ಬಿ.ಬಿ. ಬಸವಲಿಂಗಪ್ಪ.—ದನ ಕಾಯುವುದಕ್ಕೆ ಇಲ್ಲಿ ಏತಕ್ಕೆ ಇರಬೇಕು, ಹೊರಗೆ ಹೋಗಿ ಎಂದು ಹೇಳಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಅದು ಹೇಳಬೇಕಾದ ಮಾತೆ.

ಶ್ರೀ ಬಿ. ಬಸವಲಿಂಗಪ್ಪ.—ಇದು ನಡೆದ ಪ್ರಸಂಗ, ಮಾನ್ಯ ಸದಸ್ಯರು ನನ್ನ ವಿಚಾರದಲ್ಲಿ ಏನಾದರೂ ಯಾವುದಲ್ಲಾದರೂ ಅನುಮಾನ ಇದ್ದರೆ ನೇರವಾಗಿ ಕೇಳಿ; ಇದು ಸಣ್ಣ ವಿಚಾರ.

ಶ್ರೀ ಎಚ್. ಡಿ. ದೇವೇಗೌಡ.—ನನಗೂ ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರಿಗೂ ಯಾವ ವೈಯಕ್ತಿಕವಾದ ದ್ವೇಷವಿಲ್ಲ. ನಿಮ್ಮ ಸ್ಥಾನವನ್ನು ನಾನು ಹಿಡಿದುಕೊಳ್ಳಬೇಕು ಎನ್ನುವ ಆಸೆಯೂ ನನಗೆ ಇಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿರುವುದರಿಂದ ನನ್ನ ಬಳಿಗೆ ಫಿರ್ಯಾದಿಗಳು ಬರಬೇಕಾಗುತ್ತದೆ, ಬರುವುದು ಸ್ವಾಭಾವಿಕ; ರೈಟಿಂಗ್‌ನಲ್ಲಿ ಫಿರ್ಯಾದಿ ಬಂದಾಗ, ಅದರ ಬಗ್ಗೆ ನಾನು ಆಲೋಚನೆ ಮಾಡ ಬೇಕಾಗುತ್ತದೆ. ಜೊತೆಗೆ ಜವಾಬ್ದಾರಿ ಮನುಷ್ಯರು, ಪುರಸಭೆಯ ಅಧ್ಯಕ್ಷರು, ಯೂತ್ ಕಾಂಗ್ರೆಸ್ ಅಧ್ಯಕ್ಷರು ದೂರು ಕೊಟ್ಟಿದ್ದಾರೆ, ಇದರ ಬಗ್ಗೆ ಉತ್ಪ್ರೇಕ್ಷೆ ಮಾಡುವ ಪ್ರಶ್ನೆ ನನಗಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಅಂಥಾದ್ದು ಏನಾದರೂ ಕಂಪ್ಲೇಂಟ್ ಬಂದರೆ ನನಗೆ ಕಳುಹಿಸಿಕೊಡಿ. ಆದರೆ ಏಕಾಏಕಿ ಅಸೆಂಬ್ಲಿಯಲ್ಲಿ ಈ ವಿಷಯ ಬರುವುದು ಸರಿಯಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕಳುಹಿಸಿಕೊಡುತ್ತೇನೆ, ಈ ತರಹ ಕೋಪ ಬರುವುದಕ್ಕೆ ಅವರು ಹಸಿದಿದ್ದರು ಎನ್ನುವ ಕಾರಣ ಗೊತ್ತಾಯಿತು.

ಅಧ್ಯಕ್ಷರು.—ದನ ಕಾಯುವುದು ಛೇಂಬರ್‌ನಲ್ಲಿ ಅಲ್ಲ, ಹೊರಟು ಹೋಗಿ ಎಂದು ಹೇಳಿಬಿಟ್ಟರು, ಅದಕ್ಕೆ ಆಕ್ಷೇಪಣೆ ತೆಗೆದುಕೊಂಡರು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಏನು ಹೇಳಿದ್ದಾರೆ ಎನ್ನುವ ವಿವರಣೆಯನ್ನು ಕೊಟ್ಟಿದ್ದಾರೆ ರೆಸಲ್ಯೂಷನ್ ಮಾಡುವುದಕ್ಕೆ ಬೇರೆ ಕೆಲಸವಿಲ್ಲ, ದನಕಾಯುವುದು ಎನ್ನುವುದರ ಬಗ್ಗೆ ವಾಗ್ವಾದವಾಗಿದೆ. ಹಸಿದು ಇದ್ದಾಗ ಹಾರವನಿಗು ಕೋಪ ಬರುತ್ತದೆ ಎಂದು ಕೇಳಿದ್ದೇನೆ. ಮಾನ್ಯ ಗುಂಡೂರಾಯರಿಗೆ ಕೋಪ ಬರಬೇಕಾಗಿತ್ತು, ಹಸಿದ ಹಾರವ ನನ್ನು ಮಾತನಾಡಿಸಬಾರದು ಎಂದು ಹೇಳು ತ್ತಾರೆ. ಆದರೆ ನಿಮಗೆ ಏತಕ್ಕೆ ಕೋಪ ಬಂತು.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ಕಲಿಯುಗದಲ್ಲಿ ವ್ಯತಿರಿಕ್ತವಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳಿಗೂ ನನಗೂ ಏನೂ ಇಲ್ಲ, ಸರ್ಕಾರದ ಪ್ರತಿನಿಧಿ ಯಾಗಿ ಕೆಲಸ ಮಾಡುವಾಗ ಬರತಕ್ಕ ಜನರ ಬಗ್ಗೆ ಸದ್‌ಭಾವನೆ ಇರಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ನಾನು ಮನಸ್ಸಿನಲ್ಲಿಟ್ಟುಕೊಂಡೇ ಕೆಲಸ ಮಾಡುತ್ತಿದ್ದೆನೆ

ಶ್ರೀ ಬಿ. ಪುಟ್ಟಸ್ವಾಮಯ್ಯ. — ನಾನು ಒಂದು ಮುಖ್ಯವಾದ ಅಂಶವನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರದೇ ಹೋದರೆ, ನಾನು ನನ್ನ ಕರ್ತವ್ಯ ಲೋಪಮಾಡಿದಂತಾಗುತ್ತದೆ ಏನೆಂದರೆ, ಮಂತ್ರಿಗಳ ಬಗ್ಗೆ ಅಪಾರವಾದ ಗೌರವ ಇಟ್ಟಿರುವವರ ಪೈಕಿ ನಾನೂ ಒಬ್ಬ. ಮಾನ್ಯ ಬಸವಲಿಂಪ್ಪನವರ ನನ್ನ ಹಳೆಯ ಸ್ನೇಹಿತರು. ಇಲ್ಲಿ ೫೬ ಜನ ಮಂತ್ರಿಗಳಿಗೆ ನಮ್ಮ ತಂದೆಯವರಷ್ಟು ವಯಸ್ಸಾಗಿದೆ, ಅವರ ಬಗ್ಗೆ ನನಗೆ ಭ್ರಾತೃತ್ವ ಭಾವನೆ ಇದೆ. ಆದರೆ ಸ್ನೇಹಿತರ ಬಗ್ಗೆ ಇರುವ ಅಭಿಮಾನದಿಂದ ಅವರು ಮಾಡುವ ತಪ್ಪನ್ನು ಹಾಗೆ ಬಿಟ್ಟರೆ, ಭಾರತದ ಸಂವಿಧಾನದ ಪ್ರಕಾರ ಏನು ಪ್ರಮಾಣವಚನ ತೆಗೆದುಕೊಂಡಿದ್ದೇವೆ ಅದಕ್ಕೆ ಬಹಳ ಅಪಮಾನ ಮಾಡಿದಂತಾಗುತ್ತದೆ. ಮೈಸೂರು ರಾಜ್ಯದಲ್ಲಿ ಪ್ರಚಾರದಲ್ಲಿರತಕ್ಕ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಚೋದನೆ ಮಾಡಿ ಹಾಗೆ ಬರೆದ್ದಾರೆ ಎಂದು ಪತ್ರಿಕೆ ಟೀಕಿಗೆ ಒಳಪಟ್ಟಿರುವುದನ್ನು ನಾನು ಸಹಿಸುವುದಿಲ್ಲ. Shut up your mouth, shut up your eyes ಎಂದರೆ what is to be shut up ಎಂದು ಕೇಳಬೇಕಾಗುತ್ತದೆ. ಮಂತ್ರಿಗಳ ಬಾಯಿಂದ ಬರತಕ್ಕ ಮಾತು ರಾಮಬಾಣವಾಗಿರಬೇಕು.

ಶ್ರೀ ಬಿ. ಬಸವಲಿಂಗಪ್ಪ.- ಅವರು ನಾನು ಹೇಳಿದ ಮಾತು ಹಾಗೂ ಅವರು ಕಾಮೆಂಟ್ ಮಾಡುವ ಹಾಗೆ ಪುನ್ಯ ವ್ಯಾಖ್ಯಾನ ಬೇರೆ ಮಾಡುತ್ತಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ — ಅಧ್ಯಕ್ಷರೇ ಇದು ಗುರುತರವಾದ, ಜವಾಬ್ದಾರಿಯುತವಾದ ಪತ್ರಿಕೆಯಲ್ಲಿ ಪ್ರಕಟಣೆಯಾಗಿದೆ. ಇದು ಹುಬ್ಬಳ್ಳಿ ಕಾರ್ಪೋರೇಷನ್ ಸಭೆಯಲ್ಲಿ ಪ್ರಸ್ತಾಪವಾಗಿದೆ. ಸಭೆಯಲ್ಲಿ ಪ್ರಸ್ತಾಪವಾಗಿರುವುದನ್ನು ಅಷ್ಟು ಲಘುವಾಗಿ ಹಗುರವಾಗಿ ನೋಡತಕ್ಕ ಮಟ್ಟಕ್ಕೆ ಇಳಿಯಬಾರದು ಎಂದು ತಿಳಿದುಕೊಂಡ ಮನುಷ್ಯನಿಗೆ ಸಹಜವಾಗಿ ಕೋಪ ಬರುತ್ತದೆ. ರಾಜ್ಯದಲ್ಲಿ ನಮ್ಮೆಲ್ಲರ ಕಲ್ಯಾಣ, ನಮ್ಮ ಹೆಂಡತಿ,ಮಕ್ಕಳ ರಕ್ಷಣೆ,ಆಸ್ತಿ ರಕ್ಷಣೆ,ಗೌರವ ರಕ್ಷಣೆ ಮಾಡುವ ಹೊಣೆ ಸರ್ಕಾರದವರು ಹೊತ್ತಿಕೊಂಡಿದ್ದಾರೆ.

SRI B. BASAVALINGAPPA.—I rise to a point of order, I went to know from the hon. Member whether he wants to teach me the Philosophy or is he advising me as to how I should behave I went a ruling from the Chair before the hon.Member proceeds with his speech.

ಅಧ್ಯಕ್ಷರು.—ಈಗ ಅವರು ಅಂದಿಲ್ಲ ಎಂದು ಹೇಳಿದರು, ತಿರುಗಿ ವ್ಯಾಖ್ಯಾನ ಮಾಡಿದರೆ ಹೇಗೆ ?

SRI H. D. DEVEGOWDA —I do not want to subscribe anything to what Sri Puttaswamiah has said. ಅವರು ಹೇಳಿದ್ದು ಮುಗಿದು ಹೋಗಿದೆ. ಪ್ರಜಾವಾಣಿಯವರು ಕುಚೋದ್ಯ ಮಾಡುವುದಕ್ಕೆ ಮಾಡುವುದಕ್ಕೆ ಹೊರಟಿದ್ದಾರೆ ಎಂದು ಹೇಳಿದರು.

ಅಧ್ಯಕ್ಷರು.—ಅಂದಿಲ್ಲ ಎಂದು ಹೇಳಿದಮೇಲೆ ತಿರುಗಿ ಅಂದಿದ್ದಾರೆ ಎಂದು ಸಾಬೀತು ಮಾಡುತ್ತೀರಾ

ಶ್ರೀ ಎಚ್. ಡಿ ದೇವೇಗೌಡ.—ಪ್ರಜಾವಾಣಿಯವರು ನನ್ನ ಮೇಲೆ ಕಣ್ಣು ಇಟ್ಟಿದ್ದಾರೆ ಎಂದು ಮಾನ್ಯಮಂತ್ರಿಗಳು ಹೇಳಿದರು. ನನಗೆ ಅವರನ್ನು ಲುಬಿಸಿ ಎಳಿಯಬೇಕು ಎನ್ನು ಆಸೆಯಿಲ್ಲ, ದಯಮಾಡಿ ಕ್ಷಮಿಸಬೇಕು. ಪ್ರಜಾವಾಣಿಯವರು ನನ್ನ ಮೇಲೆ ಸೇಡನ್ನು ಇಟ್ಟುಕೊಂಡು ಮಾಡುತ್ತಾ ಇದ್ದಾರೆ, ಹೊರಗಡೆ ಕುಚೋದ್ಯ ಮಾಡುತ್ತಿದ್ದಾರೆ, ಇದಕ್ಕೆ ಪ್ರೋತ್ಸಾಹ ಸಿಗುತ್ತದೆ 'ಎಂದರು. ಹುಬ್ಬಳ್ಳಿ ಕಾರ್ಪೋರೇಷನ್ ಸಭೆಯಲ್ಲಿ ನಡೆದ ಪ್ರೊಸಿಡಿಂಗ್ಸ್‌ನಲ್ಲಿ ರಿಕಾರ್ಡು ಆಗಿರುವುದನ್ನು ತರಿಸಬೇಕಾಗುತ್ತದೆ. ಬೆಂಗಳೂರು ನಗರ ಕಾರ್ಪೋರೆಷನಲ್ಲಿ ನಡೆದಿರುವುದನ್ನು ಅಧ್ಯಕ್ಷರ ಗಮನಕ್ಕೆ ತಂದಿದ್ದೇನೆ.

ಪ್ರಜಾವಾಣಿ ಪತ್ರಿಕೆಯಲ್ಲಿ ಅಸತ್ಯ ಬರೆದಿದ್ದರೆ, ಪ್ರಜಾವಾಣಿ ಪತ್ರಿಕೆಮೇಲೆ ಪ್ರಿವಿಲೇಜ ಮೋಷನ್ ತರಬೇಕಾಗುತ್ತದೆ. ಹುಬ್ಬಳ್ಳಿ ಕಾರ್ಪೋರೇಷನ್ ರೆಸಲ್ಯೂಷನ್ ಆಗಿದ್ದು ಆದರ ವಿವರಗಳ ರೆಕಾರ್ಡ್ ಆಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಪತ್ರಿಕೆ ಮೇಲೆ ಸುಲಭವಾಗಿ ಆಕ್ಷೇಪಣೆ ಮಾಡುವುದು ಯೋಗ್ಯವಾದುದು ಅಲ್ಲ. ಅದು ಎಲ್ಲೋಜರ್ನಲಿಸಂ ಅಲ್ಲ ಇವೊತ್ತು ರಾಜ್ಯದಲ್ಲಿ ಹೇಳುವುದಾದರೆ ಅದು ಗೌರವಯುತ ಪತ್ರಿಕೆ ಅದರ ಮೇಲೆ ಅಷ್ಟೊಂದು ಹಗುರವಾಗಿ ಮಾತನಾಡಬೇಡಿ.

ಶ್ರೀ ಬಿ. ಬಸವಲಿಂಗಪ್ಪ.—ಗೌರವ ಇದ್ದರೆ ಉಳಿಸಿಕೊಳ್ಳಬೇಕು, ಉಳಿಸಿಕೊಳ್ಳದಿದ್ದರೆ ನಾವು ಏನು ಮಾಡಬೇಕಾಗುತ್ತದೆ

SRI H. D. DEVE GOWDA.—If the resolution is there, then you have to withdraw your remarks against the Prajavani Paper. You cannot pass remarks against it. ಹುಬ್ಬಳ್ಳಿ ಕಾರ್ಪೊರೇಷನ್‌ನಲ್ಲಿ ಆಗಿರತಕ್ಕ ರೆಸಲ್ಯೂಷನ್ ತರಿಸೋಣ. ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವುದು. ಸರಿಯಿಲ್ಲದಿದ್ದರೆ ಸಭೆಯಲ್ಲಿ ಪ್ರಿವಿಲೇಜ್ ಮೋಷನ್ ಮೂವ್ ಮಾಡುವುದಕ್ಕೆ ತಯಾರಿದ್ದೇವೆ.

SRI B. BASAVALINGAPPA :—Who are you to plead on behalf of that paper ?

SRI H. D. DEVE GOWDA :—What is it that you are speaking ? You must hold your tongue.

(There was pandemonium in the House)

(Sri Vatal Nagaraj Stood up.)

MADAM SPEAKER .—When I am standing, no member will stand. The Reporters need not take down what all Sri Vatal Nagaraj says.

I request the Hon. Members not to speak directly. Whatever they want to speak, they must address the Chair.

SRI B. BASAVALINGAPPA :—He began to point out his fingers towards me.

MADAM SPEAKER:—The Hon. Minister may please address in Chair.

ಶ್ರೀ ವಾಟಾಳ್ ನಾಗರಾಜ್ :—ನಾನು ತಮ್ಮ ಗಮನಕ್ಕೆ ಒಂದು ಅಂಶ ತರುತ್ತಿದ್ದೇನೆ ಪಾಪ, ಬಸಲಿಂಗಪ್ಪನವರು ಏನೋ ನಾನು ಯಾರ ಆಶ್ರಯದಿಂದ ಮಂತ್ರಿಯಾಗಿಲ್ಲ ನಾನು ದೇಶದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಧೈರ್ಯವಾಗಿ ಹೇಳಿದರು. ಅದನ್ನು ಮೆಚ್ಚಿಕೊಂಡು ಕೊಡುತ್ತಿದ್ದೆ. ಆದರೆ ಮುಂದುವರಿಯುತ್ತಾ ಮಿತಿಮೀರಿ ಅವರ ಬಾಯಲ್ಲಿ ಕೆಲವು ಪದಗಳು ಬಂದವು. ನೀವು ಕೇಳುವುದಕಿ ಯಾರು ಎಂದು ಹೇಳಿದರು. ನೀವು ಯಾರು ಡಿಸ್‌ಕಸ್ ಮಾಡುವುದಕ್ಕೆ ಅನ್ನುವಷ್ಟು ಮುಂದಕ್ಕೆ ಬಂದರು.

ಶ್ರೀ ಬಿ, ಬಸವಲಿಂಗಪ್ಪ : ಪ್ರಜಾವಾಣಿ ಪರವಾಗಿ ಮಾತನಾಡುವುದಕ್ಕೆ ನೀವು ಯಾರು ಎಂದು ಹೇಳಿದೆ ?

ಶ್ರೀ ವಾಟಾಳ್ ನಾಗರಾಜ್ ;—ಪತ್ರಿಕೆಯಲ್ಲಿ ಯಾವುದಾದರೂ ಜವಾಬ್ದಾರಿಯುತವಾದ ವಿಷಯ ಬಂದಾಗ ಅಧಿಕಾರ ಇದೆಯೆಂದು ಬಾಯಿಗೆ ಬಂದಹಾಗೆ ಮಾತನಾಡತಕ್ಕದ್ದು ಸರಿಯೇ ? ಆ ವರದಿಗಾರರು ಜವಾಬ್ದಾರಿಯುತವಾಗಿ ವರದಿ ಮಾಡಿರುವುದು ಪತ್ರಿಕೆಯಲ್ಲಿ ಬಂದಿದೆ. ಪತ್ರಿಕೆಯಲ್ಲಿ ಯಾವುದೇ ಸಾರ್ವಜನಿಕವಾದ ವಿಷಯ ಬಂದರೆ ಆ ಲೇಖನದ ಮೇಲೆ ಮಾತನಾಡುವುದಕ್ಕೆ ಸರ್ವರಿಗೂ ಹಕ್ಕು ಇದೆ. ಬಸವಲಿಂಗಪ್ಪನವರು ಹೇಳಿದ್ದನ್ನು ವಿತ್‌ಡ್ರಾ ಮಾಡಬೇಕು. ಸಭೆಯಲ್ಲಿ ಅಪಾಲಜಿ ಕೇಳದಿದ್ದರೆ ಅವರ ಬಗ್ಗೆ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ. ಅವರಿಗೆ ನಾಲಿಗೆ ಮಿತಿಮೀರಿ ಹೋಗಿದೆ. ಸಭೆಯಲ್ಲಿ ಅವರು ತಮ್ಮ ಉದ್ಧಟತನ ತೋರಿಸುತ್ತಿದ್ದಾರೆ ಪತ್ರಿಕೆಯಲ್ಲಿ ಬಂದಿರತಕ್ಕ ವರದಿಏನಿದೆ ಅದನ್ನು ನೀವೂ ಓದುತ್ತೀರಿ. ನಾವೂ ಓದುತ್ತೇವೆ ಪತ್ರಿಕಾ ವರದಿಗೆ ಮನ್ನಣೆ ಇಲ್ಲ ಎಂದು ಹೇಳುವುದಾದರೆ, ಅಲ್ಲಿ ಸಭೆ ನಡೆದು, ಸಭೆಯ ಹೊರಗಡೆ ಹೋಗಿ ಮಾನ್ಯ ಮಂತ್ರಿಗಳು ಷಟ್ ಅಪ್ ಎಂದು ಹೇಳಿರುವುದು ನಿಜವಾದದು ಎಂದು ಟ್ರಂಕಾಲ್ ಮಾಡಿ ತಿಳಿದುಕೊಂಡು ಇಬ್ಬರು ಸದಸ್ಯರು ಮಾತನಾಡಿದ್ದಾರೆ. ಅವರು ಷಟ್ ಅಪ್ ಅನ್ನುವಷ್ಟು ಹದ್ದು ಮೀರಿ ಮುಂದೆ ಹೋಗಿದ್ದಾರೆ ಎಂದು ಕೇಳುತ್ತಾ ಇದ್ದೇನೆ. ಅವರ ನಾಲಿಗೆಗೆ ಕಡಿವಾಣ ಹಾಕದಿದ್ದರೆ ಅವರ ವಿರುದ್ಧ.................

SRI B. BASAVALINGAPPA :—I rise to a point of order. The first point is: whether I met him; whether I talked to him. whether he talked to me ? I said there was no cause of action because I do not

ಅಧ್ಯಕ್ಷರು.—ಅದು ಮುಕ್ತಾಯವಾಯಿತು. ಮಾನ್ಯ ಸದಸ್ಯರಾದ ಶ್ರೀಮಾನ್ ಬಂಗಾರಪ್ಪನವರನ್ನು ಅವರ ಪಕ್ಷದವರು ಅವರ ಗುಂಪಿನಿಂದ ಹೊರಗೆ ಹಾಕಿದ್ದಾರೆ. ಆದ್ದರಿಂದ ಅದು ಅವರಿಗೆ ಕಷ್ಟವಾಗಿದೆ. ಈಗ ಅದೆಲ್ಲವೂ ಮುಕ್ತಾಯವಾಯಿತು ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು. ಇನ್ನು ಮುಂದಿನ ಕಾರ್ಯಕಲಾಪವನ್ನು ತೆಗೆದುಕೊಳ್ಳೋಣ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ನಿರ್ಣಯದ ಮೇಲೆ ತಮ್ಮ ಭಾಷಣವನ್ನು ಪ್ರಾರಂಭ ಮಾಡಬಹುದು.

Non-Official Resolution Re :—Abolition of the Legislative Council :—

ಶ್ರೀ ವಾಟಾಳ್ ನಾಗರಾಜ್ :—ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತನ್ನು ರದ್ದುಮಾಡಬೇಕೆಂದು ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಸಭೆಯ ಮುಂದೆ ತಂದಿರತಕ್ಕ ನಿರ್ಣಯವನ್ನು ಬೆಂಬಲಿಸುತ್ತಾ ಕೆಲವು ವಿಷಯಗಳನ್ನು ನಾನು ಹೇಳಬಯಸುತ್ತೇನೆ. ಜನಗಳಿಂದ ಚುನಾಯಿತರಾಗಿ ಬಂದಿರತಕ್ಕ ಶಾಸನ ಸಭೆಯ ಸದಸ್ಯರಿಂದ ಕೂಡಿರತಕ್ಕ ಶಾಸನ ಸಭೆ ಏನಿದೆ ಇದು ಅಧಿಕೃತವಾಗಿರತಕ್ಕ ಒಂದು ಸಭೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಬೆಯಲ್ಲಿ ಅನೇಕ ಪ್ರಗತಿಪರವಾದ ನಿರ್ಣಯಗಳನ್ನೂ ಕಾನೂನುಗಳನ್ನು ಅಂಗೀಕರಿಸುವುದಕ್ಕೆ ಯಾವುದೇ ಅಡ್ಡಿಯಾಗಲೀ, ತಡೆಯಾಗಲೀ ಇಲ್ಲ. ಆದರೆ ಈಗ ಸರ್ಕಾರದವರು ಏನು ಕ್ರಾಂತಿಕಾರಕವಾದ ಸಮಾಜವಾದದ ಕಾರ್ಯಕ್ರಮಗಳನ್ನು ಕೈಗೊಂಡು ರಾಜ್ಯದಲ್ಲಿ ಹೊಸ ಹೊಸ ಉಧಾತ್ತ ಧ್ಯೇಯ ದೋರಣೆಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ಏನು ಉದ್ದೇಶಗಳನ್ನು ಇಟ್ಟುಕೊಂಡಿದ್ದಾರೆಯೋ ಅದರ ಬಗ್ಗೆ ವಿಧಾನ ಪರಿಷತ್ತು ಏನಿದೆ ಅದು ಕಂಟಕಪ್ರಾಯವಾಗಿದೆ ಎಂದು ನಾನು ಅಂದುಕೊಂಡಿದ್ದೇನೆ. ಈ ವಿಧಾನ ಪರಿಷತ್ತಿನಿಂದ ಅನೇಕ ವಿಧವಾದ ತೊಂದರೆಗಳು ಉಂಟಾಗುತ್ತವೆ. ಈಗ ಶಾಸನ ಸಭೆಗೆ ಎಷ್ಟು ಹಣ ಖರ್ಚಾಗುತ್ತಿದೆಯೋ ಅಷ್ಟೇ ಹಣ ವಿಧಾನ ಪರಿಷತ್ತಿಗೂ ಖರ್ಚಾಗುತ್ತಿದೆ. ಇವೊತ್ತು ದೇಶದಲ್ಲಿ ಸಮಾಜವಾದವನ್ನು ಜಾರಿಗೆ ತಂದು ಸಾಮಾನ್ಯ ಜನಗಳಗೆ ರಕ್ಷಣೆ ಕೊಡಬೇಕೆಂದು ಹೇಳಿ ಇವೊತ್ತು ದುಂದು ವೆಚ್ಚವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಅನೇಕ ರಾಜ್ಯಗಳಲ್ಲಿ ವಿಧಾನ ಪರಿಷತ್ತನ್ನು ರದ್ದುಮಾಡಿದ್ದಾರೆ. ವಿಧಾನ ಪರಿಷತ್ತಿನಿಂದ ಯಾವುದೇ ಕೆಲಸಕಾರ್ಯವಾಗಲೀ ಆಗುವುದಿಲ್ಲ ಎನ್ನತಕ್ಕದ್ದನ್ನು ನಾನು ತಿಳಿದುಕೊಂಡಿದ್ದೇನೆ ಇವೊತ್ತಿನ ಪರಿಸ್ಥಿತಿಯಲ್ಲಿ ವಿಧಾನ ಪರಿಷತ್ತು ಇಡತಕ್ಕದ್ದು ಒಳ್ಳೆಯದಲ್ಲ. ವಿಧಾನ ಪರಿಷತ್ತಿನಿಂದ ಆದರ್ಶವಾದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ನಾನು ತಿಳಿದುಕೊಂಡಿಲ್ಲ. ಈ ವಿಧಾನ ಪರಿಷತ್ತನ್ನು ಇಟ್ಟುಕೊಂಡಿರತಕ್ಕದ್ದು ಬರೀ ಒಂದು ರಾಜಕೀಯ ಉದ್ದೇಶಕ್ಕೋಸ್ಕರ ಇಟ್ಟುಕೊಂಡಿದ್ದಾರೆ. ಯಾರು ಜನಸಾಮಾನ್ಯರಿಂದ ವೋಟು ಪಡೆದುಕೊಂಡು ಬರಲು ಸಾಧ್ಯವಾಗದೆ ಚುನಾವಣೆಯಲ್ಲಿ ಸೋತು ಹೋಗಿದ್ದಾರೆಯೋ ಅಂಥಾ ಜನಗಳು ಹಿಂದಿನ ಬಾಗಿಲಿನಿಂದ ಈ ಸಭೆಗೆ ಬರಲು ಇದು ಒಂದು ಅವಕಾಶವಿದೆ ಮತ್ತು ಈ ಸಭೆಗೆ ನಾಮಕರಣ ಏನು ಮಾಡುತ್ತಿದ್ದಾರೆ ಇದನ್ನು ನೋಡಿದರೆ ನಿಜವಾಗಿಯೂ ಬಹಳ ವ್ಯಥೆಯಾಗುತ್ತದೆ. ಹಿಂದೆ ಶ್ರೀ ಮಾನ್ ಕೆ ಹನುಮಂತಯ್ಯನವರ ಕಾಲದಲ್ಲಿ ವಿಧಾನ ಪರಿಷತ್ತಿಗೆ ನಾಮಿನೇಷನ್ ಮಾಡುವಾಗ ಯೋಗ್ಯ ಕಲಾವಿದರು, ಸಮಾಜ ಸೇವಕರು, ಬಹಳ ಒಳ್ಳೆಯ ಮೇಧಾವಿಗಳೆ ಇಂಥವರನ್ನು ಚುನಾಯಿಸಿ ನಾಮಿನೇಷನ್ ಮಾಡುತ್ತಿದ್ದರು. ಇವೊತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ ರಾಜಕಾರಣಿಗಳನ್ನೂ ತಮಗೆ ಬೇಕಾದವರನ್ನೂ ಯಾರನ್ನೋ 8 ಜನಗಳನ್ನು ವಿಧಾನ ಪರಿಷತ್ತಿಗೆ ನಾಮಿನೇಷನ್ ಮಾಡಿದ್ದಾರೆ. ಈ ನಾಮಿನೇಷನ್ ಮಾಡಿರುವುದು ಸರಿಯಾಗಿಲ್ಲ. ನ್ಯಾಯ ಈ ಮೂರು ಸೀಟು ಇರತಕ್ಕದ್ದು ಕಲಾವಿದರಿಗೆ, ಪತ್ರಿಕಾ ಕಾರ್ಯಕರ್ತರಿಗೆ ಮತ್ತು ದೇಶಕ್ಕೋಸ್ಕರ ತ್ಯಾಗ ಮಾಡಿದಂತಹವರಿಗೆ. ಅಂಥವರನ್ನು ಈ ಮೂರು ಸೀಟುಗಳಿಗೆ ನಾಮಿನೇಷನ್ ಮಾಡದೆ ಯಾರೋ ತಮಗೆ ಬೇಕಾದ ರಾಜಕಾರಣಿಗಳನ್ನು ನಾಮಿನೇಷನ್ ಮಾಡಿದ್ದಾರೆ. ಹಿಂದೆ ಈ ಸಭೆಗೆ ನಾಮಕರಣ ಮಾಡುತ್ತಿದ್ದ ವ್ಯಕ್ತಿಗಳನ್ನು ಈಗ ನಾಮಕರಣ ಮಾಡಿರತಕ್ಕ ವ್ಯಕ್ತಿಗಳನ್ನೂ ನೋಡಿದರೆ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ಹಿಂದೆ ಈ ಸೀಟುಗಳಿಗೆ ಗುಬ್ಬಿವೀರಣ್ಣನವರು, ಗೋರೂರು ರಾಮಸ್ವಾಮಯ್ಯಂಗಾರ್ ಅವರು ಮತ್ತು ಟಿ ಚೌಡಯ್ಯನವರು ಇಂಥಾ ಸಾಹಿತಿಗಳು ಮತ್ತು ಕಲಾವಿದರುಗಳನ್ನು ಹಿಂದೆ ನಾಮಿನೇಷನ್ ಮಾಡಿದ್ದರು. ಆದರೆ ಈಗ ಯಾರೋ ತಮಗೆ ಬೇಕಾದವರನ್ನು ರಾಜಕಾರಣಿಗಳನ್ನು ನಾಮಕರಣ ಮಾಡಿದ್ದಾರೆ. ಇದು ಸರಿಯಲ್ಲ ಈ ವಿಧಾನ ಪರಿಷತ್ತಿನಲ್ಲಿ ಏನು ನಡೆಯುತ್ತದೆ ಮತ್ತು ಇದರ ಅವಶ್ಯಕತೆ ಇತ್ಯಾದಿಗಳ ಬಗ್ಗೆ ನಮ್ಮ ಮಾನ್ಯ ಮಿತ್ರರಾದ ಶ್ರೀ ಕೋಣಂದೂರು ಲಿಂಗಪ್ಪನವರು ದೀರ್ಘವಾದ ಭಾಷಣವನ್ನು ಮಾಡಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಇನ್ನು ಈ ನಿರ್ಣಯದ ಬಗ್ಗೆ ಹೆಚ್ಚಿಗೆ ಹೇಳಬೇಕಾದದ್ದೇನೂ ಇಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಈ ವಿಧಾನ ಪರಿಷತ್ತಿನಿಂದ ಹಣ ವ್ಯಯವಾಗುತ್ತದೆ. ಇದರಿಂದ ಜನಗಳಿಗೆ ಅನುಕೂಲವಿಲ್ಲ. ಆದರಿಂದ ಈ ಪರಿಷತ್ತನ್ನು ರದ್ದು ಮಾಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

know who he was. Even now I do not know who he is. There was no occasion for talking with that man. That is the cause of action. There is no cause of action. All these friends presume that I met him and the cause of action took place and these are the consequences. I think my point of order should be upheld. My learned friend Sri Vatal Nagaraj was going ahead with his argument on the presumption that I did say this and this incident happened. I therefore respectfully submit that this is not a correct state of affair. I request the Chair not to allow the Hon. Members to talk on presumption.

ಅಧ್ಯಕ್ಷರು :—ಅವರ ಏನನ್ನೂ ಅಂದಿಲ್ಲ ಎಂದು ಹೇಳುವಾಗ ನಿಮ್ಮ ಕೇಸು ಏನಿದೆ ?

ಶ್ರೀ ವಾಟಾಳ್ ನಾಗರಾಜ್ :—ಅವರು ಅಂದಿದ್ದಾರೆ. ಒಂದು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿಸಿ. ಕಾರ್ಪೊರೇಟರುಗಳನ್ನು ಕರೆಸುತ್ತೇನೆ. ತಮ್ಮ ಅಧ್ಯಕ್ಷತೆಯಲ್ಲಿ ನಡೆಯಲಿ. ಕೆಲವೊಂದು ವಿಷಯ ಅವರು ಸತ್ಯವಾದುದನ್ನೇ ಹೇಳಿದರು, ಅದರ ಬಗ್ಗೆ ವಾದವಿಲ್ಲ. ನಾನು ಧೈರ್ಯದಿಂದ ಹೇಳುತ್ತೇನೆ, ಯಾರಿಂದಲೂ ನಾನು ಮಂತ್ರಿಯಾಗಿಲ್ಲ, ಇಂದಿರಾ ಗಾಂಧಿಯವರ ಏಜಂಟೂ ಅಲ್ಲ, ನಾನು ಬರೀ ಸ್ವಶಕ್ತಿಯಿಂದ ಮಂತ್ರಿ ಯಾಗಿದ್ದೇನೆ ಎಂದು ಹೇಳತಕ್ಕ ಧೈರ್ಯವನ್ನು ಅಲ್ಲಿ ತೋರಿಸಿದರು. ಇದರ ಬಗ್ಗೆ ನನ್ನ ವಾದವಿಲ್ಲ. ಅವರು ಇಲ್ಲಿ ಹೇಳಲಿಲ್ಲ ಎಂದಿದ್ದಾರೆ. ಹೇಳಿದ್ದಾರೆ ಎನ್ನುವುದನ್ನು ನಾನು ಇಲ್ಲಿ ರುಜುವಾತು ಪಡಿಸುತ್ತೇನೆ. ಹಾಗೆ ಅದು ನಿಜವಲ್ಲ ಎಂದರೆ ನಾನು ನನ್ನ ಸದಸ್ಯತ್ವಕ್ಕೆ ಇಲ್ಲಿ ರಾಜೀನಾಮೆ ಕೊಡುತ್ತೇನೆ, ನಿಜವಾಗಿದೆ ಎನ್ನುವುದು ರುಜುವಾತು ಆದರೆ ಮಾನ್ಯ ಮಂತ್ರಿಗಳು ಅವರ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಲು ತಯಾರಿದ್ದಾರೆಯೋ ? ಪತ್ರಿಕೆಗಳಲ್ಲಿ ಸುದ್ದಿ ಬಂದಿರುವುದರಿಂದ ಇದನ್ನು ಇಷ್ಟಕ್ಕೇ ಬಿಡಬೇಕು, ಇದರ ಬಗ್ಗೆ ಇನ್ನೇನೂ ಮಾತನಾಡುವುದು ಬೇಡ ಎಂದರೆ ಅದು ಸರಿಯಲ್ಲ. ಪತ್ರಿಕೆಯವರೂ ತುಂಬಾ ಹೊಣೆಗಾರಿಕೆಯಿಂದ ಸಕಾಲದಲ್ಲಿ ತಿಳಿದುಕೊಂಡು ಹಾಕಬೇಕಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಈಗತಾನೇ ಮಾತನಾಡಿದ ಮಂತ್ರಿಗಳು ವಿವರಗಳನ್ನು ಹೇಳುತ್ತಾ ಇದನ್ನು ಪ್ರಾಮಾಣಿಕವಾಗಿ ಹೇಳಿದರು ಎಂದು ಇಟ್ಟುಕೊಂಡರೂ ಈ ವಿಚಾರವನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳುವುದು ಸಾಧುವಾದುದಲ್ಲ ಆಕಸ್ಮಿಕವಾದ ಸನ್ನಿವೇಶದಲ್ಲಿ ಮಾತು ಬಂತು ಎಂದರೆ ಯಾವ ಸನ್ನಿವೇಶದಲ್ಲಿ ಬಂತು ಎನ್ನುವುದನ್ನು ಮೊದಲನೆಯದಾಗಿ ವಿಚಾರಮಾಡಬೇಕು ನನಗೆ ವೈಯಕ್ತಿಕವಾಗಿ ಶ್ರೀಮಾನ್ ಬಸಲಿಂಗಪ್ಪನವರ ಬಗ್ಗೆ ತುಂಬಾ ಗೌರವವಿದೆ ಆದರೆ ಇವೊತ್ತು ಪತ್ರಿಕೆಗಳಲ್ಲಿ ಇಂತಹ ವರದಿ ಬಂದಿರಬಹುದು. ನಾಳೆ ಮಂತ್ರಿಗಳು ಅಧಿಕಾರಿಗಳಿಗೆ ಹೇಳಿಸಿ ಈ ಸಭೆಯ ಅನೇಕ ಕಾರ್ಯಕಲಾಪಗಳನ್ನು ಪತ್ರಿಕೆಗಳಲ್ಲಿ ಪ್ರಕಟಮಾಡಲು ಅವರನ್ನು ಕರೆಯಿಸಿ ಹೇಳಬಹುದು. ಅದೇ ರೀತಿ ಈ ಸಭೆಯ ಮಾನ್ಯ ಅಧ್ಯಕ್ಷರು ಇಲ್ಲಿ ನಡೆಯುವ ಅನೇಕ ಕಾರ್ಯಕಲಾಪಗಳು ಪತ್ರಿಕೆಗಳಲ್ಲಿ ವರದಿಯಾಗುವಾಗ ಅದರಲ್ಲಿ ನಿಜಾಂಶ ಇದೆಯೋ ಇಲ್ಲವೇ ಎನ್ನುವುದನ್ನು ನೋಡುವಕಾಲ ಬಂದರೂ ಬರಬಹುದು. ಆದುದರಿಂದ ಅಧ್ಯಕ್ಷರು ಪತ್ರಿಕೆಗಳವರಿಗೆ ಸರಿಯಾದ ತಿಳುವಳಿಕೆ ಕೊಟ್ಟು ನಿಜವಾದ ವಿಚಾರಗಳನ್ನು ಪ್ರಕಟಮಾಡಬೇಕು ಎಂದೂ ಅವರೂ ತಿಳಿಯಬೇಕಾದ್ದು ಅಗತ್ಯ. ಆದರೆ ಇಲ್ಲಿ ಮಾನ್ಯ ಮಂತ್ರಿಗಳು ಬಹಳ ಉದ್ಧಟತನದಿಂದ ಈ ಸಭೆಯ ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ಆಡಿದ ಮಾತುಗಳನ್ನು ನೋಡಿ ನಮಗೆ ತುಂಬಾ ಆತಂಕವನ್ನುಂಟು ಮಾಡಿದೆ. ಇದಕ್ಕಾಗಿ ತಮ್ಮ ಮುಖೇನ ಭಕ್ತಿಯಿಂದ ವಿನಂತಿ ಮಾಡುವುದು ಇದರ ಬಗ್ಗೆ ಸರಕಾರಕ್ಕೆ ಸರಿಯಾಗಿ ಹೇಳಬೇಕು ಮತ್ತು ಮಾನ್ಯ ಮಂತ್ರಿಗಳು ಇದರ ಬಗ್ಗೆ ಅವರ ವಿಷಾದವನ್ನು ವ್ಯಕ್ತಪಡಿಸಬೇಕು. ನೈತಿಕವಾಗಿ ಇದನ್ನು ಮಾಡುವುದು ಅವರಿಗೆ ಸರಿಯಾಗಿರುತ್ತದೆ. ಹಾಗಿಲ್ಲದಿದ್ದರೆ ಇನ್ನು ಮುಂದೆ ಧರ್ಮ ನ್ಯಾಯಗಳಿಗೆ ರಕ್ಷಣೆ ದೊರೆಯುತ್ತದೆಯೇ? ಇಂತಹ ವಿಚಾರಗಳನ್ನು ಸ್ಪಷ್ಟವಾಗಿ ಹೇಳಿರುವುದು ಚೆನ್ನಾಗಿ ಗೊತ್ತಾಗಿರುವುದರಿಂದ ಇದರ ಬಗ್ಗೆ ಮಂತ್ರಿಗಳು ತಮ್ಮ ಮುಖೇನ ಅವರ ಕ್ಷಮಾಪಣೆ ವ್ಯಕ್ತಪಡಿಸಲೇ ಬೇಕು, ತಾವು ಈ ವ್ಯವಹಾರವನ್ನು ಇಡೀ ಪ್ರಜಾಪ್ರಭುತ್ವಕ್ಕೆ ಮಾದರಿಯಾಗುವ ರೀತಿಯಲ್ಲಿ, ಇದರ ಎಲ್ಲ ವಿವರಗಳನ್ನು ಸಾಕ್ಷಿ ಸಾಹಿತ್ಯಗಳನ್ನೂ ಪಡೆದು ತಾವೇ ಇದನ್ನು ಪರಿಶೀಲಿಸಿ ತಿಳಿಸಿದರೆ ಇದರಲ್ಲಿ ನಿಮ್ಮ, ನಮ್ಮ ತಪ್ಪು ಯಾವುದೂ ಇರುವುದಿಲ್ಲ. ತಾವು ನಮ್ಮನ್ನು ರಕ್ಷಣೆ ಮಾಡುವವರಾದರಿಂದ ಇದರಲ್ಲಿ ವಿಚಾರ ಮಾಡಿ ಸರಿಯಾದ ವಿಚಾರಗಳನ್ನು ಇಲ್ಲಿ ತಿಳಿಸಬಹುದು. ಇದರಿಂದ ಯಾರಮೇಲೂ ತಪ್ಪು ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ :—ಶ್ರೀಕೃಷ್ಣ ಪರಮಾತ್ಮ ಚಕ್ರವನ್ನು ಕೈಯ್ಯಲ್ಲಿಟ್ಟು ಕೊಂಡು ಭಕ್ತರನ್ನು ಕಾಪಾಡುವಂತೆ ಅಂತಹ ಚಕ್ರವನ್ನೂ ತಾವು ಇಲ್ಲಿ ಇಟ್ಟುಕೊಂಡಿರುತ್ತೀರಿ. ಇದನ್ನು ಯಾವಾಗ ಪ್ರಯೋಗ ಮಾಡುತ್ತಾರೋ ಇಲ್ಲವೆ ಕತ್ತನ್ನು ಕತ್ತರಿಸುತ್ತಾರೋ ನನಗೆ ಗೊತ್ತಿಲ್ಲ. ಮಾನ್ಯ ಮಂತ್ರಿಗಳ ಹೇಳಿಕೆ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ಹೇಳಿದರು. ಇದರ ಬಗ್ಗೆ ನಾನು ಇಷ್ಟು ಮಾತ್ರ ಹೇಳಬೇಕೆಂದಿದ್ದೇನೆ. ಇದರಲ್ಲಿ ಮಾನ್ಯ ಮಥಾಯ್ಸ್‌ರವರು ಅವರ ಪಕ್ಷದವರೇ ಆದವರು ಹೇಳಿಕೆ ಕೊಟ್ಟಿರುವುದು ಬಂದಿದೆ. ಇದನ್ನು ಯಾರೂ ತಪ್ಪು ಎಂದು ಹೇಳಲಾರರು. ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಅಪಾರ ಗೌರವ ಇದೆ, ಅನೇಕ ವರ್ಷಗಳಿಂದ ಅವರನ್ನು ನಾನು ನೋಡಿದ್ದೇನೆ, ಅವರ ಬಗ್ಗೆ ಕೆಲವು ಮಾತನಾಡಿದ್ದೇನೆ, ಅವರಿಗೂ ನಾನು ಚೆನ್ನಾಗಿ ಗೊತ್ತು. ಆದರೆ ಅವರು ಮಾತನಾಡುವಾಗ ಸ್ವಲ್ಪ ಎರ್ರಾಬಿರ್ರಿಯಾಗಿ ಒಂದೊಂದು ಸಲ ಏನಾದರೂ ಅಂದುಬಿಡುತ್ತಾರೆ. ಇದರಿಂದ ನನಗೂ ಅವರಿಗೂ ನಿಕಟ ಸಂಬಂಧವಿದೆ. ನಾನಾದರೂ ಅವರನ್ನು ಟೀಕೆ ಮಾಡಲು ಹೋಗುತ್ತಿಲ್ಲ. ಅವರು ಇಲ್ಲಿ ಹೇಳಿಕೆ ಕೊಡುವಾಗ ಅದನ್ನು ಸರಿಯಾಗಿ ಡ್ರಾಫ್ಟ್ ಮಾಡಿ ಅದರಲ್ಲಿ ಎಷ್ಟು ಸರಿಯಾದುದು ಇಲ್ಲವೇ ಎಷ್ಟು ಸರಿಯಾದುದು ಇಲ್ಲ ಎನ್ನುವುದನ್ನು ಸರಿಯಾಗಿ ಹೇಳೋಣ ಎಂದು ಇಲ್ಲಿ ಏಕೆ ಹೇಳಲಿಲ್ಲವೋ ಏನೋ ? ಆದರೆ ಅವರ ಸ್ನೇಹಿತರಾದ ಶ್ರೀಮಾನ್ ಗುಂಡೂರಾಯರೇ ಅವರನ್ನು ಕರೆದುಕೊಂಡು ಹೋದದ್ದು ಎಂದು ಗೊತ್ತಾಗಿದೆ. ಆದರೆ ಅದೇಕೋ ಶ್ರೀಮಾನ್ ಗುಂಡೂರಾಯರು ಇಲ್ಲಿದ್ದರೂ ಇಲ್ಲಿ ಗುಂಡಾಯ ನಮಃ ಎಂದು ಭದ್ರವಾಗಿ ಕುಳಿತುಬಿಟ್ಟಿದ್ದಾರೆ ಮತ್ತು ಇದರ ಬಗ್ಗೆ ಒಂದು ಮಾತೂ ಸಹ ಹೇಳಲಿಲ್ಲ. ಅವರು ಅವರ ಪಾರ್ಟಿಯವರೇ ಆದವರು. ಏನಾದರೂ ಇಲ್ಲಿ ಗಿಳಿಸಬಹುದಾಗಿತ್ತು. ಅದೇಕೆ ಹೇಳಲಿಲ್ಲವೋ ನನಗೆ ಗೊತ್ತಿಲ್ಲ. ಇದರಲ್ಲಿರುವ ಪ್ರಶ್ನೆ ಏನು ಎಂದರೆ ನಮಗೆಲ್ಲಾ ಗೊತ್ತಿರುವ ಹಾಗೆ ಮಾನ್ಯ ಶ್ರೀ ದೇವೇಗೌಡರವರು ಹೇಳಿದಂತೆ ಇದು ನೈತಿಕವಾಗಿರತಕ್ಕದ್ದು. ನನ್ನ ಅಭಿಪ್ರಾಯವೂ ಅದೆ. ಮಂತ್ರಿಗಳು ಜವಾಬುದಾರಿಯಿಂದಲೇ ಇಲ್ಲಿ ಹೇಳುತ್ತಾರೆ. ಇದರಲ್ಲಿ ಯಾವುದೇ ಜಗಳ ಮಾಡುವುದಕ್ಕೆ ನಾನು ಹೋಗುತ್ತಿಲ್ಲ. ಪತ್ರಿಕೆಗಳಿಂದ ನಮಗೆ ಇದು ಗೊತ್ತಾಗಿದೆ. ಪತ್ರಿಕೆಗಳವರು ಸರಿಯಾಗಿ ಪ್ರಕಟಮಾಡಿಲ್ಲ ಎಂದರೆ ಅದನ್ನು ಪ್ರತಿಭಟನೆ ಮಾಡೋಣ. ಆದರೆ ನಮ್ಮ ಮಂತ್ರಿಗಳು ಈ ತರಹ ಮಾಡಬಾರದಾಗಿತ್ತು. ಮಾನ್ಯ ಶ್ರೀಮಾನ್ ಸಿದ್ಧವೀರಪ್ಪನವರು ನಗು ನಗುತ್ತಾ ಅವರು ಮಾತಾಡುವಾಗಲೆಲ್ಲಾ ನಮಗೆ ಚಾಕು ಹಾಕಿ ಇರಿಯುತ್ತಾರೆ. ಹಾಗೆ ನಮ್ಮ ಈ ಮಂತ್ರಿಗಳೂ ಹೇಳಬೇಕಾಗುತ್ತದೆ. ಇದರ ಬಗ್ಗೆ ನನಗೆ ಭಾಸವಾಗುವುದು, ನಾನು ಯಾರನ್ನೂ ಕಂಡೇ ಇಲ್ಲ ಎಂದು ಇಲ್ಲಿ ಅವರು ಹೇಳುವುದು ನೋಡಿ ಬಹಳ ಆಶ್ಚರ್ಯವಾಗಿದೆ. ಪತ್ರಿಕೆಗಳಲ್ಲಿ ಬಂದಿರುವಂತೆ ಹೆಸರೂ ಕೂಡ ಇದೆ. ಶ್ರೀ ಮಥಾಯ್ಸ್ ಎನ್ನುವವರೇ ಅಲ್ಲಿ ಕಾರ್ಪೊರೇಷನ್ ಸಭೆಯಲ್ಲಿ ಸದಸ್ಯರಾಗಿ ಹೇಳಿಕೆ ಕೊಟ್ಟಿರುವುದು ನಂಬಬಹುದಾದ ಘಟನೆಗಳು, ಇದನ್ನು ಪತ್ರಿಕೆಗಳು ಪ್ರಕಟ ಮಾಡಿವೆ.

ಅಧ್ಯಕ್ಷರು :—ಇಷ್ಟು ಹೊತ್ತು ಮಾನ್ಯ ಸದಸ್ಯರು ಹೇಳಿರುವುದನ್ನೆಲ್ಲಾ ಕೇಳಿದೆ. ಆದರೆ ಇದರಲ್ಲಿ ಯಾವುದಾದರೂ ಒಂದು ಹೊಸ ವಿಚಾರವಿದೆಯೋ ? ಇದನ್ನು ಮಾನ್ಯ ಸದಸ್ಯರೇ ಹೇಳಬೇಕು.

ಶ್ರೀ ಎಂ. ಎಸ್. ಕೃಷ್ಣನ್ :—ಆದರೆ ತಮ್ಮ ಕೈಯ್ಯಲ್ಲಿ ಚಕ್ರ ಇದೆಯಲ್ಲಾ. ನಾನು ಇಷ್ಟೇ ಹೇಳುವುದು. ಮಾನ್ಯ ಮಂತ್ರಿಗಳಾದ ಶ್ರೀ ಬಸವಲಿಂಗಪ್ಪನವರು ಪತ್ರಿಕೆಯಲ್ಲಿ ಬಂದಿರುವ ಹೇಳಿಕೆ ಬಗ್ಗೆ ಹೇಳಿರುವುದು ನೋಡಿ ತುಂಬಾ ವಿಷಾದವಾಗಿದೆ. ನಿಜವಾಗಿಯೂ ಪತ್ರಿಕೆಗಳಲ್ಲಿ ಬಂದಿರುವುದು ಸುಳ್ಳು ಎಂದಾಗ ಅಂತಹ ಪತ್ರಿಕೆಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾದ ಪ್ರಸಂಗ ಬರುತ್ತದೆ. ಆದರೆ ಪತ್ರಿಕೆಯನ್ನು ಬಯ್ಯೋ ರೀತಿಯಲ್ಲಿ ಹೇಳುವುದು ಸರಿಯಾದುದಲ್ಲ. ನಾವೆಲ್ಲಾ ಸದಸ್ಯರು ಇಲ್ಲಿ ಮಾತನಾಡುತ್ತೇವೆ. ಅದನ್ನು ಇಲ್ಲಿರುವ ಪತ್ರಿಕೆಗಳವರು ಬರೆದುಕೊಳ್ಳುತ್ತಾರೆ, ಅವರು ತಪ್ಪಾಗಿ ಬರೆದರು ಎಂದರೆ ಏನು ಮಾಡಬೇಕು ಎಂಬುದನ್ನು ಮುಂದೆ ಯೋಚನೆ ಮಾಡೋಣ. ಪತ್ರಿಕೆಗಳು ಹೇಳಿರುವುದು ಸರಿಯಾಗಿಲ್ಲ ಎಂದು ಅವನ್ನು ಬಯ್ಯುವ ರೀತಿಯಲ್ಲಿ ಮಂತ್ರಿಗಳು ಹೇಳುವುದು ತರವಲ್ಲ ಎಂದು ನನಗನಿಸುತ್ತದೆ. ಇದು ನನ್ನ ಅಭಿಪ್ರಾಯ. ಆದರೆ ಇಲ್ಲಿ ಪತ್ರಿಕೆ ಹೇಳಿರುವುದು ಸರಿಯಾಗಿಲ್ಲ ಎಂದು ಸ್ಪಷ್ಟವಾಗಿ ಒಂದು ಹೇಳಿಕೆ ಕೊಟ್ಟರೆ ಅದನ್ನೂ ಪತ್ರಿಕೆಗಳವರು ಪ್ರಕಟ ಮಾಡುತ್ತಾರೆ. ಪತ್ರಿಕೆಗಳಲ್ಲಿ ಅದನ್ನು ಮುಂದಿನ ದಿನಗಳಲ್ಲಿ ಪ್ರಕಟಮಾಡುತ್ತಾರೆ. ಇದಕ್ಕಾಗಿ ಶ್ರೀ ಬಸವಲಿಂಗಪ್ಪನವರು ಪತ್ರಿಕೆಗಳನ್ನು ಬಯ್ಯುವ ಹಾಗೆ ಇಲ್ಲ. ಇವೊತ್ತು ಈ ಸಭೆಯಲ್ಲಿ ನಾವು ಮಾತನಾಡುವುದನ್ನೆಲ್ಲಾ ಇಲ್ಲಿರುವ ರಿಪೋರ್ಟರುಗಳು ಜವಾಬುದಾರಿಯಿಂದ ಬರೆದು ವರದಿ ಪ್ರಕಟ ಮಾಡುತ್ತಾರೆ, ಅವರಂತೆಯೇ ಪತ್ರಿಕೆಗಳವರೂ ಬರೆಯುತ್ತಾರೆ. ಇದರಲ್ಲಿ ಇಲ್ಲಿನ ರಿಪೋರ್ಟರುಗಳು ಬರೆದಿರುವುದು ಸರಿಯೇ ಇಲ್ಲವೇ ಪತ್ರಿಕೆಗಳವರು ಬರೆಯುವುದು ಸರಿಯೇ ಎನ್ನುವುದು ಬೇರೆ ಪ್ರಶ್ನೆ. ಇಲ್ಲಿ ಮಾತಾಡಿದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ವಿವರವಾಗಿ ಹೇಳಿ ಸೂಚಿಸಿದ್ದರೂ ಅದನ್ನು ಸ್ಪಷ್ಟವಾಗಿ ಹೇಳಲಿಲ್ಲ ಎಂದು ಮಂತ್ರಿಗಳು ಹೇಳುವುದು ನಿಮಗೆ ಗೌರವವಲ್ಲ ಮತ್ತು ಆ ರೀತಿ ಹೇಳುವುದು ಸರಿಯಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ದೇವೇಗೌಡರು ತಮಗೆ ಕಳಿಸಿ ಕೊಟ್ಟಿರುವ ಎರಡು ನೋಟೀಸ್‌ಗಳಲ್ಲಿ ನಾನು ಸಹ ಸಹಿ ಹಾಕಿದ್ದೇನೆ. ಮಾನ್ಯ ಮಂತ್ರಿಗಳಾದ ಬಸವ ಲಿಂಗಪ್ಪನವರು ನಡೆದಿರುವ ಘಟನೆಯನ್ನು ನಡೆದಿಲ್ಲ ಎಂದು ಹೇಳಿಬಿಟ್ಟಿದ್ದರೆ ನಾವು ಈ ವಿಷಯವನ್ನು ಇಷ್ಟೊಂದು ಪ್ರಸ್ತಾಪ ಮಾಡುವ ಅವಶ್ಯಕತೆಯೇ ಇರುತ್ತಿರಲಿಲ್ಲ. ಆದರೆ ಅವರು ಈ ವಿಷಯಕ್ಕೆ ಹಿಂದೆ ಮುಂದೆ ಸ್ವಲ್ಪ ಉಪ್ಪುಖಾರ ಹಚ್ಚಿ ಹೇಳಿದ್ದಾರೆ. ತಾವು ಮಂತ್ರಿಗಳಾಗಬೇಕು ಎಂದು ಹೇಳಿದವರು ಮತ್ತು ತಾವು ಮಂತ್ರಿಗಳಾಗಬಾರದು ಎಂದು ಹೇಳಿದವರು ಎಲ್ಲರೂ ನಿಮ್ಮ ಪಕ್ಷದಲ್ಲಿಯೇ ಇರಬಹುದು. ಅದು ನಮಗೆ ಸಂಬಂಧವಿಲ್ಲ. ನಾವೇನು ಇಲ್ಲಿ ಕಟ್ಟುಕತೆ ಕಟ್ಟಿ ಹೇಳುತ್ತಿಲ್ಲ. ತಮ್ಮ ವಿಷಯದಲ್ಲಿ ಒಬ್ಬರು ಮನವಿ ಕೊಟ್ಟಿರುವುದರಿಂದ ಮತ್ತು ಆ ವಿಷಯ ವೃತ್ತ ಪತ್ರಿಕೆಗಳಲ್ಲಿ ಬಂದಿರುವುದರಿಂದ ಪ್ರಸ್ತಾಪ ಮಾಡಬೇಕಾಗಿ ಬಂತು. ಇಲ್ಲದಿದ್ದರೆ ನಾವು ಖಂಡಿತ ಆ ವಿಷಯವನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ. ಪತ್ರಿಕೆಯಲ್ಲಿ ಆ ವಿಷಯ ಬಂದಿರುವುದಕ್ಕಾಗಿ ಮಾನ್ಯ ಮಂತ್ರಿಗಳು ಪತ್ರಿಕೆಯನ್ನೇ ದೂಷಣೆ ಮಾಡುವುದು ಸರಿಯಲ್ಲ. ಪತ್ರಿಕೆಗಳವರು ತಮ್ಮನ್ನು ಹೊಗಳಿ ಪತ್ರಿಕೆಯ ಮುಂಭಾಗದಲ್ಲಿ ಅಚ್ಚು ಹಾಕಿದಾಗ ಬೆನ್ನು ತಟ್ಟಿಕೊಂಡವರೂ ನೀವೇ, ಇಂತಹ ವಿಷಯವನ್ನು ಅಚ್ಚು ಹಾಕಿದಾಗ ಸುಳ್ಳು ಹಾಕಿದ್ದಾರೆಂದು ಹೇಳು ತ್ತಿರುವವರೂ ನೀವೇ. ಇದು ಕೇವಲ ಸಾಮಾನ್ಯ ವಿಷಯವಾಗಿದ್ದರೆ ನಾವು ಪ್ರಸ್ತಾಪ ಮಾಡುತ್ತಿರಲಿಲ್ಲ. ಒಬ್ಬರು ಮಂತ್ರಿಗಳ ಬಗ್ಗೆ ಪತ್ರಿಕೆಯಲ್ಲಿ ಪ್ರಸ್ತಾಪ ಮಾಡಿದಾಗ ಅದನ್ನು ಈ ಮಾನ್ಯ ಸಭೆಯಲ್ಲಿ ಪ್ರಸ್ತಾಪ ಮಾಡುವುದು ನಮ್ಮ ಕರ್ತವ್ಯ. ಅದರಂತೆ ಮಾಡಿದ್ದೇವೆ. ಇಂತಹ ಒಂದು ಘಟನೆ ನಡೆಯದೇ ಇದ್ದರೆ ಬಹಳ ಒಳ್ಳೆಯದು. ಏಕೆಂದರೆ ನಾವು ನಿಮ್ಮಿಂದ ಒಳ್ಳೆಯ ಕೆಲಸಗಳನ್ನು ನಿರೀಕ್ಷೆ ಮಾಡುತ್ತಿದ್ದೇವೆ. ನೀವು ಹಿಂದುಳಿದ ಜನಾಂಗದವರ ಪರವಾಗಿ ಮಂತ್ರಿಗಳಾಗಿರುವುದರಿಂದ, ಅವರ ಮುಖಂಡತ್ವದಲ್ಲಿ ತಾವು ಈ ರಾಜ್ಯದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿ ಆ ಮೂಲಕ ಒಳ್ಳೆಯ ಹೆಸರನ್ನು ಸಂಪಾದನೆ ಮಾಡಬೇಕೆಂಬ ಗುರಿಯನ್ನು ನೀವು ಇಟ್ಟುಕೊಂಡಿದ್ದೀರಿ. ಈ ಕಾರಣದಿಂದ ಮುಂದೆ ಬರುವ ಜನರನ್ನು ಹಿಂದೆ ಎಳೆಯು ವುದಕ್ಕೆ ಪ್ರಯತ್ನಪಡುವ ಜನರು ಇರಬಹುದು. ಮುಖ್ಯವಾಗಿ ಮಂತ್ರಿಗಳಾಗಿರುವವರಿಗೆ ಸಂಯಮ ಬೇಕಾಗುತ್ತದೆ. ವಯಸ್ಸಿನಲ್ಲಿ ಮತ್ತು ನಿಮಗಿಂತ ಹೆಚ್ಚು ಅನುಭವ ಇರುವ ಮಂತ್ರಿಗಳು ಸಹ ಇಲ್ಲಿದ್ದಾರೆ. ಮಂತ್ರಿಗಳ ಹತ್ತಿರ ನಾನಾ ಕೆಲಸಕ್ಕಾಗಿ ಸಾಮಾನ್ಯ ಜನರು ಬರುತ್ತಿರುತ್ತಾರೆ. ಆ ಸಮಯದಲ್ಲಿ ಮಂತ್ರಿ ಗಳು ನಡೆದುಕೊಳ್ಳುವ ಧಾಟಿ ಇತರರಿಗೆ ಮಾರ್ಗದರ್ಶನವಾಗಿರಬೇಕು. ಯಾವುದೋ ಉತ್ಪ್ರೇಕ್ಷೆಯಲ್ಲಿ ಹಸಿದು ಜಾಸ್ತಿ ಮಾತನಾಡಿದರೆ ಅದರಿಂದ ಕೆಟ್ಟ ಪರಿಣಾಮ ಉಂಟಾಗುತ್ತದೆ. ನೀವು ನಮಗೆ ಮಾರ್ಗ ದರ್ಶನ ಮಾಡುವವರಾಗಿದ್ದೀರಿ. ಸ್ವಾಭಾವಿಕವಾಗಿ ಘನತೆ ಗೌರವ ಇರುವವರು ಬೇರೆಯವರಿಗೂ ಸ್ನೇಹ ತೋರಿಸುತ್ತಾರೆ. ಪ್ರಜಾಪ್ರಭುತ್ವದಲ್ಲಿ ಮಂತ್ರಿಗಳ ಸ್ಥಾನವೇನೂ ಶಾಶ್ವತವಲ್ಲ. ಇವೊತ್ತು ಇರುತ್ತದೆ, ನಾಳೆ ಹೋಗುತ್ತದೆ. ಮುಖ್ಯವಾಗಿ ಮನುಷ್ಯನಲ್ಲಿ ಇರಬೇಕಾದುದು ಘನತೆ ಮತ್ತು ಗೌರವ. ನಿಮ್ಮಲ್ಲಿ ನನಗೆ ಒಳ್ಳೆಯ ವಿಶ್ವಾಸ ಇದೆ. ನಿಮ್ಮ ಬಗ್ಗೆ ಏನಾದರೂ ಕಳಂಕ ಬಂದರೆ, ಅದರಿಂದ ನಮಗೆ ಪಶ್ಚಾತ್ತಾ ಪವಾಗುತ್ತವೆ. ನಿಮ್ಮ ಒಂದು ಮುಖಂಡತ್ವ ಬೆಳೆಯ ಬೇಕೆಂಬಆಶೆಯನ್ನು ನಾವು ಇಟ್ಟುಕೊಂಡಿದ್ದೇವೆ. ಆದ್ದರಿಂದ ನೀವು ಸಾಮಾನ್ಯ ಜನತೆಯ ಬಗ್ಗೆ ನಡೆದುಕೊಳ್ಳುವ ರೀತಿ ಚೆನ್ನಾಗಿರಬೇಕು. ಹಿಂದೆ ಇದೇ ರೀತಿ ಒಂದೆರಡು ಸಲ ಆಗಿರುವುದರಿಂದ, ಅದಕ್ಕೆ ಮತ್ತೆ ಮತ್ತೆ ಅವಕಾಶ ಮಾಡಿಕೊಡಬಾರದು. ಒಬ್ಬ ರನ್ನು ತಿದ್ದಿ ನಡೆಸಿದರೆ ಅದರಿಂದ ನಿಮಗೆ ಕೀರ್ತಿ ಬರುತ್ತದೆಯೇ ಹೊರತು ನಮಗೆ ಬರುವುದಿಲ್ಲ. ಆದ್ದ ರಿಂದ ಇಂಥದ್ದಕ್ಕೆ ಅವಕಾಶ ಮಾಡಿಕೊಡಬೇಡಿ. ಮುಖ್ಯವಾಗಿ ಸಂಯಮ ಇರಬೇಕು. ಆ ಸಮಯದಲ್ಲಿ ಮಾನ್ಯ ಗುಂಡೂರಾವ್ ಅವರೂ ಸಹ ಇದ್ದರು ಎಂದು ತಿಳಿದುಬಂದಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರು ಏನೂ ಮಾತನಾಡದೆ ಸುಮ್ಮನೆ ಕುಳಿತು ಬಿಟ್ಟಿದ್ದಾರೆ.

ಅಧ್ಯಕ್ಷರು.—ತಾವು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಬಿ ಬಸಲಿಂಗಪ್ಪ.—ಬಂದವರು ಸಂಯಮದಿಂದ ನಡೆದುಕೊಳ್ಳದಿದ್ದರೆ ಏನು ಮಾಡುವುದು ?

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಸಂಯಮದಿಂದ ನಡೆದುಕೊಳ್ಳದಿದ್ದರೆ, ನೀನು ದೊಡ್ಡ ಮನುಷ್ಯ, ಆಗಲಪ್ಪ, ಹೋಗು ಎಂದು ಕಳುಹಿಸಿಕೊಡಿ. ಬೇರೆಯವರು ಹದ್ದುಮೀರಿ ಹೋದರೂ ಸಹ ನಾವು ಅದಕ್ಕೆ ಅವಕಾಶ ಮಾಡಿಕೊಡಬಾರದು. ಜವಾಬ್ದಾರಿ ಸ್ಥಾನದಲ್ಲಿರುವವರು ಸಂಯಮವನ್ನು ಬಿಟ್ಟು ಕೊಡಬಾರದು. ನಾವು ಹೋಗುವ ದಾಟಿ ಬೇರೆಯವರಿಗೆ ಮಾರ್ಗದರ್ಶನವಾಗಿರಬೇಕೇ ಹೊರತು, ನಮ್ಮ ಬಗ್ಗೆ ಬೇರೆಯವರು ಬೆರಳೆತ್ತಿ ತೋರಿಸುವಂತಿರಬಾರದು. ಇಂತಹ ಒಂದು ಕಹಿ ಘಟನೆ ಇನ್ನು ಮುಂದೆ ಆಗದ ಹಾಗೆ ತಮ್ಮಿಂದ ಒಂದು ಒಳ್ಳೆಯ ನಡೆತೆಯನ್ನು ನಾವು ನಿರೀಕ್ಷೆ ಮಾಡುತ್ತೇವೆ. ಅನಾವಶ್ಯಕವಾಗಿ ಕೆಲವು ವಿಷಯಗಳನ್ನು ಮಾನ್ಯ ಮಂತ್ರಿಗಳು ಹೇಳಿದರು. ಸಿಟ್ಟಿನಿಂದ ಆ ರೀತಿ ಹೇಳುವುದು ಸರಿಯಲ್ಲ. ಉದ್ವೇಗಗೊಂಡು ಆ ರೀತಿ ಹೇಳಿದರೆಂದು ಕಾಣುತ್ತದೆ. ಎಲ್ಲರೂ ನಗುತ್ತಾ ನಡೆದುಕೊಳ್ಳೋಣ. ಅದ

ರಿಂದ ಎಲ್ಲರಿಗೂ ಗೌರವ ಬರುತ್ತದೆ. ಮತ್ತು ಅದರಿಂದ ಘನತೆ ಗೌರವನ್ನು ಉಳಿಸಿಕೊಳ್ಳಬಹುದು. ಈ ರೀತಿ ನಡೆದುಕೊಳ್ಳದಿದ್ದರೆ ಕಹಿ ವಾತಾವರಣ ಕಡಿಮೆಯಾಗುವ ಬದಲು ಜಾಸ್ತಿಯಾಗುವುದಕ್ಕೆ ಅವಕಾಶವಾಗುತ್ತದೆ. ಆದಕ್ಕೆ ಮಾನ್ಯ ಮಂತ್ರಿಗಳು ಅವಕಾಶ ಮಾಡಿಕೊಡಬಾರದೆಂದು ಮತ್ತೊಮ್ಮೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಿ ಈಗ ಮುಂದಿನ ವಿಷಯಕ್ಕೆ ಹೋಗೋಣ. ಈಗ ಮಾನ್ಯ ನಾಗರಾಜ್ ಅವರು ತಮ್ಮ ಭಾಷಣವನ್ನು ಮುಂದುವರಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ತಾವು ಹೇಳಿದಂಥ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ವಿಷಾದ ವ್ಯಕ್ತಪಡಿಸಬೇಕು. ಆ ರೀತಿ ಮಾಡದಿದ್ದರೆ ಇಡೀ ವಿರೋಧಪಕ್ಷಕ್ಕೆ ಅಗೌರವ ಉಂಟಾಗುತ್ತದೆ. ಮತ್ತು ವಿರೋಧಪಕ್ಷಕ್ಕೆ ಇರುವ ಘನತೆ ಮತ್ತು ಗೌರವ ತಮ್ಮ ಮೂಲಕ ಹೊರಟು ಹೋಗುತ್ತದೆ. ಆದ ಕಾರಣ ಮಾನ್ಯ ಮಂತ್ರಿಗಳು ತಮ್ಮ ಮಾತನ್ನು ಹಿಂದಕ್ಕೆ ತೆಗೆದುಕೊಂಡಿದ್ದೇನೆಂದು ಮಾನ್ಯ ವಿರೋಧಪಕ್ಷದ ನಾಯಕರಿಗೆ ತಿಳಿಸುವಂತೆ ತಾವು ಹೇಳಬೇಕು.

ಅಧ್ಯಕ್ಷರು.—ಅವರು ಯಾವ ಅಗೌರವವನ್ನೂ ಸೂಚಿಸಿಲ್ಲ, ತಾವು ಕುಳಿತುಕೊಳ್ಳಿ. ಈಗ ಮಾನ್ಯ ವಾಟಾಳ್‌ನಾಗರಾಜ್ ಅವರು ಮಾತನಾಡುತ್ತಾರೋ ಅಥವಾ ಬೇರೆಯವರನ್ನು ಕರೆಯಲೋ.

ಶ್ರೀ ಎಸ್. ಬಂಗಾರಪ್ಪ.—ಮೊದಲು ಮಾನ್ಯ ಮಂತ್ರಿಗಳು ವಿರೋಧಪಕ್ಷದ ನಾಯಕರಿಗೆ ವಿಷಾದ ವ್ಯಕ್ತಪಡಿಸಬೇಕು.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಘನತೆಯ ಬಗ್ಗೆ ಮಾನ್ಯ ಮಂತ್ರಿಗಳು ವಿಷಾದ ವ್ಯಕ್ತಪಡಿಸಬೇಕೆಂದು ಮಾನ್ಯ ಗೆಳೆಯರು ಒತ್ತಾಯ ಪಡಿಸುತ್ತಿದ್ದಾರೆ. ಮಂತ್ರಿಗಳು ವಿಷಾದ ವ್ಯಕ್ತಪಡಿಸುವುದರಿಂದ ನನ್ನ ಘನತೆ ಹೆಚ್ಚುವುದಿಲ್ಲ. ನನ್ನ ಘನತೆ ನನ್ನ ವ್ಯವಹಾರದಿಂದ ಹೆಚ್ಚಬೇಕಾಗಿದೆಯೇ ಹೊರತು ಅವರು ವಿಷಾದ ವ್ಯಕ್ತಪಡಿಸುವುದರಿಂದ ಅಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿ ಯಾವ ರೀತಿ ಕೆಲಸ ಮಾಡುತ್ತೇನೆ, ಹೊರಗಡೆ ಜನರ ಜೊತೆ ಯಾವ ರೀತಿ ನಡೆದುಕೊಳ್ಳುತ್ತೇನೆ ಎಂಬುದರ ಮೇಲೆ ನನ್ನ ನಡೆವಳಿಕೆ ಗೊತ್ತಾಗುತ್ತದೆಯೇ ಹೊರತು, ಕುಡಿದು ಗಲ್ಲಿಗಳಲ್ಲಿ ತಿರುಗಾಡಿದರೆ ನನ್ನ ಗೌರವ ಹೋಗುತ್ತದೆ. ನಾನು ಈ ಸಭೆಯಲ್ಲಿ ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡುವಾಗ ಮತ್ತು ಹೊರಗಡೆ ಜನರಿಗೆ ನನ್ನ ವ್ಯವಹಾರದ ಬಗ್ಗೆ ಸಂಶಯ ಬಂದಾಗ ನನ್ನ ಘನತೆ ಹೋಗುತ್ತದೆ. ಈ ಕಾರಣದಿಂದ ನನ್ನ ಘನತೆ ಬಗ್ಗೆ ಯಾರೇ ಆಗಲಿ ಆತಂಕ ಪಡಬಾರದು. ಆದ್ದರಿಂದ ಈ ವಿಷಯವನ್ನು ಇನ್ನು ಮುಂದುವರೆಸುವ ಅಗತ್ಯ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ತಮಗಾಗಿ ಅಲ್ಲದಿದ್ದರೂ, ವಿರೋಧಪಕ್ಷದ ವತಿಯಿಂದ ಈ ವಿಷಯವನ್ನು ಮಾನ್ಯ ಮಂತ್ರಿಗಳು ವಿಷಾದ ವ್ಯಕ್ತಪಡಿಸುವವರೆಗೆ ಮುಂದುವರೆಸಬೇಕಾಗುತ್ತದೆ. ಮಾನ್ಯ ಮಂತ್ರಿಗಳಿಗೆ ಏನಾದರೂ ಕಾನ್‌ಸನ್ಸ್ ಇದ್ದರೆ ವಿಷಾದ ವ್ಯಕ್ತಪಡಿಸಬೇಕು.

ಅಧ್ಯಕ್ಷರು.—ಮಾನ್ಯ ನಾಗರಾಜ್ ಅವರು ಮಾತನಾಡುತ್ತಾರೋ ಅಥವಾ ಇಲ್ಲವೋ ಎಂಬುದನ್ನು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ನಾನು ಮಾತನಾಡುತ್ತೇನೆ. ಮಾನ್ಯ ಬಸವಲಿಂಗಪ್ಪನವರ ವಿಷಯ ಏನಾಯಿತು ?

ಅಧ್ಯಕ್ಷರು.—ಅದು ಮುಕ್ತಾಯವಾಯಿತು.

ಶ್ರೀ ಕೆ. ಎಂ. ನಾಗಣ್ಣ.—ನೀವು ಯಾರು ಅದನ್ನು ಕೇಳುವುದಕ್ಕೆ ಎಂದೇನು ಹೇಳಿದ್ದಾರೆ ಅದನ್ನು ಎಕ್ಸ್‌ಪಂಜ್ ಮಾಡಬೇಕು.

ಅಧ್ಯಕ್ಷರು.—ಆ ಮೇಲೆ ರೆಕಾರ್ಡನ್ನು ನೋಡಿ ಅದನ್ನು ಎಕ್ಸ್‌ಪಂಜ್ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಏನು ಮಾತನ್ನು ಪ್ರಯೋಗ ಮಾಡಿದರು ಅದನ್ನು ಅವರು ವಾಪಸ್ಸು ತೆಗೆದುಕೊಳ್ಳುವುದಕ್ಕೆ ತಯಾರು ಇಲ್ಲವೇ ?

†ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಶ್ರೀ ಮಾನ್ ಕೋಣಂದೂರು ಲಿಂಗಪ್ಪನವರು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯವನ್ನು ವಿರೋಧಿಸುತ್ತಾ ಒಂದೆರಡು ವಿಷಯಗಳನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ವಾದ ಹೇಗಿದೆ ಎಂದರೆ ಈಗ ಯಾರಿಗೋ ಒಬ್ಬರಿಗೆ ಒಬ್ಬ ಮಗ ಇರುತ್ತಾನೆ, ಅವನು ಸ್ವಲ್ಪ ಅನಾರೋಗ್ಯದಿಂದಿರುತ್ತಾನೆ ಅವನು ಸಾಹಸಿಯಲ್ಲ ಆದ್ದರಿಂದ ಅವರಿಗೆ ವಿಷಕೊಟ್ಟು ಕೊಂದುಬಿಡಿ ಎಂದು ಹೇಳಿದಹಾಗಾಯಿತು. ಈ ವಾದ ಆ ರೀತಿಯಾಗಿದೆ. ಯಾವುದೇ ಒಂದು ಸಂಸ್ಥೆಯನ್ನು ಇಟ್ಟುಕೊಂಡಿರಬೇಕಾದರೆ ಅದಕ್ಕೆ ಒಂದು ಉದ್ದೇಶ ಇರುತ್ತದೆ. ಆ ಉದ್ದೇಶ ಸಫಲವಾಗುತ್ತದೆಯೋ ಇಲ್ಲವೋ ಆ ಪ್ರಶ್ನೆ ಬೇರೆ. ಆ ಉದ್ದೇಶ ಸಫಲವಾಗದಿದ್ದರೆ ಅದು ಸಫಲವಾಗುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಬೇಕು. ಈಗ ವಿಧಾನ ಪರಿಷತ್ತಿಗೆ ಯಾವ ಒಂದು ನಾಮಿನೇಷನ್ ಮಾಡಿದ್ದಾರೆ ಅದು ಸರಿಯಾಗಿಲ್ಲ ಎಂದು ಹೇಳಿದರು, ಆ ನಾಮಿನೇಷನ್ ಸರಿಯಾಗಿಲ್ಲ ಎಂದಮಾತ್ರಕ್ಕೇ ಈ ವಿಧಾನ ಪರಿಷತ್ತನ್ನೇ ತೆಗೆಯಬೇಕು ಎಂದು ಹೇಳುವ ವಾದ ಏನಿದೆ ಅದು ಮೊಂಡುವಾದ ಎಂದು ಹೇಳಿದರೆ ಅದು ತಪ್ಪಾಗಲಾರದು. ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಏನಿದೆ, ಬ್ರಿಟೀಷರ ಪ್ರಜಾಪ್ರಭುತ್ವ ಏನಿದೆ ಅದರ ಮೇಲ್ಪಂಕ್ತಿಯನ್ನು ಇವರು ಅನುಸರಿಸುಕೊಂಡು ಬರುತ್ತಿದ್ದಾರೆ. ಇವೊತ್ತು ಈ ವಿಧಾನ ಪರಿಷತ್ತನ್ನು ಇಟ್ಟುಕೊಂಡಿರತಕ್ಕ ಮೂಲ ಉದ್ದೇಶ ಏನಿದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಬ್ರಿಟನ್‌ನಲ್ಲಿ ಹೌಸ್ ಆಫ್ ಲಾರ್ಡ್ಸ್ ಮತ್ತು ಹೌಸ್ ಆಫ್ ಕಾಮನ್ಸ್ ಯಾವ ರೀತಿ ಇದೆಯೋ ಅದೇ ರೀತಿ ಅದೇ ಮೇಲ್ಪಂಕ್ತಿಯನ್ನು ಇವರು ಹಾಕಿಕೊಂಡು ಬಂದಿದ್ದಾರೆ ಯಾವುದೋ ಒಂದು ಉದ್ವೇಗಕ್ಕೆ ಒಳಗಾಗಿ ಕೆಳಮನೆಯಲ್ಲಿರತಕ್ಕ ಜನಗಳು ಒಂದು ತೀರ್ಮಾನವನ್ನು ಕೈಗೊಂಡರೆ ಅದಕ್ಕೆ ಒಂದು ಬ್ರೇಕ್, ಒಂದು ಸ್ಥಗಿತ ಇರಬೇಕು ಎಂದು ಆ ಕಾಲದಲ್ಲಿ ಯೋಚನೆ ಮಾಡಿ ಪರಿಶೀಲನೆ ಮಾಡಿ ಕೆಳಮನೆಯವರು ಮಾಡಿದ್ದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಒಂದು ಅವಕಾಶ ಇರಬೇಕು, ಅನುಭವಸ್ಥರಾದ ಜನಗಳು ಇರಬೇಕು ಎಂದು ಹೇಳಿ ಈ ಮೇಲ್ಮನೆಯನ್ನು ಇಟ್ಟುಕೊಂಡಿದ್ದಾರೆ. ಇವೊತ್ತು ಮೇಲ್ಮನೆಯಲ್ಲಿ ನಡವಳಿಕೆಗಳು ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ ಎಂದ ಮಾತ್ರಕ್ಕೇ ಮೇಲ್ಮನೆಯನ್ನು ಕಿತ್ತುಹಾಕಿ ಎಂದು ಹೇಳುವುದು ಹುರುಳಿಲ್ಲದ ವಾದ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಈ ವಾದ ಎಲ್ಲಿಗೆ ಬಂದು ನಿಲ್ಲುತ್ತದೆ ಅಂದರೆ ಇವೊತ್ತಿನ ದಿವಸ ಕೇಂದ್ರ ಸರ್ಕಾರ ಇರುವಾಗ ಎಲ್ಲ ರಾಜ್ಯಗಳು ಕೇವಲ ಒಂದು ಮುನಿಸಿಪಾಲಿಟಿಗಳ ನಮೂನೆ ಇದೆಯೆಂದು ರಾಜ್ಯದ ಅಸೆಂಬ್ಲಿಗಳು ಬೇಡ ಎಂದು ಹೇಳಿ ಪಾರ್ಲಿಮೆಂಟಿನಲ್ಲಿ ಒಂದು ಬಿಲ್ ತರಬಹುದು. ನಾವು ಏನು ಇವತ್ತು ಕೌನ್ಸಿಲ್ ಬೇಡ ಎಂದು ಹೇಳುತ್ತಿವೆಯೋ, ನಾಳೆ ಪಾರ್ಲಿಮೆಂಟಿನಲ್ಲಿಯೂ ರಾಜ್ಯದ ಅಸೆಂಬ್ಲಿಗಳು ಬೇಕಾಗಿಲ್ಲವೆಂದು ಅವರು ಹೇಳಬಹುದು. ಏಕೆಂದರೆ ಚೈನಾದಲ್ಲಿ ಇವತ್ತು ಒಂದೇ ಪಾರ್ಲಿಮೆಂಟ್ ಇದೆ. ಅಂಥ ವ್ಯವಸ್ಥೆಯನ್ನು ಇಲ್ಲಿ ತರುವುದಕ್ಕೆ ಸಾಧ್ಯವಿದೆಯೇ ? ಇವತ್ತು ನಾವು ಕೌನ್ಸಿಲನ್ನು ಏಕೆ ಇಟ್ಟುಕೊಂಡಿದ್ದೇವೆಂದರೆ, ಅದು ಒಂದು ನುರಿತ ಜನರಿಂದ ಕೂಡಿರುವುದರಿಂದ ಕೆಳಮನೆಯಲ್ಲಿ ಮಾಡಿದಂತಹ ಕಾನೂನುಗಳನ್ನು ಸರಿಯಾದ ರೀತಿಯಲ್ಲಿ ಪರಿಶೀಲಿಸಿ ಪಾಸ್‌ಮಾಡಬೇಕೆಂಬ ಉದ್ದೇಶ. ಕೆಳಮನೆಯಲ್ಲಿ ಆರಿಸಿ ಬರುವಂತಹ ಜನರು ಹೆಚ್ಚಿನ ವಿದ್ಯಾವಂತರು ಇರಬಹುದು ಅಥವಾ ಬಹುತೇಕ ಸಂಖ್ಯೆಯ ಮತವನ್ನು ಪಡೆದು ಕಮ್ಮಿ ವಿದ್ಯೆಯನ್ನು ಪಡೆದಂತಹ ವ್ಯಕ್ತಿಯೂ ಬರಬಹುದು. ಹೀಗೆ ಬಹುಮತವನ್ನು ಪಡೆದು ಬಂದಂತಹ ಅನೇಕ ಜನರು ಇರುವಂತಹ ಸದಸ್ಯರು ಅಸೆಂಬ್ಲಿಯಲ್ಲಿ ಇರುವುದರಿಂದ, ಅವರು ಪಾಸ್ ಮಾಡಿದಂತಹ ತೀರ್ಮಾನವನ್ನು ಮುಂದೆ ಪರಿಣತರು ಪುನಃ ಪರಿಶೀಲಿಸದಿದ್ದರೆ, ದೇಶಕ್ಕೆ ಲುಕ್ಸಾನು ಆಗುತ್ತದೆ ಆಗ ಈ ರೀತಿಯ ಒಂದು ಪರಿಣತರಿಂದ, ಆರ್ಥಿಕ ತಜ್ಞರಿಂದ ಮತ್ತು ರಾಜಕೀಯ ಪರಿಣತರಿಂದ ಕೂಡಿದ ಕೌನ್ಸಿಲ್ ಇರುವುದರಿಂದ, ಅವರು ಇದರ ಬಗ್ಗೆ ಮಾರ್ಗದರ್ಶನ ಹಾಕಿಕೊಟ್ಟು, ದೇಶಕ್ಕೆ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಅನುಕೂಲವಾಗುತ್ತದೆಂದು ಮಾಡಿದ್ದಾರೆ. ಇವೊತ್ತಿನ ದಿವಸ ಯಾವುದೇ ಇನ್‌ಸ್ಟಿಟ್ಯೂಶನ್ ಆಗಲಿ, ಅದು ನಡೆಯತಕ್ಕ ರೀತಿಯಲ್ಲಿ ದೋಷ ಇದೆ ಎಂದಾದರೆ, ಆ ದೋಷವನ್ನು ಸರಿಪಡಿಸಬೇಕಲ್ಲದೆ, ಆ ಇನ್‌ಸ್ಟಿಟ್ಯೂಶನನ್ನೇ ರದ್ದುಮಾಡಿಬಿಡಬೇಕೆಂದು ಹೇಳುವ ವಾದ ಸರಿಯಾದುದಲ್ಲ ನಾವು ಯಾವ್ಯಾವ ಇಂಟರೆಸ್ಟಿನ ಜನರಿಗೆ ಅಲ್ಲಿ ಒಂದು ಅವಕಾಶವನ್ನು ಒದಗಿಸುತ್ತಿದ್ದೇವೆಯೋ, ಆ ನೀತಿ ಸರಿಯಾಗಿದೆ. ಇವೊತ್ತಿನ ದಿವಸ ಅಲ್ಲಿ ಪದವೀಧರರ ಕ್ಷೇತ್ರ, ಉಪಾಧ್ಯಾಯರ ಕ್ಷೇತ್ರ ಮತ್ತು ವಿಧಾನ ಸಭಾ ಕ್ಷೇತ್ರ—ಈ ರೀತಿ ಅನೇಕ ಕ್ಷೇತ್ರಗಳನ್ನು ಮಾಡಿಕೊಂಡಿದ್ದಾರೆ. ಈ ರೀತಿ ಎಲ್ಲ ವರ್ಗದ ಜನರನ್ನು ಪ್ರತಿನಿಧಿಸತಕ್ಕ ಜನರನ್ನು ನಾವು ಅಲ್ಲಿ ಕಾಣಬಹುದು. ಇವತ್ತು ಸಾರ್ವಜನಿಕ ಚುನಾವಣೆಗೆ ನಿಲ್ಲುವುದಕ್ಕೆ ಅನೇಕ ಪರಿಣತರು ಮತ್ತು ತಜ್ಞರು ತಯಾರಿಲ್ಲದೆ ಇರಬಹುದು ; ಮತ್ತು ಎಷ್ಟೋ ಇಂತಹ ಜನರು ಚುನಾವಣೆಗೆ ನಿಲ್ಲುವುದಕ್ಕೆ ಮುಂದೆ ಬಾರದೆ ಇರಬಹುದು. ಉದಾಹರಣೆಗೆ ಗುಬ್ಬಿವೀರಣ್ಣನವರು, ಚೌಡಯ್ಯನವರು ಮತ್ತಿತರ ಗಣ್ಯ ವ್ಯಕ್ತಿಗಳು ಮತ್ತು ಸಾಹಿತಿಗಳು ಚುನಾವಣೆಗೆ ನಿಲ್ಲುವುದಕ್ಕೆ ಮುಂದೆ ಬರುವುದಿಲ್ಲ. ಆದರೆ ರಾಜ್ಯಕ್ಕೆ ಅಂಥವರ

ಸೇವೆ ಬಹಳ ಮುಖ್ಯವಾಗಿರುವುದರಿಂದ ಅವರನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ ಉದ್ದೇಶದಿಂದ ಈ ಸಂಸ್ಥೆಯು ಬೇಕಾಗುತ್ತದೆ. ಈ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಇಂತಹ ಸಂಸ್ಥೆ ಇರಬೇಕು ಮತ್ತು ಅದನ್ನು ಬೆಳೆಸಬೇಕು. ಆದರೆ ಅದನ್ನು ನಡೆಸತಕ್ಕ ರೀತಿಯಲ್ಲಿ ಬದಲಾವಣೆ ಮಾಡಬೇಕಾದರೆ, ಅದನ್ನು ಮಾಡೋಣ. ಅದರಲ್ಲಿ ಲೋಪದೋಷಗಳಿದ್ದರೆ ಅದನ್ನು ಬೇಕಾದರೆ ಸರಿಪಡಿಸೋಣ. ಕಮ್ಯೂನಿಸ್ಟ್ ದೇಶದಲ್ಲಿ ಮರ್ಸಿ ಕಿಲ್ಲಿಂಗ್ ಎಂದು ಏನು ಕರೆಯುತ್ತಾರೆ, ಆ ರೀತಿ ಮಾಡುವುದು ಬೇಡ. ಪುನಃ ಒಬ್ಬನನ್ನು ಸುಧಾರಿಸಬಹುದು ಎಂದಿರುವಾಗ, ಅದನ್ನು ಮಾಡಬೇಕಲ್ಲದೆ ಅವನನ್ನು ಮುಗಿಸಿ ಬಿಡುವುದಲ್ಲ. ಆ ರೀತಿ ಕಮ್ಯುನಿಸ್ಟ್ ದೇಶದಲ್ಲಿ ಮಾಡುವಂತಹ ಸ್ಥಿತಿಗೆ ನಾವು ಇನ್ನೂ ಬಂದಿಲ್ಲ. ಅದೇ ರೀತಿ ನಮ್ಮ ಸರ್ಕಾರದ ಬೊಕ್ಕಸದಿಂದ ವೆಚ್ಚವಾಗುತ್ತದೆ ಆ ದೃಷ್ಟಿಯಿಂದ ಇದನ್ನು ತೆಗೆದು ಹಾಕಬೇಕೆಂದು ಹೇಳುವ ವಾದವೂ ಸರಿಯಲ್ಲ. ಉದಾಹರಣೆಗೆ ಇವತ್ತು ಒಂದು ಮನೆ ಸೋರುತ್ತದೆ. ಸರಿಯಿಲ್ಲ ಎಂದ ಮಾತ್ರಕ್ಕೆ ಆ ಮನೆಯನ್ನೇ ಕಿತ್ತುಹಾಕುವುದು ಸರಿಯಲ್ಲ. ಅದು ಎಲ್ಲಿ ಕೆಟ್ಟುಹೋಗಿದೆಯೋ ಅದನ್ನು ಸರಿಮಾಡಬೇಕೇ ಹೊರತು ಅದನ್ನು ಕಿತ್ತುಹಾಕುವುದಲ್ಲ. ಇಷ್ಟು ಹೇಳಿ ಈ ನಿರ್ಣಯವನ್ನು ನಾನು ವಿರೋಧ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರಶೇಖರವರು ಹೇಳಿದಂತಹ ಮಾತುಗಳನ್ನು ನಾನು ಪೂರ್ಣವಾಗಿ ಅನುಮೋದಿಸುತ್ತೇನೆ. ಏಕೆಂದರೆ ಇವತ್ತು ಸರ್ಕಾರದವರು ಕೌನ್ಸಿಲಿಗೆ ನಾಮಿನೇಶನ್ ಮಾಡುವಾಗ ಏನಾದರೂ ತಪ್ಪು ಇದ್ದರೆ ಅದನ್ನು ಸರಿಪಡಿಸಬೇಕಾಗುತ್ತದೆ. ಅದನ್ನು ರದ್ದುಪಡಿಸಿದರೆ, ನನಗೆ ಮುಖ್ಯವಾಗಿರುವ ಭಯ ಏನೆಂದರೆ, ಓಟಿಂಗ್ ವಯಸ್ಸನ್ನು ೨೧ ರಿಂದ ೧೮ಕ್ಕೆ ಇಳಿಸಬೇಕೆಂದು ಈಗಾಗಲೇ ಒಂದು ವದಂತಿ ಇದೆ. ಒಂದು ವೇಳೆ ೧೮ಕ್ಕೆ ಇಳಿಸಿದರೆ ಇಲ್ಲಿಗೆ ಆರಿಸಿ ಬರುವಂತ ಜನರು ಶ್ರೀಮಾನ್ ವಾಟಾಳ್ ನಾಗರಾಜರಂಥವರೇ ಹೆಚ್ಚು. ಆಗ ವಾಟಾಳ್ ನಾಗರಾಜರಂಥವರು ಮುಖ್ಯಮಂತ್ರಿಯಾಗುತ್ತಾರೆ. ಇಂಥವರ ಅನುಯಾಯಿಗಳೇ ಬಂದು ಇವರು ಮುಖ್ಯಮಂತ್ರಿಯಾದರೆ ನಮ್ಮಂಥವರ ಗತಿ ಏನು ? ಈ ಒಂದು ಕಾರಣಕ್ಕಾಗಿ ವಿಧಾನ ಪರಿಷತ್ತು ಇರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ನಾನು ಬೆಂಬಲಿಸಿ ಮಾತನಾಡುತ್ತೇನೆ. ಮಾನ್ಯ ಚಂದ್ರಶೇಖರವರು ಮತ್ತು ನಾಗಣ್ಣನವರು ಹೇಳಿದ್ದನ್ನು ನಾನು ಕೇಳಿದ್ದೇನೆ. ಆ ಮಾತುಗಳನ್ನು ಮತ್ತು ಅವರ ನೀತಿ ಧೋರಣೆಯನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಅವರು ಪ್ರಜಾಪ್ರಭುತ್ವಕ್ಕೆ ವಿರೋಧವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮೊದಲನೆಯದಾಗಿ ಏನೆಂದರೆ, ಈ ಕೌನ್ಸಿಲ್ ಇರಬೇಕೇ ಬೇಡವೇ ಎಂಬುದನ್ನು ತೀರ್ಮಾನ ಮಾಡುವುದಕ್ಕೆ ನಮಗೆ ರಾಜ್ಯಾಂಗದಲ್ಲಿ ಹಕ್ಕನ್ನು ಕೊಟ್ಟಿದ್ದಾರೆ. ರಾಜ್ಯಾಂಗದ ಆರ್ಟಿಕಲ್ ೧೬೮ರ ಪ್ರಕಾರ, ನಮಗೆ ಆದರ ಹಕ್ಕನ್ನು ಈ ರೀತಿ ಕೊಟ್ಟಿದ್ದಾರೆ. ಅದು ಈ ರೀತಿ ಇದೆ :—

168. (1) For every State there shall be a Legislature which shall consist of the Governor and

(a) in the States of Bihar, Bombay, Madhya Pradesh, Madras, Mysore, Punjab, Uttar Pradesh and West Bengal Two Houses ,

(b) in Other States, one House :

(2) Where there are two Houses of the Ligislature of a State, one shall be known as the Legislative Council and the other as the Legislative Assembly, and where there is only one House. it shall be known as the Legislative Assembly.

169. (1) Notwithstanding anything in article 168. Parliament may by law provide for the abolition of the Legislative Council of a State having such a Council or for the creation of such a Council in a State having no such Council, if the

ಶ್ರೀ ಎಂ. ಎಸ್. ಕೃಷ್ಣನ್

Legislative Assembly of the State passes a resolution to that effect by a majority of the total membership of the Assembly and by a majority of not less than two-thirds of the members of the Assembly present and voting This has been stated in the Constitution itself.

ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ಕೌನ್ಸಿಲನ್ನು ಮುಂದುವರಿಸಬೇಕೇ ಅಥವಾ ರದ್ದು ಮಾಡಬೇಕೇ ಎಂಬುದನ್ನು ನಾವು ಇತ್ಯರ್ಥ ಮಾಡಬಹುದೆಂದು ಅದರಲ್ಲಿ ಹೇಳಿದ್ದಾರೆ. ಅಂದರೆ ಕೆಲವು ಸಂದರ್ಭಗಳಲ್ಲಿ ಲೆಜಿಸ್ಲೇಟಿವ್ ಕೌನ್ಸಿಲುಗಳು ಸರಿಯಾದ ರೀತಿಯಲ್ಲಿ ನಡೆಯದೆ ಹೋದಾಗ, ಮತ್ತು ಯಾವ ಉದ್ದೇಶಕ್ಕೆ ಕೌನ್ಸಿಲನ್ನು ಮಾಡಿದ್ದಾರೋ ಆ ಉದ್ದೇಶವನ್ನು ಸಾಧನೆ ಮಾಡದೆ ಹೋದಾಗ, ಈ ಅಧಿಕಾರವನ್ನು ನಾವು ಉಪಯೋಗಿಸಿಕೊಂಡು ರದ್ದು ಮಾಡಬಹುದು ಎಂದು ರಾಜ್ಯಾಂಗವನ್ನು ಮಾಡಿದಂತಹ ಗಣ್ಯವ್ಯಕ್ತಿಗಳು ದೂರಾಲೋಚನೆ ಇಟ್ಟುಕೊಂಡು ಘಟನಾವಳಿ ಒದಗಿಸಿದ್ದಾರೆ. ಹೀಗೆ ಇದರ ಬಗ್ಗೆ ಆಗಿನ ಕಾಲದಲ್ಲಿ ಫ್ರೇಮರ್ಸ್ ಆಫ್ ದಿ ಕಾನ್‌ಸ್ಟಿಟ್ಯೂಶನ್, ಅವರಿಗೆ ಒಂದು ಅನುಮಾನ ಬಂದಿದೆ. ಇದನ್ನು ಒಂದು ಎಕ್ಸ್‌ಪರಿಮೆಂಟ್ ಮಾಡೋಣ ಎನ್ನುವ ರೀತಿಯಲ್ಲಿ ಇದನ್ನು ಮಾಡಿದ್ದಾರೆ. ಆದ್ದರಿಂದ ಮಾನ್ಯ ಚಂದ್ರಶೇಖರವರು ಇದು ಸ್ಯಾಕ್ರೊಸೆಂಟ್ ಆಗಿ ಇರಬೇಕೆಂದು ಹೇಳಿದಂತಹ ವಾದವನ್ನು ನಾನು ಒಪ್ಪುವುದಿಲ್ಲ. ಅದು ರಾಜ್ಯಾಂಗಬದ್ಧವಾದ ವಾದವಲ್ಲ, ಮತ್ತು ಘಟನಾವಳಿಗನುಗುಣವಾದ ವಾದವಲ್ಲವೆಂದು ಹೇಳುತ್ತೇನೆ. ಎರಡನೆಯದಾಗಿ ಏನೆಂದರೆ, ಈ ಲೆಜಿಸ್ಲೇಟಿವ್ ಕೌನ್ಸಿಲ್ ಎನ್ನುವುದು ನಿಜವಾಗಿಯೂ ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿದೆಯೇ ಎಂಬುದನ್ನು ನಾವು ನೋಡಬೇಕಾಗಿದೆ ಇದರಲ್ಲಿ ಹೇಗೆ ಚುನಾವಣೆ ನಡೆಯಬೇಕೆಂಬುದನ್ನು ಸಹ ಆರ್ಟಿಕಲ್ ೧೭೧ರಲ್ಲಿ ಹೇಳಿದ್ದಾರೆ. ಆರ್ಟಿಕಲ್ ೧೭೧ರಲ್ಲಿ ಈ ರೀತಿ ಹೇಳುತ್ತದೆ :—

171 (1) The total number of members in the Leaislative Council of a State having such a Council shall not exceed one-third of the total number of members in the Ligislative Assembly of that State :

Provided that the total number of members in the Legislative Council of a State shall in no case be less than forty.

12-30 P.M.

ಇದನ್ನು ಏತಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ, ಮುಖ್ಯವಾಗಿ ಅಲ್ಲಿ ಇನ್‌ಡೈರೆಕ್ಟ್ ಎಲೆಕ್ಷನ್ ನಡೆಯುತ್ತಿರುವುದು. ಅದು ಡೈರೆಕ್ಟ್ ಎಲೆಕ್ಷನ್ ಅಲ್ಲ. ಟೀಚರ್ಸ್ ಆಗಲೀ ಅಥವಾ ಇವತ್ತಿನ ದಿವಸ ಬೇರೆ ವರ್ಗದವರು ಯಾರೇ ಆಗಿರಲಿ ಅವರಿಗೆ ರಾಜಕೀಯ ಒತ್ತಡವಿಲ್ಲ. ಅವರಿಗೆ ಬೇಕಾದವರನ್ನು ಅಲ್ಲಿ ಕಳುಹಿಸಬೇಕೆಂದು ಹೇಳಿದ್ದಾರೆ. ನಾನು ಆರ್ಟಿಕಲ್ ೧೭೧ರ ಪ್ರಶ್ನೆಯನ್ನು ಏತಕ್ಕೆ ಎತ್ತಿದ್ದೇನೆಂದರೆ, ಚುನಾವಣೆಗಳು ಕೌನ್ಸಿಲ್‌ನಲ್ಲಿ ನಡೆಯುವ ದಿವಸ ಇನ್‌ಡೈರೆಕ್ಟಾಗಿ ಎಲೆಕ್ಷನ್ ನಡೆಯುತ್ತದೆ. ಆದರೆ ಜನಗಳ ಮತದಿಂದ ಚುನಾಯಿತರಾಗತಕ್ಕದ್ದು ವಿಧಾನ ಸಭೆಯಲ್ಲಿ. ಅಲ್ಲಿಗೆ ಮೆಂಬರುಗಳು ಬೇರೆ ಕೆಲವು ಗುಂಪುಗಳಿಂದ ಬಂದರೆ ಅದು ಪ್ರಜಾಪ್ರಭುತ್ವ ತತ್ವಕ್ಕೆ ಅನುಗುಣವಾಗಿರುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ನೇರವಾಗಿ ಚುನಾಯಿತರಾಗಿಬರುವಂಥಾದ್ದೆ ಆಗಬೇಕು. ಅಸೆಂಬ್ಲಿ ಮೆಂಬರುಗಳು ಆ ರೀತಿ ಬರುತ್ತಾರೆ. ಇಲ್ಲಿ ಆ ರೀತಿ ಬರುವುದಕ್ಕೆ ಅವಕಾಶವಿಲ್ಲ. ನಮ್ಮ ತಲೆಯಮೇಲೆ ಇನ್ನೊಬ್ಬನನ್ನು ಕಳುಹಿಸಿ ಅವರು ಮೇಧಾವಿಗಳು ಎಂಬ ಮಾತು ಬೇಡ. ಆ ರೀತಿ ಬರುವಂತಹ ಕಾಲದಲ್ಲಿ ಏನು ಬೇಕಾದರೂ ಚರ್ಚೆ ಮಾಡೋಣ. ಆದರೆ ಮೂಲಭೂತದಾಗಿ ಇದರ ಬಗ್ಗೆ ನಿಮ್ಮ ತತ್ವ ಸರಿಯಲ್ಲ. ಎರಡನೆಯದಾಗಿ ಬರೀ ಗ್ರಾಜುಯೇಟ್ಸ್‌ಗೆ, ಟೀಚರ್‌ಗೆ ಮಾತ್ರ ಕೊಟ್ಟಿದೀರಿ. ಅಸೆಂಬ್ಲಿ ಮೆಂಬರ್ಸ್‌ನಿಂದ ಎಲೆಕ್ಷನ್ ಆದಂಥವರನ್ನು ಮೆಂಬರುಗಳಾಗಿ ಮಾಡಿದ್ದೀರಿ. ಬೇರೆ ವರ್ಗಗಳಿವೆ. ನಿಜವಾಗಿ ಪ್ರಜಾಪ್ರಭುತ್ವದಲ್ಲಿ ನ್ಯಾಯ ದೊರಕಬೇಕಾದಲ್ಲಿ ಶೋಷಿತವರ್ಗಗಳವರಿಗೆ ಅಲ್ಲಿ ಅವಕಾಶ ಕೊಡಬೇಕು. ಅಂತಹವರನ್ನು ಅಲ್ಲಿಗೆ ತೆಗೆದುಕೊಂಡು ಬರಬೇಕು. ಅಂತಹವರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಅಲ್ಲಿ ಕಾರ್ಮಿಕ ವರ್ಗದವರಿಗೆ, ರೈತರಿಗೆ, ಮೂಲಭೂತವಾಗಿ ಅಗ್ರಿಕಲ್‌ಚರಲ್ ವರ್ಕರ್ಸ್‌ಗೆ,

ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನಿಂದ ಬಂದಿರುವವರಿಗೆ ಪ್ರಾತಿನಿಧ್ಯವನ್ನು ಕೊಡುತ್ತಾ ಇಲ್ಲ. ಅಥವಾ ಸ್ತ್ರೀಯರಿಗೆ ಈ ಸರಿಸಮಾನವಾದ ಹಕ್ಕು ಇದೆ. ಅವರು ಹಾಗೆಯೇ ನಿಂತುಕೊಳ್ಳಬಹುದು. ಅಲ್ಲಿ ಹೆಚ್ಚಿಗೆ ಸ್ತ್ರೀಯರಿಗೆ ಪ್ರತಿನಿಧಿಸಲು ಅವಕಾಶ ಮಾಡಿಕೊಡಬೇಕು. ಈ ಪ್ರಶ್ನೆ ಎಲ್ಲಾ ಕಡೆಯಿಂದಲೂ ಎದ್ದಿದೆ. ಅದು ಅಭಿಮಾನದ ಪ್ರಶ್ನೆಯಲ್ಲ. ಕೆಲವರಿಗೆ ಮಾತ್ರ ಅಲ್ಲಿ ಸ್ಥಾನಗಳನ್ನು ಸೀಮಿತವಾಗಿಟ್ಟರೆ, ಅದರ ಉದ್ದೇಶವಾದರೂ ಏನು ? ಅದು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ .—ರೀಮಾಡಲಿಂಗ್ ಆಫ್ ದಿ ಹೌಸ್ ಎಂದು ಹೇಳುತ್ತೀರೋ ?

ಶ್ರೀ ಎಂ. ಎಸ್. ಕೃಷ್ಣನ್ .—ನನ್ನ ಅಭಿಪ್ರಾಯದಲ್ಲಿ ಅದು ಅಬಾಲಿಷ್ ಆಗಬೇಕು.

ಇನ್ನೊಂದು ಮುಖ್ಯವಾದ ಅಂಶ. ಬಹಳ ಜನರು ಇದರ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ಲೆಜಿಸ್ಲೇಟಿವ್ ಕೌನ್ಸಿಲ್ ಫಂಕ್ಷನ್ ಏನು, ಈಗ ಈ ತರಹದಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ ಇರಬೇಕೆ ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಆರ್ಟಿಕಲ್ ೧೯೭ ಮತ್ತು ೧೯೮ನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದರಲ್ಲಿ ರಿಸ್ಟ್ರಿಕ್ಷನ್ ಎಂದು ಇದೆ. ಸಿಮ್ಲಾದಲ್ಲಿಯೂ ಮನಿಬಿಲ್ಸ್ ಪಾಸ್ ಮಾಡುವ ಬಗ್ಗೆ ರಿಸ್ಟ್ರಿಕ್ಷನ್ ಇದೆ. ಏನು ರಿಸ್ಟ್ರಿಕ್ಷನ್ ಅಂದರೆ, ನಾವು ಇಲ್ಲಿ ಬಿಲ್ ಪಾಸ್ ಮಾಡಬಹುದು. ಆ ಬಿಲ್ ಮೇಲ್ಮನೆಗೆ ಹೋಗಿ ಅಮೆಂಡ್‌ಮೆಂಟ್ ಸೂಚನೆ ಮಾಡಬಹುದು. ಅವರು ಮಾಡಿದ್ದನ್ನು ಬೇಕಾದರೆ ಒಪ್ಪಿಕೊಳ್ಳಬಹುದು. ಬೇಡದಿದ್ದರೆ ಅದನ್ನು ಬಿಡಬಹುದು. ರಾಜ್ಯಸಭೆಯಲ್ಲಿ ೧೦೯ನೇ ಆರ್ಟಿಕಲ್ ಪ್ರಕಾರ ಇದು ಬಹಳ ಸ್ಪಷ್ಟವಾಗಿದೆ. ಇಲ್ಲಿ ಅಮೆಂಡ್‌ಮೆಂಟ್ ಸೂಚನೆ ಮಾಡಿದರೆ, ಒಂದುಪಕ್ಷ ರಾಜ್ಯಸಭೆ ಒಪ್ಪಿಕೊಳ್ಳದೇ ಹೋದರೆ ಜಾಯಿಂಟ್ ಸೆಷನ್ ಕರೆಯುವುದಕ್ಕೆ ಅಧಿಕಾರವಿದೆ. ಅಲ್ಲಿ ಇದರ ಬಗ್ಗೆ ಕೇವಲ ಹತೋಟಿ ಇಟ್ಟುಕೊಳ್ಳುವ ಅಧಿಕಾರವಿದೆ. ಇಲ್ಲಿ ಚುನಾಯಿತರಾಗಿರುವವರು ಅಷ್ಟೊಂದು ಅನುಭವವಿಲ್ಲದೆ ಇರುವ ಜನರೂ ಕೂಡ ಅಸೆಂಬ್ಲಿಗೆ ಆರಿಸಿ ಬರಬಹುದು. ಅವರಿಗೆ ಕಾನೂನು ಮಾಡುವ ಕ್ರಮ ಗೊತ್ತಿಲ್ಲದೆ ಇರಬಹುದು ಅಥವಾ ಅವರಲ್ಲಿರತಕ್ಕ ನ್ಯೂನತೆಗಳನ್ನು ಹೋಗಲಾಡಿಸುವ ದೃಷ್ಟಿಯಿಂದ ಸ್ಕ್ರೂಟಿನಿ ಮಾಡುವುದಕ್ಕೆ ರಾಜ್ಯಸಭೆಯಲ್ಲಿ ಅವಕಾಶವಿರಲಿ ಎಂಬ ದೃಷ್ಟಿಯಿಂದ ಇದನ್ನು ಮಾಡಿದ್ದಾರೆ. ಈ ದೃಷ್ಟಿಕೋಣದ ಗುರಿ ಸಫಲವಾಗುತ್ತಾ ಇಲ್ಲ. ಮೇಲ್ಮನೆಯಲ್ಲಿ ಮಾತನಾಡಿದರೂ ಅವರು ನಮ್ಮ ಮೇಲೆ ಒತ್ತಾಯ ಮಾಡುವುದಕ್ಕೆ ಅವರಿಗೆ ಅಧಿಕಾರವಿಲ್ಲ. ಗಂಟೆಗಟ್ಟಲೆ ಮಾತನಾಡುವುದಕ್ಕೆ ಮಾತ್ರ ಅವಕಾಶವಿದೆ, ನಮಗೆ ಇಲ್ಲಿ ಕೇವಲ ೨—೩ ನಿಮಿಷಗಳೂ ಮಾತನಾಡುವುದಕ್ಕೆ ಅವಕಾಶವಿದೆ. ಇಲ್ಲಿ ಬಂದು ಅವರು ತೀರ್ಮಾನ ಮಾಡುವ ಅಧಿಕಾರವಿಲ್ಲ. ಎಲ್ಲಾ ಪರಮಾಧಿಕಾರವೂ ಅಸೆಂಬ್ಲಿ ಪಡೆದಿದೆ. ಆದ್ದರಿಂದ ಏತಕ್ಕೋಸ್ಕರ ಈ ಪರಿಷತು ಇರಬೇಕು ? ಆದ್ದರಿಂದ ವಿಧಾನ ಪರಿಷತ್ತು ಹೋಗಲಿ ಎಂದು ನಾನು ನಿಮಗೆ ಹೇಳುತ್ತಿದ್ದೇನೆ. ಈ ಪ್ರಶ್ನೆ ಹಿಂದೆ ತಮಿಳುನಾಡಿನಲ್ಲಿ ಬಂದು ಚರ್ಚೆಯಾಯಿತು. ಅಲ್ಲಿ ಒಬ್ಬೊಬ್ಬ ಮಂತ್ರಿಯ ಬಗ್ಗೆಯೂ ಬೇಕಾದರೆ ಲೆಜಿಸ್ಲೆಟಿವ್ ಕೌನ್ಸಿಲ್‌ನಲ್ಲಿ ಚರ್ಚೆ ಮಾಡಬಹುದು. ರಾಜ್ಯಸಭೆಯಲ್ಲಿಯೂ ಒಂದೊಂದು ಮಿನಿಸ್ಟ್ರಿ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಅಲ್ಲಿ ಯಾವುದಾದರೂ ಒಂದು ಚರ್ಚೆ ಮಾಡಬೇಕಾದರೆ, ಮೊದಲೇ ಒಂದು ನೋಟ್ ಕೊಡುತ್ತಾರೆ. ನಮ್ಮ ರಾಜ್ಯದಲ್ಲಿ ಆ ರೀತಿ ಮಾಡುತ್ತಾ ಇಲ್ಲ. ಆ ತರಹ ಚರ್ಚೆ ಮಾಡುವ ಒಂದು ಅವಕಾಶವನ್ನು ತಮಿಳುನಾಡಿನಲ್ಲಿ ಕೊಟ್ಟಿದ್ದಾರೆ. ಅಂತಹ ಅಧಿಕಾರ ಇಲ್ಲಿ ವಿಧಾನ ಪರಿಷತ್ ಸದಸ್ಯರಿಗಿಲ್ಲ.

ಇನ್ನು ನಾಲ್ಕನೆಯ ಪಾಯಿಂಟ್. ಅದರ ಎಕ್ಸ್‌ಪೆಂಡಿಚರ್ ಬಗ್ಗೆ ನನ್ನ ಸ್ನೇಹಿತರು ಮಾತನಾಡಿದ್ದಾರೆ. ನಾನು ಸ್ವಲ್ಪಮಟ್ಟಿಗೆ ಆಳವಾಗಿ ಯೋಚನೆ ಮಾಡಿದ್ದೇನೆ. ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ೧೯೬೬—೭೧ರವರೆಗೆ ಆಗಿರುವ ಎಕ್ಸ್‌ಪೆಂಡಿಚರ್ ಅಂಕಿ ಅಂಶಗಳ ಪಟ್ಟಿಯನ್ನು ನನಗೆ ಕೊಟ್ಟಿದ್ದಾರೆ. ಒಂದೊಂದು ಐಟಮನ್ನು ಕೊಟ್ಟುಕೊಂಡು ಹೋಗಿದ್ದಾರೆ. ೧೫೭ನೇ ಪುಟದಲ್ಲಿ ಎಕ್ಸ್‌ಪೆಂಡಿಚರ್ ಆಗಿರುವುದನ್ನು ಕೊಟ್ಟಿದ್ದಾರೆ. ಅದು ಈ ರೀತಿ ಇದೆ :—

"*Pay and allowances of officers and staff etc.*

The expenditure incurred towards the pay and allowances etc. of the officers and staff of the Legislature Secretariat during the period under review was Rs. 36,59 710.42, towards travelling allowance Rs. 86,480. 12, towards medical treatment Rs. 72,256. 94 and towards contingencies and other charges like telephone and

ಶ್ರೀ ಎಂ. ಎಸ್. ಕೃಷ್ಣನ್.

power charges, purchase of furniture, library books, etc it was Rs. 19,97,578 30 ; yearwar particulars are given in Appendix XLVI (vide pages 268, 26)."

Similarly, corresponding figures for the Mysore Legislative Assembly for the period 1967-71 are given on page 166 of the review pertaining Legislative Assembly. They are as follows :—

"The expenditure incurred towards the pay and allowances of the officers and staff of the Legislature Secretariat during the period under review was Rs 17,10,841.48 ; towards traveling allowance it was Rs. 79.856. 12 : towards medical treatment it was Rs. 63,080,94 : towards contingencies and other charges like telephone and power charges, purchase of furniture, library books, etc. it was Rs. 8,63,134. 95.

The details of expenditure towards salary etc. of Speaker, Deputy Speaker, members, officers and staff of the Legislature Secretariat are indicated in Appendix LVI (*vide* page 342)"

ಇಲ್ಲಿರುವ ಜನರು ೨೧೭, ಅಲ್ಲಿರತಕ್ಕ ಜನರು ೬೩, ನಾಮಿನೇಟೆಡ್ ಮೆಂಬರುಗಳು ಸೇರಿ. ೨೮೦ ಜನರಿಗೆ ಒಂದು ವರ್ಷಕ್ಕೆ ಹತ್ತುಲಕ್ಷ ಹದಿನಾರು ಸಾವಿರದ ೩೪೭ ರೂಪಾಯಿಗಳು ಖರ್ಚಾಗಿದ್ದರೆ, ವಿಧಾನ ಪರಿಷತ್ತಿನ ೬೩ ಜನರಿಗೆ ಹನ್ನೊಂದು ಲಕ್ಷ ಅರವತ್ತೆರಡು ಸಾವಿರದ ೮೦೪ ರೂಪಾಯಿಗಳು ಖರ್ಚಾಗಿದೆ. ಇದೇನು ಎಷ್ಟಿಯಾದರೂ ಉಂಟೇ ಎಂದು ಇದನ್ನು ಎರಡು ಮೂರಾವರ್ತಿ ತಿರುವಿಹಾಕಿ ನೋಡಿದೆ ಏನು ನೋಡಿದರೂ ಅದೇ. ನಾವು ವಿನಾ ಕಾರಣ ವರ್ಷಕ್ಕೆ ೧೧ ಲಕ್ಷ ೬೩ ಸಾವಿರದ ೮೦೪ ರೂಪಾಯಿಗಳನ್ನು ವೆಚ್ಚಮಾಡುತ್ತಿದ್ದೇವೆ. ಏಕೆ ಇಷ್ಟು ಹಣವನ್ನು ನಾವು ಹಾಳುಮಾಡಬೇಕು ? It is a very big drain on the exchequer : it is an unpardonable expenditure and that too when that House has no function and no power.

ಆದುದರಿಂದ ನಾನು ಇದನ್ನು ವಿಸರ್ಜಿಸಿ ಎಂದು ಹೇಳುತ್ತಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಅಧಿಕಾರವೆಲ್ಲಾ ನೇರವಾಗಿ ಜನರಿಂದ ಚುನಾಯಿಸಲ್ಪಟ್ಟು ಇರತಕ್ಕ ಸದನಕ್ಕೆ ಇದೆಯೇ ವಿನಹ ಮೇಲ್ಮನೆಗೆ ಯಾವ ಅಧಿಕಾರಗಳು ಇರುವುದಿಲ್ಲ. ಈ ಉದ್ದೇಶದಿಂದಲೇ ಈಗಾಗಲೆ ಭಾರತದಲ್ಲಿ ಎರಡು ಮೂರು ರಾಜ್ಯಗಳಲ್ಲಿ ಅಂದರೆ ಪಂಜಾಬ್. ಪಶ್ಚಿಮ ಬಂಗಾಳ ಮತ್ತು ಇನ್ನೊಂದು ರಾಜ್ಯದಲ್ಲಿ ಈ ಮೇಲ್ಮನೆಯನ್ನು ರದ್ದು ಮಾಡಿದ್ದಾರೆ. ಬಿಹಾರ್ ಅಸೆಂಬ್ಲಿಯಲ್ಲಿ ಕೂಡ ಇಂಥದೇ ಒಂದು ನಿರ್ಣಯಪಾಸಾಗಿದೆ ಆದರೆ ಅಲ್ಲಿ ಆ ವಿಚಾರಕ್ಕೆ ಪಾರ್ಲಿಯಮೆಂಟ್‌ಬಾಯಿ ಹಾಕಿದ್ದರಿಂದ ನಿರ್ಧಾರವಾಗಿಲ್ಲ. Parliament did not take action due to political pressure.

ಇದನ್ನೆಲ್ಲಾ ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ In Madhaya Pradesh though there is provision to have a Legislative Council they do not have it Three or Four States which had the Legislative Council have abolished them and there is no point in our clinging on to this.

ಅದನ್ನು ಒಂದು ರಿವಿಜನ್ ಛೇಂಬರ್ ಎಂತ ಇಟ್ಟುಕೊಂಡಿರಬೇಕೆಂದು ಹೇಳುತ್ತಿದ್ದಾರೆ, ಅಲ್ಲಿ ಏನು ರಿವಿಜನ್ ನಡೆಯುತ್ತಿದೆ ? ನೆನ್ನೆಯ ದಿವಸ ಅಲ್ಲಿ 'O' ಅವರನ್ನು ನಾಲ್ಕು ಗಂಟೆಗಳ ಕಾಲದವರೆಗೂ ಚರ್ಚೆ ನಡೆಸಿದರಂತೆ. ಏವರಿಲ್ಲದ ಮೇಲೆ ಅವರು ೪ ಗಂಟೆಗಳ ಕಾಲ ಚರ್ಚೆ ಮಾಡಿದರೇನು ನಾಲ್ಕು ದಿನಗಳವರೆಗೂ ಚರ್ಚೆ ಮಾಡಿದರೇನು ? ಆದುದರಿಂದ ಅದು ಇಂದಿನ ಪ್ರಜಾಪ್ರಭುತ್ವ ತತ್ವಕ್ಕೆ ಅನುಗುಣವಾಗಿಲ್ಲ. ಅದಕ್ಕೆ ಒಂದು ಫಾರ್ವಡ್ ಲುಕಿಂಗ್ ದೃಷ್ಟಿ ಕೂಡ ಇಲ್ಲ. ಆದ್ದರಿಂದ ಅದನ್ನು ಕೂಡಲೆ ರದ್ದು ಮಾಡಬೇಕೆಂದು ಹೇಳುತ್ತೇನೆ ಇಷ್ಟನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) ಮಾನ್ಯ ಅಧ್ಯಕ್ಷರೇ : — ನಾನು ನನ್ನ ಸ್ನೇಹಿತರಾದ ಶ್ರೀ ಕೋಣಂದೂರು ಲಿಂಗಪ್ಪನವರು ತಂದಿರತಕ್ಕ ನಿರ್ಣಯವನ್ನು ಸಂಪೂರ್ಣವಾಗಿ ಬೆಂಬಲಿಸುತ್ತ ಎರಡು ಮಾತುಗಳನ್ನಾಡುವುದಕ್ಕೆ ಇಚ್ಛೆಪಡುತ್ತೇನೆ :

ಈ ನಿರ್ಣಯವನ್ನು ಆಡಳಿತ ಪಕ್ಷದಲ್ಲಿರತಕ್ಕ ಶ್ರೀ ಶಿರನಹಳ್ಳಿ ಚಂದ್ರಶೇಖರ್ ಅವರು ವಿರೋಧಿಸಿದ್ದಾರೆ. ಅವರೆ ಅದು ಅವರ ಸ್ವಭಾವ. ಅವರು ಒಂದಾವರ್ತಿ ತಾವೇ ತಂದಿದ್ದಂಥ ನಿರ್ಣಯಕ್ಕೆ ಅವರೆ ವಿರೋಧವನ್ನು ವ್ಯಕ್ತಪಡಿಸಿದರೆಂದು ಅನೇಕರು ಹೇಳುತ್ತಿದ್ದಾರೆ. ಆದುದರಿಂದ ಅವರ ವಿರೋಧಕ್ಕೆ ನಾವು ಅಷ್ಟೇನೂ ಮನ್ನಣೆ ಕೊಡಬೇಕಾದುದಲ್ಲ ಎಂದು ಹೇಳುತ್ತೇನೆ. ಇನ್ನು ಎರಡನೇಯದಾಗಿ ಶ್ರೀಮಾನ್ ನಾಗಣ್ಣನವರು ಇದಕ್ಕೆ ಅವರ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅವರಿಗಾಗಲೇ ೬೦ ವರ್ಷಗಳು ತುಂಬಿದೆ ಆದುದರಿಂದ ಅವರಿಗೂ ಕೂಡ ಅರುಳೋ ಮರಳೋ ಅನ್ನುವಂತೆ ಅವರು ಹೇಳಿರುವುದಕ್ಕೂ ನಾವು ಅಷ್ಟೇನೂ ಗಮನ ಕೊಡಬೇಕಾಗಿಲ್ಲ. ಈ ದಿವಸ ಈ ನಿರ್ಣಯಕ್ಕೆ ಬಹಳ ಮಹತ್ವವಿದೆ. ಪ್ರಜಾಪ್ರಭುತ್ವ ತನ್ನ ೨೫ನೇ ವಯಸ್ಸಿಗೆ ಕಾಲಿಡತಕ್ಕ ಸಮಯ ಬಂದಿದ್ದರೂ ನಾವು ಇದನ್ನು ಪರಿಶೀಲನೆ ಮಾಡುವುದು ಬೇಡವೇ ? ಈ ದಿವಸ ಪ್ರಜಾಪ್ರಭುತ್ವದಲ್ಲಿ ನೇರವಾಗಿ ಜನರಿಂದ ಚುನಾಯಿತರಾಗಿ ಬಂದ ಜನರಿಂದ ಕೂಡಿದ ಈ ಶಾಸನ ಸಭೆಯು ಎಲ್ಲ ದೃಷ್ಟಿಯಿಂದಲೂ ಸಾರ್ವಭೌಮತ್ವವನ್ನು ಪಡೆದಿರುತ್ತದೆ. ಈ ಸಭೆಯವರು ಮಾಡತಕ್ಕ ಶಾಸನಗಳ ಮೇಲೆ ಅಧಿಕಾರ ನಡೆಸತಕ್ಕ ಅವಕಾಶ ಯಾರಿಗೂ ಇಲ್ಲ. ಈ ದೃಷ್ಟಿಯಿಂದ ಆ ವಿಧಾನಪರಿಷತ್ತು ಯಾವ ಪರಿಣಾಮಕಾರಿಯಾದ ಕೆಲಸವನ್ನೂ ಮಾಡಲಾರದು. ನಮ್ಮ ಶಾಸನ ಸಭೆಯ ಇತಿಹಾಸದಲ್ಲೆಲ್ಲ ಆ ಮೇಲ್ಮನೆಯವರು ಈ ಮನೆಯವರು ಮಾಡಿದಂಥ ಶಾಸನಗಳನ್ನು ಕೇವಲ ದುರಸ್ತಿಮಾಡಿದ ನಿದರ್ಶನಗಳು ಇದೆ ಅಂದಾಗ ಇಲ್ಲಿ ಮಾಡತಕ್ಕ ತಿರ್ಮಾನವೇ ಅಖೈರು ತೀರ್ಮಾನ ಯಾವತ್ತೂ ಪ್ರಜಾಪ್ರಭುತ್ವ ತತ್ವಗಳನ್ನು ಎತ್ತಿ ಹಿಡಿಯತಕ್ಕದ್ದೇ ನಮ್ಮ ಪಕ್ಷದ ಮೊದಲನೇ ಕರ್ತವ್ಯ. ಈ ಪ್ರಜಾಪ್ರಭುತ್ವ ಯುಗದಲ್ಲಿ ಮೇಲ್ಮನೆಗಳಿರದುವುದಕ್ಕೆ ಅವಕಾಶವಿಲ್ಲ ಎಂಬುದನು ನಾವು ಈ ದಿವಸ ನಮ್ಮ ಕಣ್ಣು ಎದುರಿಗೆ ನೋಡುತ್ತಿದ್ದೇವೆ—ಪಶ್ಚಿಮ ಬಂಗಾಳ ಉತ್ತರ ಪ್ರದೇಶ ಅಲ್ಲೆಲ್ಲಾ ಮೇಲ್ಮನೆಯನ್ನು ಅಲ್ಲಿನ ಸರ್ಕಾರಗಳು ರದ್ದು ಮಾಡಿವೆ. ಅಲ್ಲಿ ವಿರೋಧ ಪಕ್ಷಗಳವರು ಅಧಿಕಾರಕ್ಕೆ ಬಂದ ಕೂಡಲೆ ಅಲ್ಲಿ ಇಂಥ ಕ್ರಾಂತಿಕಾರಕ ಬದ್ಲಾವಣೆಗಳನ್ನು ಮಾಡಿದ್ದಾರೆ. ಅಂಥದೇ ತಿರ್ಮಾನವನ್ನು ಈ ದಿವಸ ನಮ್ಮ ಮೈಸೂರು ರಾಜ್ಯದಲ್ಲೂ ತೆಗೆದು ಕೊಂಡರೆ ಅದರಿಂದ ರಾಜ್ಯಕ್ಕೇನೂ ಹಾನಿಯಾಗುವುದಿಲ್ಲ ಮೇಲ್ಮನೆಯನ್ನು ನಾವು ಈ ದಿವಸ ರದ್ದು ಮಾಡಿದರೆ ತಮ್ಮ ತಲೆ ಏನೂ ಹೋಗುವುದಿಲ್ಲ. ಈಗ ನಮ್ಮ ಮುಂದಿರತಕ್ಕ ಈ ನಿರ್ಣಯವನ್ನು ಈ ಖರ್ಚಿನ ದೃಷ್ಟಿಯಿಂದ ನೋಡಿದರೂ ಕೂಡ ಅದು ಇಲ್ಲಿಯವರೆಗೆ ಯಾವ ಪುರಷಾರ್ಥವನ್ನು ಸಾಧಿಸಿದೆ ? ಅದು ಅನಾವಶ್ಯಕವಾದ ಖರ್ಚುವೆಚ್ಚಗಳಿಗೆ ಒಂದು ಕಾರಣ ಆಗಿದೆ. ಅದನ್ನು ರದ್ದುಪಡಿಸುವುದಕ್ಕೆ ಈಗ ಕಾಲ ಕೂಡ ಪರಿಪಕ್ವವಾಗಿದೆ. ಸಮಾಜವಾದ ಸಿದ್ಧಾಂತವನ್ನು ಒಪ್ಪಿರತಕ್ಕ ಜನರು ಈ ಮೇಲ್ಮನೆಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ. ಅದರ ಸ್ವಭಾವವೇ ಬಹಳ ತಿರೋಗಾಮಿಯಾದದ್ದು. ಪ್ರಗತಿಪಥದಲ್ಲಿ ಹೋಗತಕ್ಕವರಿಗೆ ಇದೊಂದು ಅಡಚಣೆಯನ್ನು ಒಡ್ಡತಕ್ಕ ಸದನವಾಗಿದೆ ಅದಕ್ಕಾಗೇ ಈ ದಿವಸ ಇದನ್ನು ರದ್ದು ಮಾಡಬೇಕೆಂದು ಮಾನ್ಯ ಸದಸ್ಯರು ಈ ನಿರ್ಣಯವನ್ನು ತಂದಿದ್ದಾರೆ. ನ್ಯಾಯವಾಗಿ ಇಂಥ ಒಂದು ಸೂಚನೆಯನ್ನು ಆಡಳಿತ ಪಕ್ಷದವರೇ ತರಬೇಕಾಗಿತ್ತು. ಅವರು ತಾರದೆ ಇದ್ದ ಕಾರಣ ನಾವು ತರಬೇಕಾಯಿತು. ಸರ್ಕಾರ ನಡೆಸತಕ್ಕ ಜನರು ಯಾರಿದ್ದಾರೋ ಅವರಿಗೆ ಈ ದಿವಸ ಪ್ರಜಾಪ್ರಭುತ್ವದಲ್ಲಿ ನಂಬಿಕೆ ವಿಶ್ವಾಸಗಳಿದ್ದರೆ ಅವರು ಇದನ್ನು ಸಂಪೂರ್ಣವಾಗಿ ಅನುಮೋದಿಸಲೇಬೇಕು. ಈಗಾಗಲೇ ಮಾನ್ಯ ಎಂ. ಎಸ್. ಕೃಷ್ಣನ್ ಅವರು ರಾಜ್ಯದ ಬಡಬೋರೇಗೌಡನ ಹಣ ಯಾವರೀತಿ ಪೋಲಾಗಿ ಹೋಗುತ್ತಿದೆ ಎಂಬುದನ್ನು ಬಹಳ ಚೆನ್ನಾಗಿ ತಿಳಿಸಿದ್ದಾರೆ. ಭರತಖಂಡದಲ್ಲಿ ಯಾವ ರಾಜ್ಯಗಳೂ ಇತ್ತೀಚೆಗೆ ಈ ಮೇಲ್ಮನೆಗೆ ಗೌರವವನ್ನು ಸೂಚಿಸುತ್ತಿಲ್ಲ. ಆದ್ದರಿಂದ ಅಂಥ ಮನ್ನಣೆಇಲ್ಲದೆ ಸದನವನ್ನು ನಾವೇಕೆ ಇಲ್ಲಿ ಮುಂದುವರಿಸಬೇಕು ? ಸರ್ಕಾರದವರೇ ತಂದಿದ್ದರೆ ಇದೂ ಕೂಡ ನಮ್ಮ ಶಾಸನ ಸಭೆಯ ಇತಿಹಾಸದಲ್ಲಿ ಒಂದು ಹೊಸ ಕಾರ್ಯವನ್ನ ಸಾಧಿಸಿದ ಪ್ರಸಿದ್ಧಿ ತಮ್ಮ ಪಕ್ಷಕ್ಕೆ ದೊರೆಯುತ್ತಿತ್ತು. ಆದರೆ ಈಗಲೂ ಕೂಡ ಎಲ್ಲಾ ಸದಸ್ಯರೂ, ಒಮ್ಮನಸ್ಸಿನಿಂದ ಈ ನಿರ್ಣಯಕ್ಕೆ ಬೆಂಬಲ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇಂದಿನ ಸರ್ಕಾರ ಪ್ರಗತಿಮಾರ್ಗದಲ್ಲಿ ಸಾಗುತ್ತಿದೆ ಎಂಬುದನ್ನು ಜನರಿಗೆ ಪ್ರತ್ಯಕ್ಷವಾಗಿ ತೋರಿಸುವುದಕ್ಕೆ ಹಾಗೂ ಪ್ರಜಾಪ್ರಭುತ್ವಕ್ಕೆ ಮನ್ನಣೆಯನ್ನು ಕೊಡತಕ್ಕ ದೃಷ್ಟಿಯಿಂದಲೂ ಆಡಳಿತಪಕ್ಷದವರು ಈ ನಿರ್ಣಯಕ್ಕೆ ತಮ್ಮೆಲ್ಲರ ಸಂಪೂರ್ಣ ಬೆಂಬಲವನ್ನು ಕೊಡಬೇಕಾದುದು ಅತ್ಯವಶ್ಯಕ ಆ ಸದನದಲ್ಲಿರತಕ್ಕವರೆಲ್ಲರೂ ಹಿಂದಿನ ಬಾಗಿಲಿನಿಂದ ಬಂದವರು ಜನರಿಂದ ನೇರವಾಗಿ ಮನ್ನಣೆ ಪಡೆದು ಚುನಾಯಿತರಾಗಿ ಬಂದ ಜನರಲ್ಲ ಅವರು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—

ಈಗ ಪರಿಷತ್ತಿನಲ್ಲಿರುವ ಹಿಂಬಾಗಿಲಿನಿಂದ ಬಂದಿರುವವರು, ಅವರು ಜನರ ಮನ್ನಣೆ ಪಡೆದಿಲ್ಲ. ಅವರು ನೇರವಾಗಿ ಜನರಿಂದ ಚುನಾಯಿತರಾಗಿ ಬಂದಿಲ್ಲ. ಹೀಗೆ ಪ್ರಜೇಗಳ ವಿಶ್ವಾಸ ಪಡೆಯದೇಇರುವವರು ಅಲ್ಲಿರುವಾಗ ಅವರು ಪ್ರಜೆಗಳನ್ನು ಪ್ರತಿನಿಧಿಸುವುದಕ್ಕೆ ಸಾಧ್ಯವೇ ಇಲ್ಲ. ಆದುದರಿಂದ ವಿಧಾನಪರಿಷತನ್ನು ಮುಂದು ವರೆಸಬೇಕಾದ ಆವಶ್ಯಕತೆಯೇ ಇಲ್ಲ. ಈ ಸಭೆಯ ಸದಸ್ಯರು ಚುನಾಯಿತರಾಗಿ ಬಂದಿದ್ದಾರೆ. ವಿಧಾನಪರಿಷತ್ತಿನಲ್ಲಿರುವವರು ಜನರ ಆಶೋತ್ತರವನ್ನು ಈಡೇರಿಸಲು ಸಮರ್ಥರಲ್ಲ. ಈ ಎಲ್ಲಾ ಕಾರಣಗಳಿಂದ ವಿಧಾನಪರಿಷತ್ತನ್ನು ರದ್ದುಮಾಡುವುದು ನ್ಯಾಯಸಮ್ಮತವಾಗಿದೆ. ಆ ದೃಷ್ಟಿಯಿಂದ ಈ ನಿರ್ಣಯವನ್ನು ಈ ಸಭೆ ಬೆಂಬಲಿಸಬೇಕು ಮತ್ತು ಇದಕ್ಕೆ ಒಪ್ಪಿಗೆ ಕೊಡಬೇಕು ಎಂದು ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್ (ಕಾನೂನು ಮತ್ತು ಸಾಂಸದಿಕ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮೇಲ್ಮನೆಯನ್ನು ಕಿತ್ತುಹಾಕುವ ಬಗ್ಗೆ ಶ್ರೀಯುತರುಗಳಾದ ವಾಟಾಳ್ ನಾಗರಾಜ್, ಎಂ. ಎಸ್. ಕೃಷ್ಣನ್, ಕಾಗೋಡು ತಿಮ್ಮಪ್ಪ ಮುಂತಾದವರು ಕೆಲವೊಂದು ಸಲಹೆಗಳನ್ನು ತಮ್ಮ ಚರ್ಚೆಯ ಕಾಲದಲ್ಲಿ ಕೊಟ್ಟಿದ್ದಾರೆ. ಮೂರು ಜನರನ್ನು ನಾಮಿನೇಟ್ ಮಾಡಿರುವುದು ಕಾನೂನು ಬದ್ಧವಾಗಿಲ್ಲ, ರಾಜ್ಯಾಂಗಕ್ಕನುಗುಣವಾಗಿಲ್ಲ, ಯೋಗ್ಯವಾದ ಪ್ರಾತಿನಿಧ್ಯವಲ್ಲ, ಅವರಿಂದ ಸಾಕಷ್ಟು ಸಹಾಯ ವಾಗುತ್ತಿಲ್ಲ ಎಂದು ಶ್ರೀ ವಾಟಾಳ್ ನಾಗರಾಜ್‌ರವರು ಆಕ್ಷೇಪಣೆ ಮಾಡಿದ್ದಾರೆ. ನಾನು ಮೊದಲು ಒಂದು ಸಲ ಈ ಬಗ್ಗೆ ಸ್ಟೇಟ್‌ಮೆಂಟ್ ಮಾಡಿದ್ದೆ. ಜರ್ನಲಿಸ್ಟ್‌ಗಳಿಗೆ, ದೇಶಸೇವೆ ಮಾಡುವವರಿಗೆ, ಜನರ ಸೇವೆ ಮಾಡಲು ಕಾತುರರಾಗಿರುವವರಿಗೆ ಅವಕಾಶ ಕೊಡಲು ನಾಮಕರಣ ಮಾಡುವ ಪದ್ಧತಿ ಇರಲೇಬೇಕು ಎಂದು ನಾನು ಹಿಂದಿನ ಸಭೆಯಲ್ಲಿ ಕೂಡ ಹೇಳಿದ್ದೇನೆ. ಈಗ ನಾಮಕರಣ ಮಾಡಿರುವ ಮೂರು ಜನರಲ್ಲ ಶ್ರೀಮತಿ ಕಮಲಾನಿಯವರು ಜರ್ನಲಿಸ್ಟ್ ಆಗಿದ್ದಾರೆ ಎಂದು ಆಗಲೇ ಸಮರ್ಥನೆ-ಮಾಡಿದ್ದೇನೆ. ಶ್ರೀವರ್ ಎಂ ವಿ. ರಾಮರಾಯರು ಇತರರ ಹಾಗೆ ಅನೇಕ ವರ್ಷಗಳಿಂದ ದೇಶಸೇವೆಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದಾರೆ. ಆದುದರಿಂದ ಅವರೂ ಕೂಡ ಕಾನೂನಿಗನುಗುಣವಾಗಿ ನಾಮಕರಣ ಮಾಡಲ್ಪಡಲು ಅರ್ಹರು. ಶ್ರೀಮಾನ್ ಪಾಟೀಲರೂ ಕೂಡ ಅದೇ ರೀತಿಯಾಗಿ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಜನರ ಸೇವೆಯನ್ನು ನಾನಾ ರೀತಿಯಲ್ಲಿ ಮಾಡಿದ್ದಾರೆ. ಆದುದರಿಂದ ಸರಕಾರ ಮಾಡಿರುವ ಮೂರೂ ನಾಮಕರಣಗಳು ಕಾನೂನಿಗನುಗುಣವಾಗಿವೆ ಎಂದು ನಾನು ಸಮರ್ಥನೆ ಮಾಡುತ್ತೇನೆ.

ಇನ್ನು ಶ್ರೀಮಾನ್ ಕೃಷ್ಣನ್‌ರವರು ಅಪ್ಪರ್ ಹೌಸ್‌ನಲ್ಲಿ ಕಾರ್ಯ ಸರಿಯಾಗಿ ಆಗುತ್ತಿಲ್ಲ, ಅನಾವಶ್ಯಕ ವಾಗಿ ಖರ್ಚಾಗುತ್ತಿದೆ ಎಂದು ಹೇಳಿದ್ದಾರೆ. ಹಣ ಖರ್ಚು ಮಾಡುವುದೇನೂ ದೊಡ್ಡದಲ್ಲ. ಆದರೆ ಅಪ್ಪರ್ ಹೌಸಿನಲ್ಲಿ ನೇರವಾಗಿ ಚುನಾಯಿತರಾಗಿ ಬರಲು ಅವಕಾಶ ಇಲ್ಲದಿರುವವರಿಗೆ ಅವಕಾಶ ಮಾಡಿಕೊಡಲು ಆ ಸಭೆ ಇರಬೇಕಾದ್ದು ಅವಶ್ಯಕ. ಉದಾಹರಣೆಗೆ ಕ್ರಿಶ್ಚಿಯನ್ನರು, ಉಪಾಧ್ಯಾಯರು, ಡಾಕ್ಟರುಗಳು, ಸ್ಥಳೀಯ ಸಂಸ್ಥೆಗಳಲ್ಲಿ ಅನುಭವವಿರುವವರು, ವೀಕರ್ ಸೆಕ್ಷನ್ನಿನವರು ಮುಂತಾದವರು ನೇರವಾಗಿ ಚುನಾವಣೆಯಲ್ಲಿ ಆರಿಸಿ ಬರಲು ಅವಕಾಶವಿಲ್ಲದಿರುವಾಗ ಅಂಥವರಿಗೆ ಪ್ರಾತಿನಿಧ್ಯ ಕೊಡಲು ವಿಧಾನ ಪರಿಷತ್ತಿರಬೇಕಾದ್ದು ಅವಶ್ಯಕವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ವರ್ಕಿಂಗ್ ಕ್ಲಾಸ್.

ಶ್ರೀ ಡಿ. ಕೆ. ನಾಯ್ಕರ್.—ಅದಕ್ಕೆ ರೆಪ್ರಸೆಂಟೇಷನ್ ಇಲ್ಲದಿರುವ ವಿಚಾರ ಬೇರೆ. ಈಗ ಪ್ರಸ್ತಾಪ ವಾಗಿರುವುದು ವಿಧಾನಪರಿಷತ್ತು ಇರಬೇಕೇ ಅಥವ ಬೇಡವೇ ಎಂಬುದು. ಒಂದವೇಳೆ ಲೇಬರ್ ಕ್ಲಾಸ್‌ಗೆ ಪ್ರಾತಿನಿಧ್ಯವಿರಬೇಕೆಂದರೆ ಆ ವಿಷಯವನ್ನು ಬೇರೆ ರೀತಿಯಲ್ಲಿ ಚರ್ಚೆ ಮಾಡಬಹುದು. ಈಗ ನಮಗೆ ಅನುಭವವಿರುವವರು, ಜ್ಞಾನವಿರುವವರು ನಾನಾ ಸಂಘ ಸಂಸ್ಥೆಗಳ ದುಡಿಯುವವರು ಬೇಕು. ಈ ಸಭೆಯಲ್ಲಿ ಪಾಸಾದ ಕಾನೂನುಗಳು ಅಪ್ಪರ್ ಹೌಸಿನಲ್ಲಿ ಮತ್ತೆ ಚರ್ಚೆಯಾಗಿ ಅವರು ಶಿಫಾರಸು ಮಾಡಿ ಇಲ್ಲಿಗೆ ಕಳಿಸಿದಾಗ ಅವು ಅತ್ಯುತ್ತಮ ರೀತಿಯಲ್ಲಿರುವುವು. ಇದರಿಂದ ಜನರ ಹಿತಕ್ಕನುಗುಣವಾಗಿ, ಲಾಭ ದಾಯಕವಾಗಿ ಕಾನೂನನ್ನು ಮಾಡಲು ಅವಕಾಶವಾಗಿದೆ. ಆದುದರಿಂದ ವಿಧಾನಪರಿಷತ್ತಿರಬೇಕು. ಇದೇ ರೀತಿಯಲ್ಲಿ ೧೯೭೦ ರಲ್ಲಿ ನಿರ್ಣಯ ಬಂದಿತ್ತು. ಆಗ ಶ್ರೀ ಗಂಗಾಧರ್ ಮತ್ತು ಶ್ರೀ ಬಸವರಾಜುರವರು ಠರಾವು ತಂದಿದ್ದರು. ಆಗಿನ ಸರಕಾರ ಅದನ್ನು ಒಪ್ಪಲಿಲ್ಲ. ಆ ನಿರ್ಣಯ ಅಂಗೀಕಾರವಾಗಲಿಲ್ಲ ವಿಧಾನ ಪರಿಷತ್ತಿರಲೇಬೇಕೆಂದು ಆಗ ಸರಕಾರ ಅಭಿಪ್ರಾಯಪಟ್ಟಿತು. ಅದೇ ರೀತಿಯಲ್ಲಿ ಈಗಲೂ ಕೂಡ ಸರಕಾರ ಅಭಿಪ್ರಾಯ ಹೊಂದಿದೆ. ಈಗ ಮಾನ್ಯ ಸದಸ್ಯರು ಮಾಡಿದ ಆಕ್ಷೇಪಣೆಯೇನಿದೆ ಅದು ಸಮರ್ಪಕವಾಗಿಲ್ಲ. ವಿಧಾನ ಪರಿಷತ್ತು ಇರಲೇಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ರಾಜ್ಯಸಭೆಗೆ ಅಧಿಕಾರವಿದೆ, ವಿಧಾನಪರಿಷತ್ತಿಗೆ ಅಧಿಕಾರವಿಲ್ಲ ಮಾನ್ಯ ಸಚಿವರಿಗೆ ಗೊತ್ತಿದೆಯೋ ಇಲ್ಲವೋ ಅದು. ಅವರು ತೇಲಿಸಿ ಮಾತನಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ವಿಧಾನಪರಿಷತ್ತು ತಿದ್ದುಪಡಿ ಮಾಡಿದರೂ ಕೂಡ ಕಾನೂನು ಇದೇ ಸಭೆಗೆ ಬಂದು ಅಂಗೀಕಾರವಾಗಬೇಕು ಈ ಸಭೆಯಲ್ಲಿ ತೀರ್ಮಾನವಾಗಿರುವುದು ವಿಧಾನಪರಿಷತ್ತಿಗೆ ಹೋಗಿ ಮತ್ತೆ ಶಿಫಾರಸಾಗಿ ಇಲ್ಲಿಗೆ ಬಂದು ತಿದ್ದುಪಡಿಯಾಗಿರುವುದು ಇತಿಹಾಸದಲ್ಲಿದೆಯೇ? ಅದನ್ನು ಇದ್ದರೆ ಹೇಳಿ.

ಶ್ರೀ ಡಿ. ಕೆ. ನಾಯ್ಕರ್.—ವಿಧಾನಪರಿಷತ್ತಿನವರು ತಮಗಿರುವ ಅಧಿಕಾರವನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ ಎಂದು ಆಕ್ಷೇಪಣೆ ಮಾಡಿದರೆ ಅದು ಬೇರೆ ವಿಚಾರ, ಸರಿಪಡಿಸೋಣ. ಆದರೆ ಅಲ್ಲಿ ಸರಿಯಾಗಿ ಕೆಲಸ ನಡೆಯುತ್ತಿದೆ ಎಂದು ನಂಬಿದ್ದೇನೆ ವಿಧಾನಪರಿಷತ್ತಿನಲ್ಲಿ ಉತ್ತಮ ರೀತಿಯಲ್ಲಿ ಕಾರ್ಯಕಲಾಪ ನಡೆಯುತ್ತಿದೆ ಎಂದು ಸಮರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಸರಕಾರ ವಿಧಾನಪರಿಷತ್ತನ್ನು ರದ್ದು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿದೆ. ಈ ನೀತಿಯನ್ನು ನೋಡಿ ಬಹಳ ವಿಷಾದವಾಗುತ್ತಿದೆ. ಆದುದರಿಂದ ನಾನು ನಿರ್ಣಯವನ್ನು ವಾಪಸು ಪಡೆಯುವುದಿಲ್ಲ. ಕಾಂಗ್ರೆಸ್ ಆರ್ ನವರೂ ಮತ್ತು ಕಾಂಗ್ರೆಸ್ ಓ ನವರೂ ಒಂದೇ ರೀತಿಯ ಜನರು ಎಂದು ರುಜುವಾತು ಮಾಡಬೇಕಾಗಿದೆ, ಜನರಿಗೆ ತಿಳಿಯುವಂತೆ ಮಾಡಬೇಕಾಗಿದೆ. ಆದುದರಿಂದ ಈ ನಿರ್ಣಯವನ್ನು ಮತಕ್ಕೆ ಹಾಕಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದರ ಉದ್ದೇಶ ಇದರಿಂದ ಎಲ್ಲರ ಬಣ್ಣ ಬಯಲಾಗುತ್ತದೆ ಎಂಬುದು.

MADAM SPEAKER :—I will now put the Resolution to the vote of the House. The question is :

> "That this Assembly recommends that the Legislative Council of the State be abolished."

The motion was negatived

MADAM SPEAKER :—Now, we will take up next resolution.

(ii) *Re* :—**Recommending the Government of India to take steps to lay a nw Broad gauge Railway Line between Bellary–Gulbarga.**

SRI C. N. PATIL (Lingasugur) :—Madam Speaker, I beg to move:

> "That this Assembly is of the opinion that recommendation be made to Government of India to take urgent steps to lay a new Broad Gauge Railway Line to connect Bellary with Gulbarga, *via* Siruguppa, Sindanoor, Lingasugur, Shahpur, Surpur in view of the fact that this is an important backward area with great industrial, agricultural potential and untapped resources."

MADAM SPEAKER :—Motion moved : -

> "That this Assembly, is of the opinion that recommendation be made to Government of India to take urgent steps to lay a new Broad Gauge Railway Line to connect Bellary with Gulbarga, *via* Siruguppa, Sindanoor, Lingasugur, Shahpur, Surpur in view of the fact that this is an important backward area with great industrial, agricultural potential and untapped resources."

ಶ್ರೀ ಎಚ್. ಡಿ. ದೇವೇಗೌಡ, (ಹೊಳೆನರಸೀಪುರ) :—ಲ್ಯಾಂಡ್ ರೀಫಾರಂಸ್ ಬಗ್ಗೆ ಈ ಸಭೆ ಕರೆದ ಉದ್ದೇಶವಾಗಿತ್ತು. ಮೊದಲು ಗೊತ್ತಾಗಿದ್ದ ಕಾರ್ಯಕ್ರಮದ ಪ್ರಕಾರ ಈ ಸಭೆಯಲ್ಲಿ ಚರ್ಚೆ ಆದ ಮೇಲೆ ಬಿಲ್‌ನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕು ಎಂದು ಇತ್ತು. ಈ ಲ್ಯಾಂಡ್ ರೀಫಾರಂಸ್ ಬಗ್ಗೆ ಎರಡು ದಿವಸದಿಂದಲೂ ಈ ಮನೆಯಲ್ಲಿ ಚರ್ಚೆ ಆಗಿದೆ. ಇದರ ಬಗ್ಗೆ ಇನ್ನೂ ಪೂರ್ಣವಾಗಿ ಚರ್ಚೆ ಆಗಿಲ್ಲದೇ ಇರುವುದರಿಂದ ಪುನಃ ಈ ವಿಷಯದಲ್ಲಿ ಚರ್ಚೆ ಮಾಡಬೇಕಾಗಿದೆ. ಇದು ಬಹಳ ಜವಾಬ್ದಾರಿಯುತವಾದಂಥ ವಿಧೇಯಕ ಇದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ಈ ಸಭೆಯಲ್ಲಿ ಏನು ತಿದ್ದುಪಡಿ ತಂದಿದ್ದಾರೆ ಅದೆಲ್ಲಾ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಬೇಕು. ಜೊತೆಗೆ ಚರ್ಚೆ ಆಗಬೇಕು. ೧೯೭೨ರ ಡಿಸೆಂಬರ್ ಒಳಗೆ ಈ ವಿದೇಯಕವನ್ನು ಈ ಸಭೆ ಪಾಸು ಮಾಡಬೇಕು. ಈಗಾಗಲೇ ಇದರ ಬಗ್ಗೆ ಡೆಲ್ಲಿ ನಿರ್ದೇಶನ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದುದರಿಂದ ಈ ಸಭೆ ಮತ್ತೆ ಸೇರುವುದು ಯಾವಾಗ ? ಈ ಬಿಲ್ ಮೇಲೆ ಜನರಲ್ ಡಿಸ್ಕಷನ್ ಆಗುವುದು ಯಾವಾಗ ? ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಆಗುವುದು ಯಾವಾಗ ? ಅವರು ಪುನಃ ಇಲ್ಲಿಗೆ ರೆಫರ್ ಮಾಡಿ ಪಾಸು ಮಾಡುವುದು ಯಾವಾಗ ? ಇವೆಲ್ಲಾ ಆಗಬೇಕಾದರೆ ೧೯೭೨ರ ಅಂತ್ಯದೊಳಗೇ ಆಗಬೇಕು. ಆದುದರಿಂದ ಈ ಸಭೆಯನ್ನು ಮತ್ತೆ ಯಾವಾಗ ಕರೆಯುತ್ತೀರಾ ಎಂದು ಕೇಳಬೇಕಾಗಿದೆ. ಏತಕ್ಕೆಂದರೆ ನಾವೂ ಯಾರೂ ಇದರಲ್ಲಿ ತಜ್ಞರಲ್ಲ, ಪರಿಣತರಲ್ಲ, ಆದರೆ ನಾವು ಭಾಷಣ ಮಾಡಬಹುದು. ಇದರಲ್ಲಿ ಎಡರುತೊಡರುಗಳು ಏನು ಇವೆ, ಒಳ್ಳೇದು ಕೆಟ್ಟದ್ದು ಏನು ಇವೆ ಎನ್ನುವುದನ್ನು ಆಲೋಚನೆ ಮಾಡಬೇಕು. ಆದುದರಿಂದ ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಿ ಅಲ್ಲಿ ಅವರು ಸ್ಕ್ರೂಟಿನಿ ಮಾಡಲೇ ಬೇಕು. ಅದಕ್ಕಾಗಿ ಸರ್ಕಾರದಿಂದ ಇದರ ಬಗ್ಗೆ ಸ್ಪಷ್ಟ ನಿಲುವು ತಿಳಿಸಬೇಕು ಮತ್ತು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :—ಮೊನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ನಡೆದಾಗ ಶ್ರೀಮಾನ್ ದೇವೇಗೌಡರು ಬಂದಿರಲಿಲ್ಲ. ಅವೊತ್ತು ಸ್ವಾಭಾವಿಕವಾಗಿ ಬಂದಿರತಕ್ಕ ವಿಷಯ ಏನೆಂದರೆ ಈ ಬಿಲ್ಲಿನ ಬಗ್ಗೆ ಚರ್ಚೆ ಮಾಡುವುದಕ್ಕೆ ಇನ್ನೂ ಹೆಚ್ಚು ಕಾಲಾವಕಾಶ ತೆಗೆದುಕೊಳ್ಳಬೇಕಾಗಿರುವುದರಿಂದ ಇನ್ನೊಂದು ಸಾರಿ ಸಭೆ ಸೇರೋಣ ಎನ್ನುವ ತೀರ್ಮಾನಕ್ಕೆ ಬರಲಾಯಿತು. ಅಲ್ಲದೆ ಇದು ಸೆಲೆಕ್ಟ್ ಕಮಿಟಿಗೆ ಹೋಗಬೇಕಾಗಿಲ್ಲ. ಇಲ್ಲೇ ಚರ್ಚೆ ಮಾಡುವ ಎನ್ನುವ ತೀರ್ಮಾನಕ್ಕೆ ಬರಲಾಯಿತು.

ಅಧ್ಯಕ್ಷರು :—ಅವೊತ್ತು ನಡೆದಂಥ ಸಭೆಯಲ್ಲಿ ಈ ಸಭೆಯಲ್ಲೇ ಪೂರ್ತಾ ಚರ್ಚೆ ಆಗಲಿ, ಆಮೇಲೆ ಮುಂದೆ ನೋಡೋಣ ಎಂದು ಹೇಳಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳೂ ಹಾಗೇ ಹೇಳಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ :—೧೯೭೨ರ ಅಂತ್ಯದೊಳಗೆ ಈ ಬಿಲ್ಲು ಪಾಸಾಗಬೇಕು. ನೀವು ಡಿಸೆಂಬರ್ ಒಳಗೆ ಸೆಷನ್ ಕರೆದು ೮–೧೦ ದಿವಸದೊಳಗೆ ಚರ್ಚೆ ಮಾಡಿ ಮುಗಿಸಿಬಿಟ್ಟು ಇದನ್ನು ಬೇಗನೆ ಪಾಸು ಮಾಡಬೇಕು ಎನ್ನುವ ಪ್ರಸಂಗ ಬೇಡ. ಈ ಸಭೆ ಹಾಗೇನಾದರೂ ಇಲ್ಲೇ ಚರ್ಚೆ ಮಾಡಿ ಮುಗಿಸಬೇಕು ಎನ್ನುವುದಾದರೆ ನನ್ನ ಅಡ್ಡಿ ಇಲ್ಲ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಇಡಲೇಬೇಕು. ಅಲ್ಲಿ ಎಲ್ಲ ವಿಷಯಗಳನ್ನೂ ಯೋಚನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗಿರುವುದರಿಂದ ಈ ಸೆಷನ್‌ನನ್ನು ಮುಂಚಿತವಾಗಿ ಕರೆದು ಇದರ ಬಗ್ಗೆ ಚರ್ಚೆಗೆ ಅವಕಾಶವಾಗುವಂತೆ ಮಾಡಬೇಕು. ಆದುದರಿಂದ ಪಾರ್ಲಿಮೆಂಟ್ ಸಚಿವರು ಇದರ ಬಗ್ಗೆ ತಮ್ಮ ನಿಲುವು ಏನು ಎಂದು ಸ್ಪಷ್ಟೀಕರಣ ಮಾಡಬೇಕು ಎಂದು ನಾನು ಕೇಳುತ್ತೇನೆ.

ಶ್ರೀ ಡಿ. ಕೆ. ನಾಯಕರ್ (ಕಾನೂನು ಮತ್ತು ಸಾಂಸದಿಕ ವ್ಯವಹಾರಗಳ ಮಂತ್ರಿಗಳು) :—ಈಗ ಇಂಟ್ರಡ್ಯೂಸ್ ಮಾಡಿದಂಥ ಬಿಲ್ಲಿನ ಮೇಲೆ ಅನೇಕ ಮಾನ್ಯ ಸದಸ್ಯರು ಚರ್ಚೆ ಮಾಡಿದ್ದಾರೆ. ಇನ್ನೂ ಇದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಬರಗಾಲದ ನಿಮಿತ್ತವಾಗಿ ಈವೊತ್ತಿನ ದಿವಸ ಈ ಸೆಷನ್‌ನ್ನು ಮುಂದೂಡಲಿಕ್ಕೆ ಸರ್ಕಾರ ತೀರ್ಮಾನ ಮಾಡಿದೆ ಮತ್ತು ಅಕ್ಟೋಬರ್ ಆಖೈರ್ ಒಳಗೋ ಅಥವಾ ನವಂಬರ್ ಮೊದಲನೇ ವಾರದೊಳಗೋ ಈ ಸಭೆಯನ್ನು ಕರೆದಾಗ ಇದೇ ಬಿಲ್ಲಿನ ಮೇಲೆ ಅನೇಕ ಸದಸ್ಯರು ಮಾತನಾಡುವವರು ಇದ್ದಾರೆ. ನಂತರ ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೇ, ಬೇಡವೇ ಎನ್ನುವ ಬಗ್ಗೆ ಸರ್ಕಾರ ಯೋಚನೆ ಮಾಡಿ ಯಾವ ತರಹ ತೀರ್ಮಾನ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳುತ್ತಾರೆ. ಆ ನಿರ್ಣಯವನ್ನು ಈಗಲೇ ಹೇಳಲಿಕ್ಕೆ ಆಗುವುದಿಲ್ಲ. ಆದುದರಿಂದ ಮುಂದಿನ ಸೆಷನ್‌ನಲ್ಲಿ ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎಚ್. ಡಿ. ದೇವೇಗೌಡ :—ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಂದು ವೇಳೆ ಕಳುಹಿಸುವ ನಿರ್ಣಯ ತೆಗೆದುಕೊಳ್ಳುವುದಾದರೆ ನವೆಂಬರ್ ತಿಂಗಳಿನಲ್ಲಿ ಚರ್ಚೆ ಆಗಿ ಪುನಃ ಡಿಸೆಂಬರ್‌ನಲ್ಲಿ ಚರ್ಚೆ ಆಗುವುದಕ್ಕೆ ಅವಕಾಶ ಬೇಡವೇ ? ಜಾಯಿಟ್ ಸೆಲೆಕ್ಟ್ ಕಮಿಟಿಯವರಿಗೆ ಇದನ್ನು ಪರಿಶೀಲಿಸಲು ಟೈಂ ಬೇಡವೇ ? ನಮ್ಮ ಅಭಿಪ್ರಾಯದಲ್ಲಿ ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಲೇ ಬೇಕು. ಆದುದ ರಿಂದ ನೀವು ಅಕ್ಟೋಬರ್‌ನಲ್ಲಿ ಸೆಷನ್ ಕರೆಯಲೇ ಬೇಕು. ಒಂದುವೇಳೆ ಈ ಬಿಲ್ಲು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಬೇಕೇ, ಬಿಡಬೇಕೇ ಎಂಬುದರ ಬಗ್ಗೆ ನಿರ್ಣಯ ಆವಾಗ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ ತಾವು ಮುಂದಿನ ಅಕ್ಟೋಬರ್ ಒಳಗೆ ಸೆಷನ್ ಕರೆಯುವುದಾದರೆ ನನ್ನ ಅಡ್ಡಿ ಇಲ್ಲ, ಮುಂದಿನ ನವಂಬರ್‌ಲ್ಲಿನ ಸೆಷನ್ ಕರೆಯುವುದಾದರೆ ಇದನ್ನೆಲ್ಲಾ ಚರ್ಚಿಸಲು ಕಾಲಾವಕಾಶ ಬೇಕಾಗುತ್ತದೆ. ಆದುದ ರಿಂದ ಇದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು ಎಂದು ಕೇಳುತ್ತೇನೆ.

ಶ್ರೀ ಡಿ. ಕೆ. ನಾಯಕರ್ :—ಆ ವೇಳೆಗೆ ನೋಡೋಣ. ಚರ್ಚೆ ಮುಂದುವರೆಯಲಿ. ಆಗ ಏನು ಬರುತ್ತದೋ, ಅಪೋಸಿಷನ್ ಲೀಡರ್ ಏನು ಹೇಳುತ್ತಾರೋ ಅದನ್ನು ಪರಿಶೀಲನೆಗೆ ತೆಗೆದುಕೊಂಡು ಒಂದು ನಿರ್ಧಾರಕ್ಕೆ ಬರೋಣ.

MADAM SPEAKER :—Before adjourning the House, I would like to thank the hon. Members for co-operating with me for carrying on the business of the House satisfactorily.

The House stands adjourned Sine die.

The House adjourned Sine die at Eight Minutes past One of the Clock.

WD 18387—GPB—550—4-1-1974.